೧೫



ಬಾಹುಬಲಿ–ಮಧುರ ಸಂಪುಟ

ಧರ್ಮನಾಥ ಪುರಾಣಂ

ಸಂಪಾದಕರು
ಪ್ರೊ. ಎನ್. ಬಸವಾರಾಧ್ಯ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಸಮಗ್ರ
ಕನ್ನಡ ಜೈನಸಾಹಿತ್ಯ
ಸಂಪುಟ-೧೫



೧. ಪಂಪ ಸಂಪುಟ	ಸಂ. ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರೀ
೨. ಶಿವಕೋಟ್ಯಾಚಾರ್ಯ-ಚಾವುಂಡರಾಯ ಸಂಪುಟ	ಸಂ. ಪ್ರೊ. ಕಮಲಾ ಹಂಪನಾ
೩. ಪೊನ್ನ-ಕಮಲಭವ ಸಂಪುಟ	ಸಂ. ಪ್ರೊ. ಹಂಪ ನಾಗರಾಜಯ್ಯ
೪. ರನ್ನ ಸಂಪುಟ	ಸಂ. ಪ್ರೊ. ಹಂಪ ನಾಗರಾಜಯ್ಯ
೫. ನಾಗವರ್ಮ ಸಂಪುಟ	ಸಂ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
೬. ಶಾಂತಿನಾಥ-ಆಂಡಯ್ಯ ಸಂಪುಟ	ಸಂ. ಪ್ರೊ. ಪಿ.ವಿ. ನಾರಾಯಣ
೭. ನಾಗಚಂದ್ರ ಸಂಪುಟ	ಸಂ. ಡಾ. ಶಾಂತಿನಾಥ ದಿಬ್ಬದ
೮. ನಯಸೇನ ಸಂಪುಟ	ಸಂ. ಪ್ರೊ. ಎಸ್.ಪಿ. ಪಾಟೀಲ
೯. ಬ್ರಹ್ಮಶಿವ-ವೃತ್ತವಿಲಾಸ ಸಂಪುಟ	ಸಂ. ಡಾ. ಎಂ.ಎಂ. ಕಲಬುರ್ಗಿ
೧೦. ನೇಮಿಚಂದ್ರ ಸಂಪುಟ	ಸಂ. ಪ್ರೊ. ದೇ. ಜವರೇಗೌಡ
೧೧. ಬಂಧುವರ್ಮ ಸಂಪುಟ	ಸಂ. ಬಿ.ಎಸ್. ಸಣ್ಣಯ್ಯ
೧೨. ಆಚಣ್ಣ-ಅಗ್ಗಳ ಸಂಪುಟ	ಸಂ. ಜಿ.ಜಿ. ಮಂಜುನಾಥನ್
೧೩. ಜನ್ನ ಸಂಪುಟ	ಸಂ. ಪ್ರೊ. ಸಿ.ಪಿ. ಕೃಷ್ಣಕುಮಾರ್
೧೪. ಇಮ್ಮಡಿ ಗುಣವರ್ಮ-ಪಾರ್ಶ್ವಪಂಡಿತ ಸಂಪುಟ	ಸಂ. ಡಾ. ವೈ.ಸಿ. ಭಾನುಮತಿ
೧೫. ಬಾಹುಬಲಿ-ಮಧುರ ಸಂಪುಟ	ಸಂ. ಪ್ರೊ. ಎನ್. ಬಸವಾರಾಧ್ಯ
೧೬. ಮಂಗರಸ ಸಂಪುಟ	ಸಂ. ಡಾ. ಬಿ.ವಿ. ಶಿರೂರ
೧೭. ರತ್ನಾಕರವರ್ಣಿ ಸಂಪುಟ	ಸಂ. ಪ್ರೊ. ಎಂ.ಜಿ. ಬಿರಾದಾರ
೧೮. ಸಾಳ್ವ ಸಂಪುಟ	ಸಂ. ಡಾ. ಎಂ.ಎ. ಜಯಚಂದ್ರ
೧೯. ದೇವಚಂದ್ರ ಸಂಪುಟ	ಸಂ. ಪ್ರೊ. ಎಚ್.ಜೆ. ಲಕ್ಕಪ್ಪಗೌಡ
೨೦. ವಾಕ್ಯ ಮಾಣಿಕ್ಯ ಸಂಪುಟ	ಸಂ. ಪ್ರೊ. ಜಿ.ಎಸ್. ಶಿವರುದ್ರಪ್ಪ

ಸುವರ್ಣ ಕರ್ನಾಟಕ - ೨೦೦೬

ಬಾಹುಬಲಿ-ಮಧುರ ಸಂಪುಟ

ಧರ್ಮನಾಥ ಪುರಾಣಂ

ಸಂಪಾದಕರು

ಪ್ರೊ. ಎನ್. ಬಸವಾರಾಧ್ಯ

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ - ಹಂಪಿ

೨೦೦೬

Samagra Kannada Jaina Sahitya Series - 15
BAHUBALI-MADURA SAMPUTA
Dharmanatha Puranam

Edited by
Prof. N. Basavaradhya
743, 12th Main Road, 3rd Block
Rajajinagar, **Bangalore - 560 010**
Ph : 080-2338 0605

Published by
Prof. Mallepuram G. Venkatesha
Director, Prasaranga
Kannada Univercsity, Hampi
Vidyaranya - 583 276

Pages : **xxxiv + 642** **Price : Rs. 100/-**

First Impression : 2006

www.Kannadauniversity.org

ಪ್ರಕಾಶನ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಆರ್ಥಿಕ ನೆರವು

ಕಂದಾಯ ಇಲಾಖೆ (ಮುಜರಾಯಿ)
ಕರ್ನಾಟಕ ಸರ್ಕಾರ

ಉನ್ನತ ಸಲಹಾ ಸಮಿತಿ

ಅಧ್ಯಕ್ಷರು

ಡಾ. ಬಿ.ಎ. ವಿವೇಕ ರೈ

ಕುಲಪತಿಗಳು

ಸದಸ್ಯರು

ಡಾ. ದೇ. ಜವರೇಗೌಡ

ಡಾ. ಜಿ.ಎಸ್. ಶಿವರುದ್ರಪ್ಪ

ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

ಡಾ. ಹಂಪ. ನಾಗರಾಜಯ್ಯ

ಡಾ. ಕಮಲಾ ಹಂಪನಾ

ಡಾ. ಚಂದ್ರಶೇಖರ ಕಂಬಾರ

ಡಾ. ಎಂ.ಎಂ. ಕಲಬುರ್ಗಿ

ಡಾ. ಎಚ್.ಜೆ. ಲಕ್ಕಪ್ಪಗೌಡ

ಡಾ. ಎಂ.ಜಿ. ಬಿರಾದಾರ

ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಮುಜರಾಯಿ)

ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಡಾ. ಕರೀಗೌಡ ಬೀಚನಹಳ್ಳಿ, ಕುಲಸಚಿವರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಡೀನ್ ಭಾಷಾನಿಕಾಯ

ಡಾ. ಎಂ. ಉಷಾ, ಸಂಚಾಲಕರು, ಜೈನ ಸಾಹಿತ್ಯ ಅಧ್ಯಯನ ಪೀಠ

ಅಱಿವುದು ಧರ್ಮಮಂ ಕಾವ್ಯಧರ್ಮಮುಮಂ

ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ರೂಪಿಸಿ, ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮಹತ್ವಪೂರ್ಣವಾದದ್ದು. ೨೦೦೬ರ ಶ್ರವಣಬೆಳಗೊಳದ ಐತಿಹಾಸಿಕ ಗೊಮ್ಮಟ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯು ಈ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯನ್ನು ರೂಪಿಸಿ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿತು. ಕರ್ನಾಟಕ ಸರ್ಕಾರವು ಈಗಾಗಲೇ ಸಮಗ್ರ ವಚನಸಾಹಿತ್ಯ ಮತ್ತು ದಾಸಸಾಹಿತ್ಯ ಸಂಪುಟಗಳನ್ನು ಹೊರತಂದಿದ್ದು, ಈಗ ಸಮಗ್ರ ಜೈನಸಾಹಿತ್ಯ ಸಂಪುಟಗಳ ಪ್ರಕಟಣೆಯ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯದ ಬಹಳ ಮಹತ್ವದ ಶರೀರವೊಂದನ್ನು ಪೂರ್ಣಗೊಳಿಸುತ್ತಿದೆ. ಈ ಸಮಗ್ರ ಜೈನಸಾಹಿತ್ಯ ಸಂಪುಟದ ಯೋಜನೆಯನ್ನು ೨೦೦೬ರ ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕದ ಭಾಗವಾಗಿ ಕರ್ನಾಟಕ ಸರ್ಕಾರ ಅಂಗೀಕರಿಸಿ ಸಾರಸ್ವತ ಮಹಾಮಸ್ತಕಾಭಿಷೇಕ ಮಾಡಿದ ಪುಣ್ಯಕ್ಕೆ ಪಾತ್ರವಾಗಿದೆ. ಈ ಯೋಜನೆಯ ಮಹತ್ವವನ್ನು ಮನಗಂಡು ಉದಾರವಾದ ಆರ್ಥಿಕ ನೆರವು ನೀಡಿದ ಆಗಿನ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎನ್. ಧರ್ಮಸಿಂಗ್ ಅವರಿಗೂ ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶ್ ಅವರಿಗೂ ಸನ್ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಎಚ್.ಡಿ. ರೇವಣ್ಣ ಅವರಿಗೂ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂದು ಚಾಲನೆಗೊಂಡ ಯೋಜನೆಗೆ ಮತ್ತೆ ಜೀವ ತುಂಬಿದ ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಗೆ ವಿಶೇಷ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪ್ರಸ್ತಾವವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಿದ ಪರಿಷತ್ತಿನ ಸದಸ್ಯರಾದ ಡಾ. ಎಂ.ಆರ್. ತಂಗಾ, ಡಾ. ಚಂದ್ರಶೇಖರ ಕಂಬಾರ, ಡಾ. ಎಲ್. ಹನುಮಂತಯ್ಯ, ಶ್ರೀ ಹಸನಬ್ಬ ಅವರ ನೆರವನ್ನು ವಿಶೇಷವಾಗಿ ಸ್ಮರಿಸುತ್ತೇನೆ. ಕನ್ನಡದ ಹಿರಿಯ ಸಾಹಿತಿಗಳಾದ ಮತ್ತು ಜೈನಸಾಹಿತ್ಯದಲ್ಲಿ ವಿಶೇಷ ಪಾಂಡಿತ್ಯವುಳ್ಳ ಡಾ. ಹಂಪ. ನಾಗರಾಜಯ್ಯ ಮತ್ತು ಡಾ. ಕಮಲಾ ಹಂಪನಾ ಅವರು ಈ ಸಂಪುಟಗಳ ರೂಪರೇಷೆಯಿಂದ ತೊಡಗಿ ಕರ್ನಾಟಕ ಸರ್ಕಾರಕ್ಕೆ ಇದರ ಮಹತ್ವವನ್ನು ಮನವರಿಕೆ ಮಾಡಿಕೊಡುವವರೆಗೆ ವಿಶೇಷವಾದ ಕಾಳಜಿ ವಹಿಸಿ ಸಹಕರಿಸಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯ ಆರಂಭವಾಗುವುದೇ ಜೈನ ಸಾಹಿತ್ಯ ಕೃತಿಗಳ ಮೂಲಕ. ಆದಿಕವಿ ಪಂಪನ **ವಿಕ್ರಮಾರ್ಜುನ ವಿಜಯ** ಮತ್ತು **ಆದಿಪುರಾಣ**ಗಳು ಕನ್ನಡ ಸಾಹಿತ್ಯದ ಮೊತ್ತಮೊದಲ ಮಹಾಕಾವ್ಯಗಳು. ಶಿವಕೋಟ್ಯಾಚಾರ್ಯನ **ವೊಡ್ಡಾರಾಧನೆ** ಕನ್ನಡದ ಮೊತ್ತಮೊದಲ ಉಪಲಬ್ಧ ಗದ್ಯ ಗ್ರಂಥ. ಸಂಸ್ಕೃತವೇ ಸಾಹಿತ್ಯನಿರ್ಮಾಣದ ಪ್ರಧಾನ ಭಾಷೆಯಾಗಿದ್ದ ಭಾರತ ದೇಶದಲ್ಲಿ ಕನ್ನಡದಂತಹ ಪ್ರಾದೇಶಿಕ ಭಾಷೆಯಲ್ಲಿ ಕಾವ್ಯರಚನೆ ಮಾಡುವ ಮೂಲಕ ಜೈನಕವಿಗಳು, ಪ್ರಾದೇಶಿಕ ಸಾಹಿತ್ಯ ನಿರ್ಮಾಣಕ್ಕೆ ನಾಂದಿ ಹಾಡಿದರು. ಆದಿಕವಿ ಪಂಪ **ಇದು ನಿಚ್ಚಂ ಪೊಸತು ಅರ್ಣವಂಬೋಲ್ ಅತಿ ಗಂಭೀರಂ ಕವಿತ್ವಂ** ಎಂದು ಹೇಳಿದ್ದಾನೆ. ಪಂಪಕವಿಯು **ಆದಿಪುರಾಣ**ದಲ್ಲಿ ಆದಿನಾಥನ ಭವಾವಳಿಗಳನ್ನು ಮತ್ತು ಆತನ ಮಕ್ಕಳಾದ ಭರತ ಬಾಹುಬಲಿಯರು ರಾಜ್ಯದ ಒಡೆತನಕ್ಕಾಗಿ ಪರಸ್ಪರ ಎದುರಾಳಿಗಳಾಗುವ ಸನ್ನಿವೇಶವನ್ನು ಚಿತ್ರಿಸಿದ್ದಾನೆ. ಅಣ್ಣ ತಮ್ಮಂದಿರ ನಡುವೆ ಮುಖಾಮುಖಿ ಯುದ್ಧದಲ್ಲಿ ಅಣ್ಣ ಭರತ ಸೋಲುತ್ತಾನೆ, ತಮ್ಮ ಬಾಹುಬಲಿ ಗೆಲ್ಲುತ್ತಾನೆ. ಆದರೆ ಈ ರೀತಿ ಗೆದ್ದ ಬಾಹುಬಲಿಯು ರಾಜ್ಯದ ಒಡೆತನವನ್ನು ನಿರಾಕರಿಸಿ ವೈರಾಗ್ಯಪರನಾಗಿ ಪ್ರತಿಮಾ ಯೋಗದಲ್ಲಿ ನಿಂತು ಗೊಮ್ಮಟನಾಗುತ್ತಾನೆ. ಅಂತಹ ವೈರಾಗ್ಯದ ಪ್ರತಿಮೆಯಾದ ಗೊಮ್ಮಟನ ಮಹಾಮಸ್ತಕಾಭಿಷೇಕದ ನೆನಪಿಗಾಗಿ ಕನ್ನಡ ಸಾಹಿತ್ಯದ ಗೊಮ್ಮಟ ಸದೃಶ ಜೈನಕೃತಿಗಳನ್ನು ಮತ್ತೆ ಹೊಸದಾಗಿ ಶುಭ್ರಗೊಳಿಸಿ ಸಾಹಿತ್ಯ ಮತ್ತು ಶಾಸ್ತ್ರದ ವಿಭಿನ್ನ ಅರ್ಚನೆಗಳ ಮೂಲಕ ಅವುಗಳಿಗೆ ಪ್ರಕಟಣೆಯ ಅಭಿಷೇಕವನ್ನು ಮಾಡಲಾಗಿದೆ.

ಆದಿಕವಿ ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ **ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ** ಎಂದು ಹೇಳಿಕೊಂಡಿದ್ದಾನೆ. ಹೀಗಾಗಿ ಪ್ರಾಚೀನ ಕಾವ್ಯಗಳಲ್ಲಿ ಲೌಕಿಕ ಮತ್ತು ಆಗಮಿಕ ಎನ್ನುವ ಕಾವ್ಯ ಮತ್ತು ಪುರಾಣಗಳ ನಿರ್ಮಾಣದ ಒಂದು ಪರಂಪರೆ ಕಾಣಸಿಕೊಳ್ಳುತ್ತದೆ. ಪಂಪನಿಂದ ತೊಡಗಿ ಪೊನ್ನ ರನ್ನರಿಂದ ಮುಂದುವರಿದು ಮುಂದಿನ ಕವಿಗಳಲ್ಲಿ ಆಗಮಿಕ ಕಾವ್ಯಗಳಾದ ತೀರ್ಥಂಕರರ ಪುರಾಣ ಕೃತಿಗಳ ನಿರ್ಮಾಣ ಒಂದು ನೋಂಪಿಯಂತೆ ಕಾಣಸಿಗುತ್ತದೆ. ಇನ್ನೊಂದು ಕಡೆ ನಯಸೇನ, ಜನ್ನ, ಬ್ರಹ್ಮಶಿವ, ವೃತ್ತವಿಲಾಸರಂತಹ ಕವಿಗಳು ಲೌಕಿಕ ಕಥೆಗಳಿಗೆ ಜೈನ ಆವರಣವನ್ನು ನಿರ್ಮಾಣ ಮಾಡಿ ಲೌಕಿಕ-ಧಾರ್ಮಿಕಗಳನ್ನು ಒಂದುಗೂಡಿಸುವ ವಿಶಿಷ್ಟ ಕಲೆಗಾರಿಕೆಯನ್ನು ಮೆರೆಯುತ್ತಾರೆ. ಹೀಗೆ ೨೪ ತೀರ್ಥಂಕರರ ಪುರಾಣಕಾವ್ಯ ಒಂದು ಧಾರೆಯಾದರೆ ಚರಿತ್ರೆ ಲೌಕಿಕಕಥೆ ನೀತಿಕಥೆಗಳ ಮೂಲಕ ಸಮಕಾಲೀನ ಬದುಕಿಗೆ ಸ್ಪಂದಿಸಿದ ವೈವಿಧ್ಯಮಯ ಕಾವ್ಯಪರಂಪರೆ ಪ್ರಾಚೀನ ಜೈನಸಾಹಿತ್ಯದ ಇನ್ನೊಂದು ಮುಖ್ಯಧಾರೆಯಾಗಿದೆ. ಇದರೊಂದಿಗೆ ಗದ್ಯ ಸಾಹಿತ್ಯದ ದೃಷ್ಟಿಯಿಂದ ಶಿವಕೋಟ್ಯಾಚಾರ್ಯನ **ವೊಡ್ಡಾರಾಧನೆ** ಮತ್ತು ಚಾವುಂಡರಾಯನ **ಚಾವುಂಡರಾಯ ಪುರಾಣ** ಇನ್ನೊಂದು ಪರಂಪರೆಯನ್ನು ಕಟ್ಟಿಕೊಡುತ್ತದೆ. ಒಂದು ಕಡೆ ಜೈನಧರ್ಮದ ಚೌಕಟ್ಟಿನ ಒಳಗಡೆ ಕತೆಗಳು ಮಾಧ್ಯಮವಾಗಿ

ಬಳಕೆಯಾದರೆ, ಇನ್ನೊಂದೆಡೆ ಜೈನ ಧರ್ಮದ ಮೇಲ್ಮೈಗಾಗಿ ಸಾಧನೆ ಮಾಡಿದ ಸಾಂಸ್ಕೃತಿಕ ವ್ಯಕ್ತಿಯ ಸುತ್ತ ಕಥನವೊಂದು ನಿರ್ಮಾಣವಾಗುತ್ತದೆ. ಇವುಗಳ ನಡುವೆ ಇಮ್ಮಡಿ ನಾಗವರ್ಮನಂತಹ ಶಾಸ್ತ್ರಕಾರನು ಭಾಷೆ ಮತ್ತು ಕಾವ್ಯಲಕ್ಷಣಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ರಚಿಸಿದ್ದಾನೆ. ಮಧ್ಯಯುಗೀನ ಕಾಲದಲ್ಲಿ ರತ್ನಾಕರವರ್ಣಿಯಂತಹ ಕವಿಯು ಸಾಂಗತ್ಯದಲ್ಲಿ **ಭರತೇಶ ವೈಭವ** ಕಾವ್ಯರಚಿಸಿ ಜೈನ ಕಾವ್ಯಗಳ ಆಶಯದ ಸಾಂಸ್ಕೃತಿಕ ಪಲ್ಲಟವನ್ನು ದಾಖಲಿಸುತ್ತಾನೆ. ೧೮೦೦ರ ಕಾಲಕ್ಕೆ ಬರುವ ದೇವಚಂದ್ರನ **ರಾಜಾವಳಿ ಕಥೆ**ಯು ಆಧುನಿಕ ಕನ್ನಡದ ಪೂರ್ವದ ಕಥಾರಚನೆಯ ಅರುಣೋದಯದ ಹೆಜ್ಜೆಯಾಗಿ ಮುಖ್ಯವಾದ ಕೃತಿಯಾಗಿದೆ.

ಒಂದು ಅಂದಾಜಿನ ಪ್ರಕಾರ ಸುಮಾರು ೪೫೦ ಜೈನಕವಿಗಳು ೫೨೦ಕ್ಕೂ ಹೆಚ್ಚಿನ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸುಮಾರು ಅರ್ಧದಷ್ಟು ಕೃತಿಗಳು ಲಭ್ಯವೆಂದು ನಾವು ಭಾವಿಸಿದರೂ ಇವುಗಳ ಪ್ರಮಾಣ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಗಣನೀಯ ಎನ್ನಿಸುತ್ತದೆ. ಮಹಾಕಾವ್ಯದಿಂದ ತೊಡಗಿ ಮುಕ್ತಕದ ವರೆಗೆ, ಗಣಿತಶಾಸ್ತ್ರದಿಂದ ಹಿಡಿದು ಸೂಪಶಾಸ್ತ್ರದ ವರೆಗೆ, ಜನಪದ ಕಥೆಯಿಂದ ಆರಂಭಿಸಿ ವಿಡಂಬನ ಸಾಹಿತ್ಯದ ವರೆಗೆ ಕನ್ನಡ ಜೈನಸಾಹಿತ್ಯದ ಹರಹು ವ್ಯಾಪಿಸಿಕೊಂಡಿದೆ.

ಪಂಪಕವಿಯು ತನ್ನ ಕಾವ್ಯದಲ್ಲಿ ಮಾರ್ಗ ಮತ್ತು ದೇಸಿಗಳ ಕುರಿತು ಮಾತನಾಡುತ್ತಾನೆ. ಕನ್ನಡ ಜೈನಸಾಹಿತ್ಯದ ಬಗ್ಗೆ ಹೇಳುವಾಗ ಜೈನ ಪುರಾಣಗಳ ಪರಿಭಾಷೆ ಮತ್ತು ಪರಿಮಾಣಗಳು ಮಾರ್ಗವಾದರೆ, ಇತಿಹಾಸ, ಸಮಾಜ, ಲೌಕಿಕ ಪ್ರಪಂಚ ದೇಸಿಯಾಗುತ್ತದೆ. ಪಂಪನ ಕಾವ್ಯಗಳ ನಾಣ್ನುಡಿಯಿಂದ ತೊಡಗಿ, ವಡ್ಡಾರಾಧನೆ ಕತೆಗಳ ಗ್ರಾಮೀಣ ಬದುಕಿನಿಂದ ಮುಂದುವರಿದು, ನಯಸೇನನ ಧರ್ಮಾಮೃತದ ಕಥೆಗಳ ಮಾಲೋಪಮೆಗಳಿಂದ ಹಾದು ಬಂದು, ರತ್ನಾಕರನ ಭರತೇಶ ವೈಭವದ ನುಡಿಗಟ್ಟುಗಳ ವರೆಗೆ ಕನ್ನಡದ ನಿಜವಾದ ದೇಸಿಯನ್ನು ಜೈನ ಸಾಹಿತ್ಯ ನಿರ್ಮಿಸಿಕೊಂಡಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಂಪೂಕಾವ್ಯ ಪ್ರಕಾರ ಜೈನರಿಂದ ಆರಂಭವಾಯಿತು. ಸಾಂಗತ್ಯಕಾವ್ಯ ಪ್ರಕಾರಕ್ಕೆ ನಾಂದಿ ಹಾಡಿದವರು ಜೈನಕವಿಗಳು. ಗದ್ಯವನ್ನು ಮೊದಲು ಮಾಡಿದವರು ಜೈನ ಕಥೆಗಾರರು. ಕಾವ್ಯಶಾಸ್ತ್ರ, ಛಂದಸ್ಸು, ವ್ಯಾಕರಣ, ಸೂಪಶಾಸ್ತ್ರದಂತಹ ಶಾಸ್ತ್ರ ಪಾಂಡಿತ್ಯವನ್ನು ಕನ್ನಡದಲ್ಲಿ ಕಟ್ಟಿಕೊಟ್ಟವರು ಜೈನರು. ಹೀಗೆ ಕನ್ನಡದ ವಿದ್ವತ್ತು, ವಿವೇಕ ಮತ್ತು ವಿಸ್ಮಯ ಕನ್ನಡ ಸಾಹಿತ್ಯದಲ್ಲಿ ಜೈನ ಕವಿಗಳಿಂದ ಅಪೂರ್ವವಾಗಿ ನಿರ್ಮಾಣವಾಗಿದೆ ಮತ್ತು ಪ್ರಸಾರವಾಗಿದೆ.

ಈ ಹಿನ್ನೆಲೆಯಲ್ಲಿ ಸಮಗ್ರ ಕನ್ನಡ ಜೈನ ಸಾಹಿತ್ಯ ಯೋಜನೆಯನ್ನು ನಿಗದಿತ ಕಾರ್ಯವಿಧಾನದ ಮೂಲಕ ರೂಪಿಸಿಕೊಂಡು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಬೇಕೆಂದು ನಾವು ತೀರ್ಮಾನಿಸಿಕೊಂಡೆವು. ಇದಕ್ಕಾಗಿ ಈ ಕ್ಷೇತ್ರದಲ್ಲಿ ನುರಿತ ನಾಡಿನ ಹಿರಿಯರನ್ನೊಳಗೊಂಡ ಉನ್ನತ ಸಲಹಾ ಸಮಿತಿ ಹಾಗೂ ಸಂಪನ್ಮೂಲ ವಿದ್ವಾಂಸರನ್ನು ಈ ಯೋಜನೆಯ ವ್ಯಾಪ್ತಿಗೆ ಒಳಗೊಳ್ಳಲು ಬಯಸಲಾಯಿತು. ಅದರಂತೆ ನಾಡಿನ

ಗಣ್ಯ ವಿದ್ವಾಂಸರು ಈ ಬೃಹತ್ ಯೋಜನೆಯಲ್ಲಿ ಪಾಲ್ಗೊಂಡರೆಂಬುದು ಕನ್ನಡ ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ಸಂಗತಿ.

ಸಮಗ್ರ ಕನ್ನಡ ಜೈನ ಸಾಹಿತ್ಯ ಸಂಪುಟದ ಯೋಜನೆಯ ಉನ್ನತ ಸಲಹಾ ಸಮಿತಿಯ ಸದಸ್ಯರಾದ ಡಾ. ದೇ. ಜವರೇಗೌಡ, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಡಾ. ಹಂಪ. ನಾಗರಾಜಯ್ಯ, ಡಾ. ಕಮಲಾಹಂಪನಾ, ಡಾ. ಚಂದ್ರಶೇಖರ ಕಂಬಾರ, ಡಾ. ಎಂ.ಎಂ. ಕಲಬುರ್ಗಿ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಎಂ.ಜಿ. ಬಿರಾದಾರ ಮತ್ತು ಕನ್ನಡ ಸಂಸ್ಕೃತಿ ನಿರ್ದೇಶಾಲಯದ ನಿರ್ದೇಶಕರು, ಕರ್ನಾಟಕ ಸರ್ಕಾರದ ಕಂದಾಯ ಮತ್ತು ಮುಜರಾಯಿ ಇಲಾಖೆಯ ಕಾರ್ಯದರ್ಶಿಗಳು ತಮ್ಮ ಸೂಚನೆ ಸಲಹೆಗಳಿಂದ ಈ ಸಂಪುಟಗಳ ಸ್ವರೂಪ ಮತ್ತು ಅನುಷ್ಠಾನಗಳ ಎಲ್ಲಾ ಹಂತಗಳಲ್ಲಿಯೂ ಮಾರ್ಗದರ್ಶನ ಕೊಟ್ಟಿದ್ದಾರೆ. ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಸಮಿತಿಯ ಸಂಚಾಲಕರಾಗಿ ಇಡೀ ಯೋಜನೆಯ ಅನುಷ್ಠಾನದ ಕೆಲಸವನ್ನು ಹೆಜ್ಜೆ ಹೆಜ್ಜೆಗೂ ಸಮರ್ಥವಾಗಿ ನಿರ್ವಹಿಸಿದ್ದಾರೆ. ಕುಲಸಚಿವರಾದ ಪ್ರೊ. ಕರೀಗೌಡ ಬೀಚನಹಳ್ಳಿ ಅವರು ಯೋಜನೆಯ ಆಡಳಿತಾತ್ಮಕ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಡೆಸಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ಜೈನ ಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಂ. ಉಷಾ ಅವರು ಈ ಯೋಜನೆಯನ್ನು ರೂಪಿಸುವಲ್ಲಿ ವಿಶೇಷವಾಗಿ ಸಹಕರಿಸಿದ್ದಾರೆ.

ವಿಶ್ವವಿದ್ಯಾಲಯವು ಈ ಯೋಜನೆಯನ್ನು ಕೈಗೆತ್ತಿಕೊಂಡಾಗ ಪ್ರಕಟಣ ಸ್ವರೂಪವನ್ನು ಸ್ಥೂಲವಾಗಿ ಹೀಗೆ ಗುರುತಿಸಿಕೊಳ್ಳಲಾಯಿತು. ಇದು ಡೆಮ್ಮಿ ೧/೮ ಆಕಾರದ ಸುಮಾರು ಇಪ್ಪತ್ತು ಸಂಪುಟಗಳಿಂದ ಕೂಡಿರಬೇಕು. ಪ್ರತಿ ಸಂಪುಟವೂ ಅಂದಾಜು ೬೦೦ ಪುಟಗಳಾಗಿರಬೇಕು. ಸಂಪುಟದ ಸಂಪಾದಕರು ಆಯಾ ಸಂಪುಟಕ್ಕೆ ಸೂಕ್ತವಾದ ಕವಿ ಕಾವ್ಯ ಪರಿಚಯ, ಚಾರಿತ್ರಿಕ ಹಾಗೂ ಸಾಹಿತ್ಯಿಕ ಮಹತ್ವ ಇತ್ಯಾದಿ ವಿವರಗಳನ್ನು ಒಳಗೊಂಡ ಪ್ರಸ್ತಾವನೆ ಬರೆಯಬೇಕೆಂದು ನಿರ್ಣಯಿಸಲಾಯಿತು. ಸಂಪುಟಗಳು ಜನಪ್ರಿಯ ಆವೃತ್ತಿ ಆಗಿರುವುದರಿಂದ ಪದ್ಯಗಳಲ್ಲಿ ಪಾಠಾಂತರಗಳನ್ನು ನೀಡಬೇಕಾಗಿಲ್ಲ. ಪ್ರತಿಯೊಬ್ಬ ಕವಿಯ ಸಮಗ್ರ ಕಾವ್ಯವನ್ನು ಒಂದು ಸಂಪುಟದಲ್ಲಿ ತರುವುದೆಂದು ಸಮಿತಿ ತೀರ್ಮಾನಿಸಿತು. ವಸ್ತು ವಿಷಯಕ್ಕೆ ಅನುಗುಣವಾಗಿ ಬೇರೆ ಬೇರೆ ಎರಡೆರಡು ಕಾವ್ಯಗಳನ್ನು ಒಂದೇ ಸಂಪುಟದಲ್ಲಿ ಅಳವಡಿಸುವುದು ಸೂಕ್ತವೆಂದು ತೀರ್ಮಾನ ತೆಗೆದುಕೊಳ್ಳಲಾಯಿತು. ಈಗಾಗಲೇ ಸಂಪಾದನೆಗೊಂಡು, ಪ್ರಕಟವಾಗಿರುವ ಕಾವ್ಯಗಳನ್ನು ಮೊದಲ ಹಂತದಲ್ಲಿ ತೆಗೆದುಕೊಳ್ಳುವುದೆಂದೂ ಅಪೂರ್ವ ಕೃತಿಗಳನ್ನೂ ಈ ಮಾಲೆಯಲ್ಲಿ ಸೇರಿಸಿಕೊಳ್ಳುವು ದೆಂದೂ ನಿಶ್ಚಯಿಸಲಾಯಿತು. ಪಂಪ, ಪೊನ್ನ, ರನ್ನ, ಜನ್ನ, ನಾಗವರ್ಮ, ನಯಸೇನ, ಸಾಳ್ವ ಮುಂತಾದವರ ಕಾವ್ಯಗಳು ಈಗಾಗಲೇ ಮುದ್ರಣಗೊಂಡಿವೆ. ಆದರೂ ಪಾಠಕ್ಲೇಶ ಅರ್ಥಕ್ಲೇಶಗಳು ಹೇಗೋ ಉಳಿದುಬಿಟ್ಟಿವೆ. ಆದುದರಿಂದ ಎಲ್ಲ ಮುದ್ರಿತ ಪಾಠಗಳನ್ನು ಗಮನಿಸಿ ಈ ಎಲ್ಲ ಕ್ಲೇಶಗಳನ್ನು ನಿವಾರಿಸಿ ಸರ್ವಪ್ರತಿಪಾಠಗಳನ್ನು ಇಟ್ಟುಕೊಳ್ಳುವುದು

ಅಗತ್ಯವೆಂದು ಸಮಿತಿ ಭಾವಿಸಿತು. ಗ್ರಂಥದ ಕೊನೆಗೆ ಶಬ್ದಾರ್ಥಕೋಶ, ಪಾರಿಭಾಷಿಕಕೋಶ, ಸಹಾಯಕ ಸಾಹಿತ್ಯ ನೀಡುವುದು ಅಗತ್ಯವೆಂದು ಸಂಪಾದಕರಿಗೆ ಬಿನ್ನವಿಸಿಕೊಳ್ಳಲಾಯಿತು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಇಪ್ಪತ್ತು ಸಂಪುಟಗಳು ನಿಮ್ಮ ಎದುರಿಗಿವೆ. ಶ್ರಮಸಾಧ್ಯವಾದ ಇಂಥ ಕಾವ್ಯಗಳನ್ನು ಸಂಪಾದಿಸಿಕೊಟ್ಟ ಕನ್ನಡದ ಹಿರಿಯ ವಿದ್ವಾಂಸರಾದ ಎಲ್ಲ ಸಂಪಾದಕರಿಗೆ ಕೃತಜ್ಞತೆ ಹೇಳುವುದು ಮಾತ್ರ ಈಗ ನಮಗೆ ಸಾಧ್ಯವಾಗಿದೆ.

ಬಾಹುಬಲಿ ಪಂಡಿತನ 'ಧರ್ಮನಾಥ ಪುರಾಣ' ಮತ್ತು ಮಧುರ ಕವಿಯ 'ಧರ್ಮನಾಥ ಪುರಾಣ' ಕಾವ್ಯಗಳನ್ನು ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ. ಎನ್. ಬಸವಾರಾಧ್ಯರವರು ಸಮರ್ಪಕವಾಗಿ ಪರಿಶ್ರಮಪೂರ್ವಕ ಸಂಪಾದನೆ ಮಾಡಿಕೊಟ್ಟಿದ್ದಾರೆ. ಬಾಹುಬಲಿ ಪಂಡಿತ ಮತ್ತು ಮಧುರ ಕವಿ ಇಬ್ಬರೂ ೧೪ನೇ ಶತಮಾನದಲ್ಲಿ ಇದ್ದ ಜೈನ ಕವಿಗಳು. ಬಾಹುಬಲಿ ಪಂಡಿತನು (೧೩೫೨) ೧೫ನೆಯ ತೀರ್ಥಂಕರನಾದ ಧರ್ಮನಾಥನ ಚರಿತೆಯನ್ನು ಪುರಾಣ ಕಾವ್ಯವನ್ನಾಗಿ ರಚಿಸಿದ್ದಾನೆ. ಹದಿನಾರು ಆಶ್ವಾಸಗಳುಳ್ಳ ದೀರ್ಘ ಚಂಪೂ ಕಾವ್ಯವು ಜೈನಪುರಾಣ ಕಾವ್ಯವೊಂದನ್ನು ಸಮಗ್ರವಾಗಿ ಕಟ್ಟಿಕೊಡುವ ರಚನೆಯಾಗಿದೆ. ಪ್ರಾಚೀನ ಮಹಾಕಾವ್ಯಗಳ ಅಷ್ಟಾದಶ ವರ್ಣನೆಗಳನ್ನು ಸಮಗ್ರವಾಗಿ ಒಳಗೊಂಡು ಜೈನಪುರಾಣಕಾವ್ಯದ ಎಲ್ಲ ಅವಯವಗಳನ್ನು ಸೇರಿಸಿಕೊಂಡು ಈ ಕಾವ್ಯವನ್ನು ರಚಿಸಲಾಗಿದೆ. ಪಂಪನು 'ವಿಕ್ರಮಾರ್ಜುನ ವಿಜಯ' ಮತ್ತು 'ಆದಿ ಪುರಾಣ' ಕಾವ್ಯಗಳನ್ನು ಅನುಕ್ರಮವಾಗಿ ಲೌಕಿಕ ಮತ್ತು ಆಗಮಿಕ ಕಾವ್ಯಗಳು ಎಂದು ಕರೆದುಕೊಂಡರೆ, ಬಾಹುಬಲಿ ಪಂಡಿತನು ತನ್ನ 'ಧರ್ಮನಾಥ ಪುರಾಣ'ದಲ್ಲಿ ಲೌಕಿಕ ಮತ್ತು ಆಗಮಿಕ ಕಾವ್ಯಗಳ ಲಕ್ಷಣಗಳನ್ನು ಒಂದೇ ಕಡೆ ಸೇರಿಸಿ ಪುರಾಣ ಕಾವ್ಯವೊಂದನ್ನು ನಿರ್ಮಿಸಿದ್ದಾನೆ. ಆದ್ದರಿಂದಲೇ ಆತನ ಕಾವ್ಯದ ವರ್ಣನೆಗಳಲ್ಲಿ ಪಂಪಭಾರತದ ಯುದ್ಧದ ಚಿತ್ರಗಳೂ ಇವೆ, ಆದಿಪುರಾಣದ ಜೈನ ಧಾರ್ಮಿಕ ವಿವರಗಳೂ ಇವೆ. ಒಂದು ಅರ್ಥದಲ್ಲಿ ಲೌಕಿಕ-ಆಗಮಿಕಗಳ ಸಮನ್ವಯವನ್ನು ತೀರ್ಥಂಕರ ಪುರಾಣಗಳ ಮಾದರಿಯನ್ನು ಸಾಧಿಸಿದವನು ಬಾಹುಬಲಿ ಪಂಡಿತನೆ. ಸಂಸ್ಕೃತದಲ್ಲಿ 'ಗುಮ್ಮಟನಾಥ ಚರಿತೆ'ಯನ್ನು ಬರೆದಿರುವ ಬಾಹುಬಲಿ ಪಂಡಿತನು ಉಭಯಭಾಷಾ ಕವಿ ಚಕ್ರವರ್ತಿಯಾಗಿದ್ದು ಕನ್ನಡ ಮತ್ತು ಸಂಸ್ಕೃತದಲ್ಲಿ ಸಮಾನ ಪ್ರಭುತ್ವವನ್ನು ಹೊಂದಿದ್ದನು.

೧೪ನೇ ಶತಮಾನದಲ್ಲಿ ಬಾಹುಬಲಿ ಪಂಡಿತನ ಬಳಿಕ ಬಂದ ಮಧುರ ಕವಿಯೂ ಕೂಡ 'ಧರ್ಮನಾಥ ಪುರಾಣಂ' ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾನೆ. ಇವನು 'ಗುಮ್ಮಟ ಸ್ತುತಿ' ಎಂಬ ಅಷ್ಟಕವನ್ನೂ ಹಂಪೆಯ ಶಾಸನವೊಂದನ್ನೂ ರಚಿಸಿದ್ದಾನೆ. ಒಂದೇ ಶತಮಾನದಲ್ಲಿ ಇಬ್ಬರು ಕವಿಗಳು 'ಧರ್ಮನಾಥ ಪುರಾಣ' ಚಂಪೂ ಕಾವ್ಯಗಳನ್ನು ರಚಿಸಿರುವುದು ಕುತೂಹಲಕಾರಿಯಾದುದು. ಮಧುರ ಕವಿಯ 'ಧರ್ಮನಾಥ ಪುರಾಣಂ' ಸಂಪೂರ್ಣವಾಗಿ ದೊರೆತಿಲ್ಲ. ಈ ಕಾವ್ಯ ಸಂಪೂರ್ಣವಾಗಿ ರಚನೆಯಾಗದೆ ಇರುವ ಸಂಭವ ಕೂಡಾ ಇದೆ. 'ಧರ್ಮನಾಥ ಪುರಾಣ' ಚಂಪೂ ಕಾವ್ಯದಲ್ಲಿ ಕಾವ್ಯ ಮತ್ತು ಕವಿಗಳ ಕುರಿತು ಮಧುರ ಕವಿಯು ಮಾಡುವ ಟೀಕೆ, ನಿಂದೆ ಮತ್ತು ವಿಮರ್ಶೆ ಸಾಕಷ್ಟು

ಚರ್ಚೆಗೆ ಒಳಗಾಗಿದೆ. ಪ್ರಾಚೀನ ಮಹಾಕಾವ್ಯಗಳ ಅಷ್ಟಾದಶ ವರ್ಣನೆಗಳಿಗೆ ಬಹಳವಾಗಿ ಮಾರುಹೋಗಿರುವ ಮಧುರಕವಿಯು ಹೇಳುವ ಈ ಪದ್ಯ ಜನಪದ ಕವಿಗಳ ನಿಂದೆ ಎಂದು ಟೀಕೆಗೆ ಒಳಗಾಗಿದೆ :

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯ ಬೀದಿವರಿಯ ಬೀರನ ಕಥೆಯೇ [೧.೫೭]

ಪಂಡಿತ ಕವಿ ಎಂಬ ಹೆಸರನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯ ಹದಿನಾಲ್ಕನೇ ಶತಮಾನದಲ್ಲಿ, ದೇಸಿ ಪರಂಪರೆಗೆ ಪ್ರತಿಯಾಗಿ ಮತ್ತು ಪ್ರತಿಕ್ರಿಯೆಯಾಗಿ ಶಿಥಿಲಗೊಳ್ಳುತ್ತಿದ್ದ ಪಂಡಿತ ಪರಂಪರೆಯನ್ನು ಉಳಿಸಿಕೊಳ್ಳುವ ಮತ್ತು ಕಟ್ಟುವ ಪ್ರಯತ್ನವನ್ನು ಮಧುರ ಕವಿ ಮಾಡುತ್ತಾನೆ. ನಯಸೇನ ಕವಿಗೆ ಪ್ರತಿಯಾಗಿ ಮಧುರ ಕವಿಯನ್ನು ಜೈನ ಪರಂಪರೆಯಲ್ಲಿ ಗುರುತಿಸುವ ಅಗತ್ಯವಿದೆ. ಮಧುರ ಕವಿಯ ಹಂಪೆಯ ಶಾಸನವು ಪ್ರೌಢದೇವರಾಯನ ಮಂತ್ರಿ ಲಕ್ಷ್ಮೀಧರನ ಜನಪರ ಕಾರ್ಯಗಳನ್ನು ಬಿಂಬಿಸುವ ರಚನೆಯ ಶಾಸನವಾದರೂ ಇದು ಚಂಪೂಕಾವ್ಯದ ಮಾದರಿಯಲ್ಲಿ ಇದೆ. ತಾಯಿ ಹೇಳಿದ 'ಕೆರೆಯಂ ಕಟ್ಟಿಸು ಬಾವಿಯಂ ಸವೆಸು' ಎನ್ನುವ ಮಾತಿಗೆ ಅನುಗುಣವಾಗಿ ಜನಹಿತ ಕಾರ್ಯಗಳನ್ನು ಮಾಡಿದ ಲಕ್ಷ್ಮೀಧರ ಅಮಾತ್ಯನ ವರ್ಣನೆಯನ್ನು ಮಾಡುವ ಈ ಶಾಸನವು ಕನ್ನಡದಲ್ಲಿ ವಿಶಿಷ್ಟವಾಗಿದೆ. ಹೀಗಾಗಿ ಮಧುರನದ್ದು ದೇಸಿಯ ಮನಸ್ಸು, ಮಾರ್ಗದ ಅಭಿವ್ಯಕ್ತಿಯಾಗಿದೆ.

ಪ್ರೊ. ಎನ್. ಬಸವಾರಾಧ್ಯರು ಕನ್ನಡದ ಹಿರಿಯ ವಿದ್ವಾಂಸರಾಗಿ ಶಾಸ್ತ್ರಕಾರರಾಗಿ ಕನ್ನಡಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಪ್ರಾಚೀನ ಕನ್ನಡ ಕಾವ್ಯಗಳ ಸಂಪಾದನೆಯನ್ನು ಪರಿಶ್ರಮ ಮತ್ತು ಪ್ರೀತಿಯಿಂದ ನಡೆಸುತ್ತಾ ಬಂದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪ್ರಾಚೀನ ಕನ್ನಡ ಕಾವ್ಯಗಳ ಪ್ರಕಟಣೆಗೆ ಕಾರಣರಾಗಿದ್ದಾರೆ. ಈ ತುಂಬು ವಯಸ್ಸಿನಲ್ಲಿಯೂ ಕನ್ನಡ ಪರವಾದ ಚಟುವಟಿಕೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಅವರ ಮಹತ್ವದ ಕೃತಿಗಳು : ಹರಿಶ್ಚಂದ್ರ ಕಾವ್ಯ, ಆರಾಧ್ಯ ಚಾರಿತ್ರ, ಚತುರಾಚಾರ್ಯ ಚಾರಿತ್ರ, ಧರ್ಮನಾಥ ಪುರಾಣದಂತಹ ಅನೇಕ ಗ್ರಂಥಗಳ ಸಂಪಾದನೆ. ಹಳಗನ್ನಡ ನಿಘಂಟುವಿನಂತಹ ಅನೇಕ ವಿದ್ವತ್ ಗ್ರಂಥಗಳನ್ನು ರಚಿಸಿದ್ದಾರೆ. ಬಾಹುಬಲಿ ಪಂಡಿತನ 'ಧರ್ಮನಾಥ ಪುರಾಣ' ಮಧುರ ಕವಿಯ 'ಧರ್ಮನಾಥ ಪುರಾಣ' ಕಾವ್ಯಗಳನ್ನು ತುಂಬಾ ಪರಿಶ್ರಮ ಮತ್ತು ಆಸಕ್ತಿಯಿಂದ ಸಮರ್ಪಕವಾಗಿ ಸಂಪಾದಿಸಿಕೊಟ್ಟು ಸಹಕರಿಸಿದ್ದಾರೆ. ಅವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ಆಭಾರಿಯಾಗಿದ್ದೇನೆ.

ಬಿ.ಎ. ವಿವೇಕ ರೈ
ಕುಲಪತಿ

ಸಂಪಾದಕರ ನುಡಿ

ಕನ್ನಡ ವಿಶ್ವವಿದ್ಯಾಲಯವು ಕೈಕೊಂಡಿರುವ ಸಮಗ್ರ ಜೈನ ಸಾಹಿತ್ಯ ಮಾಲೆಯ ಯೋಜನೆಯಲ್ಲಿ ಜೈನ ಸಮಗ್ರ ಕಾವ್ಯಗಳ ಸಂಪಾದನೆಯಲ್ಲಿ ನನಗೆ ಬಾಹುಬಲಿ ಪಂಡಿತ ಹಾಗೂ ಮಧುರನ ಧರ್ಮನಾಥ ಪುರಾಣಗಳ ಸಂಯುಕ್ತ ಸಂಪುಟವನ್ನು ಸಂಪಾದಿಸಿ ಕೊಡುವ ಕಾರ್ಯವನ್ನು ವಹಿಸಿತು. ಅದರಂತೆ ಈ ಎರಡು ಪ್ರಾಚೀನ ಕೃತಿಗಳನ್ನು ಸಂಪಾದಿಸಿಕೊಡಲಾಗಿದೆ. ಅವುಗಳ ವಿವರಗಳು ಇಂತಿವೆ.

ಬಾಹುಬಲಿಪಂಡಿತ ವಿರಚಿತ ಧರ್ಮನಾಥ ಪುರಾಣವನ್ನು ನಾನು ಶಾಸ್ತ್ರೀಯವಾಗಿ ಸಂಪಾದಿಸಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ೧೯೭೫ರಲ್ಲಿ ಪ್ರಕಟಿಸಿದ್ದೆ. ಈ ಕೃತಿಯನ್ನು ನಾಲ್ಕು ಹಸ್ತಪ್ರತಿಗಳ ನೆರವಿನಿಂದ ಸಂಪಾದಿಸಲಾಗಿದೆ. ಇವುಗಳಲ್ಲಿ ಎರಡು ಓಲೆಯ ಪ್ರತಿಗಳು, ಒಂದು ಕಾಗದದ ಪ್ರತಿ, ಮತ್ತೊಂದು ಅಸಮಗ್ರ ಮುದ್ರಿತ ಪ್ರತಿ. ಬಾಹುಬಲಿ ಪಂಡಿತನ ಕಾಲ ಕ್ರಿ.ಶ.೧೩೫೨. ಧರ್ಮನಾಥ ಪುರಾಣವನ್ನು ರಚಿಸಿದ ಕಾಲವನ್ನು ಕವಿಯೇ ಹೇಳಿಕೊಂಡಿದ್ದಾನೆ. ಚಂಪು ಕಾವ್ಯಗಳ ಶ್ರೇಣಿಯಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ. ಹದಿನೈದನೆಯ ತೀರ್ಥಂಕರನಾದ ಧರ್ಮನಾಥನ ಚರಿತ್ರೆ ನಿರೂಪಿತವಾಗಿದೆ. ಇದರಲ್ಲಿ ಹದಿನಾರು ಆಶ್ವಾಸಗಳಿವೆ. ಕನ್ನಡ ಸಾಹಿತ್ಯದಲ್ಲಿ ಧರ್ಮನಾಥ ತೀರ್ಥಂಕನ ಬಗೆಗೆ ಕೃತಿ ರಚಿಸಿದವರಲ್ಲಿ ಬಾಹುಬಲಿ ಪಂಡತನೇ ಮೊದಲಿಗನೆನ್ನಬಹುದು.ಧರ್ಮನಾಥಪುರಾಣದಲ್ಲಿ ನಾವು ಟವನ್ನು ಬಳಸಿಲ್ಲ. ಏಕೆಂದರೆ ಈ ಕವಿ ಪ್ರಾಸ ಸ್ಥಾನಗಳಲ್ಲಿ ನಿಯತವಾಗಿ ಟವನ್ನು ಉಪಯೋಗಿಸಿಲ್ಲ. ಜೊತೆಗೆ ಈ ಕಾಲಕ್ಕಾಗಲೇ ಟಕಣ್ಮರೆಯಾಗುತ್ತಾ ಬಂದಿತ್ತೆಂದು ಭಾವಿಸಬಹುದಾಗಿದೆ.

ಮಧುರನ ಕಾಲ ಕ್ರಿ.ಶ.ಸುಮಾರು ೧೩೮೫. ಈತನು ಚಂಪು ಕವಿಗಳ ಶ್ರೇಣಿಯಲ್ಲಿ ಕೊನೆಯವನೆಂದು ಪರಿಗಣಿಸಲಾಗಿದೆ. ಈತನ ಧರ್ಮನಾಥ ಪುರಾಣ ಅಸಮಗ್ರವಾಗಿದೆ. ಈತನು ಬರೆದಿರುವ ಹಂಪೆಯ ಶಾಸನವನ್ನು ಅನುಬಂಧದಲ್ಲಿ ಕೊಡಲಾಗಿದೆ. ಮಧುರನ ಈ ಹಂಪೆಯ ಶಾಸನವನ್ನು ಮೂಲದಿಂದ ಪ್ರತಿ ಮಾಡಿಕೊಟ್ಟಿದ್ದೇ ಅಲ್ಲದೆ. ಕರಡಚ್ಚನ್ನು ತಿದ್ದಿಕೊಟ್ಟ ಡಾ॥ ಎಂ.ಜಿ. ನಾಗರಾಜ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳೂ ಪ್ರಸಾರಾಂಗದ ನಿರ್ದೇಶಕರೂ ಸಮಗ್ರ ಜೈನ ಸಾಹಿತ್ಯ ಮಾಲೆ ಯೋಜನೆಯ ಇನ್ನಿತರ ಸದಸ್ಯರೂ ಬಾಹುಬಲಿ ಪಂಡಿತ ಹಾಗೂ ಮಧುರನ ಧರ್ಮನಾಥ ಪುರಾಣಗಳ ಸಂಪಾದನ ಕಾರ್ಯವನ್ನು ನನಗೆ ವಿಶ್ವಾಸದಿಂದ ವಹಿಸಿಕೊಟ್ಟಿದ್ದಾರೆ. ಇದರಿಂದ ಹದಿನಾಲ್ಕನೆಯ ಶತಮಾನದ ಧರ್ಮನಾಥ ಪುರಾಣದ ಚಂಪು

ಕೃತಿಗಳನ್ನು ಮತ್ತೊಮ್ಮೆ ಸಮಗ್ರವಾಗಿ ಓದುವ ಅವಕಾಶ ಪ್ರಾಪ್ತವಾಯಿತು. ಇದಕ್ಕಾಗಿ ಈ ಸಮಿತಿಯ ಅಧ್ಯಕ್ಷರೇ ಆದಿಯಾಗಿ ಎಲ್ಲ ಸದಸ್ಯರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಮಧುರ ಕವಿಯ ಧರ್ಮನಾಥ ಪುರಾಣ ಶ್ರೀ ಎಂ.ಸಿ. ಪದ್ಮನಾಭ ಶರ್ಮ ಮತ್ತು ಜಿ. ಬ್ರಹ್ಮಪ್ಪನವರ ಸಂಪಾದಕತ್ವದಲ್ಲಿ ಮೈಸೂರಿನ ಶ್ರೀ ಕೆ.ಸಿ. ಜಿನಚಂದ್ರಯ್ಯ ಅವರಿಂದ ೧೯೫೫ರಲ್ಲಿ ಪ್ರಕಟವಾಗಿತ್ತು. ಈ ಸಂಪಾದಕರಿಗೆ ಲಭ್ಯವಾಗಿದ್ದುದು ಅಪೂರ್ಣವಾದ ಅಶುದ್ಧಪ್ರತಿ. ಈ ಕೃತಿ ಪ್ರಕಟವಾಗಿ ಐವತ್ತು ವರ್ಷಗಳಾದರೂ ಇದು ಮರುಮುದ್ರಣವನ್ನು ಕಂಡಿಲ್ಲ. ಇದರ ಹಸ್ತಪ್ರತಿಗಳೂ ಲಭ್ಯವಾಗಿಲ್ಲ. ಹೀಗಾಗಿ ಕೃತಿಯ ಸಂಪಾದನೆ ದುಸ್ತರವಾದುದು. ಈ ಕೃತಿಯ ಸಂಪಾದನೆಯನ್ನು ನನಗೆ ವಹಿಸಿದಾಗ ನಾನು ಮತ್ತೊಮ್ಮೆ ಹಸ್ತಪ್ರತಿಗಳಿಗಾಗಿ ಹುಡುಕಾಡಿದೆ. ಎಲ್ಲೂ ಹಸ್ತಪ್ರತಿಗಳು ಕಂಡುಬರಲಿಲ್ಲ. ಇದರ ಏಕೈಕ ಹಸ್ತಪ್ರತಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಮುದ್ರಿತ ಪ್ರತಿಗಳೂ ಯಾರಲ್ಲೂ ಸಿಕ್ಕಲಿಲ್ಲ. ಸಂಪಾದಕರಲ್ಲೊಬ್ಬರಾಗಿದ್ದ ಶ್ರೀ ಎಂ.ಸಿ. ಪದ್ಮನಾಭ ಶರ್ಮರು ನನಗೆ ಒಂದು ಮುದ್ರಿತ ಪ್ರತಿ ಕೊಟ್ಟದ್ದ ನೆನಪು, ಆದರೆ ಆ ಪ್ರತಿ ಸಿಕ್ಕಲಿಲ್ಲ. ಈ ಸಂಪಾದಕರು ಈಗ ಇಲ್ಲ. ಇನ್ನೊಬ್ಬ ಸಂಪಾದಕರಾದ ಪ್ರೊ॥ ಜಿ. ಬ್ರಹ್ಮಪ್ಪ ಅವರನ್ನು ಕೇಳಿದಾಗ ತಮ್ಮಲ್ಲಿದ್ದ ಪ್ರತಿಯನ್ನು ಯಾವುದೋ ಗ್ರಂಥಭಂಡಾರಕ್ಕೆ ಕೊಟ್ಟುಬಿಟ್ಟುದಾಗಿ ಹೇಳಿದರು. ಕೊನೆಗೆ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನನ್ನ ಸಹೋದ್ಯೋಗಿಗಳಾಗಿದ್ದ ಶ್ರೀ ಜಿ.ಎಸ್. ಸಣ್ಣಯ್ಯನವರನ್ನು ವಿಚಾರಿಸಿದೆ. ಅವರು ಈ ಕೃತಿಯನ್ನು ಪರಿಷ್ಕರಣ ಮಾಡಬೇಕೆಂದು ಕನ್ನಡ ಅಧ್ಯಯನ ಸಂಸ್ಥೆಯಲ್ಲಿನ ಓಲೆ ಪ್ರತಿಯಿಂದ ತಾಳೆಮಾಡಿಕೊಂಡಿದ್ದ ಪ್ರತಿ ಇರುವುದಾಗಿ ಹೇಳಿದರು. ಈಗ ಅಚ್ಚಾಗಿರುವ ಪ್ರತಿಯ ಝೆರಾಕ್ಸ್ ಮಾಡಿಸಿ ಅದನ್ನು ಕನ್ನಡ ಅಧ್ಯಯನ ಸಂಸ್ಥೆಯ ಓಲೆ ಪ್ರತಿಯಿಂದ ಹೋಲಿಸಿ ಪಾಠಾಂತರಗಳನ್ನು ಗುರುತು ಮಾಡಿಕೊಂಡಿದ್ದರು. ನನ್ನ ಮೇಲಿನ ವಿಶ್ವಾಸದಿಂದ ಪಾಠಾಂತರಗಳಿದ್ದ ಝೆರಾಕ್ಸ್ ಪ್ರತಿಯನ್ನೇ ಕಳಿಸಿಕೊಟ್ಟರು. ಇದರಿಂದ ನಾನು ಮತ್ತೆ ಹಸ್ತಪ್ರತಿಯನ್ನು ನೋಡುವ ತೊಂದರೆ ತಪ್ಪಿತು. ಆಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಭಂಡಾರದಲ್ಲಿ ಮುದ್ರಿತ ಪ್ರತಿ ಲಭ್ಯವಾಯಿತು.

ಈ ಎರಡು ಪ್ರತಿಗಳನ್ನಿಟ್ಟುಕೊಂಡು ತಾಳೆ ನೋಡಿದಾಗ ಇವೆರಡೂ ಅಶುದ್ಧ ಪ್ರತಿಗಳೆಂದು ಸ್ಪಷ್ಟವಾಯಿತು. ಅಕ್ಷರಸ್ಖಾಲಿತ್ಯಗಳನ್ನು ಸರಿಪಡಿಸಬಹುದು. ಆದರೆ ಪಾಠಾಂತರಗಳನ್ನು ನಿರ್ಧರಿಸುವುದು ಸಾಧ್ಯವಾಗಲಿಲ್ಲ. ಮಧುರನ ಧರ್ಮನಾಥ ಪುರಾಣದ ಕೆಲವು ಪದ್ಯಗಳು ಅಭಿನವಾದಿವಿದ್ಯಾನಂದನ ಕಾವ್ಯಸಾರದಲ್ಲೂ, ಭಟ್ಟಾಕಳಂಕ ದೇವ ಶಬ್ದಾನುಶಾಸನದಲ್ಲೂ, ಮಲ್ಲಕವಿ ಸಂಯೋಜಿತ ಕಾವ್ಯಸಾರದಲ್ಲೂ ಉದ್ಧೃತವಾಗಿವೆ. ಈ ಕಾಲಕ್ಕೆ ಧರ್ಮನಾಥ ಪುರಾಣ ಅಚ್ಚಾಗಿರಲಿಲ್ಲ. ಆದುದರಿಂದ ಈ ಮೂರು ಕೃತಿಗಳಲ್ಲಿ ಉದ್ಧೃತವಾದ ಪದ್ಯಗಳನ್ನೆಲ್ಲಾ ಅತ್ಯಂತ ಪ್ರಯಾಸದಿಂದ ಹುಡುಕಿ ಈಗ ಅಚ್ಚಾಗಿರುವ ಕೃತಿಯೊಂದಿಗೆ ತಾಳೆ ನೋಡಲಾಯಿತು. ಈ ಎಲ್ಲಾ ಕಾವ್ಯಗಳಿಂದ ಸುಮಾರು ೮೫ ಪದ್ಯಗಳನ್ನು ತಾಳೆ ನೋಡಲಾಗಿದೆ. ಆದರೆ ಯಾವ ಪಾಠಾಂತರಗಳನ್ನೂ ಸ್ವೀಕರಿಸ ಲಾಗಲಿಲ್ಲ. ಏಕೆಂದರೆ ಆ ಸಂಕಲನಕಾರರು ಯಾವ ಆಕರಗಳಿಂದ ಈ ಪದ್ಯಗಳನ್ನು ತೆಗೆದುಕೊಂಡಿರುವರೆಂಬ ವಿವರಗಳೇ ಇಲ್ಲ. ಈ ಬಗೆಗೆ ಮತ್ತಷ್ಟು ಸಂಶೋಧನೆ ಅಗತ್ಯವಾಗಿದೆ.

ಪ್ರೊ. ಎನ್. ಬಸವಾರಾಧ್ಯ

ಪ್ರಸ್ತಾವನೆ

ಬಾಹುಬಲಿ ಕವಿ-ಕಾಲ-ಕಾವ್ಯ

ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ತಲೆದೋರಿದ ಚಂಪೂಕವಿಗಳಲ್ಲಿ ಬಾಹುಬಲಿಪಂಡಿತ ಮುಖ್ಯನಷ್ಟೇ ಅಲ್ಲ, ಕೇಂದ್ರಬಿಂದುವೂ ಎನಿಸಿದ್ದಾನೆ. ಈ ಶತಮಾನದಲ್ಲಿ ಬಂದ ಮಧುರ ಕವಿ ಇದೇ ವಿಷಯವನ್ನು ಕುರಿತು ಒಂದು ಚಂಪೂಕಾವ್ಯವನ್ನು ಬರೆದಿದ್ದಾನೆ. ಕ್ರಿ.ಶ. ೧೩೪೯ರಲ್ಲಿ ಇದ್ದಿರಬಹುದಾದ ಈತನ ಧರ್ಮನಾಥ ಪುರಾಣ ನಮಗೆ ಸಮಗ್ರವಾಗಿ ಸಿಕ್ಕಿಲ್ಲ. ಬಾಹುಬಲಿ ಪಂಡಿತನ ಕಾಲ ಕ್ರಿ.ಶ. ೧೩೫೨. ಧರ್ಮನಾಥ ಪುರಾಣವನ್ನು :

ಸ್ವಸ್ತಿಶ್ರೀ ಶಕವತ್ಸರಂ ಸಲೆ ಚತುಸ್ಸಪ್ತದ್ವಯ್ಯೆಕಾಂಕವಿ
ನ್ಯಸ್ತಂ ನಂದನವರ್ಷದಲ್ಲಿ ಮಧುಮಾಸ ಶ್ವೇತಪಕ್ಷಾಷ್ಟಮಿಾ
ವಿಸ್ತಾರೀಕೃತ ಸೋಮವಾರದೊಳಿದಂ ಸಂಪೂರ್ಣಮಂ ಮಾಡಿದಂ
ಪ್ರಸ್ತುತ್ಯಂ ಪ್ರತಿಭಾಪರಂ ಭುಜಬಲಿ ಪ್ರಖ್ಯಾತಯೋಗೀಶ್ವರಂ (೧೬-೪೩೨)

೧೨೭೪ ನಂದನ ಸಂವತ್ಸರ ಎಂದರೆ ಕ್ರಿ.ಶ. ೧೩೫೨ರಲ್ಲಿ ರಚಿಸಿದಂತೆ ಹೇಳಿಕೊಂಡಿದ್ದಾನೆ. ಈ ಬಾಹುಬಲಿಪಂಡಿತನನ್ನು ತರುವಾಯ ಬಂದ ಯಾವೊಬ್ಬ ಕವಿಯೂ ಸ್ಮರಿಸಿದಂತೆ ಕಂಡುಬರುವುದಿಲ್ಲ. ಇಷ್ಟೇಕೆ ಈತನ ಕಿರಿಯ ಸಮಕಾಲೀನನಾಗಿದ್ದಿರಬಹುದಾದ ಮಧುರನೂ ಈತನನ್ನು ಸ್ತುತಿಸದಿರುವುದು ನಿಜಕ್ಕೂ ಆಶ್ಚರ್ಯಕರ ಸಂಗತಿಯಾಗಿದೆ. ಕನ್ನಡಸಾಹಿತ್ಯದಲ್ಲಿ ಧರ್ಮನಾಥ ತೀರ್ಥಂಕರನ ಬಗೆಗೆ ಸ್ವತಂತ್ರ ಕೃತಿಗಳನ್ನು ರಚಿಸಿದವರಲ್ಲಿ ಬಾಹುಬಲಿ ಪಂಡಿತನೇ ಮೊದಲಿಗನೆನ್ನಬಹುದು. ಆತನ ಇತಿವೃತ್ತಗಳೇನೂ ನಮಗೆ ತಿಳಿದುಬಂದಿಲ್ಲ. ಆತನ ಕಾವ್ಯಗಳಲ್ಲಿಯೂ ಈ ಬಗೆಗೆ ಯಾವ ಮಾಹಿತಿಯೂ ದೊರಕುವುದಿಲ್ಲ.

ಬಾಹುಬಲಿಪಂಡಿತ ಧರ್ಮನಾಥಪುರಾಣವನ್ನು ಕನ್ನಡದಲ್ಲಿಯೂ ಗುಮ್ಮಟನಾಥ ಚರಿತೆಯನ್ನು ಸಂಸ್ಕೃತದಲ್ಲಿಯೂ ಬರೆದಿದ್ದಾನೆ. ಧರ್ಮನಾಥಪುರಾಣದ ಪ್ರತಿ ಆಶ್ವಾಸದ ಕೊನೆಯಲ್ಲಿಯೂ "ಇದು ಸಕಳಭುವನಜನ ವಿನೂಯಮಾನಾನೂನ ಮಹಿಮಾ ಮಾನನೀಯ ಪರಮಜಿನಸಮಯ ಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವ ಪ್ರಸಾದ ಸಂಪಾದಪಾದನಿಧಾನ ದೀಪವರ್ತಿಯುಭಯಭಾಷಾಕವಿಚಕ್ರವರ್ತಿ ಬಾಹುಬಲಿ ಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್" ಎಂಬ ಗದ್ಯಭಾಗವಿದೆ. ಅಲ್ಲದೆ ಪ್ರಥಮಾಶ್ವಾಸದಲ್ಲಿ ಬರುವ :

ಮೊದಲೊಳ್ ಸಂಸ್ಕೃತಭಾಷೆಯಿಂ ಬುಧಜನಂ ಕೊಂಡಾಡುತಿರ್ಪಂತೆ ಸಂ
ಮದದಿಂ ಗುಮ್ಮಟನಾಥ ಸಚ್ಚರಿತವೆಂಬೀ ಕಾವ್ಯಮಂ ಪೇಳ್ದು ಮಾ
ಣದೆ ಕರ್ಣಾಟಕದಿಂದೆ ಮತ್ತೆ ರಚಿಸಿ ಶ್ರೀಧರ್ಮನಾಥಪ್ರಬಂ
ಧದ ಪೆರ್ಚಂ ತಳೆದಂ ಸಮಂತುಭಯಭಾಷಾಕಾವ್ಯಕರ್ತೃತ್ವಮಂ (೧-೪೮)

ಎಂಬ ಪದ್ಯದಿಂದಲೂ ಈತನು ಮೇಲಿನ ಎರಡೂ ಕೃತಿಗಳನ್ನು ಬರೆದಿರುವನೆಂಬುದು ಸ್ವಯಂ ವೇದ್ಯವಾಗುತ್ತದೆ. ಈತನಿಗೆ 'ಉಭಯಭಾಷಾ ಕವಿಚಕ್ರವರ್ತಿ' ಎಂಬ ಬಿರುದಿದ್ದಂತೆ ಮೇಲಿನ ಗದ್ಯಭಾಗದಿಂದಲೂ ಮುಂದಿನ :

ನಯಪಿದರೆಲ್ಲರುಂ ಪೊಗಳೆ ಜಾಣ್ನುಡಿ ಮಿಕ್ಕಿರೆ ಕಾವ್ಯಮಂ ಗುಣೋ
ದಯಪರಮಾಗೆ ಮಾಡಿ ನಯಕೀರ್ತಿಯತೀಶ್ವರರಗ್ರಶಿಷ್ಯನಿಂ
ತಯಯುತನಪ್ಪ ಬಾಹುಬಲಿಪಂಡಿತದೇವನಭಿಷ್ಟುತಂ ಮಹೋ
ಭಯಕವಿಚಕ್ರವರ್ತಿ ಪೆಸರಿಂದೆಸೆದಂ ಜಗದೊಳ್ ನಿರಂತರಂ (೧-೪೯)

ಈ ಪದ್ಯದಿಂದಲೂ ತಿಳಿದುಬರುತ್ತದೆ.

ಧರ್ಮನಾಥಪುರಾಣ ಒಂದು ಚಂಪೂಕಾವ್ಯ. ಇದರಲ್ಲಿ ೧೬ ಆಶ್ವಾಸಗಳಿವೆ. ಹದಿನೈದನೆಯ ತೀರ್ಥಂಕರನಾದ ಧರ್ಮನಾಥನ ಚರಿತ್ರೆಯನ್ನು ಇದರಲ್ಲಿ ಹೇಳಿದೆ. ಪ್ರಥಮಾಶ್ವಾಸದಲ್ಲಿ ಕವಿ ಸಿದ್ಧರನ್ನೂ ಜೈನತತ್ತ್ವೋಪದೇಶಕರನ್ನೂ ಸರ್ವಸಾಧುಗಳನ್ನೂ ಶಾರದೆಯನ್ನೂ ವೃದ್ಧಾಜ್ಜಿಕೆಯರನ್ನೂ ಸ್ತುತಿಸಿದ್ದಾನೆ. ಅರಿಷ್ಟಸೇನ, ಗೌತಮ ಗಣಧರಯತಿ, ಪುಷ್ಪದಂತ, ಗೃದ್ಧ್ರಪಿಂಛಾಚಾರ್ಯ, ಸಮಂತಭದ್ರಮುನಿ, ಪೂಜ್ಯಪಾದಮುನಿ, ಅಕಳಂಕವ್ರತಿ, ಕೊಂಡಕುಂದಯತಿಪತಿ, ವಿಶಾಲ ಕೀರ್ತಿಮುನಿ, ಪಾರ್ಶ್ವದೇವ, ಜಿನ ಧರ್ಮೋದ್ಧಾರಕ ಚಾರುಕೀರ್ತಿಪಂಡಿತ, ಧರ್ಮಭೂಷಣ ಭಟ್ಟಾರಕ, ಲಕ್ಷ್ಮಿಸೇನ ಭಟ್ಟಾರಕ, ಮೇಘಚಂದ್ರ, ನಯಕೀರ್ತಿದೇವ-ಇವರೇ ಮೊದಲಾದ ಆಚಾರ್ಯರನ್ನು ಭಕ್ತಿಪೂರ್ವಕವಾಗಿ ವಂದಿಸಿದ್ದಾನೆ. ಗಜಾಂಕುಶ, ನಾಗವರ್ಮ, ಹಂಪ, ನೇಮಿ, ಜನ್ನಿಗ, ರನ್ನ, ಅಗ್ಗಳ-ಇವರೇ ಮೊದಲಾದವರನ್ನು ಸ್ಮರಿಸಿದ್ದಾನೆ. ಇದಾದಮೇಲೆ ದುರ್ಜನ ನಿಂದೆ, ಕೃತಿಪ್ರಶಂಸೆ, ಕೃತಿಪತಿಪ್ರಶಂಸೆಗಳನ್ನು ಮಾಡಿದ್ದಾನೆ; ಅಲ್ಲದೆ ಆತ್ಮಪ್ರಶಂಸೆಯನ್ನೂ ಮಾಡಿಕೊಂಡಿದ್ದಾನೆ. ಆ ಬಳಿಕ ಕಥೆಯನ್ನು ನೇರವಾಗಿ ಪ್ರಾರಂಭಿಸಿದ್ದಾನೆ.

ಜಂಬೂದ್ವೀಪದ ದಕ್ಷಿಣದಿಶಾಭಾಗದಲ್ಲಿ ಭರತಕ್ಷೇತ್ರವು ರಾರಾಜಿಸುತ್ತಿತ್ತು. ಅದರಲ್ಲಿ ಉತ್ತರ ಕೌಶಲದೇಶ ವಿರಾಜಮಾನವಾಗಿತ್ತು, ಸಕಲ ಸಂಪದ್ಭರಿತವಾಗಿತ್ತು. ಇಕ್ಷ್ವಾಕುವಂಶದ ಮಹಾಸೇನಮಹಾರಾಜ ಅದರ ರಾಜನಾಗಿದ್ದನು. ಮನುಜ ಮನೋಜನಾದ ಆ ಮಹಾಸೇನ ಮಹಾರಾಜನ ಮನೋವಲ್ಲಭೆ ಸುವ್ರತಾದೇವಿ. ಆ ರಾಜದಂಪತಿಗಳು ಸಮಸ್ತ ಭೋಗಭಾಗ್ಯ ಗಳನ್ನು ಅನುಭವಿಸುತ್ತಿದ್ದರೂ ಅವರಿಗೆ ಮಕ್ಕಳಿರಲಿಲ್ಲ. ಇದರಿಂದ ಚಿಂತಾಕ್ರಾಂತನಾದ ರಾಜ:

ಎನಿತೆನಿತುಂ ಸ್ವಬಾಂಧವ ಸಹಸ್ರಮದುಳ್ಳೊಡಮೇನು ಮತ್ತಮಂ
ತೆನಿತೆನಿತುಂ ಸ್ವಗೋತ್ರಜಜನಂಗಳುಮುಳ್ಳೊಡಮೇನು ಪುತ್ರಸಂ
ಜನಿ ತನಗಿಲ್ಲದಂದು ನರನಾವನೊ ದುಃಖಮನೆಯ್ದನಂಬರಂ
ವಿನುತಹಿಮಾಂಶುವಿಲ್ಲದೊಡೆ ತಾರೆಗಳುಳ್ಳೊಡಮೆಂತು ರಂಜಿಕುಂ (೩-೫)

ಕುಲದೀಪನೆನಿಪ ತನಯಂ
ನಿಳಯದೊಳುಜ್ವಳಿಸಿ ಬೆಳಗದಿರ್ದೊಡೆ ಧಾತ್ರೀ
ತಳದೊಳದು ಮೆಱೆಯದಂತೆನೆ
ವಿಳಸಿತ ತಮದಿಂದಂ ಪುದಿದ ಮನೆಯಂತೆ ವಲಂ (೩-೬)

ಈ ರೀತಿ ತರ್ಕಿಸುವನು. ಇದಕ್ಕೆ ಏನು ಮಾಡಬೇಕೆಂದು ಆಲೋಚಿಸಿ 'ಧರ್ಮದೊದವಿಂಸಾಧ್ಯಂ ದಲೀಕಾರ್ಯಂ' ಎಂದು ನಿಶ್ಚಯಿಸುವನು. ಆ ವೇಳೆಗೆ ಸರಿಯಾಗಿ ವನಪಾಲಕನು ಬಂದು ಪ್ರಚೇತರೆಂಬಾಚಾರ್ಯವರ್ಯರು ಐನೂರುಜನ ಚಾರಣ ಋಷಿಗಳೊಡನೆ ಪುರದ ಬಹಿರುದ್ಯಾನದಲ್ಲಿ ಬೀಡುಬಿಟ್ಟಿರುವ ಸಂಗತಿಯನ್ನು ತಿಳಿಸುವನು. ಅದನ್ನು ಕೇಳಿದ ರಾಜ ಸಂತುಷ್ಟಚಿತ್ತನಾಗಿ ಪತ್ನೀಸಮೇತ ಋಷಿಗಳ ದರ್ಶನಕ್ಕೆ ಹೊರಟನು. ಅವರನ್ನು ಕಂಡಕೂಡಲೆ ದಂಪತಿಗಳಿಬ್ಬರೂ ಭಕ್ತಿಯಿಂದ ಪ್ರಣಾಮವನ್ನು ಮಾಡಿದರು. ಆಮೇಲೆ ರಾಜನು 'ಪಂಚಮುಷ್ಟಿ ಪರಿನಿಷ್ಠಿತಾಂಗಯುಷ್ಟಿಯಾಗಿ' ವಂದನೆಯನ್ನು ಮಾಡಿ ದೀನನಾಗಿ ನೆಲದ ಮೇಲೆ ಮಲಗಿಕೊಂಡನು. ರಾಜನನ್ನು ನೋಡಿದ ಋಷಿಗಳು ಆಶೀರ್ವದಿಸಿ ಆತನ ದುಗುಡಕ್ಕೆ ಕಾರಣವನ್ನು ಕೇಳಿದರು. ಅದಕ್ಕೆ ರಾಜ 'ಎನ್ನೀ ಪ್ರಾಣಪ್ರೀತೆಯಪ್ಪ ಕುಲಸ್ತ್ರೀಗೆ ಕಾಲದೊಳಾದೊಡಂ ಪುತ್ರಲಾಭ ಮಾಗದಿರ್ದುದು ರಾಜ್ಯಭಾರಧಾರಣ ಧೌರೇಯನಪ್ಪ ಕುಮಾರನನೊರ್ವನನಾದೊಡಂ ಕಾಣದ ಕಾರಣ ಮಿಾಗಳೀ ಚತುಸ್ಸಮುದ್ರಾಂಕಿತಮಾದ ಮೇದಿನೀಮಂಡಳಮೆನ್ನಯ ಬಾಹುದಂಡಕ್ಕೆ ಕೇವಳಂ ಭಾರಮಾಗಿ ತೋಱುತ್ತುಮಿರ್ದಪುದದಱಿಂದಾನತಿಕ್ಲೇಶಮಂತಾಳ್ದಿದೆಂ' ಎಂದು ವಿಜ್ಞಾಪಿಸಿಕೊಂಡನು. ಅದನ್ನು ಕೇಳಿದ ಆ ಋಷಿಗಳು :

ತ್ರಿಜಗದ್ಗುರುವೆನಿಸುವ ಧ
ರ್ಮಜಿನಾಧೀಶಂಗೆ ತಂದೆಯಾದಪೆಯೆಂದೊಡೆ
ನಿಜಪುಣ್ಯದೇಳ್ಗೆ ಲೋಕದೊ
ಳಜನಿಸಿದುದು ಪಿರಿದುಮದ್ಭುತತ್ವದ ಪೆಂಪಂ (೩-೬೩)

ಎಂದು ಹೇಳಲು ಆ ದಂಪತಿಗಳು ಅಪರಿಮಿತ ಪರಮಾನುರಾಗ ರಸಪೂರಿತರಾಗಿ ಮುನಿಗಳಿಗೆ ನಮಸ್ಕರಿಸಿ ಆ ಜಿನನ ಪೂರ್ವವೃತಾಂತವನ್ನು ನಿರೂಪಿಸಬೇಕೆಂದು ಪ್ರಾರ್ಥಿಸಿಕೊಂಡರು. ತರುವಾಯ ಆ ಮುನಿಗಳು 'ಜಿನನ ಚರಿತ್ರದೊಂದು ಕಥೆಯಂ ನೆಱೆಪೇಳ್ದಡೆ ಕೇಳ್ದೊಡಂ ದಲಾತನ ದುರಿತಂಗಳೆಯ್ದೆ ಪರಿದೋಡುಗುಂ' ಎಂದು ಭವಾಂತರ ಪ್ರಪಂಚವನ್ನು ನಿರೂಪಿಸುವುದಕ್ಕೆ ತೊಡಗಿದರು.

ಧಾತಕೀಷಂಡದ ಜಂಬೂದ್ವೀಪದಲ್ಲಿ ಮೇರುಗಿರಿಯ ಪೂರ್ವಪ್ರದೇಶದಲ್ಲಿ ಚಾರುಜಿನ ಧರ್ಮಗೇಹ ವಿರಾಜಿಸುತ್ತಿತ್ತು. ಆ ಪೂರ್ವವಿದೇಹದ ಮಧ್ಯದಲ್ಲಿ ಸೀತಾನದಿ ಹರಿಯುತ್ತಿತ್ತು. ಆ ನದಿಯ ತೀರದಲ್ಲಿ ವತ್ಸವೆಂಬ ದೇಶವಿತ್ತು. ಆ ದೇಶವನ್ನು ಭಾನುರಾಜನು ಆಳುತ್ತಿದ್ದನು. ಆತನ ಚಿತ್ತವಲ್ಲಭೆ ಮನೋಹರಿ. ಭಾನುರಾಜ ಮತ್ತು ಮನೋಹರಿಯರು ಕಾಮರತಿಯರಂತೆ ಸುಖವನ್ನು ಅನುಭವಿಸುತ್ತಿದ್ದರು. ಹೀಗಿರುವಲ್ಲಿ ಮನೋಹರಿ ಗರ್ಭವತಿಯಾದಳು. ಕಾಲಕ್ರಮದಲ್ಲಿ ಗಂಡುಮಗುವನ್ನು ಹಡೆದಳು. ಆ ಮಗುವಿಗೆ ದಶರಥನೆಂಬ ಹೆಸರಿಟ್ಟರು. ಕ್ರಮೇಣ ಆ

ಬಾಲಕ ಪಾಡ್ಯದ ಚಂದ್ರನಂತೆ ಬೆಳೆದು, ಸಮಸ್ತ ಶಸ್ತ್ರಶಾಸ್ತ್ರ ವಿದ್ಯಾವಿಶಾರದನಾದನು. ಆಗ ಭಾನುರಾಜ ರಾಜ್ಯಭಾರವನ್ನು ಆತನಿಗೆ ವಹಿಸಿ ಯಮಧರಭಟ್ಟಾರಕರ ಸಮಕ್ಷದಲ್ಲಿ ಜಿನದೀಕ್ಷಾಪ್ರಾಪ್ತನಾಗಿ 'ನಿಸರ್ಗದುರ್ಗಮಪವರ್ಗಮಂ' ಸಾಧಿಸಿದನು. ಇತ್ತ ದಶರಥಮಹಾರಾಜ ದುಷ್ಟಶಿಕ್ಷಣ ಶಿಷ್ಟಪರಿಪಾಲನದಿಂದ ರಾಜ್ಯಭಾರವನ್ನು ಮಾಡುತ್ತಿದ್ದನು. ಆತನ ಕೀರ್ತಿಯನ್ನು ಕವಿ ಈ ರೀತಿ ವರ್ಣಿಸಿದ್ದಾನೆ :

ಪಾಪಕ್ಕಂಜುವನಾತಂ
ಪಾಪಂ ತಾನಂಜಿಯಾತನಂ ಬಿಟ್ಟೋಡಿ
ತ್ತೀ ಪರಿಯಂ ದಶದಿಕ್ಕುಗ
ಳಾಪ್ಪೊತ್ತುಂ ನಗುವುವವನ ಕೀರ್ತಿಯ ನೆವದಿಂ (೪-೪೫)

ಈ ರೀತಿ ವರ್ಣಿಸಿದ್ದಾನೆ. ಆ ಮಹಾರಾಜನಿಗೆ ದಯಾವತಿದೇವಿ ಎಂಬ ಹೆಂಡತಿ ಇದ್ದಳು. ಆ ದಂಪತಿಗಳಿಗೆ ಅತಿರಥನೆಂಬ ಕುಮಾರನಾದನು. ಹೀಗಿರಲು ಒಮ್ಮೆ ದಶರಥನು ಒಡ್ಡೋಲಗದಲ್ಲಿದ್ದಾಗ ಚಾರಣಪರಮೇಷ್ಠಿಗಳು ಆಕಾಶಪ್ರದೇಶದಿಂದ ಇಳಾತಳಕ್ಕೆ ಅವತರಿಸುತ್ತಿದ್ದುದನ್ನು ಕಂಡನು. ಅರಮನೆಗೆ ಆ ಋಷಿಗಳು ಬಂದಕೂಡಲೆ ಅವರನ್ನು ಸಂತೋಷದಿಂದ ಇದಿರುಗೊಂಡು ನಮಸ್ಕರಿಸಿ ಪರಿಪರಿಯಾಗಿ ಉಪಚರಿ ಸಿದನು. ಆ ರಾಜನ ದಾನಧರ್ಮಬುದ್ಧಿಯಿಂದ ಸಂಪ್ರೀತನಾದ ಮುನಿ 'ನಿತ್ಯಸುಖಭೋಗ ಭಾಗಿಯಾಗು' ಎಂದು ಆಶೀರ್ವದಿಸಿ ಹೊರಟುಹೋದನು.

ದಶರಥ ಮಹಾರಾಜನು ಒಮ್ಮೆ ಅಮೃತಶಿಲಾನಿರ್ಮಿತವಾದ ಸೌಧಶಿಖರಾಗ್ರದಲ್ಲಿ ಓಲಗವನ್ನು ನಡೆಸುತ್ತಿದ್ದನು. ಎಲ್ಲೆಲ್ಲೂ ಹಾಲು ಚೆಲ್ಲಿದಂತೆ ಬೆಳುದಿಂಗಳಿತ್ತು. ಆ ಸಮಯದಲ್ಲಿ ಕಲಾಪರಿಪೂರ್ಣನಾಗಿದ್ದ ಚಂದ್ರಬಿಂಬವನ್ನು ರಾಹು ಹಿಡಿಯಿತು. ಜಗತ್ತನ್ನೆಲ್ಲ ಕತ್ತಲೆ ಆವರಿಸಿತು. ತನ್ನ ಕಣ್ಣೆದುರಿಗೇ ನಡೆದ ಈ ಪ್ರಸಂಗವನ್ನು ಕಂಡ ರಾಜ ಸಿರಿಯ ಅಸ್ಥಿರತೆಯನ್ನೂ ಸಂಸಾರದ ನಿಸ್ಸಾರತೆಯನ್ನೂ ಮನದಲ್ಲಿ ಬಗೆದು :

ಸ್ಥಿರಮಲ್ಲದ ಸಿರಿ ಸಾರ್ದೊಡೆ
ಪಿರಿದುಂ ದಾನವನೆ ಮಾಡುವಂ ಕಡುಜಾಣಂ
ನೆರಪಿ ಬೈತಿಟ್ಟು ಮೆಲ್ಲನೆ
ಪರಿಭೋಗಿಪೆನೆಂದು ಬಗೆವವಂ ಕಡುಮೂರ್ಖಂ (೫-೨೮)

ಈ ರೀತಿ ನಿರ್ಧರಿಸಿ ಸಾಂಸಾರಿಕ ಸುಖಕ್ಕೆ ಕೊಕ್ಕರಿಸುವನು. ದುಶ್ಚರಣ ತಪಶ್ಚರಣ ಪರಿಗ್ರಹವನ್ನು ಮಾಡುವುದಾಗಿ ನಿಶ್ಚಯಿಸುವನು. ಮಾರನೆಯ ದಿನ ಒಡ್ಡೋಲಗವನ್ನು ಸೇರಿಸಿ ತನ್ನ ಕುಮಾರನನ್ನು ಬರಮಾಡಿಕೊಂಡು ಜೈನದೀಕ್ಷೆಯನ್ನು ಕೈಕೊಂಡು ತಪಸ್ಸಿಗೆ ಹೊರಡುವ ತನ್ನ ನಿರ್ಧಾರವನ್ನು ತಿಳಿಸುವನು. ಮಂತ್ರಿಗಳೂ ರಾಜಕುಮಾರನೂ ದಶರಥನ ನಿರ್ಧಾರವನ್ನು ಬದಲಿಸುವಂತೆ ಬಗೆಬಗೆಯಾಗಿ ಪ್ರಾರ್ಥಿಸಿಕೊಂಡರು. ಆದರೆ ಅದಾವುದಕ್ಕೂ ಒಗೊಡದೆ ಮಹಾರಾಜನು ಮಗನಿಗೆ ಸಾಮ್ರಾಜ್ಯಪಟ್ಟವನ್ನು ಕಟ್ಟಿ :

ಕೈವಲ್ಯಕ್ಕೆಱಗುವ ಮನ
ಮೋವದೆ ಸಂಸಾರ ಪದವಿಗೇನೆಱಗುವುದೇ
ಪೂವಿಂಗೆಱಗುವ ಮಧುಪಂ
ಭಾವಿಸೆ ದುರ್ದಮಿತ ಕರ್ದಮಕ್ಕೆಱಗುವುದೇ (೫-೭೩)

ಎಂದು ನಿಶ್ಚಯಿಸಿ ಬಂದುಬಾಂಧವರನ್ನು ಸಂತೈಸಿ, ಪುತ್ರನನ್ನು ಒಡಂಬಡಿಸಿ ತಪಸ್ಸಿಗೆ ಹೊರಟುಹೋದನು. ದಾರಿಯಲ್ಲಿ ವಿಮಳವಾಹನ ಭಟ್ಟಾರಕರನ್ನು ಕಂಡು ಅವರ ಆಶೀರ್ವಾದವನ್ನು ಪಡೆದು ಮುಂದೆ ಹೋದನು. ಆತನು ನಿಷ್ಠೆಯಿಂದ ತ್ರಿಕಾಲವೂ ತಪಸ್ಸನ್ನು ಮಾಡಿ ಬಾಹ್ಯಾಭ್ಯಂತರ ಪರಿಗ್ರಹಗಳನ್ನು ತೊರೆದು ಸಂನ್ಯಸನ ವಿಧಾನದಿಂದ ಒಂದು ತಿಂಗಳು ಪರ್ಯಂತರವಿದ್ದನು. ಆಮೇಲೆ ಸಮಾಧಿವಿಧಿ ದೊರಕೊಂಡು ಸರ್ವಾರ್ಥಸಿದ್ಧಿ ವಿಮಾನವನ್ನು ಸೇರಿದನು. ಅಲ್ಲಿಂದ ಅಹಮಿಂದ್ರನೆಂಬ ದೇವನಾಗಿ ಹುಟ್ಟಿ ಅವಧಿಜ್ಞಾನವನ್ನು ಪಡೆದನು. ಸರ್ವಾವಧಿಬೋಧಸಂಪನ್ನನಾದ ಆತನು ಮೂವತ್ತುಮೂರು ಸಾಗರೋಪಮಕಾಲವಾದಮೇಲೆ ಚರಮದೇಹಧಾರಣೆಗಾಗಿ ಧರಣೀತಳಕ್ಕೆ ಅವತರಿಸುವನು. ಮಹಾಸೇನಮಹಾರಾಜ ಮತ್ತು ಸುವ್ರತಾಮಹಾ ದೇವಿಯರಿಗೆ ಹದಿನೈದನೆಯ ತೀರ್ಥಂಕರನಾಗಿ ಧರ್ಮನಾಥನು ಮಗನಾಗಿ ಹುಟ್ಟುವನು ಎಂದು ಆ ಪ್ರಚೇತರೆಂಬಾಚಾರ್ಯರು ಹೇಳಿದರು. ಧರ್ಮನಾಥನ ಪೂರ್ವಭಾವಾವಳಿ ಯನ್ನು ಅವರೆಲ್ಲರೂ ಕೇಳಿ ಮುನೀಶ್ವರನನ್ನು ಕೊಂಡಾಡಿದರು. ತರುವಾಯ ಮಹಾಸೇನಮಹಾರಾಜ ಮತ್ತು ಸುವ್ರತಾಮಹಾದೇವಿಯರು ಸಂತೋಷದಿಂದ ನಿಜರಾಜಧಾನಿಗೆ ಹಿಂತಿರುಗಿದರು. ದೇವೇಂದ್ರನು ಧರ್ಮನಾಥನ ಗರ್ಭಾವತರಣ ಕಲ್ಯಾಣನಿಮಿತ್ತವಾಗಿ ರತ್ನವೃಷ್ಟಿಯನ್ನು ಕರೆಯುವಂತೆ ಕುಬೇರನಿಗೆ ಆಜ್ಞೆ ಮಾಡಿದನು. ಅಲ್ಲದೆ ದೇವಸ್ತ್ರೀಯರನ್ನು ಕರೆಸಿ 'ನೀವು ಹೋಗಿ ಆ ಜಿನಜನನಿಗೆ ಪರಿಚರ್ಯವನ್ನು ಮಾಡುತ್ತಿರಿ' ಎಂದು ಕಳಿಸಿಕೊಟ್ಟನು. ಅದರಂತೆ ಆ ದೇವಸ್ತ್ರೀಯರು ಮಹಾಸೇನ ಮಹಾರಾಜನ ಅರಮನೆಗೆ ಬಂದು ಆತನನ್ನು ಆಶೀರ್ವದಿಸಿದರು. ಅವರನ್ನು ಕಂಡ ರಾಜನು ಅವರ ಇತಿವೃತ್ತವನ್ನು ಬೆಸಗೊಳ್ಳಲು ಆ ದೇವಸ್ತ್ರೀಯರಲ್ಲಿ ಮುಖ್ಯಳಾದವಳು :

ಭಾವಿ ಜಿನಜನನಿಯಪ್ಪಾ
ದೇವಿಗೆ ಶುಶ್ರೂಷೆಯಂ ಮಹಾದರದಿಂದಂ
ನೀವೆಯ್ದೆ ಮಾಡಿಯೆಂದಾ
ದೇವೇಂದ್ರಂ ಬೆಸಸೆ ಬಂದೆವಿಲ್ಲಿಗೆ ನೃಪತೀ (೬-೩೯)

ಎಂದು ಹೇಳಿದಳು. ಅದನ್ನು ಕೇಳಿದ ಮಹಾರಾಜ ಸಂತೋಷಭರಿತನಾಗಿ ದೇವಸ್ತ್ರೀ ಯರನ್ನೆಲ್ಲ ಸತ್ಕರಿಸಿದನು. ಆ ದೇವಸ್ತ್ರೀಯರು ಜಿನಜನನಿಯಾದ ಸುವ್ರತಾಮಹಾ ದೇವಿಯನ್ನು ನಾನಾ ರೀತಿಯಲ್ಲಿ ಉಪಚರಿಸುತ್ತಿದ್ದರು. ಹೀಗಿರುವಲ್ಲಿ ಒಂದುದಿನ ರಾತ್ರಿ ಸುವ್ರತಾಮಹಾದೇವಿ ಮಂಗಳ ಕಾರಣಂಗಳಾದ ಷೋಡಶಭಾವನಾದಿ ಸ್ವಪ್ನಗಳನ್ನು ಕಂಡಳು. ಬೆಳಗಾದ ಮೇಲೆ ತಾನು ಕಂಡ ಸ್ವಪ್ನಗಳ ಸಂಗತಿಯನ್ನು ಪತಿಗೆ ಹೇಳಿದಳು. ಅದನ್ನು ಕೇಳಿದ ರಾಜ ಮುಂದಾಗಲಿರುವ ಪುತ್ರೋತ್ಸವ ಸಂಗತಿಯನ್ನು ಅರಿತು ಅಪರಿಮಿತ ಆನಂದವನ್ನು ಹೊಂದಿದನು. ಇತ್ತ ಸರ್ವಾಥಸಿದ್ಧಿ

ಎಂಬ ವಿಮಾನದಲ್ಲಿ ಹುಟ್ಟಿದ್ದ ದಶರಥನ ಚರನಾದ ಅಹಮಿಂದ್ರನೆಂಬದೇವ ತನ್ನ ಅವಸಾನಕಾಲ ಪ್ರಾಪ್ತವಾದುದನ್ನು ಅರಿತು ದಿವ್ಯಶರೀರ ಭಾರವನ್ನು ಬಿಟ್ಟು ಸರ್ವಾರ್ಥಸಿದ್ಧಿಯಿಂದ ಹೊರಬಂದು ಸುವ್ರತಾ ಮಹಾದೇವಿಯ ಗರ್ಭದಲ್ಲಿ ನೆಲಸಿದನು. ಇದನ್ನು ತಿಳಿದ ದೇವೇಂದ್ರನೇ ಮೊದಲಾದ ದೇವತೆಗಳಿಗೆ ಆಸನಕಂಪವಾಯಿತು. ಆಗ ಚತುರ್ನಿಕಾಯ ದೇವತೆಗಳೆಲ್ಲ ಬಂದು ಪಂಚಾಶ್ಚರ್ಯ ಪುರಸ್ಸರವಾಗಿ ಗರ್ಭಾವತರಣಕಲ್ಯಾಣ ವಿಧಾನವನ್ನು ಮಾಡಿದರು.

ಗರ್ಭವತಿಯಾದ ಸುವ್ರತಾಮಹಾದೇವಿ ಅಪೂರ್ವವಾದ ಶೋಭೆಯಿಂದ ರಾರಾಜಿಸುತ್ತಿದ್ದಳು. ನವಮಾಸಗಳು ತುಂಬಲು ಒಂದು ಶುಭಮುಹೂರ್ತದಲ್ಲಿ ಆಕೆ ಪುತ್ರನನ್ನು ಹಡೆದಳು. ಆಗ ಪಂಚಾಶ್ಚರ್ಯಗಳಾದುವು; ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು. ಭುವನಾಮರ ಲೋಕದಿಂದ ವ್ಯಂತರಲೋಕದಿಂದ ಜ್ಯೋತಿರ್ಲೋಕದಿಂದ ಕಲ್ಪವಾಸಿ ದೇವರ್ಕಳೆಲ್ಲ ಜಿನನ ಜನ್ಮೋತ್ಸವದಲ್ಲಿ ಭಾಗಿಗಳಾಗಲು ಅಲ್ಲಿಗೆ ಬಂದರು. ಆಗ ದೇವೇಂದ್ರ ಶಚೀದೇವಿಗೆ ಧರ್ಮಜಿನೇಶನನ್ನು ಎತ್ತಿಕೊಂಡು ಬರುವಂತೆ ಹೇಳಿಕಳಿಸಿದನು. ಅದರಂತೆ ಆಕೆ ಅಲ್ಲಿಗೆ ಹೋಗಿ ಜಿನಜನನಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ ಅಲ್ಲಿದ್ದ ವನಿತೆಯರಿಗೆಲ್ಲ ನಿದ್ರೆಯನ್ನು ಬರಿಸಿ ಮಾಯಾರ್ಭಕನನ್ನು ಅಲ್ಲಿರಿಸಿ ಜಿನಾರ್ಭಕನನ್ನು ಎತ್ತಿಕೊಂಡು ಹೋದಳು. ಆ ಶಿಶುವನ್ನು ದೇವೇಂದ್ರನ ಕೈಗೆ ಕೊಟ್ಟಳು. ದೇವೇಂದ್ರನು ಜಿನಜನ್ಮಾಭಿಷೇಕ ಕಲ್ಯಾಣ ಯಾತ್ರಾನಿಮಿತ್ತವಾಗಿ ಐರಾವತವನ್ನು ತರಿಸಿ ಅದರ ಮೇಲೆ ಜಿನಾರ್ಭಕನನ್ನು ಕುಳ್ಳಿರಿಸಿ ಮೇರುಪರ್ವತಕ್ಕೆ ಕೊಂಡೊಯ್ದನು. ಅಲ್ಲಿ ಪಾವನಮೋಕ್ಷಸ್ಥಾನವೆಂಬಂತೆ ವಿಶಾಲವಾಗಿದ್ದ ಪಾಂಡುಕಶಿಲೆಯ ನಡುವೆ ಜಿನನ ಅಭಿಷೇಕ ಮಂಟಪ ರಂಜಿಸುತ್ತಿತ್ತು. ಅಲ್ಲಿದ್ದ ದೇವತೆಗಳು ದೇವೇಂದ್ರನ ಆಜ್ಞೆಯಂತೆ ಸುವರ್ಣಘಟಗಳಿಂದ ಕ್ಷೀರಸಮುದ್ರದ ಜಲವನ್ನು ತಂದು ಜಿನನಿಗೆ ಅಭಿಷೇಕವನ್ನು ಮಾಡಿದರು. ಆಮೇಲೆ ಜಿನಶಿಶುವನ್ನು ರತ್ನಪುರಕ್ಕೆ ಕರೆತಂದು ಆತನ ಪುಣ್ಯಶಕ್ತಿಯನ್ನು ಹೊಗಳಿ:

ಈತಂ ಮಾಡಿದಪಂ ಪಿನಿರ್ಮಳ ಮಹಾಧರ್ಮಪ್ರಭಾವಾಂಗಮಂ
ಧಾತ್ರೀಮಂಡಳದಲ್ಲಿ ಮೇಲೆನಿಪಿನಂ ಧರ್ಮಕ್ಕಮಿನ್ನುಂ ಸಮಂ
ಕೀತಂ ತಾನಧಿನಾಥನೆಂದು ಶಿಶುಗಂ ಶ್ರೀಧರ್ಮನಾಥಂ ದಲೆಂ
ಬೀತಂ ನಾಮಮನಿಟ್ಟು ಘೋಷಿಸಿದನಾ ದೇವೇಂದ್ರನಾನಂದದಿಂ (೬-೩೬)

ಧರ್ಮನಾಥನೆಂದು ನಾಮಕರಣಮಾಡಿದರು. ದೇವೇಂದ್ರನೇ ಮೊದಲಾದವರೆಲ್ಲ ಸ್ವಸ್ಥಾನಗಳಿಗೆ ಹಿಂತಿರುಗಿದರು. ಇತ್ತ ಧರ್ಮನಾಥನು ಬಾಲಲೀಲೆಗಳನ್ನು ಕಳೆದು ಯೌವನಕ್ಕೆ ಕಾಲಿಟ್ಟನು. ಪ್ರಾಪ್ತವಯಸ್ಕನಾದ ಧರ್ಮನಾಥನಿಗೆ ಮಹಾಸೇನಮಹಾರಾಜ ಯುವರಾಜ ಪಟ್ಟವನ್ನು ಕಟ್ಟಿದನು.

ಒಂದು ದಿನ ಧರ್ಮನಾಥ ಒಡ್ಡೋಲಗದಲ್ಲಿದ್ದಾಗ ಕುಂಡಿನಪುರದಿಂದ ಬಂದ ಒಬ್ಬ ದೂತನು ಆ ದೇಶದ ರಾಜಪುತ್ರಿಯಾದ ಶೃಂಗಾರವತೀದೇವಿಯ ಸ್ವಯಂವರದ ವಿಷಯವನ್ನು ತಿಳಿಸಿದನು. ಮಹಾಸೇನಮಹಾರಾಜ ಧರ್ಮನಾಥನನ್ನು ಆ ಸ್ವಯಂವರಕ್ಕೆ ಕಳಿಸಿಕೊಟ್ಟನು. ಸಪರಿವಾರ ಸಮೇತನಾಗಿ ಹೊರಟ ಧರ್ಮನಾಥ ಕುಂಡಿನಪುರವನ್ನು ಸಮೀಪಿಸುತ್ತಲೇ ಆ

ದೇಶದ ರಾಜನಾದ ಪ್ರತಾಪರಾಜನಿಗೆ ತನ್ನ ಆಗಮನವನ್ನು ತಿಳಿಸಿದನು. ಪ್ರತಾಪರಾಜನು ಧರ್ಮನಾಥನಿಗೆ ವಿಶಿಷ್ಟವಾದ ಬಿಡಾರವನ್ನು ಏರ್ಪಡಿಸಿಕೊಟ್ಟನು. ಭವ್ಯವಾದ ಸ್ವಯಂವರ ಮಂಟಪದಲ್ಲಿ ರಾಜಾಧಿರಾಜರು ಮಂಡಿಸಿದ್ದರು. ಧರ್ಮನಾಥನು ಮಣಿಮಯಸಿಂಹಾಸನದಲ್ಲಿ ವಿರಾಜಮಾನನಾಗಿದ್ದನು. ಸ್ವಯಂವರಮಂಟಪದಲ್ಲಿ ನೆರೆದಿದ್ದ ರಾಜಕುಮಾರರೆಲ್ಲ ರಾಜಕುಮಾರಿಯನ್ನು ನೋಡಿ :

ಮನಸಿಜನ ಮಂತ್ರದೇವತೆ
ಯೆನೆ ಮದನನ ವೀರಲಕ್ಷ್ಮಿಯಂತಿರೆ ರತಿನಾ
ಥನ ಮೋಹನ ಶಕ್ತಿಯವೋಲ್
ಜನಮಂ ಮೋಹಿಸುತುಮಿರ್ದಳಚ್ಚರಿಯಿಂದಂ (೧೧-೯೯)

ಎಯ್ದೆ ಮೂಲೋಕಮಂ ಕೆ
ಯ್ಗೆಯ್ದಿರ್ದಕೆಯ ರೂಪಿದೊಂದೆ ಸಾಲದೆ ಗೆಲಲಿ
ನ್ನಯ್ದು ಬಾಣಂಗಳಂ ಪಿಡಿ
ದೆಯ್ದುವ ಸಂಕ್ಲೇಶಮೇವುದೆಂಬಂ ಮದನಂ (೧೧-೭೦)

ಈ ರೀತಿ ಅಭಿಪ್ರಾಯಪಟ್ಟರು. ಪ್ರತಿಯೊಬ್ಬರೂ ಆಕೆಯನ್ನು ಗೆಲ್ಲಬೇಕೆಂದು :

ಒರ್ವಂ ವಶ್ಯದ ಚೂರ್ಣಮಂ ತಳಿದನೊರ್ವಂ ಧ್ಯಾನಿಸುತ್ತಿರ್ದನೊ
ಲ್ದೊರ್ವಂ ಮಂತ್ರಮನೋದಿದಂ ತಿಳಕಮಂ ಮತ್ತೊರ್ವನಿಟ್ಟಂ ಸಮಂ
ತುರ್ವಿಂದಾ ಸತಿಯಂ ವಶೀಕರಿಸಲೆಂದಿಂತಪ್ಪುಪಾಯಂಗಳಂ
ಸರ್ವರ್ ಮಾಡುತುಮಿರ್ದರುತ್ಸುಕತೆಯಿಂ ಗೆಲ್ವಂತಿರೊರ್ವೊರ್ವರಂ
(೧೧-೧೦೦)

ಈ ವಿಧಾನಗಳನ್ನು ಅನುಸರಿಸಿದರಂತೆ. ಸಭೆಯಲ್ಲಿದ್ದ ರಾಜಕುಮಾರರನ್ನೆಲ್ಲ ನೋಡಿ ಕೊಂಡು ಧರ್ಮನಾಥನಲ್ಲಿಗೆ ಬಂದಾಗ ರಾಜಕುಮಾರಿಯ ನೋಟ ಅಲ್ಲೇ ಕೀಲಿಸಿತು. ಕಾಲುಗಳು ಮುಂದಕ್ಕೆ ಚಲಿಸದಂತಾದುವು. ಸ್ವಯಂವರಮಾಲೆಯನ್ನು ಧರ್ಮನಾಥನ ಕೊರಳಿಗೆ ಹಾಕಿದಳು. ಪ್ರತಾಪರಾಜ ಧಾರಾಪೂರ್ವಕವಾಗಿ ತನ್ನ ಮಗಳನ್ನು ಧರ್ಮನಾಥನಿಗೆ ಪಾಣಿಗ್ರಹಣ ಮಾಡಿಕೊಟ್ಟನು.

ವಿವಾಹಮಹೋತ್ಸವದನಂತರ ಧರ್ಮನಾಥನೂ ಶೃಂಗಾರವತಿಮಹಾದೇವಿಯೂ 'ನವಪ್ರಣಯಪ್ರಸ್ತುತ ವಿನೋದಕೇಳಿಗಳಿಂದ' ಕಾಲವನ್ನು ಕಳೆಯುತ್ತಿರಲು ಒಂದುದಿನ ಮಹಾಸೇನಮಹಾರಾಜನಿಂದ ಕರೆ ಬಂದಿತು. 'ಬರ್ಪುದು ತಡೆಯದೆ ಬೇಗಂ' ಎಂದು ಬರೆದಿದ್ದ ಪತ್ರದ ಒಕ್ಕಣೆಯನ್ನು ಓದಿಕೊಂಡು ಪ್ರಯಾಣಕ್ಕೆ ಸಿದ್ಧನಾದನು. ಪ್ರತಾಪ ಮಹಾರಾಜ ಮಗಳು ಅಳಿಯನಿಗೆ ಬೇಕಾದ ಉಡುಗೊರೆಗಳನ್ನು ಕೊಟ್ಟು ಮಗಳಿಗೆ ತಕ್ಕ ಬುದ್ಧಿವಾದವನ್ನು ಹೇಳಿ ಕಳಿಸಿಕೊಟ್ಟನು. ರಾಜಧಾನಿಯನ್ನು ತಲಪುತ್ತಲೇ ಧರ್ಮನಾಥನ ತಂದೆ ತಾಯಿಗಳೂ ಪುರಜನರೂ

ಅತ್ಯಂತಸಂಭ್ರಮದಿಂದ ನೂತನ ದಂಪತಿಗಳನ್ನು ಎದುರುಗೊಂಡರು. ಆ ದಂಪತಿಗಳು ಸಂತೋಷದಿಂದ ಕಾಲವನ್ನು ಕಳೆಯುತ್ತಿದ್ದರು.

ಹೀಗಿರಲು ಒಂದುದಿನ ಮಹಾಸೇನ ಮಹಾರಾಜನು ಸಭೆಯಲ್ಲಿದ್ದಾಗ ಕರಗುತ್ತಿದ್ದ ಕಾಮನಬಿಲ್ಲನ್ನು ಕಂಡನು. ಅದನ್ನು ನೋಡುತ್ತಿದ್ದಂತೆಯೇ ಆತನಿಗೆ ಸಂಸಾರದ ಅಸ್ಥಿರತೆ ಮನಸ್ಸಿನಲ್ಲಿ ಮೂಡಿತು. ವಿರಕ್ತಿಯನ್ನು ತಾಳಿದ ಆತನು ಧರ್ಮನಾಥನಿಗೆ ರಾಜ್ಯಪಟ್ಟವನ್ನು ಕಟ್ಟಿ 'ನಿನ್ನಯ ಸೊಸಲೊಳ್ ಸ್ಥಿರಮಕ್ಕೀ ಪಟ್ಟಂ' ಎಂದು ಆಶೀರ್ವದಿಸಿ ರಾಜನೀತಿಯನ್ನು ಬೋಧಿಸಿ ಬುದ್ಧಿವಾದವನ್ನು ಹೇಳಿದನು. ಆ ವೇಳೆಗೆ ಯಮಧರ ಭಟ್ಟಾರಕರು ಮುನಿಸಮುದಾಯವೆರಸಿ ಅಮಿತವನಕ್ಕೆ ಬಂದಿರುವ ಸಂಗತಿಯನ್ನು ಚರರಿಂದ ಕೇಳಿದ ಮಹಾರಾಜ ಅವರನ್ನು ಕಾಣಲು ಧಾವಿಸಿದನು. ಅವರನ್ನು ಕಂಡ ಕೂಡಲೇ ಪಾದಗಳ ಮೇಲೆ ಬಿದ್ದು :

ಕರುಣೆಗಳೆತ್ತುವರ್ ಕೆಳಗೆ ಬಿಳ್ದವರಂ ಮುನಿನಾಥ ನೀಂ ಕೃಪಾ
ಕರಸಿಧಿಚಂದ್ರನಾಂ ಭವಸಮುದ್ರದ ಮಧ್ಯದೊಳೆಯ್ದೆಬಿಳ್ದ ಪೀ
ವರತರದುಃಖದಿಂ ನಮೆವುತ್ತಿರ್ದೆನಗಿತ್ತುಜು' ಜೈನದೀಕ್ಷೆಯಂ
ಬುರು ಸುಚರಿತ್ರಮಂ ಕಡೆಗೆ ದಾಂಟಿಸಿ ಸತ್ಸುಖಿನೆನ್ನನಾಗಿಸಾ (೧೨-೧೫೯)

ಎಂದು ಪ್ರಾರ್ಥಿಸಿಕೊಂಡನು. ಈರಾರು ತಪ, ಷಡಾವಶ್ಯಕ, ದಶಧರ್ಮ, ಐದಾಚಾರ, ಮೂರರಗುಪ್ತಿ ಮತ್ತು ಮೂವತ್ತಾರು ಭಾಸ್ವದ್ಗುಣಗಳಿಗೂ ಒಡೆಯನಾಗಿ ಕರ್ಮಕ್ಷಯದ ಉಪಾಯವನ್ನು ನಿಮಿರ್ಚಿದನು. ಇತ್ತ ಧರ್ಮನಾಥನು ಪ್ರಾಜ್ಯಮಾದ ಸಕಳ ಸಾಮ್ರಾಜ್ಯವನ್ನು ನಿಷ್ಕಂಟಕವಾಗಿ ಆಳುತ್ತಿದ್ದನು.

ಸ್ವಯಂವರದಲ್ಲಿ ಸೋತು ಅವಮಾನಿತರಾಗಿದ್ದ ರಾಜಸಮೂಹವೆಲ್ಲ ಒಂದೆಡೆ ಸೇರಿ ಮಂತ್ರಾಲೋಚನೆಯನ್ನು ಮಾಡಿ ಸ್ವಯಂವರದಲ್ಲಿ ಮನಸ್ಸಿಗೆ ಬಂದವರಿಗೆ ಮಾಲೆಯಿಕ್ಕುವಂತೆ ಸಾರಿದ ಶೃಂಗಾರವತಿ ದೇವಿಯನ್ನು ಧರ್ಮನಾಥನು ವರಿಸಿದ್ದು ಅನ್ಯಾಯ. ಇದು ನಮ್ಮೆಲ್ಲರಿಗೂ ಅವಮಾನವಾದಂತೆ ಎಂದು ಭಾವಿಸಿ ದೂತನೊಬ್ಬನನ್ನು 'ಶೃಂಗಾರವತಿದೇವಿಯಂ ಬೇಡಿಯಟ್ಟಿದರ್' ಎಂದು ಹೇಳಿಕಳಿಸಿದರು. ಅದನ್ನು ಕೇಳಿ ಕೋಪಗೊಂಡ ಸುಷೇಣನೆಂಬ ಸೇನಾಪತಿ ದಂಡೆತ್ತಿ ಹೋಗಿ ಆ ರಾಜರನ್ನೆಲ್ಲ ಸದೆಬಡಿದು ಅವರಿಂದ ಕಪ್ಪಕಾಣಿಕೆಗಳನ್ನು ಪಡೆದು ಧರ್ಮನಾಥನಿಗೆ ಒಪ್ಪಿಸಿದನು. ಧರ್ಮನಾಥ ಸುಷೇಣನ ಸಾಮರ್ಥ್ಯವನ್ನು ಕೊಂಡಾಡಿ ಆತನಿಗೆ ಬೇಕಾದುದನ್ನು ಕೊಟ್ಟು ಸನ್ಮಾನಿಸಿದನು. ಹೀಗಿರುವಲ್ಲಿ ವಸಂತಕಾಲ ಬಂದಿತು. ಧರ್ಮನಾಥ ಶೃಂಗಾರವತಿದೇವಿಗೆ :

ನುಡಿಯಿಂ ಮುಡಿಯಿಂ ನಡೆಯಿಂ
ತಡೆಯದೆ ಕೋಗಿಲೆಗೆ ತುಂಬಿಗಂಚೆಗೆ ಮದಮಂ
ಕಿಡಿಸಿ ಸಡಗರಮನೆನಗೆ
ಯೊಡ್ಡರಿಸು ನಡೆ ನಂದನಕ್ಕೆ ಪಂಕಜವದನೇ (೧೪-೪೧)

ಎಂದು ಹೇಳಿದನು. ಅದಕ್ಕೆ ಆಕೆ ಒಡಂಬಡಲು 'ವನವಿಹರಣಕೇಳೀವಿನೋದ

ಯಾತ್ರಾನಿಮಿತ್ತ'ವಾಗಿ ಆನಂದಭೇರಿಯನ್ನು ಹೊಡೆಸಿ ದಂಪತಿಗಳು ಪಟ್ಟದಾನೆಯನ್ನು ಏರಿ ಸಪರಿವಾರ ಸಮೇತರಾಗಿ ಪ್ರಯಾಣವನ್ನು ಮಾಡಿದರು. ವನದಲ್ಲಿ ಅಸಂಖ್ಯಾತ ಸ್ತ್ರೀಯರು ಜಲಕೇಳಿಯನ್ನಾಡುತ್ತಿದ್ದುದನ್ನು ಕಂಡ ಧರ್ಮನಾಥ ಮತ್ತು ಶೃಂಗಾರವತಿ ದೇವಿಯರು ಈ ವನಜಲಕೇಳೀ ವಿನೋದಗಳನ್ನು ಮುಗಿಸಿ ರಾಜಧಾನಿಗೆ ಹಿಂತಿರುಗಿದರು.

ಧರ್ಮನಾಥನು ರಾತ್ರಿವಿಹಾರಕೇಳಿಗೆ ನಾಲ್ಕುಜನ ಮುಖ್ಯ ನಾಯಕರನ್ನು ಕೂಡಿಕೊಂಡು ಹೋಗಿ ಸೂಳೆಗೇರಿಯಲ್ಲೆಲ್ಲ ಸುತ್ತಾಡಿಕೊಂಡು ಅರಮನೆಗೆ ಹಿಂತಿರುಗುವನು. ಆಮೇಲೆ ಧರ್ಮನಾಥ ಶೃಂಗಾರವತಿದೇವಿಯರು ಇಷ್ಟವಿಷಯ ಭೋಗೋಪಭೋಗಗಳನ್ನು ಅನುಭವಿಸುತ್ತ ಅನ್ಯೋನ್ಯಾಸಕ್ತಚಿತ್ತರಾಗಿ ಅನೇಕ ದಿನಗಳನ್ನು ನಿಮಿಷಮಾತ್ರಗಳಾಗಿ ಕಳೆಯುತ್ತಿದ್ದರು.

ಧರ್ಮನಾಥ ಮಹಾರಾಜನು ನ್ಯಾಯದಿಂದಲೂ ಧರ್ಮದಿಂದಲೂ 'ಅರವಿಂದಂ ಜಲದಲ್ಲಿ ಪುಟ್ಟಿ ಜಲಮಂ ತಾಂ ಮುಟ್ಟದಿರ್ಪಂದದಿಂ ರಾಜ್ಯರಕ್ಷಣಂಗೆಯ್ಯುತ್ತುಂ' ಇದ್ದನು. ಹೀಗಿರುವಲ್ಲಿ ಒಮ್ಮೆ ಆತನು ಸಭೆಯಲ್ಲಿದ್ದಾಗ ಪ್ರಳಯಕಾಲದ ಮಹಾಗ್ನಿಯೋ ಎಂಬಂತೆ ಒಂದು ಉಲ್ಕಾಪಾತವಾಯಿತು. ಸಭಾಸದರು ಅದರ ಕಾರಣವನ್ನು ಕೇಳಿದರು. ಅದಕ್ಕೆ ಧರ್ಮನಾಥ:

ಒರ್ವಂ ಜ್ಯೋತಿಷ್ಕದೇವಂ ವಿಮಳಚರಿತನೆಂಬಂ ಸುರಾಧೀಶನಾಜ್ಞಾ
ಪೂರ್ವಂ ಬಂದಂಬರಸ್ಥಾನದೊಳಿರುತುಮದಂ ನೋಡಿ ಕಂಡಿಲ್ಲಿ ನಮ್ಮಂ
ಸರ್ವೇಶಂ ಬೇಸಱಿಂ ಸಂಸೃತಿ ವಿಷಯಸುಖಕ್ಕಿನ್ನುಮೆಂದೆಮ್ಮ ಚಿತ್ತ
ಕ್ಕುರ್ವೀವೈರಾಗ್ಯಮಂ ಪುಟ್ಟಿಸುವ ಬೆವಸೆಯಿಂದಿಂತುಟಂ ತೋಱಿಪೋದಂ

(೧೬-೩೨)

ಎಂದು ಹೇಳಿದನು. ಧರ್ಮನಾಥ ವೈರಾಗ್ಯಪರನಾದುದನ್ನು ಅರಿತ ಅಮರ್ತ್ಯ ಯೋಗಿಪತಿಗಳು ಬ್ರಹ್ಮಕಲ್ಪಾಗ್ರದಿಂದ ಬಂದು ನಾನಾರೀತಿಯಾಗಿ ಹೊಗಳಿದರು. ದೇವೇಂದ್ರನು ಚತುರ್ನಿಕಾಯ ದೇವರ್ಕಳೊಡನೆ ಬಂದು ಆ ಪರಮನನ್ನು ಪರಿನಿಷ್ಕ್ರಮಣಾಭಿಷೇಕ ಮಂಟಪಕ್ಕೆ ಕರೆತಂದು ಗಂಗಾಸಿಂಧುತೀರ್ಥಗಳಿಂದ ಅಭಿಷೇಕ ಮಾಡಿದನು. ಧರ್ಮನಾಥ ತನ್ನ ಮಗನಿಗೆ ಪಟ್ಟವನ್ನು ಕಟ್ಟಿ ಪುರಜನರನ್ನೂ ತಾಯಿಯನ್ನೂ ಸಂತೈಸಿ ಚಂದ್ರಪ್ರಭವೆಂಬ ಪಲ್ಲಕ್ಕಿಯನ್ನು ಏರಿ ದೀಕ್ಷಾಮಂಟಪಕ್ಕೆ ಬಂದನು. ಅಲ್ಲಿ ಇಂದುಕಾಂತ ಶಿಲಾಪಟ್ಟಕದ ಮೇಲೆ ಪೂರ್ವಾಭಿಮುಖನಾಗಿ ಕುಳಿತುಕೊಂಡನು. ತಾನು ಧರಿಸಿದ್ದ ಆಭರಣಗಳನ್ನೆಲ್ಲ ವಿಸರ್ಜಿಸಿ ಕುಂತಳವನ್ನು ಪರಿದು ಈಡಾಡಿದನು. ಹೀಗೆ ಬಾಹ್ಯಾಭ್ಯಂತರ ಪರಿಗ್ರಹಗಳನ್ನು ಕಳೆದು ಮೋಕ್ಷಗಾಮಿಯಾದ ಧರ್ಮನಾಥನನ್ನು ಸಕಲದಿವಿಜದನುಜ ಮನುಜರೆಲ್ಲ ಜಯಕಾರ ಮಾಡಿ ಸ್ತುತಿಸಿದರು. ಆಗ ಧರ್ಮನಾಥ :

ಶ್ರೀಯಂ ಪರಿಹರಿಸಿ ತಪಃ
ಶ್ರೀಯಂ ಮಾಘಾರ್ಜುನತ್ರಯೋದಶಿಯಪರಾ
ಹ್ಣಾಯತ್ತ ಪುಷ್ಯತಾರೆಯೊ
ಳೋಯರದಿಂ ತಾಳ್ದನಖಿಳಜನವಿನುತಪದಂ (೧೬-೭೦)

ಈ ರೀತಿ ಮೋಕ್ಷವನ್ನು ಪಡೆದನು. ಆಮೇಲೆ ಪಾರಣೆಯ ನಿಮಿತ್ತನಾಗಿ ಪಾಟಳೀಪುತ್ರಕ್ಕೆ ಬಂದನು. ಆ ಊರಿನ ರಾಜ ಆತನನ್ನು ನಾನಾ ರೀತಿ ಪೂಜಿಸಿ ಸತ್ಕರಿಸಿ ಬಗೆಬಗೆಯ ಭಕ್ಷ್ಯಭೋಜನ ಗಳಿಂದ ಪಾರಣೆಯನ್ನು ಮಾಡಿಸಿದನು. ಆಗ ಪಂಚಾಶ್ಚರ್ಯಗಳಾದುವು. ಅದಾದಮೇಲೆ ಧರ್ಮನಾಥ ಪುಣ್ಯಾರಣ್ಯವನ್ನು ಪೊಕ್ಕು 'ನಿರ್ಮಳ ಪ್ರಾಶುಕ ಪ್ರದೇಶ ಪ್ರಸಿದ್ಧಶುದ್ಧಸ್ಫಟಿಕ ಶಿಲಾತಳಾಗ್ರದೊಳ್ ಯೋಗನಿರೋಧಂಗೆಯ್ದು ಕಾಯೋತ್ಸರ್ಗ ಪ್ರತಿಮಾನುಯೋಗ ಯೋಗ ನಿಯೋಗದೊಳ್' ಇದ್ದನು. ಕ್ರಮೇಣ ತಪಸ್ಸಿನಿಂದ ದೇಹವನ್ನು ಕ್ಷೀಣಿಸಿದನು. ಬುದ್ಧಿರಿದ್ಧಿ ಕ್ರಿಯಾ ರಿದ್ಧಿ ವಿಕ್ರಿಯಾರ್ಧಿ ತಪೋರಿದ್ಧಿ ಬಲರಿದ್ಧಿ ರಸರಿದ್ಧಿ ಕ್ಷೀಣರಿದ್ಧಿಯನ್ನು ಅನುಭವಿಸಿದನು. ಚತುಃ ಕಷಾಯಗಳನ್ನು ದರ್ಶನಮೋಹನೀಯ ತ್ರಯಗಳನ್ನು ಹದಿನಾರು ಪ್ರಕೃತಿಗಳನ್ನು ಕಳೆದೊಡನೆಯೇ:

ಉದಯಿಸಿದುದು ಕೇವಳಬೋ
ಧದ ಪಿಧವಂ ಮಾಘಮಾಸ ಪೌರ್ಣಮಿಯಪರಾ
ಹ್ಣದೊಳದುವೆ ಪುಣ್ಯನಕ್ಷ
ತ್ರದ ಸಿರಿ ಶುಭಲಗ್ನದಲ್ಲಿ ಗುರುವಾರದೊಳಂ (೧೬-೧೩೮)

ಹೀಗೆ ಕೇವಳಜ್ಞಾನ ಉಂಟಾಯಿತು. ದೇವೇಂದ್ರನು ಕುಬೇರನನ್ನು ಕರೆಯಿಸಿ ಸಮವಸರಣ ಮಂಟಪವನ್ನು ವಿರಚಿಸಿದನು. ಧರ್ಮನಾಥನು ಸಮವಸರಣಮಂಟಪವನ್ನು ಅಲಂಕರಿಸಿ ದನು. ಆಗ ದೇವೇಂದ್ರನೇ ಮೊದಲಾದ ಅಸಂಖ್ಯಾತ ದೇವತೆಗಳು ಅಲ್ಲಿ ಸೇರಿ ಧರ್ಮನಾಥನನ್ನು ಪೂಜಿಸಿ ಸ್ತುತಿಸಿದರು. ಧರ್ಮನಾಥ ಅಲ್ಲಿ ನೆರೆದಿದ್ದವರಿಗೆಲ್ಲ ಆಸ್ರವತತ್ತ್ವದ ರೀತಿಯನ್ನು ಬೋಧಿಸಿದರು. ಆಮೇಲೆ ಸಮವಸರಣ ಮಂಟಪದಲ್ಲಿ ವಿಹರಿಸುತ್ತ ಆರ್ಯಾಖಂಡವನ್ನೆಲ್ಲ ಸಂಚರಿಸಿ ತನ್ನ ನಿರ್ವಾಣಸ್ಥಾನಕ್ಕೆ ಆಗಮಿಸಿದನು. ಅಲ್ಲಿ ಒಂದು ಶಿಲಾಪಟ್ಟಕದ ಮೇಲೆ ಮೂರ್ತಿಗೊಂಡನು. ದೇವಾದಿದೇವತೆಗಳೆಲ್ಲ ಆತನನ್ನು ಪೂಜಿಸಿ ಸ್ವಸ್ಥಾನಗಳಿಗೆ ಹಿಂದಿರುಗಿದರು. ಧರ್ಮನಾಥನ ಪುತ್ರ ಪರಿಜನ ಪುರಜನ ಸಹಿತನಾಗಿ ಅಲ್ಲಿಗೆ ಬಂದು ನಾನಾಧರ್ಮಗಳನ್ನು ಮಾಡಿ, ಚೈತ್ಯಾಲಯದಲ್ಲಿದ್ದ ಚತುರ್ವಿಂಶತಿ ತೀರ್ಥಂಕರರ ಪ್ರತಿಮೆಗಳನ್ನು ಕಂಡು ಅತ್ಯಂತಭಕ್ತಿಯಿಂದ ಪೂಜಿಸಿ ನಿಜರಾಜಧಾನಿಗೆ ಹಿಂತಿರುಗಿದನು. ಆತನು ನಲವತ್ತೈದು ಬಿಲ್ಲುದ್ದದ ಧರ್ಮನಾಥನ ಪ್ರತಿಮೆಯನ್ನು ಚಿನ್ನದಲ್ಲಿ ಮಾಡಿಸಿ ಪ್ರತಿಷ್ಠಾಪಿಸಿದನು. ಬೇಡಿದವರಿಗೆ ಬೇಡಿದುದನ್ನೆಲ್ಲ ದಾನವಾಗಿ ಕೊಟ್ಟು ರಾಜ್ಯದಲ್ಲೆಲ್ಲ ಧರ್ಮಪ್ರಸಾರವನ್ನು ಮಾಡಿದನು. ಈ ವರಧರ್ಮಮಹಾರಾಜನು ದುಷ್ಟನಿಗ್ರಹ ಶಿಷ್ಟಪರಿಪಾಲನಾಪೂರ್ವಕವಾಗಿ ಸುಖಸಂಕಥಾ ವಿನೋದದಿಂದ ರಾಜ್ಯ ಭಾರವನ್ನು ಮಾಡುತ್ತಿದ್ದನು.

ಕೃತಿ ವಿಮರ್ಶೆ

ಹದಿನೈದನೆಯ ತೀರ್ಥಂಕರನಾದ ಧರ್ಮನಾಥನ ಕಥೆ ಗುಣಭದ್ರಾಚಾರ್ಯರ ಉತ್ತರಪುರಾಣದಲ್ಲಿ ಕೇವಲ ೧೩೦ ಶ್ಲೋಕಗಳಲ್ಲಿ ಮುಕ್ತಾಯವಾಗಿದೆ. ಚಾವುಂಡರಾಯನ ಚಾವುಂಡರಾಯಪುರಾಣದಲ್ಲಿ ಎರಡು ಮೂರು ಪುಟಗಳಲ್ಲಿ ಈತನ ಕಥೆ ಪರ್ಯವಸಾನ ವಾಗುತ್ತದೆ. ಈ ಪುಟ್ಟ ಕಥಾವಸ್ತುವನ್ನು ಆಧರಿಸಿ ಬಾಹುಬಲಿಪಂಡಿತ ಹದಿನಾರು ಆಶ್ವಾಸಗಳ

ಚಂಪೂಕಾವ್ಯವನ್ನು ರಚಿಸಿದ್ದಾನೆ; ಪ್ರಾಚೀನ ಕವಿಗಳ ಸಂಪ್ರದಾಯವನ್ನು ಚಾಚೂತಪ್ಪದೆ ಅನುಸರಿಸಿದ್ದಾನೆ; ಭವಾಂತರಗಳ ವಿಶೇಷ ಗೋಜಿಲ್ಲದ ಈ ಕಥೆಯನ್ನು ವರ್ಣನೆಗಳ ಮೂಲಕ ಹಿಗ್ಗಿಸಿ ಬೃಹದಾಕಾರವಾಗಿ ಮಾಡಿದ್ದಾನೆ. ತನ್ನ ಕಾವ್ಯ ಮಹಾಕಾವ್ಯವಾಗಬೇಕೆಂಬ ಹೆಬ್ಬಯಕೆ ಯಿಂದ ಅಷ್ಟಾದಶವರ್ಣನೆಗಳನ್ನು ವಿಶೇಷವಾಗಿ ಮಾಡಿದ್ದಾನೆ. ಬಾಹುಬಲಿಪಂಡಿತ ಸಮರ್ಥ ನಾದ ಕವಿ.ಯಾವ ಸನ್ನಿವೇಶವನ್ನಾಗಲಿ ಅದನ್ನು ಅದ್ಭುತ ರಮ್ಯವನ್ನಾಗಿ ಮಾಡಬಲ್ಲ ಪ್ರತಿಭಾವಂತ. ಯುದ್ಧದ ವರ್ಣನೆಯನ್ನಾಗಲಿ, ಶರತ್ಕಾಲ ಗ್ರೀಷ್ಮಕಾಲ ನಿದಾಘಕಾಲಗಳ ವರ್ಣನೆಯನ್ನಾಗಲಿ, ಸ್ತ್ರೀಯರ ವರ್ಣನೆಯನ್ನಾಗಲಿ ಆಸ್ಥಾನದ ವರ್ಣನೆಯನ್ನಾಗಲಿ, ಕೊನೆಗೆ ವೈರಾಗ್ಯಪ್ರಕರಣದ ವರ್ಣನೆಯನ್ನಾಗಲಿ ಕವಿ ಲೀಲಾಜಾಲವಾಗಿ ಮಾಡಬಲ್ಲ ಸಾಮರ್ಥ್ಯವನ್ನು ಪಡೆದಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ಧರ್ಮತೀರ್ಥಂಕರರನ್ನು ಕುರಿತು ಸ್ವತಂತ್ರ ಕೃತಿರಚನೆ ಮಾಡಿದವರಲ್ಲಿ ಬಾಹುಬಲಿಪಂಡಿತನೇ ಮೊದಲಿಗನೆಂದು ಈ ಹಿಂದೆಯೇ ತಿಳಿಸಿದೆ. ಈತನ ತರುವಾಯ ಬಂದ ಕ್ರಿ.ಶ. ೧೩೮೫ರಲ್ಲಿ ಇದ್ದಿರಬಹುದಾದ ಮಧುರಕವಿ ಧರ್ಮನಾಥ ಪುರಾಣವನ್ನು ಬರೆದಿದ್ದಾನೆ. ಈತನೂ ತನ್ನ ಕಾವ್ಯಕ್ಕೆ ಮೂಲ ಯಾವುದೆಂಬುದನ್ನು ಹೇಳಿಕೊಂಡಿಲ್ಲ. ಆದರೆ ಮಧುರಕವಿಯ ಕಾವ್ಯವನ್ನು ಪರಿಶೀಲಿಸಿದವರಿಗೆ ಕಥಾಸರಣಿಯಲ್ಲಿ ವರ್ಣನಾಭಾಗಗಳಲ್ಲಿ ಬಾಹುಬಲಿಪಂಡಿತನಿಂದ ಪ್ರಭಾವಿತನಾಗಿರುವುದು ವ್ಯಕ್ತವಾಗುತ್ತದೆ.

ಇದೇ ರೀತಿ ಹಲವಾರು ವರ್ಣನಾಭಾಗಗಳಲ್ಲಿ ಈ ಇಬ್ಬರು ಕವಿಗಳಿಗಿರುವ ಸಾಮ್ಯವನ್ನು ಗುರುತಿಸಬಹುದಾಗಿದೆ. ದಶರಥಮಹಾರಾಜ ಜಿನದೀಕ್ಷೆಕೈಗೊಳ್ಳುವಾಗ ಮಾಡುವ ಜಿನಸ್ತುತಿ ಬಾಹುಬಲಿಪಂಡಿತನಲ್ಲಿ ಕೃತಿಯ ಕೊನೆಯ ಭಾಗದಲ್ಲಿ ವೃತ್ತಗಳಲ್ಲಿ ಬಂದಿದ್ದರೆ ಮಧುರನಲ್ಲಿ ಕಾವ್ಯದ ಮೊದಲಿಗೇ ಕಂದಪದ್ಯಗಳಲ್ಲಿ ಬಂದಿವೆ. ಬಾಹುಬಲಿ ಪಂಡಿತನಲ್ಲಿ ಬರುವ ಮೇರುಗಿರಿ ಭರತಕ್ಷೇತ್ರಗಳ ವರ್ಣನೆ ಮಧುರನಲ್ಲಿ ಕಂಡು ಬರುವುದಿಲ್ಲ. ಈ ಕೆಲವು ಸೂಕ್ಷ್ಮ ವ್ಯತ್ಯಾಸಗಳನ್ನು ಬಿಟ್ಟರೆ ವಿಷಯಾನುಕ್ರಮಣಿಕೆಯಲ್ಲಿ ವರ್ಣನಾಪ್ರಸಂಗಗಳಲ್ಲಿ ಇವರಿಬ್ಬರಲ್ಲಿಯೂ ಸಂಪೂರ್ಣ ಸಾಮ್ಯ ಕಂಡುಬರುತ್ತದೆ. ಒಟ್ಟಿನಲ್ಲಿ ಮಧುರ ಬಾಹುಬಲಿಪಂಡಿತನಿಂದ ಪ್ರಭಾವಿತ ನಾಗಿದ್ದಾನೆಂಬುದು ನಿರ್ವಿವಾದ.

ಧರ್ಮನಾಥಪುರಾಣ ಒಂದು ಧಾರ್ಮಿಕ ಗ್ರಂಥ. ಇದರಲ್ಲಿ ಜೈನಧರ್ಮದ ಪ್ರಕ್ರಿಯೆಗಳು ಸಾಕಷ್ಟು ಬಂದಿದ್ದರೂ ಕವಿ ತನ್ನ ಸಮಯೋಚಿತ ಪ್ರಜ್ಞೆಯಿಂದ ಅನುಪಮ ವರ್ಣನೆಗಳಿಂದ ಈ ಕಾವ್ಯವನ್ನು ಅತ್ಯಂತ ಸ್ವಾರಸ್ಯಕರವಾದುದನ್ನಾಗಿ ಮಾಡಿದ್ದಾನೆ. ಈತನು ಪ್ರಾಚೀನ ಸಂಪ್ರದಾಯದಲ್ಲೇ ಮುಂದುವರಿದಿದ್ದರೂ ಅಲ್ಲಲ್ಲಿ ಈ ಸಂಪ್ರದಾಯದ ಕಟ್ಟುಗಳನ್ನು ಕತ್ತರಿಸಿಕೊಂಡು ಸ್ವತಂತ್ರವಾಗಿ ವರ್ತಿಸಿದ್ದಾನೆ. ಗಣಪ್ರಾಸ ನಿಯಮಗಳನ್ನು ದಿಟ್ಟತನದಿಂದ ಉಲ್ಲಂಘಿಸಿ ತನ್ನ ಕ್ರಾಂತಿಕಾರಕ ಪ್ರವೃತ್ತಿಯನ್ನು ಮೆರೆದಿದ್ದಾನೆ.

ಮಧುರ ಕವಿ-ಕಾಲ-ಕಾವ್ಯ

ಕನ್ನಡ ಸಾಹಿತ್ಯದ ಚಂಪೂ ಕವಿಗಳ ಶ್ರೇಣಿಯಲ್ಲಿ ಕೊನೆಯವನೆಂದು ಪರಿಗಣಿಸಲಾದ ಮಧುರಕವಿ "ಧರ್ಮನಾಥ ಪುರಾಣ"ವೆಂಬ ಚಂಪೂ ಕಾವ್ಯವನ್ನೂ "ಗುಮ್ಮಟ ಸ್ತುತಿ" ಎಂಬ ಅಷ್ಟಕವನ್ನೂ ಹಂಪೆಯ ಕೃಷ್ಣದೇವಸ್ಥಾನದ ಬಳಿ ಲಭ್ಯವಾಗಿರುವ ಒಂದು ಶಾಸನವನ್ನೂ

ಬರೆದಿದ್ದಾನೆ. ಮೈಸೂರು ಪ್ರಾಚ್ಯ ವಿದ್ಯಾಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ; ದ್ವಿತೀಯ ಸಂಪುಟ; ಪುಟ ೨೦೦ರಲ್ಲಿ "೭೦೩ : ಧರ್ಮನಾಥ ಪುರಾಣ, ಮಧುರ; ಕ. ೧೭ : "ಅ.೭×೨"; ೧-೭೬ ಪತ್ರ ೧೧ ಪಂಕ್ತಿ ೩೭ ಅಕ್ಷರ : ಆದಿ : ಶ್ರೀಭಾಸ್ವ....ಯಿಸಿದಳ ಧರ್ಮಕ್ಕಡರ್ಪ್ಪಾದತೇಜೋ ||೧|| ಅಂತ್ಯ : ವ|| ಅಂತು ಸಕಲ ಪರಿಗ್ರಹ ನಿವೃತ್ತನಾಗಿ ರಾಜತ್ವಮಂಬಿಟ್ಟು ಸನ್ಮಾರ್ಗವಲಂಬಮಂ ಬಿಡದೆ ಸರ್ವಜ್ಞ ಚೂಡಾಮಣಿಯೆನಿಸಿ ನೂರ್ವರುಯಿಶ್ವರರ್ವೆರಸು ವನಮಂ ಪೊಕ್ಕು ಅಚಲಿರ ದೀಕ್ಷಾ ಪ್ರದಾನವಿದಾನಂ ಉತ್ತರಾಭಿಮುಖನಾಗಿ ಪಂಚಪದಂಗಳಂ ಸ್ಮರಿಯಿಸಿ ಜಾತರೂಪಮನಂಗೀಕರಿಸಿದಾಗಳ್

ಕಂ|| ಮುಂ ಪಂಚಗುರು ಪದಾಕ್ಷರ
ಚಂಪಕವಾಸನೆ ನಿಜಾಸ್ಯ.....

ವಿಷಯ : ಹದಿನೈದನೆಯ ತೀರ್ಥಂಕರನಾದ ಧರ್ಮನಾಥನ ಕಥೆ

ವಿಶೇಷ : ಪ್ರತಿಯು ಅಸಮಗ್ರವಾಗಿದೆ ೧ನೆಯ ಪತ್ರ ಮುರಿದಿದೆ. ಶಕಟರೇಫ ಪ್ರಯೋಗ ಇದೆ." ೧೯೬೨ರಲ್ಲಿ ಪ್ರಕಟವಾದ ವರ್ಣನಾತ್ಮಕ ಸೂಚಿಯಲ್ಲಿ ಈ ವಿವರಗಳಿವೆ.

"ಮಧುರ ಕವಿ ವಿರಚಿತ ಧರ್ಮನಾಥ ಪುರಾಣಂ :

ಸಂಪಾಕದರು : ವೇ|| ಬ್ರ|| ಶ್ರೀ|| ಯಂ.ಸಿ ಪದ್ಮನಾಭಶರ್ಮ, ನ್ಯಾಯತೀರ್ಥ ಮತ್ತು ಶ್ರೀಮಾನ್ ಜಿ. ಬ್ರಹ್ಮಪ್ಪ, ಬಿ.ಎ. ಆನರ್ಸ್ : ಪ್ರಕಾಶಕರು ಶ್ರೀ|| ಕೆ.ಸಿ. ಜಿನಚಂದ್ರಯ್ಯ, ಕಳತಂಗರೆ, ಅಂಜಗುನ್ನಂ, ವೈನಾಡ ೧೯೫೫." ಇವರು ಪ್ರಕಟಿಸಿರುವ ಪ್ರಚಲಿತ ಧರ್ಮನಾಥ ಪುರಾಣದಲ್ಲಿ ನಾಲ್ಕು ಆಶ್ವಾಸಗಳೂ ಐದನೆಯ ಆಶ್ವಾಸದಲ್ಲಿ ೧೩೮ ಪದ್ಯಗಳೂ ಇವೆ. ಮೈಸೂರಿನ ಹಸ್ತಪ್ರತಿಯಲ್ಲಿ ಇರುವುದಕ್ಕಿಂತ ಇದರಲ್ಲಿ ಏಳು ಪದ್ಯಗಳು ಹೆಚ್ಚಾಗಿವೆ. ಈ ಸಂಬಂಧವಾಗಿ ಈ ಕೃತಿಯ ಸಂಪಾದಕರು "ಈ ಗ್ರಂಥವನ್ನು ಸಂಶೋಧಿಸಲು ಮದರಾಸಿನ ಶ್ರೀಮಾನ್ ಹೆಚ್. ಶೇಷ ಅಯ್ಯಂಗಾರ್‌ರವರ ಪ್ರತಿಯೊಂದು ಸಂಶೋಧನೆಗೆ ಸಹಾಯಕವಾಗಿ ದೊರೆತು ಆ ಪ್ರತಿಯನ್ನು ಶ್ರೀ ವಿದ್ಯಾಭೂಷಣ ಕೆ. ಭುಜಬಲಿಶಾಸ್ತ್ರಿಯವರು ದಯಪಾಲಿಸಿದ್ದರು. ಇದಕ್ಕಾಗಿ ಉಭಯ ವಿದ್ವಾಂಸರುಗಳನ್ನು ಅಭಿನಂದಿಸುತ್ತೇವೆ" ಎಂದಿದ್ದಾರೆ. ಈ ಹಸ್ತಪ್ರತಿಯ ವಿವರಗಳನ್ನು ಪರಿಶೀಲಿಸುವುದು ಅಗತ್ಯವಾಗಿದೆ.

ಮಧುರ ಜೈನಕವಿ. ವಾಜಿವಂಶಕ್ಕೆ ಸೇರಿದವನು. ಭಾರದ್ವಾಜ ಗೋತ್ರದವನು. ಈತನ ತಂದೆ ವಿಷ್ಣು ತಾಯಿ ನಾಗಲಾಂಬಿಕೆ. ಬುಕ್ಕರಾಜಸುತ ಹರಿಹರರಾಯನ ಪ್ರಧಾನನಾದ ಮುದ್ದುದಂಡೇಶ ಈತನ ಪೋಷಕನಾಗಿದ್ದನು. ಗುಮ್ಮಟಸ್ತುತಿಯಲ್ಲಿ "ಭೂನಾಥನಾಸ್ಥಾನದ ಚೂಡಾಮಣಿ" ಎಂದು ಹೇಳಿರುವುದರಿಂದ ಮಧುರ ಹರಿಹರನ ಆಸ್ಥಾನ ಕವಿಯಾಗಿದ್ದಿರಬೇಕು ಎಂದು ಕವಿಚರಿತಕಾರರು ಅಭಿಪ್ರಾಯಪಟ್ಟಿದ್ದಾರೆ. ಈತನಿಗೆ ಕಳಾವಿಳಾಸ, ಕವಿರಾಜ ವಿಳಾಸ, ಕವಿಮಾಧವ, ಕರ್ಣಾಟ ಕವಿತಾ ಕಲಾವಿಲಾಸವಿಧು, ಸರಸಕವಿ ರಸಾಲವಸಂತ, ಭಾರತೀ ಮಾನಸಕೇಳೀರಾಜಹಂಸ, ನಿರ್ಣೀತ ಕರ್ಣಾಟ ಲಕ್ಷಣ ಭಾಷಾಕವಿರಾಜ, ವಿಶ್ವವಿದ್ಯಾಸಮುದಯ ಸುಮನಸ್ಸಂಚರಚ್ಚಂಚರೀಕ ಮುಂತಾದ ಬಿರುದುಗಳಿದ್ದಂತೆ ತಿಳಿದುಬರುತ್ತದೆ.

ಧರ್ಮನಾಥ ಪುರಾಣದಲ್ಲಿ ಪೂರ್ವಕವಿಗಳಾದ ಪಂಪ, ಪೊನ್ನ, ರನ್ನ, ನಾಗಚಂದ್ರ, ನೇಮಿಚಂದ್ರ, ಜನ್ನ - ಇವರೇ ಮೊದಲಾದವರನ್ನು ಸ್ತುತಿಸಿದ್ದಾನೆ. ತನ್ನ ಕವಿತಾ ಚಾತುರ್ಯವನ್ನು ಹೇಳುವ ಪದ್ಯದಲ್ಲಿ ಶ್ಲೇಷೆಯಿಂದ ಜನ್ನ, ರನ್ನ, ಪುಷ್ಪದಂತ, ಗಜಾಂಕುಶ, ಮನಸಿಜ, ಶ್ರೀವಿಜಯ, ಸುಜನೋತ್ತಂಸ, ಯಶಶ್ಚಂದ್ರ, ನೇಮಿಚಂದ್ರ ಇವರ ಹೆಸರುಗಳನ್ನು ಹೇಳಿದ್ದಾನೆ (೧-೬೮) ಅಲ್ಲದೆ : ಸರ್ವಸಮ್ಮತಮೆನಗಿದು । ಗರ್ವದ ಮಾತಲ್ಲ ಶಾಸ್ತ್ರಲೌಕಿಕ ಕಳೆಯೊಳ್ ಬೇರ್ವರಿದ ನೇಮಿ ಜನ್ನಿಗ । ರಿರ್ವರೆ ಕರ್ಣಾಟ ಕೃತಿಗೆ ಸೀಮಾಪುರುಷರ್ (೧-೪೧) ಎಂದು ನೇಮಿ ಜನ್ನಿಗರನ್ನು ಕೊಂಡುಕೊನೆದಿದ್ದಾನೆ. ಮಧುರನನ್ನು ತರಯವಾಯದ ಕವಿಗಳಲ್ಲಿ ಮೂರನೆಯ ಮಂಗರಸ ಮೊದಲಾದ ಕವಿಗಳು ಸ್ತುತಿಸಿದ್ದಾರೆ.

ಕಾಲ ವಿಚಾರ :

ಮಧುರನ ಧರ್ಮನಾಥಪುರಾಣ ಸಮಗ್ರವಾಗಿ ಲಭ್ಯವಾಗಿಲ್ಲ. ಲಭ್ಯವಾಗಿರುವ ಭಾಗದಲ್ಲಿ ಆತನ ಕಾಲಕ್ಕೆ ಸಂಬಂಧಿಸಿದ ಮಾಹಿತಿಗಳಿಲ್ಲ. ಅನುಪಲಬ್ಧವಾದ ಭಾಗದಲ್ಲಿ ಈ ಸಂಬಂಧವಾದ ಮಾಹಿತಿಗಳಿವೆಯೋ ಇಲ್ಲವೋ ಎಂಬುದು ತಿಳಿದುಬರುವಂತಿಲ್ಲ. ಆದರೆ ಮಧುರನೇ ಬರೆದಿರುವ ಹಂಪೆಯ ಶಾಸನದಲ್ಲಿ ಕಾಲವನ್ನು ದಾಖಲಿಸಲಾಗಿದೆ. ಈ ಶಾಸನ ೧೩೩೨ನೆಯ ಶಕ ಸಂವತ್ಸರದಲ್ಲಿ ರಚಿತವಾಗಿರುವುದರಿಂದ ಅದು ಕ್ರಿ.ಶ. ೧೪೧೦ ಎಂದಾಗುತ್ತದೆ. ಶಾಸನದ ಕಾಲಸೂಚೀ ಪದ್ಯದಂತೆ ಈ ಶಾಸನ ಕ್ರಿ.ಶ. ೨೦-೨-೧೪೧೦ ಗುರುವಿಂದ ರಚಿತವಾದುದು ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ.[೧]

ಕರ್ಣಾಟಕ ಕವಿಚರಿತೆಕಾರರು "ಬುಕ್ಕರಾಜನ ಮಗನಾದ ಹರಿಹರರಾಯನು ೧೩೭೭ರಿಂದ ೧೪೦೪ರ ವರೆಗೆ ಆಳಿದುದಾಗಿ ತಿಳಿವುದರಿಂದ ಆ ರಾಜನ ದಂಡಾಧಿಪನಲ್ಲಿ ಆಶ್ರಿತನಾಗಿದ್ದ ಈ ಕವಿ ಸುಮಾರು ೧೩೮೫ರಲ್ಲಿ ಇದ್ದಿರಬಹುದು" ಎಂದು ಹೇಳಿದ್ದಾರೆ.[೨] ಧರ್ಮನಾಥಪುರಾಣದ:

ವಸುಧಾಚಕ್ರಪ್ರಸಿದ್ಧಂ ವಿಜಯನಗರಿಯೊಳ್ ಯಾದವೋರ್ವೀಶಭಾಗ್ಯಾ
ವಸಥ ಶ್ರೀ ಬುಕ್ಕಭೂಪಾತ್ಮಜ ಹರಿಹರ ರಾಜಪ್ರಧಾನೋತ್ತಮಂ ನೀ
ತಿಸಮುದ್ರಂ ಮುದ್ದದಂಡೇಶ್ವರನೆ ಪೊರೆದ ಸೌಭಾಗ್ಯದಿಂ ಭಾರತೀ ಮಾ
ನಸ ಕೇಳೀರಾಜಹಂಸಂ ನೆಗಳ್ದನವನಿಯೊಳ್ ವಾಜಿವಂಶಾವತಂಸಂ (೧-೨೯)

ಈ ಪದ್ಯ ಕವಿಚರಿತಕಾರರ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಈ ಎಲ್ಲ ಆಧಾರಗಳಿಂದ ಮಧುರ ಕವಿಯ ಕಾಲ ಕ್ರಿ.ಶ. ೧೩೮೫ ಎಂಬುದು ಸಮಂಜಸವಾದುದು ಎಂದು ಭಾವಿಸಬಹುದಾಗಿದೆ.

ಕೃತಿ ವಿಚಾರ :

ಮಧುರ ಧರ್ಮನಾಥಪುರಾಣ, ಗುಮ್ಮಟ ಸ್ತುತಿ, ಹಂಪೆಯ ಶಾಸನ ಇವುಗಳನ್ನು ರಚಿಸಿರುವುದು ಸರ್ವವಿದಿತವಾಗಿದೆ. ಪ್ರಸ್ತುತ ಧರ್ಮನಾಥ ಪುರಾಣದ ಬಗೆಗೆ ಮಾತ್ರ ವಿವೇಚನೆ

೧. ಕನ್ನಡ ಸಾಹಿತ್ಯ ಚರಿತ್ರೆ, ಐದನೆಯ ಸಂಪುಟ, ಭಾಗ ೧, ಪುಟ ೭೨೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ : ೧೯೮೧. ೨. ಕರ್ಣಾಟಕ ಕವಿಚರಿತೆ; ಪ್ರಥಮ ಸಂಪುಟ, ಪುಟ ೪೮೬.

ಮಾಡಲಾಗಿದೆ. ಈ ಧರ್ಮನಾಥ ಪುರಾಣದ ರಚನೆಯ ಹಿನ್ನೆಲೆಯನ್ನು ಮಧುರನೇ ಸ್ಪಷ್ಟಪಡಿಸಿದ್ದಾನೆ :

ಕೊಟ್ಟುಬಾಗೆ ನಗರದ ವಿಭು ಬೊಮ್ಮಿಸೆಟ್ಟಿ ಅತ್ಯಂತ ಉದಾರಿ; ಭವ್ಯೋತ್ತಮ. ಆತನ ಪತ್ನಿ ಚೆನ್ನಾಂಬಿಕೆ. ಈ ದಂಪತಿಗಳಿಗೆ ರತ್ನತ್ರಯರೋ ಎಂಬಂತೆ ಬ್ರಹ್ಮ, ನಾಗ ಮತ್ತು ಮಲ್ಲಿಕಾರ್ಜುನ ಎಂಬ ಮೂವರು ಮಕ್ಕಳಿದ್ದರು. ಇವರಲ್ಲಿ ಮಲ್ಲಿಕಾರ್ಜುನ ಮಹಾಉದಾರಿ, ಕೀರ್ತಿಶಾಲಿ. ಈತ ಕೊಂಡಕುಂದಾನ್ವಯ ಮೂಲಸಂಘ ದೇಶೀಯಗಣದ ಚಾರುಕೀರ್ತಿ ಪಂಡಿತದೇವರ ಪಟ್ಟದ ಪರಂಪರೆಯಲ್ಲಿ ಬಂದ ಅಭಿನವ ಚಾರುಕೀರ್ತಿ ದೇವರ ಶಿಷ್ಯ. ಈತ ಮಧುರನ ಬಳಿಗೆ ಬಂದು ಪ್ರೀತಿಯಿಂದ ನಾನಾ ವಸ್ತು ಪ್ರತಿಪತ್ತಿಯಂ ಸಲಿಸಿ ಭಟ್ಟಾರಕರಾಜರಾಯ ಗುರುವೆನಿಸಿದ ವರ್ಧಮಾನ ಮುನಿಯ ಸನ್ನಿಧಿಗೆ ಕರೆದೊಯ್ದು ಅವರಿಂದ ಹೇಳಿಸಲು ಮಧುರ ಧರ್ಮನಾಥ ಪುರಾಣವನ್ನು ರಚಿಸಿದನು.

ಧರ್ಮನಾಥ ಪುರಾಣದಲ್ಲಿ ಹದಿನೈದನೆಯ ತೀರ್ಥಕರನಾದ ಧರ್ಮನಾಥನ ಕಥೆಯನ್ನು ನಿರೂಪಿಸಲಾಗಿದೆ. ಪ್ರಸ್ತುತ ಈ ಕಾವ್ಯದ ನಾಲ್ಕು ಆಶ್ವಾಸಗಳೂ ಐದನೆಯ ಆಶ್ವಾಸದಲ್ಲಿ ೧೩೮ ಪದ್ಯಗಳೂ ಲಭ್ಯವಾಗಿವೆ. ಹೀಗಾಗಿ ಸಮಗ್ರವಾದ ಈ ಕಾವ್ಯದಲ್ಲಿ ಎಷ್ಟು ಆಶ್ವಾಸಗಳೂ ಪದ್ಯಗಳೂ ಇದ್ದಿರಬೇಕು ಎಂಬ ಮಾಹಿತಿ ತಿಳಿದುಬರುವುದಿಲ್ಲ. ಅಥವಾ ಈ ಕಾವ್ಯ ಅಸಮಗ್ರವಾಗಿಯೇ ರಚಿತವಾಗಿರಬಹುದೆ ಎಂಬ ಅಂಶವೂ ಸ್ಪಷ್ಟವಾಗುವುದಿಲ್ಲ.

ಮಧುರ ತನ್ನ ಕಾವ್ಯಕ್ಕೆ ಮೂಲ ಯಾವ ಕೃತಿ ಎಂಬುದನ್ನು ತಿಳಿಸಿಲ್ಲ. ಧರ್ಮನಾಥ ಪುರಾಣವನ್ನು ಬರೆದವರಲ್ಲಿ ಈತನು ಮೊದಲಿಗನೂ ಅಲ್ಲ. ಈತನಿಗಿಂತ ಹಿಂದೆ ಇದ್ದ ಗುಣಭದ್ರಾಚಾರ್ಯರ ಉತ್ತರಪುರಾಣ, ಹರಿಚಂದ್ರನ ಧರ್ಮಶರ್ಮಾಭ್ಯುದಯ, ಚಾವುಂಡರಾಯನ ಚಾವುಂಡರಾಯ ಪುರಾಣಗಳಲ್ಲಿ ಧರ್ಮನಾಥನ ಕಥೆ ನಿರೂಪಿತವಾಗಿದೆ. ಇವನ್ನು ಆಧರಿಸಿ ಕ್ರಿ.ಶ. ೧೩೫೨ರಲ್ಲಿದ್ದ ಬಾಹುಬಲಿ ಪಂಡಿತನೂ ಕ್ರಿ.ಶ. ೧೩೮೫ರಲ್ಲಿದ್ದ ಮಧುರನೂ ಧರ್ಮನಾಥ ಪುರಾಣಗಳನ್ನು ಬರೆದಿದ್ದಾರೆ. ಮಧುರ ತನಗಿಂತ ಕೆಲವು ವರ್ಷಗಳ ಹಿಂದೆ ಇದ್ದ ಬಾಹುಬಲಿ ಪಂಡಿತನ ಬಗೆಗಾಗಲಿ ಆತನ ಧರ್ಮನಾಥ ಪುರಾಣದ ಬಗೆಗಾಗಲಿ ಯಾವ ಉಲ್ಲೇಖವನ್ನೂ ಮಾಡಿಲ್ಲ. ಬಹುಶಃ ಹಿರಿಯ ಕಿರಿಯ ಸಮಕಾಲೀನರಾಗಿದ್ದ ಈ ಇಬ್ಬರು ಕವಿಗಳು ಪರಸ್ಪರ ಉಲ್ಲೇಖ ಮಾಡದಿರುವುದು ಅತ್ಯಂತ ಸೋಜಿಗದ ಸಂಗತಿಯಾಗಿದೆ.

ಕಥಾಸಾರ :

ಜಂಬೂದ್ವೀಪದ ಭರತ ಕ್ಷೇತ್ರದ ಆರ್ಯಾವರ್ತ ಖಂಡಕ್ಕೆ ಸೇರಿದ ನಾಡು ಕೋಸಲ ದೇಶ. ರತ್ನಪುರ ಅದರ ರಾಜಧಾನಿ. ಆ ನಗರದ ರಾಜ ಮಹಾಸೇನ. ರೂಪವತಿಯೂ ಶೌರ್ಯಶಾಲಿಯೂ ಆದ ಸುವ್ರತೆ ಆತನ ಹೆಂಡತಿ. ಈ ದಂಪತಿಗಳು ಸುಖದಿಂದಿದ್ದರು. ಒಂದುದಿನ ಸುವ್ರತೆ ಸಖಿಯರೊಂದಿಗೂ ಸಹಚರಿಯರೊಂದಿಗೂ ರಾಣಿವಾಸದ ರತ್ನಮಂಟಪಕ್ಕೆ ಬಂದು ಮಣಿಮಯಾಸನದಲ್ಲಿ ಕುಳಿತುಕೊಂಡಳು. ಪರಿಚಾರಕಿಯರು ಆಕೆಯನ್ನು ಓಲೈಸುತ್ತಿದ್ದಾಗ ಅಲ್ಲಿಗೆ ಚಿತ್ರಪಟಗಳನ್ನು ಒಬ್ಬಾಕೆ ತಂದಳು. ಅವುಗಳಲ್ಲಿ ಕೆಲವನ್ನು ತೆಗೆದು ರಾಣಿಗೆ ತೋರಿಸುತ್ತಿದ್ದಳು. ಹೆಣ್ಣಾನೆಯೊಂದಿಗೆ ಚಲ್ಲಾಟವಾಡುತ್ತಿದ್ದ ಆನೆಯ ಮರಿಗಳಿದ್ದ ಒಂದು ಚಿತ್ರಪಟ

ರಾಣಿಯ ಮನಸ್ಸನ್ನು ಬಹಳವಾಗಿ ಆಕರ್ಷಿಸಿತು. ಚಿತ್ರಪಟದಲ್ಲಿಯಾದರೂ ನಾನು ಪುತ್ರವತಿ ಎಂಬಂತೆ ಚಿತ್ರಸಲಿಲ್ಲವಲ್ಲ ಎಂದು ದುಃಖಿತಳಾದಳು. ಯಾರೊಂದಿಗೂ ಮಾತಾಡಲಿಲ್ಲ.

ಮಹಾಸೇನ ಮಹಾರಾಜ ಅದೇ ಸಮಯಕ್ಕೆ ರಾಣಿಯನ್ನು ನೋಡಲು ಅಲ್ಲಿಗೆ ಬಂದನು. ರಾಣಿಯ ಪರಿಸ್ಥಿತಿಯನ್ನು ಕಂಡು ಅವನು ಮರುಕಗೊಂಡನು. ರಾಣಿಯನ್ನು ಅನುನಯಿಸಿ ಆಕೆಯ ದುಃಖಕ್ಕೆ ಕಾರಣವೇನು ಎಂದು ಕೇಳಿದನು. ಆಕೆಯು ಮಾತಾಡಲಾರದೆ ಕಣ್ಣೀರು ಸುರಿಸಿದಳು. ರಾಜ ರಾಣಿಯ ಸಖಿಯರನ್ನು ಈ ಬಗೆಗೆ ವಿಚಾರಿಸಿದನು. ಅವರು ಚಿತ್ರಪಟಗಳ ವಿಷಯವನ್ನು ಹೇಳಿದರು. ರಾಜದಂಪತಿಗಳ ಭಾವಭಂಗಿಗಳಿದ್ದ ಚಿತ್ರಪಟಗಳನ್ನು ನೋಡಿ ಸಂತೋಷಿಸುತ್ತಿದ್ದ ರಾಣಿ ಆನೆಯ ಮರಿಗಳಿದ್ದ ಚಿತ್ರಪಟಗಳನ್ನು ನೋಡಿದ ಕೂಡಲೇ ಮೌನವನ್ನು ತಾಳಿದಳು ಎಂದು ಸಖಿಯರು ಹೇಳಿದರು. ಇದನ್ನು ಕೇಳಿದ ಮಹಾರಾಜನಿಗೆ ರಾಣಿಯ ಬಯಕೆ ಏನು ಎಂಬುದರ ಅರಿವಾಯಿತು. ಆಗ ತಾನು ಕಂಡ ಪುತ್ರೋತ್ಪತ್ತಿ ಕಾರಣವಾದ ಸ್ವಪ್ನಗಳನ್ನು ನೈಮಿತ್ತಕರು ಹೇಳಿದ ನಿಮಿತ್ತಗಳನ್ನು ಆಕೆಗೆ ನಿರೂಪಿಸಿ ಸಮಾಧಾನಪಡಿಸಿದನು. ಇಕ್ಷ್ವಾಕು ವಂಶಕ್ಕೆ ತಿಲಕಪ್ರಾಯನೆನಿಸುವವನು ತನಗೆ ಮಗನಾಗಿ ಹುಟ್ಟಿ ತನ್ನ ರಾಜ್ಯಭಾರವನ್ನು ಹೊರುತ್ತಾನೆ ಎಂಬ ಶುಭಸಮಯವನ್ನು ನಿರೀಕ್ಷಿಸುತ್ತಿರುವುದಾಗಿ ಹೇಳಿದನು.

ಅದೇ ವೇಳೆಗೆ ಕಂಚುಕಿ ಬಂದು ಫಲಪುಷ್ಪ ಸಹಿತವಾಗಿ ಒಬ್ಬಾತನು ದರ್ಶನಕ್ಕೆ ಬಂದಿರುವ ವಿಷಯವನ್ನು ತಿಳಿಸಿದನು. ರಾಜನು ಆತನನ್ನು ಬರಮಾಡಿಕೊಂಡು ಕಾಣಿಕೆಯನ್ನು ಸ್ವೀಕರಿಸಿ ಬಂದ ಸಂಗತಿಯನ್ನು ಕೇಳಿದನು. ಪ್ರಚೇತರೆಂಬ ದಿಗಂಬರ ಮುನಿವರರು ಬಂದು ನಂದನವನದಲ್ಲಿ ತಂಗಿರುವ ಸಂಗತಿಯನ್ನು ತಿಳಿಸಿದನು. ರಾಜನು ಪತ್ನಿಗೆ ಈ ಶುಭಸಮಾಚಾರವನ್ನು ಹೇಳಿ ಮುನಿಗಳ ದರ್ಶನಕ್ಕೆ ಸಿದ್ಧನಾದನು.

ಪ್ರಚೇತ ಮುನಿಗಳ ದರ್ಶನಕ್ಕೆ ಮಹಾರಾಜನು ಪತ್ನೀ ಸಮೇತನಾಗಿ ಸಕಲ ಪರಿವಾರದೊಂದಿಗೆ ಹೊರಟನು. ಮುನಿಗಳು ತಂಗಿದ್ದ ನಂದನವನಕ್ಕೆ ಬಂದು ಅವರಿಗೆ ನಮಸ್ಕರಿಸಿದನು. ಮುನಿಗಳು ರಾಜನಿಗೆ ಧರ್ಮಸ್ವರೂಪವನ್ನು ಬೋಧನೆ ಮಾಡಿದನು. ಅದನ್ನು ಕೇಳಿದ ರಾಜ ಮುನಿಗಳ ಮಹಿಮೆಯನ್ನು ಕೊಂಡಾಡಿ ಆಮೇಲೆ ತಮಗೆ ಪುತ್ರ ಲಾಭವಾಗದಿರುವ ವಿಷಯವನ್ನು ನಿವೇದಿಸಿಕೊಳ್ಳುವನು. ಅದನ್ನು ಕೇಳಿದ ಮುನಿಗಳು ಪುಣ್ಯವಂತರಾದ ನಿಮಗೆ ಹದಿನೈದನೆಯ ತೀರ್ಥಂಕರನು ಮಗನಾಗಿ ಹುಟ್ಟುವನು ಎಂಬ ಶುಭಸಂಗತಿಯನ್ನು ತಿಳಿಸುವರು. ಇದರಿಂದ ಅತ್ಯಂತ ಸಂತೋಷಭರಿತನಾದ ಮಹಾಸೇನ ಮಹಾರಾಜನು ಆ ತೀರ್ಥಂಕರನ ಪೂರ್ವಭಾವವಳಿಯನ್ನು ತಿಳಿಸಬೇಕೆಂದು ಪ್ರಾರ್ಥಿಸಿಕೊಂಡನು. ಅದರಂತೆ ಮುನಿಗಳು ಆ ತೀರ್ಥಂಕರನ ಭವಾವಳಿಯನ್ನು ಈ ರೀತಿ ನಿರೂಪಿಸಿದರು.

ಧಾತಕೀ ಷಂಡದ ಪೂರ್ವಮಂದರದ ಪೂರ್ವವಿಭಾಗದ ೧೬ ನಾಡುಗಳಲ್ಲಿ ಪೂರ್ವವಿದೇಹವೆಂಬುದು ಒಂದು ಕ್ಷೇತ್ರ. ಅಲ್ಲಿಯ ಸೀತಾನದಿಯ ದಕ್ಷಿಣ ದಂಡೆಯ ಮೇಲೆ ವತ್ಸವಿಷಯವೆಂಬ ದೇಶವಿದೆ. ಈ ದೇಶದ ಸುಸೀಮಾ ನಗರದಲ್ಲಿ ದಶರಥ ಎಂಬ ಅರಸನು ರಾಜ್ಯವಾಳುತ್ತಿದ್ದನು. ಈತ ಸಕಲ ಭೋಗೋಪಭೋಗಗಳನ್ನು ಅನುಭವಿಸುತ್ತಾ ಸುಖಸಂತೋಷದಿಂದಿದ್ದನು. ಒಂದು ದಿನ ಸೂರ್ಯಾಸ್ತದ ಸಮಯದಲ್ಲಿ ಪಂಚಪರಮೇಷ್ಠಿಗಳಿಗೆ

ಅರ್ಘ್ಯವಿತ್ತು ಪೂಜಾದ್ರವ್ಯಗಳೊಂದಿಗೆ ಜಿನಮಂದಿರಕ್ಕೆ ಬಂದನು. ಭಕ್ತಿಯಿಂದ ಜಿನನಾಥನನ್ನು ಸ್ತುತಿಸಿ ಗಂಧೋದಕ ಶೇಷಾಕ್ಷತಾಧಿಗಳನ್ನು ತಳಿದ ಮೇಲೆ ಅರಮನೆಗೆ ಹಿಂತಿರುಗಿದನು. ಚಂದ್ರಕಾಂತ ಶಿಲೆಯ ಮೊಗಸಾಲೆಯಲ್ಲಿ ಕುಳಿತು ಗಾಯಕಿಯರು ಹಾಡುತ್ತಿದ್ದ ಜೀನೇಂದ್ರಾಂಕಮಾಲೆಯನ್ನು ಕೇಳುತ್ತಿದ್ದನು. ಆ ಸಮಯದಲ್ಲಿ ಆಕಾಶದಲ್ಲಿ ಸೊಗಸಾಗಿ ಕಾಣುತ್ತಿದ್ದ ಪೂರ್ಣಚಂದ್ರನನ್ನು ರಾಹು ನುಂಗಿಬಿಟ್ಟನು. ಚಂದ್ರನಿಗೆ ಪ್ರಾಪ್ತವಾದ ಆ ಗತಿಯನ್ನು ನೋಡಿದ ದಶರಥನಿಗೆ ಮಾನವರ ಸುಖಭೋಗಗಳ ನಶ್ವರತೆಯ ಅರಿವಾಯಿತು. ವೈರಾಗ್ಯ ಆವರಿಸಿತು. ತಪಸ್ಸಿನಿಂದ ಪರಮಾರ್ಥವೆಂಬ ನಿಧಾನವನ್ನು ಪಡೆಯಲು ನಿಶ್ಚಯಿಸಿದನು. ಬಂಧುಬಾಂಧವರಿಗೆಲ್ಲ ಈ ವಿಷಯವನ್ನು ತಿಳಿಸಿದನು. ಮಂತ್ರಿಮಹೋದಯರು ಈ ನಿರ್ಧಾರನ್ನು ಬದಲಿಸುವಂತೆ ರಾಜನನ್ನು ಪ್ರಾರ್ಥಿಸಿಕೊಂಡರು. ರಾಜ ಇದಾವುದಕ್ಕೂ ಕಿವಿಗೊಡದೆ ಅತಿರಥಕುಮಾರನಿಗೆ ರಾಜ್ಯವನ್ನು ಒಪ್ಪಿಸಿ ನೂರುಮಂದಿ ರಾಜರೊಂದಿಗೆ ವನಕ್ಕೆ ಹೊರಟುಹೋದನು. ದಿಗಂಬರ ದೀಕ್ಷೆಯನ್ನು ಕೈಗೊಂಡನು. ಬಾಹ್ಯಭ್ಯಂತರ ತಪಸ್ಸುಗಳನ್ನು ಆಚರಿಸಿದನು. ಸಮಾಧಿವಿಧಿಯಿಂದ ಶರೀರತ್ಯಾಗ ಮಾಡಿದನು. ಸರ್ವಾರ್ಥಸಿದ್ಧಿ ವಿಮಾನದಲ್ಲಿ ಅಹಮಿಂದ್ರನಾಗಿ ಜನಿಸಿದನು.

ಕೃತಿ ಸಮೀಕ್ಷೆ :

ಹದಿನಾಲ್ಕನೆಯ ಶತಮಾನದ ಕನ್ನಡ ಕವಿಗಳಲ್ಲಿ ಧರ್ಮನಾಥ ಪುರಾಣವನ್ನು ಬರೆದ ಮಧುರ ಕವಿ ಅತ್ಯಂತ ಪ್ರಸಿದ್ಧನಾಗಿದ್ದಾನೆ. ಚಂಪು ಕಾವ್ಯಗಳ ಪರಂಪರೆಯಲ್ಲಿ ಬಹುಶಃ ಕೊನೆಯವನು ಎಂದು ಪರಿಗಣಿತನಾಗಿರುವ ಈತನ ಧರ್ಮನಾಥ ಪುರಾಣ ವಿಶಿಷ್ಟವಾಗಿದೆ; ಜೈನ ಸಾಹಿತ್ಯ ಪರಂಪರೆಯಲ್ಲಿ ಪ್ರಮುಖವಾಗಿದೆ. ಮಧುರ ಪ್ರತಿಭಾನ್ವಿತ ಕವಿ; ಉಭಯಭಾಷಾ ಪಂಡಿತ. ಈತನ ವಿಶಿಷ್ಟವಾದ ವೈವಿಧ್ಯಮಯವಾದ ವರ್ಣನೆಗಳು ಆಕರ್ಷಣೀಯವಾಗಿವೆ; ಅತ್ಯಂತ ಜನಪ್ರಿಯವಾಗಿವೆ. ಈತನ ಪ್ರತಿಭೆ ಪಾಂಡಿತ್ಯಗಳಿಗೆ ನಿಕಷವಿಟ್ಟಂತಿದೆ ಹಂಪೆಯ ಶಾಸನ. ಲಕ್ಷ್ಮೀಧರಾಮಾತ್ಯನನ್ನು ಕುರಿತು ಬರೆದಿರುವ ಪದ್ಯಗಳು ಲೋಕವಿಖ್ಯಾತವಾಗಿವೆ : ಜೈನಧರ್ಮದ ಅಪರಿಮಿತ ಭಕ್ತಿ, ನಿಷ್ಠೆಗಳಿಗೆ ಈತನು ಬರೆದಿರುವ ಗುಮ್ಮಟ ಸ್ತುತಿ ಎಂಬ ಅಷ್ಟಕ ನಿದರ್ಶನವಾಗಿದೆ. ಧರ್ಮನಾಥ ಪುರಾಣ ಇದಕ್ಕೆ ಜ್ವಲಂತ ಸಾಕ್ಷಿಯಾಗಿದೆ. ಮಧುರನ ತರುವಾಯದ ವಾದಿವಿದ್ಯಾನಂದ, ಭಟ್ಟಾಕಳಂಕ, ಕವಿಮಲ್ಲ ಇವರು ಧರ್ಮನಾಥ ಪುರಾಣದ ಅನೇಕ ಪದ್ಯಗಳನ್ನು ತಮ್ಮ ಸಂಕಲನಗಳಲ್ಲಿ, ಲಕ್ಷ್ಯಗ್ರಂಥಗಳಲ್ಲಿ ದೃಷ್ಟಾಂತವಾಗಿ ಉದ್ಧರಿಸಿರುವುದು ಈತನ ಕಾವ್ಯದ ಮಹತ್ವವನ್ನು ಪುಷ್ಟೀಕರಿಸುತ್ತದೆ.

ಪ್ರಸ್ತುತ ಧರ್ಮನಾಥ ಪುರಾಣದಲ್ಲೆಲ್ಲಾ ಚೆಲ್ಲಿಸೂಸಿರುವ ಈತನ ಪ್ರತಿಭೆಯ ಪಾಂಡಿತ್ಯದ ದ್ಯೋತಕವಾಗಿ ಕೆಲವು ಪ್ರಸಂಗಗಳನ್ನು ಸಮೀಕ್ಷಿಸೋಣ : ಮಧುರನಿಗೆ ಜೈನಮುನಿಗಳ ಬಗೆಗೆ, ಪ್ರಾಚೀನ ಕವಿಪುಂಗವರ ಬಗೆಗೆ ಅಪಾರ ಭಕ್ತಿ ಶ್ರದ್ಧೆ ಗೌರವಗಳಿದ್ದುದಕ್ಕೆ ಈ ಮುಂದಿನ ಪದ್ಯಗಳು ಸಾಕ್ಷೀಭೂತವಾಗಿವೆ : ಕುಂಡಕುಂದಾಚಾರ್ಯರನ್ನು ಕುರಿತದ್ದು :

ಮುಟ್ಟದೆ ನೆರೆ ನಾಲ್ವೆರಲಂ
ಬಿಟ್ಟಿಳೆಯಂ ನಡೆವ ಕುಂಡಕುಂದಾಚಾರ್ಯರ್
ನೆಟ್ಟನೆ ಹೃದಯದೊಳಿರಲೇಂ
ಪುಟ್ಟುಗುಮೆ ವಿನಯರೊಳ್ ಕುಮಾರ್ಗಾಚರಣಂ (೧-೨೩)

ಧರ್ಮಭೂಷಣದೇವರನ್ನು ಕುರಿತದ್ದು :

ಪೋಷಿಸುಗೆಮ್ಮಂ ಸಲೆ ನಿ
ರ್ದೋಷಿ ಬಲಾತ್ಕಾರಗಣ ಗರಿಷ್ಠರ್ ಕರುಣಾ
ಭೂಷಣರಮಳಿನ ಜಿನಮತ
ಭೂಷರೆನೆ ನೆಗಳ್ದ ಧರ್ಮಭೂಷಣದೇವರ್ (೧-೨೫)

ಇವರಾದ ಮೇಲೆ ವರ್ಧಮಾನ ಮುನೀಂದ್ರ, ಮಹಾನಂದಿಯೋಗೀಂದ್ರ ಮೊದಲಾದ ಭಟ್ಟಾರಕರ ಸಂಸ್ಮರಣೆಯನ್ನು ಮಾಡಿ :

ಚತುರಂ ಧರ್ಮಜಿನೇಶ್ವರಂಗೆ ಪದೆಪಿಂ ಸರ್ವಾಂಗದೊಳ್ ಸಂದಲಂ
ಕೃತಿ ಚೆಲ್ವಾಗಿರೆ ನವ್ಯದಿವ್ಯರಸಧಾರಾಪೂರ್ವಮಾಗಿತ್ತ ಸ
ತ್ಕೃತಿ ಮುಕ್ತ್ಯಂಗನೆಗಳ್ತಿಯಿಂ ಸವತಿಯಪ್ಪುದ್ವಾಹದುತ್ಸಾಹಸಂ
ಗತಿಯೊಳ್ ಸೈತಮರ್ದಿಕ್ಕೆ ಸತ್ಕವಿಗಳಿಂ ಭದ್ರಂ ಶುಭಂ ಮಂಗಳಂ (೧-೩೪)

ತನ್ನ ಕೃತಿಗೆ ಸೈತು ಉಂಟಾಗಲಿ ಎಂದು ಪ್ರಾರ್ಥಿಸಿಕೊಂಡಿದ್ದಾನೆ. ಇಷ್ಟೇ ಅಲ್ಲದೆ ಪೂರ್ವಸೂರಿಗಳನ್ನು ಆಲಂಕಾರಿಕವಾಗಿ ಈ ಮುಂದಿನ ಪದ್ಯದಲ್ಲಿ ವಿಶೇಷವಾಗಿ ಸ್ಮರಿಸಿದ್ದಾನೆ:

ಪ್ರಾಚೀನ ಮುನಿವರ್ಯರನ್ನೂ ಕವಿಶ್ರೇಷ್ಠರನ್ನೂ ಅಪಾರ ಭಕ್ತಿ, ಶ್ರದ್ಧೆ, ಗೌರವ ಪೂರ್ವಕವಾಗಿ ಸ್ಮರಿಸಿರುವ ಮಧುರ ಕುಕವಿನಿಂದೆಯನ್ನು ಕಟುವಾಗಿ ವಿವರವಾಗಿ ವಿಶೇಷವಾಗಿ ಮಾಡಿದ್ದಾನೆ. ಆ ಪದ್ಯಗಳಲ್ಲಿ ಕೆಲವು ಇಂತಿವೆ :

ತಲೆಯಂ ತೂಗೆ ಬುಧರ್ ಖಳನಂ
ತಲೆವಾಗಿಸಿ ಸಭೆಯ ನಡುವೆ ನಿಲ್ಲದೆ ಪಾವಂ
ತಲೆಗಂಡ ಪಂದೆಯಂದದೆ
ತಲೆಬಾಲಂಗೆಟ್ಟು ಜಗುಳ್ವ ಕವಿಯುಂ ಕವಿಯೇ (೧-೫೦)

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಂಚಿಯ ಬೀದಿವರಿಯ ಬೀರನ ಕಥೆಯೇ (೧-೫೭)

ನೆಲೆಯರಿಯ ಪೊಲೆಯರಿಯದ
ಬಿರುದುಗಳೇಕೆಮಗೆ ಕೃತಿಯನೀಕ್ಷಿಸಿ ಮಿಗೆ ಮ
ಚ್ಚರಿಸುವ ಕವಿಯೆರ್ದೆ ಬಿಕ್ಕನೆ
ಬಿರಿದಿರ್ದುದೆ ಬಿರಿದು ಮಿಕ್ಕ ಬಿರಿದದು ಬಿರಿದೇ (೧-೫೮)

ಭೂನುತಕೃತಿಯಂ ಚತುರಕ
ಳಾನಿಳಯರ್ ನೋಡಿ ಮೆಚ್ಚಿ ತಲೆದೂಗೆ ಖಳಂ

ಮೋನಮಿರದೇಕೆ ಪಳಿವನೊ
ತಾನೇಡಿಸಿ ನೋಡುವಂತೆ ಮಣಿದರ್ಪಣಮಂ (೧-೫೯)

ಅವರಿವರಂ ಕನಲ್ಚು ಬಿರುಮಾತುಗಳಿಂ ಜರೆದಾನೆ ಲೋಕದೊಳ್
ಕವಿಯೆನುತುಂತೆ ಕಂತೆವೊರೆದಂತಳಿಗಬ್ಬಮನುರ್ಬಿ ಪೇಳ್ದು ಸಂ
ಭವರಸಭಾವಮಂ ಬರಿದೆ ಬಲ್ಲನೆ ಬೀಗಿ ಮಹಾಕವೀಂದ್ರ ಮಾ
ದವನೆಣೆಯಪ್ಪನೆಂಬ ಕೊಳೆಗಬ್ಬಿಗ ನಿನ್ನಯೆ ಗರ್ಬಮೆಂತುಟೋ (೧-೬೬)

ಮಧುರ ಕವಿ ಮಾಡಿರುವ ದುರ್ಜನದೂಷಣ ಕುಕವಿವಿಡಂಬನೆಯ ಈ ಮೇಲಿನ ಕೆಲವು ಪದ್ಯಗಳನ್ನು ಅವಲೋಕಿಸಿದಾಗ ಸಹಜವಾಗಿಯೆ ಸಮಸ್ಯೆಗಳು ಉದ್ಭವಿಸಬಹುದು. ಕನ್ನಡ ಸಾಹಿತ್ಯದ ಪ್ರಾಚೀನ ಕಾವ್ಯಗಳಲ್ಲಿ ಬಹುಮಟ್ಟಿಗೆ ಈ ಕುಕವಿನಿಂದೆ ಬಂದಿರುವುದನ್ನು ಎಲ್ಲರೂ ಬಲ್ಲರು. ಆದರೆ ಮಧುರ ಈ ಪ್ರಕರಣವನ್ನು ವಿಶೇಷವಾಗಿ ವಿಸ್ತಾರವಾಗಿ ಮಾಡಿರುವುದರ ಉದ್ದೇಶವೇನಿರಬಹುದು? ಬಹುಶಃ ಆತನ ಕಾಲದ ಸಾಹಿತ್ಯಕ ಪರಿಸ್ಥಿತಿ ಕಾರಣವಾಗಿರಬಹುದೆ? ಇದು ಎಂತಾದರೂ ಇರಲಿ. ಮಧುರನ ಪ್ರತಿಭೆ ಪಾಂಡಿತ್ಯಗಳ ದ್ಯೋತಕವಾಗಿ ಈ ಕಾವ್ಯದ ಕೆಲವು ಸನ್ನಿವೇಶಗಳನ್ನು ಅನುಲಕ್ಷಿಸಬಹುದಾಗಿದೆ.

ಈವರೆಗಿನ ಸಮೀಕ್ಷೆಯಿಂದ ಮಧುರ ಧರ್ಮನಾಥ ಪುರಾಣದ ಉದ್ದಕ್ಕೂ ತನ್ನ ಪ್ರತಿಭಾಸಾಮರ್ಥ್ಯವನ್ನು ಹೇಗೆ ಪ್ರದರ್ಶಿಸಿದ್ದಾನೆ ಎಂಬುದರ ಒಂದು ಸ್ಥೂಲ ಪರಿಚಯವನ್ನು ಮಾಡಿಕೊಳ್ಳಲಾಯಿತು. ಮಧುರನ ಕವಿತಾಶಕ್ತಿ ಅಸದೃಶವಾದುದು. ಜೈನಪ್ರಕ್ರಿಯೆಗಳಿಂದ ಮುಕ್ತವಾದ ಧರ್ಮನಾಥ ತೀರ್ಥಂಕರನ ಚರಿತ್ರೆಯನ್ನು ಅತ್ಯಂತ ಭಕ್ತಿಭಾವದಿಂದ ಮುಕ್ತಮನದಿಂದ ನಿರೂಪಿಸಿದ್ದಾನೆ. ಇಂತಹ ಉತ್ಕೃಷ್ಟವಾದ ಕಾವ್ಯ ಸಮಗ್ರವಾಗಿ ಲಭ್ಯವಾಗದಿರುವುದು ಸಾಹಿತ್ಯಲೋಕಕ್ಕೆ ಅಪಾರ ನಷ್ಟವಾಗಿದೆ. ಮಧುರ ಆತ್ಮಪ್ರಶಂಸೆ ಅತಿಯಾದುದು ಎಂದು ಕೆಲವರಿಗೆ ಭಾಸವಾಗಬಹುದು. ಅಂತೆಯೇ ಕುಕವಿನಿಂದೆಯೂ ಬಹಳವಾಯಿತು ಎಂಬ ಭಾವನೆಯೂ ಉಂಟಾಗ ಬಹುದು. ಇವೆಲ್ಲಕ್ಕಿಂತ ಮಿಗಿಲಾಗಿ ಕಾವ್ಯದುದ್ದಕ್ಕೂ ಹಾಸುಹೊಕ್ಕಾಗಿರುವ ಚೆಲ್ಲಿಸೂಸಿರುವ ವರ್ಣನೆಗಳು ಅತಿಯಾದುವು ಎಂಬ ಅಭಿಪ್ರಾಯವೂ ಮೂಡಬಹುದು.

ಮಧುರ ಪ್ರತಿಭೆಪಾಂಡಿತ್ಯಗಳು ಮೇಳವಿಸಿರುವ ಅತ್ಯಂತ ಮಹತ್ವದ ಕವಿ ಎಂಬುದು ನಿರ್ವಿವಾದುದು. ಅಷ್ಟೇ ಅಲ್ಲ ಮಧುರ ರಸಿಕ ಕವಿ. ಇದಕ್ಕೆ ಈತನು ಮಾಡಿರುವ ಅನುಪಮ ವರ್ಣನೆಗಳೇ ಜ್ವಲಂತ ನಿದರ್ಶನವಾಗಿವೆ. ಪಾಮರಿಯರ ವರ್ಣನೆಯಾಗಲಿ ಘಟ್ಟಿವಳ್ತಿಯರ ವರ್ಣನೆಯಾಗಲಿ ವಾರನಾರಿಯರ ವರ್ಣನೆಯಾಗಲಿ ಅಷ್ಟೇ ಏಕೆ ಮಹಾರಾಣಿಯರ ವರ್ಣನೆಯಾಗಲಿ ಯಾವ ಮುಚ್ಚುಮರೆಯಿಲ್ಲದೆ ಲೀಲಾಜಾಲವಾಗಿ ಮಾಡಿದ್ದಾನೆ. ಈ ಸಂದರ್ಭಗಳಲ್ಲಿ ಆತನು ತೋರಿರುವ ವರ್ಣನಾಸಾಮರ್ಥ್ಯ ಎಣೆತೊಣೆಯಿಲ್ಲದ್ದು. ಅತಿಯಾದ ವರ್ಣನೆಗಳಿಂದ ವಿಶೇಷವಾಗಿ ಸ್ತ್ರೀ ವರ್ಣನೆಗಳಿಂದ ಕಾವ್ಯ ಜಗ್ಗಿದೆ, ಬಗ್ಗಿದೆ, ಕುಗ್ಗಿದೆ ಎಂದು ಭಾವಿಸುವುದಕ್ಕೆ ಎಡೆಯಿಲ್ಲ. ಮಧುರನ ಧರ್ಮಶ್ರದ್ಧೆ, ಪೂರ್ವಕವಿಗಳಲ್ಲಿನ ಅಪಾರ ಗೌರವಗಳಿಂದ ಆತನ ಕಾವ್ಯಪ್ರವಾಹದಲ್ಲಿ ಆತನ ಬಗೆಗೆ ಎದ್ದಿರಬಹುದಾದ ಆಕ್ಷೇಪಗಳು ಕೊಚ್ಚಿಹೋಗುತ್ತವೆ. ಹದಿನಾಲ್ಕನೆಯ ಶತಮಾನದ ಚಂಪೂಕವಿಗಳ ಸೀಮಾಪುರುಷನಾಗಿದ್ದಾನೆ ಮಧುರ ಕವಿ. ಈತನ ಕಾವ್ಯ ಎಂದೆಂದಿಗೂ ಮಧುರವಾದುದು.

ಪರಿವಿಡಿ

ಬಾಹುಬಲಿ ವಿರಚಿತ

ಧರ್ಮನಾಥ ಪುರಾಣಂ

ಪ್ರಥಮಾಶ್ವಾಸಂ

ಶ್ರೀಮದ್ದೇವೇಂದ್ರವೃಂದಸ್ಫುರದುರುಮಕುಟಶ್ರೇಣಿಮಾಣಿಕ್ಯರೋಚಿ
ಸ್ತೋಮಾಂಭೋಧೌತಪಾದಂ ನಿರವಧಿಸುಖದೃಗ್ಬೋಧವೀರ್ಯಸ್ವರೂಪಂ
ವಾಮಾಷ್ಟಪ್ರಾತಿಹಾರ್ಯಪ್ರಕಟಿತಪರಮಾರ್ಹಂತ್ಯಲಕ್ಷ್ಮೀಪ್ರಭಾವೋ
ದ್ದಾಮಂ ಮಾಳ್ಕಿಷ್ಟಸಂಸಿದ್ಧಿಯನೆಮಗನಿಶಂ ಧರ್ಮನಾಥಂ ಜಿನೇಂದ್ರಂ ೧

ದಾರುಣಘಾತ್ಯಘಾತಿಕಲುಷಂ ಕಿಡೆ ನೈಜಗುಣಂಗಳೆಂಟುಮಾ
ಕಾರಮನೆಯ್ದೆ ತೋಱಿ ಚರಮಾಂಗಮಿತರ್ ಪರಿಪೂರ್ಣತೃಪ್ತಿಗಾ
ಧಾರರಮೂರ್ತರುದ್ಧತರಚಿನ್ಮಯರೀ ಭುವನಾಗ್ರದಲ್ಲಿ ನಿಂ
ದಾ ರಮಣೀಯರೀಗೆಮಗೆ ಸಿದ್ಧರಪಾರಸುಖಾಭಿವೃದ್ಧಿಯಂ ೨

ವರಪಂಚಾಚಾರಮಂ ರಕ್ಷಿಸುವ ಪದೆಪು ಲೇಸಪ್ಪಿನಂ ಪತ್ತುಧರ್ಮಂ
ಸ್ಥಿರಮಾಗುತ್ತಿರ್ಪಿನಂ ಪನ್ನೆರಡುತಪಮಗುರ್ವಪ್ಪಿನಂ ವರ್ತಿಸುತ್ತುಂ
ದುರಘವ್ರಾತಂ ವಿನೇಯಪ್ರತತಿಯನಿನಿಸುಂ ಪೊರ್ದದಂತಾಗಿ ಮಾಳ್ಪು
ದ್ಧುರಬೋಧಾಚಾರ್ಯವರ್ಯರ್ ಕುಡುಗೆಮಗೆ ನಿಜಾಚಾರಮಂ ಪ್ರೇಮದಿಂದಂ ೩

ಧರೆಯೊಳಗುಳ್ಳ ಭವ್ಯನಿವಹಕ್ಕೆ ದಯಾಮಯಮಪ್ಪ ಧರ್ಮಮಂ
ತೋಱಿ ಕರುಣದಿನೂಱಿ ನೆಱೆಪೇೞ್ದು ನಿಯಾಮಿಸುವರ್ ಸುಧರ್ಮದೊಳ್
ಪರಿಣತಜೈನತತ್ತ್ವರುಪದೇಶಕರೆನ್ನಯ ಚಿತ್ತಗೇಹದೊಳ್
ಭರವಸದಿಂ ಪ್ರಕಾಶಿಸುಗೆ ನಿಚ್ಚಲುಮುತ್ತಮಬೋಧರತ್ನಮಂ ೪

ಹೃದಯದೊಳುಣ್ಮೆ ಪೊಣ್ಮೆ ಕರುಣಾರಸಮಾತತಚಾರುಶೀಲ ಸಂ
ಪದದೊಳನೂನಮಪ್ಪ ಚರಿತಂ ಸಲೆ ಕೆಯ್ಮೆಗೆ ವರ್ತಿಪರ್ ಸದಾ
ಮದನಮದಪ್ರಣಾಶಿಗಳಶೇಷಜನಸ್ತುತ ಸರ್ವಸಾಧುಗಳ್
ಸದಮಳಕೀರ್ತಿಧಾಮರೆಮಗೀಗೆ ನಿಜೋತ್ತಮ ಸಾಧುವೃತ್ತಿಯಂ ೫

ಸಕಳಜನ ಸಿದ್ಧ ಸೂರಿ
ಪ್ರಕಟೋಪಾಧ್ಯಾಯ ಸಾಧುಗಳ್ ಜಗದುದ್ಧಾ

ರಕರೆಮಗೆ ಮುಕ್ತಿಸೌಖ್ಯ
ಪ್ರಕರಮನೊಲಿದೀವರಕ್ಕೆ ಕರುಣದಿನೆಂದುಂ ೬

ಜಿನಮಾರ್ಗಂ ಪರಿಭಿನ್ನವಸ್ತುನಯವರ್ಗಂ ಸರ್ವದೋದ್ಯದ್ದಯಾ
ಸುನಿಸರ್ಗಂ ಗತಸೀಮಪುಣ್ಯಚಯಸರ್ಗಂ ತೀರ್ಣಮಿಥ್ಯಾತ್ವಕಾ
ನನದುರ್ಗಂ ಪ್ರವಿರಾಜಮಾನಗುಣಸಂಸರ್ಗಂ ಮಹಾಪಾಪನಾ
ಶನಭರ್ಗಂ ಪರಮಾಪವರ್ಗಸುಖಮಂ ಭವ್ಯರ್ಗೆ ಮಾಳ್ಕಗ್ಗಳಂ ೭

ಘನಮಿಥ್ಯಾತ್ವಾಂಧಕಾರಪ್ರತತಿನಿಚಿತಲೋಕತ್ರಯೀಗೇಹದೊಳ್ ಪಾ
ವನಬೋಧಾವಾಸನಷ್ಟೀ ಜಿನಪತಿಯ ಲಸದ್ವಾಕ್ಯಮಾಣಿಕ್ಯದೀಪಂ
ವಿನುತಾರ್ಥವ್ರಾತಮಂ ಕಾಣಿಸದೆ ಬೆಳಗದಿರ್ದಂದು ಮೂಢತ್ರಯುಕ್ತಂ
ಜನಮಾದ್ಯಂತೋದ್ಧಸೌಖ್ಯಾಸ್ಪದ ಶಿವಪಥಮಂ ಕೆನ್ನಮಿನ್ನೆಂತು ಕಾಣ್ಗುಂ ೮

ಭವಕಾಳಾಹಿ ವಿಷಾಪಹಾರ ಪಟುವದ್ಯುತ್ಕೃಷ್ಟ ಭವ್ಯಾಳಿಸಂ
ಭವಿರತ್ನತ್ರಯಮೆಂಬಲಂಕರಣಮಂ ತೊಟ್ಟಿರ್ದರಂ ಮುಕ್ತಿಭಾ
ರ್ಗವಿ ರೂಪೇಂದ್ರಿಯವಿಲ್ಲದಿರ್ದೊಡಮತಿಸ್ನೇಹಾಭಿಸಂಬಂಧದಿಂ
ದವರಂ ಸ್ವೀಕರಿಸಿರ್ಪಳಂತದೆಮಗಂ ಮಾಳ್ಕಿಷ್ಟಸೌಖ್ಯಂಗಳಂ ೯

ವಿಮಳತರೋದ್ಧಬೋಧಬಿಸಶಾಲಿನಿ ಪನ್ನೆರಡಂಗಮೆಂಬನು
ತ್ತಮದಳರಾಜಿರಾಜಿನಿ ಲಸದ್ಗುಣಭಾಗ್ಯವನ ಪ್ರವೃದ್ಧಿಸಂ
ಭ್ರಮಪರಿಶೋಭಿನಿರ್ವೃತಿ ಮಧುವ್ರತಮೋದಿನಿ ತತ್ತ್ವರಸ್ವತೀ
ಕಮಳಿನಿ ತೋರ್ಕೆ ಮುಕ್ತಿಕಮಳಾಮುಖಮಂ ನಮಗೊಲ್ದು ಲೀಲೆಯಿಂ ೧೦

ಸದ್ಧರ್ಮವೃತ್ತಿಸಕಳಜ
ನೋದ್ಧರಣಸಮರ್ಥೆ ಮಾನಸೀ ಯಕ್ಷಿ ಮಹಾ
ವೃದ್ಧ್ಯಾಜ್ಞಿಕೆ ಮಾಳ್ಕೆ ಕೃಪಾ
ಬುದ್ಧಿಯಿನಾತ್ಮೀಯ ಕೃತಿಗೆ ನಿರ್ವಿಘ್ನತೆಯಂ ೧೧

ಜಿನಪದಸರೋಜಮಧುಕರ
ನನುಪಮದುಸ್ಸಹ್ಯದರ್ಪಪೂರಿತಲೋಕಂ
ಜಿನಧರ್ಮವಿರೋಧಿವಿನಾ
ಶನಮಂ ಭರದಿಂದೆ ತೋರ್ಕೆ ಕಿನ್ನರ ಯಕ್ಷಂ ೧೨

ವಿಳಸವರಿಷ್ಟಸೇನಗಣಭೃತ್ಪ್ರಭುವೆಂಬ ಪಯೋಧರಂ ಸಮು
ಜ್ವಳನಯಮೆಂಬ ಗರ್ಜನಯುತಂ ವರಭವ್ಯಜನಂಗಳೆಂಬ ಸ

ಲ್ಲಲಿತಮಯೂರನರ್ತನನಿಬಂಧನಮುನ್ನತಧರ್ಮಮೆಂಬ ಪೆ
ರ್ಮಳೆಯನನಾರತಂ ಕಱೆದು ಮಾಳ್ಪುದು ಲೋಕದ ತಾಪಶಾಂತಿಯಂ ೧೩

ಗೌತಮಗಣಧರಯತಿಯಂ
ನೂತಗುಣವ್ರಾತರತ್ನಸರಿದಧಿಪತಿಯಂ
ಪೂತವರಕೀರ್ತಿತತಿಯಂ
ಭೂತಳಕೃತನುತಿಯನನುದಿನಂ ವಂದಿಸುವೆಂ ೧೪

ಭೂತಬಲಿ ಪುಷ್ಪದಂತರ
ನಾತತಕಾರುಣ್ಯಜಳಧಿ ಹಿಮಕರನಿಭರಂ
ಸಾತಿಶಯಜ್ಞಾನಿಗಳಂ
ಧಾತ್ರೀಜನಮೆಯ್ದೆ ಬಣ್ಣಿಕುಂ ಮನದೊಲವಿಂ ೧೫

ಪರಮಜಿನಮತನಭೋಂಗಣ
ಪರಿರಾಜಿತತರಣಿ ಗೃಧ್ರಪಿಂಛಾಚಾರ್ಯೋ
ದ್ಧರ ಭವ್ಯಮಧುಕರಾವೃತ
ಚರಣಾಂಭೋಜಾತಯುಗಲಮೀಗೆಮಗೊಳ್ಪಂ ೧೬

ಅಲಘುಕಳಾಕಳಾಪದ ವಿಶೇಷಮನಾಂತು ಸಮಂತು ಸಂತತಂ
ತೊಲಗಿಸಿ ದುರ್ಮತೋರುತಮಮಂ ಸುದಿಗಂಬರಮಾರ್ಗಮಂ ಸಮು
ಜ್ವಳಿಸಿ ಸುಧಾಂಶುಬಿಂಬಮೆನೆ ತಾಪದ ಶಾಂತಿಯನುಂಟುಮಾಡಿದಂ
ಲಲಿತ ಸಮಂತಭದ್ರಮುನಿಪುಂಗವನೀ ಧರಣೀತಳಾಗ್ರದೊಳ್ ೧೭

ಮನದೊಲವಿಂದೆ ಕೀರ್ತಿಪುದು ಸರ್ವಜಗಜ್ಜನಮೆಯ್ದೆ ಚಾರುಧೀ
ಧನಪತಿ ಪೂಜ್ಯಪಾದಮುನಿರಾಜನನುದ್ಧಸಮಸ್ತತೇಜನಂ
ವಿನತಜನಪ್ರತಾನ ಸುರಭೂಜನನಸ್ತಮನೋಜರಾಜನಂ
ಜಿನಮತಸಿಂಧುರಾಜಪರಿವರ್ಧನಪೂರ್ಣನಿಶಾಧಿರಾಜನಂ ೧೮

ಪರಮಸ್ಯಾದ್ವಾದ ವಿದ್ಯಾನಿಶಿತಕುಲಿಶದಿಂ ತೀವ್ರಮಿಥ್ಯಾತ್ವಧಾತ್ರೀ
ಧರಮಂ ಮುಂ ನುಚ್ಚುನೂಱಪ್ಪಿನೆಗಮೊಡೆದು ಸಜ್ಜೈನಧರ್ಮಪ್ರಭಾವಂ
ಪಿರಿದುಂ ಭೂಭಾಗದೊಳ್ ಮೇಲೆನಿಸಿ ಸೊಗಯಿಸಲ್ಮಾಡಿ ವಿಖ್ಯಾತಿವೆತ್ತೀ
ಧರೆಗಾಚಾರ್ಯಾಕಳಂಕವ್ರತಿಯ ಚರಣಮಂ ವಂದಿಪೆಂ ಭಕ್ತಿಯಿಂದಂ ೧೯

ಎಸೆವ ಜಿನಧರ್ಮಮಂ ತಾಂ
ವಸುಧೆಯೊಳುದ್ಧರಿಸಿ ಕೀರ್ತಿಯಂ ಪಸರಿಸಿದಂ

ಕುಸುಮಶರಬಾಣಭಂಜನ
ನಸಮುಗಣಂ ಕೊಂಡಕುಂದಯತಿಪತಿ ಸತತಂ ೨೦

ಮಾರನ ಗರ್ವಮೆಂಬ ವರಪರ್ವತಮಂ ಪುಡಿಗುಟ್ಟಿ ರಾಜಿತಾ
ಚಾರವಿಶೇಷಮೆಂಬ ಕುಲಿಶಾಯುಧದಿಂದೆ ತಪಃಪ್ರಭಾವಮಂ
ಧಾರಿಣಿಯೊಳ್ ಕರಂ ತಳೆದನುತ್ತಮಭೂರಿಗುಣಾಳಿಶೋಭಿತಂ
ಚಾರುವಿಶಾಲಕೀರ್ತಿಮುನಿಪುಂಗವನಾತತಧೀನಿಕೇತನಂ ೨೧

ಧೀರರಪಾರಸದ್ಗುಣಮಣಿವ್ರಜವಾರಿಧಿಗಳ್ ಕಷಾಯಸಂ
ಹಾರಿಗಳಾತ್ಮಭಾವಪರಿಪುಷ್ಟ ಜಿನೇಶ್ವರ ಧರ್ಮರಾಜಿಗಳ್
ಭೂರಿಚರಿತ್ರ ಬಾಹುಬಲಿದೇವರಭಿಷ್ಟುತ ಪಾರ್ಶ್ವದೇವರುಂ
ಸೂರಿಪಿನೂತನರ್ ಪಿರಿದ ಕೀರ್ತಿಯನಾಂತೆಸೆದರ್ ನಿರಂತರಂ ೨೨

ಪರಮಶ್ರುತ ಮುನಿಗಳ ಸ
ತ್ಕರುಣಾವಾರಿಧಿಯೊಳಿಪ್ಪು ಮುಳ್ಗಿದ ಜೀವೋ
ತ್ಕರಮತಿಸುಖಿಯಾಗಿರ್ಕುಂ
ಭರದಿಂ ಮುಳ್ಗದೊಡೆ ದುಃಖಿಯಕ್ಕುಂ ಚಿತ್ರಂ ೨೩

ವೀರಂ ಬಲಾಳರಾಯ ಮ
ಹೀರಮಣನ ಜೀವರಕ್ಷಕಂ ಸಕಳಕಳಾ
ಗಾರಂ ಜಿನಧರ್ಮಮನು
ದ್ಧಾರಿಸಿದಂ ಚಾರುಕೀರ್ತಿ ಪಂಡಿತದೇವಂ ೨೪

ಪಟ್ಟಯತಿ ಧರ್ಮಭೂಷಣ
ಭಟ್ಟಾರಕರಂ ಜಗಜ್ಜನಂ ಸಂತೋಷಂ
ಬಟ್ಟು ಬಣ್ಣಿಸುತಮಿರ್ಕುಂ
ನೆಟ್ಟನೆ ಜಿನಧರ್ಮಭೂಷಣರನುರುಗುಣರಂ ೨೫

ಕೊಂಡಾಡುತ್ತಿರ್ಕುಂ ಭೂ
ಮಂಡಳಮುರುಲಕ್ಷ್ಮಿಸೇನಭಟ್ಟಾರಕರಂ
ಖಂಡಿತಮತ್ಸ್ಯಧ್ವಜಕೋ
ದಂಡರನುದ್ದಂಡವಾದಿ ಕರಿಹರಿನಿಭರಂ ೨೬

ಜೈನಮತಾಂಬುರಾಶಿಪರಿವರ್ಧನಚಂದ್ರನನಸ್ತತಂದ್ರನಂ
ಮಾನಿತಸಾರಸರ್ವಗುಣರುಂದ್ರನನುನ್ನತಕೀರ್ತಿಸಾಂದ್ರನಂ

ಪೀನವಿಮೋಹವಾರಣಮೃಗೇಂದ್ರನನುದ್ಧೃಕೃಪಾನದೀಂದ್ರನಂ
ಭೂನುತಮೇಘಚಂದ್ರನನಶೇಷಜನಂ ನಲವಿಂದೆ ಬಣ್ಣಿಕುಂ ೨೭

ಯತಿ ನಯಕೀರ್ತಿದೇವನನಪಾಸ್ತಸಮಸ್ತಮನೋವಿಭಾವನಂ
ವಿತತಮಹಾನುಭಾವನನುಪಾತ್ತಜಿನೇಶ್ವರಪಾದಸೇವನಂ
ಜಿತಖಳಕಾಮದೇವನನಶೇಷಜನಸ್ತುತಸಾಧುಭಾವನಂ
ಧೃತಶುಭಭಾವನಂ ಮುದದೆ ವಂದಿಸುವೆಂ ಗುರುಭಕ್ತಿಪೂರ್ವಕಂ ೨೮

ಮುನ್ನಿನ ಕಾಲದೊಳ್ ನೆಗಳ್ದ ಭೂಪರನೀಗಳನೂನಕಾಂತಿಸಂ
ಪನ್ನಮೆನಿಪ್ಪ ಕಾವ್ಯಮಣಿದರ್ಪಣದೊಳ್ ನೆಱೆತೋಱಿಸುತ್ತುಮಿ
ರ್ಪುನ್ನತಚಾತುರೀನಿಳಯಮಾದ ಮಹಾಕವಿವೃಂದಮಮಂ ಕರಂ
ಮನ್ನಿಸಿ ನಿಚ್ಚಲುಂ ಬಿಡದೆ ಕೀರ್ತಿಸದಿರ್ಪವರಾರೊ ಲೋಕದೊಳ್ ೨೯

ಭಣಿತಾನೇಕನಯಂ ಗಜಾಂಕುಶನುದಾತ್ತಂ ನಾಗವರ್ಮಂ ರಸಾ
ಗ್ರಣಿ ಹಂಪಂ ಕವಿರಾಜ ನೇಮಿಕವಿ ಭಾಳಾಕ್ಷಾಖ್ಯಕಂ ಜನ್ನಿಗಂ
ಗುಣಿರನ್ನಂ ಕವಿಚಕ್ರಿಯಗ್ಗಳನುಮೆಂಬೀ ಸರ್ವವಿದ್ವಚ್ಛಿರೋ
ಮಣಿ ರಾಜತ್ಕವಿವೃಂದದಿಂದೆಸೆದುದೀ ಭೂಮಂಡಳಂ ಸಂತತಂ ೩೦

ಬಹುಧಾನ್ಯವೃದ್ಧಿಗಾಗಿಯೆ
ಮಹಿಯೊಳ್ ಪ್ರಭವಿಸಿ ಕಳಾಧರೋನ್ನತಿಯಂ ನಿ
ರ್ವಹಿಸಿ ಶರತ್ಕಾಲದವೊಲ್
ಪ್ರಹತಿಸುಗೆ ಸಮಗ್ರಪಂಕಮಂ ಸುಜನೌಘಂ ೩೧

ವಿಕಸ್ವರೂಪ ಸುಜನಾ
ನೀಕಮನಕ್ಕೆಂತು ಸದೃಶಮಕ್ಕುಂ ಕಂಡೊಂ
ದಾಕಾರ ಸ್ವೀಕಾರದಿ
ನೇಕಸ್ಥಿತಿಯಲ್ಲದಿರ್ಪ ವಿಕಟಸ್ಫಟಿಕಂ ೩೨

ಆ ಸಜ್ಜನಚಯದೊಳ್ ದೋ
ಷಾಸಕ್ತರೆನಿಪ್ಪ ದುರ್ಜನರ್ ಬೆರಸಿರ್ಪರ್
ಭಾಸುರಸುಧಾಂಶುಬಿಂಬಕ
ಳಾಸಮುದಯದೊಳ್ ಕಳಂಕಮಿರ್ಪಂತೆ ವಲಂ ೩೩

ವಕ್ರಗತಿಯುಭಯಜಿಹ್ವಂ
ಮಿಕ್ಕು ಜಗತ್ಪ್ರಾಣನಾಶಕಾರಿ ಧರಿತ್ರೀ

ಚಕ್ರದೊಳೆಯ್ದಿಪ ಕೃತಿಯಂ
ಚಕ್ರಿಯವೊಲ್ ಮಾಡಿ ದುರ್ಜನಂ ನೋಯಿಸುವಂ ೩೪

ಖಳಸೇವೆಯಿಂದೆ ಮದ್ಗೋ
ಕುಳಮಾಕರ್ಣೋರುಪಾತ್ರದೊಳ್ ಪಿರಿದೊಂದ
ಗ್ಗಳಮಪ್ಪಮೃತಮನೀ ಭೂ
ವಳಯದೊಳನವರತಮೆಯ್ದೆ ಕಱೆಯುತ್ತಿರ್ಕುಂ ೩೫

ಕಪಿ ತಾಂ ಶ್ರವ್ಯಮೆನಿಪ್ಪ ಕಾವ್ಯಮನಿದಂ ಚಾತುರ್ಯದಿಂ ಪೇಳ್ದೊಡಂ
ಸುವಿವೇಕರ್ ಪರಿತೋಷಮಂ ತಳೆವರೆಂದುಂ ತಾಳರತ್ಯುದ್ಧತರ್
ನವಮಾಧುರ್ಯದ ಸೀಮೆಯಾದ ವಿಲಸತ್ಪೀಯೂಷದ ಸ್ವಾದಮಂ
ವಿಬುಧವ್ರಾತಮೆ ಬಲ್ಲುದಲ್ಲದೆ ಪಿಶಾಚಾನೀಕಮೇಂ ಬಲ್ಲುದೇ ೩೬

ದುರ್ಜನರೆಯ್ದೆ ದೂಱೆದಪರೆಂದು ಮಹಾಕವಿ ಮಾಳ್ಪ ಕಾವ್ಯಮಂ
ಸಜ್ಜನವಂದ್ಯಮಂ ಬಿಡುವನಲ್ಲನದೆಂತೆನೆ ಪೇನಿಗಂಜಿ ಸಂ
ವರ್ಜಿಪರುಂಟೆ ಕುಂತಳಮನೊಲ್ಲರೆ ಕಂಟಕಕಂಜಿ ಯಾನಮಂ
ಸಜ್ಜೆ ನಿವಾಸಮಂ ಬಿಡುವರುಂಟೆ ಕುಮತ್ಕುಣದಂಶಭೀತಿಯಿಂ ೩೭

ಪಳಿದಪರೆಂದಿದೊಂದು ಭಯದಿಂದೆ ವಿಚಾರಿಸಿ ಚಾರುಶಬ್ದದಿಂ
ದಳವಡುವರ್ಥದಿಂ ಸಮೆದೆ ನಾನದಱೊಳ್ ಮಱಹಿಂದೆ ದೋಷಮೊಂ
ದುಳಿದೊಡಮಂತದಂ ಪ್ರಕಟಿಪಾ ನೆವದಿಂ ನಿಜವಕ್ತ್ರದೊಳ್ ಬೆಳರ್
ತಳೆಯೆ ಸದೋಷಮಾದುದದು ಮತ್ಕೃತಿ ಶುದ್ಧಿಯನೆಯ್ದಿ ರಂಜಿಕುಂ ೩೮

ಪುಣ್ಯದಿನುದ್ಧಮಪ್ಪ ಮತಿಯಾದೊಡೆ ಶಾಸ್ತ್ರಮನೋದಿ ಸದ್ಗುಣಾ
ಗಣ್ಯಜಿನೇಶ ಚಾರುಚರಿತಾಂಕಿತಕಾವ್ಯಮನೆಯ್ದೆ ಮಾಡಿ ನೈ
ಪುಣ್ಯವನಾಂತವಂ ಕಪಿ ಕೃತಾರ್ಥನದಲ್ಲದೆ ಪಾಪಹೇತುವಂ
ಬಣ್ಣಿಸಿ ದುಃಖಮಂ ಪಡೆವನುಂ ಕವಿಯೇ ಕೃತಿಯುಂ ಕೃತಾರ್ಥಮೇ ೩೯

ಎತ್ತಾನುಂ ಜಿನನಾಮಮಂ ಪಲವುಕಾಲಕ್ಕೊರ್ಮೆ ಜಿಹ್ವಾಗ್ರದಾ
ಯತ್ತಂ ಮಾಡಿದವರ್ಗೆ ಕರ್ಮಮನಿತುಂ ಕೆಟ್ಟೋಡಿಪೋಕೆಂದೊಡಾ
ಪೊತ್ತುಂ ತಚ್ಚರಿತೌಘಮಂ ಹೃದಯದೊಳ್ ತಾಳ್ದಿರ್ದು ತತ್ಕಾವ್ಯಮಂ
ಮತ್ತಂ ಮಾಳ್ಪನ ಪಾಪಹಾನಿಯನದೇನಂತಿಂತೆನಲ್ ತಕ್ಕುದೇ ೪೦

ರಮಣೀಯಂ ಕೃತಭೂಪರಾಗಮಸಮಂ ಚಿತ್ರಾನುಬದ್ಧಂ ಸ್ಮರಾ
ಶ್ರಮಮಾಮೋದ ನಿವಾಸಮಪ್ಪ ವಿಲಸತ್ಕಾವ್ಯಂ ಮಹೀಚಕ್ರದೊಳ್

ಸುಮನೋಮಾಲ್ಯದವೊಲ್ ಸುನಾಯಕ ಗುಣಪ್ರೋದ್ದಾಮಮಾಗಿರ್ದೊಡು
ತ್ತಮಪುಣ್ಯಾಧಿಕಕಂಠಭೂಷಣಮದಕ್ಕಂತಲ್ಲದಂದಕ್ಕುಮೇ ೪೧

ಕೃತಿ ಲೇಸಲ್ಲದೊಡಂ ಜಿನೇಶ್ವರ ಕಥಾಸಂದರ್ಭಸಂಬಂಧಸಂ
ಗತಮಾಗಿರ್ದನಿಮಿತ್ತಮಾದರಿಸುವರ್ ವಿದ್ವಾಂಸರೀ ಕಾವ್ಯಮಂ
ಕ್ಷಿತಿಯೊಳ್ ಮೃಣ್ಮಯಪಿಂಡಮಂ ಧರಣಿಪಾಲಾಜ್ಞಾಧಿಮುದ್ರಾಸಮಂ
ಕಿತಮಾಗಿರ್ದುದುಕಾರಣಂ ತಲೆಯಮೇಲಿಟ್ಟಾದರಂ ಮಾಡರೇ ೪೨

ಕೃತಿ ಬಾಹುಬಲಿ ಮುನೀಶನ
ಮತಿಯೆಂಬ ವಿಶಿಷ್ಟಸಸ್ಯಮಂ ಪೆರ್ಚಿಸಿ ಸುಫ
ಲಿತಮಾಗಿ ಮಾಡಿದತ್ತೀ
ಕ್ಷಿತಿನುತ ನಯಕೀರ್ತಿಯತಿಯ ಕಾರುಣ್ಯರಸಂ ೪೩

ಅಱಿಯದ ವಿದ್ಯೆಯಿಲ್ಲ ಬಿಡದೋದದ ಕೇಳದ ಶಾಸ್ತ್ರವಿಲ್ಲ ಕೂ
ರ್ತೞಗದ ಭೂಪರಿಲ್ಲ ಸಲೆ ಸೋಲದ ವಾದಿಗಳಿಲ್ಲ ಸಂತತಂ
ನೆಱೆಯೆ ಸಮಸ್ತರುಂ ಪೊಗಳದಿರ್ದ ಕವಿತ್ವಮುಮಿಲ್ಲ ಲೋಕದ
ಲ್ಲುಱೆ ನಯಕೀರ್ತಿದೇವಸುತ ಬಾಹುಬಲಿವ್ರತಿಶಕ್ತಿಯದ್ಭುತಂ ೪೪

ನಯಕೀರ್ತಿವ್ರತಿನಂದನಂ ಸಕಳವಿದ್ಯಾಚಕ್ರವರ್ತ್ಯಾಹ್ವಯಂ
ದ್ವಯಭಾಷಾಕವಿತಾತ್ರಿಣೇತ್ರನುರುಹೋರಾಶಾಸ್ತ್ರ ಸರ್ವಜ್ಞಕಂ
ನಯಯುಕ್ತಂ ವರಮೂಲಸಂಘದೊಡೆಯಂ ದೇಶೀಗಣಾಗ್ರೇಸರಂ
ಪ್ರಿಯದಂ ಪುಸ್ತಕಗಚ್ಛಪೂಣರತಿಳಕಂ ಶ್ರೀಕೊಂಡಕುಂದಾನ್ವಯಂ ೪೫

ನಿಪುಣಂ ಷಟ್ತರ್ಕದೊಳ್ ವ್ಯಾಕರಣದೊಳಧಿಕಂ ಛಂದದೊಳ್ ತಾನಭಿಜ್ಞಂ
ವಿಪುಳಾಳಂಕಾರಭೇದಂಗಳೊಳತಿಚತುರಂ ಕಾವ್ಯದೊಳ್ ತಾನೆ ಬಲ್ಲಂ
ಸ್ವಪರೋದಾರಾಗಮವ್ಯಕ್ತಿಯೊಳತಿಕುಶಲಂ ನಾಟಕಾಖ್ಯಾನದೊಳ್ ತಾ
ನೆ ಪುರುಪ್ರಜ್ಞಾವಿಶೇಷಂ ಭುಜಬಳಿಯತಿಪಂ ಮತ್ತೆ ಬೊಟ್ಟೆತ್ತಲುಂಟೇ ೪೬

ಇಂತಪ್ಪಧಿಕ ಸುಸಾಮ
ರ್ಥ್ಯಂ ತನಗಳವಟ್ಟು ತೋಱೆ ತಪಮಂ ಬಾಲ್ಯದೊ
ಳಾಂತು ನಿಜಕೀರ್ತಿ ಸಕಳದಿ
ಗಂತದೊಳೆಸೆವಂದು ಬಾಹುಬಲಿಮುನಿ ನೆಗಳ್ದಂ ೪೭

ಮೊದಲೊಳ್ ಸಂಸ್ಕೃತಭಾಷೆಯಿಂ ಬುಧಜನಂ ಕೊಂಡಾಡುತಿರ್ಪಂತೆ ಸಂ
ಮದದಿಂ ಗುಮ್ಮಟನಾಥ ಸಚ್ಚರಿತವೆಂಬೀ ಕಾವ್ಯಮಂ ಪೇಳ್ದು ಮಾ

ಣದೆ ಕರ್ನಾಟಕದಿಂದೆ ಮತ್ತೆ ರಚಿಸಿ ಶ್ರೀಧರ್ಮನಾಥಪ್ರಬಂ
ಧದ ಪೆರ್ಚಂ ತಳೆದಂ ಸಮಂತುಭಯಭಾಷಾಕಾವ್ಯಕರ್ತೃತ್ವಮಂ ೪೮

ನಯವಿದರೆಲ್ಲರುಂ ಪೊಗಳೆ ಜಾಣ್ನುಡಿ ಮಿಕ್ಕಿರೆ ಕಾವ್ಯಮಂ ಗುಣೋ
ದಯವರಮಾಗೆ ಮಾಡಿ ನಯಕೀರ್ತಿಯತೀಶ್ವರರಗ್ರಶಿಷ್ಯನಿಂ
ತಯಯುತನಪ್ಪ ಬಾಹುಬಲಿಪಂಡಿತದೇವನಭಿಷ್ಟುತಂ ಮಹೋ
ಭಯಕವಿಚಕ್ರವರ್ತಿ ಪೆಸರಿಂದೆಸೆದಂ ಜಗದೊಳ್ ನಿರಂತರಂ ೪೯

ವರಶೃಂಗಾರರಸಪ್ರವಾಹಮತುಳಾಲಂಕಾರಸಂಶೋಭಿತಂ
ಧರಣೀಮಂಡಲಲಾಲಿತಂ ಮೃದುಪದನ್ಯಾಸಾಭಿರಮ್ಯಂ ಸಮು
ದ್ಧುರಭಾವಂ ಕವಿಚಕ್ರವರ್ತಿಯ ಲಸತ್ಕಾವ್ಯಂ ಮಹಾವಾರಸೌಂ
ದರಿಯಂತೆಲ್ಲರನೆಯ್ದೆ ರಂಜಿಸಿ ಮನಸ್ಸಂತೋಷಮಂ ಮಾಡುಗುಂ ೫೦

ಸುರಲೋಕದವೋಲಮೃತೋ
ತ್ಕರಮಂ ನೆಱೆಕಱೆದು ಬಾಹುಬಲಿಪಂಡಿತದೇ
ವರ ವಚನವಿಳಾಸಂ ಚಿ
ತ್ರರಮಂ ಸುರಸಾರ್ಥಲೀಲೆಯಂ ಪೆರ್ಚಿಸುಗುಂ ೫೧

ಚಿತ್ತದೊಳಾವಗಂ ನೆಲಸಿದತ್ತು ಮಹಾಭ್ರಮೆ ನಿದ್ರೆಯೆಂಬಿದ
ತ್ತತ್ತಲೆ ಮೀಱಿ ಪೋಯ್ತು ಕಪಿತಾಗ್ರಹಮೆಂಬ ಖಳಗ್ರಹಂ ಪೊದ
ಳ್ದೊತ್ತಿದೊಡಾದುದಿಂತಿನಿತುಮಾಗ್ರಹಿ [ಬಾಹುಬಳಂ] ಕವೀಶನ
ತ್ಯುತ್ತಮ ಪೂಜ್ಯನಾಗಿ ವರಕೀರ್ತಿಯನಾಂತನಿದೇಂ ವಿಚಿತ್ರಮೋ ೫೨

ಮಳೆವನಿಯಂ ಧರಾತಳದೊಳೊಂದೆರಡೆಂದೆಣಿಸಲ್ಕೆ ಶಕ್ತಿಯಂ
ತಳೆದೊಡೆ ತಾಳಲಕ್ಕು ನಭಮಂ ಕರದಿಂದುಱೆ ಗೇಣನಿಟ್ಟು ಮ
ತ್ತಳೆವಡೆ ಲೆಕ್ಕಮಂ ಬಿಡದೆ ಮಾಳ್ಪಡಮಕ್ಕು ಜಿನೇಶ ಸದ್ಗುಣಾ
ವಳಿಗಳನೆಯ್ದೆ ಪೇಳಲರಿದೀ ಭುವನತ್ರಯದೊಳ್ ನಿರಂತರಂ ೫೩

ಜಿನಗುಣಮೆಲ್ಲಮಂ ಕೊಱತೆಯಿಲ್ಲದೆ ಪೇಳ್ದಪೆನೆಂಬಿದುದ್ಧವಾ
ಗ್ಮಿನಿತೆಗೆ ತೀರದಾ ಗಣಧರಾವಳಿಗಾಗದು ಪನ್ನಗಾಧಿರಾ
ಜನವಶವಲ್ಲ ಮತ್ತೆ ಜಡಬುದ್ಧಿಯನುಳ್ಳವನಾದೊಡಾನುವೀ
ಮನದೊಲವಿಂದೆ ಮಾಳ್ಪೆನದನೆಂಬವನಗ್ಗಳದೆಗ್ಗನಲ್ಲವೇ ೫೪

ಆದೊಡಮೇನೊ ಮುನ್ನಿನ ಮಹಾಮುನಿನಾಥರ ವಾಕ್ಯದೋಜೆಯಿಂ
ಮೇಮರ ಧರ್ಮನಾಥಚರಿತಾಂಕಿತ ಕಾವ್ಯವಿಧಾನಶಕ್ತಿ ತಾ

ನಾದುದು ಜಾಡ್ಯನಪ್ಪೆನಗಮಂತವಱಿಂದದನೆಯ್ದೆ ಮಾಳ್ಪೆ ನಾಂ
ಮೇದಿನಿಯೊಳ್ ಗಜೇಂದ್ರಪಥದೊಳ್ ಪರಿವರ್ತಿಸುವಂತೆ ಕಾಳಭಂ ೫೫

ಪೂರ್ವಾಚಾರ್ಯದಿನೇಶರುಂ ಸ್ವವಚನಪ್ರಜ್ಯೋತಿಯಂ ಮನ್ಮನೋ
ಖರ್ವಾತ್ಯುದ್ಧಗವಾಕ್ಷದೊಳ್ ಪುಗಿಸೆ ಮತ್ತಭ್ಯಂತರಾಗಾರಮಂ
ನಿರ್ವಾದಂ ಬೆಳಗುತ್ತಿರಲ್ ಬಹುವಿಧಾರ್ಥವ್ಯಕ್ತಿ ತಾನಾಗದೇ
ಸರ್ವೋರ್ವೀತಳದೊಳ್ ಪ್ರಸಿದ್ಧಿವಡೆಗುಂ ಕಾವ್ಯಂ ಸದರ್ಥೋತ್ಕರಂ ೫೬

ಶುಭಪರಿಣಾಮಮೆಯ್ದೆ ಮನದೊಳ್ ನೆಲೆಗೊಳ್ಗು ದುರಿಂದ್ರಿಯಂಗಳ
ಪ್ರಭವಮಡಂಗಿಪೋಕು ಪರಭಾವನೆ ಪೊರ್ದದು ಪುಣ್ಯಹೇತುವೆಂ
ದಭಿನವಮಾಗಿ ಧರ್ಮಜಿನನಾಥಪುರಾಣಮನೊಲ್ದು ಪೇಳಲಾ
ನಭಿರುಚಿಯಿಂದೆ ತಂದೆನಿರದೀ ಮನಮಂ ಜಿನಭಕ್ತಿಯುಕ್ತಮಂ ೫೭

ಮೊದಲೊಳ್ ತದ್ಧರ್ಮಶರ್ಮಾಭ್ಯುದಯಮನೊಲವಿಂದೋದಿ ಕರ್ಣಾ
ಟದಿಂ ಮತ್ತದನೀಗಳ್ ಪೇಳ್ವೆನೆಂಬುಜ್ಜಗದೊಳಿರುತಿರಲ್ ಭವ್ಯಸಂದೋಹಮಂ ಸ
ಮ್ಮದಮಾಗಲ್ ಜೀಯ ನೀವೀ ಕೃತಿಯನಿರದೆ ಪೇಳಲ್ಕೆ ವೇಳೆಂದೊಡೀ ಸೌ
ಹೃದಮೂರ್ತೋತ್ಕಂಪಮಾಗುತ್ತಿರೆ ವಿರಚಿಸಿದಂ ಚಾತುರೀಜನ್ಮಗೇಹಂ ೫೮

ಪ್ರಥಮಾ ನಿಯೋಗಯುಕ್ತಂ
ಪ್ರಥಿತಜಿನೇಶ್ವರವಿಬೋಧಬೀಜೋದ್ಭೂತಂ
ಪೃಥುನಯಶಾಖಾಕೀರ್ಣಂ
ಪೃಥುವೀದರದಲ್ಲಿ ಕೊರ್ಬಿ ಪರ್ವಿದುದೀಗಳ್ ೫೯

ಎತ್ತೆತ್ತಂ ನೋಳ್ಪಡೆಂತುಂ ಕಡೆನಡುಮೊದಲೆಂಬೀ ವಿಭೇದಂಗಳಂ ತೋ
ಱಿತ್ತಿಲ್ಲಿಂತೆಂದೆನಿಪ್ಪಾಗಸದೊಳಧಿಕವಾಯುತ್ರಯಾವೇಷ್ಟಿತಂ ಸಂ
ವಿತ್ತಂ ಷಡ್ದ್ರವ್ಯಪೂರ್ಣಂ ಕೃತಿರಹಿತಮಧಸ್ತಿರ್ಯಗೂರ್ಧ್ವತ್ರಿಭೇದಾ
ಯತ್ತಂ ನಿತ್ಯೈಕರೂಪಂ ತ್ರಿಜಗಮೆಸೆಗುಮೀರೇಳುರಜ್ಜುಪ್ರಮಾಣಂ ೬೦

ಆಲೋಕತ್ರಯಲಕ್ಷ್ಮಿಯ
ಲಾಲಿತ ತನುಮಧ್ಯಮೆನಿಪ ಮಧ್ಯಮಲೋಕಂ
ಲೀಲಾಸಂಖ್ಯಾತದ್ವೀ
ಪಾಳಿಸಮುದ್ರಂಗಳಿಂ ವಿರಾಜಿಸುತಿರ್ಕುಂ ೬೧

ವ: ಅಲ್ಲಿಂದತ್ತಮೇಕರಜ್ಜು ವಿಸ್ತಾರಿತಮುಮಸ್ತೋಕಸ್ವಯಂಭೂರಮಣ ಜಳಧಿಪರಿವೃತ ಮುಮಾದನೇಕ ಸುಕೃತಾನೀಕದುಪಾರ್ಜನಬೀಜೋಕಮಾಗಿ ಸಮಸ್ತರ ನತ್ಯುತ್ತಮರಂ

ಮಾಳ್ಪುದಜೆಂ ಮಧ್ಯಮಮಾಗಿಯುಮೆಲ್ಲಾ ಲೋಕಕ್ಕತ್ಯುತ್ತಮಮೆನಿಸಿ ಸೊಗಯಿಸುವ
ಬಹಳಾಶ್ಚರ್ಯಕಾರಿಯಪ್ಪ ತಿರ್ಯಲ್ಲೋಕದ ನಟ್ಟನಡುವೆ

ಪುರುಚಂಚತ್ಫೇನಮುದ್ರಂ ನಿರವಧಿಮಣಿಭದ್ರಂ ನಿಮಗ್ನೀಕೃತಾರ್ಥಂ
ವರಕೃಷ್ಣಕ್ರಾದಿಭದ್ರಂ ಕೃತಕುಹರತಳಾರ್ದ್ರಂ ಮಹತ್ವಾದರಿದ್ರಂ
ಪರಗಂಗಾಯೋಗರುದ್ರಂ ಘುಳುಘುಳುರವರೌದ್ರಂ ಮಹಾಭೀಷಣಾರ್ದ್ರಂ
ಗರಿಮಾರ್ದ್ರಂ ರಾಜಕುಂಭೀಕರಲವಣಸಮುದ್ರಂ ತರಂಗೋದ್ವಿನಿದ್ರಂ ೬೨

ಆ ಪಾರಾಪಾರಮಧ್ಯಸ್ಥಿತಸರಸಿಜಮೆಂಬಂತೆ ಸಂಪನ್ನಜಂಬೂ
ದ್ವೀಪಂ ತಾಳ್ದಿತ್ತು ಚೆಲ್ವಂ ಬಹುವಿಧಪರಮಕ್ಷೇತ್ರಪತ್ರಾಭಿರಮ್ಯಂ
ಸರ್ಪಾಧೀಶೋರುದಂಡಂ ಕನಕಧರಣಿಭೃತ್ಕರ್ಣಿಕಾರಾಜಮಾನಂ
ಶ್ರೀಪೂರ್ಣಂ ಚಾರುಸೌಖ್ಯಪ್ರಬಲಪರಿಮಲಂ ಸರ್ವರಿಂ ಲಾಲನೀಯಂ ೬೩

ಮೇರುನಗೇಂದ್ರಮೆಂಬ ವರಮೌಲಿಯನಿಕ್ಕಿ ದಿನೇಶರೆಂಬ ಪಂ
ಕೇರುಹಯುಗ್ಮಮಂ ಪಿಡಿದು ಲಾವಣವಾರಿಧಿಯೆಂಬ ವಸ್ತ್ರಮಂ
ಚಾರುವೆನಲ್ಕೆಯುಟ್ಟು ರಜತಾದ್ರಿಗಳೆಂಬ ಗಜಂಗಳಿಂದಲಂ
ಕಾರಮನೆಯ್ದೆ ಲಕ್ಷ್ಮಿಯವೊಲೊಪ್ಪಮನಾಳ್ದುದು ದೀಪಮಾವಗಂ ೬೪

ಬಹುವಿಧಭೋಗಭೂಮಿ ಕುಲಗೋತ್ರವಿರಾಜಿ ಸಮಗ್ರವಾಹಿನೀ
ಮಹಿತತರಂ ವಿಶೇಷಿತಸುವರ್ಣಭರಂ ವಿಬುಧಾಳಿಸೇವಿತಂ
ಮಹಿಮಸಮನ್ವಿತಂ ವಿಶದಭೂರಿಯಶಸ್ತತಿ ಜಂಬುದೀಪಮೀ
ಮಹಿತಳದಲ್ಲಿ ತನ್ನ ಸಕಲಾಧಿಪತಿತ್ವಮನುಂಟುಮಾಡುಗುಂ ೬೫

ವ: ಅಂತೊಂದು ಲಕ್ಷಯೋಜನವಿಸ್ತಾರದಿಂ ಪ್ರಶಸ್ತವಾದ ಜಂಬೂದ್ವೀಪದ
ಮಧ್ಯಕ್ಕಳಂಕಾರಮೆನಿಸಿ

ಪನ್ನಗಲೋಕಮಂ ಬಿಡದೆ ಮೆಟ್ಟಿ ಮನುಷ್ಯರ ಲೋಕಮೆಲ್ಲಮಂ
ತನ್ನಯ ಪಾದಸೇವನೆಯೊಳೊಂದಿಸಿ ಚೂಳಿಕೆಯಗ್ರಭಾಗದಿಂ
ಸ್ವರ್ನಿಳಯಂಬರಂ ನಿಮಿರ್ದು ಮೂಜಗದೊಳ್ ಮಹಿಮಾಪ್ರಭಾವದಿಂ
ದುನ್ನತಮಾದ ಮೇರುಗಿರಿ ಪುಟ್ಟಿಸುತಿರ್ದುದಗುರ್ವನಾವಗಂ ೬೬

ಕೆಲದೊಳ್ ಬೀಳ್ವ ಪತಂಗಾ
ಕಳಿತ ಸುಮೇರುಪ್ರದೀಪಶಿಖಿಯೊಳ್ ಘನಕ
ಜ್ಜಳಮಂ ಕೊಳಲೆಂದಿಕ್ಕಿದ
ವಿಳಸಿತಖರ್ಪರದ ತೆಱದಿನಿರ್ದುದು ಗಗನಂ ೬೭

ಕ್ಷಮೆಯಂ ತಾಳ್ದಿ ಸುಜಾತರೂಪಮಯರೂಪಿಂದೊಪ್ಪಿ ತುಚ್ಛೇತರಾ
ಗಮದೊಳ್ ಕೂಡಿ ಸುದರ್ಶನಾಖ್ಯೆಯನದಾವಂ ಪೆತ್ತನೆನ್ನಂತಿರು
ತ್ತಮಮಪ್ಪಾ ಮನುಜಂಗೆ ಮುಕ್ತಿ ಸಸಿನಂ ತಾನಕ್ಕುಮಿಂತೆಂದನು
ಕ್ರಮದಿಂ ಪೇಳ್ವವೊಲೊಪ್ಪುಗುಂ ತಿಳಿಸಿ ಮತ್ತೀ ಮಂದರಂ ಮಂದರಂ ೬೮

ವ: ಆ ಮಂದರಮಹೀಧರರದ ದಕ್ಷಿಣದಿಶಾಭಾಗದಲ್ಲಿ

ನಿರವಧಿಸುಖಕ್ಕೆ ಪಾತ್ರಂ
ಪರಮಜಿನಾಗಮಜಲಪ್ರವಾಹಪವಿತ್ರಂ
ಉರುತರಶೋಭಾಚಿತ್ರಂ
ಕರಮೆಸೆಗುಂ ರಯ್ಯಮಪ್ಪ ಭರತಕ್ಷೇತ್ರಂ ೬೯

ಅದು ಗಂಗಾಸಿಂಧುಮಧ್ಯಸ್ಥಿತವರವಿಜಯಾರ್ಧಾದ್ರಿಯಿಂ ಭಿನ್ನಮಾಗಿ
ರ್ದುದಱಿಂ ಷಟ್ಖಂಡಮಾಗೊಪ್ಪಿದುದು ಬಹಳಲಕ್ಷ್ಮೀ ಮಹಾಭಾರದಿಂದಂ
ತ್ರಿದಶಾವಾಸಂ ನಿರಾಧಾರಕಮಿದು ಮುಱಿದೀ ಭೂಮಿಯೊಳ್ ಬೀಳ್ದುದೆಂಬಂ
ತುದಿತ ಶ್ರೀರಮ್ಯಮೆಲ್ಲಾ ಜನದ ನಯನಚಿತ್ತಂಗಳಂ ಸೂಱೆಗೊಳ್ಗುಂ ೭೦

ವ: ಆ ಷಡ್ಖಂಡದೊಳಖಂಡಶೋಭಾಕರಂಡಕಮಾದಾರ್ಯಾಖಂಡದಲ್ಲಿ

ಕಾಮಿತವಸ್ತುದಾಯಕಮೆನಿಪ್ಪ ವನಾವಳಿಕೋಶಮುತ್ತಮೋ
ದ್ದಾಮಸುವರ್ಣರತ್ನಖನಿಕಾಂತಿವಿಚಿತ್ರಿತದಿಕ್ಪ್ರದೇಶಮು
ತ್ಕೋಮಳಸಸ್ಯಸಂತತಿ ಹರಿದ್ಧರಣೀತಳಸನ್ನಿವೇಶಮೀ
ಭೂಮಿಯೊಳೊಪ್ಪುಗುಂ ವಿಳಸದುತ್ತರಕೌಸಳದೇಶಮಾವಗಂ ೭೧

ಅದನಾನೇನೆಂದು ಕೊಂಡಾಡುವೆನಧಿಕತಟಾಕಂಗಳಿಂ ಸುತ್ತಲುಂ ಪ
ರ್ವಿದ ಕುಲ್ಯಾಘಂಗಳಿಂ ಕುಕ್ಕುಟಸಮುದಯಸಂಪಾತ್ಯಮಪ್ಪೂರ್ಗಳಿಂ ಪೆ
ರ್ಚಿದ ಸತ್ಪುಂಡ್ರೇಕ್ಷುವಾಟಂಗಳಿನೆಡೆದೆಱಿಹಿಲ್ಲಾಗಿ ತುಂಬಿರ್ದುದೆತ್ತಂ
ಮುದದಿಂ ನೋಳ್ಪಡಂ ಕೌತುಕಮನೊದವಿಸುತ್ತಿರ್ಪುದಾ ದೇಶಮೆಂದುಂ ೭೨

ವರದಿಕ್ಪಾಲಪುರಂಗಳ್
ಸಿರಿಯಂ ನೋಡಲ್ಕನೇಕರೂಪಂ ಕೈಕೊಂ
ಡಿರದೆಳ್ತಂದವೊಲೆಸೆದುವು
ಭರದಿಂ ಪಿರಿದಪ್ಪ ತತ್ಪುರಂಗಳ್ ಪಲವುಂ ೭೩

ಉದಯಾಸ್ತಗಿರಿಗಳೆಡೆಯೊಳ್
ಪದಪಿಂದೆಡೆಯಾಡುತಿರ್ಪ ರವಿಬಿಂಬಕ್ಕಾ

ಸ್ಪದಶೈಲಂಗಳಿವೆಂಬಂ
ದದಿನೊಪ್ಪುವುವಲ್ಲಿ ಧಾನ್ಯರಾಶಿಗಳೆಂದುಂ ೭೪

ಬಡವನಿವನೆಂದು ಮೃಡನಂ
ಜಡೆಯಲ್ಲಿಯ ಗಂಗೆ ಬಿಟ್ಟು ಬಹುಮುಖದಿಂ ಸಿರಿ
ಯೊಡಗೂಡಿದ ಜನಪದದೊಳ್
ತೊಡವಿರ್ದಪ್ಪೊಲಿಯ್ದು ಪರಿಯುತಿರ್ಪುವು ತೊಱೆಗಳ್ ೭೫

ಪೃಷ್ಟಪಯೋಧರಮಂಡಲ
ಮಿಷ್ಟಲತಾಂತಂ ಸುಪತ್ರಪೂಗಂ ಚತುರೋ
ತ್ಕೃಷ್ಟವಿಟವಿತತಿಯಂತೆ ವಿ
ಶಿಷ್ಟನದೀತೀರತರುಚಯಂ ರಂಜಿಸುಗುಂ ೭೬

ಕನದುರುನಿತಂಬಮುಚ್ಚೈ
ಸ್ತನಮುದ್ಧವಿಳಾಸಕಂ ಮಹಾಭೋಗಯುತಂ
ವನಿತಾಜನದವೊಲೊಪ್ಪಮ
ನನವರತಂ ಪಡೆದುವಲ್ಲಿ ಪರ್ವತವ್ರಾತಂ ೭೭

ಗರ್ಭೀಕೃತಭುವನಂ ಸಂ
ದರ್ಭಿತ ಕರ್ಕಟಕ ಮೀನ ಮಕರಸುಚಾರಂ
ನಿರ್ಭರಹಂಸವರಾಬ್ಜಾ
ವಿರ್ಭಾವಂ ನಭದವೊಲ್ ಸರೋಗಣಮೆಸೆಗುಂ ೭೮

ವ: ಮತ್ತಮಲ್ಲಿ

ಎಲರಿಂದಳ್ಳಾಡುವೀ ಕೂರಿದವೆನಿಪೆಲೆಗಳ್ ಕೋಮಳೇಕ್ಷುಪ್ರಕಾಂಡಂ
ಗಳನಾದಂತಾಗಲಲ್ಲಿಂದೊಸರ್ವ ರಸದ ಸಾರಪ್ರವಾಹಂಗಳಿಂದಂ
ಬೆಳಗುಂ ನೀರೂಟಮಂ ಪಾರದೆ ಕಳವೆಗಳ ಕ್ಷೇತ್ರಮೆಲ್ಲಂ ತದೀಯೋ
ಜ್ಜ್ವಳಶಾಲಿಕ್ಷೀರಪಾನಂಗಳಿನುಱೆ ಬೆಳೆಗುಂ ಕೀರಪೋತಪ್ರತಾನಂ ೭೯

ಧರೆಯೆಂಬ ಜನನಿ ಪದ್ಮಾ
ಕರಮೆಂಬ ಕುಚಾಗ್ರದಲ್ಲಿ ತೀವಿರ್ದ ಮಹಾ
ಪರಮಕ್ಷೀರಮನಿತ್ತು
ದ್ಧರಿಪಳ್ ಸಸ್ಯಂಗಳೆಂಬ ಶಿಶುಗಳನೊಲವಿಂ ೮೦

ಮೊಲೆಗಳ ಭಾರದಿಂ ಕಟಿತಟಂಗಳ ಭಾರದಿ ತೋರಮಾಗೆ ಸ
ಲ್ಲಲಿತಮೆನಿಪ್ಪ ಸೋರ್ಮುಡಿಯ ಭಾರದಿನೇಗಳುಮೇಳಲಾಜಿದು
ಜ್ಜ್ವಳಮೆನಿಸಿರ್ದ ಗೀತರಸದಿಂ ತೆನೆಯಂ ತಿನಲೆಂದು ಬಂದ ಮಂ
ಜುಳ ಹರಿಣಂಗಳಂ ಬಿಡದೆ ಬಾರಿಪುದಲ್ಲಿಯ ಪಾಮರೀಜನಂ ೮೧

ಪಸುರೆಲೆ ಪಕ್ವದಂತಿರೆ ಮನೋಹರಶೂಕಮದುದ್ಧೃತುಂಡದಂ
ತೆಸೆದಿರೆ ಮುಗ್ಧ ಕೀರಶಿಶು ತನ್ನಯ ಮಾತೃಕೆ ತಪ್ಪದೆಂದು ಬಂ
ದೊಸೆದದಜಿಗ್ರಮಂಜರಿಯೊಳಿರ್ದು ವಿನೋದಿಸೆ ಕಂಡು ತಾಯುಮಂ
ಶಿಶುವನಗಲ್ಚಲಾಗದೆನೆ ಸೋವದೆ ಪಾಮರಿ ಪೋದಳಂದದಂ ೮೨

ಪಾಲುಣಲೆಂದು ಬಂದು ಗಿಳಿವಿಂಡುಗಳೀ ಕಮಳಸ್ಥಳಂಗಳಂ
ಮೇಲೆ ಮುಸುಂಕಿ ಕುಳ್ಳಿದಿರೆ ಭೂರಿಮೃಗಂಗಳಿನಪ್ಪ ಭೀತಿಯಿಂ
ಪಾಲಕಪಾಮರೀವಿತತಿ ಪಚ್ಚೆಯ ಬಣ್ಣದ ವಸ್ತ್ರದಿಂದದಂ
ಲೀಲೆಯೊಳೆಯ್ದೆ ಬಾಸಣಿಸಿತೆಂಬಭಿಶಂಕೆಯನುಂಟುಮಾಡುಗುಂ ೮೩

ಲಲಿತಮೆನಿಪ್ಪೀ ನೀರಿಂ
ಬೆಳೆದು ಸಮೃದ್ಧಂಗಳಾದೆವೆಂದಾ ಸಸ್ಯಾ
ವಳಿಗಳ್ ಮಾರ್ಪೊಳೆಪಿಂ ತ
ಜ್ಜಳದೇವತೆಯರ್ಗೆ ಫಳಮನೀವವೊಲೆಸೆಗುಂ ೮೪

ಮಂದಾನಿಳ ಭರವಸದಿಂ
ದಾಂದೋಳಿತ ಶಾಳಿಕಣಿಶಭೃತಮಹಿಯೆಸೆಗುಂ
ಕುಂದದ ತತ್ಸಂಪತ್ತಿಯ
ನಂದೀಕ್ಷಿಸಿ ತಲೆಯನೆಯ್ದೆ ತೂಗುವ ತೆಜಿದಿಂ ೮೫

ಸುರುಚಿರಗಂಧಶಾಳಿವನದೊಳ್ ಭ್ರಮರೀನಿಕುರುಂಬಮೆಲ್ಲಿಯುಂ
ಪರಿಮಳಲೋಭದಿಂದೆ ಸುಳಿದಾಡುತಮಿರ್ದುದಪಾರಪಾಂಥರು
ತ್ತರಳಿತ ಚಾರುದೀರ್ಘತರ ದೃಷ್ಟಿಗಳಂ ಸೆಜೆಗೆಯ್ಯಲೆಂದು ಬಿ
ತ್ತರಿಸಿದ ಚೆನ್ನಕಬ್ಬುನದ ಸಂಕಲೆಯೆಂಬಿನಮಲ್ಲಿ ರಂಜಿಕುಂ ೮೬

ಪಿರಿದಪ್ಪಾ ಪರಿಕಾಲದೊಳ್ ಬೆಳೆದ ಪಂಕೇಜಾತಷಂಡಂಗಳು
ದ್ಧುರಭಾಸ್ವದ್ರಜಮೆಂಬ ಜೋಡನೊಲವಿಂದಂ ತೊಟ್ಟು ಸನ್ಮಂಡಲಾ
ಗ್ರರಥಂ ಮಂದಸಮೀರನಾ ಕಳಮಭೂರಿಕ್ರೂರಪತ್ರಾವಳೀ
ಪರಿಪೀಡಾಭರಭೀತನಾದ ತೆಜಿದಿಂದಲ್ಲಲ್ಲಿ ಸಂಚಾರಿಪಂ ೮೭

ತುದಿಯೊಳ್ ನೀರಸಮಾದೊಡಂ ಬಗೆವೊಡಂ ತದ್ಗ್ರಂಥಿಯಂ ಕೂಡಿ ಮಾ
ಣದೊಡಂ ಶಿಷ್ಟಫಲಂಗಳಿಲ್ಲದೊಡಮತ್ಯುದ್ದಂಡಮಾಗಿರ್ದೊಡಂ
ಪದದಾ ದೇಶದ ಕೂಟದಿಂ ರಸಮನೀವುತ್ತಿರ್ದುದಿಕ್ಷುಪ್ರಕಾಂ
ಡದ ತಂಡಂ ಜಗದಲ್ಲಿ ಲೇಸೊದವದೇ ಸದ್ವಸ್ತುಸಂಯೋಗದಿಂ ೮೮

ಅಲರ್ದ ಬಯಲ್ದಾವರೆಗಳ್
ಸುಲಲಿತ ತದ್ದೇಶನೃಪತಿಗೆತ್ತಿದ ಶೋಭಾ
ಕಳಿತಂಗಳಪ್ಪ ಸತ್ತಿಗೆ
ಗಳ ತೆಜದಿಂ ಕಣ್ಗೆ ಸೊಗಸನೀವುವವೆಂದುಂ ೮೯

ವ: ಮತ್ತಮತ್ಯಂತ ಪೇಶಲಮಾದ ತದ್ದೇಶದೊಳ್ ನೀಳ್ದು ಪರ್ವಿದ ರಾಜ ಮಾರ್ಗಂಗಳೆಂಬ ಲತಾಪಿತಾನಂಗಳೊಳ್ ಪುಟ್ಟಿರ್ದಸ್ತೋಕಪರಿಪಕ್ವಫಲಸ್ತಬಕಂಗಳೆಂಬಂತೆ ಸುರಭಿ ಪರಿಮಳಮಿಳಿತ ಪರಮಾಮೃತಾಯಮಾನ ರಸಪ್ರಪೂರ್ಣತದುಚಿತ ನವ್ಯದ್ರವ್ಯ ಸಂಬಂಧುರಂಗಳಪ್ಪ ಚಂಚತ್ಕಾಂಚನ ಪ್ರಪಂಚಿತ ನಿರುಪಮ ಪ್ರಪಾಕಳಾಪ ಪ್ರಕಾಂಡ ಮಂಡಪಂಗಳಲ್ಲಿ

ಸರಸಿಜನೇತ್ರೆ ಸತ್ಕಳಶಮಂ ಪಿಡಿದೆತ್ತಿ ಮನೋಹರಾಂಬುವಂ
ವರಪರಿತೋಷದಿಂದೆ ಜೀವ ಪೊತ್ತಿಸೊಳುದ್ಧಕುಚಂಗಳಕ್ಕಿಗೋ
ಚರಮುಮನೆಯ್ದೆ ಕಾಮಪರಿತಾಪದ ಪೆರ್ಚುಗೆಯಿಂದೆ ಶೋಷಿಸು
ತ್ತಿರೆ ಬಿಡದಾಗಳುಂ ಜಲಮನೀಂಟುವರಧ್ವಗರಾತುರತ್ವದಿಂ ೯೦

ಪಿರಿದುಂ ಕಣ್ಗಳಿನೀಂಟಿ ರೂಪರಸಮಂ ಶ್ರೋತ್ರಂಗಳಿಂದೀಂಟಿ ಸೌಂ
ದರಭಾಷಾರಸಮಂ ಸುಶೈತ್ಯಜಳಮಂ ಜಿಹ್ವಾಗ್ರದಿಂದೀಂಟಿಯುಂ
ಭರದಿಂ ತೃಪ್ತಿಯನೆಯ್ದದಧ್ವಗಜನಂ ತತ್ಕಾಮಿನೀ ಭೂರಿಭಾ
ಸುರಲಾವಣ್ಯರಸಾತಿರೇಕದೊದವಿಂದೆಂಬಂತೆ ತತ್ಕಾಲದೊಳ್ ೯೧

ಇಲ್ಲ ಜನೌಘಮಿಲ್ಲದ ಮಹಾಸ್ಥಳಮಾ ಜನಮುಂ ಧನಾಳಿ ಮ
ತ್ತಿಲ್ಲದುದಿಲ್ಲ ತದ್ಧನಮುಮುನ್ನತದಾನವಿಹೀನಮಾದುದಂ
ತಿಲ್ಲದದುದ್ಧದಾನಮುಮಶೇಷ ವಿಶೇಷಿತಪಾತ್ರಸಂಕುಳ
ಕ್ಕಲ್ಲದುದಿಲ್ಲ ತದ್ವಿಷಯದಲ್ಲಿ ನಿರಂತರಮೆಲ್ಲಿ ನೋಳ್ಪಡಂ ೯೨

ಭ್ರಮದಸ್ತೋಕೇಷುಯಂತ್ರಂಗಳ ಬಿದಿರಿತದಿಗ್ಭಾಗ ಚೀತ್ಕಾರನಾದೋ
ದ್ಗಮದಿಂದಂ ಪಾಡುವಂತಿರ್ದುದುಪವನ ವಿಲೋಲೋಪ್ತಸಸ್ಯಂಗಳಿಂ ನೃ
ತ್ಯಮನಾಗಳ್ ಮಾಳ್ಪವೊಲಿರ್ದುದು ಮಧುಕರಝೇಂಕಾರರಾವಂಗಳಿಂ ವಾ
ದ್ಯಮನಾದಂ ಬಾಜಿಪಂತಿರ್ದೆಸೆದುದು ವಿಷಯಶ್ರೀಸಮೃದ್ಧಿಪ್ರಮತ್ತಂ ೯೩

ವ: ಮತ್ತಮಾ ದೇಶಮಾಕಾಶದಂತನಂತಮಹತ್ವಮಹನೀಯಮುಂ ಚಂದ್ರ ಬಿಂಬದಂತೆ ಗೋಕುಳಸಮಾಲಂಬನಕರಂಬಿತಮುಂ ಚಕ್ರವರ್ತಿಯಂತೆ ಮಹಿಷೀಸಮುಪ ಗತಮುಂ ಬ್ರಹ್ಮನಂತೆ ಸರಸ್ವತೀಸಮೇತಮುಂ ವಿಷ್ಣುವಿನಂತಕ್ಷೂಣಲಕ್ಷ್ಮೀವಿರಾಜಿತಮುಂ ಮಹೇಶ್ವರನಂತೆ ವಿಲಸದುಮಾಸಮಾಲಿಂಗಿತಮುಂ ಸ್ವರ್ಗದಂತೆ ವಿಬುಧಾವಳಿ ಸಮುದ್ಭೂಷಿತಮುಂ ಮೋಕ್ಷದಂತೆ ನಿತ್ಯಸೌಖ್ಯಲಕ್ಷಿತಮುಂ ಮಹಾಕವಿವಿರಚಿತ ಶ್ರವ್ಯಕಾವ್ಯದಂತೆ ಪರಾರ್ಥಸಾರ್ಥಸಮರ್ಥಮುಂ ಸಂವತ್ಸರದಂತೆ ಬಹುಧಾನ್ಯವಿಭವ ವಿಭ್ರಾಜಿತಮುಂ ದೇವೇಂದ್ರನಂತೆ ರುಂದ್ರಸುಧರ್ಮಾಭಿರಾಮಮುಂ ವಿದಗ್ಧಸ್ತ್ರೀಯಂತೆ ವರೋರುಶೋಭಾಪರಿಕಳಿತಮುಂ ಸಮುದ್ರದಂತೆ ವಿವಿಧವಿದ್ರುಮಸಮೃದ್ಧಿಸಹಿತಮುಂ ನಾಗಲೋಕದಂತೆ ಭೋಗೇಂದ್ರಾವಭಾಸಿತಮುಮೆನಿಪುದಂತುಮಲ್ಲದೆಯುಂ

ಕರಕರಪೀಡನಂ ಕುಚದೊಳುದ್ಧಮದಂ ಗಜದೊಳ್ ಗುಣೋಜ್ಝನಂ
ಶರದೊಳನೂನಚಿಂತೆ ಮುನಿಯೊಳ್ ದ್ವಿಜಬಾಧೆ ವಿದಗ್ಧಕಾಮಿನೀ
ಸುರತದೊಳುಗ್ರಕಂಟಕಭಯಂ ವರಕೇತಕಿಯೊಳ್ ನಿರೀಕ್ಷಿಸು
ತ್ತಿರೆ ದೊರೆಕೊಳ್ಗುಮಾ ವಿಷಯದೊಳ್ ದೊರೆಕೊಳ್ಳದದಾವಕಾಲಮುಂ ೯೪

ಪೊಡೆಯೆಂಬಿದು ಬೆಳೆಗೆಯ್ಯೊಳ್
ಪಿಡಿಯೆಂಬಿದು ಕರಿಣಿಯೊಳ್ ವಿಚಾರಿಪೊಡೆಂದುಂ
ಬಡತನಮೆಂಬಿದು ಪೆಂಡಿರ
ಗಡಣದ ನಡುವಿನೊಳಮಲ್ಲದಿಲ್ಲಾ ನಾಡೊಳ್ ೯೫

ನಿರುಪಮಮಪ್ಪಾ ದೇಶಂ
ಪರಿಕಿಪೊಡಂ ಪರಮನೀತಿ ಕಮನೀಯತರಂ
ಸುರುಚಿರಮಂಗಳ ಸಂಗರ
ನಿರಂತರಂ ಪರಮನೀತಿ ಕಮನೀಯತರಂ ೯೬

ವ: ಅಂತತಿಪ್ರಸಿದ್ಧಿಪ್ರವರ್ಧಮಾನಮುಂ ನಿರವಧಿಸಂಪತ್ಸಮೃದ್ಧಿ ಸಮೃದ್ಧ ಮುಮೆನಿಪ ತದುತ್ತರಕೋಶಳದೇಶರಮಣೀರಮಣೀಯಮುಖಸರಸೀರುಹಮೆಂಬಂತೆ ಸಮಸ್ತ ಜನನಯನಮನೋಮಧುಕರನಿಕರಕ್ಕೆ ಪರಿತೋಷಪರಿಷದುತ್ಕರ್ಷಮಂ ಮಾಡುತ್ತುಂ

ಪಿರಿದುಂ ರತ್ನಪುರಂ ಪುರಂ ಸೊಗಯಿಕುಂ ಮುಕ್ತಾಮಯಾಂಗ ಪ್ರಜೋ
ತ್ಕರದಿಂದಂ ನವಪದ್ಮರಾಗ ಮಹಿತಸ್ತ್ರೀರತ್ನಸಂದೋಹದಿಂ
ಪರಿಪಂಥಿವ್ರಜಮೂರ್ಧ್ನವಜ್ರನೆನಿಪ ಕ್ಷ್ಮಾಪಾಲ ನಿಂದಾಪಣೋ
ದ್ಧುರಸಂಸ್ಥಾಪಿತ ರತ್ನರಾಶಿಚಯದಿಂ ತಾಳ್ದಿತ್ತದನ್ವರ್ಥಮಂ ೯೭

ಹರಿಕಾಂತಾಸಮುಪಚಿತಂ
ಪರಿವಿಲಸಿತ ಭೋಗಭೂಮಿ ಮಣಿಕೂಟಯುತಂ
ಪುರುರತ್ನಾಕರಮಾದಂ
ಪುರಮಸೆಗುಂ ಜಂಬುದೀಪದಂತನವರತಂ ೯೮

ಗೋತ್ರಪಿಭೇದಿಗಾವಸಥಮಾದ ಸುರಾಲಯಮಾದ ಮತ್ತೆಯುಂ
ಧಾತ್ರಿಯನೊಲ್ಲದಿರ್ದಮರಪತ್ತನಮಂ ನಗುಗುಂ ದಲೀಪುರಂ
ಗೋತ್ರಸುಪೋಷಿಗಳ್ಗೆ ವರಧರ್ಮಪರರ್ಗೆ ನಿವಾಸಮಾದ ತ
ದ್ಧಾತ್ರಿಯೊಳೊಂದಿ ಬಾಳ್ವನಗೆ ಪಾಸಟಿಯಲ್ತಿದುಮೆಂದು ನಾಡೆಯುಂ ೯೯

ಕಪಿಸೇವ್ಯಂ ಕಾವ್ಯಪೀಡಂ ನಿರುಪಮಬಹುಧಾಮಾತಿರಮ್ಯಂ ಬುಧಶ್ರೀ
ಪ್ರವರಂ ಜ್ಯೇಷ್ಠಾಭಿಯೋಗಂ ಸಮುಪಗತಲಸನ್ಮಂಗಳಂ ಸದ್ಗುರೂಚ್ಚಂ
ನವಗಂಧರ್ವಾಭಿರಾಮಂ ಬಗೆವೊಡೆ ಪರರಿಂ ದುರ್ನಿರೀಕ್ಷ್ಯಂ ಪುರಂ ಭಾ
ನುವ ರಾಜದ್ಬಿಂಬಮೆಂಬಂದದೆ ವರಕಮಳಾನಂದಮಂ ಮಾಳ್ಕುಮೆಂದುಂ ೧೦೦

ಅತ್ಯುಚ್ಚೈಸ್ತನಕೂಟರಮ್ಯಮತುಳಂ ಪ್ರಾಕಾರಸಂಶೋಭಿತಂ
ಪ್ರತ್ಯಗ್ರಪ್ರಮದಾಧಿರೂಢಮಸಕೃತ್ಸಂತೋಷ ಸಂಪಾದಕಂ
ಸ್ತುತ್ಯಂ ಭೂಷಿತರತ್ನ ಕಾಂತಿಚಯದಿಂ ಚಿತ್ರೀಯಮಾಣಾಂಬರಂ
ನಿತ್ಯಂ ಸ್ತ್ರೀಜನದಂತೆ ಕಣ್ಗೆ ಸೊಗಸಂ ಮಾಡುತ್ತುಮಿರ್ಕುಂ ಪುರಂ ೧೦೧

ಕಳಹಂಸಾವಳಿ ಪುಷ್ಪಜಾತಿ ಸುಕನತ್ಪತ್ರಾಳಿ ರಾಜತ್ಫಳಾ
ಕಳಿತಾನೋಕಹಪಂಕ್ತಿ ಕೀರ ಪಿಕ ಪಕ್ಷಿಶ್ರೇಣಿ ಭಾಸ್ವಲ್ಲತಾ
ವಳಿಯಿಂ ಚಿತ್ರಿತಮಾದ ಪಚ್ಚೆಯ ಮನೋಹೃದ್ವಸ್ತ್ರಮಂ ತತ್ಪುರೀ
ವಿಳಸತ್ಕಾಮಿನಿಯುಟ್ಟಳೆಂಬ ತೆಱದಿಂ ತನ್ನಂದನಂ ರಾಜಿಕುಂ ೧೦೨

ವ: ಅದಱ ಸುತ್ತಲುಂ

ವಿರಹಿಜನಂಗಳ ಚಿತ್ತೋ
ದ್ಧುರ ದಾರುವಿದಾರಣಾರ್ಥಮಾಗಿ ಮನೋಜಂ
ಕರಗಸದ ಕೋಶಮಂ ತಂ
ದಿರಿಸಿದವೊಲ್ ಕೇತಕೀವನಾವೃತೆ ಮೆಱೆಗುಂ ೧೦೩

ವ: ಮತ್ತಮಲ್ಲಿಂದೊಳಗೆ

ಅನುದ್ದಂಡತ್ವದಿಂದಾಕ್ರಮಿಸಿಮೊಡಮದಂ ಸೈರಿಸಿರ್ದುಂ ನಭಶ್ರೀ
ತಾನೀಗಳ್ ಕೊಟ್ಟಳಾದಂ ತೆಱಪುಮನೆವಗಿಂತೆಂದು ಮತ್ತೀ ವನಶ್ರೀ

ನಾನಾಜಾತೀಯಮಪ್ಪೀ ಸುಫಲತತಿಯನೀಯಲ್ಕೆ ಹಸ್ತಂಗಳಂ ತ
ನ್ನಾನಂದೋದ್ರೇಕದಿಂದೆತ್ತಿದವೊಲೆಸೆವುವಾ ನಾಳಿಕೇರಂಗಳೆಂದುಂ ೧೦೪

ಪರಿಗಾಯದ್ಭೃಂಗಮಾಲಂ ಹೃದಯಭವವಿಕಾರಾನುಕೂಲಂ ವಿಯೋಗಾ
ತುರಚೇತೋವೃತ್ತಿಶೂಲಂ ಫಲವಿತರಣಶೀಲಂ ಪಿಕವ್ರಾತಲೀಲಂ
ವರಶಾಖಾಲೀವಿಶಾಲಂ ಕವಿಕೃತನುತಿಲೋಲಂ ಪ್ರಿಯಗ್ರೀಷ್ಮಕಾಲಂ
ಧರಣೀವಿಕ್ಷಿಪ್ತಮೂಲಂ ಪಡೆದುದು ಸೊಗಸಂ ಮಾರಸಾಲಂ ರಸಾಲಂ ೧೦೫

ಚೆನ್ನಪಣ್ಗೊನೆಯ ಭರದಿಂ
ಸನ್ನತಮಾಗಿರ್ದು ಬಾಳೆಸಸಿಯೊಳ್ ಮಿಳಿರ್ಗುಂ
ತನ್ನ ಶಿಶುವಿಂಗೆ ಮೊಲೆಯಂ
ಮನ್ನಿಸಿ ಬಾಗಿರ್ದು ಕೊಡುವ ಬಾಲೆಯ ತೆಱದಿಂ ೧೦೬

ಬೇರಿಂದಂ ಕಾಯ್ಗಳಂ ಪೇಱದ ಪಲಸುಗಳೆಲ್ಲೆಲ್ಲಿಯುಂ ಸತ್ಫಳಾಳೀ
ಭಾರಕ್ಕಂ ಬಳ್ಕುವೀ ಕವುಂಗುಗಳನವರತಂ ಪಣ್ಗಳಿಂ ತುಂಬಿದೀ ಜಂ
ಬೀರಂಗಳ್ ಪಕ್ವಮಾಗಿರ್ದುಱೆಬಿರಿದ ಫಲವ್ಯಾಪ್ತವದ್ದಾಡಿಮಂಗಳ್
ನಾರಂಗಂಗಳ್ ಕರಂ ತತ್ಪುರದುಪವನದೊಳ್ ನೋಳ್ಪಡಂ ಕುಂದವೆಂದುಂ ೧೦೭

ತುಱುಗಿದ ಕಾಯ್ಗಳ ಭರದಿಂ
ನೆಱೆತಗ್ಗಿ ವಿಲಂಬಿಸಿರ್ದ ಮಾದಲಮೊಪ್ಪಿ
ತ್ತುಱುವ ನೆಲನೆಂಬ ತಾಯೊಳ್
ತಱೆಸಂದು ವಿಮೋಹದಿಂದೆ ಮುಂಡಾಡುವವೊಲ್ ೧೦೮

ಒಳಗೆ ಕತ್ತಲೆಯ ಮೊತ್ತಮ
ನೊಳಕೊಂಡೆಲೆವಳ್ಳಿಗಳ್ ದಿವಾಕರಕರಸಂ
ಕುಳಮಂ ನೂಂಕಲ್ ನಿಜಕರ
ತಳಮಂ ಬಿಡದೆತ್ತಿದಂತೆ ತಳೆದುವು ಚೆಲ್ವಂ ೧೦೯

ವ: ಮತ್ತಮಾ ನಂದನವನಂ ತಮ್ಮಯ ಸುಮನೋವಿಸರದೊಳೊರ್ಮೆಯು ಮಾಱಡಿಗಳಂ ಪೊರ್ದಲೀಯದುದಱೆಂ ಸಜ್ಜನರ ಪೆಂಪಿಂಗಿಂಪಾದ ಸಂಪಗೆಗಳಿಂ ಬಹಳ ಪರಿಮಳಭರಾಸ್ವಾದನಲಂಪಟಂಗಳಾಗಿ ತುಂಬಿನ ತಾಣದೊಳಿಂಬಿನಿಂ ಕುಳ್ಳಿರ್ದ ಮಱೆದುಂಬಿಗಳ ಝೇಂಕಾರದಿಂ ತುಂಬಿ ಸಾರಮಾದುದಱೆಂ ಮನೋಜರಾಜ ದಿಗ್ವಿಜಯ ಪ್ರಮಾಣದೊಳೂದುವ ಸನ್ನೆಗಾಳೆಗಳೆಂಬಂತಿರ್ದ ಪುಷ್ಪಂಗಳಂ ಮೇದುರ ಮಾದಾ ಪಾದರಿ ಯಪಾದಪಂಗಳಿಂ ಭೂರಿತರರಾಗಾವಿಳತ್ವದಿಂದಶೋಕಂಗಳಾಗಿಯುಂ ಪಾಂಥರ್ಗೆ ಕಂದರ್ಪ ಶೋಕೋದ್ರೇಕಮಂ ಮಾಳ್ಪ ವಿಚಿತ್ರಮಹಿಮಾವಳಂಬನ

ಮಾದುದಱಿಂ ವಿಳಾಸವತಿಯರಂತೆ ರಂಜಿಸುವ ಪಲ್ಲವಸಮುಲ್ಲಸದಶೋಕಾನೋಕ ಹಂಗಳಿಂ ಪೊಂಪುಳಿಯಾದ ಕಂಪಂ ಕೊಳಲೆಂದು ಬಂದೊಂದಿರ್ದಿಂದಿಂದಿರಂಗಳ ಘಾಸಿಯಿಂ ಸ್ಯಂದಮಾನ ಮಕರಂದಬಿಂದು ಸಂದೋಹದ ತಂದಲಂ ಸುರಿವುದಱಿಂ ಕಾರ್ಗಾಲದ ಮೇಘಂಗಳೆಂಬ ಶಂಕೆಯನಂಕುರಿಸುತ್ತಿರ್ದ ಸುರಹೊನ್ನೆಯ ಮರಂಗಳಿಂ ಕಾಮನ ರತಿಯ ಮದುವೆಯೊಳ್ ಪರಿಲಂಬಮಾನ ಚಾಮೀಕರ ಚಾಮರಂಗಳಿಂದಳಂ ಕೃತಮಾಗಿ ಮಾಡಿದ ವಿವಾಹಮಂಡಪಂಗಳೆಂಬಂತೆ ಕಣ್ಗೊಂಡು ಮೆಱೆವ ತೋರಮಪ್ಪ ಪಣ್ಗೊಂಚಲಿಂದಂಚಿರಮಾದ ದ್ರಾಕ್ಷಾಮಂಡಪಂಗಳಿಂ ಕುಸುಮಶರಂ ತನ್ನ ಪುಷ್ಪಂಗಳೆಂಬ ಬಾಣಂಗಳಿಂ ತುಂಬಿದ ಪತ್ತಳಿಕೆಗಳನಲ್ಲಿ ತಂದಿರಿಸಿದನೆಂಬಂತೆ ಪಿರಿದಪ್ಪ ಪೂಗಳ ಬಳಗಮನೊಳಕೊಂಡಗುರ್ವುವಡೆದುರ್ವಿ ಕೊರ್ವಿ ಪರ್ವಿದ ಮತಲ್ಲಿಕಾವಲ್ಲೀವಲ್ಲರಿ ಗಳಿಂದತ್ಯಂತರಮಣೀಯಮಾಗಿರ್ದುದಂತುಮಲ್ಲದೆಯುಂ

ಪಕ್ವಫಲಂಗಳಿಂದೆ ರಸನೇಂದ್ರಿಯಮಂ ವರಪುಷ್ಪಗಂಧದಿಂ
ಮಿಕ್ಕಿರೆ ನಾಸಿಕೇಂದ್ರಿಯಮನುನ್ನತಶೋಭೆಯಿನೀಕ್ಷಣಂಗಳಂ
ಸೊಕ್ಕಿದ ಭೃಂಗಚಾರುರವದಿಂ ಶ್ರವಣೇಂದ್ರಿಯಮಂ ಪ್ರವಾಳಿಸ
ಚ್ಚಕ್ಕಣ ಶಯ್ಯೆಯಿಂದೆ ವಪುರಿಂದ್ರಿಯಮಂ ತಣಿಪುತ್ತುಮೊಪ್ಪುಗುಂ ೧೧೦

ವ: ಅದಱೊಳೇಕಪ್ರದೇಶದೊಳ್

ಪಿಗೆ ವನಪಾಲಬಾಲಿಕೆಯರರ್ಥಿಯಿನುದ್ಧಪರಾಗದೊಳ್ ಕರಂ
ಜಗಲಿಗಳೋಳಿಯಂ ಸಮೆದು ಪೋಗಲೊಡಂ ಸಲೆ ದೀವದಂಚೆವಿಂ
ಡುಗಳದಱಲ್ಲಿ ಸುತ್ತಿ ಸುಳಿದಾಡುತಮಿರ್ದುವಗಾರಮಾದವೊ
ಳ್ಪಿಗೆ ಕಲಿವಂತೆ ತತ್ಪುರಪುರಂಧ್ರಿಯರೊಳ್ನಡೆಯೊಂದು ಜಾಣ್ಮೆಯಂ ೧೧೧

ಮದನನ ಬಿರುದಾವಳಿಯಂ
ಪದೆದುಗ್ಘಡಿಸುತ್ತುಮಿರ್ದ ಭಟ್ಟರ ತೆಱದಿಂ
ಮದಕಳಕೋಕಿಳಕುಳಮೊ
ಲ್ದದಱೊಳ್ ಬಗ್ಗಿಸುತುಮಿರ್ದುದಗ್ಗಳದಿಂದಂ ೧೧೨

ಸ್ಮರನೆಂಬ ಬೇಂಟೆಕಾಱಂ
ವರತದ್ವನದೊತ್ತುಗೊಂಡು ವಿರಹಾರ್ತಮೃಗೋ
ತ್ಕರವಂ ಕೊಂದನವರತಂ
ಭರದಿಂ ಮೃಗಯಾವಿನೋದದೊಳ್ ಕ್ರೀಡಿಸುವಂ ೧೧೩

ಆ ಪುರಲಕ್ಷ್ಮಿಯಂ ಸಮದಿಗಂಗನೆಯರ್ ನಡೆನೋಡಿದಂದು ಮ
ತ್ತೇಪಡಿಮಾತೊ ದೃಷ್ಟಿವಿಷಮಕ್ಕಿರದೆಂದು ವನಾಧಿದೇವಿ ಭೂ

ರೀಪ್ರಿಯದಿಂದೆ ತುಂಗತರವಾಯುಸಮುತ್ಥಿತಪುಷ್ಪರೇಣುವೆಂ
ಬೀ ಪುರವಸ್ತ್ರದಿಂದಮದನೆಯ್ದೆ ಮುಸುಂಕುವಳಾವಕಾಲಮುಂ ೧೧೪

ವ: ಅಂತಶೇಷಜನನಯನಮನಸ್ಸಮಾಕರ್ಷಣ ವಿದ್ಯಾದೇವತೆಯಂತೆ ಹೃದ್ಯಮಾದು ದ್ಯಾನವನದಿಂದೊಳಗೆ

ಮುನ್ನಂ ಖ್ಯಾತಿಯನಾಂತಡಂ ಜಗದೊಳಾಂ ರತ್ನಾಕರಾಖ್ಯಾನದಿಂ
ದೆನ್ನಿಂದಗ್ಗಳಮಾಗಿ ರತ್ನಚಯಮಂ ತಾಳ್ದಿರ್ದುದೆಂದೀಕ್ಷಿಸಲ್
ಮುನ್ನೀರ್ ಬಂದೊಸೆದಿರ್ದುದೆಂಬ ತೆಱದಿಂದಾ ಪತ್ತನೋಪಾಂತದೊಳ್
ಮುನ್ನೂರ್ಮಿಚಯಖಾತಿಕಾವಳಯಮತ್ಯಾಶ್ಚರ್ಯಮಂ ಪುಟ್ಟಿಕುಂ ೧೧೫

ಒಂದೆಡೆಯಲ್ಲಿ ಮಜ್ಜದಿಭದಾನದ ಕೂಟದಿನೆಯ್ದೆ ಕೃಷ್ಣಮಾ
ಯ್ತೊಂದೆಡೆಯಲ್ಲಿ ವಾರಿಜರಜೋವ್ರಜದಿಂದೆ ಪಿಶಂಗಮಾಯ್ತು ಮ
ತ್ತೊಂದೆಡೆಯಲ್ಲಿ ತೇಂಕುವ ಲಸತ್ಕುಸುಮಾವಳಿಯಿಂದೆ ಶುಭ್ರಮಾ
ಯ್ತಂದ ೧ ಖಾತಿಕಾವಳಯಮೊಪ್ಪಿ ಮನೋಹರಮಾದುದೆತ್ತಲುಂ ೧೧೬

ಜಲದೊಳ್ ಕ್ರೀಡಿಸುವಾ ಪುರ
ಲಲನಾಜನ ಗುರುಕುಚಾಗ್ರಕುಂಕುಮದಿಂದಾ
ಕಳಿತಂ ಪರಿಖಾತಂ ಮಂ
ಜುಳಮಾದುದು ರಾಗರಕ್ತಮೆಂಬಂತೆವೊಲಂ ೧೧೭

ವ: ಮತ್ತಮಾ ಖಾತಿಕಾವಳಯದಿಂದೊಳಗೆ

ಥಳಥಳಿಪ ತನ್ನ ಕಾಂತಿಯ
ನಿಳೆಯೊಳ್ ಮಿಂಚುಗಳ ಶೋಭೆಯಂ ಬಿಡದೆಂದುಂ
ಬೆಳಯಿಸುತುಮಿರ್ಪ ಪೆಂಪಂ
ತಳೆದಾದಂ ಪೊನ್ನಕೋಂಟೆ ಕಣ್ಗೆಸೆದಿರ್ಕುಂ ೧೧೮

ನಿರುಪಮಮಪ್ಪ ರತ್ನಶಿಖರಂಗಳಿನಾಗಸಮಂ ತುಡುಂಕುತಿ
ರ್ದುರು ಫಳದಾಯಿಯಾದ ವನದೋಳಿಯಿನೊಪ್ಪುವ ಪೊನ್ನಕೋಂಟೆಯಂ
ತರಣಿಹಯಂಗಳೀಕ್ಷಿಸಿ ಸುರಾದ್ರಿಯಿಂದೆಂದದುವಂ ಪ್ರದಕ್ಷಿಣೀ
ಕರಿಸುವ ಬುದ್ಧಿಯಿಂದೆಳವುವತ್ತಲುಮಿತ್ತಲುಮಾ ರಥಾಂಗಮಂ ೧೧೯

ಎನಗೆ ಸಮಾನಮಪ್ಪ ಪುರಮಿಲ್ಲ ಮಹೀತಳದೊಳ್ ಫಣೀಂದ್ರಪ
ತ್ತನಮಧರತ್ವಮಂ ತಳೆದುದಿಂದ್ರಪುರಂ ಮಿಗಿಲಾಗಿ ಮೇಗೆ ನಿಂ

ದನಣಸುಕೀರ್ತಿಯಂ ಪಡೆದುದೆಂದದನೀಗಳೆ ನೂಂಕಿದಪ್ಪೆನೆಂ
ದನುಪಮ ಸಾಲಹಸ್ತಮುಮನೆತ್ತಿದುದೆಂಬಿನಮೊಪ್ಪುಗುಂ ಪುರಂ ೧೨೦

ಉತ್ತುಂಗಾಯತಮಪ್ಪ ಕೋಂಟೆಯುಭಯಶ್ರೇಣೀ ಸಮಾಲಂಬಿತಂ
ಪ್ರೋತ್ತಾಲಾಂಬುದಮಾಲೆಯೆಂಬ ವಿಲಸತ್ಪಕ್ಷಂಗಳಾಧಾರದಿಂ
ವೃತ್ತದ್ವೇಷಿಯ ಪಟ್ಟಣಕ್ಕೆ ಭರದಿಂ ದಾಳಿಟ್ಟು ತಂದಪ್ಪೆ ನಾಂ
ಮತ್ತೆನ್ನಲ್ಲಿಯ ಬೆಲ್ವನೆಂಬ ತೆಜದಿಂ ತತ್ಪತ್ತನಂ ರಾಜಕುಂ ೧೨೧

ಮುನ್ನೆಂದುಂ ಬಲಯುಕ್ತರಪ್ಪ ಪಗೆಗಳ್ ದುರ್ಗರ್ವದಿಂದೆತ್ತಿಬಂ
ದೆನ್ನಂ ಮುತ್ತಿದರಾರುಮಿಲ್ಲ ದಿಟಮೆಂಬೀ ಖ್ಯಾತಿಯಂ ಸೂಜುಳಿಂ
ದಿನ್ನುಂ ಲೋಕಜನಕ್ಕೆ ಸೂಚಿಸುವವೊಲ್ ಪ್ರಾಕಾರಹಸ್ತಾಗ್ರದಿಂ
ದೌನ್ನತ್ಯಾಧಿಕಮಾದ ವಿಷ್ಣುಪದಮಂ ಮುಟ್ಟುತ್ತುಮಿರ್ಕುಂ ಪುರಂ ೧೨೨

ಕನದಮರಿಶಿಖರಿಕೂಟದ
ಘನಗುಹೆಗಳಿವೆಂಬ ಶಂಕೆಯಿಂದಂ ತಾಂ ಬಂ
ದನಿಮಿಷಮಿಥುನಂ ಕೋಂಟೆಯ
ಕನಕಮಯಾಟ್ಟಾಳಜಾಲದೊಳ್ ಕ್ರೀಡಿಸುಗುಂ ೧೨೩

ವ: ಆ ಮಹೋದಾರಪ್ರಾಕಾರಪರಿವೇಷ್ಟಿತಮಾದ ಪುರಲಕ್ಷ್ಮೀದಿಶಾ ಶೋಭಾವ
ಲೋಕನಾರ್ಥಂ ಕಣ್ದೆರೆದಳೆಂಬಂತೆ ಸಮುದ್ಘಾಟಿತಕವಾಟಪಕ್ಷ್ಮಪಾಳಿಕಾ ಪುಟಂಗಳು
ಮಾಕ್ರಾಂತತಾರಕಂಗಳಪ್ಪ ಗೋಪುರದ್ವಾರಕಂಗಳಿಂದೊಳಗೆ

ಜನತಾನಿರ್ಘೋಷದಿಂದಂ ಸುಳಿವ ಸುಗಣಿಕಾನೂಪುರೋದ್ದಾಮ ಝಣ್‌ಝಣ್
ಧ್ವನಿಯಿಂದಂ ಗಾಯಿನೀಸಂತತಿ ಕರವಿಲಸದ್ವಲ್ಲಕೀನಾದದಿಂದಂ
ವನಪಾನಕ್ಕಾಗಿ ಮತ್ತಂ ಬಿಡದೆ ನಡೆವ ವಾಜಿವ್ರಜಧ್ವಾನದಿಂದಂ
ಘನಮೊಪ್ಪಂಬೆತ್ತು ವಾಚಾಳಿತಮೆನಿಪುದು ರಾಜತ್ಪುರೀ ರಾಜಮಾರ್ಗಂ ೧೨೪

ವ: ಮತ್ತಮಾ ರಾಜಮಾರ್ಗದಿಕ್ಕೆಲಂಗಳೊಳ್

ಪಿರಿದಪ್ಪೊಳುವಂಡಂಗಳ
ನರೆಯಾಗಿರದೆಯ್ದೆ ತುಂಬಿ ತುಳ್ಕಾಡುವವಾ
ಪರದರಂಗಡಿಗಳೆತ್ತಂ
ತರತರದಿಂದಿರ್ದು ಕಣ್ಗೆ ಪಡೆದವಗುರ್ವಂ ೧೨೫

ಥಳಥಳಿಪಾಯ್ದ ಮುತ್ತುಗಳ ರಾಶಿಗಳಿಂ ಮಣಿಗಾಜಿರಾಪಣಂ
ಗಳುಮೆಸೆದಿರ್ಪುವೊಂದೆಡೆಯೊಳೊಂದೆಡೆಯೊಳ್ ನವಚಾರುವಸ್ತ್ರಸಂ

ಕುಳನಿಭೃತಂಗಳಾಗಿ ಪಟವೈಶ್ಯಜರಂಗಡಿಗಳ್ ನಿರಂತರಂ
ತಳೆದವನೂನಸಂಪದಮನಿಂದ್ರನ ಭಾಂಡಗೃಹಂಗಳೆಂಬಿನಂ ೧೨೬

ವ: ಮತ್ತಮೊಂದೆಡೆಯೊಳ್

ಸ್ಮರವಶ್ಯೌಷಧಸಾರಸಾರಘುಟಿಕಾಪೇಟಂಗಳೆಂಬಂದದಿಂ
ವರಪೂಗೀಫಳರಾಶಿಗಳ್ ಸೊಗಸನೀವುತ್ತಿರ್ದುವಂತಲ್ಲದಿಂ
ದಿರೆಯೊಳ್ ಸೇವನಮಾತ್ರದಿಂ ಸ್ಮರವಿಕಾರೋದ್ದೀಪನಸ್ಫೂರ್ತಿಯಂ
ಪಿರಿದುಂ ಮಾಳ್ಪ ವಿಶೇಷಶಕ್ತಿದಲವತ್ಕಾವಂದದಿಂ ಬಂದುದೋ ೧೨೭

ಕಡುಚಿಬ್ಬಂಬೊಯ್ದು ಬಣ್ಣಂಬಡೆದು ಮೊನೆಗಳುಂ ನೇರಿತಾಗಿರ್ದು ಮತ್ತಿ
ಮ್ಮಡಿ ಚೆಲ್ವಂ ಬೀಱುತುಂ ರಂಜಿಪ ಬಿಳಿಯೆಲೆಗಳ್ ಕಾಮದೇವಾಧಿರಾಜಂ
ಪಿಡಿದಾರ್ಪಂ ತೋರ್ಪ ಕೂರಂಬುಗಳ ತೆಱದೆ ಕಣ್ಗೊಂಡವಂತಲ್ಲವೆಂದೆಂ
ಬಡೆ ಕಾಮೋದ್ಬಾಧೆಯೆಂತುದ್ಭವಿಪುದು ಮನದೊಳ್ ಸೇವನಾಮಾತ್ರದಿಂದಂ ೧೨೮

ಸೊಗಯಿಪ ತಮ್ಮ ಕೋಮಳಕರಾಂಗುಳಿಯಿಂ ಪಿಡಿದೆತ್ತಲಾಗಳಂ
ತುಗುರ್ಗಳ ಕಾಂತಿರೇಖೆಗಳನಿಮ್ಮಡಿಸುತ್ತಿರೆ ಮಾಲೆವೂಗಳಂ
ನೆಗಪಿದ ಮಾಲೆಗಾರ್ತಿಯರನಂಗನ ಹೂಡಿದ ಬಿಲ್ಗಳೆಂಬಿನಂ
ಮಿಗೆ ಜನಚಿತ್ತಮೆಂಬ ಗುಜೆಯಂ ಭರದಿಂದೆಸುತಿರ್ಪರಾವಗಂ ೧೨೯

ಪಱಮೆಗಳ ಕಪ್ಪಿನಿಂದಂ
ಮಿಱುಗುವ ಕೆಂದಳದ ಕೆಂಪಿನಿಂದಾವಿಳಮಾ
ಗುಱೆ ಚಿತ್ರಿಸಿದಂತಾದಂ
ಮೆಱೆಗುಂ ಪಿರಿದಪ್ಪ ಪುಷ್ಪಮಾಲಾನಿವಹಂ ೧೩೦

ಮುತ್ತಿನಹಾರಮುದ್ಧುಕುಚಮಂಡಳದೊಳ್ ಕುಣಿದಾಡೆ ಕರ್ಣದೊಳ್
ಬಿತ್ತರಿಸಿರ್ದ ರತ್ನಮಯಭೂಷಣಕಾಂತಿ ಕಪೋಳದೊಳ್ ಕರಂ
ನರ್ತಿಸೆ ಕೈಯ ಕಂಕಣ ಝಣತ್ಕೃತಿಯೊಪ್ಪಿರೆ ಚಿತ್ತದೊಳ್ ಮುದಂ
ಬೆತ್ತರೆಯುತ್ತಮಿರ್ಪುದು ವಿಳಾಸವತೀಜನಮೆಯ್ದೆ ಘಟ್ಟಿಯಂ ೧೩೧

ಎನಗೆ ಪಗೆಯಪ್ಪ ಸಿರಿಯೊಡ
ನನವರತಂ ಕೂಡಿ ಬಾಳ್ದರಿವರೆಂಬೀ ಕೋ
ಪನದಿಂದಮೆನೆ ವಿಪತ್ತಿ ದ
ಲಿನಿಸುಂ ಪೊರ್ದದು ವಣಿಗ್ಜನಂಗಳನವಱಂ ೧೩೨

ವ: ಮತ್ತಮಲ್ಲಿ

ರತಿಕೇಳೀವೇಳೆಯೊಳ್ ತತ್ಪ್ರಣಯಕಲಹದಿಂ ಪಿಂದುಮುಂದಾದ ಚೇತಃ
ಪತಿಯಂ ದುರ್ಮೋಹದಿಂ ಕಾಲ್ವಿಡಿದು ತಿಳಿಪುವೀಕೃತ್ಯದಿಂ ಮಾರುತವ್ಯಾ
ಹತಭಾಸ್ವದ್ದ್ವಾರ ಘಂಟಾನಿನದದಿನತಿರಮ್ಯೋರುತಳ್ಪಂಗಳಿಂ ಸಂ
ಯುತಮಾಗಿರ್ದೆಯ್ದೆ ಚೆಲ್ವಂ ಪಡೆದುದು ಗಣಿಕಾಭೂರಿಸೌಧಪ್ರತಾನಂ ೧೩೩

ಅಲರ್ಗಣ್ಗಳ್ ಬೀಱೆ ವಿದ್ಯುತ್ಪ್ರಭೆಯನುರುಕುಚಂಗಳ್ ಮಹಾಹೇಮಕುಂಭಂ
ಗಳ ಚೆಲ್ವಂ ತೋಱೆ ತೋಳ್ಗಳ್ ಮೃದುಳತರಲತಾಶೋಭೆಯಂ ಪೋಲೆ ಕೇಶಾ
ವಳಿಗಳ್ ಮತ್ತಾಳಿನೀಕಾಂತಿಯನವಗಯಿಸಲ್ ಪ್ರೌಢವೇಶ್ಯಾಸಮೂಹಂ
ವಿಳಸತ್ಕಾಮಾಧಿರಾಜ ಪ್ರಬಳಬಳಮಿದೆಂಬಂತೆ ತೋಱುತ್ತುಮಿರ್ಕುಂ ೧೩೪

ಸ್ನೇಹದನುಬಂಧಮಿನಿತುಂ
ಮೋಹದೊದಂ ಕಾಮದೇವ ದೀಪಾಂಕುರಸಂ
ದೋಹಮಾಗಿರ್ದು ಚಿತ್ತೋ
ದ್ದಾಹಮನಾಳ್ಕುತ್ತು ವಾರನಾರೀನಿವಹಂ ೧೩೫

ಎನ್ನಿಂದಿಮ್ಮಡಿಗಾಡಿಯಂ ಪಡೆದು ತೋರ್ಪೀ ಸ್ತ್ರೀಯರೊಳ್ ಕೂಡಿದಂ
ದೆನ್ನಂ ಬಿಟ್ಟಪನೆಂದು ಪಾರ್ವತಿ ಮಹಾಭೂತೇಶನರ್ಧಾಂಗದೊಳ್
ಕೆನ್ನಂ ಪೊಕ್ಕೊಡನಿರ್ಪಳಂತೆ ವಿಳಸಲ್ಲಕ್ಷ್ಮೀಮಹಾದೇವಿಯುಂ
ತನ್ನಾ ಕೃಷ್ಣನ ವಕ್ಷದೊಳ್ ನೆಲಸಿದಳ್ ತರ್ಕೈಸುವ ವ್ಯಾಜದಿಂ ೧೩೬

ಉನ್ನತಜೈನಚೈತ್ಯನಿಳಯಂಗಳ ಮಂಜುಳರತ್ನಕೂಟನಿ
ಷ್ಪನ್ನಮೃಗಾರಿಜಾತ ಭಯದಿಂದೆನೆ ಶೀತಮಯೂಖಮಾಲಿ ತಾಂ
ಸನ್ನಿಹಿತಂ ನಭಸ್ಥಳದೊಳೆಯ್ದಿರುಳುಂಪಗಲುಂ ನಿರಂತರಂ
ತನ್ನ ಕುರುಂಗಮಂ ಪಿಣೆದು ನಿಲ್ಲದೆ ಸುತ್ತಿಬರುತ್ತಮಿರ್ಕುವಂ ೧೩೭

ಅವಱ ಘನಪಟ್ಟಸಾಲಾ
ನಿವಹದೊಳುತ್ಕೃಷ್ಟಜೈನಮುನಿಗಳ್ ಭರದಿಂ
ದವಗತ ಸಮಸ್ತಶಾಸ್ತ್ರರ್
ಪ್ರವರಗುಣಾವಾಸರಿರ್ಪರೊಲಿದನವರತಂ ೧೩೮

ವ: ಮತ್ತಮಾ ಜಿನಾಲಯಂಗಳ ಮುಂದಣ ಮಂಗಳಮಯ ರಂಗಾವಳೀ ಭಂಗುರರಂಗದುತ್ತುಂಗತರ ಮಕರತೋರಣದೋರಣಿ ರಮಣೀಯಂಗಳಪ್ಪ ಭೋಗರಂಗಸ್ಥಾನಂಗಳೊಳ್

ಪದಚಳನಂ ಸುತಾಲಯಭೇದಮನುಗ್ಘಡಿಪಂತೆ ತೋಱೆ ಗೀ
ತದ ರಸಮೆಯ್ದೆ ಹಸ್ತಿಚಳನಕ್ಕನುಕೂಲಮದಾಗೆ ಚಾರುವಾ

ದ್ಯದ ನಿನದಂಗಳಿಂದೆ ವಲಭೀಸ್ಥಳಿ ಮಾರ್ದನಿಯಂ ಕೊಡುತ್ತಿರಲ್
ಸುದತಿಯರೊಲ್ದು ನರ್ತಿಪರನಂಗನ ಮೋಹಶರಂಗಳೆಂಬಿನಂ ೧೩೯

ಮಣಿಮಯ ಭೂಮಿಯೊಳ್ ನಡೆವ ಪೌರವಧೂಪ್ರತಿಬಿಂಬದಂಭದಿಂ
ಫಣಿಪತಿ ಕನ್ಯಕಾನಿಕರಮುಚ್ಚಮನೋಮುದದಿಂದೆ ಬಂದು ತ
ತ್ಪ್ರಣುತ ವಿಳಾಸಮಂ ನೆಱೆಯೆ ನೋಳ್ಪಭಿವಾಂಛೆಯಿನೊಂದಿ ಪೋಪುದೀ
ಪ್ರಣಯದಿನೆಂಬವೋಲ್ ಬಿಡದ ಮಾರ್ಪೊಳಪಿಂ ರಮಣೀಯಮಾ ನೆಲಂ ೧೪೦

ಹರಿನೀಳರಚಿತ ಸೌಧೋ
ತ್ಕರದೊಳ್ ಕೀಲಿಸಿದ ತೋರಮುತ್ತುಗಳಂದಂ
ಬರದೊಳ್ ಪಗಲುಂ ಮೂಡಿದ
ವರ ತಾರೆಗಳೆಂಬ ತೆಱದಿನೊಪ್ಪಿದವೆತ್ತಂ ೧೪೧

ಪಳಿಕಿನ ಭಿತ್ತಿಯನೊಲವಿಂ
ನಳಿನಾಕ್ಷಿಯರೆಯ್ದೆ ನೋಡಿ ಪಲ್ಲುಲಿಯಲ್ ನಿ
ರ್ಮಳಮಾದೊಡಮಧರಚ್ಛವಿ
ಗಳ ಪೊಳೆಪಿಂದರುಣಮಾಗೆ ಸುಲಿಯುತ್ತಿರ್ಪರ್ ೧೪೨

ಇಂದುಮಯೂಖಲೇಖೆ ಹರಿನೀಲಶಿಲಾವಲಭಿಗವಾಕ್ಷದೊಳ್
ಬಂದು ಱಪೊಕ್ಕು ಭಿತ್ತಿಗಳ ಮೇಲೆ ವಿಲಂಬಿಸೆ ಮುಗ್ಧಕಾಮಿನೀ
ವೃಂದಮದಲ್ಲಿ ನಿರ್ಮಲ ವಿಮೌಕ್ತಿಕಹಾರಮಿದೆಂದು ಕೈಯನಾ
ನಂದದೆ ನೀಡಲಿಲ್ಲದಿರೆ ಮಾಳ್ಪುದು ಮೇಳದವರ್ಗೆ ಹಾಸ್ಯಮಂ ೧೪೩

ಅಂಬರಮಾರ್ಗದೊಳ್ ನಡೆದುಬಂದ ಪರಿಶ್ರಮದಿಂ ಬಳಲ್ದ ತ
ನ್ನಿಂಬಿನ ಮಿತ್ರನಂ ಪವನಚಂದಳಕೇತುಪಟಂಗಳೆಂಬ ಚಿ
ತ್ರಂಬಡೆದಿರ್ದ ವೀಜನಚಯಂಗಳಿನಂದದಿ ಬೀಸುವಂತಿರೊ
ಪ್ಪಂಬಡೆದಲ್ಲಿ ಹರ್ಮ್ಯತತಿ ಮಾಳ್ಪುದು ನೋಳ್ಪರ ಕಣ್ಗೆ ಹಬ್ಬಮಂ ೧೪೪

ಮುತ್ತಿನಹಾರಮೆಂಬ ವರನಿರ್ಝರವಾರಿಯಿನೊಳ್ಪುವೆತ್ತ ತ
ತ್ಪತ್ತನಯೋಷಿದುಚ್ಚಕುಚಮಂಡಲಮೆಂಬ ಮಹೀಧ್ರ ದುರ್ಗಮಂ
ಚಿತ್ತಜನೆಂಬ ರಾಜನೊಸೆದೇಱ ಸುದುಸ್ಸಹತೇಜನಾಗಿ ಲೋ
ಕತ್ರಯದೊಳ್ ತ್ರಿಲೋಚನನನಾದೊಡಮಂತವನೆಯ್ದೆ ಲೆಕ್ಕಿಸಂ ೧೪೫

ವ: ಮತ್ತಮಾಪುರಂ ಕಳಾಧರವಿರಾಜಿತಮಾಗಿಯುಂ ದೋಷೋಚ್ಚಯಮಲ್ತು ವಿಶಿಷ್ಟಲಕ್ಷ್ಮೀಸಮಾಲಕ್ಷಿತಮಾಗಿಯುಂ ಖರದಂಡಮಲ್ತು ವಿಸ್ತೃತಸೂತ್ರವಿಧಿ ಸನಾಥ

ಮಾಗಿಯುಂ ಮಹಾಭಾಷ್ಯಮಲ್ತು ಉಮಾಸಮುಪಗತಮಾಗಿಯುಮರ್ಧನಾರಿಯಲ್ತು ಪೀತಾಂಬರಧಾಮರಮಣೀಯಮಾಗಿಯುಂ ಗದಾಭಿಯುಕ್ತಮಲ್ತುಮಂತುಮಲ್ಲದೆಯುಂ

ಅಗಣಿತವಜ್ರಮುದ್ರರಿನನೇಕಸಪುಣ್ಯ ಜನಂಗಳಿಂ ಪ್ರಸಿ
ದ್ಧಿಗೆ ನೆಲೆಯಾಗಿ ತೋರ್ಪನೆಗೆ ತಾಂ ಗಡ ಪಾಸಟಿಯೊರ್ವನೊರ್ವನಿಂ
ಸೊಗಯಿಪ ಶಕ್ರಪತ್ತನಕಮೆಂದದುವಂ ನಗುವಂತಿರೊಪ್ಪುಗುಂ
ಮಿಗೆ ನಿಜಚಂದ್ರಕಾಂತಗೃಹಸಂತತಿ ಕಾಂತಿಗಳಿಂದೆ ತತ್ಪುರಂ ೧೪೬

ಸುರತತಿ ಸಂತತಂ ಬಿಡದೆ ಕಣ್ಣೆಮೆಯಿಕ್ಕದೆ ನೋಡುತಿರ್ದ ದು
ರ್ಧರತರದೃಷ್ಟಿದೋಷಪರಿಹಾರನಿಮಿತ್ತಕಮಾಗಿ ರಾತ್ರಿಸೌಂ
ದರಿ ಪಿಡಿದೆತ್ತುವಾರತಿಯ ಬೆಳ್ಳಿಯ ಭಾಜನಮೆಂಬವೊಲ್ ಮಹಾ
ಪುರಮನನೂನಮಂ ಬಳಸುತಿರ್ಪುದು ಪೂರ್ಣಸುಧಾಂಶುಮಂಡಲಂ ೧೪೭

ವ: ಅಂತು ಛಂದೋವಿದ್ಯೆಯಂತೆ ನಾನಾ ಛಂದಂಬಡೆದು ರಂಜಿಸುವ ತತ್ಪುರದ ಮಧ್ಯಕ್ಕಳಂಕಾರಮೆನಿಸಿ

ಖರಕರನ ಕುದುರೆಗಳ್ಗ
ಮ್ಮರದೂರ್ವಾಂಕುರದ ಶಂಕೆಯಂ ಮಾಡುತ್ತುಂ
ಹರಿನೀಲರಚಿತ ಸಾಲಂ
ನರನಾಥನ ಚಾರುಗೇಹಮಂ ಬಳಸಿರ್ಕುಂ ೧೪೮

ವ: ಅದಜಿ ನಾನಾಪ್ರಕಾರ ಸೂತ್ನರತ್ನಖಚಿತಂಗಳಪ್ಪ ತೋರಣಂಗಳಿಂ ಪೇಶಲಮಾದ ಪ್ರಥಮದ್ವಾರಪ್ರದೇಶದೊಳ್

ಪಾಗುಡಮಾಗಿ ಬಂದು ಸಮಯೋಚಿತಮಂ ಸಲೆಸಾರ್ದು ಪಾರ್ದು ಮುಂ
ಬಾಗಿಲೊಳಿರ್ದ ಗಂಧಗಜದಾನಜಲಂಗಳಿನಾದ ಪಂಕದೊಳ್
ವೇಗಿಗಳಪ್ಪ ವಾಜಿಗಳ ಫೇನಲವಂಗಳವಲ್ಲಿಗಿಲ್ಲಿಗಿಂ
ಬಾಗಿಯೆ ಬೀಳೆ ಪೋಲ್ತುದದು ಪಂಕದೊಳಿಕ್ಕಿದ ರಂಗವಾಲಿಯಂ ೧೪೯

ವ: ಮತ್ತಮಲ್ಲಿಂದೊಳಗೆ

ಆನೆಗಳ ಸಾಲೆಗಳ್ ಪರ
ಮಾನಂದಮನೆಯ್ದೆ ಮಾಳ್ಪುವಖಿಳಜನಕ್ಕಂ
ದಾನ ಪರಿಮಳವಿಲೋಭನಿ
ಲೀನಾಳಿಕುಳಪ್ರಣಾದದಿಂ ಮುಖರಂಗಳ್ ೧೫೦

ಹಯಮಂದಿರಂಗಳೆಲ್ಲರ
ನಯನಂಗಳ್ಗೀವುತಿರ್ಪುವತಿಶಯಮಮಂ ತ
ಮ್ಮಯ ರತ್ನಕಳಶಕಿರಣೋ
ಚ್ಚಯದೊಳ್ ತೇಂಕಾಡುತಿರ್ದವೆಂಬಂತೆವೊಲಂ ೧೫೧

ಯಮನ ನಾಲಗೆಯ ತೆಱದಿಂ
ದಮಿತ ಭಯಂಕರ ಸುತೀಕ್ಷ್ಣ ಶಸ್ತ್ರಂಗಳಿನಾ
ದಮೆ ನಿಚಿತಮಾದ ಶಾಲಾ
ಸಮುದಯಮನಿಶಂ ಬೆಡಂಗನವಗಯಿಸಿರ್ಕುಂ ೧೫೨

ನಿರುಪಮರತ್ನನಿರ್ಮಿತವಿಶಾಲಸಭಾಸದನಂ ನಿಜಪ್ರಭಾ
ಪರಿಕರವಾರಿಯೊಳ್ ವಿಕಸದಂಬುಜಮೆಂಬಿನಮೆಯ್ದೆ ಲಕ್ಷ್ಮಿಯಂ
ಧರಿಸಿ ವಿರಾಜಿಕುಂ ಸುಕವಿರಾಜವಿನೋದವಿಲಾಲಿತಂ ನಿರಂ
ತರಿತವಿಚಿತ್ರಪತ್ರರಮಣೀಯಮನೂನಮಧುವ್ರತಾನ್ವಿತಂ ೧೫೩

ವ: ಮತ್ತಮಲ್ಲಿಂದೊಳಗೆ

ಅಡಿಕಿಲ್ಗೊಂಡೊಪ್ಪುವೇಳುಂನೆಲೆಗಳ ಮಣಿಮಾಡಂಗಳಿಂದಂ ವಿಚಿತ್ರಂ
ಬಡೆದಿರ್ದುತ್ತುಂಗಕೂಟಂಗಳಿನತುಳಮಹಾಕಾಂತಿಯಿಂ ಗಾಡಿಯಿಂ ನೂ
ರ್ಮಡಿ ಮಾಳ್ಕೊಳ್ಪದ್ಮರಾಗಪ್ರಘಟಿತ ಕಳಶೌಘಂಗಳಿಂ ಕೌತುಕಕ್ಕಂ
ದೆಡೆಯಾಯ್ತೆಯ್ದುದ್ಧುರಾಜಾಲಯಮಖಿಳನುತಂ ಸಪ್ತಕಕ್ಷಾಸಮೇತಂ ೧೫೪

ಉದಿತದಿನೇಶನೆಂಬ ಮಣಿಕಂದುಕಮಂ ಧರೆಯೆಂಬ ಕಾಂತೆ ತ
ನ್ನುದಯಗಿರೀಂದ್ರಮೆಂಬ ಕರದಿಂದಮೆ ಹಾಕಿ ತದಸ್ತಶೈಲಮೆಂ
ಬೊದವಿದ ಹಸ್ತದಿಂದೆ ಪಿಡಿವಲ್ಲಿ ಪುರಾಂಗನೆ ಮಧ್ಯದೊಳ್ ವಿ
ನೋದದೆ ಪಿಡಿಯಲ್ಕದಂ ಕರಮನೆತ್ತಿದವೊಲ್ ಮೆಱೆಗುಂ ನೃಪಾಲಯಂ ೧೫೫

ಕಡಪದ ಕಂಡರಣೆಯ ಬೇ
ಗಡವೆಸದ ವಿಚಿತ್ರಮಪ್ಪ ಕೆಲಸದ ಗತಿಯಂ
ನಡೆನೋಡಿ ಚತುರ್ಮುಖನುಂ
ಬಿಡದೆ ಕರಾಂಗುಳಿಯನೆಯ್ದೆ ತೂಗದೆ ಮಾಣಂ ೧೫೬

ಒಸರ್ವ ಸುಧಾಂಶುಕಾಂತಮಯಕೂಟದೊಳಂ ಪ್ರತಿಬಿಂಬರೂಪದಿಂ
ಶಶಧರಬಿಂಬಮೊಪ್ಪುತ್ತಿರಲಲ್ಲಿಯ ಕಾಂತೆಯರಾಸ್ಯಶೋಭೆಯಂ
ಮಿಸುಗದೆ ಕಳ್ದೊಡಾ ಧರಣಿಪಂ ಸೆಱೆಯಿಕ್ಕಿರಲಾಗಳುಬ್ಬೆಗಂ
ಮಸಗಿಯಳುತ್ತಮಿರ್ದ ತೆಱದಿಂದದು ಕಣ್ಗೊಳಿಕುಂ ಜನಂಗಳಂ ೧೫೭

ಮಣಿಶಿಖರಂಗಳಿಂ ಬಗೆವೊಡನ್ನವೊಲೊಪ್ಪಮನಾಂತುದೆಂಬ ತ
ತ್ತ್ರಿಣಯದಿನಾ ನೃಪಾಲಯಮನೀಕ್ಷಿಸಲೆಂದು ಸುರಾದ್ರಿ ಬಂದು ತಾ
ನೆಣಕೆಗತೀತಮಾದ ವರರೂಪಮುಮಂ ಧರಿಸಿರ್ದುದೆಂಬಿನಂ
ಪ್ರಣುತೆಯರಪ್ಪ ರಾಣಿಯರ ಗೇಹಚಯಂ ಬಳಸಿರ್ದುದಂತದಂ ೧೫೮

ನೆಲೆಮಾಡಂಗಳ ಚೂಳಿಕಾಗ್ರಮನಡರ್ದೇಱಿರ್ದ ಕಾಂತಾಸ್ಯಮಂ
ಡಳಮಂ ನೋಡಿ ಸಮಾನಮಾಗದೆ ಕರಂ ನಾಣ್ಚಿರ್ದವೊಲ್ ಮೇಘಸಂ
ಕುಳಮಂ ತಾಂ ಮಱೆಗೊಂಡು ಸಂಕುಚಿತ ವಿಸ್ತಾರಾಂಶುಕಂ ಕಂದನೆ
ಯ್ದೊಳಕೊಂಡಿರ್ದ ಸುಧಾಕರಂ ಕೆಳಗೆ ಪೋಪಂ ಪ್ರೋಚ್ಚಸೌಧಂಗಳಾ ೧೫೯

ಮರಕತಗೇಹಭಿತ್ತಿಗಳ ಕಾಂತಿಗಳಿಂ ಪುದಿದಿರ್ದ ಪಿತ್ತಿಲೊಳ್
ಕರಮೆಸೆದಿರ್ದ ಭಾವಿಗಳ ಪಕ್ಕದೊಳಿರ್ಪ ರಥಾಂಗಯುಗ್ಮಮ
ಲ್ಲಿರುಳಿನ ಶಂಕೆಯಿಂ ಪಗಲೊಳಾದೊಡಮೆಯ್ದೆ ವಿಯೋಗದುಃಖದೊಳ್
ಪೊರೆದೊದಱುತ್ತುಮಿರ್ಪುವು ವಿಭಿನ್ನತಟಾಶ್ರಯಮಾಗಿ ನಾಡೆಯುಂ ೧೬೦

ಗರುಡೋದ್ಗಾರದ ಪಚ್ಚೆಯ
ಕಿರಣದೊಳೆಳವುಲ್ಲ ಶಂಕೆಯಿಂ ಸ್ಫಟಿಕಾಂಶೂ
ತ್ಕರದೊಳ್ ಜಳಶಂಕೆಯಿನಾ
ದರದಿಂ ಮೊಗಮಿಡುವವಲ್ಲಿ ಮೃಗಶಾಬಂಗಳ್ ೧೬೧

ವ: ಮತ್ತಮಾ ನಿರುಪಮರೂಪೆಯರಪ್ಪರಸಿಯರನೋಲಯಿಸಲೆಂದು ಬಂದು ಕಿಱಿದುಂಪೊಳ್ತು
ಸೇವಾವಿನೋದದೊಳಿರ್ದು ಬಳಿಯಂ ಕಳುಹಿಸಿಕೊಂಡು

ಅರುಣಿತ ಮೃದುಪಾದನ್ಯಾಸರಕ್ತೀಭರದ್ಭಾ
ಸುರಹಿಮಕರ ಕಾಂತಗ್ರಾವ ರಾಜಾಂಗಣಂ ರು
ಕ್ಚರಿಪಿಹಿತನಖಾಹ್ವಾನೋತ್ಕಮೆಂಬಂತೆ ಕಾಲುಂ
ಗುರದಲಿ ರುತಿಯೊಪ್ಪೆ ಸ್ತ್ರೀಗಣಂ ಪೋಪುದಲ್ಲಿಂ ೧೬೨

ವ: ಮತ್ತಮಾ ರಾಜಭವನದೇಕಪ್ರದೇಶದೊಳ್

ಒಳಗಣ ಪೂಜಾರಚನಾ
ವಿಳಸನಮಂ ಪೊಱಗೆ ತೋಱಿಸುತ್ತಂ ಮೆಱೆಗುಂ
ಪಳಿಕಿನ ಶಿಲೆಯಿಂ ಮಾಡಿದ
ಥಳಥಳಿಪ ವಿಶಾಳಚಾರುದೇಹಾರಗೃಹಂ ೧೬೩

ವ: ಮತ್ತೊಂದೆಡೆಯೊಳ್

ನಾನಾಪ್ರಕಾರ ರತ್ನವಿ
ತಾನಂಗಳ ಬಹಳರಾಶಿಯಿಂ ತುಂಬಿ ಕರಂ
ಭೂನುತ ಭಂಡಾರಾಲಯ
ಮಾ ನರಪನಿವಾಸದಲ್ಲಿ ರಂಜಿಸುತಿರ್ಕುಂ ೧೬೪

ವ: ಅದಲ್ಲದೆಯುಂ

ಪಿರಿದುಂ ಪುಣ್ಯಸಮೃದ್ಧಿಭಾಜನಮಿದೆಂದೆನ್ನಲ್ಲಿಗೆಳ್ತಂದಪಂ
ಸುರರಾಜಾರ್ಚಿತನಪ್ಪ ಪಂಚದಶತೀರ್ಥಾಧೀಶ್ವರಂ ನಿನ್ನೊಳಾ
ದರಮಂ ಮಾಡದೆ ಪೋಪುದೆಂಬ ಮದದಿಂ ಸರ್ವಾರ್ಥಸಿದ್ಧಾಖ್ಯಮಂ
ದಿರಮಂ ಮೂದಲಿಪಂತೆ ಗೀತರವದಿಂದೊಪ್ಪಿತ್ತು ರಾಜಾಲಯಂ ೧೬೫

ಭೂರಿತರ ರತ್ನಕುಟ್ಟಿಮ
ಧಾರಿಣಿಯೊಳ್ ತಾರಕಾಳಿ ಬಿಂಬಿಸೆ ನಿಶಿಯೊಳ್
ಭೂರಮಣಿ ತನ್ನೃಪಾಲಯ
ಚಾರುತೆಯಂ ನೋಡಲೆಂದು ಕಣ್ದೋಱಿದ ವೊಲ್ ೧೬೬

ಧ್ವಜಪಟವೃಂದ ಪಲ್ಲವಿತಮೆಲ್ಲೆಡೆಯೊಳ್ ನೆಱೆಕೀಲಿಸಿರ್ದ ಪೀ
ನಜನಮನಃಪ್ರಮೋದಕರ ಮೌಕ್ತಿಕಪುಷ್ಪಿತಮುದ್ಘಚೋದ್ಯಭಾ
ವಜನನದಕ್ಷರತ್ನಕಳಶಾವಳಿ ಸತ್ಫಳಿತಂ ದಲಾಗಿ ಭೂ
ಮಿಜಮೆನೆ ರಾಜಗೇಹಮದು ಶೋಭೆಯನಾಂತೆಸೆಗುಂ ನಿರಂತರಂ ೧೬೭

ಅದಱೊಳ್ ಸಾಮ್ರಾಜ್ಯಲೀಲಾಮುದಿತಹೃದಯನಿರ್ಪಾ ಮಹೀವಲ್ಲಭಂ ಸಂ
ವಿದಿತಾನೇಕಾಂತತತ್ತ್ವಂ ರಿಪುಕುಳಕುಧರಸ್ಫೋಟವಜ್ರಾಯುಧಂ ದಿ
ಕ್ಪದರಾಜತ್ಕೀರ್ತಿಕಂ ಬಾಹುಬಲಿಸುಕವಿರಾಜಂ ಸಮಸ್ತಾಭಿವಾಂಛಾ
ಪ್ರದಕಲ್ಪಕ್ಷ್ಮಾರುಹಂ ಭೂಪತಿವಿನತಪದಂ ಚಾತುರೀಜನ್ಮಗೇಹಂ ೧೬೮

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮಜಿನ ಸಮಯ ಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿದೇವ ಪ್ರಸಾದ ಸಂಪಾದಪಾದನಿಧಾನದೀಪವರ್ತಿಯುಭಯಭಾಷಾಕವಿಚಕ್ರವರ್ತಿ ಬಾಹುಬಲಿ ಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಕಥಾವತರಣವರ್ಣನಂ ಪ್ರಥಮಾಶ್ವಾಸಂ.

ದ್ವಿತೀಯಾಶ್ವಾಸಂ

ಶ್ರೀ ನೆಲಸೆ ವಕ್ಷದೊಳ್ ವಾ
ಕ್ಶ್ರೀ ನೆಲಸೆ ನಿಜಪ್ರಸನ್ನ ಮುಖದೊಳ್ ವಿಜಯ
ಶ್ರೀ ನೆಲಸೆ ಭುಜದೊಳೊಪ್ಪಿದ
ನಾ ನರಪಂ ಸರಸಚತುರಕವಿಕುಲತಿಳಕಂ ೧

ಭೂನುತನಾ ನೃಪತಿ ಮಹಾ
ಸೇನಮಹಾರಾಜನೆಂಬ ಪೆಸರಂ ತಳೆದಂ
ಹೀನತರೇಕ್ಷ್ವಾಕುಕುಲಾಂ
ಭೋನಿಧಿ ಶಾರದನಿಶಾಕರಪ್ರತಿಮಾನಂ ೨

ಆತನ ರೂಪಮೆಂಬುರುಸುಧಾರಸಮಂ ನಯನಂಗಳೆಂಬ ಸ
ತ್ಪಾತ್ರೆಗಳಲ್ಲಿ ಕಾಮಿನಿಯರಾತುರದಿಂ ಕುಡಿದಂತರಂಗದೊಳ್
ನೂತನಮಾಗಿ ತೀವಿದೊಡಮುಣ್ಮುವ ತಣ್ಪಮರೊಂದು ದಂಭದಿಂ
ದಾತತಮಾಗಿ ತಾಂ ಪೊಱಗೆ ಪೊಣ್ಮಿದುದೆಂಬಿನಮೊಪ್ಪಿ ತೋಱುಗುಂ ೩

ವ: ಆ ಮಹೀಪಾಳಮೌಳಿಮಾಳಾಮಾಣಿಕ್ಯಮಯೂಖಪಟಳಿಕಾಜಟಿಳಿತ ಚರಣ ನಖಕಿರಣನ ಹಳಕುಳಿಶಕಳಶನಳಿನಾದ್ಯಕ್ಷೂಣಲಕ್ಷಣಪರಿಲಕ್ಷಿತಮಾಗಿ ಮಾಕಂದದ ಕೆಂದಳಿರಂದದಿಂ ಮೇದುರಮಾದ ಪಾದಪಲ್ಲವಂಗಳುಂ ಸುವೃತ್ತಂಗಳಾಗಿ ಮನೋಹರಂಗಳಾದ ಜಂಘಂಗಳುಂ ದೇಹಗೇಹಕ್ಕಾಧಾರಮಾಗಿ ಸಮುತ್ತಂಭಿತಂಗಳಾದ ಶಾತಕುಂಭ ಮಯಸ್ತಂಭಸನ್ನಿಭಂಗಳಾಗಿರ್ದೂರುಗಳುಂ ಸಿಂಹದ ಕಟಿಯಮತೆ [ಬರ್ಹಿ] ಮಾತ್ರಾಂತಂಗಳಾಗಿ ಬಟ್ಟಿದುವಾದ ಕಟಿತಟಂಗಳುಂ ಸಮುಲ್ಲಸಲ್ಲೋಮಮಂಜರಿ ಪರಿರಂಜಿತಮಾಗಿ ವೃತ್ತಾಯತಮಾದ ಮಧ್ಯ ಪ್ರದೇಶಮುಂ ವಿಶಿಷ್ಟಸಾಮ್ರಾಜ್ಯಲಕ್ಷ್ಮೀ ಭುಜಲತಾಸಮಾಲಿಂಗನ ಕೇಣೀಕೃತಮಾದ ವಿಶಾಲವಕ್ಷಸ್ಥಳಮುಂ ಚಿರಕಾಲೋ ದ್ವಹನದಿಂ ಕೊರಲ್ ಕುಸಿದು ಪರಿಶ್ರಾಂತಧರಣೇಂದ್ರಪರಿಸ್ರಮಪರಿಹರಣಾರ್ಥಮಾಗಿ ಧರಣೀಭಾರಪರಿಭರಣ ನಿರ್ಯುಕ್ತಂಗಳಾದ ಪ್ರಚಂಡದೋರ್ದಂಡಕಾಂಡಂಗಳುಂ ಗವೇಂದ್ರ ಕಂದರದಂತೆ ನಿಸ್ಥೂಲಾಕಾರದಿಂದೊಪ್ಪಂಬೆತ್ತಿರ್ದ ರೇಖಾತ್ರಯಾಂಕಿತ

ಕಂಠಕಂದಳಮುಂ ಸಮಸ್ತನರನಾರೀಜನನಯನಮನೋಮಧುಕರನಿಕರಕ್ಕನಣುವಾಗಿ ತಣಿವನೀವ ಸ್ಮೇರ ಚಾರುಮುಖಕಮಳಮುಂ ಕಾಳಿಂದೀನದೀರಂಗತ್ತರಂಗಭಂಗಿಯಂತೆ ಭಂಗುರಮಾಗಿ ಸ್ನಿಗ್ಧ ಮುಗ್ಧಮಾದ ಕುಂತಳಕಳಾಪಮುಮತ್ಯಂತರಮಣೀಯಮಾಗಿರ್ಪುದಂತುಮಲ್ಲದೆಯುಂ

ಆ ಕಾಮದೇವನೀ ಭೂ
ಲೋಕದೊಳಸಮಾನಮಪ್ಪ ನೃಪರೂಪಂ ಕಂ
ಡಾಕಳಿತಾಶ್ಚರ್ಯರಸೋ
ದ್ರೇಕಭರಂ ತಲೆಯನೆಯ್ದೆ ತೂಗದೆ ಮಾಣಂ ೪

ಅಱುವತ್ತುನಾಲ್ಕುಕಲೆಗಳ್
ಮೆಱೆದವು ತದ್ಭೂಪನಲ್ಲಿ ತಮ್ಮತಿಶಯಮಂ
ನೆಱೆ ನೋಳ್ಪ ವಾಂಛೆಯಿಂದಂ
ತಱಿಸಂದೊಂದೆಡೆಯೊಳೆಯ್ದೆ ಕೂಡಿದ ತೆಱದಿಂ ೫

ಶ್ರುತವಾರ್ಧಿವಿಧುವೆನಿಪ್ಪಾ
ಕ್ಷಿತಿಪನ ದೆಸೆಯಿಂ ಪರಾಭವಂ ಬಂದಪುದೆಂ
ದತಿಶಯಪಠನಾರ್ಥಂ ಭಾ
ರತಿ ಪುಸ್ತಕಮಂ ಕರಾಗ್ರದಿಂ ಬಿಡಳಿನ್ನುಂ ೬

ಅತಿನಿಶ್ಚಳಮಾಗಿಯುಮಾ
ಕ್ಷಿತಿಪನ ಗುಣಗಣಮುಮಖಿಳಜನಚಿತ್ತದೊಳು
ನ್ನತಮಾಗಿ ವರ್ತಿಸುತ್ತಿ
ರ್ಪತಿಶಯಮಂ ತಳೆದು ಮಾಳ್ಪುದದು ವಿಸ್ಮಯಮಂ ೭

ದಾನಗುಣಪ್ರಿಯನಪ್ಪಾ
ಭೂನಾಥಂ ಲಕ್ಷಸಂಖ್ಯೆಯಿಂ ನುಡಿದೊಡಮಿಂ
ತೀ ನೆಲನೆಲ್ಲಂ ಪೊಗಳ್ವುದು
ಮಾನಿತಮಿತಭಾಷಿಯೆಂದು ಭರದಿಂದವನಂ ೮

ಆತನ ಕೀರ್ತಿಯೆಂಬಮೃತವಾರಿಧಿ ಪತ್ತುದಿಗಂತರಾಳದೊಳ್
ನೂತನಮಾಗಿ ಪೆರ್ಚಿದೊಡೆ ಪುಟ್ಟಿದುವಾಗಸದಲ್ಲಿಯಬ್ಜ ಹಂ
ಸಾತತ ಮೀನ ಕರ್ಕಟಕ ಸನ್ಮಕರಂಗಳದಲ್ಲದಂದು ಮ
ತ್ತೇತೆಱದೀ ಜಲೋದ್ಭವಿಗಳಾ ಸ್ಥಳವಾಸಿಗಳಾದಕಾರಣಂ ೯

ಕಿನ್ನರದೇವದಂಪತಿಗಳಾ ನರನಾಥನ ಬೀರದೇಳ್ಗೆಯುಂ
ಸನ್ನುತಮಾಗಿ ಪಾಡುತಿರಲಾದರದಿಂದಮ ಕೇಳ್ದು ಪೊತ್ತಿನೊಳ್
ಸ್ವರ್ಣಿಳಯಾಧಿಪಂ ಬಿಡದೆ ಮುಟ್ಟೆ ಕರಾಂಗುಳಿಜಾಳನಂಗೆಯು
ಲ್ಯುನ್ನತಮಾಗ ಕಂಠನಾಯ್ಗತ್ತುತಿ ಸಿದ್ಧಿಮಾಗಿ ಮಾಡುವಂ ೧೦

ಆ ನರನಾಥನುನ್ನತರತೀವದ ಬೆಂಕೆ ಬಿನಾಕಬಿಂಬವ್ರಪ
ಸ್ಥಾನಸಪ್ತಾತ್ಮ ಕಿವ್ರಪವಮಾದುತನಿಂ ಬಿಗಿಲಾಗಿ ಪೈರಿಸಂ
ತಾನದನಲ್ಲುಮಪ್ಪ ಕಟಕಂ ಬಗತೀವಟದೊಳ್ ಪ್ರವಾಪಮಂ
ಹೀನಮೆನಲ್ಕೆ ತಾಳ್ದಿ ಪರಿವರ್ತಿಸುತಿಪ್ಪುದುದಾವಕಾಲಮುಂ ೧೧

ಸುರತಾರ್ಥಿಗಳಪ್ಪಂಗಳ
ನಿರದಷ್ಟಿದೊಡಂ ಕೃಪಾಗಾರಮಾಗಿಯುನಾತಂ
ಭರದಿಂ ಪಾಣಿಗ್ರಹಣೋ
ದ್ಧುರಯೋಗ್ಯಕನಿಷ್ಟು ಮಾಡಿ ಕರಮೊಸವಿರ್ಪಂ ೧೨

ಪಿರಿದುಂ ತೀವಷ್ಟಿ ತೀವಾಪ್ತಸರಮನಿರದಂತೆಲ್ಲಮಂ ಮುಟ್ಟಿ ಕಾಂತ್ಯು
ತ್ತರಮೆಂಬೀ ಬಿಂಬವಾದಂ ಕಱೆದು ನಿವಹಮಂ ತಾಳ್ದಿ ಕಾಗ್ರಾಲದೊಳ್ ಬಿ
ತ್ತರಿಸಿರ್ದೀ ಮೇಘಮೆಂಬಂತುದಯಿಸೆ ನೃಪಬಿಲ್ಲಂ ಮಹಾತೀಕ್ಷ್ಣಧಾರಾ
ಪರಿಪಾತತ್ರಾಸದಿಂದೋಡಿದರತಿಪವದಿಂ ರಾಜಹಂಸರ್ ನಿತಾಂತಂ ೧೩

ಆತನ ಬಿಳ್ಪೆಂಬ ಬಿಳಿದಾಹ ಸಮುದ್ಧತರಾಪರಂ ಕಳಾ
ಖ್ಯಾತರೆನಿಪ್ಪರಂ ಪಿಡಿದು ಸಂಗಿದೊಡಂತವರೆಯ್ದೆ ಧಾತ್ರಿಯೊಳ್
ನೂತನಮಾಗಿ ಮುಕ್ಕ ನಿಬಿಳಾಸ್ತ್ರಮುಮಂ ದ್ವಿಜರಾಜಗಿತ್ತು ತ
ಮ್ಮಾತತಮಪ್ಪ ಬಾಗಮನಿಳಾತಳದೊಳ್ ಮೆಱೆದರ್ ನಿರಂತರಂ ೧೪

ತಂತ್ರಯುತರಾದೊಡಂ ನಿಜ
ಮಂತ್ರಿಗಳಾ ನೃಪನ ಬಿಳ್ಪುಬಗನ ವಿಷಮಂ
ಸಂತೈಸಲಾಱರೆಂದರಿ
ಸಂತತಿಗಳ್ ಬಿರದೊಳಾಂತರಾತನ ಪದಮಂ ೧೫

ದಿಕ್ಕುಗಳೆಲ್ಲಮಂ ನೆಱೆಯೆ ಸಾಧಿಸಿ ಕಪ್ಪಮನಾಯ್ದು ಕೊಂಬೆನೆಂ
ದುಕ್ಕೆವದಿಂದೆ ಪೋಪ ನರನಾಥನ ಸೇನೆಯ ಘಾಟಿಘಾಟಿಭಾ
ರಕ್ಕೆ ಧರಾತಳಂ ಕುಸಿದು ಪೊತ್ತ ಫಣೀಶ್ವರಮೌಳಿಯೊಳ್ ಕರಂ
ಚಿಕ್ಕನೆ ಕೀಲಿಸಲ್ ಕಳೆಯಲಾಱದವಂ ತಳೆದಿರ್ಪನೀಗಳುಂ ೧೬

ಸೇನೆಯ ಭಾರದಿಂ ಧರಣಿಮಂಡಳ ಕಂಪಿಸುವಂತೆ ಪೋಗುತಿ
ರ್ದಾ ನರನಾಯಕಂಗಗಿದು ಜಂಗಮಭೂಧರವೃಂದಮೊಂದೆ ಕಂ
ಪೋನ್ನತಮಾದುದಿಲ್ಲ ತದರಿಪ್ರಜರಕ್ಷಣಮೆಂಬ ದೋಷದಿಂ
ತಾನಿರದಂಜಿದಂತೆ ನಡುಗಿತ್ತು ಕರಂ ಸ್ಥಿರಭೂಧರಾಳಿಯುಂ ೧೭

ದಂತಿವ್ರಜದಿಂದಂ ದ್ವಿಜ
ಸಂತತಿಯಿಂ ಖಳ್ಗಿವೃಂದದಿಂ ಹರಿಗಳನಾ
ದಂ ತುಂಬಿರ್ಪುದು ತನ್ನಹಿ
ಕಾಂತನ ಬಂಧುಗಳ ವೈರಿವರ್ಗದ ದುರ್ಗಂ ೧೮

ಆತನ ವೇಳೆಗೆ ಸಂದರ್
ಭೂತಳದೊಳ್ ಕೆಲಬರರಿಗಳದನೊಲ್ಲದವರ್
ಮಾತೇಂ ಮತ್ತೆ ಕೆಲಂಬರ್
ಭೀತಾತ್ಮಕರಂಬುನಿಧಿಯ ವೇಳೆಗೆ ಸಂದರ್ ೧೯

ಧುರದೊಳಿವರೆನಗೆ ಮುನ್ನಂ
ಭರದಿಂ ಬೆಂಗೊಟ್ಟರೀಗಳೆಲ್ಲಿಂ ಬಂದೆ
ತ್ತಿರದೆಂದು ನೋಳ್ಪ ತೆಱದಿಂ
ದರಸಂ ನತರಾದ ಪಗೆಗಳಂ ಮುಟ್ಟಿರ್ದಂ ೨೦

ಧಾಳಿಯನಿಟ್ಟರಿಧಾತ್ರೀ
ಪಾಳರ ಸಂಪತ್ತಿಯೆಲ್ಲಮಂ ತಂದೊಡೆ ಭೂ
ಪಾಳಂ ಕೊಳ್ಳದೆ ಭಟ್ಟ
ರ್ಗೋಲಯಿಸುವವರ್ಗೆ ಕೊಟ್ಟು ಮೆಱೆದಂ ಗುಣಮಂ ೨೧

ಆ ರಾಜನ ಜನಲಾಲಿತ
ಚಾರುಯಶಃಪೂರ್ಣಚಂದ್ರಮಂಡಳದೊಳ್ ತ
ದ್ವೈರಿಗಳ ದುರ್ಯಶಂ ಪರಿ
ರಾರಾಜಿಸುಗುಂ ಕಳಂಕಮೆಂಬಂತೆ ವಲಂ ೨೨

ಪರದಾರಮುಕ್ತನಾಗಿಯು
ಮಿರೆಯೊಳ್ ಪರದಾರಸಕ್ತನಾ ನರಪಾಳಂ
ಪರಿಕಿಪೊಡೆ ಮಾನ್ಯನಾಗಿಯು
ಮುರುತರಜನಮಾನ್ಯನಾದನಿದು ಚಿತ್ರತರಂ ೨೩

ವ: ಮತ್ತಮಾ ನರೋತ್ತಮಂ ವಿಬುಧಪತಿಯಾಗಿಯುಂ ಗೋತ್ರವಿರೋಧಿಯಲ್ತು ಜಾತವೇದನಾಗಿಯುಂ ಸಮಾಶ್ರಿತಸಂತಪನೀಯದಾಯಿಯಲ್ತು ಧರ್ಮ ರಾಜನಾಗಿಯುಂ ಜಗತ್ಸಂಹಾರಕಾರಿಯಲ್ತು ಪುಣ್ಯಜನನಾಗಿಯುಂ ಕ್ರವ್ಯಾಹಾರಿಯಲ್ತು ಪ್ರಚೇತನಾಗಿಯುಂ ವಾರುಣೀಕೃತರತಿಯಲ್ತು ಜಗತ್ಪ್ರಾಣನಾಗಿಯುಂ ಪರಿಧೃತಕು ಜಾತಿಯಲ್ತು ಧನಾಧಿಪತಿಯಾಗಿಯುಂ ಸಮುಪಾತ್ತವೈಶ್ರವಣಾಖ್ಯಾತಿಯಲ್ತು ಶಂಕರ ನಾಗಿಯುಂ ಪಿಷಾದಿಯಲ್ತು ಅಹಿಜನಾಗಿಯುಂ ಪ್ರಭಂಜನಸೇವಿಯಲ್ತು ಕಲಾನಿಧಿ ಯಾಗಿಯುಂ ಶೀತಕರನಲ್ತುಮಿಂತು ನಿರ್ದೋಷದಿಕ್ಪಾಲಕನಾಗಿಯುಂ ಅರಿಷಡ್ವರ್ಗಮಂ ನಿರಾಕರಿಸಿ ತ್ರಿವರ್ಗ ಸಂಪಾದಕನಾದಂ ಶಲ್ಯತ್ರಯಂಗಳಂ ಪರಿಹರಿಸಿದ ಶಕ್ತಿತ್ರಯಾಕ್ರಾಂತ ನಾದಂ ದುರ್ವಿನೀತ ರಾಜ್ಯಕಂಟಕರಂ ವಿಸರ್ಜಿಸಿ ನಾನಾವಿಧ ರಾಜನೀತಿ ವಿರಾಜಮಾನ ನಾದನಂತುಮಲ್ಲದೆಯುಂ

ಭೋಗೀಂದ್ರಾವೇಕ್ಷಿತಂ ಸಂಯುತ ಪರಮವೃಷಂ ಭೂರಿಭೂತಿಪ್ರಯುಕ್ತಂ
ಧೀಗಂಭೀರಂ ಕಳಾಸಂಕಳಿತನನುಪಮಂ ಸನ್ಮಹಾಸೇನಮಾನ್ಯಂ
ಭಾಗ್ಯಾಧಾರಂ ಶಿವಾಲಕ್ಷಿತನೆನಿಪ ಮಹೀಪಂ ಮಹಾದೇವನೆಂಬಂ
ತೀ ಗೋತ್ರಾಚಕ್ರದೊಳ್ ವಿಶ್ರುತನೆನಿಸಿದೊಡಂ ಕಾಮಸಂಹಾರಿಯಲ್ಲಂ ೨೪

ಕಮಲೋಲ್ಲಾಸನಿಬಂಧನಂ ಕರಪರಿವ್ಯಾಪ್ತಾವಿಲಾಶಂ ಬುಧ
ಪ್ರಮದೇಚ್ಛಾಪಟು ಕಾಶ್ಯಪೀಡಿತಗುಣಂ ಗಂಧರ್ವಸಂಸೇವಿತಂ
ದ್ಯುಮಣಿಪ್ರಾಭವನಾಗಿಯುಂ ಕುವಲಯಕ್ಕಾನಂದಮಂ ಮಾಳ್ಪ ಹೃ
ದ್ಗಮಮಪ್ಪದ್ಭುತಶಕ್ತಿಯಂ ತಳೆದನಾ ವಿಶ್ವಂಭರಾಧೀಶ್ವರಂ ೨೫

ಜ್ಞಾನವಿಶೇಷಮೆಂಬ ಕಿರಣಂಗಳನುಳ್ಳ ಜಿನೇಂದ್ರಚಂದ್ರನಂ
ತಾನತಿಭಕ್ತಿಯಿಂದಿರದೆ ತಾಳ್ದಿದ ಕಾರಣಮಾ ಮಹೀಪಸ
ನ್ಮಾನಸದಲ್ಲಿ ಪೊರ್ದದು ತಮಂ ಕಿಱಿದಾದೊಡಮಂತಗುರ್ವುಮುಂ
ಪೀನಧನಾಢ್ಯರಪ್ಪ ನಿಜಕಿಂಕರರೊಳ್ ಮಡಗಿಟ್ಟನೆಂಬಿನಂ ೨೬

ಉದಯಾಸ್ತಾದ್ರಿಗಳೆಂಬ ಪೀವರಕುಚಾಭೋಗಂಗಳಿಂ ಚಾರುತಾ
ಸ್ಪದಮಾಗಿರ್ದ ತರಂಗಿತಾಂಬುನಿಧಿಯೆಂಬುದ್ದಾಮಸದ್ವಸ್ತ್ರಮಂ
ಪದಪಿಂದುಟ್ಟು ಧರಿತ್ರಿಯೆಂಬ ರಮಣೀಯ ಸ್ತ್ರೀಯ ಚಾರೂರುದೇ
ಶದೊಳೊಯ್ಯಿಟ್ಟ ಸುರಮ್ಯಮಪ್ಪ ಕರಮಂ ತಾಳ್ದಂ ನೃಪಂ ಭೋಗಮಂ ೨೭

ಪರಬಲಸಂಹಾರಕನು
ದ್ಧುರ ಭಾಸ್ವದ್ವಜ್ರಮುದ್ರಕಂ ಸ್ವಸ್ಥಂ ಧೀ
ಸ್ಫುರಿತ ಗುರುಪ್ರಿಯನಪ್ಪಾ
ನರನಾಯಕನಿಂದ್ರನಂತಿರೊಪ್ಪಂಬಡೆದಂ ೨೮

ವ: ಆ ಮನುಜಮನೋಜನೆನಿಪ ಮಹಾಸೇನ ಮಹಾರಾಜನ ಮನೋವಲ್ಲಭೆ

ವಿಶದಾಚಾರದೆ ಸುವ್ರತೆ
ಪೆಸರಿಂದಂ ಸುವ್ರತಾಮಹಾದೇವಿ ಕರಂ
ವಸುಮತಿಯೊಳ್ ತನ್ನಯ ಜಸ
ಮೆಸೆವಿನೆಗಂ ಪಡೆದಳಗ್ರಮಹಿಷೀಪದಮಂ ೨೯

ಶುಭಪರಮಾಣುರಾಶಿಯನಜಂ ನೆಱೆಕೊಂಡದಱಲ್ಲಿ ಚೋದ್ಯಮ
ಪ್ಪಭಿನವಘೂರ್ಣಿಭಾಗ್ಯದೊದವಂ ಚತುರತ್ವಮನುದ್ಧರೂಪಮಂ
ವಿಭವವಿಶೇಷಮಂ ಬಿಡದೆ ಪೆರ್ಚಿಸಿ ದೇವಿಯ ರೂಪವಿದ್ಧಮಂ
ಪ್ರಭವಿಸುವಲ್ಲಿ ಬಿಳ್ದ ಪರಮಾಣುಗಳಿಂ ಸಮೆದಂ ಸುಧಾಧಿಯಂ ೩೦

ಎತ್ತಾನುಮೊರ್ಮೆ ಬಿದಿ ಕುಶ
ಲತ್ವದೆ ನಿರ್ಮಿಸಿದನೆಂಬ ತೆಱದಿಂದಾ ವನಿ
ತೋತ್ತಮೆಯ ರೂಪು ಜಗದೊಳ್
ಬಿತ್ತರಿಸುತ್ತಿರ್ದುದಮಮ ಕೌತುಕಭರಮಂ ೩೧

ಕಾಮನ ವಿದ್ಯೆ ಕಾಮನಧಿದೇವತೆ ಕಾಮನ ಮಂತ್ರಶಕ್ತಿ ತ
ತ್ಕಾಮನ ಕೀರ್ತಿ ಕಾಮನ ಜಯಾಂಗನೆ ಕಾಮನ ವೀರಲಕ್ಷ್ಮಿಯೆಂ
ಬೀ ಮಹಿಮಪ್ರಭಾವದಿನಧಃಕರಿಪಳ್ ಮಹಿಳಾಸಮೂಹಚೂ
ಡಾಮಣಿ ಮೂಱುಲೋಕದೊಳಗುಳ್ಳ ವಿಳಾಸವತೀಜನಂಗಳಂ ೩೨

ಶಶಿಕಳೆಯೊಂದೆಯೆಂತು ಕುಮುದಾಳಿ ವಿಕಾಸಮನೆಯ್ದೆ ಮಾಳ್ಪುದಂ
ತಸಿಯಳ ಗಾಡಿಯೊಂದೆ ಜಗತೀಜನಲೋಚನಸಂಚಯಕ್ಕೆ ಸಂ
ತೊಸಮನೆ ಮಾಡಿ ರೂಢಿವಡೆದತ್ತು ದಲೆಂದೊಡೆ ಮತ್ತೆ ಬಣ್ಣಿಸಲ್
ವಸುಮತಿಯಲ್ಲಿ ಬಲ್ಲನವನಾವನೊ ದೇವಿಯ ಚಾರುರೂಪಮಂ ೩೩

ವ: ಅಂತುಮಲ್ಲದೆಯುಂ

ಅಂಬಿಕೆ ನಿನ್ನ ಚಾರುಮುಖಶೋಭೆಯನಿಸ್ತು ಜೆಕೇಳ್ದೊಡಾನಘಾ
ಲಂಬನನಪ್ಪೆನೆಂದು ತುಹಿನಾಂಶುಕುಟುಂಬಸಮೇತನಾಗಿ ಬಂ
ದಂಬುಜಪತ್ರನೇತ್ರೆಯ ಪದದ್ವಯಮಂ ನೆಱೆ ಮುಟ್ಟಿಕೊಂಡು ಮ
ತ್ತಂ ಬಿಡದಿರ್ದನೆಂಬ ತೆಱದಿಂ ಪದದೊಳ್ ನಖಪಂತಿ ರಂಜಿಕುಂ ೩೪

ಲೀಲೆಯೊಳೊಂದಿ ತೋರ್ಪ ಗತಿಮಾತ್ರದೊಳಂ ಸಲೆರಾಜಹಂಸ ಸ
ಮ್ಮೇಲನಮಂ ಕಱುತ್ತಿರದೆ ಗೆಲ್ದು ನಿಜಪ್ರಭೆಯಂ ನಿಮಿರ್ಚುತಿ

ರ್ದೀ ಲತಿಕಾ ತನೂಚರಣಮೆನ್ನುಮನಿನ್ನುಱೆ ಗೆಲ್ಗುಮೆಂಬ ಭೀ
ಕೀಲಿತಮಾದುದೆಂಬ ತೆಱದಿಂ ಬಿಡದಂಬುಜಮಂಬುದುರ್ಗಮಂ ೩೫

ಆಕೆಯ ಜಂಘಾಯುಗಳಮ
ವಾಕಳಿತಜಡೋರುಸಂಗಮಾದೊಡಮೆಂತುಂ
ಸ್ವೀಕೃತವಿಲೋಮಮಾದೊಡ
ಮೇಕಂ ಸದ್ವೃತ್ತಮಾದುದಿಂತಿದು ಚಿತ್ರಂ ೩೬

ಮನಸಿಜನೆಂಬ ಭೂಪನೊಸೆದಿರ್ಪ ವಿಲಾಸನಿವಾಸಮಿಂತಿದೆಂ
ದೆನಿಪ ತದಂಗಮೆಂಬ ಮನೆಗೆತ್ತಿದ ಲೋಚನಹಾರಿ ತಪ್ತವ
ತ್ಕನಕದ ಕಂಭಮೆಂಬ ತೆಱದಿಂ ನೆಱೆ ರಂಜಿಪುದಾ ಮಹೀಪ ಕಾ
ಮಿನಿಯ ವರೋರುಯುಗ್ಮಮನಿಶಂ ಸಮುಪಾತ್ತ ವಿಶಿಷ್ಟಶೋಭಕಂ ೩೭

ಅರಸಿಯ ನಿತಂಬಮಂಡಲ
ಮುರುಶೋಭಾಭಾರಮಂ ಸಮುದ್ಧಪಿಸಿ ಕರಂ
ಧರಿಯಿಸಿ ಸುವೃತ್ತಮಂ ವಿ
ಸ್ತರಿಸಿತ್ತದು ತನ್ನ ತಾಂ ಗುರುತ್ವದ ಪೆಂಪಂ ೩೮

ಪಿರಿದುಂ ಶೃಂಗಾರಮೆಂಬೀ ರಸಭರಿತಮಹಾನಾಭಿಕೂಪಾಂತರಾಳೋ
ದ್ಧುರಮಜ್ಜತ್ಕಾಮಮತ್ತದ್ವಿಪಕರಟತಟಸ್ಥಾನಮಂ ಬಿಟ್ಟು ಮೇಗ
ಣ್ಗೆಱದೇಱುತ್ತಿರ್ದ ಭೃಂಗಂಗಳ ಬಳಗಮಿದೆಂಬಂತಿರಾ ಸ್ತ್ರೀಯ ಚಾರೂ
ದರದೊಳ್ ಪುಟ್ಟಿರ್ದ ಚೆಲ್ವಂ ಪಡೆದುದು ಭರದಿಂ ರೋಮರಾಜಿಪ್ರಕಾಂಡಂ ೩೯

ಗುರುವಾಗಿರ್ದ ನಿತಂಬಮೊಂದೆಡೆಯೊಳೊಪ್ಪುತ್ತಿರ್ದುದಾದಂ ಸುವೃ
ತ್ತರಮಾಗಿರ್ದ ಕುಚದ್ವಯಂ ಬಗೆವೊಡಿತ್ತಲ್ ಪ್ರೋಚ್ಚಮಾಗಿರ್ದುದಾ
ನಿರದಿನ್ನೆಂತು ನಿಜೇಶನೊಳ್ ನೆರೆವೆನೆಂಬೀ ಚಿಂತೆಯಿಂದೆಂಬವೊಲ್
ಭರದಿಂದಂ ಬಡವಾದುದೆಯ್ದೆ ನಡು ತಾಂ ಭೂಪಾಲನರ್ಧಾಂಗಿಯಾ ೪೦

ಮೂಜಗದೊಳ್ ಕಳಾವತಿಯುಮೀಕೆಯ ಶೀಲಗುಣಪ್ರತಾನದಿಂ
ಪೂಜ್ಯಳುಮೀಕೆಯೀಕೆಯೇ ಮನೋಹರರೂಪಿನ ಸೀಮೆಯಾಗಿ ರಾ
ರಾಜಿಸುತಿರ್ಪಳೆಂದು ಬಿದಿಯಾಕೆಯ ಕುಕ್ಷಿಯೊಳೀ ತ್ರಿರೇಖೆಯಂ
ಯೋಜಿಸಿದಂತಿರಾಯತವಳಿತ್ರಯಮಾವರಿಸಿತ್ತು ಶೋಭೆಯಂ ೪೧

ಅರಸಿಯ ತೋರಮಾದ ಕಠಿನಸ್ತನಮಂಡಲಮಂಗಜಗೃಹಂ
ಪರಮವಿಳಾಸಮೆಂಬುರುಸುಧಾರಸಮಂ ನೆಱೆ ತುಂಬಿ ಬಯ್ಕೆಯಾ

ಗಿರಿಸಿದ ಹೇಮಕುಂಭದವೊಲೊಪ್ಪಮನಾಳ್ವುದದಂತುಮಲ್ಲದಂ
ದಿರದದನಂಟಿದಾಗಳೆ ಮನೋಜವಿಕಾರಮದೆಂತು ಪುಟ್ಟುಗುಂ ೪೨

ಆ ದೇವಿಯ ನಳಿತೋಳ್ಗಳ್
ಮೇದುರಮಾಗಿರ್ದ ಲತೆಯ ಕಾಂಡದ ತೆಱದಿಂ
ಮೇದಿನಿಯೊಳಮಮ ಚೆಲ್ವಿಂ
ಗಾದುದು ನೆಲೆ ತಾಳ್ದಿ ಕೋಮಳತ್ವದ ಪೆಂಪಂ ೪೩

ತಾವರೆಗಳ್ ತಾವರೆಗಳ್
ಭೂವಳಯದೊಳಾದುವಾ ಮಹಾದೇವಿಯ ಶೋ
ಭಾವಿಳಸುಹಸ್ತತಳಮಂ
ಭಾವಿಸಿ ನಡೆನೋಡಿ ನಾಣ್ಚಿದಂತೆ ನಿತಾಂತಂ ೪೪

ಮೂಱುಂ ರೇಖೆಗಳಿಂದಂ
ತೋಱಿಕೆಯಂ ಪಡೆದು ಸೊಗಸನೀವುತ್ತಿರ್ದಾ
ನೀಱೆಯ ಕೊರಳತಿಶಯಿತಂ
ಮಾಱುಂಗೊಂಡುದು ನೃಪಾಳತಿಳಕನ ಮನಮಂ ೪೫

ಎಂದುಂ ಕುಂದದ ಕಂದಿನೊಳ್ ಪೊರೆಯದಾ ತನ್ವಂಗಿಯಾಸ್ಯೇಂದುವಂ
ಚಂದ್ರಂ ನೋಡೆ ಸಮಾನಮಪ್ಪ ಬಗೆಯಿಂದಂ ತನ್ನ ರೂಪಂ ಸಮಂ
ತಂದಿಂತೊಟ್ಟು ಸಮಸ್ತ ವಿಸ್ತೃತ ಕಳಾನೀಕಂಗಳಿಂ ಪೂರ್ಣಮಾ
ಗಂದಂ ಕೈಮಿಗೆಮಾಡಿ ಮಾಡಿಯಳಿವುತ್ತಿರ್ಪಂ ನಭೋಭಾಗದೊಳ್ ೪೬

ಸರಸಿಜಪತ್ರನೇತ್ರೆಯ ನಿರಸ್ತಕಳಂಕಕಪೋಳಮಂಡಳಂ
ನಿರುಪಮಚಾರುಭೂರಿತರಕಾಂತಿಗಳಿಂ ಪೊಳೆಯುತ್ತುಮಿರ್ದು ಭಾ
ಸುರವಿಧುಬಿಂಬದಂತೆ ಚೆಲ್ವಾದೊಡಮಂದು ಕಳಂಕಲೇಖೆಯಿಂ
ದೆರಡಱ ಭೇದಮಂ ಬಿಡದೆ ನಿಶ್ಚಯಿಸಿರ್ಪುದು ತತ್ಪುರೀಜನಂ ೪೭

ಬಿಂಬದ ಪಕ್ವಮಾದ ಫಳಮೆಂಬಿನಮೀ ಜಗದಲ್ಲಿ ಚೆಲ್ವನಾ
ಲಂಬಿಸಿದತ್ತು ಮಾನಿನಿಯ ಸಾರಮೆನಿಪ್ಪಧರಂ ಮನೋಹರಂ
ತುಂಬಿ ಸುಧಾರಸಪ್ರಸರದಿಂದೆ ವಿರಾಜಿತಮಂತುಮಲ್ಲದಂ
ದಿಂಬಿನ ಪತ್ರವಲ್ಲಿ ನೆಱೆ ಗಲ್ಲದ ತಾಣದೊಳೆಂತು ಪುಟ್ಟುಗುಂ ೪೮

ಮೃದುಮಧುರಂ ಗಭೀರಮವಿಕಾರಯುತಂ ಬಿದಿ ಕೊಟ್ಟ ಶಾಸನಂ
ಸದಮಳಧರ್ಮಯುಕ್ತಮೆನಿಸಿರ್ದ ಸುನಾದೆಯ ವಾಗ್ವಿಳಾಸಮಂ

ಪದೆದಿರದೆಯ್ದು ಕೇಳ್ದು ಘನಲಜ್ಜೆಯನಾಂತವೊಲಂದು ಬೀಣೆಯಾ
ದುದು ಮರನಂತು ಕೋಗಿಲೆ ಕರಂ ಕರಿದಾದುದು ವಿಪ್ವಳೀಕೃತಂ ೪೯

ನಿಷ್ಪ್ರಸತಪ್ಪ ರತ್ನಚಯಮಂ ಪಿಡಿದಾಯ್ದು ಸುಧಾರಸಂಗಳಿಂ
ತೊಪ್ಪನೆ ತೊಯ್ದುವೊಲ್ ಪೊಳೆವ ಪಲ್ಗಳನಂದುಱ ತೂಗಲೆಂದು ಜಾ
ಣಪ್ಪಿ ವಿರಿಂಚಿ ಮಾಡಿದ ಸುವರ್ಣತುಳಾವರದಂಡಮೆಂಬವೊ
ಲೊಪ್ಪಮನಾಳ್ದುದಾ ನರಪಕಾಂತೆಯ ಸೌಂದರನಾಸಿಕಾಂಕುರಂ ೫೦

ಬಾಲಕಿಯಲರ್ಗಣ್ಗಳ್ ಸಂ
ಲಾಲಿತ ಲಾವಣ್ಯರಸಮಯಾಬ್ಜಾಕರದೊಳ್
ಬಾಳೆಯ ಮೀಂಗಳ ತೆಱದಿಂ
ಲೀಲೆಯೊಳಂ ಪೊಳೆದು ತಳೆದವತಿಚಪಳತೆಯಂ ೫೧

ಆ ನೃಪಚಿತ್ತವಲ್ಲಭೆಯ ಪುರ್ವುಗಳೆಂಬ ಶರಾಸನಂಗಳೊಳ್
ಮಾನಿತ ಪಕ್ಷ್ಮಪಾಳಿಕೆಗಳೆಂಬುರುನಾರಿಗಳಂ ತೊಡರ್ಚಿಯ
ನ್ಯೂನಕಟಾಕ್ಷಮಾಳಿಕೆಗಳೆಂಬ ಶರಂಗಳನೆಯ್ದು ಹೂಡಿ ತ
ನ್ಮಾನಸಜನ್ಮನೆಚ್ಚು ಮೆಱೆದಂ ಜಗತೀಜನಚಿತ್ತಲಕ್ಷ್ಯಮಂ ೫೨

ಓಂಕಾರದ ಶಂಕೆಯನಂ
ದಂಕುರಿಸುತ್ತಿರ್ದುದಮಮ ಕಸ್ತೂರೀತಿಲ
ಕಾಂಕಭ್ರೂಮಧ್ಯಂ ಹರಿ
ಣಾಂಕಾಸ್ಯೆಗೆ ಮಂಗಳತ್ವಮಂ ಸೂಚಿಪ ವೊಲ್ ೫೩

ಅಷ್ಟಮಿಯ ಚಂದ್ರನಂತಿರೆ
ದೃಷ್ಟಿಗೆ ಕಡುಚೆಲ್ವನಾದುದಾಕೆಯ ನಿಟಿಳಂ
ಪುಷ್ಟತರಕಾಂತಿಯಿಂದು
ತ್ಕೃಷ್ಟಂ ನಿಕಟಸ್ಥತಾರಕಂ ಪ್ರಸ್ತುತ್ಯಂ ೫೪

ಪಿರಿದುಂ ಶೋಭೆಯನಾಂತವಾಕೆಯ ಲಸತ್ಸಾಮಾನ್ಯಸಂಪತ್ತಿಯಂ
ಭರದಿಂದಕ್ಷರಚಾರುತಾಮಹಿಮೆಯಂ ತಾಳ್ದಿರ್ದ ಕರ್ಣಂಗಳೀ
ಧರಣೀಮಂಡಳದಲ್ಲಿ ಸಾರತರಸೌಖ್ಯಕ್ಕೀಕೆಯೇ ಸೀಮೆಯೆಂ
ದುರುಬುದ್ಧಿಪ್ರವಿಭಾಸಿಯಪ್ಪ ಬಿದಿ ಪತ್ರಾಲಂಬನಂಗೆಯ್ದವೊಲ್ ೫೫

ಕಾಳಿಂದೀನದಿಯಲ್ಲಿ ಪುಟ್ಟಿದ ತರಂಗೌಘಂಗಳಂತಾವಗಂ
ಹೇಳಾಲಂಬಿಗಳಾದವಾಕೆ ಶಿರದೊಳ್ ತಾಳ್ದಿರ್ದ ಕೇಶಂಗಳು

ತ್ತಾಲಂಗಳ್ ಪರಿಲಾಲನೀಯಪರಮಸ್ನಿಗ್ಧತ್ವಯುಕ್ತಂಗಳುಂ
ನೀಲಂಗಳ್ ತಳೆದಿರ್ದವಂದು ಪಿರಿದುಂ ಚೆಲ್ವಾದ ವಕ್ತ್ರತ್ವಮಂ ೫೬

ನೂರ್ಮಡಿಯಾಗಿಯೆ ದೇವಿಯ
ಸೋರ್ಮುಡಿ ಬೆನ್ನಲ್ಲಿ ಚೆಲ್ವನಾವರಿಸಿತ್ತಾ
ನರ್ಮದೆಯ ಪೊನಲು ಕನಕದ
ನಿರ್ಮಳಶಿಲೆಯಲ್ಲಿ ಮುರಿದು ಪರಿವಂತೆ ವೊಲಂ ೫೭

ವ: ಮತ್ತಂ

ಆ ಸುಕುಮಾರಿ ಚಾರುನವರತ್ನವಿಭೂಷಣಸಂಚಯಂಗಳಂ
ಲೇಸೆನಿಸಿರ್ದ ಮೆಯ್ಗೆ ಕಡುಭಾರ ವಿಡಾಯಿಗಳೆಂದು ಪುಷ್ಪಮಾ
ಲಾಸಮುದಾಯಮಂ ಮುಡಿಗೆ ಭಾರಮಿದೆಂದದಱ ಪ್ರಭಾಳಿಯುಂ
ಭಾಸುರಮಪ್ಪ ಕಂಪು ತೊಡವಾದಡೆ ಸಾಕೆನುತಿರ್ಪಳಾವಗಂ ೫೮

ರತಿಗಾನಂದವಿಧಾನಮೊಂದೆ ಗುಣಮಾ ಲಕ್ಷ್ಮೀಮಹಾದೇವಿಗಂ
ನುತಸೌಭಾಗ್ಯಮದೊಂದೆ ನೋಳ್ಪಡೆ ಗುಣಂ ವಾಗ್ದೇವಿಗಂ ಚಾತುರೀ
ಯುತಿಯೆಂಬೊಂದೆ ಗುಣಂ ದಲೀ ಸತಿಗೆ ಮತ್ತಾನಂದಕಾರಿತ್ವಮುಂ
ನುತಸೌಭಾಗ್ಯಮುಮೆಯ್ದೆ ಜಾಣ್ಮೆಯೊದವುಂ ಕೂಡಿತ್ತಿಳಾಭಾಗದೊಳ್ ೫೯

ವ: ಮತ್ತಮಾ ದೇವಿ ಚಂದ್ರಕಳೆಯಂತೆ ಸಕಳಜನಾನಂದಕಾರಿಣಿಯುಂ ಪುಷ್ಪಮಾಲೆಯಂತೆ ದೃಢಗುಣಸಂಪನ್ನೆಯುಂ ಕಮಳಿನಿಯಂತಕ್ಷೂಣಲಕ್ಷ್ಮೀಸಮಾ ಲಕ್ಷಿತೆಯುಂ ಗಂಗೆಯಂತೆ ನಿರ್ಮಳಾಂತರಂಗೆಯುಂ ವನಲಕ್ಷ್ಮಿಯಂತೆ ವಿಶಿಷ್ಟ ಗೋತ್ರೋತ್ಪನ್ನೆಯುಂ ಮಳೆಗಾಲದ ದಿನಮಾಳಿಕೆಯಂತೆ ವಿದೂರಿತರಜೋವ್ರಜೆಯುಂ ಪ್ರಭಾಕರಪ್ರಭೆಯಂತೆ ಪ್ರತಿಧ್ವಸ್ತ ತಮಃಪ್ರಕರೆಯುಮೆನಿಪಳಂತುಮಲ್ಲದೆಯುಂ

ಗುಣದೊಳ್ ನಿತ್ಯತ್ವಮಂ ಮಧ್ಯದೊಳು ಱಸದಸದ್ವಾದಮಂ ನೇತ್ರದೊಳ್ ತಾಂ
ಕ್ಷಣಿಕತ್ವಾಪತ್ತಿಯಂ ರೂಪಿನೊಳೆಸೆವ ಮಹಾದ್ವೈತಮಂ ಮಂದಯಾನ
ಕ್ಷಣದೊಳ್ ಜಾಡ್ಯತ್ವಮಂ ಕೀರ್ತಿಯೊಳಮಮ ಪರಿವ್ಯಾಪ್ತಕತ್ವಾದಿಯಂ ಧಾ
ರಿಣಿಯೊಳ್ ಸಂಪಾದಿಸುತ್ತುಂ ಮೆಱೆದಳಬಳೆ ವಿದ್ಯಾಂಗಿಯೆಂಬಂದದಿಂದಂ ೬೦

ನಿಸಿತಕಟಾಕ್ಷಮೆಂಬ ಶರಮಂ ನಖಮೆಂಬ ಕಠಾರಮಂ ಸಮು
ಲ್ಲಸಿತ ಕುಚಾಗ್ರಮೆಂಬ ವರಚಕ್ರಮನುನ್ನತಕೇಶಭಾರಮೆಂ
ಬೆಸೆವುರುಪಾಶಮಂ ತಳೆದ ದೇವಿಯನಂಗಜಚಕ್ರವರ್ತಿ ಪೂ
ಜಿಸುವನಿದೆನ್ನ ಶಸ್ತ್ರದಧಿದೇವತೆಯೆಂದು ಜಗಜ್ಜಯೋತ್ಸುಕಂ ೬೧

ವಕ್ರತೆ ಕೇಶದೊಳಲ್ಲದೆ
ಮಿಕ್ಕಿರ್ದ ಚರಿತ್ರದಲ್ಲಿ ಪೊರ್ದದು ಪಿರಿದುಂ
ಕರ್ಕಶತೆ ಕುಚದೊಳಲ್ಲದೆ
ತರ್ಕಜ್ಞೆಯ ಚಿತ್ತದಲ್ಲಿ ತೋಱದದೆಂದುಂ ೬೨

ಮೂಱುಂಲೋಕದ ಸತಿಯರ್
ಮೀಱಿದ ಗುಣಶೀಲ ರೂಪಿನೊಳ್ ಪಾಸಟಿಯಂ
ತೋಱೆದವರಿಲ್ಲ ಬಂದಾ
ಸೀಱ್ಗೆ ಪಿಗ ತ್ರೋತ್ರಿರಾಗಿ ಬೆಸಕೆಯ್ವುವಱಿಂ ೬೩

ವ: ಅದಲ್ಲದೆಯಂ

ಗುಣದೊಳ್ ಕೂಡಿದ ಚಾರುಚಾಪಲತೆಯಿಂದ ಧಾನುಷ್ಕಿಂತೊಪ್ಪುಗುಂ
ಮಣಿಯಿಂತೊಪ್ಪಮನಾಳ್ದು ತೋರ್ಪುದಧಿಕಂ ನೈರ್ಮಲ್ಯದೊಳ್ ಕೂಡಿದು
ಘೃಣೆಯಿಂದಂತೆ ವಿಶೇಷಮಪ್ಪ ಗುಣದೊಳ್ ಸತ್ಕಾಂತಿಯೊಳ್ ಕೂಡಿದಾ
ಪ್ರಣುತಪ್ರೇಯಸಿಯಿಂದಮೀ ಜಗದೊಳಾ ಭೂಮೀಶನಂದೊಪ್ಪಿದಂ ೬೪

ಪಿಲಸತ್ಪದ್ಮೆಯೊಳಿಂತು ವಿಷ್ಣು ರತಿಯೊಳ್ ತಾನಿಂತು ಚಿತ್ತೋದ್ಭವಂ
ಕುಲದಿಂ ರೋಹಿಣಿಯೊಳ್ ಸುಧಾಕಿರಣನಿಂತೊಲ್ದಿರ್ಪನಂತಾವಗಂ
ಪಲಬರ್ ಪತ್ನಿಯರುಳ್ಳೊಡಂ ಚತುರೆಯಪ್ಪಾ ದೇವಿಯೊಳ್ ಭೂಮಿಭೃ
ತ್ತಿಲಕಂ ಮೋಹಮನೆಯ್ದೆ ಮಾಡಿ ಪಿರಿದೊಂದಾನಂದದಿಂ ಕ್ರೀಡಿಪಂ ೬೫

ಪುರ್ಪಿನ ಜರ್ವು ಚುಂಬನದಗುರ್ವು ಲಸತ್ಪುಳಕಾಂಕುರಂಗಳೊಂ
ದುರ್ವು ಮನೋಹರಾಧರಪರಿಗ್ರಹವಾಂಛೆಯ ಕೊರ್ವು ರಾಗದಿಂ
ಪೊರ್ವರೊಳೊಲ್ದು ಕೈಮಿಗೆ ರತಿಕ್ರಿಯೆಯೊಳ್ ನೆರೆದಿರ್ದು ಕಾಲಮಂ
ನಿರ್ವಹಿಸುತ್ತುಮಿರ್ದರಸಮಾಯುಧನಾಡಿಪ ಜಂತ್ರದಂದದಿಂ ೬೬

ಜನಪತಿಯುಂ ತತ್ಕಾಂತೆಯು
ಮನುನಯದಿಂದಿಷ್ಟವಿಷಯಭೋಗಂಗಳನಂ
ದನುಭವಿಸುತ್ತುಂ ಕಳೆದರ್
ಘನಮುದದಿಂ ಕೆಲವುವತ್ಸರಂಗಳನಿಳೆಯೊಳ್ ೬೭

ವ: ಇಂತು ನೆಗಳ್ತೆಗಂ ಪೊಗಳ್ತೆಗಮುಳುಂಬಮಾದ ಸುವ್ರತಾಮಹಾದೇವಿಯೊಂದು ದಿವಸಮಿಂದುಕಾಂತಶಿಲಾಮಯುಮಾಗಿ ಬಹಳಮಪ್ಪ ಬೆಳಗಿನ ಬಳಗಮಂ ವಿಯತ್ತಳದೊಳ್ ನೆಱೆಯೆ ಕಱೆಯುತ್ತುಮಿರ್ದ ನಿರವಧಿಶೋಭಾಸಮಧಿಕಮಾದ

ಸೌಧತಳದೊಳಶೇಷವಿಶೇಷಿತಾಂತಃಪುರಸಾರಸೌಂದರೀಸಂದೋಹದೊಡಗೂಡಿ ವಿಮಳತರವಿಪುಳ ಮುಕ್ತಾಫಳಕಳಿತಸಕಳಾಳಂಕರಣಮನೆಯ್ದೆ ತೊಟ್ಟು ಥಳಥಳಿಸಿ ಪೊಳೆವ ಧವಳಚಾಮರಂಗಳ ಚಳಾಚಳ ವಿಳಸನದಿಂ ನೇರ್ಪಟ್ಟ ಲೀಲೆಯಿಂದೋಲಗಂಗೊಟ್ಟಿರ್ದು ಪಾಲ್ಗಡಲ ಪರಿಲಸಿತಲಹರಿಕಾತಳ್ಪತಳದೊಳೊಪ್ಪದಿಂ ಕುಳ್ಳಿರ್ದಕ್ಷೂಣಕ್ಷೀರಬಿಂದುಗಳ ವೃಂದದಿಂದೊಂದಿ ತಜ್ಜಳದೇವತಾಸಂಘಾತಸಮಾಶ್ರಿತೆಯಾದ ಶ್ರೀದೇವಿಯ ಶಂಕೆಯನಂ ಕುರಿಸುತ್ತುಮಿರ್ದಾಗಳ್

ಪರಮೋರುದೇಶತತಿಯಿಂ
ನಿರುಪಮಮಪ್ಪಗ್ರಹಾರಚಯದಿಂ ಚೆಲ್ವಂ
ಧರಿಸಿತ್ತಾ ದೇವಿಯ ಸಭೆ
ಭರದಿಂದಂ ಕಾಮದೇವಸಾಮ್ರಾಜ್ಯದ ವೊಲ್ ೬೮

ವ: ಆ ಸಮಯದೊಳಾ ಮಹಾಸೇನಮಹಾರಾಜಂ ರಾಜರಾಜಾಧಿ ರಾಜನಂತೆ ರಾಜದಭಿನವವಿಭವಸಮಭಿಯೋಜ್ಯಮಾನನಾಗಿ ಕರ್ಣಬಾಹಾಲಂಬಮಾನ ಚಮರೀಜ ಸಮಾಜಪೂಜ್ಯಮಾನವಾಜಿರಾಜಿಸಮಾರೂಢಪ್ರೌಢರಾಜಕ ರಾಜನ್ಯ ಕಂಬೆರಸು ಕಾ ತೂಹಳಕಾರಿ ವಾಹ್ಯಾಳಿವಿನೋದಮಂ ತೀರ್ಚಿ ಮರಳಿ ತನ್ನರಮನೆಗೆ ಬಂದು ರಾಜಾಂಗಣದೊಳ್ ನಿಂದು ಕೂಡಿ ಬಂದರಸುಮಕ್ಕಳಂ ಕಳಿಪಿ ನಿಜತಾಂಬೂಲಿಕ ನೊರ್ವಂಗೂಡಿ ಕರುಮಾಡಮಂ ಪತ್ತೆಸಾರ್ದು ನಿಲ್ವುದುಂ ಮೇಗಣ ನೆಲೆಯುಪ್ಪರಿಗೆಯ ಕಳಕಳರವಮಂ ಕೇಳ್ದು ಪಟ್ಟಮಾದೇವಿಯೋಲಗಸಾಲೆಗಭಿಮುಖನಾಗಿ

ನರನಾಥಂ ಬಂದುಪೊಕ್ಕಂ ನಿಜಸತಿಯ ಸಭಾಗೇಹಮಂ ಪ್ರೀತಿಯಿಂದಂ
ವರಸಮ್ಯಕ್ತ್ವಪ್ರಭಾವಂ ಬಹಳತರಕಳಾವಾರ್ಧಿಸಂಪೂರ್ಣಚಂದ್ರಂ
ಧರಣೀಶೋಲ್ಲಾಲಿತಂ ಬಾಹುಬಲಿ ಸುಕವಿರಾಜಂ ಸುರತ್ನತ್ರಯಾಲಂ
ಕರಣಂ ಸ್ಯಾದ್ವಾದವಿದ್ಯಾಕಮಳಮಧುಕರಂ ಚಾತುರೀಜನ್ಮಗೇಹಂ ೬೯

ಗದ್ಯ: ಇದು ಸಕಳಭುವನಜನ ವಿನೂಯಮಾನಾನೂನ ಮಹಿಮಾಮಾನನೀಯ ಪರಮ ಜಿನಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿದೇವ ಪ್ರಸಾದ ಸಂಪಾದಪಾದನಿಧಾನದೀಪವರ್ತಿಯುಭಯಭಾಷಾಕವಿಚಕ್ರವರ್ತಿ ಬಾಹುಬಲಿ ಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಮಹಾಸೇನ ಮಹಾರಾಜ ರಾಜ್ಯೋದಯ ವರ್ಣನಂ ದ್ವಿತೀಯಾಶ್ವಾಸಂ.

●

ತೃತೀಯಾಶ್ವಾಸಂ

ಶ್ರೀರಮಣಂ ವಿಶದಯಶೋ
ರಾರಾಜಿತನೆಯ್ದಿದಂ ಮಹೋತ್ಸಾಹಮನಾ
ಚಾರಸಮೇತಂ ಭುವನಜ
ನಾರಾಧ್ಯಂ ಸರಸಚತುರಕವಿಕುಳತಿಳಕಂ ೧

ವ: ಅಂತು ಬಂದ ಮೂರ್ಧಾಭಿಷಿಕ್ತಂ ತನ್ನಯ ಮನೋವಲ್ಲಭೆಯರ್ಧಾಸನ ದೊಳುದ್ಭವಂ ಕೈಮಿಗೆ ದೇವಿಯ ಕೋಮಳಾಂಗಯಷ್ಟಿಯಂ ಮುಟ್ಟಿ ಸೋಂಕಿ ಕುಳ್ಳಿರ್ದು ಭಾಮಾಸಭಾಶೋಭೆಯಂ ನೋಡುತ್ತುಂ ಹಾವಭಾವವಿಳಾಸವಿಭ್ರಮಾಧಿಕ್ಯಗರ್ವಿತ ಸರ್ವಸೇವಾಗಾಣಿಕ್ಯ ಮಧ್ಯಮಾಣಿಕ್ಯರೂಪೆಯಾಗಿ ಸೊಗಯಿಸುವ ತತ್ಪುವ್ರತಾಮಹಾ ದೇವಿಯ ರೂಢಿವೆತ್ತ ಪ್ರೌಢಿಯಂ ಗಾಡಿಯಂ ನೀಡುಂನೋಡಿ ಮನದೆಗೊಂಡು ಸಂತೋಷದಂತನೆಯ್ದಿದನಂತರಂ ಸ್ಫುರೋತ್ಪ್ರಾನಿತನೇತ್ರನಾಗಿ ಸಮುತ್ತಂಭಿತಮಾದ ವಿಕಸಿತ ಪ್ರಶಸ್ತಹಸ್ತತಳಮಂ ಕಪೋಳಮೂಳಕ್ಕಾಂಕೆಗೊಟ್ಟು ವಿಷಣ್ಣಾಂತರಂಗಂ ತನ್ನೊಳಿಂತೆಂದಂ

ಈ ರೂಪೀ ಕುಲಮೀ ಕಳಾವಿಭವಮೀ ವಾಗ್ಮಿತ್ವ ಚಾತುರ್ಯಮೀ
ಸಾರಾಸಾರವಿವೇಕಮೀ ಸಿರಿಯುಮೀ ಚಾರಿತ್ರಮೀ ಚಾಗಮೀ
ಚಾರುಶ್ರೀಜಿನಭಕ್ತಿಯೆಂಬಿವಿನಿತುಂ ಸತ್ಪುಣ್ಯದಿಂದಾದುದೀ
ನಾರೀರತ್ನಮೊಳೀಕೆಯಲ್ಲದವರಲ್ಲೊಂವಾದೊಡಂ ದುರ್ಲಭಂ ೨

ಮೃಗಮದಕಾಂತಿಯಂ ಪರಮರತ್ನಮೃದುತ್ವಮನುದ್ಧಕರ್ಣಿಕಾ
ರಗತಮೆನಿಪ್ಪ ಸೌರಭಮುಮಂ ಹರಿಚಂದನದೊಂದು ನೇರಿತಂ
ಮಿಗೆ ಬಿಬಿ ಕೊಂಡು ನಿರ್ಮಿಸಿದನೀಕೆಯನಲ್ಲದೊಡೆಂತು ಬಂದುದೀ
ಸೊಗಯಿಪ ಕಾಂತಿಯುಂ ಮೃದುತೆಯುಂ ಸುರಭಿತ್ವಮುಮೆಯ್ದೆ ನೇರಿತುಂ ೩

ಆದೊಡಮೇನುಮೀ ಸತಿಯ ಜವ್ವನಮೆಂಬ ಮಹಾಮಹೀರುಹಂ
ಮೇದುರರೂಪಮೆಂಬ ರಸದಿಂದಭಿವೃದ್ಧಿಯನೆಯ್ದಿ ಕಾಲಸಂ

ಪಾದಿತ ಚಾರುಪುಷ್ಪಿತಮದಾಗಿಯುಮಾತ್ಮಜನೆಂಬ ಸತ್ಫಲೋ
ತ್ಪಾದದ ಲಾಭಮಿಲ್ಲದದು ನಿಷ್ಫಲಮಾದುದು ಲೋಕದೊಳ್ ಕರಂ ೪

ಎನಿತೆನಿತುಂ ಸ್ವಬಾಂಧವ ಸಹಸ್ರಮದುಳ್ಳೊಡಮೇನು ಮತ್ತಮಂ
ತೆನಿತೆನಿತುಂ ಸ್ವಗೋತ್ರಜಜನಂಗಳುಮುಳ್ಳೊಡಮೇನು ಪುತ್ರಸಂ
ಜನಿ ತನಗಿಲ್ಲದಂದು ನರನಾವನೊ ದುಃಖಮನೆಯ್ದನಂಬರಂ
ವಿನುತಹಿಮಾಂಶುವಿಲ್ಲದೊಡೆ ತಾರೆಗಳುಳ್ಳೊಡಮೆಂತು ರಂಜಿಕುಂ ೫

ಕುಲದೀಪನೆನಿಪ ತನಯಂ
ನಿಳಯದೊಳುಜ್ವಳಿಸಿ ಬೆಳಗದಿರ್ದೊಡೆ ಧಾತ್ರೀ
ತಳದೊಳದು ಮೆಱೆಯದೆಂತೆನೆ
ವಿಳಸಿತತಮದಿಂದ ಪುದಿದ ಮನೆಯಂತೆ ವಲಂ ೬

ಸರಸಿರುಹಂಗಳಿಲ್ಲದ ಕೊಳಂ ದಿನನಾಯಕನಿಲ್ಲದಾಗಸಂ
ಸುರುಚಿರಶಾಸ್ತ್ರಮಿಲ್ಲದ ತಪಂ ವಧುವಿಲ್ಲದ ಲೀಲೆ ಸತ್ಪ್ರಭಾ
ಪರಿಕರಮಿಲ್ಲದುದ್ಧಮಣಿಯೆಂತು ಧರಿತ್ರಿಯೊಳೊಪ್ಪದಂತೆ ಸೌಂ
ದರಸುತನಿಲ್ಲದೆನ್ನ ಕುಲಮೆಂತದು ಪೆರ್ಚಿ ಸಮಂತು ರಾಜಿಕುಂ ೭

ಎನ್ನ ಕುಲಾಂಕುರಂ ದಲೆನಿಪಾತ್ಮಜನಂ ನೆಱೆಕಾಣದೀಗಳೆ
ನ್ನನ್ವಯಲಕ್ಷ್ಮಿ ತನ್ನಯ ಸುಭೋಗಸಮಾಶ್ರಯಭಂಗಶಂಕೆಯಿಂ
ದುನ್ನತಚಿಂತೆ ನಟ್ಟುನಿಲೆ ಚಿತ್ತದೊಳಾಕುಳೆ ಸುಯ್ದು ಸುಯ್ಲಿನಿಂ
ತನ್ನ ಕರಾಗ್ರಪಂಕಜಮನೆಯ್ದೆ ಮುರುಂಟಿಸುತಿರ್ಪಳಾವಗಂ ೮

ಶಶಿಕಿರಣಂಗಳಿಂ ಹಿಮಕಣಂಗಳಿನುದ್ಧಸುಧಾರಸಚ್ಛಟಾ
ಪ್ರಸರದಿನಂಬುಜಂಗಳಿನುದಾರವಿಮೌಕ್ತಿಕಹಾರಯಷ್ಟಿಯಿಂ
ದಸುಕೆಯ ಪಲ್ಲವಂಗಳ ಸಮೂಹದಿನಪ್ಪ ಸುಖಕ್ಕಿದಗ್ಗಳಂ
ಲಲಿತಸುತಾಂಗಸಂಗತದಿನಪ್ಪ ಸುಖಂ ಮನುಜರ್ಗೆ ಲೋಕದೊಳ್ ೯

ಏನಂ ಮಾಳ್ಪೆನಿದಾವದೇವತೆಯನಾನಾರಾಧಿಪೆಂ ನಿಷ್ಠೆಯಿಂ
ದಾನಾರಂ ಬೆಸಗೊಳ್ವೆನೀ ವಿಷಯದೊಳ್ ಮತ್ಪೌರುಷಂ ಕೊಳ್ಗದಿ
ನ್ನೇನುಂ ಸಂದೆಯಮಿಲ್ಲ ಧರ್ಮದೊದವಿಂ ಸಾಧ್ಯಂ ದಲೀ ಕಾರ್ಯಮೆಂ
ದಾ ನಾಥಂ ವರಧರ್ಮಮಂ ಬಿಡದೆ ಮಾಳ್ಪುದ್ಯೋಗಮಂ ತಾಳ್ದಿದಂ ೧೦

ವ: ಇಂತು ನಿರಂತರಿತಚಿಂತಾಸಮುದ್ಭ್ರಾಂತರಾಳತರಂಗಿತಾಂತರಂಗ ನಾಗಿರ್ಪುದುಂ ತತ್ಸಮಯದೊಳೊರ್ವನುದ್ಯಾನಪಾಲಕಂ ಮುನೀಶ್ವರಸಮಾಗ ಮನೋತ್ಸಾಹ

ವಾರ್ತಾನಿವೇದನೋತ್ಸುಕಂ ನಿರ್ಯತ್ರಮದಾಶ್ರುಧಾರಾಪೂರಸಮುತ್ಸಿಕ್ತನುದಂಚಿತ ರೋಮಾಂಚಸಂಚಯಕಂಚುಕಿತಗಾತ್ರಂ ಕಯ್ಯೊಳ್ ಕುಡಿಯಂ ಪಿಡಿದೆತ್ತಿಕೊಂಡರಮನೆಯ ಬಾಗಿಲೊಳ್ ಬಂದುನಿಂದು ತನ್ನ ಬರವಂ ಪಡಿಯಜಂಗಜೆಪುವುದುಮಾತಂ ಪೋಗಿಯರಸಂಗೆ ಬಿನ್ನಪಂಗೆಯ್ಯೆ ಬರವೇಳೆಂಬುದುಂ

ದರದಳಿತಂಗಳಪ್ಪ ಕುಸುಮಸ್ತಬಕಂಗಳನೆಯ್ದೆ ತಾಳ್ದಿ ಪೀ
ವರಸುರಸಂಗಳಪ್ಪ ವರಪಕ್ವಫಲಂಗಳ ಸಂಚಯಂಗಳಂ
ಧರಿಸಿ ತದೀಶವಾಂಛಿತಫಳಪ್ರದಮಪ್ಪ ಸುಕಲ್ಪವೃಕ್ಷದಂ
ತಿರೆ ನಡೆತಂದನಂದು ವನಪಾಳಕನುನ್ನತಹರ್ಷಪಾಳಕಂ ೧೧

ವ: ಅಂತು ಬಂದು ವಿನಯವಿನಮಿತೋತ್ತಮಾಂಗನಾಗಿ ತಾಂ ತಂದ ಕಾಲ ನಿಷ್ಪನ್ನಂಗಳಾದ ಪುಷ್ಪಫಲಂಗಳಂ ಕಾಣಿಕೆಯಂ ಕೊಟ್ಟು ಮುಂದೆ ಕುಳ್ಳಿರ್ದು ತನ್ನಯ ಧವಳ ಚೇಳಾಂಚಳಮನಧರಸಪಿಧರಕ್ಕೆ ತಂದು ಬಿನ್ನಪಮೆಂದಿಂತೆಂದಂ

ದೇವಕಳಾವಿಳಾಸದೊಡವೆಂದೆ ದಿಗಂಬರಮಾರ್ಗಭೂಷಿಣೀ
ಭಾವಮನೆಯ್ದಿ ತಾರಕಿಗಳೊಳ್ ಪುದಿದಿರ್ದ ಸುಧಾಂಶು ಬಪ್ಪವೊಲ್
ಪಾವನಯೋಧಯೋಗಿ ಸಮುದಾಯಸಮನ್ವಿತನಾಗಿ ಬಂದನೀ
ಭೂವಳಯಕ್ಕೆ ಚಾರಣಮುನೀಶ್ವರನಂಬರಮಾರ್ಗದತ್ತಣಿಂ ೧೨

ವ: ಪ್ರಚೇತರೆಂಬಾಚಾರ್ಯವರ್ಯರ್ಕೆನೂರ್ತಂಡ ಚಾರಣಋಷಿಸಮು ದಾಯಂಬೆರಸು ಬಂದು ನಮ್ಮೀ ಪುರದ ಬಹಿರ್ಭಾಗದೊಳಿರ್ದುದ್ಯಾನವನಾಂತ ರ್ಭಾಗಮಂ ಪೊಕ್ಕು ತತ್ರಸ್ಥಕ್ರೀಡಾಶೈಲಚೂಡಾಪ್ರಸ್ಥದೊಳೊಂದಿಂದುಕಾಂತಶಿಲಾಮಯ ಮಾ[ದು]ತ್ತುಂಗ ರಂಗಾಗ್ರದಲ್ಲಿ ಬಿಜಯಂಗೆಯ್ದು ಪಂಥಾತಿಚಾರಕ್ರಿಯೆಯಂ ತೀರ್ಚಿ ಸಮೀಪವರ್ತಿ ಶಿಷ್ಯಪ್ರಶಿಷ್ಯವರ್ಗಕ್ಕೆ ವಿರುದ್ಧಸಿದ್ಧಾಂತಾದಿ ಸಮಸ್ತಶಾಸ್ತ್ರವ್ಯಾಖ್ಯಾನಮಂ ಮಾಡುತ್ತುಮಿರ್ದರಾ ಮುನೀಶ್ವರರ ಮಹಾಮಹಿಮೆಯಿಂದಾನೊರ್ವನೇ ವಿಪುಳಪುಳಕಂ ಗಳಿಂದಂಕುರಿತನಾದೆನಿಲ್ಲ ವಸಂತಸಮಯಮನಪೇಕ್ಷಿಸದಲ್ಲಿಯ ವೃಕ್ಷಂಗಳುಮಂಕುರಿ ತಂಗಳಾದುವು ಮತ್ತಮವರ ಮಾಹಾತ್ಮ್ಯಮಂ ಪೇಳ್ವೊಡೆನ್ನಳವಲ್ಲೆಂದು ಬಿನ್ನಪಂಗೆಯ್ಯಲಾ ಮುನೀಂದ್ರಚಂದ್ರಮನ ಸಮಾಗಮನವಾರ್ತಾಚಂದ್ರಿಕಾಪ್ರಸರದಿಂದಾ ಮಹೀಪಾಳತಿಳಕನ ಮನೋಗತಚಿಂತಾಸಂತಾಪಮೊರ್ಮೊದಲೊಳ್ ಪಿಂಗಿಪೋಗಲೊಡಮಾಗಳಾತನ ನೇತ್ರಂಗಳಿಂದುಕಾಂತಪುತ್ರಿಕಾಪ್ರತಿಮಾನಂಗಳಾದುವು ಕರಂಗಳಂಭೋಜಲೀಲಾಪಾಲ ಕಂಗಳಾದುವು ನಿರಂತರಿತಪರಮಾನಂದಸಂದೋಹನಿರವಧಿಪಯೋಧಿಪ್ರತಿನಿಧಿಯಾಗೆ ಕಾರ್ಗಾಲದ ಮೇಘಧ್ವನಿಯಂ ಕೇಳ್ದ ನವಿಲಂತನೂನಸಂಭ್ರಮಭ್ರಮಿತಾಂತರಂಗನಾಗಿ

ವರಸಿಂಹಾಸನದಿಂದಮೆಳ್ದು ಧರಣೀಪಾಳಂ ಪ್ರಚೇತೋಮುನೀ
ಶ್ವರನಿರ್ದಾದೆಸೆಯತ್ತಲೇಳಡಿಯುಮಂ ಸದ್ಭಕ್ತಿಯಿಂ ಪೋಗಿ ನಿ

ರ್ಭರದಿಂದಾನತನಾದನೆಂತು ದಿನಪಂ ಪೂರ್ವಾದ್ರಿಯಿಂದೆಳ್ದು ತಾ
ನಿರದಪ್ಪಂ ನತನಾಪ್ರಚೇತನನಿವಾಸಾಶಾಂತದತ್ತಲ್ ಕರಂ ೧೩

ವ: ಅನಂತರಂ ವಿಶಿಷ್ಟೇಷ್ಟಫಳಪ್ರದಾಯಕಂಗಳಪ್ಪ ತನ್ನಯ ಮನೋರಥ ಮಹೀಜ ಬೀಜಾಯಮಾನಪ್ರಸೂನಫಲಂಗಳಂ ಕಾಣಿಕೆಯಂ ಕೊಟ್ಟ ವನಪಾಲಂಗೆ ಪ್ರತ್ಯುಪ ಕಾರಮಂ ಮಾಳ್ಪ ಬಗೆಯಿಂದೆಂಬಂತೆ ದೇಯಾದೇಯವಿಚಾರಮಿಲ್ಲದ ತೃಪ್ತಿಯೇ ಸೀಮೆಯೆಂಬನ್ನೆವರಂ ದ್ವೀಪಾಂತರಾಯತಾದೃಷ್ಟಪೂರ್ವಾನರ್ಘ್ಯಮಾದ ಸಮಸ್ತ ವಸ್ತುವಂ ವಿಸ್ಪತಪ್ರೀತಿಯಿಂದಂಗಚಿತ್ತಮಂ ಕೊಟ್ಟು ತನ್ಮುನೀಂದ್ರಪಾದಾರವಿಂದ ದ್ವಂದ್ವಸಂದರ್ಶನೋತ್ಸವಸಮುತ್ಸುಕಂ ಯಾತ್ರಾನಿಮಿತ್ತಂ ಪ್ರಸ್ಥಾನಭೇರಿಯಂ ಪೊಯಿಸಿದಾಗಳ್

ಪಿರಿದುಂ ಪ್ರಸ್ಥಾನಭೇರೀರವಮಖಿಳದಿಶಾಭೋಗಭಾಗಂಗಳಂ ಮೇ
ಘರವಂ ತಾನೆಂಬಿನಂ ವ್ಯಾಪಿಸೆ ಪುರಜನಮೆಲ್ಲಂ ಮಯೂರಾಳಿಯಂತು
ದ್ಧುರಸಂತೋಷಂಗಳಿಂದಂ ನಟನರಸವಶೀಭೂತಮಾಯ್ತೀ ಜಗಂ ಬಂ
ಧುರಶಬ್ದಾದ್ವೈತಮಂ ಪಾಳಿಸಿದುದು ಭರದಿಂ ತುಂಬಿ ತಚ್ಛಬ್ದದಿಂದಂ ೧೪

ಆಗಳನೂನಸಂಭ್ರಮಪರಿಭ್ರಮದಂಗನೆಯರ್ ಸ್ವಗೇಹದೊಳ್
ಬೇಗದೆ ಗಂಧಸಾರಜಳದಿಂ ಚಳಯಂಗಳನೆಯ್ದೆ ಕೊಟ್ಟು ಮುಂ
ಬಾಗಿಲೊಳುನ್ನತಧ್ವಜಚಯಂಗಳನೆತ್ತಿಸಿ ರಂಗವಾಲಿಯಂ
ರಾಗದೊಳಿಕ್ಕಿ ಬೀದಿಯೊಳಮಂದು ಱೆ ಮಾಡಿದರಷ್ಟಶೋಭೆಯಂ ೧೫

ರತ್ನಚಯಂಗಳಿಂ ಮಿಗುವ ಮುತ್ತುಗಳಿಂ ನೆಱೆಕೀಲಿಸಿರ್ದ ದಲ್
ನೂತ್ನಮೆನಿಪ್ಪಲಂಕರಣಮಂ ಸಲೆತೊಟ್ಟು ಜನಂಗಳುಂ ವಧೂ
ರತ್ನಗಣಂಗಳುಂ ಕಳಶದರ್ಪಣಮಂ ಪಿಡಿದರ್ ಕೆಲಂಬರುಂ
ಯತ್ನದೆ ತಾಳ್ದರಷ್ಟವಿಧದರ್ಚನೆ ವಸ್ತುಸುಭಾಜನಂಗಳಂ ೧೬

ವ: ಆ ಮುನೀಂದ್ರಂ ಬಂದನೆಂಬೊಂದಾನಂದ ಕೈಮಿಕ್ಕು ತನ್ನಗರೀ ಮಂದಿರವೃಂದಂಗಳೊಳ್ ತುಂಬಿ ಪವಣಿಸದೆ ಮರ್ತ್ಯಮೂರ್ತಿಯಂ ಕೈಕೊಂಡು ಪೊಱ ಪೊಣ್ಮಿದುದೆಂಬಂತೆ ಪುರಜನಂಗಳ್ ಕುದುರೆಗಳು ರಥಂಗಳನೇಱೆ ಮಾನಿನಿಯರ್ ಪಿಡಿಗಳಂ ಪಿಡಿದೇಱೆ ತಂತಮ್ಮ ಮನೆಗಳಿಂ ಪೊಱಮಟ್ಟುಬಂದರಮನೆಯ ವಿರಾಜಮಾನ ರಾಜಾಂಗಣದೊಳ್ ನಿಂದಿರ್ಪುದುಂ

ಅತಿಶಯಮಾದ ಭೂಷಣವಿಭೂಷಿತನಾಗಿ ನರೇಂದ್ರಕುಂಜರಂ
ಸತಿಯೊಡಗೂಡಿ ಬಂದಿಭಮನೇಱೆ ಧೃತಾಂಕುಶನೊಪ್ಪಿದಂ ದಿವ
ಸ್ಪತಿಯೊಲವಿಂ ಪುಲೋಮಜೆಯೊಳೊಂದಿ ನಿಜಾಭ್ರಗಜೇಂದ್ರಮಂ ಮಹೋ
ನ್ನತಿಯೊಳಮೇಱೆ ರಂಜಿಸುವವೊಲ್ ಸುಮನಃಪ್ರಸರಪ್ರಸೇವಿತಂ ೧೭

ನಿರುಪಮರೂಪನೀಕ್ಷಿಸುವ ಪೌರವಧೂನರಲೋಲಲೋಚನೋ
ತ್ಕರಪರಿಕೀಲಿತಾಮಲಶರೀರ ಸುಕಾಂತಿಯನುಳ್ಳ ಭೂಮಿಪಂ
ಧರಣಿಯೊಳೊಪ್ಪಿದಂ ಮಿಗೆ ಸಹಸ್ರವಿಲೋಚನನಂತಿರಾಗಳು
ದ್ಧುರಧವಳಾತಪತ್ರದಡಿಯೊಳ್ ಚಮರೀರುಹಪರೋಭಿಮಸ್ತಕಂ ೧೮

ಗೀತರವಂಗಳುಂ ವಿವಿಧವಾದ್ಯಸಮೂಹದ ನಿಸ್ವನಂಗಳುಂ
ನೂತನವಲ್ಲಕೀ ಧ್ವನಿಗಳುಂ ಜಿಡದೋಮುವ ಚಾರುಪಾಠಕ
ವ್ರಾತರವಂಗಳುಂ ದಶದಿಶಾತಟಮಂ ಪರಿಭೇದಿಸುತ್ತಿರಲ್
ಭೂತಳನಾಯಕಂ ತಳರ್ದನಂಗಜಮಲ್ಲನ ನೋಳ್ಪ ವಾಂಛೆಯಿಂ ೧೯

ಕಿರಣಸಹಸ್ರಂಗಳ್ ಭಾ
ಸ್ಕರನೊಡನೆಯ್ತಪ್ಪ ಮಾಳ್ಕೆಯಿಂದೆಯ್ತಂದರ್
ನಿರುಪಮರಾಜಕುಮಾರರ್
ನರನಾಥನ ಪಿಂದೆ ರಾಗರಸದೊದವಿಂದಂ ೨೦

ಸಮುಪಾತ್ತೋನ್ನತ ಮತ್ತವಾರಣ ಕರಂ ಸಜ್ಜಾಲಕೋಪೇತರಂ
ಸುಮಹಾಭೋಗ ವಿರಾಜಮಾನತರರಂ[ಮಾ]ನೋಚ್ಛ್ರಯಾಕಾಂತರಂ
ವಿಮಲಾಕಾರರನಿಕ್ಕಿಲಂಬಿಡಿದು ಬಪ್ಪ ಕ್ಷ್ಮಾಪರಂ ನೋಡಿದಂ
ರಮಣೀಯಂಗಳೆನಿಪ್ಪ ಕೇರಿಗಳ ಪಿಂದೆಯ್ತಪ್ಪವೊಲ್ ತೋರ್ಪರಂ ೨೧

ಪಿರಿದುಂ ಸಂಪಲ್ಲವಾರಂಜಿತಮತುಳವಿಳಾಸಾಸ್ಪದಂ ಪತ್ರವಲ್ಲೀ
ಪರಿಶೋಭಾಸಂಯುತಂ ಭಾಸುರತರತಿಳಕಂ ಲಾಲನೀಯಾಯತಾಕ್ಷಂ
ಸ್ಮರರಾಜೋದ್ಯಾನಮೇಳ್ತಂದಪುದೆನೆ ಪುರನಾರೀಜನಂ ಸುತ್ತಲುಂ ಭೂ
ವರನೇತ್ರಪ್ರೀತಿಯಂ ಪುಟ್ಟಿಸುತೆ ನಡೆದುದತ್ಯಂತಸಂತೋಷದಿಂದಂ ೨೨

ಒರ್ವೋರ್ವರ ದೇಹಂಗಳ
ದುರ್ವಹ ಸಂಘಟ್ಟನಂಗಳಿಂ ಹಾರಂಗಳ್
ನಿರ್ವರದೆ ಪಱಿದು ಬೀಳ್ದೊಡೆ
ಸರ್ವರ್ಗಂ ಚರಿಸಬಾರದಿರ್ದುದು ಮಾರ್ಗಂ ೨೩

ಭೂಪನ ಮುಖಸರಸೀಜ ಸ
ಮೀಪದೊಳಂದಂಗರಾಗಗಂಧಕ್ಕೆಳಸಿ
ವ್ಯಾಪಿಸುವ ಭೃಂಗಮಾಳೆ ಮ
ನೋಪಸರತ್ತಿಮಿರಮಿರದೆ ಪೊಱಪೊಣ್ಮುವ ವೊಲ್ ೨೪

ಮುನ್ನಮೆ ಪೋಗಿ ಪುಷ್ಪಫಲಸಂಚಯಮಂ ನೆಱೆತಂದುಕೊಟ್ಟು ಸಂ
ಪನ್ನನ ಚಿತ್ತವೃತ್ತಿಗುಱೆ ಬಂದು ದಲೀ ಪದದೊಳ್ ವಿಶೇಷದಿಂ
ಮುನ್ನಿಸಿಕೊಂಬೆವೆಂಬ ಬಗೆಯಿಂ ಸಮಯೋಚಿತಸೇವನಾಪರರ್
ಸನ್ನಿದಮಾದ ವಂದನವನಕ್ಕಿರದೆಯ್ದಿದರಂದು ಬೇಗದಿಂ ೨೫

ಆಶೀರ್ವಾದದ ನಿನದಂ
ಲೇಸಾಗಿಯೆ ನೆಗೆಯೆ ವಿವಿಧರಚನಾತಿಶಯೋ
ದ್ಭಾಸಿತನಗರೀದ್ವಾರಮ
ನೀಶಂ ಬಂದೆಯ್ದಿದಂ ಮನೋಮುದದಿಂದಂ ೨೬

ಯತಿಭಾವಸಮೇತಂ ರಾ
ಜಿತಗುಣಕಂ ಸ್ವೀಕೃತಾಖಿಲಾಲಂಕಾರಂ
ಕ್ಷಿತಿಪಂ ಪೊಱಮಟ್ಟಂ ಸ
ಸ್ನುತಕವಿಮುಖದಿಂದೆ ನೆಗೆವ ಪದ್ಯದ ತೆಱದಿಂ ೨೭

ಪೊಱವೊಳಲಾತನ ಕಣ್ಣಂ
ಸೆಱೆವಿಡಿದುದು ತಾಯ ಕೆಲದ ಮಗುವಿನ ತೆಱದಿಂ
ಮಿಱುಗುವ ಬಹುಲಕ್ಷಣದಿಂ
ನೆಱೆರಮಣೀಯತ್ವದೊದವನಾಂತಿರ್ದು ಕರಂ ೨೮

ವಿಕ್ರಮಪೂಜ್ಯಂ ಧರಣೀ
ಚಕ್ರಪ್ರಭು ಸರ್ವಮಂಗಳೋಪೇತನವಂ
ಮಿಕ್ಕು ಮಹಾಸೇನಾವೃತ
ನುಕ್ಕಿ ಮಹಾಸೇನನೆಂಬಿದಂ ಪ್ರಕಟಿಸಿದಂ ೨೯

ವ: ಅಂತು ರುಂದ್ರಲೀಲೆಯಿಂ ಬರುತ್ತಿರ್ದ ನರೇಂದ್ರಂ ದೂರಾಂತರದೊಳತ್ಯುಚ್ಚೈಸ್ತನ ಶಾಖಿಲೇಖಾಶಾಖಾಶಿಖಾಮುಖಂಗಳಿಂದಾಕಾಶಮನಳ್ಳಿಱಿಯುತ್ತಿರ್ದ ಹೃದ್ಯಮಾದುದ್ಯಾನ ವನಮಂ ಕಂಡು ಮನದೆಗೊಂಡು ತನ್ನಯ ಮನೋ ವಲ್ಲಭೆಯ ಮುಖಕಮಳಾ ವಳೋಕನಂಗೆಯ್ದಿಂತೆಂದಂ

ಭೂವಳಯಕ್ಕಭೀಷ್ಟಫಳದಾಯಿಯೆನಿಪ್ಪ ಮಹಾಮಹೀಜಶಾ
ಖಾವಳಿ ಹಸ್ತಮಂ ನೆಗಪಿ ಸದ್ವಿನಯಧ್ವನಿಯಿಂದಮೊಪ್ಪಿ ತಾಂ
ಪೀವರನಾಳಿಕೇರರಸಧಾರೆಗಳಿಂ ಪರಿರಂಜಿಸುತ್ತುಮಿ
ರ್ದೀ ವನಮೀ ವನಂಬೊಲೆಸೆದತ್ತು ದಲೆನ್ನಯ ಮುಂದೆ ಲೀಲೆಯಿಂ ೩೦

ಮೂಲಬಲಾನ್ವಿತಂ ವಿವಿಧಪತ್ರಸಮೂಹಸಮಂಚಿತಂ ಸಮು
ನ್ಮೀಲಿತದರ್ಪಕಂ ಕುವಳಯಪ್ರಥಿತಂ ಸುಖವೃದ್ಧಿಶೋಭಿತಂ
ಪಾಲಿತಸತ್ವಕಂ ವರಮಧುವ್ರತಸೇವ್ಯತರಂ ಕವೀಶ್ವರೋ
ಲ್ಲಾಲಿತಮಾಗಿ ರಾಜಪದಮಂ ಪಡೆದಂತೆಸೆದತ್ತಿದೆನ್ನ ಪೊಲ್ ೩೧

ಕೆನ್ನಂ ಮಾಗಾಯ್ಗಳಿನ
ತ್ಯುನ್ನತಮಾವರಳಿಯಲೆಗಳಿಂದೊಪ್ಪುತ್ತುಂ
ನಿನ್ನಯ ನಂದನನಂತಿರೆ
ಸನ್ನುತಮೀ ನಂದನಂ ಕರಂ ಸೊಗಯಿಸುಗುಂ ೩೨

ವಿಪರೀತಮಾಗಿಯುಂ ಸಾ
ಧುಪರಿಷದಾಶ್ರಯಮುಮಾದುದಕುಲೀನತೆಯಿಂ
ದುಪಗತಮಾಗಿಯುಮಿದು ತಾಂ
ವಿಪುಳಸುಗೋತ್ರಾಪಜಾತಮಾದುದು ಚಿತ್ರಂ ೩೩

ಪಿರಿದುಂ ನೀಳ್ದ ಮಹೀರುಹಂಗಳ ಮಹಾಶಾಖಾಗ್ರಪುಷ್ಪೋತ್ಕರಂ
ಭರದಿಂದೊಪ್ಪಮನಾಳ್ದುದುಷ್ಣಕರನಶ್ವಂಗಳ್ ನಭೋಮಾರ್ಗದೊಳ್
ಬರುತುಂ ಪಲ್ಲವಮಂ ತಿನಲ್ಕೆಳಸಿ ವಕ್ತ್ರಾಗ್ರಂಗಳಂ ನೀಡಿ ಪೀ
ವರಫೇನಂಗಳ ಲೇಶಪಿಂಡಮದಜಿಲ್ದೊಕ್ಕಿರ್ದುದೆಂಬಂದದಿಂ ೩೪

ಕುಸುಮರಜಸ್ಸಮಾಜವರವಸ್ತ್ರಮನುಟ್ಟು ಕೊಳಂಗಳಲ್ಲಿ ರಂ
ಜಿಸುವ ಪಯಃಕಣಪ್ರಸರಮೆಂಬ ವಿಮೌಕ್ತಿಕಹಾರದಿಂ ವಿರಾ
ಜಿಸಿ ಲತೆಯೆಂಬ ದಂಡಮುಮನೆತ್ತಿ ಸಮೀರಣನೆಯ್ದುತಿಂದು ಕೂ
ರಿಸಿ ವನಮೆಂಬ ಭೂಪನಿರದಟ್ಟಿದ ಕಟ್ಟಿಗೆಕಾಜನಂದದಿಂ ೩೫

ವ: ಮತ್ತಮೀ ನಂದನವನದಲ್ಲಿ ಮುಂದೆ ಪೋದ ಸೈನಿಕರ ಕೋಳಾಹಳದಿಂ ಮಾಲೆಗೊಂಡು ಮೇಗೆ ನೆಗೆವುತ್ತಿರ್ದ ಪಿಕಶುಕಾದಿ ನಾನಾಪ್ರಕಾರ ಪಕ್ಷಿಗಳಿಂ ಪರಿಲಕ್ಷಿತಂಗಳಾದಕ್ಷುಣ್ಣ ವೃಕ್ಷಂಗಳಾಂ ಬಂದಪನೆಂಬುತ್ಸಾಹದಿಂ ವನಲಕ್ಷ್ಮಿಯೆತ್ತಿಸಿದ ಧ್ವಜಂಗಳಂ ತಿರ್ದುವು ಪೊಂಬಾಳೆಗಳ ಬಹಳಮಪ್ಪ ಪರಿಮಳಭರಕ್ಕೆಳಸುವಳಿಕುಳಂಗಳ ಶ್ರೇಣಿಯಿಂ ಸಮಾಲಂಬಿತಂಗಳಾಗಿ ಕೆಲದೊಳೊಪ್ಪಂಬೆತ್ತಿರ್ದ ಪೂಗದ್ರುಮಂಗಳಿಂದ್ರನೀಲಮಣಿಯ ತೋರಣದೋರಣೆ ಶೋಭೆಯನನುಕರಿಸುತ್ತಿರ್ದುವು ಮಂದಾನಿಳನೆಂಬ ನಟ್ಟುವಿಗನ ಪ್ರೇರಣೆಯಿಂದ ಬಾಳತಾಳಂಗಳ ಮೇಳದೊಡಗೂಡಿ ಪ್ರವಾಳವಿಳಸಿತಲತೆಗಳ್ ತಾಂಡವಾಡಂಬರಮಂ ವಿಡಂಬಿಸುವಂತಿರ್ದುವು ಚಂದನತಿಳಕಾಂಕಿತೆಯಾದ ವನಶ್ರೀ ಪ್ರೀತಿಯಿಂದಕ್ಷತ ದೂರ್ವೆಗಳಿಂದೆನಗೆ ಮಂಗಳಮಂ ಮಾಡುವಂತಿರ್ದಳೆಂದು ನಿಜಪ್ರಾಣೆನಿಯೊಡನೆ ನುಡಿಯುತ್ತುಂ ತದುದ್ಯಾನಮನೆಯ್ದಿದಾಗಳ್

ಓಡುವ ವಾಜಿಸಂತತಿಗಳೆಂಬ ವರೋರ್ಮಿಗಳಿಂದೆ ದಾನದೊಳ್
ಕೂಡಿದ ಕುಂಜರಾವಳಿಗಳೆಂಬ ಬಹಿತ್ರಕದಂಬಕಂಗಳಿಂ
ಗಾಡಿಗೆ ತಾಣಮಾದ ಪುರುಸೈನ್ಯ ಸಮುದ್ರದ ತೀರದಲ್ಲಿ ದಲ್
ಮೂಡಿದ ಶೈವಳಾವಳಿಯ ಶಂಕೆಯನಂಕುರಿಸಿತ್ತು ನಂದನಂ ೩೬

ವ: ಅನಂತರಂ

ಆ ವನದ ಪೊಱಗೆ ಸೈನ್ಯಮ
ನಾ ವಸುಧಾಧೀಶನಿರಿಸಿ ಗಂಧರ್ವರುಮಂ
ಸೇವಕಜನದಲ್ಲಿರಿಸಿದ
ನಾವೃತಕತಿಪಯಸುಭವ್ಯಸಮುದಯನಾಗಳ್ ೩೭

ಅನುಪಮಕರಾಗ್ರಮಂ ಪಾ
ವನಮಂ ನೆಱೆಮುಗಿದು ವಲ್ಲಭಾಸಂಯುಕ್ತಂ
ವನದೊಳಗೆ ಪೊಕ್ಕನಧಿಪಂ
ಘನಪಟಳಿಕೆಯೊಳಗೆ ಪುಗುವ ಚಂದ್ರನ ತೆಱದಿಂ ೩೮

ವ: ಅಂತು ಪೊಕ್ಕನಂತರಮನತಿದೂರದೊಳ್ ಮುಂದೊಂದೊಡೆ ಯೊಳೊಂದಸುಕೆಯ ಮರನುನ್ನತವಾದ ತನ್ನಯ ಕೊಂಬುಗಳಿಂದಾಗಸಮಂ ತುಡುಂಕುತ್ತುಂ ವೀತರಾಗಂಗೆಡೆಗೊಟ್ಟ ತಾಣದೊಳಾನಿರ್ಪುದುಚಿತಮಲ್ಲೆಂದು ರಾಗಂ ಬೇಗದಿಂ ಯೋಗಿಜನಂಗಳ ಚಿತ್ತವೃತ್ತಿಯಂ ಬಿಟ್ಟುಪೋಗಿ ಸಮಕ್ಷದೊಳಿರ್ದುಮಶೋಕ ವೃಕ್ಷದೊಳ್ ಪುಂಜಿಸಿರ್ದುದೆಂಬಂತೆ ಸಮುಲ್ಲಸತ್ಪಲ್ಲವಮಂಜರೀಪರಿರಂಜನದಿಂ ಕೆಂಕಮಾದ ಕಂಕೆಲ್ಲೀವೃಕ್ಷದ ಮೊದಲೊಳ್ ಪ್ರಕಟವಿಕಟಸ್ಫಟಿಕಶಿಲಾವಿಘಟಿತವಿಶಾಲ ಪ್ರದೇಶದೊಳ್

ನಿರುಪಮಕರುಣಾರಸದಿಂ
ಪರಿಪೂರ್ಣಂ ಸಕಳವಿಮಳವಿದ್ಯಾವಾಸಂ
ಪುರುಪುಣ್ಯಪುಂಜದಂತಿರೆ
ಭರದಿಂದೊಪ್ಪಿದುದು ಜೈನಮುನಿಸಮುದಾಯಂ ೩೯

ಪೂವಿನ ಮಾಲೆಯಂತೆ ರಮಣೀಯ ಗುಣಾನುಗತಂ ದಲಾಗಿ ಮೇ
ಘಾವಳಿಕಾಲದಂತಿರೆ ವಿನಷ್ಟರಜೋವ್ರಜಮಾಗಿ ಪದ್ಮಿನೀ
ಜೀವಿತನಾಥ ಸತ್ಕಿರಣದಂತೆ ತಮೋಹರಮಾಗಿ ಕಣ್ಗೆ ಶೋ
ಭಾವಹಮಾದುದಲ್ಲಿ ಜಿನಯೋಗಿಜನಂಗಳ ಮೊತ್ತಮೆತ್ತಲುಂ ೪೦

ವ: ಅದಱೊಳೊಂದೆಡೆಯೊಳ್

ಮುನಿಯೊರ್ವಂ ತನ್ನ ಶಿಷ್ಯಾವಳಿಗೆ ಪರಮಸಿದ್ಧಾಂತಮಂ ಪೇಳುತಿರ್ದಂ
ಮುನಿ ಮತ್ತೊರ್ವಂ ಮಹಾತರ್ಕದ ಬಗೆಯೊಳುಪನ್ಯಾಸಮಂ ಮಾಡುತಿರ್ದಂ
ಮುನಿ ಮತ್ತೊರ್ವಂ ಸಮಸ್ತಾಗಮದ ಪರರಹಸ್ಯಂಗಳಂ ಪೇಳುತಿರ್ದಂ
ಮುನಿ ಮತ್ತೊರ್ವಂ ಕರಂ ಲೌಕಿಕ ಸಕಳಕಳಾಖ್ಯಾನಮಂ ಮಾಡುತಿರ್ದಂ ೪೧

ದಿನಕರಬಿಂಬಕ್ಕಭಿಮುಖ
ರೆನಿಸಿರ್ದ ತಪೋಧನರ್ ಕೆಲರ್ ಚಿನ್ಮಯನಂ
ಮನದೊಳ್ ನಿಷ್ಕಂಪತೆಯಿಂ
ನೆನೆಯುತ್ತಿರ್ದರ್ ತಪಃಪ್ರಭಾವೋತ್ಯಧಿಕರ್ ೪೨

ವ: ತತ್ಕಾಲದೊಳಪಸಾರಿತನಿರವಶೇಷಚ್ಛತ್ರಚಾಮರಾದಿ ರಾಜಚಿಹ್ನನಪ್ಪ ಮಹಾರಾಜಂ ವಿನಯದ ಪುಂಜಮೆ ಮನುಜರಾಜರೂಪಂ ಕೈಕೊಂಡು ಮುಂದೆ ಬಂದು ನಿಂದುದೆಂಬಂತೆ ಕೈಗಳಂ ಮುಗಿದು ಜಿನಮುನಿಗಳ ಸಮುದಾಯದ ಶೋಭೆಯಂ ನೋಡುತ್ತುಂ ಬರ್ಪಾಗಳಾ ಸಮುದಾಯದ ನಟ್ಟನಡುವೆ

ತನ್ನಿಂ ಬೇರ್ಕೆಯ್ದು ಮೆಯ್ಯಂ ಪಗಲಿರುಳೆಂಬೀ ವಿಭೇದಂ ದಲೇನುಂ
ಕೆನ್ನಿಂ ಮೆಯ್ಯೊಳ್ಱಿತ್ತಿಲ್ಲಂ ಬಗವೊಡೆ ನಿಜನಾಸಾಗ್ರನಿರ್ವ್ಯಗ್ರನೇತ್ರಂ
ತನ್ನಿಂ ತನ್ನಲ್ಲಿ ತನ್ನಂ ಸ್ಥಿರತರಮನದಿಂ ಭಾವಿಸುತ್ತಿರ್ದನಂ ನಿ
ಷ್ಪನ್ನೋದ್ಬೋಧ ಪ್ರಭಾವಾಧಿಕಯತಿಪತಿಯಂ ಕಂಡನಾಗಳ್ ನರೇಂದ್ರಂ ೪೩

ಕೆಲದೊಳ್ ಮುನಿಪನ ಕುಂಚಂ
ಸಲೆ ಸೋಲ್ದರ ಕಣ್ಗೆ ಸೊಗಸನೀವುತ್ತಿರ್ಕುಂ
ವಿಳಸದ್ದಯಾಧ್ವಜಂ ಭೂ
ತಳದೊಳ್ ನೆಱೆ ನಿಮಿರ್ದು ಮೆಱೆವ ತೆಱದಂತೆ ವಲಂ ೪೪

ಆ ಮುನಿಗಳ ಚರಣಾರುಣ
ತಾಮರಸಾಂಕಿತದ ರಾಜಹಂಸಿಯ ತೆಱದಿಂ
ವಾಮೇಂದುಕಾಂತಗುಂಡಿಗೆ
ಭೂಮಿಯೊಳೊಪ್ಪುತ್ತುಮಿರ್ದುದತಿಶಯದಿಂದಂ ೪೫

ಪರಮತಪೋಲಕ್ಷ್ಮಿ ಮಹಾ
ದರದಿಂ ಕಸ್ತೂರಿಪಂಕಮಂ ಪೂಸಿದವೋಲ್
ಗುರುವರನ ಮೆಯ್ಯೊಳೆಲ್ಲಂ
ಪೊರೆಯೇಱಿದುದಮಮ ಬಹಳಮಲಮತಿಸಾಂದ್ರಂ ೪೬

ಕೃತವಿಗ್ರಹದಂಡಂ ಭೂ
ನುತಮುಕ್ತಾಹಾರಕಂ ಪ್ರಜಾಪಂ ಧೀರಂ
ಯತಿಚಕ್ರವರ್ತಿಯೆಂಬಿದ
ನತಿಶಯಿಸುತ್ತಿರ್ದನಾಗಳಾ ಮುನಿಮುಖ್ಯಂ ೪೭

ಭರದಿಂದಂ ಜಾತರೂಪಾಕೃತಿಯನಿರದೆ ತಾಳ್ದಿರ್ದು ಸೌವರ್ಣಪೂಜ್ಯೋ
ದ್ಧುರವತ್ಪಾದಂಗಳಿಂದಂ ಮೆಱೆದು ನಿರವಧಿಸ್ಥೈರ್ಯದಿಂದೊಪ್ಪಿ ತಾಂ ಮಂ
ದರಮೆಂಬಂತಿರ್ದ ಯೋಗೀಶ್ವರನನುರುಕಳಾವಾಸನಾಗಿರ್ದ ರಾಜಂ
ವರರಾಗಂ ಚಿತ್ತದೊಳ್ ಕೈಮಿಗುತಿರೆ ಬಲಗೊಂಡಂ ಮಹಾಭಕ್ತಿಯಿಂದಂ ೪೮

ವ: ಅಂತು ಮೂಱುಸೂಳ್ವರಂ ಬಲಗೊಂಡು ಮೂಱುಬಾರಿ ಜಯಜಯ ಘೋಷಣಂಗೆಯ್ದು ಮಣಿಕನಕರಜತಮಯಂಗಳಾದ ಭಾಜನಂಗಳೊಳ್ ತುಂಬಿ ತಂದರ್ಚನಾದ್ರವ್ಯಂಗಳಿಂ ಪಾದಾರ್ಚನಾವಿರಚನಾನಂತರಂ ಪಂಚಮುಷ್ಟಿಪರಿನಿಷ್ಠಿತಾಂಗ ಯಷ್ಟಿಯಾಗಿ ವಂದನೆಯಂ ಮಾಡಿ ಮುಂದೆ ನೆಲದೊಳ್ ಕುಳ್ಳಿರ್ದು ನಿಟಿಳತಟಘಟಿ ತಾಂಜಳಿಪುಟನಾಗಿರ್ಪನ್ನೆಗಂ

ಅಗಣಿತ ದಯಾಂಬುನಿಧಿ ಶೀ
ತಗುವೆನಿಸುವ ಯೋಗಿಯೋಗನಿಷ್ಠಾಪನೆಯಂ
ಮಿಗೆಮಾಡಿ ಪರಸಿ ಮುಖದಿಂ
ನೆಗೆದುದು ವರಧರ್ಮವೃದ್ಧಿಯೆಂಬೀ ನಿನದಂ ೪೯

ವ: ಅನಂತರಂ

ಮದದುದಯಕ್ಕೆ ಕಾರಣಮಿದೆನಿಸಿರ್ದ ಸಮಸ್ತರಾಜ್ಯಸಂ
ಪದದೊದವೆತ್ತಮೀ ವಿನಯರೂಪಸಮುತ್ಕರುಷಂ ದಲೆತ್ತಮಿಂ
ತಿದು ನವಪುಣ್ಯದಿಂದೆ ದೊರೆಕೊಂಡುದು ಭಾವಿಪೊಡೀನ್ನಪಂಗಮೆಂ
ದುದಿತಕೃಪಾರಸಂ ಬಿಡದೆ ನೋಡಿದನಾತನನಾ ಮುನೀಶ್ವರಂ ೫೦

ವ: ಬಳಿಯಂ ನಿರ್ಭರಭಕ್ತಿಯಿಂದಾ ಸಾರ್ವಭೌಮಂ ರೋಮಾಂಚಚರ್ಚಿತ ಶರೀರನಾಗಿ ತನ್ಮುನೀಂದ್ರಚರಣಾರವಿಂದಮಂ ತನ್ನಯ ದಂತಪಂಕ್ತಿಕಾಂತಿಸಂತತಿಯೆಂಬ ಹರಿಚಂದನ ಚರ್ಚೆಯಿಂದರ್ಚಿಸುತ್ತುಮಿರ್ದಪನೆಂಬಂತೆ ಬಿನ್ನಪಮೆಂದಿಂತೆಂದಂ

ದೂರಂ ಪೋಗಿಯು ಪಾವನ
ಚಾರುಶ್ರೀಪದಮನೀಕ್ಷಿಸಲ್ವೇಳ್ಪುದು ಮ
ತ್ತೋರಂತಾತನೆ ಬಂದೊಡೆ
ಧಾರಿಣಿಯೊಳಗಾನೆ ಧನ್ಯನಾನೆ ಕೃತಾರ್ಥಂ ೫೧

ಇಂದು ಮುನೀಶ ನಿನ್ನ ಚರಣಾಂಬುಜ ಸಂಗತಿಯಿಂದಮಾದೆ ನಾ
ನಿಂದು ಸಮಾನಕೀರ್ತಿಯುತನುನ್ನತಪುಣ್ಯನಿವಾಸನಾದೆನೀ
ಪಂದುಗದಿಂದ ಪುಟ್ಟುವ ಕುದುಃಖಪರಂಪರೆಯೆಂಬ ತಾಪಮಂ
ಕುಂದಿಸಿದಾತನಾದೆನುರುಶಾಶ್ವತಲಕ್ಷ್ಮಿಯೊಳೊಂದಿ ಬಳ್ದಪೆಂ ೫೨

ದಿನಪನ ಮುಂದೆ ಕತ್ತಲೆಯ ಮೊತ್ತದಗುರ್ವು ತೆರಳ್ದು ಪೋಪವೊಲ್
ಘನಮೆನಿಸಿರ್ದ ದಳ್ಳುರಿಯ ಮುಂದರಗಿಂತು ಕರಂಗಿಪೋಕುಮ
ತ್ತನಿಲನ ಮುಂದೆ ವಾರಿಧರದೊಡ್ಡು ಕರಂ ಪರಿದೋಡಿ ಪೋಪವೊಲ್
ಮುನಿಪತಿ ನಿನ್ನ ಮುಂದೆ ದುರಿತಪ್ರಕರಂ ನೆಱಕೆಟ್ಟುಪೋಗದೇ ೫೩

ಅನುಪಮಮಾದ ಮತ್ತೆ ಬೆಳಗಂ ಸಲೆ ಪಾರದ ದೋಷಮಾತ್ರಸಂ
ಜನಿ ತನಗಿಲ್ಲದಂತರಿತಮಂ ವಿಶದೀಕರಿಸುತ್ತುಮಿರ್ಪ ಸ
ನ್ಮುನಿಪತಿ ನಿನ್ನ ಬೋಧಮಯದೃಷ್ಟಿಗಗೋಚರಮಾದ ವಸ್ತು ತಾಂ
ಘನಪಥಪುಷ್ಪಸನ್ನಿಭಮದೆಂದುಱೆ ಭಾವಿಪುದೆನ್ನಮಾನಸಂ ೫೪

ನಿನ್ನಯ ಸಂದರ್ಶನದಿಂ
ದೆನ್ನಿಷ್ಟಂ ಸಿದ್ಧಮಾದುದದು ತಾಂ ಬೇಗಂ
ನಿನ್ನಿಂದಱಿಯಲ್ಬಟ್ಟೊಡ
ಮೆನ್ನ ಜಡತ್ವಾತಿರೇಕದಿಂ ಪೇಳ್ವೆನದಂ ೫೫

ವ: ಅದೆಂತೆಂದೊಡೆನ್ನೀ ಪ್ರಾಣಪ್ರೀತೆಯಪ್ಪ ಕುಲಸ್ತ್ರೀಗೆ ಕಾಲದೊಳಾದೊಡಂ ಪುತ್ರಲಾಭಮಾಗದಿರ್ದುದು ರಾಜ್ಯಭಾರಧಾರಣಧೌರೇಯನಪ್ಪ ಕುಮಾರನನೊರ್ವನನಾದೊಡಂ ಕಾಣದ ಕಾರಣಮೀಗಳೀ ಚತುಸ್ಸಮುದ್ರಾಂಕಿತಮಾದ ಮೇದಿನೀಮಂಡಳಮೆನ್ನಯ ಬಾಹುದಂಡಕ್ಕೆ ಕೇವಳಂ ಭಾರಮಾಗಿ ತೋಱುತ್ತುಮಿರ್ಪುದದಱಿಂದಾನತಿಕ್ಲೇಶಮಂ ತಾಳ್ದಿದೆಂ

ಧರ್ಮಮುಮರ್ಥಮುಂ ಬಿಡದೆ ಕಾಮಮುಮೆನ್ನೊಳಗೊಂದಕೊಂದು ಸಾ
ಸಿರ್ಮಡಿಯಾಗಿ ಪೆರ್ಚಿದುದು ಮತ್ತಿರದೀಗಳುಮೆನ್ನ ಮಾನಸಂ
ನಿರ್ಮಳಮಪ್ಪ ಮೋಕ್ಷಸುಖಮಂ ಪಿರಿದುಂ ಬಯಸುತ್ತುಮಿರ್ದೊಡಂ
ಪೆರ್ಮೆಯೊಳೊಂದುವಾತ್ಮಭವಲಾಭಮದಿಲ್ಲದೆ ಮಾಣ್ದು ಬಳ್ದಪೆಂ ೫೬

ಎಮ್ಮಯ ವಂಶದೊಳ್ ನೆಗಳ್ದ ಭೂಪತಿಗಳ್ ವರಪುಣ್ಯರೆಲ್ಲರುಂ
ತಮ್ಮಯ ಕೆನ್ನೆಯೊಳ್ ನರೆಯನೀಕ್ಷಿಸಿದಾಕ್ಷಣದಲ್ಲಿ ರಾಜ್ಯಮಂ
ಸಮ್ಮದದಿಂದಮಾತ್ಮಭವರ್ಗಿತ್ತುಱೆ ದೀಕ್ಷಿತರಾದರಂತದ
ಕ್ಕಂ ಮನಮುಳ್ಳೊಡಂ ತನುಜರಿಲ್ಲದವಕ್ಕಡಸಿತ್ತು ವಿಘ್ನಕಂ ೫೭

ಎಂದಾದಪನೀ ಲಲನೆಗೆ
ನಂದನನುರುರಾಜ್ಯಭಾರಧುರಧರನೆಂಬೀ
ಸಂದೇಹಮೆನ್ನ ಮನದೊಳ್
ಕುಂದದೆ ನೆಲಸಿರ್ದುದೆಂದು ಬಿನ್ನಯಿಸಲೊಡಂ ೫೮

ವ: ಆಗಳಾ ಭೂಪಾಳನಂ ಮನದೊಳವಧರಿಸಿ ತನ್ಮುನೀಂದ್ರಚಂದ್ರಂ ತನ್ನಯ ದಶನರಶ್ಮಿವಿಸರಮೆಂಬ ಸುಧಾರಸಧಾರಪೂರದಿಂದಾತಂಗೆ ರಾಜ್ಯಾಭಿಷೇಕಮಂ ಮಾಳ್ಪಂತೆ ಮೃದುಮಧುರಗಂಭೀರಧ್ವನಿಯಿಂದಿಂತೆಂದಂ

ನೀನೆ ಕೃತಾರ್ಥಕಂ ಬಗೆಯೆ ನೀನೆ ವಿಶೇಷಿತ ಭಾಗ್ಯಭಾಜನಂ
ನೀನೆ ಸಮಸ್ತ ಸೌಖ್ಯನಿಧಿ ನೀನೆ ಜಗತ್ರಯದಿಂದೆ ವಂದ್ಯನುಂ
ನೀನೆ ವಿಶಿಷ್ಟಲಕ್ಷ್ಮಿಗೆ ನಿವಾಸನುಮೆಂದೊಡೆ ನಿನ್ನ ಪೆರ್ಮೆಯಂ
ಮಾನವರಾರ್ಪರೇ ಪೊಗಳಲುರ್ವರೆಯೊಳ್ ನರನಾಥಶೇಖರಾ ೫೯

ನದಿಗಳ್ಗೆ ಸಿಂಧುವೆಂತಾ
ಸ್ಪದಮಾದುದದಂತೆ ಸಕಳಮಾಂಗಲ್ಯಕ್ಕಂ
ಪದಮಾಗಿರ್ದಪೆಯೆಂದೊಡೆ
ಪದೆಪಿಂ ನಿನ್ನಳವದನ್ಯಸಾಧಾರಣಮೇ ೬೦

ಮೂಱುಂ ಜಗಮುಂ ನಿನ್ನೀ
ಮೀಱಿದ ಜಸಮೆಂಬ ಪಾಲ ಮುನ್ನೀರೊಳ್ ತಾಂ
ಬೇಱೊಂದು ನೊರೆಯ ತೆಱದಿಂ
ತೋಱುವುದಾದಪುದು ವಂದಿಜನಮಂದಾರಾ ೬೧

ಇಂತಪ್ಪೀ ಚಿಂತೆಗಂ ಭಾಜನನವನಿಪ ನೀನಾಗೆ ತೀವ್ರಪ್ರಕಾಶಂ
ಧ್ವಾಂತಕ್ಕೆಂತಲ್ತು ತಾಂ ಭಾಜನಮವನಿಯೊಳಾಂ ಕ್ಷುಲ್ಲಕಂ ತಪ್ಪದೆಂಬೀ
ಭ್ರಾಂತಂ ಬಿಟ್ಟಿರ್ಪುದಿನ್ನಾದಪೆ ನಿಖಿಳಜನಾನೀಕದಿಂ ಪೂಜ್ಯನುಂ ನಿ
ನ್ನಂತಾವಂ ಜನ್ಮಸಾಫಲ್ಯಮನುಱ್ ಪಡೆದಂ ಭೂಪರೊಳ್ ಧರ್ಮಪಾಲಾ ೬೨

ತ್ರಿಜಗದ್ಗುರುವೆನಿಸುವ ಧ
ರ್ಮಜಿನಾಧೀಶಂಗೆ ತಂದೆಯಾದಪೆಯೆಂದೊಡೆ
ನಿಜಪುಣ್ಯದೇಳ್ಗೆ ಲೋಕದೊ
ಳಜನಿಸಿದುದು ಪಿರಿದುಮದ್ಭುತತ್ವದ ಪೆಂಪಂ ೬೩

ವ: ಮತ್ತಂ ನಿನ್ನ ಪತ್ನಿಯಪ್ಪ ಸುವ್ರತಮಹಾದೇವಿ ಸಾಮಾನ್ಯಳಲ್ತು

ಲಾವಣ್ಯಮೆಂಬ ರಸದಿಂ
ತೀವಿರ್ದ ಸಮುದ್ರವೇಳೆಯಂತೆಸೆದಿರ್ದೀ
ದೇವಿ ನಿಜಗರ್ಭದೊಳ್ ಸ
ದ್ಭಾವದೆ ತಾಳ್ದಪಳನರ್ಘ್ಯರತ್ನಮನಾದಂ ೬೪

ದುರಿತವಿಷಾಪಹರಂ ಭಾ
ಸುರಕಾಂತಿ ಸಮೇತಮಖಿಳಜನಸಂಸ್ತುತ್ಯಂ
ವರಮೀ ಸ್ತ್ರೀರತ್ನಂ ತಾಂ
ಧರಣೀತ್ರಯ ಪೂಜ್ಯಮೆಂದು ಬಗೆ ನೀಂ ಮನದೊಳ್ ೬೫

ಇನ್ನಱುದಿಂಗಳುಂ ನೆಱೆಯೆ ಪೋಪಬಳಿಕ್ಕ ಚತುರ್ದಶಾಧಿಕಂ
ಸನ್ನುತನಪ್ಪ ಧರ್ಮಜನನಾಯಕನೀಕೆಯ ಗರ್ಭದಲ್ಲಿಗ
ತ್ಯುನ್ನತಬೋಧಿ ಬಂದಪನಿದಂ ಸಲೆನಂಬು ಸುಧಾಂಶುಮಾಲಿಬಿಂ
ಬಂ ನಭದಿಂದೆ ಬಂದು ಕೊಳದೊಳ್ ಪ್ರತಿಬಿಂಬಿಸುವಂತೆ ರಾಗದಿಂ ೬೬

ಸರ್ವಾರ್ಥಸಿದ್ಧಿಯಿಂದಂ
ನಿರ್ವ್ಯಾಜಿನಜಿನಾಧಿನಾಥನೆಳ್ತಂತದಪನೀ
ಸರ್ವವಿನೂತೆಯ ಗರ್ಭ
ಕ್ಕುರ್ವರೆಗಾಶ್ಚರ್ಯಭಾವಮಂ ಮಾಡುತ್ತುಂ ೬೭

ಕ್ಷುಲ್ಲಕರಪ್ಪ ಮಕ್ಕಳುಗಳಂ ಪಡೆವಂಗನೆಯರ್ ಪಲಂಬರಂ
ತುಳ್ಕೊಡಮೇನು ಪುಣ್ಯನಿಧಿಯಾದ ಸುಪುತ್ರನನೊರ್ವನಂ ಕರಂ
ಸಲ್ಲಲಿತಾಂಗನಂ ಪಡೆವ ಕಾಮಿನಿ ಧನ್ಯೆಯದೆಂತು ಪೂರ್ವದಿ
ಗ್ವಲ್ಲಭೆ ಚಂದ್ರನಂ ಪಡೆವಳೊರ್ವಳೆ ಸಾಲದೆಯನ್ಯರಿಂದಮೇಂ ೬೮

ಇಂತಪ್ಪಾತ್ಮಜಲಾಭಮಲ್ಲದೆ ದಲೀ ಸಂಸಾರಿಗಳ್ಗಂ ಮಹಾ
ಸಂತೋಷಂ ಪೆಱತುಂಟೆ ನೋಳ್ಪೊಡಧಿಕಂ ನಾವಿರ್ವರೇ ಮಾನ್ಯರ
ತ್ಯಂತಂ ಭೂತ್ರಯದಲ್ಲಿಯೆಮ್ಮಯ ಲಸತ್ಗಾರ್ಹಸ್ಥ್ಯಮುಂ ಕಲ್ಪಪ
ರ್ಯಂತಂ ಶ್ಲಾಘ್ಯತೆಯಂ ಸಮಂತು ಪಡೆಗೊಂದಾನಂದಮಂ ತಾಳ್ದಿರಿಂ ೬೯

ವ: ಎಂದಾ ಮುನೀಶ್ವರಂ ತನ್ನಯ ವಚನವಿಶೇಷದಿಂದಾ ದಂಪತಿಗಳ ಮನೋಗತ ಚಿಂತಾವಿಷಾದಮಂ ಪರಿಹರಿಸಿದೊಡಮಾಕ್ಷಣದೊಳವರಪರಿಮಿತ ಪರಮಾನುರಾಗ ರಸಮಂತರಂಗದೊಳ್ ತುಂಬಿ ತುಳುಂಕಾಡಿ ಪವಣಿಸದೆ ಪೊಱಪೊಣ್ಮುದುದೆಂಬಂತೊರ್ಮೊದಲೊಳ್ ನಿಬಿಡಮಾಗೆ ನೆಗೆದ ಪ್ರಮಾದಾಶ್ರುಪ್ರವಾಹದಿಂ ವಿಪುಳಪುಳಕಾಂಕುರಂ ಪೆರ್ಚಿ ಭಾವಿ ಸುತೋದಯಶ್ರವಣದಿಂದಾದ ಸಂಮದದಿಂದ

ವರಡಿಗೀರ್ವರುಮಡಿಗಡಿಗೆ ಪೊಡೆವಡುತ್ತುಂ ಮತ್ತಮದಭ್ರಸಂಭ್ರಮಸಂಜಾತ ಗದ್ಗದವಚನದಿಂದಾ ನೃಪಾಳತಿಳಕನಿಂತೆಂದಂ

ಆವ ಸ್ವರ್ಗದೊಳಿರ್ದಪಂ ಪರಮಸಮ್ಯಕ್ತ್ವಂ ದಲಾತಂಗೆ ಮ
ತ್ತಾವ ಪ್ರೋದ್ಭವದಲ್ಲಿಯಾದುದು ಜಿನಾಧೀಶತ್ವಮಂ ಮಾಳ್ಪ ಪು
ಣ್ಯಾವಿರ್ಭಾವಮದಾವಜನ್ಮದೊಳಗಾಯ್ತಿಂತೆಲ್ಲಮಂ ವಿಸ್ತರಂ
ನೀವೀ ಪೂರ್ವಭವಾನುಬಂಧಮನಿದಂ ಪೇಳಲ್ಕೆವೇಳ್ಕುಂ ಕರಂ ೭೦

ಭಾವಿ ಜಿನಪತಿಯ ಪೂರ್ವಭ
ವಾವಳಿಯಂ ಕೇಳ್ವ ವಾಂಛೆಯೆನ್ನಯ ಮನದೊಳ್
ಪೀವರಮಾಗಿರ್ದಪುದೆಂ
ದಾ ವಸುಧಾಧೀಶನಾಗಳವರಂ ಕೇಳ್ದಂ ೭೧

ಅವಧಿಜ್ಞಾನಂ ದಲೆಂಬೀಕ್ಷಣವಿಕಸನಮಂ ಮಾಡಿದಂ ಯೋಗಿಮುಖ್ಯಂ
ಪ್ರವರಾಚಾರಂ ಜಿನಾಧೀಶ್ವರಮತಗಗನೋಜ್ಜೃಂಭಮಾಣಾರ್ಕರೂಪಂ
ನವತೇಜೋರಾಜಿತಂ ಬಾಹುಬಲಿ ಸುಕವಿರಾಜಂ ಸುದುಸ್ಸಹ್ಯಚೇತೋ
ಭವದುರ್ಗರ್ವಾದ್ರಿಚೂರ್ಣೀಕರಣಪವಿಧರಂ ಚಾತುರೀಜನ್ಮಗೇಹಂ ೭೨

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮಜಿನಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವಪ್ರಸಾದ ಸಂಪಾದಪಾದನಿಧಾನದೀಪವರ್ತಿಯುಭಯಭಾಷಾ ಕವಿಚಕ್ರವರ್ತಿ ಬಾಹುಬಲಿ ಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಮುನೀಂದ್ರವಂದನಾ ನಿಮಿತ್ತಂ ಯಾತ್ರೋತ್ಸವವರ್ಣನಂ ತೃತೀಯಾಶ್ವಾಸಂ.

●

ಚತುರ್ಥಾಶ್ವಾಸಂ

ಶ್ರೀದಯಿತಂ ಸಕಳಜನಾ
ಹ್ಲಾದಿ ವಿಬೋಧಪ್ರಯೋಗದಿಂ ರಾಗಿಸಿದಂ
ಮೇದಿನಿಪತಿ ಪರಿಪೂಜಿತ
ಪಾದಯುಗಂ ಸರಸಚತುರಕವಿಕುಳತಿಳಕಂ ೧

ವ: ಆಗಳಾ ಮುನಿನಾಯಕಂ ನಿಜಪರಮಾವಧಿಬೋಧದಿಂದಾ ಜನಾಧಿ ನಾಯಕನ ಪಿಂದಣ ಜನ್ಮವೃತ್ತಿಯಂ ತನ್ನಂಗೈಯೊಳಗಣ ಸ್ಫಟಿಕಮಣಿಯಂತತಿವ್ಯಕ್ತ ಮಾಗಱಿದು ವೃತ್ತಾಂತ ದೊಳ್ ಸಾಕ್ಷೀಭೂತಪ್ರಮಾಣಪುರುಷನಂತೆ ಸಂತೋಷೋತ್ಪಾದಕ ಮಾದ ಮೃದುನಿನಾದದಿಂದಿಂತೆಂದಂ

ಜಿನನ ಚರಿತ್ರದೊಂದುಕಥೆಯಂ ನೆಱೆಪೇಳ್ದೊಡೆ ಕೇಳ್ದೊಡಂ ದಲಾ
ತನ ದುರಿತಂಗಳೆಯ್ದೆ ಪರಿದೋಡುಗುಮೀ ಹಿತವಸ್ತುಸಿದ್ಧಿಯುಂ
ಜನಿಯಿಕುಮಂತು ಕಾರಣಮೆ ನೀಂ ಬೆಸಗೊಂಡ ಭವಾಂತರಪ್ರಪಂ
ಚನಮನದೆಂತುಟಂತುಸುರ್ವೆ ನಾನಿದನೀಗಳೆ ಕೇಳ್ ನೃಪಾಗ್ರಣೀ ೨

ವ: ಅದೆಂತೆಂದೊಡೆ ಮೇರುಗಿರಿಗಳಿಂ ದ್ವಿಗುಣಮಾದ ವಿಸ್ತಾರದಿಂ ಚತುರ್ಗುಣ ಮದಾಗಿರ್ದಂತೆ ತಾನೆನ್ನಯ ಪೆಸರಿಂದಂ ಮುಖ್ಯಮಪ್ಪ ಪೆಸರನಾಂತುದೆಂಬೀ ಕೋಪದಿಂದನೂನವಾಹಿನೀಸಹಿತಮಾಗಿ ಬಂದು ಸುತ್ತಿಮುತ್ತಿಕೊಂಡಿರ್ದುದೆಂಬಂತೆ ಧಾತಕೀಷಂಡದ್ವೀಪಂ ಲವಣಸಮುದ್ರಸಮೇತಮಾದ ಜಂಬೂದ್ವೀಪಮಂ ಬಳಸಿ ಕೊಂಡಿರ್ಕುಮಾ ಧಾತಕೀಷಂಡದ್ವೀಪದಲ್ಲಿ

ಬಹುವಿಧನೂತ್ನರತ್ನಚಯನಿರ್ಮಿತಚೈತ್ಯನಿಕೇತನಂಗಳಿಂ
ಸಹಿತಮನಲ್ಪ ಕಲ್ಪತರುನಂದನರಾಜಿವಿರಾಜಿತಂ ಮಹಾ
ಮಹಿಮಸಮನ್ವಿತಂ ರತಿಸಮುತ್ಸುಕಮಾನಸದೇವದಂಪತೀ
ಸ್ಪೃಹಿತವಿಶಾಲಕಂದರಮದೊಪ್ಪಮನಾಳ್ದುದು ಪೂರ್ವಮಂದರಂ ೩

ಅಂಬರತಳಮೆಯ್ದೆ ನಿರಾ
ಲಂಬಂ ಮುಱಿದೀ ಧರಿತ್ರಿಯೊಳ್ ಬಿಳ್ದಪುದೆಂ
ದಂಬುಜಜಂ ನಟ್ಟಿರಿಸಿದ
ಪೊಂಬಣ್ಣದ ಕಂಭಮೆಂಬಿನಂ ರಂಜಿಸುಗುಂ ೪

ವ: ಆ ಪೂರ್ವಮೇರುಗಿರಿಯ ಪೂರ್ವದಿಶಾಪ್ರದೇಶದಲ್ಲಿ

ಚಾರುಜಿನಧರ್ಮಗೇಹಂ
ಸಾರತರಾಗಣ್ಯಪುಣ್ಯಜನಸಂದೋಹಂ
ಭೂರಿಸೌಖ್ಯಾವಗಾಹಂ
ರಾರಾಜಿಸುತಿರ್ದುದಮಮ ಪೂರ್ವವಿದೇಹಂ ೫

ತಿಂಗಳ್ಗೆ ಮೂಱುಮಳೆಗಳ್
ಪಿಂಗದೆ ಪದನಾಗಿ ಕೊಳ್ವವಲ್ಲಿಯ ಬೆಳೆಯುಂ
ಕಂಗದ್ಭುತಮಂ ಪೆರ್ಚಿಪು
ದಂಗೀಕೃತಬಹಳಧಾನ್ಯಮಂಜರಿಕೆಗಳಿಂ ೬

ಬಱನಿಲ್ಲಾಱಿಡಿಯಿಲ್ಲ ಕಳ್ಳರ ಭಯಂ ಮುನ್ನಿಲ್ಲ ಬೆರ್ಚಿಲ್ಲ ದಲ್
ಮಱೆಯೇಱಿಲ್ಲ ವಿಪತ್ತಿಯಿಲ್ಲ ರುಜೆಯಿಲ್ಲುತ್ಪಾತಮಿಲ್ಲಾವಗಂ
ಸೆಱೆಕೊಳ್ಳಿಲ್ಲ ನಿರೋಧಮಿಲ್ಲ ಪಿಡಿಕಟ್ಟಿಲ್ಲುದ್ಧಸಂಪತ್ತಿಯಿಂ
ಮೆಱೆವಾ ಪೂರ್ವವಿದೇಹದೊಳ್ ಕುಮತವಾರ್ತಾವೃತ್ತಿಯಿಲ್ಲೆಲ್ಲಿಯುಂ ೭

ಜಿನಪತಿಯ ಸಮವಸರಣಂ
ಘನಮೊಪ್ಪುತ್ತಿರ್ಪುದಾವಕಾಲದೊಳಂ ತ
ನ್ಮನುಜರ್ ಪರಮಾಯುಷ್ಯರ್
ತನುಗಳವಯ್ನೂಱುಬಿಲ್ಗಳುತ್ಸೇಧಂಗಳ್ ೮

ವ: ಇಂತದ್ಭುತಾತಿಶಯವನುಳ್ಳ ಪೂರ್ವವಿದೇಹದ ಮಧ್ಯದೊಳ್

ವಿಚಲದತುಚ್ಛಮತ್ಸ್ಯಮಕರೋತ್ಕರಕರ್ಕಶಕರ್ಕಶಾವಳೀ
ನಿಚಿತೆ ತಟಾಂತರಾಳಕಳಯಜ್ಜಳಬುದ್ಬುದಜಾತೆ ನೂತನ
ಪ್ರಚುರಸಮುಚ್ಚಲತ್ಸಲಿಲಬಿಂದುವಿರಾಜಿತೆ ಫೇನಫೇನವೈ
ಕಚಯುತೆ ಸೀತೆಯೆಂಬ ತೊಱೆ ತೋಱಿಸುತಿರ್ದುದು ವಿಸ್ಮಯತ್ವಮಂ ೯

ಸುಕನತ್ಕಂಕಣಯುಕ್ತೆ ಚಂಚಲಲಸನ್ಮೀನಾಕ್ಷಿ ಭಾಸ್ವತ್ತ್ವವಾ
ಳಕೆ ಪದ್ಮಾನನೆ ನಿರ್ಮಲಾಕೃತಿ ಮಹಾರಾಮಾನ್ವಿತೆ ಸ್ಫೂರ್ತಿಮ

ತ್ಸುಕವಿಸ್ತುತ್ಯೆ ಕುಲೀನೆ ಸತ್ಕುವಳಯಪ್ರಖ್ಯಾತೆಯಾಗಿರ್ದು ಮಂ
ಜುಕೆ ಸೀತಾನದಿ ರಂಜಿಸಿತ್ತು ಮಿಗೆ ಸೀತಾದೇವಿಯೆಂಬಂದದಿಂ ೧೦

ಪಿರಿದುಂ ತೀರಂಗಳೆಂಬ ಪ್ರವಿಲಸದಧರೋಷ್ಠಂಗಳಿಂ ರಮ್ಯಮಾಗಿ
ರ್ದುರುಮೀನವ್ರಾತಮೆಂಬ ಸ್ಫುರಿತತರ ರದಶ್ರೇಣಿಯಿಂದೊಪ್ಪಿ ವಾರಿ
ತ್ತರಮೆಂಬುತ್ಕೃಷ್ಟಜಿಹ್ವಾಗ್ರದಿನುಱೆ ಮೆಱೆದಂಭೋಜರೇಣುಪ್ರರಾಗಂ
ಧರೆಯೆಂಬೀ ಕಾಂತೆ ಬಾಯಂ ತೆಱೆದವೊಲೆಸವುತ್ತಿರ್ದುದಾ ಸಿಂಧುವೆತ್ತಂ ೧೧

ವಿರಹಿಣಿಯಂತುತ್ಕಳಿಕಾ
ಭರಿತಂ ಗೋವಿಂದನಂತೆ ಕಮಲೋಪೇತಂ
ಸ್ಮರನಂತೆ ಮಕರಯುಕ್ತಂ
ಧರಣಿಯೊಳಾ ನದಿ ವಿಚಿತ್ರಮಾದುದು ಪಿರಿದುಂ ೧೨

ವ: ಮತ್ತಮುಭಯಕೂಲವರ್ತಿ ನರನಾರೀಜನಂಗಳ್ ಜಳಕೇಳೀವಿನೋ ದಾರ್ಥಮಾಗಿ ಬಂದು ಚಂದ್ರಕಾಂತಶಿಲಾಮಯಂಗಳಾದ ಕೂಲಂಗಳ ಶೋಭಾವಿ ಲೋಕನ ಕೌತೂಹಳಸಮಾಕುಳಿತೆಯರ್ ತಮ್ಮಯ ಕಟಾಕ್ಷವಿಕ್ಷೇಪ ಪರಂಪರಾ ವ್ಯಾಪಾರಮನಲ್ಲಿ ಚಿತ್ರರಿಸಲೊಡವೆಡೆವಜೆಯದೆ ಪಗಲೊಳೊಸರ್ವುದಜೆಂದಂ ಚಂದ್ರಮನ ಚಂದ್ರಿಕಾಪ್ರಸರದಿಂದಿರುಳೊಸರ್ವುದಜೆಂದಂ ಪುಟ್ಟಿದ ನೀರಸೀಕರಾ ಪೂರಂಗಳಿಂ ತುಂಬಿ ಪಗಲುಮಿರುಳುಮೆಲ್ಲಾ ಕಾಲದೊಳಮೆಡೆಯುಡುಗದೆ ನಿಬಿಡ ಮಾಗೆರಡುಂತಡಿಗಳ ನೊರಸುತ್ತುಂ ಪರಿವಸಾತಿಶಯಮಾದ ಸೀತಾನದಿಯ ತೆಂಕಣ ತೀರದಲ್ಲಿ

ಪಂಚೇಂದ್ರಿಯಸುಖವಿಷಯಂ
ಸಂಚಿತವಿತ್ತಪ್ರವಿತ್ತಜನತಾವಿಷಯಂ
ಪ್ರಾಂಚಿತದಾನಸುವಿಷಯಂ
ತಾಂ ಚೆಲ್ವಾಯ್ತೆಯ್ದೆ ವತ್ಸಮೆಂಬುದು ವಿಷಯಂ ೧೩

ಸ್ತ್ರೀಜನಮೆಲ್ಲಂ ದಿವ್ಯ
ಸ್ತ್ರೀಜನಮೆ ಮನುಷ್ಯರೆಲ್ಲರುಂ ವಿಬುಧರೆ ಮ
ತ್ತಾ ಜನಪದಮುರುಲಕ್ಷ್ಮೀ
ಭಾಜನಕಂ ಸ್ವರ್ಗದಂತೆ ತಳೆದುದು ಪೆಂಪಂ ೧೪

ಮಣಿಗಳ್ ಪುಟ್ಟವ ಬೆಟ್ಟಮಿಲ್ಲ ಕಮಲಂಗಳ್ ಪುಟ್ಟದುಚ್ಚೈಸ್ಸರೋ
ಗಣಮುಂ ನೋಳ್ಪಡಮಿಲ್ಲ ಪೊನ್ನ ಕಣಿಗಳ್ ತಾಂ ಪುಟ್ಟವ ಕ್ಷೇತ್ರಮಿ
ಲ್ಲಣುಮಾತ್ರಂ ವರಮೌಕ್ತಿಕಂಗಳ ಸಮೂಹಂ ಪುಟ್ಟದುದ್ಯತ್ತರಂ
ಗಿಣಿ ಮತ್ತಿಲ್ಲತಿಶೋಭೆಗೆಯ್ದೆ ನೆಲೆಯಾದಾ ದೇಶದಲ್ಲೆಲ್ಲಿಯುಂ ೧೫

ಏರಿಗಳೆಂಬ ಪುರ್ವುಗಳಿನೊಪ್ಪಮನಾಳ್ದತಿಶೋಭೆಯಿಂ ಮನೋ
ಹಾರಿಗಳಪ್ಪ ಪೆರ್ಗೆಱೆಗಳೆಂಬ ವಿನಿಶ್ಚಲಲೋಚನಂಗಳಿಂ
ಭೂರಮೆ ದೇಶಸಂಪದಮನೀಕ್ಷಿಸಿ ತಾಂ ಕಳಮಾಂಕುರಂಗಳ
ಪ್ರೇರಣದಂಭದಿಂದೆ ಪುಳಕಾಂಕಿತೆಯಾದವೊಲೆಯ್ದೆ ರಂಜಿಕುಂ ೧೬

ಪಿರಿದುಂ ಕುಲ್ಯಾವಿತಾನಂಗಳೊಳೊಗೆದ ವಿಕಾಸತ್ವಮಂ ತಾಳ್ದಿದಾ ಪಾಂ
ಡುರಪಂಕೇಜಂಗಳಿಂದಂ ಮೆಱೆವ ಬಹಳಸಸ್ಯಂಗಳಿಂ ತೀವಿಯೆಲ್ಲಂ
ಹರಿತಾಭಂ ಶಾಲಿವಪ್ರಸ್ಥಳಮತಿಶಯಿಸುತ್ತಿರ್ಪುದಾಕಾಶದೇಶಂ
ವರತಾರಾಕ್ರಾಂತಮಾಧಾರಕರಹಿತತೆಯಿಂ ಬಿಳ್ದುದೆಂಬಂದಿಂದಂ ೧೭

ಅಲ್ಲಿಯ ಸಾರಮಪ್ಪ ಬೆಳಸಂ ಸಲೆ ಕೊಯ್ದುಱೆ ತೀರ್ಚಲಾಱರಂ
ತಲ್ಲದೆ ಕೊಯ್ದೊಡಂ ತವೆಯಲೊಕ್ಕಿ ಸುರಾಶಿಗಳಂ ವಿನಿರ್ಮಿಸಲ್
ಸಲ್ಲರುಮಂತುಮಾಡಿದೊಡೆ ಲೆಕ್ಕಮಿಡಲ್ಕಣಮಾಱರಂತು ಮ
ತ್ತೆಲ್ಲಮನೆಯ್ದೆ ಲೆಕ್ಕಿಸಿದೊಡಂ ಮನೆಗೆಯ್ದಿಸಲಾಱರಂತವಂ ೧೮

ಧನಕನಕಧಾನ್ಯದಿಂದಂ
ಘನಪದಮಂ ಪಡೆದ ಸಕಳಸುಜನಜನಕ್ಕಂ
ವಿನುತಂ ಪದಮಾದುದಱಿಂ
ಜನಪದನಾಮಂ ಯಥಾರ್ಥಮಾದುದದಕ್ಕಂ ೧೯

ರವಿಕಿರಣಂಗಳಿಂದೆ ನೆಱೆಬೆಂದೆ ತಟಸ್ಥಿತಸೂರ್ಯಕಾಂತಗೌ
ರವ ಶಿಲೆಯಲ್ಲಿ ಪೊನ್ ಕರಗಿ ತಾಂ ಪರಿಯುತ್ತದಲಿರ್ದುದೀಗಳೆಂ
ಬ ವಿಪುಳಶಂಕೆಯಂ ಬಿಡದೆ ಪುಟ್ಟಿಸುತುಂ ಪರಿಯುತ್ತುಮಿರ್ಪುವ
ಲ್ಲವಿರಳಪದ್ಮರೇಣುವಿಸರಪ್ರವಿರಂಜಿತ ಸಿಂಧುಗಳ್ ಕರಂ ೨೦

ವಿಪುಳಫಳಾವಳಿಸ್ತಬಕಭಾರದೆ ಬಾಗುತುಮಿರ್ಪ ಚೂತಪೂ
ಗ ಪರಮನಾಳಿಕೇರಕದಳೀಪನಸಾಫಳಮಾತುಳುಂಗಪಂ
ತಿ ಪುರವನಂಗಳಿಂದೆ ಪರಿರಂಜಿಸುತಿರ್ಪ ಸುದೇಶದಲ್ಲಿ ಸ
ರ್ವಪಥಿಕರೆಯ್ದೆ ಸಂಬಳಮನೊಲ್ಲದೆ ಪೋಗುತುಮಿರ್ಪರಾವಗಂ ೨೧

ವಿಪರೀತತೆ ವನದೊಳ್ ಪರಿ
ಕಿಪೊಡಂ ತಾಂ ರಾಜಬಾಧೆ ತಾವರೆಗೊಳದೊಳ್
ಚಪಳತೆ ಲಲನಾನಯನ ಸ
ಮುಪಚಯದೊಳಮಲ್ಲದಂತದಿಲ್ಲಾ ನಾಡೊಳ್ ೨೨

ವರವತ್ಸದೇಶಮೆಂಬು
ದ್ಧುರವತ್ಸದ ನಿಬಿಡಮಾದ ಘೂರ್ಜುಗೆಯಿಂದಂ
ಧರೆಯೆಂಬ ಸುರಭಿ ಸುಖಮಂ
ಬಿರುಪರಮಾಮೃತಮನೆಯ್ದೆ ಕಱೆಯುತ್ತಿರ್ಕುಂ ೨೩

ವ: ಇಂತು ಪಿರಿದಪ್ಪ ಸಿರಿಗಾಡುಂಬೊಲನಾಗಿ ಮಾಡಿದ ನೂರ್ಮಡಿ ಗಾಡಿಯೊಳ್ ಕೂಡಿದ ನಾಡಾಡಿಯಾಗಿರ್ದಾ ನಾಡಿನ ನಟ್ಟನಡುವೆ

ಪರಮಾಣಿಕ್ಯಮಯಪ್ರಶಸ್ತಕಳಶವ್ರಾತಪ್ರಭಾಭಾರದಿಂ
ಪಿರಿದುಂ ವ್ಯೋಮದೊಳೆಯ್ದೆ ಮಿಂಚುಗಳ ಬೆಳ್ಪಂ ಪುಟ್ಟಿಸುತ್ತಿರ್ಪ ಭಾ
ಸುರಸೌವರ್ಣವಿಚಿತ್ರಸೌಧಚಯದಿಂದೊಪ್ಪುತ್ತುಮಿರ್ಕುಂ ಕರಂ
ಪರಿರಾಜನ್ಮಣಿಗೋಪುರಂ ಸುಮಹಿಮಾಸೀಮಂ ಸುಸೀಮಾಪುರಂ ೨೪

ವ: ಮತ್ತಮದಱ ಸುತ್ತಲುಂ

ಪಿರಿದುಂ ಪಣ್ಗಳ ಗೊಂಚಲಿಂದೆಸೆವ ರಂಭಾಚೂತನಾರಂಗ ಪೀ
ವರಜಂಭೀರಸುನಾಳಿಕೇರಪನಸಾದ್ಯತ್ಪೂಗಪೂರಂಗಳಿಂ
ವರಮಲ್ಲೀಘನನಾಗವಲ್ಲಿಲತಿಕಾವೃಂದಂಗಳಿಂ ಕೂಡಿ ತ
ತ್ಪುರಮಂ ಸುತ್ತಿ ವಿರಾಜಿಕುಂ ಬಹಳಶೋಭಾನಂದನಂ ನಂದನಂ ೨೫

ವ: ಮತ್ತಮದಱಂತರ್ಭಾಗದೊಳ್

ಸ್ತ್ರೀರತ್ನಂಗಳ ಮೊತ್ತದಿಂ ಪುರುಷರತ್ನವ್ರಾತದಿಂ ತುಂಬಿಕೊಂ
ಡೋರಂತೊಪ್ಪುವ ಹೇಮಸತ್ಕಳಶಮೆಂಬಂತಿರ್ದ ಪೊಂಗೋಂಟೆಯಂ
ತೋರಿತ್ತಾದಗಳೆಯ್ದೆ ಸುತ್ತಿ ಮೆಱೆಗುಂ ಕೃಷ್ಣಾಹಿಯಂತಾವಗಂ
ಘೋರಂ ತಾನೆನಿಸಿರ್ಪ ಭೂರಿವಿಷದಿಂದಂ ತುಂಬಿದೀಕಾರಣಂ ೨೬

ಪೊಸತೆನಿಸಿರ್ದ ತನ್ನ ಘನಕಾಂತಿಪರಂಪರೆಯಂ ದಶಾಶೆಯೊಳ್
ಪಸರಿಸುತುಂ ನಿರೀಕ್ಷಿಪರ್ಗೆ ಚೋದ್ಯಮನಾಗಿಸುತಿರ್ಪ ಕಾರಣಂ
ವಸುಮತಿಯೆಂಬ ಕಾಮಿನಿಯ ಚಾರುಸುವರ್ಣದ ಕುಂಡಲಂ ದಲೆಂ
ಬೆಸಕಮನೆಯ್ದೆ ಸಂಗಡಿಸುತಿರ್ಪುದುಮಲ್ಲಿಯ ಕೋಟೆ ಸುತ್ತಲುಂ ೨೭

ವ: ಮತ್ತಮಲ್ಲಿಂದೊಳಗೆ

ನರರೆಲ್ಲರ್ ವಿಷಮಾಸ್ತ್ರರ್
ವರನಾರಿಯರೆಲ್ಲರುಂ ವಿದಗ್ಧೆಯರೆ ಮಹೋ

ದ್ಧರ ಧನಿಕರೆಲ್ಲರುಂ ತ
ತ್ಪುರದೊಳ್ ನೆಱೆಜಾತರೂಪಯುಕ್ತರೆ ಚಿತ್ರಂ ೨೮

ವ: ಅಂತುಮಲ್ಲದೆಯುಂ

ವಂದಿಜನಕ್ಕೆ ಬೇಡಿದುದನೆಯ್ದೆ ಮನಂ ದಣಿವನ್ನಮಿತ್ತೊಡಂ
ಕುಂದದೆ ಪೆರ್ಚುಗಾ ಪುರದ ದಾನಿಗಳರ್ಥಮದೆಂತು ಸಜ್ಜನರ್
ಬಂದ ಪರರ್ಗೆ ತಮ್ಮಯ ಸುವಿದ್ಯೆಯನಿತ್ತೊಡೆ ಮತ್ತೆಮತ್ತೆಯುಂ
ಸೌಂದರಮಾಗಿ ಪೆರ್ಚುಗೆಯನೆಯ್ದುವುದಂತದುವುಂ ನಿರಂತರಂ ೨೯

ಬಸದಿಗಳೆಯ್ದೆ ತಮ್ಮ ಶಿಖರಂಗಳ ಚೂಳಿಕೆಯಲ್ಲಿ ನಾಡೆ ಶೋ
ಭಿಸುವುರುಪದ್ಮರಾಗಕಳಶಪ್ರಭೆಯಿಂ ಪಗಲಂ ಸಮಂತು ರಾ
ತ್ರಿಸಮಯದಲ್ಲಿಯುಂ ಬಿಡದೆ ಮಾಳ್ಪುದಱಿಂ ಜನಮೆಲ್ಲಮಲ್ಲಿ ಭೇ
ದಿಸಲಣಮಾಱದಿರ್ಪುದಿರುಳುಂಪಗಲೆಂಬ ವಿಶೇಷಭಾವಮಂ ೩೦

ಒಸರ್ವ ಸುಧಾಂಶುಕಾಂತಗೃಹಮಂ ನೆಱೆಕಂಡಿರುಳೆಂಬಿದಂ ಸಮಂ
ತೆಸೆವುರುಸೂರ್ಯಕಾಂತಗೃಹದಿಂ ಕಿಡಿಗಳ್ ಬರುತಿರ್ಪುದಂ ನಿರೀ
ಕ್ಷಿಸಿ ಪಗಲೆಂಬಿದಂ ಪರಿಧಿರುದ್ಧಸುಧಾಂಶುದಿವಾಕರೋದಯೋ
ಲ್ಲಸದನುಮಾನದಿಂದಮಱಿಗುಂ ನಗರೀಜನಮಂತದೆಲ್ಲಮಂ ೩೧

ವ: ಇಂತು ಸಕಳಜನಂಗಳ ದಿಟ್ಟಿಗೆ ತೊಟ್ಟನೆ ಮುಟ್ಟಿದ ಸಂತುಷ್ಟಿಯಂ ಪುಟ್ಟಿಸುತ್ತುಮಿರ್ಪಾ ಪಟ್ಟಣದ ನಟ್ಟನಡುವೆ

ಪಿರಿದುಂ ಬಿನ್ನಣದಿಂದೆ ನಿರ್ಮಿಸಿದ ನಾನಾಚಿತ್ರಸತ್ಪುತ್ರಿಕೋ
ತ್ಕರಮಂ ತೆತ್ತಿಸಿ ಸುತ್ತಲುಂ ನೆಲೆಗಳಿಂದೌನ್ನತ್ಯಮಂ ತಾಳ್ದಿ ಪೀ
ವರ ಭಾಸ್ವದ್ಧ್ವಜವೃಂದದಿಂ ಗಗನಮಂ ಮುಂಡಾಡುತಿರ್ದಾವಗಂ
ಧರಣೀನಾಥನ ಚೆನ್ನಹೊನ್ನಕರುಮಾಡಂ ಮಾಳ್ಪುದಾಶ್ಚರ್ಯಮಂ ೩೨

ದಿನಕರಬಿಂಬಂ ಮಧ್ಯಂ
ದಿನದೊಳಮೊಂದುಕ್ಷಣಂ ನೃಪಾಲಯಚೂಡಾ
ಘನಕಳಶದ ಮುಂದಣ ಶೋ
ಭನದರ್ಪಣದಂತಿರೊಪ್ಪಮಂ ತಳೆದಿರ್ಕುಂ ೩೩

ಪುಣ್ಣಮೆಯಲ್ಲಿ ಚಂದ್ರಮುಖಿಯರ್ ನೆಲೆಮಾಡದ ಚೂಳಿಕಾಗ್ರದೊಳ್
ತಣ್ಣೆಲರಾಸೆಯಿಂದಿರೆ ನಿಶೀಥಿನಿಯೊಳ್ ಖಳರಾಹು ಬಂದು ಸಂ

ಪೂರ್ಣಸುಧಾಂಶುವಂ ಪಿಡಿಯಲೆಂದಸುಗೆಯ್ಯೆ ತದಿಂದುವಂ ಪ್ರಭಾ
ವರ್ಣಿತ ತನ್ಮುಖೇಂದುಗಳನೀಕ್ಷಿಸಿ ಶಂಕೆಯನೆಯ್ದಿದಂ ಕ್ಷಣಂ ೩೪

ವ: ಅಂತಾ ಪುರಮನಾಳ್ವಂ ಭಾನುರಾಜನೆಂಬ ಮಹಾರಾಜನನೂನಪ್ರತಾಪಮಂ ತಾಳ್ದಿ ಯಥಾರ್ಥಮಪ್ಪ ಪೆಸರಿಂದೊಪ್ಪುತ್ತುಮಿರ್ದಂ

ತನ್ನಯ ಬಂಧುಸಂತತಿಗಳೆಂಬ ಸರೋಜವನಂಗಳಂ ಪ್ರಮೋ
ದೋನ್ನತೆಯಿಂದರಳ್ಚಿ ರಿಪುಭೂಪವಧೂಮುಖಚಂದ್ರಬಿಂಬ ಸಂ
ಪನ್ನತೆಯಂ ಸುರುಳ್ಚಿ ಸುನಯಾಂಶುಗಳಿಂ ಕುನಯಾಂಧಕಾರದೊಂ
ದುನ್ನತಿಯಂ ತಗುಳ್ಚಿ ಖರಭಾನುವಿನಂತೆಸೆದಂ ನರೇಶ್ವರಂ ೩೫

ಆತನ ಚಿತ್ತವಲ್ಲಭೆ ಮನೋಹರಿಯೆಂಬಳಪೂರ್ವರೂಪಿನಿಂ
ಭೂತಳದೊಳ್ ಮನೋಹರಿ ವಿಶೇಷಗುಣಂಗಳ ಶೀಲದೇಳ್ಗೆಯಿಂ
ನೂತನಮಪ್ಪ ದಾನಗುಣದಿಂದೆ ಮನೋಹರಿಯಾದಕಾರಣಂ
ಸಾತಿಶಯಾಭಿಧಾನಮದು ದೇವಿಗೆ ಸಾರ್ಥಕಮಾಗಿ ತೋಱುಗುಂ ೩೬

ವ: ಇಂತು ನೆಗಳ್ತೆವಡೆದಾ ಭಾನುರಾಜನುಂ ಮನೋಹರಿದೇವಿಯುಮನ್ಯೋನ್ಯಾಸಕ್ತಚಿತ್ತರಾಗಿ ಕಾಮನುಂ ರತಿಯುಮೆಂಬಂತೆ ಸುಖದಿಂ ರಾಜ್ಯಂಗೆಯ್ಯುತ್ತುಮಿರೆ ಮತ್ತಮಾ ದೇವಿಗೆ ಕೆಲವಾನುದಿನಂಗಳಿಂ ಮೇಲೆ ಗರ್ಭಚಿಹ್ನಂಗಳ್ ತೋಱೆಯಾ ಗರ್ಭದರ್ಭಕಂ ಜಿನಪದಭಕ್ತನುಂ ದಾನಗುಣಯುಕ್ತನುಮೆಂಬಿದಂ ಸೂಚಿಸುವಂತಾ ದೇವಿಗೆ ಜಿನಪೂಜೋತ್ಸವಮಂ ಚಾತುರ್ವರ್ಣ್ಯಕ್ಕನೂನದಾನಮಂ ಮಾಳ್ಪ ಬಯಕೆ ಮನದೊಳ್ ಕಡುತಿಣ್ಣಮಾಗಿಯಂತೆಗೆಯುತ್ತಮಿರೆ

ಘನಪುಣ್ಯನಿರ್ದ ತಾಣಂ
ಘನಮಾಗಲ್ವೇಳ್ಕುಮೆಂಬ ಬಗೆಯಿಂದೆಂಬಂ
ತಿನಿಯಳ ತನೂದರಂ ತಾಂ
ಘನಮಾಗಿಯೆ ಬಳೆದು ತೋರ್ಕೆಯಂ ತಳೆದಿರ್ಕುಂ ೩೭

ಅಲಸಿಕೆಯಾಗಳುಂ ಕೆಳದಿಯಂತಿರೆ ಪೊರ್ದಿದುದಾಗುಳಿರ್ಕೆಯುಂ
ತೊಲಗದು ಕೂರ್ಪ ಮೇಳದವರಂತಿರೆ ಬೆಳ್ಪಸದೆಯ್ದೆ ತೋಱೆ ಸ
ಲ್ಲಲಿತಶರೀರದೊಳ್ ನಿಜಯಶಸ್ಥಿತಿಯಂತಿರೆ ತಾಳ್ದಳಂದು ಕೋ
ಮಳಲತಿಕಾಂಗಿ ಬೇಱೆಪೊಸರೂಪಮನಾ ಸಮಯಾಂತರಾಳದೊಳ್ ೩೮

ವ: ಬಳಿಯುಮಾ ಬಿಂಬಾಧರೆಗೆ ನವಮಾಸಂ ತುಂಬಲೊಡಂ ಪಂಚಾಂಗಮುಂ ಶುಭಾಂಚಿತಮಾದ ದಿನದೊಳ್ ಪಂಚೇಕ್ಷುಸನ್ನಿಭನುಂ ಸಂಚಿತಪುಣ್ಯರೂಪನುಮಪ್ಪ

ಕುಮಾರನಂ ಪಡೆವುದುಮಾಗಳಾ ಪುರದೊಳ್ ಗುಡಿಗಳಂ ಕಟ್ಟಿ ಬದ್ದವಣಂಗಳಂ ಬಾಜಿಸಿ ಪಿರಿದಾಗಿರ್ದೊಸಗೆಯಂ ಕೊಂಡಾಡುತ್ತುಮಿರಲತ್ತಲರಸಂ ಬೇಡುವವರ್ಗೆ ಬೇಡಿದುದಂ ಬೇಡಿದಾಗಳೆ ಕೈಮಡಗದೆ ಕೊಟ್ಟು ಜಾತಕರ್ಮಮಂ ನಿರ್ಮಿಸಿ ಕೆಲವುದಿನಂಗಳ್ ಪೋಗುತ್ತುಮಿರೆ

ದಶರಥನೆಂಬೀ ಪೆಸರಂ
ಶಿಶುವಿಂಗಂದಿಟ್ಟು ಲಾಲನಂಗೆಯ್ಯುತ್ತುಂ
ವಸುಧಾಧಿನಾಯಕಂ ಸಂ
ತಸಮಂ ತಾಳ್ದಿರ್ದು ರಾಜ್ಯಮಂ ಪಾಳಿಸಿದಂ ೩೯

ವ: ಅಂತಾ ಕುಮಾರಂ ಪಾಡಿವದ ಚಂದ್ರಮನೆಂತು ತನ್ನಯ ಸಕಳಕಳಾ ವಿಶೇಷದೊಡನೊಡನೆ ಬಳೆಗುಮಂತಂತೆ ತಾನುಂ ಚತುಃಷಷ್ಟಿಕಳಾವಿಳಾಸದೊಡನೊಡನೆ ಬಳೆದು ಸಮಸ್ತಶಸ್ತ್ರಶಾಸ್ತ್ರ ವಿದ್ಯಾವಿಶಾರದನಾಗುತ್ತಿರಲಾ ಭಾನುರಾಜಂ ಪ್ರಾಜ್ಯಮಪ್ಪ ಸಾಮ್ರಾಜ್ಯಮಂ ನಿಜಯುವ ರಾಜನ ಮೇಲೆ ನಿಯೋಜಿಸಿ ನಾನೂರ್ವರರಸುಮಕ್ಕಳ್ವೆರಸು ಯಮಧರ ಭಟ್ಟಾರಕರ ಸಮಕ್ಷದೊಳ್ ಜಿನದೀಕ್ಷಾಪ್ರಾಪ್ತನಾಗಿ ನಿಸರ್ಗದುರ್ಗಮಪ ವರ್ಗಮಂ ಸಾಧಿಸಿದನಿತ್ತಲ್

ಶಿಷ್ಟಜನಂಗಳಂ ಬಿಡದೆ ರಕ್ಷಿಸಿ ದುಷ್ಟರನಿಕ್ಕಿಮೆಟ್ಟಿ ಸ
ದ್ದೃಷ್ಟಿಗಳಪ್ಪರಂ ಮುದದೆ ಪೆರ್ಚಿಸಿ ಪಾವನಧರ್ಮಮಂ ಮಹೋ
ತ್ಕೃಷ್ಟಮೆನಲ್ಕೆಮಾಡಿ ಕುನಯಂಗಳ ಬೇರ್ಗಳನೆಯ್ದೆಕಿತ್ತು ಸಂ
ತುಷ್ಟಮನಂ ಸಮಂತು ಪರಿಪಾಳಿಸಿದಂ ಧರೆಯಂ ಧರಾಧಿಪಂ ೪೦

ವೈರಿಗಳೆಲ್ಲರುಂ ದಶರಥಕ್ಷಿತಿಪಂಗಗಿದೋಡಿ ಪೋಗುತಂ
ವಾರಿಧಿಗೋತ್ರಮಂ ಬಿಡದೆ ಪೊರ್ದಿ ಬರ್ದುಂಕೆ ಸಮುದ್ರರಾಜಪು
ತ್ರೀರಮಣೀಯ ಲಕ್ಷ್ಮಿ ಸಲೆ ಸೋದರರೆಂದವರಲ್ಲಿ ಭೋಗಮಂ
ಪಾರದೆಬಿಟ್ಟು ತನ್ನೃಪತಿಯೊರ್ವನನೇ ಪತಿಯಾಗಿ ಮಾಡಿದಳ್ ೪೧

ಪಿರಿದುಂ ವಾಲಧರಂ ವೃಷೋತ್ತಮತರಂ ಕೋಡಿಂದೆ ರಾರಾಜಿಪಂ
ನರಪಂ ಗೋಪತಿಯಂತಿರೊಪ್ಪಿ ಪರರೆಂಬುಕ್ಷಂಗಳಂ ತೂಳ್ದಿ ಮ
ತ್ತುರುಗೋಮಂಡಳಮಂ ವಶೀಕರಿಸೆ ರಕ್ತಾಕ್ಷತ್ವಮಂ ತಾಳ್ದುಕೊಂ
ಡರಿಭೂಪರ್ ಮಹಿಷೀಗಣಂಗಳೊಡನಂದೆಯ್ದುಂದರಾರಣ್ಯಮಂ ೪೨

ಸಾಸಿಗರಪ್ಪ ವೈರಿಗಳ ಪೆಂಡಿರ ಗಲ್ಲದ ತಾಣದಲ್ಲಿ ತಾಂ
ಹಾಸವಿಶೇಷಮೆಂಬ ಕುಸುಮಾಳಿಯೊಳೊಂದಿದ ಪತ್ರವಲ್ಲಿ ಭಾ
ಭಾಸಿತಭೂಪ ಗೋಪಶಿಖಿಯಿಂದಮೆ ಬೆಂದಪೊಲಿರ್ದುದಲ್ಲದಂ
ದಾಸ್ಯದ ಪಾಂಡುರತ್ವಮದು ಭಸ್ಮದ ಶಂಕೆಯನೆಂತು ಪುಟ್ಟಿಕುಂ ೪೩

ಅತಿರತ್ನಂಗಳಿನೊಪ್ಪಿ ಭೂರಿತರಸತ್ತ್ವಸ್ಥಿತಿಯಂ ತಾಳ್ದಿ ವಿ
ಶ್ರುತನಾಗಿರ್ದು ಕುಲೀನತಾವಿಭವದಿಂ ಕೆಯ್ಮಿಕ್ಕು ನಂದತ್ಸರ
ಸ್ವತಿಯೊಳ್ ಕೂಡಿ ಸಮುದ್ರದಂತೆ ಪಿರಿದುಂ ಗಂಭೀರನಾಗಿರ್ದೊಡಂ
ಕ್ಷಿತಿನಾಥಂ ಕ್ಷಿತಿಚಕ್ರದಲ್ಲಿ ಜಡತಾಸಂಯುಕ್ತನಲ್ಲದ್ಭುತಂ ೪೪

ಪಾಪಕ್ಕಂಜುವನಾತಂ
ಪಾಪಂ ತಾನಂಜಿಯಾತನಂ ಬಿಟ್ಟೋಡಿ
ತ್ರೀಪರಿಯಂ ದಶದಿಕ್ಕುಗ
ಳಾಪೊತ್ತುಂ ನಗುವವವನ ಕೀರ್ತಿಯ ನೆವದಿಂ ೪೫

ಜಿನಪದಭಕ್ತ ದಾನಗುಣಯುಕ್ತ ದಯಾಮಯಧರ್ಮಸಕ್ತ ಸು
ತ್ರನಿತಚರಿತ್ರ ಕಾಮಸಮಗಾತ್ರ ವಿಶೇಷಿತಪುಣ್ಯಪಾತ್ರನೀ
ವಿನಯನಿಧಾನ ಶತ್ರುಕೃತಮಾನ ಸುಶೀಲವಿರಾಜಮಾನನೆಂ
ದೆನಿಪನನಾದಪಂ ದಶರಥಕ್ಷಿತಿಪಂ ವಿಲಸತ್ಕಳಾಧಿಪಂ ೪೬

ವ: ಮತ್ತಂ

ಅಯಯುತನಪ್ಪಾ ನೃಪತಿಗೆ
ದಯಾವತೀದೇವಿಯೆಂಬ ವಲ್ಲಭೆಯಾದಳ್
ನಯದಿಂದೆಲ್ಲರ್ಗಂ ತಾಂ
ದಯೆಯಂ ಮಾಳ್ಪುದಱಿನೆಯ್ದಿತ್ತನ್ವರ್ಥತೆಯಂ ೪೭

ದಶರಥನಾಕೆಗಗ್ರಮಹಿಷೀಪದಮಂ ನೆಱೆಕೊಟ್ಟು ಪಟ್ಟಮಂ
ವಸುಮತಿಯೆಯ್ದೆ ಬಪ್ಪೆನೆ ಜಸಂ ಮಿಗೆ ಕಟ್ಟೆ ಪರಸ್ಪರಂ ವಿಮೋ
ಹಿಸಿ ಘನಕಾಮಮಂ ತಳೆದರೆಂತುಱೆಧರ್ಮಮುಮರ್ಥಮುಮಂ ಸಮಂ
ತೆಸೆದುದು ಪೆರ್ಚುಗಂತಿರೆ ಶಚೀಪತಿಯುಂ ಶಚಿಯುಂ ದಲೆಂಬವೊಲ್ ೪೮

ಬಾಳೆಯ ಸಸಿಯಂತಬಳೆಯ
ಲೋಲಾಕ್ಷಿಮುಖಂ ವಿಳಾಸಮಂ ತಳೆದಿರ್ಕುಂ
ಲಾಲಿತಮಣಿಕಳಶದವೊಲ್
ಮೇಲೆನಿಸಿದುದದಱ ಕುಚಭರಂ ಕೋಮಳೆಯಾ ೪೯

ಹಾವಭಾವವಿಳಾಸವಿಭ್ರಮವರ್ಧನಾತಿಶಯಂಗಳಿಂ
ದಾವಗಂ ಧರಣೀತಳಾಧಿಪಚಿತ್ತವೃತ್ತಿಯುಮಂ ಲಸ
ದ್ಭಾವದಿಂದದಱೊಡನೆ ಪಾತ್ರವಿಶೇಷದಾನದ ವೃತ್ತಿಯಂ
ಪೀವರಸ್ತನೆ ಸೂಱೆಗೊಂಡು ನಿಮಿರ್ಚಿದಳ್ ನಿಜಕೀರ್ತಿಯಂ ೫೦

ವ: ಇಂತತೀವ ಸಂಪತ್ಸನಾಥನುಂ ಪರಿಪೂರ್ಣಮನೋರಥನುಮೆನಿಪ ದಶರಥ ಮಹೀನಾಥನುಂ ನಿಜಭುಜವಿಜಯಲಕ್ಷ್ಮಿಯಂತಿರ್ದ ದಯಾವತೀ ಮಹಾದೇವಿಯುಮತಿ ರಥನೆಂಬ ಕುಮಾರನಂ ಪಡೆದು ಸುಖದಿಂ ರಾಜ್ಯಂಗೆಯ್ಯುತ್ತುಮಿರೆ

ಪೊಂಗಳಶಂಗಳಿಂ ಗಗನಮಂಡಳಮಂ ನೆಱೆಮುಟ್ಟುತಿರ್ಪ ದಲ್
ತುಂಗಲಸತ್ಸುಧಾಧವಳಕೂಟವಿರಾಜಿತ ಜೈನಗೇಹವೃಂ
ದಂಗಳನೆಯ್ದೆ ಮಾಡಿಸಿದರಾ ಧರಣೀತಳನಾಥರತ್ನನುಂ
ಭೃಂಗವಿನೀಳಕುಂತಳೆಯೆನಿಪ್ಪ ದಯಾವತಿಯುಂ ಪ್ರಮೋದದಿಂ ೫೧

ಜಿನಮುನಿಗಳ್ಗೆ ಭಕ್ತಿಭರದಿಂದೆ ಚತುರ್ವಿಧದಾನಮಂ ಸಮಂ
ತನುದಿನವೆಯ್ದೆ ಮಾಡುತುಮಶೇಷಗುಣಂಗಳ ಶೀಲದೇಳ್ಗೆಯಂ
ವಿನಯವಿಶೇಷಮುಂ ಬ್ರತಮುಮಂ ತಳೆದರ್ ಸಲೆ ಭೂಮಿಕಾಂತನುಂ
ಜನಪತಿಕಾಂತೆಯುಂ ನಿಯತವೃತ್ತಿಯನಾಂತರಿದೇನುದಾತ್ತರೋ ೫೨

ಅಳಿಯೆಂತಂಬುಜಷಂಡದಲ್ಲಿ ಹರಿಯೆಂತಾರಣ್ಯಮಿರ್ದಲ್ಲಿ ಕೋ
ಕಿಳಮೆಂತೆಯ್ದೆ ರಸಾಲಚಾರುಕಳಿಕಾಸಂದೋಹಮಿರ್ದಲ್ಲಿ ದಲ್
ಗಿಳಿಯೆಂತುತ್ಕಣಿಶಾಳಿಯಲ್ಲಿ ರತಿಯಂ ಮಾಡುತ್ತುಮಿರ್ಪಂತೆ ಭೂ
ತಳನಾಥಂ ವರದಾನದಲ್ಲಿ ರತಿಯಂ ಮಾಡುತ್ತುಮಿರ್ಪಂ ಕರಂ ೫೩

ವ: ಆ ರತಿಗೆ ತಕ್ಕಂದದಿಂದಂತೆಗೆಯ್ಯುತ್ತುಂ ಕೆಲವಾನುದಿನಂಗಳ್ ಪೋಗಲಾ ದಶರಥ ಮಹೀನಾಥನೊಂದುದಿವಸಂ ಮೇಲಣನೆಲೆಯ ಭದ್ರದ ಚೂಳಿಕಾಗ್ರದೊಳಶೇಷ ಪರಿವಾರಂಬೆರಸುವೊಡ್ಡೋಲಗಂಗೊಟ್ಟಿರ್ಪ ಸಮಯದೊಳ್ ತಪೋಭೂಷಣರು ಮರಿಂದ ಮರುಮೆಂಬ ಚಾರಣಪರಮೇಷ್ಠಿಗಳ್ ದೀಪ್ತತಪೋಮಾಹಾತ್ಮ್ಯದಿಂ ಪುಟ್ಟಿದ ಬಹಳಮಪ್ಪ ಕಾಯಕಾಂತಿಯಿಂ ವಿಯತ್ತಳಮಂ ಬೆಳಗುತ್ತುಂ ಚಂದ್ರಮಂಡಳಯುಗಳಮೆ ಮುನಿರೂಪಂ ಕೈಕೊಂಡಾಕಾಶಪ್ರದೇಶದಿಂದಿಳಾತಳಕ್ಕವತರಿಸುತ್ತುಮಿರ್ದಪುದೆಂಬಂತೆ ಬರುತ್ತುಮಿರ್ಪ ಸಮಯದೊಳ್

ಚಾರಣಮುನಿರೂಪಂ ಕೊಂ
ಡೋರಂತಿರಲಾ ನೃಪಾಳಪುಣ್ಯಮೆ ಬರ್ಪಂ
ತಾ ರಾಜನಿವಾಸಕ್ಕಂ
ಭೋರನೆ ಬರುತಿಪ್ಪುದಂ ನಿರೀಕ್ಷಿಸಿ ನರಪಂ ೫೪

ವ: ಅನಂತರಂ ಸಂತೊಸದಂತನೆಯ್ದಿ ಸಮುದಗ್ರಗ್ರೀವನಾಗಿರ್ದು ಸಮರ್ಚ ನಾಯೋಗ್ಯ ದ್ರವ್ಯದಿಂ ಪರಿಪೂರ್ಣಮಾದ ಜಳಕಳಶಮಿಳಿತಕನಕಮಯ ಪವಿತ್ರಪಾತ್ರಮಂ ಮತ್ತೊರ್ವನ ಕೆಯ್ಯೊಳ್ ಪಿಡಿಸಿಕೊಂಡಿದಿರೆಳ್ದುಪೋಗಿ ವಿಶಿಷ್ಟಮಪ್ಪ ಶುಚಿಧವಳ ಶಿರೋವೇಷ್ಟನಮನು

ತ್ತರೀಯಮಂ ಮಾಡಿಟ್ಟುಕೊಂಡು ಮುಕುಳಿತಮಾದ ಪಾಣಿ ಸಂಪುಟಮಂ ನೊಸಲ್ಗೆತಂದಿಂದು ನಾನೀ ಕೃತಕೃತ್ಯನಾದೆಂ ಜಯ ಜಯ ಜಯಯೆಂದು ಚ್ಚಾರಣಂಗೆಯ್ವುತ್ತುಂ ನೋಡುತ್ತುಮಿರ್ಪಾಗಳ್ ಭೋಂಕನೆ ಬಂದು ಮುಂದೆ ನಿಂದಿರ್ಪುದುಂ

ಪ್ರಮದದಿನೊಗೆದಶ್ರುಸ್ರೋತದಿಂ ಚಾರುಗಾತ್ರೋ
ದ್ಗಮಿತಬಹಳರೋಮಾಂಚಂಗಳಂ ಸೇಕಿಸುತ್ತಿ
ರ್ದಮಿತಪರಮಪೂಜಾದ್ರವ್ಯದಿಂ ಪೂಜಿಸುತ್ತುಂ
ನಮಿಸಿದನವರಂಘ್ರಿದ್ವಂದ್ವಮಂ ಭಕ್ತಿಯಿಂದಂ ೫೫

ವ: ಅಂತು ಬಿಜಯಂಗೆಯ್ಸಿ

ಖೇಚರತೆಯಿಂದೆ ಧೂಳಿಯ
ನಾಚರಿಸಿದೊಡಂ ತದಂಘ್ರಿಕಮಳಂಗಳನಾ
ಭೂಚಕ್ರಪ್ರಭು ತೊಳೆದಂ
ನೀಚೈರ್ನೀರಜಮನೊರಸಿ ನೆಱೆತೊಳೆವನ್ನಂ ೫೬

ಇದಿರ್ಗೊಂಡೊಯ್ದು ಸಮುನ್ನತಾಸನದೊಳಂ ಪ್ರಸ್ಥಾಪನಂಗೆಯ್ದು ಸ
ಮ್ಮದದಿಂ ಕಾಲ್ತೊಳೆದರ್ಚಿಸಿ ಪ್ರಣಾಮನಂಗೆಯ್ದಿಂಬಳಿಕ್ಕಂ ಸಮ್ಮು
ದ್ಘದಯಾಂಬೋಧಿಯೆನಿಪ್ಪ ಯೋಗಿಗೆ ಮನೋವಾಕ್ಕಾಯಸಂಶುದ್ಧಿಯಿಂ
ಪದಪಿಂದಂ ನಮಗಿತ್ತವಂ ನವಪಿಧೋದ್ಯತ್ಪುಣ್ಯಮಂ ತಾಳ್ದುವಂ ೫೭

ವ: ಅಂತು ಪಾದಪ್ರಕ್ಷಾಳನಂಗೆಯ್ದು ತದನಂತರಂ ಪಾದಾರ್ಚನಾಪೂರ್ವಕಂ ವಂದನೆಯಂ ಮಾಡಿಯಪರಣಾಂತರ್ದೇಶದಲ್ಲಿಗೆ ಮೆಲ್ಲನೆ ಬಿಜಯಂಗೆಯ್ಸಿ ನಾಲ್ವತ್ತೆಂಟು ದೋಷದಿಂ ಪಿಂಗಿದ ಪರಮಾಮೃತದೊಡನೆ ಪುರುಡಿಸುವ ನಿರವದ್ಯಮಾದ ಪಿರಿದುಂ ಸಾರಮಪ್ಪಾಹಾರಮನರ್ಥಿಯಿಂ ಕೈಯಲಿಕ್ಕುವ ಪೊತ್ತಿನೊಳ್

ತೀರ್ಥಕರಪರಮದೇವ ಸ
ಮರ್ಥಪದಪ್ರಾಪಣೈಕ ಕಾರಣಮಾದ
ತ್ಯರ್ಥಪರಿಣಾಮಮೊಗೆದುದು
ಪಾರ್ಥಿವಮಕುಟಾವಲೀಢಚರಣಂಗಾಗಳ್ ೫೮

ದಾನಪರಿಣಾಮದಿಂದಂ
ಮಾನಿತತೀರ್ಥಕರಪುಣ್ಯದನುಬಂಧಂ ತ
ದ್ಭೂನಾಥಂಗಾಯ್ತೆಂದೊಡ
ನೂನಪದಂ ದಾನದಿಂದಮಾಗದುದುಂಟೇ ೫೯

ಶ್ರದ್ಧಾನಂ ಶಕ್ತಿಭಕ್ತಿಪ್ರಬಲಿತತರವಿಜ್ಞಾನಮುದ್ಯದ್ದಯಾಸಂ
ಬದ್ಧತ್ವಂ ಲೋಭವೃತ್ತಿತ್ಯಜನಮತುಳಿವಕ್ಷಾಂತಿಯೆಂಬೀ ದಲೇಳುಂ
ಶುದ್ಧಂಗಳ್ ಸದ್ಗುಣಂಗಳ್ ಬಿಡದಿರೆ ಪಿರಿದುಂ ದಾನಮಂ ಮಾಳ್ಪ ಭವ್ಯಂ
ಗಿದ್ಧಂಗೇಂ ದೂರಮೇ ಪೇಳ್ ನಿರುಪಮಪರಮಸ್ಥಾನಮಾರ್ಗಂಗಳೇಳುಂ ೬೦

ಉತ್ತಮಭೂಮಿಯಲ್ಲಿ ವಟಬೀಜಮನೊಂದನೆ ಬಿತ್ತಲಂತದು
ದ್ಯತ್ತರಮಾಗಿ ಪೆರ್ಚುವವೊಲುತ್ತಮಪಾತ್ರವಿಶೇಷದಲ್ಲಿ ತಾ
ನಿತ್ತ ಸುದಾನಮೆಯ್ದೆ ಪಿರಿದಪ್ಪ ಫಲಂಗಳನೀವುದೆಂದೊಡೀ
ಭೂತ್ರಯದಲ್ಲಿ ದಾನಗುಣದಿಂದಮಸಾಧ್ಯಮದುಂಟೆ ನಿಶ್ಚಯಂ ೬೧

ವ: ಆಗಳಾ ಮುನೀಶ್ವರರಿಷ್ಟಾನಿಷ್ಟವಸ್ತುಸ್ವೀಕಾರಪರಿಹಾರಪರಿಣಾಮಮಂ ತಮ್ಮಯ ಕರಾಂಗುಳಿಸಂಜ್ಞೆಯಿಂದಂ ವ್ಯಕ್ತೀಕರಿಸಿ ಶಾಸ್ತ್ರೋಕ್ತಮಂ ಮೀಱದೆ ಜ್ಞಾನ ತಪಸ್ಸಾಧನೋಪಯೋಗ ಶರೀರಸಂರಕ್ಷಣಾರ್ಥಮಾಗಿ ಭ್ರಮರಾಹಾರಗೋಚಾರ ರೂಪದಿಂ ಚರಿಗೆಯಂ ಮಾಡಿಯಕ್ಷಯಂ ಭವೇದ್ದಾನಮೆಂದು ಕೈಯನೆತ್ತಿಕೊಳೆ ಬಳಿಯಂ ವಂದನಾತತ್ಪರನಾದ ನರಪನಂ ನಿತ್ಯಸುಖಭೋಗಭಾಗಿಯಾಗೆಂದು ಪರಸಿ ಗಗನ ಮಾರ್ಗದಿಂ ಪೋದಿಂಬಳಿಕ್ಕಂ

ದಾತೃಪಾತ್ರ ವಿಶೇಷದಿಂದಮೆ ಚಾರುಪುಣ್ಯವಿಶೇಷಮುಂ
ಧಾತ್ರಿಯಂ ಪರಿಪಾಲಿಪಂಗಿರದಾಗಲಂತದಱೆಂ ಮಹಾ
ಚಿತ್ರಮಾಗಿರೆ ಹೇಮವೃಷ್ಟಿ ನೃಪಾಲಯಾಂಗಣದಲ್ಲಿ ತ
ನ್ಮಾತ್ರೆಯಿಂದಧಿಕಂ ದಲೆಂಬಿನಮಾದುದಂ ಪ್ರಭು ನೋಡಿದಂ ೬೨

ವ: ಅದಂ ಕಂಡು ಕಡುಚೋಜಿಗಂಬಟ್ಟು ತನ್ಮುನೀಂದ್ರನ ತಪಃಪ್ರಭಾವಕ್ಕೆ ಮೆಚ್ಚಿ ಮೆಚ್ಚಿ ಮನದೊಳಚ್ಚರಿವಟ್ಟು ಪೊಗಳುತ್ತುಮಾ ವಿತ್ತಮನಲ್ಲಿಯ ಭವ್ಯರ್ಗೆ ನೀವಿನ್ನುಂ ವಿಶೇಷಮಾಗಿ ದಾನಮಂ ಮಾಡಿಯೆಂದಿತ್ತು

ಅರಸಂ ನೂರ್ಮಡಿಯಾಗಿ ದಾನಭರಮಂ ಮಾಡುತ್ತುಮಿರ್ದಾ ಮಹಾ
ಧರಣೀಮಂಡಳಮಂ ಸುರಕ್ಷಿಸುತುಮಿರ್ದಂ ಸತ್ಯಸಂಭಾಷಣಂ
ಪಿರಿದುಂ ನಿರ್ಮಲಮಪ್ಪ ತನ್ನಯ ಯಶೋರಾಶಿಪ್ರಭಾಭಾರದಿಂ
ವರದಿಗ್ಭಿತ್ತಿಗಳಂ ವಿಲೇಪಿಸುತಮಿರ್ದಾ ಭೂಪನಂತೊಪ್ಪಿದಂ ೬೩

ವ: ತದನಂತರಮಾ ಮನುಜಮನೋಜನ ಸಾಮ್ರಾಜ್ಯಲಕ್ಷ್ಮೀಸಂಭೋಗ ಕೇಳೀವಿನೋದಕ್ಕೆ ಸಮುದ್ದೀಪಕ ಸಹಾಯಮನೊಸೆದುಬರ್ಪಂತೆ

ಸಕಳಪ್ರಾಣಿಮನಃಪ್ರಮೋದಕರಣಾಲೋಲಂ ಸಮುಜ್ಜೃಂಭಿತಾ
ಧಿಕ ಚೇತೋಭವದುರ್ವಿಕಾರರಚನಾಶೀಲಂ ಸಮಸ್ತಪ್ರಕಾ

ಶಕಪೀಯೂಷ ಮಯೂಖಮಾಲಿ ಬಹಲಜ್ಯೋತ್ಸ್ನಾನುಕೂಲಂ ವಿಯೋ
ಗಿಕುಲಧ್ವಂಸಕಮಾಗಿ ಬಂದುದು ಶರತ್ಕಾಲಂ ಸುಮಂದಾನಿಳಂ ೬೪

ವ: ಅಂತು ಪ್ರಕಟಿತಾನೇಕಪ್ರಕಾರ ಪಾಂಡುರಮೇಘಾಡಂಬರಪರಿಮಂ ಡನವಿಡಂಬಿತ ರಾಜಮಂಡಳವಿಲೋಪಲಾಲನಂಬೆರಸು ಶರತ್ಕಾಲಮತಿಕ್ರಮಿಸಿ ಮೇಲೆತ್ತಿ ಬಂದು ಮೊಗಂದೋಱೆ ವರ್ಷಾಕಾಲಮಂ ಪಲಾಯನಮನೆಯ್ದಿಸುವುದುಂ

ಪಲ್ಲಟಿಸಿತ್ತು ಪೂಗುಡಿಗಳಂ ಗಿರಿಮಲ್ಲಿಗೆ ಬೀತು ಬಿನ್ನನಾ
ಯ್ತೆಳ್ಚಿಱ ಮೊಲ್ಲೆ ಸೋಗೆಸವಿಲೊಲ್ಲದೆ ಮಾಣ್ದುದು ನವ್ಯನಾಟ್ಯಮಂ
ನಿಲ್ವದೆ ಚಾತಕಂ ಜಲಕಣವ್ರತಮಂ ಪ್ರತಿಪಾಲಿಸಿತ್ತು ಬೆ
ಳ್ವೆಲ್ಲಮದಾಯ್ತು ನಾಡೆ ಕಡವಂ ಶರದಾಗಮನಪ್ರವೇಶದೊಳ್ ೬೫

ತವಕಿಸಿ ಹಂಸಮಂಡಳಿ ಮೃಣಾಳದ ಕೋಮಳದಂಡಕಾಂಡಮಂ
ಸವಿದುಱೆ ಸೊಕ್ಕಿದತ್ತು ಪಿಕಚತ್ಕಮಳಂ ಮಕರಂದಭಾರಸಂ
ಭವಿ ಬಳಿಯಟ್ಟಿವತ್ತಳಿಗಣಕ್ಕೆ ಮಹೀಧರಮಚ್ಛನಿರ್ಝರಾಂ
ಬುವನೆಸಗಿತ್ತು ಪೊಸ್ನೆನಸೆಯಿಂದೆಸೆದತ್ತು ಶರತ್ಪ್ರವೇಶದೊಳ್ ೬೬

ವ: ಮತ್ತಂ ಗಗನಗಹ್ವರದೊಳ್ ಮಂಡಲಂಗೊಂಡ ಘನಕಾಳವಿಷಧರಂ ಭೂರಿ ಮಯೂರ ವಿರಾವಶ್ರವಣಭಯದಿಂ ಬೆದಱೆ ಯಥಾಯಥಮಾಗಿ ಪರೆದೋಡಿಪೋದುದಿನ್ನುಂಜಲಿಲ್ಲೆಂದು ಬಗೆದುಂದು ಶರತ್ಕಾಲದ ಪೊಸವೆಳ್ದಿಂಗಳಿರುಳ್ದೋಷಾಕರನೊಂದಾಗಿ ಪೋಗಲಾಗದೆಂದು ಪಿಂದುಳಿದು ಸುಖಸ್ಥಾನದೊಳಿರಲೊಡಂ ಪಗಲುಷ್ಣಕಿರಣಕಿರಣಪರಿತಾಪದಿಂ ಕಡುಗಾಯ್ದು ಕನೆಗಟ್ಟಿ ಘಟ್ಟಿಗೊಂಡುದೆಂಬಂತೆ ಪೊರೆಪೊರೆಯಾಗಿ ದಳವೇಱೆ ಬಹಳತರಧವಳತೆಯನಾಂತ ಮುಗಿಲಮೊತ್ತಮೆತ್ತಲುಂ ಬಿತ್ತರಂಬಡೆಯೆ

ದಿನಪಂ ಕನ್ನೆಯನೊಲ್ದು ಕೂಡಲೊಡಮಾ ದುರ್ನೀತಿಯಿಂ ಕೆಟ್ಟುದಾ
ತನ ತೇಜಂ ಕರಣೀಯಮಾವುದಿದಕೆಂದಾ ದೋಷಸಂಹಾರಬು
ದ್ಧಿನಿಮಿತ್ತಂ ತೊಲೆಯಂ ದಲೇಱೆ ಪಡೆದಂ ಮತ್ತುಗ್ರತೇಜಃಪ್ರಭಾ
ವನೆಯಂ ಲೋಕದೊಳಾವನೋ ಪ್ರಭವಿಸಂಶುದ್ಧೀಕೃತೋದ್ದೋಷಕಂ ೬೭

ಸುಳಿದಾಡಿ ಕಳಾಳಾಪದಿ
ನೆಳೆಮುದ್ದಂ ತೋಱೆ ಮೊಲೆಯನುಣ್ಬಾತ್ಮಜರೆನೆ
ಗಿಳಿಗಳ ಪಿಂಡುಗಳುಂಡವು
ಕಳವೆಯ ಪಾಲ್ದೆನೆಯ ಘಟ್ಟಿಗೊಂಡೊಳ್ವಾಲಂ ೬೮

ನೀರೆಂಬ ಸೀರೆಯಂ ಪೆಱ
ಸಾರಿಸುತುಂ ಪುಳಿನಮೆಂಬ ಜಘನಸ್ಥಳದಿಂ

ನಾರಿಯವೊಲ್ ನದಿ ಮೆಱೆಗುಂ
ಶಾರದಸಮಯಂ ದಲೆಂಬ ವಿಟಸನ್ನಿಧಿಯೊಳ್ ೬೯

ವ: ಇಂತು ಶರತ್ಸಮಯಸಮವಸರಣಾನಂತರಂ

ಹಿಮಮುದ್ರೇಕಿಸಿ ಬಂದು ಪತ್ತಿದೊಡೆ ಧೈರ್ಯಂಗೆಟ್ಟು ಬೆಂಬಿರ್ದು ಮ
ತ್ತಮದಂ ಸೈರಿಸದೋಡಿಪೋಗಿ ವಿರಹಾಗ್ನಿಜ್ವಾಲಿಕಾವರ್ಧನ
ಕ್ರಮಮಂ ತಾಳ್ದ ವಿಯೋಗಿಚಿತ್ತಗೃಹದೊಳ್ ಪೊಕ್ಕಿರ್ದನಾ ಕಾಮದೇ
ವಮಹೀವಲ್ಲಭನೆಂದೊಡೇವೊಗಳ್ವೆನಾಂ ಶೀತಾತಿರೇಕತ್ವಮಂ ೭೦

ಅಂಜಿ ಪೂರ್ವಾಹ್ಣಹಿಮಕೆ ಧ
ನಂಜಯನುಂ ಪೋಗಿ ಪೊಕ್ಕು ಸರ್ವರ ಬಸಿಱೊಳ್
ಪುಂಜಿಸಿದನಲ್ಲದಿದ್ದೊಡೆ
ರಂಜಿಸುವುದೆ ಧೂಮಮುದಯದಲ್ಲಿ ಮುಖಸ್ಥಂ ೭೧

ಕೆಳೆಗೊಂಡುದಗ್ನಿಯೊಡನ
ಗ್ಗಳಗಾಳಿ ಮಹೇಶನುರಿಯ ಕಣ್ಣಂ ನೊಸಲೊಳ್
ತಳೆದಂ ಸಮುದ್ರಮೌರ್ವ
ಜ್ವಳನಂ ನಡುವಿರಿಸಿದತ್ತು ಶೀತದ ಭಯದಿಂ ೭೨

ವಾನರಸಂಚಯಂ ನೆರೆದು ಸೈರಿಸಲಾಱದೆ ತೀವ್ರಶೀತಮಂ
ಕಾನನದಲ್ಲಿ ರಂಜಿಸುವ ಗುಂಜೆಯ ಪುಂಜಮನಗ್ನಿಯೆಂದು ಸ
ನ್ಮಾನಿಸಿ ಪತ್ತೆಸಾರ್ದದಱ ಸುತ್ತಲುಮೊಯ್ಯನೆ ಕುಳ್ಳಿದಿರ್ದು ಮ
ತ್ತಾನಿಸಿ ಪೊಟ್ಟೆಯಂ ತುಱಿಸುತುಂ ಸಲೆಕಾಯ್ದುದು ಕಿಚ್ಚನಾಕ್ಷಣಂ ೭೩

ವಿನುತವಿವೇಕಮಂ ತಳೆದ ತುಂಬಿದ ಚೆಲ್ವಿನೊಳೊಂದಿತೋರ್ಪ ಜ
ವ್ವನೆಯರ ತೋರಬಟ್ಟಮೊಲೆಯಿಟ್ಟೆಡೆಯೊತ್ತನೆ ಪತ್ತೆಸಾರ್ದು ಬೆ
ಚ್ಚನೆ ಬಿಗಿದಪ್ಪಿಕೊಂಡು ಬಿಡದಿರ್ದೊಡಮಾ ಮನುಜಂಗಿದೇವುದೋ
ನೆನೆವಡೆ ಸೀರೆಗೀರೆ ಸಲೆ ಕಂಬಳಿಗಿಂಬಳಿ ಕಂತೆಬೊಂತೆಯುಂ ೭೪

ಕಡುನಿಮಿರ್ದ ತೋರಮೊಲೆಗಳ
ನಡುವೆಡೆಯೊಳ್ ಪೊಕ್ಕು ಪಚ್ಚಿಸಿದವೊಲ್ ತೊಡರ್ದಿ
ರ್ದೊಡಮೇನವಂಗೆ ನಡುಕಮ
ನೊಡರಿಸಲಾರ್ತಪುದೆ ನೋಡ ಹಿಮಮುಂ ಗಿಮಮುಂ ೭೫

ವ: ಇಂತು ಹೇಮಂತಮುಂ ಶಿಶಿರತ್ವಮುಮೆಂಬ ಋತುದ್ವಯ ವಿರಮತ್ಯ ನಂತರಂ ವಸಂತಮಯಮುಂ ಪೆಱಪಿಂಗಿಪೋಗೆ

ವಾತೂಳೀಜಾಳನೋನ್ಮೀಳಿತಜಟಿಳತರಸ್ಫೂಳಧೂಳೀಪ್ರಜಾಳ
ಪ್ರೋತಕ್ಷೋಣೀತಳಂ ಪ್ರೋಜ್ವಳಿತಘನಮರೀಚೀಚಯವ್ಯಾಪ್ತದಿಕ್ಕಂ
ಖ್ಯಾತಂ ಲೋಕಕ್ಕಗುರ್ವಂ ಪಡೆದು ಬಿಡದೆ ಬಂದತ್ತು ದುರ್ಗ್ರೀಷ್ಮಕಾಲಂ
ಸ್ಫೀತಪ್ರೋಷ್ಮಾನುಕೂಲಂ ವಿರಚಿತಗಗನಸ್ಥಾನಸಂಗ್ರೀಷ್ಮಕಾಲಂ ೭೬

ವ: ಆ ನಿದಾಘಸಮಯಪ್ರತಾಪೋದಯಂ ದಶದಿಶಾವಿವರೋದರದೊಳ್ ಪರಿವರ್ತಿಸಿ ಬಿತ್ತರಂಬಡೆಯೆ

ಇಂದ್ರಂ ನೇತ್ರಾಳಿ ನೀಳೋತ್ಪಳದೊಳೆ ಪುದಿದಂ ವಾರ್ಧಿಯೊಳ್ ವಹ್ನಿ ಪೊಕ್ಕಂ
ಬಂದೊಂದಿರ್ದಂ ಯಮಂ ಛಾಯೆಯೊಳಿರುಳೊಳೆ ಸಂಚಾರಿಪಂ ನೈರುತಂ ಮ
ತ್ತಂದಾದಂ ಪಾಶಿ ವಾರಾಂಪತಿ ಹಿಮಗುಣಮಂ ತಾಳ್ದಿದಂ ವಾಯುಯಕ್ಷಂ
ಸಂದಿರ್ದಂ ಮಂಜುವೆಟ್ಟಂಬಿಡಿದು ಸಲೆ ಶಿವಂ ಗಂಗೆಯಂ ಪೊತ್ತು ನಿಂದಂ ೭೭

ವ: ಮತ್ತಂ

ಬೇಸಗೆಕಾಲಮೆಂಬಬಳೆ ಬೆಟ್ಟುಗಳೆಂಬೊಲೆಗಲ್ಲುಗಳಲ್ಲಿ ಬೈ
ತೀ ಸಕಳೋರ್ವಿಯೆಂಬ ಪೊಸಗಾವಲಿಯಂ ರವಿವಹ್ನಿಯಿಂದೆ ತೋ
ಯಾಶಯಮೆಂಬ ಸಂಪಣಮನರ್ಪಿಸಿ ತಳ್ತುರಿಯಲ್ಕೆ ಕಾಷ್ಠೆಗಳ್
ದೋಸೆಯನಟ್ಟವೊಲ್ ಮಳಲರಾಶಿಗಳೊಪ್ಪಮನಾಳ್ದುವಾಕ್ಷಣಂ ೭೮

ನೆಱೆಸೆ ಜೀರ್ಣಮಾದ ಘನಧೂಳಿಗಳೇ ಮರಿಚಂಗಳಾಗಿ ಪೊ
ಯ್ದುಱೆ ಮಿಱುಗುತ್ತುಮಿರ್ಪ ಜಳಮೆಂಬುರುತೈಲದಿನೊಂದಿದುರ್ವಿಯೆಂ
ಬುಱುವ ವಿಶಾಳಭಾಜನದೊಳುಣ್ಮುವ ಬೇಗೆಯ ಬೆಂಕಿಯಿಂ ಕರಂ
ಬಱಬಱನಾಗಿ ತಾಳಿಸಿದವೊಲ್ ಕರಿವೋದವು ಬೆಂದು ಬೆಟ್ಟುಗಳ್ ೭೯

ಕೆಱೆಗಳ ತೊಱೆಗಳ ಸರಸಿಗ
ಳಱುನೀರಂ ಪೀರ್ದು ಪೀರ್ದು ನೆಱೆಯದೆ ಧರೆ ಮ
ತ್ತಱಿಸಿ ಬಾಯ್ವಿಟ್ಟ ತೆಱದಿಂ
ನೆಱೆ ಪರ್ವಿದವಂದು ಬಿರಿದ ಪೆರ್ವೀಡೆಗಳುಂ ೮೦

ಪರ್ವಿದ ಬೆಟ್ಟಬೇಸಗೆಯ ಪೆರ್ವಿಸಿಲರ್ವಿಸೆ ಮೆಯ್ಯನೊಡ್ಡಿ ತಾಂ
ನಿರ್ವಹಿಸಲ್ಕಮಾಱದೆ ಹಿಮಾಂಶುಕಳಾಳಿಯನೆತ್ತಿ ಪೊತ್ತನಾ
ಶರ್ವನುದಾರವಾರಿಶಯನಂ ಹರಿಯಾದನಜಂ ಸರೋಜದೊಳ್
ಕೊರ್ವಿದ ಮೋಹದಿಂ ನೆಲಸಿದಂ ಬಿಡದೇಗಳುಮುಷ್ಣಭೀತಿಯಿಂ ೮೧

ವ: ಅಂತಾಸುರಮಾದ ಬೇಸಗೆಯ ಬಿಸಿಲ ಕಠೋರಪರಿತಾಪದೆಸಕಂ ರಸಾತಳದೊಳೆಲ್ಲಂ ಸೂಸಿ ಪರಿದು ಪಸರಿಸಿ ಸಮುಜ್ಜೃಂಭಿಸುತ್ತುಮಿರೆ

ಎಮ್ಮಯ ವಂಶದಿಕ್ಕರಿಗಳೆಂಟುಮಿಳಾತಳಭಾರಮಂ ಕೊರಳ್
ಕೊಮ್ಮಿಸಿ ಪೊತ್ತು ನಿತ್ತರಿಸುತಿರ್ದೊಡಮೀ ನೆಲನೆಯ್ದೆಕಾಯ್ದು ಮ
ತ್ತೆಮ್ಮುಮನಟ್ಟಿ ಮುಟ್ಟಿ ಸುಡುತಿರ್ದಪುದೆಂದಿಡುವಂತೆ ಪುಯ್ಯಲಂ
ತಮ್ಮ ಕರಾಗ್ರದೊಳ್ ತೊವಲನಾಂತು ನೆಳಲ್ಗೆ ತೊಳಲ್ದವಾನೆಗಳ್ ೮೨

ಉಗ್ರನಿದಾಘತಾಪದೆಸಕಕ್ಕಗಿದುನ್ಮದದಾನೆಗಳ್ ನಿಜೋ
ದಗ್ರಕರಾಗ್ರಪುಷ್ಕರಮನೆತ್ತಿ ಕರಂ ಪರಿತಂದು ಗಾಹನ
ವ್ಯಗ್ರತೆಯಿಂ ಸರೋವರದ ತುಚ್ಛತರಾಂಬುವಿನಲ್ಲಿ ಪೊಕ್ಕು ಮು
ಳ್ಗಿ ಗ್ರಹಿಸುತ್ತುಮಿರ್ದವತಿನಿಶ್ಚಳಭಾವಮನೊಂದುಜಾವಮುಂ ೮೩

ಕಿಱಿದಾದ ಕೆಸರ್ನೀರಂ
ಮಱಿಯಾನೆಯದೊಂದು ಕಂಡು ಕುಡಿವಾತುರದಿಂ
ದೆಱಗಿ ಮೊಗಮಿಕ್ಕುವನಿತ
ಕ್ಕುಱೆ ಬತ್ತಿದುದುಷ್ಣಕಿರಣನುಗ್ರಾತಪದಿಂ ೮೪

ವ: ಮತ್ತಮೊಂದೆಡೆಯೊಳ್

ಬಿಸಿಲ ಕಡುಗಾಯ್ಪು ಭೋಂಕೆನೆ
ಪಸರಿಸೆ ಬಿದಿರೊಡೆದು ಸುರಿವ ಬಿಸಿಮುತ್ತುಗಳಂ
ಪೊಸನೀರ್ವನಿಗಳಿವೆಂದಂ
ದೊಸೆದೀಂಟಲ್ ಮಿಡುಕಿ ಸೋಗೆ ಪೊಸೆದುದು ಬಸಿಱಿಂ ೮೫

ಬೇಸಗೆಯ ಬೆಂಕೆಯಿಂದಂ
ಕಾಸಿದವೊಲ್ ಕುದಿದು ಪರಿವ ನಿರ್ಝರಜಳಮಂ
ಕೂಸುಮೃಗಂ ಕುಡಿಯಲ್ ಮೊಗ
ಮಾಸುರದಿಂ ಬೇಱೆ ಮಱುಗಿ ಬಿದಿರ್ದುದು ತಲೆಯಂ ೮೬

ಒಡವರಿವ ತನ್ನ ನೆಳಲಂ
ನಡೆನೋಡಿಯೆ ನೆಳಲಿದೆಂದು ಪೊರ್ದುವ ಬಗೆಯಿಂ
ದೆಡಕಂ ಬಲಕಂ ಪರಿದಾ
ಗಡೆ ಬಸವಳಿದತ್ತು ಬಿಸಿಲೊಳೆಳೆಯ ಕುರಂಗಂ ೮೭

ಮಿಗೆ ತಂಪಪ್ಪೆಡೆಯಲ್ಲಿ ಪತ್ತಿದುದು ಕೂರ್ಮೌಘಂ ಬಿಲದ್ವಾರಸಂ
ದಿಗಳೊಳ್ ಪೊಕ್ಕುದು ಕರ್ಕಟಪ್ರತತಿ ನೀರಿಂಗಿರ್ದ ಪಂಕಾಗ್ರದೊಳ್
ನೆಗೆವುತ್ತುಂ ಪೊರಳುತ್ತುಮಿರ್ದುದು ಮಹಾಮೀನಪ್ರತಾನಂ ಸರೋ
ಜಗಣಂ ಮ್ಲಾನತೆವೆತ್ತುದೆಯ್ದೆ ಕೊಳದೊಳ್ ಗ್ರೀಷ್ಮೋಷ್ಣಮತ್ಯದ್ಭುತಂ ೮೮

ವ: ಮತ್ತಮಾ ಪೊತ್ತಿನೊಳ್

ಉಗ್ರಗ್ರೀಷ್ಮಪ್ರಭಾವಂ ಪಸರಿಸೆ ಜಗದ ಸ್ತ್ರೀಯರುಂ ಮರ್ತ್ಯರುಂ ಪ್ರ
ತ್ಯಗ್ರೋಶೀರೋರುಧಾರಾಗೃಹ ಸುರಭಿಜಲೋಚ್ಛೀಕರಾಸಾರಮಂ ನಿ
ರ್ವ್ಯಗ್ರಂ ಪೊರ್ದಿರ್ದರಾಗಳ್ ಶಿಥಿಲವಸನದಾಚ್ಛಾದಮಂ ತಾಳ್ದುರುಚ್ಚೈ
ತ್ಯಾಗ್ರೀಭೂತಾದಿ ಮುಕ್ತಾಭರಣವಿಸರದಿಂ ಚೆಲ್ವನಾಂತಿರ್ದರೆಲ್ಲಂ ೫೯

ಪೂಸಿ ಮೆಯ್ಯಲ್ಲಿ ಚಂದನ
ಭಾಸುರಕರ್ದಮಮನಾಲವಟ್ಟಂಗಳುಮಂ
ಬೀಸಿಕೊಳುತ್ತುಂ ಕಳೆದರ್
ಬೇಸಗೆಯೊಳ್ ಪುಟ್ಟಿದಂಗದಾಹೋದಯದಿಂ ೬೦

ವ: ಇಂತು ಪೆರ್ಮೆವಡೆದ ಘರ್ಮಸಮಯಮೊರ್ಮೊದಲೊಳ್ ಭೂವಳಯಮನಾವರಿಸುತ್ತುಮಿರಲಾ ಕ್ಷತ್ರಿಯಚೂಡಾಮಣಿ ತತ್ಸಮಯಕ್ಕುಚಿತಮಾದ ಭೋಗೋಪಭೋಗಂಗಳನನುಭವಿಸುತ್ತುಮುತ್ಸವದಿಂ ಕೆಲವುವತ್ಸರಂಗಳಂ ಕಳೆವುದುಂ

ಕೊಂಡಾಡುತ್ತುಂ ಮಹಾದಾನದ ವರಮಹಿಮಾಶಕ್ತಿಯಂ ಸೂಕ್ತಿಯಿಂದಂ
ಮುಂಡಾಡುತ್ತುಂ ಸುವಿದ್ಯಾಯುವತಿವದನಮಂ ಸಂತತಂ ಧರ್ಮಮಂ ಕೈ
ಕೊಂಡಾಡುತ್ತುಂ ಕರಂ ಬಾಹುಬಲಿ ಸುಕವಿರಾಜಂ ಚರಿತ್ರಪ್ರಕಾಂಡಂ
ಚಂಡೋದ್ದಂಡಪ್ರತಾಪಂ ಧರಣಿಯೊಳೆಸೆದಂ ಚಾತುರೀಜನ್ಮಗೇಹಂ ೬೧

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮಜಿನಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿದೇವಪ್ರಸಾದಸಂಪಾದಪಾದನಿಧಾನದೀಪವರ್ತಿಯುಭಯಭಾಷಾಕವಿಚಕ್ರವರ್ತಿ ಬಾಹುಬಲಿ ಪಂಡಿತದೇವಪರಿನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ದಶರಥಮಹೀನಾಥ ತೀರ್ಥಕರತ್ವ ಪುಣ್ಯಾನುಬಂಧನಿಬಂಧನೀ ಭೂತದಾನ ವಿಧಾನಾನುಮೋದವ್ಯಾವರ್ಣನಂ ಚತುರ್ಥಾಶ್ವಾಸಂ.

ಪಂಚಮಾಶ್ವಾಸಂ

ಶ್ರೀಜಿನಚರಣಾಂಬುಜಮಂ
ಪೂಜಿಸುತುಂ ಪಾತ್ರದಾನಮಂ ಮಾಡುತ್ತುಂ
ಧೀಜನವಿನುತಗುಣಂ ರಾ
ರಾಜಿಸಿದಂ ಸರಸಚತುರಕವಿಕುಳತಿಳಕಂ ೧

ವ: ಮತ್ತಮಾ ದಶರಥಮಹೀನಾಥನಕೂಪಾರಚತುಷ್ಕ ಮೇರೆಯಾದ ಧಾರಿಣೀಮಂಡಳ ಮನಭಿರಕ್ಷಣಂಗೆಯ್ಯುತ್ತುಂ ಕತಿಪಯದಿನಂಗಳ್ ಪೋಗಲೊಡಮೊಂದು ದಿವಸಂ

ಎನ್ನಂತಾವಂ ದಲಿಂದೀವರವಿತತಿಗೆ ವಿದ್ವೇಷಮಂ ಮಾಡುವಂ ಮ
ತ್ತೆನ್ನಂತುತ್ಪಂಕಜಾತಕ್ಕಿರದತಿಶಯದಿಂ ಕೂರ್ಪನಾವಂ ಕಳಾಸಂ
ಪನ್ನಂಗೆನ್ನಂತಿರಾವಂ ಬಿಡದೆ ಮುನಿವನಾತಂಗಧಃಪಾತಮಕ್ಕಿಂ
ತೆನ್ನಂತೆಂತೆಯ್ದೆ ಲೋಕಕ್ಕಱಿಪುವ ತೆಱದಿಂ ಸೂರ್ಯನಸ್ತಕ್ಕೆ ಸಂದಂ ೨

ವಾರಿಜಮಿತ್ರಂ ಕರದಿಂ
ವಾರುಣಿಯಂ ಪಿಡಿದು ಸೇವಿಸಿದ ಕಾರಣದಿಂ
ದೋರಂತಂಬರಮಂ ಬಿ
ಟ್ಟಾರಯ್ಯದೆ ನಡುಗಿ ಕೆಡೆದನಸ್ತಾಚಳದೊಳ್ ೩

ಸಾವಿರಕರಂಗಳಂ ಚರ
ಮಾವನಿಧರದಲ್ಲಿಯೂಱಿಯುಂ ಖರತೇಜಂ
ಭಾವಿಪೊಡೆ ಬಿಳ್ದನೆಂದೊಡ
ಮಾವಂಗಂ ಮೀಱಲಪ್ಪುದೇ ವಿಧಿವಶಮಂ ೪

ವ: ಅಂತು ಸೂರ್ಯನಸ್ತಂಗತನಪ್ಪ ಸಮಯದೊಳ್

ಮೂಡಣದಿಕ್ಕಿನಲ್ಲಿ ಪರಿಪೂರ್ಣಕಳಾಯುತಚಂದ್ರಮಂಡಳಂ
ಮೂಡಲೊಡಂ ಕುಮುದ್ವತಿಗೆ ಸಂತಸದಿಂದೆ ವಿಕಾಸಭಾವಮಂ

ಮಾಡಿದುದೆಯ್ದೆ ದೇವಗೃಹದೊಳ್ ವಿವಿಧಾತತವಾದ್ಯನಾದ್ಯಮುಂ
ಮೂಡಿದುದೀ ಜಗಕ್ಕೆ ನೆಱೆಮೂಡಿದುದರ್ಕಜತಾಪಶಾಂತಿಯಂ ೫

ಸಂಪೂರ್ಣಮಾದ ವಿಧುಬಿಂ
ಬಂ ಪೂರ್ವದಿಗಂಗನಾ ಲಲಾಟದೊಳಿಟ್ಟಾ
ಸೊಂಪಿನ ಚಂದನತಿಲಕದ
ಪೆಂಪಂ ತಳೆದಿರ್ದುದಂದು ಗಗನಾಂಗಣದೊಳ್ ೬

ವ: ಆಪೊತ್ತಿನೊಳ್

ಶಶಿಬಿಂಬಂ ರವಿಬಿಂಬಮೆಂಬ ವರಘಂಟಾಯುಗ್ಮಮಂ ಕಾಂತೆಯಿಂ
ಬೆಸವೀ ನೇಣ್ಗೆಸೊಳೆಯ್ದೆ ಕಟ್ಟಿ ನಭಮೆಂಬುದ್ದಾಮಮಪ್ಪಾನೆಗಂ
ಪೊಸತಾಗಿಬ್ಬರಿಯಲ್ಲಿ ಬಿಟ್ಟ ತೆಱದಿಂದೊಂದುಕ್ಷಣಂ ಶೋಭೆಯಂ
ಪೊಸೆಯುತ್ತಿರ್ದುವು ಮೂಡಲುಂ ಪಡುವಲುಂ ಚಂದ್ರಾರ್ಕಸನ್ಮಂಡಲಂ ೭

ವ: ಮತ್ತಂ

ಪಾಲ್ಗಡಲೆಯ್ದೆ ಪೆರ್ಚಿ ಘನಮಾಗಿಯೆ ಮೇರೆಯನಂದು ಮೀಱೆ ತಾಂ
ಮೇಲ್ಗಡರುತ್ತುಮೀ ಧರಣಿಮಂಡಲಮೆಲ್ಲಮುಮಂ ಮುಸುಂಕಿಕೊಂ
ಡೇಳ್ಗೆಯೊಳಿರ್ದುದೆಂಬ ತೆಱದಿಂ ಬೆಳುದಿಂಗಳ ಮೊತ್ತಮೆತ್ತಲುಂ
ವಲ್ಗನದಿಂದೆ ಕೊರ್ವಿ ನೆಱೆಪರ್ವಿದುದೀ ಭುವನಾಂತರಾಳಮಂ ೮

ವ: ಅಂತು ಪತ್ತುಂದಿಕ್ಕಿನೊಳ್ ಪಸರಿಸಿದ ತತ್ಪುಣ್ಯಮೂರ್ತಿಯ ಕೀರ್ತಿಯೊಳ್ ಪುರುಡಿಸುಮಂತಚ್ಚವೆಳ್ದಿಂಗಳುಂ ದಶದಿಶಾಪಟಮಂ ಪರಿವ್ಯಾಪಿಸಿ ಸಮಸ್ತಜನಕ್ಕಾನಂದಮಂ ಸಂಪಾದಿಸುತ್ತುಮಿರಲಿತ್ತಲಾ ದಶರಥಮಹೀನಾಥನೊಂ ದಿಂದುಕಾಂತಶಿಲಾಮಯಮಾದ ಸಮುದಗ್ರಸೌಧಶಿಖರಾಗ್ರದೊಳಶೇಷವಿವೇಕವಿಶೇಷ ದೊಳೊಂದಿದ ಮೇಳದ ವಿಳಾಸಿನೀಕಳಾಪದೊಡಗೂಡಿ ಲೀಲೆಯಿಂದೋಲಗಂ ಗೊಟ್ಟಿರ್ದು ದಿಶಾಶೋಭಾವ ಳೋಕನಂಗೆಯ್ಯುತ್ತುಮಿರ್ಪಾಗಳ್ ತೊಟ್ಟನೆ ಕಟ್ಟಿದಿರೊಳ್

ಈ ನರನಾಯಕಂಗಮೆನಗಂ ಸಲೆ ಚಾರುಕಳಾಭಿಯೋಗಮುಂ
ಮಾನವವಂದ್ಯಮಾನವರ ಪಾದಮುಮೆಂದು ಸುಧಾಕರಂ ಕರಂ
ಮಾನಿತತಾರಕಾಯುವತಿವೃಂದದೊಳೊಂದಿ ನಭೋನಿವಾಸದೊಳ್
ತಾನುಮದಂತಿರೋಲಗದೊಳಿರ್ದೆಸೆದಂ ಪುರುಡಿಂದಮೆಂಬವೊಲ್ ೯

ಆ ರಾಜನ ಸರಿಯಾಗಿ ದ
ಲೀ ರಾಜಂ ಮುಗಿಲಲೇಶಮಾದೊಡಮೇನುಂ

ಸಾರದ ಮಿಗೆ ಪ್ರಸನ್ನ ನ
ಭೋರಾಜಾಲಯದೊಳೊಪ್ಪಮಂ ತಾಳ್ದಿರ್ದಂ ೧೦

ಅತಿರಮಣೀಯಮಾಗಿ ಪೊಳೆವ ಶ್ರವಣಸ್ಥಿತಿಯಿಂದಮೊಪ್ಪಿ ಸ
ನ್ನುತಮೆನಿಸಿರ್ದ ಕೋಮಳಸುಹಸ್ತವಿಶೇಷದೊಳೊಂದಿ ಸಾರಮ
ಪ್ಪತಿಶಯಚಿತ್ತನಾಗಿ ವಿಶದಾಂಶುಕಮಂ ಪೊದೆದಿರ್ದು ತಾಳ್ದಿಯು
ನ್ನತಿಯನೆ ರಾಜನಂತಿರೆ ವಿರಾಜಿಸಿದಂ ಮಿಗೆ ರಾಜನಾಕ್ಷಣಂ ೧೧

ವ: ಅಂತು ರಾಜಶಬ್ದಸಾಮ್ಯಸಂಜಾತದುರ್ವಹಗರ್ವದಿಂ ಖರ್ವನೆಂಬಂತೆ ನಿಜಪರಿಕರಪರಿವಾರದಿಂ ಪರಿವೃತನಾಗಿ ದಿವದೊಳ್ ಪ್ರತಿಕೂಲಸಭಾಶೋಭೆಯಂ ನಿರ್ವರ್ತಿಸಿ ತನ್ಮಧ್ಯದೊಳೊಪ್ಪುತ್ತುಮಿರ್ದ ಚಂದ್ರಮನಂ ನರೇಂದ್ರಕುಂಜರಂ ನೋಡಿ

ಮೆಚ್ಚೆ ನೃಪಾಳಂ ಹೃದಯದೊ
ಳಚ್ಚರಿಯಂ ತಾಳ್ದಿ ನಾಡೆ ಕೊಂಡಾಡುತ್ತುಂ
ಪೆರ್ಚಿದ ಚಂದ್ರನ ಸಿರಿಯಂ
ಬೆಚ್ಚರದಿಂ ನೋಡಿ ತೂಗುತಿರ್ದಂ ತಲೆಯಂ ೧೨

ವ: ಅನ್ನೆಗಮಿತ್ತಲ್

ಕ್ರೂರಾಕಾರಮನೆಯ್ದೆ ತಾಳ್ದಿ ತಮಮಂ ಚೆಲ್ಲುತ್ತುಮಿರ್ದೆಲ್ಲಿಯುಂ
ಘೋರಂ ಕಷ್ಟತರಂ ಭಯಂಕರಮುಖಂ ಪೀಡಾಕರಂ ರಾಹು ಬಂ
ದಾ ರಾಜದ್ವಿಧುಬಿಂಬಮಂ ಬಿಡದೆ ಮೇಲ್ವೊರ್ದುತ್ತುಮಿರ್ದತ್ತು ಮ
ತ್ತೋರಂತುಗ್ರವಿಷಂ ಮಹಾಮೃತಮನಂದೆಯ್ತಂದು ಸಾರ್ವಂದದಿಂ ೧೩

ವಿರಹಿಜನಕ್ಕೆ ತೀವ್ರಪರಿತಾಪಮನಾಗಿಸುತಿರ್ಪಕಾರಣಂ
ನೆರಪಿದ ಪಾಪಪಿಂಡಮದು ತಾಂ ಪಿಡಿವಂತಿರೆ ರಾಹು ಚಂದ್ರನಂ
ತ್ವರಿತದೊಳೆಯ್ದೆ ಬಂದು ಪಿಡಿಯಲ್ಕೆ ಸುಧಾಕರಬಿಂಬಮಾಕ್ಷಣಂ
ಕರಮರುಣತ್ವಮಂ ತಳೆದು ಮುನ್ನಿನ ಶೋಭೆಯನೊಕ್ಕುದೆಲ್ಲಮಂ ೧೪

ವ: ಅದಂ ಕಂಡು ಮಹೀಮಂಡನಂ ವಿಸ್ಮಯಂಬಡುತ್ತುಂ ಸಂಶಯಾಕುಳಿತ ಚಿತ್ತನಾಗಿ ತನ್ನೊಳಿಂತೆಂದು ವಿಕಲ್ಪಿಸಿದಂ

ಸುರಕರಿ ಸೊಕ್ಕಿ ಪೊಕ್ಕು ಸುರಗಂಗೆಯನೆಯ್ದೆಕಲಂಕಿ ಪಂಕಜೋ
ತ್ಕರಮನದೆತ್ತಿ ಕಿಳ್ತು ಪಿಡಿದಿರ್ದೊಡೆ ತೋಱುವ ಪಂಕಕಂದಮೋ
ತ್ವರಿತದೆ ತುಂಬಿಗಳ್ ಮುಸುಱಿಕೊಂಡ ವಿಕಾಸಿತ ಕೈರವಾಸ್ಯಮೋ
ಸುರುಚಿರನೀಳಕುಂತಳಸಮಾವೃತಪೂರ್ವದಿಗಂಗನಾಸ್ಯಮೋ ೧೫

ವ: ಇಂತಿವಱೊಳಾವುದೆಂದು ಕ್ಷಣಮಾತ್ರಂಬರಂ ಸಂದೇಹಾಂದೋಳಿತ ಚಿತ್ತನಪ್ಪ ನೃಪಾಳೋತ್ತಮಂ ಬಳಿಯಂ ಚಂದ್ರಗ್ರಹಣಮೆಂದು ನಿಶ್ಚಯಿಸುತ್ತುಮಿರ್ಪಿನಂ ಸರ್ವಗ್ರಾಸಿಯಾಗಲಾಗಳ್ ಕತ್ತಲೆಯ ಮೊತ್ತಮೆತ್ತಲುಂ ಬಿತ್ತರಿಸೆ ತಾರಗೆಗಳಿನಿಮಿನಿಯೆ ಸುತ್ತುಂ ಪೊಳೆಯಲದಂ ಕಂಡು ನಿಷ್ಪನ್ನನೇತ್ರದಿಂದಂತರಂಗದ ಪರಿಭೇದಮಂ ಪ್ರಕಟೀಕರಿಸುತ್ತುಂ ತನ್ನೊಳಿಂತೆಂದಂ

ನೋಡಿರೆ ನೋಡಿರೇ ಕಟಕಟಾ ಕಡುಕಷ್ಟಮನಯ್ಯೊ ಅಯ್ಯೊ ಪೆಂ
ಪೋಡವ ಚಂದ್ರನಂ ಪಿಡಿದು ನುಂಗಿದುದೀಗಡೆ ಬಂದ ರಾಹುವೇಂ
ಮಾಡುವೆನಾವೆನೋ ನಿಯತಿಯಂ ನೆಱಮೀಱುವನೀ ಧರಿತ್ರಿಯೊಳ್
ಮಾಡಿದ ಪುಣ್ಯಪಾಪಮನುಭೂತಿಯನೀಯದೆ ಸೈತೆಪೋಕುಮೇ ೧೬

ಈತನ ಶಕ್ತಿಯಪ್ಪೊಡೆ ಸುರಾಸುರರಿಂಗಮಗೋಚರಂ ನಿಜ
ಪ್ರೀತನೆನಿಪ್ಪ ಕಾಮನನುಮಾಪತಿ ಭಾಳದೃಗಗ್ನಿಯಿಂದೆ ಸಂ
ಜಾತಪಿಶಿಷ್ಟಕೋಪನುಱೆ ಸುಟ್ಟೊಡೆ ತನ್ನಮೃತದ್ರವಂಗಳಂ
ಸಾತಿಶಯಂಗಳಂ ತಳಿದು ಜೀವನಮಂ ಪಡೆದಿಂದುವೆತ್ತಿದಂ ೧೭

ಆ ವೈರಪ್ರತಿಕಾರಮ
ನೋವದೆ ಮಾಳ್ಪೊಂದು ಬಯಕೆ ಕೈಮಿಗೆ ಕೋಪೋ
ದ್ಭಾವದಿನೆಂಬಂತೀಶನ
ಪಾವನಶಿರದಲ್ಲಿ ತನ್ನ ಪಾದಮನಿಟ್ಟಂ ೧೮

ಭಾಸುರಬಾಡಬಾಗ್ನಿಯ ವಿಜೃಂಭಣದೊಂದೆಡೆಯಲ್ಲಿ ಮತ್ತೆ ಮ
ತ್ತೀ ಶಶಿ ತನ್ನ ಚಾರುಕಿರಣೋದಯದಿಂದೆ ಸಮುದ್ರವೃದ್ಧಿಯಂ
ಲೇಸೆನೆ ಮಾಡದಿರ್ದೊಡುಱೆಜೀವನಮಂ ಪಿಡಿದಿರ್ಪ ಶಕ್ತಿಯುಂ
ದ್ಭಾಸನಮೆತ್ತಣಿಂ ಬಿಡದೆಬಂದುದದಕ್ಕೆನುತಿರ್ದನಾ ನೃಪಂ ೧೯

ತನ್ನ ಕರಾಗ್ರದಿಂದೆ ಪರಮಾನವತೀಜನಚಿತ್ತಮಾನದೊಂ
ದುನ್ನತಿಮೂಲಮಂ ಬಿಡದೆ ಕೀಳ್ವ ಸಮರ್ಥನುಮೀತನಿಂದೆ ಮ
ತ್ತನ್ಯನದಾವನೋ ಪ್ರಬಲಮಪ್ಪ ತಮಸ್ತತಿಯೆಂಬ ಚೋರದು
ಸ್ಸೈನ್ಯಮನೆಯ್ದೆ ತೂಳ್ದುವಪನಾವನೊ ಭಾವಿಪೊಡೀತನಿಂ ಪರಂ ೨೦

ಸುರತರುವಿಂಗೆ ಸೋದರನಶೇಷಜನಸ್ತುತಲಕ್ಷ್ಮಿಗಣ್ಣನು
ದ್ಧುರತರರತ್ನರಾಶಿಯುತ ವಾರಿಧಿಪುತ್ರನನೂನಸತ್ಕಳಾ
ದರನೆನಿಪೀ ಸುಧಾಂಶುಗಿರದಾದುದು ನೋಳ್ಪಡಮೀಯವಸ್ಥೆಯು
ನ್ನರನುಱೆ ಕೊಂದುಕೂಗಿ ಪಟಚೂರ್ಣಮನಾಗಿಸನೇ ವಿಧಾತ್ರಕಂ ೨೧

ವ: ಇಂತು ವಿಚಿತ್ರಸಾಮರ್ಥ್ಯಸಾರ್ಥದೊಳ್ ಕೂಡಿದ ಸಮುತ್ತಮ ಸಂಪತ್ತಿಯಿಂ ರೂಢಿವಡೆದ ಚಂದ್ರಮನೀಯುವಸ್ಥೆಯನೆಯ್ದಿದನೆಂದೊಡೆ ಮತ್ತಿನನ್ಯರತಿ ತುಚ್ಛ ಸಾಮರ್ಥ್ಯ ಸಮನ್ವಿತರಲ್ಪತರಸಂಪದುಪಗತರಪ್ಪ ಮನುಷ್ಯರಿಂತಪ್ಪವಸ್ಥೆಯನೆಯ್ದಿದರೆಂದು ವೈರಾಗ್ಯ ಸೌಭಾಗ್ಯಭಾಗ್ಯೋದಯಸಮಾವೃತಹೃದಯಂ ಧರಾಧಿನಾಯಕಂ ಸಿರಿಯ ಪಿರಿದ ಪ್ಪೊಂದಸ್ಥಿರತೆಯಂ ಸಂಸಾರದೆ ನಿಸ್ಸಾರತೆಯುಮನಿಂತೆಂದು ಚಿಂತಿಸಿದಂ

ತಿಂಗಳ ಸಿರಿ ಪಕ್ಷದೊಳಂ
ಪಿಂಗಿದುದೆಂದೊಡೆ ಮನುಷ್ಯನಾವನೊ ಸಿರಿಯಿರ
ವಿಂಗಂ ಮುಯ್ವಾಂತಿರ್ಪಂ
ಸಂಗಡಿಸಿದ ಗಾಳಿಯಂತೆ ಪಾಱುವುದಕ್ಕಂ ೨೨

ಬೆಟ್ಟದ ಮೇಗಣಿಂ ಕೆಳಗೆ ಬೀಳ್ವ ಸುನಿರ್ಝರವಾರಿವೇಗದೋ
ಲೊಟ್ಟಜೆಯಿಂದೆ ಬಪ್ಪ ಬರವೇ ನೆಱೆ ಪೋಪುದು ಪೋಪುದೇ ಕರಂ
ನೆಟ್ಟನೆ ಬಪ್ಪುದೆಂದೊಡದಱಸ್ಥಿರಭಾವಮನಾವನೋ ನರಂ
ನಿಟ್ಟಿಸಲಾರ್ಪನಂತೆ ಸಿರಿಯಾಗತಿಯುಂ ಗತಿಯುಂ ಸ್ಥಿರತ್ವಮುಂ ೨೩

ಬರ್ಪೆಡೆಯಲ್ಲಿ ತೀವ್ರತರದುಃಖಮನೆಯ್ದಿಸುತಿರ್ಪುದಂತೆ ಮ
ತ್ತಿಪ್ಪೆಡೆಯಲ್ಲಿ ಕಾಣನವರೆಂದುದನಾಲಿಸನೆಂತು ಮೂರ್ಛೆಯಂ
ತಪ್ಪದು ಪೋಪಪೊತ್ತಿನೊಳಮಾತ್ಮನನೋವದೆ ಕೊಂಡುಪೋದುದಿಂ
ತಪ್ಪುದುಕಾರಣಂ ವಿಷಸಹೋದರಿಯೆಂದಱಿದೆಂ ಕುಲಕ್ಷ್ಮಿಯಂ ೨೪

ಎಂದಿರ್ದುಂ ಸಿರಿ ಕೆಟ್ಟುಪೋಪುದು ಚಿರಂ ಪುಣ್ಯಾತ್ಮನೆಲ್ಲಿರ್ದೊಡಂ
ಕುಂದಿಂತಿರ್ದೊಡೆಯುಂ ದುರಾತ್ಮನೊಳದೆಂತತ್ಯುಚ್ಚವೃಕ್ಷಾಗ್ರದೊಳ್
ಸಂದಂ ಕೇಳಿಳಿವಂತೆ ಮತ್ತಮದುಂ ತಾಂ ಪೋದಂದು ಚಿತ್ತವ್ಯಥಾ
ವೃಂದಂ ಪೊರ್ದುಗುಮೆಂದು ಮುನ್ನಮೆ ಸುಪಾತ್ರಕ್ಕಿತ್ತವಂ ಸತ್ಸುಖಂ ೨೫

ದಾನಂಗೆಯ್ಯದೆ ತಾನುಮುಣ್ಣದೆ ಮಹಾಯತ್ನಂಗಳಿಂ ವಸ್ತುವಂ
ದೀನಂ ರಕ್ಷಿಸುತಿರ್ದೊಡಾತನ ಧನಂ ಮತ್ತನ್ಯರಿಂಗಾಗಿಯ
ನ್ಯೂನೋದ್ಭಾಗಮನೀವುತಿರ್ಪುದವರ್ಗಂ ತಾಂ ತಮ್ಮನೋರಾಗದಿಂ
ಕನ್ಯಾರತ್ನಮನೆಂತು ರಕ್ಷಿಸಿದೊಡಂ ಮತ್ತನ್ಯರಿಂಗಪ್ಪವೊಲ್ ೨೬

ಧನಮುಂಟಾದೊಡೆ ಭೋಗಂ
ಘನತರಸತ್ಪಾತ್ರದಾನಮುಳ್ಳೊಡೆ ಸಫಲಂ
ಜನದ ಮನದಾಸೆಯಂ ತಾ
ನಿನಿಸುಂ ಪೂರೈಸದಾತನರ್ಥಂ ವ್ಯರ್ಥಂ ೨೭

ದಾನಿ ಕಡುಲೋಭಿ ಧನಮಂ
ದಾನವೆ ತಾಂ ಕೂಡಿಕೊಂಡು ಪೋಪುದಜೆಂದಂ
ದೀನಂ ತ್ಯಾಗಿಯದೆಂತೆನೆ
ತಾನಿಲ್ಲಿಯೆ ಬಿಟ್ಟುಪೋಪನಪ್ಪುದಜೆಂದಂ ೨೮

ಸ್ಥಿರಮಲ್ಲದ ಸಿರಿ ಸಾರ್ದೊಡೆ
ಪಿರಿದುಂ ದಾನವನೆ ಮಾಡುವಂ ಕಡುಜಾಣಂ
ನೆರಪಿ ಬೈತಿಟ್ಟು ಮೆಲ್ಲನೆ
ಪರಿಭೋಗಿಪೆನೆಂದು ಬಗೆವವಂ ಕಡುಮೂರ್ಖಂ ೨೯

ವ: ಇಂತು ಸಿರಿಯ ಕೇಡಂ ಪರಿಭಾವಿಸಿ ಮತ್ತಂ ಸಂಸಾರದ ನಿಸ್ಸಾರಸ್ವರೂ ಪಮಂ ಮನದೊಳಿಂತೆಂದು ಚಿಂತಿಸಿದಂ

ಪಡಿಕೆಯ ತಾಣಮಯ್ದು ಕೊಳೆ ನೆತ್ತರ ಕೀವಿನ ಭಾಜನಂ ಸಮಂ
ತಡಸಿದ ಮಾಂಸಪಿಂಡಮೆಲುವಂ ನರದಿಂದಮೆ ಕಟ್ಟಿ ಚರ್ಮದಿಂ
ಬಿಡದೆ ಮುಸುಂಕಿ ಮಾಡಿದುದು ಮತ್ತಮಜಂಗಮಮುದ್ಧಜಂಗಮಂ
ನಡಯಿಪ ಜಂತ್ರಮಾದ ತನುವೆನ್ನದಿದೆಂದು ವಿಮೋಹಿಪಂ ಜಡಂ ೩೦

ಮುಪ್ಪಿರದೆ ತೋಱೆ ಮೆಯ್ಯಂ
ಸೊಪ್ಪಿಸಿದಂತಾಗೆ ಮಾಡೆ ಶಕ್ತಿಯ ಭರಮುಂ
ನೇರ್ಪಟ್ಟು ಚೆಲ್ವುಮಾದಂ
ತಪ್ಪಿದುದಪಹಾಸ್ಯಮಪ್ಪ ರೂಪಾಯ್ತು ಕರಂ ೩೧

ತನುವಿಂಗೆ ಚಾರುಭೂಷಣ
ಮೆನಿಸುವ ಯವ್ವನಸುರತ್ನಮೆಲ್ಲಿಯೊ ಬಿಳ್ದ
ತ್ತನುಪಮಮೆಂದೀಕ್ಷಿಸುವಂ
ತೆನೆ ವೃದ್ಧಂ ಕೆಳಗನೀಕ್ಷಿಸುತ್ತುಂ ನಡೆವಂ ೩೨

ಜರೆಯೆಂಬೀಕಾಂತೆ ತನ್ನಿಂದುಳಿದಬಲೆಯರೊಳ್ ಕೂಡಿ ಬಾಳುತ್ತುಮಿರ್ದಂ
ನರನೆಂಬೀಕೋಪದಿಂ ಬಂದಡಸಿ ಪಿಡಿದು ಮುಂಗೂದಲಂ ಪೊಯ್ದು ಮತ್ತಂ
ವರಪಾದದ್ವಂದ್ವದಿಂ ಪಲ್ಮುಱಿಯೊದೊಡೆ ಬಾಯಲ್ಲಿ ಪುಟ್ಟಿರ್ದ ದಂತೋ
ತ್ಕರಮೆಲ್ಲಂ ಬಿಳ್ದುದೆಂಬಂತಿರೆ ಕಳೆದವು ವೃದ್ಧಂಗೆ ದಂತಂಗಳೆಲ್ಲಂ ೩೩

ತೆರೆಗಳ್ ಬಂದು ಶರೀರಮಂ ಬಿಡದೆ ಸುತ್ತಂ ಮುತ್ತಿಕೊಂಡಿರ್ದೊಡು
ದ್ಧುರಸಂಕ್ಲೇಶದಿನೆಯ್ದೆ ಜೋಲ್ದು ಶಿಥಿಲತ್ವಾಧಾರಮಾಗಲ್ ಭಯಾ

ತುರದಿಂ ಕೆಟ್ಟನನಂಗನೆಂಬ ತೆಱನಂ ವೃದ್ಧಂಗೆ ಪೇಳ್ವೀ ಜರಾ
ಪರಿಹಾಸಪ್ರಭೆಯೆಂಬಿನಂ ಪಳಿತಮಾಳ್ದತ್ತೊಪ್ಪಮಂ ಕೆನ್ನೆಯೊಳ್ ೩೪

ಪಿಂದಾಂ ಬಂದಪೆನೆಂಬಿದಂ ನರರ್ಗೆ ನೀಂ ಪೇಳೆಂದು ಮೂರ್ಖಾಂತಕಂ
ನಿಂದ್ಯಾಂಗಂ ಜರೆಯೆಂಬ ದೂದವಿಯುಮಂ ಮುಂದಟ್ಟೆ ಶೀಘ್ರತ್ವದಿಂ
ಬಂದೊಂದಿರ್ದವಳಂ ನಿರೀಕ್ಷಿಸಿಯುಮಾಕಾಲಂ ತಗುಳ್ದೆಯ್ದೆ ಸಾ
ರ್ತಂದಿಂತೊಂದದ ಮುನ್ನಮೇ ತಪದಿನಾಂ ಸಿದ್ಧತ್ವಮಂ ಸಾಧಿಪೆಂ ೩೫

ನೆರಮಂ ಪಾರದೆ ಕೊಲ್ವ ಮೃತ್ಯುಗೆ ಗಜಂ ವ್ಯಾಘ್ರಾಳಿಯುಂ ಕಂಟಕೋ
ತ್ಕರಮುಂ ಶಸ್ತ್ರಸಮೂಹಮುಂ ವಿಷಮುಮತ್ಯುಗ್ರಾಹಿಸಂದೋಹಮುಂ
ನೆರಮಾಗಲ್ ಮಿಗೆ ಕೊಲ್ಲದಿರ್ಪನೆ ಖಳಂ ಸಂಸಾರಿಜೀವಂಗಳಂ
ಭರದಿಂದಂ ಸುಡದಿಪ್ಪುದೇ ಘೃತಸಮಿತ್ಸಂಘಾತದಿಂ ಪಾವಕಂ ೩೬

ಎಡರಡಸಿದಲ್ಲಿ ಶರಣಂ
ಕಡೆಗಣಿಸುವೊಡಾರುಮಿಲ್ಲ ಸಂಸಾರಿಗೆ ತಾಂ
ಕಡೆಯಿಲ್ಲದಬ್ಧಿಮಧ್ಯದ
ಹಡಗಂ ಬಿಟ್ಟಿರ್ದ ಪಕ್ಷಿಗೆಂತಂತೆವೊಲಂ ೩೭

ವ: ಇಂತು ಶರೀರದಸ್ಥಿರತೆಯನವಧರಿಸಿ ಮತ್ತಂ ಸಂಸಾರಿಕಸೌಖ್ಯದಂದ ಮನಿಂತೆಂದು ಬಗೆದಂ

ವಿಷಮಮೆನಿಸಿರ್ದ ದುಃಖಾ
ಮಿಷಮಂ ಮಾಡುವ ಚಿರಂ ದಲಲ್ಲದ ಕಡುಕ
ಲ್ಮಷಕಾರಣಮಾಗಿರ್ದೀ
ವಿಷಯಸುಖಕ್ಕೆಳಸಿಯಾತ್ಮಹಿತಮಂ ಮಱೆವರ್ ೩೮

ಘನದುಃಖಂಗಳನೆಯ್ದೆ ಮಾಳ್ಪ ವನಿತಾಸೌಖ್ಯಕ್ಕೆ ಬಾಯ್ವಿಟ್ಟು ದು
ರ್ಮನುಜಂ ಸಿಕ್ಕಿ ವಿಶೇಷದಿಂದೆ ಬಳಲುತ್ತಿರ್ಪಂ ದಲಾತ್ಮಜ್ಞನೆಂ
ದೆನಿಪಂ ಬಾಯ್ವಿಡನಂಬುವೆಂಬ ಬಗೆಯಿಂ ಗಾಂಪಂ ಮರೀಚೀಜಲ
ಕ್ಕೆನಸುಂ ಬಾಯ್ವಿಡುವಂ ಪರೀಕ್ಷಕನದಕ್ಕೆಂತಾದೊಡಂ ಬಾಯ್ವಿಡಂ ೩೯

ಆಗಲ್ಬೇಡಿರ್ದ ಲಸ
ದ್ಭೋಗಂಗಳೊಳುಂಟೆ ನಿಶ್ಚಯಂ ಪೋದವು ತಾ
ವೇಗೆಯ್ದುಂ ಪೋದುವೆ ಮ
ತ್ತೀಗಳಿನ ಸುಖಂಗಳಿಂಗೆ ಬಾಯಂ ಬಿಡುವರ್ ೪೦

ಖಳತರಸಪ್ತವ್ಯಸನಂ
ಗಳ ವಶಗತರಾಗಿ ಕಷ್ಟಮತಿಗಳ್ ದುಃಖಂ

ಗಳನನುಭವಿಸುತ್ತಿರ್ಪರ್
ತಳವಜಿರ ವಶಕ್ಕೆ ಸಂದ ಕಳ್ಳರ ತೆಱದಿಂ ೪೧

ಸಿರಿ ಬಡತನಕ್ಕೆ ಪುಟ್ಟುಂ
ಮರಣಕ್ಕೆ ಸುಖಂ ಸಮಂತು ದುಃಖಕ್ಕೆ ಮನೋ
ಹರ ಯವ್ವನಮದು ಮುಪ್ಪಿಂ
ಗುರುಕಾರಣಮೆಂದು ಬಲ್ಲೊಡಂ ಮೋಹಿಸುವರ್ ೪೨

ಪೆಂಡತಿ ದುಃಖಪಿಂಡಮುಱಿಸೂನು ಕೃಶಾನು ಧನಂ ಸುಬಂಧನಂ
ಮಂಡಳದಲ್ಲಿ ಬಂಧುಪರಿಮೋಹನಸಿಂಧು ಪರಿಗ್ರಹಂ ಗ್ರಹಂ
ಖಂಡಿತಬೋಧನಾದ ಮನುಜಂ ನಿಜದಿಂದೆ ಪರಂಗಳಪ್ಪುವಂ
ಕಂಡುಮವಕ್ಕೆ ಮೋಹಿಸುವನೆನ್ನಪಿವೆಂಬ ದುರಾಭಿಶಂಕೆಯಿಂ ೪೩

ಪಿಂದಣ ಜನ್ಮದಲ್ಲಿ ಕೃತಪುಣ್ಯಮನೀಗಳುಣುತ್ತುಮಿರ್ದೊಡಂ
ಮುಂದಣ ಜನ್ಮದಲ್ಲಿಯುಮದಾಗಲೆವೇಳ್ಪುದುಮೆಂದು ಮತ್ತೆಯುಂ
ಕುಂದದ ಪುಣ್ಯಮಂ ಜಿಡದೆ ಮಾಡುವನೀಗಳಿಯೆಂತುಮಾಡದಿ
ರ್ದಂದುಮಜಿ ಜಿತ್ತನಟ್ಟು ಪದೆದುಣ್ಬ ನರಂಗೆಣೆಯಾಗದಿರ್ಪನೇ ೪೪

ವ: ಅಂತುಮಲ್ಲದೆಯುಂ

ಮೊದಲಲ್ಲಿ ಯೌವರಾಜ್ಯಂ
ಪದಪಿಂದಂ ನಡುವೆ ಸಕಳಸಾಮ್ರಾಜ್ಯಂ ತಾಂ
ತುದಿಯಲ್ಲಿ ತಪೋರಾಜ್ಯಂ
ಮದನ್ವಯಾಗತ ನೃಪರ್ಗೆ ಕರಮಿದು ಸಹಜಂ ೪೫

ಆನಂತುಮಾಡದಿರ್ದೊಡೆ
ಭೂನುತಮಪ್ಪೆನ್ನ ವಂಶವೃದ್ಧಕ್ರಮಮಂ
ಹೀನಂ ಮಾಳ್ಪುವನಪ್ಪೆಂ
ಮಾನಿತಪುತ್ರಂ ಕುಲಕ್ಕೆ ದೀಪಕನಕ್ಕುಂ ೪೬

ವ: ಇಂತು ತೂರ್ಣಂ ಪರಿಜೀರ್ಣಕರ್ಮಬಂಧನನಪ್ಪಾ ವಸುಂಧರಾಧಿ ನಾಯಕಂ ಸಿರಿಯ ತರಳತ್ವಮಂ ಸಂಸಾರಸ್ವರೂಪದ ನಿಸ್ಸಾರತೆಯುಮಂ ಮನದೊಳ ಭಿವರ್ಣಿಸಿ ಸಾಂಸಾರಿಕಸುಖಕ್ಕೆ ಪಿರಿದುಂ ಕೊಕ್ಕರಿಸಿ ನಿಯಮದಿಂ ದುಶ್ಚರತಪಶ್ಚರಣಪರಿಗ್ರಹಣಮಂ ಮಾಳ್ಪೆನೆಂದು ನಿಶ್ಚಯಿಸಿ ಬಳಿಯಂ ವಿಪಶ್ಚಿಚ್ಚೂಡಾಮಣಿಭೂಮಿನೀಸಭೆಯಂ ವಿಸರ್ಜಿಸಿ ಸಿಂಹಾಸನದಿಂದಮೆಳ್ದುಪೋಗಿ ಹಂಸತೂಳಪರಿಕಲ್ಪಿತಮಾದ ತಲ್ಪತಳ ದೊಳೊಯ್ಯನೆ

ಮೆಯ್ಯನೀಡಾಡಲೊಡಂ ವೈರಾಗ್ಯಚಿಂತಾಯುವತಿಸಮಾಲಿಂಗಿತನಪ್ಪಾ ಭೂಪತಿಯಂ ನಿದ್ರಾಪುರಂಧ್ರಿ ಪುರುಡಿಂದೆಂಬಂತೆ ಪೊರ್ದದಿರೆ ಮತ್ತಮೆತ್ತಾನುಮಿರುಳುಂ ಕಳೆದು ಸುಪ್ರಭಾತಸಮಯದೊಳ್

ಮಂಗಳಗಾಯಕಗೀತರ
ವಂಗಳ ಪಾಠಕಜನಂಗಳೋದುವ ಸತ್ವ
ದ್ಯಂಗಳ ದೇವಾಲಯವಾ
ದ್ಯಂಗಳ ಸುಶ್ರವಣದಿಂದಮೆಲ್ದಂ ನರಪಂ ೪೭

ವ: ತದನಂತರಂ ದಂತಧಾವನ ಸ್ನಾನಮಂ ಮಾಡಿ ಧೌತವಸ್ತ್ರದಿಂದ ಳಂಕೃತನಾಗಿ ಕತಿಪಯಭವ್ಯಜನಂಬೆರಸು ಚೈತ್ಯಾಲಯಕ್ಕೆ ಬಂದು ಸಂಗೀತವಾದ್ಯ ನೃತ್ಯಸಹಿತಂ ಬಸದಿಯಂ ಬಲಗೊಂಡು ಪಾದಪ್ರಕ್ಷಾಲನಾನಂತರಂ ನಿಷಿದ್ಧಿಯೆಂದು ಚ್ಚಾರಣಂಗೆಯ್ಯುತ್ತು ಮೊಳಗಂ ಪೊಕ್ಕು ಮುಕುಳಿತಮಾದ ಕರಕಮಳಮಂ ನೊಸಲ್ಗೆತಂದು ಜಯ ಜಯ ಎಂದು ಸಾಷ್ಟಾಂಗಪ್ರಣತನಾಗಿ ಬಳಿಯಮಷ್ಟವಿಧಾರ್ಚನೆಯಿಂದಂ ದುಶ್ಚ್ಯವನಾರ್ಚನೀಯನ ಸಚ್ಚರಣಮಂ ಪೆರ್ಚಿದ ಭಕ್ತಿಯಿಂದರ್ಚಿಸಿ ತತ್ಪರಮೇಶ್ವರಂಗ ಭಿಮುಖನಾಗಿ ನಿಂದು

ಜಯ ಜಯ ಜಯ ಶುಭಭಾವಾ
ಜಯ ಜಯ ಜಯ ವಿಧೃತವಿಲಸದನುಭಾವಾ
ಜಯ ಜಯ ಜಯ ನತದೇವಾ
ಜಯ ಜಯ ಜಯ ರಕ್ಷಿಸೆನ್ನನರ್ಹದ್ದೇವಾ ೪೮

ಜಯ ಜಯ ಜಯ ಸರ್ವಜ್ಞ
ಜಯ ಜಯ ಜಯ ಕೋಟಿಚಂದ್ರಕಾಂತಿಮನೋಜ್ಞಾ
ಜಯ ಜಯ ಜಯ ಬಹುಲಜ್ಞ
ಜಯ ಜಯ ಜಯ ರಕ್ಷಿಸೆನ್ನನರ್ಹದ್ದೇವಾ ೪೯

ಜಯ ಜಯ ಜಯ ಜಿನನಾಥಾ
ಜಯ ಜಯ ಜಯ ಪರಮನಿತ್ಯಮಹಿಮಸನಾಥಾ
ಜಯ ಜಯ ಜಯ ಮುನಿನಾಥಾ
ಜಯ ಜಯ ಜಯ ರಕ್ಷಿಸೆನ್ನನರ್ಹದ್ದೇವಾ ೫೦

ಜಯ ಜಯ ಜಯ ಹತಬಾಧಾ
ಜಯ ಜಯ ಜಯ ಸಕಳವಿಮಳಕೇವಳಬೋಧಾ
ಜಯ ಜಯ ಜಯ ಸಮುಗಾಥಾ
ಜಯ ಜಯ ಜಯ ರಕ್ಷಿಸೆನ್ನನರ್ಹದ್ದೇವಾ ೫೧

ಜಯ ಜಯ ಜಯ ಗತಕಾಮಾ
ಜಯ ಜಯ ಜಯ ವಿಶ್ವವಿನುತಕೀರ್ತಿಸ್ತೋಮಾ
ಜಯ ಜಯ ಜಯ ಸತ್ಪ್ರೇಮಾ
ಜಯ ಜಯ ಜಯ ರಕ್ಷಿಸೆನ್ನನರ್ಹದ್ದೇವಾ ೫೨

ಜಯ ಜಯ ಜಯ ಗುಣಭೂಷಾ
ಜಯ ಜಯ ಜಯ ರಹಿತವಿಷಮತರದೋಷಾಯಾ
ಜಯ ಜಯ ಜಯ ಹಿತಭಾಷಾ
ಜಯ ಜಯ ಜಯ ರಕ್ಷಿಸೆನ್ನನರ್ಹದ್ದೇವಾ ೫೩

ಜಯ ಜಯ ಜಯ ದಲನಿಂದ್ಯಾ
ಜಯ ಜಯ ಜಯ ನಿಖಿಲಭುವನಜನತಾವಂದ್ಯಾ
ಜಯ ಜಯ ಜಯ ಸುಖನಂದ್ಯಾ
ಜಯ ಜಯ ಜಯ ರಕ್ಷಿಸೆನ್ನನರ್ಹದ್ದೇವಾ ೫೪

ಜಯ ಜಯ ಜಯ ಕೃತಕೃತ್ಯಾ
ಜಯ ಜಯ ಜಯ ಶೇಷನಿಂ ವಿಶೇಷಸ್ತುತ್ಯಾ
ಜಯ ಜಯ ಜಯ ಯುತಸತ್ಯಾ
ಜಯ ಜಯ ಜಯ ರಕ್ಷಿಸೆನ್ನನರ್ಹದ್ದೇವಾ ೫೫

ವ: ಎಂದನೇಕಸ್ತುತಿಶತಸಹಸ್ರಂಗಳಿಂದಾ ಪರಮೇಶ್ವರನಂ ಸ್ತುತಿಗೆಯ್ದು ಪೊಡವಂಟು ಶ್ರುತವಂದನಾನಂತರಂ ಗುರುಗಳಿಂಗೆ ಪಾದಾರ್ಚನಾಪೂರ್ವಕಂ ನಮಸ್ಕರಿಸಿ ನಿತ್ಯಬ್ರತಧಾರಿಯಾಗಿ ಜಿನಮಾರ್ಗಪ್ರಭಾವಕರರಪ್ಪ ಜೈನೋಪಾಧ್ಯಾಯರ್ಗೆ ಸುವರ್ಣವಸ್ತ್ರ ಕಪಿಲಾಕಲಾಪಂಗಳಿಂ ನಿತ್ಯದಾನಮಂ ನಿರ್ವರ್ತಿಸಿ ಕಿಱಿದುಂ ಪೊಳ್ತು ಧರ್ಮಕಥಾರಸಾಯನದಿಂ ಶ್ರವಣೇಂದ್ರಿಯಮಂ ತಣಿಪಿಸಿ ಬಳಿಯಂ ಬೀಳ್ಕೊಂಡರಮನೆಗೆ ಬಂದು ಸಮುಪಚರಿತ ಮಜ್ಜನಭೋಜನವ್ಯಾಪಾರಪರನಾಗಿ ಚಾರುಕರ್ಪೂರಪೂರಪಾರಿಸಂಸ್ಕಾರದಿ ಬಹಳಪರಿಮಳಮಂ ಬಳಯಿಸುತ್ತಿರ್ಪ ತಾಂಬೂಲಚರ್ವಣದಿಂದಂತರಂಗಸಂಗತ ರಾಗರಸಮಂ ಬೇಗದಿಂ ಪೊಱಗೆ ಪೊಱಮಡಿಪಂತಧರಮಂ ರಾಗರಂಜಿತಮಂ ಮಾಡುತ್ತುಂ ವಿಚಿತ್ರವೇತ್ರಧರಪುರಸ್ಸರಂ ನಿಜಸಭಾನಿವಾಸಕ್ಕೆ ಬಂದು ವೃಂದಮಂತ್ರಿ ಮಂಡಳಿಕ ದಂಡನಾಥ ಮಹಾಪ್ರಧಾನ ಪುರೋಹಿತ ಸಾಮಂತ ಸೇನಾನಾಯಕರ್ ಮುಖ್ಯಮಾದಾಪ್ತವರ್ಗಂ ಬೆರಸು ಬಂದು ನಿಷ್ಪ್ರತ್ಯೂಹಪದಪರಿಪುಷ್ಟ ಸಿಂಹವಿಷ್ಟರ ನಿವಿಷ್ಟನಾಗಿ

ಅತಿರಥಕುಮಾರನಂ ಭೂ
ಪತಿ ಬರವೇಳ್ದಟ್ಟಿದಂ ಪ್ರತೀಹಾರಕರಂ

ನುತವಸ್ತ್ರಾಲಂಕರಣಾ
ನ್ವಿತನುಚ್ಚಮನೋನುರಾಗದಿಂ ಪೂಜಿಮಟ್ಟಂ ೫೬

ಮಕುಟಾಗ್ರ ಪ್ರೋತಭಾಸ್ವನ್ಮಣಿಕಿರಣದಿನಾಕಾಶಮಂ ಚಿತ್ರಿಸುತ್ತುಂ
ಸಕಲಾಲಂಕಾರಕಾಂತಿಪ್ರಸರದೆ ವಿಲಸದ್ವಸ್ತ್ರಮಂ ಚಿತ್ರಿಸುತ್ತುಂ
ಸುಕನತ್ಪಾದಾಬ್ಜವಿನ್ಯಾಸದೆ ಮಣಿಧರೆಯಂ ಚಿತ್ರಿಸುತ್ತುಂ ವಿಶಿಷ್ಟಾ
ಧಿಕಪುಣ್ಯಂ ಬಂದು ಪೊಕ್ಕಂ ನೃಪತಿಸಭೆಯನೇಕಾಂಗವೀರಂ ಕುಮಾರಂ ೫೭

ವ: ಅಂತುಬಂದು ವಿನಯವಿನಮಿತೋತ್ತಮಾಂಗನಾಗಿ ನರಪಾಲ ಪರಿಸಂಜ್ಞಿತಮಪ್ಪ ಬಲದ ಕೆಲದೊಳ್ ಕುಳ್ಳಿರ್ಪುದುಂ ಮತ್ತಂ

ಆ ನರಪಂ ತನ್ನ ಕುಮಾ
ರಾನನಮಂ ನೋಡಿ ನುಡಿದನತಿಮುದದಿಂದಂ
ಮಾನಿತಸಭೆ ಭಾಪ್ಪೆನೆ ಸತ್
ಜ್ಞಾನಾಂಬುಧಿ ಚತುರವಚನಚಯಚಾತುರ್ಯಂ ೫೮

ವ: ಅದೆಂತೆನೆ

ಬೇಸಱದಿನ್ನೆಗಂ ಭವಸುಖಾನುಭವಾಂಶೆಯೊಳೊಂದಿ ವೈರಿಸಂ
ತ್ರಾಸನಮಂ ವಿನಿರ್ಮಿಸಿ ತದೀಯ ಸುದುರ್ಗಮದುರ್ಗವರ್ಗಮಂ
ಲೇಸೆನೆ ಕೊಂಡೆನಿನ್ನು ಕೆಡದಿರ್ದ ಸುಖಕ್ಕೆಳಸುತ್ತುಮಿರ್ದುದೆ
ನ್ನಾಶಯಮಂತು ಕಾರಣಮೆ ಸಾಧಿಪೆನಾನಪವರ್ಗದುರ್ಗಮಂ ೫೯

ಅದು ಜಿನದೀಕ್ಷಾಬಲಸಂ
ಪದದಿಂದಲ್ಲದೆ ಸುಸಾಧ್ಯಮಾಗದು ದುರ್ಗಂ
ವಿದಿತ ಚತುರ್ವಿಧಬಲದೊಂ
ದೊದವಿಂದಂ ಸಾಧ್ಯಮಪ್ಪ ತೆಱದಂತೆವೊಲಂ ೬೦

ವ: ಅದುಕಾರಣದಿಂ ಜಿನದೀಕ್ಷೆಯಂ ಕೈಕೊಳುವೆನೆಂದು ತಱಿಸಂದು ನುಡಿವುದಂ ಕೇಳ್ದು ಸಭಾಜನಮೆಲ್ಲಂ ಸಂಕ್ಲೇಶಭಾಜನಮಾಗಿ ಕಾರ್ಗಾಲದ ಕಾದಂಬಿನೀ ನಿನದಮಂ ಕೇಳ್ದ ಕಳಹಂಸೆಯಂತೆ ಕಳವಳಿದು ಮಲ್ಮಲ ಮಱುಗುತ್ತಮಿರಲಲ್ಲಿಯೊರ್ವಂ ಶೂನ್ಯವಾದ ಪ್ರತಿಪಾದನಪ್ರವೀಣನುಂ ಪರಿವಿದಿತವಿಚಿತ್ರತತ್ತ್ವಜ್ಞನುಂ ಚಾರ್ವಾಕಮತಾನುಸಾರಿಮತಿಯುಮಪ್ಪ ಸುಮಂತ್ರನೆಂಬ ಮಂತ್ರಿ ಬಿನ್ನಪಮೆಂದಿಂತೆಂದಂ

ಮಂಡೆಯ ಕೂದಲಂ ಪಱಿದುಬಿಟ್ಟು ದಲುಟ್ಟುದನೆಯ್ದೆ ದೇಹಮಂ
ದಂಡಿಸಿ ಸೌಖ್ಯಮಂ ಪಡೆವೆನೆಂಬ ದಿಗಂಬರವಾಕ್ಯಮಂ ಮನಂ

ಗೊಂಡುಱೆ ಕೇಳ್ದು ನೀಂ ಮರುಳನಾಗದಿರಿಂದ್ರಿಯಪೋಷಿಯಾಗು ಕೇಳ್
ಕಂಡವರಾರೊ ಮುಂದಣ ಭವಂಗಳನಿಲ್ಲಿ ಧರಾಧಿನಾಯಕಾ ೬೧

ಕಾಣಲ್ಬಾರದ ಮೋಕ್ಷಸೌಖ್ಯ ಪರಿಸೇವಾಲಾಭದಾಕಾಂಕ್ಷೆಯಿಂ
ಕಾಣುತ್ತಿರ್ದ ಸಮಸ್ತರಾಜ್ಯಸುಖಮಂ ಬಿಟ್ಟಪ್ಪನಿನ್ನೆಂಬಿದಂ
ಕ್ಷೋಣೀನಾಯಕ ಮಾಣ್ಬು ನೀಂ ಸುಖದೊಳೋಲಾಡುತ್ತಿರಾವಂ ಪಯ
ಶ್ರೇಣೀಕಾರಣಮಾಕಳಸ್ತನಮುಮಂ ಮಾಣ್ದೇಸುವಂ ಶೃಂಗಮಂ ೬೨

ವ: ಅಂತುಮಲ್ಲದೆಯುಂ

ಎಲೆ ನೃಪ ಜೀವತತ್ತ್ವದ ಪೊಲಂಬದು ಭಾಪಿಪೊಡಿಲ್ಲ ಪುಣ್ಯಮುಂ
ಕಲುಷಮುಮೆಂಬುದಿಲ್ಲದಱೆಸೆಯ್ವುವ ತತ್ಪರಲೋಕವಾರ್ತೆಯಂ
ನಲಿದು ೧ ಕೇಳ್ವೊಡಿಲ್ಲದಱ ಕಾಂಕ್ಷಣಮೆಂಬುದು ಗಾಪಿಲಂ ನಭಃ
ಫಲಮುಪಭೋಗಮಂ ಬಯಸಿ ಬಾಯ್ಬಿಡುವಂದಮನುಂಟುಮಾಡುಗುಂ ೬೩

ಪುಟ್ಟಿಂದಂ ಮುನ್ನೆ ಸಾಪಿಂ ಬಳಿಯಮುಪಯಚ್ಛೇದಮಂ ಮಾಡೆ ದುಃಖಂ
ಬಟ್ಟಿರ್ಪಾಪಿಂಡಯುಗ್ಮಂಗಳ ನಡುವೆ ಕರಂ ಕಾಯದಿಂ ಭಿನ್ನನಾಗ
ಲ್ಪಟ್ಟುಂ ತತ್ಕಾಯದೊಳ್ ತಾಂ ಪುಗುವ ಪೊಱಮಡುತ್ತಿರ್ಪ ಚೈತನ್ಯನಂ ಮೆ
ಳ್ಪಟ್ಟಿಂತಿಲ್ಲಂದದಿಂದಂ ಬಿಡದಱಸಿದೊಡಂ ಕಾಯಮಂ ಬಿಟ್ಟು ಕಾಣೆಂ ೬೪

ವ: ಮತ್ತಂ ತುಂಬೀಫಲಂ ದಂಡಂ ತಂತಿ ಕಳಿ ಕರಾಂಗುಳಿತಾಡನಮೆಂಬಯ್ದಱ ಕೂಟದಿಂ
ಧ್ವನಿವಿಶೇಷಮೆಂತು ಪುಟ್ಟುಗುಂ ಗುಡಾನ್ನಪಿಷ್ಟೋದಕ ಧಾತಕೀಕುಸು ಮಂಗಳೆಂಬಿವಱ
ಸಮ್ಮೇಳನದಿಂದುನ್ಮಾದಿನೀಶಕ್ತಿಯುಮೆಂತುಪುಟ್ಟುಗುಮಂತಂತೆ ಪೃಥಿ ವ್ಯಪ್ತೇಜೋವಾಯ್ವಾ
ಕಾಶಂಗಳೆಂಬ ಪಂಚಭೂತಂಗಳ ಕೂಟದಿಂ ಚೈತನ್ಯರೂಪನಪ್ಪಾತ್ಮಂ ಪುಟ್ಟಿ
ಚೇಷ್ಟಿಸುತಿರ್ಪನವು ಪಱೆಯೆ ಕೆಟ್ಟುಪೋಪನಿಂತಲ್ಲದೆ ನಿತ್ಯರೂಪನಪ್ಪಾತ್ಮ
ನೊರ್ವನುಮಿಲ್ಲಾತನಿಂ ಮಾಡಲ್ಪಡುವ ಪುಣ್ಯಪಾಪಮುಂ ತತ್ಫಲಾನುಭವನಮುಂ
ಸ್ವರ್ಗಾಪವರ್ಗಾದಿ ಪರಲೋಕಮುಮಿಲ್ಲದುಕಾರಣದಿಂ ಮೋಕ್ಷಸೌಖ್ಯಸಾಧನೋಪ
ಯೋಗಿ ಭೂತತಪೋವಿಧಾನೋದ್ಯೋಗಮಂ ಮಾಣ್ದು ಸುಖದಿನಿರ್ಪುದೆನಲಾತನ
ಮಾತಂ ಭೂತಳಾಧಿಪತಿ ಕೇಳ್ದು ಮುಗುಳ್ನಗೆ ನಕ್ಕು

ಕಿರಣದಿನಾದಿತ್ಯಂ ದು
ರ್ಧರತಮಮಂ ಕೆಡಿಪ ಮಾಳ್ಕೆಯಿಂ ದುರ್ಮತಮಂ
ಭರದೆ ನಿರಾಕರಿಸಿದನಾ
ನರನಾಥಂ ತರ್ಕಕರ್ಕಶೋಕ್ತಿಗಳಿಂದಂ ೬೫

ನೀಂ ಪೇಳ್ದುದನ್ನಾದಿನೀಶಕ್ತಿಗೆ ನಿನಗೊಗೆದುದ್ರಿಕ್ತಮಾಯ್ತೆಂಬಿದಂ ಸೊ
ಕ್ಕಂ ಪೇ ್ರರ್ದೀ ವಿಕಾರಾನ್ವಿತವಚನವಿಶೇಷಂಗಳಿಂ ವ್ಯಕ್ತಮಾಯ್ತೀ
ಪೆಂಪಿಂ ಸನ್ಮಂತ್ರನೆಂಬೀ ಪೆಸರಿದು ನಿನಗಂ ವ್ಯರ್ಥಮೆಂದಾ ನೃಪಂ ವಾ
ಗ್ಗುಂಫಂ ಸ್ಯಾದ್ವಾದಮಂ ಸ್ಥಾಪಿಸಿದನಿರದನೇಕಾಂತವಿದ್ಯಾವಿನೋದಂ ೬೬

ವ: ಇಂತು ಪ್ರತ್ಯಕ್ಷಾದಿಪ್ರಮಾಣವಿರೋಧಂಗಳಾದ ವಚನಂಗಳಿಂದಾತ್ಮ ನಿಲ್ಲೆಂಬೆಯಪ್ಪೊಡೆ ಸತ್ತವರ್ ವ್ಯಂತರಂಗಳಾಗಿ ಪುಟ್ಟಿ ಪೂರ್ವಜನ್ಮಪ್ರಿಯಾಪ್ರಿಯ ಸಂಬಂಧಾನುಬಂಧದಿಂ ಮಿತ್ರಾಮಿತ್ರವರ್ಗಕ್ಕೆ ಜೀವನೋಪಾಯಮುಮಂ ಮಾಳ್ಪುದಂ ಕಾಣ್ಬುದಱಿಂದ ತೀತಜನ್ಮದೊಳಾತ್ಮನುಂಟೆಂಬಿದು ಪ್ರತ್ಯಕ್ಷಸಿದ್ಧಂ ತನ್ನಯ ಶರೀರ ದೊಳಾತ್ಮನುಂಟೆಂಬಿದು ಜೀವಂ ಸ್ವಸಂವೇದನಜ್ಞಾನಪರಿವೇದ್ಯಂ ಬಾಧಕಪ್ರಮಾಣ ಮಿಲ್ಲಪ್ಪುದಱಿಂ ಸುಖ ದುಃಖಾದಿಕಮೆಂತಂತೆಂಬೀ ಸ್ವಾರ್ಥನುಮಾನದಿಂ ಸಮರ್ಥಿತಂ ಪರರ ಶರೀರದೊಳಾತ್ಮ ನುಂಟೆಂಬಿದು ಜೀವಂ ವಿದ್ಯಮಾನತಾಸಮೇತಂ ಬುದ್ಧಿಪೂರ್ವಕ ವ್ಯಾಹಾರಗಮನಾ ಗಮನಾದಿ ಕಾರ್ಯದರ್ಶನದಿಂದೆನ್ನಾತ್ಮನೆಂತಂತೆಂಬೀ ಪರಾರ್ಥಾನು ಮಾನದಿಂದನು ಮೇಯರೂಪನಪ್ಪುದಱಿಂದನುಮಾನಪ್ರಸಿದ್ಧಮಸ್ತ್ಯಾತ್ಮಾನಾದಿ ಬುದ್ಧಿಯೆಂಬೀಯಾಗಮ ದಿಂದಾತ್ಮಸ್ತಿತ್ವಮವಗಮ್ಯಮಾಗಳಂತೆ ಪುಟ್ಟಿದ ಶಿಶುವಿಂಗೆ ಪೂರ್ವಜನ್ಮಸಂಸ್ಕಾರಮಂ ಬಿಟ್ಟು ಮೊಲೆಯುಣ್ಬಭ್ಯಾಸಮಂ ಕಲಿಸಿದರಾರುಮಿಲ್ಲದು ಕಾರಣದಿಂ ಪಿಂದಣ ಜನ್ಮದೊಳಾತ್ಮನುಂಟೆಂಬಿದರ್ಥಾಪತ್ತಿಯಿಂ ಪ್ರತಿಪನ್ನಮಿಂತು ಸ್ಥಿತ್ಯುತ್ಪತ್ತಿವ್ಯಯಾತ್ಮಕ ನಪ್ಪಾತ್ಮಂ ಭೂತಭವದ್ಭಾವಿಭವಾಂತರದೊಳ್ ವ್ಯಾಪಾರ್ಯಮಾಣ ಸ್ವರೂಪ ನುಂಟೆಂಬಿದು ಪ್ರತ್ಯಕ್ಷಾನುಮಾನಾಗಮಾರ್ಥಾಪತ್ತಿಗಳೆಂಬ ಪ್ರಮಾಣಂಗಳಿಂದಂ ಸಂಸಿದ್ಧಮಾದಾತ್ಮದ್ರವ್ಯಮಿಲ್ಲೆಂದಪಲಾಪನಂಗೆಯ್ವುದುಪಪತ್ತಿಶೂನ್ಯಮಪ್ಪುದಱಿಂ ಬಾಲಭಾಷಿತಮಲ್ಲದೆ ಪ್ರಬುದ್ಧಭಾಷಿತಮಲ್ತು

ಮೂರ್ತಿಯುತದೃಷ್ಟಿ ಬಗೆವೊಡ
ಮೂರ್ತನೆನಿಪ್ಪಾತ್ಮನಂ ಕರಂ ಕಾಣಲ್ಕೇ
ನಾರ್ತಪುದೆ ಮಸೆದ ಖಳ್ಗಮ
ಮೂರ್ತಾಂಬರಮಂ ವಿಭೇದಿಪುದೆ ಪೊಯ್ಯಲೊಡಂ ೬೭

ವ: ಮತ್ತಂ ಪಂಚಭೂತಂಗಳ ಸಂಯೋಗದಿಂದಾತ್ಮಂ ಪುಟ್ಟುವನೆಂದು ಪೇಳ್ದೆಯಂತಾದೊಡೆ ಪವಮಾನಪ್ರಾಬಲ್ಯಜಾಜ್ವಲ್ಯಮಾನಪಾವಕನಿಂ ಪಾನೀಯ ಸಂತಪನ ಸಮಯದೊಳ್ ಮೃತ್ತಿಕಾಮಯಭಾಜನಜಲತೇಜೋವಾಯ್ವಾಕಾಶಸಂಯೋಗ ಮುಂಟಾಗಿಯುಮಾತ್ಮ ನೇಕಲ್ಲಿ ಪುಟ್ಟನದುಕಾರಣದಿಂ ನೀಂ ಪೇಳ್ದ ಲಕ್ಷಣಮವ್ಯಾಪ್ತಿಯೆಂಬ ದೋಷ ದೂಷ್ಯಮಾಣಮಿಂತವಿಚಾರಿತವಚನದಿಂದಿಷ್ಟಸಾಧ್ಯಸಂಸಿದ್ಧಿಯಾಗದಂತು ಮಲ್ಲದೆಯುಂ ಚೈತನ್ಯಾತ್ಮಕನಪ್ಪಾತ್ಮಂಗೆ ವಿಜಾತೀಯಾ ಚೈತನ್ಯರೂಪಮಾದ ತುಂಬೀ ಫಲದಂಡಾದಿ ಸಂಯೋಗಸಂಜಾತವಿಶಿಷ್ಟವೀಣಾಧ್ವನಿವಿಶೇಷಮುಮಂ ಗುಡಾದಿಸಂಬಂಧ ಸಮುದ್ಭವ

ದುಸ್ಸಾಮಾದಿಕಾಶಕ್ತಿಯುಂ ದೃಷ್ಟಾಂತಕಕ್ಕಾಸಮುಪಲಕ್ಷಿತಮಲ್ಲತ್ಯಂತ ವಿಜಾತೀ ಯಮಂ ವಿಜಾತೀಯಕ್ಕೆ ದೃಷ್ಟಾಂತೀಕರಣಂ ಯುಕ್ತಿಯುಕ್ತಮಲ್ತೆಂತಿದು ಚಾರ್ವಾಕಮತ ನಿರಾಕರಣಾನಂತರಂ

ಮತ್ತೊರ್ವಂ ಬೌದ್ಧಮತಾ
ಯತ್ತಮನಂ ಸುಮತಿಯೆಂಬ ಮಂತ್ರಿವರೇಣ್ಯಂ
ಬಿತ್ತರಿಸಿ ನುಡಿದನಂದು
ನ್ಮತ್ತನವೊಲ್ ಕ್ಷಣಿಕವಾದಮಂ ಕುನಯಜ್ಞಂ ೬೮

ವ: ಸರ್ವಂ ಕ್ಷಣಿಕಂ ಸತ್ತ್ವಮುಂಟಪ್ಪುದಱಿಂ ದೀಪಿಕಾಶಿಖಾಕಳಾಪಮೆಂ ತಂತೆಂಬ ನುಮಾನದಿಂದಾತ್ಮಂಗಂ ಕ್ಷಣಿಕತ್ವಮುಂಟಾದ ಕಾರಣಂ ತತ್ಕೃತಪುಣ್ಯಪಾಪ ಫಲಾನುಭವನಮಿಲ್ಲೆಂಬಿದನರಸಂ ಕೇಳ್ದು ಪೂರ್ವಪಕ್ಷಪರಿಕ್ಷೇಪಣಾರ್ಥಮಿಂತೆಂದನಾತ್ಮಂ ಕ್ಷಣಿಕನಾಗಿ ತತ್ಫಲೋಪಭೋಕ್ತೃವಲ್ಲೆಂಬೆಯಪ್ಪೊಡೆ ಲೋಕದಲ್ಲಿ ಸಂಪತ್ತಿವಿಪತ್ತಿಗಳಲ್ಲದೆ ಪೋಗಲ್ವೇಳ್ಕುಮವಂ ಕಾಣುತ್ತುಂ ಕೇಳುತ್ತುಮುಣುತ್ತುಮಿರ್ದುಂ ಸುಖದುಃಖಾನುಭವನ ಮಿಲ್ಲೆಂಬಿದು ಪ್ರತ್ಯಕ್ಷವಿರೋಧಮೀ ವ್ಯಭಿಚಾರಿಸಾಧನಾಭಿಧಾನದಿಂದಿಷ್ಟಸಿದ್ಧಿಯಾಗದೆಂದು ಬೌದ್ಧಮತವಿಧ್ವಂಸನಮಂ ವಿರಚಿಸಿ ಮತ್ತಂ ಸರ್ವಥಾ ನಿತ್ಯತ್ವಾನಿತ್ಯತ್ವ ವ್ಯಾಪಕತ್ವಾವ್ಯಾಪಕತ್ವ ಮೂರ್ತತ್ವಾಮೂರ್ತತ್ವಾನೇಕತ್ವಾದ್ಯಯಥಾರ್ಥಾರ್ಥ ಸಮರ್ಥನಸಮರ್ಥಿತ ದುರ್ಮತವಾದಿಸಾರ್ಥ ಸಮ್ಮತವ್ಯರ್ಥೀಕರಣಸಮರ್ಥನಪ್ಪಾ ಪಾರ್ಥಿವಂ ಸ್ವಪಕ್ಷರಕ್ಷೀಕೃತ ಪ್ರತ್ಯಕ್ಷಪರೋಕ್ಷಲಕ್ಷಣಪ್ರಮಾಣಂಗಳಿಂದನೇಕಧರ್ಮಾತ್ಮಕನಪ್ಪಾತ್ಮಂಗೆ ಕಥಂಚಿದೇಕ ತ್ವಾನೇಕತ್ವ ನಿತ್ಯತ್ವಾನಿತ್ಯತ್ವಾದಿ ಪರಮಾರ್ಥಸ್ವರೂಪ ನಿರೂಪಣಸ್ಥಾಪನಂಗೆಯ್ದು

ಕಿಡುವೊಡಲಿಂದಂ ಭಿನ್ನಂ
ಕಿಡದಿರ್ಪಾತ್ಮಂ ಸ್ವದೇಹಮಾತ್ರಪ್ರವಿ ಬೆಂ
ಬಿಡದಿರ್ಪ ಪುಣ್ಯಪಾಪ
ಕ್ಕೊಡೆಯಂ ಕರ್ತೃತ್ವಭೋಕ್ತೃತಾವಸ್ಥೆಯೊಳಂ ೬೯

ನಿಜದಿಂದೂರ್ಧ್ವಗತಿಸ್ವಭಾವನಹುದಿಚ್ಛಾಶಕ್ತಿಯಿಂ ವಕ್ರಮಂ
ಭಜಿಸಿರ್ಪಂ ಘನವಾದ ವಾಯುವಶದಿಂದಂ ಪಾವಕಜ್ವಾಲೆಯಂ
ತಜರಂ ಕರ್ಮಕಲಂಕದಾವರಣಮಂ ಸಮ್ಯಕ್ತಪೋಧ್ಯಾನದಿಂ
ತ್ಯಜಿಪಂ ಭೇಷಜಯೋಗದಿಂದೆ ಕನಕಂ ನಿರ್ದೋಷಮಪ್ಪಂದದಿಂ ೭೦

ಆನದುಕಾರಣಂ ತನುಮದಾವೃತ ಕರ್ಮಕಳಂಕಪಂಕಮಂ
ಜೈನತಪೋವಿಧಾನಜಲದಿಂ ತೊಳೆವೆಂ ಕೆಸಱದ ರತ್ನಮಂ
ಮಾನವನಾವನೋ ತೊಳೆಯದಿರ್ಪವನಂಬುವಧಾರೆಯಿಂದಮೆಂ
ದಾ ನರಪಾಳಕಂ ನುಡಿದನಂದುಱೆ ಮೆಚ್ಚುವಿನಂ ಸಭಾಜನಂ ೭೧

ವ: ಆ ನೃಪಾಳೋತ್ತಮನಿಂತು ಬಾಧಾರಹಿತಮಾದುತ್ತರಮನನುತ್ತರಮಾಗಿತ್ತು ದುರ್ನೀತಿನಿರ್ಣಯನಿಪುಣರಪ್ಪ ಪ್ರತಿವಾದಿಗಳಂ ನಿರುತ್ತರರಂ ಮಾಡಿ ಬಳಿಯ ಮತಿರಥನೆಂಬ ತನ್ನ ಕುಮಾರನನೆತ್ತಾನುಮೊಡಂಬಡಿಸಿ ಸಮಸ್ತಸಾಮ್ರಾಜ್ಯಮಂ ಕೊಟ್ಟು ಪಟ್ಟಮಂ ಕಟ್ಟಿ

ಪುಲ್ಲಿಂದಂ ಕಡುನೊಚ್ಚಿತಾಗಿ ಬಗೆದಂ ಭೂಭಾರಮಂ ಮತ್ತಮಂ
ತೆಲ್ಲಾ ಬಂಧುಜನಂಗಳಂ ಸುಖಫಲಾರ್ಥಂ ಬಂದು ಕೂಡಿರ್ದ ಕಾ
ಯ್ದೋಲಲ್ಲಾಸಾಂಡಭವಂಗಳೆಂದು ಬಗೆದಂ ಸ್ತ್ರೀಯರ್ಕಳಿಂ ನಿಶ್ಚಯಂ
ಪೊಲ್ಲಾಗಿರ್ದುಱೆನಾಯ್ಗಳೆಂದು ಬಗೆದಂ ವೈರಾಗ್ಯಭಾಗ್ಯೋದಯಂ ೭೨

ಕೈವಲ್ಯಕ್ಕೆಱಗುವ ಮನ
ಮೋವದೆ ಸಂಸಾರಪದವಿಗೇನೆಱಗುವುದೇ
ಪೂವಿಂಗೆಱಗುವ ಮಧುಪಂ
ಭಾವಿಸೆ ದುರ್ದಮಿತಕರ್ದಮಕ್ಕೆಱಗುವುದೇ ೭೩

ವ: ಅನಂತರಮಸ್ತೋಕಶೋಕರಸಾಕ್ರಾಂತಮಪ್ಪನೇಕಕಾಂತಾನೀಕಮಂ ಸಮಾಕ್ರಾಂತ ಮಂದಿರಮಾದ ಬಂಧುಸಂದೋಹಮಂ ರೋದನಭರಪರಿವೃತಮಾದ ಪ್ರಧಾನ ಪ್ರಭೃತಿಸಮಸ್ತಪರಿವಾರಮಂ ಸಮಧಿಕದುಃಖಾವಲಿಖ್ಯಮಾನಮನಸ್ಸಂಸೂಚಕ ಬಾಷ್ಪಾ ಕುಳಿತನೇತ್ರನಪ್ಪ ಪುತ್ರನುಮನೊಡಂಬಡಿಸಿ ದೀಕ್ಷಾವನಕ್ಕೆ ನಡೆವಾಗಳ್ ಪುರಜನಂಗಳ್ ಬೀದಿಗಳೊಳೊಂದೊಂದೆಡೆಯೊಳ್ ನಿಂದು ನೋಡುತ್ತಂ ತಂತಮ್ಮೊಳೊ ರ್ವೊರ್ವ ರಿಂತೆಂಬರ್

ಭೂತಳನೂತಮಪ್ಪಖಿಳರಾಜ್ಯಮನಾಳ್ದವನೀಗಳುತ್ತಮ
ಖ್ಯಾತವಿಮುಕ್ತಿರಾಜ್ಯಪದಸಾಧನೆಗಾಗಿ ತಪಸ್ಸು ರಾಜ್ಯಮಂ
ಪ್ರೀತಿಯಿನಾಳ್ವೆನೆಂದಿರದೆ ಪೋದಪನೀತನೊಳಂ ತ್ರಿರಾಜ್ಯಮಂ
ನೂತನಮಾದುದೀತನ ಪುರಾತನಪುಣ್ಯಮದೇನುದಾತ್ತಮೋ ೭೪

ವ: ಮತ್ತೊಂದೆಡೆಯೊಳ್

ಕೆಯ್ಯದನೆಯ್ದೆ ಬಿಟ್ಟು ನೆಱಪಾಱುವುದಕ್ಕೆಳಸುತ್ತುಮಿರ್ಪನಂ
ರಯ್ಯಮೆನಲ್ಕೆ ಪೋಲ್ತನಿರದೀ ನರಪಂ ಪಶಮಾದ ರಾಜ್ಯಮಂ
ಸುಯ್ಯದೆ ಬಿಟ್ಟು ದೀಕ್ಷೆಗುಱೆ ಪೋಗುತಮಿರ್ದಪನೆಂದು ಪೌರರಂ
ದೊಯ್ಯನೆ ನಾಡೆ ನೋಡಿ ನುಡಿದರ್ ಕೆಲರಜ್ಞಜನಂಗಳಾತನಂ ೭೫

ವ: ಅಂತು ಸುಟ್ಟಂ ಬೇಱೆ ಬೇಱೆ ನುಡಿಯುತ್ತುಮಿರೆ

ಎಲ್ಲರ ಚಿತ್ತದೊಳಿರ್ದುಂ
ನಿಲ್ಲದೆ ದೀಕ್ಷಾವನಕ್ಕೆ ಪೋದಂ ನೃಪನಾ
ರ್ವಲ್ಲರೊ ಧರಣೀನಾಥನ
ಸಲ್ಲಲಿತಾಚರಣಮಂ ಮಹೀಮಂಡಳದೊಳ್ ೭೬

ವ: ಬಳಿಯುಮಲ್ಲರಂ ನಿಲಿಸಿದೊಡಂ ನಿಲ್ಲದೊಡನೊಡನೆ ಬರುತ್ತುಮಿರ ಲಿತ್ತಲಾ ದಶರಥಮಹೀನಾಥಂ ವಿಮಳವಾಹನಭಟ್ಟಾರಕರ ಶ್ರೀಪಾದೋಪಾಂತಮನೆಯ್ದಿ ತತ್ಪದಪದ್ಮ ಯುಗ್ಮಮನಷ್ಟವಿಧಾರ್ಚನೆಯಿಂದರ್ಚಿಸಿ ಗುರುಭಕ್ತಿಪೂರ್ವಕಂ ವಂದನೆಯಂ ಮಾಡಿ ಮುಂದೆ ಕೈಗಳಂ ಮುಗಿದು ನಿಂದು ಮುನಿಮುಖಾರವಿಂದಮಂ ನೋಡಿ ಬಿನ್ನಪಮೆಂದಿಂತೆಂದನೆಲೆ ಸ್ವಾಮಿಯೆನಗೆ ದೀಕ್ಷಾಪ್ರಸಾದಮಂ ಕಾರುಣ್ಯಂಮಾಡಿಯೆನಲಾ ಮುನೀಂದ್ರನಿಂತೆಂದಂ

ರಾಜಶರೀರಮೆಂಬುದತಿಕೋಮಳಮೀ ಕಠಿನಸ್ವಭಾವತಾ
ಭಾಜನಮಾದ ದುರ್ಧರತಪೋಗುಣಮಂ ಧರಿಸಲ್ಕೆ ಸಕ್ತಮೇ
ಭೂಜಗವಲ್ಲಿ ದೀನಜನದುದ್ವೃತಿಯಲ್ಲದೆ ಬೀಱೆ ಸತ್ತಪೋ
ಯೋಜನೆಯುಂಟೆ ಭಾವಿಪೊಡನಾಥಜನಪ್ರವಿತಾನಬಂಧುವೇ ೭೭

ವ: ಅದುಕಾರಣದಿಂ ಸರ್ವಜನರಕ್ಷಣಮೆ ದೀಕ್ಷೆ ಮತ್ತಮೀ ದೂರಕ್ಷಮಮಪ್ಪ ಜೈನದೀಕ್ಷೆಯಂ ಮಾಣ್ಬು ಸುಖದೊಳಿರ್ಪುದೆಂದು ಬಿಡೆನುಡಿದೊಡಂ ಮಾಣದೆ ಪಿರಿದು ಮಾಗ್ರಹಮಗೆಯ್ದು ಪ್ರಾರ್ಥಿಸಿ

ಕೇಶಪಾಶಂಗಳಂ ಧರ
ಣೇಶಂ ಪಱಿದಿಕ್ಕಿದಂ ಮುನೀಶ್ವರಚರಣಾ
ಭಾಸದೊಳೆ ಮೋಹನೀಯ ಕು
ಪಾಶಂಗಳನೆಯ್ದೆ ಪಱಿದುಬೀಸಾಡುವವೊಲ್ ೭೮

ವ: ಅಂತು ತನ್ನ ಸಮಾನರಪ್ಪರಸುಮಕ್ಕಳ್ ನೂರ್ವರ್ವೆರಸು ಪ್ರತಿಪಕ್ಷಕರ್ಮ ಪಕ್ಷಪರಿಕ್ಷೇಪಣದಕ್ಷಮಪ್ಪ ಜಿನದೀಕ್ಷೆಯಂ ಕೈಕೊಳಲೊಡನೊಡನೆ ಬಂದವರ್ ಮಿಡು ಮಿಡು ಮಿಡುಕುತ್ತುಂ ಪೋಗಲೊಡಮಿತ್ತಲ್

ಉಗ್ರತಪಶ್ಚರಣದಿನತಿ
ನಿಗ್ರಹಮಂ ಬಿಡದೆ ಮಾಡುತಿರ್ದಂ ತನ್ನಯ
ವಿಗ್ರಹಕ್ಕಂದು ಮಿಗೆ ನಿ
ರ್ವ್ಯಗ್ರೀಕೃತಚಿತ್ತನಾಗಿ ತನ್ಮುನಿಮುಖ್ಯಂ ೭೯

ದ್ವಾದಶವಿಧತಪದಿಂದಂ
ದ್ವಾದಶವಿಧಶಾಸ್ತ್ರದೊಂದು ಪರಿಣತೆಯಿಂದಂ
ಮೇದಿನಿಯೊಳ್ ಪೂಜ್ಯತ್ವಮ
ನಾದಂ ತಳೆದಂ ವಿಶಿಷ್ಟದಶಧರ್ಮಯುತಂ ೮೦

ಪಗೆ ಕೆಳೆಯೆಂಬ ಭೇದಮಿನಿತಾದೊಡಮಿಲ್ಲದೆ ಮೋನದಿಂದಮಿ
ರ್ದಗಣಿತಸರ್ಪವೇಷ್ಟಿತಕಳೇವರನುಚ್ಚವನೈಕದೇಶದೊಳ್
ಮಿಗೆ ನೆಲಸಿರ್ದು ಚಿನ್ಮಯನ ಚಿಂತೆಯ ನಿಶ್ಚಲರೂಪನಾಗಿ ಮೂ
ಲಗುಣಯುತಂ ವಿರಾಜಿಸಿದನಾ ಮುನಿ ಚಂದನವೃಕ್ಷಮೆಂಬಿನಂ ೮೧

ಒಳಗಿರ್ದಂಜನಮಂ ಬಿಡುತ್ತುಮಧಿಕಂ ಪಾತ್ರಾತನುಸ್ನೇಹಮಂ
ತಳೆದಿರ್ದುಂ ಪರಮಪ್ರಕಾಶಮಯರೂಪಿಂದೊಪ್ಪಮಂ ತಾಳ್ದಿಯ
ಗ್ಗಳನಪ್ಪಾ ಮುನಿಪುಂಗವಂ ನಿಬಿಡಮಿಥ್ಯಾತ್ವಾಂಧಕಾರಂಗಳಂ
ಕಳೆವುತ್ತುಂ ಜಿನಧರ್ಮಮಂ ಬೆಳಗಿದಂ ದೀಪಂ ದಲೆಂಬಂದದಿಂ ೮೨

ತಪದೊಳಗತ್ಯಲ್ಪರುಚಿ ತ
ತ್ತಪನಂ ದೋಷಾಕರಂ ತದಮೃತಪ್ರಭನೆಂ
ತುಪಮೆಯನೆಯ್ದುವರಾ ಮುನಿ
ಗಪಹೃತದುಸ್ತಂ ತಮೋವಿಕಾರಂಗೆ ಕರಂ ೮೩

ಬೇಸಗೆಯಲ್ಲಿ ಬೇಸಱದೆ ಕಲ್ನೆಲೆಯಿದ್ದುಱೆ ಮಾಗಿಯಲ್ಲಿ ಮ
ತ್ತಾಸುರಬೆಳ್ಳವಾಸದೊಳಮಿರ್ದು ಕರಂ ಮಳೆಗಾಲದಲ್ಲಿಯುಂ
ಭಾಸುರವೃಕ್ಷಮೂಳದೊಳಮಿರ್ದು ತಪಶ್ಚರಣೋದ್ಯಮಂ ಗುಣೋ
ದ್ಭಾಷಿತನಪ್ಪ ಯೋಗಿತಿಳಕಂ ಕಳಿದಂ ಮುದದಿಂ ತ್ರಿಕಾಲಮಂ ೮೪

ವ: ಅಂತು ಮೋಕ್ಷಲಕ್ಷ್ಮೀನಿವಾಸನೀ ಪ್ರಮಾದತೀವ್ರತಪೋನುಷ್ಠಾನಾಧಿಷ್ಠಿತಂ ಬಾಹ್ಯಾಭ್ಯಂತರಪರಿಗ್ರಹಮಂ ತೊಱೆದೇಕವಿಹಾರಿಯಾಗಿ ವಿಹಾರಿಸುತ್ತುಂ ಬಂದಲ್ಲಿ

ಮಿಗೆ ಬಾಹ್ಯೇಂದ್ರಿಯವೃತ್ತಿಯಂ ತೊಱೆದು ಭೇದಜ್ಞಾನದೊಳ್ ಚಿತ್ತಮಂ
ಪುಗಿಸಿ ಪ್ರೇಕ್ಷಣಯುಗ್ಮಮಂ ನಿಲಿಸಿ ನಾಸಾಚೂಳಿಕಾಭಾಗದೊಳ್
ಸೊಗಸಂ ಬೀಱುವ ಮೇರುಶೃಂಗದವೊಲಿರ್ದಂ ನಿಶ್ಚಳಧ್ಯಾನದಿಂ
ಪ್ರಗುಣಂ ಶಾತ್ರವಮಿತ್ರರೊಳ್ ಸಮಮನಂ ಯೋಗೀಶ್ವರಾಧೀಶ್ವರಂ ೮೫

ವ: ಇಂತು ಜಗನ್ಮಾನ್ಯನುಂ ಧನ್ಯನುಮಪ್ಪಾ ತಪೋಧನನುಪಶಮ ಶ್ರೇಣಿಯನೇಱಿ ಸಂನ್ಯಸನವಿಧಾನದಿಂ ತಿಂಗಳ್ ಪರ್ಯಂತಮಿರ್ದುಪಶಾಂತಗುಣ ಜ್ಞಾನದೊಳ್ ನಿಂದು

ಬಗೆದಂತಿರೆ ಸಮಾಧಿವಿಧಿ ದೊರೆಕೊಳೆ ಶುದ್ಧಧ್ಯಾನದಿಂ ಶರೀರ ಭಾರಮಂ ಬಿಟ್ಟು ಸರ್ವಾರ್ಥಸಿದ್ಧಿಯಂ ಮಾಳ್ಪಲ್ಲಿ ಸಮರ್ಥಮಪ್ಪುದಱಿಂ ಯಥಾರ್ಥ ನಾಮಮಪ್ಪ ಸರ್ವಾರ್ಥಸಿದ್ಧಿನಾಮವಿಮಾನಮನೆಯ್ದಿದನದೆಂತಿರ್ದುದೆಂದೊಡೆ

ವರಮುಕ್ತಾಜಾಲಮಾಲಾನಿಬಿಡತರ ಸಮಾಲಂಬ್ಯಮಾನಂ ಲಸತ್ಪ್ರೀ
ವರಮಾಣಿಕ್ಯಪ್ರಘಂಟಾಪಟಳಜಟಿಳಸಂಸೇವ್ಯಮಾನಂ ಮಹಾಭಾ
ಸುರವರ್ಣಾನಾಪ್ರಕಾರಾರುಣಮಣಿಮಯಸತ್ಕಿಂಕಿಣೀ ಶೋಭಮಾನಂ
ಪಿರಿದೊಂದಾಶ್ಚರ್ಯಮಂ ಪುಟ್ಟಿಸಿದುದು ಕಿರಣೋದ್ಭಾಸಮಾನಂ ವಿಮಾನಂ ೮೬

ಸಿದ್ಧಾಲಯಮಂ ನೆಱೆಪೊ
ತ್ತುದ್ಧರಿಪುದು ತನ್ನ ರತ್ನಕಳಶಾವಳಿಯಿಂ
ದುದ್ಧ್ವಜವಿರಾಜಮಾನಮ
ದುದ್ಧುರಕಾಂತ್ಯನುಪಮಾನಮಾಯ್ತು ವಿಮಾನಂ ೮೭

ಶುದ್ಧಸ್ಫಾಟಿಕ ಘಟಿತಸ
ಮುದ್ಧವಿಕೃಚ್ಚಿತ್ರಪುತ್ರಿಕಾಸಮುದಯಸಂ
ಬದ್ಧಂ ಚೆಲ್ವಂ ತಾಳ್ದಿದು
ದಿದ್ಧಂ ಸರ್ವಾರ್ಥಸಿದ್ಧಿನಾಮವಿಮಾನಂ ೮೮

ವ: ಅಂತಾ ಮಣಿಮಯವಿಮಾನಾಂತರಾಳದೊಳುದಂಚಿತಕಾಂಚನಮಯ ಮಂಚದ ಮೇಲಡಿಕಿಲ್ಗೊಂಡಿರ್ದ ನಾಲ್ಕುಂಪಾಸಿನ ಪೊರೆಯೊಳುಪಪಾದಜನ್ಮದಿಂ ಮೂವತ್ತಮೂಱುಸಾಗರೋಪಮಕಾಲಂಬರಂ ಪರಮಾಯುಷ್ಯಸ್ಥಿತಿಪ್ರಮಾಣಪ್ರಮಿತ ನಪ್ಪಹಮಿಂದ್ರನೆಂಬ ದೇವನಾಗಿ ಜನಿಸಿ ಮತ್ತಮೊಂದಂತರ್ಮುಹೂರ್ತಪರ್ಯಂತಂ ಮೂಢತ್ವಾಧೌಕಿತಸ್ವಾಂತನಾದಿಂಬಳಿಯಂ

ಚಚ್ಚರದಿಂ ನಿದ್ರಿತ ನರ
ನೆಚ್ಚಱಿಕೆಯನೆಯ್ದೆ ಪಡೆದವೊಲಹಮಿಂದ್ರಂ
ಪೆರ್ಚಿರ್ದವಧಿಜ್ಞಾನಮ
ನಚ್ಚರಿಯುತಪಾದತಲ್ಪತಳದೊಳ್ ಪಡೆದಂ ೮೯

ವ: ಅಂತು ಸರ್ವಾವಧಿಬೋಧಸಂಪನ್ನನಾದಿಂಬಳಿಯಂ ತದ್ವೃತ್ತಾಂತಮ ನತಿವ್ಯಕ್ತಮಾಗಱಿದು ಮೋಕ್ಷದ ಸೌಖ್ಯಮೊಂದಲ್ಲದುಳಿದೆಲ್ಲಾ ಸೌಖ್ಯಸಂಪತ್ತಿಗಳ ಮೊತ್ತ ಮಲ್ಲಿಯೇ ಮೂರ್ತಿವೆತ್ತುದೆಂಬಂತೆ ದಿವ್ಯಸುಖಮಯಸ್ವರೂಪಮಪ್ಪ ದಿವ್ಯರೂಪಿಂ ದೊಪ್ಪುತ್ತುಮಿರ್ಪಾಗಳ್

ಕರ್ಪೂರದ ಘಟ್ಟಿಯಿಂದಂ
ನೇರ್ಪಡೆ ನಿರ್ಮಿಸಿದ ಚಾರುಪುತ್ರಿಕೆಯೆಂಬಂ
ತೊಪ್ಪಿದುದು ಸಪ್ತಧಾತುಮ
ಲಾರ್ಪಣಮಣಮಿಲ್ಲದಿರ್ಪ ದಿವ್ಯಶರೀರಂ ೬೦

ಮಿಗೆ ಶೃಂಗಾರರಸಪ್ರವಾಹದೊದವಿಂಗಾಧಾರಮಾಗಿರ್ದ ತಾಂ
ಸೊಗಸಂ ಬೀಱುವ ದಿವ್ಯರೂಪಮದು ಕರ್ಣಾನಂದಮಂ ಮಾಳ್ಪೊಡಂ
ಪ್ರಗುಣಾವಾಸನೆನಿಪ್ಪ ನಿರ್ಜರವರಂಗೆಂದುಂ ವಿಕಾರಂಗಳಂ
ಬಗೆಯೊಳ್ ಪುಟ್ಟಿಸದೆಂದೊಡೇವೊಗಳ್ವೆನಾಂ ರೂಪಾತಿಶಾಯಿತ್ವಮಂ ೬೧

ಬೆಳಗಿನ ಬಳಗಮನುತ್ಕೋ
ಮಳಮಂ ಬಿಡದುಗುಳ್ವ ದೇವದಿವ್ಯಶರೀರಂ
ಥಳಥಳಿಸುತ್ತಿರ್ದು ಮಹಾ
ವಿಳಸನಮಂ ತಳೆದುದತುಳಪರಿಮಳಮಿಳಿತಂ ೬೨

ವ: ಅಂತುಮಲ್ಲದೆಯುಂ

ಷೋಡಶಾಭರಣಮಾಳಿಕೆಯಿಂದಂ
ಕೂಡಿದಾ ದಿವಿಜನಾಯಕದೇಹಂ
ಗಾಡಿಯಂ ಪಡೆದು ರಂಜಿಸುತ್ತಿರ್ಕುಂ
ನಾಡೆಯುಂ ಮೃದುಳತಲ್ಪದೊಳಾದಂ ೬೩

ಸ್ಫುರದತ್ಯುದ್ಯತ್ಪ್ರಭಾಭಾಸುರನಿರುಪಮಮಾಣಿಕ್ಯಕೂಟಂ ಕಿರೀಟಂ
ಭರದಿಂದಾ ದೇವತೇಜಃಪ್ರಸರದ ಶಿಖಿಯೆಂಬಂತೆ ಚೆಲ್ವಾಯ್ತು ಮತ್ತು
ದ್ಧುರಮುಕ್ತಾತಾರಹಾರಾವಳಿ ಕೊರಳೊಳಗೊಪ್ಪುತ್ತುಮಿರ್ದತ್ತು ವೀಕ್ಷಾ
ತುರಿತಶ್ರೀಯಾಂಗನಾಪಾತಿತಬಹಳಕಟಾಕ್ಷಾಳಿಯೆಂಬಂದದಿಂದಂ ೬೪

ಅರುಣಮಣಿಭೂಷಣಂಗಳ
ಕಿರಣಂಗಳ್ ಪಸರಿಸಲ್ಕೆ ಮಣಿಭಿತ್ತಿಗಳಾ
ಧರಿಸುತ್ತಿರ್ದವು ಕೆಂಪಿನ
ತೆರೆಸೀರೆಗಳೆಂಬ ಶಂಕೆಯಂ ಭರದಿಂದಂ ೬೫

ಮುಕ್ತಾಳಂಕೃತೆಯಾದ ವಿ
ಮುಕ್ತಿಸ್ತ್ರೀ ಮಿಗೆ ಸಮೀಪದಲ್ಲಿರ್ದಪಳೆಂ
ದುಕ್ತಮನಂ ಸ್ತ್ರೀಸುಖದನು
ರಕ್ತಿಯನದು ಬಯಸದಿರ್ಪುದಾ ಸುಖನಿಧಿಯೋ ೬೬

ಪೆಣ್ಣುಗಳಿಕ್ಕೆ ಚಾಮರಮನಿಕ್ಕಲದೊಳ್ ಧವಳಾತಪತ್ರಮಂ
ತಣ್ಣೆಳಲಿಂಗೆ ಕಾರಣಮದಾಗಿ ದಲೆತ್ತಿ ವಿಶೇಷಭಾವದಿಂ
ಪಣ್ಣಿದ ಪಟ್ಟದಾನೆಯನದಂ ಪಿಡಿದೇಱಿದರಂದು ವಂದಿಗಳ್
ಬಣ್ಣಿಸುತಿರ್ಪಿನಂ ನೃಪತಿಯುಂ ಸತಿಯುಂ ಹೃದಯಾನುರಾಗದಿಂ ೧೦೫

ವಿಳಸದ್ಗಂಡಂಗಳೊಳ್ ಕುಂಡಳರುಚಿಪಟಳಂ ರಂಜಿಸುತ್ತಿರ್ಪಿನಂ ದಿ
ಗ್ವಳಯಾಂತರ್ಭಾಗದೊಳ್ ವ್ಯಾಪಿಸೆ ಪಟುಪಟಹಧ್ವಾನಮುದ್ಯತ್ಪತಾಕಾ
ಕುಳಮೆಲ್ಲಂ ವ್ಯೋಮಮಂ ಚುಂಬಿಸೆ ರಿಪುನೃಪಸಂತಾನದುಸ್ಸಹ್ಯತೇಜೋ
ಮಿಳಿತಂ ದೇವೇಂದ್ರನೆಂಬಂದದೆ ಧರೆಗಧಿಪಂ ಬಂದನಾನಂದದಿಂದಂ ೧೦೬

ವ: ಅಂತು ಬಂದು ನಾನಾಶೋಭಾವಿರಾಜಮಾನಮಾದ ನಿಜರಾಜಧಾನಿ ಯನೆಯ್ದಿ ಪುರಮನರಮನೆಯುಮಂ ಪೊಕ್ಕು ಕೂಡೆಬಂದ ರಾಜಕರಾಜನ್ಯಕಮಹಾ ಪ್ರಧಾನರ್ ಮೊದಲಾದ ಸಮಸ್ತಪರಿವಾರಮಂ ಕರ್ಪೂರಸಹಿತಂ ವೀಳೆಯಮಂ ಕೊಟ್ಟು ತಂತಮ್ಮ ನಿವಾಸಕ್ಕೆ ಬೀಳ್ಕೊಟ್ಟು ಕಳಿಪಿದಿಂ ಬಳಿಯಂ

ಮಜ್ಜನಭೋಜನಮಂ ಮಾ
ಳ್ಪುಜ್ಜುಗದೊಳಮಿರ್ದು ಕಳಿದರಂದಿನ ದಿನಮಂ
ಸಜ್ಜನವಂದ್ಯನ ನುಡಿಯಂ
ದುರ್ಜಯರಾದರಿಸಿ ಸುಖದೊಳೋಲಾಡುತ್ತುಂ ೧೦೭

ವ: ಮತ್ತಂ

ನರಪಂ ಸಾಮ್ರಾಜ್ಯಸೌಖ್ಯೋದಯದೊಳೊಲಿದು ತಾಳ್ದಿರ್ದನಾನಂದಮಂ ಸ
ತ್ಕರುಣಾವಾರಾಶಿ ಸೋಮಂ ಸಕಳವಿಭವಸೀಮಂ ಪ್ರಪೂಜ್ಯಕ್ರಮಂ ಸು
ಸ್ಥಿರಸತ್ಕೀರ್ತಿವ್ರಜಂ ಬಾಹುಬಲಿಸುಕವಿರಾಜಂ ಜನತ್ಕಲ್ಪಭೂಜಂ
ಧರಣೀಸಂಸ್ತುತ್ಯದೇಹಂ ಘನಗುಣನಿವಹಂ ಚಾತುರೀಜನ್ಮಗೇಹಂ ೧೦೮

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮ ಜಿನಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವಪ್ರಸಾದ ಸಂಪಾದ ಪಾದನಿಧಾನದೀಪವರ್ತಿಯುಭಯಭಾಷಾ ಕವಿಚಕ್ರವರ್ತಿ ಬಾಹುಬಲಿ ಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್ ಧರ್ಮತೀರ್ಥಂಕರ ಭವಾಂತರೋಪ ವ್ಯಾವರ್ಣನಂ ಪಂಚಮಾಶ್ವಾಸಂ.

ಷಷ್ಠಾಶ್ವಾಸಂ

ಶ್ರೀಗುರುವಚನ ವಿಶೇಷದೊ
ಳಾಗಿಸಿ ವಿಶ್ವಾಸಮಂ ಮಹಾನಂದಮನಾ
ಭೂಗಧಿನಾಥಂ ತಳೆದಂ
ಭೋಗಯುತಂ ಸರಸಚತುರಕವಿಕುಳತಿಳಕಂ ೧

ವ: ಮತ್ತಮಾ ಮಹಾಸೇನ ಮಹಾರಾಜನಾ ಮುನಿಕುಂಜರಂ ಪೇಳ್ದ ದೇವ ಸ್ತ್ರೀನಿಕರಸಮಾಗಮನಸಂಭ್ರಮಪರಿಶೋಭಾಕೌತುಕಸಮಾಳೋಕನವ್ಯಾಕುಳಿತಚಿತ್ತನಾಗಿ ಮಱುದಿವಸಂ ಸರ್ವಾವಸರ ಸಮಯಮಾದ ಮಹಾಸ್ಥಾನಮಂಡಪಕ್ಕೆ ಮುನ್ನಮೆ ಸಮುಪಶೋಭನಾರ್ಥಂ ವೇತ್ರಧರರಂ ಕಳಿಪಿ ತತ್ಕೋಣಾಂತರ್ಭಾಗಶೋಧನಾನಂತರಂ ನಿರಂತರಿತಸಂತೋಷದಿಂದಂ ಮೆಲ್ಲಮೆಲ್ಲನಲ್ಲಿಗೆ ಬಿಜಯಂಗೆಯ್ವಾಗಳ್ ಕಟ್ಟಿದಿರೊಳಾ ಸಭಾಮಂಡಪಮೆಂತಿರ್ದುದೆಂದೊಡೆ

ವಿಳಸಿತಮಪ್ಪ ಕೆಂಬರಲ ಪಂತಿಗಳಿಂದಮೆಯ್ದೆ ಕೋ
ಮಳಹರಿನೀಳಭಿತ್ತಿಗಳಿನೊಪ್ಪುವ ಮುತ್ತಿನ ಲಂಬಳಂಗಳಿಂ
ಪಳಿಕಿನ ಚೆಲ್ವ ಪುತ್ತಳಿಗಳಿಂದೆ ಮನೋಹರಮಾಗಿ ಸಂತತಂ
ಥಳಥಳಿಸುತ್ತುಮಿರ್ದುದು ವಿಶಾಳಸಭಾಸದನಂ ನೃಪಾಳನಾ ೨

ವ: ಅದಱೊಳ್

ಪಿರಿದುಂ ಬಿಳ್ದಿರ್ದ ಕರ್ಪೂರದ ಪರಿಮಳಸಂಸಕ್ತಮತ್ತದ್ವಿರೇಫೋ
ತ್ಕರಮೆಲ್ಲಾ ತಾಣದೊಳ್ ಮಾರ್ಪೊಳೆಯ ನಿರುಪಮೇದೀವರೌಘೋಪಹಾರೋ
ದ್ಧುರಶೋಭಾಶಂಕೆಯಂ ನೋಳ್ಪರ ನಯನಚಯಕ್ಕೆಯ್ದೆಮಾಡುತ್ತಮಿರ್ದ
ತ್ತುರುಚಂಚಚ್ಚಂದ್ರಕಾಂತಪ್ರಘಟಿತಮಸಮಂ ತುಂಗಮಾಸ್ಥಾನರಂಗಂ ೩

ವ: ಅಂತತಿರಮಣೀಯಂಗಳಪ್ಪ ತನ್ನ ಮಣಿಮಯಶಿಖರಂಗಳ ಬೆಳಗಿಂದಾ ಕಾಶಾಂತರಾಳದೊಳಾವಗಂ ಮಿಂಚುಗಳ ಸಂಚಯಮಮಂ ಪ್ರಪಂಚಿಸುತ್ತುಮಿರ್ದ ಸಭಾ

ಸದನಮಂ ನೋಡುತ್ತುಮಾ ನಾಡೆಱೆಯಂ ನಿಜಚರಣವಿಳಸದರುಣಕಮಳವಿನ್ಯಾಸವಿಳಾಸದಿಂ ರತ್ನಕುಟ್ಟಿಮ ಭೂಮಿಕಾಮಿನಿಗೆ ರಾಗರಸಪೂಗದಾಭೋಗಮನೀವುತ್ತುಂ ಬಂದು ತದಾಸ್ಥಾನರಂಗಮೆಂಬ ಲಕ್ಷ್ಮಿಯ ಕಿರೀಟಮೆಂಬಂತೆ ರಂಜಿಸುವ ಸಂತಪ್ತತಪನೀಯ ಕಾಂಚನಮಯಸಿಂಹಾಸನಸಮಾಸೀನನಾಗಿರ್ಪುದುಂ

ಕನಕಮಯಮಾದ ಸಿಂಹಾ
ಸನದ ಪ್ರಭೆ ಪಸರಿಸಲ್ಕೆ ಮನುಜಾಧೀಶಂ
ಘನಮಳೆವಿಸಿಲಾವರಿಸಿದ
ದಿನಕರನ ಶ್ರೀಯನಾಂತು ಕಣ್ಗೆಸೆದಿರ್ದಂ

ವ: ಮತ್ತಮಾತಂ

ಸಾದಿನ ರೂಪುಗೊಂಡು ತಿಮಿರಾವಳಿ ನಿನ್ನಯ ಕರ್ಣಯುಗ್ಮದೊಳ್
ಮೇದುರಮಾಗಿ ಪೊರ್ದಿ ಸಮಗಂಜದಿರ್ದಪುದೆಂಬಿದಂ ನೃಪಂ
ಗಾದರದಿಂದೆ ಪೇಳ್ವ ಶಶಿಸೂರ್ಯರ ಮಂಡಳದಂತಿರಿರ್ದ ಚಿ
ತ್ರೋದಯಸೂತ್ರರತ್ನಮಯಕುಂಡಲಮಂಡನದಿಂದಮೊಪ್ಪಿದಂ ೫

ವ: ಇಂತನೇಕರಾಜನ್ಯಕಮಕುಟತಟಘಟಿತವಿಕಟ ಹರಿನೀಳಮಣಿ ಪೇಟಕ ಮಧುಕರನಿಕರಪರಿಜಟಿಳಿತನಿಜಚರಣನಳಿನಯುಗಳನಪ್ಪಾ ಮಹೀಪಾಳತಿಳಕನೊಡ್ಡೋಲಗಂಗೊಟ್ಟಿರ್ಪುದುಂ

ಬಂಧುಜನಂಗಳಿಂ ಪಿರಿದುಮಾಪ್ತಜನಂಗಳಿನಾಶ್ರಿತಾದಿಸಂ
ಬಂದಿಜನಂಗಳಿಂದೆ ಪರಿವಾರಜನಂಗಳಿನೆಯ್ದೆ ತುಂಬಿ ತಾಂ
ಬಂಧುರಮಾಗಿ ತಿಂತಿಣಿಯದಾಯ್ತು ವಿಕೀಲಿತರತ್ನಕಾಂತಿ ಚಿ
ತ್ರಂ ಧರಣೀಶನೋಲಗದ ಶಾಲೆಯ ನಿರ್ಮಿಸಿದತ್ತು ಲೀಲೆಯಿಂ ೬

ವ: ಮತ್ತಂ

ನೆರೆದಧಿರಾಜ ಮಂಡಳಿಕ ಮಂತ್ರಿ ಪುರೋಹಿತ ದಂಡನಾಥವಿ
ಸ್ಫುರಿತಮಹಾಪ್ರಧಾನರ ಲಸನ್ಮಕುಟಂಗಳೊಳೆಯ್ದೆ ಕೀಲಿಸಿ
ರ್ದುರುತರರತ್ನಸಂತತಿಗಳಿಂ ನೆಱೆತುಂಬಿದ ಕಾರಣಂ ಸಭಾ
ಸುರುಚಿರಮಂದಿರಂ ಮಱೆವುತಿರ್ದುದು ರೋಹಣಶೈಳಮೆಂಬಿನಂ ೭

ನಿರುಪಮಚಂದ್ರಕಾಂತಮಯರಂಗದ ಕಾಂತಿವಿತಾನಮೆತ್ತಲುಂ
ಪರಕಲಿಸಲ್ ಸಭಾಜನದ ಮೇಲೆ ಸುದುಗ್ಧಪಯೋಧಿಮಧ್ಯದೊಳ್

ಸುರರ ಸಮೂಹಮೋಕುಳಿಯನಾಡುತುಮಿರ್ದಪುದೆಂಬ ಶಂಕೆಯಂ
ನೆರೆಯಿಸುತುಂ ವಿರಾಜಿಸಿದುದಾ ಸಭೆ ಷೋಡಶಭೂಷಣಾಂಚಿತಂ ೮

ಓಲಗದ ಸೂಳೆಯರ್ ಭೂ
ಪಾಲನನಿಕ್ಕೆಲದೊಳೆಯ್ದೆ ಕುಳ್ಳಿರ್ದರ್ ಸ
ಲ್ಲೀಲೆಯಿನನಂಗಚಕ್ರಿಯ
ಲಾಲಿತ ಬಾಣಂಗಳಂತೆ ಕಣ್ಗೆಸೆವುತ್ತುಂ ೯

ಮಾಳವಭೂಪನೊಂದೆಡೆಯೊಳೊಂದೆಡೆಯೊಳ್ ಮಗಧಾಧಿನಾಯಕಂ
ಚೋಳಮಹೀಪನೊಂದೆಡೆಯೊಳೊಂದೆಡೆಯೊಳ್ ಸಲೆ ಗುರ್ಜರಾಧಿಪಂ
ಗೌಳನರೇಶನೊಂದೆಡೆಯೊಳೊಂದೆಡೆಯೊಳ್ ವರಕುಂತಳಾಧಿಪಂ
ಲೀಲೆಯಿನಿರ್ದರೋಲಗದೊಳಂದು ನರೇಂದ್ರ ಸುವಂದನೀಯನಾ ೧೦

ವ: ಮತ್ತಮೊಂದೆಡೆಯೊಳ್

ರಸಮಂ ಭಾವಮನಪ್ಪುಕೆಯ್ದು ಪಿರಿದುಂ ಶಬ್ದಾರ್ಥವೈಚಿತ್ರ್ಯದಿಂ
ದೆಸೆಯುತ್ತಿರ್ದ ಸಮರ್ಥ ಸತ್ಕವಿವಿತಾನೋತ್ಪಾದ್ಯಮಂ ಪದ್ಯಮಂ
ವಸುಧಾಧೀಶ್ವರನೊಲ್ದು ಕೇಳ್ದು ತಲೆಯಂ ತೂಗುತ್ತುಮಿರ್ದಂ ದಲಾ
ರಸಮಂ ಚಿತ್ತದೊಳೆಯ್ದೆ ತುಂಬಿ ಮಿಗೆ ಮತ್ತಳ್ಕಾಡುತಿರ್ದಂದದಿಂ ೧೧

ಚಾರ್ವಾಕ ಬೌದ್ಧ ಸಾಂಖ್ಯರ
ಖರ್ವಪ್ರಾಭಾಕರರ್ ಸುನೈಯಾಯಿಕರುಂ
ಸರ್ವಜಿಜ್ಞನವಾದಿಗ
ಳುರ್ವೀಶನ ಸಭೆಯೊಳಿರ್ದರತಿಮುದದಿಂದಂ ೧೨

ಕಿವಿಗಳ್ಗೆ ಸಂತತಂ ಮಿಗೆ
ಸವಿಯಂ ಸಾಲಿಡುತುಮಿರ್ಪ ಸರಸೋಕ್ತಿಯೊಳಂ
ನವನಿಪುಣತ್ವಮನಾಂತೊ
ಪ್ಪುವ ಗಮಕಿಗಳುಂ ಸುವಾಗ್ಮಿಗಳುಮಿರೆ ನಲವಿಂ ೧೩

ಮಲಹರಿ ಮೇಘರಂಜಿ ಘಳಮಂಜರಿ ತೊಂಡಿ ವಸಂತಮೆಂಬ ಮಂ
ಜುಳತರ ರಾಗರಂಜನದೆ ಚಿತ್ತಚಮತ್ಕೃತಿಯಂ ನಿಮಿರ್ಚುವು
ಜ್ಜ್ವಳ ಮೃದುಗೀತಮಂ ಬಿಡದೆ ಪಾಡಿ ಮುದಂ ಮಿಗೆ ಮೆಚ್ಚಿಸುತ್ತುಮಂ
ದಿಳೆಗಧಿನಾಥನೋಲಗದೊಳಿರ್ದುದು ಗಾಯಕಗಾಯಕೀಜನಂ ೧೪

ವ: ಮತ್ತಮಾತನ ಸಮೀಪದೊಳ್

ಮೊಲೆಗಳ್ ಬಿಣ್ಪಿಂದೆ ಬಳ್ಕುತ್ತಿರೆ ಮಣಿವಿಳಸತ್ಕಂಕಣಂಗಳ್ ಜಝಣ್ಮೆಂ
ದುಲಿಯಲ್ ಮಾಣಿಕ್ಯಹಾರಾಳಿಗಳಲುಗೆ ಕರಂ ಮೇಲುದಳ್ಳಾಡೆ ನೇತ್ರಾಂ
ಚಳಮಂ ಚೆಲ್ಲುತ್ತುಮಲ್ಲಾ ಸಭೆಯೊಳಮಳಸಚ್ಚಾಮರೌಘಂಗಳಂ ಭೂ
ತಳನಾಥಂಗಿಕ್ಕಿದರ್ ಕಾಮಿನಿಯರನುಪಮಾಕಾರೆಯರ್ ಲೀಲೆಯಿಂದಂ ೧೫

ವ: ಮತ್ತಮಾ ಕ್ಷತ್ರಿಯಚೂಡಾಮಣಿ ಪೊದೆದಿರ್ದ ಪಿರಿದುಂ ಸಪುರಮಾದ ಬೆಳುದಿಂಗಳ ಧಾವಲ್ಯಮನಿಳಿಕೆಯ್ವುತ್ತಿರ್ದ ಪ್ರಶಸ್ತವಸ್ತ್ರಾಂಚಳಂ ಬೀಸುವ ಚಾಮರಂಗಳ ಗಾಳಿಯಿಂದಳ್ಳಾಡುತ್ತುಮಿರಲಾ ನೃಪಾಳೋತ್ತಮನಿಂತು ಒಡ್ಡೋಲಗಂಗೊಟ್ಟಿರ್ಪುದುಮನ್ನೆಗ ಮಿತ್ತಲ್

ವಸುಮತಿಗವತರಿಸಿದಪಂ
ದಶರಥಜರನಪ್ಪ ತದಹಮಿಂದ್ರಂ ದಿವದಿಂ
ಮಿಸುಪ ಚರಮಾಂಗಮಂ ಕೊಳ
ಲೆಸಪಂದೆಂದಱಿದನಂದು ಸೌಧರ್ಮೇಂದ್ರಂ ೧೬

ವ: ಇಂತು ನಿಜಪರಮಾವಧಿಬೋಧಪ್ರಯೋಗವಿಧಾನದಿಂ ಧರ್ಮನಾಥ ನಾಗವತರಿಸಿ ದಪನೆಂದಱಿದು ರಾಗಿಸಿ ಬಳಿಯಂ ತನ್ನಯ ಭಾಂಡಾಗಾರಾಧಿಕಾರನಿಯುಕ್ತ ನಪ್ಪ ಕುಬೇರನಂ ಕರಸಿ ನೀಂ ಪೋಗಿಯುತ್ತರಕೌಶಲದೇಶಾಧೀಶ್ವರನುಂ ರತ್ನಪುರಲಕ್ಷ್ಮೀ ಮಣಿಮಯಮುಕುರನುಮಿಕ್ಷ್ವಾಕುವಂಶವನಜವನದಿವಾಕರನುಮೆನಿಪ ಮಹಾಸೇನ ಮಹಾರಾಜನ ವಿರಾಜಮಾನ ರಾಜಧಾನಿಯೊಳ್ ಧರ್ಮತೀರ್ಥಕರ ಗರ್ಭಾವತರಣ ಕಲ್ಯಾಣನಿಮಿತ್ತಂ ರತ್ನವೃಷ್ಟಿಯಂ ಕಱೆಯೆಂದು ಬೆಸಸಲದಂ ಶಿರದೊಳಾಂತು ಮಹಾ ಪ್ರಸಾದಮೆಂದು ಕೈಕೊಂಡಂ ಮತ್ತಂ ನಿಜಪುರಪ್ರಧಾನೆಯರಪ್ಪ ಸುರಪುರಂಧ್ರಿಯರುಮಂ ಬರಿಸಿ ಪೋಗಿ ನೀವಾ ಜಿನನ ಜನನಿಗೆ ಪರಿಚರ್ಯಾಪರಿಕರಮನೊಡರ್ಚುತ್ತು ಮಿರಿಯೆಂದು ನಿಯಾಮಿಸಿ ಬೇಱೆವೇಱೆಯವರವರ್ಗೆ ತಕ್ಕಂತಪ್ಪ ಪರಿವಾರದೇವಿ ಯರುಮನಪ್ಪಯಿಸಿ ಬೀಳ್ಕೊಟ್ಟು ಕಳಿಪಲೊಡಮವರ್ ಬರುತ್ತುಮಾಕಾಶತಳಪ್ರದೇಶ ಮನೆಯ್ದಿದಾ ಪೊತ್ತಿನೊಳ್

ಆಗಸದೊಳೊಗೆದುದುಱ್ ಮಿಗಿ
ಲಾಗಿರೆ ಬೆಳಗುಗಳ ಬಳಗಮೆಲ್ಲಾ ತಾಣದೊ
ಳಾಗಳ್ ಸಭೆಯೆಲ್ಲಂ ಬೆಱ
ಗಾಗಿದಿದೇನೆಂದು ನೋಡಿದುದು ವಿಸ್ಮಯದಿಂ ೧೭

ಮುಗಿಲೇನುಂ ಪೊರ್ದದಿಪ್ಪಾಗಸದೊಳಿರದು ವಿದ್ಯುಲ್ಲತಾಮಾಲೆ ಮತ್ತಂ
ಪಗಲುಂ ನಕ್ಷತ್ರಕಾಂತಿಪ್ರಸರಮದಿರದಿಂತೆಲ್ಲಿಯುಂ ಕೋಷ್ಮಚಾರಾ

ಳಿಗಳಿನ್ನುಂ ಸಾರದಿರ್ಪಾ ನೆಲೆಯೊಳುರಿಗಳುಂ ನೊಳ್ಪಡಿಲ್ಲಿಂತಿದೇನೊ
ಯ್ದೊಗೆದಿರ್ದೀ ದೀಪ್ತಿಯೆಂಬೀ ಬಹುವಿಧದ ವಿಕಲ್ಪಂಗಳಂ ಕಲ್ಪಿಸುತ್ತುಂ ೧೮

ವ: ಕಡುಚೋಜಿಗಮಿದೇನೆಂದು ಸಭೆಯುಂ ಸಭಾಪತಿಯುಂ ಕೊರಲ್ಗಳಂ ನೆಗಪಿ ನೋಡುತ್ತುಮಿರಲ್ ಮತ್ತಂ

ಪೊಳೆವ ಕೊರಲ್ಗಳಂದವಧಿಯಾಗಿ ಮುಗಿಲ್ಗಳ ಮೊತ್ತಮಾ ಸಮು
ಜ್ವಳತರ ದೇಹಯಷ್ಟಿಗಳನಾವರಿಸಲ್ ಮಿಗೆ ಸೂರ್ಯಬಿಂಬಮಂ
ಘಳಿಲನೆ ಗೆಲ್ವುದೊಂದು ಬಗೆಯಿಂದೆ ಸಮುದ್ಯತಪೂರ್ಣಚಂದ್ರಮಂ
ಡಳ ಘನಸೈನ್ಯದಂತೆಸೆದುದಿಂದುಮುಖೀಜನವಕ್ತ್ರಮಂಡಳಂ ೧೯

ವ: ಅದಱ ಬಳಿಯಂ

ಕೋಮಳಪಂಚರತ್ನಮಯಭೂಷಣಕಾಂತಿಗಳಿಂದೆ ಸುತ್ತಲುಂ
ವ್ಯೋಮದೊಳಾ ಸುರಾಧಿಪವಿಳಾಸವತೀನಿವಹಂಗಳಾಕ್ಷಣಂ
ಕಾಮನ ಬಿಲ್ಗಳಂ ಬಿಡದೆ ನಿರ್ಮಿಸಿ ತಾವವಱಲ್ಲಿ ಮತ್ತಮು
ದ್ದಾಮ ಸುವರ್ಣಬಾಣನಿಚಯಂಗಳಿವೆಂಬವೊಲೊಪ್ಪಿದರ್ ಕರಂ ೨೦

ವ: ಮತ್ತಮಾಕಾಶಮೆಂಬ ಭಿತ್ತಿಯೊಳ್ ಬರೆದ ನವೀನಚಿತ್ರಂಗಳೆಂಬಂತೆ ಭಾವಿತಾಕಾರೆಯರಾಗಿ ತೋಱುತ್ತುಂ ವಿಯತ್ತಳದಿಂದಿಳಿದು ಮೆಲ್ಲಮೆಲ್ಲನೆ ಬರುತ್ತುಮಿರಲ್ ಮತ್ತಂ

ವರಪದ್ಮರಾಗಮಣಿನೂ
ಪುರರೂಪಂ ಕೊಂಡು ಸೂರ್ಯನವರಂಘ್ರಿಗಳಂ
ಸ್ಮರಪೀಡಿತನಾಗಿ ಮಹಾ
ದರದಿಂದಂ ಪಿಡಿದನೆಂಬ ತೆಱದಿಂ ಮೆಱೆದಂ ೨೧

ವ: ಅಲ್ಲಿಂಬಳಿಯಂ

ವರವೃಂದಾರಕಸೌಂದರೀಸಮುದಯಂ ತೀರಾಗ್ರದೊಳ್ ಬಂದು ನಿಂ
ದಿರೆ ಮಂದಾಕಿನಿವಾರಿಬಿಂದುಮಯಶೃಂಗಾರಂಗಳಂ ಶ್ರೇಣಿಯಂ
ತಿರೆಗಳ್ ಕೈಗಳಿನಿತ್ತು ತಾಂ ನುಡಿಸುವಂತಿರ್ದತ್ತು ಘೋಷಂಗಳಿಂ
ಧರೆಯೊಳ್ ನಿರ್ಮಳರಿಂಗೆ ನಿರ್ಮಳರದೇಂ ಸಂಪ್ರೀತಿಯಂ ಮಾಡರೇ ೨೨

ವ: ಆ ಸ್ವರ್ಣದಿಯಂ ಪರಿತೂರ್ಣದಿಂ ತಕ್ಕೈಸಿಕೊಳುತ್ತುಮಿರ್ದಪರೆಂಬಂ ತಿರೀಸಾಡುತ್ತುಂ ದಾಂಟಿಬರುತ್ತುಮಿರ್ಪಾಗಳ್

ಸುರುಚಿರಪಾರಿಜಾತಕುಸುಮಸ್ತಬಕಂಗಳ ಕರ್ಣಪೂರಸ
ತ್ಪರಿಮಳಲೋಭದಿಂತೊಡನೆ ತುಂಬಿಗಳುಂ ನಭದಲ್ಲಿ ಮಂಡಳೀ
ಕರಿಸಿ ನಿಳಿಂಪಕಾಂತೆಯರಿಗೆತ್ತಿದ ಹೀಲಿಯ ಚೆಲ್ವುವೆತ್ತ ಝ
ಲ್ಲರಿಗಳಿವೆಂಬಿನಂ ಬಿಡದೆ ಬಂದುವು ಲೀಲೆಯನಂದು ಮಾಡುತುಂ ೨೩

ಗುರುಕುಚಮಂಡಳಸ್ಥಿತಿಯನೀಕ್ಷಿಸಿ ಮಧ್ಯಮಭಾಗದೊಂದುಸಂ
ಸ್ಥಿರತೆಯ ಬೋಧಮಂ ಸಭೆಗೆ ಪುಟ್ಟಿಸುತಿರ್ದ ವಿಶಿಷ್ಟರೂಪಮಂ
ಧರಿಸಿ ಸಮಸ್ತಲೋಕವನಿತಾನಿಕರಂಗಳನಾವಗಂ ಲಘೂ
ಕರಿಸುವ ದೇವಕಾಮಿನಿಯರೆಯ್ದಿದರಂದು ಸಭಾಸಮೀಪಮಂ ೨೪

ವ: ಅಂತಾ ದೇವಕಾಂತೆಯರ್ ನಭೋಮಾರ್ಗದಿಂದಿಳಿದು ಬಂದು ತಮ್ಮಯ ಶರೀರ ಸಂಜಾತಸೌಗಂಧ್ಯಸಂಸ್ಪರ್ಶಸಂಬಂಧದಿಂದಾದ ಸಂಮದ ಮದಭರ ಮಂದರ ಪ್ರಯಾತನಪ್ಪ ಬಂಧುರಗಂಧವಹನಂ ಮುಂದಿಟ್ಟುಕೊಂಡು ವಿಚಿತ್ರರತ್ನಪರಿಮಂಡಿತಮಪ್ಪ ಸಭಾಮಂಡಪದೊಳಗಂಪೊಕ್ಕು ನೋಳ್ಪಾಗಳ್

ಹರಿವಿಷ್ಟರದೊಳ್ ಕುಳ್ಳಿ
ರ್ದರಸನನಾ ದಿವಿಜಕಾಂತೆಯರ್ ಕಂಡು ಮಹಾ
ದರದಿಂ ಚಿಂತಿಸಿದರ್ ತ
ಮ್ಮುರುಚಿತ್ತದೊಳೆಯ್ದೆ ಮಾಡುತಂ ಸಂದೆಗಮಂ ೨೫

ವ: ಅದೆಂತೆನೆ

ಉದಯಗಿರೀಂದ್ರದೊಳ್ ನೆಲಸಿದುದ್ಧಕಳಾಪರಿಪೂರ್ಣಚಂದ್ರನೋ
ಮದಭರಮತ್ತಮಾನಸೆಯರಪ್ಪ ದಲೆಮ್ಮುಮನೆಯ್ದೆ ಸೋಲಿಸಲ್
ಮದನನೆ ಬಂದು ಕುಳ್ಳಿದನೊ ಮಾನವಲೋಕದರಿದ್ರಮಂ ಸಮಂ
ತೊದೆದುಱೆ ನೂಂಕಲೆಂದಿರದೆ ಬಂದ ಕುಬೇರನೊ ಭಾವಿಸಲ್ ನೃಪಂ ೨೬

ಎಮ್ಮಂ ಬಂದರೊ ಬಾರರೊ
ಸಮ್ಮುದದಿಂ ನೋಳ್ಪೆನೆಂದು ಸೌಧರ್ಮೇಂದ್ರಂ
ಪೆರ್ಮೆಯೊಳೆ ಮುಂದೆ ಬಂದಂ
ತಿಮ್ಮಡಿಸಿರಿಯಲ್ಲಿ ಕೂಡಿ ಕುಳ್ಳಿರ್ದನೊ ಪೇಳ್ ೨೭

ವ: ಎಂದಿಂತು ನಾನಾವಿಕಲ್ಪಂಗಳಂ ಕಲ್ಪಿಸುತ್ತುಮರಸನ ಸಮೀಪಕ್ಕೆವರೆ

ಆಗಳ್ ಭೂಪನ ತತ್ಸಭಾಜನದ ಚೇತೋವೃತ್ತಿಯುಂ ಕಣ್ಗಳುಂ
ಬೇಗಂ ಪೋಗಿ ಸುರೇಂದ್ರಕಾಮಿನಿಯರಂ ಮುಮ್ಮಟ್ಟೆ ಕೌತೂಹಳಂ

ತಾಗಲ್ಕಾಕ್ಷಣಮೆಲ್ಲರುಂ ಮೆಱೆದರನ್ಯವ್ಯಾಪ್ತಿಯಂ ಸಂಭ್ರಮಾ
ಭೋಗಂ ಕೈಮಿಗೆ ನೋಡುತಿರ್ದರವರೊಂದಾಶ್ಚರ್ಯಸೌಂದರ್ಯಮಂ ೨೮

ವ: ತದನಂತರಂ

ನ್ಯಾಯದಿನೆಯ್ದೆರಕ್ಷಿಸು ಸಮಸ್ತಧರಾತಳಮಂ ಲಸತ್ಸುಖೋ
ಪಾಯ ಜಿನೇಶಧರ್ಮಮುಮನುದ್ಧರಿಸೆಂದು ಮಹೀತಳಾಧಿಪ
ಜ್ಯಾಯನನಂದು ತಾಂ ಪರಸಿದರ್ ನಲವಿಂದುಱೆ ದೇವಕಾಂತೆಯರ್
ಕಾಯವಿಭೂಷಣಪ್ರಭೆಗಳಾವರಿಸಲ್ ಸಭೆಯಂ ವಿಶೇಷದಿಂ ೨೯

ವ: ಅನಂತರಮಾ ದೇವಕಾಂತೆಯರ್ಗೆ ಭೂಕಾಂತಂ ಸ್ವಕೀಯಸೇವಾಪರರಪ್ಪ ಕಿಂಕರರ ಕೈಗಳಿಂದಂ ಯಥೋಚಿತಂಗಳಪ್ಪಾಸನಂಗಳಂ ಕೊಡಿಸಿ ಕುಳ್ಳಿರಲೊಡಂ

ದ್ಯುಮಣಿಮಯೂಖಾವಳಿಗಳ್
ಕಮಳಂಗಳ ನಡುವೆ ಪೊಳೆವುತಿರ್ಪುವೆಂಬಂ
ತಮರಕುಮಾರಿಯರತ್ಯು
ತ್ತಮಪೀಠಂಗಳೊಳಮಂದು ಪೊಳೆಯುತ್ತಿರ್ದರ್ ೩೦

ಪಿರಿದುಂ ನಿರ್ಮಳಶೋಭಿತಾಂಬರದೊಳಂ ಭಾಭಾಸಮಾನಪ್ರಭೋ
ದ್ಧುರೆಯರ್ ಕೋಮಳಹಸ್ತಸುಶ್ರವಣಭೂಷಾಯುಕ್ತಿಯದ್ದಿವ್ಯಸೌಂ
ದರಿಯರ್ ತಾರೆಗಳಂತೆ ಚಂದ್ರಮನವೊಲ್ ತೋರ್ಪಾ ಮಹೀಪಾಳನಂ
ಭರದಿಂದಂ ಪರಿವೇಷ್ಟಿಸಿರ್ದು ತಳೆದರ್ ಭೂರಿಪ್ರಸನ್ನತ್ವಮಂ ೩೧

ಕ್ಷಿತಿನಾಥಂ ಪ್ರೇಮದಿಂ ದೇವಿಯರ ನಿರುಪಮಾಕಾರಮಂ ನಾಡೆಯುಂ ನೋ
ಡುತುಮಿಪ್ಪಾ ಪೊತ್ತಿನೊಳ್ ಪುಟ್ಟಿದುವವರ ಶರೀರಂಗಳೊಳ್ ಕೂಡೆ ಚಾರೂ
ನ್ನತರೋಮಾಂಚಂಗಳಂದಂಗಜನ ನಿಶಿತಬಾಣಂಗಳುಚ್ಚಲ್ಕೆ ದೇಹ
ಸ್ಥಿತಿಯಿಂದಂ ಬಾಹ್ಯದೊಳ್ ತೋಱುವ ಗಱೆಗಳಿವೆಂಬಂತಿರೊಪ್ಪಿರ್ದುವೆತ್ತಂ ೩೨

ವ: ಮತ್ತಮಾ ನರೇಂದ್ರಚಂದ್ರಮಂ ತನ್ನಯ ಪಲ್ಗಳ ಬೆಳಗೆಂಬ ಬೆಳುದಿಂಗಳ ಬಳಗದಿಂದಾ ನಿಳಿಂಪ ವಿಳಾಸಿನಿಯರ ನೇತ್ರಂಗಳೆಂಬ ಕೈರವಂಗಳಂ ವಿಕಾಸಿಸುತ್ತುಮತಿಥಿ ಯೋಗ್ಯಸನ್ಮಾನದಾನಪ್ರತಿಪತ್ತಿಯಿಂ ವಿತತೀಕೃತಪರಿಶ್ರಮೆಯರಪ್ಪ ದೇವಿಯರ ಪ್ರಸನ್ನ ಮುಖಂಗಳಂ ನೀಡುಂನೋಡಿ ಗಂಭೀರಧ್ವನಿಯಿಂದಿಂತೆಂದಂ

ಮೂಜಗದಲ್ಲಿಯುಂ ದಿವಿಜಲೋಕಮದುತ್ತಮಭೂರಿಸೌಖ್ಯಸ
ದ್ಭಾಜನಮಗ್ರಗಣ್ಯಪದಮಂ ಪಡೆದೊಪ್ಪಮನಾಳ್ದುದೀ ಮಹಾ

ಪೂಜ್ಯರೆನಿಪ್ಪ ಕಾಮಿನಿಯರಿರ್ದುದು ಕಾರಣಮುದ್ಧುರತ್ನಸಂ
ಯೋಜನಮುಳ್ಳ ತಾಣಮದು ರೂಢಿಯನಾಂತಸೆದಿರ್ಪ ಮಾಳ್ಕೆಯಿಂ ೩೩

ಇಂತಪ್ಪ ಪುಣ್ಯಮೂರ್ತಿಗ
ಳೆಂತಾದೊಡಮಮ್ಮವಂದಿಗರ್ ಮನುಜರಿಳಾ
ಕಾಂತರೆನಿಸಿರ್ದೊಡಂ ಕಾ
ರ್ಯಾಂತರದಿಂ ಪೊರ್ದರೆಮ್ಮ ಮನೆಗಳನೆಂದುಂ ೩೪

ಅಂತಾದೊಡಮಭ್ಯಾಗತ
ಸಂತತಿಗಳ್ಗೆಯ್ವ ಮಾಳ್ಪ ವಿನಯನಿಮಿತ್ತಂ
ಸಂತೋಸದಿಂದಿಲ್ಲಿಗೆ ಬಂ
ದಂತಹ ಕಾರಣಮಿದೇನೆನುತ್ತುಂ ಕೇಳ್ದಂ ೩೫

ನೀವಾರ್ ನಿಮ್ಮಯ ಪೆಸರೇಂ
ನೀವೆಲ್ಲಿಂ ಬಂದಿರಿಲ್ಲಿಗೆಮ್ಮಿಂದಂ ಸಂ
ಭಾವಿಸುವ ಕಾರ್ಯಮೇನೆಂ
ದಾ ವಿಭು ಬೆಸಗೊಂಡನವರನತಿಮುದದಿಂದಂ ೩೬

ಆಗಳ್ ದೇವಿಯರೆಲ್ಲಂ
ವಾಗತಿ ಚತುರತ್ವದೊದವನಾಂತೆಸೆದಿರ್ಪಾ
ಶ್ರೀಗೆ ನುಡಿಯೆಂದು ಪೇಳಲ್
ಭೋಗಧಿಪಂಗುಸುರ್ದಳಾಕೆ ವಿಸ್ತರದಿಂದಂ ೩೭

ವ: ಅದೆಂತೆಂದೊಡನಂತತೀರ್ಥಂಕರಂ ಕೈವಲ್ಯಕಲ್ಯಾಣಪ್ರಾಪ್ತನಾದಿಂ ಬಳಿಯ ಮರ್ಧಪಲ್ಯಮುಳಿಯಲ್ ನಾಲ್ಕುಸಾಗರೋಪಮಕಾಲಪರ್ಯಂತಂ ಧರ್ಮಂ ಪೆರ್ಚಿ ಪರಿವರ್ತಿಸುತ್ತುಮಿರ್ದತ್ತು ಕಡೆಯಲುಳಿದಿರ್ದ ಪಲ್ಯಪ್ರಮಿತಕಾಲದೊಳ್ ಧರ್ಮ ಪ್ರಭಾವನಾಪ್ರಕಾಶಮೆಲ್ಲಂ ವಿಚ್ಛಿತ್ತಿಯನೆಯ್ದಿ ಮಿಥ್ಯಾತ್ವಮೆಂಬ ಕತ್ತಲೆಯ ಮೊತ್ತಮೆತ್ತಲುಂ ಪ್ರಬಲಮಾಗೆ

ರಮ್ಯಮೆನಿಸಿರ್ದು ತೋಱುವ
ಸಮ್ಯಗ್ದರ್ಶನ ಸುರತ್ನಮಂ ತನ್ನದುವಂ
ಪೆರ್ಮೆಯೊಳೊಂದಿದ ಜಿನಪತಿ
ಧರ್ಮಂ ತನ್ನೊಡನೆ ಕೊಂಡುಪೋದತ್ತಾಗಳ್ ೩೮

ವ: ಅಂತಱುದಿಂಗಳುಳಿಯೆ ಮಿಕ್ಕಿರ್ದ ಪಲ್ಯಪ್ರಮಾಣಕಾಲಮೆಲ್ಲಂ ಭರತ

ಕ್ಷೇತ್ರದೊಳಧರ್ಮದೋಷದೂಷಿತಮಾಗಲೊಡಮೊರ್ಮೆ ಸೌಧರ್ಮೇಂದ್ರಂ ಜಿನಧರ್ಮ ಮಾರ್ಗಪ್ರಭಾವನಾ ನಾಯಕನಪ್ಪ ಜಿನನಾಯಕನುದಯಮಂ ನೋಡು ವಂತವಧಿಜ್ಞಾನಮೆಂಬ ವಿಲೋಚನ ವಿಕಾಶಮನೊಡರ್ಚಿಯಱುದಿಂಗಳಿಂ ಮೇಲೆ ಪದಿನಯ್ದನೆಯ ತೀರ್ಥಕರನಪ್ಪ ಧರ್ಮಜಿನನಾಥಂ ನಿನ್ನಯ ಪಟ್ಟದರಸಿಯಪ್ಪ ಸುವ್ರತಾಮಹಾದೇವಿಯ ಗರ್ಭದೊಳುದ್ಭವಿಸಿದಪನೆಂದಱಿದು ಕಡುನಲಿದು ಬಳಿಯ ಮೆಮ್ಮಂ ಕರೆದು

ಭಾವಿಜಿನಜನನಿಯಪ್ಪಾ
ದೇವಿಗೆ ಶುಶ್ರೂಷೆಯಂ ಮಹಾದರದಿಂದಂ
ನೀವೆಯ್ದೆ ಮಾಡಿಯೆಂದಾ
ದೇವೇಂದ್ರಂ ಬೆಸಸೆ ಬಂದೆವಿಲ್ಲಿಗೆ ನೃಪತೀ ೩೯

ಮತ್ತೊಂದುಕಾರ್ಯಮೇನುಂ
ಬಿತ್ತರಿಪೊಡಮಿಲ್ಲ ನಿನ್ನ ವಲ್ಲಭೆಗೆ ಕರಂ
ತೊತ್ತಿಯರಾಗಿಯೆ ಬೆಸನಂ
ನೆತ್ತಿಯೊಳಾಂತೆಯ್ದೆ ಮಾಳ್ಪುದಲ್ಲದೆ ನಮಗಂ ೪೦

ದಾಸೀಪುತ್ರನ ತೆಱದಿಂ
ವಾಸವನುಂ ಬಂದು ಸೇವೆಯಂ ಮಾಡಿದಪಂ
ಲೇಸಾಗಿ ಮತ್ತೆ ಕತಿಪಯ
ವಾಸರದಿಂ ಮೇಲೆ ಸಕಳ ಭೂಪತಿತಿಳಕಾ ೪೧

ಇನ್ನು ಜಗತ್ತ್ರಯಗುರುವಿಂ
ಗುನ್ನತ ನೀಂ ತಂದೆಯಪ್ಪ ಕಾರಣದಿಂದಂ
ಪನ್ನಗಸುರನರರೊಳ್ ಮಿಗೆ
ನಿನ್ನವೊಲುತ್ಕೃಷ್ಟಪುಣ್ಯಭಾಜನನಾವಂ ೪೨

ವ: ಮತ್ತಂ ನಾಕಲೋಕದೊಳಗಗ್ಗಳಮಪ್ಪ ದೇವಸ್ತ್ರೀಯರುಂ ಕುಳಕುಧರ ನಿವಾಸಿಗಳಾದ ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿ ಜಯೆ ವಿಜಯೆ ಅಜಿತೆ ಅಪರಾಜಿತೆ ಯರೆಂಬ ಮುಖ್ಯರಪ್ಪ ದೇವಿಯರುಂ ಬಂದು ನಿಮ್ಮಯ ಸೇವೆಯಂ ಮಾಳ್ಪನಿತು ಪುಣ್ಯದೊದವುಂ ನಿನಗಲ್ಲದೆ ಮತ್ತಾರ್ಗಂ ಕೈಸಾರಿತ್ತಿಲ್ಲಮಂತುಮಲ್ಲದೆಯುಂ

ಸುರನಾಥನಾಜ್ಞೆಯಿಂದೀ
ಪುರದೊಳಗೆ ಸುವರ್ಣವೃಷ್ಟಿಯಂ ಕಱೆಯಲ್ಕೆಂ
ದಿರದೆ ಬಂದಿರ್ದನೀತಂ
ನಿರುಪಮಮಹಿಮಂ ಕುಬೇರನೆಂಬಂ ಪೆಸರಿಂ ೪೩

ವ: ಎಂದು ಸುಟ್ಟುಂಬೆಯಂ ತೋಱಿ ನುಡಿಯುತ್ತುಮಿರ್ದ ಶ್ರೀದೇವಿಯ ಮಾತಂ ಕೇಳ್ದು

ಯತಿಪತಿ ಪೇಳ್ವುದಂ ಮುಕುಳಿತಾರ್ಧವಿಲೋಚನನಾಗಿ ತನ್ಮಹೀ
ಪತಿ ಮನದಲ್ಲಿ ಭಾವಿಸಿ ಕರಂಗಳನಂದು ನೊಸಲ್ಗೆತಂದು ಮ
ತ್ತತಿಶಯದಿಂದೆ ಮೆಚ್ಚಿ ತಲೆಯಂ ನೆಱೆತೂಗಿದನುದ್ಧಮೌಲಿಕೀ
ಲಿತಮಣಿಗಳ್ ಕರಂ ಕೆದಱೆ ಕಾಮನ ಬಿಲ್ಗಳ ಭೂರಿಶೋಭೆಯಂ ೪೪

ವ: ಅನಂತರಂ ನೂರ್ಮಡಿಯಾದ ತುಚ್ಛೇತರೋತ್ಸಾಹದಿಂ ದುರ್ಲಲಿತ ಗಾತ್ರನಾ ಧಾತ್ರೀವಲ್ಲಭಂ ನಿಜರಾಜಭವನದೊಳಂ ರಾಜಧಾನಿಯೊಳಮೆಡೆವಱಿಯದೆ ಕುಡಿಗಳಂ ಕಟ್ಟಿಸಿ ಬದ್ದವಣಂಗಳಂ ಬಾಜಿಸಿ ಪಿರಿದುಮೊಸಗೆಯಂ ಮಾಡಿಸುತ್ತುಂ ಬಳಿಯಂ ಕುಬೇರನ ಮೊಗಮಂ ನೋಡಿ ನೀಂ ಮಾಡಲ್ವೇಡಿಬಂದ ಕಾರ್ಯಮಂ ಮಾಡೆಂಬುದುಂ

ಪರಿಭಾಸ್ವದ್ಭೂಷಣಾಂಶುಪ್ರಕರಮುರುತಟಿನ್ಮಾಳಿಕಾಶೋಭೆಯಂ ಬಿ
ತ್ತರಿಸಲ್ ಚಂದ್ರಾರ್ಕಬಿಂಬಂಗಳ ಕಿರಣಮನಾಚ್ಛಾದನಂಗೆಯ್ದು ಮತ್ತಂ
ಪರಮೇಘಾಡಂಬರಾಕಾರಮನನುಕರಿಸುತ್ತುಂ ಪುರಾಸನ್ನದೊಳ್ ತಾಂ
ಪಿರಿದೊಂದಾಶ್ಚರ್ಯದಿಂದಂ ಗಗನತಳದೊಳಂದೊಡ್ಡಿನಿಂದಂ ಕುಬೇರಂ ೪೫

ಸೊಗಯಿಪ ಕುಬೇರನೆಂಬಾ
ಮುಗಿಲಿಂದಂ ಸುರಿದುದಂದು ಪೊಮ್ಮಳೆ ಭರದಿಂ
ನಗರಿಯೊಳೆಲ್ಲಾ ತಾಣದೊ
ಳಗಣಿತಮೆನೆ ಕೂಡೆ ಮಾಡುತುಂ ವಿಸ್ಮಯಮಂ ೪೬

ವಸುಮತಿಯೆಂಬೀ ಪೆಸರಿಂ
ದೆಸೆದುದು ಭೂಭಾಗಮಂದು ಮೊದಲಾಗಿ ಕರಂ
ವಸುವೃಷ್ಟಿಯಿಂದೆ ಪೆರ್ಚಿದ
ಪೊಸತೆನಿಸುವ ವಸುವನುಳ್ಳಕಾರಣದಿಂದಂ ೪೭

ವ: ಮತ್ತಂ

ಸುರಿದುದು ಕೂಡೆ ಮೂಱುವರೆಕೋಟಿಯೊಳೊಂದಿದ ರತ್ನವೃಷ್ಟಿಯುಂ
ನರಪತಿಗೇಹದೊಳ್ ಪ್ರತಿದಿನಂ ದಶದಿಕ್ತಟಭಿತ್ತಿಭಾಗಮಂ
ಭರವಶದಿಂದೆ ಚಿತ್ರಿಸುತುಮಿರ್ದಪುದೆಂಬಿನಮರ್ಯಮಪ್ರಭಾ
ಪರಿಕರಮೆಲ್ಲಮುಂ ಮಸುಳ್ವವೊಲ್ ಪರಿನಿರ್ಮಿಸುತುಂ ವಿಶೇಷದಿಂ ೪೮

ವ: ಇಂತು ಗರ್ಭಾವತರಣಕಲ್ಯಾಣಂ ಮುಂದಱುದಿಂಗಳೆನಲಂದುಮೊದಲಾಗಿ ಪದಿನೆಂಟುತಿಂಗಳ್ ಪರ್ಯಂತಂ ಪುರದೊಳರಮನೆಯೊಳಂ ಸುವರ್ಣವೃಷ್ಟಿಯಂ

ರತ್ನವೃಷ್ಟಿಯುಮಂ ಕಱೆವ ಬೆಸನಂ ಕೈಕೊಂಡು ಬಂದೊಂದು ಪಿರಿದೊಂದಾಶ್ಚರ್ಯದಿಂ ಪ್ರಾರಂಭಂಗೆಯ್ದು ಕುಬೇರಂ ನಿಜನಿವಾಸಕ್ಕೆ ಪೋಪುದುಮಿತ್ತಲ್

ಬಯಸುತ್ತುಮಿರ್ದುದೆಮ್ಮಾ
ಶಯಮೀಗಳ್ ಸುವ್ರತಾಮಹಾದೇವಿಯುಮಂ
ನಯವಿದೆಯಂ ನೋಡಲ್ಕೆಂ
ದಯಯುತನಂ ಕೇಳ್ದರಂದು ದೇವಿಯರೆಲ್ಲಂ ೪೯

ವ: ಬಳಿಯಂ ಮಹೀಪಾಳಂ ವೃದ್ಧ ಕಂಚುಕಿಯಂ ಕರಸಿ ನೀನೊಡಗೊಂಡು ಪೋಗಿ ಸುವ್ರತಾಮಹಾದೇವಿಯನಿವರ್ಗೆ ತೋಱೆಂದಪ್ಪಯಿಸಲೊಡಂ

ಮಣಿಮಯಮೇಖಳಾಕಳಿತ ಕಿಂಕಿಣಿರ್ಝುಣ್ಕೃತಿಯುಂ ವಿಶಿಷ್ಟ ಕಂ
ಕಣಘನನಾದಮುಂ ಬಿಡದೆ ತಮ್ಮೊಳಮೆಯ್ದೆ ವಿವಾದಿಸುತ್ತಿರಲ್
ಪ್ರಣುತಕಪೋಳದೊಂದು ಪೊಳೆಪುಂ ನಯನಾಂಚಳಕಾಂತಿಯೊಳ್ ಕರಂ
ಕುಣಿಯೆ ನೃಪಾಂಗನಾಲಯಕೆ ಬಂದುದು ದೇವವಿಳಾಸಿನೀಜನಂ ೫೦

ವ: ಅಂತುಬಂದು

ಚಂದ್ರನ ಕಳೆಗಳ್ ಕೈರವ
ವೃಂದದೊಳಂ ಪೊಳೆವ ಮಾಳ್ಕೆಯಿಂದಂ ಪೊಕ್ಕರ್
ಕುಂದದ ಸಿರಿಯೊಳ್ ಕೂಡಿದ
ಸೌಂದರಿಯ ನಿವಾಸದಲ್ಲಿ ಸುರನಾರಿಯರುಂ ೫೧

ವ: ಅಂತು ಪೊಕ್ಕನಂತರಂ ಮುಂದೊಂದು ರತ್ನಕುಟ್ಟಿಮಭೂಮಿಕೆಯೊಳನೇಕ ಭೂಪಾಳ ಕರರಸಿಯರ ನಿಕರಮುಂ ಕ್ಷತ್ರಿಯಕುಮಾರಿಯರ ಮೊತ್ತಮುಂ ಸೇವಾವಿನೋದ ನಿಮಿತ್ತಂ ಬಂದು ಸುತ್ತಲುಂ ಕಿಕ್ಕಿಱಿಗಿಱಿದು ಕುಳ್ಳಿರಲಾ ಸ್ತ್ರೀಯರ ಒಡ್ಡೋಲಗದ ನಟ್ಟನಡುವೆ

ಹರಿವಿಷ್ಟರದೊಳ್ ಕುಳ್ಳಿ
ರ್ದರಸಿ ಮಹಾಲಕ್ಷ್ಮಿಯಂತಿರೊಪ್ಪಮನಾಳ್ದಳ್
ನರರೆಲ್ಲರ ಬಡತನಮಂ
ಪರಿಹರಿಸಿ ಸಮರ್ಥರಾಗಿ ಮಾಳ್ಪುದಱಿಂದಂ ೫೨

ಗುಣದ ಕಣಿ ದಾನಚಿಂತಾ
ಮಣಿ ಜಿನಮತಗಗನತಳವಿಭಾಸಿ ವಿಹಾಯೋ
ಮಣಿಯೆನಿಪ ದೇವಿ ಲಲನಾ
ಗ್ರಣಿಗಳ ಸಭೆಯಲ್ಲಿ ರತ್ನಮಿರ್ಪಂತಿರ್ದಳ್ ೫೩

ಪೊಸತೆನಿಸಿರ್ಪ ಜವ್ವನದ ಸುಗ್ಗಿ ವಿವೇಕದ ಜನ್ಮಭೂಮಿ ಮ
ತ್ತಸದೃಶಮಾದ ಚೆಲ್ವಿನ ಬರ್ದುಂಕು ವಿಶೇಷಿತಕಾಂತಿಯಾಗರಂ
ಕುಸುಮಶರಾಧಿದೇವತೆಯವೊಲ್ ಪರಿರಂಜಿಪ ರೂಪಮೀಕೆಯಾ
ಗೆಸೆವುತುಮಿರ್ದಳಂದು ಮಿಗೆ ಪಟ್ಟದ ರಾಣಿ ವಿಶಿಷ್ಟಲೀಲೆಯಿಂ ೫೪

ಕಡೆಗಣ್ಗಳ ಕುಡಿವೆಳಗಿಂ
ಮಡದಿಯರ ಸಭಾನಿವಾಸಮಂ ಧವಳಿಸುತಿ
ರ್ದೊಡೆಯುಂ ಮಾಡುತ್ತಿರ್ಪಳ್
ಪಡಿರಾಣಿಯರಾಸ್ಯದಲ್ಲಿ ಕೃಷ್ಣತ್ವಮುಮಂ ೫೫

ವ: ಅಂತು ಶೋಭಿಸುತ್ತುಮಿರ್ಪ ಭಾವಾಸಭಾಮಧ್ಯದಲ್ಲಿ ಮಂಗಳಮಣಿ ದರ್ಪಣದಂತಿರೊಪ್ಪಮನಾಂತು ತೋರ್ಪ ತತ್ಪ್ರತಾಮಹಾದೇವಿಯಂ ದೇವಕಾಂತೆಯರ್ ಕಂಡು ನಾಡೆಯುಂ ಮನದೆಗೊಂಡು

ಪಲಕಾಲದಿಂದೆ ಸಂಚಿಸಿ
ದಲಘುವೆನಿಪ್ಪೊಂದು ತಮ್ಮ ರೂಪಿನ ಮದಮಂ
ಸಲೆಬಿಟ್ಟರ್ ದೇವಿಯರಾ
ಲಲನೆಯ ರೂಪಂ ನಿರೀಕ್ಷಣಂಗೆಯ್ವಾಗಳ್ ೫೬

ವ: ಅಂತಾಕೆಯ ಗಾಡಿಯಂ ನೀಡುಂನೋಡುತ್ತುಂ ಸಮೀಪಕ್ಕೆ ನಡೆದು ಬಂದು ಕಡುನಲವಿಂ ತಮ್ಮಯ ಸಮುಲ್ಲಸದಳಕವಲ್ಲಿಗೆ ಮಣಿಕುಟ್ಟಿಮಧಾರಿಣಿಯನಾ ಧಾರಮಾಗಿಮಾಡಲೊಡು

ಆಕೆಯ ಚರಣಂಗಳನಾ
ನಾಕಸ್ತ್ರೀಕುಂತಳಂಗಳಂದಾವರಿಸಲ್
ಕೋಕನದೊಳ್ ಮುಸುಱಿದ ಭೃಂ
ಗೀಕುಳಮಂ ಪೋಲ್ತು ಸೊಗಯಿಸಿತ್ತಾಕ್ಷಣದೊಳ್ ೫೭

ವ: ಅನಂತರಮಾ ದೇವಕಾಂತೆಯರೆಲ್ಲಂ ನಿಂದು ಕೈಗಳಂ ಮುಗಿದುಕೊಂಡಿರ್ಪುದುಮಾ ಭೂಕಾಂತಕಾಮಿನಿಯರವರವರ್ಗೆ ತಕ್ಕಂತಪ್ಪ ಸುವರ್ಣಮಯಂಗಳಾದಾ ಸನಂಗಳಂ ಕೊಡಿಸಿ ಕುಳ್ಳಿರಿಸಿ ಬಳಿಯಂ ಯಥಾಯೋಗ್ಯಸನ್ಮಾನಪ್ರತಿಪತ್ತಿಪೂರ್ವಕಂ ಮನ್ನಿಸಿ ಪರಮಸ್ನೇಹದಿಂದಾ ದೇವಿಯರ ಮೊಗಂಗಳಂ ನೋಳ್ಪಾಗಳ್

ಭೂಗಧಿನಾಥವಲ್ಲಭೆಯ ರೂಪು ಸಮಸ್ತನಿಳಿಂಪಕಾಮಿನೀ
ಪೂಗದ ಚೆಲ್ವ ಮೂಕುತಿಗಳಲ್ಲಿಯ ಮುತ್ತುಗಳಲ್ಲಿ ಬಿಂಬಿಸ
ಲ್ಕಾಗಳದೆಲ್ಲರಂ ಮಿಗುವ ರೂಪುಮನಾಂತೆಸೆದಿರ್ಪ ಕಾರಣಂ
ಮೂಗಿನ ಮೇಲೆ ಪಾತ್ರಮುಮನಾಡುತುಮಿರ್ದವೊಲೊಪ್ಪಿದಳ್ ಕರಂ ೫೮

ವ: ಬಳಿಯಂ ಪ್ರಿಯಸಂಭಾಷಣಕ್ಕೆ ನೆವನಪ್ಪ ಕಾರಣಮಾಗೆ ನೀವಿಲ್ಲಿಗಾವ ಪ್ರಯೋಜನನಿಮಿತ್ತಂ ಬಂದಿರೆಂದು ಕೇಳ್ವುದುಂ

ಜಿನಪತಿ ಪುಟ್ಟುವನ್ನೆವರಮಾತನ ತಾಯ್ಗೆ ಸಮಸ್ತಸೇವೆಯಂ
ಘನಮೆನೆ ಮಾಡಿಯೆಂದು ಸುಮನಃಪತಿ ಪೇಳ್ದೊಡೆ ಬಂದೆವಿಲ್ಲಿಗಂ
ಮನದೊಲವಿಂದೆ ನಿಮ್ಮನುಱ ಸೇವಿಪುದಲ್ಲದೆ ಬೇಱ ಸತ್ವಯೋ
ಜನಮೆಮಗಿಲ್ಲಮೆಂದು ನುಡಿದರ್ ಕಡುನೀಱೆಯ ಮುಂದೆ ದೇವಿಯರ್ ೫೯

ಎಂತು ನೃಪಂಗೆ ಮುನ್ನಮತಿವಿಸ್ತರದಿಂದಮೆ ಪೇಳ್ದರಂತೆ ತ
ತ್ಕಾಂತೆಗಮಾ ಸುರಾಧಿಪ ವಿಳಾಸಿನಿಯರ್ ಸಲೆ ತಮ್ಮ ಬಂದ ವೃ
ತ್ತಾಂತಮನೆಯ್ದೆ ಪೇಳ್ದೊಡದನಾಲಿಸಿ ಮತ್ತೆ ನಿಜಾಂತರಂಗದೊಳ್
ಸಂತಸಮಂ ಕರಂ ತಳೆದಳಾಕ್ಷಣದೊಳ್ ಮಗನಾದನೆಂಬಿದಂ ೬೦

ವ: ಅಂತು ಪದಿನಯ್ದನೆಯ ತೀರ್ಥಂಕರನಪ್ಪ ಧರ್ಮಜಿನನಾಥನಿನ್ನಱುದಿಂಗಳಿಂ ಮೇಲೆ ಸರ್ವಾರ್ಥಸಿದ್ಧಿಯಿಂದಂ ಬಂದು ನಿಮ್ಮಯ ಗರ್ಭದೊಳುದ್ಭವಿಸಿದಪನೆಂದು ದೇವೇಂದ್ರನಱದೆಮ್ಮಂ ಕರೆದು ಧರ್ಮತೀರ್ಥಂಕರ ಗರ್ಭಾವತರಣಕಲ್ಯಾಣ ನಿಮಿತ್ತಂ ಪೋಗಿ ನೀವಾ ಜಿನಜನನಿಯ ಗರ್ಭಶೋಧನೆಯಂ ಮಾಡಿಯಾಕೆಗಿಷ್ಟಮಾದ ಪರಿಯಷ್ಟಿಯಂ ಮಾಡುತ್ತುಮಿರಿಯೆಂದು ಬೆಸಸಿ ಕಳಿಪಿದೊಡೆ ಬಂದೆವೆಂಬುದುಮಾ ಸುವ್ರತಾ ಮಹಾದೇವಿ ತತ್ವಚೇತಾಚಾರ್ಯರ್ ಮುಂಪೇಳ್ದ ವಚನಾವಿಸಂವಾದಮಂ ನೆನೆನೆನೆದು ಪರಮಾನಂದದಿಂದಂ ಬಹಳ ಪುಳಕಾಂಕುರಕಳಿತೆಯಾಗಿ ತದೀಯಚರಣಾರ ವಿಂದದ್ವಂದ್ವಮಂ ಮನದೊಳಭಿವಂದಿಸಿ ತನ್ಮುನೀಂದ್ರರ ಮಾಹಾತ್ಮ್ಯಮನಾ ದೇವಸ್ತ್ರೀಯ ರೊಡನೆ ನುಡಿಯುತ್ತುಮಿರಲ್ ಮತ್ತಮವರಿಂತೆಂದರ್

ನರಯುವತಿಯಾಗಿಯುಂ ನಿ
ರ್ಜರಯುವತಿಯರೊಲ್ದು ಸೇವಿಸುವ ಪುಣ್ಯಂ ಮ
ತ್ತರಸಿ ನಿನಗಾದುದಲ್ಲದೆ
ಧರಣಿಯೊಳುಳಿದನ್ಯಮನುಜಸತಿಯರ್ಗುಂಟೇ ೬೧

ಮೂಜಗದೊಡೆಯಂಗಂ ಗುಣ
ಭಾಜನೆ ನೀಂ ಜನನಿಯಪ್ಪ ಕಾರಣದಿಂ ಸಂ
ಯೋಜಿಸಿದುದಲ್ಲದಿರ್ದೊಡೆ
ರಾಜಿತ ಸುರರ್ಗಂ ನರರ್ಗಮಂತರಮೇಂ ಪೇಳ್ ೬೨

ವ: ಅಂತುಮಲ್ಲದೆಯುಂ

ಓಲಯಿಸಿಕೊಂಬುದೆಮ್ಮಂ
ಪಾಲಿಪುದುಱ್ ಮಾಳ್ಪ ಕಾರ್ಯಮೇನುಳ್ಳೊಡದಂ
ಬಾಲಕಿ ಮಾಡಿಸಿಕೊಂಬುದು
ಲೀಲೆಯಿನೆಂದಮರಕಾಂತೆಯರ್ ಪೇಳಲೊಡಂ ೬೩

ವ: ಅನಂತರಂ

ಸೊಗಸುವ ಬೋನಮಂ ಸಮೆವ ಕಾರ್ಯದೊಳಂ ಕೆಲರಂ ಸುಮಜ್ಜನಂ
ಬೊಗಿಸುವ ಕಜ್ಜದಲ್ಲಿ ಕೆಲರಂ ಹರಿಚಂದನಮಂ ಸಮಂತು ಸ
ಣ್ಣಿಗೆಯೊಳೆ ಸಣ್ಣಪುಜ್ಜುಗದೊಳಂ ಕೆಲರಂ ಜಿನದೇವಕಾರ್ಯಪೂ
ಜೆಗಳನೆ ಮಾಳ್ಪುದೊಂದುರು ನಿಯೋಗದೊಳಂ ಕೆಲರಂ ಪ್ರಮೋದದಿಂ ೬೪

ಕೆಲರಂ ಕಂಪಿನ ಪೂಗಳಂ ಕೆದಱ್ ಹಾಸಂ ಹಾಸುವುದ್ಯೋಗದೊಳ್
ಕೆಲರಂ ಪಾವುಗೆ ನೀಡುವಲ್ಲಿ ಕೆಲರಂ ಬಾಣದ್ದಣಂಗೊಂಡು ಸು
ತ್ತಲುಮೋಲೈಸುವ ಪೆರ್ಮೆಯಲ್ಲಿ ಕೆಲರಂ ದೌವಾರಿಕಸ್ಥಾನದೊಳ್
ಕೆಲರಂ ಜಾಣ್ನುಡಿಯೊಳ್ ಮಹತ್ತರಿಯರಂ ಮಾದೇವಿಯಪ್ಪೈಸಿದಳ್ ೬೫

ವ: ಇಂತಾ ಸುಪ್ರತಾಮಹಾದೇವಿ ತನ್ನಯು ಸೇವಾರ್ಥಂ ಬಂದ ತತ್ತತ್ಕರ್ಮ ಕೌಶಲಸಮರ್ಥೆಯರಾದ ದೇವಸ್ತ್ರೀಯರಂ ನಾನಾಪ್ರಕಾರ ನಿಯೋಗದೊಳ್ ನಿಯೋಜಿಸು ತ್ತುಮಿರಲ್ ಮತ್ತಮಾ ದೇವಿಯರೊರ್ವೊರ್ವರ್ ಬೇಱೆವೇಱ್ ತಮ್ಮಯ ಕಳಾಕುಶಲತ್ವಮಂ ನಿಮಿರ್ಚಿಯಚ್ಚರಸಿಯರಿಚ್ಚೆಯಱೆದೋಲಯಿಸಿ ಮೆಚ್ಚಿಸಲೆಂದು

ಸೊಗಯಿಪ ಚಿತ್ರಪತ್ರಚಯದಿಂದೆ ವಿಚಿತ್ರತರಂಗಳಾದುವಂ
ಮಿಗೆ ಸಪುರಂಗಳಾದ ಸುರಲೋಕದೊಳಗ್ಗಳಮಾದ ಬಣ್ಣವ
ಣ್ಣಿಗೆಗಳಿನೆಯ್ದೆ ನುಣ್ಪುವಡೆದೊಪ್ಪುವ ಸೀರೆಗಳಂ ಮಹೀಪನಾ
ರಿಗೆ ಕಡುಚೆಲ್ವನಾಗುಡಿಸಿದಳ್ ಸುರಕಾಮಿನಿಯೊರ್ವಳರ್ಥಿಯಿಂ ೬೬

ತೊಳಗುವ ಕೆಂದಾವರೆಗಳ
ನೆಳವಿಸಿಲಾವರಿಸಿದಂತಿರಾಕೆಯ ಚರಣಂ
ಗಳ ತಳಮನೂಡಿದಳ್ ಕೋ
ಮಳಲಾಕ್ಷಾರಸದಿನಮರಕಾಮಿನಿಯೊರ್ವಳ್ ೬೭

ವರಪಂಚರತ್ನಮಯ ನೂ
ಪುರಂಗಳಂ ತೊಡಿಸೆ ಸತಿಯ ಪಾದಂಗಳೊಳಂ
ಪರಮನಖಚಂದ್ರಮಂಡಳಿ
ಪರಿವೇಷಂಬಡೆದುದೆಂಬಿನಂ ಕಣ್ಗೆಸೆಗುಂ ೬೮

ಚಂಚನ್ಮಣಿಕಿಂಕಿಣಿಗಳಿ
ನಂಚಿತಮಾಡಿರ್ದ ವಿವಿಧರಚನಾಯುತಸ
ತ್ಕಾಂಚನಕಾಂಚೀವಳಯಮು
ಮಂ ಚೆಲ್ವನಿತಂಬದಲ್ಲಿ ಸಾರ್ಚಿದಳೊಲವಿಂ ೬೯

ಪೊಳೆವ ಮೃಣಾಳನಾಳಚಯಮಂ ಪೊಣರ್ವಕ್ಕಿಯಮೇಲೆ ಸಾರ್ಚುವಂ
ತಿಳೆಗಧಿನಾಥವಲ್ಲಭೆಯ ಪೀನಕುಚಂಗಳಮೇಲೆ ಸಾರ್ಚಿದಳ್
ತೊಳಗುವ ಚಾರುಮೌಕ್ತಿಕಸಮುಜ್ವಳಹಾರಲತಾವಿತಾನಮಂ
ವಿಳಸಿತ ಚಾತುರೀಯುತಸುರಾಂಗನೆಯೊರ್ವಳತೀವಲೀಲೆಯಿಂ ೭೦

ಮನಸಿಜಮದಗಜದಂತದೊ
ಳನುನಯದಿಂ ಕೀರ್ತಿಮುಖಮನಿಕ್ಕುವ ತೆಱದಿಂ
ವನಿತೆಯ ಬಾಹುಗಳೊಳ್ ಮ
ತ್ತನುಪಮಮಣಿಬಾಹುವಳಯಮಂ ಕೀಲಿಸಿದಳ್ ೭೧

ಸಿರಿಸದ ಬಾಸಿಗಮಂ ವಧು
ಕರಮಾಳಿಕೆ ಬಳಸಿದಂತೆ ಮುಂಗೆಯ್ಗಳೊಳಂ
ಹರಿನೀಳದ ಕಂಕಣಮಂ
ವರಸತಿಗಿಕ್ಕಿದಳಮರ್ತ್ಯಸತಿ ಮತ್ತೊರ್ವಳ್ ೭೨

ಮರಕತಮಣಿಮುದ್ರಿಕೆಗಳ
ನರಸಿಯ ಕಡುಚೆಲ್ವ ಬೆರಳ್ಗಳಲ್ಲಿಕ್ಕಿದಳೊ
ಪ್ಪಿರೆ ದಿಗ್ವಿಜಯಾರ್ಥಂ ಶಂ
ಬರರಿಪುವ ಶರಲ್ಗಳಿಂಗೆ ಗಜೆಗಟ್ಟುವವೊಲ್ ೭೩

ಪೊಳೆವ ಕದಂಪಿನೊಳ್ ಮಕರಿಕಾದಿವಿಚಿತ್ರಿತ ಪತ್ರವಲ್ಲಿಯಂ
ವಿಳಸಿತಗಂಧಸಾರರಸದಿಂ ಬರೆದಳ್ ಸುರಕಾಂತೆಯೊರ್ವಳಂ
ದಳಿಕುಳನೀಳಕುಂತಳೆಯ ಭೂರಿವಿಳಾಸಸಮುದ್ರಗಾಧದೊಂ
ದಳವಿಯನೆಯ್ದೆ ಸಂಗಡಿಸಬಾರದುದಂ ನೆಱೆ ಪೇಳ್ವ ಮಾಳ್ಕೆಯಿಂ ೭೪

ಚಿತ್ತಭವಂ ತನ್ನಾಜ್ಞೆಯ
ನೊತ್ತಮಿಸಲ್ ಬಾರದೆಂದು ಮುದ್ರೆಯನಿಟ್ಟಂ
ತುತ್ತಮೆಯಾ ಮೂಗಿನೊಳ್ ಮಿಗೆ
ಮುತ್ತಿನ ಮೂಕುತಿಯನಿಕ್ಕಿದಳ್ ಕಡುನಲವಿಂ ೭೫

ವ: ಮತ್ತೊರ್ವಳಮರಕನ್ನಿಕೆಯಾಕೆಯ ಕರ್ಣಪಾಲಿಕೆಗಳೊಳನೇಕವರ್ಣ ಪರಿವರ್ಣನೀಯ

ಪರಾರ್ಥ್ಯರತ್ನಂಗಳಿಂ ಪರಭಾಗಂಬಡೆದ ಸುವರ್ಣಮಯ ಕರ್ಣಾ ಭರಣಂಗಳಂ ತೊಡಿಸಿ ನೋಡಿ

ಕಿವಿದೊಡವಿನ ಮಣಿಗಳು ಸು
ಚ್ಛವಿಗಲ್ಲದೊಳೆಯ್ದೆಪೊಳೆಯೆ ತಾಂಬೂಳರಸಂ
ಕವಿದಿರ್ದುದೆಂಬ ಬಗೆಯಿಂ
ದಿವಿಜಾಂಗನೆ ತೊಡೆದಳಂದು ತನ್ನಯ ಕರದಿಂ ೭೬

ನಯನಂಗಳೊಳಂಜನಮಂ
ನಯದಿಂ ರಂಜಿಸಿದಳೊರ್ವಳಮರಾಂಗನೆಯತಿ
ಶಯಿತಮನೋಭವಶರಸಂ
ಚಯಮಂ ಕಪ್ಪಿಂದೆ ಬಚ್ಚಿಸುವ ತೆಱದಿಂದಂ ೭೭

ವರಕಸ್ತೂರೀತಿಲಕಮ
ನರಸಿಯ ಕಡುಚೆಲ್ವನೊಸಲೊಳಿಟ್ಟಳ್ ಸುರಸೌಂ
ದರಿಯೊರ್ವಳ್ ನಗೆಮೊಗಮಂ
ಬುರುಚಂದ್ರಮನಲ್ಲಿ ಮೆಱೆವ ಕಱೆಯೆಂಬಿನೆಗಂ ೭೮

ವ: ಆ ದೇವಿಗೆ ದೇವಕುಮಾರಿ ಮತ್ತೊರ್ವಳ್

ಕೂದಲನೆಯ್ದೆ ಪಿಕ್ಕಿ ಪುಡಿಗತ್ತುರಿಯಂ ತಳೆದಲ್ಲಿಗಲ್ಲಿಗಂ
ಮೇದಿನಿ ತೋರಮಾಗಿ ಮುಡಿಯಂ ಮುಡಿಸಿಟ್ಟದಱಲ್ಲಿ ಕಲ್ಪಭೂ
ಚೋದಿತಪುಷ್ಪಮಂ ಪಿಡಿದು ಸೂಡಲದಾಕ್ಷಣದಲ್ಲಿ ಕಣ್ಗೆ ಚೆ
ಲ್ವಾದುದು ತಾರಕಾಳಿ ಪುದಿದಿರ್ದ ನಭಸ್ಥಳಮೆಂಬವೊಲ್ ಕರಂ ೭೯

ಪಿರಿದುಂ ಶ್ರೀಮಾಡಿದಳ್ ಸೌಖ್ಯಮನನವರತಂ ಭಾರತೀದೇವಿ ತನ್ನಾ
ದರದಿಂದಂ ಪ್ರೀತಿಯಂ ಪುಟ್ಟಿಸುವ ಬೆವಸೆಯಿಂದೆಯ್ದೆ ಮಾತಾಡಿದಳ್ ಬಂ
ಧುರರಾಗೋದ್ರೇಕಮಂ ಮಾಡಿದಳುಱೆ ಮತ್ತೆಲ್ಲರುಂ ಮಾಳ್ಪುದಂ ಬಿ
ತ್ತರದಿಂದಂ ಮಾಡುತಿರ್ದರ್ ಜಿನಜನನಿಗೆ ಸ್ಪರ್ಧೆಯಿಂದೆಂಬವೊಲ್ ತಾಂ ೮೦

ವ: ಅಂತುಮಲ್ಲದೆಯುಂ

ಶರದದ ಚಂದ್ರಮಂಡಳಮನೂನ ಕನತ್ಪರಿವೇಷಶೋಭೆಯಂ
ಧರಿಯಿಸಿತೆಂಬಿನಂ ಮೆಱೆವ ಪಲ್ಲವಸತ್ತಿಗೆಯಂ ಸಮುಜ್ವಳೋ
ದ್ಧುರತರನೂತ್ನರತ್ನಮಯದಂಡವಿಮಂಡಿತಮಂ ಸುರೇಂದ್ರಸೌಂ
ದರಿ ಪಿಡಿದಿರ್ದಳೊರ್ವಳುಱೆ ಪಟ್ಟದ ರಾಣಿಗೆ ಮುಟ್ಟಿದರ್ಥಿಯಿಂ ೮೧

ಅಮರಕುಮಾರಿಯರಾ ಭೂ
ರಮಣನ ವಲ್ಲಭೆಗೆ ಚಾಮರಂಗಳನತಿಸಂ
ಭ್ರಮದಿಂದಿಕ್ಕಿದರತ್ಯು
ತ್ತಮಕಾಂಚನದಂಡಮಂಡಿತಂಗಳನಾಗಳ್ ೮೨

ವ: ಹಡಪಮಂ ಪಿಡಿದಿಪ್ಪ ನಿಯೋಗನಿಯುಕ್ತೆಯಪ್ಪ ಮತ್ತೊರ್ವಳ್

ಕಡುವೆಳಿದಾದ ತಂಬುಲದ ಚೆಲ್ವೆಲೆಯಂ ಮಡಿಸಾಳ್ದೆರಳ್ಗಳಿಂ
ಪಿಡಿದು ಜಿನೇಶನಂಬಿಕೆಗೆ ನೀಡುತುಮಿರ್ದಳ್ ನಿಳಿಂಪಕಾಂತೆ ಸಂ
ಗಡಿಸಿದ ಪುಂಡರೀಕದಳಮಂ ಪಿಡಿದಂಬುಧಿಮಧ್ಯದಿಂದೆ ಮೇ
ಗಡರ್ವ ಸುಲಕ್ಷ್ಮಿಯಂತೆ ತಳೆದಳ್ ಸಲೆ ನೂರ್ಮಡಿಯಾದ ಗಾಡಿಯಂ ೮೩

ದರದಳಿತಮಾದ ಹೊಂದಾ
ವರೆಯಲರಂ ಪಿಡಿದು ಮೆಱೆವ ಲಕ್ಷ್ಮಿಯ ತೆಱದಿಂ
ಸುರನಾರಿಯೊರ್ವಳಾ ಭೂ
ವರನಾರಿಗೆ ಹೊನ್ನ ಡವಕೆಯಂ ಪಿಡಿದಿರ್ದಳ್ ೮೪

ಲಾಲಿಪ ಪೇರಣೆಯೊಳ್ ಮಿಗೆ
ಮೇಲೆನಿಸುವ ಕುಶಲೆ ದಿವಿಜಸತಿ ಮತ್ತೊರ್ವಳ್
ಕಾಲೇ ನಾಲಗೆಯೆಂಬಂ
ತೋಲಗದೊಳ್ ಕುಣಿದು ದೇವಿಯಂ ಮೆಚ್ಚಿಸಿದಳ್ ೮೫

ವ: ಮತ್ತಂ ಭರತಶಾಸ್ತ್ರನಿರತೆಯರಪ್ಪ ಕೆಲಂಬರ್ ದೇವಿಯರ್ ಪಿರಿದಾಗಿ ರಾಗರಸಮಂ ತುಂಬಿ ತುಳ್ಕಾಡುತ್ತುಮಿರೆ ನಾಟ್ಯಮನೊಡ್ಡಯಿಸಿದಾಗಳ್

ಕಳೆಯಂ ನೂಂಕಿ ಸಮಾನದಂಡಿಗೆಗಳಂ ಪೊಯ್ದು ಶ್ರುತಿಸ್ಫೂರ್ತಿಯ
ಗ್ಗಳಮಂ ನೋಡಿ ಸಮಂತು ತಂತಿಯನದಂ ಸಂತೈಸಿ ಪೀನಸ್ತನಂ
ಗಳ ಮೇಲೊಯ್ಯನೆ ಸಾರ್ಚಿಕೊಂಡು ಸೊರೆಯಂ ಗಂಧರ್ವೆಯೊರ್ವಳ್ ಕರಾಂ
ಗುಳಿಯಿಂ ಬೀಣೆಯನೊಲ್ದು ಬಾಜಿಸಿದಳಾ ತನ್ವಂಗಿ ಮೆಚ್ಚಲ್ ಕರಂ ೮೬

ಪಿರಿದುಂ ನುಣ್ಗೊರಳಿಂದಮೊಂದಱೊಳನೇಕಚ್ಛಂದಮಂ ತೋಱಿ ಬಂ
ಧುರರಾಗಂಗಳನುನ್ನತಪ್ರಮದದಿಂದಾಳಾಪನಂಗೆಯ್ದು ನಿ
ರ್ಜರ ಸೀಮಂತಿನಿಯೊರ್ವಳಾಕೆಯ ಗುಣಸ್ತೋತ್ರಾಂಕಗೀತಂಗಳಂ
ಭರದಿಂದಂ ನೆಱೆಪಾಡಿ ಮೆಚ್ಚಿಸಿದಳಾ ಭೂಪಾಳನರ್ಧಾಂಗಿಯಂ ೮೭

ವ: ಮತ್ತಂ

ಧಿಂ ಧಿಂ ಧಿಮಿಕ್ಕು ಧಿಮಿಕೆಂ
ದಿಂದೀವರಲೋಲಲೋಚನೆಯ ಮುಂದೊಲವಿಂ
ವೃಂದಾರಕ ವಧುವೊರ್ವಳ್
ಕುಂದವ ಜಾಣಿಂದ ಮುರಜಮಂ ಬಾಜಿಸಿದಳ್ ೮೮

ರಂಭೆಯದೊರ್ವಳ್ ನಯದಿಂ
ದಂ ಭಾಮೆಯ ಮುಂದೆ ಚಂದ್ರಕಾಂತದ ಕಡುಪಿಂ
ಭೊಂ ಭೊಂ ಭೊಂ ಭೊಂಬೆಂಬೀ
ಶುಂಭಧ್ವನಿ ಪೊಣ್ಮೆ ಢಕ್ಕೆಯಂ ಬಾಜಿಸಿದಳ್ ೮೯

ಹೊನ್ನಿನ ಕಹಳೆಗಳಂ ಪೊಸ
ರನ್ನದ ವಾಸಂಗಳಂ ಸುಶಂಖಂಗಳುಮಂ
ಚೆನ್ನಿನ ಮೌರಿಗಳಂ ಸುರ
ಕನ್ನೆಯರೊರ್ವೊರ್ವರೂದಿದರ್ ಕಡುನಲವಿಂ ೯೦

ದಿವಿಜಸ್ತ್ರೀಯೊರ್ವಳಾ ಪಟ್ಟದ ಯುವತಿಯ ಮುಂದಂದು ತನ್ನಂತರಂಗೋ
ತ್ಸವದಿಂದಂ ತಾಂಡವಾಡಂಬರಮನೊಡರಿಸಲ್ ಚಾರುಮಾಣಿಕ್ಯಭೂಷಾ
ರವಮುಂ ನಾನಾಸುತಾಳಧ್ವನಿಯುಮೊಡನೆ ಮೇಳೈಸಿ ಹಸ್ತಾಂಘ್ರಿಸಂಚಾ
ರವಮುಂ ಚೆಲ್ವಾಗೆ ದೇಹಪ್ರಭೆಯೊಡನೆ ದಲಾಡುತ್ತುಮಿರ್ದಳ್ ವಿಚಿತ್ರಂ ೯೧

ಆವುದಪೂರ್ವಮಾದುದು ದಲಾವುದು ಭಾವಿಪೊಡಿಷ್ಟಮಾದುದಂ
ತಾವುದು ಮೂಜಗಲೋಕದೊಳಮುತ್ತಮಮಾದುದುಮಂತದೆಲ್ಲಮಂ
ದೇವಿಯರೊರ್ವರೊರ್ವರ ಮಹಾಕುಶಲತ್ವದ ವೃತ್ತಿಯಂ ಸಮಂ
ತಾವಗಮೆಯ್ದೆ ಮೀಱುವುದಱಿಂದೆನೆ ಮಾಡಿದರಂಬುಜಾಕ್ಷಿಗಂ ೯೨

ಗದ್ದಿಗೆಯಿಕ್ಕು ನಂದೆ ಪಡಿಗಂಗೊಡು ಮಾಳಿನಿ ಕುಂಭದಲ್ಲಿ ಕಂ
ಪಿದ್ದ ಜಲಂಗಳಂ ವಿಜಯೆ ತೀವುಱೆ ಕಾಳ್ದೊಳೆ ವೈಜಯಂತಿ ನೀ
ನೆದ್ದು ಸುವರ್ಣಭಾಜನಮನಾಯಿತಮಾಗಿಡು ಸುಪ್ರಬುದ್ಧೆಯೆಂ
ದುದ್ದದೆ ಪೇಳ್ದು ಸಂಭ್ರಮಿಸಿದತ್ತೆಡೆಮಾಡುವ ಪೊತ್ತಿನೊಳ್ ಕರಂ ೯೩

ಅನಿಮಿಷಕಾಂತೆಯರ್ ವರರಸಾಯನಸಾರದಿ ಚಾರುಗರ್ಭಶೋ
ಧನೆಯನೊಡರ್ಚೆ ದೇವಿಯ ಮನೋಹರಮೂರ್ತಿ ನಿರೀಕ್ಷಣಕ್ಕೆ ಪಾ
ವನಮೆನಿಸಿತ್ತು ಮತ್ತಮೃತವಾರಿಯ ಪೀವರಧಾರೆಯಿಂ ಪಳ
ಚ್ಚನೆ ತೊಳೆದಿರ್ದ ಪೊಚ್ಚ ಪೊಸಮುತ್ತಿನ ಪುತ್ಥಳಿಯೆಂಬ ಮಾಳ್ಕೆಯಿಂ ೯೪

ವ: ಇಂತಾ ಜಿನಾಂಬಿಕೆಯಂ ಬಗೆಗೊಳಿಸಲೆಂದಾ ನಿಳಿಂಪವಿಳಾಸಿನಿಯರೀ ತೆಱದ ಬಾಹತ್ತರ

ನಿಯೋಗಮುಖದಿಂದಾಕೆಗುಪಾಸನಂಗೆಯ್ವುತ್ತುಂ ಕೆಲವುದಿನಂಗಳ್ ಪೋದಿಂಬಳಿಯ ಮನಲ್ಪತರಭಾವಿಫಲ ಲಾಭಾರ್ಥಂ ಕಲ್ಪತರುಶಾಖೆ ಪುಷ್ಪವತಿಯಪ್ಪುದೆಂದಂತಾ ಸುವ್ರತಾಮಹಾದೇವಿಯುಂ ಧರ್ಮತೀರ್ಥಕರನೆಂಬ ಭವಿಷ್ಯಮಾಣ ವಿಶಿಷ್ಟೇಷ್ಟ ವಿಪುಳಫಳೋದಯಲಾಭಪ್ರಾಪ್ತಿನಿಮಿತ್ತಂ ಪುಷ್ಪವತಿಯಪ್ಪುದುಂ

ಸರಸಿಜವಕ್ತ್ರೆಗುತ್ಪಳದಳಾಯತನೇತ್ರೆಗೆ ಕುಂದಕುಟ್ಮಳೋ
ದ್ಧುರತರದಂತಪಂಕ್ತಿಕೆಗೆ ಚಂಪಕನಾಸಿಕೆಗುದ್ಧಪಾಟಳಾ
ಧರೆಗೆ ಸುಕೇತಕೀನಖಿಗೆ ಚಾರುವಿಕಾಸಿ ಶಿರೀಷದಾಮ ಸೌಂ
ದರತನುಗಿಂತು ಪುಷ್ಪವತಿಯೆಂಬಿದು ಸಾರ್ಥಕಮಾಗದಿರ್ಪುದೇ ೬೫

ಮೊಲೆಗಳ್ ಕೆತ್ತಿದುವಾಗಳ್
ಮೊಲೆಗಳ ಸಂಧಿಗಳೊಳೆಯ್ದೆ ನಸುಬೆಮರೊಗೆದುದು
ನಳಿನಾಕ್ಷಿಗೆ ಋತುಸಮಯಂ
ತಲೆದೋಱಿದ ಪೊತ್ತಿನಲ್ಲಿದಾದುದು ಚಿಹ್ನಂ ೬೬

ವ: ಮತ್ತಂ ಕಡೆಯಾಣಿಯ ಮಿಱುಗುವ ಮಿಸುನಿಯಂ ಸಮೆದ ಚೆಲುವ ಜಗಲಿಯ ಮೇಲೆ ಕುಳ್ಳಿರ್ದು ಬಾಲಕರ್ ಮೊದಲಾದಱಿಯದನ್ಯಜನಸಂಸ್ಪರ್ಶಪರಿ ಹರಣಾರ್ಥಂ ವಜ್ರಂಗಳಿಂ ಕೇವಣಿಸಿದ ಹೊನ್ನ ಸೆಳೆಯುಂ ಪಿಡಿದು ಚಾಳನಂಗೆಯ್ವುತ್ತುಂ ಸುರಕುಮಾರಿಯರೊಡನೆ ಪ್ರಹೇಳಿಕಾವಿನೋದದಿಂ ಪೊತ್ತಂ ಕಳೆವುತ್ತುಮಿರ್ದು ಮೂಱು ದಿನಂಗಳ್ ಪೋಗಲೊಡಂ

ಋತುಸಮಯದೊಳೊಪ್ಪಿದಳಾ
ಸತಿ ಭರದಿಂದಂ ವಸಂತಋತುಸಮಯದೊಳೊಗೆ
ದತಿಕೋಮಳಲತೆಯಂತುಪ
ಗತವಿಭ್ರಮಿಕೆ ಪ್ರವಾಳವಿಳಸಿತೆ ಪಿರಿದುಂ ೬೭

ವ: ಬಳಿಯಂ ನಾಲ್ಕನೆಯ ದಿವದೊಳ್ ಮಜ್ಜನಂಬುಗಿಸುವುಜ್ಜುಗಂ ಕೈಮಿಗಲಪ್ಸರಸೆಯರ್ ಕೊಪ್ಪರಿಗೆಗಳೊಳಮಳಜಳಂಗಳಂ ತುಂಬಿಯಗ್ನಿಸಂಧುಕ್ಷಣಂಗೆಯ್ಯೆ ಕಡುಗಾಯ್ದೂಷ್ಮಾಯ ಮಾಣಮಾದ ಜಳಂ ತೆರೆಮಸಗಿ ಕಟಾಹಕೋಟರಾಂತರಾಳದಿಂದುಕ್ಕಿ ಪೊಱಪೊಣ್ಮುತ್ತಿರೆ

ಶಂಬರವೈರಿಯ ಶರಗಳಿ
ವೆಂಬಂದದಿನೆಸೆವುತಿರ್ದ ಸುರನಾರಿಯರುಂ
ಶಂಬರಮಂ ಮಱುಗಿಸಿದರ್
ಸಂಬಂಧಿ ವಿರೋಧಿಗಳ್ಗೆ ಮುಳಿಯದರೊಳರೇ ೬೮

ವ: ತದನಂತರಂ

ಕಮ್ಮೆಣ್ಣೆಯಿಂದೆ ಮಜ್ಜನ
ಮಂ ಮಾಡಿಸಿದರ್ ನಿಳಿಂಪಕಾಂತೆಯರೊಲವಿಂ
ದಂ ಮಿಗೆನೀರ್ದಳಿವಂತಿರೆ
ರಮ್ಯಾಳಕವಲ್ಲಿಗಮಿತನಖಕಾಂತಿಗಳಿಂ ೯೯

ಪಿಕ್ಕಿದರಳಕಮನುಗುರ್ಗಳಿ
ನುಕ್ಕೆವದಿಂ ಚಂದ್ರಕಳೆಗಳಂ ರಾಹು ಕರಂ
ಮುಕ್ಕುಳಿಸುಗುಳುತುಮಿರ್ದಪು
ದಕ್ಕುಮಿದೆಂಬೊಂದು ಸಂಕೆಯಂ ಪುಟ್ಟಿಸುತುಂ ೧೦೦

ವ: ಬಳಿಯಂ ಜಾಂಬೂನದಮಯಮಾದ ಸ್ನಾನಸ್ಥಾನದ ನಟ್ಟನಡುವೆ ಪೊಳೆಯುತ್ತುಮಿರ್ದ ಚಂದ್ರಕಾಂತ ಚತುರಾಘಾಟಪಟ್ಟಕದ ಮಧ್ಯದಲ್ಲಿ ಕುಳ್ಳಿರಿಸಿ

ಸ್ತನಕುಂಭಸ್ಥಳೆಯರ್ ಮದಾನ್ವಿತೆಯರತ್ಯಂತಾಲಸಾಯಾನೆಯರ್
ವಿನುತಾನಂಗಮಹೀಪದಂತಿನಿಗಳೆಂಬಂತಿರ್ದ ದೇವೇಂದ್ರನಂ
ಗನೆಯರ್ ಕೈಗಳಿನೆತ್ತಿಕೊಂಡು ಬಿಸಿನೀರಿಂ ತುಂಬಿರ್ದ ಸ್ವರ್ಣಪಾ
ವನಕುಂಭಂಗಳನಂತು ನೀರೆಱೆದರೆಂತು ಶ್ರೀಗಿಭಂಗಳ್ ಕರಂ ೧೦೧

ಕಮಳಿನಿಯ ಮೇಲೆ ಪಿರಿದುಂ
ದ್ಯುಮಣಿಯ ಕಿರಣಂಗಳೆಱಗಿ ಸುರಿವಂತಿರೆ ಸ
ತ್ಕಮಳಾಕ್ಷಿಯ ಮೇಲೆಱಗಿದು
ದಮಳಿನ ಕಮಳಪ್ರವಾಹಮತಿಸಂಭ್ರಮದಿಂ ೧೦೨

ಸಾರತೆ ಜಳದೊಳಮೊಪ್ಪುವ
ಧಾರೆಗಳೊಡಗೂಡಿ ಭುವನದೊಳ್ ಪೊಳೆವುದಱಿಂ
ದಾ ರಮಣಿ ಕಾಮದೇವನ
ಕೂರಸಿಯೆಂಬಿದನೆ ನಿಶ್ಚಯಂಗೆಯ್ದಳ್ ತಾಂ ೧೦೩

ವ: ಆಗಳ್

ಭೂಷಣಮೆಲ್ಲಮಂ ತೆಗೆದು ನೈಜಸುರೂಪದೊಳಿರ್ದೊಡಂ ಮರು
ದ್ಯೋಷೆಯರೊಳ್ನೊಸಲ್ಗಳೊಳಮಂದು ಕೊರಲ್ಗಳೊಳಂ ಸಮಂತು ಸಂ
ಪೋಷಿಸಿದುದ್ಘಘರ್ಮಜಳಬಿಂದುಗಳಿಂದುಱೆ ಬೇಱದೊಂದು ವೈ
ಶೇಷಿತರೂಪಮಂ ತಳೆದು ಪುಟ್ಟಿಸಿದರ್ ನಯನಪ್ರಮೋದಮಂ ೧೦೪

ವ: ಅಂತು ಚತುರ್ಥಸ್ನಾನವಿಧಾನಾನಂತರಂ ಶುದ್ಧೀಕೃತಶರೀರೆಯಾಗಲ್ಲಿಂ ಪೊಱಮಟ್ಟು

ಶೃಂಗಾರಾಗಾರಕ್ಕೆ ಮೆಲ್ಲಮೆಲ್ಲನೆ ಬಿಜಯಂಗೆಯ್ವುದುಮಾಗಳಾ ತುಂಗಸ್ತನೆಯ ಮಂಗಳಮಾದಂಗಳದೊಳಂಗವಟ್ಟಮಂ ಸಂಗಡಿಸಿದಿಂಬಳಿಯಂ

ಬೆಳುದಿಂಗಳ ಧಾವಲ್ಯಮ
ನಿಳಿಕೆಯ್ವುತ್ತಿರ್ದ ಬಿಳಿಯ ಪಟ್ಟಾವಳಿಯಂ
ನಳಿನಾಕ್ಷಿಗೆ ತಂದುಡಿಸಿದ
ಳೊಲಿದೊರ್ವಳ್ ದಿವಿಜಕಾಂತೆ ಕಡುಜಾಣಿಂದಂ ೧೦೫

ಹರಿಚಂದನಕಲ್ಕಮನೊ
ಲ್ದರಸಿಯ ಮೆಯ್ಯಲ್ಲಿ ಪೂಸಲಂತಾಕ್ಷಣದೊಳ್
ಶರದದ ಮುಗಿಲಾವರಿಸಿದ
ಸುರಗಿರಿಶಿಖರಂ ದಲೆಂಬಿನಂ ಕಣ್ಗೆಸೆದಳ್ ೧೦೬

ಮುತ್ತಿನ ತೋಳಬಂದಿ ಪೊಸಮುತ್ತಿನ ಚೊಳಿಕೆ ಮುತ್ತಿನ್ಯೆಸರಂ
ಮುತ್ತಿನ ಸೂಡಗಂ ಪೊಳೆವ ಮುತ್ತಿನ ಕಂಕಣಮೆಯ್ದೆ ಮುತ್ತಿನಿಂ
ಬಿತ್ತರಿಸಿರ್ದ ನೂಪುರಮದೊಪ್ಪುವ ಮುತ್ತಿನ ನೇವುರಂ ದಲೆಂ
ದುತ್ತಮಮಾದ ಭೂಷಣದಿ ಭೂಷಿಸಿದರ್ ಸುರಕಾಂತೆಯರ್ ಕರಂ ೧೦೭

ಮುತ್ತಿನ ದಂಡೆ ಮುತ್ತಿನ ಲಸತ್ತಿಲಕಂ ಸುರಿಮುತ್ತಿನೋಲೆಯೊಳ್
ಮುತ್ತಿನ ಪೆಂಡೆಯಂ ಮಿಸುಪ ಮುತ್ತಿನ ಕೊಪ್ಪುಱೆ ಮುತ್ತಿನುಂಗುರಂ
ಮುತ್ತಿನ ಪಿಲ್ಲಿಯೆಂಬ ಸದಲಂಕರಣಂಗಳನೆಯ್ದೆ ತೊಟ್ಟು ತಾಂ
ಮುತ್ತಿನ ಬೊಂಬೆಯೆಂಬ ಬಗೆಯಂ ನೆಱೆ ಪುಟ್ಟಿಸುತಿರ್ದಳಾಕ್ಷಣಂ ೧೦೮

ವ: ಇಂತು ಬೆಳುವಸದನಂಗೆಯ್ದಾಗಳ್

ವರಕರ್ಪೂರದ ಘಟ್ಟಿಯಂ ಕಡೆದು ನಾನಾ ಕೌಶಲೋತ್ಕರ್ಷನಿ
ರ್ಭರದಿಂ ಪುತ್ಥಳಿಯಂ ವಿನಿರ್ಮಿಸಿದವೊಲ್ ಚೆಲ್ವಿಂಗೆ ಪಕ್ಕಾದಳಾ
ಧರಣೀವಲ್ಲಭಚಿತ್ತವಲ್ಲಭೆ ಮಹಾಸೌಗಂಧ್ಯಸಂಬಂಧಬಂ
ಧುರೆ ತಾಳ್ದಳ್ ಪರಿನಿರ್ಮಳಾಭರಣದಿಂ ಶೃಂಗಾರಿತಾಕಾರಮಂ ೧೦೯

ಮಿಗೆ ಸುಮನೋರಮಾರ್ಪಿತ ವಿರಾಜದಲಂಕರಣಂ ಪ್ರಸಾದ ಚಾ
ರುಗುಣವಿಶೇಷಯುಕ್ತನುಪಸಾರಿತದೋಷಮಶೇಷಲಾಲಿತಂ
ಸೊಗಯಿಪ ಶುದ್ಧವಿಗ್ರಹಮನಾಂತು ಕವೀಶ್ವರವಾಣಿಯಂತೆ ಭೂ
ಮಿಗೆ ಕಡುಜಾಣೆ ರಾಣಿ ರಮಣೀಯತೆಯಂ ಪಡೆದಿರ್ದಳಾಕ್ಷಣಂ ೧೧೦

ವ: ಮತ್ತಂ ಕಡೆಗಣ್ಗಳುಗುಳ್ವ ಕುಡಿವೆಳಗಿಂ ಮುಡಿದ ಮಲ್ಲಿಗೆಯಚ್ಚಬಾಸಿಗಂ ದ್ವಿಗುಣಿಸೆಯುಂ

ದರಹಾಸ ವಿಳಾಸದೊಳ್ ಪುದಿದ ಥಳಥಳಪ ಸುಲಿಪಲ್ಗಳ ಪೊಳೆಪಿಂ ಪೊಸಮುತ್ತಿನ್ನೆಸರದ ಕಾಂತಿಯ ಮೊತ್ತಂ ತ್ರಿಗುಣಿಸೆಯುಂ ಕೊರಲೊಳಿಕ್ಕಿದ ಮುಕ್ತಾ ಫಳಹಾರ ಕಿರಣದೊಳ್ ಕೂಡಿದ ಪೂಸಿದ ಹರಿಚಂದನ ಚರ್ಚೆಯೊಳೊಂದಿದ ಬೆಳ್ವಸದನದ ನುಣ್ಬೆಳಗಿಂದುಟ್ಟ ದುಕೂಲಚೇಲದ ಧಾವಲ್ಯಂ ಚತುರ್ಗುಣಮಾಗಿಂತು ಚೆಲ್ವುವೆತ್ತಾ ದೇವಿಯ ದೇಹಯಷ್ಟಿಗೆ ಪೊಸತಾಗಿ ನಿರ್ಮಿಸಲ್ಪಟ್ಟ ಬೆಳ್ವಸದನಂ ನೋಳ್ಪರ ಕಣ್ಗಾನಂದಮಂ ಸಂಪಾದಿಸುತ್ತುಮಿರೆ

ಸೊಗಯಿಪ ಬೆಳ್ವಸದನಮಂ
ಮೃಗಶಾಬ ವಿಶಾಲನೇತ್ರೆ ಕೈಕೊಂಡಾಗಳ್
ಮಿಗೆ ತಣ್ಗದಿರಾವರಿಸಿದ
ಮೃಗಧರಮಂಡಳಿಯವೊಲ್ ವಿರಾಜಿಸುತಿರ್ದಳ್ ೧೧೧

ವ: ಅಂತಾ ಪಟ್ಟದರಸಿ ಪೊಸತಾಗಿಯತಿಶಯದಿಂ ಬೆಳುವಸದನಂಗೆಯ್ದು ನಂತರಮಾಕೆಯ ಮುಂದೆ ಸುರಕುಮಾರಿ ಮತ್ತೊರ್ವಳ್

ಭುಜಶಿಖರಾಗ್ರದಲ್ಲಿ ಘನಕುಂಕುಮದಿಂ ಬರೆದಿರ್ದ ಪತ್ರಕ
ವ್ರಜದಿನತೀವರಮ್ಯಮೆನಿಸಿರ್ದ ಸುಬಾಹುಲತಾಪ್ರಕಾಂಡದ
ಲ್ಲಜನಿಸಿ ತೋರ್ಪ ಸತ್ಕುಸುಮಮಂಜರಿಯೆಂಬಿನಮೊಪ್ಪಮಂ ಕರಂ
ಭಜಿಸಿದ ರುಂದ್ರದರ್ಪಣಮುಮಂ ಪಿಡಿದಿರ್ದಳೊರ್ವಳರ್ಥಿಯಿಂ ೧೧೨

ಮಡದಿಯ ಮುಖದಿಂದೆನಗಿಂ
ದೊಡರಿಸಿದುದು ಬನ್ನಮೆಂಬ ಚಿಂತೆ ಕರಂ ಸಂ
ಗಡಿಸಿ ಕರಗುವವೊಲೊಸರ್ದುದು
ನಡೆನಯನಂ ಚಂದ್ರಕಾಂತಮಣಿಮಯಮುಕುರಂ ೧೧೩

ವ: ಮತ್ತಂ

ಥಳಥಳಿಪ ಚಂದ್ರಕಾಂತೋ
ಪಳದಿಂದಂ ಸಮೆದ ಚೆಲ್ವ ಪಾವುಗೆಗಳನು
ಜ್ವಳಿತಾಂಗಿಯ ಮುಂದಿರಿಸಿದ
ಳಿಳೆಯೊಳ್ ಗೀರ್ವಾಣರಮಣಿಯತ್ಯಾದರದಿಂ ೧೧೪

ಕಾಲ ಪಳಂಚಿನುಂಗುರದ ಮೆಲ್ಲುಲಿಯಿಂದಮೆ ಪೇಳ್ದು ತಮ್ಮಲೀ
ಲಾಲಸಯಾನಮಂ ಕಳಮರಾಳಯುಗಂಗಳಿಗೆಯ್ದೆ ಶಿಕ್ಷಿಪಂ
ತಾ ಲಲಿತಾಂಗಿ ಪಾವುಗೆಗಳಂ ನಿಜಪಾದತಳಂಗಳಿಂದೆ ಸಂ
ಲಾಲಿತಮಾಗಿ ಮೆಟ್ಟಿ ನಡೆತಂದಳನೂನಮನೋನುರಾಗದಿಂ ೧೧೫

ವ: ಅಂತು ಬಂದು ದೇಹಾರಾಗಾರಮಂ ಪೊಕ್ಕು ವೀತರಾಗಶ್ರೀಚರಣ ಸಮಾರಾಧನಂಗೆಯ್ದು ಬಳಿಯಮಾರೋಗಣೆಯಂ ಮಾಡಿ ತದನಂತರಮಾ ಶತಪತ್ರನೇತ್ರೆ ರಾಗರಸಪಾತ್ರೆಯಾಗಿ ರಾತ್ರಿಯೊಳ್ ಮೇಳದ ಕೆಳದಿಯರೊಡಗೂಡಿ ತಮ್ಮಯ ಬೆಳಗಿಂದಿರುಳಾದೊಡಂ ಪಗಲಂ ಪುಗಿಸುತ್ತುಮಿರ್ಪ ಕೈದೀವಿಗೆಗಳ ನಟ್ಟನಡುವೆ ಕಾಮವಿಕಾರ ಕಾರಣೋಪಕರಣಸಜ್ಜೀಕೃತಮಾದ ಸೆಜ್ಜಾಗೃಹಕ್ಕೆ ಮೆಲ್ಲನೆ ಬಿಜಯಂಗೆಯ್ದಾಗಳ್

ರಾಗಿಣಿಯ ಪದಸ್ಪರ್ಶದೆ
ರಾಗಂಬಡೆದುದು ಸುರತ್ನಕುಟ್ಟಿಮಭೂಮೀ
ಭಾಗಂ ಚೈತನ್ಯಯುತಂ
ರಾಗಾವಿಳನಪ್ಪನೆಂಬಿದೊಪ್ಪದೆ ಜಗದೊಳ್ ೧೧೬

ವ: ಇಂತು ಬಂದು ಬಾಳದ ಬೇರ್ಗಳಿಂ ಸಮೆದ ಕೇರ್ಗಳೊಳ್ ಪನ್ನೀರಂ ತಳಿಯಲ್ಕಿಂಬಾದ ತಂಬೆರಲ ವಶದಿಂ ಮೇಲೆ ಬೀಳ್ವ ತುಮತುರ್ವನಿಗಳಿಂದಂ ಕಪ್ಪುರದ ಧೂಳಿಯ ಕಂಪಿನಿಂ ಸೊಂಪುವಡೆದ ಚಂದನಕರ್ದಮಸ್ಥಾಸಕದ ವಾಸನೆಯುನಾಸೆಗೆಯ್ದು ಬಂದ ತುಂಬಿಗಳೆಂಬಂತಿರ್ದುಪಹಾರದ ಕನ್ನೆಯ್ದಲ್ಗಳಿಂ ಮತ್ತಮಲ್ಲಿ ಬಿಳ್ದಿರ್ದ ಕತ್ತುರಿಯ ಪರಿಮಳವಿಳಾಸಕ್ಕೆ ಸೋಲ್ತು ಕಂದಿ ಸುಗಿದು ನುಸುಳ್ಗಂಡಿಯಿಂ ನುಸುಳ್ದೋಡುವಂತೆ ಗವಾಕ್ಷಜಾಳದಿಂ ನುಗುಳ್ದು ಪೋಪ ಕಾಳಾಗರುವಿನ ಹೊಗೆಗಳಿಂ ಮನಂಗೊಳಿಪ ಸಜ್ಜಾಗೃಹಮಂ ಪುಗುವುದುಂ

ಚಂಚದನೂನಚಿತ್ರಯುತಕಾಂಚನಮಂಚದ ಮೇಲೆ ಚೆಲ್ವುವೆ
ತ್ತಂಚೆಯ ತುಪ್ಪುಳಿಂ ಸಮೆದ ಪಾಸುಗೆಗಳೇಳುಮನಿಕ್ಕಿ ಸಮ್ಮದಂ
ಸಂಚಿಸೆ ಮೇಲೆ ಮೇಲ್ಮಡಿಕೆ ಮತ್ತೆ ದುಕೂಲ ಪರಿಚ್ಛದಂಗಳಂ
ಪ್ರಾಂಚಿತಮಾಗಿ ಪಾಸಿದೊಡೆ ಪುಟ್ಟಿಸುತಿರ್ದುದದಂದು ರಾಗಮಂ ೧೧೭

ವ: ಅಂತು ಪಾಲಿಂಗಡಲ ತೆರೆಯಡಂಗಿದ ತಾಣದೊಳ್ ನಿಶ್ಚಳಮಾಗಡಿ ಕಿಲ್ಗೊಂಡ ಫೇನಪಿಂಡಂಗಳೆಂಬ ಬಗೆಯನೊಗೆಯಿಸುತ್ತಿರ್ದಡುಕುವಾಸುಗಳ ಮೇಲೆ ಬುದ್ಬುದಾಯ ಮಾನ ಕುಸುಮೋಪಹಾರದಿಂ ರಮಣೀಯಮಾದುದಂ ಕಂಡದಱ ಮೇಲೆ ಕುಳ್ಳಿರ್ದಾಗಳ್

ಪಾಲ ಬಿಂದುಗಳ ಮೊತ್ತಂ
ಮೇಲುಱೆ ಕವಿದಿರ್ದು ನೆಗೆವ ಲಕ್ಷ್ಮಿಯ ತೆಱದಿಂ
ಲಾಲಿತ ಮುಕ್ತಾಭರಣದ
ಮೇಳವದಿಂದಬಳೆ ತಳೆದಳತಿಶಯರೂಪಂ ೧೧೮

ವ: ಮತ್ತಮುದ್ರಿಕ್ತಮಾದ ಕಾಮವಿಕಾರೋತ್ಕರ್ಷಸಮಾಕರ್ಷಣನಿಮಿತ್ತಂ ಮಾಡಿದೌಷಧದ ಘಟಿಕಾಪೇಟಕಂಗಳೆಂಬಂತಿರ್ದ ಕರ್ಪೂರತೈಲದಿಂ ಘೋಳಿಸಿದ ಮೇಲುವತ್ತಿಯಾದಡಕೆಯ

ಭಾಗಂಗಳಿಂದಂ ನಿನ್ನಯ ರಂಗದ ಪಾಂಗಂಗಳೆಂಬ ಮೋಹನ ಬಾಣಂಗಳಿಂ ಜಗಂಗಳನೊರ್ವೊರ್ದಲೊಳೆ ಭಂಗಂಬಡಿಸುವೆನೆಂಬೀ ಪ್ರತಿಜ್ಞೆಯಿಂದನಂಗಂ ತದನಂಗವತಿಗೆ ಭಾಷಾಪತ್ರಂಗಳಂ ಕೊಟ್ಟನೆಂಬಂತಿರ್ದ ಕಡುಚೆಲ್ವನಾಗಿ ಚಿಬ್ಬಂಪೊಯಿದು ನೇರ್ಪಿಂಗಡರ್ಪಾದ ನಾಗವಲ್ಲೀಪತ್ರಂಗಳಿಂದಂ ಕರ್ಪೂರಚೂರ್ಣಪರಿಮಿಶ್ರೀಕರಣದಿಂ ಸೆಜ್ಜಾನಿಶಾಂತಭ್ಯಂತರಮಂ ಸುಗಂಧೀಕರಿಸುತ್ತುಮಿರ್ದತಿಬಹಳಧವಳಿತೆಯನಾಂತು ಖಂಡಿತಪರ್ಣಂಗಳಲ್ಲಿ ಲಘುಪಿಂಡಂಗಳಾಗಿಟ್ಟ ಸುಸ್ನಿಗ್ಧಚೂರ್ಣಂಗಳಿಂ ತುಂಬಿದ ರಜತ ಭಾಜನಂಗಳುಮಂ ನಾನಾವಿಧರಚನಾವಿಶೇಷಸಂಸ್ಕೃತಮಾಗಿ ಬಹಳತರಸುಗಂಧಿದ್ರವ್ಯ ಸಂಬಂಧಾಧಿವಾಸನದಿಂ ಮನೋಹರಮಾದ ಪರಮಾಮೃತರಸಸಮಾಸ್ವಾದಸೋದರೀ ಭೂತನೂತನಶೀತಳಪಾನೀಯಪರಿಪೂರ್ಣಕುಂಭಗಳುಮಂ ಅವ್ಯಕ್ತಮಾದ ಕಾಮನಂ ರಾಗೋಜ್ಜೃಂಭಣಮುಖದಿಂ ವ್ಯಕ್ತಮಾಗಿ ತೋಱಿಸುವಂತೆ ಸುತ್ತಲುಂ ಥಳಥಳಿಸಿ ಪೊಳೆಯುತ್ತುಮಿರ್ದ ರತಿಸಮುದ್ದೀಪಕಮಾದ ಮಾಣಿಕ್ಯಮಯದೀಪಕಳಾಪಂಗಳುಮಂ ಕಾಮೋದ್ದೀಪೀಕರಣಪ್ರವೀಣ ನಾನಾಪ್ರಕಾರೋಪಕರಣಕಿರಣಗಣಂಗಳ ರಮಣೀಯತೆ ಯುಮಂ ಕಂಡು ಕಡುಪಿರಿದುಂ ರಾಗರಸಂ ತನ್ನಯ ಮನದೊಳೊಗೆಯಲದಱ ಭಾರದಿಂ ಮಲಂಗುವಂತೆ ಸೋಪಧಾನಶಯನೀಯದ ಮೇಲೆ ಮೆಲ್ಲನೆ ಮಲಂಗುವುದುಂ

ಚರಣತಳಂ ಮೃದುವೋ ಮೇಣ್
ಸರಸಿರುಹಂ ಮೃದುವೊಯೆಂದು ಪರಿಕಿಪ ತೆಱದಿಂ
ಕರತಳದಿಂದೊತ್ತಿದಳಂ
ದರಸಿಯ ಪದತಳಮನಮರಕಾಮಿನಿಯೊರ್ವಳ್ ೧೧೯

ವ: ಅಂತಿರ್ಪುದುಮಿತ್ತಲಾ ಮಹಾಸೇನಮಹಾರಾಜಂ ಗರ್ಭಾಧಾನಮೆಂಬ ಮಂಗಳ ವಿಧಾನಮನಂಗೀಕರಿಸಿದಿಂಬಳಿಯಂ

ಅನುಪಮರಚನಾಚಿತ್ರಿತ
ಘನಪರಿಧಾನೋತ್ತರೀಯಕಂ ಮಣಿಮಯ ನೂ
ತನಭೂಷಣ ಪರಿಭೂಷಿತ
ನನುಲೇಪನಶೋಭಿತಾಂಗನಾಗಿ ನರೇಂದ್ರಂ ೧೨೦

ವ: ಸೆಜ್ಜಾಗೃಹಪ್ರವೇಶಯೋಗ್ಯ ಕತಿಪಯಾಂಗರಕ್ಷಕಜನಂಬೆರಸು ವಿಚಿತ್ರ ವೇತ್ರಧರಪುರಸ್ಸರಂ ಸೆಜ್ಜೆವನೆಗೆ ಬಿಜಯಂಗೆಯ್ವುದುಮಾಗಳ್ ಬೆಳುವಸದನದ ಪೊಸ ದೇಸೆಯಂದೆಸೆ ಯುತ್ತುಮಿರ್ದ ತತ್ಸುವ್ರತಾಮಹಾದೇವಿ ನಿಪ್ಪೊಸತಪ್ಪ ಕಪ್ಪುರದ ಲೆಪ್ಪದ ಪೆಣ್ಣೆಂಬಂತೆ ಕಣ್ಗೆ ಸೊಗಸನಜನಿಸುತ್ತುಮತಿಸಂಭ್ರಮದಿನಿದಿರೆಳ್ದು ನಿಂದಿರ್ಪುದುಂ

ಶರದದ ಮುಗಿಲೊಡ್ಡುಗಳೊಳ್
ಪರಿಪೂರ್ಣಶಶಾಂಕನಿರ್ಪ ತೆಱದಿಂದರಸಂ

ವರಹಂಸತೂಳತಳ್ಪದೊ
ಳುರುಮುದದಿಂದರಸಿವೆರಸು ತಾಂ ಕುಳ್ಳಿರ್ದಂ ೧೨೧

ವ: ಅನಂತರಂ

ಚತುರಪರಿಹಾಸವಚನಾ
ಮೃತಚಂದ್ರಿಕೆಯಿಂದೆ ನರಪಮುಖವಿಧುಬಿಂಬಂ
ಸತಿಯ ಮನಃಕುಮುದಮನುರು
ರತಿರಸಮಂ ಬಿಡದಲರ್ಚಿಸಿತ್ತು ನಿತಾಂತಂ ೧೨೨

ಸ್ಮಿತಧವಳಕಮಳದೊಳ್ ಮ
ತ್ತತಿಶಯಹಂಸಂ ಸ್ವಹಂಸೆಯಂ ಸೋಂಕುವವೊಲ್
ಪತಿ ನಿಜಸತಿಯಂ ಸೋಂಕಿದ
ನತುಳಿತತಳ್ಪದೊಳು ರಾಗರಸದೊದವಿಂದಂ ೧೨೩

ರತಿಸಾಗರದೊಳಗೋಲಾ
ಡುತುಮಿರ್ದಾ ನೃಪತಿಯುಂ ಮಹಾದೇವಿಯುಮೆ
ಯ್ದತನು ಬಿಡದಾಡಿಸುತ್ತಿ
ರ್ದತಿಶಯಪುತ್ರಿಕೆಗಳೆಂಬ ತೆಱದಿಂದಾಗಳ್ ೧೨೪

ವ: ಅಂತು ವಿಶ್ರಾಂತಸಂಭೋಗಸುಖದಿಂದೊಗೆದ ಬೆಮರ ಬಿಂದುಗಳಿಂದಾ ದಂಪತಿಗಳ ನಿಕಾಮಕೋಮಳತನುಲತೆಗಳಾರ್ದಂಗಳಾಗಿಯುಂ ಮೆಯ್ಸೋಂಕಿನೊಳು ಬ್ಬರಿಸುವ ವಿಪುಳಪುಳಕಾಂಕುರಂಗಳಿಂ ಕಠಿನತ್ವಮಂ ತಾಳ್ದಿರ್ದವು ಮತ್ತಂ ನಿಬಿಡಮಾದ ಗಾಢಾಲಿಂಗನದಿಂದಿರ್ವರ ಶರೀರಂಗಳಸೊಂದಾಗಿ ಪಚ್ಚಿಸಿದರೆಂಬಂತೈಕ್ಯಮನಾಂತು ಕ್ಷೀರನೀರಾಕಾರದೊಳೊಂದಿದ ರತ್ನವೇಳೆಯಂತಿರಾ ಮಹಾಸೇನಮಹಾರಾಜನೊಡನೆ ಪವಡಿಸುತ್ತುಮಿರ್ದ ಸುವ್ರತಾಮಹಾದೇವಿ ಪರಿಶ್ರಮನಿಮೀಲಿತನಯನೆಯಾಗಿ ಬೆಳಗಪ್ಪ ಜಾವದೊಳ್

ಅನುಪಮತೀರ್ಥನಾಥಜನನೋತ್ಸವಮಂಗಳಕಾರಣಂಗಳಂ
ಕನಸುಗಳಂ ಯಥಾಕ್ರಮದೊಳಂ ಪದಿನಾಱುಮನೆಯ್ದೆ ಕಂಡಳಾ
ಜಿನಜನನಿ ಪ್ರಮೋದಭರದಿಂದುರುಷೋಡಶಭಾವನಾದಿ ಭಾ
ಜನನೆನಿಸಿರ್ದ ಪುಣ್ಯತನಯೋದಯಮಂ ನೆಱೆಸೂಚಿಪಂದದಿಂ ೧೨೫

ವ: ಅದೆಂತೆನೆ

ಮಿಳ್ಳಿಸಿ ತುಂಬಿಗಳ್ ಮೊರೆದುಬಂದು ಮದಾಂಬುವ ಗಂಧಶಾಲೆಯಿಂ
ಕುಳ್ಳಿರೆ ಗಂಧದೊಳ್ ಮೆಱೆವ ವಾಸನಭದ್ರಗಜಾಧಿರಾಜನಂ

ಬೆಳ್ಳಿಯ ಬೆಟ್ಟಿಮೆಂಬ ಬಗೆಯಂ ಸಲೆಪುಟ್ಟಿಸುತಿರ್ದುದಂ ಭಯಂ
ಗೊಳ್ಳದೆ ನೋಡಿದಳ್ ಕನಸಿನೊಳ್ ಮದಕುಂಜರಯಾನೆ ಲೀಲೆಯಿಂ ೧೨೬

ಶರದದ ಚಂದ್ರಮಂಡಲದವೊಲ್ ಪರಿಪಾಂಡುರದೇಹವರ್ಣನಂ
ಸುರುಚಿರವೃತ್ತವತ್ಕಕುದನಂ ಘನಲಂಬಿತಲೋಲವಾಲನಂ
ವರತರಶೃಂಗಸಂಗತಿ ಕದರ್ಥಿತವದ್ವೃಹನಂ ಗವೇಂದ್ರನಂ
ಪರಿಕಿಸಿ ನೋಡಿದಳ್ ಕನಸಿನಲ್ಲಿ ಗವೇಂದ್ರಸುಕಂಠ ರಾಗದಿಂ ೧೨೭

ಕೆಂಪಾಗಿರ್ದುರುಕೇಸರಪ್ರಸರದಿಂ ಚೆಲ್ವಾದ ದುರ್ದರ್ಪದಿಂ
ಪೆಂಪಂ ತಾಳ್ದ ವಿಭಾಸುರಾರ್ಧ ಶಶಿಲೇಖಾಕಾರದಂಷ್ಟ್ರಂಗಳಿಂ
ಸೊಂಪಂ ನೇಱಿದ ವೃತ್ತವತ್ಕಟಿಗಳಿಂದೊಪ್ಪಿರ್ದುದಂ ಸಿಂಹಮಂ
ಕಂಪಾಪಾಂಗಿಕೆ ನೋಡಿದಳ್ ಕನಸಿನೊಳ್ ತನ್ನೊಂದು ಸಂತೋಷದಿಂ ೧೨೮

ಮಿಗೆ ನಿಮಿರುತ್ತುಮಿರ್ದ ವರರತ್ನವಿಭೂಷಣಭೂರಿಕಾಂತಿಯಿಂ
ದ್ವಿಗುಣಿತ ದೇಹಕಾಂತಿಯ ಪರಂಪರೆಯೊಳ್ ಪೊಳೆಯುತ್ತುಮಿರ್ದ ಗಾ
ಡಿಗೆ ನೆಲೆಯಾದ ಲಕ್ಷ್ಮಿಯನದಾಕ್ಷಣದೊಳ್ ಮಥಿತಾಬ್ಧಿಮಧ್ಯದೊಳ್
ಸೊಗಯಿಪಳಂತಿರಿರ್ದವಳನಂಗನೆ ಕಂಡಳತಿಪ್ರಮೋದದಿಂ ೧೨೯

ಅತಿಧವಳಪುಷ್ಪಮಾಲಾ
ದ್ವಿತಯಮನುದ್ಭ್ರಮರಭಂಗಿ ಸಂಭ್ರಮಭೃತಮಂ
ನುತವಿಕಸನಯುತಮಂ ನೋ
ಡುತುಮಿರ್ದಳ್ ಕನಸಿನಲ್ಲಿ ಗತಿಕೌತುಕದಿಂ ೧೩೦

ಸಕಳಕಳಾವಿಳಾಸದೊಡಗೂಡಿ ಸಮಸ್ತದಿಗಂತರಾಳಮಂ
ಪ್ರಕಟಿತಮಾಗಿ ದಲ್ ಬೆಳಗುತಿರ್ದ ಸಮುದ್ಧುರಚಂದ್ರಬಿಂಬಮಂ
ಮಕರಪತಾಕನುತ್ಸವವಿಧಾನಸಮರ್ಥಮೆನಿಪ್ಪುದಂ ಕರಂ
ವಿಕಸಿತಕೈರವಾಕ್ಷಿ ನಡೆನೋಡುತಮಿರ್ದಳಪೂರ್ವರಾಗದಿಂ ೧೩೧

ಕಮಳವನಂಗಳಂ ಬಿಡದಲರ್ಚಿಸುತುಂ ನಿಬಿಡಾಂಧಕಾರವ್ಯಂ
ದಮನುಱ್ ಬೆರ್ಚಿಸುತ್ತುಮುರುರಾಗನಿಭಾಸಿ ಸಹಸ್ರಭಾನು ಸಾ
ರ್ಥಮನೆ ನಿಮಿರ್ಚಿಸುತ್ತುಮುದಯಾಚಳಚೂಳಿಕೆಯಗ್ರಭಾಗದಿಂ
ದಮುದಯಿಸುತ್ತುಮಿರ್ದ ರವಿಮಂಡಳಮಂ ನಳಿನಾಸ್ಯೆ ನೋಡಿದಳ್ ೧೩೨

ಮೀಂಗಳಯುಗಳಮನುದಕದೊ
ಳಂಗೀಕೃತಚಾರುಚಿತ್ರಸಂಚಾರಮುಮಂ

ಪಿಂಗದೆ ಪೊಳೆಯುತ್ತಿರ್ಪುದ
ನಂಗನೆ ಕನಸಿನೊಳೆ ಕಂಡಳಚ್ಚರಿಯಿಂದಂ ೧೩೩

ಸಿತತಂತುದ್ವಯವೇಷ್ಟಿತಂಗಳನತಿಸ್ವಚ್ಛಾಂಬುಪೂರ್ಣಂಗಳಂ
ನುತಮುಕ್ತಾಸ್ರಗಲಂಕೃತಂಗಳನುರುಶ್ರೀಗಂಧಚರ್ಚಾರ್ಚಿತಾ
ಕ್ಷತರಮ್ಯಂಗಳನಾಸ್ಯದೊಳ್ ಪೊಳೆವ ಪಂಕೇಜಂಗಳಿಂದೊಪ್ಪದು
ನ್ನತಿಯಂ ತಾಳ್ದಿದ ಚೆನ್ನಹೊನ್ನವೆರಡುಂ ಕುಂಭಂಗಳಂ ನೋಡಿದಳ್ ೧೩೪

ದೇವಿ ಕನಸಿನೊಳೆ ಕಂಡಳ್
ತಾವರೆಗೊಳನಂ ಮರಾಳಿಕಾಪಕ್ಷಸುಲೀ
ಲಾವಿಕ್ಷಿಪ್ತ ಸರೋರುಹ
ಪಾವನಕಿಂಜಲ್ಕಪುಂಜಪಿಂಜರಿತಮುಮಂ ೧೩೫

ಪಿರಿದುಂ ಗಂಭೀರತೆಯಂ
ಧರಿಸಿದ ಬಹುರತ್ನರಾಶಿಪರಿರಂಜಿತಮಂ
ಪರಮಕ್ಷೀರಸಮುದ್ರಮ
ನರಸಿ ಸ್ವಪ್ನದೊಳೆ ನೋಡುತಿರ್ದಳ್ ನಲವಿಂ ೧೩೬

ಕನಕಮಯಚಾರುಸಿಂಹಾ
ಸನಮಂ ನವರತ್ನರಾಜಿಪರಿಕೀಲಿತಮಂ
ಘನಕೌಶಲನಿರ್ಮಿತಮಂ
ವನಿತೋತ್ತಮೆ ಕನಸಿನಲ್ಲಿ ಕಂಡಳ್ ಮುದದಿಂ ೧೩೭

ಪೀವರತೋರಣೋಲ್ಬಣ ಲಸದ್ಧ್ವಜರಾಜವಿರಾಜಮಾನಮಂ
ಪಾವನರತ್ನಕಿಂಕಿಣಿಗಳ ದ್ಯುತಿಮಂಜರಿದೀಪ್ಯಮಾನಮಂ
ದೇವನಿತಂಬಿನೀ ಮಧುರಗೀತ ಮೃದುಧ್ವನಿಶೋಭಮಾನಮಂ
ದೇವವಿಮಾನಮಂ ಕನಸಿನಲ್ಲಿ ನೃಪಾಂಗನೆ ಕಂಡಳರ್ಥಿಯಿಂ ೧೩೮

ಎತ್ತಿದ ಪೆಡೆಗಳ ಮೇಲ
ತ್ಯುತ್ತಮಮಣಿಗಳ ಮಯೂಖಮಂಜರಿ ಮಿಗೆ ನಿಮಿ
ರುತ್ತಮಿರೆ ಕಣ್ಗೆ ಸೊಗಸಂ
ಬಿತ್ತರಿಪ ಫಣೇಂದ್ರಗೇಹಮಂ ಸತಿ ಕಂಡಳ್ ೧೩೯

ಪರಕಲಿಸಿ ನಿಮಿರ್ವ ಕಿರಣೋ
ತ್ಕರದಿಂದಾಗಸದೊಳಿಂದ್ರಚಾಪಶ್ರೀಯಂ

ನೆರಪಿಸುತುಮಿಪ್ಪನರ್ಘ್ಯ
ಸ್ಫುರದುದ್ಧುರರತ್ನರಾಶಿಗಳನೀಕ್ಷಿಸಿದಳ್ ೧೪೦

ಏನುಂ ಪೊಗೆ ಪೊಱಮಡದ ಕೃ
ಶಾನುಜ್ವಾಲಾಕಲಾಪಮಂ ಕೆಲಗೆಲದೊಳ್
ತಾನವ್ವಳಿಸುತ್ತಿರ್ಪುದ
ನಾ ನೃಪಸತಿ ಕನಸಿನಲ್ಲಿ ಕಂಡಳ್ ನಯದಿಂ ೧೪೧

ವ: ಈ ಮಹಾಶ್ಚರ್ಯಕರ ಷೋಡಶ ಶುಭಸ್ವಪ್ನಸಂದರ್ಶನಾನಂತರಂ ಸಹಸ್ರ ಕಿರಣೋದಯ ಸಮಯದೊಳ್

ತಂಬೆಲರೆಂಬಿನಂ ಸುಳಿದು ಬೀಸಿ ಸುವರ್ಣಗವಾಕ್ಷಮಾರ್ಗದಿಂ
ದಂ ಬಿಡದೆಯ್ದೆ ಬಂದವರಸೊಯ್ಯನೆ ಸೋಂಕಿ ಸೊಡರ್ಗಳಾಗಳಾ
ಲಂಬಿತ ನಿದ್ರೆಯಂ ಕೆಡಿಸಲಾಗ ದಲೆಂದುಱೊ ಸನ್ನೆಯಿಂದೆ ಬೇ
ಡೆಂಬವೊಲೆಯ್ದೆ ತೂಗಿ ತಲೆಯಂ ಪಡೆದರ್ ಸುಖದಿಂ ಪ್ರಬೋಧಮಂ ೧೪೨

ವ: ಆಗಳ್

ಮಂಜೀರಧ್ವನಿಯುಂ ಸುಕಂಕಣಝಣತ್ಕಾರಂಗಳುಂ ಮೇಖಳಾ
ಮಂಜುಧ್ವಾನಮುಮುಣ್ಮೆ ಪೊಣ್ಮೆ ನಯನಂ ಕೆಂಪಾಗೆ ಧಮ್ಮಿಲ್ಲಭಾ
ರಂ ಜೋಲ್ದೊಪ್ಪೆ ಶರೀರಯಷ್ಟಿ ತಳೆಯಲ್ ಬೇಱೊಂದು ಸೌರಭ್ಯಮಂ
ರಂಜಂ ನೀಪಿ ಸಡಿಲ್ಪು ತೋಱೆ ಸತಿ ಪಾಸಿಂದೆರ್ದಳಾನಂದದಿಂ ೧೪೩

ವ: ಅಂತುಪ್ಪವಡಿಸಿ ಪ್ರಭಾತಕಾಲಕರಣೀಯನಿತ್ಯನಿಯಮಂಗಳಂ ನಿರ್ವರ್ತಿಸಿ ದನಂತರಂ

ಪತಿಯ ಸಮೀಪಕ್ಕೆ ಮಹಾ
ಸತಿ ಬಂದುಱೆ ತನ್ನ ಕಂಡ ಕನಸುಗಳಂ ಸಂ
ಗತಿಯಿಂ ಪೇಳ್ದಳ್ ದಂತ
ದ್ಯುತಿಯಿಂದಂ ದ್ವಿಗುಣಿಸುತ್ತುಮೆಕ್ಕಾವಳಿಯಂ ೧೪೪

ಭೂಪಂ ಸ್ವಪ್ನಂಗಳಂ ಕೇಳ್ದಪರಿಮಿತ ವಿವೇಕಪ್ರಭಾವಾತ್ತಚಿತ್ತ
ವ್ಯಾಪಾರಂ ಮತ್ತಮಿಂತೆಂದುಸಿರ್ದನವಜ ಭೂಯಃಫಲಪ್ರಾಪ್ತಿಯಂ ತ
ನ್ನ ಪ್ರಾಣಪ್ರೀತೆಗಾಗಳ್ ನಗೆಯೆ ದಶನಭಾಭಾರಮುಂ ವಕ್ತ್ರದಿಂದಂ
ಪೆಂಪಿಂ ಬೇಱೊಬ್ಬ ಚಂದ್ರಂ ಪಗಲೊಳಮೆಳೆವೆಳ್ದಿಂಗಳಂ ಬೀಱುವನ್ನಂ ೧೪೫

ವ: ಅದೆಂತೆಂದೊಡೆ

ಸಿತಗಜದಂತೆ ದಾನಯುತನಂ ವೃಷದಂತಿರೆ ಧರ್ಮಭಾರದು
ದ್ಧೃತಿಪರನಂ ಮೃಗಾಧಿಪತಿಯಂತಿರೆ ವಿಕ್ರಮಯುಕ್ತನಂ ಸಮು
ನ್ನತತರಲಕ್ಷ್ಮಿಯಂತಿರೆ ಸಮಸ್ತಜಗಜ್ಜನಸೇವ್ಯಮಾನನಂ
ಸಿತಕುಸುಮೋಚ್ಚಮಾಲ್ಯದವೊಲೊಪ್ಪುವ ಕೀರ್ತಿಸುಸೌರಭಾಂಕನಂ ೧೪೬

ಚಂದ್ರಮನಂತೆ ನಿರ್ಮಳಕಳಾಧರನಂ ರವಿಯಂತೆ ದುಸ್ಸಹಾ
ಮಂದಸುತೇಜನಂ ವರಝಷದ್ವಯದಂತಿರೆ ಭೂರಿಹರ್ಷನಂ
ಸೌಂದರ ಹೇಮಕುಂಭಯುಗದಂತಿರೆ ಪೀವರಮಂಗಳತ್ವಸ
ನ್ಮಂದಿರನಂ ಸರೋವರದವೊಲ್ ಜಗತೀಜನತಾಪಹಾರಿಯಂ ೧೪೭

ಜಲನಿಧಿಯಂತಪಾರಮಹಿಮಾಸ್ಪದನಂ ಹರಿಪೀಠದಂತೆ ಮಂ
ಜುಳತರದರ್ಶನೋನ್ನತನುಮಂ ಸುರಲೋಕವಿಮಾನದಂತಿರು
ಜ್ವಳಿತ ಸುರೇಂದ್ರಯಾತ್ರಕನುಮಂ ಫಣಿರಾಜನಿವಾಸದಂತೆ ನಿ
ರ್ಮಳತರತೀರ್ಥಘೋಷಣವಿಶೇಷಿತಚಾರುಮಹಾನುಭಾವನಂ ೧೪೮

ವರರತ್ನರಾಶಿಯಂತಿರೆ
ನಿರುಪಮಕಾಂತಿಪ್ರಭಾವನಂ ಪಾವಕನಂ
ತಿರೆ ಘಾತಿಕರ್ಮಗಹನೋ
ದ್ಧುರಗಹನ ಸುದಹನದಕ್ಷನಪ್ಪಾತ್ಮಜನಂ ೧೪೯

ಪಡೆದಪೆ ನೀನಲ್ಲದರೀ
ಪೊಡವಿಯೊಳಿಂತಪ್ಪ ಕನಸನೀಕ್ಷಿಪ ಸೈಪಿಂ
ಗೆಡೆಯಾದರಾರೊ ಭಾವಿಸು
ವಡೆ ಪೂರ್ವೋಪಾತ್ತಪುಣ್ಯಮೇನದ್ಭುತಮೋ ೧೫೦

ಪೋದ ಭವಂಗಳೊಳ್ ನೆರಪಿದೊಂದು ತಪಃಫಲಮೀಗಳೆಯ್ದೆ ಸಂ
ಪಾದಿಸಿದತ್ತು ತಾನುದಯಮಂ ಸಲೆ ನಿನ್ನೊಳಶೇಷದೇವರಾ
ಜಾದಿಕವಂದ್ಯತೀರ್ಥಕರಮಾತೃವೆನಲ್ ದೊರೆವೆತ್ತ ಚಾರುಪು
ಣ್ಯೋದಯೆ ನಿನ್ನವೊಲ್ ಮಿಗುವ ನೋಂಪಿಗಳಂ ನೆಱೆನೋಂತರಾರೊ ಪೇಳ್ ೧೫೧

ಕನಸುಗಳೆಲ್ಲವುಂ ಫಲಮನೀವುವು ತಪ್ಪದೆ ಸುವ್ರತಾಢ್ಯರುಂ
ಘನಗುಣರುಂ ನಿರೀಕ್ಷಿಸಲೊಡಂ ಪುಸಿಯಾಗವವೆಲ್ಲಿಯುಂ ವ್ರತಾ
ಭಿನುತಗುಣಾಢ್ಯೆ ನೀಂ ಬಗೆವೊಡೀ ಕನಸಂ ನೆಱೆಕಂಡ ಕಾರಣಂ
ಜಿನಪತಿಮಾತೃವಾಗಿ ಪಡೆದಪ್ಪೆ ಕೃತಾರ್ಥತೆಯಂ ವಿಶೇಷದಿಂ ೧೫೨

ತನುಭವಲಾಭವಾರ್ತೆಯನಿದಂ ನಿಜಹೃತ್ಪತಿ ಪೇಳೆ ಕೇಳ್ದು ಮ
ತ್ತನುಪಮಭೂರಿಹರ್ಷಭರದಿಂ ಪುಳಕೋದ್ಗಮಭಾರಮಂ ನೃಪಾಂ
ಗನೆ ತಳೆದಿರ್ದಳಂದು ವನಲಕ್ಷ್ಮಿ ವಿಶೇಷವಸಂತಕಾಲದೊಳ್
ಘನಕಳಿಕಾಕಳಾಪಮನದೆಂತುಱೆ ತಾಳ್ದುವಳಂತಿರೊಪ್ಪದಿಂ ೧೫೩

ವ: ಅನ್ನೆಗಮಿತ್ತಲಾ ಸರ್ವಾರ್ಥಸಿದ್ಧಿಯೆಂಬ ವಿಮಾನದೊಳ್ ಪುಟ್ಟಿರ್ದ ದಶರಥ ಚರನಪ್ಪಹಮಿಂದ್ರನೆಂಬ ದೇವಂ ತನ್ನಯ ಪರಮಾಯುಷ್ಯಮಾದ ಮೂವತ್ತ ಮೂಱುಸಾಗರೋಪಮಕಾಲಮೆಲ್ಲಂ ದಿವ್ಯಸುಖಾನುಭವದಿಂದೊಂದುದಿನಮೆಂಬಂತೆ ಸಂಪೂರ್ಣತೆಯನೆಯ್ದಲೊಡಂ ನಿಜಾಯುರವಸಾನಸಮಯಮನಱಿದು

ಬಗೆಯೊಳ್ ಭೇದಜ್ಞಾನಮ
ದೊಗೆದಿರೆ ಪರಮಾತ್ಮರೂಪಮಂ ಧ್ಯಾನಿಸುತುಂ
ಬಗೆಯದಹಮಿಂದ್ರಸುಖಮಂ
ಮಿಗೆ ದಿವ್ಯಶರೀರಭಾರಮಂ ವಿಭು ಬಿಟ್ಟಂ ೧೫೪

ವ: ಮತ್ತಮಾ ದೇವಂ ಸರ್ವಾರ್ಥಸಿದ್ಧಿಯಿಂ ಬಳ್ಚಿ ಬಂದು ವೈಶಾಖಮಾಸದ ಕೃಷ್ಣಪಕ್ಷದ ತ್ರಯೋದಶೀ ತಿಥಿಯೊಳ್ ಚಂದ್ರಮಂ ರೇವತೀನಕ್ಷತ್ರದಲ್ಲಿರುತ್ತಮಿರೆ ಬಾಳತರಣಿಕಿರಣಂ ಕಮಳಿನಿಯ ಕಮಳದೆಸಳ ಪೊರೆಯೊಳ್ ಪೊಕ್ಕೊಳಗಣ್ಗಿಳಿದು ಪೋಗಿ ಮೃಣಾಳಿಕಾ ಗರ್ಭದೊಳುದ್ಭವಿಸುವಂತಿರಾ ಸುವ್ರತಾಮಹಾದೇವಿಯ ಕೋಮಳ ಮುಖ ಕಮಳದೊಳ್ ಕರಿಕಲೇವರಾಕಾರದಿಂ ಪೊಕ್ಕು ನುಸುಳ್ದು ಪೋಗಿ ನಿರ್ಭರಿತ ಶೋಭಾ ಸಂದರ್ಭಗರ್ಭಿತ ಮಾದ ಗರ್ಭಾವಾಸದಲ್ಲಿ ಶುಭಮುಹೂರ್ತದೊಳವತರಣ ಕರಣಮ ನಪ್ಪುಕೆಯ್ದುದು ಮಾಗಳ್

ಆಸನಕಂಪಕಲ್ಪಿತ ಚಮತ್ಕೃತಿಯಿಂದಱಿದುದ್ಧಭಕ್ತಿಯಿಂ
ವಾಸವಮುಖ್ಯಮಾದಖಿಳದೇವಸಮೂಹಮದೆಯ್ದೆಬಂದು ಜೈ
ನೇಶನ ಮಾತೃವಂ ನಮಿಸಿದರ್ ಬಲವಂದರನರ್ಘ್ಯರತ್ನದಿಂ
ಲೇಸೆನೆ ವಸ್ತ್ರದಿಂದೆ ಪರಿಪೂಜಿಸಿದರ್ ನುತಿಗೆಯ್ದರೊಪ್ಪದಿಂ ೧೫೫

ವ: ಇಂತು ಚತುರ್ನಿಕಾಯದೇವರ್ಕಳೆಲ್ಲಂ ಪಂಚಾಶ್ಚರ್ಯಪುರಸ್ಸರಂ ಗರ್ಭಾವತ ರಣಕಲ್ಯಾಣಾರ್ಹವಿಧಾನಮಂ ಮಹಾಮಹಿಮೆವೆರಸು ಮಾಳ್ಪುದಂ ನೋಡುತ್ತುಮಿರ್ದ ಮಹಾಸೇನ ಮಹಾರಾಜಂ ಮನದೊಳ್ ಪೆಟ್ಟುವೆರ್ಚೆ ನಾನುಮೀತೆಱದಿಂದೀ ಕಲ್ಯಾಣೋತ್ಸಾಹಮನಿಲ್ಲಿಗಳೆ ಮಾಳ್ಪೆನೆಂದು ಬಗೆಯುತ್ತು ಮಿರಲಮರ್ತ್ಯರ ಮೊತ್ತಮೆಲ್ಲಂ ತತ್ಕಲ್ಯಾಣಪೂಜೆಯಂ ಮಾಡಿ ಸ್ವಕೀಯಧಾಮಗಾಮಿಗಳಪ್ಪುದುಂ

ಪುಟ್ಟಿದ ಮುನ್ನಂ ದಿವಿಜರ್
ನೆಟ್ಟನೆ ಗರ್ಭಾವತರಣದುತ್ಸವಮಂ ಮುಂ

ದಿಟ್ಟು ಸೇವಿಸಿದರೆಂದೊಡೆ
ಪುಟ್ಟಿದ ಪೊತ್ತಿನೊಳೆ ಮಾಳ್ಪುದಂ ಬಣ್ಣಿಪರಾರ್ ೧೫೬

ವ: ಅನಂತರಂ

ಒಡೆಯನ ಗರ್ಭಾಧಾನದ
ಸಡಗರಮಂ ಪಿರಿದುಮಳ್ತಿಯಿಂ ಭೂತಳದೊಳ್
ಕಡುಚೋಜಿಗಮಪ್ಪಂತಿರ
ಲೊಡರಿಸಿದಂ ಮತ್ತಮಾ ನೃಪಾಳಕತಿಳಕಂ ೧೫೭

ಕ್ಷಿತಿನಾಥಂ ತನ್ನ ಪುಣ್ಯೋದಯದ ಮಹಿಮೆಯಂ ಕೂಡೆಕೊಂಡಾಡುತಿರ್ದಂ
ವ್ರತಶೀಲಾಧಾರನುದ್ಯದ್ವಿಮಳತರಗುಣಂ ಭಾರತೀಕರ್ಣಪೂರಂ
ನುತವದ್ದಾನಪ್ರಿಯಂ ಬಾಹುಬಲಿಸುಕವಿರಾಜಂ ಮಹಾರಾಜಪೂಜ್ಯಂ
ಜಿತಮಿಥ್ಯಾವಾದಿ ಸಾರ್ಥಪ್ರವಚನರಚನಂ ಚಾತುರೀಜನ್ಮಗೇಹಂ ೧೫೮

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮ ಜಿನಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿದೇವ ಪ್ರಸಾದ ಸಂಪಾದಪಾದನಿಧಾನದೀಪವರ್ತಿಯುಭಯಭಾಷಾಕವಿ ಚಕ್ರವರ್ತಿ ಬಾಹುಬಲಿ ಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್ ಧರ್ಮತೀರ್ಥಕರ ಗರ್ಭಾವತರಣಕಲ್ಯಾಣಪರಿವ್ಯಾವರ್ಣನಂ ಷಷ್ಠಾಶ್ವಾಸಂ.

ಸಪ್ತಮಾಶ್ವಾಸಂ

ಶ್ರೀಕಾಂತಂ ವಿಶದಯಶಃ
ಶ್ರೀಕಾಂತಂ ಪರಮಪುರುಷಮಂ ತಳೆದಿರ್ದಂ
ಲೋಕಜನಲಾಲನೀಯ ಗು
ಣಾಕಾರಂ ಸರಸಚತುರಕವಿಕುಳತಿಳಕಂ ೧

ಎಂತು ಱ್ ಪೂರ್ವದಿಗ್ವನಿತೆ ಮೇರುತಿರೋಹಿತ ಚಂದ್ರಬಿಂಬಮಂ
ಸಂತಸದಿಂದೆ ತಾಳ್ದಿ ಪರಿರಂಜಿಪಳಂತೆ ದಲಾ ಮಹೀಪಸೀ
ಮಂತಿನಿ ಚೆಲ್ವ ತನ್ನುದರದೊಳ್ ಸಲೆ ತಾಳ್ದಳಪೂರ್ವಗರ್ಭಮಂ
ಸ್ವಾಂತದೊಳೆಯ್ದೆ ರಾಗರಸಮಾವರಿಸಿರ್ದುದು ಪೆರ್ಚಲುತ್ಕಟಂ ೨

ಜಿನಪೂಜೋತ್ಸಾಹಮಂ ಮಾಡುವ ಭರವಸದಿಂ ದಾನಮಂ ಮಾಳ್ಪ ತದ್ವಂ
ಧನದೊಳ್ ಸಿಕ್ಕಿರ್ದರಂ ತಾಂ ಬಿಡಿಸುವ ಕರುಣಾಭಾವದಿಂದೆಲ್ಲರಂ ಪಾ
ಲನಮಂ ಮಾಡುತ್ತುಮಿರ್ಪೀ ಬಯಕೆ ಬಗೆಯೊಳಾ ದೇವಿಗಾದತ್ತು ಮತ್ತಾ
ತನಯಂ ಪೂಜ್ಯಂ ಮಹಾದಾನಿಯುಮಪಗತವದ್ಬಂಧನಂ ಸರ್ವಪಾಲಂ ೩

ವ: ಎಂಬಿದಂ ಸೂಚಿಪಂದದಿಂ

ಉದರದೊಳಿರ್ದ ಜಿನೇಶನ
ಸದಮಳಘನಕೀರ್ತಿಯಿಂ ಸಮಾವೃತಮೆಂಬಂ
ತು ಧರಣಿಯ ಕೋಮಳಾಂಗಂ
ಪದೆಪಿಂದಾಂತುದು ಮನೋಜ್ಞಧವಳಚ್ಛವಿಯಂ ೪

ಲಲನಾಗಂಡಸ್ಥಳೀ ಮಂಡಳದ ಪೊಳೆಪು ಪೂರ್ಣೇಂದುವಂ ಮಾಣದೆಯ್ದುಂ
ಡಲೆಯಲ್ ಬೇಸತ್ತು ಮತ್ತಂ ಭಯರಸವಶದಿಂ ಪೇಡಿವಟ್ಟೋಡಿಪೋಗಲ್
ಸಲೆ ಪಾಳಾಗಿರ್ದುದಂತಲ್ಲದೊಡದಱೊಳಗಾರಣ್ಯದಲ್ಲಿರ್ಪ ಪುತ್ತುಂ
ಮೊಲನುಂ ಚೆಲ್ವಾಲಮುಂ ಪುಲ್ಲೆಯುಮುಱ್ ನೆಲಸಿರ್ಪಂದಮಾವಂದಮಿನ್ನುಂ ೫

ವರಬಲದಿಂದನಂತಬಲಿಯೊರ್ವನೆ ನೂಂಕಿ ವಲಿತ್ರಯಂಗಳಂ
ನಿರುಪಮ ಮಧ್ಯದೇಶಮನೆ ಪೆರ್ಚಿಪುದಂ ನಡೆನೋಡಿ ಹರ್ಷಮಂ
ಧರಿಸಿದವೊಲಿನಂ ಪಡೆದುವುಚ್ಚಕುಚಂಗಳವಂದು ಬಿಣ್ಪುಮಂ
ಪರರ ಸಮೃದ್ಧಿಯಿಂ ತಣಿವರೆಯ್ದೆ ಸುಹೃತ್ತುಗಳುಂ ಸುವೃತ್ತರುಂ ೬

ಪರಮವಿಳಾಸಮೆಂಬ ರಸದಿಂದಮೆ ತೀವಿದುರಸ್ಥಳೋಲ್ಲಸ
ತ್ಸರಸಿಯೊಳೆಯ್ದೆ ಪುಟ್ಟಿದ ಸಭೃಂಗ ಮುಖಾಂಬುಜ ಕೋಶಯುಗ್ಮದಂ
ತಿರೆ ತುದಿ ಕಪ್ಪುವೆತ್ತ ಕುಚಮಂಡಳಯುಗ್ಮಮದಂತುಮಲ್ಲದಂ
ದುರುತರ ಪತ್ರವಲ್ಲಿಯದಱಲ್ಲೊಗೆದಿರ್ಪ ನಿಮಿತ್ತಮಾವುದೋ ೭

ಎನಿತೆನಿತುಂ ತನೂದರಮದಾಂತುದು ಪೆರ್ಚುಗೆಯಂ ಸಮಂತು ಮ
ತ್ತನಿತನಿತುಂ ಕುಚದ್ವಯಮದಾಂತುದು ವಕ್ತ್ರದೊಳೆಯ್ದೆ ಕಪ್ಪುಮಂ
ಘನಕಠಿಣತ್ವಭಾವದೊದವಂ ತಳೆದಿರ್ದ ಜಡಾತ್ಮರನ್ಯವ
ರ್ಧನಮನೆ ಸೈರಿಸರ್ ತಳೆದೊಡಂ ದಲವರ್ ಸಲೆ ಮಧ್ಯವೃತ್ತಿಯಂ ೮

ನೆಟ್ಟನೆ ನೈಜಸುವರ್ಣಮ
ನೊಟ್ಟಜೆಯಿಂ ಕರ್ಕಶಸ್ವಭಾವರ ಮುಖಮುಂ
ತೊಟ್ಟು ಕಱಂಗುವ ತೆಱದಿಂ
ತೊಟ್ಟು ಕಱಂಗಿದುದು ನೋಳ್ಪಡತಿಶಯದಿಂದಂ ೯

ಬಡವಂ ನಿಧಾನಮಂ ಮ
ತ್ತಡಿಗಡಿಗಂ ನೋಡುತಿರ್ಪ ತೆಱದಿಂದರಸಂ
ಬಿಡದೆ ನೋಡುತುಮಿರ್ದಂ
ಸಡಗರದಿಂ ಗರ್ಭವತಿಯ ಗರ್ಭಸ್ಥಿತಿಯಂ ೧೦

ಕುಸುಮಮಂಜರಿಗೆ ಪರಿಮಳ
ದೆಸಕಂ ಭಾರಮನದೇನುಮಂ ಮಾಡದವೊಲ್
ಪೊಸತೆನಿಪ ಗರ್ಭವತಿಗಾ
ಶಿಶು ಭಾರಾಯಾಸದೊದವನಿನಿಸುಂ ಮಾಡಂ ೧೧

ಜನನಿಯ ಗರ್ಭದೊಳಿರ್ದುಂ
ಘನತೇಜಂ ಸುಖದ ಪೆರ್ಚನೀವುತ್ತಿರ್ದಂ
ದಿನನಾಯಕ ಕರಮೆಂತ
ಜ್ಜನಿಗೆಂದುಂ ಸುಖದ ಪೆರ್ಚನೀವಂತೆ ಕರಂ ೧೨

ಮೊದಲ ವಿಳಾಸದಿಂ ಪಿರಿದುಮಗ್ಗಳಮಾದ ವಿಳಾಸಮಾದುದ
ಲ್ಲದೆ ಮಿಗೆ ಗರ್ಭಚಿಹ್ನದ ವಿಕಾರಮದಾಕೆಯ ದೇಹದಲ್ಲಿ ತೋ
ಱದುದಿನಿತಿಲ್ಲ ನಿರ್ವಿಕೃತಿಯಪ್ಪ ಜಿನಾರ್ಭಕನಿರ್ದ ತಾಣದ
ಲ್ಲುದಯಿಸಲಾರ್ಪುದೇ ವಿಕೃತಿರತ್ನಧರಾದ್ರಿ ವಿಕಾರಿಯಕ್ಕುಮೇ ೧೩

ಸೊಗಯಿಪ ಗರ್ಭದಲ್ಲಿ ನಲಸಿರ್ದನಿಸುಂ ಪೊರೆಯಂ ಮಲಂಗಳೊಳ್
ಮಿಗುವ ಮತಿಶ್ರುತಾವಧಿಗಳೆಂಬ ವಿಶೇಷಿತವ ತ್ರಿಬೋಧಮಂ
ಬಗೆಯೊಳೆ ತಾಳ್ದಿದಂ ದಲುದಯಾದ್ರಿಕರಂ ಮಱೆಯಾದೊಡಂ ಪ್ರಭಾ
ಳಿಗಳನದಾವಗಂ ತರಣಿಮಂಡಳಮೆಯ್ಯುಱೆ ತಾಳ್ದುವಂದದಿಂ ೧೪

ವ: ಮತ್ತಮಾ ಭೂಪಾಳಕಂ ಕುಲವೃದ್ಧಾನುಗತಕ್ರಮವರ್ತನಾ ಪರಿಪಾಲ ನಾರ್ಥಂ ಪುಂಸವನಾದಿಕ್ರಿಯಾವ್ಯಾಪಾರಮಂ ಕಾಲದೊಳ್ ನಿರ್ವರ್ತಿಸಲ್ವೇಳ್ಕುಮೆಂದು ಬಗೆಯುತ್ತುಮಿರಲಾತನೊಡನೆ ಸ್ಪರ್ಧೆಯೆಂದೆಂಬಂತೆ ವೃದ್ಧಶ್ರವಂ ಮುನ್ನವೆ ಬಂದು ತತ್ಪುಂಸವನಾದಿ ಕರ್ಮಮಂ ನಿರ್ಮಿಸಿ ಪೋದಿಂಬಳಿಯಂ

ತನುನಯಮೇಱೆ ಕೂಡೆ ಬಡವಾದುದು ಲೋಲವಿಶಾಲಚಾರುಲೋ
ಚನಯುಗಮೆಯ್ದೆ ಮೀಱೆ ಪೊಳಪೇಱದುದುಜ್ಜುಗಮಂದು ಗುಜ್ಜನಾ
ಯ್ತನುಪಮಗರ್ಭನಿರ್ಭರದ ಪೊತ್ತಿನೊಳೆ ಶುಭಚಿಹ್ನಮಾಗಿ ರಾ
ಜಿಸ ಮನದಲ್ಲಿ ರಾಗರಸಪೂಗಮನಾಗಿಸುತಿರ್ದುದಾವಗಂ ೧೫

ಅಮರೇಂದ್ರಂ ಪೊಸತಾದಲಂಕರಣವಸ್ತ್ರಾನೀಕಮಂ ಭಕ್ತಿಯಿಂ
ದಮೆ ಕೊಟ್ಟಟ್ಟಲದಂ ನಿರೀಕ್ಷಿಪುದಱಿಂ ಕೊಂಡಾಡುವುತ್ಸಾಹದಿಂ
ದಮರಸ್ತ್ರೀಯರ ತೊತ್ತುಗೆಯ್ತಮನದಂ ಕಂಡುಂ ಮಹಾಸೇನಭೂ
ರಮಣಂ ಮಾಳ್ಪ ವಿಮೋಹದಿಂ ದ್ವಿಗುಣಿಸಿತ್ತಾ ದೇವಿಗಾನಂದಮಂ ೧೬

ವ: ಇಂತು ತುಚ್ಛೇತರೋತ್ಸಾಹದೊಡನೆ ಗರ್ಭಂ ಬಳೆಯೆವಳೆಯೆ ಮತ್ತಂ ಕೆಲವುದಿನಂಗಳ್ ಪೋದಿಂಬಳಿಯಂ ನವಮಾಸಂ ಪರಿಪೂರ್ಣತೆಯನೆಯ್ದಲೊಡ ಮೊಂದುದಿವಸಮಾ ಮರಾಳಿಕಾಗಮನೆ ತನ್ನಯ ಮೃದುಪಾದತಳಂಗಳೆಂಬ ಕೆಂದಾವರೆಯರಲ್ಗಳ ಲೀಲಾವಿನ್ಯಾಸವಿಶೇಷದಿಂ ಪಳಿಕಿನ ಕುಟ್ಟಿಮಧರಣೀತಳಮಂ ರಾಗರಮಣೀಯತರಮಂ ಮಾಡುತ್ತುಂ ನಿಷ್ಪ್ರತ್ಯೂಷಾಪದ ಪರಿಪುಷ್ಪಾರಿಷ್ಟನಿವಾಸಕ್ಕೆ ಮೆಲ್ಲಮೆಲ್ಲನೆ ಬಿಜಯಂಗೆಯ್ವುದುಮಾಗಳ್ ಪೋಗುತ್ತುಂ ಬರುತ್ತುಮಲ್ಲಲ್ಲಿ ನೆರವಿಯಾಗಿರುತ್ತುಮಿರ್ದ ಬಹಳ ದಿವಿಜ ಮಹಿಳಾಸಂಕುಳದ ಸಂಭ್ರಮ ಸಮುತ್ಥಿತ ಕೋಳಾಹಳರವರಭಸದಿಂ ತುಂಬಿ ತುಳುಂಕಾಡುವ ಸೂತಿಕಾನಿಳಯಂ ಪ್ರತಿಧ್ವನಿಯ ನೆವದಿಂ ಲೋಕತ್ರಯೈಕ ಮಂಗಳನುದಯಮಂ ಮೂಱುಂಜಗಕ್ಕೆ ಸಾಱುವಂತಿರ್ಪುದು ಮನಂತರಂ ಮಾಘಮಾಸದ

ವಳಕ್ಷಪಕ್ಷದೊಳಶೇಷಶೋಭನಾವಸಥಿಯಾದೇಕಾದಶೀ ತಿಥಿಯಲ್ಲಿ ಚಂದ್ರಮಂ ಸಮಸ್ತ ಕ್ಷೇಮ ಕ್ಷೇತ್ರಮಾದ ಪುಷ್ಯನಕ್ಷತ್ರ ಸಮಾಶ್ಲಿಷ್ಯಮಾಣ ನಾಗುತ್ತುಮಿರ ಸಕಳಾಭೀಷ್ಟ ಫಳಸಂಯೋಗ ಯೋಗ್ಯಮಾದ ಸೌಭಾಗ್ಯಯೋಗದೊಳಂ ನಿಖಿಳಕಲ್ಯಾಣ ಕರಣಪ್ರವೀಣಮಾದ ಗರಜಾಕರಣದೊಳಂ ವಿಪುಳಮಾಂಗಲ್ಯಸಾಕಲ್ಯಕ್ಕಾ ಧಾರಮಾದ ವಾಚಸ್ಪತಿವಾರದೊಳಿಂತು ಪಂಚಾಂಗಮುಂ ಶುಭಾಂಚಿತಮಾಗೆ ಪೂರ್ವಾಹ್ಣದ ಪೊತ್ತಿನೊಳಖಿಳಶುಭಗ್ರಹಂಗಳುದಗ್ರಸ್ಥಾನಂಗಳೊಳಿರುತ್ತುಮಿರೆ ಶುಭಮುಹೂರ್ತದಲ್ಲಿ ಪ್ರಾಚೀದಿಗ್ದೇವಿ ಜಗತ್ಪ್ರಕಾಶಕನಪ್ಪ ಸೂರ್ಯನನೆಂತು ಪಡೆವಳಂತಿರಾ ಸುವ್ರತಾಮಹಾದೇವಿಯುಂ ಲೋಕತ್ರಯವರ್ತಿ ಸರ್ವಜನವೃಂದ ಕೊರ್ಮೊದಲೊಳೆ ಸಂಪಾದಿತಾನಂದಾಭಿನಂದನಪ್ಪ ನಂದನನಂ ಪಡೆವುದುಮಾಗಳ್

ಪಿರಿದುಂ ಪೊಂಬಣ್ಣದಂತೊಪ್ಪುವ ತನುವಿನ ಸತ್ಕಾಂತಿಯಿಂ ಚೆಲ್ವನಂದಾ
ವರಿಸಿರ್ದಾ ಬಾಳಕಂ ಪಾವನಜನನಿಯ ಮುಂದೊಪ್ಪುತಿರ್ದಂ ಮಹಾದೇ
ವರ ಮೂರ್ಧಾರ್ಧೇಂದುಲೇಖಾಲಸಿತಕಳೆಯ ಮುಂದಿರ್ದ ಭಾಳಾಂತರಾಳ
ಸ್ಫುರದುದ್ವೃತ್ತೇಜದಿಂದಂ ಥಳಥಳಿಪುರಿಗಣ್ಣೆಂಬಿನಂ ರಂಜಿಸುತ್ತುಂ ೧೭

ಸಾಸಿರದೆಂಟುನೂಱು ಶುಭಲಕ್ಷಣಲಕ್ಷಿತಮಪ್ಪುದಂ ಮಹಾ
ಭಾಸುರ ಪುಣ್ಯಮೂರ್ತಿಯೆನಿಸಿರ್ದ ಜಿನಾರ್ಭಕಮೂರ್ತಿಯಂ ಸಮಂ
ತೋಸರಿಸಿರ್ದು ಕೌತುಕದೆ ಕಣ್ಣೆಮೆಯಿಕ್ಕದೆ ನೋಡುತಿರ್ದ ಭಾ
ಮಾಸಮುದಾಯಮಾದುದನಿಮೇಷಕಮಿಲ್ಲದೊಡಂ ಸುರತ್ವಮುಂ ೧೮

ಬಾಲನ ಮೆಯ್ಯ ಕಾಂತಿಲಹರೀಚಯದಿಂದುರು ಸೂತಿಕಾತಿ ರ
ಮ್ಯಾಲಯದಲ್ಲಿ ಕತ್ತಲೆ ಬಿಗುತ್ತಿರದೋಡಿದೊಡಂ ವಿಶೇಷದಿಂ
ಬಾಲಿಕೆ ಸಪ್ತದೀಪಿಕೆಗಳಂ ಮಿಗೆ ಕೇವಳ ಮಂಗಳಾರ್ಥಮಾ
ಗೋಳಿಯನೆಯ್ದೆ ಪೊಚ್ಚಿಸಿದೊಡುಜ್ವಳಿಸುತ್ತುಮವಿರ್ದವಾಕ್ಷಣಂ ೧೯

ಅಮರಕುಮಾರಿಕಾ ತರಳಲೋಚನದ ಪ್ರತಿಬಿಂಬ ದಂಭದಿಂ
ದಮೆ ಧರಣೀಮಹಾರಮಣಿ ತನ್ನಯ ವಲ್ಲಭನಂ ನಿರೀಕ್ಷಿಪು
ದ್ಯಮದೊಳಮಂದು ಕಣ್ದೆಱೆದಳೆಂಬವೊಲೊಪ್ಪಮನಾಳ್ದುದಾ ಮಹೀ
ರಮಣನ ಮಂದಿರಾಂಗಣದ ರತ್ನವಿನಿರ್ಮಿತಭೂಮಿಮಂಡಳಂ ೨೦

ವ: ಮತ್ತಮಾ ಜಿನರಾಜನ ಜನನಸಮಯದಲ್ಲಿ ರಾಜರಾಜಂ ಬಂದು ರತ್ನಪುರದ ತಾಣದೊಳೆಲ್ಲಿಯುಂ ಮಾಣಿಕದ ಮಳೆಯುಂ ಕಱೆಯುತ್ತುಮಿರೆ ಕಡುನಿಮಿರ್ದು ಪರಕಲಿಸಿ ಪೊಳೆವ ಕಿರಣಮನುಗುಳ್ವ ಮಣಿಗಳನೊಳಕೊಂಡ ಧರಣೀವಳಯಮಗಸ್ತ್ಯನಾಪೋಶನಂಗೊಂಡು ನೀರಿಂಗಿದ ರತ್ನಾಕರಮೆಂಬಂತೆ

ಕಣ್ಗಂಬನಜನಿಸುತ್ತುಮಿರ್ದುದು ಬಳಿಯಂ ಪೊಮ್ಮಳಿಯಂ ಕಱೆಯುತ್ತಮಿರಲಾ ವಿಶ್ವಂಭರೆ ಸುವರ್ಣಮನೊಳಕೊಂಡ ಕಾರಣಂ ಕ್ಷತ್ರಿಯಕುಲದಂತೆ ಪರಿವರ್ಣ್ಯಮಾನ ಮಾದುದು ಅನಂತರಮಲರ್ವಳಿಯಂ ಕಱೆಯುತ್ತುಮಿರಲಾ ನೆಲನೆಲ್ಲಂ ಸುಮನಃಪ್ರಸರ ದಿನೆಸೆವ ನಿಮಿತ್ತಂ ಸಜ್ಜನರ ಸಮೂಹದಂತೆ ಸಂಸೇವ್ಯಮಾನಮಾದುದು ತನದಂತರ ಮೊರ್ಮೊದಲೊಳಿಯ್ದು ದೇವದುಂದುಭಿಗಳ್ ಮೊಗಳುತ್ತುಮಿರಲಾ ಮಹೀತಳಮ ಪರಿಮಿತ ಶಬ್ದಸಂದರ್ಭದಿಂ ತುಂಬಿ ತುಳುಂಕಾಡುತ್ತುಮಿರ್ಪ ನಿಬಂಧನದಿಂ ಶಬ್ದಾದ್ವೈತ ವಾದದಂತೆ ರಪಿಕಲ್ಪಶಬ್ದಮಯಮಾಗಿರ್ದುದು ಮತ್ತೆ ಕುಳಿರ್ವೆಲರೆಲ್ಲೆಡೆಯೊಳಂ ಮೆಲ್ಲಮೆಲ್ಲನೆ ತೀಡುತ್ತುಮಿರಲಾ ಧರಿತ್ರೀಚಕ್ರಂ ಸುಖ ಸ್ಪರ್ಶನಸಂಬಂಧಮನೊಳಕೊಂಡು ದಱಿಂದಬಳಾಲಿಂಗಿತ ಕಾಮುಕನಂತೆ ಸುಖದ ಸೊಕ್ಕಿಂದುರ್ಕುತ್ತುಮಿರ್ದುದಿಂತು ಪಂಚಾಶ್ಚರ್ಯಮಂ ಪ್ರಪಂಚಿಸುತ್ತುಮಿರೆ

ಜಿನಪೂಜೋತ್ಸಾಹಕೋಳಾಹಳಮುಮಮ ಮಹಾಪತ್ತನಸ್ಥಾನದೊಳ್ ತೆ
ಕ್ಕನೆ ತೀವಿರ್ದೆಲ್ಲಿಯುಂ ದಲ್ ಕುಡಿಯಡರಿ ನಿಮಿರ್ದೆಯ್ದ ತಾಂ ಪರ್ವಿ ಮತ್ತಂ
ಪಿಸುತ್ತೋದ್ಯಸ್ಫೂರ್ತಿಯಂ ಕೊಂಡೊಸೆದು ನೆಲಸಿ ನಿತ್ಯತ್ವಮಂ ತಾಳ್ದಿದತ್ತೆಂ
ಜಿನಮತ್ಯಾಶ್ಚರ್ಯಮಂ ಪುಟ್ಟಿಸಿದುದು ಪಿರಿದುಂ ಕಣ್ಗಳಿಂಗಂ ಮನಕ್ಕಂ ೨೧

ಲೋಕತ್ರಯಕ್ಕೆ ಭೂಷಣ
ಮಾಕಳನಮನಾಂತನರ್ಘ್ಯಜಿನಪತಿರತ್ನಮ
ದೇಕಂ ಪುಟ್ಟಿದ ಕಾರಣ
ಮಾ ಕಾಲಂ ರತ್ನಪುರಮದಾದುದು ಸಾರ್ಥಂ ೨೨

ವ: ಅನ್ನೆಗಮಿತ್ತಲರ್ಥಾರ್ಥಿಯಪ್ಪನೊರ್ವಂ ಮೊಟ್ಟಮೊದಲೊಳ್ ಬೇಗದಿಂ ಪೋಗಿಯರ ಸಂಗೆ ಜಿನಜನ್ಮೋತ್ಸಾಹ ಪ್ರಥಮವಾರ್ತೆಯಂ ಪೇಳಲಬಳಾಹರ್ಷೋತ್ಕರ್ಷ ದಿಂದುರ್ಲಲಿತಗಾತ್ರನಾಗಿ ಮತ್ತಮೆಲ್ಲಾ ಭೂವಲ್ಲಭರ ಮೌಳಿಗಳಲ್ಲಿ ಚೂಡಾಮಣಿಯಂ ತೊಪ್ಪುತ್ತುಮಿರ್ಪ ಜ್ಞಾನಮುದ್ರೆಯೊಂದಲ್ಲದೆಲ್ಲಾ ವಸ್ತುಗಳನಂಗಚಿತ್ತಮಂ ಕೊಟ್ಟು ಬಹಳಮಪ್ಪೈಶ್ವರ್ಯದಿಂ ತನ್ನಯ ಸಮಾನನಾಗಿ ಮಾಡಿ ಬಳಿಯಂ ಪುರದೊಳರ ಮನೆಯೊಳಮಗ್ಗಳಮಾಗಿ ಪಿರಿದು ಜನ್ಮೋತ್ಸಾಹಮಂ ಕೊಂಡಾಡಲ್ವೇಳ್ಪುದುಂ

ಕುಡಿಗಳ್ ಕಟ್ಟಿದವೆಲ್ಲಿಯುಂ ಮಣಿಮಯೋದ್ಯತ್ತೋರಣಶ್ರೇಣಿಗಳ್
ಬಿಡದೆತ್ತಿರ್ದವು ಬೀದಿಬೀದಿಗಳೊಳಂ ರಂಗಾವಳೀಪಂತಿಗಳ್
ನಡುವಿಕ್ಕಿರ್ದವು ಕೂಡೆ ಬದ್ದವಣಮುಂ ಭೋರೆಂದು ದಲ್ ಬಾಜಿಸಲ್
ಗಡಣಂಗೊಂಡೆಡೆಯಾಡುತಿರ್ದುದದಱೊಳ್ ಶೃಂಗಾರಿತಸ್ತ್ರೀಜನಂ ೨೩

ಒಂದೆಡೆಯಲ್ಲಿ ಪಾಠಕಜನಂ ಬಿಡದೋದುವ ಗದ್ಯಪದ್ಯಸಂ
ನಂದಿತ ಮಂಗಳಧ್ವನಿಗಳುಂ ದಲದೊಂದೆಡೆಯಲ್ಲಿ ಯೋಗ್ಯರುಂ

ಗೊಂದಣೆಸಿರ್ದು ಘೋಷಿಸುವ ಮಂತ್ರನಿನಾದಮುಮೆಯ್ದೆ ಪೆರ್ಚಿ ಭೋ
ರೆಂದುಲಿಯಲ್ಕದಾಯ್ತು ಕರೆವಂತಿರೆ ತಾಂ ತ್ರಿಜಗತ್ಪುರಂಗಳಂ ೨೪

ಗಗನಮನೆಯ್ದೆ ಚುಂಬಿಸುತುಮಿರ್ದ ಲಸದ್ಧ್ವಜಚೂಳಿಕಾಪಟಾ
ಳಿಗಳಿನತೀವ ಪಲ್ಲವಿತಮಾಗೆಸೆವಾ ಪುರದಲ್ಲಿ ಭಾಸ್ಕರಂ
ಸೊಗಯಿಪ ತನ್ನ ಪಾದಮುಮನಿಕ್ಕಿದುದಿಲ್ಲ ಸುಚಂದನಾಂಬುವಂ
ಮಿಗೆ ತಳಿಯಲ್ ದಲಾದ ಕೆಸಱಿಂಗಿರದಂಜಿದನೆಂಬ ಮಾಳ್ಕೆಯಿಂ ೨೫

ಪಳಿಕಿಂ ಸಮೆದ ಸುಸೌಧಂ
ಗಳೊಳಂ ಮಾರ್ಪೊಳೆದ ಧವಳಕೇತುಪಟಂಗಳ್
ತಳೆದುವು ಚೆಲ್ವಂ ರಜತಾ
ಚಳದೊಳ್ ಮಿಗೆ ಪೊಳೆವ ಬಿಳಿಯ ಮುಗಿಲೆಂಬಿನೆಗಂ ೨೬

ಮನೆಮನೆತಪ್ಪದೆಲ್ಲೆಡೆಯೊಳಂ ವಿವಿಧಾತತವಾದ್ಯನಾದಮುಂ
ಘನಲಯ ತಾಳನಾದದೊಡಗೂಡಿದ ಮಂಗಳಗೀತನಾದಮುಂ
ಮನಮನಲರ್ಚಲುಣ್ಮೆ ನೆಱೆಪೊಣ್ಮೆ ವಿಭಾಷಿತವಾರನಾರಿಯರ್
ವಿನುತಮೆನಿಪ್ಪ ನೃತ್ಯಮನೊಡರ್ಚೆ ದಲಾಡುತುಮಿರ್ದರರ್ಥಿಯಿಂ ೨೭

ಸಂದಣೆಸಿ ಕುಣಿವ ಲಲನಾ
ವೃಂದ ಪ್ರತಿಬಿಂಬಮೆಲ್ಲಿಯುಂ ಪೊಳೆಯಲ್ಕಾ
ನಂದದಿನನೇಕರೂಪಿನೊ
ಳೊಂದಿ ಪುರೀಲಕ್ಷ್ಮಿ ಕುಣಿವವೊಲ್ ಕಣ್ಗೆಸೆಗುಂ ೨೮

ವ: ಅದಲ್ಲದೆಯುಂ

ಎಮ್ಮಯ ವಲ್ಲಭರ್ ತ್ರಿದಿವದಿಂದಿರದೀಗಳೆ ಬಂದು ಪೆರ್ಮೆ ಮ
ತ್ತಿಮ್ಮಡಿಯಾಗೆ ಕೂಡಿದಪರೆಂದು ವಿಶೇಷಿತಪುಣ್ಯತೀರ್ಥದೊಳ್
ಸಮ್ಮದದಿಂದೆ ಮಿಂದವೆನೆ ದಿಕ್ಕುಗಳೆಲ್ಲಮತಿಪ್ರಸನ್ನತಾ
ಧರ್ಮಿಗಳಾಗಿ ನಿರ್ಮಳತೆಯಂ ಪಡೆದೊಪ್ಪುತುಮಿರ್ದವಾಕ್ಷಣಂ ೨೯

ನೀರಜಮಾಯ್ತು ಭೂಮಿ ಸುಜನೋತ್ಕರದಂತೆ ಸರೋವರಂಗಳುಂ
ಸಾರತೆವೆತ್ತು ಕೂಡೆ ತಿಳಿದಿರ್ದುವು ಲಾಲಿತಸನ್ಮನಂಗಳಂ
ತಾರಯೆ ವಹ್ನಿ ದಕ್ಷಿಣದೊಳಂ ಸುಳಿದಿರ್ದುದು ಪಾಂಚಜನ್ಯದಂ
ತಾ ರಮಣೀಯವಾಯ್ತು ಸುರಭಿತ್ವಮನಾಂತುದು ಧೇನುವೆಂಬಿನಂ ೩೦

ನಿರ್ಮಳಮಾದುದು ಗಗನಮ
ದೊರ್ಮೊದಲೊಳಮಿಂದುಕಾಂತಶಿಲೆಯಂತೆ ಕರಂ
ಪೆರ್ಮೆಯ ಪಂಚವಿಭೂತಿಗ
ಳಂ ಮಿಗೆ ತಾಳ್ದಿದವು ಪಂಚಭೂತಂಗಳವುಂ ೩೧

ವ: ತನದನಂತರಂ

ಚಿರಕಾಲದೆ ಸೆಱೆಯೊಳಗಿ
ರ್ದರಿರಾಯರ್ ಮುಖ್ಯರಾದ ಸೆಱೆಯೆಲ್ಲಮುಮಂ
ನರಪಂ ಬಿಡಿಸಿದೊಡಾಗಳ್
ಪರಮುದು ಮಿಗೆ ಮೆಲ್ಲಮೆಲ್ಲನಡಿಯನಿಡುತ್ತುಂ ೩೨

ಎಲ್ಲಾ ಪ್ರಜೆಗಳ್ಗಂ ತ
ಳ್ತಿಲ್ಲದೆ ಸಂಪತ್ತಿಯುಂ ಮಹಾರೋಗ್ಯಮುಮಾ
ಯ್ತಲ್ಲಿ ಜಿನಜನನಸಮಯದೊ
ಳೆಲ್ಲಂ ಸುಖಕಾರಣಂ ದಲಾಗದುದುಂಟೇ ೩೩

ವ: ಇಂತು ಸಕಳಜನಮನೋನಯನ ಸಮಾಕರ್ಷಣ ವಿದ್ಯಾದೇವತೆಯಂತೆ ಹೃದ್ಯಮಯ ಮಾಗಿರ್ಪುದುಂ

ಪಿರಿದಾದುತ್ಸವರಾಶಿಯ
ನರವಿಂದಜನಲ್ಲಿ ಬೈಕೆಯಾಗಿರಿಸಿದವೊಲ್
ಪುರಮದು ನಿರವಧಿ ನಿರುಪಮ
ಪರಮೋತ್ಸವಭರಿತಮಾಗಿ ಪಡೆದುದು ಚೆಲ್ವಂ ೩೪

ವ: ಮತ್ತಂ ದೇವಾಧಿದೇವನ ಜನನಮಂ ಚತುರ್ವಿಧದೇವರ್ಕಳೆಲ್ಲಮಱಿ ವಂತಿರಾ ಮಹಾಮಹಿಮನ ನಿರತಿಶಯಸುಕೃತಮೆಂಬ ದೂತಂ ಪೋಗಿ ತನ್ನಿವಾಸ ದೊಳಸಾಧಾರಣ ಲಕ್ಷಣಮಂ ಪ್ರೇರಿಸಿದನೆಂಬಂತಿರಿಂತಪ್ಪ ಚಿಹ್ನಂಗಳೊಗೆದವ ವೆಂತೆಂದೊಡೆ

ಭವನಾಮರ ಲೋಕದೊಳೂ
ದುವರನಪೇಕ್ಷಿಸದೆ ಶಂಖನಿನದಂ ದಶದಿ
ಗ್ವರವನ್ನಾವರಿಸಿತ್ತಭಿ
ನವಪುಣ್ಯನ ಜನಿಯನಱಿದರವರದಱಿಂದಂ ೩೫

ವ್ಯಂತರಲೋಕದೊಳಂ ಕರ
ಸಂತಾಡನರಹಿತಮಾಗಿ ಡಿಂಡಿಮರವಮಾ

ಶಾಂತದೊಳೆಲ್ಲೆಡೆಯೊಳಮೋ
ರಂತಿರೆ ಪರಕಲಿಸಲ ಱಿದರವರದಱೆಂದಂ ೩೬

ಜ್ಯೋತಿರ್ಲೋಕದೊಳಂ ಸಲೆ
ಸಾತಿಶಯಂಬಡೆದುದುಚ್ಚಸಿಂಹನಿನಾದಂ
ಘಾತಗುಣನಿಳಯನುದಯಮ
ನೀತೆಱದಿಂದಱಿದರಾಗಳಾ ಜ್ಯೋತಿಷ್ಕರ್ ೩೭

ಕಲ್ಪಾವಾಸಿಗಲೋಕದೊ
ಳಲ್ಪತರವವಾ ಸುವರ್ಣಘಂಟಾಜಾಳಂ
ಶಿಲ್ಪಿಕರಸ್ಪರ್ಶನ ಪರಿ
ಕಲ್ಪನಮಿಲ್ಲದೆಯುಮುಲಿಯಲದಱಿಂದಱಿದರ್ ೩೮

ವ: ಇಂತೀ ತೆಱದ ಕುಱುಪುಗಳಿಂ ನಾಲ್ಕುಪರಿಯಾದ ದೇವರ್ಕಳೆಲ್ಲಂ ಧರ್ಮ ಜಿನನಾಥನುತ್ಪತ್ತಿಯನೊರ್ಮೊದಲೆಯಱಿತತೀವ ಭಕ್ತಿಭಾರಭರದಿಂದೆಂ ಬಂತಿರವನತ ಮಸ್ತಕರಾಗಿ ಕೈಗಳಂ ಮುಗಿದಾನಂದದೊಳೊಂದಿರ್ಪುದುಂ ಬಳಿಯಂ ಸೌಧರ್ಮಕಲ್ಪದ ಸುಧರ್ಮಾಪರಿಸರದೊಳ್

ಸುರರೊಲವಿಂ ಸುರಿಯದೊಡಂ
ಪಿರಿದಾಗಿಯೆ ಕೊಳ್ವ ಚೆಲ್ವ ಪೂಮಳೆಯಂ ಕಂ
ಡರಿದಪ್ಪ ಮೈಮೆಗಂದ
ಚ್ಚರಿವಟ್ಟುದು ಶಕ್ರಮುಖ್ಯದೇವಸಮೂಹಂ ೩೯

ವ: ತದನಂತರಂ

ಉದಯಿಸೆ ಮೂಜಗಕ್ಕೊಡೆಯನುಂ ಪರಮಾತಿಶಯಪ್ರಭಾವ ಸಂ
ಪದನುಮೆನಿಪ್ಪ ಧರ್ಮಜಿನಪಂ ಸಲೆ ಮತ್ತುಳಿದನ್ಯರಿಂಗದೇ
ಕೊದವಿದ[ಡಿದ್ಧತಾ]ಮದ ವಿಡಂಬನಮೆಂತು ತದೀಯಶಕ್ತಿ ಬಂ
ದೊದೆದವೊಲಾಕ್ಷಣಂ ನಡುಗಿದತ್ತು ಸುರಾಧಿಪಸಿಂಹವಿಷ್ಟರಂ ೪೦

ನಿಜಸಿಂಹಾಸನಕಂಪಕಾರಣಮುಮಂ ಸಾಹಸ್ರನೇತ್ರಂಗಳ
ವ್ರಜದಿಂ ಕಾಣದೆ ವಿಸ್ಮಯಾಕುಳಿತನಾಗುತ್ತಾವಧಿಜ್ಞಾನಮೆಂ
ಬ ಜನಸ್ತುತ್ಯವಿನೇತ್ರಮಂ ತೆಱೆದು ಕಂಡಂ ವ್ಯಕ್ತಮಾಗಂದು ಧ
ರ್ಮಜಿನಾಧೀಶ ಸಮುದ್ಭವಸ್ಥಿತಿಯನಾ ದೇವೇಂದ್ರನಾನಂದದಿಂ ೪೧

ವ: ಅದಱಿಂ ಪದಿನಯ್ದನೆಯ ತೀರ್ಥಂಕರನುದಯಮನತಿವಿಸ್ತಾರದಿಂದಱಿದು ಬೇಗದಿಂ ಸಿಂಹಾಸನದಿಂದೆಳ್ದು ಕೈಗಳಂ ಮುಗಿದು ನೊಸಲ್ಗೆತಂದಾ ದಿಕ್ಕಿಂಗಭಿಮುಖನಾಗಿ

ಏಳಡಿಯಂ ನಡೆದತ್ತಲ್
ಮೇಲೆನೆ ಜಯಜಯನಿನಾದಮಂ ಮಾಡುತ್ತುಂ
ಲೀಲೆಯಿನೆಱಗಿದನಿಂದ್ರಂ
ಪಾಲಿತಘನಭಕ್ತಿಭಾರದಿಂದೆಂಬಿನೆಗಂ ೪೨

ವ: ಮತ್ತಂ

ಜನ್ಮಾಭಿಷೇಕಮಂ ಮಿಗೆ
ಮನ್ಮಥಹರಣಂಗೆ ಮಾಳ್ಪ ಬಗೆಯಿಂದಂ ದಿವಿ
ಷನ್ಮಂಡಳಮ ಱಿಪಂತಿರೆ
ಸನ್ಮಂಗಳಯಾನಂದಭೇರಿಯಂ ಪೊಯ್ಸಿಸಿದಂ ೪೩

ಆ ಭೇರೀನಾದಮಾದಂ ಸಕಳಸುರವಿಮಾನಪ್ರತಾನೋರುರಂಧ್ರಾ
ಳೀ ಭೋಗಾಭೋಗದೊಳ್ ತೆಕ್ಕನೆ ಭರವಸದಿಂ ತೀವಿ ಪರ್ಜಿರ್ದುದೆತ್ತಂ
ಶೋಭಾವದ್ದೇವವೃಂದಂಗಳನು ಱೆ ಕರೆಯಲ್ಕೆಂಬವೊಲ್ ಬೇಗದಿಂದೆ
ಸ್ವರ್ಭೂಮಿಸ್ಥಾನದೊಳ್ ವ್ಯಾಪಿಸಿದುದು ಪಿರಿದಾಶ್ಚರ್ಯಮಂ ಪುಟ್ಟಿಸುತ್ತುಂ ೪೪

ವ: ಅನಂತರಂ ಭವನಾಮರಲೋಕದಿಂ ಚಮರವೈರೋಚನ ಪ್ರಮುಖ ಚತ್ವಾರಿಂಶದಿಂದ್ರರ್ ಮುಖ್ಯಮಾದ ಭವನವಾಸಿದೇವರ್ಕಳೆಲ್ಲಂ ವ್ಯಂತರಲೋಕದಿಂ ಸತ್ಪುರುಷ ಮಹಾಪುರುಷ ಪುರಸ್ಸರ ದ್ವಾತ್ರಿಂಶದಿಂದ್ರರಾದಿಯಾದ ವ್ಯಂತರದೇವರ್ಕಳೆಲ್ಲಂ ಜ್ಯೋತಿರ್ಲೋಕದಿಂ ಚಂದ್ರಸೂರ್ಯರ್ಮುಖರರಾದ ಜ್ಯೋತಿಷ್ಕದೇವರ್ಕಳೆಲ್ಲಂ ಕಲ್ಪಾಮರ ಲೋಕಂಗಳಿಂದೀ ಸನತ್ಕುಮಾರ ಮಾಹೇಂದ್ರಪ್ರಭೃತಿ ಚತುರ್ವಿಂಶತೀಂದ್ರರ್ ಮುಂತಾದ ಕಲ್ಪವಾಸಿ ದೇವರ್ಕಳೆಲ್ಲಂ ನಿಜನಿಜದೇವಿಯರೊಡಗೂಡಿ ಮಣಿಮಯ ಷೋಡಶಾಭರಣ ಪರಿಭೂಷಿತ ದಿವ್ಯದೇಹರಾಗಿ ಸಾಮಾನಿಕತ್ರಯಸ್ತ್ರಿಂಶದಾತ್ಮ ರಕ್ಷಲೋಕಪಾಳಕ ಪ್ರಕೀರ್ಣಕಾಭಿಯೋಗ್ಯ ಕಿಲ್ಬಿಷದೇವಪ್ರಮುಖ ಪರಿವಾರ ಸೇನಾಸಮೂಹಂಬೆರಸು ತಂತಮ್ಮ ವಾಹನಂಗಳನೇ ಱೆ ಮನೋವೇಗದಿಂದೆಯ್ದಿಬಂದು ಸೌಧರ್ಮೇಂದ್ರನ ರುತುವಿಮಾನದ ಮುಂದೆ ಸಂದಣಿಸಿ ಗೊಂದಣಂಗೊಂಡು ನಿಂದಿರ್ಪುದುಂ

ದಶದಿಕ್ಪಾಲಕರೆಯ್ದಿದ
ರೊಸೆದು ಸ್ವಾಯುಧವಧೂಸುಚಿಹ್ನಸಮೇತರ್
ಮಿಸುಪ ಪರಿವಾರಮುಂ ಬೆರ
ಸೆಸೆವ ಸ್ವಸ್ವೋರುವಾಹನಾರೂಢರ್ ತಾಂ ೪೫

ವ: ಅಂತವಿಲಂಬನದಿಂ ನೆರೆದು ಬಂದ ನಿರವಶೇಷಿತಾಂಬರಚರ ಚಮೂ ವಿಚಿತ್ರ ಶೋಭಾಡಂಬರ ಕರಂಬಿತ ವಿಮಾನ ನಿಕುರುಂಬಂಗಳ ಪಂತಿಗಳ್ ತಿಂತಿಣಿ

ಗೊಂಡೊಂದೆ ತಾಣದೊಳ್ ನಿಲಲೆಂದು ಧರ್ಮಜಿನನಾಥನ ಜನ್ಮಾಭಿಷವಣಕಲ್ಯಾಣ ಕರಣಕಾರಣಂ ನಿರ್ಯಾಣರಣರಣಕ ಪರಿಕಳಿತನಾದ ಗೀರ್ವಾಣರಮಣನ ಪೊಜಿ ವೀಡೆಂಬಂತೆ ಕಣ್ಗೊಂಡಿಪ್ಪುದುಂ

ಪಿರಿದುಂ ತೋರಿದವಾದ ರತ್ನಮಯಘಂಟಾಚಕ್ರವಾಳಂಗಳಿಂ
ವರಮುಕ್ತಾಮಯಮಾಲಿಕಾವಿಸರ ನಾನಾಚಿತ್ರಲಂಬಂಗಳಿಂ
ಪರಿತಪ್ತೋತ್ತಮ ಹೇಮಕಿಂಕಿಣಿಗಳಿಂ ಸದ್ಘಂಟಿಕಾಪೇಟದಿಂ
ಕರಮೊಪ್ಪಂಬಡೆದಿರ್ದ ದೇವಗಜಮಾಗಳ್ ಬಂದುದಾನಂದದಿಂ ೪೬

ವ: ಮತ್ತಮೈರಾವತಕ್ಕೆ ಮೂವತ್ತೆರಡು ಮೊಗಂಗಳಾ ಮೊಗಂಗಳೊಂದೊಂದ ಕ್ಕೆಂಟೆಂಟು ದಂತಂಗಳಾ ದಂತಂಗಳೊಂದೊಂದಱೊಳೊಂದೊಂದು ಸರೋವರಂಗಳಾ ಸರೋವರಂಗಳೊಂದೊಂದಱೊಳೊಂದೊಂದು ಪದ್ಮಿನೀವಲ್ಲಿಯಾ ಪದ್ಮಿನೀವಲ್ಲಿ ಯೊಂದೊಂದಱೊಳ್ ಮೂವತ್ತೆರಡು ವಿಕಚಕಮಳಂಗಳಾ ಕಮಳಂಗಳೊಂದೊಂದಕ್ಕೆ ಮೂವತ್ತೆರಡೆಸಳ್ಗಳಾ ಚೆಲ್ವೆಸಳ್ಗಳೊಂದೊಂದಱೊಳ್ ಮೂವತ್ತಿರ್ವರಮರಕುಮಾರಿ ಯರ್ ತಾಂಡವಾಡಂಬರಮಂ ವಿಡಂಬಿಸುತ್ತುಮಿರ್ಪರಿಂತು ವಿಗುರ್ವಣೆಯಗುರ್ವಿಂ ದುರ್ವಿ ಕೊರ್ವಿದ್ದೈರಾವಣ ಮಹಾವಾರಣಂ ಬಂದು ನಿಂದಿರ್ಪುದುಂ

ಧರಣೇಂದ್ರಶ್ರೇಣಿ ಮೇಗಣ್ಗಡರಿದ ತೆಱದಿಂ ಲಂಬಿಸುತ್ತಿರ್ದ ಮೂವ
ತ್ತೆರಡುಂ ಶುಂಡಾಲದಂಡಂಗಳಿನತಿಸಿತಮೇಘಂಗಳೊಡ್ಡೆಂಬಿನಂ ಪೀ
ವರಕಂಪೋತ್ಕರ್ಷತಾಳಂಗಳಿನುಱೆ ಗಗನಾಭಾಗಮಂ ತುಂಬಿಕೊಂಡಿ
ರ್ದುರು ಭಾಸ್ವತ್ಕಾಯದಿಂದದ್ಭುತಮನೊಡರಿಸಿತ್ತಭ್ರಮೂಜೇವಿತೇಶಂ ೪೭

ವ: ಅನಂತರಂ

ಪಿರಿದುಮನರ್ಘ್ಯರತ್ನಮಯಷೋಡಶಭೂಷಣಮೆಲ್ಲಮಂ ಮಹಾ
ಕಿರಣಗಣಂಗಳಂ ಕೆದಱುತಿರ್ದುದನೊಯ್ಯನೆ ತೊಟ್ಟು ಚಿತ್ರಬಂ
ಧುರತರವಸ್ತ್ರಮಂ ಮುದದಿನುಟ್ಟು ಮಹಾಶಚಿಯುಂ ಸುರೇಂದ್ರನುಂ
ಸುರಕರಿಯಂತಿಕಕ್ಕೆ ನಡತಂದರತೀವ ವಿಚಿತ್ರವೇಷದಿಂ ೪೮

ಸಾಸಿರಕಣ್ಗಳೆಲ್ಲಮುಮನೊರ್ಮೊದಲೊಳ್ ತೆಱೆದಾ ಪ್ರಭಾಳಿಯಿಂ
ಲೇಸೆನೆ ಚಿತ್ರಿಪಂತೆ ಬಿಳಿಯಾನೆಯ ವಿಸ್ಮಯಕಾರಿರೂಪಮಂ
ವಾಸವನೆಯ್ದೆನೋಡಿ ತಲೆಯಂ ನೆಱೆತೂಗಿರದೇಱಿದಂ ಸಮು
ದ್ಭಾಸಿ ಸಿತಾತಪತ್ರತತಿಗಳ್ ಪುದಿಯಲ್ ನಭದಂತರಾಳಮಂ ೪೯

ಮಣಿಮಯಪಾರಿಹಾರ್ಯರವ ಕಿಂಕಿಣಿ ಕಂಕಣಮುಖ್ಯಚಾರುಭೂ
ಷಣನಿನದಂಗಳುಣ್ಮೆ ನೆಱೆ ಪೊಣ್ಮಿರೆ ಕೋಮಳದೇಹಕಾಂತಿಗಳ್

ಕುಣಿದಡರ್ದೇಱಲಾಗಸಮುಮಂ ಮುದಮೇಱರೆ ಚಿತ್ತವೃತ್ತಿಯಿಂ
ಪ್ರಣುತೆ ಶಚೀಮಹಾಸತಿ ದಲೇಱದಳಂದು ಸುರೇಂದ್ರದಂತಿಯಂ ೫೦

ವ: ಇಂತು ನಾನಾವಿಧ ಪರಿಲಂಬಮಾನಚಂಚಚ್ಚಾರುಚಾಮೀಕರ ಚಾಮರ ಸಂಚಯಂಗಳಿಂ ಪಲವುಂ ತೆಱದ ಪಲ್ಲವ ಸತ್ತಿಗೆಗಳ ಮೊತ್ತದಿಂದಳಂಕೃತಮಾ ದೈರಾವಣ ಮಹಾವಾರಣಮಂ ದೇವೇಂದ್ರನಿಂದ್ರಾಣಿ ಸಮೇತನಾಗಿ ಸಮಾರೋಹಣಂ ಗೆಯ್ದು ಸಿಂಧುರಸ್ಕಂಧದೊಳ್ ಕುಳ್ಳಿರ್ಪುದುಂ

ದಿವಿಜಗಜಂ ಜಳಜ್ಝಳಝಳಿಂದುರುಚಂಚಳಕರ್ಣಪಾಳಿಕಾ
ನಿವಹಮನೆಯ್ದೆ ಬೀಸೆ ಮದಗಂಡವಿಮಂಡಳಮಂಡಿತಾಳಿಗಳ್
ಜವದೊಳಮಳ್ಳು ಮೇಗಡರುತಿರ್ದುದು ಕಣ್ಗೆಸೆದತ್ತು ಪಾಪದು
ರ್ಣವಮಿರದಂಜಿ ಜೈನಪಥವರ್ತಿಗಳಂ ನೆಱೆ ಬಿಟ್ಟು ಪೋಪವೊಲ್ ೫೧

ವ: ಇಂತು ಚತುರ್ನಿಕಾಯಾಮರೇಂದ್ರಪುರಸ್ಸರಂ ಸೌಧರ್ಮೇಂದ್ರನತೀವ ರುಂದ್ರಲೀಲೆಯಿನಲ್ಲಿಂದಂ ತಳರ್ವುದುಂ

ನಾನಾಜಾತೀಯ ಗಂಭೀರ ಮಣಿಮಯಮಹಾತೂರ್ಯಸಂದೋಹಘೂರಿ
ಧ್ವಾನಂ ತಳ್ತೊಯ್ಯೆ ದಿಗ್ಭಿತ್ತಿಗಳನಮಿತಸತ್ಕಾಹಳಾವತ್ಕಳಾಪ
ಸ್ವಾನಂ ಕೈಗಣ್ಮೆ ಪೊಣ್ಮುತ್ತಿರೆ ಜಯಜಯವೆಂಬುದ್ಧನಿರ್ಘೋಷಣಾಸಂ
ತಾನಂ ಘೋರೆಂದು ಪೆರ್ಚುತ್ತಿರೆ ಮಿಗೆ ನಡೆಗೊಂಡಂ ನಿಳಿಂಪಾಧಿರಾಜಂ ೫೨

ಗಗನಂ ತೆಕ್ಕನೆ ತೀವೆ ಚಿತ್ರರುಚಿರಶ್ವೇತಾತಪತ್ರಂಗಳಿಂ
ಸೊಗಸಂ ಬೀಱುವ ರತ್ನದಂಡ ಚಮರೀಜಶ್ರೇಣಿ ಸಂಚಾರದಿಂ
ದೊರೆವುತ್ತಿರ್ದುದುರುಮಂದಗಂಧವಹನಿಂದಂ ಪೆರ್ಚಿ ತೀವ್ರಾನಿಳಂ
ಗಗನಂ ತಾಂ ತೆಱಪಿಲ್ಲಮೆಂಬ ತೆಱದಿಂ ಬಂದತ್ತದೊಂದೊಪ್ಪದಿಂ ೫೩

ಬಾಳದ ಬೇರ್ಗಳಿಂ ಸಮೆದ ಬಾಳಮನೋಹರತಾಳವೃಂತಮಂ
ಲೀಲೆಯೊಳೊಪ್ಪದಿಂ ಪಿಡಿದ ದೇವವಿಳಾಸವತೀಜನಂಗಳಂ
ದೋಳಿಯೆ ನಿರ್ಜರಾಧಿಪತಿಯಿಕ್ಕೆಲದೊಳ್ ನಡೆತಂದರುತ್ಕಟಾ
ಕ್ಷಾಳಿಗಳಿಂ ಕರಂ ಧವಳಿಸಿತ್ತುಮಶೇಷದಿಗಂತರಾಳಮಂ ೫೪

ವ: ಮತ್ತಂ ದೇವೀಜನಂ ದೇವಾಧಿಪನ ಸುತ್ತಲುಮತ್ಯುತ್ತಮ ವಿಳಾಸರಸಂ ತುಂಬಿ ತುಳ್ಕಾಡುತ್ತುಮಡಿಗಡಿಗಳನಿಡುವ ಪದಪದದೊಳ್ ಕೊರಳ್ಗಳೊಳಿಕ್ಕಿದ ಮಣಿಮಯ ತೋರಹಾರಭಾರಾಗ್ರಂಗಳ ಬಳಗಂ ತಂತಮ್ಮೊಳೊಂದೊಂದಱೊರ ಸೊರಸಿಂ ಪುಟ್ಟಿದ ಝುಣಝುಣ ಮೆಲ್ಲುಲಿಯಿಂ ವಾಚಾಳಿತಂಗಳಾದ ತೋರಬಟ್ಟ ಮೊಲೆಗಳ್

ತಮ್ಮೊಳೊಂದೊಂದು ಮುಟ್ಟಿ ಬಿಣ್ಪಿಂದಳ್ಳಾಡುತ್ತುಮಿರ್ದು ಸಮುಲ್ಲಾಸಿ ಲಾಸ್ಯರಸಪೇಶಲ ಕಾಂಸ್ಯತಾಳಲೀಲಾಸಮಾಶ್ರಿತಂಗಳಾದುವೆಂಬ ಶಂಕೆಯನಂಕುರಿಸು ತ್ತುಮಿರೆ ಮೊತ್ತಗೊಂಡು ಮೆಲ್ಲಮೆಲ್ಲನೆ ನಡೆವಾಗಳ್

ತೊಡಿಗೆಯ ತೋರಮುತ್ತುಗಳ ಮೊತ್ತಮೆ ತಾರೆಗಳಂತೆ ಕೂಡೆ ಸಂ
ಗಡಿಸಿರೆ ವಕ್ತ್ರಮಂಡಳಿಗಳುದ್ಧ ಕಳಾಧರಮಂಡಳಂಗಳಂ
ತೊಡರಿಸೆ ಚೆಲ್ವನೆಯ್ದೆ ದರಹಾಸವಿಳಾಸಮೆ ಚಂದ್ರಿಕೌಘಮಂ
ಬಿಡದುಱೆ ಪೆರ್ಚಿಸಲ್ ಪಗಲೊಳಂ ಪಡೆದತ್ತದು ರಾತ್ರಿಯಂದಮಂ ೫೫

ಪಿರಿದುಂ ನಾಟ್ಯಮನಾಡುತಿರ್ದಮರನಾರೀರತ್ನಭೂಷಾವಳೀ
ಕಿರಣಂ ಚಂಚದಪಾಂಗಕಾಂತಿ ನಿಕುರುಂಬಂ ಕುಂತಳಚ್ಛಾಯೆಯಂ
ಭರದಿಂದಂ ಪುದಿದೆಯ್ದೆ ರಂಜಿಸುತುಮಿರ್ದತ್ತಾಕ್ಷಣಂ ಬಾಳಭಾ
ಸ್ಕರತೇಜಂ ಬೆಳುದಿಂಗಳುಂ ತಮಮುಮೊಂದಾಗಲ್ಲಿ ತೋರ್ಪಂದದಿಂ ೫೬

ದಿವಿಜಸ್ತ್ರೀಯರದೋರ್ವರೋರ್ವರ ತನೂಸಂಘಟ್ಟದಿಂ ರತ್ನಹಾ
ರವರಂಗಳ್ ಪಱಿದೆಯ್ದೆ ಚಲ್ಲಿ ಪೊಳೆಯುತ್ತುಂ ವ್ಯೋಮದಿಂ ಬಿಳ್ದು ತಾಂ
ಕವಿಯುತ್ತಿರ್ದವು ತಾಳ್ದವಂದು ಸೊಗಸಂ ದೇವೇಭಪಾದಪ್ರಭಾ
ರವಶೋಚ್ಚೂರ್ಣಿತ ತಾರಕಾವಿತತಿಗಳ್ ವ್ಯೋಮಾಗ್ರದಿಂ ಬೀಳ್ವವೊಲ್ ೫೭

ಕಂಗಳ್ ಮೀಂಗಳ್ ಮೊಲೆಗಳ್
ತುಂಗ ರಥಾಂಗಂಗಳಾಗೆ ಲಾವಣ್ಯರಸಂ
ಪಿಂಗದಿರಲಪ್ಸರೋಗಣ
ಮಂ ಗೆಲೆವಂದಪ್ಸರೋಗಣಂ ರಂಜಿಸುಗುಂ ೫೮

ರಂಭೆಯ ತೆಱದಿಂ ಚೆಲ್ವಂ
ರಂಭೆಕರಂ ತಳೆದಳಂದು ನೀಲಾವರಣೋ
ಜ್ಜೃಂಭದ್ವಿವರಾಂತರದೊಳೆ
ಶುಂಭನ್ಮೃದುಳೋರುದಂಡೆಯಪ್ಪುದಂದಂ ೫೯

ವ: ಮತ್ತಂ ಮಾಲ್ಯಾಂಗಕಲ್ಪತರುಪರಿನಿಷ್ಪನ್ನಾನಲ್ಪತರಪುಷ್ಪಮಾಲಾವಳಿ ವಿಪುಳ ಫಳಸಂಕುಳಮಿಳಿತಮಣಿಮಯಪವಿತ್ರಪಾತ್ರಂಗಳಂ ಕರಂಗಳಿಂ ಪಿಡಿದುಕೊಂಡಿರ್ದ ಕಿಂಕರಸುರಚಕ್ರವಾಳಂ ಜನ್ಮಾಭಿಷವಣಕಲ್ಯಾಣಕೌತುಕಮಂ ನೋಡಲೆಂದು ಪಿಂದನೆ ಬರುತ್ತುಮಿರ್ದ ಕಲ್ಪವೃಕ್ಷನಂದನವನಮೆಂಬಂತೆ ಸುತ್ತಲುಂ ಕಿಕ್ಕಿಱಿಗಿಱಿದು ನಡೆಯೆ

ಅಲರ್ಗಳಮಳೆ ಕವಿತರಲಂ
ದೊಲಿದಿದಿರ್ಗೊಳಲೆಂದು ಪೋಪ ತುಂಬಿಗಳೆಂಬಂ

ತೆಲರಿಂದಲ್ಲಾಡುವ ಮಿಗೆ
ಪಳವಿಗೆಗಳ ನೀಲಘನಪಟಂಗಳ ಬಳಗಂ ೬೦

ವ: ಆಗಳ್

ತರುಣರವಿನಿಕರಕಿರಣಂ
ಭರದಿಂದಂಬರಮನೆಯ್ದೆ ಬೆಳಗುವ ತೆಱದಿಂ
ಸುರಮಕುಟಾರುಣ ಮಣಿಗಳ
ಕರಮೊಂದಾಗಂದು ಬೆಳಗಿದತ್ತಂಬರಮಂ ೬೧

ತಾರಾಪಥದೊಳ್ ದಿವಿಜರ್
ತಾರೆಗಳಂ ಕಂಡು ಪೋಪ ಗಜಘಟೆಗಳ ಪೂ
ತ್ಕಾರವಿನಿರ್ಗತ ಜಲಕಣ
ಸಾರಂಗಳೆವೆಂದು ಬಗೆದರತಿದೂರದೊಳಂ ೬೨

ಒರ್ಪೊರ್ವರಂಗಸಂಗದ
ಗುರ್ಪಿಂದಂ ಪಱಿದು ಬಿಳ್ದ ಮುತ್ತುಗಳೆಲ್ಲಂ
ಕೊರ್ವಿರ್ದರ್ವೆಂದು ಬಗೆದರ್
ಗೀರ್ವಾಣರ್ ಮತ್ತೆ ಸನ್ನಿಧಿಸ್ಥಾನದೊಳಂ ೬೩

ಹೂಹೂ ಹಾಹಾದಿ ಗಂಧರ್ವರ ಮೃದುತರ ಸಂಗೀತರಾಗಧ್ವನಿ ಸಂ
ದೋಹಾಸಕ್ತಂ ಸುಧಾಸತಿಯ ಹರಿಣನದೊಂದು ಕ್ಷಣಂ ಕೂಡೆ ಚಿತ್ತೋ
ದ್ದಾಹಿ ಸ್ವರ್ಗಾನಕಂಗಳ್ ಮೊಳಗಲವಱ ನಾದಂಗಳಂ ಕೇಳ್ದು ಭೀತಿ
ಗ್ರಾಹಂ ತಾನತ್ತಲಿತ್ತಲ್ ಪರಿದುಱೆ ವಿಧುವಂ ಕಾಡುತಿರ್ದತ್ತದಾದಂ ೬೪

ಸುರರ ವಿಚಿತ್ರಪತ್ರಚಯದಿಂದಮೆ ತುಂಬಿ ನಭೋಮಹೀರುಹಂ
ಸುರುಚಿರ ಶೋಣಕೇತುಪಟದಿಂದಮೆ ಪಲ್ಲವಿತಂ ದಲಾಯ್ತು ಬಂ
ಧುರ ಧವಳಾತಪತ್ರಗಣದಿಂದಮೆ ಪುಷ್ಪಿತಮಾಯ್ತು ರತ್ನವಿ
ಸ್ಫುರಿತ ವಿಮಾನದಿಂದೆ ಫಲಿತಂ ಬಿಡದಾಗೆಸೆದತ್ತದಾಕ್ಷಣಂ ೬೫

ರವಿತುರಂಗಂಗಳುಂ ಯಮನ ಕೋಣನುಮೊಪ್ಪುವ ಚಂದ್ರಸಿಂಹಮುಂ
ಪವನನ ಪುಲ್ಲೆಯುಂ ನೆಱೆಯೆ ಬಿಟ್ಟು ಪರಸ್ಪರ ವೈರಭಾವಮಂ
ಜವದೊಳೆ ಬಂದವೆಂದು ನೆರೆದೆಲ್ಲವುಮೊಂದಿ ಜಿನೇಶಮಾರ್ಗಸಂ
ಭವಿಗಳದಾರೊ ಬಿಟ್ಟು ಕಳೆಯರ್ ಮನದಲ್ಲಿಯ ವೈರಭಾವಮಂ ೬೬

ವ: ಈ ತೆಱದಿಂ ನಾಕಸೈನ್ಯಾನೀಕಮೆಲ್ಲಂ ಜ್ಯೋತಿರ್ಲೋಕಮನಾಕ್ರಮಿಸುತ್ತುಮಿರೆ

ಮಿಸುಪ ವಿಮಾನಸಂತತಿಗಳೆಂಬ ಮನೋಹರಕೂಟಕೋಟಿಯಿಂ
ದೆಸೆವ ನಭಸ್ಥಳೀನಗರಗೋಪುರದೊಳ್ ಪಳಿಕಿಂದೆ ಕೂಡಿ ನಿ
ರ್ಮಿಸಿದ ಪೊಸಂತಿಲೆಂಬ ಬಗೆಯಂ ಸುರರಿಂಗುಱೆ ಪುಟ್ಟಿಸುತ್ತು ಮಾ
ನಸದೊಳೆ ದೇವಗಂಗೆ ಸೆಱೆಗೊಂಡುದು ನೋಳ್ಪರ ಕಣ್ಗಳೆಲ್ಲಮಂ ೬೭

ಅನಿಮೇಷದೃಷ್ಟಿವಿಷದು
ರ್ಧ್ವನತೆಯಿನುರುಗಗನಮೆಂಬ ಕಾಳೋರಗನಿಂ
ವಿನಿಮಿತ್ತ ಭೂರಿನಿರ್ಮೋ
ಳನ ಮೀನಸುರಜ್ಜುವೆಂಬಿನಂ ಕಣ್ಗೆಸೆಗುಂ ೬೮

ಕರಿಘಟೆಯೊಡ್ಡುಗಳ್ ತರಣಿಮಂಡಳಸನ್ನಿಧಿಯೊಳ್ ಬರುತ್ತುಮಿ
ರ್ದುರುತರಗಂಡಮೂಲಮತಿತಾಪಮನಾಂತಿರೆ ಜಾಹ್ನವೀಜಲಾಂ
ತರದೊಳೆ ಪೊಕ್ಕು ಮುಕ್ಕುಳಿಸಿ ಪೂತ್ಕರಿಸಲ್ ನೆಗೆದಿರ್ದ ಸೀಕರೋ
ತ್ಕರಮೆಸೆದತ್ತು ತಚ್ಛ್ರವಣಚಂಚಳ ಚಾಮರಸಾರ್ಥದಂದದಿಂ ೬೯

ವ: ಅಂತುಮಲ್ಲದೆಯುಂ

ಸುರಗಂಗಾತೀರದೊಳ್ ಭೂರಿತರಹರಿತಪತ್ರಂಗಳಿಂ ಚೆಲ್ವನಾಂತಿ
ರ್ದುರುಭಾಸ್ವದ್ಬಿಂಬಮಂ ಕಂಡಿದು ಲಸದರುಣಾಂಭೋಜಮೆಂದಾ ಸುರಾಧೀ
ಶ್ವರದಂತೀಂದ್ರ ಸ್ವಹಸ್ತಾಗ್ರದಿನುಱೆಪಿಡಿಯಲ್ಕುಷ್ಣದಿಂ ನೊಂದು ತಾಂ ಪೂ
ತ್ಕರಿಸುತ್ತುಂ ಬಿಟ್ಟು ಕೈಯಂ ಕೊಡಹಿಕೊಳುತುಮಿರ್ದಲ್ಲಿಯಾದತ್ತು ಹಾಸ್ಯಂ ೭೦

ಮತ್ತಮದಭ್ರವಿಭ್ರಮವಿನಿರ್ಭರಿತಾಭ್ರಪರಿಸ್ಪೃಶನ್ಮರು
ನ್ನರ್ತಿತಶುಭ್ರಕೇತನಪಟಂಗಳವೊಪ್ಪಿದುವಭ್ರದಲ್ಲಿ ದೇ
ವೋತ್ತಮಗಂಗೆ ಮಜ್ಜನದ ಪೊತ್ತಱೆದಂದುರುರೂಪಕೋಟಿಯಂ
ಪೆತ್ತು ಬರುತ್ತಮಿರ್ದ ತೆಱದಿಂ ಕಳಿದರ್ ಸುರರಾ ದ್ಯುಗಂಗೆಯಂ ೭೧

ಆಗಸಮೆಂಬ ವಾರಿನಿಧಿಯಂ ಮಕರೋಚ್ಚಕುಳೀರಮೀನಸಂ
ಯೋಗಮನುಳ್ಳುದಂ ಸುರರ ಗೀತರವೋಲ್ಲಪರೀತರಂಗಿತಾ
ಭೋಗಮನೆಯ್ದಲುತ್ತರಿಸಿ ಬಂದರಶೇಷ ಸುರಾಸುರರ್ ಕರಂ
ಬೇಗದಿನುಲ್ಲಸನ್ಮಣಿವಿಮಾನಬಹಿತ್ರಕದಂಬಕಂಗಳಿಂ ೭೨

ನಿರ್ಜರರಾಜಧಾನಿ ಮೊದಲಾಗಿ ಜಿನೇಶ್ವರಪತ್ತನಂಬರಂ
ನಿರ್ಜರಸೈನ್ಯದೋರಣಿ ನಭಸ್ಥಳದೊಳ್ ತೆಱಪಿಲ್ಲದೆಲ್ಲಿಯುಂ
ಸಜ್ಜಿಕೆ ಮಾಲೆಗೊಂಡು ಮಿಗೆದಟ್ಟಮದಾಗಿ ಬರುತ್ತುಮಿರ್ದುದಾ
ದುರ್ಜಯಮೋಕ್ಷಮಾರ್ಗ ವರಪಂತಿಯಿಂದೆಂಬಿನಮಾಳ್ದುದೊಪ್ಪಮಂ ೭೩

ವ: ಮತ್ತಮಿತ್ತಲಾ ರತ್ನಪುರದ ಸ್ತ್ರೀಜನಂಗಳುಂ ಪುರುಷರ ಮೊತ್ತಂಗಳುಂ ತಂತಮ್ಮ ನೆಲೆಮಾಡಂಗಳ ಚೂಳಿಕಾಗ್ರಂಗಳುಮಂ ವಸತಿಕಾಶಿಖರ ಶಿಖಾಕಳಾಪಂಗ ಳುಮಂ ಪ್ರೋತ್ತುಂಗಪ್ರಾಕಾರಪ್ರತೋಳಿಕಾಪ್ರದೇಶಪ್ರಕಟೀಕೃತಹಾಟಕಕೂಟ ಕೋಟಿಗಳುಮಂ ಸಮುತ್ತಾಳಿಕಾಟ್ಟಾಳಜಾಳಂಗಳುಮನೊರ್ಮೊದಲೊಳಮೆಡೆವಱಿಯದೆ ತಿಂತಿಣಿಗೊಂಡು ಸಂದಣಿಸಿ ನಿಂದು ಸಮುದಗ್ರಗ್ರೀವರಾಗಿರ್ದು ದೇವತ್ವಮಿಲ್ಲದೆಯನಿಮಿಷತ್ವಮಂ ಪಡೆದು ವಿಸ್ಮಯಸ್ಮೇರಸಿರೀಕ್ಷಣರಾಗಿ ದೇವಾಗಮನಸಂಭ್ರಮಮಾದಭ್ರವಿಭ್ರಮಮಂ ಕೌತೂಹಳದಿಂ ನೀಡುಂನೋಡುತ್ತುಮಿರಲಾ ದೇವಸಮೂಹಮೆಲ್ಲಮಾಕಾಶಪ್ರದೇಶ ದಿಂದಿಳಿದಾ ಪಟ್ಟಣಮಂ ಮುಟ್ಟೆವರ್ಪುದುಂ

ಆಗಳ್ ಬಿತ್ತಿರ್ದ ಪುಣ್ಯದ್ರುಮ ನಿರುಪಮ ಬೀಜಂಗಳಿಂ ಪುಟ್ಟಿ ಮತ್ತಂ
ಮೇಗಣ್ಗೆ ವ್ಯಾಪಿಸುತ್ತಿರ್ಪವಿರಳತರ ಸಾರಾಂಕುರಾಕಾರಶಂಕಾ
ಯೋಗಪ್ರಾಕಟ್ಯಮಂ ಪುಟ್ಟಿಸುತುಮಡರ್ದು ತಾಂ ನೀಳ್ದು ಪರ್ವಿರ್ದ ಕಾಂತ್ಯಾ
ಭೋಗವ್ಯಾಕೀರ್ಣರತ್ನಂಗಳ ಬಳಗಮುಮಂ ದೂರದೊಳ್ ಕಂಡನಿಂದ್ರಂ ೨೪

ಪುರದೆಲ್ಲಾ ತಾಣದೊಳ್ ಮಾಣದೆ ಮಣಿಗಣದಾಸಾರಮುಂ ಪೊಯ್ಯಲಂದಂ
ಬರದಿಂದಂ ಬಿಳ್ದ ರತ್ನಂಗಳ ಪೊಳೆವ ಮಹಾರಾಶಿಗಳ್ ಸುತ್ತಲುಂ ತಾ
ಳ್ದಿರೆ ಚೆಲ್ವಂ ಶ್ರೀಯ ಕೇಳೀಗಿರಿಗಳ ತೆಱದಿಂದಾಗಳಂತೆಲ್ಲವಂ ಕಂ
ಡಿರದಿಂದ್ರಂ ಚೋದ್ಯದಿಂ ರತ್ನಪುರಮಿದು ಕರಂ ತಪ್ಪದಾಯ್ತೀಗಳೆಂದಂ ೨೫

ವ: ಬಳಿಯಂ

ಗಗನದೊಳೆಯ್ದೆಮಂಡಳಿಸಿ ನಿಂದ ವಿಮಾನಸಮೂಹಪಂತಿಗಳ್
ಸೊಗಸಿದವಲ್ಲಿ ಬೇಱೆ ಪೊಸಪಟ್ಟಣಮಂ ನೆಱೆಕಟ್ಟಿದಂದದಿಂ
ನಗರದ ಸುತ್ತಲೆಲ್ಲೆಡೆಯೊಳಂ ಸಲೆಕೋಂಟೆಯ ಮೇಲೆಯುಂ ಗೃಹಾ
ಳಿಗಳ ಸಮೀಪದೊಳ್ ತೊಳಗುವಟ್ಟಳೆಯೋಳಿಗಳಿಗಳಿಕ್ಕೆಲಂಗಳೊಳ್ ೨೬

ತೆಕ್ಕನೆ ತೀವಿರ್ದು ಕರಂ
ಕಿಕ್ಕಿಱಿಗಿಱಿದೆಯ್ದೆ ತುಂಬಿ ನೆರೆದಿರ್ದುವು ಮಾ
ಣಿಕ್ಯವಿಮಾನಂಗಳವುಂ
ಮಿಕ್ಕುಱೆ ನೋಳ್ಪರ್ಗೆ ಮಾಡುತುಂ ವಿಸ್ಮಯಮಂ ೨೭

ವ: ಅನಂತರಂ ದೇವಸಮೂಹಂಬೆರಸು ದೇವೇಂದ್ರಂ ತದ್ರತ್ನಪುರಮಂ ಮೂಱುಸೂಳ್ವರಂ ಬಲಗೊಂಡು ಪುರಲಕ್ಷ್ಮೀಮಣಿಮಯನೂಪುರಮಂಬಂತಿರ್ದ ಗೋಪುರ ದ್ವಾರದೊಳಗಂ ಪೊಕ್ಕು ಜಿನನ ಜನ್ಮೋತ್ಸಾಹ ಕೋಳಾಹಳಸಂಗತಸಮುತ್ತುಂ ಗಮಂಗಳಮಂ ನೋಡುತ್ತುಂ ಬಂದು ತ್ರಿಜಗಜ್ಜನಸಂಪೂಜ್ಯಮಾನ ನಾನಾವಿಧ ಶೋಭಾ ರಾರಾಜ್ಯಮಾನ

ರಾಜಮಂದಿರಮುಮನಾ ಪರಿಯಿಂದಂ ಬಲಗೊಂಡು ರಾಜಾಂಗಣ ದೊಳೈರಾವಣ ಮಹಾವಾರಣಮಮಂ ನಿಲಿಸುವುದುಂ

ಸುರಗಂಧಗಜದ ಮೂವ
ತ್ತೆರಡುಂ ಹಸ್ತಂಗಳೊಪ್ಪಿದುವು ಲಂಬಿಸುತುಂ
ಪರಮನರಮನೆಯ ಪಳಿಕಿನ
ಪುರುವಿಜಯಸ್ತಂಭಪಂತಿಯೆಂಬಂತೆವೊಲಂ ೭೮

ವ: ತದನಂತರಂ

ಎಲೆ ಸತಿ ಪೋಗಿ ನೀಂ ಪರಮಧರ್ಮಜಿನೇಶನನೆತ್ತಿಕೊಂಡು ಬಾ
ಕಳಿಯದೆ ಪೊತ್ತನೆಂದು ಶಚಿಗಂ ಬೆಸಸಲ್ ದಿವಿಜಾಧಿನಾಯಕಂ
ಬಿಳಿಯ ಗಜೇಂದ್ರದಿಂದಿಳಿದು ಪೋಗಿ ದಲಾಕ್ಷಣದಲ್ಲಿ ಪೊಕ್ಕಳಾ
ವಿಳಸಿತಸೂತಿಕಾಗೃಹಮನಾ ಶಚಿ ರಾಜ್ಯಸುಲಕ್ಷ್ಮಿಯಂದದಿಂ ೭೯

ವ: ಮತ್ತಂ ಪೂರ್ವದಿಗ್ದೇವಿಯ ಮುಂದೆ ಪೊಳೆವ ಧವಳಕಿರಣಮಯೂಖ ಲೇಖೆಯಂತೆ ನೋಳ್ಪರ ಕಣ್ಗಂಳಿಗೆ ಸುಖದಾಯಕನಾಗಿ ನಿಜಜನನಿಯಪ್ಪ ತತ್ಸುವ್ರತಾ ಮಹಾದೇವಿಯ ಮುಂದೆ ಥಳಥಳಿಸುತ್ತುಮಿರ್ದ ತದ್ಬಾಳಕನಂ ಕಂಡು ಬಹಳಪುಳಕಕಳಿತ ಕಳೇವರೆಯಾಗಿ ಕತಿಪಯ ಪರಿವಾರದೇವೀಜನಂಬೆರಸು ಮಾಣಿಕ್ಯದೀಪಕಳಿಕಾಕಳಾಪ ಪರಿರಾಜಮಾನ ನೀರಾಜನಾಭಾಜನಸಮಾಜಂಗಳಂ ಪಿಡಿದು ಮಣಿಮಯಮೇಖಳಾ ಕ್ವಣಿತದೊಡನೆ ಮಚ್ಚರದಿಂದೆಂಬಂತೆ ಮಂಗಳಸಂಗೀತಧ್ವನಿ ನೂರ್ಮಡಿಸುತ್ತಿರೆ ಜಿನನಂ ಜಿನಜನನಿಯುಮಂ ಮೂಱುಸೂಳ್ ಬಲಗೊಂಡು ಪೀವರಾಧಾರದಿಂದಾರತಿಯನೆತ್ತಿ ನಮಸ್ಕಾರಂಗೆಯ್ದಿಂಬಳಿಯಂ

ದೇವಿಯ ಮುಂದಿರಿಸಿದಳಂ
ದೋವದೆ ಮಾಯಾಮಯಾರ್ಭಕನ ರೂಪಂ ತಂ
ದಾ ವನಿತೆಯರ್ಗೆಲ್ಲಂ ನಿ
ದ್ರಾವರಣದ ಮುದ್ರೆಯಂ ವಿಗುರ್ವಿಸಿ ಮುನ್ನಂ ೮೦

ಸಲೆ ರತ್ನಾಕರದಿಂದನರ್ಘ್ಯತರಮಂ ಸದ್ರತ್ನಮಂ ನೋಡಿ ಮ
ತ್ತೊಲವಿಂದೆತ್ತುವ ಮಾಳ್ಕೆಯಿಂದೆ ಮಣಿಮಂಚಸ್ಥಾನದಿಂ ಕಾಂತಿಮಂ
ಜುಳನಂ ಬಾಳಕನಂ ಸ್ವಹಸ್ತತಳದಿಂದಂದೆತ್ತಿಕೊಂಡಿರ್ದು ಪೊ
ತ್ತಳದೊಂದಿಂದುವ ಬಿಂಬಮಂ ಪೊಱುವವೊಲ್ ಪೂರ್ವಾಚಳಂ ಮಸ್ತದೊಳ್ ೮೧

ಪೊತ್ತು ನಡೆತಂದಳಂದ
ತ್ಯುತ್ತಮ ಜಿನಶಿಶುವನಿಂದ್ರವಲ್ಲಭೆಯಾ ದೇ

ವಸ್ತ್ರೀಯರ ಮೊತ್ತಂಗಳ್
ಚಿತ್ರಿಸಲ್ ಜಯಜಯಪ್ರಣಾದೋತ್ಕರಮಂ ೮೨

ಕ್ಷೀರೋದಲಹರಿಯಿಂದಂ
ತಾರೇಶನನೊಯ್ವ ಗಗನಲಕ್ಷ್ಮಿಯ ತೆಱದಿಂ
ದಾ ರಮ್ಯತಳ್ಪತಳದಿಂ
ದಾ ರಮಣಿ ಜಿನೇಶಶಿಶುವನೊಯ್ದಳ್ ನಲವಿಂ ೮೩

ವ: ಅನಂತರಂ

ನೆಲೆಮೊಲೆಯೊತ್ತಿನಿಂ ತೊಲಗೆ ಮೇಲುದಿನಂಚಳಮೆಯ್ದೆ ನೀಳ್ದ ತೋ
ಳ್ಗಳ ಮೊದಲಲ್ಲಿ ಸುಚ್ಚೊಗರದುಂ ತಲೆದೋಱೆ ಜಿನೇಶಬಾಳನಂ
ಸಲೆ ಶಚಿ ನೀಡುತಿರ್ದ ಪದದಲ್ಲಿದಿರಾಗಿ ಸುರಾಧಿಪಂ ಕರಂ
ಗಳಸುರುಭೂಷಣಾಂಗ ತರುಶಾಖೆಗಳೆಂಬಿನಮಂದು ನೀಡಿದಂ ೮೪

ವ: ಅಂತು ನೀಡುವುದುಂ

ಚಿಂತಿತಫಲಪ್ರದಾಯಕ
ಚಿಂತಾಮಣಿಯಂ ಸುಪುಣ್ಯದೇವತೆ ತಂದೀ
ವಂತೆ ಜಿನಶಿಶುವನಿತ್ತಳ್
ಸಂತಸದಿಂ ದೇವಿ ಸುರಪಕರತಳಪುಟದೊಳ್ ೮೫

ವ: ಅಂತೀವುದುಂ ಸಾತಿಶಯಪ್ರೀತಿನಿವಾಸನಾದ ವಾಸವಂ ಬೀಸರಂಬೊಗದ ಸಡಗರದಿಂದೀಸಿಕೊಂಡು ಲೇಸಾಗಿ ವಾಸನೆವಡೆದ ದೇವಾಂಗವಾಸಮಂ ತನ್ನಯ ಪರ್ಯಂಕಾಸನಬಂಧದೊಳ್ ಪಾಸಿ ಮೆಲ್ಲನಲ್ಲಿ ಕುಳ್ಳಿರಿಸುವುದುಂ

ಪಿರಿದಾದ ಭಕ್ತಿಯಿಂದಂ
ಧರಣೀತ್ರಯಗುರು ಜಿನೇಶಪಾದಂಗಳುಮಂ
ಪರಮಮಣಿಮಕುಟಕಿರಣೋ
ದ್ಧುರಜಳದಿಂದಿಂದ್ರನರ್ಘ್ಯಪಾದ್ಯಮನಿತ್ತಂ ೮೬

ವ: ಅಂತು ವಿನಯವಿನಮಿತಮಸ್ತಕನಪ್ಪುದುಂ

ಸಾಸಿರಕಣ್ಗಳೊಳಂ ಪ್ರಮ
ದಾಶ್ರುಗಳೊಗೆದೆಯ್ದೆ ತುಂಬಿತುಳ್ಕಾಡುತ್ತಿರೆ
ಭಾಸುರಜಿನಶಿಶುರೂಪಂ
ಕ್ಲೇಶದಿನೀಕ್ಷಿಸಿದನಂದು ಸೌಧರ್ಮೇಂದ್ರಂ ೮೭

ವ: ಇಂತು ನಡೆನೋಡುವ ಪೊತ್ತಿನೊಳ್

ಮಿಸುನಿಯ ಬಣ್ಣಮಂ ದಲಿಳಿಕೆಯ್ವ ಜಿನೇಶತನುಪ್ರಭಾಳಿಗಳ್
ಪಸರಿಸೆ ತತ್ಸಹಸ್ರನಯನಂಗಳ ಮೇಲೆ ವಿಶೇಷಮಾಗಿ ರಂ
ಜಿಸಿದವು ಹೇಮತಾಮರಸಚಾರುಸಹಸ್ರದಳಂಗಳೆಂಬ ಮಾ
ನಸಮನದಾಕ್ಷಣಂ ಬಿಡದೆ ಪುಟ್ಟಿಸುತುಂ ದಿವಿಜಾಸುರರ್ಗೆ ತಾಂ ೮೮

ವ: ಮತ್ತಂ

ನಿರುಪಮರೂಪನೀಕ್ಷಿಪಡೆ ಲೋಚನಯುಗ್ಮಮಿದೆಯ್ದದೆಂದು ಸಾ
ಸಿರಮಲರ್ಗಣ್ಗಳಂ ಬಯಸಿ ಬಾಯ್ವಿಡುತಿರ್ದುದದಾಕ್ಷಣಂ ಸುರಾ
ಸುರರ ಸಮೂಹಕಂ ತವಕದಿಂ ನೆರೆದೆಲ್ಲಮುಮೆಯ್ದೆ ನೋಡಿದ
ತ್ತುರುಶುಭಲಕ್ಷಣಪ್ರಯುತಮಪ್ಪ ಜಿನಾರ್ಭಕದಿವ್ಯಮೂರ್ತಿಯಂ ೮೯

ವ: ಅದಲ್ಲದೆಯಂ

ಕಾಂಚನದಂತೆ ರಮ್ಯತರಮಪ್ಪ ಜಿನಾಧಿಪಮೂರ್ತಿ ಸತ್ಪ್ರಭಾ
ಸಂಚಯ ಮಧ್ಯವರ್ತಿಯೆನಿಸಿರ್ದು ಸುರೇಂದ್ರಮದೇಭಮಸ್ತದೊಳ್
ಪ್ರಾಂಚಿತಮಾಗಿ ತಾಂ ಪೊಳೆಯುತಿರ್ದುದು ಶಾರದ ಮೇಘದೊಡ್ಡಿನೊಳ್
ಚಂಚದನೂನದೀಧಿತಿಯುತಾಭಿನಯೋದಿತಚಂದ್ರನಂದದಿಂ ೯೦

ಸುರರ ಕರಂಗಳೆಂಬ ಕಮಳಾವಳಿಗಳ್ ಮುಕುಳಂಗಳಾದವಂ
ದುರುನಯನಂಗಳೆಂಬ ಕುಮುದಂಗಳರಲ್ದವು ಮಾನಸಂಗಳೆಂ
ಬಿರದೆ ಚಕೋರಕಂಗಳೊಲವಿಂ ತಣಿವಂ ತಳೆದಿರ್ದವಾಕ್ಷಣಂ
ಧರೆಯೊಳೆ ಮಾಡಿದತ್ತು ಜಿನಚಂದ್ರಮನಾಗಮಮೆಯ್ದೆ ರಾಗಮಂ ೯೧

ವ: ತದನಂತರಂ

ಪರಿವೇಷಂಬೆತ್ತ ಬೇಚೊಂದಮಳತರಶರಚ್ಚಂದ್ರಬಿಂಬಂಬೊಲಿಂಬಾ
ದುರು ನಾನಾರತ್ನಮಾಲಾಮಯ ವಿಲುಳಿತ ಸತ್ಪಲ್ಲವಾಲಂಕೃತಿಪ್ರ
ಸ್ಫುರಿತಂ ತಾನಾದ ಮುಕ್ತಾಖಚಿತ ಪರಸಿತಚ್ಛತ್ರಮಂ ತಾಳ್ದಿ ನಿಂದಂ
ಪರಮೇಶಾನೇಂದ್ರನುದ್ಭೂಷಣ ಸಮಭಿಯುತಂ ವಾರಣೇಂದ್ರಾಧಿರೂಢಂ ೯೨

ವ: ಆಗಳ್

ಮಣಿಮಯಮಕುಟಚ್ಛಾಯಾ
ಗಣಮುಂ ನಿಜರತ್ನಮುದ್ರಿಕಾದೀಧಿತಿಯುಂ

ಸ್ಫಟಿಕಶಿಲಾಪರಿಘಟಿತ ವಿಕಟವಿಶಾಲಸಹಸ್ರಸೋಪಾನವೀಥಿಕಾಸಂಪತ್ತಿಯ ನಂತರಿಕ್ಷ ವಿಭಾಗದೊಳ್ ವಿರಚಿಸಿಯದಱ ಪೂರ್ವಾಪರದೆರಡುಂ ಕೆಲಂಗಳೊಳಿಂದ್ರನೀಲ ಮಾಣಿಕ್ಯಮಯಂಗಳಾದ ಮೂಱುಮೂಱುಸೋಪಾನಪಂತಿಗಳಂ ವಿಗುರ್ವಿಸಿದಾಗಳ್

ಆಕಾಶಗಂಗೆಯಂ ಪರಿ
ಲೋಕಿಸಲೆಂದಂದು ಬಂದು ಬಳಸಿದ ಕಾಳಿಂ
ದೀಕೂಲಂಕಷೆಗಳ ಪಿರಿ
ದಾಕೃತಿಯಂ ಪೋಲ್ತು ಕಣ್ಗೆ ಪಡೆದವಗುರ್ವಂ ೧೦೩

ವ: ಇಂತು ದೇವೇಂದ್ರಂ ಸಮಸ್ತದೇವಸೈನ್ಯಮೆಲ್ಲಮಂ ವೈಕುರ್ವಣ ಸೋಪಾನ ಮಯೀ ವೀಥೀಪಂತಿಗಳ ಮೇಲೆ ಪೋಗಲ್ವೇಳ್ದನಂತರಂ

ನೆಲದಿಂದಂ ಗಗನಸ್ಥಳಕ್ಕೆ ನೆಗೆದತ್ತೈರಾವತಂ ಶಕ್ರನು
ಜ್ಜ್ವಳಸಾಹಸ್ರವಿಲೋಚನಪ್ರಭೆ ನಭೋಭಾಗಂಗಳಂ ಚಿತ್ರಿಸಲ್
ಸಲೆ ಘಂಟಾರವನಾದಮೆಣ್ದೆಸೆಗಳಂ ತಳ್ಪೊಯ್ಯೆ ಚಾತುರ್ಯ ಮಂ
ಜುಳವಲ್ಗಂಘನದಿಂದಮಾ ಸಭೆಗೆ ತಾಂ ಮಾಡಿತ್ತುಮಾಶ್ಚರ್ಯಮಂ ೧೦೪

ನೆಗೆದವು ಕೂಡೆ ಕುಂಜರಘಟಾವಳಿಗಳ್ ಜವದಿಂದಮಾಕ್ಷಣಂ
ಮಿಗುವ ತುರಂಗಮಂಗಳಗಣಂಗಳವಂದೊಡನೊಡ್ಡುಗೊಂಡು ಮೇ
ಗೊಗೆದವು ಮತ್ತಮಾಗಳೊಡನೊರ್ಮೊದಲಲ್ಲಿ ರಥಂಗಳೋಳಿಗಳ್
ನೆಗೆದವವುಂ ಪದಾತಿಗಳ ಪಂತಿಗಳುಂ ನೆಗೆದಿರ್ದುವೆಲ್ಲಮುಂ ೧೦೫

ಪೊಸಪೊಸರಾಮಮಂಡಳಿಗಳೆಳ್ತರುತಿರ್ದಪುವೆಂದು ನಾಡೆಯುಂ
ಶಶಿರವಿಮಂಡಳಂಗಳಿರದಂಜುವಿನಂ ಹರಿನೀಳಸದ್ವಿಮಾ
ನಸಮುದಯಂಗಳಂ ನೆಗೆವಂದದಱೊಂದು ತಮಸ್ಸಮೂಹಮಂ
ಪೊಸತಱಿಯಟ್ಟುವಂತೆ ನೆಗೆದಿರ್ದವು ಶೋಣವಿಮಾನಕಂಗಳುಂ ೧೦೬

ಲಟಹಸುರಾಂಗನಾನಿಕರಮಂ ನೆಱೆತಾಳ್ದಿದ ಪೀನನಿರ್ಮಳ
ಸ್ಫಟಿಕಶಿಲಾವಿನಿರ್ಮಿತ ವಿಮಾನಚಯಂ ನೆಗೆದತ್ತದಾ ನಭ
ಸ್ತಟಿಗೆ ಸರೋಜನೀಲತೆಗಳೊಳ್ ಪುದಿದಿರ್ದ ಸರೋವರಂಗಳು
ತ್ಕಟದೆ ನಭಸ್ಥಳಕ್ಕೆ ನೆಗೆವಂತಿರೊಡರ್ಚಿಸಿದತ್ತು ಚಿತ್ರಮಂ ೧೦೭

ಜಿನಮತಪಕ್ಷಮನಾಂತಿ
ರ್ದನವದ್ಯರ್ ಮೇಗೆ ನೆಗೆದು ಪೋಪುದನೆಲ್ಲಾ
ಜನವಿತತಿಗಱಿಪುವಂತೆ ದ
ಲನಿಮಿಷಸೈನ್ಯಂ ನಭಕ್ಕೆ ನೆಗೆದತ್ತಾಗಳ್ ೧೦೮

ಅಂಬರದೊಳಿರ್ದ ದೇವನಿ
ತಂಬಿನಿಯರ ತೆಕ್ಕೆಗೊಂಡ ಸೋರ್ಮುಡಿಗಳ್ ಚೆ
ಲ್ವಂ ಬಳಯಿಸಿದವು ಗಗನದೊ
ಳಿಂಬೆನೆ ನೆರೆದಿರ್ದ ಸೋಗೆಗಳ ತೆಱದಿಂದಂ ೧೦೯

ತಿಂತಿಣಿಗೊಂಡು ಕೂಡೆ ನೆರೆದಿರ್ದ ಸಮಸ್ತವಿಮಾನಮಾಳಿಕಾ
ಸಂತತಿಯಿಂದೆ ಸಂದಣಿಸಿದತ್ತು ನಭಸ್ಥಳಿ ಸರ್ವದಿಕ್ಪ್ರದೇ
ಶಾಂತಮಸಂಖ್ಯಶಂಖಸುರವಾದ್ಯವಿತಾನಪಟುಪ್ರಣಾದದಿಂ
ದಂತುಱೆ ತುಂಬಿದತ್ತುರು ಪತಾಕೆಗಳಳ್ಳಿಱಿಯಲ್ ನಭೋಂತಮಂ ೧೧೦

ವ: ಆಸಮಯದೊಳಿಂದ್ರನೈರಾವತಕರೀಂದ್ರಮಂ ಮೇರುಗಿರೀಂದ್ರಕ್ಕಭಿಮುಖ ಮಾಗಿ ಕೂರಂಕುಸದಿಂದಣೆದುನೂಂಕುವುದುಂ

ಒಂದೊಡ್ಡುಗಳೊಡ್ಡಾಗಿಯೆ
ಕುಂದದೆ ಸಪ್ತಾಂಗಭೇದದಿಂದಂ ತೋರ್ಕುಂ
ಮುಂದೈಸಿದ ಮೊದಲೊಡ್ಡುಮ
ದೊಂದೆ ದಲಱುವತ್ತುನಾಲ್ಕುಸಾಸಿರಮಕ್ಕುಂ ೧೧೧

ವ: ಮಹರ್ಧಿಕರಪ್ಪೊರ್ವೊರ್ವ ದೇವರ್ಕಳನಂತಪ್ಪ ಮೊದಲೊಡ್ಡುಗಳಱು ವತ್ತುನಾಲ್ಕುಸಾಸಿರಂ ಬಳಸಿಕೊಂಡಿರ್ಕುಮಾ ಮಹರ್ಧಿಕದೇವರ್ಕಳಸಂಖ್ಯಾತರಪ್ಪುದು ಕಾರಣಂ ಸಾಮರ್ಥ್ಯ ಭೇದದಿಂ ದ್ವಿಗುಣ ತ್ರಿಗುಣ ಚತುರ್ಗುಣ ವಿಸ್ತಾರಂಗಳಾಗುತ್ತರೋತ್ತರಮ ಸಂಖ್ಯಾತಂಗಳಾದ ಚತುರ್ವಿಧದೇವರ್ಕಳ ಚತುರಂಗಸೈನ್ಯಸಮೂಹಂಗಳೆಲ್ಲಮೊಂದಾಗಿ ಕೂಡಿ ಗಗನಮಂಡಳದೊಳಖಂಡಿತಂಗಳಾಗಿ ಮೊತ್ತಂಗೊಂಡು ಸಡಗರದಿಂದಂ ನಡೆಯೆ

ಕೀರ್ತಿಮುಖಂಗಳಿಂ ಪೊಳೆವ ಕೈಗಳನೆತ್ತಿ ತಟಿಲ್ಲತಾಳಿಗಳ್
ವರ್ತಿಸಿದಂತೆ ತೋಱಿರೆ ವಿಷಾಣ ಪರಸ್ಪರಘಾತಘೋಷವಿ
ಸ್ಫೂರ್ತಿ ವಿಘೂರ್ಣಿಸಲ್ ಮೊಳಗಿನಂತಿರೆ ಕಾರ್ಮುಗಿಲೊಡ್ಡಿನಂದದಿಂ
ಸಾರ್ತರುತಿರ್ದುದಂದು ಗಜಸೇನೆ ಬಿಡುತ್ತೆ ಮದಾಂಬುಧಾರೆಯಂ ೧೧೨

ಕವಿತರೆ ಲೋಳೆಗಳ್ ಬಿಡದೆರಳ್ಕಟವಾಯಿಗಳಿಂದೆ ಪೂಗಳಾ
ದಿವದೊಳೆ ತುಂಬಿದಂತೆ ದೆಸೆಗಳ್ ತೆಱಪಿಲ್ಲದವಾಗೆ ಹೇಷಿತ
ಪ್ರವಿತತಿಗೊಡ್ಡುಗಟ್ಟಿ ನಡೆತಂದವು ಕೂಡೆ ತುರಂಗಮಂಗಳಂ
ದವಿರಳ ದೇವವಾಹಿನಿಯ ತುಂಗತರಂಗಚಯಂಗಳೆಂಬಿನಂ ೧೧೩

ಘೋಣಾವಿವರ ಸಮೀರಣ
ಘೂರ್ಣಿತ ವದನಂಗಳೆಸೆದವಶ್ವಂಗಳ್ ಕಡಿ

ಯಾಣಂಗಳೊಡನೆ ತಮ್ಮ ಪ್ರ
ಯಾಣಾರೋಪನಮನುಸಿರ್ದುರ್ ಝುಂಕಿಪ ತೆಜದಿಂ ೧೧೪

ಮಿಗೆ ಚೀತ್ಕಾರನಿನಾದದಿಂ ಜಿನಗುಣಸ್ತೋತ್ರಾಂಕಗೀತಂಗಳೋ
ಳಿಗಳಂ ಪಾಡುತುಮಿರ್ದುದೆಂಬ ತೆಜದಿಂ ಬಂದತ್ತು ನಾನಾಯುಧಾ
ಳಿಗಳಿಂ ತೀವಿದ ತಪ್ತಹೇಮರಥಯೂಥಂ ಭಾಸನಾಥಂ ಮಹಾ
ಖಗಸಂಪಾದಿ ಮನೋರಥಂ ಧ್ವಜಸಮಾಲಿಂಗತ್ಪಯೋಭೃತ್ಪಥಂ ೧೧೫

ಪಿರಿದದ್ಭುತಕಾಯಬಲಂ
ನೆರೆದು ಬರುತ್ತಿರ್ದುದಂದು ಘನಪತ್ತಿಬಲಂ
ನಿರುಪಮ ಸಂಪತ್ಕೃಬಲಂ
ಪರದುಸ್ಸಹ್ಯಪ್ರತಾಪರೂಪಾತಿಬಲಂ ೧೧೬

ವ: ಮತ್ತಂ

ಭರದಿಂದಂ ರಸಭಾವಮಂ ಪಡೆದು ತತ್ತೂರ್ಯಾಂಗಮೆಂಬಿಂದ್ರಭೂ
ಮಿರುಹಂ ಕೊಟ್ಟ ವಿಶೇಷವಾದ್ಯಚಯಮಂ ನಾನಾಗತಿಸ್ಥಾನಬಂ
ಧುರಮಾರ್ಗಂಗಳಿನಂದು ಬಾಜಿಸುತುಮುದ್ಯತ್ತಾನಮಾನಂಗಳೊಳ್
ಸರಿಸಂಬೆತ್ತು ಬರುತ್ತುಮಿರ್ದುದು ಕರಂ ಗಂಧರ್ವದೇವೋತ್ಕರಂ ೧೧೭

ಗಡಣಮಗೊಂಡೆಳಮಿಂಚುಗಳ್ ಪೊಳೆವವೋಲಾಡುತ್ತುಮಿರ್ಪಲ್ಲಿ ಸಂ
ಗಡದಿಂ ಬಾಹುಪರಿಭ್ರಮೋಲ್ಲಸಿತ ನಾಟ್ಯಚ್ಛದ್ಮದಿಂ ಚೆಲ್ವು ಮುಂ
ದಿಡೆ ತದ್ವ್ಯೋಮಸಮುದ್ರದಲ್ಲಿ ಪಿರಿದಾಗೀಸಾಡುತಿರ್ಪಂದದಿಂ
ನಡೆಗೊಂಡತ್ತು ನಿರಾಕುಳಂ ಬಹಳನಾನಾನರ್ತಕೀಸಂಕುಳಂ ೧೧೮

ವ: ಅನಂತರಂ

ರಾಗದೊಳೊಂದಿ ವಿಭ್ರಮದಗುರ್ವನೆ ತೋಱುವ ವೃದ್ಧಮೂರ್ತಿಯ
ಪ್ಪಾಗಸಮೆಂಬ ಕಾಮಿನಿಯ ಮಸ್ತಕದಿಂದಿಳಿತರ್ಪ ಬೆಳ್ಪ ಲೇ
ಸಾಗೆಸೆದಿರ್ದು ನೀಳ್ದ ಜಡೆಯೊಂದೆ ದಲೆಂಬಿನಮೊಪ್ಪುವಾ ನಭೋ
ಗಂಗೆಯನಂದು ನಿರ್ಜರವರಂ ಕಡುದೂರದೆ ಬಿಟ್ಟುಪೋಪುದುಂ ೧೧೯

ವ: ಆ ಸಮಯದೊಳ್

ಸುರರ ಕಿರೀಟಕಾಂತಿಗಳ ಪರ್ವುಗೆಯಿಂದೆ ವಿಚಿತ್ರವರ್ಣಮಂ
ಧರಿಸಿದ ತಾರಕಾತತಿಗಳೊಳ್ ಪುದಿದಿರ್ದ ದಲಗ್ರಭಾಗದೊಳ್

ತರಣಿಯ ಬಿಂಬಮಂ ತಳೆದ ಶಾರದನೀರದಖಂಡಮಾ ಜನೇ
ಶ್ವರಶಿಶುಗೆತ್ತಿದೊಂದು ಪೊಸಮುತ್ತಿನ ಸತ್ತಿಗೆಯಂತೆ ರಂಜಿಕುಂ ೧೨೦

ಪಿರಿದುಂ ಶೀಘ್ರಗತಿಪ್ರಭೂತಪವಮಾನಾಕೃಷ್ಯಮಾಣಾಂಬುದೋ
ತ್ಕರಮಾ ಚಾರುವಿಮಾನಸಂಹತಿಗಳಂ ಪಿಂದಟ್ಟಿ ಪೋದತ್ತು ಬಂ
ಧುರದಿಂದಂತವಜಲ್ಲಿ ಕೀಲಿಸಿದ ನಾನಾರತ್ನಕಾಂತಿಸ್ಫುರ
ತ್ಸುರಚಾಪಂಗಳನೆಯ್ದೆಕೊಳ್ವ ಬಗೆಯಿಂದೆಂಬಂತೆ ತತ್ಕಾಲದೊಳ್ ೧೨೧

ವ: ಮತ್ತಮಾಗಳ್

ಸುರಕರಿ ಬೆಳ್ಮುಗಿಲೊಡ್ಡಂ
ನಿರೀಕ್ಷಿಸಿ ಪ್ರತಿಗಜಂ ದಲೆಂಬೀ ಬಗೆಯಿಂ
ಭರಿಕೈಗಳನೆತ್ತಿಯದ
ಕ್ಕಿರದಿದಿರಂ ಬಿಡದೆ ನಡೆದು ಪೋದತ್ತಾಗಳ್ ೧೨೨

ಸೊಕ್ಕಿಂದೆನ್ನಯ ಮುಂದಿದೊಂದುಮೊಗದೊಡ್ಡಿಂದಾಂತು ನಿಂದಿರ್ಪ ಸಾ
ಸಕ್ಕಂ ತಕ್ಕಗಜಂಗಳಿಲ್ಲ ದಲಿದೊಂದುಂ ಬಂದು ನಿಂದಿರ್ದುದೆ
ನ್ನುರ್ಕಂ ತೋಱುವೆನೆಂದು ದೊಡ್ಡ ಮುಗಿಲೊಡ್ಡಂ ಪೊಯ್ದು ನೂಂಕಲ್ಕೆ ಮೇ
ಲ್ವೊಕ್ಕುಂ ಪಾಱೆ ಸಮೀರನಿಂ ಹಳಿಗಿ ತಾಂ ಮಾಡಿತ್ತು ಹಾಸ್ಯತ್ವಮಂ ೧೨೩

ವ: ಇಂತು ರುಂದ್ರಲೀಲೆಯಿಂದಮರೇಂದ್ರನಮರವರೂಥಿನೀಸಮೇತನಾಗಿ ಮನೋವೇಗದಿಂ ವಿಯನ್ಮಾರ್ಗದೊಳ್ ಪೋಗುತ್ತುಮಿರ್ಪುದುಂ

ತೊಟ್ಟನೆ ಕಟ್ಟಿದಿರೊಳ್ ಪೊಂ
ಬೆಟ್ಟಂ ಜನ್ಮಾಭಿಷೇಕ ಸಮುಚಿತಪಟ್ಟಂ
ದಿಟ್ಟಿಗೆ ಪೊಲನಾದುದು ಮಿಗೆ
ಪುಟ್ಟಿಸುತುಂ ತನ್ನ ಕಾಂತಿಯಿಂ ಮಿಂಚುಗಳಂ ೧೨೪

ವ: ಆ ಸಮಯದೊಳಖಂಡಮಾಗಡಿಕಿಲ್ಗೊಂಡಿರ್ದ ಷೋಡಶಕಲ್ಪಭೂಮಿಕೆ ಗಳೆಂಬ ಪದಿನಾಱುಂ ನೆಲೆಯ ಮಣಿಮಾಡಂಗಳನಾಂತಿರಲೆಂದಾಧಾರಮಾಗಿ ಸುವರ್ಣಮಯಮಾದೊಂದು ಕಂಭಮನಾಂಕೆಗೊಟ್ಟನಂಬುಜಗರ್ಭನೆಂಬಂತುನ್ನತಿಯಂ ಪಡೆದು ತನ್ನಯ ಚೂಳಿಕೆಯಿಂ ಮೊದಲ ಸ್ವರ್ಗದ ನೆಲಗಟ್ಟಿನ ತಳಮಂ ಮುಟ್ಟುತ್ತುಂ ನವನವತಿ ಸಹಸ್ರಯೋಜನೋತ್ಸೇಧದಿಂ ಪ್ರಶಸ್ತಮಾದ ಮಂದರಮಹೀಧರೇಂದ್ರಮಂ ಕಂಡು ಭವನಾಮರೇಂದ್ರರಪ್ಪ ಚಮರವೈರೋಚನರ್ಗೆ ತೋಱೆ

ಉದ್ಯಾನಶೋಭಮಾನಂ
ಹೃದ್ಯೋಜ್ವಳವಜ್ರಧಾರಿ ಸುಮನಸ್ಸೇವ್ಯಂ

ಸದ್ವರ್ಣಮಾಗಿಯೆನ್ನಂ
ತಿರ್ದುದು ಮಂದರಮಿದೆಂದು ಪೊಗಳ್ಗುಂ ಸುರಪಂ ೧೨೫

ಮೇರುನಿತಂಬಿನಿಯಂಗಮ
ನೋರಂತೆ ಮುಸುಂಕಿ ಮೇಖಳಾಮಣಿರುಚಿ ಕಿ
ರ್ಮ್ಮೀರಮದಾಗಿರ್ದಂಬರ
ಮಾರಯಲುಂಬರದ ತೆಱದಿನಿರ್ದುದದಕ್ಕಂ ೧೨೬

ಸುರಚಾಪ ಚಿತ್ರಮೇಘೋ
ತ್ಕರಮೆಲ್ಲಾ ದೆಸೆಗಳಿಂದೆ ಬಂದಿರೆ ಕೆಲದೊಳ್
ವರರತ್ನವಿರಚನಾಯುತ
ಧರಂಗಳೋಲೈಸಲೆಂದು ಬಂದವೊಲೆಸೆಗುಂ ೧೨೭

ಎನ್ನ ಸುವರ್ಣಕೋಟಿಗಳನೀಯುಡುಚೋರರೆ ಕಳ್ದುಕೊಳ್ವರೆಂ
ಬನ್ನಯದಿಂದೆ ಸುತ್ತಿಬರುತಿರ್ದಪರೆಂದು ಮಹೀಧರಾಧಿಪಂ
ತನ್ನ ವಿಶಾಲವಕ್ಷಕಟಕದಲ್ಲಿ ತೊಳಲ್ದವೊಲಾಗಿ ಮಾಡಿದಂ
ಪ್ರೋನ್ನತತೇಜದಿಂದೆಸೆವ ಭಾಸ್ಕರಮುಖ್ಯನವಗ್ರಹಂಗಳಂ ೧೨೮

ವಿಳಸಿತ ಭದ್ರಶಾಲವನಮೆಂಬ ವಿಶಾಲವಿಶೇಷ ಮೇಖಳಾ
ವಳಯದೊಳೊಪ್ಪುಗುಂ ಸುರಮಹೀಧರಮೆಂಬ ನಿತಂಬಿನೀಸಮು
ಜ್ವಳಿತ ನಿತಂಬಮಂಡಳದ ಮೇಲೆ ಹರಿನ್ಮಣಿಶಾಲಿಮೇಖಳಾ
ವಳಯದ ಮಾಳ್ಕೆಯಿಂ ಮಿಗೆ ವಿಚಿತ್ರತರಂ ವಿಬುಧಾಳಿ ಸಂತತಂ ೧೨೯

ವ: ಆ ಮೇರುಗಿರೀಂದ್ರಮಂ ಬಳಸಿದ ಭದ್ರಸಾಲಮೆಂಬ ಪ್ರಥಮಮೇಖಳಾವನದ ನಾಲ್ಕುಂದೆಸೆಗಳೊಳಂ ಮಣಿಕನಕರಜತಮಯಂಗಳಾದ ನಾಲ್ಕಕೃತ್ರಿಮ ಜಿನ ಚೈತ್ಯಾಲಯಂಗಳೊಳ್ ತೊಳಗುತ್ತುಮಿರ್ಪುವಲ್ಲಿಂ ಮೇಲೆ

ಅತ್ಯುಚ್ಚೈಸ್ತನತಟಮಂ
ಬಿತ್ತರಿಸಿ ಮುಸುಂಕಿದುರು ಹರಿದ್ವಸ್ತ್ರದವೋಲ್
ಸುತ್ತಿರ್ದುದು ನಂದನಮಂ
ಬುತ್ತಮವನಮಾತ್ತಪುಷ್ಪಜಾತಿಸಪತ್ರಂ ೧೩೦

ವ: ಆ ನಂದನಮೆಂಬದ್ವಿತೀಯಮೇಖಳಾವನದ ನಾಲ್ಕುಂದೆಸೆಗಳ ನಾಲ್ಕು ಮೆಯ್ಯೊಳಂತಪ್ಪ ನಾಲ್ಕಕೃತ್ರಿಮಜಿನಚೈತ್ಯಾಲಯಂಗಳ್ ಬೆಳಗುತ್ತುಮಿರ್ಪುವಲ್ಲಿಂದತ್ತಲ್

ತೊಳಗುವ ಮೇರುವೆಂಬ ವರಕಲ್ಪಮಹೀರುಹದಲ್ಲಿ ಪುಟ್ಟಿದ
ಗ್ಗಳಮೆನಿಸಿರ್ದ ಸೌರಭವಿಲೋಭವಿಲೀನಮದಾಳಿನೀ ಸಮಾ

ಕುಳಿತ ವಿಶೇಷಸೌಮನಸಮಂಜರಿಯಂತಿರೆ ಕಣ್ಗೆ ಶೋಭೆಯಂ
ಬಳಯಿಸಿದತ್ತು ಸೌಮನಸಮೆಂಬ ವನಂ ಸ್ಮರಕೇಳಿಕಾರಣಂ ೧೩೧

ವ: ಆ ಸೌಮನಸಮೆಂಬ ತೃತೀಯಮೇಖಳಾವನದ ನಾಲ್ಕುಂದೆಸೆಗಳ ನಾಲ್ಕು ಭಾಗಂಗಳೊಳಂ ಸುವರ್ಣರೂಪ್ಯರತ್ನರಮಣೀಯಂಗಳಾದ ನಾಲ್ಕಕೃತ್ರಿಮ ಜಿನ ಚೈತ್ಯಾಲಯಂಗಳ್ ಥಳಥಳಿಸಿ ಪೊಳೆಯುತ್ತುಮಿರ್ಪುವಲ್ಲಿಂದಂ ಮೇಲೆ

ಸುರಗಿರಿಯೆಂಬ ಕಾಮಿನಿಯ ಮಸ್ತಕದಲ್ಲಿಯ ನೀಳ್ದ ಕುಂತಳೋ
ತ್ಕರದವೊಲಿರ್ದ ವೃಕ್ಷಚಯದಿಂ ಮಿಗೆ ನೀಲತೆವೆತ್ತ ಪಾಂಡುಕೋ
ದ್ಧುರವನಮೆಂಬ ತೋರಮುಡಿಯಲ್ಲಿ ತುಱುಂಬಿದ ಕೇತಕೀಮನೋ
ಹರದಳಮೆಂಬಿನಂ ಬಗೆಗೆವಂದುದು ಪಾಂಡುಶಿಲಾತಲಂ ಕರಂ ೧೩೨

ವ: ಅಂತಖಂಡಶೋಭಾಕರಂಡಕಮಾದ ಪಾಂಡುಕವನಮೆಂಬ ಚತುರ್ಥ ಮೇಖಳಾ ವಳಯದೊಳಂ ಚಿತ್ರೀಯಮಾಣ ಮಂಡನಮಹಿಮಾಪರಿಮಂಡಿತಂಗಳಪ್ಪ ನಾಲ್ಕಕೃತ್ರಿಮ ಜಿನಚೈತ್ಯಾಲಯಂಗಳಿಂ ಲಾಲನೀಯಮಾಗಿರ್ದುದಲ್ಲಿ ತತ್ತದ್ದಿಗ್ದೇಶ ದೊಳುದ್ಭವಿಸಿದ ತೀರ್ಥಕರಜನ್ಮಾಭಿಷವಣಕರಣಕಾರಣಂ ಪೀಠೀಭೂತತಾದೃಗ್ವಿ ಶಿಷ್ಟಶಿಳಾಚತುಷ್ಟಯಂ ಕಣ್ಗಾನಂದಮಂ ಪುಟ್ಟಿಸುತ್ತಿರ್ದುದಲ್ಲಿಂದಂ ಮೇಲೆ ತುತ್ತತುದಿಯೊಳ್

ಬೆಳ್ಪೆಸೆದಿರ್ಪ ಪಾಂಡುಕಮುಮೊಳ್ಕವಿಲಾದುರುಪಾಂಡು ಕಂಬಳಂ
ನೋಳ್ಪೊಡಲಕ್ತಕಪ್ರಭೆಯ ರಕ್ತಕಮುಂ ಕಿಸುಗಲ್ಲ ಸಾರದಿಂ
ಕಲ್ಪಿತರಕ್ತಕಂಬಳಮುಮೆಂಬಿವು ನಾಲ್ಕುತಟಂಗಳೋಳಿಯಿಂ
ಮಾಳ್ಪುವಗುರ್ವನೀಶನದಿಶಂ ಮೊದಲಾದ ವಿದಿಗ್ವಿಭಾಗದೊಳ್ ೧೩೩

ಬಲವರುತಿರ್ಪ ಸೂರ್ಯಶಶಿಗಳ್ಗಿರದಂಜಿ ತಮಸ್ಸಮೂಹಕಂ
ನಿಲಲಣಮಾಱದೋಡಿ ಮಿಗೆಪೋಗಿ ಸುರಾಚಳಚೂಳಿಕಾಗ್ರದೊಳ್
ನೆಲಸಿದುದೆಂಬಿನಂ ಸುಹರಿನೀಳಮಯಾಗ್ರದ ಕಾಂತಿ ಸುತ್ತಲುಂ
ತಳೆದುದಗುರ್ವನಿಂದ್ರಗಿರಿಗೆತ್ತಿದ ಝುಲ್ಲರಿಯೆಂಬ ಮಾಳ್ಕೆಯಿಂ ೧೩೪

ವ: ಇಂತು ಬೇಱೆವೇಱೆ ನಾಲ್ಕುಮೇಖಳಾವನಾಂತರಾಳದೊಳಕೃತ್ರಿ ಮಂಗಳಾದ ಷೋಡಶಜಿಮಂದಿರಂಗಳಂ ತಾಳ್ದಿ ನಿಂದ ಮಂದರಗಿರಿಯಂ ಪುರಂದರನಂ ದೀಕ್ಷಿಸಿದ ತೀರ್ಥಸ್ನಾನಮೆಂದು ಕರಕಮಳಂಗಳಂ ಮುಗಿದು ವಂದನಾಪರನಪ್ಪುದುಮಾ ಗರ್ವದಿಂ ಗರಿಷ್ಠಾಪ್ರತಿಷ್ಠಾಧಿಷ್ಠಿತಮಾದುದೆಂಬಂತೆ ಉನ್ನತಶಿರಸ್ಕಮಾಗಿರ್ದು ದಂತುಮಲ್ಲದೆಯುಂ

ಸ್ಥಳಕಮಳರೇಣುಪುಂಜಂ
ಗಳನನಿಳಂ ನೆಗಪೆ ಮಂಡಳಿಸಿ ನಿಲೆ ತುದಿಯ

ಲ್ಲೆಳಸಿ ಜಿನನೀಕ್ಷಣಕ್ಕು
ದ್ಗಳಮಂ ನೆಗಪಿರ್ದುದೆಂಬಿನಂ ಕಣ್ಗೆಸೆಗುಂ ೧೩೫

ವ: ಮತ್ತಂ

ಮೊದಲೊಳನಂತಲೋಕಮಧಃಕೃತಮಾದುದು ಮತ್ತಮುನ್ನತ
ತ್ರಿದಶರಲೋಕಮಿಂದೆನಗೆ ಸಂಪದದಿಂದಧಿಕಂ ದಲಾದುದೆಂ
ದವಜಿತಿಕೋಪದಿಂದಮರುಣಾಬ್ಜವಿಲೋಚನವಕ್ತ್ರಬಿಂಬಮಂ
ಪದೆದಿರದೆತ್ತಿನೋಡುವವೊಲೊಪ್ಪಮನಾಳ್ದುದು ಮಂದರಾಗ್ರಕಂ ೧೩೬

ದಿವಸತಮಸ್ವಿನೀಭ್ರಮಣದಿಂದಭಿರಂಜಿಪ ಕಾಂಚನಾಚಳಂ
ನವನಿಜತೇಜಮಂ ನಿಖಿಳಕಾಷ್ಠೆಯೊಳುಜ್ವಳಿಸುತ್ತುಮಿರ್ದುದು
ಪ್ರವರವಿವಾಹದಲ್ಲಿ ಸಲೆ ದಂಪತಿಗಳ್ ಬಲಗೊಳ್ವ ಹೋಮದ
ಹ್ವಿವಿಸರ ಪುಂಜಮೆಂಬ ಬಗೆಯಂ ನೆಱೆಪುಟ್ಟಿಸುತಿರ್ದುದಾಕ್ಷಣಂ ೧೩೭

ಬಿಳಿಯ ಮುಗಿಲ್ಗಳಾವರಿಸಿದರ್ಧಸುವರ್ಣಮಯಸ್ವರೂಪಮಂ
ತಳೆದುದು ಪಂಕ್ತಿಯೆಂಬುರುಕಪಾಲಮಾಲಿಕೆಯಿಂದಮೊಪ್ಪಿ ತಾಂ
ತಲೆಯೊಳೆ ಪೊತ್ತು ಪಾಂಡುಕಶಿಲಾತಳಮೆಂಬ ದಲರ್ಧಚಂದ್ರನಂ
ಬಳಯಿಸಿತರ್ಧನಾರಿ ಪರಿಶಂಕೆಯನಾಂತು ಗಿರೀಶಭಾವಮಂ ೧೩೮

ಶಶಿರವಿಮಂಡಳಂಗಳಿರಡುಂ ಕೆಲದೊಳ್ ವರಶಂಖಚಕ್ರದಂ
ತೆಸೆದಿರಲಂತರಾಳ ಧೃತನೀಲಮಣಿಪ್ರಭೆಹೇಮಮೂರ್ತಿ ಕಂ
ಪೊಸತೆನಿಸಿರ್ದ ಪೀತವಸನಾವೃತಕೃಷ್ಣನ ಮೂರ್ತಿಯಂದಮಂ
ಪೊಸಯಿಸಿತಿರ್ದ ಮೇರುನವಮಾಲೆಯಿನೊಪ್ಪಮನಾಂತುದಗ್ಗಳಂ ೧೩೯

ಬಂದಪನೆನ್ನ ಸನ್ನಿಧಿಗೆ ಧರ್ಮಜಿನೇಶ್ವರನೆಂಬ ತೋಷದಿಂ
ದಂದು ಮಣಿಪ್ರಭಾತತಿಗಳೆಂಬ ಲಸತ್ಪುಲಕೋದ್ಗಮಂಗಳಿಂ
ದೊಂದಿ ಮರುಚ್ಚಲತ್ಸುರಮಹೀರುಹಶಾಖೆಗಳೆಂಬ ಕೈಗಳ
ಸ್ಪಂದನದಿಂದೆ ನಾಟ್ಯಮನೊಡರ್ಚುತುಮಿರ್ದವೊಲಾಯ್ತು ಮಂದರಂ ೧೪೦

ಮಿಗೆ ನಿಷ್ಕಂಪ ಚಮೂಧ್ವಜಾಗ್ರನೆನಿಪಾ ದೇವೇಂದ್ರನೆಳ್ತಪ್ಪ ಚೋ
ಜಿಗಮಂ ನೋಡುವೆನೆಂದು ಮುಂದೆ ಪಿರಿದಾದೌತ್ಸುಕ್ಯದಿಂದೆಯ್ದೆ ಸಾ
ರಿಗೆ ತಾಂ ಬಂದುಜಿ ನಿಂದುದೆಂಬ ತೆಱದಿಂದಾಯ್ತಾ ಕ್ಷಣಂ ಸಮ್ಮುಖಂ
ನಗರಾಜಂ ಪ್ರತಿನಾದದಿಂ ವಿನಯವಾಕ್ಸಂಭಾಷಣಂಗೆಯ್ವವೊಲ್ ೧೪೧

ಗಜದಂತಾದ್ರಿಗಳಿಂದಮೊಪ್ಪಿ ಘನಸತ್ಪಾದಂಗಳಿಂ ಶೋಭೆಯಂ
ಭಜಿಸಿ ಪ್ರೋನ್ನತದಾನವಾರಿಗಳಿಗಾಧಾರಂ ದಲಾಗಿರ್ದ ಸ

ರ್ಜನಸ್ತುತ್ಯಕರಾಗ್ರ ಸಂಚರಣದಿಂ ಚೆಲ್ವಾಗಿಯಾ ಮೇರು ನಾ
ಕಜಮಾತಂಗದ ಮುಂದೆ ತಾಂ ಪ್ರತಿಗಜಂ ನಿಂದಿರ್ದುದೆಂಬಂದದಿಂ ೧೪೨

ವ: ಮತ್ತಮಂತಲ್ಲದೆಯುಂ

ನಿರತಿಶಯಾಗಮಪ್ರಭವಕಾರಣಕಂ ಘನಮಾನಮಾನಿತಂ
ಸ್ಥಿರಗುಣಕಂ ಕ್ಷಮಾಧರಮುಮೆಯ್ದೆ ನಿರಾಶಮಶೇಷಲಾಲಿತಂ
ಗುರುಭುವನಕ್ಕೆ ಸಾಧುಪರಿಕೀರ್ತಿತ ಪಾದಮುಮಾಗಿ ತಜ್ಜಿನೇ
ಶ್ವರನ ಸಮೀಪದೊಳ್ ಗಣಧರಪ್ರಭುವೆಂಬಿನಮಿರ್ದುದಾ ನಗಂ ೧೪೩

ವ: ಇಂತಪ್ಪದ್ಭುತಾತಿಶಯ ಪರಿವರ್ಣನೀಯಮಾದ ಸುವರ್ಣಾಚಲಮೂಲ ಮನಾಖಂಡಳಂ ನೋಡಿ ನಾಡೆಯುಂ ಸಹಸ್ರಮುಖದಿಂ ಕೊಂಡಾಡುತ್ತುಂ ಮತ್ತಮದಂ ಪೊಗಳ್ವ ಸುರಸೇನೆಯ ಕಳಕಳರವಮಂ ಕೇಳುತ್ತುಂ ಮುಟ್ಟೆವಂದು ಪಿಂದೆ ಬರುತ್ತುಮಿರ್ದ ವೃಂದಾರಕ ವೃಂದಮೆಲ್ಲಮನೊಂದಾಗಿ ಕೂಡಿಕೊಂಡು ಮಂದಯ್ಸಿ ಪೋಗಲ್ವೇಡಿ ಮತ್ತೈರಾವತ ಮಾತಂಗಮನಲ್ಲಿ ನಿಲಿಸಿ ಕುಂದದ ಪರಮಾನಂದದೊಳೊಂದಿ ನಿಂದಿರ್ದು ದಿಶಾವಲೋಕ ನಂಗೆಯ್ವಾಗಳ್

ಒಂದೆಡೆಯಲ್ಲಿ ಪಾಡುವವರಂ ಬಿಡದೊಂದೆಡೆಯಲ್ಲಿ ನಾಟ್ಯಮಂ
ಗೊಂದಣಿಸಿರ್ದೊಡರ್ಚುವವರಂ ಮಿಗೆಯೊಂದೆಡೆಯಲ್ಲಿ ಭಕ್ತಿಯಿಂ
ವಂದಿಸುತಿರ್ಪ ದೇವನಿವಹಂಗಳನೆಯ್ದೆ ಸಹಸ್ರದೃಷ್ಟಿಯಿಂ
ದಿಂದ್ರನತೀವರಾಗರಸಮುಣ್ಮಲದೊರ್ಮೊದಲಲ್ಲಿ ನೋಡಿದಂ ೧೪೪

ವ: ತದನಂತರಂ

ಸುರರಾಜಂ ಮೆಚ್ಚಿ ತಾಳ್ದಂ ನಿರುಪಮಮಘಸಂತೋಷದುತ್ಕರ್ಷಮಂ ಬಂ
ಧುರಭವ್ಯಸ್ತೂಯಮಾನಂ ಪರಮಜಿನಪಪೂಜಾವಿಧಾನಪ್ರದಾನಂ
ಸ್ಫುರದುತ್ತೇಜೋವ್ರಜಂ ಬಾಹುಬಲಿ ಸುಕವಿರಾಜಂ ವಿಬೋಧಾನುಭಾವಂ
ವರಸದ್ಧರ್ಮಪ್ರಭಾವಂ ಕುಮತಸಮಪಹಂ ಚಾತುರೀಜನ್ಮಗೇಹಂ ೧೪೫

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮಜಿನ ಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿದೇವ ಪ್ರಸಾದ ಸಂಪಾದಪಾದ ನಿಧಾನದೀಪವರ್ತಿಯುಭಯಭಾಷಾಕವಿ ಚಕ್ರವರ್ತಿ ಬಾಹುಬಲಿಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್ ಧರ್ಮತೀರ್ಥಂಕರ ಕುಮಾರೋದಯ ವರ್ಣನಂ ಸಪ್ತಮಾಶ್ವಾಸಂ.

ಅಷ್ಟಮಾಶ್ವಾಸಂ

ಶ್ರೀಮಜ್ಜಿನಪತಿಪೂಜಾ
ಪ್ರೇಮಂ ವಿಬುಧಾಧಿನಾಯಕಂ ತಾಳ್ದಂ ನಿ
ಸ್ಸೀಮ ಸಂತೋಷಭರಮಂ
ಸೋಮಯಶಂ ಸರಸಚತುರ ಕವಿಕುಳತಿಲಕಂ ೧

ವ: ತದನಂತರಂ

ಬಂದ ಜಿನಂಗೆ ಮೇರುಗಿರಿ ತನ್ನಯ ರತ್ನಮರೀಚಿ ನೀರದಿಂ
ದಂದಿರದರ್ಘ್ಯಪಾದ್ಯಮನೆ ಕೊಟ್ಟು ಪಯೋಜದ ಮೌಕ್ತಿಕಾಕ್ಷತೋ
ವೃಂದದಿನರ್ಚಿಸಿ ಪ್ರಬಲತತ್ಪ್ರತಿನಾದದೆ ಸಂಸ್ತವಂಗಳಂ
ಕುಂದದ ಭಕ್ತಿಯಿಂ ಬಿಡದೆ ಮಾಳ್ಪವೊಲೊಪ್ಪುತುಮಿರ್ದುದಾಕ್ಷಣಂ ೨

ಕಡುಗಾಳಿಯಿಂದೆ ಮೇಗ
ಣ್ಗಡರ್ದುಱಿಃ ಮುಂಡಳಿಸಿ ಕೆಡಱಿ ಬೀಳ್ವಲರಿಂದಂ
ಕೊಡುವಂತಿರ್ದುದು ಜಿನಪತಿ
ಯಡಿಗಳ್ಗೆ ಸುಮೇರು ಚಾರುಪುಷ್ಪಾಂಜಳಿಯಂ ೩

ಸುರಪತಿ ಕೂರಂಕುಶದಿಂ
ಸುರಕರಿಪತಿಯಂ ದಲಣೆದು ನೂಂಕಲ್ಕೆ ಕರಂ
ಸುರಗಿರಿಯನಡರ್ದುದಾಗಳ್
ಸುರತೂರ್ಯನಿನಾದಮೆಯ್ದೆವುದಿಯಲ್ ದೆಸೆಯಂ ೪

ಸಮಭೂಮಂಡಳಮಂ ಸಮಂತು ತಳೆದಿರ್ದೈರಾವತಂ ಪುಂಡರೀ
ಕಮುಮಾ ವಾಮನಮುಂ ಲಸತ್ಕುಮುದಮುಂ ಕ್ರೂರಾಂಜನಂ ಪುಷ್ಪದಂ
ತಮುಮಾ ಸಾರ್ವವಿಭೌಮಮುಂ ಪಿರಿದುಮಾದ್ಯತ್ಸುಪ್ರತೀಕಂ ದಲೆಂ
ಬ ಮಹಾದಿಗ್ಗಜಭಾರಮಂ ತಳೆದು ಕೀಳ್ಮಾಡಿತ್ತು ಭೂಭೃತ್ತ್ವಮಂ ೫

ಮದಮಾತಂಗಘಟಾವಿತಾನಪದಸಂಚಾರಪ್ರಹಾರಂಗಳಿಂ
ದದು ನುಗ್ಗಾಗದೆ ತಗ್ಗಿ ಮುಗ್ಗದೆ ಕರಂ ತಾಳ್ದಿರ್ದು ತದ್ಭಾರಮಂ

ಪದೆಪಿಂ ತನ್ನ ಮಹಾಚಲತ್ವಮನದಂ ಸತ್ಯಾರ್ಥಮಂ ಮಾಡುತಿ
ರ್ದುದು ತನ್ಮಂದರಮಂದು ಸುಸ್ಥಿರನನಾಂತಿರ್ದಾಂತುದು ಸ್ಥೈರ್ಯಮಂ ೬

ಅದುಕಾಣಲ್ಪಟ್ಟೊಡಂ ಮುನ್ನಡಿಗಡಿಗನಿಶಂ ಮತ್ತಮಾತಂಗಸೇನಾ
ಮದಧಾರಾಪೂರಮೆತ್ತಂ ಪಸರಿಸಿ ಪರಿದಾ ಮೇರುವಂ ವ್ಯಾಪಿಸಲ್ ಮಾ
ಣದೆ ಮತ್ತಾ ಪೊತ್ತಿನೊಳ್ ಕಜ್ಜಲಮಯಗಿರಿರಾಜಂ ದಲೆಂಬೊಂದು ಶಂಕಾ
ಪದಮಂ ದೇವಾಸುರೌಘಂಗಳಿಗೆ ಸುರನಗಂ ಪುಟ್ಟಿಸುತ್ತಿರ್ದುದಾದಂ ೭

ಘನಕುಂಭಸ್ಥಳಜಾತರತ್ನರುಚಿಯಿಂದಂತಸ್ತಮಂ ಕೂಡೆ ತ
ತ್ತನುವಿಂದಂ ಪೊಱಮಟ್ಟುಪೋಪ ತೆಱದಿಂ ಗಂಡಸ್ಥಳೀನಿರ್ಗತಾ
ತನುದಾನಾಂಬುಗಳಿಂ ನಿರುದ್ಧನಯನಂಗಳ್ ಭದ್ರಮಾತಂಗ ಪಾ
ವನಯೂಥಂಗಳವೇಱಿ ಪೋದುವು ಕರಂ ಮಂದಪ್ರಚಾರಂಗಳಿಂ ೮

ವ: ಅದೆಱಿ ಬಳಿಯಂ

ಮದಮೆಂಬಂಜನದಿಂ ಗಜಂಗಳನುವಿಂದಂ ದಕ್ಷರ ನ್ಯಾಸಮಂ
ಕೆದಱಲ್ ಮತ್ತೆ ಖುರಂಗಳೆಂಬ ವಿಲಸಟ್ಟಂಕಂಗಳಿಂ ವಾಜಿಗಳ್
ಪದೆಪಿಂ ಜೈನಯಶಃಪ್ರಶಸ್ತಿಯನದಂ ಹೇಷಾಳಿಯಿಂದೋದುತುಂ
ಮುದದಿಂದಂ ಬರೆವಂತೆ ಮೇರುಶಿಲೆಯೊಳ್ ಪೆಂಪೋದವೆಯ್ದೊಪ್ಪದಿಂ ೯

ಕುಸಿಯೆ ಕೊರಳ್ಗಳುಂ ತೆಗೆದ ವಾಘೆಗಳಿಂ ನೆಱೆ ಪಿಂದಣಂಗಮಂ
ಪಸರಿಸೆ ಪೂರ್ವಕಾಯದೊಳೆ ಸಂಕುಚಿತಾಂಗತುರಂಗಮಂಗಳುಂ
ಪೊಸತೆನಿಸಿರ್ದ ಚಿತ್ರಗತಿಯಿಂ ಕುಣಿವುತ್ತುಮವೆಯ್ದೆ ಕೂಡಿ ಸಂ
ತಸದೊಳೆ ಪೋದುವಂದು ಜಿನನಾಥನ ಮುಂದೆ ವಿಶೇಷವೇಷದಿಂ ೧೦

ಕುದುರೆಗಳ ಖುರವಿಘಟ್ಟನ
ದೊದವಿಂ ನೆಗೆವುತ್ತುಮಿರ್ದ ಕಿಡಿಗಳ್ ಶೋಭಾ
ಸ್ಪದಮಾದುವು ಭೂತಳಮಂ
ಪದೆದೊದೆದುಱೆ ನೆಗೆವ ಫಣಿಪಮೌಲಿಪ್ರಭೆಯೊಲ್ ೧೧

ಸಾಧಿತ ಪಂಚಧಾರೆಗಳೆನಿಪ್ಪ ಮನೋಜ್ಞತುರಂಗಮಂಗಳು
ದ್ಬೋಧಿತ ವಿಸ್ಮಯಾಭಿನವವೀಥಿಗಳೊಳ್ ಬಿಡದುಚ್ಚನೀಚಮಾ
ರ್ಗಾಧಿಕವೇಗದಿಂದೆ ಪರಿಲಂಘಿಸುವಲ್ಲಿಯವೇ ನಭೋಂತದೊಳ್
ಸಾಧನೆಯಿಂದೆ ಮತ್ತೆ ಕೆಲವೆಂಬಿನಮೊಂದೆರಡಾಗಿ ತೋಱುಗುಂ ೧೨

ವ: ಮತ್ತಂ

ಕಾಂಚನಭೂಮಿಭಾಗಮದು ಚಾರುರಥಂಗಳ ತೀಕ್ಷ್ಣನೇಮಿಧಾ
ರಾಂಚಿತಮಾಗಿ ತಾನೊಡೆದು ಧೂಳಿಸಮಾಕುಳಮಾದುದಂತು ಮು
ನ್ನಂ ಚಿರಕಾಲದಿಂ ನಡೆದೊಡಂ ರವಿ ಸಾರಥಿಗೆಯ್ದೆ ಚಿತ್ತಮಂ
ಸಂಚಳಿಸುತ್ತುಮಿರ್ದ್ದಱೆ ಪಥಭ್ರಮಮೆಂತಿರದಪ್ಪುದಾಕ್ಷಣಂ ೧೩

ವ: ಅನಂತರಂ ಪದಾತಿಸೈನ್ಯಂ ಪತ್ತಿಪೋಪ ಪೊತ್ತಿನೊಳ್

ಅದು ಮೊದಲಾಗಿ ಮಕ್ಕಳುಗಳಂತಿರೆ ದೇವಸಮೂಹಮೆಲ್ಲಮುಂ
ಪಮುಳದೆ ಭೂಮಿಯಲ್ಲಿ ಚರಣಂಗಳನಿಟ್ಟುಱೆ ಮೆಲ್ಲಮೆಲ್ಲನಾ
ತುದಿಗಿರಲೆಯ್ದುವಲ್ಲಿ ಸಲೆಮುಂದನೆ ಪೋಪ ಯಮಂ ಪಿದೃಷ್ಟಿದೋ
ಷದ ಪರಿಹಾರಕಾರಣಮ ಕಾಡಿಗೆಯಾರತಿಯಂತಿರೊಪ್ಪದಿಂ ೧೪

ವ: ಆಗಳ್

ಮೂಸಿ ಸಿತಂಬಮಂ ಮದದಿನೆತ್ತಿ ನಿಜಾನನಮಂ ನಿಕುಂಚಿತೋ
ನ್ನಾಸಿಕೆಯಗ್ರಮಂ ಪಡೆದರಳ್ಚಿಸಿ ಮಾಣದೆ ಕಾಮಧೇನು ಸಂ
ಭಾಷಿತ ಪುಷ್ಪಮಂ ಬಿಡದೆ ಪತ್ತಿರದೋಡುವ ಗೂಳಿ ಕಾಡಿ ಸಂ
ಕ್ಲೇಶಮನಿತ್ತುದೇಱೆ ನಡೆವಲ್ಲಿ ಕುಬೇರಸಖಿಂಗೆ ನಾಡೆಯುಂ ೧೫

ವ: ಅಂತು ದಿವಿಜರ ಪಡೆ ನಡೆಯೆ

ಅತಿಮುದದಿಂದನಂತಪಥದೊಳ್ ಪಥಿಕರ್ ವಿಬುಧರ್ ಬರಲ್ಕೆಯು
ನ್ನತಶಿರದಲ್ಲಿ ತಾಳ್ದಿ ವಿಬುಧೌಘ ನಿರಂತರಿತಾನುವೃತ್ತಿಸಂ
ಗತಫಲಮಂ ಜಗಕ್ಕೆ ನೆಱೆತೋಱಿಸುತಿರ್ದ್ದುದಾಕ್ಷಣಂ ಮಹಾ
ಕ್ಷಿತಿಯೊಳುದಾತ್ತರಪ್ಪರುಚಿತಜ್ಞತೆಯಂ ಸಲೆ ಮಾಡದಿರ್ಪರೇ ೧೬

ಬಂದುದು ಭದ್ರಸಾಲವನಸಾನುಗದೆಂಬನಿತಕ್ಕೆ ಬೇಗದಿಂ
ನಂದನಸಾನುಗೆಯ್ದುದದೊರ್ಮೆಯೆ ಸೌಮನಸಕ್ಕೆ ಪೋದುದ
ಲ್ಲಿಂದಮೆನಲ್ಕೆ ಪಾಂಡುಕಶಿಲಾವನಸಾನುಗಡರ್ದುದಿಂತು ದೇ
ವೇಂದ್ರನ ವಿಕ್ರಿಯಾಗಜಮದೇಂ ಮನದಿಂ ಕಡುವೇಗಿಯಾದುದೋ ೧೭

ಇಂದ್ರನನಗಲ್ದಿರಲಾಱದೆ
ನಂದನಮಾ ದಿವದಿನಿಳಿದು ಬಂದಿರ್ದುದೆನಲ್
ಮುಂದೆ ನೆಲಸಿರ್ದ ಪಾಂಡುಕ
ಸೌಂದರವನಮಂ ಸುರೇಂದ್ರನೆಯ್ದಿದನೊಲವಿಂ ೧೮

ವ: ಆಸಮಯದೊಳ್

ಪಾಂಡುಕವನವನಜವನಾ
ಡಂಬರದಿಂ ಬಂದ ಮಂದಮರುತಂ ಕಾಮವಿ
ಡಂಬನಮಂಡಿತನಂತಿರ
ಖಂಡಂ ನೆಱೆಬೀಸಿದತ್ತು ಮಂದರಗತಿಯಿಂ ೧೯

ದೇವಸ್ತ್ರೀಯರ ಕೇಶಮಂ ಕೆದಱುತುಂ ವಸ್ತ್ರಂಗಳಂ ನೂಂಕಿ ಜಂ
ಘಾವಕ್ಷೋರುಹಮಂಡಳಂಗಳನವಂ ಮುಟ್ಟುತ್ತುಮಂಗಂಗಳಂ
ತೀವಿ ವ್ಯಾಪಿಸಿ ಮಿಕ್ಕು ತರ್ಕಯಿಸುತುಂ ತಾಳ್ದತ್ತು ಸತ್ಸೌಖ್ಯಮಂ
ಭಾವಾಶಂ ಮರುತಂ ಮರುತ್ವಪದಮಂ ತಾನೆಯ್ದಿತಂದೆಂಬಿನಂ ೨೦

ವ: ಇಂತು ಕಲ್ಪಾಧಿನಾಯಕಂ ಸಮಸ್ತಜನಸಂಕಲ್ಪಿತವಸ್ತುಪ್ರಧಾನಪ್ರವೀಣಾ ನಲ್ಪತರ ಕಲ್ಪತರುವರನಿಕರರಮಣೀಯಮುಂ ಚಾರುನಿರ್ಝರವಾರಿಧಾರಾಪೂರವಿಹಾರ ಮನೋಹಾರಿಯುಂ ವಿಲಸತ್ಕಿಸಲಯಕುಸುಮವಿಸರವಿಪುಳಫಳಮಂಡಳಾಖಂಡ ಮಂಡನಾಭಿಯೋಗಪರಿಮಂಡಿತಮುಮೆನಿಪ್ಪ ಪ್ರಕಾಂಡಕಪಾಂಡುಕವನಮಂ ದೂರ ದೊಳ್ ಕಂಡು ಮನಂಗೊಂಡು ಕೊಂಡಾಡುತ್ತುಂ ಮುಂದೆಪೋದೆ ಸರ್ವಗೀರ್ವಾಣಸೈನ್ಯ ಮೆಲ್ಲಮನಲ್ಲಿ ಬಿಡಲ್ವೇಳ್ವುದುಂ ಸ್ಥಳಚರ ವನಚರ ಜಳಚರ ಶಾಖಾಚರಂಗಳಪ್ಪ ತಂತಮ್ಮ ವಾಹನಂಗಳ್ಗೆ ಯೋಗ್ಯಂಗಳಾದ ಸ್ಥಾನಂಗಳಂ ನೋಡಿ ಯಥಾಯಥಮಾಗಿ ದೇವರ್ಕಳೆಲ್ಲಂ ನಿಜನಿಜವಾಹನಂಗಳನಲ್ಲಿ ನಿಲಿಸುವುದುಂ

ಸಕಳ ಸುರಾಸುರರ್ ನಿಜನಿಜೋಚ್ಚಗಜಂಗಳ ಮೇಲೆ ಪಣ್ಣಿದ
ಪ್ರಕಟಕುಥಂಗಳಂ ತೆಗೆದೊಡಾಕ್ಷಣದೊಳ್ ನೆಱೆಬಿಟ್ಟವಂತವಂ
ವಿಕಸಿತಕರ್ಮಕಾವರಣಮಂ ಬಿಡುವಂತಿರೆ ಲೋಕದೊಳ್ ಜನಾ
ಧಿಕತರಮಾರ್ಗಗಾಮಿಗಳಿಗಾವರಣಂ ಸಲೆ ಬಿಟ್ಟುಪೋಗದೇ ೨೧

ವ: ಅನಂತರಂ

ಭೂರಿಪಯೋಧರಸ್ಥಿತಿಯನೊಪ್ಪಿ ವಿಶೇಷವಿಲಾಸದಿಂ ಮನೋ
ಹಾರಿಯುಮಾಗಿ ವಾಮೆಯೆನಿಸಿರ್ದುಱೆ ಪೋಗುತಮಿರ್ದ ತನ್ನದೀ
ನಾರಿಯ ಕೇಶದಂತೆಸೆವ ನೀಲಸಮುತ್ಪಲಮಂ ಕರಾಗ್ರದೊಳ್
ಸೇರಿಸಿ ಬಲ್ಪಿನಿಂ ಪಿಡಿದು ಸೇವಿಸಿದತ್ತು ಮಹಾಮತಂಗಜಂ ೨೨

ಹಾವಸೆಯೆಂಬ ನೀಲಿಯ ಸುವಸ್ತ್ರಮನೆಯ್ದೆ ತೆರಳ್ಚಿ ಮಧ್ಯಮಂ
ಭಾವಿಸಿ ದಂತಿ ಮುಟ್ಟಲೆರಡುಂತಡಿಗಳ್ ಜಘನಂಗಳಂತಿರೆ
ದ್ರಾವಮನಾಂತಿರಲ್ ನದಿಯೊಳಾಳ್ವುದು ಸೂಚಿಪ ಮಾಳ್ಕೆಯಿಂ ವಧೂ
ಸೇವೆಯ ಸಂಗದಿಂ ಬಿಡದಧೋಗತಿಯಪ್ಪುದು ತಪ್ಪದೆಂಬಿದಂ ೨೩

ಜಲದೊಳ್ ಮುಳ್ಗಿದ ಕರಿ ನೀ
ಳ್ದಲಘುಕರಾಗ್ರಮುಮನೆತ್ತಿರಲ್ ಗಂಡವಿಮಂ
ಡಲದಿಂದೆಳ್ದಳಿವಳಯಂ
ಪೊಳೆಮದು ಘನದಂಡನೀಲಿಕಾಚ್ಛತ್ರದವೊಲ್ ೨೪

ಮಿಗೆ ರಜಸ್ವಲೆಯಾದೊಡಮಾ ಗಜಾ
ಳಿಗಳವುಂ ನಟಿಯಂ ಭಜಿಸಿರ್ದವೀ
ಜಗದೊಳುದ್ಧಮದಾಂಧಿತರಪ್ಪವರ್
ಬಗೆವರೇ ಗುಣದೋಷವಿಶೇಷಮಂ ೨೫

ನೀರಡಿಕೆಯಾದೊಡಂ ವನ
ವಾರಣಮದಮಿಳಿತಜಳಮನೀಂಟಿದುದಿಲ್ಲಾ
ವಾರಣಗಣಮಭಿಮಾನಮೆ
ಸಾರಂ ಮಾನ್ಯರ್ಗೆ ಪೀಡಿತಾವಸ್ಥೆಯೊಳಂ ೨೬

ವ: ಅಂತುಮಲ್ಲದೆಯುಂ

ಕಮಳದೆಸಳ್ಗಳಂ ತಿಱಿದು ಮೇಲಿರದೊಟ್ಟಿಕೊಳಲ್ಕಮಂತಮೆ
ಲ್ಲಮುಮುಱೆ ದೇಹವಲ್ಲಿ ಮಿಗೆ ಪತ್ತಿರಲೊಪ್ಪುತುಮಿರ್ದುದಾ ಗಜಂ
ಕಮಳಿನಿಯೆಂಬ ಕಾಂತೆ ರತಿಕೇಳಿಯೊಳಿಯ್ದು ನಖಕ್ಷತಂಗಳಂ
ಪ್ರಮದದೊಳಿಕ್ಕಿದಂತಿರೆ ಜಲಾಶಯದಿಂ ಪೊಱಮಟ್ಟುದಾಕ್ಷಣಂ ೨೭

ವ: ಅಂತು ಪೊಱಮಟ್ಟು ಪೋಗುತ್ತುಮಿರ್ದು ಗಂಧಸಿಂಧುರಮಾ ವನದಲ್ಲಿ ಮುಂದೊಂದೆಡೆಯೊಳ್ ದೊಡ್ಡಮಾಗೊಡ್ಡುಗೊಂಡು ಕಱಂಗಿ ನಿಂದು ಕರಿಕಲೇವರಾಕಾರಮನನುಕರಿಸುತ್ತುಮಿರ್ದ ಸಪ್ತಚ್ಛದಮಂ ಕಂಡು ಪ್ರತಿಗಜಮೆಂಬ ಭ್ರಾಂತಿಯಿಂದುಪಾತ್ತಕೋಪಮಾಗಿ ಪೋಗಿ ಕೋಡುಗಳ ಮೊನೆಯಿಂದೀಡಿಱಿದದಂ ಕೆಡಪಿ ಬಳಿಯಂ ವೀಥಿಮಾರ್ಗಮಂ ಬಿಟ್ಟು ಯದೃಚ್ಛೆಯಿಂದತ್ತಲಿತ್ತಲ್ ಪರಿದೋಡಿ ಮಾವಂತಿಗನಂ ಕಾಡುತ್ತುಮಿರ್ದುದಂ ಮೆಲ್ಲಮೆಲ್ಲನೆ ಸಾಮೋಪಾಯಪ್ರಯೋಗದಿಂದಾಲಾನಸ್ತಂಭಮಂತಿಕಕ್ಕೆ ತಂದು ನಿಲಿಸುವುದುಂ

ಪಿರಿದು ನಯಪ್ರಯುಕ್ತಗಜಸಂತತಿಗಳ್ ಮಿಗೆ ತಮ್ಮ ಪೀ
ವರತನುಬಂಧನಾರ್ಥಮುರುರಜ್ಜುಗಳಂ ಸಲೆತಂದು ಕೈಗಳಿಂ
ದಿರದವು ಕೊಟ್ಟು ತಾವೆ ನೆಱೆಕಟ್ಟಿಸಿಕೊಂಡವು ಲೋಕದೊಳ್ ಜಡಾ
ತ್ಮರ ಗಡಣಂ ಹಿತಾಹಿತವಿವೇಕದ ವೃತ್ತಿಯನೆಂತುಬಲ್ಲುದೋ ೨೮

ವ: ಅನಂತರಂ ಮತ್ತೊಂದೆಡೆಯೊಳ್

ಸಡಿಲಿಸಿ ಪಲ್ಲಣಂಗಳನವಂ ನೆಬಿಟ್ಟು ಸುರಾಸುರಾಳಿ ಕೈ
ಮಡಗದೆ ಲೀಲೆಯಿಂ ತೆಗೆದಂದು ದೃಢೀಕೃತಕರ್ಮಬಂಧಮಂ
ಬಿಡಿಸುವ ಮಾಳ್ಕೆಯಿಂ ಕುದುರೆಗಳ್ ಕಡಿಯಾಣಮುಮಂ ಕಳಲ್ಚಿಕೊಂ
ಡೆಡಬಲದಲ್ಲಿ ಪಲ್ಮೆಸುತುಮೋಡಿಯೆ ಕಾಡಿದುವೆಯ್ದೆ ಗೋವರಂ ೨೯

ಅತ್ತಲುಮಿತ್ತಲುಂ ಬಿಡದೆ ಸುತ್ತಿರದೋಡುವ ವಾಜಿರಾಜಿ ಸ
ದ್ವೃತ್ತಮುಖಂಗಳಿಂದುಗುವ ಫೇನಲವಂಗಳವಲ್ಲಿಗಲ್ಲಿಗಂ
ಬಿತ್ತಿರಿಸಿರ್ದುವಂದವಱ ಕೂಟದೆ ಭೂಮಿನಿತಂಬಿನೀ ಮನೋ
ಹೃತ್ತರಹಾರಮುಂ ಪಱದು ಚೆಲ್ಲಿದ ಮುತ್ತುಗಳೋಳಿಯೆಂಬಿನಂ ೩೦

ಸಲಿಲಕ್ರೀಡೆಯೊಳಿರ್ದ ವಾಜಿಗಳ ಸರ್ವಾಂಗಂಗಳೊಳ್ ತುಂಬಿ ಸೈ
ವಳಜಾಳಂ ಪುದಿಯಲ್ಕವಂದು ಪಿರಿದುಂ ನೀಲಂಗಳಾಗಾ ಕೊಳಂ
ಗಳಿನಾಗಳ್ ಪೊಱಮಟ್ಟುಪೋಪ ಪದದೊಳ್ ಸೂರ್ಯೋದ್ಧರಾಶ್ವಂಗಳುಂ
ಜಲಧಿಕ್ರೋಡದಿನಂಬರಕ್ಕಡರ್ದು ಪೋಪಂತಾಳ್ದುವೆಯ್ದೊಪ್ಪಮಂ ೩೧

ವ: ಇಂತು ನದೀನದಸರಸ್ಸಂಕುಳಂಗಳೊಳ್ ಜಲಾವಗಾಹನಂಗೆಯ್ದು ಬಳಿಯಂ ಪೊಱಮಟ್ಟುಪೋಪ ವಿರಾಜಮಾನ ವಾಜಿರಾಜಸಮಾಜಂಗಳಂ ನಯವಿದರಪ್ಪ ಚತುರವಾಹಕರನುನಯದಿಂ ತಂದು ತಂತಮ್ಮ ನಿವಾಸಮಂದಿರಂಗಳೊಳ್ ಕಟ್ಟಿದನಂತರಂ

ಜಿನನಂ ಧರಿಸಿದ ಕಾರಣ
ಮನಿಮಿಷಪತಿ ವೃಜಿನರಹಿತನಾಗಿ ಸುಪಾಂಡುಕ
ವನಮನುಱೆ ಮುಟ್ಟೆವಂದಂ
ಘನಮುದದಿಂ ನೋಡಿ ನೋಡಿ ಕೊಂಡಾಡುತ್ತುಂ ೩೨

ಶ್ರೀಕರಸಾರದಿಂದೆ ಮಿಗೆ ನೀರ್ದಳಿದುಂ ಸುಪರಾಗದಿಂದೆ ಚಿ
ತ್ರೀಕರರಂಗವಾಲಿಯುಮನಿಕ್ಕಿದಳುತ್ಕುಸುಮೋಪಹಾರಮಂ
ಬೇಕೆನೆಮಾಡಿ ತುಂಬಿಗಳ ಮಂಗಳಗೀತಪುರಸ್ಸರಂ ಸುಮಂ
ದಾಕೃತಿವಾಯು ಬಂದುದು ಜಿನಂಗಿದಿರಾಗಿ ಪಯಃಕಣಾಕ್ಷತಂ ೩೩

ಆದರದಿಂದಂ ಜಿನಪತಿ
ಪಾದಂಗಳನೆಯ್ದೆ ಮುಟ್ಟಿ ಪೂಜಿಸಿ ಕರೆವಪೊ
ಲಾದುದು ಜಿನನಂ ತತ್ಸಮ
ಯೋದಯದೊಳ್ ಕೂಡೆ ಬೀಱುತುಂ ಸೌರಭಮಂ ೩೪

ವ: ಇಂತು ಸುರಪತಿ ಸುರಸಮಿತಿವೆರಸು ನಾಲ್ಕನೆಯ ಮೇಖಳೆಗೆಯ್ತಪ್ಪುದು ಮದಱುತ್ತರ ಪೂರ್ವ ದಿಶಾಭಾಗಾಂತರಾಳದೊಳ್

ವಿಕಟ ಧೂರ್ಜಟಿಜಟಾಜೂ
ಟಕದೊಳಗರ್ಧೇಂದುಪೊಳೆವವೊಲ್ ಮೇರು ಚತು
ರ್ಥಕ ಮೇಖಳಾಗ್ರದೊಳ್ ಪಾಂ
ಡುಕಶಿಲೆ ಪರಿರಂಜಿಕುಂ ಸಿತಾಂಶುಪ್ರಸರಂ ೩೫

ಘನಸಂಸಾರಾರ್ಥಿಯೆಂಬಂದದೆ ಗತಿಪಥಮಂ ಬಿಟ್ಟು ಲೋಕಾಗ್ರದಲ್ಲೆಂ
ಬಿನಮಾ ಹೇಮಾದ್ರಿಧಾಮಾಗ್ರದೊಳೆ ನೆಲಸಿ ನಿತ್ಯತ್ವಮಂ ತಾಳ್ದಿದತ್ತೆಂ
ಬಿನೆಗಂ ಶೋಭಾವಿಶೇಷಾತಿಶಯಮನೊಳಕೊಂಡಿರ್ದು ತತ್ಪಾಂಡುಕಂ ಪಾ
ವನಮೋಕ್ಷಸ್ಥಾನಮೆಂಬಂತಿರೆ ಸುರಪನದಂ ಪೊರ್ದಿ ಸತ್ಸೌಖ್ಯನಾದಂ ೩೬

ವ: ಮತ್ತಮದಷ್ಟಯೋಜನದುದ್ದಮಯ್ವತ್ತುಯೋಜನದಗಲಮಗಲದಿಮ್ಮಡಿ ನೀಳಮಾಗಿ ಥಳಥಳಿಸಿ ಪೊಳೆವರ್ಧಚಂದ್ರಾಕಾರಮನನುಕರಿಸುತ್ತುಮಿರ್ದ ಪಾಂಡುಕ ಶಿಲಾತಲಂ ಕಡುರಮಣೀಯತರಮಾಗಿರ್ದುದಂತುಮಲ್ಲದೆಯುಂ

ಸುಳಿವಮರೀ ವಿಶಾಲಪರಿಲೋಲವಿಲೋಚನಸಂಚಯಂ ಸಮು
ಜ್ವಳಿತ ಸುಧಾಂಶುಕಾಂತಮಯ ಪಾಂಡುಶಿಲಾತಳದಲ್ಲಿ ಕೂಡೆ ಮಾ
ರ್ಪೊಳೆದೊಡದಂದು ಕಣ್ಗೊಳಿಪ ಬಾಳೆಯ ಮೀಂಗಳ ಮೊತ್ತಮೆತ್ತಲುಂ
ಬಳಸಿದ ದುಗ್ಧವಾರಿನಿಧಿಮಧ್ಯಮದೆಂಬಿನಮಾಳ್ದುದೊಪ್ಪಮಂ ೩೭

ಆ ಸಱಿಯ ನಟ್ಟನಡುವೆ ಮ
ಹಾ ಸಿಂಹಾಸನಮದೊಪ್ಪುಗುಂ ದುಗ್ಧಪಯೋ
ರಾಶಿಯ ನಡುವಣ ಮಣಿಭಾ
ಭಾಸುರರತ್ನಾದ್ರಿಯೆಂಬಿನಂ ಪೊಳೆಯುತ್ತುಂ ೩೮

ಆ ಸಿಂಹಾಸನದಿಕ್ಕೆಲಂಗಳೊಳಮೊಪ್ಪುತ್ತಿರ್ದವಂದು ಪ್ರಭಾ
ರಾಶಿವ್ಯಾಪ್ತಶುಭಾಸನಂಗಳೆರಡುಂ ಜನ್ಮಾಭಿಷೇಕೋದ್ಧ ವ
ರ್ಷಾಸೂಚೀಪ್ರತಿಸೂರ್ಯಬಿಂಬಯುಗಳಂ ಮಾರ್ತಂಡಸನ್ಮಂಡಲಾ
ಭ್ಯಾಸಸ್ಥಾನದೊಳಿರ್ದುದೆಂಬ ತೆಱದಿಂದಾ ಪಾಂಡುಕಾಕಾಶದೊಳ್ ೩೯

ವ: ಮತ್ತಮಾ ಪಾಂಡುಕಶಿಲಾವಳಯದ ಮೇಲೆ

ಅಱೆಯಂ ಸೂತ್ರಮಿಡಲ್ಕೆ ಮತ್ತಮದಱೊಂದಾಕಾರದಿಂ ಪ್ರೌಢಿಯಂ
ಮೆಱೆವಾ ರೂಢಿಯ ವಿಶ್ವಕರ್ಮನುಮೆನಲ್ ಕೌಶಲ್ಯಸಾಕಲ್ಯಮಂ
ನೆಱೆತಾಳ್ದಿರ್ದುಳಿಮುಟ್ಟದಾಕ್ಷಣದೊಳಂತಿರ್ದಿರ್ದುದಂ ಬಣ್ಣಿಸ
ಲ್ಕಱಿಯೆಂ ಶ್ರೀಯಭಿಷೇಕಮಂಡಳಮನುದ್ಯತ್ಕೇತುಮಾಲಾಪಮಂ ೪೦

ರತ್ನಮಯವಲ್ಲಿ ಪಾಂಡುಕ
ನೂತ್ನಶಿಲಾಗ್ರದೊಳೆ ಪುಟ್ಟಿ ಕೂಡೆ ಮಡಲ್ತ
ಪ್ರತ್ನನಿಕುಂಜಂಗೊಂಡದು
ಯತ್ನದಿನಂಬರಮನಡರ್ವವೊಲ್ ಕಣ್ಗೆಸೆಗುಂ ೪೧

ಸುತ್ತಲುಮೆಯ್ದೆ ತೆತ್ತಿಸಿದ ಮಿಂಚುವ ಮುತ್ತಿನ ಸೂಸಕಂಗಳಿಂ
ದುತ್ತಮಮಾದ ಕೆಂಬರಲ ಕಂಭದ ಪಂತಿಗಳಿಂ ವಿನೀಲಸ
ದ್ಭಿತ್ತಿಗಳೋಳಿಯಿಂದೆ ಪವಳಂಗಳ ಕೀಲ್ಗಳಿನೊಪ್ಪದೇಳ್ಗೆಯಂ
ಬಿತ್ತರಿಸುತ್ತುಮಿರ್ದುದಭಿಷೇಕದ ಮಂಡಪಮುದ್ಧಮಂಡಪಂ ೪೨

ಕೆದಱಿದ ಚೆಲ್ವ ಪೂವಲಿಗಳಿಂ ಬಿಡುಮುತ್ತಿನ ರಂಗವಾಲಿಯಿಂ
ಪುದಿದುಱೆ ಚೆನ್ನರನ್ನದುರುತೋರಣದೋರಣವೀಧಿಯೊಳ್ ತೊಡ
ರ್ಚಿದ ಪೊಸಪೊನ್ನಘಂಟೆಗಳಿನುತ್ತಮಮಂಗ ದರ್ಪಣಂಗಳಿಂ
ದದು ರಮಣೀಯಮಾಗಿ ಪರಿರಂಜಿಸಿದತ್ತಭಿಷೇಕಮಂಡಪಂ ೪೩

ಘನಕೌತುಕಕರಶೋಭೆಯಿ
ನನುಪಮ ವರಸಮವಸರಣಮೆನ್ನದೆ ಮತ್ತೊಂ
ದನೆ ಬೇಱೆ ಕಲ್ಪಿಸುವುದೇ
ಜಿನಪನ ಜನ್ಮಾಭಿಷೇಕಮಣಿಮಂಡಪಮಂ ೪೪

ವ: ಮತ್ತಮದಱೊಳ್

ನಿಲಿಸಿದ ನೆಲವಡಲಿಗೆಗಳ
ಪಲವಾದುಱೆ ಜಾಗರಂಗಳಿಂ ದ್ವಿಗುಣಿಸಿದ
ಗ್ಗಳ ಪಚ್ಚೆಯ ಕಂಬಂಗಳ
ಬೆಳಗುಂ ಪೊಲಗೆಡಿಸಿದತ್ತು ಸುರರೀಕ್ಷಣಮಂ ೪೫

ಹರಿನೀಳಸ್ತಂಭಾಭ್ಯಂ
ತರದೊಳ್ ಮಾರ್ಪೊಳೆದ ರತ್ನದೀಪಪ್ರಭೆ ಬಂ
ಧುರಮಾದುದು ಕೃಷ್ಣನ ಭಾ
ಸುರತನುವಂ ನೆಮ್ಮಿ ತೋರ್ಪ ಲಕ್ಷ್ಮಿಯ ತೆಱದಿಂ ೪೬

ಅರುಣಮಣಿದೀಪದಿಂದಂ
ಪರಭಾಗಂಬಡೆದ ಸೂರ್ಯಕಾಂತಸ್ತಂಭಂ
ಪರಿರಂಜಿಸಿದುದು ಭಸ್ಮ
ಸ್ಫುರದೀಶಂ ತೋಱಿದಂತೆ ನೊಸಲುರಿಗಣ್ಣಂ ೪೭

ವ: ಮತ್ತಂ ಪರಮಕರುಣಾಕರನೆನಿಸಿದಾ ಜಿನೇಶ್ವರನ ಸಮೀಪದೊಳ್ ಪರಪೀಡಾಕರ ಮಪ್ಪುಷ್ಣಮಂ ಮಾಳ್ಪುದನುಚಿತಮೆಂದು ತರುಣತರತರಣಿಕಿರಣಂ ತನ್ನಯ ಸಹಜಮಾದು ಷ್ಣಮನೇನುಮಂ ತೋಱದೆ ಪರಿಕಲಿಸಿ ತೊಳಗಿ ಬೆಳಗುತ್ತಮಿರ್ದುದೆಂಬಂತತಿ ರಮಣೀಯಮಣಿಮಂಡಪದಂತಃಪ್ರದೇಶಂಗಳೊಳ್ ಕಡುಥಾಳಂಬೆತ್ತು ಥಳಥಳಿಸಿ ಪೊಳೆವ ಮಾಣಿಕದ ಸೊಡರ್ಗುಡಿಗಳ್ ಸುತ್ತಲುಂ ಮೊತ್ತಂಗೊಂಡು ಮಾಣದೆ ಸಮುಜ್ವಳಿಸುತ್ತುಮಿರ್ದುಮಂತಮಲ್ಲದೆಯುಂ

ನಾನಾಶೃಂಗಾರಭಾರಂಗಳಿನಧಿಕತರಾಲಂಕೃತಂಗಳ್ ಸಮಂಧಾ
ರಾನೇಕಸ್ಫಾರಮಾಲಾವಲಯವಿಲಸಿತಂಗಳ್ ಚತುಷ್ಕೋಣಶೋಣಾ
ಪೀನೋನ್ಮಾಣಿಕ್ಯಕುಂಭಂಗಳನಣುರುಚಿಗಳ್ ನೋಳ್ಪ ಸರ್ವಾಮರೀ ಸಂ
ತಾನಕ್ಕಂ ಚೋದ್ಯಮಂ ಪುಟ್ಟಿಸಿದುವು ಪಿರಿದುಂ ದರ್ಪಣಾಭ್ಯರ್ಚಿತಂಗಳ್ ೪೮

ವ: ಇಂತು ಕಮನೀಯಕಂಠಾವಲುಂಠಿತ ಚಾರುಹರಿಚಂದನಚರ್ಚಾರ್ಚಿತ ಮುಕ್ತಾಫಲಾಕ್ಷತ ಸಮಾಲಕ್ಷಿತ ವಿಕಸಿತಸಹಸ್ರದಳಧವಳಕಮಳಕುಳ ಪರಿಕಳಿತಮಾತು ಳುಂಗಫಳವಿಳಸಿತ ಮುಖಮುಖರ ಸಮುತ್ತುಂಗ ಶೃಂಗಾರಿತಭೃಂಗಾರಸಂಘಾತ ಸಂಗತ ನಿರತಿಶಯ ಮಣಿಮಯಮಂಗಳಕಳಶಸಹಸ್ರಪರಿಕಳಿತಮುಂ ವಿಶಿಷ್ಟಾಷ್ಟಮಂಗಳ ಪರಿವೇಷ್ಟಿತ ಮುಮಷ್ಟವಿಧಾರ್ಚನಾಯೋಗ್ಯ ನವ್ಯದ್ರವ್ಯಪರಿಪೂರ್ಣವಿಸ್ತೀರ್ಣ ತತ್ಸಮ ಯೋಚಿತ ಬಹುಳೋಪಕರಣ ಕಿರಣಗಣಾಭಿದ್ಯೋತಿತಾಭ್ಯಂತರಮುಮಾದ ಮಹಾಭಿಷೇಕ ಮಣಿಮಂಡಪಮನಾಖಂಡಳಂ ಮುಟ್ಟಿವಂದು ವಂದನ ಮಾಲಾದಿ ಬಹುವಿಧಾಲಂಕರಣ ರಮಣೀಯಮುಮಾದ ಮರಕತಮಯದ್ವಾರಬಂಧದ ಮುಂದೈರಾವತ ಮಹಾಮಾತಂಗಮಂ ನಿಲಿಸಿ

ಕರತಳಪುಟದೊಳ್ ಜಿನನಂ
ಧರಿಸಿ ಸುರಾಧೀಶನಿಳಿದನಾ ಗಜದಿಂದಂ
ಸುರರ ಜಯಜೀವನಂದ
ಸ್ವರಮಾಗಳ್ ಪುದಿಯೆ ಸಕಳದಿಙ್ಮಂಡಳಮಂ ೪೯

ಆಗಳ್ ದೇವಾನಕಂಗಳ್ ಮೊಳಗೆ ಜಯಜಯದ್ಘೋಷಣಂ ಪೆರ್ಚೆ ಚೇತೋ
ರಾಗಂ ಕೈಗಣ್ಮೆ ಪೊಣ್ಮುತ್ತಿರೆ ಜಿನಪತಿಯಂ ನಾಗಲೋಕಾಧಿನಾಥಂ
ಬೇಗಂ ದಲ್ ತನ್ನ ಹಸ್ತಾಂಜಳಿಯೊಳೆ ಬಿಜಯಂಗೆಯ್ಸಿ ಭೂರಿಪ್ರಕಾಶಾ
ಭೋಗಂ ವ್ಯಾಕೀರ್ಣತನ್ಮಂಡಪದ ನಡುವೆಗೆಯ್ತಂದನಾನಂದದಿಂದಂ ೫೦

ವ: ಮತ್ತಮಾ ಮಂಡಪದ ನಟ್ಟನಡುವಣರ್ಚಿಸಿ ನವೀನರಚನಾಖಚಿತ ಸಮುಜ್ವಳ ಮಣಿಮರೀಚಿನಿಚಯಪರಿಭಾಭಾಸ್ಯಮಾನಮಹಾರ್ಹ ಸಿಂಹಾಸನದೊಳ್ ಪೂರ್ವಾಭಿ ಮುಖನಾಗಿ ತಜ್ಜಿನಾರ್ಭಕನನಿರಿಸುವುದುಂ

ಹರಿವಿಷ್ಟರಮುದಯಮಹೀ
ಧರದಂತಿರೆ ಬಾಳಕಂ ಸುಬಾಳಾರ್ಕನ ವೋಲ್
ಪಿರಿದಾದ ತೇಜದೊದವಂ
ಪರಕಲಿಸುತ್ತಿರ್ದನಖಿಳದಿಕ್ತಟದೆಡೆಯೊಳ್ ೫೧

ಮೊದಲೊಳ್ ಪಾಂಡುಶಿಲಾತಳಂ ದಲಭಿಷೇಕೋತ್ಸಾಹಮಂ ಮಾಳ್ಪವೊಲ್
ಕೆದಱುತ್ತಿರ್ದವು ಪಾಂಡುರಪ್ರಭೆಯನಾ ತೀರ್ಥೇಶಸರ್ವಾಂಗದೊಳ್
ಪದೆಪಿಂ ಪಾಂಡುರವರ್ಣನಾಗಿ ಸುರರಿಂಗಂ ಪುಟ್ಟಿಸುತ್ತಿರ್ದನೋ
ವದೆ ತನ್ನೊಪ್ಪುವ ಕೀರ್ತಿಯಾವರಿಸಿದತ್ತೆಂಬೊಂದು ಸಂದೇಹಮಂ ೫೨

ಇರೆ ದಿಕ್ಪಾಲಕರಂದು ತಂತಮಗೆ ಯೋಗ್ಯಸ್ಥಾನದೊಳ್ ಸ್ವಾಂಗನಾ
ಪರಿವಾರಾಯುಧವಾಹನಂಬೆರಸು ಶೇಷಾಶೇಷದೇವರ್ಕಳಂ
ನೆರೆದಲ್ಲಲ್ಲಿ ಪರಿಗ್ರಹಂಬೆರಸಿರೆ ಸ್ವಸ್ಥಾನದೊಳ್ ಕಿನ್ನರೇ
ಶ್ವರನಾದೇಶದಿನಲ್ಲಿ ತಳ್ತೆಸೆಯೆ ನಾನಾಭೂಷಣಾಂಶೂತ್ಕರಂ ೫೩

ವ: ಆಗಳಾ ಮಣಿಮಯಸಿಂಹಾಸನದೆರಡುಂಕೆಲದೊಳಿರ್ದ ಶುಭಾಸನಂಗಳಲ್ಲಿ ಸೌಧರ್ಮೇಂದ್ರನುಮೀಶಾನೇಂದ್ರನುಮುತ್ತರ ದಕ್ಷಿಣಾಭಿಮುಖರಾಗಿ ತಜ್ಜನ್ಮಾಧೀಶ್ವರನ ದಕ್ಷಿಣ ವಾಮಭಾಗದೊಳ್ ಕುಳ್ಳಿರ್ದು ಸಕಳಕಲ್ಪಾಮರಪ್ರಮುಖ ನಿಜನಿಜ ಪರಿಕರಪರಿವೃತಸುರನಿಕರಮನುಚಿತಸ್ಥಾನದೊಳ್ ಕುಳ್ಳಿರಿಸಿ ಜ್ಯೋತಿಷ್ಕ ದೇವೇಂದ್ರರ್ ಮುಂತಾದ ಭವನಾಮರೇಂದ್ರರಂ ಕರೆದು ಪರಿಚಾರಕ ಪದವಿಯೊಳ್ ನಿಱಿಸಿದನಂತರ

ಕರಸಿ ಕುಬೇರನಂ ಬೆಸಸಿದಂ ಸುರನಾಯಕನಂದು ನೀಂ ಸುರಾ
ಸುರರ ಗಣಂಗಳಂ ನಿಜನಿಜೋಚಿತಕೃತ್ಯದೊಳಂ ನಿಯೋಜಿಸಿ
ತ್ವರಿತದೆ ಮಾಡಿಸೆಂದು ಗುರುಭಕ್ತಿಯಿನಾಂತನವಂ ತದಾಜ್ಞೆಯಂ
ಸುರಚಿರನೂತ್ನರತ್ನಮಯದಂಡವಿಮಂಡಿತ ಬಾಹುದಂಡಕಂ ೫೪

ವ: ಆಗಳ್

ಕಳೆ ನೀಂ ವಾಯುಕುಮಾರ ಸೂಕ್ಷ್ಮರಜಮಂ ಗಂಧೋದಕಾಸಾರಮಂ
ತಳಿ ನೀಂ ಮೇಘಕುಮಾರ ಮಾಡುಮಣಿಯಿಂ ಮುಕ್ತಾಫಳಶ್ರೇಣಿಯಿಂ
ದೆಲೆ ದಿಕ್ಕಾಂತೆಯರಿಕ್ಕಿ ಕೊಡೆ ಪಿರಿದುಂ ರಂಗಾವಲೀಭಂಗಿಯಂ
ನಲವಿಂ ದೇವಿಯರೆಯ್ದೆ ಚೆಲ್ಲಿಯುದಱೊಳ್ ಮಂದಾರಪುಷ್ಪಂಗಳಂ ೫೫

ತಾಳಮನೆಯ್ದೆ ಮೇಳವಿಸು ತುಂಬುರ ಮಂಗಳಗೀತಮಂ ಸಮಂ
ತೋಳಿಯಿನೊಲ್ದು ಪಾಡು ವರಕಿನ್ನರ ಪಾವನವಾಣಿವೀಣೆಯಂ

ಲಾಲಿಸಿ ಸ್ಯತಮಾಡು ಭರತಜ್ಞ ವಿಶೇಷಿಸು ನಾಟ್ಯರಂಗಮಂ
ಲೋಲವಿನೇತ್ರ ರಂಭೆ ನಟನಾರ್ಥಮೆ ನೀಂ ಸಮಕಟ್ಟಿಕೊಳ್ ಕರಂ ೫೬

ಮುತ್ತಿನ ಚೆಲ್ವಸತ್ತಿಗೆಗಳಂ ಭವನಾಮರರೆತ್ತಿನಿಲ್ಲಿಯ
ತ್ಯುತ್ತಮ ಹೇಮದಂಡ ಪರಿಮಂಡಿತಚಾಮರಸಂಚಯಂಗಳಂ
ಮತ್ತೆ ಸನತ್ಕುಮಾರವರರಿಕ್ಕಿ ತದಂಗನೆಯರ್ ಕೆಲಂಬರುಂ
ಚಿತ್ತರದಿಂದೆ ಬೀಸಿ ಪೊಸಬಾಳದ ಬೇರ್ಗಳ ವೀಜನಂಗಳಂ ೫೭

ವ್ಯಂತರದೇವರುದ್ಧಪಟಹಪ್ರಕರಂಗಳನಾಯತಂಗಳಿಂ
ಬಂತಿರೆ ಚೆಲ್ವನಾಗಿ ನೆಱೆಮಾಡಿ ತದೀಯವಧೂಜನಂಗಳುಂ
ಸಂತೊಸದಿಂದೆ ಮತ್ತೆಕೆಲವುಂ ಸಮಯೋಚಿತಮಂಗಳಂಗಳಂ
ಚಿಂತಿಸಿ ಬೇಗದಿಂ ಸಮೆಯಿಯೆಂದುಸಿರ್ದಂ ಧನದಂ ದಲಾಕ್ಷಣಂ ೫೮

ದೇವಕುಮಾರಿಯರ್ ಪರಮಪುಷ್ಪಫಳಾಕ್ಷತಗಂಧಧೂಪಮಂ
ತೀವಿ ವಿಚಿತ್ರಪಾತ್ರಚಯದಲ್ಲಿ ಮಹಾಕುಲದೇವಿಯರ್ ಕರಂ
ಪೀವರ ಮಂಗಳಾರತಿಗಳಂ ಮಣಿಭಾಜನಪಂತಿಯಲ್ಲಿ ಸಂ
ಭಾವಿಸಿ ಮಾಡಿಯೆಂದು ಸುರದೇವಿಯರಿಂಗುಸಿರ್ದಂ ಧನಾಧಿಪಂ ೫೯

ವ: ಇಂತು ಸಕಳಾಮರೇಂದ್ರಪ್ರಮುಖ ದೇವದೇವೀನಿವಹಂಗಳಂ ದ್ವಾರ ಪಾಲಕನಪ್ಪಕುಬೇರನಂ ಜಿನಜನ್ಮಾಭಿಷೇಕಕಾಲಕರಣೀಯಂಗಳಪ್ಪ ಬಾಹುತ್ತರನಿಯೋ ಗಂಗಳ್ ಬೇಱೆವೇಱೆ ಪಾಕಶಾಸನ ಸಮಾದೇಶದಿಂ ನಿಯಾಮಿಸುವುದುಂ

ಕಳಕಳಕೋಳಾಹಳದ
ಗ್ಗಳಮಂ ಮಾಡದಿರಿಯೆಂದು ದೇವಾಸುರರಂ
ಸಲೆ ಜಡಿದು ನುಡಿದು ನಿಲಿಸಿದ
ನೊಲವಿಂದಾ ದೇವಸಭೆಯೊಳಂದು ಕುಬೇರಂ ೬೦

ವರಕರ್ಪೂರಪರಾಗಪೂಗಘನಗಂಧಾಂಧಾಳಿನೀಸಂಕುಳಂ
ನೆರೆದಲ್ಲಲ್ಲಿಗೆ ಮಾಲೆಗೊಂಡು ನೆಗೆವುತ್ತಿರ್ದತ್ತದಾಗಳ್ ಜಿನೇ
ಶ್ವರಜನ್ಮಾಭಿಷವೋತ್ಸುಕರ ಚೇತೋವೃತ್ತಿಯಂ ಬಿಟ್ಟು ದು
ರ್ಧರಪಾಪಂ ಪಱಿದೋಡಿಪೋಪ ತೆಱದಿಂ ಕಣ್ಗೆಂ ಬೆಡಂಗಾದುದೋ ೬೧

ವ: ತದನಂತರಂ

ಅನುಭಾವಕ್ಕನುಕೂಲಮಾಗಿ ಸಿರಿಗಂ ತಕ್ಕಂದದಿಂ ತನ್ನ ವ
ರ್ತನೆಗಂ ಯೋಗ್ಯಮೆನಲ್ಕೆ ಮತ್ತಮುಚಿತಂ ತದ್ದೇಶಕಾಲಕ್ಕಮಂ

ಬಿನೆಗಂ ಮಾಡಲೆವೇಳ್ಪುದೊಂದು ಪಿರಿದುಂ ಜನ್ಮಾಭಿಷೇಕಪ್ರಭಾ
ವನೆಯಂ ತೋಷದಿನೆದ್ದನಂದು ಸುರಪಂ ಭಕ್ತಿಪ್ರಸನ್ನಾಯಶಂ ೬೨

ಕ್ಷೀರಸಮುದ್ರದ ನಿರ್ಮಳ
ನೀರಂ ತರಲೆಂದು ಬೇಗಮೆಳ್ದಂ ಸುರಪಂ
ಚಾರುಶತೇಂದ್ರರ್ ತನ್ನೊಡ
ನೋರೊರ್ಮೊದಲೆಳ್ದರಮರತತಿವೆರಸಿ ಕರಂ ೬೩

ವ: ಇಂತು ಶತೇಂದ್ರರೊಡಗೂಡಿದ ಬಿಡೌಜಂ ಕಡುಸಡಗರದಿಂದುದ್ದಾಮರ ವಾಮಹೇಮೀಯ ಕುಂಭಸಂಭೃತಕರವಿರಾಜಮಾನ ದೇವಸಮೂಹಸಮಾವೃತಮಾಗೆ ಮಹಾಪ್ರಭಾವನೆಯಿಂ ಕ್ಷೀರೋದಯಮನೆಯ್ದುವುದುಂ

ಕ್ಷೀರಸಮುದ್ರಮಂ ಬಿಡದೆ ಕೌತುಕದಿಂದೆಮೆ ನೋಡುತ್ತಿರ್ದ ದೈ
ತ್ಯಾರಿವಿಧಾನಮಂ ಸುರಪನೀಕ್ಷಿಸಿ ವಾಕ್ಚತುರಂ ತದೀಯಶೃಂ
ಗಾರಮನಿಂತು ವರ್ಣಿಸುತುಮಾ ದಿವಿಜರ್ಗುಸಿರ್ದಂ ಸಮಂತು ವಿ
ಸ್ತಾರಿಸದಿರ್ಪುದೇನವಸರೋಚಿತಭಾಷಣಮೆಯ್ದೆ ತೋಷಮಂ ೬೪

ಬಡವಾನಳೋಷ್ಣಭರಮಂ
ಕೆಡಿಸಲ್ಕೆಂದಿಂದುಕಿರಣಗಣಮಂ ಪಾಲಿಂ
ಗಡಲೆಯ್ದೆ ಪೊದೆದ ತೆಱದಿಂ
ಕಡುವೆಳಿದಾಗಿರ್ದು ಪಡೆದುದತಿಕೌತುಕಮಂ ೬೫

ಪಿರಿದುಂ ನಾಗೇಂದ್ರನಂದಾವರಿಸಿದ ವಿಲಸನ್ಮೇರುರೂಪಂಗಳಂತಿ
ರ್ದುರುಮುಕ್ತಾಮಾಲಿಕಾಲಂಕೃತ ಕನಕಮಯಸ್ಥೂಳಕುಂಭಂಗಳ ಸಾ
ದರದಿಂದಂ ಕೊಂಡುಬರ್ಪಾ ಸುರಸಮುದಯಮಂ ಕಂಡು ದುಗ್ಧಾರ್ಣವಂ ಬಿ
ತ್ತರಿಪಂತಿರ್ದತ್ತು ಮತ್ತಂ ಮಥನಭಯದಿನಾಕಂಪಮಂ ತುಂಗಭಂಗಂ ೬೬

ವ: ಆಗಳ್

ಹರಿನೀಳಚ್ಛವಿಯೆಂಬ ಚೆಲ್ವತೊವಲಂ ಕಲ್ಲೋಲಹಸ್ತಾಗ್ರದೊಳ್
ಧರಿಸಿರ್ದುಂ ಪವಳಂಗಳೊಳ್ ಬೆಳಗಿನಿಂ ಕೆಂಪಾದ ಸಚ್ಛುಕ್ತಿಕೋ
ತ್ಕರದಂತಂಗಳಿನೊಳ್ಪುವೆತ್ತ ಸುಳಿಯೆಂಬಾ ಬಾಯುಮಂ ಬಿಟ್ಟು ದು
ರ್ಧರನಿರ್ಘೋಷಣದಿಂದೆ ಪುಯ್ಯಲಿಡುವಂತಿರ್ದತ್ತು ದುಗ್ಧಾರ್ಣವಂ ೬೭

ವ: ಅಂತುಮಲ್ಲದೆಯುಂ

ಅಱಿದು ಜಿನಾಭಿಷೇಕಸಮಯಸ್ಥಿತಿಯಂ ಗಗನಾಧ್ವದಲ್ಲಿ ಪೋ
ಪೆಱಕದಿನುಚ್ಚಲದ್ಧ್ವನತರಂಗಚಯಚ್ಚಲದಿಂ ಸಘೋಷಣಂ
ನೆಱೆನೆಗವುತ್ತುಮಿರ್ದು ನಿಜಭೂರಿಜಡತ್ವದಿನೇಱಲಾಱದಿಂ
ತುಱೆ ಕೆಳಗಣ್ಗೆ ಬೀಳುತಮದಿರ್ದುದು ದುಗ್ಧಸಮುದ್ರಮಾಕ್ಷಣಂ ೬೮

ಎಮ್ಮಯ ಜನನಿಯೆನಿಪ್ಪೀ
ಸಮ್ಮಹಿಯಂ ಕ್ಷೀರವಾರ್ಧಿಯಾಕ್ರಮಿಸುಗುಮೆಂ
ದುಂ ಮಹಿಜಂಗಳ್ ತಡಿಯನ
ದೊರ್ಮೆಯು ಬಿಡವುದಕವೇಗರೋಧನಿಮಿತ್ತಂ ೬೯

ಮುತ್ತಂ ಮಾಣಿಕ್ಯಮಂ ದಲ್ ಪವಳದ ಕುಡಿಯಂ ಚಾರುಕಲ್ಲೋಲಮೆಂಬ
ತ್ಯುತ್ತಾಲೋಲ್ಲೋಲಹಸ್ತಾಗ್ರದೊಳೆ ನೆಗಪಿ ತಾಂ ತೋಱಿಸುತ್ತುಂ ಮಹಾವ್ಯ
ದತ್ತವ್ಯಾಪ್ತಾಂಗನಪ್ಪಾ ಪರದನ ತೆಱದಿಂ ಪಾಲ್ಗಡಲ್ ಕೂಡೆ ಚೆಲ್ವಂ
ಬಿತ್ತುತ್ತಿರ್ದತ್ತು ಮತ್ತಂ ಜಡಜಠರತೆಯಿಂದಂ ಸುಶೈಥಿಲ್ಯಕಚ್ಚಂ ೭೦

ಕಡುಗಾಳಿಯ ಪೊಯಿಲಿಂದಂ
ಕಡಲ ತರಂಗಂಗಳೆಯ್ದೆ ನೆಗೆದವು ದೂರಂ
ಗಡ ಪೋಗಿ ಬೀಳುತಿರ್ದುವು
ವುಡುಮುಕ್ತಾಸಂಗ್ರಹೇಚ್ಛೆಯಿಂದೆಂಬಿನೆಗಂ ೭೧

ಅಮೃತಂ ಕಲ್ಪಮಹೀರುಹಂ ಸಿತಗಜಂ ಸತ್ಕೌಸ್ತುಭಂ ತಾರಕಾ
ರಮಣಂ ಲಕ್ಷ್ಮಿ ಪರಾರ್ಧ್ಯರತ್ನನಿಚಯಂ ಮುಂತಾದ ಸದ್ವಸ್ತುಸಾ
ರ್ಥಮುಮಂ ತಂತಮಗೊಯ್ದರೆಂದು ಪಿರಿದಾರ್ತಂಬಟ್ಟು
ಭ್ರಮೆಗೊಂಡಂತಿರೆ ಘೋಷದಿಂ ಮೊಱೆಯಿಡುತ್ತಿರ್ದತ್ತು ಭಂಗಾಕುಳಂ ೭೨

ನದಿಯೆಂಬಬಲೆಯ ಶೋಭಾ
ಸ್ಪದಮಾದುರಪುಳಿನಮೆಂಬ ಜಘನಸ್ಥಳಸಂ
ಗದೆ ಮಸೃಣಮಣಿತಮಂ ಘೋ
ಷದೆ ನೆವದಿಂ ದುಗ್ಧವಾರ್ಧಿಯುಬ್ಬರಿಸುವವೊಲ್ ೭೩

ವಿಳಸಿತವಾಹಿನೀಶತಸಹಸ್ರದಿನೊಪ್ಪಮನಾಳ್ದು ಕೂಡೆ ನಿ
ರ್ಮಳತರವಾರಿಮಗ್ನಚರಭೂಧರವೃಂದದೊಳೊಂದಿ ಸರ್ವದಿ
ಕ್ಕುಳಮನದೊರ್ಮೆಯಾಕ್ರಮಿಸಿ ದಿಗ್ಜಯಮಂ ನೆಱೆಮಾಡಿ ಪೆರ್ಚುಮಂ
ತಳೆದುದು ಚಕ್ರವರ್ತಿಯವೊಲೊಪ್ಪುತುಮಿರ್ದುದು ದುಗ್ಧಸಾಗರಂ ೭೪

ವ: ಮತ್ತಂ ಪದ್ಮಾನ್ವಿತಮಾಗಿಯುಂ ಧರಣೇಂದ್ರನಲ್ತು ಅಮೃತಾಧಿವಾಸ ಮಾಗಿಯುಂ

ಸ್ವರ್ಗಭೂಮಿಯಲ್ತು ಕನತ್ಕಂಣಾಂಚಿತಮಾಗಿಯುಂ ಕಾಮಿನೀಜನಮಲ್ತು ವಜ್ರಧರಣಪರಿರಾಜಿತಮಾಗಿಯುಂ ವಾಸವನಲ್ತು ನೂತ್ನರತ್ನರಮಣೀಯಮಾಗಿಯುಂ ರೋಹಣಾಚಳಮಲ್ತುಮಂತುಮಲ್ಲದೆಯುಂ

ಪರಿಕಿಪೊಡೆನ್ನ ಜೀವನಮೆ ಲೋಕದೊಳೆಯ್ದೆ ಕೃತಾರ್ಥಮಾದುದೀ
ಸುರಪನಪೇಕ್ಷೆಗೆಯ್ದನಭಿಷೇಕದೊಳೀ ನೆವದಿಂ ಜಿನಾಂಗಮಂ
ಭರವಸದಿಂದೆ ಮುಟ್ಟುವನಿತಕ್ಕುಱೆ ಯೋಗ್ಯಮುಮಾದೆನೆಂದು ತ
ಚ್ಛರದಿ ತರಂಗದಿಂದೆಸೆವುತಿರ್ದುದು ಕೈನಿಱಿದಾಡುವಂದದಿಂ ೭೫

ವ: ಇಂತು ವಿಚಿತ್ರಸಾಮರ್ಥ್ಯಕ್ಕಾಧಾರಮಾದ ಕ್ಷೀರನೀರನಿಧಿಯಂ ಶುನಾಸೀರಂ ಸಹಸ್ರಮುಖದಿಂ ಪೊಗಳುತ್ತುಮೆಡಬಲದೊಳ್ ಬರುತ್ತುಮಿರ್ದು ಸುರನಿಕರಂಗಳ ಪ್ರಶಂಸಾವಚನಂಗಳಂ ಕೇಳುತ್ತುಂ ಮುಟ್ಟೆವರ್ಪುದುಮಾಗಳದು ನಳಿನದಳಂಗಳೆಂಬ ನಯನಂಗಳಿಂ ನೋಡಿಸಮುಲ್ಲೋಲಕಲ್ಲೋಲಂಗಳೆಂ ಬುಲ್ಲಸತ್ಕರಂಗಳಿಂದರ್ಘ್ಯ ಮಣೀಮಯಾರ್ಘ್ಯಮಮಂ ಕೊಟ್ಟು ಗಭೀರಘೋಷಣದಿಂ ಸಂಭಾಷಣಂಗೆಯ್ವಂ ತಿರ್ಪುದುಮದಂ ನೋಡುತ್ತುಂ ತಡಿಯೊಳ್ ನಿಲ್ವುದುಂ

ಅತಿವೃದ್ಧಂ ನಿಮ್ನಗಾಧೀಶ್ವರನತಿಶಯಿತಾಂಧಂ ಕರಂ ತಾನೆನಿಪ್ಪೀ
ನುತವದ್ದುಗ್ಧಾರ್ಣವಂ ಮೇರುವಶಿಖರಮನೆಂತೇಱಿಗೆಂದಾ ಸಮಸ್ತಾ
ಮೃತಭೋಜಿವ್ರಾತಮಂದೆಯ್ದಿಸಲದನದಱೊಂದಗ್ರಮಂ ಪಂತಿಯಂ ಮಾ
ಡುತುಮಿರ್ದತ್ತುದ್ಧಶುಂಭತ್ಕನ್ಕಕಳಶಸಂದೋಹಮಂ ತಾಳ್ದಿ ಚೆಲ್ವಂ ೭೬

ಅದು ಮೊದಲಾಗಿ ಪಾಂಡುಕವನಂಬರಮಿಕ್ಕೆಲದಲ್ಲಿ ಕೂಡೆ ನಿಂ
ದುದು ಮಿಗೆಮಾಲೆಗೊಂಡು ಬಿಡದೋಳಿಯಿನೆಲ್ಲ ಸುರಾಸುರಾಳಿಗಳ್
ಪುದಿಯೆ ಕಿರೀಟಕೋಟಿಜಟಿಲಾಂಶುಗಳುಂ ಸಲೆಪೊತ್ತುಕೊಂಡ ತೋ
ರಿದುವೆನಿಸಿರ್ದನೇಕವಿಧರತ್ನಸುವರ್ಣಘಟಪ್ರಭಾಳಿಯುಂ ೭೭

ಎಮಗೆ ಪಗೆಯಪ್ಪ ದುರ್ಧ್ವಾಂ
ತಮನೊಳಕೊಂಡಿರ್ದುದೆಂದು ವೇಳಾವನಮಂ
ದ್ಯುಮಣಿಕೋಟಿಗಳೆ ಬಂದಾ
ದೆಮೆ ಮುತ್ತಿದುವೆನಿಸಿದುವು ಸುವರ್ಣಘಟಂಗಳ್ ೭೮

ಚಂದ್ರನ ಪೆರ್ಚೆ ಪೆರ್ಚುಗೆಡಲಾಗಿ ಬರ್ದುಂಕುವ ದುಗ್ಧವಾರ್ಧಿಯುಂ
ಸಂದ ವಿರೋಧಿಮಿತ್ರನೆನಿಸಿರ್ದ ನಿಮಿತ್ತದೆ ವೈರಿಯೆಂದು ಸಾ
ರ್ತಂದುರುರಾಹುಮಂಡಳಿಗಳೋವದೆ ಮುತ್ತಿದುವೆಂಬಿನಂ ಪಯಃ
ಸಿಂಧುವ ತೀರಮಂ ಬಳಸಿನಿಂದುವು ನೀಲಘಟಂಗಳೋಳಿಯಿಂ ೭೯

ಕ್ಷೀರಸಮುದ್ರತೀರದೆಡೆಯಂ ಮಿಗೆ ನಿರ್ಮಳಚಂದ್ರಕಾಂತಭೃಂ
ಗಾರಮಪಾರಮಾವರಿಸಿ ನಿಂದುದು ಧೋರಣೆಯಿಂದೆ ಸುತ್ತಲುಂ
ಶಾರದನೀರದಂ ಮೊಗೆಯಲೀ ಕವಿತಂದುದೆ ಪಾಲನೆಂಬ ಶಂ
ಕಾರಸಮಂ ನಿರೀಕ್ಷಿಪರ ಚಿತ್ತದೊಳಾಗಿಸುತಿರ್ದುದಾಕ್ಷಣಂ ೮೦

ಸಂದಣಿಸಿರ್ದು ಕೂಡೆ ಬಿಡದಲ್ಲಿದುದಿಲ್ಲಿದುದೆತ್ತಲಿತ್ತಲುಂ
ಸಂದಿಸಿದತ್ತಿದೊರ್ಮೊದಲೊಳೊಂದೆ ದಲೆಲ್ಲಿಯುಮೆಂಬ ಮಾಳ್ಕೆಯಿಂ
ಮಂದರದಲ್ಲಿಯುಂ ನಡುವೆಯುಂ ಕಡಲಲ್ಲಿಯುಮೆಯ್ದೆ ತಮ್ಮುಮಂ
ಕುಂದದೆ ಕಾಣ್ಬನಂ ನಡೆದುಬಂದುದು ಬೇಗಮಮರ್ತ್ಯಸಂಕುಳಂ ೮೧

ವ: ಅದೆಱಿ ಬಳಿಯಂ

ಕೂಡೆ ವಿಗುರ್ವಿಸಿದಂ ಬೆ
ಲ್ಲೋಡದ ಸಾಹಸ್ರಬಾಹುಕಂಡಂಗಳುಮಂ
ನಾಡೆ ಶಾಖಾಸಹಸ್ರಂ
ಕೂಡಿದ ಸುರವೃಕ್ಷದಂತಿರೊಪ್ಪಿದನಿಂದ್ರಂ ೮೨

ವ: ಇಂತು ವಿಕ್ರಿಯರ್ಧಿವಿಭವದಿಂ ವಿಗುರ್ವಿಸಿದ ಸಹಸ್ರಬಾಹು ದಂಡ ಕಾಂಡಂಗಳಿಂದೇಕೈಕ ಯೋಜನಪ್ರಮಿತಮುಖಮುಖರಂಗಳುಮಷ್ಟಯೋಜನ ಪರಿಪ್ರಮಾಣಾಂತರಾಳವಿಸ್ತಾರ ಪ್ರಶಸ್ತಂಗಳಾದ ವಿಕಟಹಟದ್ಘಾಟಕೀಯ ಸಹಸ್ರ ಘಟಪೇಟಕಂಗಳಂ ಪಿಡಿದು ಬಕ್ಕೆವಲಸು ಪಿರಿದಾಗಿ ಕಾಯ್ತು ನಿಂದಿರ್ದುದೆಂಬಂತೆ ಕಣ್ಗಳಿಂಗಾನಂದಮನಜನಿಸುತ್ತುಮಿರೆ

ಥಳಥಳಿಪ ಗಂಡಶೈಲಂ
ಗಳೆ ಸಾಸಿರದಿಂದೆ ಮೆಱೆವ ಮೇರುವ ತೆಱದಿಂ
ಪೊಳೆವ ಸೌವರ್ಣಕುಂಭಂ
ಗಳ ಸಾಸಿರದಿಂದಮೊಪ್ಪಿದಂ ದೇವೇಂದ್ರಂ ೮೩

ವ: ಅನಂತರಂ

ಪಟುಪಟಹಂಗಳ ರವಮು
ತ್ಕಟ ಕೋಳಾಹಳನಿನಾದದೊಡನೊರ್ಮೆಯೆ ದಿ
ಕ್ತಟಮಂ ಪುದಿಯಲ್ ಪೊಕ್ಕಂ
ಸ್ಫುಟಲಂಘನದಿಂದೆ ಸುರಪನಮೃತಾರ್ಣವಮಂ ೮೪

ವ: ಇಂತು ತತ್ಕ್ರೋಡಮಂ ಕ್ರೀಡೆಯಿಂ ಪುಗುವುದುಂ

ಸಂಗಡಿಸಿ ಪೊಂಗೊಡಂಗಳ
ಪಿಂಗಪ್ರಭೆ ಕೂಡೆ ಪಿರಿದುಮಾವರಿಸಲ್ ಪಾ
ಲಿಂಗಡಲನುಕರಿಸಿದುದು
ತುಂಗಘೃತಾರ್ಣವವಿಳಾಸಮಂ ಭರದಿಂದಂ ೮೫

ಎಮ್ಮ ಮಗಂ ಕರಂ ಕಿಱಿಯನಪ್ಪವನೊರ್ವನೆ ಕುಂಭಸಂಭವಂ
ಮುಮ್ಮಿಗೆ ಪೀರ್ದನೆಂದೊಡೆಮಗೇ ಕಡುಬೇಗದಿಂದಮಿಂ
ತೊರ್ಮೊದಲಲ್ಲಿ ಪೀರ್ವೆವಿದನೀಗಳೆ ನೋಳ್ಪಡಮೆಂದು ಚೋದ್ಯದಿಂ
ದಂ ಮೊಗೆವುತ್ತುಮಿರ್ದವು ಮಹಾಪರಿಣಾಹಕಕುಂಭಕೋಟಿಗಳ್ ೮೬

ನಿಮಿಷದೊಳೆ ತುಂಬಿ ನೀಡಿದ
ನಮರೇಶಂ ಸಲಿಲದೇವಿಯರ್ ಕಾಣಿಕೆಗೊ
ಟ್ಟಮೃತದ ಕುಂಭಂಗಳ ಸುರ
ಸಮಿತಿಗೆ ಕೊಡುತಿರ್ಪ ಮಾಳ್ಕೆಯಿಂದೆಂಬಿನೆಗಂ ೮೭

ವ: ಮತ್ತಂ

ದಿವಿಜರ್ ಬೊಬ್ಬಿಱಿದಾಲಿ ತಂದುಕುಡೆ ಕೋಟಾಕೋಟಿ ಕುಂಭಂಗಳಂ
ದಿವಿಜೇಂದ್ರಂ ಕಡುಚೋಜಿಗಂಬಡೆದ ಕೋಟಾಕೋಟಿ ಹಸ್ತಂಗಳಿಂ
ದೆವೆ ತಾಂ ಕೊಂಡುಱೆ ತುಂಬಿ ನೀಡುವೆಡೆಯಂ ನಿಟ್ಟೈಸಲಾರ್ಪನ್ನನಾ
ರವನಂ ತೋಱುವೊಡಿಲ್ಲದೇಂ ಪಡೆದುದೋ ವೈಚಿತ್ರ್ಯಸಾಮರ್ಥ್ಯಮಂ ೮೮

ಎಲ್ಲೆಡೆಯಲ್ಲಿಯುಂ ಮೊಗೆವ ಬೆಳ್ಳಿಯ ಪಾವನಚಂದ್ರಕಾಂತದ
ಪ್ರೋಲ್ಲಸಿತಾಮಲಸ್ಫಟಿಕದುಚ್ಚಘಟಂಗಳ ಕೋಟಿ ಕೂಡೆ ತ
ಳ್ವಿಲ್ಲದೆ ಸುತ್ತಲುಂ ಪೊಳೆಯೆ ದುಗ್ಧಸಮುದ್ರಮದಂದು ತಾರಕಾ
ತಲ್ಲಜಮಂಡಳಾವೃತನಭಸ್ಥಳಮೆಂಬಿನಮಾಳ್ದುದೊಪ್ಪಮಂ ೮೯

ಕಡಲಿಂದೆಳ್ತಪ್ಪ ಮತ್ತಂ ಕಡಲಕಡೆಗೆ ಪೋಗುತ್ತುಮಿರ್ಪಾಳಿಯಿಂದಂ
ನಡೆದಾ ಹೇಮಾದ್ರಿಯಂ ಪತ್ತುವ ಬಿಡದಿಳಿದಲ್ಲಿಂ ಬರುತ್ತಿರ್ಪ ಮುನ್ನಂ
ಕುಡುವಿಂದ್ರಂಗಿದ್ರನುಂ ತಾಂ ಕುಡೆ ಕೊಳುವ ಮಹಾಸಂಭ್ರಮೋತ್ಕರ್ಷದಿಂದಂ
ಪಡೆವುತ್ತಿರ್ದತ್ತುಗುರ್ವಂ ಸುರರ ಪಡೆ ಕರಂ ವಾರ್ಘಟೀಯಂತ್ರದನ್ನಂ ೯೦

ಒರ್ವೊರ್ವರ ಕೈಗಳೊ
ಳುರ್ವಿಂದಂ ಕೊಡುವ ಕೊಳುವ ಪದಮಂ ಬೇಗಂ
ಕೊರ್ವಿದ ಗಮನಾಗಮನಮ
ನುರ್ವರೆಯೊಳ್ ಭೇದಿಸಲ್ಕಮಾಱಿಂ ಬ್ರಹ್ಮಂ ೯೧

ನವರತ್ನಕಳಶತಮಭಿ
ನವಮಂದರಗಿರಿಯನಡರ್ದು ಪೋದುದು ನಾನಾ
ಛವಿಯಿಂದೆ ಮಿಗುವ ತೇಜದಿಂ
ನವಗ್ರಹಂಗಳ ವಿಳಾಸಮಂ ಭರದಿಂದಂ ೬೨

ಜಿನಪನ ಸಮ್ಮುಖಂಗಳೆನಿಸಿರ್ದವು ಪೂರ್ಣತರಂಗಳಾಗಿ ಪಾ
ವನದಿವಮಂ ಸಮಾಶ್ರಯಿಸಿ ಪೋದುವು ತದ್ವಿಮುಖಂಗಳಾಗಿ ಘ
ಮ್ಮನೆ ಬರುತಿರ್ದ ಕುಂಭನಿಚಯಂಗಳವುಂ ನೆ ೞರಿಕ್ತಕಂಗಳೆಂ
ದೆನಿಸಿಯೆ ಬಿಳ್ವವಬ್ಧಿಯೊಳೆ ತೋ ೞ್ಸುವಂತೆ ಜಿನಪ್ರಭಾವಮಂ ೬೩

ಸಡಗರದಿಂದಂ ದಿವಿಜರ
ಪಡೆ ಪಡೆದದ್ಭುತಮನೆಯ್ದೆ ತಂದಿರಿಸಿತ್ತಂ
ದೊಡೆಯನಭಿಷವ ನಿಮಿತ್ತಂ
ತಡೆಯದೆ ಪಾಲ್ಗಡಲನಮರಗಿರಿಮಸ್ತಕದೊಳ್ ೬೪

ಮೊಗೆಯೆ ಮಗುಳ್ದು ಸರ್ವದಿವಿಜಾಸುರರಾವಳಿ ಮತ್ತೆಮತ್ತೆಯುಂ
ತೆಗೆದದು ಕೂಡೆಕೂಡೆ ನೆಱೆಬತ್ತುತುಮಿರ್ದುದು ಭೂಮಿ ಕಾಣ್ಬನಂ
ಜಗದೊಳಿದೇಂ ವಿಚಿತ್ರಮೊ ಜಿನಾಭಿಷವೋತ್ಸವಕಾರಣಂ ಸುರಾ
ಳಿಗಳಿಗಧೀಶ್ವರಂ ಬಿಡದೆ ಪಾಲ್ಗಡಲಂ ಮೊಗೆವಂದು ಸಂಭ್ರಮಂ ೬೫

ಎನಿತಾನುಂ ಘಟಕೋಟಿಯಿಂ ಮೊಗೆಯಲಾ ಕ್ಷೀರಾರ್ಣವಂ ವೀಚಿತಾ
ಡನದಿಂದಾದುರುರೇಖೆಗಳ್ ತಡಿಗಳೊಳ್ ತೋರ್ಪಂತೆ ಪಿಂಗಿತ್ತು ಮ
ತ್ತೆನಸುಂ ತಾಯ್ಗಡಲೆಯ್ದೆ ಕಾಣ್ಬ ತೇಜದಿಂ ಬತ್ತಿತ್ತು ಮತ್ತಂ ಮಹಾ
ಘನರತ್ನಂಗಳ ರಾಶಿಗಳ್ ಬಿಡದೆ ಮೆಯ್ದೋರ್ಪಂತೆ ಪೋದತ್ತು ನೀರ್ ೬೬

ಚುಳಕಪ್ರಮಾಣಮಾದೊಡ
ಮುಳಿಯದವೊಲ್ ದುಗ್ಧವಾರ್ಧಿಜಳಮಂ ಮೊಗೆದರ್
ಪುಳಕಿತ ತನುಗಳ್ ದಿವಿಜರ್
ಬಳಿಯಂ ಮಣಿವಸರದಂತೆ ಪಡೆದುದು ಚೆಲ್ವಂ ೬೭

ವ: ಇಂತು ನಿರಂತರಾನುಗತ ನಿಖಿಳನಿಳಿಂಪಕುಳಸಮಾರಭ್ಯಮಾಣೋಭಯ ಶ್ರೇಣಿಯೊಳು ಜ್ವಳಿತಾನಣುತರ ಮಣಿಮಯಕಂಕಣಗಣರಮಣೀಯಘನರಣನ ಪರಿಣಾಯ ಮಾನಮಾಗಿ ಲೀಲಾಸಮುತ್ತಂಭಿತೋತ್ತಾಲ ಭುಜಮಾಲಾವಲಯದೊಳತಿ ವೇಗಚಮತ್ಕಾರದಿಂ ರಿಕ್ತಪೂರ್ಣ ಘಟಸಮಾವರ್ತನ ನಿವರ್ತನಂಗಳಿಂದಾಕ್ಷಣಂ ನಭಸ್ಥಳಂ ಚಟುಳಜಳಯಂತ್ರಘಟಿಕಾಜಾಳಜಟಿಳೀಕೃತಮಾದುದೆಂಬಂತೆ ಪುರಂದರ ಪುರಸ್ಸರಂ

ಸಕಳಸುರಾಸುರ ಪರಿಕರನಿಕರಮುಂ ಕ್ಷೀರೋದನೀರನಾಶ್ಚರ್ಯದಿಂ ಜಿನಜನ್ಮಾಭಿಷವಣಕಲ್ಯಾಣಕರಣನಿಮಿತ್ತಂ ಭಕ್ತಿಯಿಂದಂ ತಂದು

ದೇವರ್ಕಳ ಕಳಕಳಘನ
ರಾವದಿನೊಗೆವುತ್ತುಮಿರ್ದು ಕೋಳಾಹಳಮಂ
ಸೇವಕ ಧನದಂ ಮಾಣಿಸಿ
ಯೋವದೆ ತಂತಮ್ಮ ತಾಣದಲ್ಲಿರಿಸುವುದುಂ ೯೮

ವ: ಮತ್ತಂ

ತಳಿರಿಂ ಪೂಮಾಲೆಯಿಂ ಕನ್ನಡಿಯಿನಮಳಸೂತ್ರಂಗಳಿಂ ಗಂಧಚರ್ಚಾ
ವಿಳಸನ್ಮುಕ್ತಾಕ್ಷತಶ್ರೇಣಿಗಳಿನೆಸೆವ ಸತ್ಕಂಠದೊಳ್ ದಿವ್ಯವಸ್ತ್ರಂ
ಗಳ ಸುತ್ತಿಂ ರಂಜಿಸುತ್ತಿರ್ಪರುಣಮಣಿಮಹಾಪೂರ್ಣಸತ್ಕುಂಭಮಂ ಮಂ
ಗಳ ಚಾತುಷ್ಕಸ್ಥಮಾಯಾಕ್ಷರದ ನಡುವೆ ಸಂಸ್ಥಾಪನಂಗೆಯ್ದನಿಂದ್ರಂ ೯೯

ವ: ಇಂತು ಓಂ ಹ್ರೀಂ ಸ್ವಸ್ತಯೇಕಳಶಸ್ಥಾಪನಂ ಕರೋಮಿ ಸ್ವಾಹಾ ಎಂಬೀ ಮಂತ್ರಮನುಚ್ಚರಿಸುತ್ತುಂ ಮಂದಾಕಿನೀಮಾನಸಸರೋವರಾದಿಗಳಿಂ ತಂದ ನವರತ್ನಸಮಾಕಳಿತ ಸರ್ವೌಷಧಿಸಮ್ಮಿಶ್ರೀಕೃತತೀರ್ಥಾಣಃಪರಿಪೂರ್ಣಕುಂಭಮಂ ಸ್ವಸ್ತಿಕ ವಿಸ್ತಾರದಿಂ ಪ್ರಶಸ್ತಮಾದ ಸಮಸ್ತಧಾನ್ಯಪ್ರಸ್ತಾರ ಪ್ರಸ್ತೂಯಮಾನಮಧ್ಯಪ್ರದೇಶದಲ್ಲಿ ಪ್ರಸ್ಥಾಪನಂಗೆಯ್ದಿಂಬಳಿಯಂ ಸೌಧರ್ಮೇಂದ್ರನುಮಿಾಶಾನೇಂದ್ರನುಮಾಚಮನಸಕಳೀ ಕರಣಾದಿ ತದ್ಯೋಗ್ಯಕ್ರಮಮನನುಕ್ರಮದಿಂ ಮಾಡಿ ಸಿದ್ಧಗುಣಸ್ತೋತ್ರಪರಿಸಮಾಪ್ತ್ಯನಂತರಂ

ಅಮರಾಧಿಪರೀರ್ವರುಮ
ರ್ಘ್ಯಮನೆತ್ತೆ ನಭೋಂತರಾಳದೊಳ್ ತೀವಿದುದಂ
ದಮಳ ಜಳಾಕ್ಷತಮಿಶ್ರಿತ
ಸುಮೇರು ನಂದನನಮೇರುಕುಸುಮಪ್ರಸರಂ ೧೦೦

ವ: ಅಂತು ತಜ್ಜಿನಾರ್ಭಕನ ಮುಂದೆ ಸಮಗ್ರಾರ್ಘ್ಯೋದ್ಧರಣಮಂ ನಿರ್ವರ್ತಿಸಿ

ಬಹಳದಶಾಂಗಧೂಪವರಧೂಮಲತಾನಿಚಯಂ ಸಮಸ್ತದಿ
ಕ್ಕುಹರಮನೆಲ್ಲಮಂ ಪರಿಮಳೀಕರಿಸುತ್ತುಮದಿರ್ದುದಾಕ್ಷಣಂ
ಬಹುವಿಧನೂತ್ನರತ್ನಮಯದೀಪಕಳಾಕಳಿಕಾಕಳಾಪಮುಂ
ಮಹಿಮಸಮೇತ ಕಾಂತಿಭರದಿಂ ಬೆಳಗಿತ್ತು ತದಂತರಾಳಮಂ ೧೦೧

ಪಿರಿದುಂ ನಾನಾಪ್ರಕಾರ ಪ್ರಪಟುಪಟಹಸಂದೋಹಗಂಭೀರಭೇರೀ
ಪರಿಷತ್ಸತ್ಕಾಹಳಾಸಂಕುಳಬಹುವಿಧ ನಿಸ್ಸಂಖ್ಯಶಂಖಪ್ರರಿಂಖ

ದ್ವರನಿರ್ಘೋಷಂಗಳಂದೂರ್ಮೊದಲೊಳ್ ದಶದಿಙ್ಮಂಡಳೀಸರ್ವಕೋಣಾಂ
ತರದೊಳ್ ಘೋರೆಂದು ತಾವಿಮ್ಮಡಿಸಿದವು ಮಹಾತತ್ಪ್ರತಿಧ್ವಾನದಿಂದಂ ೧೦೨

ಗಂಧರ್ವದೇವದೇವೀ
ಬಂಧುರಸಂಗೀತತುಂಗಮಂಗಳರವಸಂ
ಬಂಧಂ ತೀವಿರ್ದುದು ದಿ
ಕ್ಸಂಧಿಗಳೊಳ್ ಜಿನನ ಜನನಸವನೋತ್ಸವದೊಳ್ ೧೦೩

ಘನತರ ಸುಷಿರಾಳೀಜಾತಚಾರುಪ್ರಣಾದಂ
ಘನಮಣಿಮಯಭೂಷಾರಾವದಿಂದೆಯ್ದೆ ಪೆರ್ಚಲ್
ವಿನುತನವರಸಂಗಳ್ ತುಂಬಿ ತುಳ್ಕಾಡೆ ದೇವಾಂ
ಗನೆಯರೊಲಿದು ನಾಟ್ಯಂಗೆಯ್ವುತಿರ್ದರ್ ವಿಚಿತ್ರಂ ೧೦೪

ವ: ಇಂತು ಜಿನಜನ್ಮಾಭಿಷೇಕಸೂಚಕ ಸಂಭ್ರಮಕೋಳಾಹಳಂ ಕೈಗಣ್ಮಿ ಪೋಣ್ಮುತ್ತಿರಲಾಗಳು ಚ್ಚಾರಿತ ಕಳಶೋದ್ಧರಣಮಂತ್ರ ಮುಖರಮುಖರಪ್ಪ ಶತ ಮಖರಿರ್ವರುಂ ಪೂರ್ಣಕಳಶಂಗಳಂ ತಳೆದುಕೊಂಡು ತತ್ಪರಮೇಶ್ವರನುಭಯ ಪಾರ್ಶ್ವಂಗಳಲ್ಲಿ ನಿಂದಿರ್ಪುದುಂ

ಇಕ್ಕೆಲದಲ್ಲಿ ನಿಂದ ದಿವಿಜೇಂದ್ರರ ಹಸ್ತತಳಂಗಳಲ್ಲಿ ಕೈ
ಮಿಕ್ಕಭಿರಂಜಿಸಿರ್ಪ ಕಳಶಂಗಳವೊಪ್ಪಮನಾಳ್ದವಾಕ್ಷಣಂ
ಚೆಕ್ಕನೆ ತಜ್ಜಿನೇಶ್ವರನ ಪುಣ್ಯಮಹಾಮಹಿಮಪ್ರಭಾವಸೌ
ಧಕ್ಕೆ ಸುವರ್ಣಪೂರ್ಣಕಳಶಂಗಳನಿಟ್ಟಪರೆಂಬ ಮಾಳ್ಕೆಯಿಂ ೧೦೫

ಜಯಜಯಘೋಷಣಂ ಪುದಿಯೆ ದಿಕ್ತಟಮಂ ಪ್ರಣಾದಿಮಂತ್ರಸಂ
ಚಯಮುಮನೋದುತುಂ ಜಿನನ ಮಸ್ತಕದೊಳ್ ಘನದುಗ್ಧವಾರಿಧಾ
ರೆಯನಮರಾಧಿಪರ್ ಸುರಿವುತಿರ್ದರದೆಂತುಸಮಸ್ತದೇವಕೋ
ಟಿಯ ಹೃದಯಕ್ಕೆ ಕೌತುಕವಿಶೇಷಮನಾಗಿಪುದಂತಿರಾಕ್ಷಣಂ ೧೦೬

ಸೊಗಯಿಪ ತೋರಕೆಚ್ಚಲವೊಲೊಪ್ಪೆ ಮಹಾಕಳಶಂ ತದಗ್ರದ
ಲ್ಲೊಗೆದುಜುನೀಳ್ದ ಪೆರ್ಮೊಲೆಗಳಂತೆ ಕರಾಂಗುಳಿಗಳ್ ವಿರಾಜಿಸಲ್
ಮಿಗೆ ವೃಷವತ್ಸವತ್ಸಳತರಾಶಯವೃತ್ತಿಗಳಾಗಿ ಕಾಮಧೇ
ನುಗಳವೊಲಿಂದ್ರರುಂ ಕಱೆವುತಿರ್ದರುದಾರಪಯಃಪ್ರವಾಹಮಂ ೧೦೭

ಪರಿವಿಸತ್ಪಯೋಧರಘಟಾತ್ರಯಕಂ ಮಣಿಮುದ್ರಿಕಾಪ್ರಭಾ
ಪರಿಕರಶಕ್ರಚಾಪವಿಸರಂ ಘನಕಂಕಣದುಜ್ಜಣೆಂಬ ಪೀ

ವರರವಗರ್ಜಿತಂ ನಖಮಯೂಖತಟಲ್ಲತಿಕಾ ವಿಶೇಷಮಾ
ಗಿರೆ ಕಱೆಯುತ್ತುಮಿರ್ದುದುರುಹಸ್ತಮನೂನಪಯಃಸುಧಾರೆಯಂ ೧೦೮

ಪಲವುಂ ಕಾಲದ ಗೆಡ್ಡೆಯಂತೆ ಸೊಗಸಿರ್ದಾ ಪಾಂಡುಕೋಚ್ಚೈಶ್ಶಿಳಾ
ತಳದೊಳ್ ಪುಟ್ಟಿದ ಶೋಣಪಾಣಿತಳಚಂಚತ್ಪಲ್ಲವೋಲ್ಲಾಸಿ ಕೋ
ಮಳಪುಣ್ಯದ್ರುಮಸಸ್ಯದಂತೆಸೆವ ತೀರ್ಥೇಶಂಗೆ ದೇವೇಂದ್ರರಂ
ದೊಲವಿಂದಂ ಸುರಿಯುತ್ತುಮಿರ್ದರಧಿಕಂ ಪೀಯೂಷತಾಪೂರಮಂ ೧೦೯

ಮಿಗೆವೈಕುರ್ವಣದಿಂದೆ ಕೊರ್ವಿ ಪಿರಿದುಂ ಪರ್ವಿರ್ದ ಹಸ್ತಂಗಳೋ
ಳಿಗಳಂ ಪೂರ್ಣಘಟಂಗಳಂ ಕೊಳುವ ತಾಂ ರಿಕ್ತಂಗಳಂ ನೀಡುವು
ಜ್ಜುಗದಿಂ ಱಾಟಣಮೆಂಬಿನಂ ಜಿನಪಪುಣ್ಯಕ್ಷೇತ್ರದೊಳ್ ಪುಣ್ಯವಾ
ರಿಗಳಂ ಪೊಯ್ದರಧೀಂದ್ರರುಂ ಬಳೆವವೊಲ್ ವಿಜ್ಞಾನಸಸ್ಯಂಕರಂ ೧೧೦

ವ: ಅಂತುಮಲ್ಲದೆಯುಂ

ಅರುಣಮಣಿಮಯಘಟಂಗಳಿ
ನುರವಣಿಸಿಯೆ ಬೀಳ್ವ ದುಗ್ಧಪೂರಂ ಚೆಲ್ವಂ
ಧರಿಸಿದುದು ತಳಿರ ತೊಂಗಲ
ನೆರವಿಗಳಿಂದುಗುವ ಕುಸುಮಮಂಜರಿಗಳವೊಲ್ ೧೧೧

ಹರಿನೀಳದ ಕಳಶಂಗಳಿ
ನಿರದು ಱೆಪೊಱಮಡುವ ದುಗ್ಧಮಾಳ್ದುದು ಸೊಗಸಂ
ವರರಾಹುಮಂಡಳಿಗಳಿಂ
ಸುರಿವ ಮಹಾಚಂದ್ರಚಾರುಕಳೆಯೆಂಬಿನೆಗಂ ೧೧೨

ಹೈರಣ್ಯಕುಂಭಮುಖದಿಂ
ದೋರಂತಿರೆ ಸುರಿವ ದುಗ್ಧಮೊಪ್ಪಿತ್ತು ಕರಂ
ಹೈರಣ್ಯಗರ್ಭಮುಖದೊಳ್
ಸೇರಿರ್ದ ಸರಸ್ವತೀಕಟಾಕ್ಷಂಗಳವೊಲ್ ೧೧೩

ಸ್ಫಟಿಕಕಳಶಂಗಳಿಂದು
ತ್ಕಟಮಾಗಿ ದಲುಗುವ ದುಗ್ಧಧಾರಾಪೂರಂ
ಪರಮನ ಶುಕ್ಲಧ್ಯಾನಂ
ಭರದಿಂದಂ ಪೊಱಗೆ ಪೊಣ್ಮುವಂತಿರಲೆಸೆಗುಂ ೧೧೪

ಮುಟ್ಟಿ ಸರ್ವಾಂಗಮಂ ಬೆ
ಳ್ಪಟ್ಟೆಯ ಕುಪ್ಪಸಮನೆಯ್ದೆ ತೊಟ್ಟಂತೆ ಕರಂ
ನೆಟ್ಟನೆ ಮಂದರಗತಿಯಿಂ
ದೊಟ್ಟೈಸಿಳಿದುದು ಜಿನಾಭಿಷೇಕಕ್ಷೀರಂ ೧೧೫

ಬಱಯಿತ್ತಿತ್ತಲ್ ಸುಧಾವಾರಿಧಿ ಮೊಗೆವ ಮಹಾವೇಗದಿಂದಂ ಸುರೇಂದ್ರರ್
ನೆಱೆಮುಳ್ಗಿತ್ತಿತ್ತಲೀ ಮೇರುಗಿರಿ ಬಳಸಿದ ಕ್ಷೀರಪೂರಂಗಳಿಂದಂ
ತುಱುಗಿತ್ತು ವ್ಯೋಮಮಂ ಬಿಂದುಗಳ ಬಳಗದಿಂ ತಾರಕಾಕ್ರಾಂತಮೆಂಬಂ
ತುಱೆ ಪೆರ್ಚುತ್ತಿರ್ದುದೇನದ್ಭುತಮೊ ಶತಮಖಂ ಮಾಳ್ಪ ಜನ್ಮಾಭಿಷೇಕಂ ೧೧೬

ಪರಮಾನೇಕಘಟಂಗಳಿಂ ಪಿಡಿದು ಪೀನಾನೇಕಹಸ್ತಂಗಳಿಂ
ಸುರರೊರ್ವೋರ್ವರದೆಲ್ಲಿಯುಂ ಬಿಡದ ಯಾನಾಯಾನವೇಗಂಗಳಿಂ
ದಿರದಿಂತೋರ್ಮೊದಲಲ್ಲಿಯೆಲ್ಲೆಡೆಯೊಳಂ ತಂತಮ್ಮ ರೂಪಂಗಳಂ
ಭರದಿಂ ತೋಱಿಪರಾಗಿ ದೇವತತಿ ಸಂಖ್ಯಾತೀತಮೇನಾಗದೇ ೧೧೭

ಹಿಮಗಿರಿಯಂತೆ ಮೇರುಗಿರಿಯಂತೆ ಸಲೆಮಾಳ್ಪ ಸಮಸ್ತಧಾತ್ರಿಯೆ
ಲ್ಲಮುಮನದೊರ್ಮೆ ಮುಳ್ಗಿಸುವ ಶಕ್ತಿಯನುಳ್ಳ ಪಯಃಪ್ರವಾಹಸಂ
ಭ್ರಮಮುಱೆ ಮೇಲೆ ಮೇಲೆ ಜಿನಮಸ್ತಕದೊಳ್ ಕವಿಯಲ್ಕೆ ನಿಶ್ಚಳ
ಪ್ರಮದದಿನಿರ್ದನಂದು ಸಹಜಂ ಜಿನಪುಂಗಮವಾರ್ಯವೀರ್ಯಕಂ ೧೧೮

ಕವಿವ ಕ್ಷೀರವಾಹಂ ಪಿರಿದು ಶಿಶು ಕರಂ ತಾಳಲೇನಾರ್ಪನೆಂದಾ
ದಿವಿಜೌಘಂ ಚಿಂತಿಸಲ್ಕಂದದನಱೆದವಧಿಜ್ಞಾನದಿಂದರ್ಭಕಂ ತ
ತ್ತ್ರಿವಿಚಿಂತಾಭಾರಮಂ ಮಾಣಿಸುವ ಬೆವಸೆಯಿಂ ಸೀಂಪುದುಂ ವ್ಯೋಮದೊಳ್
ದೇವವಿಮಾನವ್ರಾತಮುಂ ಪೂವಲಿಗೆದಱೆದವೊಲ್ ಚೆಲ್ಲಿಪೋದತ್ತದೆತ್ತಂ ೧೧೯

ವರನಾಸಾಗರ್ಭದೊಳ್ ತಾಂ ಪೊಱಮಡುವುಸಿರಿಂ ದೂರಮಂ ಪೋಗುತಂ ಮ
ತ್ತಿರದಾಗಳ್ ಬರ್ಪ ಸುಯ್ಲಿಂದೊಡನೆ ಬರುತುಮಿರ್ದಾ ವಿಮಾನಂಗಳಂ ದೇ
ವರ ದೇವಂ ಮೆಲ್ಲನಪ್ಪೊಂದುಸುರಿನ ವಶದಿಂ ಸ್ಥಾಪನಂಗೆಯ್ದುದಕ್ಕ
ಚ್ಚರಿವಟ್ಟಿಂತೆಂದವೆಲ್ಲರ್ ಗಹನಮೆ ಪರಮಾನಂತವೀರ್ಯಂಗಿದೆಲ್ಲಂ ೧೨೦

ವ: ಇಂತು ಮುನ್ನೆಂದುಂ ಭುವನತ್ರಯದೊಳನುದ್ಭೂತಮಾದದ್ಭುತಮಪ್ಪ ಜಿನನ ಜನನಸವನದನಂತರಂ

ನಟನಂಗೆಯ್ವಮರೀಕಟಾಕ್ಷನಿಚಯಂ ತೀರ್ಥೇಶಗಂಡಸ್ಥಳೀ
ಪುಟದೊಳ್ ತಾಂ ಪ್ರತಿಬಿಂಬಿಸುತ್ತಿರಲದಂ ದೇವೇಂದ್ರನರ್ಧಾಂಗಿಯು

ತ್ಕಟದಿಂ ಕಂಡಭಿಷೇಕದುಗ್ಧಕಣಶೇಷಾಶಂಕೆಯಿಂ ಹಸ್ತದೊಳ್
ದಿಟದಿಂದಂ ತೊಡೆವುತ್ತುಮಿರ್ದಮರರಿಂಗಂ ಹಾಸ್ಯಮಂ ಮಾಡಿದಳ್ ೧೨೧

ಕ್ಷೀರೋದಬಿಂದುವಿತತಿ ಶ
ರೀರಮನಾವರಿಸೆ ಮೆಱೆದನಾ ದೇವೇಂದ್ರಂ
ತೋರಮುತ್ತಿನ ಸುಕಂಚುಕ
ಭಾರಮುಮಂ ತೊಟ್ಟನಾಗಳೆಂಬೀ ತೆಱದಿಂ ೧೨೨

ವಿಳಸಿತರತ್ನಭಿತ್ತಿಗಳ ಸುತ್ತಲುಮೊಯ್ಯನೆ ತೆತ್ತಿಸಿರ್ದ ಪು
ತ್ಥಳಿಗೆಯ ಕೈಗಳೊಳ್ ಬಿಡದೆ ತುಂಬಿದ ಚೆಲ್ವಭಿಷೇಕದುಗ್ಧದು
ಜ್ವಳಕಣರಾಜಿಗಳ್ ಬಿಡದೆ ನಿರ್ಮಳಮೌಕ್ತಿಕಮಂಗಳಾಕ್ಷತಂ
ಗಳ ಬಳಗಂಗಳೆಂಬ ತೆಱದಿಂ ಸೊಗಸಂ ತಳೆದಿರ್ದವಾಕ್ಷಣಂ ೧೨೩

ಕೃತಪುಣ್ಯೋದ್ರೇಕಪಾಕಂ ಸಕಳವಿಭವಸೀಮಾತಿರೇಕಪ್ರವೇಕಂ
ಕೃತಕೃತ್ಯಾನೇಕಲೋಕಂ ಬಹಳಕಲುಷಸಂಹಾರಣೈಕಪ್ರಕಾಶಂ
ಹೃತಚಿತ್ತಾಸ್ತೋಕಶೋಕಂ ಪಡೆದುದು ಸೊಗಸಂ ಕೌಶಲಾನೀಕರೇಕಂ
ನುತತುಷ್ಯಂ ನಾಕಲೋಕಂ ಸುರಪತಿಕೃತಕಂ ಜೈನಜನ್ಮಾಭಿಷೇಕಂ ೧೨೪

ವ: ಇಂತಾ ಪರಮಜಿನೇಶ್ವರಂ ಚರಮದೇಹಧಾರಿಯಪ್ಪುದಱಿಂ ಮುನ್ನಮೆ ಸಕಳಮಳಿನವಿರಹಿತನಾಗಿ ಶುದ್ಧೀಕೃತದಿವ್ಯಶರೀರಿಯಾದೊಡಂ ತ್ರೈಲೋಕಾಧಿಪತ್ಯ ಸೂಚಕಮಾಗಿ ರಾಜ್ಯಾಭಿಷೇಕಂಗೆಯ್ವಂತೆ ಜನ್ಮಾಭಿಷೇಕಂಗೆಯ್ವುದುಂ

ಒಳಕೊಂಡತ್ತೆಯ್ದೆ ತತ್ಪಾಂಡುಕವನತಟಮಂ ಸುತ್ತಿಮುತ್ತಿತ್ತು ಮತ್ತ
ಗ್ಗಳಮಾಗಲ್ ಕೂಡೆ ತತ್ಸೌಮನಸವನಮುಮಂ ನಂದನಪ್ರಸ್ಥಮಂ ಮೂ
ವಳಸಾಗಲ್ ಮೀಱಿ ಮತ್ತಂ ಬಳಸಿದುದು ಮಹಾಭದ್ರಶಾಳೋದ್ವಿಶಾಳ
ಸ್ಥಳಮಂ ತಾಂ ಮುದ್ರಿಸಿತ್ತಂದಭಿಷವಣ ಘನಕ್ಷೀರಧಾರಾಪ್ರವಾಹಂ ೧೨೫

ವ: ಮತ್ತಮಪಾರಸಮುದಾರತತ್ಪಯಃಪೂರಪೂರಿತಮಾದ ಮೇರುಗಿರಿಪರಿ ದೃಶ್ಯಮಾನ ಚೂಡಾಪೀಡಮಾತ್ರಮಾಗಿರ್ಪುದುಂ

ನೆಗೆದುದಬಿಂದುಸಂತತಿಗಳಂತಿರೆ ತಾರೆಗಳುಂ ವಿಮಾನರಾ
ಜಿಗಳುಮದೆಲ್ಲಿಯುಂ ನೊರೆಯ ಪಿಂಡುಗಳಂದದನೆಯ್ದೆ ತೇಂಕಿ ಮೇ
ಗೊಗೆಯೆ ಜಿನಾಭಿಷೇಕಘನದುಗ್ಧಜಳಂ ನೆಱೆ ತೀವಿದತ್ತು ತಾಂ
ಗಗನಮುಮಂ ಸಮಸ್ತಧರಣೀತಳಮಂ ಸಮದಿಕ್ಕುಳಂಗಳಂ ೧೨೬

ವ: ಆ ಜಿನಸವನಸುಧಾವಾರಿಧಿಯೊಳ್

ಜಲದೇವೀಜನಮೆಂಬಿನಂ ಸಕಳತದ್ದೇವೀಜನಂ ಮುಳ್ಗಿದ
ತ್ತೊಲವಿಂದಂ ನೆಱೆನೀರ್ಮನುಷ್ಕರಮೊಲಾ ದೇವರ್ಕಳುಂ ತೇಂಕಿದರ್
ಗೆಲವಿಂದಂದವರೆಲ್ಲರುಂ ಜಿನಪನಂಗಸ್ಪೃಷ್ಟಪೀಯೂಷಮಂ
ಜಳಸೇವಾಫಳದಿಂದ ನಿರ್ಜರತೆಯಂ ತಾಳ್ದರ್ ಸುದುರ್ಲಭ್ಯಮಂ ೧೨೭

ಅಭಿಷೇಕಾಮೃತವಾರಿಪೂರಚಯದೊಳ್ ತೇಂಕಿತ್ತು ಮುಳ್ಗಿತ್ತು ಮ
ತ್ತುಭಯಂ ಕೋಡುಗಳಿಂದಮಿಡಿ ಱೆವುತಂದುತ್ಫೇನಪಿಂಡಂಗಳಂ
ಪ್ರಭವಾನಂದದಿನೀಸಿದತ್ತು ಮರಳಿತ್ತೋಲಾಡಿದತ್ತಾಡಿದ
ತ್ತಭಿಸೂತಂ ದಿವಿಜೇಂದ್ರವಾರಣವರಂ ನೀರಾನೆಯೆಂಬಂದದಿಂ ೧೨೮

ವ: ಮತ್ತಂ ದೇವರ್ಕಳೆಲ್ಲಂ ನೆರೆದು ದೇವೇಂದ್ರಾಚಳಚೂಳಿಕಾಗ್ರದಲ್ಲಿ ಜಿನಜನ್ಮಾಭಿಷೇಕವ್ಯಾಪಾರದೊಳ್ ಪರಿಪೂರ್ಣಾಮೃತಾರ್ಣವನಿಮಗ್ನಮೇಖಳಾ ಕಲ್ಪವೃಕ್ಷ ಲಕ್ಷ್ಮೀದಿವಿಜಗಜಂ ಮೊದಲಾದುವೆಲ್ಲ ಮುಳ್ಗಿ ತಿರೋಭಾವಮನೆಯ್ದಿ ಬಳಿಯಂ ತತ್ಪ್ರವಾಹಗತನವಶದಿಂದಾವಿರ್ಭಾವಮನೆಯ್ದುವುದುಮಮೃತಮಥನವಿಧಾನದೊಳ್ ಪುಟ್ಟಿದವೆಂಬೀ ಪ್ರವಾದಂ ಲೋಕದೊಳೆಸೆದತ್ತೀ ತೆಱದಿಂ ದೇವದಾನವರಿಂದಾದ ಮಹಾಮೃತ ಮಥನಂ ಮಂಗಳಕಾರಣಮಾದುದಿಂತು

ಇಳಿದುದು ಮೆಲ್ಲಮೆಲ್ಲನೆ ಸುರಾಚಳದಿಂದೆ ಪಯಃಪ್ರವಾಹಮು
ಗ್ಗಳಮೆನೆ ಭೂಮಿಯೊಳ್ ನೆಲಸಿ ಮೂರ್ಮೊಗದಿಂ ನಡೆಗೊಂಡು ಬೇಗದಿಂ
ಕಳಿಮು ಸಮಸ್ತದೇಶದ ಧರಾತಳಮಂ ಲವಣಾಬ್ಧಿಯಲ್ಲಿ ಸಂ
ಗಳಿಸಿಯೆ ಪೋಗಿ ಪೊಕ್ಕುದದು ವಿಸ್ಮಯಮಂ ಜಗದಲ್ಲಿ ಮಾಡುತುಂ ೧೨೯

ವ: ತದನಂತರಮಮರನಿಕರಂ ನಿಖಿಳಕುಳನದೀಪ್ರಮುಖಪವಿತ್ರತೀರ್ಥ ಜಲಂಗಳಂ ನಾನಾಸರೋಜಕಿಂಜಲ್ಕಮಂಜರೀಪುಂಜಪರಿರಂಜನಪಿಂಜರಿತಂಗಳನಪಾರ ಭೃಂಗಾರ ಕಳಶಕುಂಭಂಗಳೊಳ್ ತುಂಬಿ ತಂದು ಪುರಂದರಂಗೆ ಸಂಧಿಸುವುದುಂ

ವರಕರ್ಪೂರಪರಾಗಪೂಗಪರಮಶ್ರೀಗಂಧಸತ್ಕುಂಕುಮೋ
ತ್ಕರಕಾಳಾಗರು ಯಕ್ಷಕರ್ದಮಸುಮಾಂಗಲ್ಯಾದಿಸೌಗಂಧಬಂ
ಧುರವದ್ದ್ರವ್ಯವಿಶೇಷಮಿಶ್ರಜಳದಿಂ ಗಂಧೋದಕಸ್ನಾನಮಂ
ಸುರಪಂ ಮಾಡಿದನಾ ಜಿನಂಗೆ ದೆಸೆಯಂ ತಳ್ಪೊಯ್ಯೆ ವಾದ್ಯಸ್ವನಂ ೧೩೦

ಮಿಗೆ ಗಂಧೋದಕಪರಿಮಳ
ಮಗಣಿತಜಿನದೇಹಸಹಜಪರಿಮಳಭರಮಂ
ಸೊಗಸಿಂ ಪೊರ್ದಿಯದಾಯ್ತು
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ ೧೩೧

ಪರಮೌದಾರಿಕದಿವ್ಯದೇಹಸಹಜಾಮೋದಾಭಿಸಮ್ಮಿಶ್ರಬಂ
ಧುರಗಂಧೋದಕಭೂರಿಭೂರಿಪರಮಾಮೋದಕ್ಕೆ ಸೋಲ್ತಂಜಿ ನಿ
ತ್ತರಿಸಲ್ಕಾಱದೆಯೋಡಿಪೋಗಿ ಜಲಮಂ ಪೊಕ್ಕಿರ್ದುವಬ್ಜಂಗಳು
ದ್ಧುರಪುಷ್ಪಂಗಳವುಂ ಮರಂಗಳನಡರ್ದೇಱಿರ್ದವಂದಾದಿಯಿಂ ೧೩೨

ಬನಮಂ ಪೊಕ್ಕುದು ಚಂದನ
ಮನುಪಮಕಸ್ತೂರಿಮೃಗದ ಬಸಿಱಿಂ ಪೊಕ್ಕುದು
ಜಿನಗಂಧೋದಕನಿರುಪಮ
ಘನಗಂಧಕ್ಕಗಿದು ಸೋಲ್ತುದೆಂಬಂತೆ ವಲಂ ೧೩೩

ಮೂಱುಂ ಲೋಕದೊಳುಳ್ಳ ಸರ್ವಸುರಭಿದ್ರವ್ಯಂಗಳಾಮೋದಮಂ
ಮಾಱಾಂತಿರ್ದು ಜಿನಾಂಗದಿವ್ಯಸಹಜಾಮೋದಕ್ಕೆ ಸೋಲ್ತಂಜಿ ಮೆ
ಯ್ದೋಱಲ್ಕಮ್ಮದೆಯೋಡಿಪೋಗಿ ಜಲಮಂ ಪೊಕ್ಕಿರ್ದುದೆಂಬಂದದಿಂ
ಬೇಱೊಂದದ್ಭುತಗಂಧಮಂ ತಳೆದುದಾ ಗಂಧೋದಕಂ ಶ್ರೀದಕಂ ೧೩೪

ದಿಗ್ಗಜಗಂಡಮಂಡಲಗಲನ್ಮದಗಂಧಮನೆಯ್ದೆಬಿಟ್ಟು ಮ
ತ್ತಗ್ಗದ ಪುಷ್ಪಸಂಕುಳದ ಗಂಧಮನೊಲ್ಲದೆಯಾತುರತ್ವದಿಂ
ದಗ್ಗಳಮಾದ ಜೈನಸವನೋದಕಗಂಧನಿಷೇವಣಾಸೆ ಮೆ
ಯ್ಯೊಗ್ಗೆ ಮಧುವ್ರತಪ್ರತತಿಬಂದುದು ಸರ್ವದಿಗಂತರಾಳದಿಂ ೧೩೫

ಪಿರಿದುಂ ಪಾಪಮಲಪ್ರಲೇಪಭರಮಂ ವ್ಯಾಲೋಪನಂಗೆಯ್ದು ಬಿ
ತ್ತರದಿಂ ನಿರ್ಮಳಭಾವಮಂ ಬಿಡದೆ ಮಾಳ್ಕೆಮ್ಮಲ್ಲಿ ಸಲ್ಲೀಲೆಯಿಂ
ಪರಿತಾಪಪ್ರವಿಭೇದಿಕಂ ಘನದಯಾವಲ್ಲೀಸಮುತ್ಪಾದಕಂ
ವರಶಾಂತಿಪ್ರತಿಪಾದಕಂ ಜಿನಪತಿಸ್ನಾನೋರುಗಂಧೋದಕಂ ೧೩೬

ವ: ಅನಂತರಂ

ದೇವಾಂಗವಸ್ತ್ರದಿಂ ಜಿನ
ದೇವಾಂಗಮನೆಯ್ದೆ ತೊಡೆದು ಕುಂಕುಮಕರ್ಪೂ
ರಾವಿಳಗಂಧಕ್ಷೋದದೆ
ಪಾವನಜಿನತನುವನೊಲ್ದು ಪೂಸಿದನಿಂದ್ರಂ ೧೩೭

ವ: ಮತ್ತಮಾ ತ್ರಿಲೋಕೀತಿಲಕನ ಸಹಜಸುರಭಿಪರಿಮಳಮಿಳಿತನಿಟಿಳಸ್ಥಳ ದೊಳತಿಶಯಿತ ಹರಿಚಂದನರಸಕಲ್ಕದ ಮಂಗಳತಿಳಕಮನಿಡಲೊಡಮಾಗಳಾ ನಗೆಮೊಗಂ ಧವಳ ಮಧುಕರದಿಂದೊಂದಿದ ಪೊಂದಾವರೆಯಲರನನುಕರಿಸುತ್ತುಮಿರೆ

ಮಸೃಣಮಣಿಮಕುಟಮಂ ಜಿನ
ಶಿಶುವಿನ ಮಸ್ತಕದೊಳಿಕ್ಕಿ ದೇವೇಂದ್ರಂ ದಲ್
ಪೊಸತೆನಿಪ ಕಿರಣಜಾಳ
ಪ್ರಸರದಿ ಸಾಗಿಸುತುಮಿರ್ದುದದು ಕೌತುಕಮಂ ೧೩೮

ವ: ಮತ್ತಂ ವಜ್ರಧರಂ ಪರಿನಿಶಿತವಜ್ರಮಯಸೂಚ್ಯಗ್ರದಿಂ ಕೋಮಳಕರ್ಣಪಾಳಿಕಾಯುಗಳಮನೂಜೆ ಪ್ರತ್ಯಗ್ರೋದಗ್ರವಜ್ರಮಾಣಿಕ್ಯಮಯಕುಂಡಲಂಗಳನಿಕ್ಕಿ ಚಂದ್ರಸೂರ್ಯರ್ ಬಂದು ನಾವಾವ ಬೆಸನಂ ಮಾಳ್ಪೆವೆಂದು ಕರ್ಣೋಪಾಂತಮನೆಯ್ದೆ ಕೇಳ್ವಂತೆ ಥಳಥಳಿಸಿ ಪೊಳೆಯುತ್ತುಮಿರ್ದವು ಬಳಿಯಂ ಮುಕ್ತಾಫಳತಾರಹಾರಂಗಳಂ ತ್ರಿಗುಣಿಸಿ ವಿಶಾಳವಕ್ಷಸ್ಥಳದೊಳಿಕ್ಕಿ ಮುಕ್ತಿಲಕ್ಷ್ಮಿಯುಂ ಶ್ರೀದೇವಿಯುಂ ಧರಣೀರಮಣಿಯುಮೆಂಬೀ ಮೂವರುಮೊರ್ಮೊದಲೊಳೆ ಬಂದು ತವಕದ ಸಂಭ್ರಮಂ ಕೈಮಿಗಲಾಗಳೆ ಸ್ವಯಂಬರಮಾಲೆಗಳನಿಕ್ಕಿದರೆಂಬಂತೆ ತೊಳಗಿಬೆಳಗಿದವು ಬಳಿಕ್ಕಂ ರಮಣೀಯಮಣಿಕಂಕಣಕಾಂಚನಮಯಕಾಂಚೀದಾಮ ವೈಡೂರ್ಯಕೃತಕೇಯೂರ ನವರತ್ನರಚಿತ ಗ್ರೈವೇಯಕ ಗೋಮೇಧಮೇದುರಾಂಗದಂ ಮೊದಲಾದ ಸಕಳಭೂಷಣ ಕಳಾಪಮಂ ತೊಡಿಸಿ ಸ್ವರ್ಗಲೋಕದೊಳಗಗ್ಗಳಮಾದ ವಿಚಿತ್ರಚಿತ್ರವಿಸ್ತೃತಪ್ರಶಸ್ತವಸ್ತ್ರಂಗಳನುಡಿಸಿಯುಮಿಂತತ್ಯಾಶ್ಚರ್ಯಕಾರಿಯಪ್ಪಲಂಕಾರಸಾರದಿಂದದ್ಭುತಮಾಗಳಂಕರಿಸೆ

ಚರಮಶರೀರಮುಂ ಸಹಜದಿಂದಮತೀವವಿಳಾಸಭಾಸುರಂ
ಸುರಪತಿಕಾಂತೆ ಮತ್ತಮದನುತ್ತಮಬಾಳವಿಭೂಷಣಂಗಳಂ
ಸುರತರು ಕೊಟ್ಟವಂ ತೊಡಿಸಿ ನೋಡಿದೊಡಂ ರವಿಬಿಂಬಮಂ ಮಹಾ
ದರದೊಳೆ ದೀಪಿಕಾತತಿಗಳಿಂದಭಿರಂಜಿಸುವಂತಿರಾಯ್ತು ತಾಂ ೧೩೯

ವ: ಆಗಳ್

ವರಮೇಖಳಾಭಿರಮ್ಯಂ
ಪರಮಸುವರ್ಣಪ್ರಭಾವಿಶೇಷಿತರೂಪಂ
ಸುರಗಿರಿ ಮತ್ತೊಂದೆಂಬಿನ
ಮರಹಂತಂ ಪಾಂಡುಶಿಲೆಯೊಳೆಸೆಯುತ್ತಿರ್ದಂ ೧೪೦

ವ: ಆಪೊತ್ತಿನೊಳ್

ಜಿನಪನ ದಿವ್ಯಮೂರ್ತಿಯನಭೀಕ್ಷಿಪೊಡೆನ್ನಯ ಲೋಚನಾರುಲೋ
ಚನಯುಗಮೆಯ್ದವೆಂದು ಪೆ ವಿಗುರ್ವಿಸಿ ಸಾಸಿರಕಣ್ಗಳೊಳಿಯಂ
ಘನತರಭಕ್ತಿಯಿಂ ಸುಕೃತಮೂರ್ತಿಯ ವಿಸ್ಮಯಕಾರಿರೂಪಮಂ
ಮನದನುರಾಗಮುಣ್ಮೆ ನಡೆನೋಡುತುಮಿರ್ದನಮರ್ತ್ಯನಾಯಕಂ ೧೪೧

ಸುರಪತಿಯಂತೆ ಮತ್ತಮೆಮಗಂ ಸಲೆಸಾಸಿರಕಣ್ಗಳಾದೊಡೀ
ಪರಮನ ಮೂರ್ತಿಯಂ ಬಿಡದೆ ನೋಡುತುಮಿಂತಿರಲಕ್ಕುಮೆಂದು ಸ
ರ್ವರುಮಮರಾಧಿಪರ್ ಪಡೆದು ಬಾಯ್ವಿಡುತುಂ ನಡೆನೋಡುತಿರ್ದರಾ
ಸುರುಚಿರಮೂರ್ತಿಯಂ ತವಕದಿಂ ನೆಱೆಕಣ್ತಣಿವನ್ನಮಾಕ್ಷಣಂ ೧೪೨

ವ: ಇಂತಾಸೇಚನಕಾರಿಯಪ್ಪ ಜಿನನಾಯಕನಾಕಾರಮಂ ಸಮಸ್ತಸುರಾಸುರ ನಿಕರಮೆಲ್ಲಂ ನೀಡುಂನೋಡುತ್ತುಮಿರೆ ಬಿಡೌಜಂ ಪರಮೇಷ್ಠಿಗಷ್ಟವಿಧಾರ್ಚನಾವಿರಚನ ತತ್ಪರನಾಗಿ

ಶ್ರೀಮತ್ಕಾಂಚನಕಳಶಭೃ
ತಾಮಳತರಕಮಳದಳಸುವಾಸಿತಜಳದಿಂ
ಕಾಮಿತಫಳಪ್ರದಾಮರ
ಭೂಮಿಜನಂ ಧರ್ಮನಾಥನಂ ಪೂಜಿಸುವೆಂ ೧೪೩

ವರಕುಂಕುಮಪಂಕಾಂಕಿತ
ಸುರುಚಿರಕರ್ಪೂರಚೂರ್ಣಪರಿಕಳಿತ ಮಹಾ
ಹರಿಚಂದನಕಲ್ಕದಿನಘ
ಪರಿಹರನಂ ಧರ್ಮನಾಥನಂ ಪೂಜಿಸುವೆಂ ೧೪೪

ವಿಳಸಿತಕಿರಣಕಳಾವಳಿ
ಗಳ ಧವಳತರಾಕ್ಷತಾಂಗಕಳಮಾಕ್ಷತಸಂ
ಕುಳರಂಜಿತಪುಂಜದಿನು
ಜ್ವಳಗುಣನಂ ಧರ್ಮನಾಥನಂ ಪೂಜಿಸುವೆಂ ೧೪೫

ಸುರಭಿಪರಿಮಳ ವಿಶೇಷಿತ
ದರದಳಿತ ಸರೋಜಮಲ್ಲಿಕಾ ಚಂಪಕ ಬಂ
ಧುರಪುಷ್ಪಮಾಲೆಯಿಂದಂ
ದರಹರನಂ ಧರ್ಮನಾಥನಂ ಪೂಜಿಸುವೆಂ ೧೪೬

ಕಾಂಚನಮಯ ಘನಭಾಜನ
ಸಂಚಯನಿಹಿತಾಮೃತೋಪಮಾನಪ್ರಾಜ್ಯಾ
ಜ್ಯಾಂಚಿತ ನಾನಾಚರುವಿಂ
ದಂಚಿತನಂ ಧರ್ಮನಾಥನಂ ಪೂಜಿಸುವೆಂ ೧೪೭

ವಿನುತಪ್ರಭಾಪ್ರಭಾವಿತ
ಘನತರರತ್ನಪ್ರದೀಪದೀಪಕಳಾಪದಿ

ನನುಪಮಕೇವಳಬೋಧಾ
ತ್ಮನನೊಲವಿಂ ಧರ್ಮನಾಥನಂ ಪೂಜಿಸುವೆಂ ೧೪೮

ಧೂಪಿತದಿಙ್ಮಂಡಲದಿಂ
ದಾಪತದಳಿನೀವಿತಾನಕಾಘ್ರಾತದಿನು
ದ್ವ್ಯಾಪಿತೋಪ್ಮಾಯಮಾಣಸು
ಧೂಪದಿನಾಂ ಧರ್ಮನಾಥನಂ ಪೂಜಿಸುವೆಂ ೧೪೯

ಚೂತಪನಸಾಮ್ರಕದಳೀ
ನೂತನಜಂಬೀರ ನಾಳಿಕೇರಾದಿ ಫಳ
ವ್ರಾತದಿನಭಿರಕ್ಷಿತ ಜಗ
ತೀತಳನಂ ಧರ್ಮನಾಥನಂ ಪೂಜಿಸುವೆಂ ೧೫೦

ಮಳೆ ಪಿರಿದಾಗಿ ಕೊಳ್ಗೆ ಧರಣೀತಳದಲ್ಲಿ ಸಮಸ್ತಧಾನ್ಯಮುಂ
ಬೆಳಗೆ ಸುಭಿಕ್ಷಮಕ್ಕೆ ಬಿಡದೆಲ್ಲೆಡೆಯಲ್ಲಿಯುಮೆಯ್ದೆ ಭೂಪರುಂ
ಪಿಳಸಿತ ಧರ್ಮದಿಂ ನೆಲನನಾಳ್ಗೆ ವಿಶೇಷಿತ ಜೈನಧರ್ಮಮ
ಗ್ಗಳಮೆನೆ ಲೋಕದೊಳ್ ಪರೆದತಿಪ್ರಬಳತ್ವಮನೆಯ್ದುಗಾವಗಂ ೧೫೧

ಪೂಜಿಸುವಂ ದೇವೇಂದ್ರಂ
ಪೂಜ್ಯಂ ಜಿನನಾಥನಮಳಪೂಜಾದ್ರವ್ಯಂ
ರಾಜಿತಸುರತರು ಸುಫಳಿಸ
ಮಾಜಂ ಗಡಮದಜ ಮಹಿಮೆ ಸಾಧಾರಣಮೇ ೧೫೨

ವ: ಇಂತು ವಿಶಿಷ್ಟಾಷ್ಟವಿಧಾರ್ಚನಾವಿಧಾನದಿಂ ಸಂತುಷ್ಟಚಿತ್ತನಾದ ತ್ರಿವಿಷ್ಟಪಾಧೀಶ್ವರಂ ವಿಪುಳಪುಳಕಾಂಕುರಾಕಳಿತಕಳೇವರಂ ಬಳಿಯಂ ಕಿಂಚಿನ್ನಮಿತ ನಿಜ ನಿಟಿಳತಟ ಘಟಿತಾಂಜಳೀಪುಟನಾಗಿ ಸಕಳದೇವದಾನವನಿವಹಂಬೆರಸು ಜಯಜಯಯೆಂದು ನಿರ್ಭರಭಕ್ತಿಯಿಂದಾ ಸರ್ವಜ್ಞನ ವಾಸ್ತವಮಾದ ರೂಪಗುಣವಾಸ್ತವಸ್ತವನ ವಿಸ್ತಾರಸ್ತೂಯಮಾನಸ್ತೋತ್ರಮುಖರಮುಖನಾಗಿ

ಶ್ರೀಪದಲಾಭಕಾರಣಮಶೇಷಜನಂಗಳಧೀಶ ನಿನ್ನಯ
ಶ್ರೀಪದಸೇವೆಯಂ ಬಿಡದೆ ಮಾಳ್ಪರದಲ್ಲದೆ ಮೋಹಕಾರಣಂ
ವ್ಯಾಪಿಸರೇನುಮಂ ಜಗದೊಳೆಂತು ವಿನಿರ್ಮಳವಾರಿಸೇವೆಯಂ
ತಾಪದ ಶಾಂತಿಗಾಗಿ ಮಿಗೆ ಮಾಳ್ಪರುಮಂತೆ ಜಿನಾಧಿನಾಯಕಾ ೧೫೩

ದೇವರ ದೇವ ನಿನ್ನ ಮತವಾಸನೆಯಿಲ್ಲದನೇಕಕಾಲಮುಂ
ಪೀವರಮಾದ ಸಂಸರಣಕಾನನದಲ್ಲಿ ಪೊಲಂಬುಗೆಟ್ಟೆ ನಿ

ನ್ನೀ ವಚನಂಗಳಿಂ ತಿಳಿದೆನೀಗಳಧೀಶ್ವರ ಧರ್ಮಮಾರ್ಗಮಂ
ಪಾವನಮೋಕ್ಷಪತನಮನೆಯ್ದುವೆ ನಾನದಱಿಂ ಜಿನೇಶ್ವರಾ ೧೫೪

ಇನಿತುಂ ಕಾಲಂಬರಂ ನಾನಱಿಯದನಘ ನಿನ್ನಂ ಕುಮಿಥ್ಯಾತ್ವದುರ್ಭಾ
ವನೆಯಿಂದಂ ಕ್ಷೀಣದೈವಂಗಳನೆ ಭಜಿಸಿ ಸಂಸಾರದುಃಖಕ್ಕೆ ದುರ್ಭಾ
ಜನನಾದೆಂ ಮೂರ್ಖನೆನೆಂದಱಿಯದೆ ಪೊಸಕೆಂಡಂಗಳಂ ಕಂಡು ಚಂಚ
ದ್ಘನಮಾಣಿಕ್ಯಂಗಳೆಂದೆತ್ತಿದೊಡೆ ಕರತಳಂ ಬೆಂದು ನೋವಂದದಿಂದಂ ೧೫೫

ಮೊದಲೊಳ್ ಸ್ವರ್ಗಾವತಾರೋತ್ಸವದಿನಖಿಳವಿಶ್ವಂಭರಾಚಕ್ರದೊಳ್ ಸ್ವ
ರ್ಣದ ವರ್ಷಾಪೂರದಿಂದಂ ಕಳೆದೆ ಜನವಿಪತ್ಪೀಡೆಯಂ ನೀನುಮೀಗಳ್
ಪದೆಪಿಂದೆನ್ನಂತರಂಗಾಲಯದೊಳಿರುತಿರಲ್ಕೆನ್ನ ದುಃಖಂಗಳಂ ಬೇ
ಗದಿನಾದಂ ತೂಳ್ದದೆಂತಿರ್ದೊಡೆ ನಿನಗೆ ಜಿನಾ ಪೊರ್ದುಗುಂ ಪಕ್ಷಪಾತಂ ೧೫೬

ಮುನ್ನಮನೇಕ ಭವ್ಯತತಿ ನಿನ್ನ ಪದಾಂಬುಜಸೇವನಾರತಾ
ತ್ಯುನ್ನತಮಾಗೆ ಪೆತ್ತುದುರುಶಾಶ್ವತಸೌಖ್ಯಮನೆಂದೊಡಾವಗಂ
ನಿನ್ನಯ ವೇಳೆಯಾಗಿ ಪರಿಪೂಜಿಸು ಭಾವಿಸು ತೀರ್ಥನಾಥನ
ಪ್ಪೆನ್ನನುಪೇಕ್ಷಿಸಲ್ಕೆ ಗುಣವೇ ನಿನಗಿಂದ್ರನರೇಂದ್ರವಂದಿತಾ ೧೫೭

ಕೆಡದ ಮಹಾಪ್ರಕಾಶಮಯಮೂರ್ತಿಕ ಭವ್ಯನದಾವನೊಲ್ದು ನಿ
ನ್ನಡಿಯನೆ ಸಾರ್ದು ಸೇವಿಸುತುಮಿರ್ದಪನಾತನನೆಯ್ದೆ ನಿನ್ನವೋಲ್
ತಡೆಯದೆ ಮಾಳ್ಪ ದೀಪಕಳಿಕಾಂಕುರಮೆಂತುಱೆ ತನ್ನ ಸಾರ್ದು ಸಂ
ಗಡಿಸಿದ ವರ್ತಿಯಂ ಪಡೆದು ತನ್ನವೊಲಾಗಿಸುವಂದದಿಂ ಜಿನಾ ೧೫೮

ಜಿನಪತಿ ನಿನ್ನ ಮಾರ್ಗಮಪವರ್ಗಸುಖಕ್ಕನುಕೂಲವೃತ್ತಿ ನೆ
ಟ್ಟನೆ ನರಕಾದಿದುಃಖದುದಯಕ್ಕೆ ಕರಂ ಪ್ರತಿಕೂಲವೃತ್ತಿ ಸ
ತ್ವನಿತ ದಯಾಮಯಾತ್ಮಕಮುಮಾಗಿ ಸಮಸ್ತಜನಕ್ಕೆ ಸೌಖ್ಯಮಂ
ಘನಮೆನೆ ಮಾಡುತುಂ ಜಗಮನುದ್ಧರಿಸುತ್ತುಮದಿರ್ದುದೊಪ್ಪದಿಂ ೧೫೯

ಜಿನ ನಿನ್ನಂಘ್ರಿಯನರ್ಚಿಸುತ್ತುಮಮಳಸ್ತೋತ್ರಂಗಳಂ ಪೇಳುತುಂ
ವಿನುತಾಕಾರಮನೀಕ್ಷಿಸುತ್ತುಮಮೃತಶ್ರೀಮೂರ್ತಿ ಸೌರಭ್ಯಮಂ
ಮನಮೊಲ್ದೋವದೆ ವಾಸಿಸುತ್ತುಮಧಿಕಂ ನಿನ್ನಾಗಮಪ್ರೋಕ್ತ ಪಾ
ವನ ಸದ್ಯುಕ್ತಿಯನಾಲಿಸುತ್ತುಮುಱೆ ಪೋಕಿಂತೆನ್ನ ಜನ್ಮಂ ಕರಂ ೧೬೦

ವ: ಎಂದಿಂತು ಸೌಧರ್ಮೇಂದ್ರನಾ ಜಿನೇಂದ್ರಚಂದ್ರನ ರುಂದ್ರಗುಣಸ್ತವನ ಮಂ ಪವಣೆಲ್ಲೆಂಬಿನಂ ಪ್ರಶಸ್ತಮಾಗಿ ವಿಸ್ತರಿಸಿ ವಿನಯವಿನಮಿತಮಸ್ತಕನಾದಿಂಬಳಿಯಂ ಸಮಸ್ತ ಸುಮನಸ್ತತಿಯ ನಟ್ಟನಡುವೆ ಕುಳ್ಳಿರ್ದು

ಇನಿತೊಂದು ವಿಭವಮಂ ಜಿನ
ಪನ ಜನನದ ಸಮಯದಲ್ಲಿ ಮಾಡಿದನೊಲವಿಂ
ದನಿಮಿಷವರನೆಂದೊಡದಾ
ವನೊ ಬಲ್ಲಂ ಮುಂದೆ ಮಾಳ್ಪ ವಿಭವದ ತೆಱನಂ ೧೬೧

ವ: ಮತ್ತಂ

ಪಿರಿದುಂ ಜನ್ಮಾಭಿಷೇಕೋತ್ಸವದ ಮಹಿಂಮೆಯಂ ಮೆಚ್ಚಿ ಕೊಂಡಾಡಿ ಶಕ್ರಂ
ಪರಿತೋಷೋತ್ಕರ್ಷಮಂ ತಾಳ್ದಿದನಧಿಗತಸಾಹಿತ್ಯವಿದ್ಯಾವಿಶೇಷಂ
ಕರುಣಾಕೇಳೀಗೃಹಂ ಬಾಹುಬಲಿಸುಕವಿರಾಜಂ ಮಹಾಗಣ್ಯಪುಣ್ಯ
ಸ್ಫುರಣಂ ಸಮ್ಯಕ್ತ್ವಚೂಡಾಮಣಿ ಗುಣನಿವಹಂ ಚಾತುರೀಜನ್ಮಗೇಹಂ ೧೬೧

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮ ಜಿನಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವಪ್ರಸಾದ ಸಂಪಾದಪಾದನಿಧಾನದೀಪವರ್ತಿಯುಭಯಭಾಷಾ ಕವಿಚಕ್ರವರ್ತಿ ಬಾಹುಬಲಿ ಪಂಡಿತದೇವಪರಿನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಜನ್ಮಾಭಿಷವಣ ಕಲ್ಯಾಣವರ್ಣನಂ ಅಷ್ಟಮಾಶ್ವಾಸಂ.

●

ನವಮಾಶ್ವಾಸಂ

ಶ್ರೀ ಜಿನಪತಿ ವರಚರಣ ಸ
ರೋಜಂಗಳನಮಿತಭಕ್ತಿಯಿಂ ವಿಬುಧೇಂದ್ರಂ
ಪೂಜಿಸಿ ನಲಿವುತ್ತಿರ್ದು ವಿ
ರಾಜಿಸಿದಂ ಸರಸಚತುರ ಕವಿಕುಳತಿಳಕಂ ೧

ವ: ಅನಂತರಮಾ ದೇವೇಂದ್ರಂ ದೇವಸಭಾಸ್ಥಾನದ ನಟ್ಟನಡುವೆ ಕುಳ್ಳಿರ್ದು ಮಹಾನಂದನರ್ತನೋತ್ಸಾಹ ಸಮುತ್ಸುಕಚಿತ್ತನಾಗಿಯನುರಾಗಂಬೆತ್ತು ರಾಗರಸತರಂಗಿ ತಮಲ್ಲದಾಸ್ಥಾನರಂಗಂ ಪರಿರಂಜಿಸದೆಂದು ಬಗೆದಂದು ತದಾಸ್ಥಾನ ರಂಗದ ಮುಂದೆ ಕುಳ್ಳಿರ್ದ ನಾನಾವಿಧರಾಗಸ್ವರಭಂಗಿಯಿಂ ಭಂಗುರಿತಮಾದ ಸಂಗೀತವಿದ್ಯಾವಿಶೇಷಾಧಿಕ್ಯಗರ್ವಿತಸರ್ವಪ್ರಸನ್ನಕಿನ್ನರ ದೇವೀಜನಂಗಳ ಮೊಗಂಗಳಂ ನೋಡುವುದುಮಾಗಳವರ ವಸರಮಱಿದು ರಚ್ಚೆಯ ಮಟ್ಟೆಯ ಪಡಿಮಟ್ಟೆಯ ಝಂಪೆಯ ಮಡ್ಡತಾಳರೂಪಕಮೆಕ್ಕ ತಾಳಂಗಳೆಂಬ ಸಪ್ತತಾಳಂಗಳಂ ನಿವರ್ತನಗೆಯ್ದು ಜಂತ್ರಸ್ವರಮಂಡಳ ಬ್ರಹ್ಮನಾದ ರಾವಣ ಹಸ್ತಾದಿ ಸಮಸ್ತವೀಣಾ ವಿಶೇಷಂಗಳಂ ಸೈತೆಮಾಡಿ ವಿಪಂಚಿಯ ಸಂಚಯದಿಂಚರ ದೊಳುಪಾಶ್ರಯಂ ಬಡೆದು ವಿಂಶತಿಯುತಿಪ್ರಪಂಚದೊಳ್ ನೆಱೆದು ಮಧ್ಯಮ ಧೈವತ ಷಡ್ಜ ಪಂಚಮ ನಿಷಾದ ರುಷಭ ಗಾಂಧಾರಂಗಳೆಂಬ ಸಪ್ತಸ್ವರಸಂಯೋಗಸಂಜಾತ ದೇಶೀಯರಾಗಂಗಳಂ ಸ್ವರಭಾಷಾವಿದರಿಂದಮಾದ ಮತ್ತೆ ಪೆಱವು ರಾಗಂಗಳಂ ವಲಿ ಹವಣೆ ಠಾಯಂಗಳಿಂದಾಳಾಪನಂಗೆಯ್ದು

ಮದನನ ಬಿಲ್ಲ ಜೇವಡೆಯ ಮೆಲ್ಲುಲಿಯೆಂಬಿನಮಿಂಬುವೆತ್ತ ರಾ
ಗದ ಬಹುಭೇದಮಂ ನೆಱೆಯೆ ತೋಱಿಸುತುಂ ತಲೆದೂಗೆ ತಜ್ಞರಾ
ಪದದೊಳೆ ಮೆಚ್ಚಿ ತಾಳಲಯಮಾರ್ಗವಶಾನುಗತಂ ದಲಾಗಿ ಪಾ
ಡಿದರನುರಾಗದಿಂ ಜಿನಗುಣಸ್ತವನಾಂಕಿತವಸ್ತುಗೀತಮಂ ೨

ಮನಮೊಲ್ದು ಶ್ರವಣಾವನೀವಳಯದೊಳ್ ಕೌತೂಹಳಂ ಕೂಡೆ ತೋ
ರ್ಪಿನೆಗಂ ಕಾಳ್ಪುರಮಾಗೆ ರಾಗರಸಮಾಶಾದೇಶದಲ್ಲಲ್ಲಿಯುಂ

ಘನರೋಮಾಂಚಚಯಾಂಕುರಂ ಬಳೆದು ಮೆಯ್ವೋರ್ಪನ್ನಮಾ ಕಿನ್ನರೀ
ಜನಮೆಂಬಂಬುಧುಮಂದದೇಂ ಕಱಿದುದೋ ಗೀತಾಮೃತಾಸಾರಮಂ ೩

ವ: ಇಂತು ಸಮಂತು ತೆಕ್ಕನೆ ತೀವಿ ಕಿಕ್ಕಿಱಿಗಿಱಿದುಂ ಕುಳ್ಳಿರ್ದು ಕೇಳ್ವ ಚತುರ್ನಿಕಾಯದೇವರ್ಕಳ ಕಿವಿಯಂ ಕೆಯ್ಮಿಕ್ಕು ಜಕ್ಕುಲಿಸುತ್ತುಮಿರ್ದು ಸೊಕ್ಕಿನಳುರ್ಕೆಯಂ ಮನಕ್ಕೆ ಪುಟ್ಟಿಸುವ ನವರಸಂಗಳಂ ಮುಕ್ಕಳಿಸಿದ ತಾರ ಮಂದ್ರ ಮಧ್ಯಮ ಭೇದಮೇದುರ ನಾದ ಸಮಾಹ್ಲಾದನೀಯ ವಿವಿಧ ಮಧುರಗೀತಜಾತಿಗಳಂ ಪಾಡುವೆಡೆಯೊಳ್

ಸುರಪತಿ ಮೆಚ್ಚಿ ಮೆಚ್ಚಿ ತಲೆದೂಗಲೊಡಂ ಮಣಿಮೌಳಿ ಕೂಡೆ ಜೋ
ಲ್ದಿರೆ ಸಸಿನಕ್ಕೆ ತಪ್ಪ ಪದದಲ್ಲಿ ವಿಕೀಲಿತ ಕಿಂಕಿಣೀ ಜಝು
ಣ್ಕರಣದೆ ಕೇಳಬಾರದಿರೆ ಬಾಗಿದ ಕಂಠದಿನೊಪ್ಪುತಿರ್ದನಾ
ವರಿಸಿಯೆ ನಿಂದ ರಾಗರಸಭಾರದಿನೋಸರಮಾದುದೆಂಬಿದಂ ೪

ವ: ಈತೆಱದಿಂ ಕಿನ್ನರರೆಲ್ಲಂ ಚೆನ್ನಾಗಿ ಪಾಡುತ್ತುಮಿರೆ

ಸಕಳಾಪವಾದ ಪರಿವಾ
ರಕರಂ ನೆಱೆಕೂಡಿಕೊಂಡು ವಾದಕರೆಲ್ಲಂ
ಪ್ರಕಟವಾದ್ಯಂಗಳಂ ಕೌ
ತುಕದಿಂದಂ ಬಾಜಿಸಲ್ಕೆ ತೊಡಗಿದರಾಗಳ್ ೫

ಪಿರಿದುಂ ನಾದಾಪ್ರಕಾರಾತಿಶಯಿತ ಗತಿಭೇದಂಗಳುಂ ಮಾಡಲಂದ
ಚ್ಚರಿಯಂ ಮಾರ್ಗಪ್ರಚಾರಂ ಬಗೆಗೆ ಬಯಕೆಯಂ ಪುಟ್ಟಿಸಲ್ ಚಾರುಚಾರೀ
ಚರಣಾಂ ವೈಚಿತ್ರ್ಯಮಂ ಸಂಗಡಿಸಿರೆ ಸುಚಮತ್ಕಾರಚಾತುರ್ಯಮಪ್ಪಂ
ತಿರೆ ಸದ್ವಾದ್ಯಂಗಳಂ ವಾದಕರತಿಮುದದಿಂ ಬಾಜಿಸುತ್ತಿರ್ದರೆಲ್ಲಂ ೬

ಜಗುಝೇಂ ಝೇ ಝುಂ ಮೃಣಾಂ ಝುಂ ಝುಮ್ಮೃಣ ಮೃಣಾಮಣಾಂ ಝುಂ ಮೃಣಾಂ
ಝುಂ ಮೃಣಾಂಣಾಂ
ತಗಿತತ್ಥೊ ಥಗ್ಗಿಣತ್ಥೊ ಥಗಿಣ ಗಿಣಗಿಣಾಂ ಥಗ್ಗಿಣಾಂ ಥಗ್ಗಿಣತ್ಥೋ
ಧಿಗಿ ಧಿಂ ಧಿಂ ಧಿಂ ಧಿಮಿಕ್ಕುಂ ಧಿಮಿ ಧಿಮಿ ಧಿಮಿಕುಂ ಧಿಂಧಿಮಿಕ್ಕುಂ ಧಿಮಿಕ್ಕೆಂ
ದೊಗೆವನ್ನಂ ನಾಟ್ಯರಂಗಸ್ಥಳಿಯೊಳಮರಿಯರ್ ಬಾಜಿಸುತ್ತಿರ್ದರಾದಂ ೭

ವ: ಇಂತು ವಾದ್ಯವಿದ್ಯಾವದ್ಯೋತನವಿದುಷಿಯರಪ್ಪ ವಿಬುಧವಿಳಾಸಿನಿ ಯರನೇಕಚ್ಛಂದ ದಿಂದಭಿನವವಾದ್ಯಂಗಳಂ ಹೃದ್ಯಮಾಗಿ ಬಾಜಿಸುತ್ತುಮಿರೆ

ಪರಮಾಖಂಡಮಯೂಖಮಂಡಲ ವಿಲಸ್ಮಾಣಿಕ್ಯಸನ್ಮಂಡನೋ
ತ್ಕರದಾಡಂಬರ ಶೋಭೆಯಿಂದೆ ಪಿರಿದುಂ ಕಣ್ಗೊಂಡು ಸಂತೋಷಮೊಂ

ದಿರಲಾಖಂಡಳನಂದು ತಾಂಡವವಿಡಂಬಪ್ರೌಢಿಯಂ ತೋಱಲೆಂ
ದಿರದೆಲ್ಲಂ ಸಭೆಗೆಳ್ವಿನಂ ಬಿಡದೆ ರೋಮಾಂಚಾಂಕುರಶ್ರೇಣಿಯಂ ೮

ವ: ಮತ್ತಂ

ಉಟ್ಟ ದೇವಾಂಗಮಂ ನೆಱೆ
ತೊಟ್ಟೊಳ್ಪುಮೃತ್ತಿನ ನವೀನಕಂಚುಕಮಂ ಸಮ
ಕಟ್ಟಿ ನರ್ತನನಿಮಿತ್ತಂ
ಕಟ್ಟಾಯತನಾದನಂದು ಸೌಧರ್ಮೇಂದ್ರಂ ೯

ವ: ಇಂತು ತತ್ಕಾಲಯೋಗ್ಯ ನಾನಾವಿಧಶೃಂಗಾರಭಂಗಿಯಿಂ ಬೆಡಂಗುವಡೆದ ಸುರಲೋಕದೊಡೆಯಂ ನಾಂದೀಪೂಜಾವಿಧಾನಪೂರ್ವಕಂ ನಾಟ್ಯರಂಗದ ಮುಂದೆ ನಿಂದು ಕೈಗಳಂ ಮುಗಿದು ನಿರವದ್ಯಹೃದ್ಯತರ ಮಂಗಳಪಾಠನಾನಂತರಂ

ಪೂರ್ವರಂಗಪ್ರಸಂಗದೊ
ಳುರ್ವಿಂದಂ ಕೂಡೆ ಚೆಲ್ಲಿ ಪುಷ್ಪಾಂಜಳಿಯಂ
ಸರ್ವಜ್ಞಂಗೆಱಗಿ ಮುದಂ
ಪರ್ವಿನ್ನಂ ನಡೆದು ಬಂದು ರಂಗಂಬೊಕ್ಕಂ ೧೦

ವ: ಅಂತನೇಕವಿಧರಚನಾಸಮುತ್ತುಂಗ ನಾಟ್ಯರಂಗಮಧ್ಯಸ್ಥಳಮನಳಂಕರಿಸಿ ನಿಂದಿರ್ಪುದುಂ

ಮಣಿಮಯನಾಟ್ಯರಂಗವಳಯಾಂತರದೋಳ್ ಪ್ರತಿಬಿಂಬರೂಪದಿಂ
ದೆಣೆಸಿ ಸಹಸ್ರಲೋಚನಮುಮೊರ್ಮೆಯೆ ಪಜ್ಜಳಿಸಲ್ಕೆ ಚೆಲ್ವನಾ
ಕ್ಷಣದೊಳೆ ತಾಳ್ದಿದತ್ತು ವಿಕಸತ್ಕಮಳಂಗಳೆಸಳ್ಗಳಿಂ ಮನಂ
ದಣಿವಿನಮಲ್ಲಿ ಮತ್ತೆ ಕುಸುಮಾಂಜಳಿಯಂ ಮಿಗೆ ಚೆಲ್ಲಿದಂದದಿಂ ೧೧

ವರವೈಶಾಖಸ್ಥಾನದೊ
ಳುರುಮುದದಿಂ ನಿಂದು ಭರತಶಾಸ್ತ್ರಜ್ಞಂ ತ
ನ್ನೆರಡುಂ ಕೆಯ್ಯತಳಂಗಳ
ನೆರಡುಂ ಕಟಿತಟದೊಳಿಟ್ಟು ತೋಱೆವೆತ್ತಂ ೧೨

ವ: ಅಂತು ನಿಂದ ನಿಲವೆ ವೈಕುರ್ವಣಾವಿರ್ಭೂತಮುಮೆನಿಸಿ

ಕಡುತುಱುಗಿರ್ದ ತೋಳ್ಗಳನದೆಯ್ದೆ ವಿಗುರ್ವಿಸಿ ಭಾಪುಭಾಪೆನಲ್
ಬಿಡದಱುವತ್ತುನಾಲ್ಕು ವರಹಸ್ತತಳಾಭಿನಯನಂಗಳೆಲ್ಲಮಂ
ತಡವಿನಿಸಿಲ್ಲದೊರ್ಮೊದಲೊಳಂ ನೆಱೆತೋಱಿಸುತುಂ ಸುರಾಧಿಪಂ
ಸಡಗರದಿಂದೆ ನರ್ತಿಸುತುಮಿರ್ದನತೀವಕುತೂಹಳಂಗಳಿಂ ೧೩

ಗದಗಂಪಂಗೊಂಡುದಯ್ಯುಂತೆಱದ ಚರಣವಾರಿಪ್ರಯೋಗಂಗಳಿಂ ಮಾ
ಣದೆ ಭೂಮೀಮಂಡಳಂ ದಿಕ್ಕರಿಗಳಳುಱೆ ಬಾಯ್ವಿಟ್ಟುವೀರೈದು ಸಂಸ್ಥಾ
ನದ ಬಾಹುಕ್ಷೇಪದಿಂದಂ ನವತಿನಯನಭೇದಂಗಳಿಂ ರಂಜಿಸುತ್ತಿ
ರ್ದುದು ಸರ್ವಾಶಾಪ್ರದೇಶಂ ಸುರಪತಿನಟನಂ ವಿಸ್ಮಯಂಬೆತ್ತುದಾದಂ ೧೪

ಆಗಸದಲ್ಲಿಯುಂ ಧರಣಿಮಂಡಳದಲ್ಲಿಯುಮೆಂಟು ದಿಕ್ತಟೀ
ಭಾಗದೊಳೆಲ್ಲಮೊರ್ಮೊದಲೊಳಾ ದಿವಿಜಾಧಿಪನೊಂದುರೂಪು ನೂ
ಱಾಗಿರೆ ವಿಕ್ರಿಯಾವಿಭವದಿಂದ ವಿಗುರ್ವಿಸಿ ಮತ್ತಮುತ್ತಯುಂ
ರಾಗರಸಂ ಪೊನಲ್ವೊನಲನಟ್ಟಿ ತರಂಗಿತಮಾಗಲಾಡಿದಂ ೧೫

ವರಭೂಷಾವೇಷಭಾಸ್ವತ್ಕಿರಣಗಣವಿಶೇಷಂಗಳಿಂ ದಿಗ್ವಿಭಾಗಂ
ಪರಭಾಗಂಬೆತ್ತುಮೊಪ್ಪುತ್ತಿರೆ ಸುರಸಭೆಗಾಶ್ಚರ್ಯಮಂ ಪುಟ್ಟಿಸುತ್ತುಂ
ತಿರುಪಂ ಕೊಟ್ಟಂ ಸಮಸ್ತಾಮರಸಮಿತಿಯ ನೇತ್ರಂಗಳುಂ ಚಿತ್ತಮುಂ ಸ
ತ್ವರದಿಂದಾ ಪೊತ್ತಿನೊಳ್ ತನ್ನೊಡನೆ ತಿರುಗೆ ದೇವೇಂದ್ರನಾಡುತ್ತುಮಿರ್ದಂ ೧೬

ವ: ಇಂತತೀವರೂಥಿವಡೆದ ತಾಂಡವಾಡಂಬರಕ್ರೀಡೆಯೊಳಾಖಂಡಳಂ ಪ್ರೌಢಿವೆತ್ತು ಶೃಂಗಾರಹಾಸ್ಯಕರುಣಭಯಾನಕವೀರರೌದ್ರಭೀಭತ್ಸಾದ್ಭುತಶಾಂತಂಗಳೆಂಬ ನವರಸಂಗಳಿಂ ಪರಿಪೂರ್ಣಮಾದ ವಿಭಾವಾನುಭಾವ ಸಂಚಾರಿವ್ಯಭಿಚಾರಿಸ್ಥಾಯಿಭಾವಂಗಳೆಂಬ ಪಂಚಭಾವಂಗಳಿಂದುಚಿತಮುಮೆನಿಪನ ತತ್ತದ್ಯೋಗ್ಯಸ್ಥಾನಕಂಗಳೊಳೆಲ್ಲಂ ಪೊಸಪೊಸತಾದ ಕಳಾಸವಿಳಾಸದಿಂದೆಸೆವುತ್ತುಮಿರ್ದ ಭರತಾಗಮಕ್ಕೆ ಟೀಕಂಬರೆದೋದುವಂತೆ ಪದಪದದುಗ್ಘಡಣೆಯಿಂದಗ್ಗಳಮಾಗಿ ರಂಜಿಸುವ ವಿಕಟನಾಟಕಮಂ ಭರತಶಾಸ್ತ್ರಸಮಾಲಕ್ಷಿತ ನಿರತಿಶಯಲಕ್ಷಣಕ್ಕಿದೇ ಪರಮಸೀಮಾಲಕ್ಷ್ಯಮೆಂಬಂತೆಡ್ಡಮಾಗಿ ಜಿನಪತಿಯ ಮುಂದೊಡ್ಡಯಿಸಿದಾಗಳ್

ಅಲಗುಗಳೊಪ್ಪಿ ರಂಗವಲಸಕ್ಕನುಕೂಲತೆವೆತ್ತ ದೋರ್ಲತಾ
ವಲನದ ವೇಗದಲ್ಲಿ ಗತಿಭಾವರಸಾಭಿನಯಂಗಳೋಜೆಯಿಂ
ಗೊಲೆಗೊಳಿಸಲ್ ಕರಂ ಲಯವಶಾನುಗಮಾಗಿರೆ ದೇವಕಾಂತೆಯರ್
ನಲಿದೊಡನಾಡುತಿರ್ದರಮರೇಂದ್ರನ ಸುತ್ತಲುಮೊಪ್ಪಮಪ್ಪಿನಂ ೧೭

ಒಡೆಯಂ ಕುಡೆ ತಿರುಪಂ ತ
ನ್ನೊಡನಮರೀಜನಮುಮಂದು ಕೊಟ್ಟುದು ತಿರುಪಂ
ಕುಡೆ ದಂಡಭ್ರಮರಿಯನಾ
ಗಡೆ ದಂಡಭ್ರಮರಿಯಂ ನಿಮಿರ್ಚಿತ್ತದುವುಂ ೧೮

ಸವಿಯಂ ಸಾಲಿಡುತಿರ್ಪ ಗೀತರಸಮಾ ಗೀತಕ್ಕೆ ನೇರ್ಪಟ್ಟು ಪೊ
ಣ್ಮುವ ವಾದ್ಯಂ ಮೃದುಗೀತವಾದ್ಯಮೆರಡಕ್ಕಿಂಬಾದ ನೃತ್ಯಂ ಮಹಾ

ದಿವಿಜಾಸ್ಥಾನಜನಕ್ಕೆ ಮಾಡೆ ಬಿಡದತ್ಯಾನಂದಮುಂ ನಾಡೆಯುಂ
ದಿವಿಜಾಧೀಶನ ಮುಂದದೇನೆಸೆದುದೋ ಸಂಗೀತಕಂ ಕೌತುಕಂ ೧೯

ದೇವೇಂದ್ರಂ ಶಾಶ್ವತಸುಖ
ಸೇವನೆಯಂ ಬಯಸಿ ಭಕ್ತಿಯಿಂದಾಡಿದನಾ
ದೇವನ ಮುಂದೆಂದೊಡಮಿ
ನ್ನೇವೇಳ್ವುದೊ ನೃತ್ಯಫಳಮುಮಂ ನೃತ್ಯಮುಮಂ ೨೦

ವ: ಇಂತು ಪುರಂದರನಾನಂದನರ್ತನಮಂ ನಿರ್ವರ್ತಿಸಿ ಜಯಜಯ ಘೋಷಣಂಗೆಯ್ದು ತದನಂತರಮಾ ಧರ್ಮಜಿನನಾಥನ ಮುಂದೆ ಸಂಭ್ರಮ ದಿಂದಿಳಾಮೂಲ ಮಿಳನ್ಮೌಳಿಯಾಗಿ ಮತ್ತಂ ದಿವಿಜಸಭಾಮಧ್ಯಸ್ಥಿತಶುಭಾಸನ ಸಮಾಸೀನ ನಾಗಿರ್ಪುದುಂ

ದಿವಿಜರುಘೇಯುಘೇನಿನದಮಂ ಸುರಪಾಠಕಪದ್ಯನಾದಮಂ
ದಿವಿಜಕರಾಹತಪ್ರಬಳವಾದ್ಯನಿನಾದಮುಮಷ್ಟದಿಕ್ತಟೀ
ವಿವರದೊಳೆಯ್ದೆ ತೀವೆ ದಿವಿಜಾಂಗನೆಯರ್ ನೆರೆದೆಲ್ಲರುಂ ಸಮು
ತ್ಸವದೊಳೆ ಮಂಗಳಾರತಿಗಳಂ ಜಿನಪಂಗಿರದೆತ್ತಿದರ್ ಕರಂ ೨೧

ವ: ಆಗಳಾ ಶಚೀಮಹಾದೇವಿ ದೇವೀಜನಂಬೆರಸು ಕಳಧೌತಭಾಜನ ಸಮಾಕಳಿತ ನೀರಾಜನದೀಪಕಳಿಕಾಕಳಾಪಂಗಳ ಬೆಳಗಿನ ಬಳಗದಿಂ ದ್ವಿಗುಣಿಸಿದ ಕಮನೀಯ ಕಾಯಕಾಂತಿಮಯ ಸಮ್ಮೋಹರಸತರಂಗಿಣಿಯ ತೆರೆಮಾಲೆಗಳೆನಿಪ ತೋಳ್ಗಳಿಂ ಕೇವಳಮಂಗಳಾರ್ಥಮಾಗಿ ಮಂಗಳಾರತಿಗಳಂ ನಿವಾಳಿಸಿಯಷ್ಟವಿಧಾರ್ಚನೆ ಗಳಿಂದರ್ಚಿಸಿ ಪೊಡೆವಟ್ಟು

ಕಣ್ಣೆಮೆಯಿಕ್ಕುವರೆಲ್ಲಂ
ಕಣ್ಣೆಮೆಯಿಕ್ಕಲ್ಕೆ ಮಱೆದರೆಮೆಯಿಕ್ಕದರುಂ
ಕಣ್ಣೆಮೆಯಿಕ್ಕದುದೆಮಗಂ
ತಿಣ್ಣಂ ಫಳಮಾದುದೆಂದು ನೋಡುತ್ತಿರ್ದರ್ ೨೨

ವ: ಬಳಿಯಮಿಂತು ಕಯ್ಗೆಯ್ದು ಧರ್ಮನಾಥಕುಮಾರನಂ ನಿಜಪುರಕ್ಕೆಯ್ದಿಸುವ ಬಗೆ ಬಗೆಯೊಳೊಗೆಯೆ ಮಘವಂ ಪ್ರಯಾಣಭೇರಿಯಂ ಪೊಯ್ಯಲ್ವೇಳ್ವುದುಂ

ಗಮನಸಂಸೂಚಿಭೇರೀ
ಸಮಿತಿಗಳೊರ್ಮೊದಲೆ ಮೊಳಗೆ ದೆಸೆಯೆಲ್ಲಂ ಶ
ಬ್ದಮಯಮಾಗಿರ್ದುದದ್ವೈ
ತಮನಾಶ್ರಯಿಸಿದತ್ತದತ್ತದೆಂಬೀ ತೆಱದಿಂ ೨೩

ವ: ಅಂತು ಪರಿಪೂರ್ಣತಭೇರೀರವಾಕರ್ಣನದಿಂದವಗತನಿರ್ಯಾಣ ಕ್ಷಣರಾಗಿ ಸಕಳಸುರಾಸುರ ನಿಕರವೆಲ್ಲಂ ನೆರೆದುಬರಲೊಡಂ ಪುರುಹೂತನೈರಾವತಮಹಾ ಮಾತಂಗ ಸಮಾರೂಢನಾಗೆ

ನಲವಿಂದಿಂದ್ರಾಣಿ ತನ್ನ ಸ್ತನತಟಯುಗಮಂ ಮಾಡಿ ಮೆಯ್ಗೊತ್ತಿನೊಳ್ ಸೋ
ಗಿಲೊಳಂ ತದ್ಬಾಳನಂ ಮೆಲ್ಲನೆ ದರಿಕರರಾಧಾರದಿಂ ನೋಡಿ ರಾಗಂ
ನೆಲೆವೆರ್ಚಲ್ ಕೂಡೆ ನಾನಾಪಟುಪಟಹರವಂ ಪೊಣ್ಮೆ ಬಂದೇಱಿದಳ್ ಮಂ
ಗಳ ದೇವೇಂದ್ರೇಭಮಂ ಕೋಮಳಪುಳಕಕುಳಂ ಬೇಱೆ ಬಂದೇಱಿ ಮೆಯ್ಯಂ ೨೪

ವ: ಇಂತು ಬಂದೇಱಿ ಶಚಿ ತನ್ನಯ ವಲ್ಲಭನ ತಲ್ಲಜಪಾಣಿಪಲ್ಲವಕ್ಕೆ ಮೆಲ್ಲನೆ ಜಿನಶಿಶುವಂ ನೀಡುವುದುಮಾಗಳಾ ಬಳರಿಪು ದುರಿತರಿಪುವಂ ನಿಜಕರತಳಪುಟದೊಳ್ ಬಿಜಯಂಗೆಯ್ಸಿಕೊಂಡು ಸಂಭ್ರಮಕೋಳಾಹಳಂ ಕೆಯ್ಮಿಕ್ಕು ಪೆರ್ಚುತ್ತುಮಿರೆ

ಇಕ್ಕುವ ಚಾಮರಾವಳಿಗಳಿಂ ಪೊಸಮುತ್ತಿನ ಲಂಬನಂಗಳಿಂ
ಸೆಕ್ಕಿದ ಚೆಲ್ವ ಸತ್ತಿಗೆಗಳಿಂದಮಗುರ್ವಿನ ಕೊರ್ವು ಪರ್ವಿ ಕೆ
ಯ್ಮಿಕ್ಕಿರೆ ದೇವಸೈನ್ಯಮೆರಡುಂ ಕೆಲದಲ್ಲಿ ವಿಘೂರ್ಣಿಸುತ್ತಿರಲ್
ಬೆಕ್ಕನೆ ದೇವರಾಜನಿಳಿತಂದನನುತ್ತಮಮಂದರಾಗ್ರದಿಂ ೨೫

ವ: ಆಗಳ್

ಉಲಿವ ಸಮಸ್ತಸೈನ್ಯಶತಮಂ ಸುರತಾಡಿತವಾದ್ಯಕೋಟಿಯುಂ
ತೊಲಗಲೊಡಂ ಮಹಾಕಳಕಳಂ ಪೆಱಪಿಂಗಿದುದಾಕ್ಷಣಂ ಸುರಾ
ಚಳಮದು ನೋಡೆ ಬಾಜಿಸುತುಮೊಲ್ಲದೆ ಮಾಣ್ದ ಸುವರ್ಣಘಂಟೆಯೆಂ
ಬಳವಿಯ ಶಂಕೆಯಂ ಬಿಡದೆ ಪುಟ್ಟಿಸುತಿರ್ದುದು ಭಿನ್ನನಾಗಿ ತಾಂ ೨೬

ವ: ಅನಂತರಂ

ನೆಲನೆಲ್ಲಂ ಕೊಳ್ಗೆಸರ್ ಮಾಣದೆ ಮಸಗುವಿನಂ ದಂತಿದಾನಂಗಳಿಂ ದಿ
ಕ್ಕುಲಮೆಲ್ಲಂ ಕೂಡೆ. ಚಿತ್ರಂ ಮಿಗೆ ಮಸಗುವಿನಂ ರತ್ನಭೂಷಾಂಶುವಿಂದಂ
ಸಲೆರೋದಂ ಕಾಳ್ಪುರಂ ಬೇಗದೆ ಮಸಗುವಿನಂ ಗೀತಪೀಯೂಷದಿಂದಂ
ನಲವಿಂದಂದೆಯ್ದಿಬಂದಂ ಜಿನನ ಪುರಿಗೆ ದೇವೇಂದ್ರನಾನಂದದಿಂದಂ ೨೭

ವ: ಅಂತಲಂಕಾರಶಾಸ್ತ್ರದಂತೆ ನಾನಾಪ್ರಕಾರಚಿತ್ರಾಳಂಕಾರಪ್ರಕರದಿಂದಳಂ ಕೃತಮಾದ ಧರ್ಮಜಿನರಾಜನ ರಾಜಧಾನೀರುತ್ಸೇತರೋತ್ಸಾಹ ವಿರಾಜಮಾನಮಾದ ರತ್ನಪುರಮಂ ದಿವಿಜರಾಜಂ ದಿವಿಜಸಮಾಜಂಬೆರಸು ಮಹಾಪ್ರಭಾವನಾಪ್ರಭಾವ ಪ್ರಾದುರ್ಭಾವ ಮಗುರ್ವುವಡೆವಿನಂ ಮುಟ್ಟೆವೆಂದು ಪುರಮನರಮನೆಯುಮಂ ಪೊಕ್ಕು ತನ್ನಯ

ಬೆಸದಿಂಮುನ್ನಮೆ ಪೋಗಿ ಕಲ್ಪಜಶಿಲ್ಪಿಗಳ್ ಪರಿಕಲ್ಪಿಸಿದ ಕರುಮಾಡದ ಮುಂದಣ ಮಹಾಸಭಾಮಂಟಪದ ಮಣಿಕುಟ್ಟಿಮಧರಣಿಯ ನಟ್ಟನಡುವಣ ರಮಣೀಯಮಣಿ ಮಯಸಿಂಹಪೀಠದೊಳಾ ಜಿನಾರ್ಭಕನನಿರಿಸಿ ತತ್ಪುರಂದರಂ ಮುಂದೆ ಕುಳ್ಳಿರ್ದು ಸಮಸ್ತ ಸುರಾಸುರರೆಲ್ಲಂ ನೆರೆದು ಮಹಾಮಹಿಮೆಯಿಂ ಒಡ್ಡೋಲಗಂಗೊಟ್ಟಿರ್ಪುದುಂ

ಪೂಜ್ಯಮಹಾಸೇನಮಹಾ
ರಾಜನುಮಾ ಸುವ್ರತಾಮಹಾದೇವಿಯುಮಂ
ದಾ ಜಿನಮಣಿಮಂಡಪಮಂ
ರಾಜಿತಮುಮನೆಯ್ದಿವಂದು ಪೊಕ್ಕರ್ ಮುದದಿಂ ೨೮

ತನಯಮುಖದರ್ಶನೋತ್ಸುಕ
ಮನರಾಗಳ್ ಬಂದು ಕೆಲದ ಭದ್ರಾಸನದೊಳ್
ಘನರಾಗದೆ ಕುಳ್ಳಿರ್ದರ್
ತನುಲತೆಯೊಳ್ ತೋಱೆ ಪುಳಕಕಳಿಕಾಜಾಳಂ ೨೯

ವ: ಅಂತು ಕುಳ್ಳಿರ್ದು

ತವಕದೆ ಚಕ್ರವಾಕಮಿಥುನಂ ತದಹರ್ಮುಖಮಂ ನಿರೀಕ್ಷಿಸಿ
ಪ್ರವರವಿಶೇಷಹರ್ಷದೊದವಿಂ ನಲಿವಂತೆ ಮಹಾತನೂಜನೊ
ಪ್ಪುವ ಮುಖಮಂ ಮನಂದಣಿವಿನಂ ನಡೆನೋಡಿ ವಿಶೇಷಹರ್ಷದಿಂ
ದವೆ ನಲಿಯುತ್ತುಮಿರ್ದುದು ದಲಾ ಮಿಥುನಂ ಪವಣಿಲ್ಲಮೆಂಬಿನಂ ೩೦

ವ: ಇಂತನಂತಸಂತೋಷಸಮುದ್ರದಪರಪಾರಮನೆಯ್ದುತ್ತುಮಿರ್ಪುದುಂ

ಅಂತಪ್ಪದ್ಭುತಪುಣ್ಯಮೂರ್ತಿಯೆನಿಪೀ ಲೋಕತ್ರಯಸ್ವಾಮಿಗೆಂ
ತುಂ ತಾಯ್ತಂದೆಗಳಪ್ಪ ಸೈಪು ದೊರೆಕೊಂಡಂದೇ ಸಮಾರಾಧ್ಯರುಂ
ಚಿಂತ್ಯರ್ ಪೂಜ್ಯರುಮಿಾ ಜಗಕ್ಕಿವರೆನುತ್ತುಂ ಶಕ್ರನಾನಂದಿತ
ಸ್ವಾಂತಂ ಪೂಜಿಸಿದಂ ಸುಕಲ್ಪಜವಿಭೂಷಾಮಾಲ್ಯವಸ್ತ್ರಂಗಳಿಂ ೩೧

ವ: ಅಂತಾ ಜಿನನ ಜನನೀಜನಕರಂ ದಿವಿಜರಾಜಂ ದಿವ್ಯವಸ್ತುಗಳಿಂ ಪರಿ ಪೂಜಿಸುತ್ತುಮಿರೆ

ಇನ್ನುಂ ರತ್ನಸುವರ್ಣವೃಷ್ಟಿ ಕಱೆಯುತ್ತಿರ್ದಪ್ಪುದೀ ತಾಣದೊಳ್
ಸ್ವರ್ನಾಥಂ ದಿವಿಜಾಸುರರ್ ಬೆರಸಿಬಂದಾರಾಧಿಸುತ್ತಿರ್ದಪಂ
ಮುನ್ನೆಂದುಂ ಸುತ ನಿನ್ನನಂ ಪಡೆದರಿಲ್ಲೀ ಲೋಕದಲ್ಲೆಲ್ಲಿಯುಂ
ಕೆನ್ನಂ ತತ್ಪಿತೃಮಾತೃಗಳ್ ಪಿರಿದು ಮುನ್ನೇಂ ನೋಂಪಿಯಂ ನೋಂತರೋ ೩೨

ಆ ಮಾತಾಪಿತೃಗಳನಿ
ನ್ನೇಮಾತಿಂತೆಂದು ಕೂಡೆ ಕೊಂಡಾಡುತ್ತುಂ
ಪ್ರೇಮದೆ ನೋಡುತ್ತಿರ್ದುದು
ವೈಮಾನಿಕದೇವದೇವಿಕಾನಿಕುರುಂಬಂ ೩೩

ವ: ಅಂತುಮಲ್ಲದೆಯುಂ

ಲೇಸಾಗಿರ್ದಾ ಜಿನಾಧೀಶ್ವರನ ನಿರುಪಮಾಕಾರಮಂ ಪೆತ್ತ ತಾಯಂ
ದೀಸಾರಂ ತಾನೆನಿಪ್ಪಾ ಜನಕನವರ ರೂಪಂ ಸಭಾಶೋಭೆಯಂ ಕಂ
ಡೀ ಸೃಪಿನ್ನಾರ್ಗೆ ಕೈಸಾರ್ಗುಮೊ ದಿಟಮೆನುತುಂ ಪೌರನಾರೀನರೌಘಂ
ಸೂಸುತ್ತುಂ ಹರ್ಷಬಾಷ್ಪಾಂಬುವನತಿಶಯದಿಂ ನೋಡುತಿರ್ದತ್ತದಾದಂ ೩೪

ಬಲದೊಳ್ ಕುಳ್ಳಿರ್ದನೀತಂ ಸುರಪತಿ ಕೆಲದೊಳ್ ಕುಳ್ಳಿದಿರ್ದೀಕೆ ಚೆಲ್ವಿಂ
ಗಿಲೆಯಾದಿಂದ್ರಾಣಿ ಸುತ್ತಂ ನೆಲಸಿವರೊಸೆದೋಲೈಸುವರ್ ಲೋಕಪಾಳರ್
ಪಲಬರ್ ದೇವನಿಯೋಗಾಧಿಕೃತಿರತಿರಿವರ್ ಮತ್ತಮಿಂತೆಂದು ತಮ್ಮೊಳ್
ಸಲೆಮೊಟ್ಟಿಂ ತೋಱಿ ಮಾತಾಡುತವೆ ಬಳಸಿ ನೋಡಿತ್ತು ವಾಮಾಸಮೂಹಂ ೩೫

ವ: ಇಂತು ಪರಿಜನ ಪುರಜನ ಬಂಧುಜನಂಗಳೆಲ್ಲಂ ನೆರೆದುನಿಂದು ನೋಡುತ್ತುಂ ಸುಟ್ಟುಂಬೆದೋಱಿ ನುಡಿಯುತ್ತುಂ ತಜ್ಜಿನಾರ್ಭಕನ ಸಮೂದ್ಭೂತಮಾದ ಪುಣ್ಯಶಕ್ತಿಯಂ ಮಿಗೆಪೊಗೞ್ದು ವ್ಯಕ್ತೀಕರಿಸುತ್ತುಮಿರ್ಪನ್ನೆಗಮಾಗಳನೇಕಪ್ರಶಸ್ತವಸ್ತುವಿಸ್ತೀರ್ಣ ಮಾಗಿ ಜಂಭಾರಾತಿ ಜಾತಕರ್ಮಸಮುತ್ಸವಪರಿನಿರ್ಮಾಣಮಂ ವಿಸ್ತರಿಸಿ ತದನಂತರಂ

ಈತಂ ಮಾಡಿಪಪಂ ವಿನಿರ್ಮಳಮಹಾಧರ್ಮಪ್ರಭಾವಾಂಗಮಂ
ಧಾತ್ರೀಮಂಡಳದಲ್ಲಿ ಮೇಲೆನಿಪಿನಂ ಧರ್ಮಕ್ಕಮಿನ್ನುಂ ಸಮಂ
ತೀತಂ ತಾನಧಿನಾಥನೆಂದು ಶಿಶುಗಂ ಶ್ರೀಧರ್ಮನಾಥಂ ದಲೆಂ
ಬೀತಂ ನಾಮಮನಿಟ್ಟು ಘೋಷಿಸಿದನಾ ದೇವೇಂದ್ರನಾನಂದದಿಂ ೩೬

ವ: ಇಂತು ನಾಮೋಚ್ಚಾರಣಂಗೆಯ್ದಿಂಬಳಿಯಂ

ತತ್ತುವ ಚೆಲ್ವ ಮೆಯ್ದೊಳೆವ ಕಾಡಿಗೆಯೆಚ್ಚುವ ಮುದ್ದುಮಾತುಮಂ
ಬಿತ್ತರಿಸುತ್ತುಮಿರ್ಪ ಮೊಲೆಯೂಡುವ ಬಾಳವಿಭೂಷಣಂಗಳಂ
ಮತ್ತಮದೆಲ್ಲಮಂ ತೊಡಿಪ ಬೇವಸದಲ್ಲಿಗೆ ದೇವರಾಜನ
ತ್ಯುತ್ತಮದೇವಕಾಮಿನಿಯರಂ ಬೆಸವೇಳ್ದನತೀವಭಕ್ತಿಯಿಂ ೩೭

ವ: ಇಂತು ಬಾಲಕಾಲಕರಣೀಯಪರಿಚರ್ಯಾಪರಿಕರಮಂ ವಿರಚಿಸುತ್ತು ಮಿರಿಯೆಂದು ಪುರುಹೂತಂ ಪುರಮಹತ್ತರಿಕಾಸಂಕುಳಮಂ ಬರಿಸಿಯಪ್ಪಯಿಸುವುದುಂ

ದೇವಕುಮಾರರಂ ಕರೆದು ನೀವು ಸಮಾನವಯಸ್ಕರಾಗಿ ನಾ
ನಾವಿಧಚೋದ್ಯಮಮಂ ಬಗೆಗೆ ಪುಟ್ಟಿಸುತಿರ್ಪ ವಿನೋದಮಮಂ ಸಮು
ದ್ಭಾವಿಸಿ ಕೂಡೆಯಾಡುತಿರಿಯೆಂದು ನಿಯಾಮಿಸಿದಂ ಕೆಲಂಬರಂ
ದೇವವರಂ ಸಮರ್ಪಿಸಿದ ನೇಳಕಮಂ ಪಿಡಿಯಲ್ ಕೆಲಂಬರಂ ೩೮

ವ: ಅಂತಾ ಜಿನಕುಮಾರಕನಿಚ್ಛಾನುಕೂಲಮಾಗಿ ತತ್ಕಾಲೋಚಿತ ಸಹ ಪಾಂಸುಕ್ರೀಡಾ ವಿನೋದಮನಾತನೊಡನೊಡರ್ಚುತ್ತುಮಿರಿಯೆಂದು ಸುರಕುಮಾರಕರಂ ನಿಯೋಜಿಸಿ ಬಳಿಯಂ ಬಳರಿಪು ಪಿರಿದುಂ ಪ್ರಶ್ರಯವಿನಮ್ರಮಸ್ತಕನಾಗಿ ತದ್ಧರ್ಮಜಿನ ರಾಜಸುಮನಾ ಜಿನನ ಜನನೀಜನಕರುಮಂ ಬೀಳ್ಕೊಂಡು

ಬೀಸುವ ಚಾಮರಾವಳಿಗಳಿಂ ಧವಳಾತಪವಾರಣಂಗಳಿಂ
ಸೂಸುವ ಮುತ್ತಿನಕ್ಷತೆಗಳಿಂ ಪಿಡಿದೆತ್ತಿದ ಸದ್ಧ್ವಜಂಗಳಿಂ
ಲೇಸೆನೆ ಶೋಭೆವೆತ್ತಮರಸೈನ್ಯಶತಂಬೆರಸಿಂದ್ರನಂದು ಮ
ತ್ತಾ ಸುರಲೋಕಮಂ ಪಿರಿದು ಸಂತಸದಿಂ ನಿಮಿಷಕ್ಕೆ ಮುಟ್ಟಿದಂ ೩೯

ವ: ಇಂತು ತಜ್ಜಿನಾರ್ಭಕಂಗೆ ಮಹಾಮಹಿಮೆಯಿಂ ಜನ್ಮಾಭಿಷವಣ ಕಲ್ಯಾಣಪುರಸ್ಸರಂ ಜಾತಕರ್ಮನಾಮಕರಣಮಂಗಳವಿಧಾನವಿರಚನಾ ನಂತರಂ ವಾಸವಂ ನಿಜನಿವಾಸಕ್ಕೆ ಪೋಪುದುಂ

ಇತ್ತಲ್ ಬಳಿಕ್ಕಮತಿಮೃದು
ವೆತ್ತಮರಕುಮಾರಿಕಾಕರಾರುಣ ಕಮಲೋ
ನ್ಮತ್ತಕಳಹಂಸನೆನಿಪ ಜಿ
ನೋತ್ತಮಶಿಶು ಕಣ್ಗೆ ಸೊಗಸನೀವುತ್ತಿರ್ದಂ ೪೦

ಎಱಕಂ ತನಗೇತಱೊಳಂ
ಕಿಱಿದಾದೊಡಮಿಲ್ಲವೆಂಬಿದಂ ಸೂಚಿಸುವಂ
ತಿರೆ ನಿರಪೇಕ್ಷೇಕ್ಷಣದಿಂ
ಮೆಱೆಯುತ್ತುತ್ತಾನಶಯ್ಯೆಯೊಳ್ ಶಿಶುವೆಸದಂ ೪೧

ಕಜ್ಜಳಪರಿರಂಜನದಿಂ
ದುಜ್ಜ್ವಳನಯನಂಗಳೆಯ್ದೆ ಕಪ್ಪಾಗಿಯೆ ಪ
ಕ್ಷ್ಮಜ್ಜನಮನಕ್ಕೆ ರಾಗೋ
ಪಾರ್ಜನಮಂ ಮಾಡುತಿರ್ದನಿದು ಚಿತ್ರತರಂ ೪೨

ಮಿಗೆ ಜಾತಿಜರಾಮರಣಾ
ದಿಗಳಿಂಗೊಳಗಾಗಿ ಸೇದೆವಡುತಿರ್ದಪುದೀ

ಜಗಮೆಂದು ನಗುವತೆಱದಿಂ
ಮುಗುಳ್ನಗೆಯಂ ನಕ್ಕು ಮನಮನಿಳ್ಕುಳಿಗೊಂಡಂ ೪೩

ಪರಮಹರಿನ್ಮಣಿವಿರಚಿತ
ಮರಳೆಲೆ ಬಾಲಕನ ನೊಸಲೊಳೆಸೆವುತ್ತುಂ ಬಂ
ಧುರಮಾದುದರ್ಧಚಂದ್ರೋ
ದರದೊಳ್ ಪೊಳೆಯುತ್ತುಮಿರ್ಪ ಕಪ್ಪಿನ ತೆಱದಿಂ ೪೪

ಮೃದುಸಿಕ್ತಂ ಸಮನೋಭಿರಾಮನಮಿತಚ್ಛಾಯಾವಿಶೇಷಾಸ್ಪದಂ
ಪದುಳಂ ನಂದನಬಾಳಚೂತಮೆನೆ ಕಣ್ಗಿಂಬಾದನಾ ಬಾಳಕಂ
ಮುದಮಂ ಪುಟ್ಟಿಸಿ ವಸ್ತುಪಿಂಗೆ ಮಿಗೆಮತ್ತಂತಲ್ಲದಂದಿಂದ್ರನೀ
ಲದ ಮಾಗಾಯ್ಗಳವಾವ ಕಾರಣದಿನಾಕರ್ಣಂಗಳಲ್ಲೊಪ್ಪುಗುಂ ೪೫

ವ: ಆಪೊತ್ತಿನೊಳ್

ಸುತನಂಗಸ್ಪರ್ಶನದೊಂ
ದತಿಶಯದಿಂ ಕಣ್ಗಳೆರಡುಮಂ ಮುಚ್ಚಿದನಾ
ಪಿತೃಸುಖಮನಂತರಂಗಾ
ತತಗೃಹದಲ್ಲಿರಿಸಿ ಕದವನಿಕ್ಕಿದ ತೆಱದಿಂ ೪೬

ತೊಡೆಯಮೇಲಿರ್ದ ಕೂಸಂ
ಕಡುಪಿಂದಮರ್ದಪ್ಪಿ ಮಾತೃ ಕಣ್ಮುಚ್ಚಿದಳಾ
ಗಡೆ ಗಾಢಾಲಿಂಗನದಿಂ
ದೊಡಲೆನಿತೋ ಪೊಕ್ಕುದೆಂಬಿದಂ ನೋಡುವವೊಲ್ ೪೭

ಕುಂದದ ಪೆರ್ಚುಗೆಯಂ ಜಿನ
ಚಂದ್ರಂ ತಳೆಯಲ್ಕೆ ಕೂಡೆ ನಿರುಪಮಬಹಳಾ
ನಂದಸಮುದ್ರಂ ಪೆರ್ಚಿ ದ
ಲಂದು ಕರಂ ತುಂಬಿದತ್ತು ಲೋಕದೊಳೆಲ್ಲಂ ೪೮

ಬಿಡದೆನ್ನಂತಿರೆ ತಾನುಂ
ಗಡ ತೇಜೋಮಯಮುಮೆಂಬ ಬಗೆಯಿಂದೆನೆ ಶಿಶು
ಮಡದಿಯರ ಕೈಗಳಿಂದಂ
ಕಡುನಿಮಿರ್ವಂ ಪಿಡಿಯಲೆಂದು ದೀಪಾಂಕುರಮಂ ೪೯

ಪದೆಪಿಂ ಕಿವಿಗಳ್ಗಿಂಬಂ
ಕೆದಱುತ್ತುಂ ಸರ್ವವಶ್ಯಮಂತ್ರಂಗಳವೊಲ್

ತೊದಳಾದ ಮುದ್ದುನುಡಿಗಳ್
ಮುದಮಂ ಪುಟ್ಟಿಸುತುಮಿರ್ಪವಖಿಳಜನಕ್ಕಂ ೫೦

ವ: ಮತ್ತಂ ಕೆಲವಾನುದಿನಗಳಿಂ ಮೇಲೆ

ಜನನಿಯ ದೇವಕಾಮಿನಿಯ ಕೆಯ್ಯ ಬೆರಳ್ಗಳನಾಗಳೊಯ್ಯನೊ
ಯ್ಯನೆ ಪಿಡಿದೆಳ್ದು ನಿಂದು ಮಣಿಕುಟ್ಟಿಮಧಾರಿಣಿಯಲ್ಲಿ ಲೀಲೆಯಿಂ
ಜಿನಶಿಶುಕೂಡೆ ದಟ್ಟಡಿಯನಿಟ್ಟು ತಳರ್ನಡೆಗಲ್ತನೆಯ್ದೆ ಕೆಂ
ಪಿನ ಕಡುಚೆಲ್ವ ತಾವರೆಯರಳ್ಗಳನಲ್ಲಿರಿಸುತ್ತುಮಿರ್ಪವೊಲ್ ೫೧

ಪಿಡಿದು ಕರಾಗ್ರದಿಂದುದಯಮೇಖಳೆಯಂ ಜನನೀಸದಂಕದಿಂ
ಕಡುನಲಿದೆಳ್ದು ಭೂತಳದೊಳಂ ನಿಜಪಾದಮನಿಟ್ಟು ಬಾಳಕಂ
ನಡೆವುತಮಿರ್ದನಾ ಮೊದಲ ದಿಗ್ವಧುವಂಕದಿನೆಳ್ದ ಸೂರ್ಯನಂ
ತಡಸಿದ ರಾಗದಿಂದುಲಿಯೆ ಗೆಜ್ಜೆಗಳೆಂಬುರುಪಕ್ಷಿಗಳ್ ಕರಂ ೫೨

ಮಣಿಮಯಮೇಖಳಾವಳಯಕೀಲಿತಪಾವನಕಿಂಕಿಣೀ ಕಣ
ಕ್ವಣನಮದುಣ್ಮೆಪೊಣ್ಮೆ ರಮಣೀಯವಿಚಿತ್ರಿತಚಿತ್ರಪತ್ರಕಂ
ಕಣರಣನಂ ವಿಶೇಷಿಸೆ ಮನೋಹರಭಾಸುರವಜ್ರಮುದ್ರಿಕಾ
ಗಣಕಿರಣಂ ವಿರಾಜಿಸೆ ಜಿನಂ ನಡಪಾಡುತುಮಿರ್ದನರ್ಥಿಯಿಂ ೫೩

ಮಿಗೆ ಭೂಷಣಾಂಗಸುರಕುಜ
ದಗೆಯೆಂಬಿನಮಿಂಬುವೆತ್ತ ಜಿನಶಿಶುವಂಗಂ
ಸೊಗಯಿಪ ಮರುತ್ತ್ವಚಾರದ
ಬಗೆಯಿಂದಾಡುತ್ತುಮಿರ್ದುದತಿರಮಣೀಯಂ ೫೪

ಗಡಣಂಗೊಂಡೊಡನಾಡಿಗಳ್ ಸುರಕುಮಾರರ್ ಧೂಳಿಕಾಕೇಳಿಯೊಳ್
ಕಡುರಾಗಂಬೆರಸಾ ಜಿನಾರ್ಭಕನ ಮೇಲೆಲ್ಲಂ ರಜೋಜಾಳಮಂ
ಕಡುಪಿಂದಂ ಕೆದಱುತ್ತುಮಿರ್ದೊಡಮವಂ ನೈರ್ಮಲ್ಯಮಂ ತಾಳ್ದ ಕ
ನ್ನಡಿಯೆಂಬಂತಿರೆ ಚೆಲ್ವನಾಗಿ ಪೊಳೆಯುತ್ತಿರ್ದಂ ವಿನೇತ್ರಪ್ರಿಯಂ ೫೫

ಒಡನೊಡನೆ ತಾಯ ದಿಟ್ಟಿಗ
ಳೆಡೆವಿಡೆದೆ ಕುಮಾರನತ್ತ ಪರಿದಾಡುವಿನಂ
ಕಡುನೀಳ್ದ ತನ್ನ ಕಣ್ಗಳ್
ತಡೆಯದೆ ಪೊಳದಾಡೆ ಮುದದಿನಾಡುತ್ತಿರ್ದಂ ೫೬

ಸುಳಿಸುಳಿದಾಡುತಿರ್ದ ರಮಣೀಯಕುಮಾರನ ತೆಳ್ಪುವೆತ್ತು ದ
ಳ್ಪೊಳೆವ ಕದಂಪಿನಲ್ಲಿಯವತಂಸವಿಶೋಣಮಣಿಪ್ರಭಾಳಿ ಮಾ

ಪೊರ್ಳೆದೆಸೆಯುತ್ತುಮಿರ್ದುದಮು ಚುಂಬಿಸೆ ಬಂದು ವಿಮುಕ್ತಿಲಕ್ಷ್ಮಿತಂ
ಬುಲದೆಸರೊಕ್ಕುದಲ್ಲಿ ಬಿಡದೆಂಬಭಿಶಂಕೆಯನುಂಟುಮಾಡುಗುಂ ೫೭

ವ: ಆಗಳ್

ಪರಮವಿಶೇಷಮೋಹರಸಸಾರವಿಶಾಲವಿಲೋಚನಂಗಳಿಂ
ಸುರುಚಿರರೂಪನಂ ಜಿನಕುಮಾರಕನಂ ನಡೆನೋಡಿ ಪೆತ್ತ ತಾ
ಯಿರದಮರ್ದಪ್ಪಿಕೊಂಡು ಬಿಡದಾರನಿದಾನವಿದಾರಮುದ್ವಿದಾ
ರರಸನಿದಾರಮಾಣಿಕವಿದೆಂದುಪಲಾಲಿಸುತ್ತಿರ್ದನರ್ಥಿಯಿಂ ೫೮

ವ: ಮತ್ತಮಾ ಪೊತ್ತಿನೊಳ್

ಜನನಿಯ ಕಂಬುಕಂಠದೊಳಿಕ್ಕಿದ ಮುತ್ತಿನ ತಾರಹಾರಮಂ
ಜಿನಶಿಶು ತನ್ನ ಕೆಯ್ಯಬೆರಳಿಂ ಪಿಡಿದೊಂದೆರಡೆಂಟುನಾಲ್ಕುಮೂ
ಱನುತೆಣಿಸುತ್ತುಮಾ ತಡತಡಾದ ತೊದಳ್ನುಡಿಯಿಂದ ನಾಡೆಯುಂ
ಮನದೊಳನೂನರಾಗದೊದವಂ ಸಲೆಪುಟ್ಟಿಸುತ್ತಿರ್ದನಾಕ್ಷಣಂ ೫೯

ವ: ಇಂತಾ ಬಾಲಕನ ಬಾಲಲೀಲಾವಿನೋದಂಗಳಿಂ ತನ್ನಯ ಜನನೀ ಜನಕರಿಂಗ
ಮಂದಾನಂದಸಂದೋಹಮನಂದು ಜನಿಸುತ್ತುಮಿರಲ್ ಮತ್ತಂ

ಅನಿಮಿಷಪತಿಯನ್ನಪ್ರಾ
ಶನಚೌಲೋಪನಯನಾದಿ ಕರ್ಮಂಗಳುಮಂ
ಮನಮೊಲ್ದು ಮಾಡಿದಂ ತ್ರಿಭು
ವನದಲ್ಲಿ ವಿಚಿತ್ರಮಪ್ಪಿನಂ ಸಂಭ್ರಮದಿಂ ೬೦

ತಡೆಯದೆ ಮೂಱುಸಂಜೆಯೊಳಮೊಪ್ಪುವ ರತ್ನವಿಭೂಷಣಂಗಳಂ
ಕೊಡುವುದು ಭೂಷಣಾಂಗಮದು ಕೊಟ್ಟವನೋಲಗಿಪಂ ಸುರಾಧಿಪಂ
ತೊಡಿಸುವರಂದವಂ ಶಿಶುಗೆ ದೇವವಿಳಾಸವತೀಜನಂಗಳೆಂ
ದೊಡಮದನೇನ ಬಣ್ಣಿಸುವೆನಾತನ ಪುಣ್ಯಮಹಾಪ್ರಭಾವಮಂ ೬೧

ವ: ಇಂತು ನಿಳಿಂಪವಿಳಾಸಿನೀಸಂಕುಳಕರಣೀಯಬಾಲ್ಯಾಂಗ ಸಂಸ್ಕಾರಾದಿ ಕ್ರಿಯಾವಿಶೇಷಂ
ಗಳನಂಗೀಕರಿಸಿ ಬಳಿಯಂ ಶೈಶವಾವಸ್ಥಾಸ್ಥಿತಿಯನತಿಕ್ರಮಿಸಿ ಪರಂಪರೆಯಿಂ
ಪ್ರತಿಪತ್ಕಳಾಮಾಳಿಯಂತೆ ಪ್ರತಿದಿನಂ ಪ್ರವರ್ಧಮಾನಕಳಾಕಳಾಪವಿಳಾಸದೊಡನೊಡನೆ
ಬಳೆವಳೆದಭಿವೃದ್ಧಿಯನಪ್ಪುಕೆಯ್ವುದುಮಂ

ಆ ಸುಕುಮಾರಕುಂಜರನ ಸರ್ವಮನೋಹರದಿವ್ಯರೂಪಮಂ
ಲೇಸೆಲೆ ಬಣ್ಣಿಸಲ್ ಬಗೆವೊಡೆನ್ನಳವಲ್ತು ಸಹಸ್ರಜಿಹ್ವಿಕಾ

ವಾಸುಕಿಗಗ್ಗಳಂ ಸುಕೃತಕಾರಣಮಾಗಿ ದಲೆನ್ನ ಬಲ್ಲವೋ
ಲೀಶನಮೂರ್ತಿಯಂ ಪೊಗಳ್ವೆನಲ್ಲದೊಡಂತದು ಮೊಗ್ಗೆ ವರ್ಣನಂ ೬೨

ವ: ಅದೆಂತೆನೆ

ನಿರುಪಮಶಂಖಚಕ್ರಕುಳಿಶಂ ಮೊದಲಾದ ಸುಲಕ್ಷಣಂಗಳಂ
ಧರಿಸಿದ ತತ್ಕುಮಾರಪದಪದ್ಮಮನೊಪ್ಪುವ ಲಕ್ಷ್ಮಿ ಕಂಡು ತ
ನ್ನರಸನ ಚಿಹ್ನಮಿರ್ದುದಜಿನಾತನುಮಿಲ್ಲಿಗೆ ಬರ್ಪನಿಂತಿದೆ
ನ್ನರಮನೆಯೆಂಬ ಮೋಹವಶದಿಂ ಬಿಡದಲ್ಲಿರುತಿರ್ಪಳಾವಗಂ ೬೩

ಚರಣಾಂಗುಷ್ಠನಖಂಗಳಿಂ ನಿಮಿರ್ವ ರೋಚಿಃಕಾಂಡಮೇ ನೇಣ ಮು
ಪ್ಪುರಿಯನ್ನಂ ನಡುವಿರ್ದು ಲಂಬಿಸೆ ಕುಮಾರೋಲ್ಲಾಸಿ ಜಂಘಾಯಗಂ
ಪರಿತಪ್ತೋತ್ತಮಕಾಂಚನಾಭಿರಚಿತಸ್ತಂಭದ್ವಯಾಕಾರಮಂ
ಧರಿಸಲ್ ತೋಱಿದುದಂದು ಲಕ್ಷ್ಮಿ ನಲಿಯುತ್ತಿರ್ಪುಯ್ಯಲೆಂಬಂದದಿಂ ೬೪

ಸಕಳಜಗಜ್ಜನಂಗಳ ವಿಳೋಚನಮುಂ ಮನಮುಂ ದಲೆಂಬ ಶೌಂ
ಡಕಿತ ಮಹಾಗಜಂಗಳೆರಡಂ ನೆಱೆಕಟ್ಟುವುದಕ್ಕೆ ಮಾಡಿದ
ಪ್ರಕಟಿಸುವರ್ಣದಿಂ ಸಮೆದ ಚೆಲ್ವಮಳ್ಗಂಬಮಿಂದೆಂಬಿನಂ ಯುವಾ
ಧಿಕನವರೋರುಗಳ್ ಬಿಡದೆ ಮಾಳ್ಪವು ನೋಳ್ಪರ ಕಣ್ಗೆ ಹಬ್ಬಮಂ ೬೫

ಅತಿಶಯರಾಜಸಿಂಹಮೆನೆ ತಜ್ಜಿನರಾಜಕುಮಾರಸಿಂಹನುಂ
ನುತಪರಿವೃತ್ತಪೀವರವಿಶಾಲಸುರಮ್ಯಕಟೀತಟಂಗಳಂ
ನುತತರಮಾಗಿ ತಾಳ್ದಿದನದಲ್ಲದೊಡೆಂತು ದುರಂತಕರ್ಮಮಂ
ಬತಿಬಳಕುಂಜರಂ ಕೆಡುವುದಾತನ ದರ್ಶನದಿಂದಮಾಕ್ಷಣಂ ೬೬

ಕುವರನ ರೂಪಮೆಂಬ ರಸದಿಂದಮೆ ತುಂಬಿದ ನಾಭಿಕೂಪದೊಳ್
ತವಕದೆ ಬಂದು ಮುಳ್ಗಿದುದು ದಾನಸಮುದ್ಧುರ ಧರ್ಮಸಿಂಧುರಂ
ವಿವರಿಸಲಂತುಮಲ್ಲದೊಡೆ ತನ್ಮದಧಾರೆಯ ಪಜ್ಜೆ ತೀರದೊಳ್
ಪ್ರವಿತತ ರೋಮರಾಜಿಲತಿಕಾಚ್ಛಲದಿಂದಮದೆಂತು ಬಂದುದೋ ೬೭

ಬಿಡದಂತಃಪುರಸಾರಸೌಂದರಿ ಲಸಲ್ಲಕ್ಷ್ಮೀಮಹಾದೇವಿ ಬಂ
ದೆಡೆಗೊಂಡಿರ್ದಪಳಿಲ್ಲ ಕಾಪಿನವರಾಗಿರ್ದೊಳ್ಗುಣೌಘಂಗಳಂ
ತೊಡರ್ದೊಂದಾಗಿಯೆ ಕೂಡಿಕೊಂಡು ಪಲವುಂಕಾಲಂ ದಲಿಂತೆಂದು ನೋ
ಳ್ಪಡೆ ವಕ್ಷಸ್ಥಳಮಂ ವಿಶಾಲತರಮಾಗಂಭೋಜಜಂ ಮಾಡಿದಂ ೬೮

ವ: ಇಂತೆಂಬವೊಲಾ ಕುಮಾರನ ಪೇರುರಮಗಲಮಾಗಿ ಮಿಗೆ ಸೊಗಸನವ ಗಯಿಸುತ್ತುಮಿರೆ

ಸಾಸಿರ ನೆತ್ತಿಗಳ್ ಬಿರಿವಿನಂ ನೆಲನಂ ಸಲೆ ಪೊತ್ತುಕೊಂಡು ಸಂ
ಕ್ಲೇಶದಿನಿರ್ಪಹೀಂದ್ರನೆಮಗೇಂ ಸರಿಯಾದಪನೆಂಬ ಗರ್ವದಿಂ
ದಾ ಸುಕುಮಾರ ಬಾಹುಗಳವುನ್ನತಿವೆತ್ತಿರೆ ನಾಣ್ಚಿದಂತೆ ತ
ದ್ವಾಸುಕಿ ಪೋಗಿ ಪೊಕ್ಕುಱೆ ರಸಾತಳಮಂ ಬಿಡದಿರ್ಪನೀಗಳುಂ ೬೯

ಕೆಂದಾವರೆಯಲರ್ಗಳಿವೆಂ
ಬಂದದೆ ಕುವರನ ಕರಂಗಳೊಪ್ಪಮನಾಳ್ದವ
ವಂದಂತುಮಲ್ಲದಿರ್ದೊಡೆ
ಸೌಂದರ ಕಂಕಣಧರಂಗಳೆಂತಾದಪುವೋ ೭೦

ವ: ಮತ್ತಮಾ ಕುಮಾರಶಿರೋಮಣಿಯ

ವರರೇಖಾತ್ರಯದಿಂದೆ ಕೂಡಿ ನೆಱೆ ಬಟ್ಟಿತ್ತಾಗಿ ಚೆಲ್ವಾದ ನು
ಣ್ಗೊರಳಂ ಕಂಡು ವಿಳಾಸದಿಂದೆ ಸರಿಯಾಯ್ತಿಲ್ಲೆಂಬ ಲಜ್ಜಾಭರಾ
ತುರದಿಂದಂದೊಳಗೆಯ್ದಿ ಡಿಳ್ಳಿಸಿ ಜಲಂ ಪೊಕ್ಕಿರ್ದುದಂತಲ್ಲದಿಂ
ದಿರದಾ ಕಂಬು ಸಮುದ್ರದಲ್ಲಿ ನೆಲೆಗೊಂಡಿರ್ಪಂದಮಾವಂದಮೋ ೭೧

ನಿರುಪಮಮಪ್ಪ ತಜ್ಜಿನಕುಮಾರನ ಸನ್ಮುಖಮಂಡಲಕ್ಕೆ ಪೀ
ವರತರಕಾಂತಿಯಿಂದೆ ಸರಿಯಾದಪೆನೆಂಬತಿಪಾಪದಿಂ ಸುಧಾ
ಕರನುಱೆ ಶುಕ್ಲಕುಷ್ಠಧರನಾದವೊಲೊಪ್ಪಿದನಂತುಮಲ್ಲದಂ
ದುರುಕನಕಾಂಶುವಾಗುದಯಿಸಿರ್ದು ದಲೇಂ ಬಿಳಿದಪ್ಪ ಕಾರಣಂ ೭೨

ವ: ಇಂತಖಿಳಜಗಜ್ಜನಹೃದ್ಯನಿರವದ್ಯಸ್ಯಾದ್ವಾದವಿದ್ಯಾವಿಳಾಸಿನಿಯನರ್ತನ ವೃತ್ತಿಗೆ ಮಂಗಮಂಗಳರಂಗಸ್ಥಳಾಯಮಾನಮಾದ ನಿಜಮುಖಕಮಳದಿಂದಾಧರ್ಮನಾಥ ಕುಮಾರಂ ಪೊಸಪೊಸತಾದ ವಿಳಸನಮನಪ್ಪುಕೆಯ್ದುದುಂ

ಆತನ ಮಂಡೆಯಲ್ಲಿ ಮಿಗೆಪುಟ್ಟಿದ ಕುಂತಳಜಾಳಮೆಲ್ಲಮುಂ
ನೂತನಸಾರಸೌರಭಮನುಳ್ಳ ವಿಕಾಸಿತಮಾದ ಪಾವನೀ
ಭೂತಮುಖಾಂಬುಜಾತದೊಳಮೆಯ್ದೆ ಮುಸುಂಕಿತನಾದಮಿಲ್ಲದ
ಖ್ಯಾತಮಧುವ್ರತಪ್ರತತಿಯೆಂಬಿನಮಾಳ್ದುದು ಚೆಲ್ವನಾವಗಂ ೭೩

ಪೊಳೆವಲರ್ಗಣ್ಗಳಂ ಕುವಳಯಂಗಳೆಸಳ್ಗಳಿನೊಳ್ಪುವೆತ್ತ ಪ
ಲ್ಗಳನವನೆಯ್ದೆ ಮೊಲ್ಲೆಯ ಮುಗುಳ್ಗಳಿನಂಘ್ರಿತಳಂಗಳಂ ಸುಕೋ
ಮಳತರಪಲ್ಲವಂಗಳಿನಜಂ ನೆಱೆಮಾಡಿದನೆಂದೊಡಾ ಕುಮಾ
ರಲಲಿತ ಸೌಕುಮಾರ್ಯಗುಣಮಂ ಪೊಗಳಲ್ಕಮಳುಂಬಮಾಗದೇ ೭೪

ವ: ಇಂತು ನೆಗಳ್ತೆಗಂ ಪೊಗಳ್ತೆಗಮಾದ ನಿರತಿಶಯದಿವ್ಯರೂಪವಿಶೇಷದಿಂದಾ ಧರ್ಮನಾಥಕುಮಾರನತಿರಮಣೀಯಭಾವಮನಪ್ಪುಕೆಯ್ವುದುಂ

ಅದು ಶುಭಲಕ್ಷಣಾವಳಿಗಳಾಗರಮಂತದು ಹೊನ್ನ ಬಣ್ಣದಂ
ದದು ಕಡುಚೆಲ್ವಮೆಯ್ವಳಗಿನೇಳ್ಗೆಯ ಬಾಳ್ಕೆ ಮೊದಲುದ್ಧರೂಪಸಂ
ಪದದ ನಿವಾಸಮಾಗಿಮದು ಕೌತುಕಮಂ ಜಗತೀತ್ರಯಕ್ಕೆ ಮಾ
ಳ್ಪುದು ಬಿಡದಾವಗಂ ಚರಮದೇಹದ ಮೆಯ್ಸಿರಿ ಧರ್ಮನಾಥನಾ ೭೫

ಮಳೆಗಂ ಸೋಲದ ಗಾಳಿಗಂ ಸಡಿಲದತ್ಯುಷ್ಣಕ್ಕೆ ಹೆಡ್ಡೈಸದ
ಚ್ಛಳಿಗಂ ಕೋಡದ ಶಸ್ತ್ರಕಂಟಕವಿಷಕ್ಕಂ ತಾನಭೇದ್ಯಂ ದಲಾ
ದಳವಂ ತಾಳ್ದಿದಮೊಪ್ಪುದೋಱದಿನಿತೊಂದಾಶ್ಚರ್ಯಸಾಮರ್ಥ್ಯಮಂ
ತಳೆದಿರ್ದಾ ಚರಮಾಂಗದುನ್ನತಿಯನಿನ್ನೇನೆಂದದಂ ಬಣ್ಣಿಪೆಂ ೭೬

ಸಾರೂಪ್ಯಂ ಸೌರಭಂ ನಿರ್ಮಳತೆ ಶುಭಮಹಾಲಕ್ಷಣಂ ಸ್ವಾದನೀಯಾ
ಕಾರಂ ಸುಕ್ಷೀರಗೌರಾತಿಶಯಿತರುಧಿರತ್ವಂ ಗತಸ್ವೇದಭಾವಾ
ಧಾರತ್ವಂ ಸರ್ವಲೋಕಪ್ರಿಯತರಹಿತವಾದಿತ್ವಮತ್ಯಂತವೀರ್ಯಂ
ಸಾರೀಭೂತೋರುಶೋಭಂ ಚರಮತನುಸಹೋತ್ಪನ್ನಮಿಾ ಪತ್ತುಧರ್ಮಂ ೭೭

ವ: ಅಂತುಮಲ್ಲದೆಯುಂ

ಅತಿಕುಶಲತ್ವದಿಂದೆಱಗಿಯುಂ ಕಡೆದುಂ ಕರುವಿಟ್ಟು ತಿಟ್ಟವಿ
ಟ್ಟತಿಶಯರೂಪಿನೇಳ್ಗೆಗೆ ಸಮಾನತೆಯಂ ಪಡೆಯಲ್ಕೆಬಾರದ
ಪ್ರತಿಮವಿಳಾಸಮಂ ತಳೆದು ಚಾರುಕುಮಾರಕನಂ ನಿತಂಬಿನೀ
ಪ್ರತತಿ ನಿರೀಕ್ಷಿಸುತ್ತುಮೆಳಸಿರ್ದುದು ತೋಳ್ವೆರಗಂ ದಲಾತನ ೭೮

ಭರವಸದಿಂ ಕುಮಾರನ ವಿಳಾಸಮೆ ತೋಳ್ವಲಮಾಗಿ ಮಾಡಿಕೊಂ
ಡರಲಸರಲ್ಗಳಿಂದೆ ಮದನಂ ಬಿಡದೆಚ್ಚಡೆ ತಾಗಿ ನಟ್ಟುವಾ
ತರುಣಿಯರಂ ಶಿರೀಷಕುಸುಮಾಂಗಿಯರಪ್ಪುದಱಿಂದೆ ಮತ್ತಮಾ
ಚರಮಶರೀರನಂ ನಡವು ವಜ್ರಮಯಾಂಗಕನಪ್ಪ ಕಾರಣಂ ೭೯

ಕುವರನ ರೂಪಿನೊಂದು ಬಲದಿಂದಮೆ ಪೆಂಡಿರ ತಂಡಮಂ ಮನೋ
ಭವನರಲಂಬಿನಿಂದ ತಟವುಚ್ಚುವಿನಂ ಬಿಡದೆಚ್ಚನಾ ವಧೂ
ನಿವಹ ಸಹಾಯದಿಂದಮೆಸಲೊಲ್ಲದೆ ಮಾಣ್ದನವಂ ಕುಮಾರನಂ
ಜವದೊಳೆ ಸೋಲ್ವೆನೆಂಬ ಬಗೆಯಿಂದಮದೇಂ ಮದನಂ ವಿವೇಕಿಯೋ ೮೦

ವ: ಮತ್ತಂ

ಸಾರ್ಧ ದ್ವಾದಶಲಕ್ಷವರ್ಷಪರಮಾಯುಃಸಂಖ್ಯೆಯಿಂದೆಯ್ದೆ ಸಂ
ಬದ್ಧಂ ಸದ್ಗುಣರಾಜಿರಾಜಿ ಸಲೆ ನಾಲ್ವತ್ತೈದು ಬಿಲ್ಲುದ್ದದಿಂ
ದಿದ್ಧಂ ಪಾವನಧರ್ಮನಾಥಸುಕುಮಾರೋದಾರಿಕಾಂಗಂ ಸಮಾ
ವಿಧ್ವಸ್ತಾಖಿಳರೋಗಕಂ ಜಗದೊಳಂ ತಾಳ್ದಿತ್ತದಾಶ್ಚರ್ಯಮಂ ೮೧

ವ: ತದನಂತರಂ

ಕಲಿಸುವರಾರೊ ಚಾರುಗತಿಯಂ ಕಳಹಂಸೆಗೆ ರಮ್ಯನಾದಮಂ
ಕಲಿಸುವರಾರೊ ಕೋಗಿಲೆಗೆ ತಾಂಡವಡಂಬರಮಂ ನವಿಲ್ಗೆ ಮೇಣ್
ಕಲಿಸುವರಾರೊ ಮತ್ತೆ ಸಹಜಾಮಳಬೋಧಮಯಂಗೆ ಶಾಸ್ತ್ರಮಂ
ಕಲಿಸುವರಾರೊ ಲೋಕಗುರುವಿಂಗೆ ಕರಂ ಗುರುವಪ್ಪನಾವನೋ ೮೨

ಜಗಮೆಲ್ಲಂ ಕೂಡೆಕೊಂಡಾಡುವಿಮವಿಳಶಾಸ್ತ್ರಾಂಗವಿದ್ಯಾವಿಶೇಷ
ಪ್ರಗುಣಂ ತಾನಾಗಿ ಮತ್ತಂ ಸಕಳವಿವಿಧಶಸ್ತ್ರಾಂಗವಿದ್ಯಾವಿಶೇಷ
ದ್ವಿಗುಣಂ ತಾನಾಗಿ ಮತ್ತಂ ಗಜತುರಗಸಮಾರೋಹವಿದ್ಯಾವಿಶೇಷ
ತ್ರಿಗುಣಂ ತಾನಾಗಿ ಪೆಂಪಂ ತಳೆದನವನಿಯೊಳ್ ಸರ್ವವಿದ್ಯಾಸಮರ್ಥಂ ೮೩

ಸುಚತುಷ್ಷಷ್ಟಿಕಳಾವಿಳಾಸಮಹಿಮಾತಿಪ್ರೌಢಿಮಾಢೌಕಿತೋ
ದ್ವಚನೋಚ್ಚಾರಣಚಾಮರೀಪರಮಸೀಮಾಭೂಮಿಯಪ್ಪಾ ಮಹಾ
ತಿಚಮತ್ಕಾರನ ಮುಂದೆ ಮತ್ತಿನಳಿವಿದ್ಯಾಗರ್ವಿತರ್ ಗರ್ವಮಂ
ಪ್ರಚುರಂ ಸ್ವೇದದ ರೂಪಿನೊಂದುನೆವದಿಂ ಬಿಟ್ಟಿರ್ದರುದ್ದೈನ್ಯದಿಂ ೮೪

ಅಱಿಯದ ವಿದ್ಯೆಗಳ್ ಜಗದೊಳಿಲ್ಲವಱೊಪ್ಪುವ ಗೋಷ್ಠಿಗಳ್ಗೆ ಮೇಣ್
ನೆಱೆಯವು ಪೊತ್ತುಗಳ್ ನಿಜಯಶೋವಿಸರಕ್ಕೆ ಸಮಸ್ತದಿಕ್ಕುಗಳ್
ನೆಱೆಯವು ಸದ್ಗುಣಸ್ತವನದೇಳ್ಗೆಗೆ ಶೇಷನಶೇಷಜಿಹ್ವೆಗಳ್
ನೆಱೆಯವು ತತ್ಕುಮಾರನ ನೆಗಳ್ತೆ ಪೊಗಳ್ತೆಗಳುಂಬಮಾಗದೇ ೮೫

ತಾನೆ ಕಳಾವಿಶೇಷನಿಧಿ ತಾನೆ ವಿವೇಕದ ಚಾಗದಾಗರಂ
ತಾನೆ ಸಮಸ್ತಸೌಖ್ಯನಿಧಿ ತಾನೆ ವಿಶೇಷಿತಚಾರುಯೌವನಂ
ತಾನೆ ಜಗತ್ರಯೈಕಗುರು ತಾನೆ ಜಗತ್ರಿತಯಾಧಿನಾಯಕಂ
ಮಾನ್ಯನುಮೆಂದೊಡಾ ಜನಕುಮಾರನ ಪುಣ್ಯಮನೇನೊ ಬಣ್ಣಿಪೆಂ ೮೬

ವ: ಇಂತಾ ಧರ್ಮನಾಥಕುಮಾರನಲ್ಲಿ ಸಹಜಮಾದ ಮತಿಶ್ರುತಾವಧಿ ಬೋಧಬೀಜದಿಂ ನಿರವಶೇಷಿತಕಳಾಂಕುರಸಂಕುಳಂ ಬಳೆದು ಸಫಳಮಾಗಿರ್ಪುದುಂ

ನಿಜಪಾದಾಕ್ರಾಂತಲೋಕಂ ಕುವಳಯಸುಖದಂ ಪಂಕಜಾತಪ್ರಶೋಷಂ
ತ್ರಿಜಗತ್ಸಂತಾಪನೋದಕ್ಷಮನಮೃತಕರಂ ನೂತನಕ್ಷತ್ರಕಾಂತಂ

ವಿಜಯಂ ಸನ್ಮಾರ್ಗವೃತ್ತಂ ವರಸಕಳಕಳಾಸ್ಫೂರ್ತಿಸಂಪೂರ್ಣಮಾಗಿ
ರ್ದು ಜನಸ್ತುತ್ಯಂ ಕುಮಾರಂ ಶಶಿಯವೊಲೆಸೆದುಂ ಕಪ್ಪುಮಂ ತಾಳ್ದಿತಿಲ್ಲಂ ೮೭

ವ: ಮತ್ತಮಾ ಧನ್ಯನ ತ್ರಿಜಗನ್ಮಾನ್ಯಮೆನಿಪ್ಪವದಾನ್ಯತಾಗುಣಮಂ ಪೊಗಳ್ವಡೆನ್ನಳವಲ್ತು

ಪಾತ್ರಾಪಾತ್ರವಿವೇಕದಿಂ ಜಿನಕುಮಾರಂ ಮಾಳ್ಪ ಸದ್ದಾನಮಂ
ಧಾತ್ರೀಸ್ತುತ್ಯಮನಂದು ಕೇಳ್ದು ಪಿರಿದುಂ ಸೋಲ್ತುಮ್ಮಳಂ ಪೆರ್ಚಿ ತ
ಚ್ಚೇತೋವೃತ್ತಿಯನೆಯ್ದೆ ಬಿಟ್ಟು ಮರನಾಯ್ತಾ ಕಲ್ಪವೃಕ್ಷಂ ಮಹಾ
ಚಿಂತಾರತ್ನಮದಾಯ್ತು ಕಲ್ಲು ಪಶುವಾಯ್ತಾ ಕಾಮಧೇನು ಧ್ರುವಂ ೮೮

ವ: ಮತ್ತಮಾ ಕುಮಾರೋತ್ತಮಂ ನಿರವಧಿಚತುರುದಧಿವನ ನಿಷಣ್ಣಕಿನ್ನರೀ ಜನ ಸಂಗೀಯಮಾನ ಮಾನನೀಯ ವಿಶದತರ ನಿಜಯಶಸ್ತೋಮದಿಂ ಧವಳೀಕೃತನಿಖಿಳ ದಿಕ್ಪಾಳಕನಿಳಯನಪ್ಪುದುಂ

ಕುವರನ ಕೀರ್ತಿಯೆಂಬ ಸತಿ ತನ್ನ ಪತಿವ್ರತಮಂ ಜಗಕ್ಕೆ ತೋ
ಱುವ ಬಗೆಯಿಂದೆ ಮಿಂದು ಸುರಗಂಗೆಯೊಳಂ ಬಲವಂದು ದಿಕ್ಕುಮಾ
ರವರರನೇಳುವಾರಿನಿಧಿಮಂಡಳಮಂ ಕಳಿದೊಲ್ದು ಮುಟ್ಟಿದಳ್
ಜವದೊಳೆ ಕೂಡಿ ವಿಷ್ಣುಪದಮಂ ಧರಣೇಂದ್ರಫಣಾಗ್ರಭಾಗಮಂ ೮೯

ವ: ಮತ್ತಮತ್ಯುಜ್ಜಳ ಪರಿಸ್ಫೂರ್ಜದುರ್ಜಯ ತೇಜೋವಿರಾಜಮಾನನ ಪ್ಪುದುಂ

ಜಿನನತ್ಯುಗ್ರಪ್ರತಾಪಂ ಪಸರಿಸಿ ಜಗದೊಳ್ ತುಂಬೆ ಶೀತಾಂಶುಬಿಂಬಂ
ದಿನಕೃದ್ಬಿಂಬಂಬೊಲಾಯ್ತಾಗಸಮುಮುದಯರಾಗಾಂಕಮೆಂಬಂತಿರಿರ್ದ
ತ್ತನುರಕ್ತಂಬೆತ್ತುದುರ್ವೀತಳಮನಳಕುಮಾರಂಬೊಲಿರ್ದರ್ ದಿನೇಶರ್
ಜನಮೆಲ್ಲಂ ರಾಗಮಂ ತಾಳ್ದಿದುದತಿಶಯದಿಂದುದ್ಯದಾದಿತ್ಯನನ್ನಂ ೯೦

ಪರದುಸ್ಸಹ್ಯಪ್ರತಾಪಂ ಬುಧಗುರುಕವಿ ಸಂಸೇವ್ಯಮಾನಂ ವಿನೀಲಾಂ
ಬರರಮ್ಯಂ ಲೋಕಮಿತ್ರಂ ಬಹಳತರತಮೋನಾಶನಪ್ರೌಢಿದಕ್ಷಂ
ಕರದಿಗ್ವ್ಯಾಪ್ತಂ ಸಮುದ್ಯತ್ತರುಣತರಣಿಯೆಂಬಂದದಿಂ ಧರ್ಮನಾಥಂ
ವರಪದ್ಮಾನಂದಮಂ ದಲ್ ಭುವದೊಳನಿಶಂ ಪೆರ್ಚಿಸುತ್ತಿರ್ದನಾದಂ ೯೧

ವ: ಇಂತತೀವಪ್ರತಾಪಪ್ರಭಾವದಿಂ ಪ್ರವಿಭಾಸನಮನಪ್ಪುಕೆಯ್ವುದುಂ

ಒಡನೊಡನಾ ಕುಮಾರಕನ ಬೆಂಬಳಿಯೊಳ್ ಮಿಗೆ ಪಿಂದುಗೊಂಡು ಸಂ
ಗಡದೊಳೆ ಕೂಡಿಬಂದರಧಿರಾಜಕುಮಾರಕರಂದನೇಕರುಂ
ತಡೆಯದೆ ತಾರಕಾವಿತತಿಗಳ್ ಧ್ರುವತಾರೆಯ ಪಿಂದೆ ಬರ್ಪವೊಲ್
ಬಿಡದೆ ವಿನಿರ್ಮಲಾಂಬರದೊಳೊಪ್ಪಿರೆ ತಮ್ಮಯ ಕಾಯಕಾಂತಿಗಳ್ ೯೨

ವ: ಮತ್ತಂ ಪರಿವಾರಿಕರಾದ ದಿವಿಜಕುಮಾರಕರತೀವವೈಕುರ್ವಣವಿಕ್ರಿಯಾವಿಭವ ದಿಂದುದಯಿಸಿದನೇಕವಿಧರೂಪ ಭಾಷಾವೇಷಾದಿ ವಿನೋದಂಗಳಿಂ ದಾಡಿಯುಂ ಪಾಡಿಯುಮೋದಿಯುಂ ಬಗೆದ ವಾಹನಂಗಳಾಗಿಯೊಡಂಬಡುವೆಡೆಗೆ ಕೊಂಡು ಪೋಗಿಯುಮಾ ಜಿನಕುಮಾರಕನಿಚ್ಚೆಯಱಿದು ಒಲ್ಲೈಸಿ ಮೆಚ್ಚಿಸುತ್ತುಮಿರೆ

ಕೆಲರುರಿಲಿಂಗಮಾಗಿ ಕಡಲಂ ಕಡವಂತೆಯೊಲಾಗಿ ಕಾಳದೊಳ್
ಕಲಸಿದ ಜೊನ್ನವಾಗಿ ಪಗಲೊಳ್ ತಡವಾಗಿರುಳಾಗಿ ತೋಱಿದರ್
ಕೆಲರುಱಿಮಲ್ಲರಾಗಿ ಪೊಣರ್ದರ್ ಕೆಲರುಂ ತಗರಾಗಿ ಕಾದಿದರ್
ಕೆಲರಿಭರೂಪರಾಗಿ ಮೊಗವಿಕ್ಕಿದರಾತನ ಮುಂದೆ ಚೋದ್ಯದಿಂ ೯೩

ಗಿಳಿಗಳ ರೂಪಂ ಕೈಗೊಂ
ಡೆಳಸುಪಿನಂ ಕಾವ್ಯಭರತನಾಟಕಶಾಸ್ತ್ರಂ
ಗಳನೋದಿ ಕುವರನಂ ಬಗೆ
ಗೊಳಿಸಿದರಾ ಸುರಕುಮಾರರತಿಕೌತುಕದಿಂ ೯೪

ವ: ಅಂತುಮಲ್ಲದೆಯುಂ

ಮಿಗುವ ವಿನೋದವಿದ್ಯೆಗಳಿನಾ ಸುಕುಮಾರನನೆಯ್ದೆ ಮೆಚ್ಚಿಸಲ್
ಬಗೆದು ಕೆಲಂಬರೋಲಗಿಪ ದೇವಕುಮಾರರಂದು ತೋಱಿ ತ
ಜ್ಜಗದೊಳತೀವವಿಸ್ಮಯಮನಾಗಿಪ ಚಾರುಮಹೇಂದ್ರಜಾಲಮುಂ
ನಗಿಸಿದರಾತನಂ ಕೆಲಬರೊಪ್ಪುವನೇಕವಿಕಾರವೇಷದಿಂ ೯೫

ವ: ಇಂತು ಪಲವುತೆಱದ ಲೀಲಾವಿನೋದಂಗಳಿಂ ಪೊತ್ತಂ ಕಳಿವುತ್ತುಮಭಿನವಯೌವನಾವಸ್ಥೆಯನಪ್ಪುಕೆಯ್ವುದುಂ

ದಶವಿಧಬೋಗಂಗಳನಂ
ದೊಸೆದನುಭವಿಸುತ್ತುಮಿರ್ದನಾ ಸುಕುಮಾರಂ
ಪೊಸಪರಿಮಳಂಗಳಂ ಸಂ
ತಸದಿಂ ಮಱಿದುಂಬಿ ಬಿಡದೆ ಸೇವಿಪ ತೆಱದಿಂ ೯೬

ಅತಿಚಿತ್ರಂಬೆತ್ತ ನಾನಾಪರಿಪರಿಯ ಸಮುವಸ್ತ್ರಂಗಳಂ ನೂತ್ನರತ್ನ
ಪ್ರತತಿವ್ಯಾಕೀಲಿತಾಲಂಕರಣತತಿಗಳಂ ಪುಷ್ಪಮಾಲ್ಯಂಗಳಂ ವಿ
ಸ್ಪೃತ ಸೌರಭ್ಯಾನುಲೇಪಂಗಳವನತಿಶಯದಿವ್ಯಾನ್ನಪಾನಂಗಳಂ ರಾ
ಜಿತಹಂಸೀತೂಳತಲ್ಪಂಗಳನಿವು ಮೊದಲಾಗಿರ್ದ ಸದ್ವಸ್ತುಗಳಿಂ ೯೭

ಕೊಡುವುದು ಕಲ್ಪವೃಕ್ಷಮದು ಕೊಟ್ಟವನೋಲಗಿಪಂ ಪುರಂದರಂ
ತೊಡಿಸುವರಂದವಂ ಕುಶಲದೇವಿಯರೊಳ್ದೆಳಸುತ್ತುಮಿರ್ಪರಿಂ

ತೆಡೆವಿಡದಾವಗಂ ಪರಮಭೋಗವಿಭೂತಿಯನೆಯ್ದೆತಾಳ್ದಿದಂ
ತಡೆಯದೆ ಧರ್ಮನಾಥನನವದ್ಯಮನೋಹರವಾದಿವಸ್ತುವಿಂ ೯೮

ವ: ಇಂತಾ ಧರ್ಮನಾಥಕುಮಾರಂ ಕುಮಾರಕಾಲದೊಳನೇಕಪ್ರಕಾರ ಮಜ್ಜನಭೋಜನಾದಿ ಭೋಗೋಪಭೋಗಾನುಭವವಿಭವಮನಪ್ಪುಕೆಯ್ದು ಸುಖದಿನಿರು ತ್ತುಮಿರೆ

ಪರಮಕುಮಾರನಂ ದಿವಿಜನಾಯಕನುತ್ತಮಭಕ್ತಿಯಿಂ ಸುರಾ
ಸುರ ನಿಕುರುಂಬಕಂ ಬೆರಸಿಬಂದಭಿಪೂಜಿಸುವಂ ತ್ರಿಕಾಲದೊಳ್
ಪಿರಿದುಮನರ್ಘ್ಯವಸ್ತು ದೊರೆಕೊಂಡೊಡದಂ ಘನಯತ್ನದಿಂದಮಾ
ದರಿಸಿ ವಿಚಕ್ಷಣಂ ಪ್ರತಿದಿನಂ ಪರಿರಕ್ಷಿಸದಿರ್ಪನಾವನೋ ೯೯

ವ: ಮತ್ತಮಾ ಧರ್ಮನಾಥಕುಮಾರಂ ಮುನ್ನಮೆ ಲೋಕತ್ರಯೈಕ ಸ್ವಾಮಿಯಪ್ಪುದನಱಿದಿರ್ದೊಡಮಾ ಮಹಾಸೇನಮಹಾರಾಜಂ ನಿಜತನೂಜನೆಂಬೀ ಮಂದೆವಳದಿಂದೊಂದಿದ ಮೋಹನೀಯೋದ್ರೇಕ ಪರಿಪಾಕದಿಂ ಮೂಱುಂಲೋಕಕ್ಕತೀವ ಕೌತುಕಮಪ್ಪಂತಿರೆ ಯುವರಾಜಪಟ್ಟಬದ್ಧಮಂಗಳೋತ್ಸವಕರಣಮುಖದಿಂ ತನ್ನಯ ಸಂಪನ್ನತಾ ಪ್ರಭಾವಮನಿಮ್ಮಡಿಯಾಗಿ ಪ್ರಕಟೀಕರಿಸಲ್ವೇಡಿ ಮಹಾಮಹಿಮೆವೆತ್ತ ವಿಭೂತಿಯಿಂದಾ ಕುಮಾರವರಂಗೆ ಯುವರಾಜಪಟ್ಟಮಂ ಕಟ್ಟುವುದುಂ

ಮಂಗಳಗೀತಮಂ ಬಿಡದೆ ಪಾಡುವ ಮಂಗಳಗದ್ಯಪದ್ಯಮಂ
ಪಿಂಗದೆಯೋದುತಿರ್ಪ ಬಿಡುಮುತ್ತಿನ ಸೇಸೆಯನಿಕ್ಕುವೋಳಿಯಿಂ
ಮಂಗಳನಾಟ್ಯಮಂ ಮುದದಿನಾಡುವ ಮಂಗಳಹೃದ್ಯವಾದ್ಯಮಂ
ಸಂಗಡದಿಂದೆ ಬಾಜಿಸುವ ಸಂಭ್ರಮಮಾಕ್ಷಣಮುಣ್ಮಿತೆತ್ತಲುಂ ೧೦೦

ಪರಸುವ ಕಾಣಿಕೆಯಿಕ್ಕುವ
ಭರದಿಂ ಪೊಡವಡುವ ಬಿನ್ನಹಂ ಮಾಡುವ ಬಂ
ಧುರಸಂಭ್ರಮಕೋಳಾಹಳ
ಮುರವಣಿಸಿತ್ತಾ ನೃಪಾಳಮಣಿಮಂಡಪದೊಳ್ ೧೦೧

ಆಹಾರಾಭಯಶಾಸ್ತ್ರಭೇಷಜ ಮಹಾದಾನಂಗಳಂ ಮಾಳ್ಪ ಚೇ
ತೋಹಾರಿಸ್ತವನೀಯಭೂರಿಜಿನಪೂಜೋತ್ಸಾಹಮಂ ಮಾಳ್ಪ ಸ
ದ್ವ್ಯಾಹಾರಂಗಳಿನೆಲ್ಲರುಂ ಕುವರನಂ ಕೊಂಡಾಡುವುದ್ಯೋಗದಿಂ
ಗೇಹಂ ಪತ್ತನಮುಂ ಮಹಾಮಹಿಮೆಯಂ ತಾಳ್ದಿತ್ತದಾಶ್ಚರ್ಯಮಂ ೧೦೨

ಯಾಚಕಕೋಟಿಗಳ್ ಬಿಡದೆ ಬೇಡಿದುದಂ ತಡಪಿಲ್ಲದೀವ ಕಾ
ಲೋಚಿತದಲ್ಲಿ ಕಲ್ಪತರುವೆಂಬಭಿಶಂಕೆಯನುಂಟುಮಾಡಿದಂ

ಶ್ರೀಚರಿತಂ ತದೀಯಜನಕಂಗೆ ವಿಶೇಷಿತಚಿತ್ರಪತ್ರಕಂ
ಸೂಚಿತವಿಕ್ರಮಂ ಬಹುಳಮೂಲಬಳಾನ್ವಿತನಾದಕಾರಣಂ ೧೦೩

ವ: ಇಂತು ಯುವರಾಜರಾಜ್ಯಾಭಿಷೇಕಪುರಸ್ಸರಂ ಪ್ರಾಜ್ಯಪ್ರಭಾವನಾ ವಿಶೇಷದಿಂದಾ ಧರ್ಮನಾಥಕುಮಾರಂಗೆ ತಂದೆಯಪ್ಪ ಮಹಾಸೇನಮಹಾರಾಜಂ ಯುವರಾಜ ಪಟ್ಟಮಂ ಕಟ್ಟಿ ನಿರಂತರಿತಸಂತೋಷದಂತಮನೆಯ್ದಿ ಸುಖದಿನಿರ್ಪುದುಂ

ಮತ್ತಮನಂಸಂತತಿವಿವರ್ಧನಕಾರಣಮಾಗಿ ತಂದೆತಾ
ಯ್ಗಳ್ಗರಿತಂ ದಲಾ ಜನಕುಮಾರವರಂಗೆ ವಿವಾಹಕಾರ್ಯಮಂ
ಚಿತ್ತರದಿಂದೆ ಮಾಳ್ಪ ಬಗೆಯಂ ಬಗೆದಿರ್ದವರಂದು ಕೇಳಿದರ್
ತತ್ತನುಜಾತನಂ ಬಿಡದೊಡಂಬಡಿಸುತ್ತುಮನೂನಮೋಹದಿಂ ೧೦೪

ವ: ಇಂತೆಂತಾನುಮೊಡಂಬಡಿಸಿ ವಿವಾಹಕಲ್ಯಾಣಮನಾತಂಗೆ ಮಾಳ್ಪು ಜ್ಜುಗದಿಂ ತದ್ಯೋಗ್ಯಕನ್ಯಾನ್ವೇಷಣಪರಾಯಣರಾದ ಮಹಾಸೇನಮಹಾರಾಜನುಂ ಸುವ್ರತಾ ಮಹಾದೇವಿಯುಂ ಧರ್ಮನಾಥಕುಮಾರನಂ ನೋಡಿ ಪರಮಾನಂದಸಂದೋಹ ದೊಳೊಂದುತ್ತುಂ ತ್ಯಾಗಭೋಗಮನಪ್ಪುಕೆಯ್ದು ಸುಖದಿನಿರುತ್ತುಮಿರೆ

ಕುವರಂ ಧರ್ಮಪ್ರಭಾವಸ್ಥಿತಿಯನೆ ಜಗದೊಳ್ ಪೆರ್ಚಿಸುತ್ತಿರ್ದನಾದಂ
ಸುವಿಶೇಷಾಶೇಷವಿದ್ಯಾಜಯನಿಧಿ ವಿಧುಬಿಂಬಾಯಮಾನಂ ಸದಾನಂ
ಪ್ರವರಾಚಾರೋದ್ಧುರಂ ಬಾಹುಬಲಿಸುಕವಿರಾಜಂ ರವಿಸ್ಫಾರತೇಜಂ
ಭುವನಸ್ತುತ್ಯಂ ಪ್ರಸತ್ಯಂ ನತಬುಧನಿವಹಂ ಚಾತುರೀಜನ್ಮಗೇಹಂ ೧೦೫

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮ ಜಿನಸಮಯ ಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವಪ್ರಸಾದ ಸಂಪಾದಪಾದನಿಧಾನದೀಪವರ್ತಿಯುಭಯಭಾಷಾ ಕವಿಚಕ್ರವರ್ತಿ ಬಾಹುಬಲಿ ಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಧರ್ಮತೀರ್ಥಂಕರನ ಬಾಲಕ್ರೀಡಾವಿನೋದಪರಿವ್ಯಾವರ್ಣನಂ ನವಮಾಶ್ವಾಸಂ.

ದಶಮಾಶ್ವಾಸಂ

ಶ್ರೀಮಜ್ಜಿನಧರ್ಮಮನಾ
ಸೋಮಯಶಂ ಪ್ರಕಟಿಸುತ್ತುಮಿರ್ದಂ ಪುದಿಯಲ್
ಪ್ರೇಮೋತ್ಕಟರಸಪಿಶುನಂ
ರೋಮಾಂಚಂ ಸರಸಚತುರಕವಿಕುಳತಿಳಕಂ ೧

ವ: ಮತ್ತಮಾ ಧರ್ಮನಾಥಕುಮಾರನೊಂದುದಿವಸಂ ವಿಕೀರ್ಣನಾನಾವರ್ಣಪರಿವರ್ಣ್ಯಮಾನ ರಮಣೀಯಮಾಣಿಕ್ಯಮಯಂ ಪೂರ್ಣಕಳಶಕಳಾಪಚೂಳಿಕಾಭಾಗಂಗಳಿಂ ಚೋಚುಂಬ್ಯಮಾನಾಂಬರತಳಮೆನಿಪ್ಪನೇಕಜಾತೀಯಚತುರರಚನಾವಿಶೇಷಾತಿಶಯದಿಂದಶೇಷಜನಕ್ಕಾಶ್ಚರ್ಯಕಾರಿಯಾಗಿ ಪುಟಮಿಕ್ಕಿ ಮಿಱುಗುವ ಕಡೆಯಾಣೆಯ ಮಿಸುನಿಯಿಂ ಸಮೆದು ಥಳಥಳಿಸಿ ಪೊಳೆವ ನೆಲೆಮಾಡದ ಮೇಲೆ ಮಂಡಳಿಕ ದಂಡನಾಥ ಸಾಮಂತ ಸೇನಾನಾಯಕ ಪ್ರಧಾನಪಸಾಯಿತರ್ ಮುಖ್ಯಮಾದಖಿಳಪರಿವಾರಂಬೆರಸು ಸರ್ವಾವಸರಸಮಯಮಾಗಿ ಒಡ್ಡೋಲಗಂಗೊಟ್ಟು ಲೀಲೆಯಿಂದಿರ್ಪುದುಂ

ತಂದೆಯುಮಾ ಸಭೆಗಾಗಳ್
ಬಂದುಚಿತಸ್ಥಾನದಲ್ಲಿ ಕುಳ್ಳಿರ್ದು ಮಹಾ
ನಂದಮನೆಯ್ದುತ್ತಿರ್ದಂ
ನಂದನನಂ ನೋಡಿನೋಡಿ ಕಣ್ತಣಿವಿನೆಗಂ ೨

ವ: ತದನಂತರಂ

ಸಕಳನೃಪಾಳಮೌಳಿಮಣಿರಂಜಿತಪಾದನ ತತ್ಸಭಾಪ್ರವೇ
ದಿಕೆಗತಿವೇಗದಿಂ ಧವಳಲಂಬಿತಕೂರ್ಚಧರಂ ಸುಶುಭ್ರಕಂ
ಚುಕ ಪರಿಶೋಭಿತಂ ಪೃಥುಳಕುಕ್ಷಿತಳಂ ಧೃತಚಿತ್ರವೇತ್ರಯ
ಷ್ಟಿಕನಿರದೆಯ್ದಿಬಂದನುಱೆ ದೂತನದೊರ್ವನುಪಾತ್ತಲೇಖನಂ ೩

ವ: ಇಂತು ಪಿರಿದುಮನರ್ಘ್ಯಂಗಳಾದ ಪಾಗುಡಂಗಳಂ ಕೊಂಡುಬಂದು ಪ್ರಥಮ ರಾಜದ್ವಾರೋಪಾಂತದೊಳ್‌ನಿಂದ ದೂರದೇಶಾಯಾತದೂತನಂ ಕಂಡು ಪ್ರತಿಹಾರಕಂ

ಪೋಗಿ ತದಾಗಮನವಾರ್ತೆಯನರಸಂಗೆ ಬಿನ್ನಪಂಗೆಯ್ಯೆ ಬರವೇಳೆಂಬು ದುಮಾ ದೂತಂ ಪೋಗಿ ಸಭಾಸದನದೊಳಗಂ ಪೊಕ್ಕು ನಿರ್ಭರಭಕ್ತಿಯಿಂದೀರ್ವರ್ಗಂ ಸಾಷ್ಟಾಂಗವೆಱಗಿ ಪೊಡವಂಟು ಭೂಪತಿ ಭ್ರೂಭಂಗಚ್ಛದಪರಿಸಂಜ್ಞಿತಮಪ್ಪ ತದುಚಿತಮಾದ ಮುಂದಣ ಬಲದ ಕೆಲದ ಸ್ಥಾನದೊಳ್ ಕುಳ್ಳಿದಿರಲಾ ದೂತನ ಮೊಗಮಂ ಭೂತಳಾಧಿಪತಿ ನೋಡಿ ನೀಂ ಬಂದ ಕಾರಣಮೇನೆಂಬುದುಮಾತಂ ತನ್ನುತ್ತರೀಯಾಂಚಳ ಮನಧರಪಲ್ಲವಸಮೀಪಕ್ಕೆ ತಂದು ಬಿನ್ನಪಮೊಂದಿಂತೆಂದಂ

ಪುಷ್ಟಿವಿದರ್ಭದೇಶದೊಡೆಯಂ ಕುರುವಂಶವರಪ್ರತಾಪರಾ
ಜಾಷ್ಟಿಕಮುದ್ಧಕುಂಡಿನಪುರಾಧಿಪನಪ್ಪ ನರಾಧಿನಾಯಕಂ
ಸೌಷ್ಟವ ಜನ್ಮಭೂಮಿಯೆನಿಸಿರ್ದ ಜೀ ತನ್ನ ಕುಮಾರಿಕಾಮಹಾ
ಪುಷ್ಟಿತರ ಸ್ವಯಂಬರದೆ ನಿಮ್ಮ ಸುತಾನಯನಾರ್ಥಮಟ್ಟಿದಂ ೪

ವ: ಇಂತೆಂದು ಬಿನ್ನಪಂಗೆಯ್ದನಂತರಂ

ತಾಂ ತಂದ ಪಾಗುಡಂಗಳ
ಸಂತತಿಯಂ ಕಾಣ್ಕೆಯಾಗಿ ಕೊಟ್ಟ ಬಳಿಕ್ಕಂ
ಸಂತೋಷಕಾರ್ಯಪರಿವೃ
ತ್ತಾಂತದಲೇಖಾರ್ಥಮೊಂದನಾತಂಗಿತ್ತಂ ೫

ಓದಿದನಂದೋಲೆಯನಿಂ
ತಾದರದಿಂದೊರ್ವ ಸೇನಬೋವಂ ಮಿಗೆಸಂ
ಪಾದಿಸುತುಂ ಕಿವಿಗಳ್ಗತಿ
ಮೇದುರಪೀಯೂಷವರ್ಷಮಂ ಭರದಿಂದಂ ೬

ವ: ಸ್ವಸ್ತಿ ಶ್ರೀಮನ್ಮಹಾಸೇನಮಹಾರಾಜಂ ತನ್ನಯ ಧರ್ಮನಾಥಕುಮಾರನನೆನ್ನ ಕುಮಾರಿ ಶೃಂಗಾರವತೀದೇವಿಯ ಸ್ವಯಂಬರವಿವಾಹಕಲ್ಯಾಣೋತ್ಸಾಹಕ್ಕೆ ಬೇಗಂ ಕಳಿಪುವು ದೆಂದೋದುವುದುಮದಂ ಕೇಳ್ದು ಸಭಾಜನಮೆಲ್ಲಂ ನಿರಂತರಿತಸಂತೋಷಭಾಜನ ಮಾಗಿ ಲೇಸುಲೇಸೆಂದು ಮಿಗೆ ಪೊಗಳ್ದು ಕೊಂಡಾಡುತ್ತುಮಿರ್ಪನ್ನೆಗಮಾ ದೂತಂ

ಪಡಿಯಂ ತೋಱಿಪಡಿಲ್ಲದ
ಕಡುಚೆಲ್ವವಿಳಾಸದಿಂದೆ ಮನ್ಮಥನಂ ಕೈ
ಮಡಗದೆ ಗೆಲ್ದ ಕುಮಾರನ
ನಡಿಗಡಿಗಂ ನೋಡಿ ಬಗೆದು ವರಸಾದೃಶಮಂ ೭

ವ: ಸಮನಂತರಮೀ ಕುಮಾರಂಗಾ ಕನ್ಯಾರತ್ನಮನುರೂಪಮೆಂಬಿದಂ ಸಭೆಗಂ ಸಭಾಪತಿಗಂ ತೋಱಿಸಲ್ವೇಡಿ

ಆಕೆಯ ರೂಪಿನೊಂದು ಸುಭಗಾಕೃತಿ ನೋಳ್ಪಡಮೆಂತುಟಂತೆ ನಾ
ನಾಕುಶಲತ್ವಮೊಂದಿರಲದಂ ಪಟದೊಳ್ ಬರೆದು ಪ್ರಯತ್ನದಿಂ
ದೊಯ್ಯನೆ ಕೊಂಡುಬಂದು ಧರಣೀಪರಿಪಾಲನ ಮುಂದೆ ತೋ ೖದಂ
ಲೋಕಮನಃಪ್ರಲುಂಟನ ವಿಲಂಪಟಮಂ ಪಟಮಂ ವಿಚಿತ್ರಮಂ ೮

ವ: ಆಕ್ಷಣಮಲ್ಲಲ್ಲಿಗುಚಿತಮಾಗಿ ಚಂಚತ್ಪಂಚವರ್ಣಕ್ರಮದಿಂದಂ ಬಣ್ಣ ಮಿಟ್ಟು ಮಿಱುಮಿಱುಮಿಂಚುವ ನಾನಾಪ್ರಕಾರ ತುಂಗಮಣಿಮಯಶೃಂಗಾರಭಂಗಿಯಿಂ ಬೆಡಂಗು ವಡೆದು ಥಳಥಳಿಸಿ ಪೊಳೆಯುತ್ತುಮಿರ್ಪರ ಸಚಿತ್ರಭಾವಚಿತ್ರದಿಂ ವಿಚಿತ್ರಚಿತ್ತ ಭಾವಿ ಸ್ವಯಂವರ ವಿವಾಹಕಲ್ಯಾಣಕ್ಕೆ ಯೋಗ್ಯಳಾದ ಶೃಂಗಾರವತೀದೇವಿಯೆಂಬ ನೂತ್ನ ತರಕನ್ಯಕಾರತ್ನದ ರೂಪಚಿತ್ರಮಂ ಪಟಪರಿಲಿಖಿತಮಂ ಕಂಡು ಮನದೆಗೊಂಡು ಸಭೆಯುಂ ಸಭಾಪತಿಯುಂ ಬೆಕ್ಕಸಂಬೆಱಗಾಗಿ ಚಿತ್ತದೊಳ್ ಕೌತೂಹಳಂ ಕೈಮಿಕ್ಕು ಪೆರ್ಚುತುಮಿರೆ ಚಿತ್ರಮಯಕನ್ಯಕಾಪ್ರತಿಬಿಂಬರೂಪುಮಂ ನೋಡಿನೋಡಿ ಮುನ್ನೆಂದುಮಿಂತಪ್ಪ ವಿಸ್ಮಾಪಕ ರೂಪಮಂ ಸ್ವಪ್ನದೊಳಾದೊಡಂ ಕಂಡುದಿಲ್ಲೆಂದು ನಾಡೆಯುಂ ಕೊಂಡಾಡುತ್ತುಮಿರ್ದ ಮೂರ್ಧಾಭಿಷಿಕ್ತಂ ಕೆಲದೊಳ್ ಬರೆದಿರ್ದುದೊಂದು ನಿರವದ್ಯಮಾದ ಹೃದ್ಯಮಯ ಪದ್ಯಮಂ ಕಂಡು

ಈಕೆಯ ರೂಪನಿರ್ದಪರಿಯಿಂ ಬರೆವನ್ನನದೊರ್ಬನುಂ ಮಹೀ
ಲೋಕದೊಳಿಲ್ಲ ಕೌಶಲವಿರಿಂಚನನಾದೊಡಮೀ ಘುಣಾಕ್ಷರ
ಪ್ರಾಕಟದಂದದಿಂ ಸಮೆದ ವಿಸ್ಮಯಕಾರಕಮಂ ತದೀಯ
ರೂಪಾಕೃತಿಯಂ ವಿನಿರ್ಮಿಸುವ ಪೊತ್ತಿನೊಳೆಯ್ದೆವಿಮೋಹಿಪಂ ಜಡಂ ೯

ಎಂತಕ್ಕೆಂತಕೆ ದೈವ್ವಯೋಗವಶದಿಂದಂ ಜಾಣನೊರ್ವಂ ಕಳಾ
ವಂತಂ ನೂರ್ಮಡಿಯಾದ ರೂಪಕಳೆಯಲ್ಲೊಂದಂದಮಂ ಕೊಂಡು ಮ
ತ್ತೆಂತುಂ ತತ್ಪ್ರತಿರೂಪಮಂ ಬರೆದನೆಲ್ಲಾ ಚೆಲ್ವಿನಂಶಂಗಳುಂ
ಚಿಂತಾಗೋಚರಿಗಳ್ ಸಮಂತು ಬರೆಯಲ್ಕೇಂ ಮೊಗ್ಗೆ ತತ್ಕಾಂತೆಯಾ ೧೦

ಇಂತೆಂದೋದುವುದುಂ ಸಭಾಜನಮದೆಲ್ಲಂ ಕೇಳ್ದು ಕೊಂಡಾಡುತುಂ
ಸಂತೋಷಂ ಮಿಗೆ ಮೆಚ್ಚಿಮೆಚ್ಚಿ ತಲೆಯಂ ತೂಗುತ್ತುಮಿರ್ದತ್ತು ಭೂ
ಕಾಂತಂ ವಿಸ್ಮಿತಚಿತ್ತನಾಗಿ ಮಗನೊಂದಾಶ್ಚರ್ಯಸೌಂದರ್ಯಮಂ
ಕಾಂತಾರತ್ನದ ಚೆಲ್ವರೂಪಕಳೆಯಂ ನೋಡುತ್ತುಮಂತಿರ್ಪುದುಂ ೧೧

ವ: ಮತ್ತಮಾ ಮಹೀಕಾಂತಂ ದುರಂತತಮಚಿಂತಾಪರವಶೀಭೂತಸ್ವಾಂತನಾಗಿ ತನ್ನೊಳಿಂತೆಂದಂ

ಎಲ್ಲಿಯದೀ ಸ್ತ್ರೀರತ್ನಮಿ
ದೆಲ್ಲಿಯನೀ ಚರಮದೇಹಧಾರಿಕುಮಾರಂ

ದುರ್ಲಭಮೀ ಸಂಬಂಧಂ
ತಲ್ಲಜಪುಣ್ಯಂಗೆ ಲೋಕದಲ್ಲಿರದುಂಟೇ ೧೨

ವ: ಮತ್ತಮಾ ನರೋತ್ತಮಂ ತನ್ನಿಕ್ಕೆಲದೊಳೆತ್ತಲುಂ ಮೊತ್ತಂಗೊಂಡು ಕುಳ್ಳಿರ್ದ ಕ್ಷತ್ರಿಯ ಕುಮಾರಕರ ನಗೆಮೊಗಂಗಳಂ ನೋಡುತ್ತುಮವರೊಡನಿಂತೆಂದು ನುಡಿದಂ

ಕುಲಮುಂ ಜವ್ವನಮುಂ ಮಹಾವಿಭವಮುಂ ಸತ್ಕೀರ್ತಿಯುಂ ಜಾಣ್ಮೆಯುಂ
ಛಲಮುಂ ಶೀಲಮುಮೆಂಬಿವಲ್ಲಿ ನೆಲಸಿರ್ದೀಕಾರಣಂ ಯೋಗ್ಯತಾ
ಕಳಿತಸ್ಥಾನಮದಾಯ್ತು ಕೊಳ್ಳೊಡೆಗೆ ಲೀಲಾಮಾತ್ರದಿಂ ಧಾರಿಣೀ
ತಳದೊಳ್ ದುರ್ಘಟಕಾರ್ಯಮುಂ ಘಟಿಸುಗುಂ ಪುಣ್ಯಪ್ರಭಾವಂಗಳಿಂ ೧೩

ಎನ್ನ ಕುಮಾರನಲ್ಲದುಳಿದನ್ಯಕುಮಾರಕರಿಂಗೆ ಮಾಲೆಯಂ
ಕನ್ಯಕೆ ತತ್ಸ್ವಯಂಬರದೊಳಿಕ್ಕಳದೆಂದತಿಚಾರುಕೌಮುದೀ
ಪೂರ್ಣನ್ನತಚಂದ್ರನಂ ಬಿಸುಟು ತಾರೆಗಳಂ ಸಲೆ ಪೊರ್ದದೆಲ್ಲಿಯುಂ
ಮಾನ್ಯರತೀವಮಾನ್ಯರುಮನಲ್ಲದೆ ಪೊರ್ದರಿಳಾತಳಾಗ್ರದೊಳ್ ೧೪

ವ: ಇಂತು ನಿರಂತರಿತಸಂತೋಷಮನೆಯ್ದಿ ನುಡಿಯುತ್ತುಮಿರ್ದ ಮೂರ್ಧಾಭಿಷಿಕ್ತಂ ತನ್ನಯ ಮಗನಪ್ಪ ಧರ್ಮನಾಥಕುಮಾರನ ಪ್ರಸನ್ನವದನಾರವಿಂದಮಂ ನೋಳ್ಪಾಗಳ್

ಅತಿರಮಣೀಯಮಾಗಿ ಪಟದೊಳ್ ಬರೆದಿರ್ದ ನೃಪಾಳಪುತ್ರಿಯೊಂ
ದತಿಶಯಮಪ್ಪ ಚಿಲ್ಪನತಿಕೌತುಕದಿಂದಮೆ ನೋಡುತಿರ್ದ ಭೂ
ನುತಯುವರಾಜಕುಂಜರನ ರಾಗಸಮಾಕುಳಲೋಚನಂಗಳಂ
ಕ್ಷಿತಿಪತಿ ಕಂಡು ಭಾವಿಸಿದನೀಕೆಯೊಳುಂಟಭಿವಾಂಛೆಯೆಂಬಿದಂ ೧೫

ಈ ಕನ್ಯಾರತ್ನದ ಮೇ
ಲೀ ಕುವರನ ಚಿತ್ತಮಾದುದಾಸಕ್ತಮಿದೆಂ
ದೊಯ್ಯನೆ ಬಗೆದಂ ಭೂಪಂ
ಲೋಕಮನೋವೃತ್ತಿಬೋಧನಮೆ ಬುದ್ಧಿಫಲಂ ೧೬

ವ: ಅಂತಾ ಧರ್ಮನಾಥಕುಮಾರನ ಮನೋಗತ ಮನೋರಥ ಪರಿಣಾಮಮಂ ತದಾಕಾರ ನಿರೀಕ್ಷಣದಿಂದನುಮಾನಿಸಿ ಸ್ವಯಂಬರಪರಿಣಯನನಿಮಿತ್ತಂ ಕುಂಡಿನಪುರಕ್ಕೆ ಕುಮಾರನಂ ಕಳಿಪುವುಜ್ಜುಗಂ ಮನದೊಳ್ ಕೆಯ್ಮಿಕ್ಕು ಪೆರ್ಚುತ್ತುಮಿರೆ ಪ್ರಯಾಣ ಕಾರಣಂ ಸಮಕಟ್ಟಿಕೊಳ್ಳಿಮೆಂದು ಕುಮಾರಂಗಂ ಸಭೆಗಂ ಪೇಳ್ದು ತದುಚಿತ ಪ್ರತ್ಯಗ್ರೋದಗ್ರಸಾಮಗ್ರೀ ಸಮಗ್ರೀಕರಣಾರ್ಥಂ ಸಭೆಯಿಂದೆಳ್ದುಪೋಗಿ

ಸಕಳಕ್ಷತ್ರಿಯ ಮಂತ್ರಿ ಮಂಡಳಿಕ ದಂಡಾಧೀಶ ಸಾಮಂತ ಸೈ
ನಿಕ ಸೇನಾಪತಿ ಮುಖ್ಯರಪ್ಪ ಪರಿವಾರಾನೀಕಮಂ ಮತ್ತಮಾ

ಸ್ತಿಕಮಂ ಜಾತಿತುರಂಗಮಪ್ರಕರಮಂ ಮೇಳೈಸಿದಂ ಕೂಡೆ ಕೌ
ತುಕಮಪ್ಪಂತೆ ವಿವಾಹಕಾರ್ಯಗಮನಕ್ಕಂ ಯೋಗ್ಯಸಾಮಗ್ರಿಯಂ ೧೭

ಕುವರನ ಕೂಡೆ ಪೋಪ ಕಡೆಕಟ್ಟುಗಳಂ ಸಮಕಟ್ಟಿಕೊಟ್ಟು ದೂ
ತವರನ ಮಾತಿನಾಗ್ರಹಪರಂಪರೆಯಿಂ ಶುಭಲಗ್ನದಲ್ಲಿ ಮಾ
ನವಪತಿ ಬೇಗದಿಂ ಬಿಡಿಸಿದಂ ಪೊಱವೀಡನತೀವಸಂಭ್ರಮೋ
ದ್ಭವ ಘನಹೃದ್ಯವಾದ್ಯನಿನದಂ ಪುದಿಯಲ್ ದಶದಿಗ್ವಿಭಾಗಮಂ ೧೮

ಗುಡಿ ಗೂಡಾರಂ ಚೆಲ್ವಂ
ಗಡಿ ಚೌರಿಗೆ ಚಂಪೆ ತಿವುರಿ ದುಮ್ಮಳಮಿವಱೊಂ
ದಡಸಿದ ಪಸುರಿಂ ಕಪ್ಪಿಂ
ಕಡುಗೆಂಪಿಂ ಮೆಱೆದುದವನ ಪೊಱವೀಡು ಕರಂ ೧೯

ವ: ಮತ್ತಂ

ಪರಿಪರಿಯ ಬಣ್ಣವಣ್ಣಿಗೆ
ಬೆರಸಿದ ಕಡುಸಪುರಸೀರೆಗಳನುಟ್ಟು ಮನೋ
ಹರರತ್ನದ ತೊಡವುಗಳಂ
ಪಿರಿದಾಗಿಯೆ ತೊಟ್ಟು ಬಂದರರಸುಗಳೆಲ್ಲಂ ೨೦

ವ: ಇಂತು ಸುತ್ತಲುಮೊತ್ತಿಪಿಡಿದ ಪಲವುಂತೆಱದ ಪಲ್ಲವಸತ್ತಿಗೆಗಳ ಮೊತ್ತಂಗಳಿಂ ತುಱುಗಿ ತಳ್ತು ಪೊಳೆದು ಬೀಸುವ ಹೇಮಚಾಮರಂಗಳ ಬಳಗಂಗಳಿಂದಳಂ ಕೃತರಾದ ಸಕಳರಾಜಕರಾಜನ್ಯಕಪ್ರಭೃತಿರಾಜಕುಮಾರರೆಲ್ಲಂ ಪಿರಿದುಮತಿಶಯಮಾಗಿ ಕೆಯ್ಗೆಯ್ದು ತಂತಮ್ಮ ವಾಹನಂಗಳನೇಱಿ ಸಮಸ್ತಹಸ್ತ್ಯಶ್ವರಥಪದಾತಿಲಕ್ಷಣಪ್ರಬಳ ಚಾತುರ್ದಂತ ಬಲಂಬೆರಸಿ ಬಂದರಮನೆಯ ಮುಂದಣ ವಿಶಾಳರಾಜಾಂಗಣದ ಮಂಗಳಾಯಮಾನಸಮುತ್ತುಂಗರಂಗಸ್ಥಳದೊಳೆತ್ತಲುಂ ಮೊತ್ತಂಗೊಂಡು ನೆರೆದು ಧರ್ಮನಾಥ ಕುಮಾರನ ನಿರ್ಗಮನಸಮಯದವಸರಮಂ ಪಾರುತ್ತುಂ ನಿಂದಿರ್ಪುದುಂ

ಪಿರಿದುಮನರ್ಘ್ಯನೂತ್ನನವರತ್ನವಿನಿರ್ಮಿತದಿವ್ಯಭೂಷಣೋ
ತ್ಕರಮನೆ ತೊಟ್ಟು ಸಗ್ಗದೊಳಗಗ್ಗಳಮಾದ ವಿಚಿತ್ರವರ್ಣಬಂ
ಧುರವರವಸ್ತ್ರಮಂ ಮುದದಿನುಟ್ಟು ಮನೋಹರದಿವ್ಯಗಂಧಮಂ
ಭರವಸದಿಂದೆ ಪೂಸಿ ಕುವರಂ ಪರಿಭೂಷಿತನಾದನದ್ಭುತಂ ೨೧

ವ: ಅಂತು ನಾನಾವಿಧ ನವೀನಶೃಂಗಾರಭಂಗಿಯನಂಗೀಕರಿಸಿದ ಧರ್ಮನಾಥ ಕುಮಾರಂ ನಿಜಕುಲವೃದ್ಧೆಯರ ಜಯಜೀವನಂದೇತ್ಯತ್ಯುಚ್ಚಾಶೀರ್ವಚನೋಚ್ಚಾರಣ

ಸಮುಪಲಕ್ಷಿತಧವಳಮಂಗಳಕಳಮಾಕ್ಷತಂಗಳನಾಂತು ಪರಮಾನಂದಮಯ ಮೂರ್ತಿಕನಾಗಿ ತುಚ್ಛೇತರೋತ್ಸಾಹವಿರಾಜಮಾನನಿಜರಾಜಾಲಯಮಂ ಪೊಱಮಟ್ಟು ಬಂದು ರಾಜಾಂಗಣದೊಳ್ ನಿಂದಿರ್ದ ಮಸೃಣಮಣಿಮಯಕಿಂಕಿಣೀಗಣ ರಮಣೀಯಮಾಲಾ ಲಂಬುಷಘೋಷಿತಮಾದ ಕನತ್ಕನಕಸ್ಥೂಲಘಂಟಾಜಾಳ ಜಟಿಳೀಕೃತಮಾಗಿರ್ದ ಚಂಚಚ್ಚಾಮೀಕರ ಚಾರುಚಾಮರಸಂಚಯಸಮಾಲಂಬನ ದಿಂದೊಪ್ಪಂಬೆತ್ತ ಸಿಂಧೂರಮುದ್ರಾ ಸಮಾರಂಜನಶೋಭೆಗಾಧಾರಮಾದ ಪೊಸಪೊಸಬಣ್ಣದಿಂದಂಚಿತ ಜಂಚೆಯಂ ಪಣ್ಣಿದ ಪಟ್ಟವರ್ಧನಗಜೇಂದ್ರಮನೇಱಿ ಸುಸ್ಥಿರದಿಂ ಕುಳ್ಳಿರ್ದು ಸುತ್ತಲುಂ ಬಳಸಿನಿಂದ ಪರಿವಾರದ ಸಂಭ್ರಮಪರಿಭ್ರಮಣಸಂಭೂತ ಕಳಕಳಕೋಳಾಹಳ ಶೋಭಾಸಮುತ್ಕರ್ಷಮಂ ನೀಡುಂ ನೋಡುತ್ತುಮಿರ್ಪುದುಂ

ಸುತ್ತಲುಮೆಯ್ದೆ ತಳ್ತ ಪರಿವೇಷದೊಳೊಂದಿದ ಚಂದ್ರಮಂಡಳಂ
ಚಿತ್ತರದಿಂದೆ ನಾಲ್ಕುಮುಖಮಾಗಿರದೋಲಯಿಸಲ್ಕೆ ಬಂದವೊ
ಉತ್ತಮಚಿತ್ರವರ್ಣಮಯಪಲ್ಲವಶೋಭೆಗಳಾದ ನಾಡೆಯುಂ
ಮುತ್ತಿನ ಜೌಕ ಸತ್ತಿಗೆಗಳಂ ಪಿಡಿದಿರ್ದರತೀವಲೀಲೆಯಿಂ ೨೨

ಬೀಸಿದರಂದೊಲವಿಂದಂ
ಲೇಸಾಗಱುವತ್ತುನಾಲ್ಕುಚಮರಂಗಳನಾ
ಭೂಸೇವ್ಯಚರಣಕಂಗಭಿ
ಭಾಸುರಮಣಿದಂಡಮಂಡಿತಂಗಳನಾಗಳ್ ೨೩

ವ: ಆಪೊತ್ತಿನೊಳ್

ಥಳಥಳಿಸಿ ಪೊಳೆವ ಮಕುಟೋ
ಜ್ಜ್ವಳಚೂಡಾಮಣಿಮಯೂಖಮಂಜರಿಯಿಂದಂ
ಬೆಳಯಿಸುತಿರ್ದಂ ಗಗನ
ಸ್ಥಳದಲ್ಲಿ ಸಮಂತು ಶಕ್ರಚಾಪಶ್ರೀಯಂ ೨೪

ಅರುಣಮಣಿಕುಂಡಲಂಗಳ
ಕಿರಣಂ ನಗೆಮೊಗದ ಮೇಲೆ ಪಸರಿಸಲೆಸೆಗುಂ
ತರುಣತರಣಿಪ್ರಭಾವಳಿ
ಬೆರಸಿದ ಕನಕಾಂಬುಜಾತಮೆಂಬಂತೆವೊಲಂ ೨೫

ನವರತ್ನದ ಪದಕಮುಮಾ
ಕುವರನ ಕೊರಳಲ್ಲಿ ಚೆಲ್ವನಾಂತಿರ್ದುದು ತ
ನ್ನ ವಿಶಾಲಲಕ್ಷ್ಮಿಯಾಡುವ
ನವಿಲುಯ್ಯಲಿದೆಂಬ ಶಂಕೆಯಂ ಪುಟ್ಟಿಸುತುಂ ೨೬

ಕ್ಷಿತಿನುತಧರ್ಮನಾಥನೆರಡುಂಘನಬಾಹುಗಳಗ್ರದಲ್ಲಿ ಮ
ತ್ತತಿರಮಣೀಯಬಾಹುವಳಯಂಗಳುವೊಪ್ಪಮನಾಳ್ದುವಾಕ್ಷಣಂ
ಪತಿಭಜನಾರ್ಥಮಾಗಿರದೆಬಂದು ದಿವಾಕರಚಂದ್ರಬಿಂಬಮು
ನ್ನತಭುಜಮೂಲಮಂ ಬಿಡದೆ ಪೊರ್ದಿ ಬರ್ದುಂಕುತುಮಿರ್ದುದೆಂಬಿನಂ ೨೭

ಅಂದು ಕಡುಚೆಲ್ವನಾಂತುವು
ಸೌಂದರಘನಪದ್ಮರಾಗಮಣಿಕಂಕಣದಿಂ
ಸಿಂಧೂರಾರುಣಕರಿಕರ
ದಂದದೆ ಮುಂಗೈಗಳಾ ಕುಮಾರಾಗ್ರಣಿಯಾ ೨೮

ಹರಿನೀಳಖಚಿತರಸನಾ
ಕಿರಣಂ ಕುವರನ ಸುನಾಭಿಕೂಪದೊಳಂ ತುಂ
ಬಿರಲದು ಪೋಲ್ತುದು ಯಮುನೆಯ
ಪಿರಿದೆನಿಸುವ ಸುಳಿಯ ಚೆಲ್ವನತಿರಮಣೀಯಂ ೨೯

ಮಾಣಿಕದ ಕಡೆಯದೊಡನು ಱ
ಕಾಣಿಕೆಯಂ ಪಡೆದ ಚೆಲ್ವಪೆಂಡೆಯದ ಮಣಿ
ಶ್ರೇಣಿಕೆ ರಂಜಿಸಿದತ್ತಾ
ಜಾಣನ ಪದದಲ್ಲಿ ರಾಗಮಿಮ್ಮಡಿಸುವಿನಂ ೩೦

ವ: ಇಂತು ತೊಟ್ಟಂತಪ್ಪ ಷೋಡಶಾಭರಣಕಿರಣಂಗಳುಂ ಕಡುನಿಮಿರ್ದು ಕುಡಿಯಡರಿ ತಾಂ ಪೊದೆದಿರ್ದ ಸಪುರಸೀರೆಯಲ್ಲಿ ಪರಿಕಲಿಸಿ ರಂಜಿಸುತ್ತುಮಿರೆ ಪಂಚವರ್ಣ ವಿನ್ಯಾಸಕ್ರಮದಿಂ ಮಂಜಿಷ್ಠಾಶಂಕೆಯನಂಕುರಿಸುತ್ತುಮಿರ್ದುದಱ ಸೆಱಂಗ ಬೀಸುವ ಚಾಮರಂಗಳ ಗಾಳಿಯಿಂ ಸಂಚಳಿಸಿದ ಕದಕ್ಕದಿಸುತ್ತುಮಿರೆ

ಸಂಪನ್ನನ ರೂಪಂ ಮು
ನ್ನಂ ಪಲವುಂ ಬಾರಿ ಕಂಡೊಡಂ ಪುರನಾರೀ
ಕಂಪಾಕ್ಷಿಗಳುಂ ವಿಕಸನ
ಮಂ ಪಡೆದವು ರವಿಯ ಕಂಡ ತಾವರೆಗಳವೊಲ್ ೩೧

ವ: ಇಂತು ನಿರಂತರಿತ ಪೌರನಾರೀಜನಾದಿ ಸಮಸ್ತಪರಿಜನ ಪುರಜನಂಗಳ ಕಣ್ಗಳುಂ ಮನಂಗಳುಂ ಕಡುತವಕದಿಂದೊಡನೊಡಪೋಗಿಯಾ ಕುವರನ ನಿರುಪಮ ರೂಪಮೆಂಬ ವಿಶ್ರಮಸ್ಥಾನದೊಳ್ ನೆಲಸಿನಿಂದು ತಣ್ಣಗೆ ತಣಿವುತ್ತುಮಿರ್ಪುದುಂ

ದೇವಕುಮಾರಿಯರೊಲವಿಂ
ಪೂವಿನ ಮಳೆಯಂ ಸಮಂತು ಕಱೆಯುತ್ತಿರ್ದರ್

ಭೂವಳಯಪಾಲಕನ ಮೇ
ಲೋವದೆ ಮಱಿದುಂಬಿಗಳ್ ಕರಂ ಮೊರೆವಿನೆಗಂ ೩೨

ವ: ಅಂತಾಕ್ಷಣಮಾ ಕುಮಾರನ ವಿಳಾಸದೊದವನೆಲ್ಲರುಮಲ್ಲಲ್ಲಿ ನೆರೆದು ನಿಂದು ನೋಡುತ್ತುಂ ಕಿಕ್ಕಿಱಿಗಿಱಿದು ಸಂದಣಿಸಿ ತಿಂತಿಣಿಗೊಂಡಿರ್ಪುದುಂ ಅನಂತರಂ

ಜನತಾಕೋಳಾಹಳಂ ಮತ್ತವರ ಕರಿಘಟಾಗರ್ಜಿತಂ ವಾಜಿರಾಜಿ
ಸ್ವನಮುಂ ನಿಸ್ಸಂಖ್ಯಶಂಖಪ್ರಪಟುಪಟಹಸತ್ಕಾಹಳಾಭೂರಿಭೇರೀ
ಧ್ವನಿಯುಂ ಘೋರೆಂದು ತಾನೊರ್ಮೊದಲೊಳೆ ಪಿರಿದುಂ ಘೂರ್ಣಿಸಲ್ ಕೂಡೆ ಪೆರ್ಚಲ್
ಮನದುತ್ಸಾಹಂ ಸಮಸ್ತರ್ ಪೊಗಳೆ ತಳರ್ದನಲ್ಲಿಂದಮಾ ಧರ್ಮನಾಥಂ ೩೩

ವ: ಆ ಪ್ರಸ್ಥಾನಶಿಬಿರದಿಂದಂ ತಳರ್ದಾಗಳ್

ಸಲೆನೆಲನೆಂಬ ಪೆರ್ಮಡದಿಯೆಣ್ಣೆಸನೋಡಿರದೆಯ್ದೆ ಕೂಡಿಕೊಂ
ಡಲಘುವಿನೋದದಿಂ ಬಿಡದೆ ಪಾಡುತುಮಿರ್ದಪಳೆಂಬ ಮಾಳ್ಕೆಯಿಂ
ಬಲದೊಳಗುಣ್ಮಿ ಪೊಣ್ಮುವ ಮಹಾಪಟಹಧ್ವನಿ ಲೋಕಮೆಲ್ಲಮಂ
ಬಳಸುತುಮಿರ್ದುದಂದು ಕುವರಂ ನಡೆವಲ್ಲಿ ವಿವಾಹಕಾರಣಂ ೩೪

ನಿರುಪಮಭದ್ರಜಾತಿಗಜಮಂ ಪದೆದೇಱಿ ಕರಾಗ್ರದಲ್ಲಿ ಭಾ
ಸುರತರಭೂರಿವಜ್ರನಿಶಿತಾಂಕುಶಮಂ ಪಿಡಿದಿರ್ದು ನಾಡೆಯುಂ
ಗುರುವಿನನುಜ್ಞೆಯಿಂದೆ ಪೊಱಮಟ್ಟುಱೆಪೋಪ ಕುಮಾರಕಂ ಪುರಂ
ದರನ ವಿಭೂತಿಯಂ ಪಡೆದು ಸಂತಸಮಂ ಸುಮನರ್ಗೆ ಮಾಡಿದಂ ೩೫

ವ: ಆ ಕುಮಾರನಿಕ್ಕೆಲದೊಳ್

ಓಜೋಗುಣದೊಡಗೂಡಿದ
ರಾಜದಳಂಕಾರದಿಂದಮೊಪ್ಪುವ ನೃಪರಾ
ರಾಜನ ಬೆಂಬಳಿಸಂದರ್
ಪೂಜ್ಯತರಾನುಗತ ಸಾಧುಶಬ್ದಂಗಳವೊಲ್ ೩೬

ಆ ಕುವರನ ಬಳಿಸಂದರ್
ಬೇಕೆಂಬ ಸಮಸ್ತಭೂಮಿಪಾಲಕರಾಗಳ
ನೇಕರುಮೆಂತು ಮದಾಳಿಗ
ಳೊಯ್ಯನೆ ಪೂಮಾಲೆಯೊಡನೆ ಪೋಪಂತೆವೊಲಂ ೩೭

ವ: ಮತ್ತಂ

ಆನೆಗಳೊಡ್ಡುಗಳ್ ಪದೆದು ಕಾರ್ಮುಗಿಲೊಡ್ಡುಗಳೆಂಬ ಶಂಕೆಯಂ
ಮಾನವರ್ಗೀವುತುಂ ನಡೆದುಪೋಗುತಮಿರ್ದವವಂದು ಲೀಲೆಯಿಂ
ದಾನಜಲಂಗಳಂ ಕಱೆಯುತುಂ ಮಿಗೆಮಿಂಚುವ ಹೊನ್ನಚಾಮರಾ
ನೂನತಟಿಲ್ಲತಾವಳಿಗಳಿಂದಭಿರಂಜಿಸುತುಂ ಸಗರ್ಜಿತಂ ೩೮

ಪೊಳೆವ ಪರಿವೃತ್ತಕುಂಭಂ
ಗಳಿನೊಪ್ಪಮನಾಂತು ಪಂತಿಗೊಂಡಿಕ್ಕೆಲದೊಳ್
ಬಲದ ಮದಕುಂಜರಂಗಳ
ಬಳಗಂ ಚೆಲ್ವಾಯ್ತು ಮನೆಗಳೋಳಿಯ ತೆಱದಿಂ ೩೯

ವ: ಬಳಿಯಂ

ಅತಿಶಯವಾಯುವೇಗಯುತ ತುಂಗತುರಂಗಮಪುಂಗವಂಗಳ
ಪ್ರತತಿಕೆ ಕೂಡೆ ಮುಂದೆ ನಡೆಗೊಂಡುದು ವಾದ್ಯರವಕ್ಕೆ ತಕ್ಕವೊಲ್
ಗತಿಗಳ ಭೇದದಿಂ ಕುಣಿವುತುಂ ಕೆಲವುಂ ಕೆಲವಲ್ಲಿ ಮತ್ತೆ ಸಂ
ಗತಘನಲೀಲೆಯಿಂ ನಡೆವುತಿರ್ದವು ಮಂದಪದಪ್ರಚಾರದಿಂ ೪೦

ಕಡಿಯಾಣಂಗಳ ಘಾಸಿಯಿಂದೆ ನೊರೆಗಳ್ ತೇರ್ರೈಸಲುಂ ಬಾಯಿಯೊಳ್
ಕುಡಿವಂತೆ ಪ್ರತಿವೈರಿಕೀರ್ತಿಗಳನೊಪ್ಪುತಿರ್ದು ಪಾರ್ಶ್ವಂಗಳೊಳ್
ಕಡುಪಿಂ ಬೀಸಿದ ಚೆಲ್ವಹಕ್ಕರಿಕೆಗಳಂ ವ್ಯೋಮಾಧ್ವದೊಳ್ ಪೋಗಲೆಂ
ದಡಸಿಟ್ಟುನ್ನತಪಕ್ಷಕಂಗಳನೆ ತಾಳ್ದಿರ್ಯ್ತಂದವಶ್ವಂಗಳುಂ ೪೧

ಭೂದೇವಿಯ ಮೆಯ್ಯೊಳ್ ತುರ
ಗಾದಿಗಳಂದಿಕ್ಕೆ ನಖಮುಖಂಗಳನತ್ಯಾ
ಮೋದದೆ ಮನಕಾಂಕುರತತಿ
ಯಾದಂತಿರೆ ನೆಗೆದುದಮಮ ಧೂಳೀಜಾಳಂ ೪೨

ಯುವರಾಜನ ಗುಣಗಣದಿಂ
ದವನೊಪ್ಪಿರೆ ಪೊಗಳ್ವ ಪಾಠಕರ ತೆಱದಿಂದಂ
ತೀವಿದ ರಥಂಗಳ್ ಪೋದವು
ಜವದಿಂ ಚೀತ್ಕಾರರಾವದಿಂದೆಸೆವುತ್ತುಂ ೪೩

ನೇಮಿದಾಹಾರ ಪ್ರತಿಯಿಂ
ದಾ ಮಹಿಯೊಡೆಯಲ್ಕೆಯಲ್ಲಿ ಚೆಲ್ಲಿದ ಮುಕ್ತಾ
ಸ್ತೋಮಮಂ ಪರಿರಂಜಿಸಿದ
ತ್ತಾ ಮಹಿಪನ ಕೀರ್ತಿಬೀಜಮಂ ಬಿತ್ತುವವೊಲ್ ೪೪

ವರಸೈನ್ಯಪಾದತಾಡನ
ದುರವಣೆಯಿಂ ಪೀಡ್ಯಮಾನಭೂತಳಮಾಗಳ್
ಪರಮರಥಾವಳಿ ಚೀತ್ಕಾ
ರರವಂಗಳ ನೆವದಿನೊದಱುತಿರ್ದುವೊಲೆಸೆಗುಂ ೪೫

ವ: ಮತ್ತಂ

ವಂಶಜಮಪ್ಪ ನಾರಿಯೊಡಗೂಡಿ ಪಿಶೇಷಿತದಿವ್ಯಬಾಣಸಂ
ದಂಸಮನಾಂತು ಸಂಹರಣಕಾರಣಮಾಗಿ ದಲುಗ್ರಭಾವದಿಂ
ದಂ ಸಮುಪೇತಮಾದುದರಿಸೀಶ್ವರನೆಂಬವೊಲಿರ್ದ ಬಿಲ್ಗಳಂ
ಸಂಸನ ಹಸ್ತದೊಳ್ ಪಿಡಿದು ಬಂದುದು ಧನ್ವಿಪದಾತಿ ಸುತ್ತಲುಂ ೪೬

ನಡೆದುದು ಪದಾತಿಸೈನ್ಯಂ
ಕಡುಗಲಿಯೆನಿಸಿರ್ದ ಧರ್ಮನಾಥಕುಮಾರಕ
ನೆಡಬಲದೊಳೆಲ್ಲಿಯುಂ ಸಂ
ಗಡಿಸಿದ ವಜ್ರಾಂಗಿ ಜೋಡುಗಳಿನೊಪ್ಪುತ್ತುಂ ೪೭

ಧವಳಚ್ಛತ್ರಂಗಳೆಂಬ ಪ್ರಬಳತರ ಮಹಾಫೇನಪಿಂಡಂಗಳಿಂದಂ
ಪ್ರಪಿಭಾಸ್ವತ್ತ್ರಂಚಳ ಚಾಮರಪಿತತಿಗಳೆಂಬೂರ್ಮಿವೃಂದಂಗಳಿಂದಂ
ನವರತ್ನಶ್ರೇಣಿಯಿಂ ಪೇರ್ಜಿದುರುಕರಿಗಳೆಂಬುದ್ವಹಿತ್ರಂಗಳಿಂದಂ
ಭವದುದ್ಘೋಷಂಗಳಿಂದಂ ಮಹಿಮೆವಡೆದದೊಪ್ಪಿತ್ತು ಸೇನಾಸಮುದ್ರಂ ೪೮

ಕಡುಹೀಲಿಯ ಝಲ್ಲರಿಗಳ
ಗಡಣಮನಾ ನಡೆವ ಕುದುರೆಗಳ ಕೆಲದೊಳ್
ಪಿಡಿಯಲ್ಕೆ ಸೈನ್ಯವಾರ್ಧಿಯೊ
ಳಡಸಿದ ಹಾವಂಚೆಯಂತಿರದು ಕಣ್ಗೆಸೆಗುಂ ೪೯

ಅನ್ಯರ ತೇಜಮನೀತಂ
ಮನ್ನಿಪನಲ್ಲೆಂದು ಬಗೆದು ಬೆದಱಿದ ತೆಱದಿಂ
ಕೆನ್ನಂ ವಿಜಯಧ್ವಜಸಂ
ಛನ್ನ ಪದಾವಳಿಯಿನರ್ಯಮಂ ಮಱೆಗೊಂಡರ್ ೫೦

ಬಲಘಟ್ಟನದಿಂ ಪುಟ್ಟಿದ
ಖಳಧೂಳಿಯಿನಾಗಸಂ ಮಲೀಮಸಮಾಗಲ್
ಸಲೆರಜನೀಶಂಕೆಯಿನು
ಜ್ಜ್ವಳಕರಮಂ ಕೆದಱಿತಿಲ್ಲ ರವಿ ದಿಕ್ಕುಳದೊಳ್ ೫೧

ವ: ಮತ್ತಮಲ್ಲಿ

ತುರಗಖುರಾಗ್ರಘಟ್ಟನ ಸಮುತ್ಥಮಹಾಘನಧೂಳಿಜಾಳಕಂ
ಕರಿನಿಕರಂಗಳುತ್ಕಟ ಕಟಸ್ಥಳದಿಂ ಸುಳಿಯುತ್ತುಮಿರ್ದ ಪೀ
ವರಮದವಾರಿಧಾರೆಗಳಿನಂದುಪಶಾಂತಿಯನೆಯ್ದಲಾಕ್ಷಣಂ
ಪರಿಕಿಸಿ ನೋಡಿ ಕಂಡರುಱೆ ಬಟ್ಟೆಗಳೊಳ್ ನಡೆವಾ ಜನಂಗಳಂ ೫೨

ವ: ಮತ್ತಮೊಂದೆಡೆಯೊಳ್

ಒದಱುತ್ತುಂ ಗರ್ಘರೋದ್ಘೋಷದಿನುಱೆ ಕೊರಳಂ ನೀಳಮಾಗೆತ್ತಿ ಮೇಗಂ
ಪದೆಪಿಂ ನೋಡುತ್ತುಮೆಲ್ಲಾದೆಸೆಗೆ ಪರಿಯುತುಂ ಪೊತ್ತುಕೊಂಡಿರ್ದ ಪೇಱಂ
ಬೆದಱೀಡಾಡುತ್ತುಮೊಂದೊಟ್ಟೆಯ ಮಱಿ ಪಿರಿದುಂ ಕಾಡಿಮಾಡುತ್ತುಮಿರ್ದ
ತ್ತದು ಹಾಸ್ಯಾಶ್ಚರ್ಯಮಂ ನೋಡುವ ಸಕಳಜನಾಸ್ಯಂಗಳೊಳ್ ಚೋದ್ಯದಿಂದಂ ೫೩

ಕಂಡು ಮದೇಭಮಂ ನಡೆವ ಬಟ್ಟೆಯೊಳಾದ ವಿಶೇಷಭೀತಿಯಿಂ
ಭಂಡಿಯ ಹೂಡಿದೆತ್ತುಗಳವುಂ ಪರಿದೋಡುವ ಬೇಗದಲ್ಲಿ ಕೀಲ್
ಖಂಡಿಸಿ ಗಾಲಿ ಬೀಳೆ ಘೃತಪೂರ್ಣಘಟಂಗಳವೆಯ್ದೆ ಬೀಳ್ದು ಸಾ
ಲ್ಗೊಂಡೆಡದಲ್ಲಿ ಮಾಡಿದುವು ದುಃಖಮನಾ ವ್ಯವಹಾರಿಗಾಕ್ಷಣಂ ೫೪

ಕರಿಫೂತ್ಕಾರಮನಿದ್ದಂ
ತಿರೆ ಕೇಳ್ದತಿಭೀತಿಗೊಂಡು ಹಮ್ಮೈಸಿಯೆ ಪಾ
ಮರಿ ಪೊತ್ತ ಮೊಸರ ಮಡಕೆಯ
ನಿರಬೀಳಿಸಿಯೊಡೆದು ತೊಲಗಿದಳ್ ನೃಪಪಥದಿಂ ೫೫

ವ: ಮತ್ತಮೇಕಪ್ರದೇಶದೊಳ್

ಪುರರಭಸಕ್ಕಂಜಿದ ವೇ
ಸರಿ ಬೇಗದಿನೋಡಲುಟ್ಟವಸ್ತ್ರಂ ತೊಲಗು
ತ್ತಿರಲವಯವಂಗಳುಂ ತೋ
ಱಿರಲೇಱಿದ ತರುಣಿ ನಗಿಸಿದಳ್ ಸೈನಿಕರಂ ೫೬

ಪಿರಿದಪ್ಪ ಭಾರದಿಂದಂ
ಪರಿಕುಬ್ಜಿತದೇಹರಾದ ಕಾವಡಿಕಾಱರ್
ಭರದಿಂದ ಮುಂದೆ ಪೋಪರ
ನುರವಣೆಯಿಂ ಪಿಂದೆಮಾಡಿ ಪೋದರ್ ಬೇಗಂ ೫೭

ವ: ಆ ಪ್ರಸ್ತಾವದೊಳ್

ಪಳಿಕಿನ ಕುಟ್ಟಿಮ ಧರಣೀ
ತಳದೊಳ್ ಮಾರ್ಪೊಳೆದ ಸೈನ್ಯಮೊಪ್ಪಿತ್ತು ರಸಾ
ತಳದಿಂ ಬರುತ್ತುಮಿರ್ಪ
ಜ್ಜಳಭವನಾಮರರ ಸೈನ್ಯಮೆಂಬಂತೆವೊಲಂ ೫೮

ತರುಣೀವೃತ್ತಾಂತಮನಾ
ದರದಿಂದಂ ಕೇಳ್ದು ದಕ್ಷಿಣಕ್ಕಭಿಮುಖನಾ
ಗಿರದೆ ಹರಿಸೈನ್ಯಪರಿವೃತ
ನರಸಂ ಶ್ರೀರಾಮನಂತೆ ಪೋಗುತ್ತಿರ್ದಂ ೫೯

ವ: ಇಂತಾ ಕುಮಾರನತೀವಕೌತುಕಂಬೆತ್ತು ಮಹಿಮೆವೆರಸು ಪರಿಪರಿಯ ಬಹುವಿಧ ನವೀನರಚನಾತಿಶಯದಿಂ ವಿಶೇಷಿತಮಾದ ಪುರಗೋಪುರದ್ವಾರಮಂ ಮುಟ್ಟೆ ವರ್ಪುದುಂ

ಎಡೆವಿಡದೆ ಪೋಪ ಸೈನ್ಯದ
ನಡುವಣದಾಗಿರ್ದು ಕೂಡೆ ಪಿಂದುಂ ಮುಂದುಂ
ಕಡುದೊಡ್ಡಿತಾಗಿ ಪೊಱಮಡು
ವೆಡೆಯೊಳ್ ಮಿಗೆ ಮಡದಿಯಂತೆ ಪಡೆದುದು ಚೆಲ್ವಂ ೬೦

ವ: ಅಂದಾ ಸೈನ್ಯಂ ಪುರವಿಭೂತಿಯಿಂ ಪುರದ್ವಾರಮಂ ಪೊಱಮಟ್ಟು ಪಸರಿಸಿ ನಡೆವುದುಂ

ಓಲೈಸಲೆಂದು ದಶದಿ
ಕ್ಪಾಲಕರ ಪುರಂಗಳೆಯ್ದಿ ಬಂದಾವರಿಸಿದ
ವೊಲೊಪ್ಪುವ ಪೊಱವೊಳಲಂ
ಮೇಲೆನಿಪ ಕುಮಾರಕಂ ನಿರೀಕ್ಷಿಸುತಿರ್ದಂ ೬೧

ವ: ಇಂತುಱುವ ಸಿರಿಯಿಂದಂ ನೆಱೆಮೆಱೆವ ಪೊಱವೊಳಲಂ ಕುಮಾರಕಂ ನೋಡಿ ನೋಡಿ ಕೊಂಡಾಡುತ್ತುಂ ಕಿಱಿದಂತರಂ ಪೋಪುದುಂ

ವಿಮಲಾಂಬರಧಾರಿಗಳಂ
ರಮಣೀಯ ವಯೋವಿಶೇಷ ಸಂಶೋಭಿಗಳಂ
ಸಮುಪಾತ್ತಪಯೋಧರ ಸಂ
ಭ್ರಮಿಗಳನಂಗನೆಯರೆಂಬಿನಂ ದಿಕ್ಕುಗಳಂ ೬೨

ನೋಡುತ್ತುಂ ಪೋದರ ಮಿಗೆ
ನಾಡೆಱೆಯಂ ಮತ್ತಮತ್ತೆಯತ್ಯಾದರದಿಂ

ಕೋಡುವ ತೆಂಬೆರಲಾಗಳ್
ತೀಡಿದುದತಿಮಿತ್ರನೆಂಬಿನಂ ನೃಪಸುತನಂ ೬೩

ವ: ಮತ್ತಮಾಗಳ್ ಸಂದಣಿಸಿ ತಿಂತಿಣಿಗೊಂಡು ಪೋಪ ಶಿಬಿಕಾಕದಂಬಂಗಳಿಂ ಪರಿನಿಚಿತಾಂತರಮಾದ ಕಟಕಂ ನೂತನಪೋತಬ್ರಾತಂಗಳಿಂದಂ ತುಂಬಿದಂಬುಧಿಯೆಂಬಿನಂ ಶೋಭಾವಲಂಬಿಯಾಗಲತ್ತಲುಮಿತ್ತಲುಂ ಮೊತ್ತಂಗೊಂಡು ಕಡುವೇಗದಿಂ ಸಂಗಡಿಸಿ ನಡೆವ ಹಸ್ತ್ಯಶ್ವರಥಪದಾತಿಲಕ್ಷಣ ಚಾತುರ್ದಂತಬಲಂಗಳುಂ ಪ್ರವಾಹಂಗಳೆಂಬಂತೆ ಬಹುಮುಖಂಗಳಿಂ ಸುತ್ತಲುಂ ಬಿತ್ತರಿಸಿ ನಡೆವುತ್ತುಮಿರೆ

ಒಳಕೊಂಡು ದಲುತ್ತಮರಂ
ಖಳತತಿಯಂ ಪೊಱಗುಮಾಡಿ ಸಜ್ಜನರೆಂಬಂ
ತಿಳಿಯೊಳ್ ಚೆಲ್ವಂ ತಾಳ್ದುರ್ಗಳ
ಬಳಗಮನರಸು ನೋಡಿ ನಲಿಯುತ್ತಿರ್ದಂ ೬೪

ವ: ಆಗಳ್

ತುಂಬೀಫಲಸಂತತಿಗಳ
ಲಂಬನದಿಂ ತಗ್ಗಿದೂರ ಬೇಲಿಯ ಮಱೆಯಿ
ರ್ದಂಬುಜಮುಖಿಯರ್ ಮಿಗೆ ಕ
ಣ್ತುಂಬಿ ನಿರೀಕ್ಷಿಸುತುಮಿರ್ದರಾ ನೃಪಬಲಮಂ ೬೫

ರಲ್ಲಕರಂಜಿತತನುಗಳ್
ಗೊಲ್ಲರ ಮೊತ್ತಂಗಳೆಯ್ದೆ ಕಾಣಿಕೆಯಂ ತಂ
ದಲ್ಲಿರಿಸಿದ ಪಾಲ್ಮೊಸರಂ
ಸಲ್ಲಲಿತಾಖ್ಯಮನೆ ನೋಡಿ ತಣಿಸಿದನವರಂ ೬೬

ವ: ಮತ್ತಂ ಮೂಡಲ್ ಗಂಗಾಸರಿತ್ತೀರಮೇ ಮೇರೆಯಾಗಿ ಪಡುವಲ್ ಸಿಂಧೂನದೀಪಾರಪರ್ಯಂತಂ ಬಡಗಲ್ ವಿಜಯಾರ್ಧಪರ್ವತಮವಧಿಯಾಗಿ ತೆಂಕಲ್ ಸಿಂಹಕಾದ್ವೀಪಮೇ ಸೀಮೆಯಾಗಿ ಮಧ್ಯಪ್ರದೇಶಂಗಳೊಳೆಲ್ಲಂ ತುಂಬಿ ಪರಿವರ್ತಿಸುತ್ತು ಮಿರ್ಪ ಬಹಳತರದುರ್ವಹವಾಹಿನೀನಿವಹ ಪರಿಪೂರಿತಮಾದ ಸೈನ್ಯಸಮುದ್ರಂ ಮೇರೆಯಂ ಮೀಱುತ್ತುಮಿರ್ದುದೆಂಬಂತೆತ್ತಲುಂ ಪಸರಿಸಿ

ಬೆಟ್ಟದ ಘಟ್ಟದಿಟ್ಟೆಡೆಯ ಬಟ್ಟೆಗಳಲ್ಲಿ ನದೀನದಂಗಳೊಂ
ದೊಟ್ಟಜೆಯಾದೆರಲ್ತಡಿಗಳಲ್ಲಿಯುಮೂರ್ಗಳ ಸುತ್ತಲೆಲ್ಲಿಯುಂ
ದಟ್ಟಮುಮಾಗಿ ಕೂಡಿ ನಡೆವುತ್ತುಮದಿರ್ದುದು ಸರ್ವಸೈನ್ಯಕಂ
ಪುಟ್ಟಿಸುತುಂ ನಿರೀಕ್ಷಿಪರ ಚಿತ್ತದೊಳಚ್ಚರಿಯಂ ದಲಾಕ್ಷಣಂ ೬೭

ವ: ಇಂತು ಸದಾಶ್ರಿತನಪ್ಪಾ ಕುಮಾರಂಗಂ ಸದನಾಶ್ರಿತಮಪ್ಪಾ ಪುರಕ್ಕಂ ರಮಣೀಯಾನನ ಶ್ರೀಕನಾದಾ ಯುವರಾಜಂಗಂ ಪರಿಧೃತಕಾನನಶ್ರೀಕಮಾದಾ ನಗರಕ್ಕ ಮಂತರಂ ಪಿರಿದುಂ ದೂರಮಾಗೆ ಮುಂದೊಂದೆಡೆಯೊಳ್

ನೊರೆಗಳ ಪಿಂಡು ಮಂಡಳಿಸಿ ತಾರೆಗಳಂತಿರೆ ಬೆಳ್ಪನಾವಗಂ
ಧರಿಸೆ ತಟದ್ವಯಸ್ಫುರಿನೀಳಶಿಲಾತಳ ಕಾಂತಿ ಸಂತತ
ಸ್ಫುರಣವಿಶೇಷರಂಜನದೆ ಕೃಷ್ಣತರಚ್ಛವಿಯಾಗೆ ತೋಯಮಂ
ಬರತಳದಂತಿರೊಪ್ಪಿದುದು ಗಂಗೆ ತರಂಗಿಣಿ ತಾಳ್ದಿ ಮೀನಮಂ ೬೮

ಎರಡುಂ ತಡಿಯೊಳ್ ಪುಟ್ಟಿದ
ತರುಗಳ್ ಮಾರ್ಪೊಳೆದು ನೀರೊಳೊಪ್ಪಿದವಂದು
ದ್ದುರರವಿತಾಪಕ್ಕಾಱದೆ
ಭರದಿಂ ಸ್ನಾನಾರ್ಥಮಲ್ಲಿ ಮುಳ್ಗಿದ ತೆಱದಿಂ ೬೯

ಮಕರಂಗಳ ಪೂತ್ಕಾರ
ಪ್ರಕಟನದಿಂ ಮೇಗೆ ನೆಗೆವುತಿರ್ದ ಪಯೋಬಿಂ
ದುಕದಂಬಕದಿಂ ಮಾಳ್ಪುದು
ನಿಕಟದ್ರುಮತತಿಗಳಲ್ಲಿ ಪುಷ್ಪಶ್ರೀಯಂ ೭೦

ವಿಂಧ್ಯಾಚಳಮೆಂಬುರು ಧರ
ಣೇಂದ್ರಂ ಕಳಚಿದೊಡೆ ಬಿಳ್ದು ಕೆಲದೊಳಗಿದ್ದತಿ
ರುಂದ್ರ ನಿರ್ಮೋಕದಂದದಿ
ನಂದು ಕರಂ ಗಂಗೆ ಕಣ್ಗೆ ಪಡೆದುದಗುರ್ವಂ ೭೧

ವ: ಮತ್ತಮಾ ಗಂಗಾತರಂಗಿಣೀ ತುಂಗವಾತೂಳಿಕಾ ಸಂಗದಿಂದಳ್ಳಾಡುತ್ತು ಮಿರ್ದ ತೀರದ್ವಯಪರ್ಯಂತ ಕಾಂತಾರತರುನಿಕರಶಾಖಾಶಿಖಾವಳಯಾಗ್ರಂಗಳಿಂದು ದಿರ್ದು ಬಿಳ್ದು ತೆರೆಮಾಲೆಗಳ ವೇಗವಶದಿಂದೊಂದಾಗಿ ಮಂದೈಸಿ ತೇಂಕುತ್ತುಂ ತೇರೈಸಿದ ಪೂಗಳ ಬಳಗದಿಂ ಕಡುಬಿಳಿದಾಗಿ ವಿಯದ್ಗಂಗಾಭಂಗಿಯನಂಗೀಕರಿಸುತ್ತುಂ ಮತ್ತ ಮೊಂದೆಡೆಯಲ್ಲಿ ವನ್ಯಮತ್ತಮಾತಂಗಯೂಥಂಗಳ್ ಬಂದು ಜಳಕೇಳೀವಿನೋದಾರ್ಥಂ ತದವಗಾಹ ನಂಗೆಯ್ದು ಜಳಮಂ ವಿಲೋಡಿಸಿ ಮುಳ್ಗಿದ ಪದದೊಳಪಾರಮದ ಧಾರಾಪೂರ ಪರಿವ್ಯಾಪ್ತಿಯಿಂದಂ ಕಪ್ಪಾಗಿ ಕಾಳಿಂದೀನದಿಯ ಶಂಕೆಯನಂಕರಿಸುತ್ತುಂ ಮತ್ತಮೊಂದೆಡೆ ಯಲ್ಲಿ ಮರಾಳಮರಾಳಿಕಾಲೀಲಾವಿನೋದದಿಂದಾದ ಘಾಸಿಯಿಂದಳ್ಳಾ ಡುತ್ತುಮಿರ್ದ ಮೃಣಾಳನಾಳಮನುಳ್ಳ ಮರಳ್ದರಳ್ದರವಿಂದವೃಂದಪರಿನಿಷ್ಯಂದಮಾನ ಮಕರಂದಬಿಂದು ಸಂದೋಹಮೊಂದಿ ಸುತ್ತಲುಂ ಪರಿಕೀಲಿಸೆ ಪಿಂಗಲವರ್ಣದಿ ಸೌಂದರಮಾಗಿ ಭಂಗಾರದ ಘಟ್ಟಿ ಕರಗಿ ಪರಿವ ಹೇಮರಸರೂಪಪ್ರವಾಹಮೆಂಬಂತೆ ಸೊಗಸನಜನಿಸುತ್ತುಮಿರೆ

ಗಂಭೀರಾವರ್ತವೃತ್ತಿ ಪ್ರವಲವಶಲುಟತ್ಪೀನಪಾಠೀನಯೂಥಃ
ಕುಂಭೀರ ಕ್ಷುದ್ರ ಶಂಖೋನ್ಮಕರ ಕಮಠ ಶಂಭೂಕಭೇಕ ಪ್ರವೇಕೋ
ಜ್ಜೃಂಭಂ ರಂಗತ್ತರಂಗ ಪ್ರಕಟನಟನರಂಗಂ ಮಹಾಘೋರಘೋಷಾ
ಸಂಭೀಳಂ ಕಣ್ಗುರ್ವಂ ಪಡೆದುದು ಪಿರಿದುಂ ತುಂಗಗಂಗಾಪ್ರವಾಹಂ ೭೨

ಸುತ್ತಂ ನೋಳ್ಪಡೆ ಚೆಲ್ವುವೆತ್ತ ಪುಳಿನಸ್ಥಾನಂಗಳಲ್ಲಿರ್ದು ಲೀ
ಲಾತ್ಯುತ್ಕೃಷ್ಟತೆಯಿಂದೆ ಪಾಡುವ ಪುಳಿಂದೀ ಗೀತರಾಗಂಗಳಿಂ
ದೆತ್ತಂ ಭೋರೆನುತುಂ ಮನೋಹರತೆಯಂ ತಾಳ್ದಿತ್ತದಾಶ್ಚರ್ಯದಿಂ
ಮತ್ತಾ ಗಂಗೆಯ ಪೋಲ್ವೆಗಿಲ್ಲ ತೊ ೞಗಳ್ ವಿಶ್ವಂಭರಾ ಭಾಗದೊಳ್ ೭೩

ಈ ವಾಹಿನಿಯ ಸಮೀಪ
ಕ್ಕಾ ವಾಹಿನಿ ಬಂದೊಡುಚಿತವಚನಮನದು ಸಂ
ಭಾವಿಸಿ ನುಡಿವಂತಿರ್ದುದು
ತೀವಿದೆರಳ್ತಡಿಯ ವೃಕ್ಷಪಕ್ಷಿಧ್ವನಿಯಿಂ ೭೪

ವ: ಇಂತತ್ಯುತ್ಕಟಮಾದ ತತ್ತಟಿನೀನಿಕಟತಟನಿಕಟಪ್ರದೇಶಮನಾ ಸೈನ್ಯಂ ತೊಟ್ಟನೆ ಮುಟ್ಟೆವರ್ಪುದುಂ

ಪಱುಗೋಲಂ ಕೆಲರೇಱಿ ಗುಂಡಿಗೆಗಳಿಂದೀಸಾಡಿ ಮತ್ತಂ ಕೆಲರ್
ನೆಱೆ ತೆಪ್ಪಂಗಳನೇಱಿ ಮತ್ತೆ ಕೆಲರುಂ ಮಾತುಂಗಯೂಥಂಗಳಂ
ತಱಿಸಂದೇಱಿ ಕೆಲಂಬರುಂ ತುರಗಮಂ ಬಂದೇಱಿ ಮತ್ತಂ ಕೆಲರ್
ತೊಱೆಯಂ ಪಾಯ್ದುದಶೇಷ ಸೈನಿಕಜನಂ ಕೌತೂಹಳಂ ತೋರ್ಪಿನಂ ೭೫

ವ: ಆಗಳ್

ವರಶುಂಡಾಲವಿಗಂಡಮಂಡಲ ಗಲದ್ದಾನಾಂಬುಧಾರಾ ನಿರಂ
ತರಪೂರಂಗಳಿನುನ್ನತ ಶ್ರಮತುರಂಗಬ್ರಾತ ಕಿಂಚಿಚ್ಚಲೋ
ದ್ಧುರ ವಕ್ತ್ರಂಗಳಿನೆಯ್ದೆ ಬಿಳ್ದ ಘನಫೇನೋತ್ಪಿಂಡಖಂಡಂಗಳಿಂ
ಪಿರಿದುಂ ವಾಹಿನಿ ಪೆರ್ಚಿದತ್ತು ಸಮನಾಮಪ್ರೀತಿಯೆಂದೆಂಬಿನಂ ೭೬

ವ: ಅಂತು ಮುಂಕುಡಿಯ ಸೇನಾಜನಂಗಳೆಲ್ಲಂ ತಂತಮ್ಮಿಚ್ಛಾನುಕೂಲ ವರ್ತಿಗಳಾಗಿ ತೊಱೆಯಂ ದಾಂಟುತ್ತುಮಿರಲ್ ಮತ್ತಮಾ ಧರ್ಮನಾಥಕುಮಾರಂ ಜಾಹ್ನವೀಜಳ ನೈರ್ಮಲ್ಯಮಂ ನೋಡಿನೋಡಿ ಕೊಂಡಾಡುತ್ತುಂ ತತ್ತೀರಮನೆಯ್ದೆವರ್ಪುದುಂ

ಒಡೆಯಂ ತಡಿಯೊಳ್ ನಿಲೆ ಕೈ
ಮಡಗದೆ ಪಱುಗೋಲನಂಬಿಗಂ ಸಾರ್ಚಿದೊಡಾ

ಗಡೆಯದಱಿಂದಂ ತೊಱೆಯಂ
ಕಡುಬೇಗದೆ ದಾಂಟಿಪೋಗಿಯಡರ್ದಂ ತಡಿಯಂ ೭೭

ವ: ಇಂತು ವಿಜ್ಞಾನನೌಕೆಯಿಂದಂ ತೃಷ್ಣಾನದಿಯನುತ್ತರಿಸುವಂತೆ ಕುವರಂ ತರಣಿಯಿಂ ಗಂಗಾತರಂಗಿಣಿಯನುತ್ತರಿಸುವುದುಂ ಬಳಿಯ ಸಮಸ್ತಸೈನ್ಯ ಜನಸಮೂಹಂಗಳೆಲ್ಲಂ ಪಾಯ್ದುಪೋಗಿಯಪರತೀರದೊಳ್ ನೆರೆದು ನಿಲಲೊಡಂ

ಜಡರೂಪೆ ತ್ರಿಪಥೆಗೆಯ್ದಿದ
ಱೊಡನಿರ್ಪುದನುಚಿತಮೆಂದು ತದ್ವಾಹಿನಿಯಂ
ಬಿಡೆ ಬೀಸಾಡಿಯೆ ದೂರಂ
ಗಡ ಪೋದುದಸಂಖ್ಯಪಥಗೆ ವಾಹಿನಿನೃಪನಾ ೭೮

ವ: ಮತ್ತಂ ವರೂಥಿನೀಸನಾಥನಪ್ಪಾ ಧರ್ಮನಾಥಕುಮಾರಂ ಗಂಗೆಯಂತೆ ಸಮಕರ ಮಾದನೇಕದೇಶಮಂ ದಾಂಟಿ ಕಿಱಿದಂತರಂ ಪೋಪುದುಮುಂದೊಂದೆ ಡೆಯೊಳ್ ಕಱಂಗಿ ಕತ್ತಲಿಸುತ್ತುಮಿರ್ಪ ವಿಂಧ್ಯಾಟವಿಯೆಂಬಗಣ್ಯಮಹಾರಣ್ಯಸ್ಥಳಮುಂ ಕಣ್ಬೊಲನಾಗೆ

ಕಡುನೀಳ್ದದ್ರುಮಷಂಡಮಂಡನ ಮಹಾಶಾಖಾಲೇಖಾಲೇಖೆಯಿಂ
ಕೊಡುತುಂ ಚುಂಬನಮಂ ವಿಯನ್ಮುಖಕೆ ಭೂರಿಧ್ವಾಂತದಿಂ ಕೂಡೆ ಭಿ
ಮ್ಮಿಡುತುಂ ಕ್ರೂರಮೃಗಂಗಳಿಂದೊಡರಿಸುತ್ತುಂ ಭೀತಿಯಂ ಸುತ್ತಲುಂ
ಪಡೆದತ್ತದ್ಭುತಮಂ ತಿರೋಹಿತದಿಶಾನೀಕಾನನಂ ಕಾನನಂ ೭೯

ಅತಿವಿಷಮವಿಷಧರಂ ಸಂ
ಯುತ ಭೀಷಣ ವನಚರಪ್ರಚಾರಂ ಪರಿವಿ
ಸ್ಫುತ ವಿದ್ರುಮಮುತ್ಕಳಿಕಾ
ಭೃತಮಾಗಿ ಸಮುದ್ರದಂತೆ ವನಮೆಸೆದಿರ್ಕುಂ ೮೦

ವ: ಮತ್ತಮಾ ವನಂ ಮಹೇಶ್ವರನಂತೆ ವಿಶಾಖಾವಭಾಸಿತಮುಂ ಕ್ಷತ್ರಿಯನಂತೆ ವಿಚಿತ್ರಪತ್ರಸಮಾಲಕ್ಷಿತಮುಂ ನಕ್ಷತ್ರಪ್ರಕರದಂತೆ ಮೂಲಸಮುಲ್ಲಾಲಿತಮುಂ ಚಾಟುಕಾರ ಪಟುಶಠವಿಟನಂತೆ ಕುಶಲಪಥಸನಾಥಮುಂ ಪಾಂಡವಕುಲದಂತರ್ಜುನಾಡಂಬರಪರಿ ಮಂಡಿತಮುಂ ಸುದತೀಜನದಂತೆ ಮದನಸಮುಜ್ಜೃಂಭಣ ಸಂಕಳಿತಮುಂ ದೇವೇಂದ್ರ ನಂತೈರಾವತ ವಿರಾಜಿತಮುಮೆನಿಪುದಂತುಮಲ್ಲದೆಯುಂ

ತಾಳದ ಮೇಳದಿಂದೆಸೆವುತಿರ್ದುದು ನಟ್ಟುವನಂತೆ ತೇಂಗಿನೊಂ
ದೋಳಿಯನೊಪ್ಪಿದತ್ತು ತಣಿವುಂಡವನಂತಿರೆ ಬನ್ನಿಯಿಂ ಸಮು
ಲ್ಲಾಲಿತಮಾಯ್ತು ತಾಂ ಕರೆವನಂತಿರೆ ತಂಡಸದಿಂದೆ ಚೆಲ್ವುಮಂ
ಪಾಲಿಸಿದತ್ತು ಹೇಮಕರನಂತೆ ವನಂ ಸಮುಪಾಶ್ರಿತಾವನಂ ೮೧

ಆ ವನದ ವೃಕ್ಷಚಯ ಶಾ
ಖಾವಳಯಾಗ್ರಂಗಳಲ್ಲಿ ಶಶಿರವಿಬಿಂಬಂ
ಪೂವಿನ ಪಣ್ಣಿನ ಗೊಂಚಲ
ಭಾವಮನಾಗಿಸುತುಮಿರ್ದುದಖಿಳಜನಕ್ಕಂ ೮೨

ವ: ಇಂತು ಕಡುಚೋಜಿಗಂಬಡೆದ ಪೇರಡವಿಯಂ ನೀಡುಂನೋಡುತ್ತ ಮೆಡಬಲದವರೊಡನೆಯುದಂ ಕೊಂಡಾಡಿನುಡಿಯುತ್ತಮಾ ನಾಡೆಱೆಯಂ ತಣ್ಣೆಳಲಿಂ ತಿಣ್ಣಮಾದರಣ್ಯಾವನಿಯೊಳಗಂ ಪೊಕ್ಕು ನಡೆವಾಗಳ್

ಚಮರಿಯ ಕೂದಲಂ ಕರಿಯ ದಂತಮುಮಂ ಕಡುಚೆಲ್ವ ಜೇನತು
ಪ್ಪಮನೆಳೆಸಿಂಗದೊಂದು ಮಱಿಯಂ ಹೊಸಹೂತಿಯ ಬೆಕ್ಕುಮಂ ಮೃಗೀ
ಸಮಿತಿಯನೊಲ್ದು ಕಾಣಿಕೆಯನಿತ್ತ ವನೇಚರರಾಜರಂ ಮಹೀ
ರಮಣಕುಮಾರಕಂ ಪಿರಿದುಮನ್ನಿಸಿ ತುಷ್ಟಿಯನುಂಟುಮಾಡಿದಂ ೮೩

ವ: ಅನಂತರಮಾ ಮಾನವಮೀನಕೇತನವರವರಿಂಗವಂ ಕೊಟ್ಟು ಕಾನನದ ಕಡುಚೆಲ್ವನಡಿಗಡಿಗವಲೋಕಿಸುತ್ತುಂ ಸಡಗರದಿಂದಂ ಮುಂದೆಪೋಗುತ್ತುಮಿರ್ಪುದುಮದಱೊಳೊಂದೆಡೆಯೊಳ್

ಹೊನ್ನೆ ಸುರಹೊನ್ನೆ ನೇಱಲ್
ಬನ್ನಿ ಬೆಳಂಬೀಡೆ ಹೊಂಗೆ ಹುಱುಗಿಲ್ ತಱಯಂ
ಚೆನ್ನತ್ತಿ ಮತ್ತಿ ಹುಣಿಸೆ ಬಿ
ದಿರ್ನಲ್ಲಿ ತಮಾಳಿ ಚಿಲ್ಲಮರನೆಸೆದಿಕ್ಕುಂ ೮೪

ನೆಲ್ಲಿಯ ಮರಂಗಳೋಳಿಗ
ಳಲ್ಲಿ ಕರಂ ತೋರ್ಪ ತೋರಗಾಯ್ಗಳ ಮೊತ್ತಂ
ತಲ್ಲಜಶೋಭಾವಿಭವದಿ
ನೆಲ್ಲರ ಕಣ್ಗೇವುತಿರ್ಪುದತಿಶಯಸುಖಮಂ ೮೫

ಸುಮನೋವಿಳಾಸಮೇನುಂ
ಸಮನಿಸದುಱೆಕಾಯ್ತೊಡಂ ದಲತ್ತಿಯ ಮರನು
ತ್ತಮರಿಂಗಸೇವ್ಯಮಾದುದು
ಸುಮನಂ ದೊರೆಕೊಳ್ಳದಿರ್ದೊಡಲ್ತುಪಯೋಗಂ ೮೬

ಹೊದಱಾಗಿರ್ದೇಳಾಲತೆ
ಪುದಿದು ಕಱಂಗಿರ್ದ ಮೆಣಸಿನೊಳ್ಬಳ್ಳಿ ತಳಿರ್

ಕೆದಱೆರ್ದ ಮೊಲ್ಲೆಪೂವಿಂ
ಪೊದವಿಸಿದವಿರ್ಮುತ್ತಿಯಲ್ಲಿ ಕರಮೆಸೆದಿರ್ಕುಂ ೮೭

ಕತ್ತಲೆಯೋಡಿಪೋಗಿ ಪುಗಲಾ ಗಹನಾಂತರಮಂ ತಮೋರಿ ಬೆಂ
ಬತ್ತಿಬರುತ್ತುಮಿರ್ದು ಪಿಡಿಯಲ್ಕನುಗೆಯ್ಯೆ ವನಾಳಿ ಸಾರ್ದರಾ
ಪತ್ತನಪೋಪಿಸಲ್ ಬಗೆದು ಮಾರ್ಮಲೆದೆತ್ತಿದ ಭಲ್ಲೆಯಂಗಳಂ
ತೆತ್ತಲುಮಿರ್ದ ದರ್ಭೆಗಳಿಗಂಜಿದವೋಲ್ ಪುಗಿಸಂ ಕರಂಗಳಂ ೮೮

ನೆಱೆಬಿಳ್ದ ಬಿದಿರ ಮೊತ್ತಂ
ಬಿಱುಗಾಳಿ ಕಡಂಗಿ ಪೊಯ್ಯಲಲ್ಲಾಡುತ್ತಂ
ದುಱೆ ಗೀಕುಗೀಕುಗೀಕೆಂ
ದೊಱಲ್ ಕರಂ ಝುಂಕಿಪಂತಿರಿರ್ದುದು ಬೆಳಗಂ ೮೯

ವ: ಮತ್ತಮಲ್ಲಿ

ಅತಿಶಯಭದ್ರಜಾತಿಗಜಸಂಕುಳಮೊಂದೆಡೆಯಲ್ಲಿ ಮತ್ತಮು
ನ್ನತಮೃಗಜಾತಿವಾರಣಗಣಂಗಳವೊಂದೆಡೆಯಲ್ಲಿ ಮತ್ತೆಯುಂ
ಕ್ಷಿತಿಸುತಮಂದ್ರಜಾತಿಕರಿವೃಂದಮದೊಂದೆಡೆಯಲ್ಲಿ ಕೂಡೆ ಸಂ
ಗತಿಯೊಳಮಲ್ಲಿಗಲ್ಲಿಗೆ ಗಜಂಗಳವಿಂಡುಗಳಿರ್ದವೆಲ್ಲಿಯುಂ ೯೦

ತನ್ನಯ ಕರಪುಷ್ಕರದಿಂ
ಬೆನ್ನಂ ತೊಡೆದೂಡಿ ಮೊಲೆಯನಿತ್ತೊಲ್ದಳಿರಂ
ಮನ್ನಿಸಿ ಪಿಡಿ ನಿಜಶಿಶುವಂ
ಚೆನ್ನಾಗಿಯೆ ನಡಯಿಸುತ್ತುಮಿರ್ದುದು ನೆಳಲೊಳ್ ೯೧

ಪಿಡಿಯ ಮುಂದೋಡಿ ಪೋದುದು
ಕಡುಪಿಂದರೆಗಚ್ಚಿ ತದುಕಿನೆಳೆದಳಿರಂ ಮೇ
ಗಡರೆತ್ತಿ ಸುಂಡಿಲಂ ಮುಂ
ದಿಡುವನ್ನಂ ತಾಯ್ಗೆ ಮೋಹಮೊಂದಿಭಕಳಮಂ ೯೨

ನಲವಿಂ ಪೆಣ್ಣಾನೆಯಂ ಕಂಡನುನಯಪರಮಾಗೊಯ್ದು ಪದ್ಮಾಕರೋರು
ಸ್ಥಳಿಗಂ ಮೇಲ್ವಲ್ಲಿ ನೀರಂ ಕೊಡೆವಿಡಿದರಳಿರ್ದಂಬುಜಾತಂಗಳಂ ಮಂ
ಜುಳಕುಂಜಕ್ಕೊಯ್ದು ನೀಡುತ್ತರಳಿಯ ತಳಿರಂ ಪೇಚಕೋಚ್ಚುಂಬನಕ್ಕಂ
ದೆಳಸುತ್ತುಂ ವಾಸಿಸುತ್ತುಂ ನಸೆಗನುವಶಮಾಯ್ತುಂಬುದಾಭಂ ಮದೇಭಂ ೯೩

ಎರಡುಂ ಪೆರ್ಬಾವುಗಳುಮ
ನೆರಡುಂ ಕೋಡುಗಳ ಮೊನೆಗಳಿಂದಿಱಿದೆತ್ತಲ್

ಪರಿಲಂಬಿಸಲದು ಮೂಱುಂ
ಭರಿಕೈಗಳನುಳ್ಳ ಕರಿಯವೋಲ್ ಕಣ್ಗೆಸೆಗುಂ ೯೪

ಮದಗಜಮೊಂದು ಮಾರ್ಪೊಳೆಯೆ ತಾಂ ಸ್ಫಟಿಕೋಪಳದೊಳ್ ಪ್ರತೀಭಮಂ
ದದನುಱೆನೋಡಿ ಕೋಪಿಸಿ ರದಂಗಳನೀಡಿಱಿಯಲ್ಕೆ ಕೊಂಬುಗಳ್
ತುದಿಮುಱಿಯಲ್ಕದಂ ಮರಳೆ ಕಂಡಿದು ತಾಂ ಪಿಡಿಯಾನೆಯೆಂದು ಸ
ಮ್ಮದದೊಳೆ ಮುಟ್ಟುತಿರ್ದುದು ಮದಾಭಿಹತಂ ಸುವಿವೇಕಿಯಪ್ಪುದೇ ೯೫

ಪಿಂದಣಭಾಗದಲ್ಲಿ ಮಱೆಗೊಂಡು ಮದೇಭದ ರೂಪು ತೋರಮಾ
ದೊಂದು ವಿನಿರ್ಮಳಸ್ಫುಟಿಕಕೂಟದೊಳಂ ಪ್ರತಿಬಿಂಬಿಸಲ್ಕದಂ
ಸಂಧಿಸಿ ಸಿಂಹಮೀಕ್ಷಿಸಿ ಕರೀಂದ್ರಮಿದೆಂದಭಿಶಂಕೆಯಿಂದೆ ಸಾ
ರ್ತಂದದು ಪೊಯ್ಯಲಂದುಗುರ್ಗಳುಂ ಮುಱಿಯಲ್ಕದು ನೊಂದುಪೋಪುದುಂ ೯೬

ಆನೆಗಳ ಪಿಂಡನೀಕ್ಷಿಸಿ
ತಾನೊಂದುತ್ಕಂಠಕಂಠಕರೀರವಮ
ಧ್ವಾನಿಸಿ ಸೀಳ್ದತ್ತವಱವ
ಱಾನನದಿಂ ಸುರಿಯಲರುಣಮುಕ್ತಾಜಾಳಂ ೯೭

ಹರಿಗಳ ಪಿಂಡು ಕಂಡು ಮದದಾನೆಗಳೋಳಿಗಳಂ ಪ್ರಕೋಪಿಸಿ
ತ್ವರಿತದೆ ಬಂದು ಮೇಲೆಮಿಗೆವಾಯ್ದಿರದಪ್ಪಳಿಸಲ್ ಶಿರಂಗಳಿಂ
ಸುರಿದ ವಿಮೌಕ್ತಿಕಂಗಳಿಳೆಯೊಳ್ ಪೊಳೆವುತ್ತುಮವಿರ್ದವೆಲ್ಲಿಯುಂ
ತರುಗಳಮೊತ್ತಮೊತ್ತಿದೊಡೆ ಬೀಳ್ದುಡುಪಂತಿಗಳೆಂಬ ಮಾಳ್ಕೆಯಿಂ ೯೮

ಒಂದೆಡೆಯಲ್ಲಿ ಮೇಘಜವಿಮೌಕ್ತಿಕರಾಶಿಗಳಿರ್ದವಲ್ಲಿ ಮ
ತ್ತೊಂದೆಡೆಯಲ್ಲಿ ಕುಂಜರಜಮೌಕ್ತಿಕವೃಂದಮದೊಪ್ಪಿತಲ್ಲಿ ಮ
ತ್ತೊಂದೆಡೆಯಲ್ಲಿ ಸೂಕರಜಮೌಕ್ತಿಕಸಂತತಿ ತುಮಬಿತಲ್ಲಿ ಮ
ತ್ತೊಂದೆಡೆಯಲ್ಲಿ ವೇಣುಜವಿಮೌಕ್ತಿಕಸಂಕುಳಮಿರ್ದುದೆಲ್ಲಿಯುಂ ೯೯

ವ: ಇಂತತೀವಗಹನಮಾದಾ ಮಹಾಗಹನಾಂತರಾಳದೊಳ್

ಬಲೆಯಂ ಕಟ್ಟುವ ಪಾಸಮಂ ಪೊಸೆವ ಬಲ್ಕಾಲ್ಗಣ್ಣಿಯಂ ಪಣ್ಣುವ
ಗ್ಗಳಬಿಲ್ಗೀಸುವ ಕಲ್ಲಿಯಂ ಸಮೆವ ತೂಣೀರಂಗಳಂ ಮಾಳ್ಪ ಮಂ
ಜುಳಬಾಣಂಗಳನೆಯ್ದೆತಿರ್ದಿ ಗಱೆಗಟ್ಟುತ್ತಿರ್ಪ ಗುಂಟಂಗಳಂ
ಬಲುವುದ್ಯೋಗದೊಳಿರ್ದು ಹೆಕ್ಕಳಿಸಿದತ್ತುದ್ವೃತ್ತಕಣಂ ಪಕ್ಕಣಂ ೧೦೦

ಸಣ್ಣಗಾಡಿಗೆಯ ಪುಡಿಯಿಂ
ಪಣ್ಣಿದ ಪುತ್ಥಳಿಕೆಯಂತೆ ಪೊಳಪೇಱಿದ ಮೆ

ಯ್ವಣ್ಣಂ ಪರಿಕಲಿಸುತ್ತಿರೆ
ತಿಣ್ಣಂ ನೆರದಿರ್ದುದಲ್ಲಿ ಶಬರೀನಿವಹಂ ೧೦೧

ವ: ಆ ಶಬರಶಿಬಿರದೊಂದೆಡೆಯೊಳ್

ಚಂದನದಿಂದೆ ಮಾಡಿದೊರಳೊಳ್ ಬಿದಿರಕ್ಕಿಯನೆಯ್ದೆ ಪೊಯ್ದು ಚೆ
ಲ್ವೊಂದಿದ ದಂತದೊಂದೊನಕೆಯಂ ಪಿಡಿದೊಳ್ಪಳಿಸುತ್ತುಮಿರ್ದ ಪೌ
ಳಿಂದಿನಿ ಸೂವಿಸೂವಿ ಗಜಮಲ್ಲನೆ ನಲ್ಲನೆ ಸೂವಿಸೂವಿ ಶ
ತ್ರುಂದಮ ಬಿಲ್ಲಬಲ್ಲಹನೆ ಸೂವಿಯೆ ಸೂವಿ ದಲೆಂದು ಪಾಡಿದಳ್ ೧೦೨

ಕಾಯಂ ಕೊಯ್ಯಲ್ ಕೆಲಂಬರ್ ಗೆಳಸನಗೆವ ಕಜ್ಜಂಗಳಿಂದಂ ಕೆಲಂಬರ್
ಬೀಯಂ ತಾನೇನುಮಿಲ್ಲೆಂದಱಿದು ಬಿದಿರ ಚೆಲ್ವಕ್ಕಿಯಂ ಬೇಗದಿಂದಂ
ದಾಯಲ್ವೇಕೆಂದುಮಲ್ಲಿಂ ಕೆಲರುಱಿಪೊಱಮಟ್ಟತ್ತಲಿತ್ತಲ್ ಪುಳಿಂದ
ಸ್ತ್ರೀಯರ್ ಪೋಗುತ್ತುಮಿರ್ದರ್ ಪೊಳೆದು ಮೆಱೆವಿನಂ ಚಂಚಲಾಪಾಂಗಪಾತಂ ೧೦೩

ರವಿಕರತಾಪತಾಪ್ತರವಿಕಾಂತಶಿಳಾತಳದಲ್ಲಿ ಪೋಗುತಿ
ರ್ಪ ವನಚರೀಜನಂ ಕುಚಯುಗಂಗಳ ಭಾರಮದೆಯ್ದೆ ತಿಣ್ಣಮಾ
ಗವರತಿವೇಗದಿಂ ನಡೆಯಲ್ಕಾಱದವಕ್ಕೆ ಕನಲ್ದು ಬಯ್ವರಿಂ
ತಿವು ಕಡುಚಂದವೇಕೆಮಗೆ ತೋರಿದವಾದುವೆನುತ್ತುಮಾಕ್ಷಣಂ ೧೦೪

ವ: ಮತ್ತಮದಱಿಂದತ್ತಲೊಂದನೇಕಾನೋಕಹನಿಕರಸಮುದ್ರೇಕದಿಂ ಪರ್ವಿ ಸುರ್ವುಗೊಂಡ ಬಲ್ಲಡವಿಯಲ್ಲೊಂದು ತಾಣದೊಳ್

ಹಿಡಿಯಂಬಂ ಕಟ್ಟೆ ಬಾರಿಂದುಡೆದೊವಲೆಡೆಯೊಳ್ ಬಿಲ್ಲುಮಂ ಕೌಂಕುಳಲ್ಲಂ
ದಡಸಿಟ್ಟೆಯ್ವೊತ್ತಿಯಂಬಂ ತಿರುಪುತೆ ಬಲಗೈಯಲ್ಲಿ ಪೆಣ್ಣಾಯ್ಗಳಂ ಸಂ
ಗಡದೊಳ್ ಕೊಂಡೊಯ್ಯುತ್ತುಂ ಸುತ್ತಲುಮೆಡಬಲನಂ ನೋಡುತುಂ ಪೋದನೊರ್ವಂ
ಕಡುಪಿಂದಂ ಬೇಂಟೆಯ ಕ್ರೀಡೆಗೆ ದರವಿಳಸತ್ಕಿಂಕರಾತಂ ಕಿರಾತಂ ೧೦೫

ವ: ಆಗಳ್

ತಳಿರ್ಗಳ ತೊಂಗಲಂ ಬಿಗಿದು ಸೀರೆಯ ಮಾಳ್ಕೆಯಿನುಟ್ಟು ಗುಂಜೆಯಿಂ
ದಳವಡೆ ಮಾಡಿದೊಳ್ತೊಡಿಗೆಯಂ ಸಲೆತೊಟ್ಟುಱೆ ಹೀಲಿದಂಡೆಯಂ
ತಲೆಯೊಳೆ ಸುತ್ತಿಂ ತಾಂ ಬಿದಿರಮುತ್ತಿನ ಹಾರಮನಿಕ್ಕಿ ಗಂಡನಂ
ತೊಲಗದೆ ಪಿಂದೆ ಬಿಲ್ವಿಡಿದು ಬರ್ಪ ಪುಳಿಂದಿನಿಯೊರ್ವಳೊಪ್ಪಿದಳ್ ೧೦೬

ಕಾಡೊಳೆ ಬೇಂಟೆಗಾಗಿ ಸುಳಿದಾಡುತುಮಿರ್ಪೆಡೆಯಲ್ಲಿ ಬೇಡನಂ
ಬೇಡಿತಿ ಬೇಡೆ ತಂಬುಲಮನಿಕ್ಕುವ ಪೊತ್ತಿನೊಳೆಯ್ದೆ ಘರ್ಜನಂ

ಮಾಡುವ ಸೊಕ್ಕಿದೆಕ್ಕಲನನೀಕ್ಷಿಸಿ ನಾರಿಯೊಳಿಟ್ಟು ಬಾಣಮಂ
ಹೂಡಿದ ಬಿಲ್ಲುಮಂ ಪಿಡಿದೆಸಲ್ಕವನುದ್ಯತನಾಗಲಾಕ್ಷಣಂ ೧೦೭

ಕಡುಪಿಂ ಮೇಲ್ವಾಯಲೆಂದವ್ವಳಿಸಿದಪುದಿದೆಂದಂಜುತಂ ವಾಮಪಾರ್ಶ್ವಂ
ಬಿಡದೆಯ್ತಂದಾತನಂತಪ್ಪ ಬರಿಬರಿಯನಾಲಿಂಗನಂಗೆಯ್ಯಲಾಗಳ್
ಕಡುರಾಗದ್ವೇಷಮೆಂಬೀಯೆರಡುಮೊಡನೆ ಕೂಡಿರ್ದು ತಳ್ತೇಕರೂಪಂ
ಬಡೆದಿರ್ದತ್ತೆಂಬಿನಂ ಕಣ್ಗೆಸೆದನುಪಗತಂ ಸೊಪ್ಪುಳಿಂದ ಪುಳಿಂದಂ ೧೦೮

ಮಸೆವುತ್ತಂ ದಾಡೆಯಂ ಕೆಕ್ಕಳಿಸಿ ದೆಸೆಗಳಂ ನೋಡುತುಂ ಬಾಲಮಂ ಲಂ
ಬಿಸುತುಂ ರೋಮಾಂಕುರಂಗಳ್ ನೆಗೆನೆಗೆದು ನಿಲಲ್ ಗರ್ಜಿಸುತ್ತುಂ ಕರಂ ಮಾ
ಮಸಕಂಬೆತ್ತಿರ್ದು ಸುತ್ತಂಬಳಸಿದ ಶಬರವ್ರಾತಮಂ ಮೇಲೆವಾಯ್ದಂ
ಜಿಸಿಯೊಟ್ಟೈಸೋಡಿಪೋದತ್ತದಱೊಳೆ ವಿಲಸದ್ದೀರ್ಘದೇಹಂ ವರಾಹಂ ೧೦೯

ವ: ಸಮನಂತರಂ

ಜಡಿಯುತ್ತುಂ ಬಾಲಮಂ ಗರ್ಜಿಸಿ ಕರತಳದಿಂ ಭೂಮಿಯಂ ಪೊಯ್ದು ಮತ್ತಂ
ಕಡುಮೇಲ್ವಾಯದೋವದಂದಪ್ಪಳಿಸಿ ನಖಮುಖಾಗ್ರಂಗಳಿಂದೌಡೆ ಮೆಯ್ಯಂ
ಕಡುಪಿಂದಂ ಕೀಳ್ತು ಕೂರಿತ್ತೆನಿಪ ಸುರಿಗೆಯಿಂ ಕುತ್ತೆ ರಕ್ತಪ್ರವಾಹಂ
ಬಿಡೆ ಬಾಯಂ ಮೂಗಿನಿಂ ಪೆರ್ವುಲಿಯನತಿಬಳಂ ಕೊಂದನೊಂದಂ ಪುಳಿಂದಂ ೧೧೦

ವ: ಬಳಿಯಮಲ್ಲಿಂದಂ ಮುಂದೊಂದು ವಿಕಟವಿಶಾಲವಿಟಪಪ್ರಕಟೀಕೃತ ಸಮುತ್ಕಟಪಟು ತರನಿಕಟವಿಟಪಿಪಟಲಿಕಾಸಮುಪಜಟಿಳಿತ ಪರಿಸ್ಫುಟಮಾದಟವಿ ಮಧ್ಯ ಪ್ರದೇಶದೊಳ್

ಬಿಡುಬಿಡು ನಾಯ್ಗಳಂ ಪರಿದು ಬೆನ್ನೊಳೆ ಮಾಣದೆ ಪೋಗು ಪೋಗು ಸಂ
ಗಡಿಸಿಯೆ ಬೀಸುಬೀಸು ಬಲೆಯಂ ಬಿಡದಾರ್ದೆಸೆಸೆಯ್ದುಕೊಲ್ಲು ಕೊ
ಲ್ಲಡಸಡಸೆಂಬ ಘೋರತರಘೋಷಮದುಣ್ಮಿರೆ ಬೇಂಟೆಕಾಱಪೆ
ರ್ವಡೆ ಮೃಗರಾಜಿಗಂತಕನ ಸೇನೆ ಕರಂ ಕವಿದಂತಿರೊಪ್ಪುಗುಂ ೧೧೧

ವ: ಆಪೊತ್ತಿನೊಳ್

ಉರವಣಿಪ ಬೇಂಟೆಕಾಱರ
ನೆರವಿಯನವಲೋಕಿಸುತ್ತುಮಿರ್ದತಿಭಯದಿಂ
ಹರಿಹರಿದುಪೋಯ್ತು ಮಱೀ
ಸರಿ ಸರಿದೋಡಿತ್ತು ಹರಿಣಿ ಹರಿಸಿದುದಸುವಂ ೧೧೨

ಹುಲಿ ಹೊದಜಿಲ್ಲಿ ತಗ್ಗಿದುದು ಹೇರುಡು ಹುತ್ತದೊಳೋಡಿ ಪೊಕ್ಕುದ
ಗ್ಗಲಿಸಿದ ಕುಂಜದೊಳ್ ಕರಡಿ ಮೆಯ್ಗರೆದಿರ್ದುದು ತಳ್ತ ಕಂತುಱೊಳ್

ಮೊಲನಡಗಿತ್ತು ಗಹ್ವರದ ಕತ್ತಲೆಯೊಳ್ ಮರೆ ಕುಳ್ಳಿದತ್ತು ಕೀ
ಳ್ಳಿಲದೊಳೆ ಪತ್ತಿದೊಂದುಸಿರದೆಯ್ಮೃಗಂ ಜಗುಳ್ದತ್ತು ಜಂಬುಕಂ ೧೧೩

ಕೆಲವದಱೊಳ್ ಪುಣ್ಬಡೆದವು
ಕೆಲವದಱೊಳ್ ಬಿಳ್ದು ಮೊರೆವುತಿರ್ದವು ಮತ್ತಂ
ಕೆಲವದಱೊಳೋಡಿಪೋದವು
ಕೆಲವದಱೊಳ್ ಸತ್ತುದಾಳ್ದವತಿರೌದ್ರತೆಯಂ ೧೧೪

ವ: ಮತ್ತಮಲ್ಲಿ

ಬಿಲ್ಲಿಂ ಬಿಲ್ವೆ ಸ್ವಹಸ್ತಾಗ್ರದೊಳೆ ಪಿಡಿದುಮಾಕರ್ಣಪೂರ್ಣಂ ದಲಾಗಿ
ರ್ದೆಲ್ಲರ್ಗಂ ಚೋದ್ಯಮಪ್ಪಂತಿರೆ ತೆಗದೆಸಲಾ ಬಾಣದಿಂ ಮುಂದೆ ಮುಂದಂ
ತಲ್ಲಿಂದತ್ತತ್ತಮೋಡುತ್ತವೆ ತಿರಿಪಿ ನಿಜಾಗ್ರೀವಮಂ ನೋಡುತುಂ ಮ
ತ್ತಲ್ಲಿಂದಾಳೇಱನೆಂಟುಂ ಸರಳಿಸಿದುದು ಭೀತಾಂತರಂಗಂ ಕುರಂಗಂ ೧೧೫

ಬೊಬ್ಬಿಱಿದಾಲಿ ಪಿಂದುವರಿದೋಡುವ ಪುಲ್ಲೆಯನೆಚ್ಚುಕೊಂದಡಂ
ತುರ್ವರೆಯಲ್ಲಿ ಬಿಳ್ದಿರಲದಂ ಬಳಸಿರ್ದು ನಿರೀಕ್ಷಿಸುತ್ತುಮಿ
ರ್ಪುರ್ವಿದ ಸತ್ತುಳಿಂದಿಯರ ಚಾರುಕಟಾಕ್ಷಮರೀಚಿ ಸುತ್ತಲುಂ
ಪರ್ವಿರೆ ಚಂದ್ರಮಂಡಲದ ಪುಲ್ಲೆಯವೋಲೆಸೆದತ್ತದಾಕ್ಷಣಂ ೧೧೬

ವ: ಅಲ್ಲಿಂ ಮುಂದೊಂದು ರಮಣೀಯಮಣಿಮಯವಿಮಳತರ ವಿಪುಳಶಿಲಾ
ತಳಪ್ರದೇಶದೊಳ್

ಕಿರಣಗಣಂಗಳಂ ಕೆದಱುತಿರ್ದ ವಿಶಾಲಸುಪದ್ಮರಾಗವಿ
ಸ್ಫುರಿತಶಿಳಾತಳಾಗ್ರದೊಳೆ ನಿಂದಿರೆ ಪುಲ್ಲೆಯದಂ ಸಮೀಪದೊಳ್
ತ್ವರಿತದೆ ಕಂಡು ಪೇರಡವಿಗಿಚ್ಚು ಸಮಾವರಿಸಿತ್ತು ನೋಳ್ಪಡಿಂ
ತಿರದಿದನೆಂದು ತಳ್ಳಳಿಸುತಿರ್ದುದು ತನ್ಮೃಗಶಾಬಮಾಕ್ಷಣಂ ೧೧೭

ಆಗಸದಲ್ಲಿ ಪಾಱಿ ಮಿಗೆಪೋಗುತುಮಿರ್ದ ವಿಹಂಗಮಾಂಗಮಿಂ
ಬಾಗಿರೆ ಚಂದ್ರಕಾಂತಶಿಲೆಯೊಳ್ ಪ್ರತಿಬಿಂಬಿಸಿ ತೋಱುತಿರ್ದುದಂ
ಬೇಗದೆ ಸುತ್ತುತಿರ್ದಡವಿಬೆಕ್ಕು ನಿರೀಕ್ಷಿಸಿ ಪಕ್ಷಿ ತಪ್ಪದೆಂ
ದಾಗಳದಂ ಕದಕ್ಕದಿಸಿ ಕಚ್ಚುತುಮಿರ್ದುದು ಕೂಡೆ ಪೋಗುತುಂ ೧೧೮

ತಿಳಿದ ಕೊಳಂಗಳಿತ್ತಡಿಗಳಲ್ಲಿಯ ನಿರ್ಮಳಚಂದ್ರಕಾಂತ ಮಂ
ಜುಳಶಿಲೆಯಲ್ಲಿ ಲೀಲೆಯೊಳೆ ಕುಳ್ಳಿದ ಬಾಳಮರಾಳಕಂಗಳು
ಜ್ಜ್ವಳಿಸಿ ದಲಲ್ಲಿ ಮಾರ್ಪೊಳದವಿಮ್ಮಡಿಯಾಗಿರೆ ಕಂಡು ತಾಯ್ಗಳುಂ
ತಳೆದುವು ಹರ್ಷಮಂ ಪಲವುಮಕ್ಕಳುಮಾಗಿರಲಾರೊ ಮೋಹಿಸರ್ ೧೧೯

ಫಲತರುಶಾಖೆಗಳ್ ಕೆಲದ ಸುಸ್ಫಟಿಕಾಫಳದಲ್ಲಿ ಕೂಡೆ ಮಾ
ರ್ಪೊಳೆಯಲದಂ ವಿಮುಗ್ಧಕಪಿಗಳ್ ನಡೆನೋಡಿ ದಿಟಂ ದಲೆಂದು ತ
ತ್ಫಳದಭಿಲಾಷೆಯಿಂದಮಿರದಲ್ಲಿಗೆ ಲಂಘಿಸಿ ಕಚ್ಚಿಕಚ್ಚಿಯುಂ
ಸೆಳೆದೊಡೆ ನೊಂದು ಪಲ್ ಮುಱಿಯೆ ಬೀಳ್ದುರುಳಿತ್ತೊದಱುತ್ತುಮಾಕ್ಷಣಂ ೧೨೦

ಗಂಡಭೇರುಂಡನತ್ಯು
ದ್ದಂಡಂ ಸರಭಂಗಳೆರಡುಮಂ ಕಚ್ಚಿ ನಭೋ
ಮಂಡಳದೊಳ್ ತೂಗಿದುದುಱೆ
ತುಂಡತುಳಾದಂಡದಿಂದಮೊಂದರೆಜಾವಂ ೧೨೧

ವ: ಇಂತಗುರ್ವುವಡೆದುರ್ವಿ ಕೊರ್ವಿ ಪರ್ವಿದ ಪೇರಡವಿಯೊಳಗತೀವ ಭಯಂಕರಾಕಾರಂಗಳಪ್ಪ ತಿರ್ಯಗ್ಜೀವಂಗಳ ಗತಿಸ್ವಭಾವವ್ಯಾಮೋಹವಧವೈರಸ್ಯಂಗಳಂ ನೋಡಿ ನೋಡಿ ಕಡುಚೋದ್ಯಂಬಡುತ್ತುಂ ನಡೆವ ಧರ್ಮನಾಥಕುಮಾರನ ಮುಂದೊಂದೆಡೆಯೊಳ್

ವನದೊಳ್ ಕೂಡೆ ತೊಳಲ್ದು ಬಂದುದಱಿನಾದಾಯಾಸಮಂ ಮದ್ಯಸೇ
ವನೆಯಿಂದಂ ಕಿಡಿಸಲ್ಕೆವೇಡಿ ಮಿಗೆಮೊತ್ತಂಗೊಂಡು ಸುತ್ತಂ ಪುಳಿಂ
ದಿನಿಯರ್ ಸರ್ವಪುಳಿಂದರುಂ ಬಿಡದೆ ಕುಳ್ಳಿರ್ದರ್ ಸುರಾಪೂರ್ಣಭಾ
ಜನಮಂದೋಹಮನಿಟ್ಟು ಮದ್ಯದೆಡೆಯೊಳ್ ಕೈಮಿಕ್ಕ ಸಂತೋಷದಿಂ ೧೨೨

ಕಿವಿಯೊಳ್ ಸೆಕ್ಕಿ ತೊಳಪ್ಪ ದಾಸಣದ ಹೂವಂ ಚೆಲ್ವ ದಂತಂಗಳಿಂ
ದವೆಮಾಡಿರ್ದುರುಕುಂಡಳಂ ಮಣಿಗಳುಂ ತಳ್ತೊಪ್ಪಿರಲ್ಕುಟ್ಟು ನು
ಣ್ದೊವಲಂ ಬಿಲ್ಗಳನಿಕ್ಕಿಕೊಂಡು ಹೆಗಲೊಳ್ ತದ್ವಾರ್ತೆಗೇಳ್ದಾರ್ತದಿಂ
ದವೆ ಮತ್ತಲ್ಲಿಗೆ ಬೇಡರೆಯ್ದಿಬರುತಿರ್ದರ್ ನಾಲ್ಕುದಿಗ್ಭಾಗದಿಂ ೧೨೩

ಹಾವಿನ ಹಾರಮಂ ಕೊರಳೊಳಿಕ್ಕಿ ತೊಡಂಕಿಸಿ ಕಕ್ಕಪಾಳಮಂ
ತೀವಿದ ಚೆಲ್ವನುಳ್ಳ ಪೆಗಲೊಳ್ ಕಡುಹುಂಡಮೆನಿಪ್ಪ ಕಂಥೆಯಂ
ಭಾವಿಸಿ ತೊಟ್ಟಕೊಂಡೆರಲೆಗೋಡುಗಳುಂ ಕುಣಿದಾಡೆ ವಕ್ಷದೊಳ್
ಸಾವಗಿಸುತ್ತೆ ಜೋಗಿಣಿಯರಂ ನೆರೆದೆಯ್ದಿದರಲ್ಲಿ ಜೋಗಿಗಳ್ ೧೨೪

ವ: ಇಂತಾಸವಸೇವನಾಶೆಯಿಂದಂ ಬಂದೊಂದಿ ನಿಂದ ಪುಳಿಂದಿಯರ ಜೋಗಿಗಳಂದಮನಿಂದುಮುಖಿಯರಂದು ನಡೆನೋಡಿ ಕಂಡು ಕರೆದು ಹಿರಿಯರಱಿದಲ್ಲಲ್ಲಿ ಕುಳ್ಳಿರಿಸಿದನಂತರಂ ನಡುವಣೆಡೆಯೊಳಡಸಿಟ್ಟ ರಂಗವಾಲಿಯ ಮೇಲೆ

ವಾಸಂತಿಯ ಕುಸುಮದ ಹೊಸ
ಹಾಸಿನೊಳಂ ಗಂಡಭೈರವನನಿರಿಸಿ ಮಹಾ

ಭಾಸುರಕಿಸಲಯದಿಂ ಸಮೆ
ದಾಸುರ ಹಸೆಗಳೊಳಮಷ್ಟವಿಧದೇವ್ಯರುಮಂ ೧೨೫

ವ: ನೆಲೆಗೊಳಿಸಿ ಬಳಿಯಮವರ ಮುಂದೆ ಮಾಂದಳಿರ ಮಣೆಗಳೊಳ್

ಸಿರಿಸಿಂಬಿ ತಂಪುಗಂ ಬ
ಬ್ಬರಿ ಗಂಗಾಸಾಗರಂ ಸುರಾಳಂ ಸೋಮಂ
ವರವಾಣಿ ಮಾಳವೋದರಿ
ಮರವಟ್ಟಿಗೆಯೆಂಬ ಕೆಲವು ಪೆಸರಿನ ಕಳ್ಳಂ ೧೨೬

ತುಂಬಿರ್ದನೇಕಘಟನಿಕು
ರುಂಬಮನನುರಾಗದಿಂದೆ ತಂದಿಳಿಪಿದೊಡಂ
ದಂಬುರುಹಂ ಮೊದಲಾದವ
ಱಂ ಬಗೆವುಗೆ ಮಾಡಿದರ್ ಸಮಧಿವಾಸನೆಯಂ ೧೨೭

ವ: ಇಂತು ಕಂಪುವಡೆಯಿಸಿ ಮಂತ್ರವಿಧಿಯಿಂ ಪೂಜಿಸೆನಲೊಡಂ

ಪಡೆದು ಭುವನೇಶ್ವರೀಕೋ
ಶದ ವಿವರಮನೆಯ್ದೆತಿಳಿದ ಕಾಳೋಜಂ ಬಹು
ವಿಧಬಲಿವಿಧಾನದಿಂದಂ
ಮಧುದೇವತೆಯಂ ಪ್ರಮೋದದಿಂ ಪೂಜಿಸಿದಂ ೧೨೮

ವ: ಇಂತು ಘಟಪೂಜೆಯಂ ಮಾಡಿದಾಗಳ್

ಪೆಸರಿಲಿಯ ಬೊಟ್ಟಿನಿಂದಂ
ದೆಸೆದೆಸೆಗಂ ಮಿಡಿದುಮಿಡಿದು ಕೈಮುಗಿವುತ್ತುಂ
ವಸುಧೆಗೆಂದೊಕ್ಕು ಕಿಱಿದಂ
ಮುಸುಱಿಯ ತಲೆಯಲ್ಲಿ ತಳಿದು ಸಲೆಪೊಡೆವಟ್ಟರ್ ೧೨೯

ವ: ತದನಂತರಂ

ಚಟ್ಟಳೆಯಲ್ಲಿ ಬಟ್ಟಸೊರೆಯೊಳ್ ಪೊಸಗಾಜಿನ ಚಾರುಪಾತ್ರೆಯೊಳ್
ಬಟ್ಟಲೊಳಿಂದುಕಾಂತಮಯಭಾಜನದೊಳ್ಪರಲಾವೆಯೋಡಿನೊಳ್
ಘಟ್ಟಿಯೆ ಮೇರೆಯಾಗಿ ತಿಳಿಗಳ್ಳನದಂ ನೆಱೆತುಂಬಿತಂದು ಮುಂ
ದಿಟ್ಟುದು ಮೀಱದಗ್ರಜರನುಕ್ರಮಮಂ ಶಬರೀಸಮೂಹಕಂ ೧೩೦

ಕೆಲದೊಳ್ ಪಾಸಿದ ಕದಳೀ
ದಳಭಾಜನದಲ್ಲಿ ಪಲವುತೆಱದಡಬಳಮಂ

ಲಲನೆಯರೊಲ್ದಿಕ್ಕಿದರ
ಗ್ಗಲಿಸಿದ ಪರಿಪರಿಯ ಮೀನ ಬಾಡುಮನದಱೊಳ್ ೧೩೧

ಧಮ್ಮಗಳ್ಗೆಱೆವುತುಂ ಘನ
ಸಮ್ಮದದಿಂ ಭಾಗಗಳ್ಗನೆಱೆವುತ್ತುಂ ಬಳಿ
ಯಮ್ಮಿಗೆ ಬಿನದದ ಕಳ್ಗೆಱೆ
ದರ್ಮಡದಿಯರಂದು ಕಳ್ಗನೀಂಟುವ ಮೊದಲೊಳ್ ೧೩೨

ವ: ಮತ್ತಂ ಮದ್ಯಮನಂಟುಸೂರ್ಯಂಗೆ ತೋಱಿ ಪೊಡೆವಟ್ಟು ಕಳ್ಗಂ ಕುಡಿ ಕುಡಿದು ಬಿಡಲಾಱದೆ ಕಡುತವಕದಿಂದಡಿಗಡಿಗೆ ಕೊರಳೆ ಮೇರೆಯಾಗಿ ಕುಡಿದು ಚೆಲ್ಲಗಾರ್ತಿಯರೊಡನೆ ಸಿರಿಸಿಂಬಿ ಸಾಸನಾಯ್ತು ಕಂಪಿಗಂ ಹಸನಾಯ್ತು ಬಬ್ಬರಿಗೆ ರುಚಿಯಾಯ್ತೆಂದು ಸವಿವೇಳ್ದು ಕೊಂಡಾಡುತ್ತುಂ ನಡುನಡುವೆ ಹುಲ್ಲೆಯೆರಲೆಯ ಹಂದಿಯ ತುಪ್ಪದಿಂದಂ ತೋಯ್ದುಪ್ಪುಗಂಡಂಗಳಂ ಚಪ್ಪಿಱಿದು ಕಡವಾಯಿಂ ಸೀಂಟಿಯಾಃಯೆನುತ್ತುಂ ಕಡಿಗಳಂ ಕಚ್ಚಿ ಮಡದಿಯರ್ಗೆ ಕೊಡುತ್ತುಂ ಸವಿಸವಿದು

ಚಟ್ಟಳೆಯಲ್ಲಿ ತೀವಿದ ಸುರಾರಸಮಂ ಕುಡಿಯುತ್ತುಮಿರ್ದ ನೇ
ರ್ಪಟ್ಟಿನಿಯಳ್ಗೆ ನೀಡಿ ಪಿಪಿಪಿಪ್ರಿಯ ಪಿಪ್ರಿಯಬೇಡವೇಡಿದಂ
ಬಿಟ್ಟುಮಮೋಹದಿಂ ಬಬಬಬಾಯೊಳೆ ಮುಕ್ಕುಳಿಸಿರ್ದು ಮದ್ಯಮಂ
ಕೊಟ್ಟೆನಗಾಗಿ ಸಾತಣೆವನೆಂಬ ತೊದಲ್ನುಡಿಯಿಂದಮೊಪ್ಪಿದಳ್ ೧೩೩

ವ: ಮತ್ತಮೊರ್ವಳ್ ಕಡುಮುಗ್ಧೆ ಪಳಿಕಿನ ಪಾತ್ರೆಯೊಳ್ ತಿಳಿಗಳ್ಗಂ ತುಂಬಿ ಕುಡಿವೆಡೆಯೊಳ್

ದೇಯದ ನೀಲದುಂಗುರದ ಕಾಂತಿಗಳಿಂ ಕರಿದಾಗಿ ಶೋಭೆಯುಂ
ಬೀಯದ ಪಾಣಿಶೋಣಮಣಿಕಂಕಣಸತ್ಕಿರಣಂಗಳಿಂದೆ ಕೆಂ
ಪಾಯತಮಾಗಿ ತೋಱಿದೊಡೆ ಮಾನಸದೊಳ್ ಪುದಿಯಲ್ಕೆ ಕೌತುಕಂ
ಮಾಯದ ಮದ್ಯಮೆಂದಬಳೆ ಪಿರದೆ ನೋಡಿದಳೊಂದುಜಾವಮುಂ ೧೩೪

ವ: ಬಳಿಯಂ ಕೆಳದಿಯರಿಂದದಱಂದಮಂ ತಿಳಿದು ಕುಡಿಯ ಮೊದಲ್ಗೊಂ ಬುದುಂ

ರವಿಬಿಂಬಂ ಪ್ರತಿಬಿಂಬಿಸಿರ್ದದಱೊಳಂ ತೋಱುತ್ತಿರಲ್ ಕಂಡು ಮ
ದ್ಯಮನಾಸ್ವಾದಿಸುತಿರ್ದವಳ್ ಬೆದಱಿ ಕಂಪಂಗೊಂಡು ನೀನಾರೊ ಮಾ
ನವನೋ ದೈವನೋ ಪೇಳುಪೇಳೆನಗೆನುತ್ತುಂ ಪೋಗುಪೋಗೆಂದು ಡೊಂ
ಗುವ ಕೈಯಂ ಮಿಗೆ ನೀಡಿ ಮತ್ತೆ ಬಲಿದೌಡಂ ಕಚ್ಚುತಂ ನೂಂಕಿದಳ್ ೧೩೫

ವ: ಅನಂತರಂ ತಣ್ಗಂಪಿನ ತಮರ್ಮನೆಯೆನಿಪ ಗಂಗಾಸಾರಮಂ ಕುಡಿದು ಸವಿವೊಗಳ್ದು ಮಗುಳ್ದು ತೇಯೆಂದು ಬೇಡುವುದುಂ

ಮಗಮಿಗಸುತ್ತಿರಲ್ ಮೊಗಪೆ ತಂದೆಜಿವಾಕೆಯ ಚೆಲ್ವನಪ್ಪ ನು
ಣ್ಮೊಗಮದಜಲ್ಲಿ ಮಾರ್ಪೊಳೆಯಲಾಗಳದಂ ನಡೆನೋಡಿ ಸಿಂಹಮೋ
ಸೊಗಯಿಸುವಾನೆಯೋ ಗಿಳಿಯೋ ಕೋಗಿಲೆಯೋ ದಲಿದಾವುದೆಂದು ಸಂ
ದೆಗಿಸಿ ಮರುಳ್ಗಳೇನಜೀವರೋ ಕಳಹಂಸೆಯಿದೆಂದಳಾಳಿಗಂ ೧೩೬

ವ: ಎಂದು ಪಿಕಳತೆಯನೊಳಕೊಂಡು ನುಡಿವುತ್ತುಂ ಕಳ್ಳಂ ಕುಡಿದಡಗಂ ತಿಂದದಜಿ ಮಹಿಮೆಯಂ ಮೆಚ್ಚಿಮೆಚ್ಚಿ ಬಿಚ್ಚತಂ ನಡಿದೂರ್ಪೊರ್ವರ ನಗೆಮೊಗಮಂ ನೋಡಿ ತಮ್ಮೊಳಿಂತೆಂದರ್

ಕನಸಿನೊಳ್ ಕುಡಿದೊಡಾಗಳೆ
ಮನಸಿನೊಳಂ ಸೊಕ್ಕಿಸುತ್ತುಮಿರ್ಪತಿಸಿತಗಂ
ಘನಮಾಗಿ ಸುಖಮನೀವೊಂ
ದನುಪೀ ಮಧುಪಿನೊಳಮಲ್ಲಮುಳಿವಜೊಳುಂಟೇ ೧೩೭

ಭಾವಜನ ಮಾವನಿದು ಲ
ಕ್ಷ್ಮೀವಧುಪಿಂಗಣ್ಣನಿದು ಸುಧಾರಸದನುಜಂ
ಭೂವಲಯದೊಳೀ ಮದ್ಯ
ಕ್ಕಾವನೋ ಮರುಳಾಗಿ ವಸ್ತುವಂ ಸಮೆಯದವಂ ೧೩೮

ಪೊಸತೆನೆ ತೋಜುವೊಳ್ಪಿಯ ಸಾರಮಿದಂ ಬಿಡುವನ್ನನಾವನೋ
ವಸುಮತಿಯಲ್ಲಿ ದೇವರಿದು ಕಾರಣಮಾಗಿ ಸುಧಾಂಬುರಾಶಿಯಂ
ಪೊಸೆದಮಿಳರ್ಗೆ ಕೊಟ್ಟರಿದನರ್ಥಿಯೊಳೆಂದೊಡೆ ಮತ್ತೆ ಲೋಕದೊಳ್
ಬಿಸುಟಿದನಾರೊ ಬಾಳುವರಿದಂ ತೊಱೆಯೆಂಬರನಿಕ್ಕು ಕಿಚ್ಚಿನೊಳ್ ೧೩೯

ವ: ಇಂತು ಶೌಂಡೀಕರೆಲ್ಲರುಂ ಶುಂಡಾಸಾಮರ್ಥ್ಯಮಂ ಕೊಂಡಾಡುತ್ತು ಮಿರ್ದ ನವರತಂ ಮದಿರಾರಸದ ಮದವೇಱೆ ಕಣ್ಗಳ್ ಕೆಂಪು ತಿಣ್ಣಮಾಗಿ ಬಿಣ್ಪುಮೆಯ್ಯೊಳ್ ಸೊಂಪಾಗಿ ಬಾಸೆ ಬಿಜ್ರನೆ ಬೀಗಿ ತೋಱೆ ಮೇಗೆಮೇಗೆ ತೇಗುನೆಗೆದು ಬಿಕ್ಕುಳೊಡನೆ ಪರಿಮಱಿಯಾಡುತ್ತುಮಿರಲಲ್ಲಿಗಲ್ಲಿಗೆ ಮಂಡಲಂಗೊಂಡು ಕಂಡರಂ ದಸರಿದೊಡಕಾದ ತೊದಳ್ನುಡಿಯಿಂದಂ ಕರದು ಬಯ್ಯುತ್ತು ಮುಟ್ಟುದಂ ಬಿಟ್ಟು ತಪ್ಪನೆಗುಟ್ಟುತುಂ ಕುಣಿದು ಮತಿಗೆಟ್ಟು ಕಳವಳಿಸುತ್ತಿರಲ ದಱೊಳೊರ್ವಂ

ಚಿಂತಿಸುವಂತಿರೊಂದುನಿಮಿಷಂ ತಲೆಗುತ್ತಿ ಬಳಿಕ್ಕೆ ಬೇಗದಿಂ
ದಂ ತೆಱೆದಕ್ಷಿಯಿಂದಜಸುವಂತಿರೆ ನೋಡಿದನಿಕ್ಕೆಲಂಗಳಂ
ಭ್ರಾಂತನಕಾರಣಂ ನಗುತುಮಿರ್ದುಗುಳ್ದಂ ನಸುಮುಚ್ಚಿದೋಷ್ಠದಿಂ
ದಂ ತುಱುಗಿರ್ದ ಮದ್ಯಮಯಬಿಂದುಗಳಂ ಮಧುಪಾನಮತ್ತಕಂ ೧೪೦

ವ: ಬಳಿಯಂ ಹಳೆಗಲಹಮಂ ನೆನೆದು ಕೆರಳ್ದು ಬಯ್ದು ಹುರುಡಿಸಿ ಬಾಯ್ಗೆವಂದಂತೆ ಕೈನಿಱಿದು ಗಳಪುತ್ತುಂ ಹೊತ್ತ ಮಡಕೆಯ ಕಳ್ಳು ನೆತ್ತಿಯಿಂ ಧಾರೆಗಟ್ಟಿ ಸುರಿಯುತ್ತುಮಿರ್ಪಿನಂ ನರ್ತಿಸುತ್ತುಂ ತಾರೇಲ್ಸೆಯ ಹಾಡುತ್ತುಂ ತಾಯ ಮೊಗಮಂ ನೋಡಿ ಸಾಯಿ ನೀನಾರೆನುತ್ತುಂ ಕೆಯ್ವೊಯ್ದು ಕಾಡುತ್ತುಮಿರ್ದು

ಉಟ್ಟುದನು ಮಱೆದುಬಿಟ್ಟೊಡೆ
ಚಟ್ಟಳೆಯಂ ಬಿಡದೆ ಪಿಡಿದು ಮಱೆಯದೆ ನಿಲ್ವೀ
ನಿಟ್ಟಿಗೆ ನೆಲೆಯಾದುದು ಬಾ
ಯ್ವಿಟ್ಟೊದಱುವ ಮದ್ಯಪಾನಮತ್ತಜನೌಘಂ ೧೪೧

ವ: ಇಂತು ಬೇರ್ವರಿದು ಕೆಯ್ಮಿಕ್ಕು ಸೊರ್ಕಿನಳುರ್ಕೆಯಿಂದುಕ್ಕುತ್ತುಂ ಪಲವು ತೆಱದನನ್ವಿತಮಂ ಗಳಪುತ್ತುಂ ಱೆಕ್ಕಟಂ ಮಸಗಿ ಕುಣಿದಾಡುತ್ತುಮಿರ್ದ ಮದ್ಯಪಿಗಳ ಬಳಗದ ಮಧುಪಾನಕೇಳೀವಿಜೃಂಭಣ ಬಹಳಕೋಳಾಹಳಕುತೂಹಳಮಂ ಧರ್ಮನಾಥ ಕುಮಾರಂ ನೋಡಿನೋಡಿ ನಗುತ್ತುಮಿಕ್ಕೆಲದೊಳಿರ್ದ ಮೇಳದವರ ಮೊಗಮನವಲೋಕನಂಗೆಯ್ದವರ ವಿಕಾರದ ಗೊಡ್ಡಾಟಮಂ ಸುಟ್ಟುಂಬೆಯಿಂ ತೋಱಿ ತೋಱಿ ಪೇಳುತ್ತುಂ ಕಿಱಿದಂತರಂ ಪೋಗೆ ತೊಟ್ಟನೆ ಕಟ್ಟಿದಿಱೊಳ್

ಮುಗಿಲಂ ಮುಟ್ಟುತುಮಿರ್ಪೋನ್ನತಶಿಖರಸಮೂಹಂಗಳಿಂ ವಿಸ್ಫುರದ್ಧ್ಯಾ
ನಗುಣಕ್ಕಾಧಾರಯೋಗಿಪ್ರವರರನೊಳಕೊಂಡಿರ್ದ ದುರ್ಗಹ್ವರಶ್ರೇ
ಣಿಗಳಿಂದಂ ನಿರ್ಜರಾಂಭಃಕಣತತಿಗಳಿನಾಕಾಶದಲ್ಲೆಲ್ಲಿಯುಂ ತಾ
ರೆಗಳಂ ಮಾಡುತ್ತುಮೊಪ್ಪಂಬಡೆದುದು ಪಿರಿದುಂ ರುಂದ್ರವಿಂಧ್ಯಾಚಳೇಂದ್ರಂ ೧೪೨

ಎನ್ನ ರಥಮೊಂದು ನಡೆಯ
ಲ್ಕುನ್ನತನಿಂ ಮೇಗೆ ಬಟ್ಟೆಯಂ ಕುಡವೇಳ್ಕುಂ
ಬನ್ನಂ ಪಾದಾನತನಾ
ಗಿನ್ನುಂ ಸೇವಿಸುತುಮಿರ್ಪನಿನನಾ ಗಿರಿಯಂ ೧೪೩

ಅದಱ ಘನಮೇಖಲಾವಳ
ಯದೊಳಂ ಕೀಲಿಸಿದ ತೋರಬೆಳ್ಳಿಯ ಗೆಜ್ಜೆ
ಳೊದವಿದ ಚೆಲ್ವಂ ಮಾಳ್ಪುದು
ಪದೆಪಿಂ ಬಳಸಿರ್ದ ತಾರಕಾನಿಕುರುಂಬಂ ೧೪೪

ವ: ಮತ್ತಮಾ ಪರ್ವತಂ ಪಾದಂಗಳುಳ್ಳೊಡಂ ಜಂಗಮಮಲ್ಲು ವಿಸ್ತೃತ ಪ್ರಸ್ಥಂಗಳುಳ್ಳೊಡಂ ನಿಯತಮಾನಾಭಿಯುತಮಲ್ಲು ವಿಪರೀತತೆಯುಳ್ಳೊಡಂ ದೌರ್ಜನ್ಯ ಸಮನ್ವಿತಮಲ್ತು ಚಾಪಮುಳ್ಳೊಡಂ ಧನುರ್ಧರನಲ್ತು ಕಟಕಮುಳ್ಳೊಡಂ ಚಕ್ರವರ್ತಿಯಲ್ತು ಗಾಯತ್ರಿ

ಯುಳ್ಳೊಡಂ ಬ್ರಾಹ್ಮಣನಲ್ತು ಅಮೃತಮುಳ್ಳೊಡಂ ಸ್ವರ್ಗಭೂಮಿಯಲ್ತು ಚಂದನತಿಲಕ
ಮುಳ್ಳೊಡಂ ಸುದತೀವದನಮಲ್ತುಮಂತುಮಲ್ಲದೆಯುಂ

ಮಿಗುವ ದ್ವಿಜಪರಿವಾರಿತ
ಮಗಣಿತ ಪುನ್ನಾಗಸೇವ್ಯಮಾನಂ ಪಂಕೋ
ಪಗತಮೆನಿಸಿರ್ದ ಬೆಟ್ಟಂ
ಸೊಗಯಿಸಿದುದು ರಾಜನಂತೆ ಲಕ್ಷ್ಮಿಯ ಪೆರ್ಚಿಂ ೧೪೫

ವ: ಆ ಗಿರಿವರಂ ವಟಸಂಕೀರ್ಣಮಾಗಿಯುಮವಟಸಂಕೀರ್ಣಮಂ ವನಪರಿ ಪೂರ್ಣ
ಮಾಗಿಯುಮವನಪರಿಪೂರ್ಣಮುಂ ಭಯೋತ್ಪಾದಕಮಾಗಿಯುಮಭಯೋ ತ್ಪಾದಕಮು
ಮೆನಿಪುದಂತುಮಲ್ಲದೆಯುಂ

ತುಂಗವ್ಯಾಘ್ರಾಂಗವಾನರಶರಭಮೃಗದ್ವೀಪಿಸಿಂಯೋನ್ನತಿ ಧ್ಯಾ
ನಾಂಗಾದಿಪ್ರೌಢಯೋಗೀಶ್ವರಮೃತವ್ಯಕಮಂ ತಾಳ್ದಿದೇ ತನ್ನಿಮಿತ್ತಂ
ಶೃಂಗಾರಂ ಹಾಸ್ಯ ರೌದ್ರಂ ಕರುಣಮುರುಭಯಂ ವೀರಮತ್ಯದ್ಭುತಂ ಶಾಂ
ತಂಗಂ ಭೀಭತ್ಸಮೆಂಬೀ ನವರಸಮಯಮಾಯ್ತುನ್ನಗೇಂದ್ರಂ ನಗೇಂದ್ರಂ ೧೪೬

ಸುರಮಿಥುನಂಗಳುಂ ಗುಹೆಗಳಲ್ಲಿ ಸುರಮ್ಯತಟಂಗಳಲ್ಲಿ ಖೇ
ಚರಮಿಥುನಂಗಳುಂ ಘನಲತಾಭವನಾಳಿಗಳಲ್ಲಿ ಕೂಡೆ ಕಿ
ನ್ನರಮಿಥುನಂಗಳುಂ ನೆಲಸೆ ಕಾಮವಿನೋದನಿಮಿತ್ತಮೆಲ್ಲಿಯುಂ
ಪಿರಜಿಸಿದತ್ತು ಶೈಲಮದು ಕಾಮನ ಕೇಳಿಯ ಶೈಲಶಂಕೆಯಂ ೧೪೭

ವ: ಅದಲ್ಲದೆಯುಂ

ಮೂಡಣ ಪಡವಣ ಕಡಲೊಡ
ಗೂಡಿ ಕರಂ ನೀಳ್ದು ನಿಮಿರ್ದ ಬೆಟ್ಟಂ ಚೆಲ್ವಿಂ
ರೂಡಿಸಿತು ನೆಲನನಳೆಯಲ್
ಮಾಡಿರಿಸಿದ ಸುಪ್ರಮಾಣದಂಡದ ತೆಜದಿಂ ೧೪೮

ವರರತ್ನಚ್ಛಾಯೆಯಿಂದಂ ಸಕಳದಶದಿಶಾಭಿತ್ತಿಭಾಗಂಗಳಂ ಕ
ರ್ಬುರಿತಂಮಾಡುತ್ತುಮಾದಂ ವಿಪುಳಕಳಶಚೂಳಾಗ್ರದಿಂ ಚುಂಬಿಸುತ್ತಂ
ಬರಮಂ ನಾನಾಪ್ರಕಾರಾತಿಶಯಿತಜಿನಚೈತ್ಯಾಲಯವ್ರಾತಮುಂ ತ
ದ್ಗಿರಿಸಾನೂದ್ಯಾನದಲ್ಲೊಪ್ಪಿದುದು ಸುರರ ಗೀತಂಗಳಿಂ ಭೋರೆನುತ್ತುಂ ೧೪೯

ವ: ಇಂತು ಸುರಾಸುರ ಕಿನ್ನರ ಕಿಂಪುರುಷ ಗರುಡ ಗಂಧರ್ವ ಯಕ್ಷ ರಾಕ್ಷಸ ಸಿದ್ಧ ವಿದ್ಯಾಧರ
ನಿಕರಂಗಳೆಲ್ಲಂ ನೆರೆದು ಪೂಜಿಸುವ ಹೃದ್ಯವಾದ್ಯಂಗಳಂ ಬಾಜಿಸುವ ಪಾಡುವಾಡುವ

ವೀಣೆಯಂಬಿಡಿವ ಸಂಭ್ರಮಕೋಳಾಹಳದಿಂ ಪೊಸಪೊಸತಾದ ವಿಳಸನದಿಂದೆಸೆವುತ್ತಿರ್ದ ಬಸದಿಗಳಿಂ ಬಳಸಿದ ಕಾರಣಂ ಮಂದರಗಿರಿಯಂತೆ ಸೌಂದರ ಮಾದ ವಿಂಧ್ಯಗಿರಿಯಂ ಕಂಡು ಪಿರಿದುಂ ಕೊಂಡಾಡುತ್ತುಂ ಧರ್ಮನಾಥಕುಮಾರಂ ಮುಟ್ಟೆವರ್ಪುದುಂ

ಉದಿರ್ವ ಸಂಪಗೆಯ ಕುಸುಮಸ
ಮುದಯಂಗಳಿನುದ್ಘನಿರ್ಝರೋದಕದಿಂದಂ
ದಿದಿರಾಗಿ ಧರ್ಮನಾಥಂ
ಗದು ಕೊಡುವಂತಿರ್ದುದರ್ಘ್ಯಪಾದ್ಯಂಗಳುಮಂ ೧೫೦

ವ: ಅನಂತರಂ ಕಿನ್ನರೇಂದ್ರನೊರ್ವನಾ ಪರ್ವತಸಾನುವಿಂದಿಳಿದುಬಂದು ದೇವರಿಂಗೆ ವಿನಯವಿನಮಿತೋತ್ತಮಾಂಗನಾಗಿ ಭಕ್ತಿಭರದಿಂ ಕೈಗಳಂ ಮುಗಿದು ಬಿನ್ನಪಮೆಂದಿಂತೆಂದುಂ

ಆವಲ್ಲಿ ನೀವು ನೆಲಸಿದಿ
ರಾ ವಿಷಯಂ ಧನ್ಯಮಾ ನಗಂ ಸೇವ್ಯತರಂ
ಪಾವನಮಾ ವನಮದನುಳಿ
ದಾವುದೊ ಭೂವಳಯದಲ್ಲಿ ತೀರ್ಥಸ್ಥಾನಂ ೧೫೧

ಎನ್ನ ಪುರಮಿರ್ಪುದೀ ಸಾ
ನೂನ್ನತಿಯಲ್ಲದಱಿ ಪಾವನಾರ್ಥಮೆ ನೀಮುಂ
ಮನ್ನಿಸಿ ಬಿಜಯಂಗೆಯ್ದಿ
ರ್ದೆನ್ನಂ ಕೃತಕೃತ್ಯನಾಗಿ ಮಾಡಲ್ವೇಳ್ಕುಂ ೧೫೨

ವ: ಅಂತು ಕಾರಣಮೆಂತಾದೊಡಂ ನೀವೀ ಧರಣೀಧರದ ರಮಣೀಯ ಮಣಿಮಯ ಸಾನುಸ್ಥಾನದಲ್ಲಿಗೆ ಮೆಲ್ಲಗೆ ಬಿಜಯಂಗೆಯ್ದಲ್ಲಿ ನೆಲಸಿರ್ದುದಲೆನ್ನ ಪುರಿಗಮತೀವ ಪವಿತ್ರತೆಯುಮನೆನಗಗಣ್ಯಪುಣ್ಯಲಾಭಾಭಿವೃದ್ಧಿಯುಮನೊಡರ್ಚಲ್ವೇಳ್ಕುಮೆಂದು ಕಡುವಿನಯದಿಂ ಬಿನ್ನಪಂಗೆಯ್ದೊಡೆಯರಂ ಬಿಡದೆ ಪ್ರಾರ್ಥಿಸಿ ಬೇಡಿಕೊಂಬುದುಂ

ಅತಿದೂರಂ ಬಂದು ಸೈನ್ಯಂ ಶ್ರಮವಶಗತಮಾಯಿತ್ತಿಲ್ಲಿ ನಾವಿರ್ಪುದೇ ಸ
ನ್ಮತವೆಂದಲ್ಲಿಂಗೆ ಪೋಗಲ್ಬಗೆದಿರಲದಱೆಂ ಮುನ್ನಮಾ ಕಿನ್ನರೇಂದ್ರಂ
ದ್ರುತದಿಂದಂ ಪೋಗಿ ತಾಂ ನಿರ್ಮಿಸಿದನುರುಪುರೀರೂಪಮಂ ಮತ್ತಮೊಂದು
ನ್ನತಸಾನುಸ್ಥಾನದೊಳ್ ಕೋಂಟೆಗಳಿನೆಸೆವಿನಂ ಮಾಟಕೂಟಂಗಳಿಂದಂ ೧೫೩

ಕುದುರೆಗಳ ಶಾಲೆಯೊಳಮು
ನ್ಮದ ಗಜಶಾಲೆಯೊಳೆ ಕೇರಿಗೇರಿಯೊಳಂ ತೋ
ರಿದುವೆನಿಪ ಹೊನ್ನಕಳಶಸ
ಮುದಯಂಗಳ ಕಿರಣದಿಂದೆ ಥಳಥಳಿಸುವಿನಂ ೧೫೪

ವ: ಇಂತು ಕಿನ್ನರೇಂದ್ರಪರಿನಿರ್ಮಿತ ನಿರತಿಶಯಪುರಮನಾ ಧರ್ಮನಾಥ ಕುಮಾರಂ ಚತುರ್ವಿಧಸೈನ್ಯಸಮನ್ವಿತನಾಗಿ ಪುಗುವುದುಂ

ಕ್ರಯವಿಕ್ರಯ ಸಂಭ್ರಮ ಜನ
ಚಯದಿಂದಂ ತುಂಬಿದಂಗಡಿಯನೀಕ್ಷಿಸುತುಂ
ಪ್ರಿಯದಿಂ ಪೊಕ್ಕಂ ಕರಮು
ಚ್ಛ್ರಯ ತೋರಣದಿಂದೆ ಮೆಱೆವ ರಾಜಾಲಯಮಂ ೧೫೫

ವ: ಅಂತು ಚಿನ್ನರನ್ನದಿಂ ಸಮೆದರಮನೆಯಂ ಪೊಕ್ಕು ಕೂಡೆ ಬಂದಧಿರಾಜ ಮಹಾರಾಜ ಪ್ರಭೃತಿ ರಾಜಕರಾಜನ್ಯಕಮಂ ತಂತಮಗೆ ಯೋಗ್ಯಂಗಳಾದಾವಾಸಂಗಳ್ಗೆ ಬೀಳ್ಕೊಟ್ಟು ಕಳಿಪುವುದುಂ

ಅಕ್ಷಣಮವರವರ ಬಲಂ
ಪ್ರಕ್ಷೋಭಿಸೆ ಸಂಭ್ರಮೋತ್ಥಕಳಕಳರವದಿಂ
ದಕ್ಷೂಣವಾದ್ಯರವದಿಂ
ದೆ ಕ್ಷತ್ರಿಯರೆಯ್ದಿದರ್ ನಿಜೋಚಿತ ಗೃಹಮಂ ೧೫೬

ವ: ಅನಂತರಂ

ದೂರಪಥಶ್ರಮವಶದಿಂ
ಧೀರನ ಮೆಯ್ಯಲ್ಲಿ ಘರ್ಮಜಳಬಿಂದು ಲವಂ
ಸಾರಿತ್ತಿಲ್ಲದು ಚರಮಶ
ರೀರದೊಳುದಯಿಸುವುದೆ ಪೊದಲ್ದವಳಲಂ ೧೫೭

ಪಸರಿಸೆ ಮೆಯ್ಗಳಲ್ಲಿ ಬಲದಿಂದಮೆ ಪುಟ್ಟಿದ ಧೂಳಿ ಕಾಂತಿಯಂ
ಮಸುಳಿಸೆ ಮನ್ಮಯತ್ವಮುಮನೆಯ್ದಿದುದೆಂಬಿನಮಾಯ್ತು ತಜ್ಜನಂ
ಪೊಸಪೊಸತಾಗಿ ಮತ್ತಮದಱಿಂ ಬೆಳಗಿರ್ದುರುದರ್ಪಣಂ ದಲೆಂ
ಬೆಸಕಮನೆಯ್ದೆಪುಟ್ಟಿಸಿದನಾ ಕುವರಂ ರಮಣೀಯಮೂರ್ತಿಕಂ ೧೫೮

ವ: ಬಳಿಯಮಾ ಕುಮಾರಶಿರೋಮಣಿ ಯಾತ್ರಾವೇಷ ವಿಶೇಷಮಂ ಪರಿಹರಿಸಿ ಪ್ರವಾಸ ದಾಯಾಸಂ ಲೇಶಮಾತ್ರಮಿಲ್ಲದಿರ್ದೊಡಂ ಪ್ರಸಿದ್ಧಲೋಕರೂಢವಶ ನಿಮಿತ್ತಂ ಕೃತಮಜ್ಜನನಾಗಿ ಭೋಜನವಿಧಾನಾನಂತರಂ

ಬೇಱೊಂದು ಚೆಲ್ವನಾಂತಂ
ನೀಱಿಂ ನೋಳ್ಪವರ ಕಣ್ಗಳಿಂಗತಿಶಯಮಂ
ತೋಱಿಸುತುಮಿರ್ದುದಂ ಮಿಗೆ
ಮೀಱಿದ ಶೃಂಗಾರದಿಂ ಸಮುಜ್ವಳಿಸುವುದುಂ ೧೫೯

ಮುದಮಂ ತಾಳ್ದಂ ಕುಮಾರೀಪರಿಣಯನದ ವಾರ್ತೋಕ್ತಿಯಿಂದಂ ಕುಮಾರಂ
ಮದನಾಕಾರಂ ಸುಧೀರಂ ನಿರುಪಮಸುಕೃತಾಧಾರನುತ್ಕೀರ್ತಿಪೂರಂ
ಪದನಮ್ರಕ್ಷ್ಮಾಭುಜಂ ಬಾಹುಬಲಿಸುಕವಿರಾಜಂ ಗುಣಾಂಭೋಧಿರಾಜಂ
ಸುದಯಾರೂಪಾಹಮಂ ಸತ್ಸುರಧರಣಿರುಹಂ ಚಾತುರೀಜನ್ಮಗೇಹಂ ೧೬೦

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮ ಜಿನಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವಪ್ರಸಾದ ಸಂಪಾದಪಾದನಿಧಾನದೀಪವರ್ತಿಯುಭಯಭಾಷಾ ಕವಿಚಕ್ರವರ್ತಿ ಬಾಹುಬಲಿ ಪಂಡಿತದೇವಪರಿನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಶೃಂಗಾರವತೀದೇವಿಯ ಸ್ವಯಂವರಕಲ್ಯಾಣಕಾರಣಂ ಧರ್ಮನಾಥ ಕುಮಾರ ಪ್ರಯಾಣವ್ಯಾವರ್ಣನಂ ದಶಮಾಶ್ವಾಸಂ.

●

ಏಕಾದಶಾಶ್ವಾಸಂ

ಶ್ರೀರಮಣೀರಮಣೀಯತ
ರೋರುಸ್ಥಳನೆಯ್ದಿದಂ ಮಹಾನಂದಮನು
ದ್ಧರಿತಜಗತೀಜನಕಂ
ಚಾರುಗುಣಂ ಸರಸಚತುರಕವಿಕುಳತಿಳಕಂ ೧

ವ: ತಂದನಂತರಮಾ ಧರ್ಮನಾಥಕುಮಾರಂ ಭಾವಿಸ್ವಯಂವರಕಲ್ಯಾಣ ಸಂಭ್ರಮ ಸಂದರ್ಶನೋತ್ಸುಕಚಿತ್ತನಾಗಿ ಮಱುದಿವಸಂ ಪ್ರಯಾಣಭೇರಿಯಂ ಪೊಯ್ಸಿ ನಿರ್ಯಾಣಸಮಯಕ್ಕನುರೂಪಮಾದ ವೇಷಮಂ ಧರಿಸಿ ಕಟಿತಟನಿಕಟನಿರ್ಯನ್ಮದ ಧಾರಾಪೂರಬಂಧುರಗಂಧಕ್ಕೆಳಸಿ ಬಳಸಿ ಕಿವಿಯ ಪೊರೆಯೊಳ್ ಮೊರೆದು ಗುಮು ಗುಮೆಂದು ಬಿಡದೆ ಜಿನುಂಗುವಳಿಕುಳಕ್ಕೆ ಕನಲ್ದು ಕೆಕ್ಕಳಿಸಿನೋಡುವ ಪಣ್ಣಿದ ಪಟ್ಟ ದಾನೆಯನೇಱೆ ಪಲವುಂ ತೆಱದ ಪಱೆಗಳೆಲ್ಲಮೊರ್ಮೊದಲೊಳ್ ಮೊಳಗಲಲ್ಲಿಂದಂ ತಳರ್ದು ನಡೆಗೊಂಬುದುಂ

ಚತುರಂಗಸೇನೆಯೆಲ್ಲಂ
ದ್ರುತಮಾಗಿಯೆ ನಾಲ್ಕುದೆಸೆಗಳಿಂದಂ ಬಂದಾ
ಚತುರನ ಪಿಂದಂ ಪೋದುದು
ನುತಸುಭಟನ ಮುಂದೆ ಪೋಪ ಜಯಲಕ್ಷ್ಮಿಯವೊಲ್ ೨

ಎಮ್ಮೀದುರ್ಧರಪಾದವಿನ್ಯಸನಭಾರಾರೋಪದಿಂ ತಗ್ಗಿ ಮ
ತ್ತಂ ಮಗ್ಗುತ್ತುಮಿದಿರ್ದುದೆಂದು ಮಹಿಗಂ ಕೈಗೊಟ್ಟು ಮೇಲೆತ್ತಿ ಸು
ಸ್ಥರ್ಮಾಡಲ್ಬಗೆದಂತೆ ಮುಟ್ಟೆ ನೆಲನಂ ಶುಂಡಾಲದಂಡಾಗ್ರದಿಂ
ದಂ ಮಾತಂಗಘಟಾದಿಕೋಟಿ ನಡೆವುತ್ತಿರ್ದತ್ತು ಪಿಂದಾತನಾ ೩

ದಾಂಟಲ್ಬಾರದ ಕುಳಿಯಂ
ಗೆಂಟಱೊಳಂ ಕಂಡು ಪಿರಿದು ಪರಿತಂದು ಮುದಂ
ನಾಂಟಿರೆ ಲಂಘಿಸಿ ಪೋದವು
ಬಂಟಂಗಳೆನಿಪ್ಪ ಕುದುರೆಗಳ್ ಕೆಲವದಱೊಳ್ ೪

ಅತಿಜವದಿಂದೋಡುವ ಹಯ
ವಿತತಿಗಳುಂ ನೋಳ್ಪರಿಂಗೆ ಪುಟ್ಟಿಸಿದುವು ಸ
ನ್ನುತಪವನನ ಪುಲ್ಲೆಗಳಿಂ
ಬತಿಶಂಕೆಯನಾ ಕುಮಾರಕಂ ನಡೆವೆಡೆಯೊಳ್ ೫

ಚಟುಳತರಂಗಪುಂಗವಖುರಾಗ್ರವಿಘಟ್ಟನಜಾತಧೂಳಿಕಾ
ಪಟಳಿಕೆ ಸರ್ವದಿಗ್ವಿವರದಲ್ಲಿ ನಭಸ್ಥಳದಲ್ಲಿಯುಂ ಸಮು
ತ್ಕಟತರಮಾಗಿ ತೀವೆ ದೆಸೆಗಳ್ ಭಯದಿಂದಮೆ ಕೂಡಿದಂತೆ ಸಂ
ಘಟಿಸಿದುವಲ್ಲಿ ಬೆಚ್ಚಿ ರವಿ ಬಿಳ್ದವೊಲಾದನದೃಶ್ಯನಾಕ್ಷಣಂ ೬

ಪಿರಿದಾದ ಧೂಳಿಯಿಂದಂ
ಪರಿಪೂರಿಸೆ ಪಳ್ಳ ಕೊಳ್ಳ ಕುಳಿಗಳವೆಲ್ಲಂ
ನೆರೆದಲ್ಲಿ ಪಿಂದೆಪೋಪಾ
ನರರ್ಗಾದುದು ಬಳಿಕೆ ಸುಗಮತರಮಾ ಮಾರ್ಗಂ ೭

ಪಡೆಯಂ ಕಂಡುರುಭೀತಿಗೊಂಡು ಶಬರೀಸಂಘಾತಮೋಡುತ್ತುಮಿ
ರ್ಪೆಡೆಯೊಳ್ ಸುತ್ತಲುಮೆಯ್ದೆಚಲ್ಲಿದದಿಗುಂಜಾರಾಶಿಗಳ್ ಪುಂಜಿಸಿ
ರ್ದೊಡೆ ಕಾಳ್ಕಿಚ್ಚು ಕರಂ ಸಮುಜ್ಜ್ವಳಿಸಿದತ್ತೆಂಬೊಂದು ಸಂದೇಹದಿಂ
ದೊಡೆಯಂ ಪೋಗುತುಮಿರ್ದರಳ್ಕಿಲನನತ್ಯಾಶ್ಚರ್ಯದಿಂ ನೋಡಿದಂ ೮

ವ: ಇಂತಚ್ಚರಿಯಾಗಿ ಪೆರ್ಚಿದ ಪೇರಡವಿಯಂ ನೋಡಿನೋಡಿ ಮೆಚ್ಚುತುಂ ಬಳಿಯಮಾ ಕುಮಾರವರನದಂ ಕಳಿವುದುಂ

ಮಧುಪಕದಂಬಕಂ ತರುಗಳೆಂಬ ಗೃಹಂಗಳೊಳೆಯ್ದೆ ಕುಳ್ಳಿದಿ
ರ್ದದಿಮುದದಿಂದೆ ಪೂಗುಡಿಗಳೆಂಬ ಸುಪಾತ್ರೆಗಳಲ್ಲಿ ತೀವಿದು
ನ್ಮಧುವನೆ ಸೇವಿಸುತ್ತುಮಿರಲಂತದಱಿಂದಮೆ ತದ್ವನಾಂತರಂ
ಮಧುಪುರಮೆಂಬಿನಂ ಬಗೆಗೆ ಬಂದೊಡದಂ ನೆಱೆಬಿಟ್ಟುಪೋಪುದುಂ ೯

ವ: ಅಂತಾ ಕಾಂತಾರದಪರತೀರಮಂ ಪಿರಿದುಂ ದೂರಮಾಗಿಯೆ ಬಿಟ್ಟು ನಡೆವೆಡೆಯೊಳ್

ಸ್ತ್ರೀರತ್ನಲಾಭವಾಂಛಾ
ಪ್ರೇರಿತಚಿತ್ತಂ ಕುಮಾರಕಂ ಘನವನಮಂ
ಧೀರಂ ಮೀಱಿಯೆ ಪೋದಂ
ಚಾರುಂ ವ್ಯವಹಾರಿಯೆಂಬಿನಂ ಸತ್ವರದಿಂ ೧೦

ವ: ಇಂತು ನೂರ್ಮಡಿಯಾದ ಪೆರ್ಮೆಯಿಂದಾ ಧರ್ಮನಾಥಕುಮಾರಂ ನರ್ಮದಾಪ್ರಭೃತಿ

ಬಹುವಿಧನದೀನದಂಗಳಂ ದಾಂಟಿ ಪಲವುಂ ನಾಡುಗಳಂ ಪಿಂದು ಮಾಡಿ ಕಡುವೇಗದಿಂ ಪೋಗಿ ನಿರ್ಝರಲಕ್ಷ್ಮೀಶೋಭಾಸಂದರ್ಭಗರ್ಭಿತಮಾದ ವಿದರ್ಭವಿಷಯಮಂ ಪುಗುವುದುಮಲ್ಲಿ

ವನಮೆಲ್ಲಂ ಬಹುರಂಭಾ
ವಿನುತಂ ಸ್ಥಳಮೆಲ್ಲಮುರುತಿಳೋತ್ತಮಮಾ ಮೇ
ದಿನಿಯೆಲ್ಲಮಪ್ಸರೋಗಣ
ಮನಿತಂ ಸ್ವರ್ಗಾದಿಕಂ ದಲೆಂದೀಕ್ಷಿಸಿದಂ ೧೧

ಕಳಮಸ್ಥಳಮೆಲ್ಲಂ ಘನ
ಫಳಮಂಜರಿರಂಜಿತಂ ದಲಾಗಿರ್ದು ಮನಂ
ಗೊಳಿಸುತ್ತಿರ್ಪುದು ಮತ್ತ
ಗ್ಗಳಗೀತಾಧ್ಯಾಯದಂತೆ ರಸಪರಿಪೂರ್ಣಂ ೧೨

ಬದನೆಯ ಕಾಯ್ಗಳಿಂ ಪಿರಿದುಪಾಗಲಕಾಯ್ಗಳಿನೊಳ್ಪುವೆತ್ತು ತೋ
ರಿದವೆನಿಸಿರ್ದ ಕುಂಬಳದಕಾಯ್ಗಳಿನಾದಮೆ ತೊಂಗಲಾಗಿ ಪ
ರ್ವಿದ ಕಡುನೀಳ ಕೂಗುರಿಯಕಾಯ್ಗಳಿನೆಲ್ಲೆಡೆಯಲ್ಲಿ ಕೂಡೆತುಂ
ಬಿದ ಘನಶಾಕವಾದಿಗಳ ವೀಕ್ಷಣಮಂ ಸೆಱೆಗೆಯ್ದವಾಕ್ಷಣಂ ೧೩

ವನಮೆಲ್ಲಂ ಪರಿಪಕ್ವಭೋಜ್ಯಸುಫಳಾಳೀಸಂಯುತಂ ಕೂಡೆ ಮೇ
ದಿನಿಯೆಲ್ಲಂ ಕಣಿಶಾಭಿರಾಮಬಹುಸಸ್ಯೌಘಂಗಳಿಂ ತುಂಬಿ ಪಾ
ವನಮಾಗಿರ್ದುದುಕಾರಣಂ ಪಥಪಥಸ್ಥಾನಂಗಳಲ್ಲೆಲ್ಲಿಯುಂ
ಘನಸೌಖ್ಯಂ ದೊರೆಕೊಂಡುದೆಂದು ಪರಿವಾರಕ್ಕೆಲ್ಲಮಲ್ಲಲ್ಲಿಗಂ ೧೪

ಬೀಡಂ ಬಿಡುವೆಡೆಯೆಡೆಯೊಳ್
ಮಾಡುವನಲ್ಲಲ್ಲಿಗೈಳಬಿಳನುರುಪುರಮಂ
ನಾಡು ಬೆಸಕೆಯ್ವ ಸುಖದಿಂ
ಕೂಡದು ಕುವರಂಗೆ ಬಟ್ಟೆಯಾಯಾಸ ಲವಂ ೧೫

ವ: ಇಂತು ಸಮಸ್ತ ಮನೀಷಿಪರಿಷದಭಿಲಕ್ಷಣೀಯ ವಿಶೇಷಿತಾಶೇಷ ವಿಪುಳತರ ನಾನಾವಿಧ ನವೀನಫಳಸಂಪತ್ತಿಯಿಂ ಪರಿಭೂಷಿತಮಾದ ಪೇಶಲತದ್ದೇಶದ ಶೋಭಾತಿ ಶಯಮನಾ ದೇಶಾಧೀಶ್ವರಂ ನೀಡುಂನೋಡಿ ನಾಡೆಯುಂ ಕೊಂಡಾಡುತ್ತುಂ ಕುಂಡಿನಪುರ ಮರೆಗಾವುದಂತರಮೆನಲ್ ಬಂದು ಮುಂದೆ ತನ್ನ ಗಮನವಾರ್ತಾ ನಿವೇದನನಿಮಿತ್ತಂ ಪ್ರತಾಪರಾಜನಂತಿಕಕ್ಕೆ ಚರರಂ ಕಳಿಪುವುದುಮವರ್ ಪೋಗಿ ಧರ್ಮಜಿನಾಧಿಪನ ಬರಮನರಸಂಗೆ ಬಿನ್ನ ಪಂಗೆಯ್ವುದುಮಾಗಳ್

ಪ್ರತಾಪರಾಜಂ ಪುರದಲ್ಲಿಯುತ್ಸವ
ಪ್ರತಾನಮಂ ಮಾಡಿಸಿ ಸರ್ವಸೈನ್ಯಸಂ
ಯುತಂ ಕುಮಾರಂಗಿದಿರಾಗಿಪೋದನಂ
ದು ತೋಷದಿಂ ಮಂಗಳವಾದ್ಯಮುಣ್ಮಲುಂ ೧೬

ಮೊದಲಲ್ಲಿ ಸೈನ್ಯರಜದೊಂ
ದೊದವಂ ಕಂಡಂ ಬಳಿಕ್ಕೆ ಭೇರೀರವ ಸಂ
ಪದಮಂ ಕೇಳ್ದಂ ಮತ್ತಂ
ಪದೆದೀಕ್ಷಿಸಿದಂ ನೃಪಂ ಕುಮಾರನ ಬಲಮಂ ೧೭

ವ: ಅಂತತೀವಪ್ರಮೋದಪ್ರಕರ್ಷಣಭಾಜನನಾಗಿ ಪ್ರತಾಪರಾಜಂ ತೊಟ್ಟನೆ ಸಮೀಪಕ್ಕೆವಂದು ಮುಟ್ಟಿದ ಭಕ್ತಿಯಿಂದಾ ಧರ್ಮನಾಥಕುಮಾರನ ಮೆಲ್ಲಡಿಗಳ್ಗೆಱಗಿ ಸಾಷ್ಟಾಂಗ ಪ್ರಣತನಾಗಿರ್ಪುದುಮಾತನಂ ಕುವರಂ ಸಾತಿಶಯಪ್ರೀತಿಯಿಂ ತೆಗೆದು ತರ್ಕೈಸಿಕೊಂಡು ಮುಂದೆ ನಿಂದಿರಿಸುವುದುಮೆನ್ನಮೇಲಗಣ್ಯಕಾರುಣ್ಯಮುಂಟೆಂದು ಬಗೆದರಸಂ ತದೀಯ ಮುಖಕಮಳಾವಳೋಕನಂಗೆಯ್ದು ಕೈಗಳಂ ಮುಗಿದು ಪ್ರಶ್ರಯ ಪರಿಮಿಶ್ರಿತಪ್ರಿಯ ಸಂಭಾಷಣದಿಂದಿಂತೆಂದಂ

ಒಡೆಯರ್ ಬಿಜಯಂಗೆಯ್ದಾ
ಗಡೆ ವಾಂಛಿತಕಾರ್ಯಸಿದ್ಧಿಕ್ಕೆಗೂಡಿದುದೀ
ಗಡೆ ಕೃತಕೃತ್ಯನುಮಾದೆಂ
ಪಡೆಮಾತೇನಿಂದು ಸಫಲಮಾದುದು ಜನ್ಮಂ ೧೮

ವ: ಎಂದು ಪ್ರಿಯೋಚಿತವಚನಂಗಳಿಂದಂತರಂಗಸಂಗತಭಕ್ತಿಭಾರಮಂ ವ್ಯಕ್ತೀಕರಿಸುತ್ತುಮಿರ್ದ ಪ್ರತಾಪರಾಜಂಗೆ ಚಾರುಕರ್ಪೂರಪರಿಮಿಳಿತಮಾದ ವೀಳಯಮಂ ಕೊಟ್ಟು ತಣಿಪಿಸಿ ಮತ್ತಮಾ ಕುಮಾರನಿಂತೆಂದಂ

ಎಮ್ಮೀರಾಜ್ಯವಿಶೇಷಸಂಪದಮಿದಂ ಬೇಡೆಂಬ ಬುದ್ಧಿಪ್ರಭಾ
ವಂ ಮನ್ಮಾನಸದಲ್ಲಿ ತೋಱಿದಣುಮಾತ್ರಂ ಭೂತ್ರಯಾರಾಧ್ಯರಾ
ದೆಮ್ಮಂತಪ್ಪವರಂ ಸ್ವಯಂವರವಿವಾಹಚ್ಛದ್ಮದಿಂದಿಲ್ಲಿಗಂ
ಸಮ್ಮೋಹಂ ಮಿಗೆ ಕೊಂಡುಬಂದಿರದಱಿಂದಂ ನೀವೇ ಪುಣ್ಯಾತ್ಮರುಂ ೧೯

ವ: ಇಂತೆಂಬ ಪ್ರಿಯಸಂಭಾಷಣದಿಂದಾತನಂ ಸಂತೋಷಂಬಡಿಸುತ್ತುಮಿರ ಲೀರ್ವರುಂದೊರ್ವಿದ ವಾರಣಸಮಾರೋಹಣಂಗೆಯ್ದು ಕೂಡಿ ಕಿಱಿದಂತರಂ ನಡೆಯುತ್ತುಮಿರೆ ಮುಂದೆ ಭೂಮಂಡಲಕುಂಡಲಾನುಕಾರಿ ಸುವರ್ಣಪ್ರಾಕಾರದಿಂ ಪರಿಮಂಡಿತಮಾದ ಕುಂಡಿನಪುರಮಂ ಕುವರಂ ಕಂಡು ಮನಂಗೊಂಡು ತನ್ನ ಸೇನಾಪತಿಯಪ್ಪ ಕುಬೇರನಂ ಕರೆದು

ಈ ಪುರದ ಕೆಲದೊಳೊಂದು ಸ
ಮೀಪಸ್ಥಾನದೊಳ್ ನಮಗ ವಿರಚಿಸು ಪುರಮಂ
ನೀಂ ಪೋಗು ಬೇಗಮೆನೆ ಸೇ
ನಾಪತಿ ಬೀಳ್ಕೊಂಡು ನಿಮಿಷದಿಂ ಪೋದನವಂ ೨೦

ವ: ಅನಂತರಂ ವಿಮಳಕಳಿತವಿಶಾಲತರಯೋಗ್ಯಪ್ರದೇಶಸನ್ನಿವೇಶದೊಳ್

ಅಂಗಡಿ ರಾಜವೀದಿ ಹಯಶಾಲೆ ಗಜಂಗಳಶಾಲೆ ಮಾಟಕೂ
ಟಂಗಳ ಪಂತಿಯುಪ್ಪರಿಗೆಯೊಪ್ಪಮಗುರ್ವಿಸಲಂತರಿಕ್ಷಮಂ
ಪೊಂಗಳಸಂಗಳಳ್ಕಿ ಜೆಯಿಲೆಯ್ದು ವಿಗುರ್ವಿಸಿದಂ ದಲಾಕ್ಷಣಂ
ಪಿಂಗದ ಚೆಲ್ವನಾಂತುವಮ ಕೋಟೆಗಳಿಂ ಪರಿಖಾತಳಂಗಳಿಂ ೨೧

ಏಳುಂ ನೆಲೆಮಾಡಂಗಳ
ಮೇಳವದಿಂ ಚೆಲ್ವನಾಂತ ರಾಜಾಲಯಮು
ಲ್ಲಾಲಿತಬಹುವಿಧರಚನಾ
ಶೀಲಂ ತತ್ಪುರದ ನಡುವೆ ಪಡೆಮುದಗುರ್ವಂ ೨೨

ವ: ಇಂತು ಸೇನಾಪತಿಯಪ್ಪ ರಾಜರಾಜಂ ಪಿರಿದಾದ ಸಿರಿಯಿಂ ನಿರ್ಜರ ರಾಜಧಾನಿಯಂ ಗೆಲ್ದು ನವೀನಶೋಭಾವಿರಾಜಮಾನ ರಾಜಧಾನಿಯಂ ವಿಗುರ್ವಿಸಲದಱ ಪೊಱವೊಳಲೆಂಬಂತಿರಾ ಕುಂಡಿನಪುರಂ ಕಣ್ಗೊಂಡು ಸಮುಜ್ಜ್ವಳಿಸುತ್ತುಮಿರೆ

ನಾನಾತೂರ್ಯಾರವಂ ಪೊಣ್ಮಿರೆ ಜಯಜಯನಿರ್ಘೋಷಣಂ ಪೆರ್ಚಲೆತ್ತಂ
ಪೀನಚ್ಛತ್ರಂಗಳಾಚ್ಛಾದಿಸೆ ಗಗನಮುಮಂ ಚಾಮರಂ ತಳ್ತು ಬೀಸಲ್
ದಾನಸ್ತಂಬೇರಮಾರೂಢನುಮುರುತರಸೈನ್ಯಾವೃತಂ ಧರ್ಮನಾಥಂ
ತಾನೆಳ್ತಂದಂದು ಪೊಕ್ಕಂ ನಿಜಪುರದೊಳಗತ್ಯಂತ ಸಂತೋಷದಿಂದಂ ೨೩

ದ್ವಾರದ್ವಾರದೊಳುದ್ಯ
ತ್ತೋರಣಪಂತಿಗಳ ಶೋಭೆಯಂ ನೋಡುತ್ತಂ
ದೋರಣೆಗೊಂಡಿರ್ದಂಗಡಿ
ಗೇರಿಗಳ ಶ್ರೀಯನೀಕ್ಷಿಸುತ್ತುಂ ನಡೆದಂ ೨೪

ವ: ಇಂತು ಗಾಡಿವಡೆದ ಬೀಡಿನೊಳನಾಡೆಜೆಯಂ ಬಿಜಯಂಗೆಯ್ವುತ್ತುಂ ಲೀಲೆಯಿಂದರ ಮನೆಯೊಳಗಂ ಪುಗುವುದುಂ

ಕರ್ಪೂರದ ವೀಳೆಯಮುಮ
ನರ್ಪಿಸಿ ಬಳಿಯಂ ಪ್ರತಾಪರಾಜನನಾಕ್ಷಣ

ವೊಪ್ಪುವ ಕುಂಡಿನಪುರಿಗಂ
ಕೂರ್ಪಿಂ ಬೀಳ್ಕೊಟ್ಟು ಕಳಿಪೆ ಪೋದಂ ಬೇಗಂ ೨೫

ವ: ಮತ್ತಂ ತನ್ನೊಡನೆ ಬಂದ ಮಂಡಳಿಕ ಮಹಾಮಂಡಳಿಕ ಮಕುಟಬದ್ಧರ್ ಮುಂತಾದನೇಕ ರಾಜಕುಮಾರನಿಕರಂಗಳನವರವರ್ಗೆ ತಕ್ಕಂತಪ್ಪ ನಿವಾಸಂಗಳ್ಗೆ ಬೀಳ್ಕೊಟ್ಟು ಕಳಿಪುವುದುಮಾಗಳವರೆಲ್ಲರುಂ ನಿಜನಿಜಬಹಳತರಚತುರಂಗಬಲಂಬೆರಸು ತಂತಮಗೆ ಯೋಗ್ಯಂಗಳಾದಾವಾಸಮಂ ಪೊಕ್ಕು ಸುಖದಿನಿರ್ಪುದುಮಿತ್ತಲಾ ಕುಮಾರಂ ಯಾತ್ರಾ ವೇಷಕ್ಕುಪಯೋಗಮಾಗಿ ತೊಟ್ಟಂತಪ್ಪ ಭೂಷಣಕಳಾಪಮಂ ಕಳೆದು

ಬರ್ಪೆಡೆಯಲ್ಲಿ ಬಟ್ಟೆಯ ಪರಿಶ್ರಮಮುಂ ಬೆಮರುಂ ಸುಧೂಳಿಯುಂ
ನೇರ್ಪಡುತಿರ್ಪ ಚಾರುಚರಮಾಂಗಕನಾದುದಱಿಂದಮಾತನೊಂ
ದೊಪ್ಪುವ ದಿವ್ಯದೇಹದೊಳೆ ಪತ್ತದೊಡಂ ಸಲೆಲೌಕಿಕಾರ್ಥಮಂ
ತಪ್ಪದೆ ಮಾಡಿದಂ ತ್ರಿಜಗತೀಪತಿ ಮಜ್ಜನಭೋಜನಾದಿಯಂ ೨೬

ವ: ಅಂತಾ ಧರ್ಮನಾಥಕುಮಾರಂ ಲೋಕವ್ಯವಹಾರನಿಮಿತ್ತಮಾಗಿ ಮಜ್ಜನ ಭೋಜನಾದಿ ಕ್ರಿಯಾವ್ಯಾಪಾರಮಂ ತೀರ್ಚಿ ನಾನಾವಿಧನವೀನಮಾಣಿಕ್ಯಮಯ ಶೃಂಗಾರ ಭಂಗಿಯ ನಂಗೀಕರಿಸಿ ತನ್ನಯ ಮೇಳದ ಕೆಳದಿಯರೊಡಗೂಡಿ ಲೀಲಾವಿನೋದದಿಂದಿರ್ಪುದುಂ

ಎಲೆಲೆ ಸಮಸ್ತರಾಜರಿರ ಕೈಗಳನೆತ್ತಿಯೆ ಸಾಱುತಿರ್ದೆವೆಂ
ದೊಲಿದಿದದೊಂದನಾಲಿಸಿ ಕುಮಾರಿಯ ವಾರ್ತೆಯ ವೃತ್ತಿಬೇಡವಿ
ನ್ನಲೆ ನಿಮಗೀಗಳಿಲ್ಲಿಗೆ ಜಿನೇಶ್ವರನೆಯ್ದಿದನುದ್ಧಪುಣ್ಯದಿಂ
ಜ್ವಲಿತಸುಧಾಕರೋದಯದಿ ಮುಂದೆಸೆದಿರ್ಪುದೆ ತಾರಕಾಕುಳಂ ೨೭

ಉಳಿದ ರಾಜಕುಮಾರರೆಲ್ಲರುಮಿನ್ನು ಕನ್ನೆಯ ಪಂಬಲಂ
ಕಳೆದುಪೋಪುದು ಬಂದಬಟ್ಟೆಯೊಳೀಗಳೀಗಳಲ್ಲಿಗೆ ಬಂದನ
ಗ್ಗಳದ ಧರ್ಮಜಿನೇಶನಾತನನೊಲ್ಲದನ್ಯರಿಗಿಕ್ಕಳೀ
ನಳಿನಲೋಚನೆ ಮಾಲೆಯಂ ದಿಟಮೆಂದರೆಲ್ಲಜನಂಗಳುಂ ೨೮

ವ: ಇಂತು ವಿದರ್ಭಭೂವಲ್ಲಭನ ರಾಜಧಾನಿಯೊಳಂ ತನ್ನಯ ರಾಜಧಾನಿ ಯೊಳಮೆಡೆವಜೆಯದೆ ನಿಬಿಡಮಾಗಲಲ್ಲಿ ನೆರವಿಯಾಗಿ ನಿಂದು ತಂತಮ್ಮೊ ಳೋರೊರ್ವರ್ ನುಡಿಯುತ್ತುಮಿರ್ದು ಪೌರಜನಂಗಳ ಕನತ್ಕನಕದಂಡಮಂಡಿತ ಬಾಹುದಂಡಂಗಳಂ ನೆಗಪಿ ಸಾಱುತ್ತುಮಿರ್ದ ದಂಡವಾಸಿಕರ ವಚನಂಗಳೆಂಬ ನರಪಿಂಗಳೀಶಕುನಂಗಳಂ ಕರ್ಣಾಕರ್ಣಿಕೆಯಿಂ ಕೇಳಿಕೇಳಿ ಕುಮಾರಂ ತನ್ನಯ ಕಾರ್ಯಂ ಸಿದ್ಧಮಾದುದೆಂದು ಬಗೆದಂದು ದೃಢನಿಶ್ಚಯದಿಂ ತಣ್ಣನೆ ತಣಿವುತ್ತುಮಿರ್ಪುದುಂ

ಒಂದೆರಡು ಮೂಱು ನಾಲ್ಕೈ
ದೆಂದೆಣಿಸುತ್ತುಂ ಸ್ವಯಂವರೋತ್ಸವದಿವಮಂ

ಸೌಂದರಮಾರ್ಗಂ ಸುಖಿ
ವಿಂದು ಕೆಲವ್ಯಾಂದಿನಂಗಳಂ ಕಳೆಯಲೊಡಂ ೨೯

ವ: ಮತ್ತಮೊಂದುದಿವಸಮಾ ಪ್ರತಾಪರಾಜಂ ತನ್ನಯ ಗೃಹಮಹತ್ತರನಂ ಕರೆದು ನೀಂ ಪೋಗಿ ಸ್ವಯಂವರಗೃಹಮಂ ಪೊಸಪೊಸತಾದ ಚಿತ್ರಾತಿಶಯ ವೇಷವೆಸಕದಿಂ ವಿಚಿತ್ರಮಪ್ಪಂತು ಸಮೆಯಿಸೆಂದು ಬೆಸಸುವುದುಮಾತನ ಮಾತನಾತು ಶಿರದೊಳಾಂತು ತತ್ಪುರದಿನಪ್ಪಾದ ಮೂಡಣದೆಸೆಯ ಬಹಿರುದ್ಯಾನದ ಕೆಲದೊಳೊಂದು ವಿಶಾಲತರಮಾದ ಪೇಶಲಪ್ರದೇಶದೊಳ್

ಕಡೆಯಿಲ್ಲದ ಮಣಿಗಣದಿಂ
ಕಡುಯಾಣಿಯ ಮಿಸುನಿಯಿಂ ಸ್ವಯಂವರಗೃಹಮಂ
ಪಡಿಯಿಲ್ಲನೆ ಮಾಡಿಸಿದಂ
ನಡೆನೋಳ್ಪವರಿಂಗಮಪ್ಪಿನಂ ಕಡುಚೋದ್ಯಂ ೩೦

ಅದು ತೆಂಕಲ್ ಬಡಗಲ್ ನೀ
ಳ್ದುದು ಮೂಡಂ ಪಡುವಮಗಲಮಾದುದು ಸೋಪಾ
ನದ ಪಂತಿಗಳೊಡಗೂಡಿದ
ಸಮಚತುರಸ್ರಪೀಠಮಾವೇದಿಕೆ ಮೆಱೆಯಿಂ ೩೧

ವ: ಅದಱಮೇಲೆ ದಕ್ಷಿಣೋತ್ತರಾಭಿಮುಖಂಗಳಾಗಿ ತೋರ್ಕೆವೆತ್ತು

ಕರ್ಕೇತನರತ್ನಂಗಳ
ನಕ್ಕುಮಿದೆನೆ ಮಾಡಿದೇಳುನೆಲೆಮಾಡುಗಳ್
ಮಿಕ್ಕಲದೊಳಿರ್ದು ಕಣ್ಗಂ
ಪಕ್ಕಲಿಸುತ್ತಿರ್ದುವಾವಗಂ ನೋಳ್ಪವರಂ ೩೨

ವ: ಆಗಳ್ ತಮ್ಮಯ ಕೊರಳೊಳಕ್ಕಿದ ಪೊಸಮುತ್ತಿನಕ್ಷತೆಯಂತಿರಾವಲಕ್ಷಿತ ಮಾದ ನಕ್ಷತ್ರಮಾಳೆಯೊಳ್ ಪಾಡಿದ ಪೊಜಪೊಂಬ್ಬದ ಬಣ್ಣಕಾರ್ತಿಯರಂತೆ ಕಿಸಲಯವಿಸರದಿಂದುಪಗತಮೆನಿಪ ಶಿಲಾಸಮರ್ಪಿತ ಮಂಗಳದರ್ಪಣಾಯಮಾನ ಸೂರ್ಯಮಂಡಳದಿಂದೆಸೆವಮಣಿಕಳಶಕಲಶಂಗಳುಂ ಕಾಣ ನೆಲೆಮಾಡುಗಳ ಮುಂದೆ ಸುತ್ತಲುಂ ಚಿತ್ರಂಬೆತ್ತು ಕರೆದು ಕೆತ್ತಿಸಿದ ತೋರಣಮಾಲಿಕೆಯುಮಾ ಮತ್ತ ವಾರಣಶ್ರೇಣಿಗಳ ಬಳಸಿ ಧಳಧಳಿಪ ಪೊಜಗಳೊಳಗಣ ಪಳಿಕಂ ದಾರಿಗಳನೊಳ ಕೊಂಡು ಪೊಳೆವ ವೈಡೂರ್ಯದ ಚೌಪಳಿಗೆಗಳೊಳ್ ಕಣ್ಗೆಸೆದುತ್ತುಮಿರೆ

ಪವಳದ ಕಂಭಂಗಳಿನಾ
ನವನೀಲದ ಚಾರುಭಿತ್ತಿಗಳ ಬಳಸಿಂದೊ

ಪ್ಲವ ಪದ್ಮರಾಗರತ್ನ
ಪ್ರಭೆಯುಂ ಕಣ್ಗೊಳಿಪ ನೆರೆದು ಲೋಹಿಗಳಿಂದಂ ೩.೩.

ಮಿಂಚುವ ಪೊನ್ನಪುತ್ತಳಿಯ ಸಂಚಯದಿಂದವಱಲ್ಲಿ ಕೂಡೆ ಮು
ತ್ತಂಚಿತಮಾಗಿ ಲಂಬಿಸುವ ಮೌಕ್ತಿಕ ಮಾಲೆಗಳೋಳಿಯಿಂದೆ ಸ
ತ್ಪಂಚನದಂಡಮಂಡಿತ ಪತಾಕಾವಿರಾಜಿಗಳಿಂದಮಂದು ಕ
ಣ್ಗೆ ಚೆಲುವಾಗಿ ಕೌತುಕಮನಾಗಿಸುತಿರ್ದುದು ತತ್ಸ್ವಯಂವರಂ ೩.೪

ವ: ಅದಱ ಮುಂದೆ ಕ್ರೋಶಮಾತ್ರಾಂತರಾಳಪ್ರಮಾಣಪರಿವೇಷ್ಟಿತ ಚಂದ್ರಕಾಂತಕಾಂತ ಪರಿಸೂತ್ರಭಿತ್ತಿಭಾಗಾಗ್ರದಲ್ಲಿ

ಪಿಳಿಸದುರುಪುಷ್ಪರಾಗಂ
ಗಳನಭಿವಿರಚಿಸಿದ ಚೆಲ್ವ ಬಾಗಿಲ್ವಾಡಂ
ಗಳವೇಳುನೆಲೆಗಳಿಂ ಮಂ
ಜುಳಮಾದುವು ಕುಳಶಕಳಶಪರಿಕಳಿತಂಗಳ್ ೩.೫

ವ: ಅದಱ ಮುಂದಣಮಂದಸೌಂದರ್ಯದೊಳ್ಪಿಂದಿ ಸಂದಣಿಸಿ ನಿಂದ ನಿರುಪಮ ಮರಕತಮಯಮಕರತೋರಣದೋರಣೆಗಳುಮತಿರಮಣೀಯಂಗಳಾಗಲಿಂತು ಸರ್ವತೋಭದ್ರಭದ್ರಶಾಲಾಪ್ರಾಸಾದಪ್ರಭೃತಿಗಳೆಂಬ ಮತಲ್ಲಿಕಾವಲ್ಲಿಕಾಪ್ರಸರದೆಸಕಂ ಸಮುತ್ತುಂಗಶೃಂಗಾರರಸದಿಂದಭ್ಯುದಯಾಗಿ ಪೆರ್ಚುತ್ತುಮಿರ್ದುದೆಂಬಂತೆ ತನ್ನಯ ಸಮುದಗ್ರಶಿಖರಾಗರಕದಂಬಕದಿಂ ಚುಂಬ್ಯಮಾನಾಂಬರಮೆನಿಪ್ಪ ಸ್ವಯಂವರ ಮಂದಿರಮಂ ವಿರಚಿಸುವುದುಂ

ಮಿಗೆನೆಗೆವ ಕದಿರ ಪೊದಱಿಂ
ಗಗನಾಂಗಣದಲ್ಲಿ ತಳ್ತು ಪೊಳೆವೆಳಸುಗ್ಗಂ
ಜುಗಳ ಸಂಚಯದ ಚೆಲ್ವಂ
ಮಿಗಿಲಾಗಿಯೆ ಪುಟ್ಟಿಸುತ್ತುಮಿಪ್ಪುದದೆಂದುಂ ೩.೬

ವ: ಮತ್ತಮಲ್ಲಿ

ಆಲಂಬಿತಮುಕ್ತಾಫಳ
ಮಾಲೆಗಳಂ ಕಂಡು ಭೃಂಗಮಾಳಿಕೆ ಮಲ್ಲಿ
ಮಾಲೆಗಳೆಂದಾಶಂಕಿಸಿ
ಲೀಲೆಯಿನಂದೆಱಗಿ ಮೊರೆದು ಮುಸುಱಿದುದಾದಂ ೩.೭

ಅರುಣಮಣಿಘಂಟಿಕಾಪರಿ
ಕರಮಂ ನಡೆನೋಡಿ ಪಕ್ಷ್ಮಳಾವಳಿಯಿಂದಾ

ತುರದಿಂ ಕರ್ದುಂಕಿದುವು ಮ
ತ್ತರಗಿಳಿಗಳ್ ಪಕ್ಕವೊಯ್ದು ಗೋಣ್ಮುರಿದು ಕರಂ ೩೮

ವ: ಅಂತುಮಲ್ಲದೆಯುಂ

ಪುರದ ಸ್ತ್ರೀಜನಮಾ ಸ್ವಯಂವರದ ಚೆಲ್ವಂ ನೋಡವೇಳ್ಕೆಂದು ಬಂ
ದಿರಲಾ ಬಾಗಿಲ ಮುಂದೆ ಪುತ್ಥಳಿಗಳಂ ನಿಂದಿರ್ದುವಂ ಕಂಡು ಸೌಂ
ದರಿಯರ್ ತಾವಿವರೆಂದು ಮತ್ತೆ ನುಡಿಸಲ್ ಮಾತಾಡದಂದಿರ್ದೊಡೆ
ಯ್ಬರೆಲರ್ ನಕ್ಕಡೆ ನಾಣ್ಚಿಪೋಗಿ ಮಱೆಗೊಂಡತ್ತೊಂದು ಕೂಟಾಗ್ರಮಂ ೩೯

ಮಿಗೆ ಮೇಲ್ಗಟ್ಟಿನ ಬಣ್ಣಂ
ಸೊಗಯಿಪ ಮಣಿಭೂಮಿಯಲ್ಲಿ ಬಿಂಬಿಸಿ ನಾನಾ
ಬಗೆಯಾಗಿ ತೋಱೆ ಮುಗ್ಧೆಯ
ರಗಲ್ಬರ್ಲಿಂದಂಜಿಪೋಗಿ ಸಾರ್ದರ್ ಕೆಲನಂ ೪೦

ಚಂದನರಸಬಿಂದುಗಳಿಂ
ಸೌಂದರಪರಿನೀಳಕುಟ್ಟಿಮಾಂಗಣದೊಳ್ ಜಾ
ಣಿಂದಂ ಚಳಿಯಂಗೊಟ್ಟುದ
ದಂದಾಗಸದಲ್ಲಿ ಪೊಳೆವ ತಾರಗೆಗಳವೊಲ್ ೪೧

ವ: ಇಂತಭಿನವಶೋಭಾವಿಭವವಿಡಂಬನಸಮಾಲಂಬನದಿಂ ಕಣ್ಗೊಂಡು ಮೇದಿನೀಮಂಡಳದೊಳಖಂಡಕೌತೂಹಳಾಡಂಬರಮಾದ ಸ್ವಯಂಬರಮಂದಿರಮಂ ವಿರಚಿಸುವುದುಮಿತ್ತಲಾ ಪ್ರತಾಪರಾಜಂ ಹಿತಪುರೋಹಿತಜನಪರಿಶೋಧಿತಶುಭತರ ಪಂಚಾಂಗ ಪ್ರಪಂಚನ ಸಮಂಚಿತಮೆನಿಪ ಶುಭದಿನಾಗ್ರೇಸರವಾಸರದೊಳಶೇಷ ಪ್ರಧಾನಪುರುಷ ಪುರಸ್ಸರಮಾ ಸ್ವಯಂಬರವಿಹಾರವಿಧಾನಕ್ಕೆ ಸಮುತ್ಸುಕಚಿತ್ತನಾಗಿ ಪೋಗಿ ಸಕಳರುರ್ವರೀಪಾಳಕಕುಮಾರಕನಿಕರಸಮಾಹ್ವಾನನಿಮಿತ್ತಂ ದಂಡವಾಸಿಕರಂ ಕಳಿಪುವುದುಂ

ನಾನಾದೇಶಾಂಗವಸ್ತ್ರಂಗಳನನುನಯದಿಂದುಟ್ಟು ಮಾಣಿಕ್ಯಭಾಸ್ವ
ನ್ನಾನಾಶೃಂಗಾರಸಂಘಂಗಳನತಿಶಯದಿಂ ತೊಟ್ಟು ಕಾಶ್ಮೀರಸಮ್ಮಿ
ಶ್ರಾನೂನೋದ್ಗಂಧಮಂ ಲೇಪಿಸಿ ಕರಿಗಳನಂದೇಱಿ ಸಂತೋಷದಿಂದಂ
ನಾನಾದೇಶಂಗಳ ಕ್ಷೋಣಿಪರ ತನುಜರೇಕಕ್ಷಣಂ ಬಂದರೆಲ್ಲಂ ೪೨

ವ: ಅಂತನೇಕ ರಾಜಕುಮಾರರೆಲ್ಲಂ ನೆರೆದು ತಂತಮ್ಮ ಚಾತುರ್ದಂತಬಲಂ ಬೆರಸು ಲೆಕ್ಕವಿಲ್ಲದ ಪಲ್ಲವಸತ್ತಿಗೆಗಳ ಮೊತ್ತಂಗಳ ತಣ್ಣೆಳಲಲ್ಲಿ ಬೀಸುವ ಹೇಮ ಚಾಮರಂಗಳ ಬಳಗಂಗಳಿಂ

ದಳಂಕೃತರಾಗಿ ಸ್ವಯಂಬರಮಂಡಪಕ್ಕೆ ಬಂದು ನಿಜ ನಿಜೋಚಿತಸ್ಥಾನಂಗಳೊಳ್ ಕುಳ್ಳಿರ್ಪುದುಂ

ಹರಿವಂಶದುಗ್ರವಂಶದ
ಕುರುವಂಶದ ನಾಥನಂಶದಿಕ್ಷ್ವಾಕುಮಹೋ
ದ್ಧುರವಂಶದ ರವಿವಂಶದ
ನೆರೆದಿರ್ದರ್ ಸೋಮವಂಶದರಸುಗಳೆಲ್ಲಂ ೪೩

ವ: ಆಗಳ್

ಕೊಳನಂಭೋಜಂಗಳಿಂದಂ ಕನಕಗಿರಿತಟಂ ಕಲ್ಪವೃಕ್ಷಂಗಳಿಂದಂ
ಜಳರಾಶಿಸ್ಥಾನಮತ್ಯುಜ್ವಳಮಣಿಸಮುದಾಯಂಗಳಿಂದೆಂತು ಚೆಲ್ವಂ
ತಳೆದೊಪ್ಪುತಿರ್ಪುದಂತಾ ಪರಿಣಯನಗೃಹಂ ರಾಜಪುತ್ರರ್ಕಳಿಂದ
ಗ್ಗಳಚೆಲ್ವಂ ತಾಳ್ದಿ ಕೌತೂಹಳದತಿಶಯಮಂ ಪುಟ್ಟಿಸುತ್ತಿರ್ದುದಾದಂ ೪೪

ವ: ಅನಂತರಂ ಸಗ್ಗದೊಳಗ್ಗಳಮಾದ ಪಲವುಂತೆಱದ ಬಣ್ಣವಣ್ಣಗೆಯ ಚೆನ್ನರನ್ನದಿಂ ಸಮೆದುತ್ತಂಸಾವತಂಸ ಗ್ರೈವೇಯಕಾಲಂಬನಾಂಗದ ಕೇಯೂರಹಾರ ಕಂಕಣಕಟಿ ಸೂತ್ರಂಗಳೆಂಬ ಚೆಲ್ವ ಮೆಯ್ದೊಡಿಗೆಗಳಂ ತೊಟ್ಟು ವಿಚಿತ್ರಚಿತ್ರಂಗಳಿಂ ಪರ ಭಾಗಂಬಡೆದ ಪರಿವಿಸ್ತೃತ ಪ್ರಶಸ್ತವಸ್ತ್ರಂಗಳನುಟ್ಟು ಬಹಳತರ ಪರಿಮಳ ಭರಮನುಗುಳ್ವ ಕುಂಕುಮಕರ್ಪೂರಪರಿಕಳಿತಹರಿಚಂದನಚರ್ಚೆಯನುದ್ವರ್ತನಂಗೆಯ್ದಿಂತು ಕೆಯ್ಗೆಯ್ದು ಮತ್ತಂ ಕೆಯ್ಮಿಕ್ಕ ಮದದ ಸೊಕ್ಕಿನಳುರ್ಕೆಯಿಂದುರ್ಕುತ್ತುಮಿರ್ದ ಪಣ್ಣಿದ ಪಟ್ಟದಾನೆಯ ನೇಱ

ಎತ್ತಿದ ಚೌಕದ ಪಲ್ಲವ
ಸತ್ತಿಗೆಗಳ ಕೆಳಗೆ ತಳ್ತು ಬೀಸುವ ಮಣಿದಂ
ಡೋತ್ತಮ ಚಾಮರತತಿಗಳ
ಬಿತ್ತರದಿಂದೆಸೆದು ಧರ್ಮನಾಥಂ ಬಂದಂ ೪೫

ವ: ಇಂತು ಪೂರ್ವಸಂತಾನಪರಂಪರಾಸಮಾಯಾತ ಪರಾಕ್ರಮಕ್ರಮಪರಿ ಸೂಚನಾ ನಿರಂತರಿತವೈಜಯಂತೀಸಂತತಿಗಳ್ ನಭೋಂತವುನಾಲಿಂಗಿಸುತ್ತುಮಿರೆ ಮೊತ್ತಂಗೊಂಡೆಡೆವಱಿಯದೆ ನಿಬಿಡಮಾಗಿ ನಡೆವುತ್ತುಮಿರ್ದ ಪೆರ್ವಡೆಯ ನಟ್ಟನಡುವೆ ಜಯಜೀವನಂದವರ್ಧಸ್ವಮೆಂಬ ಪಟುಪಾಠಕರ ಮಂಗಳವಚನಂಗಳನಾಲಿಸುತ್ತುಮಾ ಧರ್ಮನಾಥಕುಮಾರಂ ಬಂದು ತತ್ಸ್ವಯಂವರಮಂಟಪದೊಳಗಂ ಪಲಕ್ಕು ತನ್ಮಧ್ಯ ಸಮುದ್ಭ್ರಷಿತ ನವೀನಮಣಿಮಯಸಿಂಹಾಸನಸಮಾಸೀನನಾಗಿರ್ಪುದುಂ

ಅಂತರಿಕ್ಷದವೊಲೊಪ್ಪುವ
ಕಾಂತಸ್ಫಟಿಕಸ್ವಯಂವರಾಲಯದೊಳ್ ಭೂ

ಕಾಂತಸುತರ್ ತಾರೆಗಳಿಂ
ಬಂತಿರೆ ಚಂದ್ರನವೊಲೆಸೆದನಾ ಧರ್ಮಜಿನಂ ೪೬

ವ: ಅನ್ನೆಗಮಿತ್ತಲನೇಕವಿಧಮಂಗಳವಾದ್ಯನಾದಂಗಳುಣ್ಮೆ ಪೊಣ್ಮುತ್ತಮಿರಲಾ ಶೃಂಗಾರವತೀ ದೇವಿಗೆ ಚಂದ್ರಕಾಂತಮಯರುಂದ್ರತರ ಮಂಗಳಕಳಶ ಪರಿವಿಗಳೆದತೀವ ಸಾಂದ್ರ ಕಿರಣಪರಂಪರಾರೂಪಧಾರೆಗಳಿಂ ದ್ವಿಗುಣಿಸಿದ ಮಳಯಜರಸಪರಿಷದುಪಕಲಿತ ಬಹುಳಪರಿಮಳಮಿಳಿತ ಶೀತಳಜಳಧಾರಾಪೂರಂಗಳಿಂ ವಿವಾಹಕಲ್ಯಾಣಕ್ಕೆ ಮುಖ್ಯಮಾದ ಮಂಗಳಸವನೋತ್ಸವವಿಧಾನಮನೊಡರ್ಚುವುದುಂ

ತಿಂಗಳ ಕದಿರ್ದೊಂಗಲ್ಗಳ್
ಕಂಗೊಳಿಸುವ ನೆಯ್ದಿಲಿಂಗೆ ಬಂದೆಱಗುವವೊಲ್
ಮಂಗಳಜಳಧಾರೆಗಳು
ತುಂಗಸ್ತನೆಯಂಗದಲ್ಲಿ ಬಂದೆಱಗುವುದುಂ ೪೭

ವ: ಅಸಮಯದೊಳ್

ಕ್ಷೀರೋದಲಹರಿ ಮುಸುಕಿದ
ಚಾರುಶ್ರೀದೇವಿಯೆಂಬಿನಂ ಕಣ್ಗೆಸೆದಳ್
ಭೂರಿತರಾಮೃತವಾರಾ
ಪೂರದೊಳಂ ಪೊಳೆವುತಿರ್ದತನುಲತೆಯಿಂದಂ ೪೮

ವ: ಇಂತಾ ಮಂಗಳಸವನಸಮಯಾನಂತರಂ ಕೆಲದೊಳಿಕ್ಕಿದ ಹವಳದ ಹಾವುಗೆಯಂ ಮೆಟ್ಟಿ ನಿಲುವುದುಮಾಗಳಾ ರಾಜೀವಪತ್ರನೇತ್ರೆಗೆ ನೀರಾಜನಾಸಮಾಜ ವಿರಾಜಮಾನ ರಾಜತಭಾಜನಂಗಳ ರಾಜಿಗಳಂ ನಿವಾಳಿಸುವುದುಂ

ತೋರಮುತ್ತುಗಳ ಮೊತ್ತದಿ
ನಾ ರಮಣಿಯ ಚೆಲ್ವಮೆಯ್ಯನಾಕ್ಷಣದೊಳ್ ಶೃಂ
ಗಾರಿಸಿದಂತಿರಲೆಸೆವುದು
ವಾರಿಯ ಬಿಂದುಗಳ ಬಳಗವೆಲ್ಲೆಡೆಗಳೊಳಂ ೪೯

ಆಕೆಯ ಮೆಯ್ಯೊಳ್ ತುಂಬಿದ
ವಾಃಕಣಚಯಮಂ ದುಕೂಲಚೇಲಾಂಚಲದಿಂ
ದೊಯ್ಯನೆ ತೊಡೆದರ್ ಮಣಿಯ ಶ
ಲಾಕೆಯನೆಯ್ದೊಪ್ಪವಿಡುವ ತೆಱದಿಂದಾಗಳ್ ೫೦

ವ: ತದನಂತರಂ

ಕುಂತಳಭಾರಮಂ ಪಿಡಿದು ಸಂತಯಿಸುತ್ತು ಸಡಿಲ್ದು ನೀವಿಯಂ
ಕಾಂತಸುವರ್ಣಕಾಂಚಿಯೊಳಮರ್ಚಿ ತೊಡಂಕಿಸುತುಂ ವಿಲೋಚನ
ಪ್ರಾಂತದ ಕಾಂತಿಸಂತತಿಗಳಿಂ ಧವಳೀಕರಿಸುತ್ತು ಸುತ್ತನಾ
ಕಾಂತೆ ಮರಾಳಿಕಾಗಮನದಿಂ ನಡೆದಳ್ ಬಳಿಸುತ್ತೆ ತೋಳ್ಗಳಂ ೫೧

ವ: ಇಂತು ಮನ್ಮಥನ ವಶ್ಯಮಂತ್ರಾಧಿದೇವತೆಯೆ ಮೂರ್ತಿವಡೆದು ನಡೆದು ಬರುತ್ತಿರ್ದುದೆಂಬಂತೆ ಕೇಸಡಿಗಳ ವಿನ್ಯಾಸವಿಳಾಸದಿಂ ಪಳಿಕಿನ ನೆಲಕ್ಕೆ ಮಿಸುಪಸುಕೆಯ ಪೊಸಕೆಸುದಳಿರ ರಚನೆಯನೆಸಗುತ್ತುಂ ಬಂದೊಂದು ಮನೋಹಾರಿವಿರಚಿತ ಶೃಂಗಾರದಾಗಾರಮಂ ಪುಗುವುದುಮಾಗಳೊಡವಂದ ಕಡುಜಾಣೆಯರಪ್ಪ ಮಡದಿಯರುಡಿಸುವ ತೊಡಿಸುವ ಬೆಸನಂ ಪಡೆದು

ಪಲತೆಱದ ಬಣ್ಣವಣ್ಣಗೆ
ಗಳಿನೊಪ್ಪಂಬೆತ್ತು ರಂಜಿಸುವ ಸೀರೆಯನಂ
ದೊಲವಿಂ ನಿಱಿವಿಡಿದುಡಿಸಿದ
ಳೆಳಸುವಿನಂ ನೋಳ್ಪ ಜನದ ಕಣ್ಣುಂ ಮನಮುಂ ೫೨

ಪೊಳೆವ ಕದಂಪಿನಲ್ಲಿ ಕೊರಳಲ್ಲಿ ಭುಜಾಗ್ರದ ಮೇಲೆ ಪೀನಮಂ
ಜುಳಕುಚಯುಗ್ಮದೊಳ್ ಮಕರಿಕಾದಿವಿಚಿತ್ರಿತಪತ್ರಭಂಗಮಂ
ವಿಳಸಿತಗಂಧಸಾರರಸದಿಂ ಬರೆದಳ್ ಕಡುಜಾಣೆಯೊರ್ವಳ
ಗ್ಗಳದ ಮನೋಜವಶ್ಯಕರಮಂತ್ರಮುಮಂ ಬರೆವಂತಿರಾಕ್ಷಣಂ ೫೩

ಕೆಂದಾವರೆಯರಲ್ಗಳನೊ
ಲ್ದಂದೆಳವಿಸಿಲೆಳಸಿ ಬಳಸಿತೆನೆ ಲಾಕ್ಷಾರಸ
ದಿಂದಡಿಗಳನೂಡಿದಳೊಲ
ವಿಂದೀಕ್ಷಿಪರಲ್ಲಿ ರಾಗಮಿಮ್ಮಡಿಸುವಿನಂ ೫೪

ಚರಣನಖಚಂದ್ರಮಂಡಳ
ಪರಿಸರದೊಳ್ ಪೊಳೆವ ತಾರಕಾಮಾಲೆಗಳಂ
ತಿರೆ ಮುಕ್ತಾಫಳಮಯನೂ
ಪುರಂಗಳಂ ಕಾಲ್ಗಳಲ್ಲಿ ತೊಡಿಸಿದಳೊರ್ವಳ್ ೫೫

ಆ ವಧುವಿನ ಕಟಿತಟದೊಳ್
ಪೀವರಮಣಿಕಿಂಕಿಣೀರಣನ್ಮೇಖಳೆಯಂ
ಭಾವಕಿ ತೊಡಿಸಿದಳೊರ್ವಳ್
ತೀವುವಿನಂ ನೋಳ್ಪರೆರ್ದೆಯೊಳತ್ಯಾಶ್ಚರ್ಯಂ ೫೬

ಬಿಡದ ಪಯೋಧರ ಮಂಡಳ
ದೆಡೆಯೊಳ್ ವರಪಂಚವರ್ಣಪರಿರಂಜನೆ ಮುಂ
ದಿ[ಡೆ] ರನ್ನದೈಸರಂಗಳ
ನಡಸಿಟ್ಟುಳದಿಂದ್ರಚಾಪಮಂ ಬೀಱುವಿನಂ ೫೭

ನಳಿತೋಳ್ಗಳೆಂಬ ಮೃದುಲತೆ
ಗಳ ಬೀಳಲಿವೆಂಬ ಮಾಳ್ಕೆಯಿಂ ನವರತ್ನಂ
ಗಳ ಕಾಂತಿ ಕವಲ್ವರಿವಿನ
ಮಳವಡಿಸಿದಳಂಗದಂಗಳಂ ಬಾಹುಗಳೊಳ್ ೫೮

ಸಿರಿಸದ ಪೂಮಾಲೆಗಳಂ
ದ್ವಿರೇಫಮಾಲೆಗಳ ಬಳಸಿದಂತಿಕ್ಕಿದಳಾ
ತರುಣಿಯ ಮುಂಗೈಗಳೊಳಂ
ಪರಿನೀಲದ ಪಿಂಡುಗಂಕಣಂಗಳನಾಗಳ್ ೫೯

ಅರಳಸರಳ್ಗಳಿಂಗೆ ರತಿಯುಂ ಗಱೆಗಟ್ಟುವ ಮಾಳ್ಕೆಯಿಂದೆ ಸೌಂ
ದರಿಯ ಲಸತ್ಕರಾಂಗುಳಿಗಳಲ್ಲಿ ಪರಿನ್ಮಣಿಮುದ್ರಿಕಾಪರಂ
ಪರೆಗಳ ಸೆಕ್ಕಿದಳ್ ಕೆಳದಿಯೊರ್ವಳವಾಕ್ಷಣಮೀಕ್ಷಣಂಗಳಿಂ
ಗುರುತರರಾಗಮಂ ಬಿಡದೆ ಪುಟ್ಟಿಸುತಿರ್ದುವು ನೋಳ್ಪಡದ್ಭುತಂ ೬೦

ಮತ್ತೊರ್ವಳ್ ಕೌಶಲ್ಯಂ
ಪೆತ್ತು ಕುಮಾರಿಕೆಯ ಚೆಲ್ವ ನುಣ್ಗೊರಳೊಳ್ ಮಿಗೆ
ಬಿತ್ತರಿಸಿ ಕಟ್ಟಿದಳ್ ಪೊಳೆ
ವುತ್ತಿರ್ದುಱ್ ತೋರಮುತ್ತುಗಳ ಸರವೇಳಂ ೬೧

ಬೇಕೆಂಬ ಕುಮಾರಕ ಚಿ
ತ್ತಾಕರ್ಷಣಘುಟಿಕೆಯಂತೆ ರಂಜಿಪ ಪರಮಾ
ಸ್ತೋಕಮೌಕ್ತಿಕದಿನೊಪ್ಪುವ
ಮೂಕುತಿಯಂ ಮೂಗಿನಲ್ಲಿ ಸಾರ್ಚಿದಳೊಲವಿಂ ೬೨

ನಗೆಮೊಗಮೆಂಬ ಚಂದ್ರಮನ ತಣ್ಗದಿರ್ದೊಂಗಲೆ ಘಟ್ಟಿಗೊಂಡೆರ
ಳ್ಬಗೆಯೊಳೆ ಪುಂಜಿಸಿರ್ದು ಪರಿಲಂಬಿಗಳಾದುವಿವೆಂಬ ಮಾಳ್ಕೆಯಿಂ
ಸೊಗಯಿಪ ಮುತ್ತಿನೋಲೆಗಳನಿಕ್ಕಿ ಮನೋಹರಕರ್ಣಪಾಳಿಕಾ
ಯುಗದೊಳಮರ್ಚಿದಳ್ ಕಡುಕಿನೋಳಿಯನಾತ್ತವಿಮೌಕ್ತಿಕಾಳಿಯಂ ೬೩

ನಗೆಗಣ್ಗಳೊಳಂಜನಮಂ
ಬಗೆಗೊಳ್ವಿನಮೆಚ್ಚಿದಳ್ ವಿಳಾಸಿಯೊರ್ವಳ್
ಮಿಗುವ ಪೊಸಮಸೆಯ ನನೆಯಂ
ಬುಗಳಿಂಗಂ ಪಡೆವ ಮಾಳ್ಕೆಯಿಂ ನುಣ್ಬೊಗರಂ ೬೪

ಶೃಂಗಾರಮೆಂಬ ಲತೆಯ ಮ
ನಂಗೊಳಿಸುವ ತುತ್ತತುದಿಯೊಳೊಗೆದಿರ್ದಲರೊ
ಳ್ದೊಂಗಲವೊಲ್ ಪೆಱನೊಸಲೊಳ್
ಸಂಗಳಿಸಿದಳಳೆವ ತೋರಮುತ್ತಿನ ಬೊಟ್ಟಂ ೬೫

ತ್ರಿಗುಣಿಸಿದ ಮಲ್ಲಿಕಾಮಾ
ಲೆಗಳಂ ಕಡುತೋರಮಾದ ಮುಡಿಯಲ್ಲಿ ಮನಂ
ಬುಗುವಂತಿರೆ ಮುಡಿಸಿಟ್ಟಳ್
ಮೃಗಧರಕಳೆಗಳನೆ ರಾಹು ಮುಕ್ಕುಳಿಸಿದವೊಲ್ ೬೬

ರನ್ನದ ಮುಂದಂಡೆಗಳಿಂ
ಚೆನ್ನಂಬಡೆದಿರ್ದು ತೋರತೊಂಗಲ್ಗಳಿನೆಸೆ
ವನ್ನಂ ಮುತ್ತಿನ ಮುಡಿಯಂ
ಕನ್ನೆಗೆ ಜಾಣಿಂದೆ ತೊಡಿಸಿದಳ್ ಮತ್ತೊರ್ವಳ್ ೬೭

ವ: ಇಂತು ತತ್ತತ್ಕರ್ಮಕೌಶಲ್ಯನಿರತೆಯರಪ್ಪ ಪರಿಚಾರಕಿಯರಾ ಶೃಂಗಾರವತೀದೇವಿಯ ನತಿಶಯಮಾಗಿ ಕೆಯ್ಗೆಯ್ದಿದಾಗಳ್

ಮನದನುರಾಗದೇಳ್ಗೆಗೆ ದಲಾಗರಮೀಕ್ಷಿಪರೀಕ್ಷಣಂಗಳಿಂ
ಗನವಧಿಸೌಖ್ಯಕಾರಕಮಶೇಷಜನಪ್ರಿಯಮಾಗಿ ಕೌತುಕಂ
ತನಗಳವಟ್ಟು ತೋಱೆ ಪರಿಭೂಷಿತಕನ್ನೆಯ ರೂಪು ಲೋಕಮಂ
ಘನಮೆನೆ ಮೋಹಿಸುತ್ತು ಪುಳಕಾಂಕುರಸಂಕುಳಮಾಗಳೇಳ್ವಿನಂ ೬೮

ಮನಸಿಜನ ಮಂತ್ರದೇವತೆ
ಯೆನೆ ಮದನನ ವೀರಲಕ್ಷ್ಮಿಯಂತಿರೆ ರತಿನಾ
ಥನ ಮೋಹನಶಕ್ತಿಯವೊಲ್
ಜನಮಂ ಮೋಹಿಸುತುಮಿರ್ದಳಚ್ಚರಿಯಿಂದಂ ೬೯

ವ: ಆಗಳ್

ಎಯ್ದೆ ಮೂಲೋಕಮಂ ಕೆ
ಯ್ಗೆಯ್ದೀಕೆಯ ರೂಪಿದೊಂದೆ ಸಾಲದೆ ಗೆಲಲಿ

ನ್ನಯ್ದುಬಾಣಂಗಳಂ ಪಿಡಿ
ದೆಯ್ದುವ ಸಂಕ್ಲೇಶಮೇವುದೆಂಬಂ ಮದನಂ ೭೦

ವ: ಸಮನಂತರವಮಾ ಪ್ರತಾಪರಾಜನಾದೇಶದಿಂದಂ ಮೌಹೂರ್ತಿಕನೊರ್ಬಂ ಶುಭಮುಹೂರ್ತವಿನಿಮಗ್ನ ಶುಭಲಗ್ನದೊಳನೇಕವಿಧಮಣಿಮಯ ರಚನಾವಿಶೇಷ ಪರಿರಂಜಿತಮುಂ ಪರಿಪೂರ್ಣಮನೋರಥಮುಮೆನಿಪ್ಪ ಸುವರ್ಣರಥಮಂ ತಂದು ಮುಂದಿರಿಸುವುದುಮಾಗಳಾ ಶೃಂಗಾರವತೀದೇವಿ ತನ್ನಯ ನೂತ್ನರತ್ನಮಯಸಮುದಾರ ನಾನಾ ಶೃಂಗಾರಸಾರದಂಗೀಕಾರದಿಂ ಚಾರುತೆವಡೆದ ಹಡಪದ ಡವಕೆಯ ಕನ್ನಡಿಯ ಸಂಚದ ಮೇಳದಂಗನೆಯರೊಡಗೂಡಿ ಸಕಳರಾಜಕುಮಾರವಂಶವೀರ್ಯಪರಾಕ್ರಮ ಕ್ರಮಸ್ವರೂಪ ನಿರೂಪಣ ನಿಪುಣೀಕೃತಬುದ್ಧಿಸಮೃದ್ಧಿಯಪ್ಪ ಸುಭದ್ರೆಯೆಂಬ ವೃದ್ಧಕಂಚುಕಿವೆರಸು ಕಡುನಲಪಿಂದ ಬಂದಾ ರಥಮನೇಱುವುದುಂ

ಪರಿವೇಷಂಬಡೆದಿರ್ದ ಪೂರ್ಣಶಶಿಬಿಂಬಂ ತಾನಿದೆಂಬಂದದಿಂ
ಪರಭಾಗಂಬಡೆದಿರ್ದ ಪಲ್ಲವದಿನೊಪ್ಪಂಬೆತ್ತುದಂ ಛತ್ರಮಂ
ಧರಿಸಿರ್ದಳ್ ಕೆಲದಲ್ಲಿಯೊರ್ವಳೊಲವಿಂ ಮತ್ತಿರ್ವರುಂ ರತ್ನಬಂ
ಧುರದಂಡಾಂಚಿತ ಚಾಮರಂಗಳನೆರಳ್ಭಾಗಂಗಳಲ್ಲಿಕ್ಕಿದರ್ ೭೧

ವ: ಆಪೊತ್ತಿನೊಳ್

ಮಂಗಳಪಾಠಕಪ್ರಕರಮೋದುವ ಪಾವನಪದ್ಯಗದ್ಯನಾ
ದಂಗಳ ಕೂಡೆ ಸಂಗಣಿಸಿ ಮಂಗಳಗಾಯಕಗಾಯಕೀ ನಿಕಾ
ಯಂಗಳ ಚಾರುಗೀತನಿನದಂಗಳವೆಣ್ಣೆಸೆಯಂ ಪಳಂಚಲು
ತ್ತುಂಗಗಭೀರಹೃದ್ಯತರಮಂಗಳವಾದ್ಯರವಂಗಳುಣ್ಮಲುಂ ೭೨

ಕುಲವೃದ್ಧೆಯರೆಲ್ಲಂ ನೆರೆ
ದೊಲವಿಂದಂ ಪರಸಿ ಮಂಗಳಾಕ್ಷತಚಯಮಂ
ತಳಿಯಲವಂ ಕೈಕೊಳುತುಂ
ತಳರ್ದಲ್ಲಿಂ ಪೋಗುತಿರ್ದಳತಿಶಯದಿಂದಂ ೭೩

ತುಂಗತರಮಂಗಳದ್ರ
ವ್ಯಂಗಳ ಬಳಗಂಗಳಿಂದೆ ತುಂಬಿದ ಹರಿಯಾ
ಣಂಗಳ ಪಂತಿಗಳಂ ಪಿಡಿ
ದಂಗನೆಯರ್ ನೆರೆದು ಮುಂದೆ ಪೋಗುತ್ತಿರ್ದರ್ ೭೪

ಪರಿವಾರವಾರನಾರೀ
ಪರಿಕರನಿಕರಂಗಳಾ ವರೂಥದ ಸುತ್ತಲ್

ನೆರೆದು ಬರುತ್ತಿರ್ದರ್ ಬಿ
ತ್ತರಿಸುತ್ತುಂ ಕಾಮದೇವಮಹಿಮಾಸ್ಥಿತಿಯಂ ೭೫

ವ: ಇಂತಾಕೆಯೊಡನಾಡಿಗಳಪ್ಪ ಸಾಸಿರ್ವರ್ ಮೇಳದ ಕೆಳದಿಯರ್ ಪಿಂಡುಗೊಂಡು ತದ್ಯೋಗ್ಯ ನಾನಾಪ್ರಕಾರ ನವೀನಮಣಿಮಯಮಂಗಳೋಪಕರಣಂಗಳಂ ಪಿಡಿದಾ ಸ್ಯಂದನದ ಸುತ್ತಲುಂ ಮುಂದೈಸಿ ನಡೆಯೆ

ಉರ್ಬಿದ ಗರ್ವದಿಂದೆ ಮದನಂ ಗೊಲೆಗೇಱಿಸಿ ಕಬ್ಬುವಿಲ್ಲುಮಂ
ಕೊರ್ಬಿದ ಪೂವಿನಂಬುಗಳನಲ್ಲಿ ತೊಡರ್ಚೆ ವಿಶೇಷಶೌರ್ಯದಿಂ
ಬೊಬ್ಬಿಱಿದಾರ್ದು ಮುಂದೆ ನಡೆಯಲ್ ಮುದದಿಂದಮೆ ಬಂದುಪೊಕ್ಕಳಾ
ಸರ್ವನುತ ಸ್ವಯಂವರದ ಚಿತ್ರಿತಗೋಪುರದಂತರಾಳಮಂ ೭೬

ವ: ಅಂತಾ ಶೃಂಗಾರವತೀದೇವಿಯೆಂಬ ಕನ್ಯಾರತ್ನಂ ಮಹಾಮಹಿಮೆವೆರಸಿ ಬಂದು ತತ್ಸ್ವಯಂವರಮಂದಿರದೊಳಗಂ ಪುಗುವುದುಮಾಗಳಲ್ಲಿರ್ದ ರಾಜನ್ಯಕಮೆಲ್ಲಂ ವಸಂತಲಕ್ಷ್ಮಿಯ ಬರವಿನೊಳವನೀರುಹಂಗಳಂಕುರಸಂಕುಳಂಗಳಂ ತಾಳ್ದುವಂತೆ ವಿಪುಳಪುಳಕಂಗಳಂ ತಾಳ್ದಿ ಮತ್ತಮವರ ಕಣ್ಗಳುಂ ಮನಂಗಳುಂ ವಾಸರಶ್ರೀಯ ಪ್ರವೇಶದೊಳ್ ತಾವರೆಯಲರ್ಗಳಲರ್ವಂತೆ ವಿಕಾಶಶ್ರೀಯನಪ್ಪುಕೆಯ್ವುದುಂ

ಸೊಗಯಿಪ ಕನ್ಯಾರತ್ನಂ
ಮಿಗೆರಾಜಕುಮಾರರೀಕ್ಷಣಾಕರ್ಷಣಮಂ
ಬಗೆಗಳ್ಗಾಕೃಷ್ಟಿಯಂ ಕೆ
ಯ್ಮಿಗಲೊರ್ಮೊದಲಲ್ಲಿ ಮಾಡಿದಳ್ ಕೌತುಕಮಂ ೭೭

ವ: ಆಗಳಾ ರಾಜಕುಮಾರಿ ಮೆಲ್ಲಮೆಲ್ಲನೆ ಸಲ್ಲೀಲೆಯಿಂದಂ ಬಂದು ತತ್ಸ್ವಯಂ ವರಮಂಡಪಮಧ್ಯಸ್ಥಳಕ್ಕಳಂಕಾರಮೆನಿಸಿ ಕಣ್ಗೊಳಿಪ ಗೋಮೇದವೇದಿಕಾಗ್ರ ಭಾಗದಲ್ಲಿ ಥಳಥಳಿಸಿ ಪೊಳೆವ ವಿಮಳತರಮುಕ್ತಾಫಳಮಾಲಾಲಂಭೂಷಾದಿ ರಚನಾವಿಶೇಷ ಪರಿಭೂಷಿತರಮಣೀಯ ಹರಿನೀಳ ಶಿಳಾಮಯಸ್ತಂಭಮಂ ಮಲಂಗಿ ನಿರತಿಶಯಮಾಗಿ ನಿಂದಿರ್ಪುದುಂ

ತಾರಾವಳಿಗಳ್ ಬಳಸಿದ
ಚಾರುಸುಧಾಕಿರಣಕಳೆಯ ತೆಜದಿಂದೆ ಮನೋ
ಹಾರಿಸ್ತ್ರೀಯರ ಬಳಸಿಂ
ದಾ ರಾಜಕುಮಾರಿ ಮನಕೆ ಪಡೆದಳಗುರ್ವಂ ೭೮

ರತಿಯಂ ಪ್ರತಿಷ್ಠೆಗೆಯ್ದುಂ
ಪಿತಾಮಹಂ ಸಕಳಜನಮನಃಪೀಠದೊಳೆಂ

ಬತಿಶಯಮಮಂ ಪುಟ್ಟಿಸುತುಂ
ಸತಿನೋಡುತ್ತಿರ್ದಖಿಳಖಿಳರಾಜನ್ಯಕಮಂ ೭೯

ವ: ಆಗಳಖಿಳಭೂಪಾಳಕುಮಾರಕರ ಕಣ್ಮಲರ್ಗಳೊರ್ಮೊದಲೊಳ್ ಕಡು ತವಕದಿಂ ಋಜವರ್ಥಋಜುವಕ್ರಮರ್ಧವಕ್ರಾದಿ ಬಹುವಿಧ ಗತಿಭೇದದಿಂ ಪರಿದು ಪೋಗಿಯಾ ರಾಜಕುಮಾರಿಯನೆಳಸಿ ಬಳಸಿಯೋರ್ರೈಸಿಯಟ್ಟಿಮುಟ್ಟಿ ಪತ್ತಿ ಸುತ್ತಿಮುತ್ತು ತ್ತುಮಿರೆ

ಮಿಕ್ಕ ನಾಲ್ಕಿಂದ್ರಿಯಂಗಳ
ನೊಕ್ಕು ಕರಂ ಬಿಟ್ಟುಮವಜಿ ವಿಷಯಂಗಳುಮಂ
ಸೊಕ್ಕಿರ್ದ ದೃಗಿಂದ್ರಿಯಮೊಂ
ದಕ್ಕನುವಶರಾಗೆ ನೋಡಿದರ್ ಕನ್ಯಕೆಯಂ ೮೦

ಮತ್ತೊರ್ವಂ ರಾಜಸುತಂ
ಚಿತ್ತರದಿಂ ನೋಡಿನೋಡಿ ಕಣ್ಸೋಲಂ ಮೆ
ಯ್ವೆತ್ತಮೆಯಿಕ್ಕದೆ ಬಗೆಗೊಳಿ
ಸುತ್ತಿರ್ದಂ ಸುರಕುಮಾರನೆಂಬಿನಮಾಗಳ್ ೮೧

ಸುವಿಪಂಚೀಕಳನಾದಮೆಂಬ ತೆಜದಿಂ ಕರ್ಣಾಮೃತಸ್ಯಂದನೋ
ತ್ಸವಮಂ ಮಾಳ್ಪ ಗಭೀರಸಾರಮಟದುವಪ್ಪೊಳ್ಮಾತುಮಂ ಕನ್ನೆಯ
ನ್ನವಧೂವಕ್ತ್ರಮನೀಕ್ಷಿಸುತ್ತು ನುಡಿಯಲ್ಪೆನ್ನಂ ದಲೆಂದೊರ್ವನು
ಜ್ಜುಗದಿಂ ಪೋಗಿರೆ ಮುಂದೆ ಲೆಕ್ಕಿಸದಿರಲ್ಕಾದಂ ಸುಹಾಸ್ಯಾಶ್ರಯಂ ೮೨

ಪಿರಿದುಂ ಕೌತುಕಮಾದ ರೂಪಭರಮಂ ಕಣ್ಸೋಲ್ತು ನಟ್ಟಾಲಿಗೊಂ
ಡರೆಬರ್ ನೋಡುವ ಪೊತ್ತಿನಲ್ಲಿ ನಿಜಚೇಷ್ಟಾಭಾವಮಂ ಬಿಟ್ಟು ಮೆ
ಯ್ಗರೆದರ್ ಲೆಪ್ಪದ ಚಿತ್ರಿಸಿರ್ದ ವಿಲಸಚ್ಚಿತ್ರಾಂಗಳೆಂಬಂದದಿಂ
ಮರವಟ್ಟರ್ ಕರಮಾ ಕುಮಾರಕಿಯ ಸೌಂದರ್ಯಕ್ಕಿದಾಶ್ಚರ್ಯಮೇ ೮೩

ಪೊಂಗಳಸಂಗಳಂತೆಸೆವ ವೃತ್ತಕುಚಂಗಳ ಚೆಲ್ವಿನೇಳ್ಗೆಯಂ
ಪಿಂಗದೆ ಸೋಲ್ತು ನೋಡುವೆಡೆಯೊಳ್ ಪುಳಕಂಗಳನಪ್ಪುಕೆಯ್ಯಲಂ
ದಂಗಜ ಮೂರ್ಛೆಯಿಂದೆ ಮರವಟ್ಟಿರೆ ರಾಜಕುಮಾರರೆಲ್ಲರುಂ
ತುಂಗಮದಶ್ರುಧಾರೆಗಳಿನೆಚ್ಚಱುಮಂ ಪಡೆದಿರ್ದರಾಕ್ಷಣಂ ೮೪

ಲಲನಾತಿಳಕದ ನಳಿತೋ
ಳೆಳಕುಳಿಗೊಳೆ ಕಾಮಪಾಸದಂತಿರೆ ಮನಮಂ
ಕಳವಳಿದದನೀಕ್ಷಿಸುತುಂ
ತಳವೆಳಗಾದಂ ನೃಪಾಳತನಯನದೊರ್ವಂ ೮೫

ಮಿಸುನಿಯ ಕುಂಡಳಮಂ ಸಂ
ತಸದಿಂದಳವಡಿಸುವೊಂದು ನೆವದಿಂದೊರ್ವಂ
ನಸುಮುರಿದು ಗೋಣನಂದೀ
ಕ್ಷಿಸಿದಂ ನೃಪಸುತೆಯ ಮಿಸುಪ ನಗೆಮೊಗದೊಳ್ಪಂ ೮೬

ನೀಱೆಯ ಪೆಱನೊಸಲೊಳ್ ಬೆ
ಳ್ಪೇಱಿದ ತಿಳಕಂ ಮನೋಜವಶ್ಯದ ತಿಳಕಂ
ತೋಱಿರಲದನೀಕ್ಷಿಸುತುಂ
ಬೇಱೊರ್ವಂ ಮಱುಗಿ ನೆಱೆಯೆ ಬೆಱಗಾಗಿರ್ದಂ ೮೭

ವ: ಅಂತು ಕಂತುರಾಜನ ಸರ್ವ್ವಮೋಹದೀಪಕಳಿಕೆಯಂತೆ ಕಮನೀಯ ಕಾಯ ಕಾಂತಿಸಂತತಿಯಿಂದುಜ್ವಳಿಸುತ್ತುಮಿರ್ದ ಮಂಗಳಮಯಶೃಂಗಾರಭಂಗಿಯನಂಗೀಕರಿಸಿ ಕಂಗೊಳಿಪ ಚೆಲ್ವಿಂದಗ್ಗಳಮಾದ ಶೃಂಗಾರವತೀದೇವಿಯಂ ಕಂಡು ಮನಂಗೊಂಡನೇಕ ರಾಜಕುಮಾರಕಲೋಕಮೆಲ್ಲಂ ನಾನಾಪ್ರಕಾರ ಕಾಮವಿಕಾರ ಪರಿಪಾಕಸಮುದ್ರೇಕ ಸಮಾಕ್ರಾಂತಮನೋವಿಕಾರದೊಡನೊಡನಂಗಂಗಳ ದುಷ್ಟಚೇಷ್ಟಾಪರಂಪರೆಯನವಷ್ಟಂಭಿಸುವುದುಂ

ಆಸತಿಯ ಚಾರುಲಾವ
ಣ್ಯಾಸವರಸಸೇವೆಯಿಂದೆ ಸೊಕ್ಕಿತ್ತು ಕರಂ
ಭಾಸುರಕುಮಾರವೃಂದಂ
ಸೂಸುವಿನಂ ಮದನಚೇಷ್ಟೆ ಬಹುಮುಖದಿಂದಂ ೮೮

ಒಂದೊಂದು ನೆವದ ಮಱೆಯಿಂ
ದಂದಾ ನೃಪಸುತೆಗೆ ತಮ್ಮ ಚೆಲ್ವಂ ತೋಱಿಸ
ಲೆಂದು ಮಾಡಿದರನೇಕ
ಚ್ಛಂದದ ಚೇಷ್ಟೆಗಳನಾ ಕುಮಾರಕರರೆಬರ್ ೮೯

ವ: ಅದೆಂತೆನೆ

ಮುಡಿದ ಪೂಮಾಲೆ ಮತ್ತಿ
ಮ್ಮಡಿಸಲ್ ನಖದೀಪ್ತಿಮಾಲೆಯಿಂ ಯುವನೊರ್ವಂ
ಕಡುತೋರದುಱುಂಬಂ ಸಂ
ಗಡಿಸುವ ನೆವದಿಂದೆ ತನ್ನ ಚೆಲ್ವಂ ಮೆಱೆದಂ ೯೦

ಸುಕುಮಾರಕನೊರ್ವಂ ಮಣಿ
ಮಕುಟಮುಮಂ ತಿರ್ದುವೊಂದು ನೆವದಿಂದೆ ಭುಜಾ

ಧಿಕಶೋಭೆಯನಾಕ್ಷಣದೊಳ್
ಪ್ರಕಟಿಸಿ ಮೆಱೆದಂ ಸುರೂಪಮಮಂ ವೈಭವಮಂ ೯೧

ಭಾಸುರಮುಕ್ತಾಹಾರಮ
ನೋಸರಿಸುವ ನೆವದಿನಂದು ಪೇರುರದೊಳ್ಪಂ
ಲೇಸಾಗಿಯೆ ತೋಱಿಸಿದಂ
ಸಾಸಿಗನೊರ್ವಂ ಕುಮಾರಕಂ ಕಡುನೀಱಿಂ ೯೨

ಅಂಗದಮಂ ತಿರ್ದುವ ಪರಿ
ಭಂಗಿಯಿನೊರ್ವಂ ಕುಮಾರಕಂ ತೋಱಿಸಿದಂ
ತುಂಗತರ ಬಾಹುದಂಡಾ
ಗ್ರಂಗಳ ಪಿರಿದಾದ ಚೆಲ್ವಿನೊಂದು ಬೆಡಂಗಂ ೯೩

ವರಪಾಣಿಪದ್ಮರಾಗದೆ
ಪರಭಾಗಂಬಡೆದ ಪದ್ಮರಾಗದ ಮುದ್ರೋ
ತ್ಕರಮಂ ತಿರ್ದುವ ನೆವದಿಂ
ಬೆರಳ್ಗಳ ಕಡುಚೆಲ್ವನಂದು ತೋಱಿಸುತಿರ್ದಂ ೯೪

ಲೀಲಾರ್ಥಂ ಪಿಡಿದಿರ್ದಭಿ
ಲಾಲಿತವಿಕಚಾರವಿಂದಮಮಂ ತಿರಿಗಿಸಿದಂ
ಬಾಲೆಯನೀಕ್ಷಿಸುತುಂ ಭೂ
ಪಾಲಂ ಮನ್ಮಥವಿಕಾರವಶದಿಂದೊರ್ವಂ ೯೫

ವ: ಇಂತನಂಗನೆಂಬ ಖಳಗ್ರಹವಿಕಾರವಿಜೃಂಭಣಾವಶಕ್ಕನುಕೂಲರಾಗಿ ರಾಜರೆಲ್ಲರು ಮಂಗೋಪಾಂಗವಿಕಾರಭಂಗಿಯನಂಗೀಕರಿಸುತ್ತುಮಿರೆ

ಶಿಷ್ಟಕುಮಾರಿಯ ತನುಲತೆ
ಮುಷ್ಟಿಗ್ರಾಹ್ಯೈಕಮಧ್ಯಮಾಗಿರ್ದು ಧನು
ರ್ಯಷ್ಟಿಯ ತೆಱದಿಂ ಚೆಲ್ವನ
ವಷ್ಟಂಭಿಸೆ ಕಾಮನದಱ ಬಲದಿಂ ಬಲಿದಂ ೯೬

ತನುವಂ ಬೇಡಿ ಸದಂತರಂಗದೊಳೆ ನೋವಂ ಮಾಳ್ಪ ವೈಚಿತ್ರ್ಯಮೋ
ಹನ ಬಾಣಂ ಪಿಡಿವಾಗಳೊಂದು ತೊಡುವಾಗಳ್ ಮೂಱು ಪೋಪಾಗಳೊ
ಯ್ಯನೆ ಸಾಹಸ್ರಕಮೆಯ್ದೆ ತಾಗುವೆಡೆಯೊಳ್ ಲಕ್ಷಂ ವ್ಯಥಾಪಾದನಾ
ನನದೊಳ್ ಕೋಟಿ ದಲಾಗಿ ಭೂಪಸುತರಂ ತೊಟ್ಟೆಚ್ಚನಾ ಮನ್ಮಥಂ ೯೭

ಮೋಹನಬಾಣಮುಚ್ಚಿದೊಡೆ ಮಸ್ತಕಕಂಪನಮಾದುದೆಂಬಿನಂ
ಸಾಹಸಿಕರ್ ಕುಮಾರವರರಾಕೆಯ ಚೆಲ್ವನಭೀಕ್ಷಿಸುತ್ತುಮಿ
ರ್ದೂಹಿತವಚ್ಚಮತ್ಕೃತಿಕರಾಗಿ ಕರಂ ತಲೆದೂಗುತಿರ್ದರು
ತ್ಸಾಹಿಸದಿರ್ಪರೇ ಜಗದೊಳಚ್ಚರಿಯಂ ನೆಱೆ ಕಂಡ ಮಾನಸರ್ ೯೮

ನೋಡುವ ಕಣ್ಗಳಾವೆಡೆಯೊಳಿರ್ದವವಲ್ಲಿಯ ಕಾಂತಿಯಲ್ಲಿ ತೇಂ
ಕಾಡುತುಮಿರ್ದು ಮತ್ತುಳಿದಪಾಂಗವಿಲೋಕನಮಿಲ್ಲದಿರ್ದೊಡಂ
ನಾಡೆಯುಮಿಂದ್ರನಂತಿರೆ ಸಹಸ್ರವಿಲೋಚನಮುಳ್ಳೊಡಂತದಂ
ನೋಡುವ ಸೌಖ್ಯಮಂ ಪಡೆಯಲಕ್ಕೆನುತುಂ ನುಡಿದರ್ ಕುಮಾರಕರ್ ೯೯

ವ: ಇಂತು ಕಡುತಿಣ್ಣಂ ಗಾಡಿವಡೆದ ಪಣ್ಣಮೇಲೆ ಕಣ್ಣಾಗಿರ್ದ ರಾಜನ್ಯಕ ಮೆಲ್ಲಂ ತಂತಮ್ಮ ಬಲ್ಲಂತಪ್ಪ ಸ್ತ್ರೀವಶ್ಯದ ಯಂತ್ರಮಂತ್ರತಂತ್ರಂಗಳ ಬಲ್ಪಿಂ ಸ್ವತಂತ್ರಂ ಮಾಡಲ್ವೇಡಿ

ಒರ್ವಂ ವಶ್ಯದ ಚೂರ್ಣಮಂ ತಳಿದನೊರ್ವಂ ಧ್ಯಾನಿಸುತ್ತಿರ್ದನೊ
ಲ್ದೊರ್ವಂ ಮಂತ್ರಮನೋದಿದಂ ತಿಳಕಮಂ ಮತ್ತೊರ್ವನಿಟ್ಟಂ ಸಮಂ
ತುರ್ವಿಂದಾ ಸತಿಯಂ ವಶೀಕರಿಸಲೆಂದಿಂತಪ್ಪುಪಾಯಂಗಳಂ
ಸರ್ವರ್ ಮಾಡುತುಮಿರ್ದರುತ್ಸುಕತೆಯಿಂ ಗೆಲ್ವಂತಿರೊರ್ವೊರ್ವರಂ ೧೦೦

ಘನಮನುರಾಗಂಬೆತ್ತುದು
ಜನಚಿತ್ತಂ ರಾಗಿಣೆಯೋಪಾದಿಯ ವಶದಿಂ
ವಿನುತಸ್ಫಟಿಕೋಪಳಮ
ತ್ಯನುರಕ್ತಿಯನೆಯ್ದುವಂತುಪಾಧಿಯ ವಶದಿಂ ೧೦೧

ವ: ಅನಂತರಮಾ ಶೃಂಗಾರವತೀದೇವಿಗೆ ವೃದ್ಧಕಂಚುಕಿಯೊರ್ವಳವರವರ ವಂಶವೀರ್ಯವಿಭವಪರಾಕ್ರಮಪ್ರಭಾವಮನನುಕ್ರಮದಿಂ ಪೇಳ್ದು ಸುಟ್ಟುಂಬೆಯಿಂ ತೋಱಿತೋಱಿ ಬೇಱೆವೇಱೆ ಪೆಸರ್ಗೊಂಡು ಪರಿವಿಡಿಯಿಂದಂ ತೋಱಿಸುತ್ತುಮಿರ್ಪುದುಂ

ಈತಂ ಮಾಳವಭೂಮಿಪಾಳವರನೀತಂ ಕುಂತಳಾಧೀಶನಿಂ
ತೀತಂ ಗೂರ್ಜರಭೂಭುಜಂ ಮಗಧದೇಶಾಧೀಶನೀತಂ ಸಮಂ
ತೀತಂ ಚೋಳನರೇಶ್ವರಂ ಬಗೆವೊಡೀತಂ ಪಾಂಡ್ಯಭೂಪಾಳನಿಂ
ತೀತಂ ಕೇರಳಭೂಪನೆಂದುಸಿರ್ದು ತೋಱುತ್ತಿರ್ದಳಂದೆಲ್ಲರಂ ೧೦೨

ಈತಂ ಮತ್ತಕಳಿಂಗದೇಶದೊಡೆಯಂ ನೇಪಾಳಭೂಪಾಳನಿಂ
ತೀತಂ ಸಿಂಹಣಮೆಂಬ ನಾಡಿನರಸೀತಂ ವಂಗರಾಜ್ಯೇಶನಿಂ

ತೀತಂ ಕೇರಪನೀತನಿಂದ್ರವಿಷಯಶ್ರೀನಾಥನೀತಂ ಮಹಾ
ಖ್ಯಾತಕ್ಷೋಣಿಪನಾಮವಂ ತಿಳಿಪುತುಂ ಸುಟ್ಟುಂಬೆಯಿಂ ತೋಱಿದಳ್ ೧೦೩

ವ: ಇಂತು ತೋಱ ದಟ್ಟಮಾಗಿ ತಳ್ತು ನಿಮಿರ್ದಮೆದುಱುಗಲ್ ಕಡುನೀಳ್ದ ಕುಡಿವುರ್ಬು ಗಳನೌಂಕೆ ಬಿಂಕದಿಂ ನೀಡುಂನೋಡುವೆಡೆಯೊಳ್ ನಾಡೆಯುಂ ಪೊಗರೇಱಿದ ಮೊಗರಸಮೆಂಬ ಕಡಲ ನಡುವೆ ತಡೆಯದೆಡೆಯಾಡಿ ಪೊಳೆವೆಳವಾಳೆಯಮೀಂಗಳ ಬೆಡಂಗನೊಳಕೊಂಡು ರಾಜಕನ್ಯೆಯ ಚೆಲ್ಲೆಗಣ್ಗಳಂ ಚಳಿಸುತ್ತುಮಿರೆ

ಕಾಮನ ಕೆಯ್ಯ ಮೋಹನ ಸುಬಾಣದ ಮೆಯ್ವೊಳಸೆಂಬ ಮಾಳ್ಕೆಯಿಂ
ಸೋಮನ ತಣ್ಪುವೆತ್ತ ಕಡುನುಣ್ಗದಿರ್ದೊಂಗಲಿದೆಂಬ ಮಾಳ್ಕೆಯಿಂ
ಪೂಮಳೆಯೆಂಬ ಮಾಳ್ಕೆಯಿನುದಾರಕುಮಾರರ ಮೇಲೆ ಲೀಲೆಯಿಂ
ಭಾಮೆಯ ಲೋಳಲೋಚನವಿಶಾಳಮರೀಚಿ ನಿಮಿರ್ದುದೆತ್ತಲುಂ ೧೦೪

ವ: ಅಂತಾ ಯುವತೀರತ್ನಂ ಸುತ್ತಲುಂ ಮೊತ್ತಂಗೊಂಡು ಕುಳ್ಳಿರ್ದ ಯುವ ರಾಜಕುಂಜರರಂ ನಿರೀಕ್ಷಣಂಗೆಯ್ಯುತ್ತುಂ ನಟ್ಟನಡುವೆ ಕುಳ್ಳಿರ್ದ ಧರ್ಮನಾಥನಂತಿಕಕ್ಕೆವರೆ

ತುಂಬಿಗಳೊಳಿ ಸಂಪಗೆಯ ಪೂಗಳನೊಲ್ಲದೆ ಬಿಟ್ಟುಬಂದು ಮ
ತ್ತೆಂಬಿನ ಕಲ್ಪವೃಕ್ಷಕುಸುಮಸ್ತಬಕಕ್ಕೆಱಗುತ್ತುಮಿರ್ಪವೋ
ಲಂಬುಜಪತ್ರನೇತ್ರೆಯಲರ್ಗಂಗಳವನ್ಯರನೊಲ್ಲದೆಯ್ದೆ ಚೆ
ಲ್ವಂಬಡೆದಿರ್ದ ಧರ್ಮಜಿನಪಂಗೆಱಗಿರ್ದವತೀವ ಹರ್ಷದಿಂ ೧೦೫

ಸುಳಿಸುಳಿದೆಲ್ಲಿಯುಂ ತಿರಿಗಿಬಂದ ಪರಿಶ್ರಮಮಂ ಕಳಲ್ಚಿ ನಿ
ಶ್ಚಳತೆಯಿನಿಪ್ಪುದೊಂದು ಬಗೆಯಿಂದೆ ಕುಮಾರಿಯ ಲೋಚನಂಗಳುಂ
ನೆಲಸಿದವಂದು ಧರ್ಮಜಿನನಾಥನ ಮೂರ್ತಿಯೊಳೊಂದಱಲ್ಲಿ ಸಂ
ಗಳಿಸಿದವಲ್ಲಿ ಮತ್ತಮದಱಿಂ ಪೆಱಪಿಂಗದೆ ನಟ್ಟವೆಂಬಿನಂ ೧೦೬

ಕಣ್ಣಱಿದು ವೃದ್ಧಕಂಚುಕಿ
ತಿಣ್ಣಂ ತದ್ಧರ್ಮನಾಥ ಮಹಿಮಾಕ್ರಮಮಂ
ಬಣ್ಣಿಸಲುದ್ಯೋಗಿಸಿದಳ್
ಕಣ್ಣಿಂದಱಿಯಿಂ ವಿವೇಕಿಗಳ್ ಪರಮನಮಂ ೧೦೭

ಈತಂ ಸಾಮಾನ್ಯನಲ್ಲಂ ತ್ರಿಜಗದಧಿಪ ಸಂಪೂಜ್ಯನಿಕ್ಷ್ವಾಕುವಂಶೋ
ದ್ಭೂತಂ ಸತ್ಯೈಕವಾಕ್ಯಂ ಚರಮತನುಮಹಾಸೇನರಾಜಾತ್ಮಜಂ ವಿ
ಖ್ಯಾತಂ ನಿಷ್ಕರ್ಮಕಂ ಪಂಚದಶಪರಮತೀರ್ಥಂಕರಂ ಕೌಸಳೇಶಂ
ಸ್ಫೀತಾಜ್ಞಾಸ್ಫೂರ್ತಿಕಂ ರತ್ನಪುರಪರಿವೃಢಂ ಧರ್ಮನಾಥಾಭಿಧಾನಂ ೧೦೮

ಈತನ ವಧುವಾಗಿಯೆ ನೀಂ
ಭೂತಳಜನವಂದ್ಯೆಯಾಗು ಕಾಮಿನಿ ಕೇಳೆಂ
ದೋತು ಪೇಳಲ್ಕೆ ಕಂಚುಕಿ
ಸಾತಿಶಯಪ್ರೀತಿಯಿಂದಮೇಗೊಂಡಳದಂ ೧೦೯

ಎರಡುಂ ಕಣ್ಗಳಿವೆಯ್ದುವೆಂದು ಸುರಪಂ ಚಕ್ಷುಸಹಸ್ರಂಗಳಂ
ಧರಿಸಿ ಪ್ರೀತಿಯಿನೀತನೊಂದು ರಮಣೀಯಾಕಾರಸಂಪತ್ತಿಯಂ
ಪಿರಿದುಂ ನೋಡುತುಮಿರ್ದನೆಂದೊಡುಳಿದಲ್ಪರ್ ಬಣ್ಣಿಸಲ್ ಬಲ್ಲರೇ
ವರನಾನಾಶುಭಲಕ್ಷಣಂಬೆರಸಿದತ್ಯಾಶ್ಚರ್ಯಸೌಂದರ್ಯಮಂ ೧೧೦

ವ: ಅದುಕಾರಣಂ ನಿನಗೀ ಧರ್ಮನಾಥಕುಮಾರವರನೆ ವರನಾಗಲ್ ತಕ್ಕನೆಂದು ಸುಭದ್ರೆಯೆಂಬ ವೃದ್ಧಕಂಚುಕಿ ಪೇಳ್ವುದುಮದಂ ಮನದೆಗೊಂಡು ಸಮಾಲೋಕನ ಮಾತ್ರಸಮುದ್ಭೂತರೋಮಾಂಚಸಂಚಯಸಮಂಚಿತ ಶರೀರೆಯಾದ ಶೃಂಗಾರವತೀ ದೇವಿಯೆನಗನುರೂಪನಪ್ಪ ವರನಾದನೆಂದು ಹರ್ಷಸಮುತ್ಕರ್ಷವ್ಯಭೂಷ್ಯ ಮಾಣಮಾನಸೆಯಾಗುತ್ತುಂ ಸಕಳಸುಕುಮಾರಶಿರೋಮಣಿಗೆ ಸ್ವಯಂವರಮಾಲೆಯ ನಿಕ್ಕಲೆಂದು

ಪಿರಿದುಂ ನಿರ್ಮಳಭಾವಮಂ ಪಡೆದು ಪದ್ಮಾನಂದಮಂ ಕೂಡಿಕೊಂ
ಡುರುಗಂಗಾನದಿಯೆಂಬಿನಂ ರಸಮಯಶ್ರೀಮೂರ್ತಿಯಾಗಿರ್ದ ಸೌಂ
ದರಿ ದುಃಪಲ್ವಲಮೆಂಬವೋಲೆಸೆವ ಧಾತ್ರೀಪಾಳರಂ ಬಿಟ್ಟು ಬಂ
ಧುರರತ್ನಾಕರದಂತೆ ತೋರ್ಪ ಜಿನನಂ ಬಂದೆಯ್ದಿದಳ್ ಪ್ರೀತಿಯಿಂ ೧೧೧

ರತಿ ಹೂವಿನ ಸರಮಂ ನಿಜ
ಪತಿಗೆ ಕೊಡಲ್ವೇಡಿ ಬಪ್ಪವೊಲಿದಿರಾಗಿ ಮಹಾ
ಸತಿ ಪುಷ್ಪ ಮಾಲೆಯಂ ಪಿಡಿ
ದತಿಶಯದಿಂ ಬಂದಳಾ ಜಿನೇಶಂಗಿದಿರಂ ೧೧೨

ವ: ಅಂತಾತನ ಕಣ್ಗಂ ಮನಕ್ಕಂ ಬಪ್ಪಂತು ಬಂದು ಮುಂದೆನಿಂದು

ದಿಟ್ಟಿಸಿ ಮೋಹದಿಂ ಬಿಡದೆ ನೋಡುವ ಕನ್ನೆಯ ಭಾವಭೇದಮಂ
ನಿಟ್ಟಿಸಿ ಮೇಳದಂಗನೆ ವಿನೋದದಿನಾಕೆಯ ಕೈವೆರಳ್ಗಳಂ
ಮುಟ್ಟಿ ನಗುತ್ತಮೆಲ್ವಿಡಿದು ಬಾಯೆನುತುಂ ತೆಗೆಯಲ್ಕೆ ಲಜ್ಜೆಯಂ
ಬಿಟ್ಟು ಮರಳ್ದುನೋಡಿ ಸೆಳೆದಳ್ ಕಡುಪಿಂದಮೆ ಕೆಯ್ಯನಾಕ್ಷಣಂ ೧೧೩

ಒಡೆಯನ ಸರ್ವಾಂಗಂಗಳ
ನಡರ್ದಪ್ಪುವ ತವಕದೊದವು ತೀವಿರೆ ಮನದೊಳ್

ಪಿಡಿದಿರ್ದ ಮಾಲೆವೂವಂ
ಸಡಗರದಿಂ ಜಿನನ ಕೊರಳೊಳಿಕ್ಕಲ್ ಬಗೆದಳ್ ೧೧೪

ಪೊಂಪುಳಿಸುತ್ತುಮಿರ್ದ ತನಿಗಂಪಿನ ಸೊಂಪು ಕವಲ್ತು ಸುತ್ತಲುಂ
ಪೆಂಪನದಾಳ್ದು ತೋಱೆ ಪೊಸಪೂವಿನ ಮಾಲೆಯನಂದು ಲೀಲೆಯಿಂ
ದಂ ಪದೆದಿಕ್ಕಿದಳ್ ಜಿನನ ನುಣ್ಗೊರಳಲ್ಲಿ ನಖಾಂಶುಮಾಲಿಕಾ
ಸಂಪದದಿಂದ ಕೆಂದಳದ ಕೆಂಪುಗಳಿಂದತಿಚಿತ್ರಮಾದುದಂ ೧೧೫

ನೋಡುವ ಸರ್ವಭೂಪಸುತರುಂ ಮನಮಿಕ್ಕುವಿನಂ ಲತಾಂಗಿ ಬೆ
ಲ್ವೋಡದ ಧರ್ಮನಾಥನೃಪಕಂಠದೊಳಿಕ್ಕಿದಳಾ ಸ್ವಯಂಬರಾ
ರೂಢಲತಾಂತಮಾಲೆಯನಿದಂ ಪೊಗರೇಱಿದ ತೋಳಮೂಳಮುಂ
ಮಾಡುವಿನಂ ಮನಕ್ಕೆ ವಿಷಮೇಷುವಿಕಾರವಿಶಿಷ್ಟರಾಗಮಂ ೧೧೬

ವರಶೃಂಗಾರಮಹಾರಸಪ್ರಭವದಿಂ ಪೆರ್ಚಿರ್ದ ಸೌಭಾಗ್ಯಸಾ
ಗರದೊಳ್ ತೇಂಕುವ ವೀಚಿಮಾಲೆಯೆನೆ ಕಣ್ಗಂಬಾಯ್ತು ಚೆಲ್ವಾದ ಪೇ
ರುರದೊಳ್ ತೋರ್ಪ ಲತಾಂತಮಾಲೆ ಜಗದೊಳ್ ಪೇಳ್ವಂದದಿಂ ಪುಣ್ಯಮಂ
ಬುರುಚಂದ್ರೋದಯಮಂ ವಿವೇಕಯುತನಾರೀರೂಪಕಂದರ್ಪನಾ ೧೧೭

ಆಗಳುದಾತ್ತಧರ್ಮಜಿನಪಂ ವನಮಾಲಿಯವೊಲ್ ಮನಕ್ಕಮಿಂ
ಬಾಗಿರೆ ಸೋಂಕಿ ಮೆಯ್ಯನೆಡದಲ್ಲಿ ಕುಮಾರಿಕೆ ಬನ್ನಿ ನಿಂದಿರ
ಲ್ಬೇಗದೆ ಲಕ್ಷ್ಮಿ ಬಂದು ಮಧುಸೂದನನಂತಿಕದಲ್ಲಿ ನಾಡೆಯುಂ
ರಾಗದೊಳೊಂದಿ ನಿಂದ ತೆಱದಿಂದೆ ಜನಂಗಳ ಕಣ್ಗೆ ತೋಱಿದಳ್ ೧೧೮

ವ: ಆಸಮಯದೊಳ್

ಜಯಜಯನಾದಮೆಯ್ದೆ ಪುದಿಯಲ್ ಬಿಡದೊರ್ಮೊದಲಲ್ಲಿ ದಿಗ್ವಿಭಿ
ತ್ತಿಯನುರುಪಾಠಕಸ್ತವನಮುಂ ಶ್ರವಣಂಗಳಿಗಾಗೆ ಭೂಷಣಂ
ಪ್ರಿಯದೊಳೆ ವಂಶವೃದ್ಧವನಿತಾತತಿ ಮುತ್ತಿನ ಮಂಗಳಾಕ್ಷತೋ
ಚ್ಚಯಮುಮನಿಕ್ಕಿದರ್ ಪರಕೆಯ ಧ್ವನಿ ಪರ್ಚಿಯದುಣ್ಮಿ ಪೊಣ್ಮಲುಂ ೧೧೯

ಮೊಳಗುವ ಮಂಗಳವಾದ್ಯಂ
ಗಳ ವಿವಿಧಧ್ವನಿವಿಶೇಷಮೆಲ್ಲಂ ದಶದಿ
ಕ್ಕುಳ ಕೋಣಾಂತರವಿವರಂ
ಗಳೊಳಂ ತುಂಬಿರ್ದುದುತ್ಸವಂ ಮಿಗುವನ್ನಂ ೧೨೦

ವ: ಮತ್ತಮಾ ವಧೂವರರಂ ಕೆಯ್ಮಿಕ್ಕ ಬೆಕ್ಕಸಮುತ್ತು ನೋಡುತ್ತುಮಿರ್ದ ನಿಖಿಳನಿಖಿಳ

ಕ್ಷತ್ರಿಯಪುತ್ರಮೊತ್ತಂಗಳೆಲ್ಲಂ ಮಿತ್ರನಂ ಕಂಡ ನಕ್ಷತ್ರಂಗಳಂತಿರತ್ತಲು ಮಿತ್ತಲುಂ ತಾಱುಂತೀಱಾಗಿ ಕೆದಱಿ ಕಿತ್ತೆತ್ತಿ ಪರೆದು ಪಾಱೆಪೋಗಿ ನಿಜನಿಜನಿವಾಸಂಗಳಂ ಪೊಕ್ಕಿರ್ಪುದುಂ

ಬಳಿಯಂ ಪ್ರತಾಪರಾಜಂ
ಕುಲಪುತ್ರಿಯನುದ್ಧಧರ್ಮತೀರ್ಥಂಕರನಂ
ಸಲೆಮುಂದಿರ್ದೊಡಗೊಂಡ
ಗ್ಗಳಿಕೆಯ ಕುಂಡಿನಪುರಕ್ಕೆ ಪೋಗಲ್ ಬಗೆದಂ ೧೨೧

ಪಣ್ಣಿದ ಪಟ್ಟದಾನೆಯುಮನೇಱಿ ವಧೂವರರಿಬ್ಬರುಂ ಜಗಂ
ಬಣ್ಣಿಸೆ ಕುಂಡಿನಕ್ಕಭಿಮುಖಮಪ್ಪದೆದಾಗಿಯೆ ಬಂದರಂದು ಮೆ
ಯ್ವಣ್ಣದೊಳಯ್ದುರನ್ನದ ಕದಿರ್ ಪುದಿದೊಪ್ಪಿರೆ ತಂದೆತಾಯ್ಗಳುಂ
ಪೂರ್ಣಮನೋರಥರ್ ನಡೆದರೇಱಿ ಗಜಂಗಳನಿಕ್ಕೆಲಂಗಳೊಳ್ ೧೨೨

ಅಱುವತ್ತೊಳ್ಚಾಮರಶ್ರೇಣಿಗಳನಬಳೆಯರ್ ಬಿಂಕದಿಂದಿಕ್ಕಿದರ್ ಮ
ತ್ತುಱುವ ಶ್ವೇತಾತಪತ್ರಂಗಳ ಬಳಗಮನೊಲ್ದೆತ್ತಿ ತಾಳ್ದಿರ್ದರೆಲ್ಲಂ
ತುಱುಗಿತ್ತು ವ್ಯೋಮದೊಳ್ ಪೀವರವಿಜಯಪತಾಕಾಕುಳಂ ಕಣ್ಗಗುರ್ವಂ
ಕಱೆವುತ್ತಂ ಪೆರ್ಚಿದತ್ಯದ್ಭುತವಿಭವದಿನೆಳ್ತಂದನಾ ಧರ್ಮನಾಥಂ ೧೨೩

ವ: ಇಂತು ದೇವೇಂದ್ರನುಮಿಂದ್ರಾಣಿಯುಮೈರಾವಣ ಸಮಾರೋಹಣಂ ಗೆಯ್ದು ಕೆಯ್ಗೆಯ್ದು ಬರ್ಪಂತೆ ನಾನಾಪ್ರಕಾರ ಪುಣ್ಯಪಾಠಕಪ್ರಕರಮಾಂಗಳಿಕಪದ್ಯಪಠನ ಪರಂಪರಾಪಟುರವಮ ಪರಕಲಿಸಿ ಕಿವಿ ಶಬ್ದಂಗಿಡುವವೊಲಗ್ಗಳಮಾದುದಱೊಡನೆ ಪದೆದು ಪುದಿದ ವಿಲಸದಭಿನವ ದುಂದುಭಿಸಂದೋಹಗಭೀರಭೂರಿಧ್ವಾನಂ ಸಕಳದಿಗಂತ ರಾಳಮಂ ಮೂವಳಸಾಗಿ ಬಳಸುತ್ತುಮಿರೆ ಸಮಸ್ತಚಾತುರ್ದಂತಸೈನ್ಯಂಬೆರಸು ಧರ್ಮನಾಥ ಕುಮಾರನುಂ ಶೃಂಗಾರವತೀದೇವಿಯುಂ ಪುರಸ್ಸರಮಾಗಿ ಪ್ರತಾಪರಾಜಂ ಸಂತೋಷ ಸರ್ವಸ್ವ ಕರಂಡಕಮಾದ ಕುಂಡಿನಪುರದ ಗೋಪುರದ್ವಾರಮಂ ಮಹಾಮಹಿಮೆಯಿಂ ಮುಟ್ಟೆವರ್ಪುದುಂ

ಭೋಂಕನೆ ಕೇಳ್ದು ವಾದ್ಯರವಮಂ ಪುರದಲ್ಲಿಯ ಸರ್ವಕಾಮಿನೀ
ಸಂಕುಳಮುಂ ಸಮಸ್ತಜನಮೆಯ್ದೆವಧೂವರರಂ ನಿರೀಕ್ಷಿಪಾ
ಶಂಕೆಯಿನೆಯ್ದಿ ಬಂದು ಪುರಗೋಪುರಮಂ ನೆಲೆಮಾಡದೋಳಿಯಂ
ಬಿಂಕದ ಕೋಂಟೆಯ ತೆನೆಗಳಂ ಪರಿದೇಱಿದರುತ್ಸುಕತ್ವದಿಂ ೧೨೪

ಅಟ್ಟಳೆಗಳನೇಱಿ ಕೆಲರ್
ಮೆಟ್ಟಿ ಸುಧಾವಳಯಕೂಟಕೋಟಿಗಳಂ ಕೆಲ

ರೊಟ್ಟೈಸಿ ದೇವಗೃಹಮಂ
ನೆಟ್ಟನೆ ನೋಡುತ್ತುಮಿರ್ದುದಾ ಪೌರುಜನಂ ೧೨೫

ಇತ್ತಿತ್ತಂ ಬನ್ನಿಬನ್ನಿ ಪ್ರವರಪರಿಣಯೋತ್ಸಾಹಮಂ ನೋಡಿ ನೋಡಿ
ನ್ನತ್ತತ್ತಂ ಪೋಗಿ ಪೋಗೆಂದೆನುತ ಕರೆದು ತಂತಮ್ಮ ವರ್ಗಾರ್ಕ್ಷಣಂ ಪೇ
ಳುತ್ತುಂ ತಾಂ ತೋಱಿಸುತ್ತಿರ್ಪವಿರಳಕಳಕೋಳಾಹಳೋದ್ರೇಕದಿಂದಂ
ಮತ್ತಂ ಪ್ರಕ್ಷೋಭಿಸುತ್ತಿರ್ದುದು ಪುರಮನಿತುಂ ಸಂಭ್ರಮಾವೇಷ್ಟ್ಯಮಾನಂ ೧೨೬

ಮಿಕ್ಕು ಕದಕ್ಕದಿಸೆ ಕುಚಂ
ಚೆಕ್ಕನೆ ಕುರುಳೋಳಿ ಕೆದಱಿ ಕೆತ್ತೆ ನಿತಂಬಂ
ಸೊಕ್ಕಿಂ ದಿಂಕಿಡೆ ಪರಿದುದ
ಉರ್ಕಿಂದಬಳಾಜನಂ ನಿರೀಕ್ಷಾತುರದಿಂ ೧೨೭

ವ: ಮತ್ತಮಾ ಪತ್ತನಂ ಪ್ರಜಾಮಯಮಾದುದೆಂಬಂತೆ ಸುತ್ತಲುಂ ಪೌರನಾರೀಜನಂಗಳೆಲ್ಲಂ ನೆರೆದಲ್ಲಲ್ಲಿ ಮೊತ್ತಂಗೊಂಡು ಮಂದೈಸಿಯೊಂದಾಗಿ ನಿಂದು ಸಮುಪಕಂಠದೊಳ್ ಬರುತ್ತುಮಿರ್ದ ಮದುವೆಯ ಸಂಭ್ರಮವಿಭ್ರಮಮನುತ್ಕಂಠ ತಾವಗುಂಠಿತ ಸಮುನ್ನತಕಂಠರಾಗಿ ನೋಡುತ್ತುಮಿರ್ಪುದುಮೊರ್ವಳಾ ಪೊತ್ತಿನೊಳ್

ಅಂದುಗೆಯಂ ಮುಂಗೈಯೊಳ್
ಸೌಂದರಕಂಕಣಮನಂಘ್ರಿಯೊಳ್ ಸಾರ್ಚಿದಳಂ
ದಿಂದುಲಲಾಟದೊಳಂಜನ
ಮಂ ದೃಷ್ಟಿಯೊಳೊರ್ವಳಿಕ್ಕಿದಳ್ ಕತ್ತುರಿಯಂ ೧೨೮

ನೋಡುವ ವಾಂಛೆಯಿಂದ ಪರಿದೋಡುತುಮಿಪ್ಪೆಡೆಯಲ್ಲಿ ಪೆಂಡಿರಂ
ಬೇಡೆನೆ ಗಂಡನಂ ಬಗೆಯದೋಡುವಳಂ ಪಿಡಿದೊಂದು ದಂಭದಿಂ
ಗಾಡಿಕೆಯಿಂದೆ ತಕ್ಕಿಸಿದೊಡಾ ಸುಖದಿಂದಮೆ ಮೂರ್ಛೆವೋಗಿ ಮು
ಮ್ಮಾಡಿದವೋಲದಚ್ಚಳಿಯದಿರ್ದೊಡೆ ಜಾಱಿದಳೊಯ್ಯನಾಕ್ಷಣಂ ೧೨೯

ಎಡಗಣ್ಣೊಂದಱೊಳೆಚ್ಚಿಯಂಜನಮುಮಂ ವಾಮಸ್ತನಾಭಾಗದೊಂ
ದೆಡೆಯಂ ತೋಱಿಸುವಂದು ವಾಮಕರಮಂ ಶೃಂಗಾರಿತಂಮಾಡಿ ಮ
ತ್ತೆಡಗಾಲೊಂದಱೊಳಿಕ್ಕಿಯಂದುಗೆಯುಮಂ ನೋಳ್ಪುತ್ಸವಂ ಪೆರ್ಚಿಯಾ
ಗಡೆಬಂದಿರ್ದಳದರ್ಧನಾರಿ ಶಿವನೆಂಬೀ ಶಂಕೆಯಂ ಮಾಡುತುಂ ೧೩೦

ವ: ಇಂತು ಸಮಂತು ತಿಂತಿಣಿಯಾದ ಸೀಮಂತಿನೀ ಸಂತತಿಯೊಳೊರ್ವಳ್

ಗುಣಯುಕ್ತಂ ಮುಕ್ತಾಮಯ
ನೆಣೆಯಿಲ್ಲದ ಚಚ್ಚರುಚಿ ದಲೆನ್ನಂತೆ ನೃಪಾ

ಗ್ರಣಿ ಹೃದಯದೊಳಿರ್ಪನೆಂ
ಬೆಣಿಕೆಯಿನೆನೆ ಪಱಿದುಬೀಳ್ದುದುರದಿಂ ಹಾರಂ ೧೩೧

ವ: ಅಲ್ಲಿಯೊರ್ವಳ್ ಕಡುವಿದಗ್ಧೆ

ತರ್ಕಯಿಸಿಕೊಂಡು ಮಗನನ
ಳುರ್ಕಿಂದೆ ಮೆಲುತ್ತುಮಿರ್ದ ತಂಬುಲಮಂ ಬಿಡ
ದಿಕ್ಕಿ ಬಾಯಿಂದೆ ಬಾಯೊಳ್
ತಕ್ಕಿಂ ಚುಂಬನವಿವೇಕಮಂ ತೋಱಿಸಿದಳ್ ೧೩೨

ಮಾಲೆಯನೀ ಸ್ವಯಂವರದೊಳಿಕ್ಕಿದೊಡಾದ ವರಂ ದಲೀತನು
ಲ್ಲಾಲಿತಧರ್ಮನಾಥನೆನಿಪಂ ಪೆಸರಿಂದಮೆ ಪಿಂದಣಾಕೆ ಮ
ತ್ತೀ ಲಲನಾಶಿರೋಮಣಿ ಕುಮಾರಿಕೆಯಾಕೆ ಸುರೂಪೆಯೆಂದು ತ
ದ್ಬಾಲೆಯನೆಲ್ಲರುಂ ನುಡಿವುತುಂ ಬೆರಳಿಂದಮೆ ತೋಱೆ ನೋಡಿದರ್ ೧೩೩

ಬಲೆವೀಸಿದಂದದಿಂ ಪರ
ಕಲಿಸುವ ಮೆಯ್ವಣ್ಣದಲ್ಲಿ ನೋಳ್ಪರ ಕಣ್ಗಳ್
ತೊಲಗದೆ ನಿಂದವು ಮೀಂಗಳ
ಬಳಗಂಗಳಿವೆಂಬ ಮಾಳ್ಕೆಯಿಂ ಬರ್ಪಾಗಳ್ ೧೩೪

ಅವರಿರ್ಬರ ರೂಪಂ ನೋ
ಡುವ ತರುಣೆಯರೆಯ್ದೆ ಮೆಚ್ಚಿ ತಲೆದೂಗಿದರತಿ
ಜವದಿಂ ಪೋಗಲ್ವೇಡೆಂ
ದವರಂ ತಲೆಸನ್ನೆಗೆಯ್ದು ನಿಲಿಸುವ ತೆಱದಿಂ ೧೩೫

ವ: ಇಂತಾ ಪಟ್ಟಣದ ಪೆಣ್ಗೂಸುಗಳ ಪಿಂಡುಗಳೆಲ್ಲಮುಂ ಪರಿಜನಂಗಳುಂ ಪುರಜನಂಗಳು ಮವರವರಂ ಸುಟ್ಟುಂಬೆಯಿಂ ತೋಱಿತೋಱಿ ನಟ್ಟದಿಟ್ಟಿಯಿಂ ನಾಡೆಯುಂ ನೋಡಿ ತಂತಮ್ಮೊಳೋರೊರ್ವರ್ ಕೊಂಡಾಡುತ್ತುಮಿರ್ಪುದುಮಿತ್ತಲತ್ಯದ್ಭುತ ವಿಭವದಿಂದಾ ಧರ್ಮನಾಥಕುಮಾರಂ ಪ್ರತಾಪರಾಜನರಮನೆಯಂ ಪೊಕ್ಕು ಕರುಮಾಡದ ಮುಂದಣ ಮಣಿಮಯರಮಣೀಯಪರಿಣಯನಭವನಂ ದೆಸೆದೆಸೆಗೆ ಕೆದಱಿ ತೆರೆಮಸಗಿ ಪರಿವನಣುತರ ಕಿರಣಗಣಂಗಳಿಂದಾಗಸದೊಳಿಂದ್ರಚಾಪಶ್ರೀಯನಜನಿಸುತ್ತುಮಿರ್ಪುದುಂ

ಗಗನಮನಳ್ಕಿಱಿದುದು ಮಿಗೆ
ನೆಗೆದ ಪಟಧ್ವಜಸಮೂಹಕಂ ಮದುವೆಯ ಚೋ
ಜಿಗಮಂ ನೋಡುವ ದಿವಿಜಾ
ಳಿಗಳಿಂಗುಡಕೊಡುವ ವಸ್ತ್ರಚಯಮೆಂಬಿನೆಗಂ ೧೩೬

ನಾನಾರತ್ನಸ್ಫುರತ್ತೋರಣಗಣರಚನಾಶ್ಚರ್ಯದಿಂ ಕಣ್ಗಗುರ್ವಂ
ತಾನೀವುತ್ತಿರ್ದ ಕರ್ಕೇತನಮಯವಿಲಸದ್ವಾರಶಾಲಾಭಿಶೋಭಾ
ಸ್ಥಾನಂ ವೈವಾಹಗೇಹಂ ಪಡೆದುದು ಸೊಗಸಂ ಚಂದ್ರಕಾಂತೋಜ್ವಳೀ ಭೂ
ತಾನೂನಸ್ತಂಭಸಂದೋಹಕಪರಿಕಳಿತಂ ಪದ್ಮರಾಗೋರುಕೀಲಂ ೧೩೭

ಪುರುಜಿನರಾದಿಯಾದ ಜಿನನಾಥ ಚರಿತ್ರಕಥಾಪ್ರಪಂಚಮಂ
ವರಭರತಾದಿ ಚಕ್ರಧರವರ್ತನೆಯೊಂದು ಕಥಾಪ್ರಪಂಚಮಂ
ಸುರಮಿಥುನಂಗಳಿಪ್ಪ ತೆಜನಂ ಸುವಿಚಿತ್ರಿತಚಿತ್ರರೂಪದಿಂ
ಬರೆದ ವಿನೀಲಭಿತ್ತಿಗಳ ಮೊತ್ತಮದೊಪ್ಪುತುಮಿರ್ದುದೆತ್ತಲುಂ ೧೩೮

ವ: ಮತ್ತಂ ಪಟ್ಟಾವಳಿಯ ಮೇಲ್ಗಟ್ಟಂ ಕಟ್ಟುವ ಸಾದಿನ ಸಾರಣೆಯನೆಸಗುವ ಕುಂಕುಮಪಂಕದಿಂ ಕಾರಣೆಗೊಳ್ವ ಪನ್ನೀರ ಸಿಂಪಣೆಯಂ ಕೊಡುವ ಮುತ್ತಿನ ರಂಗವಾಲಿಯನಿಕ್ಕುವ ಮಂದಾರದ ಪೂವಲಿಯಂ ಕೆದಱುವ ಪರಿಪರಿಯ ಕುಶಲವೃತ್ತಿಯ ಕೆಲಸದೊಳು ಸಂವಣಿಗೊಳ್ವ ಸೌಂದರಿಯರ ಸಂದೋಹದ ಪೊಂದುಡಿಗೆಯ ಕಡುರವದ ಗಡಣದಿಂದಡಿಗಡಿಗೆಯೊಡನೊಡನೆ ನುಡಿವಂದದಿಂ ಚಿಲ್ವಂಪಡೆದ ಮದುವೆಯ ಮನೆಯ ಸಂಭ್ರಮದ ಸಿರಿಯನೊಳಗೊಂಡಿರ್ಪುದುಮಲ್ಲಿ

ಪುಗುವ ಪೊಱಮಡುವ ಮೆಯ್ದೊಡ
ವುಗಳಂ ನೆಱೆತೊಡುವ ಮಡದಿಯರ ಸಡಗರದಿಂ
ಬಗೆಗೊಳಿಸುತ್ತಿರ್ದುದು ಚೋ
ಜಿಗಮಪ್ಪಿನಮಾ ವಿವಾಹಮಣಿಮಂಡಪಕಂ ೧೩೯

ವ: ಇಂತು ವಿಚಿತ್ರಶೋಭಾವಹಮಾದ ವಿವಾಹಗೇಹದ ವಿಳಾಸಾವಳೋಕ ನಂಗೆಯ್ವುತ್ತುಂ ಬಂದು ತಂತಮ್ಮ ವಾಹನಂಗಳಿನಿಳಿದು ಲಾವಣ್ಯರಸವರೇಣ್ಯಪುಣ್ಯ ಪಣ್ಯಾಂಗನಾ ನಿಕರಂಗಳ್ ಪರಮಾಶೀರ್ವಾದನಾದಂಗಳಿಂ ಪರಸಿ ತಳಿವ ವಿಮಳತರ ವಿಪುಳ ಮುಕ್ತಾಫಳಮಯವಿಳಸದ್ಧವಳಮಂಗಳಾಕ್ಷತಂಗಳ ಬಳಗಂಗಳಿಂದಂ ದಂಪತಿಗಳ್ ತಮ್ಮಯ ಕುಂತಳವಲ್ಲರಿಯಂ ಕುಸುಮಿಸುತ್ತುಮದಱೊಳಗಂ ಪುಗುವುದುಮಾಗಳಲ್ಲಿ

ಪಸುರ್ವರಲ ಜಗಲಿ ಪರಿರಂ
ಜಿಸಿದುದು ರಮಣೀಯ ಧರಣಿರಮಣಿಯ ಮಂಡೆಯೊ
ಳೆಸೆವ ಕೇಶಂಬೊಲೊಪ್ಪಿತು
ಪೊಸಮುತ್ತಿನ ತೊಡಿಗೆಯಂತೆ ರಂಗಾವಲಿಯುಂ ೧೪೦

ವ: ಆ ವಿಶಾಲತರಮಾದ ವೇದಿಕಾಂತರಾಳದೇಕೈಕಪ್ರದೇಶದೊಳ್

ಬಾಳೆಯ ಪಣ್ಗೊನೆಗಳ್ ಪೊಂ
ಬಾಳೆಯ ಪೆರ್ಮಡಲ್ಗಳಡಕೆಯೊಳ್ಗೊಂಚಲ್ಗಳ್

ಮೇಲೆಸೆದವು ಚೆಂದೆಂಗಿನ
ಮೇಲೆನಿಪೆಳನೀರ ತೋರಗಾಯ್ಗಳ್ ಪಲವುಂ ೧೪೧

ಒಂದೆಡೆಯಲ್ಲಿ ಸಾದುಮಿಗೆ ತುಂಬಿದ ಕಾಂಚನ ಭಾಜನಂಗಳಂ
ತೊಂದೆಡೆಯಲ್ಲಿ ಚಾರುಹರಿಚಂದನಕರ್ದಮಮೆಯ್ದೆತೀವಿ ಚೆ
ಲ್ವೊಂದಿದ ರಾಜತೋರುತರ ಭಾಜನರಾಜಿಗಳಿರ್ದವಲ್ಲಿ ಮ
ತ್ತೊಂದೆಡೆಯಲ್ಲಿ ಮಂಗಳಸದಕ್ಷತತೀವಿದ ಭಾಜನಂಗಳುಂ ೧೪೨

ಪಳಿಕಿನ ಕಂಬದೊಳಂ ಮಾ
ರ್ಪೊಳೆದಚ್ಚೊತ್ತಿದವೊಲಿರ್ದ ಜಾಗರಮೆಸೆಗುಂ
ವಿಳಸಿತ ಪುಣ್ಯಾಂಕುರಸಂ
ಕುಳಮಾಗಳ್ ಬಳೆದು ನಿಮಿರ್ದು ಮೇಗಡರ್ವನ್ನಂ ೧೪೩

ಪೊಳೆವ ವೈಡೂರ್ಯಕುಡ್ಯಂ
ಗಳೊಳಂ ಪ್ರತಿಬಿಂಬಿಸಿರ್ದು ಥಳಥಳಿಸುವ ಮಂ
ಗಳದೀಪಂಗಳ ಬಳಗಂ
ಜ್ವಳಿಸಿದವಗೆವೊಯ್ದು ಸುತ್ತಲಿಜೆಸಿದ ತೆಱದಿಂ ೧೪೪

ವ: ಇಂತನೇಕವಿಧ ಮಂಗಳಸುಗಂಧಿ ದ್ರವ್ಯಸಂಬಂಧಬಂಧುರಂಗಳಪ್ಪ ಕೆಲ ಕೆಲವು ಭಾಜನಂಗಳಂ ಮಿಗೆಬೆಳಗನುಗುಳ್ವ ತದ್ಯೋಗ್ಯಂಗಳಾದುಪಕರಣಂಗಳ ಬಳಗಮನೊಳಕೊಂಡ ವಿತರ್ದಿಕಾಂತರ್ಭಾಗಂ ಬಗೆಗೊಳಿಸುತ್ತುಮಿರೆ

ಸುರಚಿರಮಪ್ಪಾ ವೇದಿಯ
ಪರಮಚತುಃಕೋಣಶೋಣಮಾಣಿಕ್ಯಮಯೋ
ದ್ಧುರಮಂಗಳಕಳಶಂಗಳ್
ಪಿರಿದುಂ ಕೌತುಕಮನಿತ್ತವಖಿಳಜನಕ್ಕಂ ೧೪೫

ವ: ಇಂತಷ್ಟಮಂಗಳಸಮಾವೇಷ್ಟಿತಂಗಳಾಗಿ ಸಮುತ್ತುಂಗಭೃಂಗಾರಸಂ ಘಾತಮದಂಗೀಕರಿಸಿ ಬೆಡಂಗುವಡೆದ ತದ್ವೇದಿಕಾಚತುಃಕೋಣಮಂಗಳಕಳಶಂಗಳಾನಂದ ಮನಜನಿಸುತ್ತುಮಿರಲದಱ ನಟ್ಟನಡುವೆ

ವರಸರ್ವೌಷಧಿಪಂಚರತ್ನ ಕನಕಶ್ರೀಗಂಧಸತ್ಪುಷ್ಪಬಂ
ಧುರಸಮ್ಮಿಶ್ರಿತ ತೀರ್ಥವಾರಿಪರಿಪೂರ್ಣಂ ಶ್ವೇತಸೂತ್ರಾವೃತಂ
ಪರಭಾಗಂಬಡೆದಿರ್ದ ಹೇಮಮಯಭಾಸ್ವತ್ಪೂರ್ಣಕುಂಭಂ ಪರಿ
ಸ್ಫುರಿಸುತ್ತಿರ್ದುದು ರತ್ನದರ್ಪಣಸುದೂರ್ವಾಪಲ್ಲವೋಲ್ಲಾಸಿತಂ ೧೪೬

ವ: ಮತ್ತಂ ಪಾರಿಜಾತಪ್ರಸೂನಮಾಲಾಜಾಲಸಮಾಲಂಬನರಚನಾವಿಶೇಷಂಗಳಿಂದ ಳಂಕೃತಮುಂ ಸ್ವಸ್ತಿಕೋಪಲಕ್ಷಿತಂ ಸರ್ವಧಾನ್ಯಪ್ರಸ್ತರಣದಿಂ ರಮಣೀಯತರಮಾದ ತಳಪ್ರದೇಶಮುಂ ದಿವ್ಯವಸ್ತ್ರಸಮಾವರಣದಿಂ ಪ್ರಶಸ್ತಮಾದ ಗಳಸ್ಥಾನಮುಮಾಗಿ ಥಳ ಥಳಿಸಿ ಪೊಳೆಯುತ್ತುಮಿರಲಲ್ಲಿಯೊರ್ವಳ್

ಮಂಗಳಪೂರ್ಣಕುಂಭಮುಖದೊಳ್ ಮಣಿದರ್ಪಣಮುಂ ತಗುಳ್ಚಿಯು
ತ್ತುಂಗ ಸುವೇದಿಕಾಗ್ರದೊಳಗರ್ಚಿಸಿರಲ್ ಕೆಲದಲ್ಲಿ ತೋರ್ಪ ನೇ
ರ್ಪಿಂಗೆಡೆಯಾದ ರತ್ನಮಯಭಿತ್ತಿಯೊಳಂ ಪ್ರತಿಬಿಂಬಿಸುತ್ತಿರ
ಲ್ಕಂಗನೆಯಲ್ಲಿ ಕೆಂದಳಿರನಿಕ್ಕಿಯೆ ಮಾಡಿದಳಂದು ಹಾಸ್ಯಮಂ ೧೪೭

ವ: ಇಂತನಂತಮಂಗಳದ್ರವ್ಯಸಂಗದಿಂ ಬೆಡಂಗುವಡೆದ ವೇದಿಕಾಸಮಧಿಕ ಶೋಭೆಯಂ ನೀಡುಂನೋಡುತ್ತುಂ ನಡೆತಂದು ತನ್ಮಧ್ಯಸಮುದ್ಭೂಷಿತಮಹಾರಜತಮಯ ವಿರಾಜಮಾನಭಾಜನಂಗಳೊಳ್ ತುಂಬಿ ತುಳುಂಕಾಡುತ್ತುಮಿರ್ದ ಬಿಡುಮುತ್ತಿನ ಮೆಟ್ಟ ಕ್ಕಿಯಿಂ ಮೆಟ್ಟಿ ಚಂದ್ರಮನುಂ ರೋಹಿಣಿಯುಮಿರ್ಪಂದದಿಂ ದಂಪತಿಗಳಿರ್ದರಲ್ಲಿ ಪ್ರತಾಪ ರಾಜನನೇಕಮಕುಟಬದ್ಧಪರಿವೃತನಾಗಿ ಲಕ್ಷ್ಮೀಪತಿಯೆಂಬಂತೆ ಮುಂದೆ ಕುಳ್ಳಿರ್ಪುದುಮಾ ತನ ಪಟ್ಟದರಸಿಯಪ್ಪ ಸತ್ಯವತೀಮಹಾದೇವಿಯುಂ ಮಹಾಲಕ್ಷ್ಮಿಯಂತೆ ನಿರವಶೇಷರಾಜ ಕುಮಾರಿಕಾನಿಕರಂಬೆರಸು ಪಿಂದೆ ಕುಳ್ಳಿರ್ಪುದುಂ

ಕೆಂದಾವರೆಯಲರ್ಗಳೊಳಂ
ನಿಂದಿರ್ದ ಸುರಾಜಹಂಸಮಿಥುನದ ತೆಱದಿಂ
ದಂದಾ ಮಿಥುನಂ ಕಣ್ಗಾ
ನಂದಮನೊದವಿಸುತುಮಿರ್ದುದತಿರಮಣೀಯಂ ೧೪೮

ವ: ಅಂತು ನಿಲಲೊಡಂ ಸಕಳಜನದ ಕಳಕಳಕೋಳಾಹಳಮಂ ನಿಲಿಸಿ ಶುಭಮುಹೂರ್ತ ಪ್ರಸ್ತಾವನನಿರೀಕ್ಷಣೋನ್ಮುಖರಾಗಿರ್ಪುದುಮಾಗಳ್

ಆ ಕುವರನ ರೂಪ ಸಮಾ
ಳೋಕನದುತ್ಸುಕತೆಯಿಂದೆ ರಾಜಾತ್ಮಜೆ ಮ
ತ್ತೀಕಾಂಡಪಟಂ ಮಧ್ಯದೊ
ಳೇಕಿರ್ದುದೆನುತ್ತೆ ನೋಡಿದಳ್ ಕಿಸುಗಣ್ಣಿಂ ೧೪೯

ವ: ಇಂತು ಶುಭಲಗ್ನವಿನಿಮಗ್ನಸಮಯಂ ದೊರೆಕೊಳೆ ತೆರೆಸೀರೆಯಂ ತೆಗೆವುದುಂ

ಆಗಳ್ ಪ್ರತಾಪರಾಜಂ
ಕೈಗೆಯ್ದುಭಿಜನ ಸನಾಭಿಜನ ಸಚಿವದ್ವಿಜ

ಪೂಗಂ ಬಳಸಿರೆ ಬಂದಂ
ರಾಗರಸಂ ಮೂರ್ತಿವಡೆದು ಬರ್ಪಂತೆವೊಲಂ ೧೫೦

ವ: ಅಂತುಬಂದು

ಪಿರಿದುಂ ಮಾಂಗಲ್ಯತೂರ್ಯಧ್ವನಿಗಳೊಡನೆ ಮಾಂಗಲ್ಯಗೀತಸ್ವರಂಗಳ್
ಕರಮಾಶಾದೇಶಮಂದಿಂ ಕಿಡಿಸೆ ಸುರುಚಿರಾಗಣ್ಯಪುಣ್ಯಾಂಗನಾಸ
ತ್ವರಮಾಶೀರ್ವಾದನಾದೋಚ್ಚರಣದೊಡನೆ ಪುಣ್ಯಾಹಪುಣ್ಯಾಹಮಂತ್ರೋ
ಚ್ಚರಣಂ ಪೆರ್ಚುತ್ತಿರಲ್ ಕಾಂಚನಕಳಶಮನಂದೆತ್ತಿದಂ ಕುಂಡಿನೇಶಂ ೧೫೧

ವ: ಅಂತಿಕ್ಷ್ವಾಕುವಂಶಮೆಂಬರಮನೆಗೆ ಪೂರ್ಣಕಳಶಮನೆತ್ತುವಂತೆ ಸುರಭಿ ಶುಚಿಸಲಿಲ ಪರಿಪೂರ್ಣಸುವರ್ಣಮಯಪೂರ್ನಕಳಶಮನೆತ್ತಿ

ಭುಜಶಾಖಾಗ್ರದೊಳೊಪ್ಪೆ ಹೇಮಕಳಶಂ ಕೆಯ್ವಂದ ಮಂದಾರದಂ
ತೆ ಜಿನೇಶಂ ರಮಣೀಯತಾವಿಭವಮಂ ತಾಳ್ದಂ ಮಹಾನಂದದಿಂ
ನಿಜಸಂತಾನ ಸಮೃದ್ಧಿಕಾರಣಮೆ ಪೊಯ್ನೀರೆಂಬಿನಂ ಬಣ್ಣಿಸಲ್
ಪ್ರಜೆ ಕೈನೀರೆಱೆದಂ ದಲಿಮ್ಮಡಿಸುವಂ ರುದ್ಯನ್ನಖಚ್ಛಾಯೆಯಿಂ ೧೫೨

ಧಾರಾಪೂರ್ವಕಮಾಗಿ ಕು
ಮಾರಿಯನಂದೊಪ್ಪುಗೊಟ್ಟು ಪಾಣಿಗ್ರಹಣಮ
ನೋರಂತಿರೆ ಮಾಡಿಸಿದಂ
ಭೂರಮಣಂ ಲೋಕಮೆಯ್ದೆಕೊಂಡಾಡುವಿನಂ ೧೫೩

ಚೂತಲತೆ ದಕ್ಷಿಣಾಶಾ
ವಾತಸ್ಪರ್ಶನದಿನಂಕುರಾಂಕಿತೆಯಪ್ಪಂ
ತಾ ತನುಮಧ್ಯ ಕುಮಾರನ
ನೂತ್ನಕರಸ್ಪರ್ಶದಿಂದೆ ಪುಳಕಿತೆಯಾದಳ್ ೧೫೪

ವ: ಮತ್ತಂ

ಸೌಂದರಿ ಪಿಡಿಯಲ್ ತನ್ನಯ
ಕೆಂದಳದಿಂದಂ ಕುಮಾರಕರತಳಮಂ ಚೆ
ಲ್ವಿಂದೆಳವಿಸಿಲಾವರಿಸಿದ
ಕೆಂದಾವರೆವೂವಿನಂತದೊಪ್ಪಿತ್ತು ಕರಂ ೧೫೫

ಅತಿಮಹಿಮೆವೆತ್ತ ಸೊಬಗಂ
ನುತವಿಭವಮನಾಂತು ಕುಸುಮಶರನುಂ ರತಿಯುಂ

ಕ್ಷಿತಿಯೊಳೊಡನಿರ್ಪ ತೆಱದಿಂ
ದತಿಶಯದಂಪತಿಗಳಿರ್ದರತಿಕೌತುಕದಿಂ ೧೫೬

ಅಂತೊಪ್ಪುವ ದಂಪತಿಗಳ್
ಮಂತಣಿವಣಮಿಲ್ಲದೆಯ್ದೆನೋಡುತ್ತಿರ್ದರ್
ಸಂತೊಸದಿಂ ನೆರೆದೆಲ್ಲರ್
ಕಾಂತೆಯರುಂ ಪರಿಜನಂಗಳುಂ ಪುರಜನಮುಂ ೧೫೭

ಪಲಕಾಲಂ ನೆರಪಿರ್ದ ರೂಪಮದಮಂ ಬಿಟ್ಟಂ ಮನೋಜಾತನಾ
ಗಳೆ ಮತ್ತಂ ದಲಪೂರ್ವಸೃಷ್ಟಿಯೆನಿಪೀ ಲಾವಣ್ಯಲಾಭಕ್ಕೆ ಮೂ
ಱಳೆಯೊಳ್ ನೋಂತವರಾರೊ ಭಾವಿಸುವೊಡೀ ಪುಣ್ಯಾತ್ಮನಂತೆಂದು ಮಂ
ಗಳನಂ ಪಿಂಗದೆ ನೋಡುತಿರ್ದುದು ಪುರಸ್ತ್ರೀವೃಂದಮೌತ್ಸುಕ್ಯದಿಂ ೧೫೮

ಮದನಂ ನೋಡಲನಂಗನೀಶನೆ ವಿರೂಪಾಕ್ಷಂ ಮಹಾನಾಕಲೋ
ಕದನಾಥಂ ಬಲನಾಶಕಂ ಮುರಹರಂ ಕೃಷ್ಣಂ ಕಳಂಕಾಂಕಿತಂ
ಪದೆಪಿಂ ಚಂದ್ರಮನಿಂತಿವರ್ ಸರಿಯೆ ಮತ್ತೀ ಧರ್ಮನಾಥಂಗೆ ಪೆ
ರ್ಚಿದ ಚೆಲ್ವಿಂಗೆ ದಲೆಂದು ಪೌರರೆನುತುಂ ಕಣ್ಲೋಲದಿಂ ನೋಡಿದರ್ ೧೫೯

ವ: ಮತ್ತಂ

ದೇವಕುಮಾರಿಯರ್ ದಿವಿಜಲೋಕದೊಳಂತವರಿಕ್ಕೆ ನಾಗಕ
ನ್ಯಾವಳಿ ನಾಗಲೋಕದೊಳಗಂತವರಿಕ್ಕೆ ವಿಳಾಸನಿರ್ಜಿತೋ
ದ್ಭಾವಜಕಾಂತೆಗೀ ಧರಣಿಪಾಳತನೂಜೆಗೆ ಮತ್ತಿನನ್ಯಕ
ನ್ಯಾವಳಿಗಳ್ ಸಮಾನತೆಯನೆಯ್ದುವರಾರೊ ಸಮಸ್ತಲೋಕದೊಳ್ ೧೬೦

ಭಾಸ್ವತ್ಕೋಮಳದೇಹಕಾಂತಿಚಯದಿಂದಂ ಭೂಷಣಂಗಳ್ ಕರಂ
ಲೇಸಾಗಿರ್ದುವು ಮತ್ತಮೀಕೆಗವಱಿಂ ಚೆಲ್ವೇನುಮಿಲ್ಲೆಂದು ತಾಂ
ಸೂಸುತ್ತುಂ ಪ್ರಮದಾಶ್ರುವಂ ನಯನದಿಂ ಪೌರರ್ ಮನಂಸೋಲ್ತು ಮ
ತ್ತಾ ಶೃಂಗಾರವತೀಕುಮಾರಿಯನತೀವಸ್ನೇಹದಿಂ ನೋಡಿದರ್ ೧೬೧

ವ: ಎಂದು ಪುರಜನಂಗಳತೀವಕುತೂಹಳದಿಂ ಪರಸ್ಪರಂ ಮಾತಾಡುತ್ತುಂ ಮಂಗಳ ಕಾರಣಮಾಗಿ ರಮಣೀಯಮಣಿಭೂಷಣಕಳಾಪಮಂ ತೊಟ್ಟಂತಪ್ಪ ವಧೂವರರ ನವಳೋಕಿಸುತ್ತುಮಿರ್ಪುದುಂ

ಇಟ್ಟಿ ಕಿರೀಟಮೂಲದುರುರತ್ನದ ದಂಡೆಯ ಮುಂದೆ ಶೋಭೆಯಿಂ
ಕಟ್ಟಿದ ಚೆಲ್ವ ಬಾಸಿಗದ ದೇಸೆಗೆ ತಾಂ ನೆಲಗಟ್ಟಿದೆಂಬಿನಂ

ಪಟ್ಟಮನಾ ವಿದರ್ಭದೊಡೆಯಂ ಸುಕುಮಾರನ ಭಾಳಪಟ್ಟದೊಳ್
ಕಟ್ಟಿದನಾಕ್ಷಣಂ ಪರಸುತುಂ ಮಣಿಕೇವಣಚಿತ್ರಮಾದುದುಂ ೧೬೨

ವ: ಇಂತು ವಿವಾಹಕಲ್ಯಾಣಕ್ಕೆ ಮುಖ್ಯಕಾರಣಮಾಗಿ ಮಂಗಳಪಟ್ಟಮಂ ನಿಟ್ಟೆಗೊಳಿಸಿ ದಿಂಬಳಿಯಂ

ಚೆಂಬೊನ್ನ ಪಟ್ಟವಣಿ ಕ
ಣ್ಗೆಂಬಾದುದು ಪಚ್ಚೆವರಲ ಜಗುಲಿಯ ನಡುವೆ ಮ
ನಂಬುಗುವೆಲೆಗಳ ಮೇಲೆ ಕ
ರಂಬಿತಮಾಗರಳ್ದ ಮರಳ್ದ ಪೊಂದಾವರೆಯೊಲ್ ೧೬೩

ವ: ಅದನಾ ಪಾರ್ಥಿವಮಿಥುನಮಳಂಕರಿಸಿ ಬಾಳಮರಾಳಮಿಥುನಮೆಂಬಂತೆ ಲೀಲೆವಡೆದಿರ್ಪುದುಂ

ಲಲನಾರತ್ನಂ ಕುವರನ
ಬಲದಿಂದಮೆಡಕ್ಕೆಬಂದು ನಿಂದಿರಲಾಗಲ್
ಬಲಗೊಂಡರಾ ವಧೂವರ
ರೊಲವಿಂದಂ ಹೋಮವಗ್ನಿಯಂ ಕ್ರಮಯುಕ್ತರ್ ೧೬೪

ಸುಳಿವುತ್ತುಂ ಬಲದಲ್ಲಿ ಮೇಗೆ ನೆಗೆವ ಜ್ವಾಲಾಕಲಾಪಂಗಳ
ವ್ವಳಿಸಲ್ ಪಾವನಹೋಮಕೊಂಡದೊಳಗೆ ತ್ರೇತಾಗ್ನಿಯಂ ದರ್ಭಸ
ತ್ಫಳನೈವೇದ್ಯಸದಕ್ಷತಾರ್ಚಿತಮನುತ್ಪೂರ್ಣಾಹುತಿವ್ಯಾಪ್ತಮಂ
ಬಲಗೊಂಡರ್ ಮುದದಿಂದೆ ದಂಪತಿಗಳಾ ರತ್ನತ್ರಯಾಕಾರಮಂ ೧೬೫

ವ: ಅಂತು ಮಂತ್ರೋಚ್ಚಾರರಾವಂ ದೆಸೆಯಂ ಪಳಂಚಲೆಯೆ ರತ್ನತ್ರಯ ಜ್ಯೋತಿಸ್ವರೂಪಮಾದಗ್ನಿತ್ರಯ ಜ್ಯೋತಿಯಂ ದಂಪತಿಗಳಿರ್ವರುಂ ಪ್ರದಕ್ಷಿಣೀಕರಿಸಿ ವಿಧಿಪೂರ್ವಕಮಗ್ನಿಕುಮಾರನಂ ಸಾಕ್ಷೀಕರಿಸಿ ತದನಂತರಮಾ ಶೃಂಗಾರವತೀಕುಮಾರಿಯ ಪೆತ್ತ ತಾಯಪ್ಪ ಸತ್ಯವತೀಮಹಾದೇವಿಯೆಂಬಳಾ ಪ್ರತಾಪರಾಜನ ಪಟ್ಟದರಸಿ ಬಾಯಿನಮಂ ಕೊಡಲ್ವೇಡಿ ಬಹುವಿಧಮಂಗಳರಚನಾವಿಶೇಷಮನಂಗೀಕರಿಸಿದ ಚಾರುಚೈತ್ಯಾಲಯಕ್ಕೆ

ಕಾಲ ಪಳಂಚಿನುಂಗುರದ ಮೆಲ್ಲುಲಿ ನೂಪುರದಿಂಚರಂ ಸಮು
ಲ್ಲಾಲಿತ ಮೇಖಳಾವಳಯದೊಳ್ ಧ್ವನಿ ಮನ್ಮಥನಿಕ್ಷುಚಾಪದ
ಜ್ಯಾಲತಿಕಾ ಪ್ರತಾಡನಸಮುತ್ಥಿತ ಟಂಕೃತಿಯಂತೆ ಲೀಲೆಯಂ
ಪಾಳಿಸೆ ಬಂದಳಂದು ಕಡೆಗಣ್ ಕುಡಿಮಿಂಚಿನ ಗೊಂಚಲೆಂಬಿನಂ ೧೬೬

ವ: ಮತ್ತಂ ಪೆಂಡವಾಸದ ವಿಳಾಸಿನೀಜನಂಗಳ್ ನೂರ್ವರ್ ಗಡಣಂ ಗೊಂಡು ವಿವಿಧೋಪಾಯನ ರತ್ನಪಟಲಿಕೆಗಳಂ ಪಿಡಿದೊಡನೆ ಬರೆ ಬಸದಿಗೆ ಬಂದು

ಎಳನೀರಿಂ ಸಿತದಿಂ ಸಿತೇಕ್ಷುರಸದಿಂ ಪ್ರಾಜ್ಯಾಜ್ಯದಿಂ ಕ್ಷೀರದಿಂ
ಪೊಳೆವಾದಂ ದಧಿಯಿಂ ಸುಗಂಧಿಜಳದಿಂ ಶ್ರೀಮಜ್ಜಿನಾಧೀಶ್ವರಂ
ಗೊಲವಿಂ ಮಾಡಿಸಿದಂ ಮಹಾಭಿಷವರುಂದ್ರೋತ್ಸಾಹಮಂ ಭೂಪನು
ಜ್ಜ್ವಳಚೈತ್ಯಾಲಯದಲ್ಲಿ ದಿಕ್ಕುಹರಮಂ ತಳ್ಪೊಯ್ಯೆ ವಾದ್ಯಸ್ವನಂ ೧೬೭

ಜಳದಿಂದಂ ಗಂಧದಿಂದಂ ಸರಳಶತಕದಿಂದಂ ಸುಪುಷ್ಪಂಗಳಿಂದಂ
ವಿಳಸತ್ಸಾನ್ನಾಯ್ಯದಿಂದಂ ಥಳಥಳಿಸುವ ದೀಪಂಗಳಿಂ ಧೂಪದಿಂದಂ
ಫಳದಿಂದಂ ಪೂತನೂತಾಷ್ಟವಿಧ ನಿರುಪಮದ್ರವ್ಯದಿಂದಂ ಜಿನೇಶೋ
ಜ್ಜ್ವಳಪಾದದ್ವಂದ್ವಮಂ ಪೂಜಿಸಿದನೊಸೆದು ಭೂಪಾಳನಾನಂದದಿಂದಂ ೧೬೮

ವ: ಇಂತು ಸಕಳಕಲ್ಯಾಣಕಾರ್ಯಕ್ಕಂ ಮುಖ್ಯಮಂಗಳಮಪ್ಪ ಜಿನೇಶ್ವರಾಭಿಷೇಕ ಪೂಜೆಯನಾದಿ ಮಧ್ಯಾವಸಾನದೊಳ್ ಮಹಾಮಹಿಮೆಯಿಂ ಮಾಡಿಸಿ ಪ್ರತಾಪರಾಜಂ ತನ್ನಯ ಪೆರ್ಚಿದ ಪೆಂಪಿನ ಸಂಪದಮಂ ನಿಮಿರ್ಚುವುದುಮನಂತರಮಾ ವಿವಾಹ ಮಂಗಳೋತ್ಸಾಹದೊಳ್

ಇಟ್ಟು ಲಲಾಟದೊಳ್ ತಿಲಕಮಂ ಕಳಮಾಕ್ಷತಮಂ ತಗುಳ್ಚಿ ನೇ
ರ್ಪಟ್ಟ ತುಱುಂಬಿನೊಳ್ ಕುಸುಮಮಾಳೆಯನೊಪ್ಪಿರೆ ಸೂಡಿ ಚೆಲ್ವ ಮುಂ
ದಿಟ್ಟು ಸುವರ್ಣಭಾಜನದ ಬಾಯಿನಮಂ ಕುಲನಾರಿಯರ್ಗೆ ತಾಂ
ಕೊಟ್ಟು ಮನಕ್ಕೆ ಪುಟ್ಟಿಸಿದಳಾಕ್ಷಣದೊಳ್ ಪರಮಾನುರಾಗಮಂ ೧೬೯

ವ: ಅಂತಾ ಸತ್ಯವತೀಮಹಾದೇವಿ ವಿಚಿತ್ರವಸ್ತ್ರಾಭರಣಾದಿ ವಸ್ತುಗಳಿಂ ತುಂಬಿದ ಬಾಯಿನಂಗಳನಿತ್ತು ಸಂತುಷ್ಟಿಯನೆಯ್ದಿಸಿದಿಂಬಳಿಯಂ

ಜಂಗಮಕಲ್ಪವೃಕ್ಷಮೊ ಸುಚಿಂತನರತ್ನಮೊ ಕಾಮಧೇನುವೋ
ಪಿಂಗದೆ ಪೇಳಿ ಪೇಳಿಯೆನುತುಂ ಜಗತೀಜನಮೆಯ್ದೆ ಬಣ್ಣಿಸಲ್
ತುಂಗಮನಂ ದಲೀಯೊಸಗೆಗಂ ಪೊಱಗಾದವರಾರುಮಿಲ್ಲೆನಲ್
ಪೊಂಗಳನಿತ್ತು ಮನ್ನಿಸಿ ನೃಪಂ ಮೆಱೆದಂ ವಿಭವಪ್ರಭಾವಮಂ ೧೭೦

ಪಲವುಂ ಚಂದದ ಬಣ್ಣವಣ್ಣಿಗೆಯ ಲೇಸಾಗಿರ್ದ ವಸ್ತ್ರಂಗಳಂ
ಸಲೆಮಾಣಿಕ್ಯವಿಭೂಷಣಾವಳಿಗಳಂ ನಾಡೂರ್ಗಳಂ ಕುಂಜರಂ
ಗಳನಶ್ವಂಗಳಿವಾದಿಯಾದ ವರನಾನಾವಸ್ತುಸಂದೋಹಕಂ
ಗಳನೆಯ್ದಿತ್ತು ನಿಮಿರ್ಚಿದಂ ತ್ರಿಜಗದೊಳ್ ಸತ್ಕೀರ್ತಿಯ ಸ್ಫೂರ್ತಿಯಂ ೧೭೧

ವ: ಇಂತೆನ್ನವರ್ ತನ್ನವರೆನ್ನದೆ ಪೀನಸನ್ಮಾನಪುರಸ್ಸರಮಾದನೂನದಾನ ವಿಧಾನದ ಬೀಯದ ಚಾಗದ ಪೆರ್ಮೆಯನಾ ಪ್ರತಾಪರಾಜಂ ಮೆಱೆವುದುಮದಂ ಧರ್ಮನಾಥಕುಮಾರಂ ಕಂಡು ಮನಂಗೊಂಡು ಚಂದ್ರೋದಯಮಂ ಕಂಡ ಸಮುದ್ರದಂತೆ ಪೆಟ್ಟುವೆರ್ಚಿ ಸಂತುಷ್ಟಿಯನಾಂತಿರ್ಪುದುಮನಂತರಂ

ಬೂವಕ್ಕವಸರಮಾಗಲ್
ಪಾವನತರಮಾದುದೊಂದು ಮಣಿಭಾಜನಮಂ
ಪೀವರಮಂ ತಂದಿರಿಸೆ ವ
ಧೂವರರೊಂದಾಗಿ ಕುಳ್ಳಿದರ್ ಮುದದಿಂದಂ ೧೭೨

ಸಣ್ಣಸರವಳಿಗೆಯಂ ಮಿಗೆ
ಬಣ್ಣಂಬಡೆದಿರ್ದ ಪರಡಿಯಂ ಸೊಜ್ಜಿಗೆಯಂ
ತಿಣ್ಣಂ ಸವಿವಡೆದುದನಾ
ಪುಣ್ಯಸ್ತ್ರೀಯರ್ಕಳಿಕ್ಕಿದರ್ಪಾಯಸಮಂ ೧೭೩

ಪೂರಿಗೆಯಂ ಮಂಡಗೆಯಂ
ಘಾರಿಗೆಯಂ ಹೂಸಣಂಬುಮಂ ವಡೆಯಂ ಘೃತ
ಪೂರಮನಿಡ್ಡಲಿಗೆಯುಮಂ
ದೋರಣೆಯಂ ಬೇಱ್ವೇಱ್ ಬಡಿಸಿದರೊಲವಿಂ ೧೭೪

ವ: ಇಂತು ಪಿರಿದಾದ ಪರಿಮಳಭರಮಂ ದೆಸೆದೆಸೆಗೆ ಪಸರಿಸುವ ಪ್ರಾಜ್ಯಾಜ್ಯದಿಂ ಸಮಾರಜ್ಯಮಾನ ಶರ್ಕರಾಸಮ್ಮಿಶ್ರಿತಂಗಳಾಗಿ ಪರಮಾಮೃತದೊಡನೆ ಪುರುಡಿಸುವ ಪಕ್ವಾನ್ನಂಗಳಂ ಸವಿಯೆ

ಕಡುಸಣ್ಣಮಾದ ನುಣ್ಪಂ
ಪಡೆದ ಸುರಾಜಾನ್ನದೋಗರಂ ಭಾಜನದೊಳ್
ತಡೆಯದಿರುವಂತಿಯಲರ್ಗಳ
ಗಡಣಂ ಪುಂಜಿಸಿದುದೆಂಬಿನಂ ರಂಜಿಸುಗುಂ ೧೭೫

ಹೊಂಬೆಸಱ ಸೂಪಮದಱೊಳ
ಗಿಂಬಾದುದು ಕರಗಿ ನಿಂದ ಪೊಸಮಿಸುನಿಯ ರಸ
ಮೆಂಬಂತೆ ಕಣ್ಗೆ ಕಡುಸೊಗ
ಸಂ ಬಯಕೆಯನಂತರಂಗದೊಳ್ ಪುಟ್ಟಿಸುಗುಂ ೧೭೬

ಪಲವುಂ ಛಂದದ ತಾಳದಂಗಳನತೀವಸ್ನಿಗ್ಧಶಾಕಂಗಳಂ
ವಿಳಸತ್ತೇಮನಕಂಗಳಂ ಮಧುರಸತ್ಪಾನಂಗಳಂ ಸರ್ಷಪಾ
ವಿಳಕರ್ಪೂರ ಪರಾಗಮಿಶ್ರಿತ ಮಹಾಸ್ವಾದೂಪದಂಶಂಗಳಂ
ಕುಲಯೋಷಿಜ್ಜನಮೆಯ್ದೆ ಬಡ್ಡಿಸಿದುದಾ ಸ್ಥಾಳಾಗ್ರದೊಳ್ ಪ್ರೀತಿಯಿಂ ೧೭೭

ವ: ಮತ್ತಮಿಂದ್ರನುಮಿಂದ್ರಾಣಿಯುಮೊಂದಾಗಿಯಮೃತಾಹಾರಮನೆಂತುಣ್ಬರಂತಿರಾ

ಧರ್ಮನಾಥಕುಮಾರನುಂ ಶೃಂಗಾರವತೀ ಮಹಾದೇವಿಯುಮೊಂದಾಗಿ ಪರಮಾಮೋದ ಪರಿಕಳಿತ ಮಧುರತರ ದಿವ್ಯಾಹಾರಮನಾರೋಗಿಸಿ ತದನಂತರಂ ಗಂಧಸಾರರಸದಿಂ ಕೈಘಟ್ಟಿಗೊಂಡು ಹಸ್ತಪ್ರಕ್ಷಾಲನಂಗೆಯ್ವುದುಂ

ನಿಪ್ಪೊಸತಪ್ಪ ಕಪ್ಪುರದ ವೀಳೆಯಮಂ ಮಿಗೆಕೊಟ್ಟು ತಾನುಮೆ
ಯ್ದೊಪ್ಪುವ ಪೂಗಭಾಗಚಯಮಂ ಸಲೆಕೊಂಡು ವಿಶೇಷಹರ್ಷಮುಂ
ನೇರ್ಪಡೆ ಸರ್ವಭೋಗಮುಪಭೋಗಮುಮಂ ನೆಱೆಭೋಗಿಸುತ್ತುಮು
ತ್ತರ್ಪಣಚಿತ್ತನಿರ್ದನೊಸೆದಲ್ಲಿ ಪಲರ್ ಪೊಗಳಲ್ ಸುಕೀರ್ತಿಯಂ   ೧೭೮

ವ: ಇಂತಾ ಧರ್ಮನಾಥಕುಮಾರನುಂ ಶೃಂಗಾರವತೀ ಮಹಾದೇವಿಯು ಮನ್ಯೋನ್ಯಶಕ್ತಿಯಿಂ ರತಿಕ್ರೀಡಾಸುಖಿಸಮಾಸ್ವಾದನಪಟುಲಂಪಟರಾಗಿ ಕಾಮನುಂ ರತಿಯುಮೆಂಬಂತೆ ನಿರಂತರಿತ ಪರಮಾನಂದಸಂದೋಹದೊಳೊಂದಿ ತಣ್ಣನೆ ತಣಿವುತ್ತುಮಿರ್ಪುದುಂ

ಮಿಗೆ ಕೊಡಾಡುತ್ತುಮಿರ್ದಂ ಜಿನಸಮಯದ ಮಾಹಾತ್ಮ್ಯಮಂ ಧರ್ಮನಾಥಂ
ಜಗದಾರಾಧ್ಯಾಂಘ್ರಿಯುಗ್ಮಂ ಪರಸಮಯಮಹಾವಾದಿ ನಿರ್ದಾಟತಿಗ್ಮಂ
ನಗರಾಜಸ್ಥೈರ್ಯಕಂ ಬಾಹುಬಲಿಸುಕವಿರಾಜಂ ಕಳಾಂಭೋಜಸೂರ್ಯಂ
ಪ್ರಗುಣಂ ಪಿದ್ವಿದ್ವಿಮೋಹಂ ನರಪಕೃತಮಹಂ ಚಾತುರೀಜನ್ಮಗೇಹಂ   ೧೭೯

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮ ಜಿನಸಮಯ ಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವ ಪ್ರಸಾದಸಂಪಾದ ಪಾದನಿಧಾನದೀಪವರ್ತಿಯುಭಯಭಾಷಾ ಕವಿಚಕ್ರವರ್ತಿ ಬಾಹುಬಲಿಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್ ಶೃಂಗಾರವತೀದೇವಿಯ ಸ್ವಯಂವರ ಕಲ್ಯಾಣಪರಿವ್ಯಾವರ್ಣನಂ ಏಕಾದಶಾಶ್ವಾಸಂ.

●

ದ್ವಾದಶಾಶ್ವಾಸಂ

ಶ್ರೀಯಂ ಕೂರಿಸಿ ತಾಳ್ದಂ
ಶ್ರೇಯೋನಿಧಿ ಧರ್ಮವೃತ್ತಿಯಂ ಪೆರ್ಚಿಸುತುಂ
ಬೀಯದ ಪೆಂಪಿಂದೆಸೆದನ
ಮೇಯಗುಣಂ ಸರಸಚತುರಕವಿಕುಳತಿಳಕಂ ೧

ವ: ಅಂತು ನಿರ್ವರ್ತಿತ ವಿವಾಹಮಹೋತ್ಸವಾನಂತರಂ ಕತಿಪಯದಿನಂಗಳಂ ಪ್ರತಿದಿನಂ ಪ್ರವರ್ಧಮಾನ ನವಪ್ರಣಯಪ್ರಸ್ತುತವಿನೋದಕೇಳಿಗಳಿಂ ಕಳಿವುತ್ತುಮಿರಲೊಂದು ದಿವಸಮಾ ಧರ್ಮನಾಥಕುಮಾರನುಂ ಶೃಂಗಾರವತೀಮಹಾದೇವಿಯು ಮೊಂದಾಗಿ ನಿಸ್ಸೀಮಧಾಮಸ್ತೋಮಸಮಾವೃತ ಹೇಮಮಯಸಿಂಹಾಸನಮನಳಂಕರಿಸಿ ಪ್ರತಾಪ ರಾಜಂಬೆರಸು ಸಭಾನಿವಾಸವಾಸಿಗಳಾಗಿರ್ಪುದುಮಾಗಳ್

ಪೂಜ್ಯಮಹಾಸೇನಮಹಾ
ರಾಜಂ ಕಳಿಪಿದೊಡೆ ರತ್ನಪುರದಿಂ ಬಂದಂ
ರಾಜಿತಸಿತತರಕೂರ್ಚಸ
ಮಾಜಂ ಧವಳೋತ್ತರೀಯನೊರ್ವಂ ದೂತಂ ೨

ವ: ಬಂದು ಬಾಗಿಲೊಳ್ ನಿಂದು ನಿಜಾಗಮನವಾರ್ತೆಯಂ ದ್ವಾರಪಾಲಕಂ ಗಱಿಪುವುದು ಮಾತಂ ಪೋಗಿ ನಿಮ್ಮಯ ಪಿತೃಪ್ರೇಷಿತದೂತಂ ಬಾಗಿಲೊಳಿರ್ದಪನೆಂದು ಬಿನ್ನಪಂಗೆಯ್ಯೆ ಬರವೇಳೆಂಬುದುಂ

ಅತಿವೇಗದಿಂದೆ ಬಂದಾ
ನತನಾಗಿ ಕುವರನ ಮುಂದೆ ಕುಳ್ಳಿರ್ದು ಚರಂ
ಪಿತೃಕುಶಲವಾರ್ತೆಯಂ ಪೇ
ಳ್ದು ತೋಷಲೇಖಮನದೊಂದನಾತಂಗಿತ್ತಂ ೩

ವ: ಅನಂತರಂ

ನಡದೋದುತ್ತೋಲೆಯಂ ಬರ್ಪುದು ತಡೆಯದೆ ಬೇಗಂ ದಲೆಂದೋದಲೆಯ್ದಾ
ಗಡ ತನ್ನ ಸ್ಥಾನಮಪ್ಪಾ ಪುರಿಗತಿಜವದಿಂ ಪೋಗಲುದ್ಯೋಗಿಸಲ್ಕಂ
ದೊಡೆಯಂ ತಾಂ ತನ್ನ ಸೇನಾಪತಿಯೆನಿಪ ಸುಷೇಣಂಗೆ ಪೇಳ್ದೆಲ್ಲಮಂ ಪೆ
ರ್ವಡೆಯಂ ನೀಂ ಕೂಡಿಕೊಂಡೊಯ್ಯನೆ ಗತಿವಶದಿಂ ಪಿಂದೆಬಾಯೆಂದು ಪೇಳ್ದಂ ೪

ವ: ಅಂತು ನಿಖಿಳರಾಜಕಾರ್ಯಕಾರಣನಿರ್ವಹಣಾಧುರೀಣನಪ್ಪ ಸುಷೇಣನೆಂಬ ಸೇನಾಪತಿಗೆ ಬುದ್ಧಿಗಲಿಸಿ ಸಮಸ್ತಸೈನ್ಯಮನಾತಂಗಪ್ಪಯಿಸುವುದದಂ ಕಂಡು ಪ್ರತಾಪ ಮಹಾಮಂಡಳೇಶ್ವರಂ ಧರ್ಮನಾಥಕುಮಾರನಭಿಪ್ರಾಯಂ ನಿಜಜನನೀಜನಕ ಸಂದರ್ಶನೋತ್ಸುಕತೆಯಿಂದಂ ಮುಂದೆ ತನ್ನಯ ರತ್ನಪುರಗಮನಕ್ಕಭಿ ಮುಖನಾಗಿರ್ದುದೆಂದಱಿದು ಬಳಿಯಂ ಬಳುವಳಿಯಾಗಿ ತನ್ನ ಮಗಳಪ್ಪ ಶೃಂಗಾರವತೀ ದೇವಿವೊಡವೋಪಂತು ಕುಂಚದಡಪದ ಡವಕೆಯ ಕನ್ನಡಿಯ ಬೋನದ ಪರಿಯಾಣದ ಪಡಿಗದ ಪಾವುಗೆಯ ಪಲವುಂತೆಱದ ಬಾಹತ್ತರನಿಯೋಗಯೋಗ್ಯ ಕಾಮಿನೀ ನಿಕಾಯಮಂ ನಿಯಾಮಿಸಿ

ಕಡುರಾಗಂಬೆತ್ತು ತೋರ್ಪಗ್ಗಳದ ವಿವಿಧದೇವಾಂಗವಸ್ತ್ರಂಗಳಂ ನೇ
ರ್ಪಡಿಸುತ್ತುಂ ಮಾಣಿಕಂ ಕೇವಣಿಸಿದ ಸದಲಂಕಾರಸಾರಂಗಳಂ ಚೆ
ಲ್ವೊಡಲಿಂದಾಶ್ಚರ್ಯಮಂ ಪುಟ್ಟಿಸುವ ಕರಿಗಳಂ ಲಕ್ಷಣಂ ಶಿಕ್ಷಣಂ ಬ
ಲ್ಪಡೆಯೆಂಬೀ ಪೆಂಪನಾಂತೊಪ್ಪುವ ಕುದುರೆಗಳಂ ದೇಶಮಂ ಪುತ್ರಿಗಿತ್ತಂ ೫

ಸಮಕಟ್ಟಿಕೊಟ್ಟನಾ ಭೂ
ರಮಣಂ ಪಾಡುವರನಾಡುವರನೇಡಿಪರಂ
ಕ್ರಮಮಱಿವ ವಾದಕರನಾ
ದಮೆ ನಗಿಸುವರಾದಿಯಾದ ತರುಣೀಜನಮಂ ೬

ವ: ಇಂತಿವು ಮುಂತಾದ ಸಮಸ್ತವಸ್ತುವಿಶೇಷಮುಂ ಬಳುವಳಿಯುಂ ಕೊಟ್ಟು ವಿಶಿಷ್ಟವಾರವಾಸರತಾರಾಕರಣಯೋಗಸಂಯೋಗಮನುಳ್ಳ ಶುಭ ಮುಹೂರ್ತದೊಳ್

ಬರಿಸಿ ವಧೂವರರಂ ವಿ
ಷ್ಟರದೊಳ್ ಕುಳ್ಳಿರಿಸಿ ಮತ್ತಮುಡಲುಂ ತುಡಲುಂ
ಪಿರಿದಾಗಿ ಕೊಟ್ಟು ಮಗಳಂ
ಪರಿರಕ್ಷಿಸಿ ಸುಖದಿನೆಂದು ಕೈಲಡೆಗೊಟ್ಟಂ ೭

ವ: ತದನಂತರಂ ಬಹಳಕಾಹಳಾನಿಸ್ಸಾಳಭೇರೀಮೃದಂಗಾದಿ ಸಮುತ್ತುಂಗ ಮಂಗಳಾನಕಂಗಳ ಮಾಂಗಳಿಕ ಸಂಗೀತಂಗಳ ಪರಮಾಶೀರ್ವಾದ ನಾದಂಗಳ ಪಟುಪಾಠಕರ ನಿರವಧಿರವಂಗಳ ಕೋಳಾಹಳಮೆಲ್ಲಮೊರ್ಮೊದಲೊಳ್ ಭೋರೆಂದು ನೆಗೆದು ದೆಸೆಯಂ

ಮುಸುಂಕಿ ದಿಂಕಿಡಿಸುತ್ತುಮಿರೆ ಪರಸಿ ತಳಿವ ಮುಕ್ತಾಫಳಮಯ ವಿಮಳಾಕ್ಷತಂಗಳನಾನುತ್ತುಂ ದಂಪತಿಗಳ್ ಪಿರಿದಾದ ಸಂಭ್ರಮದಿಂದರಮನೆಯಂ ಪುರಮುಮಂ ಪೊಱಮಟ್ಟು ಕಿಱಿದಂತರಂ ಪೋದಿಂಬಳಿಯಮಾ ಪ್ರತಾಪರಾಜಂ ಧರ್ಮನಾಥಕುಮಾರನ ಮೊಗಮಂ ನೋಡಿ

ಎಮ್ಮಯ ಪಂಬಲಂ ಮಱೆವವೊಲ್ ಪ್ರತಿಪಾಳಿಸಿ ತಪ್ಪುಗಂಡೊಡಂ
ತೆಮ್ಮನೆ ನೋಡಿ ಸೈರಿಸಿ ವಿಶೇಷಿತಕಾರ್ಯದೊಳೋಜೆವೇಳ್ದು ಮ
ತ್ತಿಮ್ಮಡಿಬುದ್ಧಿಯಂ ಕಲಿಸಿ ಮನ್ನಿಸಿ ಚಿತ್ತದೊಳೇನುಮಾಗದಂ
ತುಮ್ಮಳಮೀಕೆಯಂ ನಡಸಿಯೊಂದನೆ ಕೈಮುಗಿದಿರ್ದು ಬೇಡಿದಂ ೮

ವ: ಎಂದರಸಂ ಕುವರನ ಕೈವಿಡಿದು ಕಡುದೈನ್ಯದಿಂ ಪೇಳ್ದು ಬೇಡಿಕೊಂಡು ಕುಮಾರಂಗೆ ವಿನಯವಿನಮಿತೋತ್ತಮಾಂಗನಾಗಿ ಬೀಳ್ಕೊಂಡು ಮತ್ತಂ ತಾನುಂ ಸತ್ಯವತೀ ಮಹಾದೇವಿಯುಂ ಶೃಂಗಾರವತೀದೇವಿಯ ಸಮೀಪಕ್ಕೆ ಬಂದು ಪ್ರೇಮರಸವಿಸರ ಮೊಸರ್ದು ಪರಸಿ ಪರಕಲಿಸುವ ವಿಲೋಚನಗಳಿಂದಾಕೆಯ ಮೊಗಮಂ ನೋಡಿ

ಮಕ್ಕಳ ಮಾಳ್ಕೆಯಿಮದಿರದೆ ನಿನ್ನಯ ಗಂಡನ ಚಿತ್ತವೃತ್ತಿಗಂ
ತಕ್ಕವೊಲಂಜಿ ಬೆಚ್ಚಿ ಬೆಸಕೆಯ್ವುದು ಮಾವನುಮತ್ತೆಯುಂ ಪೊಗ
ಳ್ದಕ್ಕುಮೆನಲ್ಕೆ ವರ್ತಿಸುವುದುತ್ತಮೆ ನಿನ್ನೊಡವಂದರೆಲ್ಲರಂ
ಮಿಕ್ಕೊಲವಿಂದೆ ಮನ್ನಿಸುವುದೇಳಿಸದಿರ್ಪುದು ಭಾವಮೈದರಂ ೯

ಬುದ್ಧಿವತಿಯಾಗಿ ನಡೆವುದು
ಸದ್ಧರ್ಮಮನೆಯ್ದೆ ಮಾಳ್ಪುದೆಮ್ಮಯ ಚಿತ್ತ
ಕ್ಕುದ್ದುರಸಂತೋಷಮನಿ
ತ್ತುದ್ಧರಿಪುದು ನಿನ್ನ ಕುಲದ ಪೆಂಪಂ ಮಗಳೇ ೧೦

ವ: ಎಂದು ತಾಯುಂ ತಂದೆಯುಂ ಮಗಳ ಚಿಬುಕಮಂ ಪಿಡಿದು ಬುದ್ಧಿ ವೇಳ್ದು ಕಡುಮೋಹದಿಂ ಪ್ರಕೃಷ್ಟಪ್ರಮದಾಶ್ರುಬಿಂದುಸಂದೋಹಂ ಮೇಲೆಮೇಲೆ ತೇಂಕುತ್ತುಮಿರೆ ನುಡಿನುಡಿಗೊರ್ಮೆ ತೆಗೆತೆಗೆದು ಮುಂಡಾಡುತ್ತುಮಪ್ಪಿಕೊಳ್ಳುತ್ತುಂ ಕಿಱಿದಂ ತರಮಾ ಶೃಂಗಾರವತೀದೇವಿಯಂ ಕಳಿಪಿ ಮರಳಲಾಱದಲ್ಲಿ ನಿಂದು ನೋಡುತ್ತುಮೆಂ ತಕ್ಕೆಂತಕೆ ಮರಳ್ದುಪೋಗಿ ಕುಂಡಿನಪುರಮಂ ಪೊಕ್ಕು ಮಗಳ ಮುದ್ದಾಟಮನೊರ್ವೊರ್ವರೊಡನೆ ನುಡಿನುಡಿದು ಕೊಂಡಾಡುತ್ತುಂ ಸುಖದಿನಿರ್ಪುದುಮಿತ್ತಲ್

ತನ್ನಯ ದೀಧಿತಿಪ್ರಸರಮೆಯ್ದೆಕವಲ್ವರಿದಲ್ಲಿಗಲ್ಲಿಗಂ
ಚೆನ್ನಸುರೇಂದ್ರಚಾಪತತಿ ಮೂಡಿದುದೆಂಬಿನಮೊಪ್ಪಿತೋಱಿರಲ್

ಕಿನ್ನರನಾಯಕಂ ಮಣಿವಿಮಾನಮನಾ ಕುವರಂಗೆ ತಂದುಕೊ
ಟ್ಟಂ ನಲವಿಂದಮಂಬರದ ಪುಷ್ಪದವೊಲ್ ಪರಿರಂಜಿಸಿರ್ಪುದುಂ ೧೧

ಇಂದ್ರಾಣಿಯೊಳೊಂದಿದ ದೇ
ವೇಂದ್ರಂ ಬಂದೇಱುವಂತೆ ರತ್ನವಿಮಾನಮ
ನಂದು ಶೃಂಗಾರವತಿಯುಂ
ಸೌಂದರಯುವರಾಜನುಂ ದಲೇಱಿದರೊಲವಿಂ ೧೨

ವ: ಮತ್ತಂ

ನಿರ್ಮುಕ್ತದಕ್ಷಿಣಾಶಂ
ಶರ್ಮಪರಾಯಣಕನುತ್ತರಾಶಾಭಿಮುಖಂ
ನರ್ಮದೆ ಸನ್ಮಾರ್ಗದೊಳಂ
ಧರ್ಮಜನಂ ಪವನನುತ್ತಮನವೊಲ್ ಪೋದಂ ೧೩

ವ: ಆಸಮಯದೊಳ್

ಅತಿರಮಣೀಯಪರ್ವತನಿತಂಬವನಗಳೊಳಂ ಮಹಾನದೀ
ಪ್ರತಿತಟನಂದನಂಗಳೊಳೆ ಕಂದಳಿದೊಂಗಲಪಾಸಿನಲ್ಲಿ ಮ
ತ್ತತಿಶಯಪುಷ್ಪಕಲ್ಪಿತಸುತಲ್ಪದೊಳಂ ರತಿಕೇಳಿಕಾರಣಂ
ಸುತಯುವರಾಜನುಂ ಯುವತಿಯುಂ ಕಳಿದರ್ ಕೆಲವುಂ ಕ್ಷಣಂಗಳಂ ೧೪

ವ: ಇಂತಲ್ಲಲ್ಲಿ ಲೀಲಾವಿನೋದಂಗಳಿಂ ಪೊತ್ತಂ ಕಳಿವುತ್ತುಂ ಮೆಲ್ಲಮೆಲ್ಲನೆ ನಿಜಾನ್ವಯರಾಜಧಾನಿಯೊಂದುಕ್ರೋಶಮಾತ್ರಮೆನಲ್ ಬಂದುನಿಂದು ಮುಂದೆ ವಾರ್ತಾಹರರಂ ಕಳಿಪಲವರ್ ಪೋಗಿಯೋಲಗದೊಳಿರ್ದ ಮಹಾಸೇನಮಹಾರಾಜಂಗೆ ಯುವರಾಜನಾಗಮನವಾರ್ತೆಯಂ ಪೇಳ್ವುದುಂ

ಪರಮಾನಂದಮನಪ್ಪುಕೆಯ್ಯೆ ಹೃದಯಂ ರೋಮಾಂಚಸಂದೋಹವಾ
ವರಿಸಲ್ ಕೋಮಳದೇಹಮಂ ನಯನದೊಳ್ ಬಾಷ್ಪಾಂಬು ಕೆಯ್ಮಿಕ್ಕು ಪೊ
ಣ್ಮಿರೆ ಸಂತೋಷಮಯಸ್ವರೂಪಮನದಂ ಪೆತ್ತಂತಿರಿರ್ದಂ ನೃಪಂ
ಧರಣೀಚಕ್ರದೊಳಾರ್ಗೆ ಪುಟ್ಟಿಸದು ಸತ್ಪುತ್ರಾಗಮಂ ರಾಗಮಂ ೧೫

ವ: ಅನಂತರಮಾ ಸುವ್ರತಾಮಹಾದೇವಿಯುಂ ಧಾರಾಧರವಿರಾವಮಂ ಕೇಳ್ದ ಮಯೂರನಾರಿಯಂತೆ ನಿರವಧಿಪರಿತೋಷಭರಮನಾಂತು ಭೂಕಾಂತನಂತಿಕಕ್ಕೆ ಬಂದು ಮನಃಪ್ರಮೋದಸೂಚನಪರವಶವಚನಂಗಳಂ ನುಡಿದು ಬಂದ ಚತುರಿಂಗಂಗಚಿತ್ತ ಮನಿತ್ತು ಪುರದೊಳರಮನೆಯೊಳಂ ಪಿರಿದುಮೊಸಗೆಯನೆಸಗಲ್ವೇಳ್ದು

ನೆಲದೊಳ್ ಬೆಟ್ಟಂಗಳೆಲ್ಲಂ ಚರಿಸುವ ತೆಱದಿಂದಿರ್ದ ಮಾತಂಗಯೂಥಂ
ಗಳಿನೆಂಟುಂ ದಿಗ್ವಿಭಾಗಂಗಳೊಳುದದಧಿತರಂಗಂಗಳೆಲ್ಲಂ ಸಮಂತ
ಗ್ಗಳಮಾಗಲ್ ತುಂಬಿಕೊಂಡಿರ್ದವೊಲೆಸೆವ ಮಹಾವಾಜಿವರ್ಗಂಗಳಿಂದಂ
ನಲವಿಂದಳ್ಳಾಡುವೊಳ್ಪುಗುಡಿಗಳೆನೆ ಚಲಚ್ಚಾಮರೌಘಂಗಳಿಂದಂ ೧೬

ಆಗಸದಲ್ಲಿ ಶಾರದಪಯೋಧರಸಂತತಿ ತುಂಬಿದಂತೆ ಚೆ
ಲ್ವಾಗಿರಲೊತ್ತಿಯೆತ್ತಿದ ಲಸದ್ಧವಳಾತಪವಾರಣಂಗಳಿಂ
ದಾಗಳಗುರ್ವುವೆತ್ತು ಕುವರಂಗಿದಿರ್ವಂದರನೇಕಸಂಭ್ರಮಂ
ಭೋಗದಳುರ್ಕೆಯಿಂದೆ ಪಿತೃಮಾತೃಗಳಾನಕನಾದಮುಣ್ಮಲುಂ ೧೭

ವ: ಅಂತಿದಿರ್ವಂದು

ಬಂದ ಕುಮಾರಕಂಗೆ ಬಿಡುಮುತ್ತಿನ ಸೇಸೆಯನಿಕ್ಕಿ ಮತ್ತೆ ಮ
ತ್ತಂದು ಪಲರ್ಮೆಯಿಂ ಪರಸುತುಂ ತೆಗದಪ್ಪಿ ಬಿಡಲ್ಕಮಾಱದಿ
ರ್ದಂ ದಲದೊಂದು ಜಾವವರೆಗಂ ಧರಣೀಪತಿ ಮತ್ತೆ ಸುವ್ರತಾ
ಸೌಂದರಿಯುಂ ವಿಮೋಹವಶದಿಂ ಬಿಗಿದಪ್ಪಿದಳಾ ತನೂಜನಂ ೧೮

ಈಗಳ್ ಮನೋರಥಂ ಕೈ
ವಾಗಿದುದೆಯ್ದೆನ್ನ ತಂದೆ ಬಂದ ನಿಮಿತ್ತಂ
ರಾಗದಿನಾ ತಾಯಿ ಮಹಾ
ಭಾಗನನಿಂತೆಂದು ಪೊಗಳ್ದು ಪುಳಕಿತೆಯಾದಳ್ ೧೯

ವ: ಅನಂತರಂ ಕಡುವಿನಯದಿಂ ಪೊಡವಂಟ ಶೃಂಗಾರವತೀದೇವಿಯನ ಭಂಗಿತ ಕರ್ಣಪತ್ರೆಯಾಗಿ ಸುಖದಿಂ ಬಾಳೆಂದು ಪಲವಾಶೀರ್ವಾದದಿಂ ಪರಸಿ ಗಾಢಾಲಿಂಗನಂಗೆಯ್ದಿಂಬಳಿಯಂ ಮಗನುಮಂ ಸೊಸೆಯುಮನೊಡಗೊಂಡಭಿ ನವ ವಿಭವದಿಂ ಮಹಾಸೇನ ಮಹಾರಾಜನುಂ ಸುವ್ರತಾಮಹಾದೇವಿಯುಂ ನಿಜರಾಜ ಧಾನಿಗಭಿಮುಖರಾಗಿ ಬರ್ಪಾಗಳ್

ಕಡುಬೆಮರಂ ಮೆಯ್ತಾಳ್ದಿ
ರ್ದೆಡೆಯೊಳ್ ತಂಗಾಳಿ ಬಪ್ಪ ತೆಱದಿಂ ಬಡವಂ
ಗೊಡವೆ ಬರ್ಪಂತೆ ಬಂದಂ
ಸಡಗರದಿಂ ನಾವು ಬಯಸುವೆಡೆಯೊಳ್ ಕುವರಂ ೨೦

ವ: ಎಂದು ಪಣ್ಣಿದ ಪಕ್ಕದ ಪಟ್ಟದಾನೆಗಳನೇಱಿ ಬರ್ಪ ಪಾರ್ಥಿವಪುತ್ರ ಸಾರ್ಥದೊಡನೆ ನುಡಿಯುತ್ತುಮರಸಂ ಬಂದನೇಕಪ್ರಾಕಾರಮಾಣಿಕ್ಯಮಯಮಕರ ತೋರಣಶ್ರೇಣಿಗಳೆಂಬ

ಮನೋಹಾರಿಹಾರಂಗಳಿಂದೊಪ್ಪಂಬೆತ್ತತ್ತುಚ್ಛ್ರಿಸ್ತನಕೂಟ ರಮಣೀಯ ತರಮುಮವಿರಳ ಹರಿಚಂದನರಸಪರಿಕಳಿತ ಕುಂಕುಮಕರ್ದಮಸ್ಥಾಪಕಸ್ಥಗಿತ ಸಮಸ್ತ ಪ್ರದೇಶಪೇಶಲಮುಂ ಕುಸುಮವಿಸರವಿರಚಿತ ರಚನಾವಿಶೇಷರುಚಿರಮು ಮತಿಶಯಿತ ಪ್ರಾಕಾರ ವಿರಾಜಿತಮುಮಾಗಿ ಕೆಯ್ಗೆಯ್ದ ಕಾಮಿನಿಯಂತೆ ಕಮನೀಯತೆವಡೆದ ಪುರಲಕ್ಷ್ಮಿ ಪಿರಿದಾದ ಸಂಭ್ರಮುಮನೊಳಕೊಂಡ ಧ್ವಜಾದಂಡಂಗಳೆಂಬ ಭುಜಾ ದಂಡಂಗಳಂ ನೆಗಪಿ ಪವನಪರಿಸಂಚಳ ಸಮೀಚೀನಚೀನಮಹಾಚೀನಾದಿಪೀವರ ಚೀವರಂಗಳೆಂಬ ಕರತ ಳಂಗಳಿಂ ಕೆಯ್ವೀಸಿ ಮಂಗಳಪಟಹಪಟುರವಂಗಳಿಂ ನುಡಿದು ಕುಮಾರನಂ ಕರೆವಂತಿರ್ಪು ದುಮದಂ ಮುಟ್ಟೆವಂದೊಳಗಂ ಪೊಗುವಾಗಳ್

ಪಾಡುವರಪ್ರತಿರವದಿಂ
ಪಾಡುವವೋಲಾಡುತಿಪ್ಪರಪ್ರತಿಬಿಂಬದ
ಗಾಡಿಯನೊಲ್ದೋಡುವವೊಲ್
ನಾಡೆಯುಮೊಳಕೊಂಡುದಾ ಪುರಂ ಸಂಭ್ರಮಮಂ ೨೧

ವ: ಆಪೊತ್ತಿನೊಳತೀವನೂತ್ನಪ್ರಭಾವನಾಪ್ರಭವಪ್ರಯತ್ನಮಾದ ತದ್ರತ್ನ ಪುರದಲ್ಲಿ

ಕಳಶಕುಚಂ ಕದಕ್ಕದಿಸೆ ಚಂಚಳಲೋಚನಕಾಂತಿ ಸುತ್ತಲುಂ
ಪೊಳೆಯೆ ಕುರುಳ್ಗಳುಂ ಕೆದಱೆ ಪಾದತಳಂ ತಳಿರೇಳಿಸಲ್ ಧರಾ
ತಳದೊಳವೇಕ್ಷಣಾತುರಜಸಂಭ್ರಮಸಂಭೃತಚಿತ್ತವೃತ್ತಿಕಂ
ಥಳಥಳಿಸುತ್ತು ಬಂದುದು ಪುರೀತರುಣೀಜನಮಂದು ಲೀಲೆಯಿಂ ೨೨

ವ: ಅಂತುಬಂದು ವಧೂವರಾವಳೋಕನಸಮಾಕುಳಜನಜನಿತಸಮ್ಮರ್ದ ಕೋಳಾಹಳ ಸನಾಥಮಪ್ಪ ರಾಜವೀಥಿಕಾಪ್ರದೇಶದ ಕೆಲದೊಳ್ ನಿಂದು

ಮಾತಂಗಾರೂಢನೀತಂ ನಿರತಿಶಯಕುಮಾರಂ ದಲೀ ಪಿಂದೆ ರತ್ನ
ಬ್ರಾತಪ್ರೋತಸ್ಫುರತ್ಪಾವನತರ ಶಿಬಿಕಾರೂಢೆಯಾಗೆಯ್ದೆ ಬರ್ಪ
ಖ್ಯಾತಸ್ತ್ರೀಯಿಾಕೆ ಶೃಂಗಾರವತಿವೆಸರ ಮಾದೇವಿಯಿಂತೆಂದು ತಮ್ಮೊಳ್
ಮಾತನಾಡುತ್ತುಂ ಕರಂ ನೋಡಿದುದು ಮದುವೆಯಾಗಿಂತು ಬರ್ಪೊಂದು ಚೆಲ್ವಂ ೨೩

ವ: ಎಂದು ಗಡಣಂಗೊಂಡು ತಮ್ಮೊಳೋರೊರ್ವರೊಡನೆ ನುಡಿವ ಮಡದಿಯರ ಸಡಗರದ ಕಡುನುಡಿಯೊಳ್ ತಡಂಗಲಿಸಿದಗಣ್ಯಪುಣ್ಯಪಾಠಕ ಜನಂಗಳಾಶೀರ್ವಾದ ನಾದಂಗಳ ನಾಕರ್ಣಿಸುತ್ತುಂ ಕುಲವೃದ್ಧಾಂಗನಾಸಂಘಾತಂಗಳ್ ಪರಸಿ ತಳಿವ ಮಂಗಳ ಶೇಷಾಕ್ಷತಂಗಳನಾಂತುಕೊಳುತ್ತುಂ ಬಂದು ರಾಜಮಂದಿರ ದೊಳಗಂ ಪೊಕ್ಕು

ತನ್ನೊಡವಂದರಸುಗಳಂ
ಮನ್ನಿಸಿಬೀಳ್ಕೊಟ್ಟು ಕಳಿಪಿ ಕರುಮಾಡದ ಮೊದ

ಲುನ್ನತಮೆನಿಸುವ ನೆಲೆಯೊಳ್
ಬಿನ್ನವಿಸಿಕ್ಕಿದ ಸುವರ್ಣಸಿಂಹಾಸನದೊಳ್ ೨೪

ಶೃಂಗಾರವತೀದೇವಿಯು
ಮಂಗಜಸನ್ನಿಭಕುಮಾರನುಂ ಕುಳ್ಳಿರ್ದರ್
ಸಂಗಡದಿಂ ಸಂತಸಮಂ
ಪಿಂಗದೆ ಕುಳ್ಳಿರಿಸುತುಂ ಸಮಸ್ತರ ಮನದೊಳ್ ೨೫

ವ: ಸಮನಂತರಮಾ ಮಹಾಸೇನಮಹಾರಾಜನುಂ ಸುವ್ರತಾಮಹಾ ದೇವಿಯುಂ ಮತ್ತಂ ಪುರದೊಳರಮನೆಯೊಳಂ ಮಹೋತ್ಸಾಹಮಂ ಕೊಂಡಾಡಿ ಯಥೋಚಿತ ವಾಸರ ವ್ಯಾಪಾರಮಂ ತೀರ್ಚಿ ಮದುವೆಯಾದ್ಯಂತವೃತ್ತಾಂತಮಂ ತಿಳಿದು ಬಳಿಯಂ ಜಳನಿಧಿಯುಂ ವೇಳೆಯುಂ ನಿಜತನೂಜನಪ್ಪ ಪರಿಪೂರ್ಣಕಳಾಧರನುಂ ರೋಹಿಣಿಯುಮೊಂದಿರ್ಪುದಂ ಕಂಡು ಪೆರ್ಚುವೆರ್ಚುವಂತರಸನುಮರಸಿಯುಂ ತಮ್ಮಯ ಮಗನುಂ ಸೊಸೆಯುಮಪ್ಪ ಧರ್ಮನಾಥಕುಮಾರನುಂ ಶೃಂಗಾರವತೀದೇವಿಯು ಮೊಂದಾಗಿ ಕೂಡಿ ಸುಖದಿಂ ಬಾಳ್ವುದಂ ಕಂಡು ಕಡುನಲಿದು

ಅತಿಶಯನಿರ್ಜರಾಂಗನೆಯರೋಲಗದಿಂದಭಿರಂಜಿಸಿರ್ದು ಭೂ
ರಿತರಸುರಾಗನಂದನವಿಲೋಕನಲೀಲೆಯನೆಯ್ದೆತಾಳ್ದಿ ಸ
ನ್ನುತಪಿತೃಮಾತೃಗಳ್ ಗುಣಿವಧೂವರರಂ ನಡೆನೋಡಿ ನಿರ್ನಿಮೇ
ಷತೆಯನಲರ್ಚುತುಂ ಶಚಿಶಚೀಶರವೊಲ್ ತಣಿದರ್ ಸುಸೌಖ್ಯದಿಂ ೨೬

ಅನ್ಯರಾರಿಂಗಮಿಲ್ಲದ
ಮುನ್ನೆಂದುಂ ಕಿಱಿದನಾರ್ದೊಡನುಭವಿಸದ ಸುಖ
ಮುಂ ನೆಱಿಸಮನಿಸಿದುದು ಪು
ಣ್ಯೋನ್ನತಪಿತೃಮಾತೃಗಳ್ಗೆ ಸುತದರ್ಶನದಿಂ ೨೭

ವ: ಇಂತು ನಿರಂತರಿತ ಪರಮಪ್ರಮೋದಪರಂಪರೆಯನಪ್ಪುಕೆಯ್ದಿರ್ಪುದು ಮೊಂದುದಿವಸಮಾ ಮಹಾಸೇನಮಹಾರಾಜಂ ನಿಜತನೂಜನಪ್ಪ ಧರ್ಮನಾಥಕುಮಾರಂ ಬೆರಸು ಪರಿಭಾಸ್ವರಸ್ವರುದಳಪ್ರಾಸಾದಿತ ಕಾರ್ತಸ್ವರಮಯಪ್ರಾಸಾದ ಶಿಖರೀಭೂತಶಿಖರಿ ನಿಯೂರ್ಹಪರ್ಯಂಕಮಂಡಳದೊಳುದ್ದಂಡಮಂಡಳಿಕ ದಂಡನಾಥಮಕುಟ ಬದ್ಧಾದಿ ನಿರವಶೇಷಪರಿವಾರದೊಡಗೂಡಿ ಒಡ್ಡೋಲಗಂಗೊಟ್ಟು ಲೀಲಾವಿನೋದ ದಿಂದಿರುತ್ತುಮಿರಲಾತನ ಸಂತೋಷಮೆಂಬ ಸಸ್ಯಸಮೃದ್ಧಿಯಂ ಸಫಲಂ ಮಾಡಲ ವಸರಂಬಡೆದಂತೆ

ಪದೆಪಿಂದಂ ಧರ್ಮನಾಥಂ ನಿರುಪಮಪರಮೈಶ್ವರ್ಯಕಾರ್ಹಂತ್ಯಲಕ್ಷ್ಮೀ
ಪದಮಂ ತಾಳ್ದಂದು ನಮ್ಮಂ ಬಳಿಕೆ ಬಗೆಯನಾತಂಗೆ ನಮ್ಮೋಲಗಂ ಪ

ತ್ತದು ಮತ್ತಿಂತೆಂದು ಸೇವಾಸಮಯಮಜಿದು ಬರ್ಪಂತಿರಾಶ್ಚರ್ಯದಿಂ ಬಂ
ದುದು ಕಾರ್ಗಾಲಂ ವಿನೀಲಂ ತಟಿದುದಯವಿಲೋಲಂ ಧ್ವನನ್ಮೇಘಜಾಲಂ ೨೮

ಮಿಗುವ ದ್ವಿಜರಾಜಕಳಾ
ಳಿಗಳಂ ಕಿಡಿಸುತ್ತುಮೆಯ್ದೆ ಮಿತ್ರನ ತೇಜಮ
ನಗಿಯದೆ ಕುಂದಿಸುತುಂ ಬಿಡ
ದೊಗೆದಂ ಕಾರೆಂಬ ದುರ್ಜನಂ ಗರ್ಜಿಸುತುಂ ೨೯

ವ: ಆಗಳ್

ಪಡುವಣಗಾಳಿಯೆಂಬ ಕಡುನಲ್ಲನ ಸೋಂಕಿನೊಳುಬ್ಬಿ ರಾಗಮಿ
ಮ್ಮಡಿಸೆ ಧರಿತ್ರಿಯೆಂಬಬಳೆಗೊರ್ಮೊದಲೊಳ್ ಪರಿತಾಪದೇಳ್ಗೆ ತಾ
ನಡಗಿದುದೆಯ್ದೆ ದೂಳಿಗಣಮೆಂಬ ಲಸತ್ಪುಳಕಾಂಕುರಾಳಿ ಮ
ತ್ತೊಡನೊಡನೆಳ್ದುದದ್ಭಯಮೆಂಬ ಕುರುಳ್ ಕುಣಿದತ್ತು ನಾಡೆಯುಂ ೩೦

ವ: ಇಂತು ವಿರಹಿಜನಂಗಳೆಂಬ ತರುನಿಕರಂಗಳಂ ಸುಡುವ ವಿರಹಾಗ್ನಿಯ ವಿಜೃಂಭಣಕ್ಕೆ ನೆರಮಾಗಿ ಕಯ್ವಾರಂ ಬಂದಂತೆ ಗಭೀರಂ ಪಶ್ಚಿಮಾಶಾಸಮೀರಂ ಬಂದು ತೀಡಲೊಡಂ

ತೊಟ್ಟನೆ ಬೆಟ್ಟಬೇಸಗೆಯ ನಟ್ಟಬಿಸಿಲ್ಗಳವಟ್ಟು ತಣ್ಣಸಂ
ಪುಟ್ಟಿದುದಳ್ತಿವಟ್ಟುದು ಮರಾಳಕುಳಂ ಗಮನಾತುರಕ್ಕೆ ನೇ
ರ್ಪಟ್ಟುದು ಚಾತಕಪ್ರತತಿಗಂ ಪ್ರಮದಂ ನವಿಲೋಳಿಗಳ್ಗೆ ಮುಂ
ದಿಟ್ಟುದು ನರ್ತನಂ ಮಿಸುಪ ಪಣ್ಗೊಗೆವೆತ್ತುದು ಜಂಬುನೇಱಿಲಂ ೩೧

ಮೊಲ್ಲೆ ಮುಗುಳ್ಗಳನಾಂತುದು
ಚಿಲ್ಲಂ ಪರಲೊತ್ತಿ ತೋರ್ಕೆವೆತ್ತುದು ತದುಕುಂ
ಪಲ್ಲವಿಸಿರ್ದುದ ಕೇದಗೆ
ಮೆಲ್ಲನೆ ಗಱಿಗಟ್ಟಿ ತಳೆದುದದು ಬೆಳ್ಸುಳಿಯಂ ೩೨

ಅವಱ ವಿಳಾಸಮಂ ಗಹನಲಕ್ಷ್ಮಿ ನಿರೀಕ್ಷಿಸಲೆಂದು ನಾಡೆಯುಂ
ತವಕಿಸಿ ಚೋದ್ಯದಿಂ ಪಲವುಕಣ್ದೆಱೆದಿರ್ದಪಳೆಂಬ ಮಾಳ್ಕೆಯಿಂ
ದವೆ ಕೆದಱಿರ್ದವೆಲ್ಲೆಡೆಯೊಳಂ ಪರಿರಂಜಿಪ ಕಣ್ಣಪೀಲಿಗಳ್
ನವನುತಿಯಂತಿರೊಪ್ಪಿದುದು ಕೇಗುವ ಸೋಗೆನವಿಲ್ಗಳ ಸ್ವರಂ ೩೩

ವ: ಅಂತು ಘನಸಮಯಪ್ರವೇಶಮಖಿಳಜನಮನೋವಿಕಾಸಕ್ಕವಕಾಶಮಾಗೆ

ಬಡವಾಗ್ನಿಜ್ವಾಲಿಕಾಭೀತಿಯಿನಪರಪಯೋರಾಶಿವೇಳಾವನಂ ಮೇ
ಗಡದುರ್ಗ ವ್ಯೋಮಾಂತರಾಳಸ್ಥಳಮನುರೆಶರಣ್ಬೊಕ್ಕುದೆಂಬಂದದಿಂ ಮೇಣ್

ಸಿಡಿಲಗ್ನಿಪ್ರೋದ್ಯದತ್ಯದ್ಭುತಹಳತಳಮೋದ್ಧೂತಧೂಮಪ್ರತಾನಂ
ಗಡಣಂಗೊಂಡಿರ್ದುದೆಂಬಂದದೆ ಪಸರಿಸಿತುತ್ತಾಳಮಂಭೋದಜಾಳಂ ೩೪

ಪೊತ್ತುವ ಬಾಡವಾಗ್ನಿಯ ಪೊದರ್ ಪೊಗೆಸುತ್ತಿದೊಡುಬ್ಬೆಗಂ ಪೊದ
ಳ್ದತ್ತೆ ಸಮಂತು ನಿತ್ತರಿಸಲಾಱದೆ ಪಶ್ಚಿಮವಾರ್ಧಿಯಿಂದೆ ಮೇ
ಲ್ವತ್ತುವ ವಾಃಕರೀಂದ್ರಘಟೆಯಂತೆ ಪಯೋಧಘಟೆ ದ್ಯುಕಕ್ಷದೊಳ್
ಸುತ್ತಿದುದರ್ಕಸತ್ಕಿರಣಪಲ್ಲವಮಂ ತಿನಲೆಂಬ ಮಾಳ್ಕೆಯಿಂ ೩೫

ನೀರದಸಂಕುಳಂ ನೆರದುಬಂದು ಘನಾತುರದಿಂ ಪ್ರತೀಚಿಕಾ
ನೀರಧಿ ನೀರನೀಂಟುವೆಡೆಯೊಳ್ ಬಡವಾಗ್ನಿಯನೀಂಟಿ ಪೋಗಿ ತ
ನ್ನೀರದಮಾರ್ಗದೊಳ್ ಪಸರಿಸಿರ್ದುದಲ್ಲದೊಡೆಂತು ಬಂದುದೋ
ಭೂರಿಕೃಶಾನುಕಾಂತಿಯೆನಲುಣ್ಮುವ ಮಿಂಚಿನ ಗೊಂಚಲೆತ್ತಲುಂ ೩೬

ಜಗಮಂ ತಾಪಿಸುವರ್ಕಂ
ಜಗುಳ್ದೋಡಿದನೆಲ್ಲಿಗೆಂದು ಮಿಂಚೆಂಬೀ ದೀ
ವಿಗೆವಿಡಿದು ತೋರ್ಪ ತೆಱದಿಂ
ಗಗನದೊಳಂ ಪಸರಿಸಿತ್ತು ಕಾರ್ಮುಗಿಲೆತ್ತಂ ೩೭

ದ್ರುತಜಲಗರ್ಭದಿಗ್ವಧುಗೆ ಗೆಂಟಿಗೆಗಟ್ಟುವ ಪೊತ್ತಿನೊಳ್ ತಟಿ
ಲ್ಲತೆ ಕಡುಪಾಗಿ ಪೊಯ್ವುತಿರೆ ಕಾರ್ಮುಗಿಲೆಂಬ ಗಭೀರಭೇರಿಯಿಂ
ದತಿಶಯರಾವಮುಣ್ಮೆ ನೆಱೆಪೊಣ್ಮಿದುದೆಂಬಿನಮುರ್ವಿಕೊರ್ವಿ ಪ
ರ್ವಿತು ದಶದಿಕ್ತಟೀವಿವರದಲ್ಲಿ ನಿರಂತರಮೇಘಗರ್ಜನಂ ೩೮

ಜಳಧರಲಕ್ಷ್ಮಿಯ ಕಟಿಯೊಳ್
ವಿಳಸನಮಂ ತಳೆದ ಹೊನ್ನಮೇಖಳೆಯೆಂಬಂ
ತೆಳಮಿಂಚಿನ ಬಳಗಂ ಥಳ
ಥಳಿಸುತ್ತುಂ ನಿಮಿರ್ದು ನೀಳ್ದು ಪೊಳೆದುದು ಸುತ್ತುಂ ೩೯

ಕಱೆದುದು ಮುನ್ನಮೆಯ್ದೆಕಡುಗತ್ತಲೆಯೋಳಿಯದೊಂದು ತಂದಲಂ
ಕಱೆದುದು ಮತ್ತೆ ಮಿಂಚುಗಳ ಪಿಂಡಿನ ಬಲ್ಸರಿಯಂ ಬಳಿಕ್ಕದುಂ
ಕಱೆದುದು ಮಾಣದೆಲ್ಲೆಡೆಯೊಳಾಲಿವರಲ್ಗಳ ನಟ್ಟ ಸೋನೆಯಂ
ಕಱೆದುದನಂತರಂ ಪಿರಿದುವಾರಿಯ ಪೆರ್ಮಳೆಯಂ ಪಯೋಧರಂ ೪೦

ಗಗನಶ್ರೀಘನಕಾಲಮೆಂಬ ವಿಟನೊಳ್ ಸಂಭೋಗಮಂ ಮಾಡುತುಂ
ಬಿಗಿದಪ್ಪಲ್ಕೆ ಪಯೋಧರಾಗ್ರದೆಡೆಯೊಳ್ ನಿಂದಿರ್ದ ಹಾರಂಗಳೋ

ಳಿಗಳೆಲ್ಲಂ ಪಱಿದೆಯ್ದಳಲ್ವ ತೆಱದಿಂ ಮುನ್ನಂ ಮಹಾನೀರಧಾ
ರೆಗಳುಂ ಬೀಳ್ತರುತಿರ್ದುವು ಪುಟ್ಟಿರಿದವಂದೆಲ್ಲರ್ಗಮಾಶ್ಚರ್ಯಮಂ ೪೧

ಪಡುವಣ ಗಾಳಿಯ ಪೊಯ್ಲಿನ
ಕಡುಪಳವಡೆ ಕಾರಮೇಘಮೆಂಬವ ನಿಜದಿಂ
ಬಿಡದುದಿರ್ವ ಪೂಗಳೆಂಬಂ
ತೆಡೆಯುಡುಗದೆ ಬೀಳ್ವವಾಲಿಕಲ್ಗಳವೆತ್ತಂ ೪೨

ಸ್ಮರಚಾಪದೆ ಶರವರ್ಷಂ
ಸುರಿವಂತಿರೆ ನೀಲನೀರಧರದಿಂ ಬಿಡುತಂ
ದುರವಣಿಸಿ ಸುರಿದದೆತ್ತಂ
ಶರಷರ್ವಂ ಪುಟ್ಟುವಂತಿರುತ್ಕಳಿಕೌಘಂ ೪೩

ಧರಣೀಮಂಡಲಮೆಂಬ ಭಾಜನಮಿದೆಲ್ಲಂ ತುಂಬಿತುಳ್ಕಾಡುವಂ
ತಿರೆ ಘೋರ್ಘೋರೆನುತುಂ ಸುಪೀವರಪಯೋಧಾರಾಪ್ರವಾಹಂಗಳಂ
ಪಿರಿದುಂ ವಾರಿದಮೆಂಬ ಚೆಲ್ವ ಪಶುವಂ ಸೌದಾಮಿನೀದಾಮದಿಂ
ಕೊರಡುಂ ನೀಳ್ದಿರಲಲ್ಲಿ ಕಟ್ಟಿ ಕ ಱದಂ ಕಾರೆಂಬ ಗೋಪಾಳಕಂ ೪೪

ಪಾಱುತ್ತಿರ್ದುವು ಕೆಲವುಂ
ತೂಱುತ್ತಿರ್ದುವು ಸಮಂತು ಕೆಲವುಂ ಕೆಲವುಂ
ಮಿಾಱುತ್ತಿರ್ದುವು ಮೇರೆಯ
ನೇಱಿದ ಜಲಬಿಂದುಗಳ್ ಸಮೀರಣವಶದಿಂ ೪೫

ವ: ಆಸಮಯದೊಳ್

ಪಕ್ಕಮನೆಯ್ದೆಬಿರ್ಚಿ ಗಱಿಮಿಳ್ಳಿಸಿ ನೀಡಿ ಸುಕಂಠನಾಳಮಂ
ಮಿಕ್ಕು ಮಿಕ್ಕು ವಿಯತ್ತಳಕ್ಕೆ ನಿಜಚಂಚುಪುಟಂದೆಱೆದಾರ್ತಮೆಯ್ದೆ ಕೆ
ಯ್ಮಿಕ್ಕಿರೆ ತೋರ ಕಾರ್ಮುಗಿಲ ನೀರ್ವನಿಯಂ ತವೆಪೀರ್ದು ಪೀರ್ದು ತಾಂ
ಸೊಕ್ಕಿನಳುರ್ಕೆಯಿಂ ನಲಿದುದಂದುರುಸಾತಕಮೊಂದು ಚಾತಕಂ ೪೬

ಒಂದೊಂದಂ ನೋಡಲೆಂದಾ ಚತುರುದಧಿಗಳೆಳ್ತಂದು ಭೂಭಾಗದೊಳ್ ತಾ
ವೊಂದಾಗಿರ್ದಂದದಿಂ ಕಾಳ್ಪುರಮೆಸಗಿದುದಲ್ಲಲ್ಲಿಗಂ ಕೊರ್ಬಿ ಪರ್ವ
ಲ್ಕಂದಾರಣ್ಯೇಭವೃಂದಂ ಜಲಗಜಚಯಮೆಂಬಂದದಿಂ ಪತ್ತನೌಘಂ
ಸಂದಂತರ್ದ್ವೀಪಮೆಂಬಂದದೆ ಮಳೆ ಕಱೆದತ್ತದ್ಭುತಂ ಪುಟ್ಟುವನ್ನಂ ೪೭

ವ: ಇಂತಗ್ಗಳಮಾಗಿ ಕೌತೂಹಳಂ ಕೆಯ್ಮಿಗುವಂತು ಪೆರ್ಮಳೆಕೊಂಡು ಮಾಣಲೊಡಂ

ಲೋಕಮೆಲ್ಲಮೇಕಾರ್ಣವಮಾದುದೆಂಬಂತೆ ಸುತ್ತಲುಂ ಬೆಳ್ಳಂ ಕವಿದು ಪರಕಲಿಸಿ ನೋಳ್ಪರ ಕಣ್ಗಳಿಂಗಗುರ್ವನೀವುತ್ತುಮಿರೆ

ಕಾಳೆಗದಂತತಿಕ್ಷುಭಿತವಾಹಿನಿಯೊಳ್ ಪಿರಿದಾದ ಘೋಷಮಂ
ಮೇಳಿಸಿದತ್ತು ಗರ್ಭವತಿಯಂದದಿನೆಯ್ದೆ ರಜೋವಿಕಾರನಿ
ರ್ಮಾಳನಮಂ ಸಮಂತೊಡರಿಸಿತ್ತು ದುರಾತ್ಮಕನಂತೆ ಕೂಡೆ ಪರಿ
ಕಾಳಿಯನೆಯ್ದಿಸಿತ್ತಿಳೆಯೊಳೇಂ ಮಳೆಗಾಲಮಳುಂಬಮಾದುದೋ ೪೮

ಪ್ರತಿಕೂಲವೃತ್ತಿಯಂ ಮಾ
ಡುತುಮಭ್ಯಂತರಮನೆಯ್ದೆಕದಡುತ್ತುಂ ಮಿಾ
ಱುತಮಿರ್ದುದು ಮೇರೆಯನಂ
ದತಿಶಯದೆ ಜಡಾಶಯಂ ಜಡಾಶಯನನ್ನಂ ೪೯

ನಟ್ಟೆಱಗುತ್ತುಮಿರ್ಪ ಕಡುಸೋನೆಯ ಧಾರೆಗಳಲ್ಲಿ ಸಿಲ್ಕಿ ಮೆ
ಳ್ಪಟ್ಟು ಕಱಗಿಪೋದನೊ ಸಿಡಿಲ್ದನಿಗೊಟ್ಟೊಡೆ ಕೇಳ್ದು ಬೆರ್ಚಿ ಕ
ಣ್ಗೆಟ್ಟು ರಥಾಗ್ರದಿಂ ನೆಲಕೆ ಬಿದ್ದನೊ ಹಾ ರವಿ ಕಾಣೆನೆಂದು ಬಾ
ಯ್ವಿಟ್ಟು ಪಲುಂಬುವಂತೆಸೆದುದಬ್ಜಿನಿ ಮಂಗಳಭೃಂಗರಾವದಿಂ ೫೦

ಪೂಗಳ ಗೊಂಚಲಿಂ ಪುದಿದ ಜಾದಿಗಳೊಳ್ ನಲಿದಾಡಿ ಪೂತ ಪು
ನ್ನಾಗದ ಬಂಡನುಂಡು ಕುಮುದಂಗಳೆಸಳ್ಗಳ ಪಾಸಿನಲ್ಲಿ ಚೆ
ಲ್ವಾಗಿಯೆ ಕುಳ್ಳಿದಿರ್ದಳಿವಧೂಮೃದುಗೀತಮನಾಲಿಸುತ್ತದೇಂ
ರಾಗಿಸಿದತ್ತೊ ತುಂಬಿಗಳ ಪಿಂಡು ಕರಂ ನೆಲೆಗೊಂಡ ಸೌಖ್ಯದಿಂ ೫೧

ಅಱಸಿದೆವಿನ್ನೆಗಂ ಬಿಡದೆ ಕಾಣದೆ ನಿಮ್ಮನದೆಲ್ಲಿಯುಂ ಮನಂ
ಮಱುಗಿದುದೆಂದು ತಾಯೆನಿಪ ವಾರಿಗೆ ಮುದ್ದಿಸಿ ತಮ್ಮ ದಾಹಮಂ
ಮೊಱೆಯಿಡುವಂತೆ ಟಱ್ರ ಟಱಟಱ್ರ ಟಟಱ್ರ ಟಟಱ್ರ ಟಱ್ರಯೆಂ
ದೊಱಲುತುಮಿರ್ದುದಾಗಳಧಿಕಂ ಸಲಿಲಾಶಯಭೇಕಶಾಬಕಂ ೫೨

ಕಾಮನ ಬಿಲ್ಲಿನೊಳ್ ತೊಡರ್ದುದಂ ಶರಮಂ ಬಿಡದೆಚ್ಚು ಗೆಲ್ದನೀ
ಭೂಮಿಯೊಳುಳ್ಳರಂ ಮದನನೆಂದು ಜಯೋತ್ಸವಮಾದುದೆಂಬಿನಂ
ವ್ಯೋಮದೊಳೆಯ್ದೆ ಮಿಂಚು ಗುಡಿ ಬದ್ದವಣಂ ಮೊಳಗಾಗಿಸುತ್ತಲು
ದ್ದಾಮಮೆನಿಪ್ಪ ಸಂಭ್ರಮಮನಾಂತು ವಿಘೂರ್ಣಿಸುತಿರ್ದುದಾಕ್ಷಣಂ ೫೩

ವ: ಬಳಿಯಂ ಪಡುವಣ ಪವಮಾನಪರಿಪ್ರೇರಣಾಪ್ರಾಬಲ್ಯವಶದಿಂ ಪಯೋಧರಪ್ರಸರಂ ಪರೆದು ಪಾಱೆಪೋಗಲೊಡಂ ಪಳಚ್ಚನೆ ಬಿಸಿಲೊಳ್ ಪೊಳೆದು ದೆಸೆಗಳತಿವಿಶದಂಗಳಾಗೆ

ಕಡುಸೀತಂ ಪತ್ತೆ ಸರ್ವಾಂಗದೊಳುದಲವಕಂ ಬೆನ್ನೊಳಂ ತುಂಬೆ ತಮ್ಮೊ
ಳ್ಗೊಡೆಯೊಳ್ವಾಲಾಗ್ರಕಂ ಪತಿಸಿದವೊಲಿರೆ ಸಂಕೋಚಮಂ ತಾಳ್ದೆ ತರ್ಗಿ
ದ್ದೊಡಲುಂ ತಂತಮ್ಮೊಳೊಂದೊಂದಡಸಿಡುಕುಱೊಳೊತ್ತೊತ್ತುಮಂ ಸಾರ್ದುಮತ್ತಂ
ನಡುಗುತ್ತುಂ ಬಿಂದು ಮೆಯ್ಯಂ ಬಿದಿರ್ದು ಮೃಗಮೃಗೀಸಂಕುಳಂ ಪೋಯ್ತದೆತ್ತಂ ೫೪

ಮಱಗಳನಪ್ಪಿಕೊಂಡು ಪೊಱಮಟ್ಟುದು ಕೋಡಗೆಯೋಳಿಪೋಳಲಿಂ
ತುಱುಗಿದ ಕೂದಲಂ ಬಿದಿರ್ದು ಜೊಂಪಿಸುತುಂ ಪೊಱಮಟ್ಟುದೆಯ್ದೆ ಕು
ಕ್ಕುಱಿಸಿ ದಲಿರ್ದ ಪೆರ್ಕರಡಿಯುಂ ಮೆಳೆಯಿಂ ಕಟವಾಯ ನಕ್ಕುತುಂ
ಕಿಱುವುಲಿ ಸುರ್ಬುಗೊಂಡ ಪೊದಱಿಂ ಪೊಱಮಟ್ಟುದು ಮೆಲ್ಲನಾಕ್ಷಣಂ ೫೫

ಪೊಸಪೊನಲೊತ್ತಿಬಂದು ಪುಗೆ ಪುತ್ತದ ಬಾಯೊಳಮಲ್ಲಿ ಪಾವುಗಳ್
ಬಸಮಳಿದಿಕ್ಕೆಲಕ್ಕೆ ಬಿಡದವ್ವಳಿಸುತ್ತವು ಮೇಗೆ ಪಾಯ್ದು ಲಂ
ಘಿಸಿ ಪೊಱಮಟ್ಟುಬಂದು ಸಲೆ ಭೊಸ್ಸನೆ ಭೊಸ್ಸನೆ ಸುಯ್ದು ಬಳ್ದುದೆ
ಮ್ಮಸುವೆನುತುಂ ಕಡಂಗಿ ಪೆಡೆಯೆತ್ತಿ ದಲಾಡುತುಮಿರ್ದವರ್ಥಿಯಿಂ ೫೬

ಕರಿಯೂಥಂ ನಿಜಕರಪು
ಷ್ಕರದಿಂದಂ ತುಂಬಿ ತೆಗೆದು ಪೊಸಪೊಸನೀರಂ
ಕರಿಣೀಯೂಥದ ಕರಪು
ಷ್ಕರದೊಳ್ ಪೂತ್ಕರಿಸೆ ಚಲ್ಲಿ ನಲಿದವು ತಮ್ಮೊಳ್ ೫೭

ಎಳವುಲ್ಲಂ ಮೇದು ಮುಂಗಾಲ್ಗಡಿಯೆನೆ ಬಿರಿವನ್ನಂ ಕರಂ ಬೀಗಿ ಬೆನ್ನುಂ
ತಿಳಿನೀರಂ ಪೀರ್ದು ಕೊರ್ಬುಬ್ಬರಿಸಿ ಸುರಿಯೆ ಪಾಲ್ಕೆಚ್ಚಲಿಂದೂಡಿ ವತ್ಸಂ
ಗಿಳೆಯೊಳ್ ನಿಂದಿರ್ದುದೆತ್ತಂ ವನಚರಮಹಿಷೀರಾಜಿ ಮೆಲ್ಕೊತ್ತುತುಂ ಕ
ಣ್ಗಳನರ್ಧಂಮುಚ್ಚಿ ಸಾರ್ತಂದುಗೆ ನೊರೆ ಕಟವಾಯಿಂದಮಳ್ಳಾಡೆ ಬಾಲಂ ೫೮

ಮಲ್ಲಿಗೆಯ ಪೂವಿನಂಬಂ
ಫುಲ್ಲಶರಂ ತೊಟ್ಟನೋಡಿ ವಿರಹಿಗಳೆನುತುಂ
ಸೋಲಿಪ ತೆಱದಿಂ ಸೋಗೆಗ
ಳೆಲ್ಲಂ ಕೇಗಿದವು ಕೆದಱ ಕಡುವೀಲಿಗಳಂ ೫೯

ವ: ಇಂತತಿ ಪ್ರಬಳವಾಗಿ ಬಂದಳವಿಗಳೆದು ಕಱಿದು ಮಾಣ್ದ ಕಾರ್ಗಾಲದ ಪೆರ್ಮಳೆಯ ಕೋಳಾಹಳಮಂ ಕಂಡು ಕೌತುಕಮುತ್ತು ಕೊಂಡಾಡಿ ನುಡಿಯುತ್ತುಮಿರ್ದ ಮಹಾಸೇನ ಮಹಾಜನುದಯಶಿಖರೀಶಿಖರಮುಖರಮುಖಶೇಖರೀಭೂತಖರ ಮಯೂಖನೆಂಬಂತೆ ಪ್ರಾಸಾದಶಿಖರಸಂಸ್ಥಿತಸಭಾಮಂಡಳಮಧ್ಯದೊಳ್ ಕುಳ್ಳಿರ್ದು ದಿಶಾಶೋಭಾವಲೋಕಂಗೆಯ್ವುತ್ತುಮಿರ್ಪಿನಂ ಪೂರ್ವದಿಗ್ಭಾಗದಲ್ಲಿ

ಘನಸಮಯಂ ದಲೆಂಬ ಪತಿ ಬಂದೊಡಮಾಗಸಮೆಂಬ ಲಕ್ಷ್ಮಿ ತ
ನ್ನನುಪಮಮಾದ ಪೀವರಪಯೋಧರಮಂಡಳಮಧ್ಯದಲ್ಲಿ ಪಾ
ವನತರ ಪಂಚರತ್ನಮಯಹಾರಮನಿಕ್ಕಿದಳೆಂಬ ಮಾಳ್ಕೆಯಿಂ
ಕನದುರುಶಕ್ರಚಾಪಮಭಿರಂಜಿಸಿದತ್ತು ವಿಚಿತ್ರವರ್ಣದಿಂ ೬೦

ವ: ಅಂತಿಂದ್ರಚಾಪಮಂದಂಬಡೆದು ಥಳಥಳಿಸಿ ಪೊಳೆಯುತ್ತುಮಿರಲದಂ ಕಂಡು ನರೇಂದ್ರಕುಂಜರಂ ಮನಂಗೊಂಡು ಮತ್ತಮದಱ ಚೆಲ್ವಿಂಗೆ ಮೆಚ್ಚಿಮೆಚ್ಚಿಯು ವತಂಸಭಾರದಿನೋಸರಮಾದಂತೆ ತಲೆದೂಗುವ ವಿಳಾಸಂ ಮೆಱೆಯಲೆಮೆಗೊಡದೆ ಕಡುತವಕದಿಂದದಂ ನಡೆನೋಡುವಾಗಳ್

ಧನಮುಂ ಜವ್ವನಮುಂ ಸುಖಾನುಭವಮುಂ ಸಂಪತ್ತಿಯುಂ ಮೂರ್ತಿಯುಂ
ಮನುಜರ್ಗೆಯ್ದಿವು ನೋಡೆನೋಡೆ ಕಿಡುಗಿಂತಿಂತೆಂದು ತೋರ್ಪಂದದಿಂ
ಘನದೇವೇಂದ್ರಶರಾಸನಂ ನೃಪತಿ ನೋಡಲ್ ನೋಡಲಾ ವ್ಯೋಮದ
ಲ್ಲಿನಿತುಂ ನಿಲ್ಲದೆ ಪಾಱಿಪೋಗಿ ಬಯಲಾಗಿರ್ದತ್ತು ನಿಶ್ಯೋಭಕಂ ೬೧

ಕರಗಿದುದೀಗಳೀಗಳೆ ಸುರೇಂದ್ರಶರಾಸನಮಯ್ಯೊ ಅಯ್ಯೋ ಮುಂ
ಬೆರಸಿದ ಚೆಲ್ವಿನೊಡ್ಡು ಬಯಲಾದುದು ರಾಜ್ಯವಿಭೂತಿಯೊಡ್ಡುಮಿಾ
ಪರಿಯೊಳೆ ನೋಡೆನೋಡೆ ಬಯಲಾಗದೆ ಮಾಣದಿದೆಂದು ನಾಡೆಯುಂ
ನರಪತಿ ಚಿತ್ತದೊಳ್ ನಿಜೆಸಿದಂ ನೆಲೆಗೊಂಡ ಮಹಾವಿರಕ್ತಿಯಂ ೬೨

ವ: ಇಂತು ಸಂಸಾರಶರೀರಭೋಗನಿರ್ವಿಣ್ಣನಾ ರಾಜಾಧಿರಾಜಂ ಪರಮ ವೈರಾಗ್ಯಸೌಭಾಗ್ಯ ಸಮಾಕ್ರಾಂತಸ್ವಾಂತನಾಗಿ ತನ್ನಂತರಂಗದೊಳಿಂತೆಂದಂ

ಇನ್ನೆವರಂ ದುರಿಂದ್ರಿಯಸುಖಂಗಳ ಸೇವನೆಯಿಂದೆ ಸೊಕ್ಕಿ ಮ
ತ್ತೆನ್ನಯ ಲೇಸನಿಂತಱಿಯದಿರ್ದೆನುದಾರತನೂಜನಪ್ಪದ
ತ್ಯುನ್ನತವಿಕ್ರಮೈಕನಿಳಯಂ ಖಳಸಂಸರಣಕ್ಕೆ ಪೇಸದಾ
ನಿನ್ನುಮಿರಲ್ಕಯೋಗ್ಯಮದಱಿಂ ತೊಱೆವೆಂ ವಿಷಯಾಭಿಲಾಷೆಯಂ ೬೩

ತನುವೆನ್ನದು ಧನವೆನ್ನದು
ವನಿತಾಚಯವೆನ್ನದೆಂಬವಂ ಕಡುಮೂರ್ಖಂ
ತನುವೆನ್ನದು ಧನವೆನ್ನದು
ವನಿತಾಚಯವಲ್ಲದೆಂಬವಂ ಕಡುಜಾಣಂ ೬೪

ಕೆಡುವೊಡಲಿಂಗಿದಕ್ಕೆ ಪದೆದೆನ್ನದಿದೆಂಬ ವಿಮೋಹಭಾವದಿಂ
ದುಡಿಸಿಯುಮೂಡಿಯಂ ತೊಡಿಸಿಯುಂ ಪೊರೆದೋವುತುಮಿರ್ಪ ಮೂಢರೆ

ಯ್ದಡಸಿದ ದೋಷಕಾರಣದೆ ಶೂಲಮನೇಱುವವಂಗೆ ತುಯ್ಯಲಂ
ಬಡಿಸಿರದೂಡಿ ಮೋಹಿಸುವ ದುರ್ಮನುಜಂಗೆಣೆಯಾಗದಿರ್ಪನೇ ೬೫

ಬಲದೊಳ್ ಕಿಚ್ಚಿಡದಲ್ಲಿ ರಕ್ಕಸನತಿಕ್ರೂರಾಂತಕಂ ಮಧ್ಯದೊಳ್
ನೆಲಸಿರ್ದುಗ್ರತೆ ಮತ್ತೆ ಮುಪ್ಪುರಿಯದಾಯ್ತೆಂಬಂದದಿಂದಂ ಜವಂ
ಕೊಲುತಿರ್ಪಂ ಜಗಮೆಲ್ಲಮಂ ದಲನಿಶಂ ಕೈಹೇಸದಿಂದಾವನೀ
ನೆಲದಲ್ಲಿಂ ನೆರೆಯರ್ ಕೊಲಲ್ಕೆ ಪಿರಿದುಂ ಹಿಂಸಾಪರಂ ಕೊಲ್ಲದಂ ೬೬

ಎಂತುಂ ನೋಳ್ಪಡತೀವದುಃಖದೊದವಿಂ ಬಕ್ಕುಂ ಧನಂ ಬಂದೊಡಂ
ಸಂತಂ ನಿಲ್ಲದು ನಿಂದೊಡಂ ಮಡಗಿರಲ್ಕೊಂದುಗ್ರಹಂ ಪೊರ್ದಿ ಮ
ತ್ತುಂತುಂ ತಾಂ ಕೊಡದಿರ್ಪುದಿರ್ದೊಡಮವಂಗಕ್ಕಾರ್ತಮೆಯ್ವಾರ್ತದಿಂ
ಸಂತಾಪಂ ದೊರೆಕೊಂಡು ದುರ್ಗತಿಯೊಳಾಳ್ಗಿಂತಾಗಿ ಕಷ್ಟಂ ಧನಂ ೬೭

ಈ ಜಗಮೆಂಬ ಪೆರ್ಮಡುವಿನೊಳ್ ನೆಱೆತೀವಿದ ಧರ್ಮಮೆಂಬ ಭೂ
ಯೋಜಲದಲ್ಲಿ ಸಂತಸದಿನಾಡುತುಮಿರ್ದ ಶರೀರಮೀನಕ
ವ್ರಾಜಮನಂಗನಾನಿಕರಮೆಂಬುರುಜಾಲಮನೆಯ್ದೆಬೀಸಿ ಚೇ
ತೋಜಪುಳಿಂದಕಂ ತೆಗೆದು ತಾಂ ಸುಡುವಂ ರತಿಯೆಂಬ ಕಿಚ್ಚಿನೊಳ್ ೬೮

ಪರಿಕಿಸೆ ರಾಜ್ಯಲಕ್ಷ್ಮಿ ಕಡುಕಷ್ಟೆ ಸಹೋದರರಲ್ಲಿ ಮಿತ್ರರೊಳ್
ಬೆರಸಿದ ತಂದೆಮಕ್ಕಳೊಳಗಿಕ್ಕಿ ಪರಸ್ಪರವೈರಭಾವಮಂ
ನೆರಯಿಸಿಯುಂ ವಿನಾಶದೊಳಮೆಲ್ಲಿಯು ನಿಲ್ಲದೆ ಸುತ್ತುತಿರ್ಪಳಾ
ಮರುಳಿಗೆ ಕೂರ್ಪ ಭೂಮಿವರನೆಗ್ಗರೊಳಗ್ಗಳನಾಗದಿರ್ಪನೇ ೬೯

ಸಿರಿ ಸುರಚಾಪದಂತೆ ಕರಿಗಳ್ ಮುಗಿಲೊಡ್ಡುಗಳಂತೆ ವಾಜಿಗಳ್
ನೆರವಿಯ ಮಂಜಿನಂತೆ ಮಿಗೆಪಾಱುವ ಪಕ್ಕಿಗಳಂತೆ ಬಂಟರುಂ
ಬೆರಸಿದ ನಂಟರುಂ ಮಯಿಮೆಯುಂ ಕಡುಗಾಳಿಯವೊಲ್ ವಿಚಾರಿಸ
ಲ್ಕುರುತರರಾಜ್ಯಸಂಪದಮಿದಭ್ರದವೊಲ್ ಬಯಲಾಗಿ ತೋಱುಗುಂ ೭೦

ವ: ಇಂತಾ ಮೂರ್ಧಾಭಿಷಿಕ್ತಂ ಸಂಸಾರಸ್ವರೂಪಮಂ ನಿಜಸ್ವಾಂತದೊಳಭಿ ಚಿಂತಿಸಿ ಪ್ರಾಜ್ಯಸಾಮ್ರಾಜ್ಯಸುಖವಿರಕ್ತಿ ಸಮಾಸಕ್ತನುಂ ಪರಿಪೂಜ್ಯತಪೋರಾಜ್ಯ ಸುಖಾನುರಕ್ತಿ ಪ್ರವ್ಯಕ್ತನುಮಾಗಿ ಪರಿಚ್ಛೇದಿಸಿ ಸಭೆಯನಭಿವರ್ಜಿಸಿ ಸಿಂಹಾಸನದಿನೆಳ್ದು ಪೋಗಿ ಸಂಧ್ಯಾಸಮಯ ಸಮಾರಭ್ಯಮಾಣ ಬಂಧುಜಿನದೇವಾರ್ಚನಾ ಪ್ರಬಂಧಸಂಬಂಧ ವಿನಿತ್ಯನಿತ್ಯನಿಯಮಕ್ರಿಯಾವ್ಯಾಪಾರಮನೊಡರ್ಚಿ ಬಳಿಯಮನಲ್ಪತರ ಮರಾಳಿಕಾತೂಳ ಪರಿಕಲ್ಪಿತ ತಳ್ಪತಳದೊಳೊಯ್ಯನೆ ಮೆಯ್ಯನೀಡಾಡಲೊಡಂ

ಪರಮವೈರಾಗ್ಯಚಿಂತಾ
ತರುಣೆಯನಮರ್ದಪ್ಪಿಕೊಂಡು ಬಿಡದಿರ್ದೊಡೆ ಮ

ತ್ಸರದಿಂದೆಂಬಂತೆ ವಿಭಾ
ವರಿಯೊಳ್ ನಿದ್ರಾವಧೂಟಿ ಪೊರ್ದಳ್ ನೃಪನಂ ೭೧

ಪೊಸಬೀಡಾರದೊಳಿರ್ದ ಬಟ್ಟೆಗನವೊಲ್ ಮೋಹಾಭಿವೇಶೋದಯಂ
ವಸುಧಾಧೀಶನ ಚಿತ್ತದಲ್ಲಿ ಕಿಱಿದುಂ ಮೆಯ್ದೋಱಿತಿಲ್ಲಾಗಿ ಪೋ
ಗಿಸಿದಂ ಸಾರದನಾಗದಂದಿನಿರುಳಂ ಪಾಸಿಂದಮೆಳ್ದಂ ದಲಾ
ಲಿಸುತುಂ ಮಂಗಳಪಾಠಕಪ್ರಕರಮೋದುತ್ತಿರ್ದ ಪದ್ಯಂಗಳಂ ೭೨

ವ: ಮತ್ತಂ ನಿತ್ಯಂ ಪ್ರಾತಃಕಾಲದೊಳವಶ್ಯಂ ಕರಣೀಯಮಾದರ್ಹತ್ಪರಮೇಶ್ವರ ಪೂಜಾವಿಧಾನ ಗುರುಪಾದಾರ್ಚನಸ್ವಾಧ್ಯಾಯ ಸಂಯಮತಪಸ್ಸತ್ಪಾತ್ರ ದಾನಲಕ್ಷಣ ಷಟ್ಕರ್ಮಮಂ ನಿರ್ಮಿಸಿದನಂತರಮಾ ಪ್ರತಾಪರಾಜಂ ಮುನ್ನಮೆಂತು ಯುವರಾಜಂಗೆ ಶೃಂಗಾರವತೀದೇವಿಯ ಕರಗ್ರಹಣಮಂ ಮಾಡಿಸಿದನಂತೆ ತಾನುಮಾತಂಗೆ ಮೇದಿನಿಯ ಕರಗ್ರಹಣಂಗೆಯಿಸುವ ಕಜ್ಜದುಜ್ಜಗಂ ಮನದೊಳ್ವೆಟ್ಟುವೆರ್ಚೆ

ಇಟ್ಟ ತಿರೀಟಕೋಟಿಘಟಿತಸ್ಫುಟರತ್ನಮರೀಚಿ ಮೇಲೆ ನೇ
ರ್ಪಟ್ಟರುಣಾತಪತ್ರಕಮನೆತ್ತಿದವೋಲಭಿರಂಜಿಸುತ್ತಿರಲ್
ತೊಟ್ಟ ವಿಮೌಕ್ತಿಕಾಭರಣ ಪೀವರಕಾಂತಿ ಕವಲ್ತು ಸುತ್ತಲುಂ
ದಟ್ಟಮದಾಗಿ ತೋಱೆ ನೃಪನೋಲಗಸಾಲೆಗೆ ಬಂದನಾಕ್ಷಣಂ ೭೩

ವ: ಅಂತಾ ಮಹಾಸೇನ ಮಹಾರಾಜಂ ಸರ್ವಾವಸರಸಮಯಮಾದಭಿನವ ಶೋಭಾವಿಭವ ಭಾಭಾಸ್ಯಮಾನ ಸಭಾಮಂಡಪಕ್ಕೆ ದಂಡವಾಸಿಕಪುರಸ್ಸರಂ ಬಂದೊಳಗಂ ಪೊಕ್ಕು ಗರಿಷ್ಠಪ್ರತಿಷ್ಠಾಧಿಷ್ಠಿತ ನಿಖಿಳವಿಷ್ಟಪಾಧೀಶ್ವರ ಪ್ರಸಿದ್ಧಾನೇಕಮಕುಟಬದ್ಧ ಮಹಾಮಕುಟವರ್ಧನಪ್ರಧಾನ ಪರಿಜನ ಬಂಧುಜನೇಷ್ಟಜನಪರಿವೇಷ್ಟಿತನುಮಮಳತರ ಮಣಿಗಣಸಮುಪಜುಷ್ಟನಿಷ್ಟಪ್ರಾಷ್ಟಾಪದಸಮಯ ವಿಶಿಷ್ಟಸಿಂಹವಿಷ್ಟನಿವಿಷ್ಟನಾಗಿ

ಎನ್ನ ಸಾಮ್ರಾಜ್ಯದುರು ಸೌ
ಖ್ಯೋನ್ನತಿಗಿದೆ ಸೀಮೆಯೆಂದು ತೋಱುವ ತೆಱದಿಂ
ಹೊನ್ನ ಸೀಗುರಿಗಳಿಂದಂ
ಚೆನ್ನಂಬಡೆದರಸು ಚೋದ್ಯಮಂ ಪುಟ್ಟಿಸಿದಂ ೭೪

ವ: ಆ ಮಹಾರಾಜಂ ತನ್ನಯ ಮಗನಪ್ಪ ಧರ್ಮನಾಥಕುಮಾರನಂ ಬರವೇಳ್ದು ಕಟ್ಟಿಗೆಕಾಱರನಟ್ಟುವುದುಮವರ್ ಪೋಗಿ ಕರೆಯೆ

ಪಸರಂಬೆತ್ತಿರ್ದ ನುಣ್ಮೆಯ್ವೆಳಗು ಪೊದೆದ ದೇವಾಂಗವಸ್ತ್ರಂಗಳೊಳ್ ವ್ಯಾ
ಪಿಸಿ ಸುತ್ತಂ ತೀವೆ ರಂಗಂಬಡೆದು ಹಳದಿಯೆಂಬೊಂದು ಸಂದೇಹಮಂ ಪು

ಟ್ಟಿಸುತುಂ ಕೌತೂಹಳಕ್ಕಂದೆಡೆಯೆನಿಪವಱಿಂದೊಪ್ಪುತುಂ ಬಂದು ಪೊಕ್ಕಂ
ಪೊಸತಾದಾಸ್ಥಾನಮಂ ನೂತನಮಣಿಸದಳಂಕಾರಸಾರಂ ಕುಮಾರಂ ೭೫

ವ: ಅಂತುಬಂದ ಧರ್ಮನಾಥಕುಮಾರಂಗೆ ಸಭೆಯೆಲ್ಲಮಿದಿರೆಳ್ದು ಕೆಯ್ಗಳಂ ಮುಗಿದು ವಿನಯವೃತ್ತಿಯಂ ಮೆಱೆವುದುಮಾತಂ ತನ್ಮಧ್ಯಸ್ಥಿತ ಸಿಂಹಾಸನಮನಳಂಕರಿಸಿ ಪ್ಪುದುಮಾಗಳಾನಂದಜಳಲುಭಿತ ವಿಲೋಚನನಾಗಿ

ಧರಣೀಪಾಳಕನಾ ಕುಮಾರಕನ ವಕ್ತ್ರಾಲೋಕನಂಗೆಯ್ದು ಮೋ
ಹರಸಾರ್ದ್ರೀಕೃತವಾಕ್ಯದಿಂ ನುಡಿದನಂದಿಂತೆಂದೆಲೇದೇವ ಪೀ
ವರಭೂರಕ್ಷಣದಕ್ಷದಕ್ಷಿಣಭುಜಾದಂಡ ಪ್ರಚಂಡಪ್ರಭೋ
ದ್ಧುರ ನಿನ್ನನ್ನನಿರುತ್ತಿರಲ್ ಭವದೊಳಾಳ್ ತಾನಿರ್ದದೇಂ ತಕ್ಕುದೇ ೭೬

ಪಡೆದೆಂ ನೊಸಲೊಳ್ ಕಣ್ಣಂ
ಪಡೆದಂತಿರೆ ನಿನ್ನನಖಿಳಜನಪೂಜಿತನಂ
ಕಡುಪಿಂದೆ ತಂದೆಯಿಚ್ಚೆಯ
ನೊಡರಿಸಿಯನುಕೂಲನಪ್ಪವಂ ಸತ್ಪುತ್ರಂ ೭೭

ಪತನಮನಾಗಿಸದುನ್ನತ
ಗತಿಗೊಯ್ವುದಱಿಂದಪತ್ಯಮೆಂಬೀ ಪೆಸರಂ
ಮತಿವಂತರಿಟ್ಟರೀ ಸಂ
ಸೃತಿಯೊಳ್ ಪತಿಸುವುದಪತ್ಯ ನಿನಗುಚಿತಮೆ ಪೇಳ್ ೭೮

ನಿನ್ನಿಂದಾದೆಂ ಕೃತಾರ್ಥಂ ತ್ರಿಜಗದೊಳೆಸೆದತ್ತೆನ್ನ ಕೀರ್ತಿಪ್ರಭಾವಂ
ನಿನ್ನಿಂ ನಿನ್ನಿಂದಮೀಗಳ್ ಪಡೆದೆನಖಿಳಧರ್ಮಾರ್ಥಕಾಮಂಗಳಂ ಮ
ತ್ತಿನ್ನುಂ ಮನ್ಮಾನಸಂ ಮೋಕ್ಷದ ಸುಖಪದಮಂ ಕಾಂಕ್ಷಿಸುತ್ತಿರ್ದುದಾದಂ
ಸನ್ನುತ್ಯಾದೀಕ್ಷೆಯಿಂದಲ್ಲದೆ ಫಲಿಸದದಕ್ಕಾಗು ನೀಂ ಮತ್ಸಹಾಯಂ ೭೯

ನೂತನರಾಜನೀತಿಗಳಮೆಲ್ಲಮನೋದುವುದೊಲ್ದು ಬಾಲ್ಯದೊಳ್
ಪ್ರೀತಿಯಿನೆಯ್ದೆ ಸೇವಿಸುವುದೊಪ್ಪುವ ಜವ್ವನದಲ್ಲಿ ರಾಜ್ಯಸೌ
ಖ್ಯಾತತಭೋಗಮಂ ನೆಱೆಯೆ ಮುಪ್ಪಿನೊಳಂ ತಱಿಸಂದು ಮಾಳ್ಪುದು
ಖ್ಯಾತಮೆನಿಪ್ಪ ಸತ್ತಪಮನಿಂತಿದು ವರ್ತನೆ ಭೂಪರಪ್ಪರಾ ೮೦

ನಮ್ಮ ಕುಲಕ್ರಮಂಬಿಡಿದು ಬಂದ ಪುರಾತನ ಭೂಪರಪ್ಪರೀ
ಸಮ್ಮತದಲ್ಲಿ ವರ್ತಿಸಿದರಾನುಮದಂ ಸಲೆಮೀಱಿ ಬಂದೊಡೆಂ
ದುಂ ಮಹಿಯಲ್ಲಿ ಹಾಸ್ಯರಸಭಾಜನನಾಗದೆ ಮಾಣೆನೀ ನಿಮಿ
ತ್ತಂ ಮನಮೀಕ್ಷಣಂ ಬಿಡದಪೇಕ್ಷಿಸುತಿರ್ದುದು ಜೈನದೀಕ್ಷೆಯಂ ೮೧

ಸಕಳಸಾಮ್ರಾಜ್ಯಭಾರ
ಪ್ರಕರ್ಷದಿಂದೆನ್ನ ಬಾಹುಪರಿಘಂ ಕಡುದುಃ
ಖಕಳಿತಮಾಗಿರ್ದಧಿಕಂ
ಪ್ರಕಟಿಸುತಿರ್ದಪುದುಮಿಾಗಳೆನ್ನೊಳ್ ನೋವಂ ೮೨

ವಸುಧಾಭಾರಮನೊಪ್ಪುಗೊಂಡು ಘನದೋರ್ದಂಡಾಗ್ರದೊಳ್ ತಾಳ್ದಿ ಮಾ
ಣೆಸಿ ನೋವಂ ನಿಲಿಸೆನ್ನನುತ್ತಮತಪಸ್ಸಾಮ್ರಾಜ್ಯದೊಳ್ ಕೂಡೆ ಸಾ
ಧಿಸುವೀ ದಾರುಣಕರ್ಮಕಂಟಕರ ಬೇರಂ ಕಿಳ್ತು ಮತ್ತೆತ್ತಿ ಭೋ
ಗಿಸುತಿರ್ಪೆಂ ಕೆಡದಿರ್ಪ ಮುಕ್ತಿಸುಖಮಂ ನಶ್ಯತ್ವರಾಪೇಕ್ಷಮಂ ೮೩

ಎನಗೆಂತೆನ್ನಯ ತಂದೆ ಮುನ್ನಮಖಿಳಕ್ಷೋಣೀಮಹಾಭಾರಮಂ
ಮನಮೊಲ್ದಿತ್ತು ತಪೋವನಕ್ಕೆ ನಡೆದಂ ಮತ್ತಂತೆ ನೀನೆನ್ನ ಮೇ
ದಿನಿಯತ್ಯುನ್ನತಭಾರಮಂ ಧರಿಸಿ ರುಂದ್ರಾನಂದದಿಂದಂ ತಪೋ
ವನಕೆನ್ನಂ ಕಳಿಪಿಂತು ಪಾಲಿಸು ಕುಲಾಯಾತಕ್ರಮಾಭಾರಮಂ ೮೪

ವ: ಎಂದು ನುಡಿದ ತಪೋಲಕ್ಷ್ಮೀವಕ್ಷಸ್ಥಲಾಲಿಂಗನಸಮಾಕಾಂಕ್ಷಾಪರಿಲಕ್ಷಿತನ ರಾಜ್ಯಸುಖನಿಷ್ಕಾಂಕ್ಷವ್ಯಾಹಾರಚಾತುರ್ಯಮಂ ಕೇಳ್ದು ಕುಮಾರಂ ಕಾರ್ಮುಗಿಲ ಕಳಗರ್ಜನೆಯಂ ಕೇಳ್ದ ಮರಾಳದಂತೆ ಕಳವಳಿದು ದರಹಾಸವಿಳಾಸಪರಿಸ್ಫುರಣಸ್ಮೇರ ಚಾರುವದನಾರವಿಂದನಾಗಿ ಭೂರಿವಿನಯದಿಂ ನಯಂಬಡೆದ ಮಧುರಗಭೀರ ವಿರಾವದಿಂದಿಂತೆಂದಂ

ಕೆಡದ ವಿಶೇಷಮುಕ್ತಿಸುಖಸೇವನೆಗಾಟಿಸಿ ಸತ್ತಪಂಗಳೊಳ್
ತೊಡರ್ವ ಮನೀಷೆಯಿಂ ತೃಣಸಮಾನಮಿದೆಂದು ಸಮಸ್ತರಾಜ್ಯಮಂ
ಕೆಡುವುದನೊಪ್ಪುಗೊಟ್ಟೆನಗೆ ಪೋದಪೆನೆಂಬುದು ಲೇಸು ಪುತ್ರರೊಳ್
ಕಿಡುವುದನಿತ್ತು ದುಃಖಮನೊಡರ್ಚುವುದುಂ ಪಿತೃಗಳ್ಗೆ ಯೋಗ್ಯಮೇ ೮೫

ತಂದೆಗಳಂತೆ ಮಕ್ಕಳುಗಳಾಚರಿಸಲ್ ನೆಱೆವೇಳ್ಕುಮಾ ನಿಮಿ
ತ್ತಂ ದಮಯುಕ್ತ ನಿನ್ನೊಡನೆ ಸಾಧಿಪೆನಕ್ಷಯಮೋಕ್ಷಸೌಖ್ಯಮಂ
ಸೌಂದರಜೈನದೀಕ್ಷೆಯನದಲ್ಲದೆ ಬೇಱಳಿರಾಜ್ಯಭಾರದೊಳ್
ಸಂದು ಸಮಂತು ಸೇದೆವಡುತಿರ್ಪುದು ಕಜ್ಜಮದಲ್ತು ಭೂಪತೀ ೮೬

ವ: ಇಂತು ನುಡಿದ ಕುಮಾರಶಿರೋಮಣಿಯ ನಿರೀಹಸಮುದೀರಣಮಂ ಕೇಳ್ದು ಧಾರಿಣೀರಮಣಂ ಮನಂವಣೆದು ಮತ್ತಮಿಂತೆಂದಂ

ಪೊರೆಯಂ ಪೊತ್ತು ಕೊರಲ್ ಕರಂ ಕುಸಿದು ಪೋಗುತ್ತಿರ್ದ ತನ್ನಿಷ್ಟನಂ
ಮಱುಗುತ್ತೀಕ್ಷಿಸಿ ನಂಟನಪ್ಪವನುದಾಸೀನತ್ವಮಂ ಮಾಡದಾ

ಪೊರೆಯಂ ತಾಳ್ದುವನೆಂತದಂತದು ಜನಕಂ ಪೊತ್ತಿರ್ದ ಭೂಭಾರಮಂ
ನೆಱೆದಾತ್ಮೋದ್ಭವನಾನದಿರ್ದೊಡಮವಂ ಸತ್ಪುತ್ರನೆಂತಪ್ಪನೋ ೮೭

ವ: ಎನೆ ಕುಮಾರನದಕ್ಕಿಂತೆಂದಂ

ಎಲೆ ನರನಾಥ ನೀಂ ತಳೆದ ಭಾರಮನಾಂ ತಳೆಯಲ್ಕೆ ಶಕ್ತನೇ
ನೆಲನಿದನೆಲ್ಲಮಂ ಸಮದ ದಿಕ್ಕರಿ ಮಾಣದೆ ಪೊತ್ತು ನಿಲ್ಪವೊಲ್
ಕಳಭನುಮೆತ್ತಿಪೊತ್ತು ನಿಲಲಾರ್ತಪುದೇ ಪಿರಿದಾದ ಲೀಲೆಯಿಂ
ನಲಿವವನಲ್ಲಿ ಭಾರಮುಮನರ್ಪಿಸೆ ದುಃಖಿತನಾಗದಿರ್ಪನೇ ೮೮

ಇಳೆಗೀಶ ನಿನ್ನ ರಾಜ್ಯಮ
ನೊಳಕೊಳಲಾಂ ಬಾಳಕಂ ಸಮರ್ಥನೆ ಜಗದೊಳ್
ಕುಲನದಿಗಳ ಜಳಭರಮಂ
ಜಳನಿಧಿಯೊಳಕೊಳ್ವ ತೆಱದೆ ಕೊಳನಾಂತಪುದೇ ೮೯

ವ: ಎನಲರಸನಾ ಯುವರಾಜಂಗಿಂತೆಂದನನಂತವೀರ್ಯನುಂ ಚರಮಾಂಗ ನುಮಪ್ಪ ನಿನಗೆ ಧಾರಿಣೀಧರಣಂ ಭಾರಮಲ್ತಿದು ನಿನ್ನ ವಿನಯವೃತ್ತಿಗುಚಿತಮಪ್ಪ ದಾದೊಡಂ

ಪಿರಿಯಂ ಕಿಱಿಯನುಮೆಂಬೀ
ಪರಿಭೇದಂ ಹೇತುದಲ್ತು ನೆಱೆರಾಜ್ಯೋ(?)
ದ್ಧರಣಕ್ಕೆ ನೀನೆ ಕಿಱಿದುಂ
ಪಿರಿದೆಂಬುದು ಯುಕ್ತಮಲ್ತು ಚಿಂತಾಮಣಿಯಂ ೯೦

ಅನುರಾಗದೇಳ್ಗೆ ಸರಸಿಜ
ವನಕ್ಕೆ ದಿನಪತಿಯಿನಲ್ಲದಕ್ಕುಮೆ ಪೆಱರಿಂ
ಜನನಿಚಯಕ್ಕನುರಾಗಂ
ಜಿನಪತಿ ನಿನ್ನಿಂದಮಲ್ಲದಕ್ಕುಮೆ ಪೆಱರಿಂ ೯೧

ವ: ಆವಾವಧೂಕಂ ನಯಸಂಪಾದಕವಾಕ್ಯಮಂ ನುಡಿದು ಮತ್ತಂ ತನ್ನಿಯಾಮಕವಚನ ದಿಂದಿಂತೆಂದಂ

ಮಕ್ಕಳ್ಗಿತ್ತು ಸಮಸ್ತರಾಜ್ಯಪದಮಂ ಕೊಳ್ವರ್ ತಪೋರಾಜ್ಯಮಂ
ತಕ್ಕಿಂ ಮುನ್ನಿನ ಭೂಮಿಪರ್ ಬಿಡದೆ ನಮ್ಮಿಕ್ಷ್ವಾಕುವಂಶೋದ್ಭವರ್
ಮಿಕ್ಕೀ ಪದ್ಧತಿಗಾಗಿ ನಿನ್ನ ನೆರೆಯಲ್ವೇಡಣ್ಣಯೆನ್ನಾಣೆ ಮ
ದ್ವಾಕ್ಯೋಲ್ಲಂಘನಮಲ್ತು ಯುಕ್ತಮದಱಿಂ ಕೈಕೊಳ್ ಧರಾಭಾರಮಂ ೯೨

ವ: ಎಂದು ಮಱುವಾತಿಂಗೆಡೆಗುಡದಂತೆ ತಾನುಮೊಡಂಬಡಿಸಿ ಧರ್ಮನಾಥಕುಮಾರಂ

ರಾಜ್ಯಪದಸ್ಥನಪ್ಪಂತುಮಾಡಿ ಹರ್ಷಪ್ರಕರ್ಷದೊಳ್ ಕೂಡಿ ಬಳಿಯಂ ಕನಕಕರ್ಪೂರಧಾರಾವರ್ಷಂ ತನ್ನಿಕ್ಕೆಲದೊಳ್ ಕುಳ್ಳಿರ್ದ ಪಾರ್ಥಿವಪುತ್ರರ ನಗೆಮೊಗಂಗಳಂ ನೋಡಿ ನಿಮಗೀತಂ ಜಗತ್ತ್ರಿತಯೈಕಮಿತ್ರನುಂ ಜ್ಞಾನತ್ರಯಪಾತ್ರನುಂ ಕೋಪ ಪ್ರಸಾದಸ್ವತಂತ್ರನುಂ ಪರಿರಂಜಿತನಿಜತಂತ್ರನುಮಪ್ಪುದು ಕಾರಣಮೆನ್ನಿಂ ಮಿಗಿಲಾಗಿ ನೂರ್ಮಡಿ ವ್ಯಾಮೋಹಭೂಮಿಯುಂ ಕುಲಸ್ವಾಮಿಯಾಗಲ್ ತಕ್ಕಂ ನೀವೀತನನೋಲ ಯಿಸಿಯೈಹಿಕಾಮುತ್ರಿಕ ಸುಖಾನುಭೋಗಭಾಗಿಗಳಾಗಿಯೆಂದು ನುಡಿಯುತ್ತುಮಿರೆ

ವಿದಿತಜಿನಾಗನುಸ್ಥಿತಿಕರುನ್ನತ ಚಾರುಚರಿತ್ರಸಂಪದಾ
ಸ್ಪದರೆನಿಪನ್ವಯಾಗತಮಹಾಪುರುಷರ್ ನಡೆತಂದು ದೀಕ್ಷೆಗೊ
ಳ್ವಿದನೆಸಗಿರ್ದ ಕಾರಣದೆ ನೀವೆ ಕೃತಾರ್ಥರೆನುತ್ತುಮುದ್ಧಸ
ಮ್ಮದಕರವಾಕ್ಯದಿಂ ನೃಪನ ಚಿತ್ತವಿಕಾಸಮನುಂಟುಮಾಡಿದರ್ ೯೩

ಉತ್ತಮಜೈನದೀಕ್ಷೆ ದೊರೆಕೊಳ್ಳ್ಗು ಕರಂ ಲಘುಕರ್ಮಿಯಾದ ರ
ತ್ನತ್ರಯಭೂಷಣಂಬಡೆದ ನಿಮ್ಮವೊಲಿರ್ದ ಸುಭವ್ಯರಿಂಗೆ ತ
ನ್ಮಾತ್ರಮೆನಿಪ್ಪರಿಂಗೆ ದೊರೆಕೊಳ್ಳದದೀ ಬಗೆಯಿಂದೆ ನೀವು ಲೋ
ಕತ್ರಯಪೂಜ್ಯರಾದಿರೆನುತುಂ ಸಲೆ ಸಂಸ್ತುತಿಗೆಯ್ದರಾಕ್ಷಣಂ ೯೪

ವ: ಇಂತರಸನೊಡರ್ಚಿದ ತಪಶ್ಚರಣೋದ್ಯಕ್ಕಾನುಕೂಲ್ಯಮನಲರ್ಚುವ ನುಡಿಯಂ ಮನಮನುಲ್ಲಾಸಿಸುತ್ತುಮಿರ್ದ ಕುಲವೃದ್ಧರಂ ಕರ್ಪೂರತಾಂಬೂಲ ಸಮರ್ಪಣದಿಂ ತಣಿಪಿಸಿ ಬೀಳ್ಕೊಟ್ಟು ಕಳಿಪಿ ತದನಂತರಂ

ಅವನೀಚಕ್ರಾಧಿನಾಥಂ ಕರಸಿ ಬೆಸಸಿದಂ ತನ್ನ ಸೇನಾಧಿಪಂಗೊ
ಪ್ಪುವಿನಂ ಶ್ರೀಧರ್ಮನಾಥಸ್ಥಿರತರವರ ಸಾಮ್ರಾಜ್ಯಪಟ್ಟಾಭಿಷೇಕೋ
ತ್ಸವಮಂ ಮಾಡಲ್ಕೆ ನೀಂ ನಿರ್ಮಿಸು ನಿರತಿಶಯಸ್ಥೂಳಮಾಣಿಕ್ಯಜಾಳ
ಚ್ಛವಿಭಾಸ್ವನ್ಮಂಡಪಸ್ಥಾನಮನಭಿನವ ಕೌಶಲ್ಯಸಾಕಲ್ಯದಿಂದಂ ೯೫

ವ: ಎಂದು ನಿರೂಪಂಗೆಯ್ವುದುಮವಂ ಪೋಗಿರಾಜಮಂದಿರದತೀವಾ ಮಧ್ಯ ಮಾದೊಂದು ಮಧ್ಯಪ್ರದೇಶದೊಳ್ ಕರುಮಾಡದ ಮುಂದೆ

ಪಿರಿದುಂ ಚಿತ್ರಿಸಿದಿಂದ್ರನೀಲಮಯ ನಾನಾಭಿತ್ತಿಯಿಂ ತೋರಣೋ
ತ್ಕರದಿಂದಂ ಕಳಶಂಗಳಿಂ ಜಯಪತಾಕಾನೀಕದಿಂ ರಂಜಿತಂ
ವರಮುಕ್ತಾಫಳಮಾಳಿಕಾಕೃತಮಹಾಲಂಭೂಷ ಸಂಭೂಷಿತಂ
ಕರಮೊಪ್ಪಿತ್ತು ಚಮೂವರಾಭಿರಚಿತಂ ಪಟ್ಟಾಭಿಷೇಕಸ್ಥಳಂ ೯೬

ಕಳಶಂ ಕನ್ನಡಿ ಸುಪ್ರತಿಷ್ಠೆ ಗುಡಿ ಭೃಂಗಾರಂ ಮಹಾಚಾಮರಂ
ವಿಳಸದ್ವಿಜನಮೆಯ್ದೆ ಬೆಳ್ಗೊಡೆಯುಮೆಂಬೀ ಚೆಲ್ವನಾದಷ್ಟಮಂ

ಗಳಮಂ ತಾಳ್ದಿದ ವೇದಿಕಾವಳಿಯದಿಂ ಮಾಣಿಕ್ಯಸತ್ಕೇವಣೋ
ಜ್ಜ್ವಳ ನಾನಾವಿಧ ಶಸ್ತವಸ್ತುಚಯದಿಂ ಕಣ್ಗೊಂಡುದಾ ಮಂಡಪಂ ೯೭

ಕನದುರುಮಣಿಮಯಮಂಡಪ
ಮನುಪಮಸಾಮ್ರಾಜ್ಯಲಕ್ಷ್ಮಿಯೊಳ್ ಮದುವೆಯ ಶೋ
ಭನಮಂಡಪಮೆಂಬಂತಿರೆ
ಜನಕ್ಕೆ ಮೋಹನಮನಿತ್ತುದಚ್ಚರಿಯಿಂದಂ ೯೮

ವ: ಇಂತು ಗೀರ್ವಾಣವಿಗುರ್ವಿತಮೆಂಬಂತಿರಿಂಬುವೆತ್ತು ನಿರ್ಮಿಸಿದ ಸಾಮ್ರಾಜ್ಯ ಪಟ್ಟಾಭಿಷೇಕಮಂಡಪದ ನಟ್ಟನಡುವೆ ಪಟ್ಟಮಯಬಂಧಸಮಯಸಮುಚಿತ ಮಂಗಳೋಪಕರಣಂಗಳಿಂ ತುಂಬಿದ ಮಧುರಮಾದ ಗೋಮೇಧವೇದೀವಳಿಯದ ಮೇಲೆ

ಪಟ್ಟದ ಸಿಂಹಾಸನಮಳ
ವಟ್ಟುದು ಪರಿಪರಿಯ ಮಾಣಿಕದ ಪೊಳೆಪಿಂದಂ
ದಿಟ್ಟಿಗೆ ಕಡುಚೋಜಿಗಮಂ
ಪುಟ್ಟಿಸುತುಂ ಬಹಳಕಿರಣಜಾಳನಿಮಗ್ನಂ ೯೯

ಅದಱ ನಾಲ್ದೆಸೆಯೊಳಂ ಚೆ
ಲ್ವೊದವಿದ ಪಲತೆಱದ ಪಲ್ಲವಂಗಳ ಬಳಸಿಂ
ಪುದಿದ ಘನಚ್ಛತ್ರಂಗಳ್
ಸದಮಳಮುಕ್ತಾಮಯಂಗಳೆಸೆದವು ನಾಲ್ಕುಂ ೧೦೦

ನವಕುಳಿಶಕುಳವಿಕೀಲಿತ
ಸುವರ್ಣಮಯದಂಡಮಂಡಿತಸ್ಥೂಳಮಹಾ
ಧವಳತರ ಚಾರುಚಾಮರ
ನಿವಹಂ ಪೊಳೆಯುತ್ತುಮಿರ್ದುದದಱಿದ್ದೆಸೆಯೊಳ್ ೧೦೧

ಕೆಲದಲ್ಲಿ ಖಳ್ಗರತ್ನಂ
ನಿಲಿಸಿರ್ದುದು ಪೂಜೆವೆರಸು ಥಳಥಳಿಸುತ್ತುಂ
ಸಲೆವಿಜಯಲಕ್ಷ್ಮಿ ಕನ್ನೆ
ಯ್ದಲಮಾಲೆಯನಿರಿಸಿದಂತೆ ಕುವರಂಗೀಯಲ್ ೧೦೨

ವ: ಆ ಸಿಂಹವಿಷ್ಟರದ ಮುಂದಣ ಸನ್ನಿಕೃಷ್ಟದೆಡೆಯೊಳ್ ಮಂಜುಳಮಾಗಿ ಪುಂಜಿಸಿದ ಚಂಚತ್ಪಂಚರತ್ನಚಯೋಪರಿ ಪ್ರಪಂಚಿತ ಸ್ವಸ್ತಿಕವಿಸ್ತಾರಸಂಸ್ಥಾಪಿತ ಪಾಂಡುರ

ಪಂಚತಂತುಪರಿವೇಷ್ಟನ ನಿಯಂತ್ರಿತ ಸರ್ವೌಷಧಿಸಾರಸಮ್ಮಿಶ್ರಿತ ಸರಿತ್ಸಲಿಲಸಂಪೂರ್ಣ ಮಣಿದರ್ಪಣಸಮರ್ಪಣ ಸುಮನೋಮಹೀರುಹ ಸುಮನೋಮಾಲಾಸಮಾಲಂಬನಾದಿ ನಾನಾವಿಧ ರಚನಾವಿಶೇಷಪರಿಭೂಷಿತ ಚತುಃಕೋಣಕಳಶವಿಳಾಸಪರಿಕಳಿತವರ್ಣಿಜನಾಭಿವರ್ಣ್ಯಮಾನ ಸೌವರ್ಣಪೂರ್ಣಕಳಶಂ ಮನಂಗೊಳಿಸುತ್ತುಮಿರೆ

ಬೆಳಗಿನ ಬಳಗಂ ಬಿಡದ
ಗ್ಗಳಿಸಿ ಕವಲ್ತಲ್ಲಿಗಲ್ಲಿಗಂ ಮಡುಗೊಂಡು
ಜ್ವಳಿಸುತ್ತುಮಿರ್ದುದದಱೊಳ್
ಮಳಿನಜನಗೆವೊಯ್ದು ಬೆಳಗನಲ್ಲಿರಿಸುವವೊಲ್ ೧೦೩

ವ: ಇಂತು ವ್ಯವಧಾನಮಾಗಿ ಸಮಗಳಿಸಿದ ನವ್ಯಮಾದ ಸಮುತ್ತುಂಗ ಮಂಗಳ ವಿಧಾನಮನಂಗೀಕರಿಸಿದ ರಾಜ್ಯಾಭಿಷವಣಮಂಡಪಮಗುರ್ವುವಡೆಯೆ

ನೆರೆದಧಿರಾಜರುಂ ಮಕುಟಬದ್ಧರುಮಾಪ್ತಜನಂಗಳುಂ ಮಹ
ತ್ತರರುಮಶೇಷ ಮಂಡಳಿಕರುಂ ನೃಪರುಂ ವರದಂಡನಾಥರುಂ
ಗುರುಗುಣರುಂ ಮಹಾಮಕುಟಬದ್ಧರುಮಾಶ್ರಿತರುಂ ಪ್ರಧಾನರುಂ
ವಿರಚಿಸಲೆಂದು ಬಂದರಿರದಾ ಕುವರಂಗುರುಪಟ್ಟಬಂಧಮಂ ೧೦೪

ವ: ಇಂತು ಬಾಹತ್ತರನಿಯೋಗನಿಯುಕ್ತರೆಲ್ಲಂ ಕೂಡಿ ಬಂದು ಮೊತ್ತಂ ಗೊಂಡಲ್ಲಿ ತಿಂತಿಣಿವೋಗುತ್ತುಮಿರ್ಪುದುಮದಂ ಕೇಳ್ದು ಮಹಾಸೇನ ಮಹಾರಾಜನಾಸ್ಥಾನ ಮಂಡಪದಿಂದೇಳಲೊಡಂ

ಒಡನೆ ತಡೆಯದೇಳ್ವ ಭಟರ ತೊಡರ ಕಡೆಯದುಲಿಗಳಿಂ
ಬಿಡದೆ ಜಡಿದು ನುಡಿದು ನಿಲಿಪ ಪಡಿಯಱರುದ್ಘೋಷದಿಂ
ದೊಡೆಯನಡರ್ದ ಸಿರಿಯ ಪೆಂಪನಡಿಗಡಿಗುಗ್ಘಡಿಸುವಂ
ದೆಡೆವಿಡದೊಳಕೊಂಡುದಾಗಳದು ಸಡಗರದೇಳ್ಗೆಯಂ ೧೦೫

ವ: ಇಂತು ನೂರ್ಮಡಿಯಾಗಿ ಪೆರ್ಮೆವಡೆದು ನಾಡೆಱೆಯನೆಲ್ಲರಂ ಕೂಡಿಕೊಂಡು ನೀಱಿಂ ನಿಜಭುಜನಿವಾಸಿಯಾದ ವಿಜಯಲಕ್ಷ್ಮಿಯಂ ರಕ್ಷಿಸೆಂದು ಸಮರ್ಪಿಸುವಂತೆ ತನ್ನಯ ಬಲದ ಕೆಲದೊಳ್ ಬರುತ್ತುಮಿರ್ದ ಧರ್ಮನಾಥಕುಮಾರನ ಕೆಯ್ಯಂ ಪಿಡಿದು ಪೂವಲಿಯ ಮೇಲೆ ಕೆಂದಳಿರ ಗೊಂದಳಮಂ ಪಸರಿಸುವಂತೆ ಪಳಿಕಿನ ನೆಲದೊಳ್ ಕೇಸಡಿಗಳ ಕೆಂಪಿನ ಸೊಂಪಂ ಸಂಪಾದಿಸುತ್ತುಂ ನಡೆತಪ್ಪೆಡೆಯೊಳೆಡಬಲದಲ್ಲಿ ಪೊಸಪೊಸತಾದ ಮುತ್ತು ಮಾಣಿಕಂಗಳನೆಡೆಗೆಡೆಗೆ ತಡಂಗಲಿಸಿ ನಿಬಿಡಮಾಗಿ ಕೊಯಿದು ಬೆಡಂಗುವಡೆದ ತೊಡವುಗಳಂ ತೊಟ್ಟ ಮಡದಿಯರ್ ಕೆಲರನಂಗಜಜಂಗಮಲತೆಗಳಂತೆ ನವ್ಯರಚನಾ ಸಜ್ಜೀಕೃತಮಜ್ಜನೋಪಕರಣದ್ರವ್ಯಂಗಳಂ ತರಿಸಿ ಕೆಲಂಬರ್

ನಿತಂಬಿನಿಯರ್ ವನಲಕ್ಷ್ಮೀದೇವಿಯರೆಂಬಂತಿರಿಂಬುವೆತ್ತು ಜಂಬೀರ ಜಂಬೂ ನಾರಂಗ ನಾಳಿಕೇರ ಮಾತುಳಂಗ ಧವಳೇಕ್ಷುದಂಡ ಕ್ರಮುಕ ಮುಖ್ಯಫಳಕುಳಂಗಳಿಂ ತೋರ್ಕೆವೆತ್ತ ವಿಚಿತ್ರವಸ್ತ್ರಜಟಿಳೀಕೃತ ಪಟಳಿಕಾಪರಂಪರೆಗಳಂ ತಾಳ್ದಿ ಕೆಲಬರಬಲೆಯರ್ ಮಾಲ್ಯಾಂಗಮಂದಾರಶಾಖೆಗಳೆಂಬಿನಮನಲ್ಪತರ ಪುಷ್ಪಮಾಲಿಕಾಜಾಲಮನಪ್ಪುಕೆಯ್ದು ನೂಪುರಕಳಾಪಝುಣಝುಣಝುಣತ್ಕಾರ ಸ್ವರೂಪಸಮಾಳಾಪಮೇಳಾಪದೊಡನೆ ನಿರೂಪಣಂಗೆಯ್ವಂತಿರ್ದ ಕಾಲ ಪಳಂಚಿನುಂಗುರಗಳಿಂಚರಂಗಳಿಂ ಭೂದೇವಿ ನಿಜಪತಿಯಪ್ಪ ಕುವರನ ಪು[illegible]ದೇಳ್ಗೆಯಂ ಪೊಗಳುತ್ತುಮಿರ್ದಪಳೆಂಬಂತೆ ಬಗೆಗೊಳಿಸುತ್ತುಮಿರೆ ಗಡಣಿಸಿ ಮುಂದೆನಡೆಯಲಭಿನವ ವಿಭವದಿಂ ಮುತ್ತಿ ಚೌಕಸತ್ತಿಗೆಗಳ ತಣ್ಣೆಳಲೊಳನು ಚಳಿಸುವ ಪೊನ್ನಸೀಗುರಿಗಳ ಬಳಗಂಗಳಿಂದಳಂಕೃತನಾಗಿ ಬಂದು ತನ್ಮಂಡಪದೊಳಗೆ ಪೊಕ್ಕು

ವರಸಿಂಹಾಸನದಲ್ಲಿ ಕುಳ್ಳಿದನಧೀಶಂ ಮಂತ್ರಿಸಾಮಂತ ಮೌ
ಲಿ ರಮಾಧಾರಿಗಳೆಲ್ಲರುಂ ನೆಲಸಿದರ್ ಸುತ್ತಂ ಸುವರ್ಣಾದ್ರಿಯಂ
ಪಿರಿದುಂ ಸೇವಿಸಲೆಂದು ಬಂದ ಕುಲಶೈಲೌಘಂಗಳೆಂಬಂದದಿಂ
ಧರಿಸಿರ್ದತ್ತುರುಮಂಗಳೋಪಕರಣದ್ರವ್ಯಂಗಳಂ ಸ್ತ್ರೀಜನಂ ೧೦೬

ವ: ಅಂತು ಚಂದ್ರಸೂರ್ಯರುಮೊಂದಾಗಿರ್ದಂದದಿಂದರಸನುಂ ಕುವರನು ಮೊಂದಾಗಿ ಕುಳ್ಳಿರ್ದ ಸಮಯದೊಳ್ ಮೌಹೂರ್ತಿಕನೊರ್ವಂ ಬಂದು ದೇವ ಶುಭ ಮುಹೂರ್ತಮಾಸನ್ನಮಾದುದೆಂದು ಬಿನ್ನಪಂಗೆಯ್ವುದುಂ ಸಾರ್ವಭೌಮನನುಜ್ಞೆಯಿಂ ಕುಮಾರಂ ಸ್ನಪನಸ್ಥಳಕ್ಕೆ ಬಿಜಯಂಗೆಯ್ದು ಪಳಿಕಿನ ಫಳಕಮನಳಂಕರಿಸಿದಾಗಳ್

ಗುರುಜನಮುಮಾಪ್ತಜನಮುಂ
ಬೆರಸಿ ಧರಾಧೀಶನಂದು ಬಂದೆತ್ತಿದನು
ದ್ಧುರಪೂರ್ಣಕಳಶಮಂ ಪೀ
ವರರಾಜ್ಯಶ್ರೀಗೆ ಕಳಶಮಿಡುವವೊಲಾದಂ ೧೦೭

ಕೆಂದಳಿರ್ದೊಂಗಲೊಳ್ ಪುದಿದು ಕಣ್ಗೊಳಿಪೊಳ್ತನಿವಣ್ಣನಾಂತು ಚೆ
ಲ್ವೊಂದಿದ ಕಲ್ಪಭೂರುಹದೆರಳ್ತುದಿಕೊಂಬುಗಳೆಯ್ದೆ ಮುಟ್ಟೆ ನೀ
ಳ್ದಂದದಿ ಭೂಪಬಾಹುಲತಿಕಾಗ್ರದ ಕೆಂದಳದಲ್ಲಿ ತೋರ್ಪ ಭಾ
ಸೌಂದರಶಾತಕುಂಭಕಳಶಂ ರಮಣೀಯತೆವೆತ್ತುದಾಕ್ಷಣಂ ೧೦೮

ವ: ಅಂತು ಪೊಂಗಳಶಮಂ ನೆಗಪಿ

ಪಲವುಂ ಛತ್ರಂಗಳಂ ತಾಳ್ದೊಡಸಗೆವಜೆಗಳುತ್ತಾಳನಿರ್ಘೋಷಣಂ ಮಾಂ
ಗಳಿಕಾಶೀರ್ವಾದನಾದೋದಯದೊಡನೆ ಪುದುಂಗೊಂಡು ತೀವುತ್ತಿರಲ್ ದಿ

ಕ್ಕುಳಮಂ ರಾಜ್ಯಾಭಿಷೇಕೋತ್ಸವಮನೆಸಗಿದಂ ಧರ್ಮನಾಥಂಗೆ ಗಂಧಾ
ವಿಳನೀರಸ್ಫಾರಧಾರಾವಿರಳವಿಮಳಿನಾ ಪೂರಸಾರಂಗಳಿಂದಂ ೧೦೯

ಪತ್ತುನಖಕಾಂತಿಗಳಿನೊಂ
ಭತ್ತುಮಹಾರತ್ನರುಚಿಗಳಿಂದುದಧಾರಾ
ವೃತ್ತಿಕಳಶಾಂಶುಬಿಂದಿ
ಪ್ಪತ್ತೊಂದನುರೂಪಮಾಗಿಯೆಱಗಿದುದಾಗಳ್ ೧೧೦

ಮೇರುಗಿರಿಶಿಖರಮಂ ಚಂ
ದ್ರೋರುಕಳಾಮಾಳೆ ಬಳಸಿದಂದದೆ ಘನವಾ
ರ್ಧಾರಾಪೂರಂ ಬಂದು ಕು
ಮಾರನ ಮೆಯ್ಯಂ ಸಮಂತು ಬಳಸಿದುದಾದಂ ೧೧೧

ವ: ಬಳಿಯಂ ವಿಳಾಸಿನೀಕುಳಂ ಕುಚಕಳಶವಿಗಳಿತವಿಳಾಸರಸವಿಶೇಷ ದೊಡನೊಡನೆ ಸಂಗಳಿಸಿದ ಪೊಂಗಳಸಂಗಳಿಂದುಗುತಪ್ಪ ಪರಿಮಳಜಳಧಾರೆಗಳಿನಭಿ ಷವಣಮಂ ಮಾಳ್ಪವಸರದೊಳ್

ಕಡೆಗಣ್ಣ ಕಾಂತಿಯುಂ ಮೊಲೆ
ಯೆಡೆ ಚಳಿಸುವ ಮುತ್ತಿನೆಸೆವ ಹಾರಪ್ರಭೆಯುಂ
ಕಡುನೀರಧಾರೆಯಂ ನೂ
ರ್ಮಡಿಯಾಗಿಯೆ ತುಂಬಿದತ್ತು ಕುವರನ ಮೆಯ್ಯೊಳ್ ೧೧೨

ಮುನ್ನಂ ದೇವೇಂದ್ರನತ್ಯಾದರದೊಳೆಸಗಿದಾಶ್ಚರ್ಯ ಜನ್ಮಾಭಿಷೇಕಂ
ಕೆನ್ನಂ ಸಾಮ್ರಾಜ್ಯಪಟ್ಟಾಭಿಷವಮುಮದೆ ಮತ್ತಿನ್ನುಮೇಕೆಂದು ಶೋಭಾ
ಚ್ಛನ್ನಾಶಾಕಾಮಿನೀಸಂತತಿಯುಮುರುನಭಶ್ರೀಯುಮಂದಟ್ಟಹಾಸಾ
ಸನ್ನಾಸ್ಯಂಬೆತ್ತವೊಲೊಪ್ಪಿದುದು ಕುಸುಮವೃಷ್ಟಿಧ್ವನಿಚ್ಛದ್ಮದಿಂದಂ ೧೧೩

ವ: ತದನಂತರಮಲ್ಲಿಂ ಪೊಱಮಟ್ಟು ಪವಳದ ಪಾವುಗೆಯಂ ಮೆಟ್ಟಿನಿಲ್ವುದು ಮಂಗದಟ್ಟಮನಿಕ್ಕಿ ನವ್ಯರಚನಾವಿಚಿತ್ರಿತದಿವ್ಯವಸ್ತ್ರಂಗಳನುಡಿಸಿಯುಂ ಮೆಯ್ವಣ್ಣದ ಬೆರಕೆವೆಳಗಿಂ ತಿಣ್ಣಂ ಕಾಣೆಕೆವೆತ್ತ ಪೊಸಪೊಸಮಾಣಿಕಂಗಳ ಜಾಣೇಱಿದ ಕೇವಣದಿಂದು ಜ್ವಳಿಸುತ್ತುಮಿರ್ದ ಷೋಡಶಾಭರಣಂಗಳಂ ತೊಡಿಸಿಯುಂ ಗಳಸ್ಥಾನವಿಲುಳಿತ ಮಂದಾರ ಮಾಲಾಸ ಮಾಲಂಬನದೊಳೊಂದಿಸಿಯುಮಿಂತತಿಶಯಮಾಗೆಯ್ದೆ ಕೆಯ್ಗೆಯ್ದು ಕುಮಾರನನೊಡ ಗೊಂಡು ಬಂದು ಮಂಗಳವೇದಿಕಾಮಧ್ಯಮನಳಂಕರಿಸಿರ್ದ ಪಟ್ಟದ ಸಿಂಹಾಸನದೊಳ್ ಕುಳ್ಳಿರಿಸಿ ಪರಿಪರಿಯ ನವರತ್ನಂಗಳಾರತಿಗಳಂ ನಿವಾಳಿಸಿ ಪಟಳಿ ಕಾಪಟಳಪರಿಪುಂಜಿತ ಮಾತುಳಂಗ ನಾಳಿಕೇರಾದಿ ನಾನಾವಿಧ ಫಳಾವತರಣಮಂ ನಿರ್ವರ್ತಿಸಿ

ಪೊಳೆವ ನವರತ್ನಪುಂಜಂ
ಗಳಿನೊಪ್ಪುವ ಮಾತುಳಂಗಫಳಮಂಜರಿಯಂ
ವಿಳಸತ್ಕುಮಾರರಚಿತಾಂ
ಜಳಿಪುಟದೊಳ್ ತುಂಬಿದಂ ಸುಮಂತ್ರೋಚ್ಚರಣಂ ೧೧೪

ದೆಸೆಯಂ ದಿಂಕಿಡಿಸುತ್ತಿರಲ್ ಬಹುವಿಧಾತೋದ್ಯತ್ಪ್ರಣಾದಂ ವಿಘೂ
ರ್ಣಿಸೆ ವಿದ್ವಜ್ಜನಸಂಸ್ತವಧ್ವನಿಮಹಾಸಂಗೀತರಾವಂ ವಿರಾ
ಜಿಸೆ ಪೆರ್ಚುತ್ತಿರೆ ಪುಣ್ಯಪಾಠಕರವಂ ಪುತ್ರೋತ್ತಮಾಂಗಾಗ್ರದೊಳ್
ವಸುಧಾನಾಯಕನಿಕ್ಕಿದಂ ಮಕುಟಮಂ ದೇದೀಪ್ಯಮಾನಾಂಶುವಂ ೧೧೫

ವ: ಆ ಮಣಿಮಕುಟ ಶೋಭೆಗೆ ನೆಲಗಟ್ಟಂ ಕಟ್ಟುವಂತೆ

ನೆಟ್ಟನೆ ರಾಜ್ಯಲಕ್ಷ್ಮಿಯ ವಶೀಕರಣಕ್ಕೊಲವಿಂದೆ ರಕ್ಷೆಯಂ
ಕಟ್ಟುವ ಮಾಳ್ಕೆಯಿಂ ವಿಭವಮೆಂಬಮೃತಂ ನೆಲಸಲ್ಕೆ ಕಟ್ಟೆಯಂ
ಕಟ್ಟುವ ಮಾಳ್ಕೆಯಿಂ ಕುವರನುನ್ನತಚಾರುಲಲಾಟಪಟ್ಟದೊಳ್
ಕಟ್ಟಿದನಾ ನೃಪಂ ಪರಸುತುಂ ಚತುರರ್ಣವರಾಜ್ಯಪಟ್ಟಮಂ ೧೧೬

ವ: ಇಂತಾ ಮಹಾಸೇನಮಹಾರಾಜಂ ತನ್ನಯ ತನಯನಪ್ಪ ಧರ್ಮನಾಥ ಕುಮಾರಂಗೆ ಸಕಳಸಾಮ್ರಾಜ್ಯಪಟ್ಟಮಂ ಕಟ್ಟಿ

ಸ್ಥಿರಮಕ್ಕೀ ಪಟ್ಟಮೀ ನಿನ್ನಯ ನೊಸಲೊಳಮೀ ನಿನ್ನ ದೋರ್ದಂಡದೊಳ್ ಪೀ
ವರಧಾತ್ರೀಚಕ್ರಮೆಂದುಂ ನೆಲಸುಗೆ ಧವಳಚ್ಛತ್ರಮೀ ನಿನ್ನ ಮೌಳಿ
ಸ್ಫುರದುದ್ಯದ್ದೀಪ್ತಿಯಂ ಚಿತ್ರಿಸುಗೆ ತಡೆಯದಿಂತೆಂದು ಸತ್ಪುತ್ರನಂ ಬಂ
ಧುರತೇಜಃಪಾತ್ರನಂ ತಾನೊಸೆದು ಪರಸಿದಂ ಭೂಮಿಪಾಲತ್ರಿಣೇತ್ರಂ ೧೧೭

ನೆಲಸಂ ತಾಳಲ್ಕೆ ನೀಂ ನಿನ್ನಯ ವಿಜಯಭುಜಾದಂಡದೊಳ್ ಧರ್ಮನಾಥಾ
ಪಲಕಾಲಂ ಪೊತ್ತಿಕೊಂಡಿರ್ದುರಗಪತಿಗೆ ಭಾರಂ ಕರಂ ಪಿಂಗಿಪೋಕುಂ
ಬಳಿಯಂ ಪದ್ಮಾವತೀಸಂಗತಸುಖಭರಮಂ ಪೆತ್ತು ನಿಶ್ಚಿಂತಮಿರ್ಕುಂ
ಸಲೆನಿದ್ರಾಮುದ್ರೆಯೊಳ್ಪಂಪಡೆದು ಕಮಠನಿರ್ಕುಂ ನಿರಾತಂಕದಿಂದಂ ೧೧೮

ವ: ಇಂತೆಂದು ಪಲವಪ್ಪಾಶೀರ್ವಾದಂಗಳಿಂ ಪರಸಿ

ಪಟ್ಟದ ಕುದುರೆಯನೊಪ್ಪುವ
ಪಟ್ಟದ ಮದದಾನೆಯುಂ ಮಹಾಖಳ್ಗಮುಮಂ
ಪಟ್ಟದ ಗದ್ದಿಗೆಯಂ ನೆಱೆ
ಕೊಟ್ಟಂ ಧವಳಾತಪತ್ರಮಂ ಚಾಮರಮಂ ೧೧೯

ನವರತ್ನದ ಭಂಡಾರಮ
ನವನೀಶ್ವರನಿತ್ತು ಮತ್ತೆ ಸದ್ಧರ್ಮಮನು
ತ್ಸವದಿಂ ಪ್ರತಿಪಾಲಿಸುತುಂ
ಭುವನಮನಾಳೆಂದು ತಂದೆ ಮೋಹದಿನುಸಿರ್ದಂ ೧೨೦

ಪರಿವಾರದ ಕೆಯ್ಯಂ ಪಿಡಿ
ದಿರದಿತ್ತಂ ಮಂತ್ರಿಮಂಡಳಿಕ ಹಿತಸಾಮಂ
ತರನಪ್ಪೈಸಿದನಾಪ್ತನಿ
ಕರಮಂ ಬಂಧುಗಳನಂದು ಕೈಲಡೆಗೊಟ್ಟಂ ೧೨೧

ಮಾಳವಭೂಪನಂ ಬಿಡದೆ ಮನ್ನಿಸು ಗುರ್ಜರರಾಜನಿಚ್ಛೆಯಂ
ಪಾಲಿಸು ಕುಂತಳಕ್ಷಿತಿಪನಂ ಮಿಗೆ ಸಂತಯಿಸಿಂದ್ರಭೂಪನಂ
ಲಾಲಿಸು ಚೋಳಭೂವರನನೇಳಿಸದಿರ್ ಸಲಹೆಂದು ನಾಮಮಂ
ಪೇಳಿಯೆ ಸುಟ್ಟಿತೋ ರಿ ಕುವರಂಗುಸಿರ್ದಂ ಧರಣೀತಳಾಧಿಪಂ ೧೨೨

ಮುಂದೆ ಕರಂಗಳಂ ಮುಗಿದು ನಿಂದವನೀತನವಂತಿವಲ್ಲಭಂ
ಪಿಂದೆ ಸಿತಾತಪತ್ರವನಿವಂ ಪಿಡಿದಂ ಮಗಧಾಧಿನಾಯಕಂ
ಸೌಂದರಚಾಮರಂಬಿಡಿದು ನಿಂದರಿವರ್ ಸಲೆ ಕೀರ ಕೇರಳರ್
ಬಂದವಧಾನಕಾಣಿಕೆಯನೆಂಬವನೀತನುದಾತ್ತನೈಷಧಂ ೧೨೩

ಇವರಾದಿಯಾದ ನೆಱೆನಿ
ನ್ನವರಂ ಪೋಷಿಸುವುದೆಂಬ ತಂದೆಯ ನುಡಿ ಕಡು
ಸವಿಯಾದೊಡಮಾ ಕುವರನ
ಕಿವಿಗಿನಿಸುಂ ಸೊಗಸನಿತ್ತುದಿಲ್ಲಾಕ್ಷಣದೊಳ್ ೧೨೪

ವ: ಇಂತು ಸಮಸ್ತಮನೊಪ್ಪುಗೊಟ್ಟು ಬಳಿಯಂ ಮಹಾಸೇನಮಹಾರಾಜಂ ತತ್ಸಮಯಕ್ಕು
ಚಿತಮಾದ ರಾಜನೀತಿಸಮಾಕಥನಾಭಿರುಚ್ಯಮಾನಮಾನಸನಾಗಿ ಮತ್ತಮಿಂತೆಂದಂ

ಎಲೆ ಧರ್ಮನಾಥ ನೀನು
ಜ್ಜ್ವಳಬೋಧತ್ರಯಮನಾಂತೊಡಂ ಮಗನೆಂಬ
ಗ್ಗಳಮಂ ದೇವಳದೊಳೊಂದಿ
ನಲವಿಂದಂ ರಾಜನೀತಿಯಂ ನಿನಗುಸಿರ್ವೆಂ ೧೨೫

ದಿನಕರನ ಮುಂದೆ ದೀವಿಗೆ
ಯನೆ ತೋಱುವ ಮಾಳ್ಕೆಯಾದೊಡಂ ಕಿಱಿದಂ ಬ

ಲ್ಲನಿತಂ ಪೇಳ್ದಪೆನದು ಮ
ತ್ತೆನಸುಂ ಘನತೀಕ್ಷಣಕ್ಕೆ ಕಾರಣಮಲ್ತೇ ೧೨೬

ವ: ಅದೆಂತೆನೆ

ಅರಿಷಡ್ವರ್ಗ ಜಿಗೀಷುವಪ್ಪುದು ಲಸತ್ತಂಚಾಂಗಮಂತ್ರಾದಿ ತ
ತ್ಪರನಾಗಿರ್ಪುದು ಸರ್ವಸಾಧನವಿಶೇಷಾಭ್ಯಾಸಿಯಾಗಿರ್ಪುದು
ದ್ದುರಶಕ್ತಿತ್ರಯಧಾರಿಯಪ್ಪುದು ಮಹಾಸಪ್ತಾಂಗಸಂವರ್ಧನ
ಸ್ಥಿತನಾಗಿರ್ಪುದು ಸತ್ರಿವರ್ಗಧರನಾಗಿಂತಿರ್ಪುದು ಕ್ಷತ್ರಿಯಂ ೧೨೭

ಪಡುಳಿದನಪ್ಪುದೋಜೆವೆರಸಿರ್ಪುದು ಸಾಮವಿಭೇದದಾನದಂ
ಡದೊಳತಿಪಿಜ್ಞನಪ್ಪುದು ಸುಶಿಕ್ಷಿತನಪ್ಪುದು ರಾಜನೀತಿಗಾ
ಸ್ಪದನೆನಿಸಿರ್ಪುದುನ್ನತವಿಚಾರವಿವೇಕ ನಿಧಾನನಪ್ಪುದು
ನ್ಮದಪರನಪ್ಪುದುದ್ಧನಯವೇದಿಯೆನಿಪ್ಪುದು ರಾಜನಪ್ಪವಂ ೧೨೮

ನುಡಿವುದು ಸತ್ಯಮಂ ಬಿಡದೆ ಬೇಡಿದರ್ಗೀವುದು ಭಾಗಮಂ ಮನಂ
ಗೆಡದಿಪುದೆಯ್ದೆ ಮುಟ್ಟಿದೆಡೆಯೊಳ್ ಮಱೆವೊಕ್ಕರನೊಲ್ದುಕಾಯ್ವುದಾಂ
ತೊಡೆ ಕದನಕ್ಕೊಡರ್ಚುವುದು ದಾನದ ಧರ್ಮದ ಶೀಲದೇಳ್ಗೆಯಂ
ನಡಸುವುದೊಳ್ಗುಣಂಗಳನೆ ತಾಳ್ದುವುದಿಂತಿದು ರಾಜಲಕ್ಷಣಂ ೧೨೯

ಪಿನಯಮನೆಯ್ದೆಮಾಳ್ಪುದಖಿಳಪ್ರಜೆಗಳ್ಗನುಯೋಗ್ಯಮಾಗಿಯಾ
ವಿನಯದಿನೆಲ್ಲರುಂ ಮಿಗೆ ಸುರಾಗಸಮಾಕುಳರಪ್ಪರಾ ಸುರಾ
ಗ ನಿಯತಿಯಿಂದಮಕ್ಕು ನಿನಗರ್ಥವಿಶೇಷದ ಲಾಭಮೆಂತು ವಾ
ರಿನಿಧಿಸುರಾಗಸಂಗತದಿನಿತ್ತುದು ಲಕ್ಷ್ಮಿಯನಶ್ವನಾಗಮಂ ೧೩೦

ತನ್ನೊಳ್ ಸಾಮ್ರಾಜ್ಯಮಿರ್ದುಂ ಪರನ ನೆಲನನಾಕಾಂಕ್ಷಿಸುತ್ತಿರ್ಪ ಭೂಪಾ
ಲಂ ನಾಡೊಳ್ ನಾಡೆಯುಂ ಲಾಘವಮನೆ ಪಡೆಗುಂ ವಿಷ್ಣು ಮೂಲೋಕಮಂ ಸಂ
ಪನ್ನಂ ತಾಳ್ದಿರ್ದೊಡಂ ಕುಕ್ಷಿಯೊಳುಱೆ ಬಲಿಯಂ ಭೂಮಿಯಂ ಬೇಡುವಾಗಳ್
ಕೆನ್ನಂ ತಾನಾಗನೇ ವಾಮನ ಲಸದವತಾರಂ ಘನಾಕಾಂಕ್ಷೆ ಬೇಡ್ಕೆ ೧೩೧

ಪಿರಿದುಂ ಭಂಡಾರಮಂ ಸಂಗ್ರಹಿಸುವುದು ವಿಪತ್ಕಾಲದೊಳ್ ತನ್ನ ರಕ್ಷಾ
ಕರಣಾರ್ಥಂ ಕೋಶಮುಳ್ಳಂಬುಜವನಮನದೇನಾಕ್ರಮಂಗೆಯ್ಗುಮೇ ಷ
ಟ್ಚರಣಂ ನಿಷ್ಕೋಶಮಾಗಿದ್ದರಳಿದುದಮನಾಕ್ರಾಮಣಂಗೆಯ್ದವೊಲ್ ತ
ತ್ಪರಮಾರ್ಥಂ ಲೌಕಿಕಂ ಸಿದ್ಧ್ಯತಿ ನಧನ ಮೃತೇಯೆಂಬ ಸನ್ನೀತಿಯಿಂದಂ ೧೩೨

ಗುಣಿಯೆನಿಪ ಯೋಗ್ಯನಂ ಮ
ತ್ತೆಣಿಸದೆ ದುಷ್ಕಾರ್ಯದಲ್ಲಿ ಯೋಜಿಸುವರಸಂ

ಮಣಿಯಂ ಕಬ್ಬುನದೊಳ್ ಕೇ
ವಣಿಸುವನಂ ಪೋಲ್ಕು ಯುಕ್ತಿಶೂನ್ಯನೆನಿಕ್ಕುಂ ೧೩೩

ಪ್ರಜೆಯಂ ಪಾಲಿಸದಂ ಸ್ವಬಂಧುಚಯಮಂ ತನ್ನಂದದಿಂ ಮಾಡದಂ
ನಿಜಭೃತ್ಯೌಘಮನೆಯ್ದೆಪೋಷಿಸದವಂ ಷಾಡ್ಗುಣ್ಯಸಂಪತ್ತಿಸಂ
ಭಜನಂಗೆಯ್ಯದವಂ ಕೃತಜ್ಞತೆಗನಾಧಾರಂ ದಲಾಗಿರ್ಪವಂ
ವಿಜಯಶ್ರೀಪ್ರಿಯನಲ್ಲದಂ ನರಪನೆಂಬೀ ನಾಮಕೆಂತೊಪ್ಪುವಂ ೧೩೪

ಧರೆಯಂ ರಾಜರನೇಕರಾಳ್ದೊಡಮದಾರೊಂದಾಗಿಯುಂ ಪೋದುದಿ
ಲ್ಲೆರವಾಗಿರ್ದದುಕಾರಣಂ ನೆಲಸಿನಿಂದಿರ್ದಲ್ಲಿಯೆಲ್ಲರ್ಗೆ ಬಂ
ಧುರಸೌಖ್ಯೋನ್ನತಿಯೆಂಬ ತತ್ಫಲಮನಿತ್ತೆಂಟುಂ ದಿಶಾಭಾಗದೊಳ್
ಪರಿಪಂಥಿವ್ರಜನಿರ್ಜಯೋರ್ಜಿತ ಮಹಾಪ್ರಖ್ಯಾತಿಯಂ ಬಿತ್ತು ನೀಂ ೧೩೫

ವ: ಇಂತೆಂದನಂತರಾಜನೀತಿಕಥನದ ಸಮನಂತರಮರಸಂ ನಿರಂತರಿತ ಸಂತೋಷ ದಿಂದಶೇಷಮನೊಪ್ಪುಗೊಡುವುದುಂ

ಪೊಱೆಯಂ ಪೊತ್ತಿರ್ದುದಂ ತಂದಿಳಿಪಿದ ತೆಱದಿಂ ತನ್ನ ಸಾಮ್ರಾಜ್ಯಮಂ ನಾ
ಡೆಱೆಯಂ ಮುಂಕೊಟ್ಟು ಸಂಸದ್ಗೃಹದೊಳಖಿಳಮಂ ಬಿಟ್ಟು ನಿಶ್ಚಿಂತಮಿರ್ದಂ
ನೆಱೆತೇಜಂಬೆತ್ತು ಪುತ್ರಂ ಘನಪರಿಕರಮಂ ಕೂಡಿಕೊಂಡಿರ್ದು ಪೆರ್ಚಂ
ಮಱೆದಂ ಪೂರ್ವಾಹ್ಣದೊಳ್ ಮೂಡುವ ದಿನಕರನುಂ ಚಂದ್ರನುಂ ಕೂಡಿದನ್ನಂ ೧೩೬

ವ: ಮತ್ತಂ ಪಟ್ಟಬದ್ಧೋತ್ಸವದೊಳತೀವಮುಖ್ಯಮಂಗಳಮಾದ ಜಿನ ಪೂಜೋತ್ಸಾಹ ಮನಭಿಪ್ರಖ್ಯಾತರಮಾಗಿಸಲ್ವೇಡಿ ವಸುಧಾನಾಯಕಂ ಸಕಳಪರಿವಾರಂಬೆರಸಿ ವಿಪುಳಕಿರಣಾವಳಿತಮಣಿತೋರಣದೋರಳಿಗಳಿಂ ರಮಣೀಯತೆವೆತ್ತ ವಿಚಿತ್ರಚೈತ್ಯಾ ಲಯಕ್ಕೆ ಬಂದೊಳಗಂ ಪುಗುವುದುಮಲ್ಲಿ

ಪೊಳೆವತ್ಯುನ್ಮುಖವನ್ಮಯೂಖಶಿಬಿಕಾಲೇಖಾವಲಿಖ್ಯೋಧ್ಯಮಂ
ಗಳ ಮಾಣಿಕ್ಯಮಯಪ್ರದೀಪತತಿಗಳ್ ಚೆಲ್ವಾದವಲ್ಲಲ್ಲಿಗಂ
ಕಳಕಳಾಗರು ಧೂಪಧೂಮಲತಿಕಾದಿ ಶ್ಯಾಮಳಸ್ಥೂಳಸ
ತ್ಕಳಧೌತೋಜ್ವಳ ಪೀನಧೂಪಘಟಿಕಾಪೇಟಂಗಳುಂ ರಂಜಿಕುಂ ೧೩೭

ಸುರಭಿಮಳಯರುಹರಪಭೃತ
ಮರಕತಶುಕ್ತಿಗಳುಮಮಳಕಳಮಾಕ್ಷತಮಂ
ಹರಿನೀಲದ ಕರಡಗೆಗಳು
ಮುರುವರ ಮಂದಾರಮಾಲೆಗಳುಮಿರದೆಸೆಗುಂ ೧೩೮

ವ: ಇಂತು ಮನಂಗೊಂಡ ಮಂಡಪದ ನಡುವೆ ಕುಳಸರಿದಮಳಸಲಿಲಸಮ್ಮಿ ಶ್ರೀಕೃತ ಕರ್ಪೂರದಳ ಬಹಳಕಾಂತಿದಂತುರಿತ ಚಂದ್ರಕಾಂತಕಾಂತಕಳಶಸಹಸ್ರಂಗಳ ವಿಳಾಸಮಂ ನೋಡುತ್ತುಂ ಹರ್ಷಪುಳಕಿತವರ್ಷನಾನಂದಬಾಷ್ಪಜಳವಿಲುಳಿತ ವಿಲೋಚನನಾಗಿ ದರ್ಶನಸ್ತವನಮಂ ವಿಸ್ತರಿಸಿ ಪಂಚಪರಮೇಷ್ಠಿಗಳ ಚರಣಕಮಳಂಗಳಿಂ ಗರ್ಘ್ಯಪಾದ್ಯಮನೆತ್ತಿ ಭೂರಿಕ್ಷೀರಸಂಭೃತಗಂಭೀರ ಶಾತಕುಂಭೀಯ ಶುಂಭದ್ಭೃಂಗಾರಮಂ ಪಿಡಿದು

ಸರ್ಕರೆಯಿಂದಮಿಕ್ಷುರಸದಿಂದೆಳನೀರ್ಗಳಿನೊಳ್ಪು ಕೂಡೆ ಕೈ
ಮಿಕ್ಕಭಿರಂಜಿಸಿರ್ಪ ಪೊಸತುಪ್ಪದಿನೊಪ್ಪುವ ಪಾಲಧಾರೆಯಿಂ
ದುಕ್ಕುವ ಚೆಲ್ವ ಘಟ್ಟಿಮೊಸರಿಂದಭಿಷೇಕಮನಂದುಮಾಡಿದಂ
ದಿಕ್ಕುಳದಲ್ಲಿ ಪಂಚವಿಧವಾದ್ಯರವಂ ಬಿಡದುರ್ಣ್ಮೆಪೊರ್ಣ್ಮಲುಂ ೧೩೯

ವ: ಸಮನಂತರಂ

ಅಷ್ಟವಿಧದರ್ಚನೆಗಳಿಂ
ದಷ್ಟಮಹಾಪ್ರಾತಿಹಾರ್ಯಯುತನಂ ಹರ್ಷೋ
ತ್ಕೃಷ್ಟತೆಯಿಂದರ್ಚಿಸಿದಂ
ಶಿಷ್ಟಜನಂಬೆರಸಿ ಭವ್ಯಚೂಡಾರತ್ನಂ ೧೪೦

ವ: ಇಂತು ಮಹಾಮಹಿಮೆಯಿಂ ಮಹೀತ್ರಯಮಹನೀಯ ಜಿನನಾಥಂಗಭಿಷೇಕ ಪೂಜೆಗಳಂ ಶಾಸ್ತ್ರಕ್ರಮಮನತಿಕ್ರಮಿಸದೆ ಮಾಡಿ ಪರಿಲಟಹನಿಟಿಳ ತಟಕುಟ್ಮಳಿ ತಾಂಜಳೀಪುಟಘಟನಾಪ್ರಕಟೀಕೃತವಿನಯವಿನಮಿತೋತ್ತಮಾಂಗಂ ಗಂಧೋದಕಸಿದ್ಧ ಶೇಷಾಕ್ಷತ ಸಮಲಕ್ಷಿತ ಧಮ್ಮಿಲ್ಲಭಾರಸಮುಲ್ಲಸಿತಂ ಜಿನವರಚರಣ ಯುಗಳಪರಿಕಳಿತ ಮಳಯರುಹತಿಳಕವಿಳಸಿತ ವಿಕಚಮುಖಕಮಳಂ ಕ್ಷಿತಿಪತಿತಿಳಕನಾ ಬಸದಿಯ ಮೊಗಸಾಲೆಯೊಳಿಕ್ಕಿದ ಮುತ್ತಿನ ಗದ್ದಿಗೆಯ ಮೇಲೆ ಕುವರಂಬೆರಸಿ ಕುಳ್ಳಿರ್ದು

ಲೋಕದೊಳಗುಳ್ಳ ಪಾತ್ರಾ
ನೀಕಂ ನೆಱೆಯದು ವಿಶಿಷ್ಟದಾನಕ್ಕೆನೆ ಭೂ
ಲೋಕಂ ಕೊಂಡಾಡುವಿನಂ
ಸಾಕೆಂಬನ್ನೆವರಮಿತ್ತನೆಲ್ಲರ್ಗರಸಂ ೧೪೧

ವ: ಇಂತತಿಶಯಮಾಗಿಯೊಸಗೆಗೆ ಪೂಜಿಗಾದರಾರುಮಿಲ್ಲೆಂಬಿನಂ ತನ್ನಯ ಬಂಧು ಸಂದೋಹಕ್ಕೆ ಕಣ್ಮೊಗಂ ನೋಡದೆ ತೊಡಲುಮುಡಲುಮುಣಲುಂ ಕೊಟ್ಟು ಸರ್ವರ್ಗೆ ಸಂತುಷ್ಟಿಯಂ ಪುಟ್ಟಿಸದನಂತರಂ ಜಿನಾಯತನಮಂ ಪೊಱಮಟ್ಟು ನಿಜನಿವಾಸಕ್ಕೆ ಬಿಜಯಂಗೆಯ್ದು ಜಗದೊಡಗೂಡಿಯಮೃತಾಹಾರಮನಾರೋಗಿಸಿ ಕೈಘಟ್ಟಿಗೊಂಡು ಹಸ್ತಪ್ರಕ್ಷಾಲನಂಗೆಯ್ದು ಕರ್ಪೂರತಾಂಬೂಳಚರ್ವಣದಿಂದಂತರಂಗದೊಳೊಂದಿದ

ರಾಗರಸಪೂರಮಂ ಪೊಱಸೂಸುವಂತಿರಧರ ಪ್ರದೇಶಮಂ ರಾಗರಂಜಿತಂ ಮಾಡುತ್ತುಂ ಪಳಿಕಿನ ನೆಲದೊಳ್ ಮೆಲ್ಲಮೆಲ್ಲನೆ ಲೀಲೆಯಿಂ ನಡಪಾಡಿ ಕಳಮರಾಳಿಕಾತೂಳಜಾಳಪರಿಕಲ್ಪಿತ ಸಪ್ತತಳ್ಪತಳದೊಳೊಪ್ಪದಿಂ ಮಲಂಗಿ ಸುಖದಿಂದಿರುತ್ತಿರೆ

ಸೆಱೆಯಾಗಿರ್ದರಿನೃಪರಂ
ನೆಱೆಬಿಡಿಸಿದನಂದು ಕುಂಜರಂಗಳೊಳಂ ಮ
ತ್ತುಱೆಸಿಕ್ಕಿದ ಪಕ್ಕಿಗಳಂ
ಪೊಱಮಡಿಸಿದನಾಕ್ಷಣಂ ಮಹೀಪತಿತಿಳಕಂ ೧೪೨

ವ: ಆ ಪೊತ್ತಿನೊಳ್

ಬಾಜಿಸುವ ಬದ್ದವಣದಿಂ
ರಾಜಿಸಿ ಕಡುನಿಮಿರ್ವ ಕುಡಿಗಳಿಂ ಠಾಯೆಗಳಂ
ಯೋಜಿಸಿ ಪಾಡುವರಿಂ ವಿ
ಭ್ರಾಜಿಸುಗುಂ ನಾಟ್ಯರಚನೆಯಿಂದಾ ನಗರಂ ೧೪೩

ವ: ಇಂತತ್ಯಂತಸಂಭ್ರಮಮನೊಳಕೊಂಡು ಮಂಗಳಮಯಸ್ವರೂಪಮಾದು ದೆಂಬಂತೆ ಕಣ್ಗೊಂಡ ರತ್ನಪುರದೊಳರಸನಿರ್ದು ಕತಿಪಯದಿನಂಗಳಂ ಕಳಿದೊಂದು ದಿವಸಂ ಸುತನನುಮತದಿಂ ತಪಶ್ಚರಣಗ್ರಹಣಕಾರಣಂ ತಪೋವನಕ್ಕೆ ಪೋಗಲುದ್ಯುಕ್ತನಾಗಿ ರ್ಪುದುಂ

ಒರ್ವಂ ವನಪಾಲಕನಂ
ದುರ್ವಿದ ಮನದಿಂದ ಪಿಡಿದು ಕೆಯ್ಯೊಳ್ ಕುಡಿಯುಮ
ನುರ್ವೀಶನ ಗೃಹಧಾರಾ
ಖರ್ವಸ್ಥಾನಕ್ಕೆ ಬೇಗದಿಂದಂ ಬಂದಂ ೧೪೪

ವ: ಬರೆ ದೌವಾರಿಕಂ ಪೋಗಿ ನರವರಂಗೆ ಬಿನ್ನಪಂಗೆಯ್ಯೆ ಬರವೇಳೆನಲಾತನ ಮನೋರಥರಥಕ್ಕೆ ಸಾರಥಿಯಾಗಿ ಬರ್ಪಂತು ಬಂದು ವಿನಯವಿನಮಿತೋತ್ತಮಾಂಗನ ಕಾಲಸಂಜಾತಪುಷ್ಪಪಲ್ಲವಂಗಳಂ ಕಾಣಿಕೆಯಂ ಕೊಟ್ಟು ಬಿನ್ನಪಮೆಂದಿಂತೆಂದಂ

ಯಮಧರಭಟ್ಟಾರಕರು
ತ್ತಮಮುನಿಸಮುದಾಯಸಹಿತರೆಳ್ತಂದೀ ನ
ಮ್ಮಮಿತವನಮೆಂಬ ವನದೊಳ್
ಸಮಭಾವದಿನಿರ್ದರಾಗಮಕ್ರಮದಿಂದಂ ೧೪೫

ವ: ಎಂದು ಬಿನ್ನೈಸಲೊಡಮಾಸನದಿನೆಳ್ದು ತದ್ದಿಶಾಮುಖಕ್ಕಭಿಮುಖನಾಗಿಯಾ ಭೂಮೀಶಂ ಮೂಮೆ ಪೊಡವಟ್ಟು ಬಂದವಂಗಂಗಚಿತ್ತಮನಿತ್ತು ತನ್ನ ಬಗೆಗನು ಕೂಲಮಪ್ಪ ಕಾರ್ಯಮಾದುದೆಂದು ಪರಮಾನಂದಪರಿಕಳಿತನಾಗಿ

ಸೆಱೆಯೊಳ್ ಬೇಸಱುತಿರ್ದ ಮತ್ತಗಜಮೆಂತಾಲಾನಮಂ ಕಿಳ್ತು ಮ
ತ್ತುಱೆ ಸುತ್ತಿರ್ದ ತೊಡರ್ಪುಮಂ ಪಱಿದು ಸೌಖ್ಯೋಜೃಂಬನಕ್ಕಾಗಿ ತಾಂ
ತಱಿಸಂದೋವದೆ ಪೋಪವೊಲ್ ನರಪನುಂ ದುರ್ಮೋಹಪಾಶಂಗಳಂ
ಪಱಿದೀಡಾಡಿ ತಪೋವನಕ್ಕೆ ನಡೆದಂ ವೈರಾಗ್ಯಪಾರಾಯಣಂ ೧೪೬

ವ: ಆ ಸಮಯದೊಳ್

ಮಾತಂಗಸ್ಪರ್ಶನಮ[ದ]
ಪೂತರ್ಗಮಯೋಗ್ಯಮೆಂದು ನರಪತಿ ಬಿಟ್ಟಂ
ನೂತಗಜಾರೋಹಣಮಂ
ಸಾತಿಶಯರ್ಗುಚಿತಮಲ್ತು ನೀಚಸ್ಪರ್ಶಂ ೧೪೭

ಕೀಳಂ ಕೂಡಿದ ಕುದುರೆಯ
ಮೇಲೇಱುವುದುಚಿತಮಲ್ತು ಸತ್ಪುರುಷಂಗೆಂ
ದಾಳೋಚಿಸಿ ಸಕಳೋರ್ವೀ
ಪಾಳಂ ಬಿಟ್ಟಂ ತುರಂಗಮಾರೋಹಣಮಂ ೧೪೮

ವ: ಇಂತೆಲ್ಲಾ ವಾಹನಂಗಳನೊಲ್ಲದೆ ಪಾದಮಾರ್ಗದಿಂ ನಡೆದುಪೋಗುತ್ತು ಮಿರ್ದ ಜನಕನಂ ಭೂಮಂಡಳಾಖಂಡಳಂ ಕಂಡು

ತಂದೆಯಗಲ್ಕೆಯೆಂಬ ತಱಿಕೆಂಡದ ಪಿಂಡು ಕುಮಾರಚಿತ್ತದೊಳ್
ಸಂಧಿಸಿ ಕೂಡೆ ತಂದಿರಿಸಿದಂತೆ ಕರಂ ಕನಲುತ್ತಿರಲ್ ಮನಂ
ಬೆಂದವೊಲಾಗಿ ನೊಂದು ಮಱುಗುತ್ತುಮಿರಲ್ ಕಱಿದಂ ವಿವೇಕದೊಂ
ದಂದಮನೆಯ್ದೆ ತೋಱದಱಿವುಂ ಕಡುದುಃಖಿತನಾದನಾಕ್ಷಣಂ ೧೪೯

ವ: ಇಂತು ಸಂತಾಪಂಬಡುತ್ತುಂ ತಂದೆಯ ಪಿಂದುಗೊಂಡು ಪೋಗುತ್ತು ಮಿರ್ದ ಧರ್ಮನಾಥಕುಮಾರನಂ ಸಾಂತವಚನದಿಂದಿಳಾಕಾಂತಂ ಸಂತಯಿಸಲೊಡಂ

ತುಂಬಿದ ಕಣ್ಣನೀರ್ಬಿಡಿದು ಪಾಯ್ವೆರ್ದೆ ಪೊಣ್ಮುವ ಗಗ್ಗರಿಕ್ಕೆ ಹಾ
ಯೆಂಬ ನಿನಾದಮಂದು ಮಿಗಲಿನ್ನೆಮಗಾರ್ ಶರಣೆಮ್ಮನಿತ್ತಬಾ
ಯೆಂಬವರಾರೊಯೆಂದು ಸಲೆಬಾಯ್ವಿಡುತುಂ ನಡೆತಂದರಾ ಗುಣಾ
ಲಂಬನ ಪಿಂದೆ ಸಂಗಡಿಸಿ ಪೆಂಡಿರ ಪಿಂಡುಗಳುಂ ಪ್ರಧಾನರುಂ ೧೫೦

ನೆನೆನೆನೆದಾಳ್ದನ ಗುಣಮಂ
ಜನಮನಿತುಂ ಮನದೊಳಳಲನೆಯ್ದುತ್ತಿರ್ದ
ತ್ತನಲನೊಳಗಳುರ್ವ ಹತ್ತಿಯ
ಘನರಾಶಿಯ ತೆಱದಿನಾ ನೃಪಂ ಪೋಪಾಗಳ್ ೧೫೧

ವ: ಇಂತು ಪಲುಂಬಿ ಪಂಬಲಿಸಿ ಬಿನ್ನನೆ ಬರುತ್ತುಮಿರ್ದ ಸಕಳಪರಿಜನ ಪುರಜನ ನಿಯೋಗಿಜನ ಬಂಧುಜನಂಗಳನುಪಲಾಲಿಸಿ ಲೋಕತ್ರಯೈಕಸ್ವಾಮಿಯಪ್ಪ ಧರ್ಮನಾಥಕುಮಾರಂ ನಿಮ್ಮಂ ಪಾಲನಂಗೆಯ್ವುಪನದಕ್ಕುಮ್ಮಳಿಸಲ್ವೇಡೆಂದು ಪೇಳುತ್ತುಂ ನಿಲ್ಲಿ ನಿಲ್ಲಿಯೆಂದು ನಿಲಿಸಿದೊಡಂ ನಿಲ್ಲದೆ ಕಿಱಿದಂತರಂ ಪೋಗಿ ತಪೋವನಮಂ ಪೊಕ್ಕದಱೊಳತಿಪಾವನಮುಮಜಂತುಕಮುಮಾದ ರಮಣೀಯಮಣಿಶಿಲಾಮಯ ಪ್ರದೇಶದೊಳ್

ಸಮತೆಯೊಳೊಂದಿದ ಜಿನಮುನಿ
ಸಮುದಾಯದ ನಟ್ಟನಡುವೆ ಭಟ್ಟಾರಕರಂ
ರಮಣೀಯಗುಣಾಕರರಂ
ಪ್ರಮಾಣಪುರುಷಂ ನಿರೀಕ್ಷಿಸಿದನತಿಮುದದಿಂ ೧೫೬

ವ: ಆಕ್ಷಣಂ ಕೈಗಳಂ ಮುಗಿದು ಜಯಜಯಯೆಂದುಚ್ಚರಿಸುತ್ತುಂ ಮುಟ್ಟಿದ ಮೋಹದಿಂ ಮುಟ್ಟೆವಂದು

ವಿನಯದ ಭಾರದಿಂದೆಱಗುವಂತೆ ಮುನೀಶ್ವರಪಾದಪಂಕಜ
ಕ್ಕನುಪಮಭಕ್ತಿಯಿಂದೆಱಗಿದಂ ಧರಣೀಪತಿ ಪಂಚಮುಷ್ಟಿಯಿಂ
ದನವಧಿಧರ್ಮವೃದ್ಧಿರವಮುಣ್ಮೆ ಕರಂ ಪೊಱಪೊಣ್ಮೆದತ್ತು ಪಾ
ವನಕರುಣಾಂಬುರಾಶಿಯ ಗಭೀರಸುಘೋಷಣಮೆಂಬ ಮಾಳ್ಕೆಯಿಂ ೧೫೭

ವ: ಮತ್ತಮಾ ನೃಪೋತ್ತಮಂ ಭಕ್ತಿಮಯಮೂರ್ತಿವೆತ್ತನೆಂಬಂತೆ ಬಿತ್ತರದಿಂ ಧರಿತ್ರಿಯೊಳ್ ಮುಂದೆ ಕುಳ್ಳಿರ್ದ ಮುಕುಳಿತಕರಸರೋಜನಾಗಿ ಬಿನ್ನಪಮೆಂದಿಂತೆಂದಂ

ಎತ್ತಾನುಮೊರ್ಮೆ ಪುಣ್ಯಾ
ಯತ್ತತೆಯಿಂದಾವನೊರ್ವನುಂ ನಿಮ್ಮನೆ ನೆನೆ
ವುತ್ತಿರ್ದಡಕ್ಕುಮಿಗೆ ಕೃತ
ಕೃತ್ಯಂ ಕಂಡೆಱಗಿ ಸೇವಿಪನನೇವೇಳ್ವೆಂ ೧೫೮

ಕರುಣಿಗಳೆತ್ತುವರ್ ಕೆಳಗೆ ಬಿಳ್ದವರಂ ಮುನಿನಾಥ ನೀಂ ಕೃಪಾ
ಶರನಿಧಿಚಂದ್ರ ನಾಂ ಭವಸಮುದ್ರದ ಮಧ್ಯದೊಳೆಯ್ದೆ ಬಿಳ್ದು ಪೀ
ವರತರದುಃಖದಿಂ ನಮೆವುತಿರ್ದೆನಗಿತ್ತುಱು'ಜೈನದೀಕ್ಷೆಯೆಂ
ಬುರು ಸುಬಹಿತ್ರಮಂ ಕಡೆಗೆ ದಾಂಟಿಸಿ ಸತ್ಸುಖಿನೆನ್ನನಾಗಿಸಾ ೧೫೯

ಶುದ್ಧಜಿನದೀಕ್ಷೆಯಂ ಕೊ
ಟ್ಟುದ್ಧರಿಸುವುದೆನ್ನನೀ ಮಹಾಸಂಸೃತಿಯಿಂ
ವೃದ್ಧಕಾರುಣ್ಯಬುದ್ಧಿಯಿ
ನಿದ್ಧ ವಿಬೋಧಪ್ರಕಾಶ ಮುನಿಕುಳತಿಳಕಾ ೧೬೦

ವ: ಎಂದು ನುಡಿವ ಧರಣೀರಮಣ ವಿನಯೋದೀರಣಮಂ ತಪೋರಮಣಂ ಕೇಳ್ದು ಕಡುನಲಿದು ಮತ್ತಮಿಂತೆಂದಂ

ಮದಮನೊದವಿಸುವ ಸಾಮ್ರಾ
ಜ್ಯದೊಳಿರ್ದೊಡಮಿಾ ವಿಶೇಷವಿನಯಂ ದೊರೆಕೊಂ
ಡುದುಮಿಾ ನೃಪಂಗೆ ಪುಣ್ಯಾ
ಸ್ಪದನಾಗಿರ್ದಂಗೆ ಕೂಡುಗುಂ ಕಡುವಿನಯಂ ೧೬೧

ತಪದುಗ್ರಪರೀಷಹಮುಂ
ನೃಪವರಕೋಮಳಶರೀರಮುಂ ಸೈರಿಸಲಾ
ರ್ತಪುದೆ ಜಿನಧರ್ಮಮಂ ಪೆ
ರ್ಚಿಪುದುಂ ಜನತಾಪ್ರಪಾಲನಮೆ ತಪಮಲ್ತೇ ೧೬೨

ವ: ಅದುಕಾರಣಂ ತಪದ ಗೊಡವೆ ಬೇಡೆಂದು ಬಿಡೆ ಜಡಿದು ನುಡಿವ ಸಂಯಮಿಗಳೊಡೆಯನ ಮಾತಿಂಗೆಡೆಗುಡದೆ ನಾಡೊಡೆಯಂ ತಪಶ್ಚರಣಗ್ರಹಣಕಾರಣಂ ಕಟ್ಟಾಗ್ರಹಂಗೆಯ್ದು ಭಟ್ಟಾರಕರಂ ಪ್ರಾರ್ಥಿಸಿ

ಪಱಿದಿಕ್ಕಿದನಾಗಳ್ ನಾ
ಡೆಱೆಯಂ ಘನಕೇಶಪಾಶಮಂ ಮುನಿಪದದೊಳ್
ನೆಱೆಸಂಸಾರದ ಬೇರಂ
ಪಱಿದಿಕ್ಕುವ ಮಾಳ್ಕೆಯಿಂ ದೃಢೀಕೃತಚಿತ್ತಂ ೧೬೩

ವ: ಇಂತು ಮಹಾಸೇನಮಹಾರಾಜಂ ಮಹಾವ್ರತಧಾರಿಯಾಗಲೊಡಮೊಡನೆ ಬಂದ ಸುತಯುವತೀಜ್ಞಾತಿಪ್ರಕೃತಿಪ್ರಜಾಪ್ರಭೃತಿ ಸಮಸ್ತಜನಂಗಳ್ ಮಱುಗುತ್ತುಂ ಮಗುಳ್ದು ಪೋಪುದುಮಿತ್ತಲ್

ಅಂಬರಮಂ ಬಿಟ್ಟಂ ಸಂ
ಧ್ಯಾಂಬುಜಸಖನಂತೆ ಶಿಶಿರಋತುವಿನ ತೆಱದಿಂ
ದಿಂಬಿನೊಳೊಳಕೊಂಡಂ ತಪ
ಮಂ ಬಿರಯಿಯ ಮಾಳ್ಕೆಯಿಂದೆ ಮುಕ್ತಾಭರಣಂ ೧೬೪

ಪರಮಾರ್ಥಮನಾದಂ ಸಾ
ವರಿಸುತ್ತುಂ ವಿಷಯಬಾಧೆಯಂ ಮಾಣಿಸುತುಂ
ನೆರೆದರಿಯಂ ಕಡಿಸುತ್ತುಂ
ಸರಿಯಾದಂ ನೃಪತಿಗಾ ಮುನೀಶಂ ತಪದೊಳ್ ೧೬೫

ಬಿಡದೀರಾಱುತಪಃಪ್ರಭಾವದೊದವಂ ತಾಳ್ದಂ ಷಡಾವಶ್ಯಕ
ಕ್ಕೆಡೆಗೊಟ್ಟಂ ದಶಧರ್ಮಮಂ ತಳೆದನೈದಾಚಾರಮಂ ತಾಳ್ದಿದಂ
ಪಡೆದಂ ಮೂಱಿರ ಗುಪ್ತಿಯಂ ಪಡೆದು ಮೂವತ್ತಾಱು ಭಾಸ್ವದ್ಗುಣ
ಕ್ಕೊಡೆಯಂ ಯೋಗಿವರಂ ನಿಮಿರ್ಚಿದನಿದಂ ಕರ್ಮಕ್ಷಯೋಪಾಯಮಂ ೧೬೬

ವ: ಇಂತು ಸಕಳಗುಣಗಣಮಣಿಮಯಾಭರಣಕಿರಣರಮಣೀಯತನು ತನ್ಮುನೀಶ್ವರರ ಜಿನಮಾರ್ಗೋಕ್ತ ಪರಮತಪಃಪ್ರಭಾವಕ್ರಮಮನನುಕ್ರಮದಿಂದನುಷ್ಠಿಸಿ ಗರಿಷ್ಠ ಧರ್ಮಶುಕ್ಲಧ್ಯಾನನಿಷ್ಠಾಧಿಷ್ಠಿತನಾಗಿ ಕಡೆಯೊಳಖಿಳಕರ್ಮಮಳಮಂ ನಿರ್ಮೂಳನಂ ಗೆಯ್ದು ಮುಕ್ತ್ಯಂಗನಾಸಮಾಲಿಂಗನಭಂಗಿಯನಂಗೀಕರಿಸುವುದುಮಿತ್ತಲ್

ತಂದೆಯಗಲ್ಕೆಯಿಂದೊದವುತಿರ್ದ ಮನಃಪರಿತಾಪದಾಹಮಂ
ನಂದಿಸಿದಂ ಮಹೋಪಸಮಭಾವಲಸತ್ಪರಿಣಾಮವಾರಿಯಿಂ
ಬೆಂದ ಚತುರ್ಗತಿಪ್ರಕೃತಿಸಂಸ್ಥಿತಿವೇದಿಯೆನಿಪ್ಪ ಧರ್ಮನಾ
ಥಂ ದಲಪಾಸ್ತಮಾನಸಸಮುದ್ಧೃತಮೋವಿಕೃತಿಭ್ರಮಾಧಿಕಂ ೧೬೭

ಭೇದಜ್ಞಾನನಿಧಾನಂ
ಬೋಧತ್ರಯಾಧಾರಿಯೆನಿಪ ಕುವರನ ಹೃದಯದೊ
ಳಾದಪುದೇ ಶೋಕಂ ಪರಿ
ಶೋಧಿತನಿರ್ಮಳಸುವಸ್ತುವೇಂ ಕದಡುಗುಮೇ ೧೬೮

ಧರೆಯೆಂಬ ತರುಣಿ ನರಪನ
ವಿರಹದ ಸಂತಾಪದೇಳ್ಗೆಯಂ ಮಳ್ಗಿಸಿದಳ್
ಪಿರಿದಾದ ದಾನಧಾರಾ
ಪರಿಷೇಕ ನಿಷೇವೆಯಿಂ ಕುಮಾರಾಗ್ರಣಿಯಾ ೧೬೯

ವ: ಬಳಿಯಮಾ ಧರ್ಮನಾಥಕುಮಾರಂ ದಿನಮುಖಸರೋಜಾಕರದಂತೆ ವಿಕಚಿತಾಶಯನಾಗಿ ದುಷ್ಟನಿಗ್ರಹಶಿಷ್ಟಪ್ರತಿಪಾಲನವಿಧಾನದಿಂ ರಾಜ್ಯಂಗೆಯ್ಯುತ್ತುಮಿರೆ

ಬಱಿನೆಂತುಂ ತೋಱಿದನ್ಯಾಯದ ನಡೆನುಡಿ ಮತ್ತಿಲ್ಲ ಕೇಡೆಂಬುದಂತಾಂ
ಕಿಱಿದಾನುಂ ಪೊರ್ದದಾರ್ತಂ ಪೊರೆಯದು ರುಜೆಯುಂ ಕಾಡದಾಪತ್ತಿದೂರಂ
ಸೆಱೆಕೊಳ್ ಬೆರ್ಚೆಂಬಿದಿಲ್ಲಂ ಪರನೃಪಬಲಸಂಘಟ್ಟದಿಂದಪ್ಪಪಾಯಂ
ಮಱೆದುಂ ಕೈಗೂಡದೆಂದುಂ ನಿಜಜನಪದಮಂ ಪಾಲಿಸಲ್ ಧರ್ಮನಾಥಂ ೧೭೦

ಅನುರಾಗಂ ಪ್ರಜೆಗಳ್ಗೆ ಪುಟ್ಟಿದುದು ಸದ್ಧರ್ಮಕ್ಕೆ ಮತ್ತೆಳ್ತರಂ
ಘನಮಾಗಿರ್ದುದು ಸರ್ವದೇಶದೊಳಮೆಲ್ಲಾ ಧಾನ್ಯಸಂಪತ್ತಿವ
ರ್ಧನಮಾಯ್ತುತ್ಕಟಮಾಗಿ ಧರ್ಮಜಿನನಾಥಂ ಪ್ರೀತಿಯಿಂ ರಾಜ್ಯಪಾ
ಲನಮಂ ಮಾಡುವ ಪೊತ್ತಿನಲ್ಲಿ ಪಿರಿದೇನುತ್ಸಾಹಮಂ ಪೆರ್ಚದೋ ೧೭೧

ನೀತಿಯುತಮಾಗಿಯುಂ ದಲ
ನೀತಿಸಮನ್ವಿತಮುಮಾಯ್ತು ಸುಖಭಾಜನಕಂ
ಭೂತಿಯುತಮಾಗಿಯುಂ ತದ
ಭೂತಿಸಮನ್ವಿತಮುಮಾಯ್ತು ಧರ್ಮನ ರಾಜ್ಯಂ ೧೭೨

ಗುಣದಿಂ ಕಟ್ಟಿದನಾ ನೃಪಂ ನಿಜಭುಜಾಸ್ತಂಭಾಗ್ರದೊಳ್ ಸರ್ವಧಾ
ರಿಣಿಯಂ ಮಾಡಿ ಸುಲೀಲೆಯಿಂ ಕರಿಣಿಯಂ ಸಾರಕ್ಷಣಂಗೆಯ್ವನಂ
ದಣುಗಿಂವಲ್ಲದೊಡಂತು ಭೂವರರ ಮತ್ತೇಭಂಗಳೆಲ್ಲಾ ದಿಶಾಂ
ಗಣದಿಂ ಪಾಗುಡಮೆಂಬಿದೊಂದು ನೆವದಿಂದಿಂತೆಂದು ಬಂದಿರ್ದುವೋ ೧೭೩

ಪಿಡಿದು ಕರವಾಳಮಂ ಮ
ತ್ತೊಡರಿಸದ ಪರಾಗಮಂ ವರೋರುಸ್ಥಳದೊಳ್
ಮಡಗಿ ಸುಕೋಮಳಕರಮಂ
ಮಡದಿಯವೊಲ್ ಭೂಮಿಯಂ ನೃಪಂ ಭೋಗಿಸಿದಂ ೧೭೪

ವ: ಇಂತು ಜಗತ್ತ್ರಯಜನತಾಸಂಪೂಜ್ಯಮಾನ ಧರ್ಮಜಿನರಾಜಂ ಪ್ರಾಜ್ಯಮಾದ ಸಕಳಸಾಮ್ರಾಜ್ಯಮಂ ನಿಷ್ಕಂಟಕಮಾಗಿಯಾಳುತ್ತುಮಿರ್ಪ ಪೊತ್ತಿನೊಳ್

ಸುರಕಾಂತಾಜನಮಿಂದ್ರನೊಂದು ಬೆಸದಿಂದಂ ಬಂದು ಸಂಧ್ಯಾತ್ರಯಾಂ
ತರದೊಳ್ ಪಾಡಿಯುಮಾಡಿಯುಂ ಮಣಿಮಯಾಳಂಕಾರಸಂದೋಹದಿಂ
ಪಿರಿದುಂ ಭೂಷಿಸಿಯುಂ ವಿನೋದಿಪುದಱಿಂದಾನಂದಮಂ ತಾಳ್ದಿದಂ
ಪರಿರಾಜನ್ಮಣಿಕುಂಡಳಂ ವಿಶದಕೀರ್ತಿವ್ಯಾಪ್ತದಿಙ್ಮಂಡಳಂ ೧೭೫

ವ: ಅಂತುಮಲ್ಲದೆಯುಂ

ತಣಿವುತ್ತಿರ್ದಂ ಸುಸೌಖ್ಯೋದಯದ ಮಹಿಮೆಯಿಂ ಸಂತತಂ ಧರ್ಮನಾಥಂ
ಗುಣಮಾಣಿಕ್ಯಾಕರಂ ಸತ್ಪುರುಷಪರಿಷದಾಸೇವ್ಯಮಾನಾಂಘ್ರಿಯುಗ್ಮಂ
ಪ್ರಣುತೋದ್ಯದ್ಧ್ಯಾನಕಂ ಬಾಹುಬಲಿಸುಕವಿರಾಜಂ ಕಳಾವತ್ಸಮಾಜಾ
ಗ್ರಣಿ ಸಮ್ಯಕ್ತ್ವಪ್ರಭಾವಾನ್ವಿತಚರಿತವಹಂ ಚಾತುರೀಜನ್ಮಗೇಹಂ ೧೭೬

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮಜಿನ ಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವಪ್ರಸಾದಸಂಪಾದಪಾದ ನಿಧಾನದೀಪವರ್ತಿಯುಭಯಭಾಷಾ ಕವಿಚಕ್ರವರ್ತಿ ಬಾಹುಬಲಿಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್ ಧರ್ಮನಾಥಕುಮಾರ ಪಟ್ಟಬದ್ಧೋತ್ಸವ ಪರಿವ್ಯಾವರ್ಣನಂ ದ್ವಾದಶಾಶ್ವಾಸಂ.

ತ್ರಯೋದಶಾಶ್ವಾಸಂ

ಶ್ರೀರಾಮಾರಮಣಂ ಧ
ರ್ಮಾರಾಮವಸಂತನೆಯ್ದಿದಂ ಸಂತಸಮಂ
ಕಾರುಣ್ಯದ ಕಣಿ ಜನಸುರ
ಭೂರುಹಕಂ ಸರಸಚತುರಕವಿಕುಳತಿಳಕಂ ೧

ವ: ಮತ್ತಮೊಂದುದಿವಸಮಾ ಧರ್ಮನಾಥಮಹಾರಾಜಂ ಸಮಸ್ತ ಸೌವಸ್ತಿಕಪ್ರಸ್ತೂಯಮಾನ ಬಿರುದಾವಳೀಸಮನ್ವಿತನನ್ವಿತರಾಜನ್ಯಕಮಕುಟವರ್ಧನ ಪ್ರಧಾನಪುರುಷಪುರಸ್ಸರಮಾಸ್ಥಾನಮಂಡಪಕೆಳ್ತಂದದಱ ನಟ್ಟನಡುವೊಪ್ಪವಿಟ್ಟ ಮಾಣಿಕದ ಬೊಟ್ಟೆಂಬಂತೆ ನೇಸರ್ಪಟ್ಟು ಥಳಥಳಿಸಿ ಪೊಳೆವ ಮಣಿಮಯಸಿಂಹಾಸನಮನಳಂಕರಿಸಿ ನೋಳ್ಪರ ಕಣ್ಗಳಿಂಗೆಡ್ಡಮಾಗಿರ್ದೊಡ್ಡೋಲಗಂಗೊಟ್ಟು ಲೀಲೆಯಿಂದಿರ್ಪುದುಂ

ಅಸಮಸುಷೇಣಚಮೂಪನ
ಬೆಸದಿಂದಂ ಬಂದು ದೂತನೊರ್ವಂ ಬಾಗಿಲೊ
ಳೆಸೆದಿರ್ದಂ ಕುಡಿಯಂ ಪಿಡಿ
ದೆಸದಿರೆ ಮೊಗದಲ್ಲಿ ರಾಗರಸಮತಿಶಯದಿಂ ೨

ವ: ಅನೇಕರಾಜನಿಕರಪ್ರವರ್ತಿತಸಂಗ್ರಾಮವಾರ್ತಾಕಥನಾತುರೀಭೂತನುಂ ಮಹಾಸಚಿವಸಮುಚಿತವೇಷವಿಶೇಷವಿನೂತನುಮಪ್ಪ ಪೂತಮತಿಯೆಂಬ ದೂತಮುಖ್ಯನ ಬರವಂ ದೌವಾರಿಕವಿಜ್ಞಾಪನಪರಿಜ್ಞಾತವೃತ್ತಾಂತಸ್ವರೂಪನಾದ ದೇವನವಸರಂಗೊಟ್ಟು ಬರಿಸಿ ಕಾಣಿಸಿಕೊಳಲೊಡಮಾತನತೀವಪ್ರಶ್ರಯಪರಿಮಿಶ್ರಿತನಿರ್ಭರಭಕ್ತಿಯಿಂ ಸಾಷ್ಟಾಂಗಪ್ರಣತನಾದಿಂಬಳಿಯಂ ಪ್ರತಿಹಸ್ತಂ ಸ್ವಹಸ್ತದೊಳ್ ಪಿಡಿದಿರ್ದ ಪಾಗುಡಂಗಳಂ ಕಾಣಿಕೆಯಂ ಕೊಟ್ಟು ಚಾರುಕರ್ಪೂರಪಾರಿಪರಿಕಳಿತತಾಂಬೂಳಮಂ ಕಳೆದುಕೊಂಡು ದೇವ ರಾಜವಲ್ಲಭಭ್ರೂವಲ್ಲರೀಸಮುಲ್ಲೋಲನಭೇದಸಂಜ್ಞಿತತದ್ಯೋಗ್ಯಸ್ಥಾನದೊಳ್ ಕುಳ್ಳಿರ್ದು ತಾಂ ತಂದ ಬಿನ್ನವತ್ತಳೆಯಂ ಸಂಧಿವಿಗ್ರಹಿಯ ಕೈಗೆ ನೀಡಲವನದನೋದೆ ತತ್ಪತ್ರಲೇಖಾರ್ಥಮನತಿವ್ಯಕ್ತಮಾಗಱಿದು ಮತ್ತೆ ಕೆಲದ ಮಹತ್ತರನೊರ್ವಂ ಬಿತ್ತರಂಬೆತ್ತು

ಮುಖವಾರ್ತೆಯಂ ಪೇಳ್ದು ಸಭೆಯನಭಿರಂಜಿಸದೆನಲೊಡಮವಂ ತನ್ನ ಸೀರೆಯ ಸೆಱಂಗನಧರಪಲ್ಲವದಂತಿಕಕ್ಕೆ ಮೆಲ್ಲನೆ ತಂದು ಬಿನ್ನಪಮೆಂದಿಂತೆಂದಂ

ಒಡೆಯರುನುಜ್ಞೆಯಂ ಪಡೆದು ದೂತವರಂ ಕ್ರಮದಿಂದೆ ಪೇಳ್ದನೊ
ಳ್ನುಡಿಗಳನೆಯ್ದೆಕಾಳೆಗದ ಸಂಸ್ಥಿತಿಯಂ ಮೊದಲಿಂದೆ ನಾಡೆಯುಂ
ಕಡೆವರಮಂದು ಕೇಳ್ವ ಪರಿಷಜ್ಜನದಿಂದ್ರಿಯಮೆಲ್ಲಮಂ ಸಮಂ
ತೊಡರಿಸಿದತ್ತು ಕರ್ಣಮಯಮೊಂದೆ ದಲಿಂದ್ರಿಯಮೆಂಬ ಶಂಕೆಯಂ ೩

ವೀರರಸಪ್ರಸರಂ ಪರಿ
ವಾರಶ್ರುತಿಪಥದೆ ಪೋಗಿ ಪೊಕ್ಕಾಶಯದೊಳ್
ಪೂರ್ಯೆಸಿ ನಟ್ಟು ನಿಲುವಂ
ತೋರಂತಭಿವರ್ಣಿಸಲ್ಕುಪಕ್ರಮಿಸುವುದುಂ ೪

ವ: ಆಗಳಾ ಸಭಾಜನಮೆಲ್ಲಂ ಸಂಗ್ರಾಮರಂಗಾಡಂಬರವಿಸ್ತರಣಶ್ರವಣದತ್ತಾವಧಾನಮಾಗಿ ಏಕಾಗ್ರನಿಷ್ಠೆಯಿಂದಿರುತ್ತುಮಿರೆ ಸಮೀಚೀನವಚನರಚನಾತಿಚತುರನೆನಿಪ ಚರವರನಿಂತೆಂದು

ಅವಧಾನ ದೇವ ಚಿತ್ತೈ
ಸುವುದೆನ್ನಯ ಬಿನ್ನಪಂಗಳಂ ಕೃಪೆಯಿಂದಂ
ಭವದೀಯಚಮೂನಾಥಂ
ತವಿಸಿದನಲ್ಲಿರ್ದು ಸಕಳಕಾರ್ಯಂಗಳುಮಂ ೫

ವ: ಅಂತಖಿಳ ರಾಜಕಾರ್ಯಕಾರಣಕರಣಾನಂತರಮಾ ಸುಷೇಣನೆಂಬ ಸೇನಾಪತಿಮುಖ್ಯಂ ಪ್ರತಾಪರಾಜನಂತಿಕಕ್ಕೆ ಬಂದು ಪ್ರಯಾಣೋತ್ಸುಕ ವಚನಂಗಳಂ ನುಡಿಯಲೊಡ ಮಾತನಾತಂಗೆ ತೊಡಲುಮುಡಲುಂ ಪಿರಿದಾಗಿತ್ತು ಮನ್ನಿಸಿ ಬೀಳ್ಕೊಟ್ಟು ಕಳಿಪುವುದುಂ

ಮತ್ತೊಂದತಿಶಯದಿವಸದೊ
ಳುತ್ತಮಸುಮುಹೂರ್ತದೊಳ್ ಸುಷೇಣಚಮೂಪಂ
ಬಿತ್ತರದಿಂ ಪೊಱಮಟ್ಟಂ
ಸುತ್ತಿಬರಲ್ ತನ್ನನಖಿಳಚತುರಂಗಬಲಂ ೬

ವ: ಪಿರಿದುಂ ಪೆರ್ಚಿದ ಪೆಂಪಿನ ಸಂಪದದಿಂ ಸೊಂಪುವಡೆದ ಸಮಸ್ತ ಸೈನ್ಯಂಬೆರಸು ಪುರುಹೂತನೆಂಬಂತಭಿನವವಿಭವದಿಂ ನಿಚ್ಚವಯಣಂಬಂದು ವಿದರ್ಭವಿಷಯದ ಗಡಿಯಂ ದಾಂಟಿ ಭೂರಿವಾರಿಪ್ರವಾಹದಿಂ ಸಾರಮಾದ ಸರಿತ್ತೀರದೊತ್ತುಗೊಂಡು ಬೀಡಂ ಬಿಟ್ಟಿರ್ಪುದುಮನ್ನೆಗಮಿತ್ತಲ್

ಮುಂದೆ ನಿಮ್ಮಡಿಗಳಿಲ್ಲಿಗೆ
ಬಂದಿರ್ದುದನಱಿಯದಾ ಸುಶೃಂಗಾರವತೀ

ಸೌಂದರಿಯ ಕೂಡೆ ನೀವಾ
ನಂದದಿನಲ್ಲಿರ್ದರೆಂದು ಬಗೆದಂದು ಕರಂ ೭

ವ: ಅಲ್ಲಿರ್ದಖಿಳರಾಜಕುಮಾರಪ್ರಕರಮೆಲ್ಲಂ ನಿಧಾನಂಬಡೆಯ ಬಡವ್ಯಂತರ ಸಂತತಿಯಂತೆ ಕಡುಕನಲ್ದು ಪೋಪೆಡೆಯಲ್ಲಿ ತಳ್ತಿಱಿದು ಪಗೆವನ ಪಡೆಯಂ ಪಡಲ್ವಡಿಸಿ ಕನ್ಯಾರತ್ನಮಂ ಪಿಡಿದು ಬಲ್ಪಿಂ ತಪ್ಪುದನೆ ಬಗೆದು ಮಾಮಸಕಂಮಸಗಿ

ಆಗಳನೇಕ ರಾಜಸುಕುಮಾರರೊಳಂ ನೆರೆದೊಂದು ತಾಣದೊಳ್
ಬೇಗದೆ ಕೂಡಿ ಕಾರ್ಯದ ವಿಚಾರನಿಮಿತ್ತಮೆ ಮಂತ್ರಶಾಲೆಯಂ
ರಾಗದೆ ಪೋಗಿ ಪೊಕ್ಕುದು ನಿರಸ್ತಗವಾಕ್ಷಕಮಂ ಪ್ರತಿಧ್ವನಿ
ತ್ಯಾಗಕಮಂತ್ಯಪೇತಶಿಶುಕೀರಕಮಂ ಪರಿಮುಕ್ತಕೋಣಮಂ ೮

ವ: ಇಂತಪ್ಪ ಮಂತಣದ ಮನೆಯೊಳ್ ಕುಳ್ಳಿರ್ದು

ತನ್ನ ಮನಕ್ಕೆ ಬಂದ ಯುವರಾಜಕರಿಂಗೆ ಲತಾಂತಮಾಲೆಯಂ
ಕನ್ಯಕಿ ತತ್ಸ್ವಯಂಬರದೊಳಿಕ್ಕುವ ಬೇವಸದಿಂದೆ ಬಂದಳಂ
ದುರ್ನಯದಿಂದಮೊರ್ವನೆಳದುಯ್ವುದನೀಕ್ಷಿಸಿ ಸುಮ್ಮನಿರ್ದೊಡಂ
ಬನ್ನಮದಕ್ಕು ನಮ್ಮಯ ನೆಗಳ್ತೆಗೆ ಮೊಕ್ಕಳಮೆಂದರೆಲ್ಲರುಂ ೯

ವ: ಮತ್ತಮವರೊಳೊರ್ಬಂ ರಾಜನೀತಿನಿಪುಣನಿಂತೆಂದಂ

ನಂಟಿಂ ಕಾರ್ಯಮನುಂಟುಮಾಳ್ಪುದದು ಸಾಮಂ ಬೇಳ್ಪ ಸದ್ವಸ್ತುವಂ
ಬಂಟರ್ಗಟ್ಟಿ ವಿಭೇದಿಸಿರ್ಪುದದು ಭೇದಂ ಕಪ್ಪಮಂ ಬಲ್ಲಿದರ್
ಗಂಟಂಟಿತ್ತೊಳಗಾಗಿ ಮಾಳ್ಪುದದು ದಾನಂ ಮೂಱುಪಾಯಂಗಳುಂ
ಗೆಂಟಾಗಿರ್ದೆಡೆಯಲ್ಲಿದಿರ್ಚುವುದು ದಂಡಂ ನಾಲ್ಕನುಳ್ಳಂ ನೃಪಂ ೧೦

ನಯದಿಂ ಬೇಡುವನಂತುಮಿಾಯದೊಡೆ ಬಲ್ಪಂ ಮಾಡುವಂ ಬಲ್ಪನೊ
ಟ್ಟಯಿಸುತ್ತಿರ್ದೊಡಿದಿರ್ಚಿ ಕಾದಿ ಮೊನೆಯೊಳ್ ಕೊಂದಿಕ್ಕಿ ಮಾಱಾಂತ ಸೇ
ನೆಯುಮಂ ಮತ್ತಿರದಾಕೆಯಂ ಪಿಡಿದು ತಪ್ಪಂತಂದು ನಂನಮ್ಮ ಬ
ಲ್ಮೆಯುಮಂ ಪೆರ್ಚಿಸಿ ಕೀರ್ತಿಯಂ ಪಡೆವವಿಂತೆಲ್ಲರ್ಗಿದೇಮಂತಣಂ ೧೧

ತಡವಂ ಮಾಡದಿದಕ್ಕೆ ತಕ್ಕುದನೊಡರ್ಚಲ್ವೇಳ್ಕುಮಿಂತೀಕ್ಷಣಂ
ಗಡಿಯಂ ಪೋಗದ ಮುನ್ನಮೇ ಪೊಣರ್ದು ಕನ್ಯಾರತ್ನಮಂ ತಪ್ಪೆ ಪಿ
ನ್ನಡೆಯಿಂ ಕಾಲವಿಲಂಬನಕ್ಕವಸರಂ ತಾನಲ್ತು ಮತ್ತಿಂದು ನಾ
ಡೊಡೆಯಂ ನಿಶ್ಚಯಿಸಿರ್ದವರ್ ತಳರ್ದರಲ್ಲಿಂದಂ ಮನೋರಾಗದಿಂ ೧೨

ಪಿಂಗದೆ ಮದಂ ಸುರಿವ ಮಂಗಳಕಪೋಳದ ಬೆ
ಡಂಗಿನೊಳಕೊಂಡುರುಮತಂಗಬಳದಿಂದಂ
ತುಂಗಶುಭಲಕ್ಷಣಸುಸಂಗತಸಮಸ್ತಪದ
ಯಂಗಕ ಸದಂಗಮ ತುರಂಗಬಳದಿಂದಂ ೧೩

ಸಂಗಳಿಸಿ ವೀರಭಟಪುಂಗವಬಲಂಬೆರಸು
ವಂಗ ಮರು ಕುಂತಳ ಕಳಿಂಗ ವಿಳಸದ್ವೇ
ಶಂಗಳೊಡೆಯರ್ ನೆರೆದು ಪಿಂಗಿ ಪೋಱಮಟ್ಟರುೞ್
ಸಂಗರಕೆ ವಾದ್ಯರುತಿ ನುಂಗೆ ದೆಸೆಯೆಂಟಂ ೧೪

ವ: ಅಂತು ಪೋಱಮಟ್ಟು ಕಡುವೇಗದಿಂ ಪೋಗಿ ಸುಷೇಣಂ ಬಿಟ್ಟ ಬೀಡಿನೆಡೆಯಂ ಮುಟ್ಟೆವಂದು ಪೂರ್ವದಿಕ್ಕೆ ಯೋಜನತ್ರಯಪರಿಯಂತಮಂತ ರಾಳಸ್ಥಳಮಂ ಬಿಟ್ಟು ದುರ್ವಹಮಾದಖರ್ವಸೈನ್ಯಮಂ ಪರ್ವತದರ್ವಾಕ್ತೀರದೊತ್ತು ಗೊಂಡು ಬಿಡಿಸಿ ಮಱುದೆವಸಮಪಾರ ರಾಜಕುಮಾರದೋರಣೆಗಳೆಲ್ಲಮೊಂದಾಗಿ ಕೂಡಿ ಕಾರ್ಯ ಪರ್ಯಾಳೋಚನಂಗೆಯ್ದು ತದ್ವೃತ್ತಾಂತಸೂಚನನಿಮಿತ್ತಂ ಸುಷೇಣನಂತಿಕಕ್ಕೆ ವಿತ್ತನಪ್ಪ ಮಹತ್ತರನೊರ್ವನಂ ಕಳಿಪಲವಂ ಮನೋವೇಗದಿಂ ಪೋಗಿಯರಮನೆಯ ಬಾಗಿಲೊಳ್ ನಿಂದು ತನ್ನಯ ಬರವಂ ಪಡಿಯಱಂಗಱಿಪುವುದುಮರಸನಾದೇಶ ದಿಂದವನನೊಡಗೊಂಡು ಪೋಗಿ ಕಾಣಿಸುವುದುಂ ಸಾಷ್ಟಾಂಗಪ್ರಣುತನಾಗಿ ಬಿನ್ನಪಕ್ಕವಸ ರಂಬಡೆದಿಂತೆಂದು ನುಡಿದಂ

ನೆರೆದೆಲ್ಲಾ ರಾಜತನೂ
ಜರ ಮೊತ್ತಂ ಬುದ್ಧಿಗಲಿಸಿ ನಿಮ್ಮ ಸಮೀಪ
ಕ್ಕುರುಮುದದಿಂದಟ್ಟಿದ
ಪರಿವಾರ್ತೆಯ ತೆಱನನಱಿಪುವೆಂ ಕೇಳಿಯದಂ ೧೫

ಪ್ರಿಯಂಬಡೆದು ಬಂದು ಕೂಡಿದ ಸುರಾಜಪುತ್ರರ್ಕಳೋ
ಳಿಯಂ ಬಿಸುಟು ಧರ್ಮನಾಥಸುಕುಮಾರಕಂಗಿಕ್ಕಿದಳ್
ಸ್ವಯಂಬರದೊಳಾ ಪ್ರತಾಪನೃಪಪುತ್ರಿ ಸತ್ಪುಷ್ಪಮಾ
ಲೆಯಂ ತರುಣಿಮುಗ್ಧೆಯಾಕ್ಷಣಮೆ ಪೋಗಿ ಮತ್ತೆಲ್ಲರುಂ ೧೬

ಮಧ್ಯಸ್ಥವೃತ್ತಿಯಿಂ ಬಂ
ದಿರ್ದ ತನೂದರಿಯನೆಲ್ಲರುಂ ನೋಡುವಿನಂ
ಪ್ರೋದ್ಧತನೊರ್ವಂ ಪಿಡಿದೊ
ಯ್ದುದ್ಯೋಗಮನೆಂತು ನೋಡಿ ಸೈರಿಸಲಕ್ಕುಂ ೧೭

ಎಂದು ಪ್ರಕ್ಷೋಭಿಸಿಯಾ ಶೃಂಗಾರವತೀದೇವಿಯಂ ಬೇಡಿಯಟ್ಟಿದರೆಂದು ಬಿನ್ನಪಂಗೆಯ್ದು ಮತ್ತಮಾ ದೂತಂ ಸಾಮಸಂಪಾದಕವಚನಮನಿಂತೆಂದಂ

ಲೇಸಂ ಮಾಳ್ಪುದು ಹಾನಿವೃದ್ಧಿಯೊಳಮೇಕಪ್ರಾಣನಾಗಿರ್ಪುದು
ದ್ವಾಸಂಗೆಯ್ಯದೆ ಪೊಲ್ಲದಂ ನಡೆವುದಿಷ್ಟಾವಸ್ತುವಂ ಕೊಟ್ಟು ಮ
ತ್ತಾಶಾಪೂರ್ತಿಯನುಂಟುಮಾಳ್ಪುದು ಕರಂ ಬೇಳ್ಪರ್ಥಮಂ ಕೊಳ್ವುದಿಂ
ತೀ ಸಂಸಾರದೊಳಿಪ್ಪ ಸಜ್ಜನರ ಮಿತ್ರತ್ವಕ್ಕಿದೇ ಲಕ್ಷಣಂ ೧೮

: ಅಂತುಮಲ್ಲದೆಯುಂ

ಕೂಡಿದಿಜುಂಪೆಗಳ್ ಪಲವುಮಾದಮೆ ಕೊಂದ[ವು] ಪಾವನೊಂದನೆಂ
ದಾಡುವ ಗಾದೆಯುಂಟದು ನಿಮಿತ್ತಮೆ ಧೀವನ ಸೈನ್ಯನಾಥ ಕೇಳ್
ಬೇಡಂ ಪಲಂಬರೊಳ್ ಪಗೆತನಂ ನೃಪಪುತ್ರಿಯನೊಪ್ಪುಗೊಟ್ಟು ಪೆಂ
ಪೋಡದ ಸಂಪದಂಬೆರಸು ಪೋಪುದು ಲೇಸು ವಿವಾದದಿಂದವೇಂ ೧೯

: ಇಂತೆಂದ ದೂತನ ದುರ್ಭಾಷಣಮಂ ಕೇಳ್ದು ಸರ್ವಂಸಹಾಧಿನಾಥಂ ನಿರ್ಭರಿತ ರೋಷಮಂ ಗರ್ಭೀಕರಿಸಿ ತಲೆಯಂ ತೂಗುತ್ತುಮಿಂತೆಂದಂ

ಆ ಮಾತಂತಿಕ್ಕೆಯನ್ಯಾಯದ ನುಡಿಯನಿದಂ ಬೇಡ ಮಾತಾಡಲೆಮ್ಮು
ದ್ದಾನೋದ್ಯತ್ಪುಣ್ಯದಿಂದಂ ನೃಪತಿತನುಜೆ ಕೈಸಾರ್ದಳೆಯ್ತಂದದಕ್ಕಂ
ನೀಮುಂ ನಿರ್ಭಾಗ್ಯರಾದರ್ ಮಱುಗಿ ಕುದಿದೊಡಂ ಬಕ್ಕುಮೇ ಲೋಕದೊಳ್ ಮ
ತ್ತೇಮಾತೋ ಪುಣ್ಯದೊಳ್ ಪೇಳ್ ಪರಿಕಿಸೆ ಪುರುಡುಂಟೇ ಕರಂ ಸೊಕ್ಕಬೇಡೈ ೨೦

ಉರಿಯ ನಾಲಗೆಯ ತೆಱದಿಂ
ಪಿರಿದುಂ ಪಟುವೆನಿಪ ನಿನ್ನ ನಾಲಗೆ ನಿನ್ನಾ
ಳ್ದರ ಸಿರಿಯಂ ಸುಡದಿರ್ಪುದೆ
ಪರನಾರಿಯ ಬಯಕೆಯಿಂದೆ ಕೆಡನೆ ದಶಾಸ್ಯಂ ೨೧

ವ: ಎಂದು ಮುಳಿಸಂ ಮುಕ್ಕುಳಿಸಿದ ತರ್ಜನೋಕ್ತಿಗಳಿಂ ಸಿಂಗದ ಗರ್ಜನೆ ಯಂತೆ ದಂಡಮನೆ ಗಂಡುಗೆದಱಿ ಮತ್ತಂ ತನ್ನಯ ದುರ್ಜಯಪ್ರತಾಪಲೇಪಮನೆ ತೋಱುತ್ತುಮಿಂತೆಂದಂ

ಬಳಸಿರ್ದಾಳೋಕಿಸುತ್ತಿರ್ಪಖಿಳದಿವಿಜರಿಂಗಪ್ಪಿನಂ ಭೂರಿಕೌತೂ
ಹಳಮಂ ಮಾಱಾಂತ ನಿನ್ನಾಳ್ದರ ಪಡೆಯನಿತಂ ಕೊಂದು ಕೈಹೇಸದೀಗಳ್
ಕಳೆವೆಂ ಕೂರ್ವಾಳ ಬಾಯೊಳ್ ನೆಲಸಿದ ಬಜಿನಂ ಮತ್ತೆ ವೀರಾವತಾರೋ
ಜ್ಜ್ವಳಮತ್ಕೀರ್ತಿಪ್ರಭಾವಂ ಸಕಳಭುವನದೊಳ್ ತೀವುವಂತಾಗಿ ಮಾಳ್ಪೆಂ ೨೨

ಕೆಡುಗಾಲಂ ಬಂದುದಕ್ಕುಂ ತ್ವದಧಿಪತಿಗಿಂತಪ್ಪ ದುರ್ನೀತಿಯಂ ಸಂ
ಗಡಿಸುತ್ತಿರ್ದೀ ನಿಮಿತ್ತಂ ನುಡಿಯಡಕಿಗದೇನುತ್ತಂಗೊಟ್ಟಪೆಂ ನಿ
ನ್ನೊಡೆಯರ್ ಕಾದಲ್ಕೆ ಬಲ್ಲಂ ಪಡೆದೊಡೆ ಬರವೇಳಿಲ್ಲದಿರ್ದಂದು ನಮ್ಮಂ
ಬಿಡದೋಲೈಸಾಳ್ವೆಸಂಗೆಯುತುಮೊಡನಿರವೇಳೆಂದು ಪೇಳ್ದಂ ಚಮೂಪಂ ೨೩

ವ: ವಿನಾಶಕಾಲೇ ವಿಪರೀತಬುದ್ಧಿಯೆಂಬ ನಾಣ್ನುಡಿಯಂ ನನ್ನಿಮಾಡಿದಿರೆಂದು ಪ್ರಗಲ್ಭಂಗಳಪ್ಪುತ್ತರಂಗಳಿಂ ದೂತನ ಮುಖಕ್ಕೆ ಮುದ್ರೆಯನುದ್ಧರಿಸುವುದುಂ

ಕಟ್ಟಾಳಾಗಿಯೆ ಬರವೇಳ್
ನೆಟ್ಟನೆ ನೀ ಪೋಗು ನಾಳೆ ಕಾಳೆಗಮೆನುತುಂ
ಕೊಟ್ಟು ಬೀಳ್ಕೊಟ್ಟರ್ಥಮಮಂ ಬೀ
ಳ್ಕೊಟ್ಟವನಂ ಕಳಿಪಿದಂ ಸುಷೇಣನುದಾರಂ ೨೪

ವ: ಅನಂತರಂ

ಚರನಾಗಳ್ ಪೋಗಿ ಬೇಗಂ ತಡೆಯದೊಡೆಯರಂ ಕಂಡು ತಾಂ ಪೋಗಿ ಬಂದಾ
ಪರಿಯಂ ತದ್ವಾರ್ತೆಯಂ ಬಿನ್ನಯಿಸಿದನುಜ್ ತನ್ನಾಳ್ದರಿಂಗಂದು ತತ್ಸಾಂ
ದರಿಯಂ ತಾನೀಯನಿತ್ತಂ ಕದನಮನದಟಂ ನಾಳೆ ರುಪ್ಪೆತ್ತಿ ಬಪ್ಪಂ
ಭರದಿಂದಂ ಕಾಳಗಕ್ಕಂದಿರದುಸಿರ್ದೊಡೆ ಸನ್ನದ್ಧರಾಗಿದ್ದರೆಲ್ಲಂ ೨೫

ವ: ಅನ್ನೆಗಮಿತ್ತಲಾ ಸುಷೇಣಚಮೂನಾಥನಾಕ್ಷಣಮೆ ಬಲಾಧ್ಯಕ್ಷನಂ ಕರಸಿ ನಾಳೆ ಕಾಳೆಗಮೆಂದು ನಮ್ಮಾ ವಿಜಯಶಿಬಿರದ ಪೆರ್ವಡೆಗೆಲ್ಲಂ ಡುಂಗುರಂಬೊಯ್ದು ಸಾಱೆಸೆಂದು ಬೆಸಸುವುದುಮಾತನಾತನಾಜ್ಞೆಯಂ ನೆತ್ತಿಯೊಳ್ ಪೊತ್ತುಕೊಂಡು ಪೋಗಿಯಂತೆಗೆಯ್ವುದುಮಾಗಳ್

ಉದಯಗಿರೀಂದ್ರದಿಂದೆ ಪೊಱಮಟ್ಟುಮನಂತಪಥಪ್ರಯಾಣದಿಂ
ದೊದವಿದ ಸೇದೆಯಂ ಜಲವಿಲೋಡನದಿಂ ತವಿಪೊಂದುಬುದ್ಧಿ ಚಿ
ತ್ತದೊಳಿರದುಣ್ಮೆ ಪೊಣ್ಮೆ ನಡೆತಪ್ಪವೊಲಂದು ದಿವಾಕರಂ ಸುಶೀ
ಘ್ರದಿ ನಡೆತಂದು ಪಶ್ಚಿಮಸಮುದ್ರದ ಮಧ್ಯದೊಳೆಯ್ದೆ ಮುಳ್ಗಿದಂ ೨೬

ವ: ಅಂತು ನೇಸರ್ಪಡಲೊಡಂ

ರಣಸಂನ್ಯಾಸಮನಪ್ಪುಕೆಯ್ವ ಮಿಗೆ ವೀರಾಳಾಪಮಂ ಕೇಳ್ವ ವಾ
ರಣಮುಂ ವಾಜಿಯುಮಂ ಸಮರ್ಚಿಸುವ ನಾನಾಶಸ್ತ್ರಮಂ
ಪೂಣೆಪ್ಪ ಪ್ರವಿತೋದ್ಯೋಗದಿನಿದ್ದುಮಂದಿನಿರುಳಂ ಪೋಗಾಡಿದರ್ ವೀರರ
ಗ್ರಣಿಗಳ್ ತಾವೆರಡುಂಬಲಂಗಳ ವಿನೈತ್ಯೈಕಾಂಗಸೂರರ್ ಭಟರ್ ೨೭

ವ: ಬಳಿಯಂ ನೇಸಮರ್ಪುಡುವುದುಮಾ ಸುಷೇಣನೆಂಬ ಸೇನಾಧಿಪತಿ ಪ್ರಭಾತಕಾಲ ದೊಳವಶ್ಯಂ ಪ್ರಭಾವನೀಯಮಾದ ಜಿನಪೂಜೋತ್ಸಾಹಮಂ ಮಹಾ ಪ್ರಭಾವನಾ ವಿಭವದಿಂ ಪ್ರಭಾವಿಸಿ ಮತ್ತಂ ಪ್ರತಿಪಕ್ಷ ಕ್ಷತ್ರಿಯಕುಮಾರ ಪಕ್ಷವಿಕ್ಷೇಪಣೋ ದ್ಯುಕ್ತಚಿತ್ತನಾಗಿ ಸಮರಸಮಾರಂಭಸಂರಂಭನಿಬಂಧನೀಭೂತ ನಿಜವಿಜಯಪ್ರಸ್ಥಾನ ಸೂಚಕಸನ್ನಾಹ ಭೇರಿಯಂ ಪೊಯಿಸಿದಾಗಳ್

ದೆಸೆಯೆಂಟುಂ ವಾರ್ಧಿಯೇಳುಂ ಕುಲಗಿರಿಗಳವಾಱುಂ ಸುವರ್ಣಾದ್ರಿಯೈದುಂ
ಶಶಿಭಾಸ್ವದ್ಬಿಂಬನಾಲ್ಕುಂ ಭುವನವಳಯಿಮೂಱುಂ ಪರಿಕ್ಷೋಭದಿಂ ಮಾ
ಮಸಕಂಬೆತ್ತಿರ್ದ ಧಾತ್ರೀಗಗನಕಮೆರಡುಂ ತಮ್ಮೊಳೊಂದಾಗಿ ತಾಂ ಮು
ದ್ರಿಸಿದತ್ತೆಂಬಿನಂ ತುಂಬಿದುದಭಿನವಸನ್ನಾಹಭೇರಿಪ್ರಣಾದಂ ೨೮

ವ: ಎಂತು ಮಂತ್ರವಾದಿಯ ಸಮಾಕರ್ಷಣಮಂತ್ರೋಚ್ಚರಣಧ್ವನಿಯ ಶ್ರವಣದಿಂ ವ್ಯಂತರಸಂತತಿ ನೆರದು ಬರ್ಪುದಂತಿರಾ ತಂತ್ರಾಧಿನಾಥನ ಪೂರ್ಣಮಾನ ವಿಜಯ ಭೇರೀಧ್ವನಿಯ ಪರಿಪೂರ್ಣಸಮಾಕರ್ಣದಿಂದಶೇಷಪರಿವಾರಂ ಪೂರ್ಣಮಾಗಿ ನೆರೆದು ಬರಲೊಡಂ

ಪೊಂಗವಚಂಗಳಂ ಕುಡೆ ಚಮೂಪತಿ ವೀರಭಟರ್ಗೆ ರಾಗದಿಂ
ಪಿಂಗದೆ ತೊಟ್ಟುಕೊಳ್ವ ಪದದಲ್ಲಿ ರಣೋತ್ಸವ ಲಾಭಮಾದುದೆಂ
ದಂಗಮತೀನ ಪುಷ್ಟತೆಯನಾಂತೊಡೆ ಸಲ್ಲದಿರಲ್ಕಮಲ್ಲಿಯು
ತ್ತುಂಗಮನರ್ ಭಟರ್ ಕಿಱಿಯುವೆಂದವನರ್ಥಿಗೆ ಕೊಟ್ಟರಾಕ್ಷಣಂ ೨೯

ವ: ಆಸಮಯದೊಳ್

ಕುದುರೆಯನೆಯ್ದೆ ಹಲ್ಲಣಿಪ ಹಕ್ಕರಿಯಿಕ್ಕುವ ಜಿಂಚೆಯಂ ಮಹಾ
ಮದಕರಿಗೊಲ್ದು ಪಣ್ಣುವ ರಥಾಗ್ರಿಮದಲ್ಲಿ ಶರಂಗಳಂ ಸಮಂ
ತೊದವಿಪ ಜೋಡುಮಂ ತೊಡುವ ಸೀಸಕಮಿಕ್ಕುವ ಯೋಧಕೋಶಮಂ
ಪದುಳಿಸುವಂಗರಕ್ಷಕರನಾಗಿ ಸಸಂಭ್ರಮಮುಣ್ಮೆ ತೆತ್ತಲುಂ ೩೦

ವ: ಅಂತುಮಲ್ಲದೆಯುಂ

ಇನಿತುಂ ಕಾಲಕ್ಕಾದ
ತ್ತನುವರಮಿಂದೆಮ್ಮ ಬಾಹುದಂಡದ ಕಂಡೂ
ಯನಮಂ ಕಳಲ್ಚುವೆಡೆಯಾ
ಯ್ತೆನುತುಂ ಕೊರ್ವುತ್ತುಮಿರ್ದುದಾ ಸುಭಟಜನಂ ೩೧

ವ: ಸಮನಂತರಮಾ ಸುಷೇಣನೆಂಬ ಸೇನಾನಾಥಂ ಥಳಥಳಿಪ ಮಾಣಿಕ್ಯ ಯೂಥ

ಸನಾಥನವೀನನೇಪಥ್ಯರಚನಾವಿಶೇಷ ಪೃಥುಳೀಕೃತ ಸಹಜಸೌಂದರ್ಯ ಸಮುಪಗೂಢನುಂ ರಣಕೇಳೀಕಳಾವಿಳಾಸಪ್ರೌಢನುಂ ಪ್ರವರ್ಧಮಾನಮದ ಪ್ರರೂಢಪಟ್ಟವರ್ಧನ ಗಂಧಸಿಂಧುರಬಂಧುರಸ್ಕಂಧಸಮಾರೂಢನುಮಾಗಿ ಸಂಭ್ರಮ ಪ್ರಾಪ್ತನಿಜಾಪ್ತಬಲಂಬೆರಸು ಹಿತಪುರೋಹಿತಸಮುಪದಿಷ್ಟ ವಿಶಿಷ್ಟಶುಭಮುಹೂರ್ತಂ ನಿಜವಿಜಯಶಿಬಿರಮಂ ಪೊಱಮಟ್ಟು ರಾಜಮಾರ್ಗದಿಂ ಸಂಗ್ರಾಮರಂಗಕ್ಕೆ ನಡೆವಾಗಳ್

ಸಲಹಿದುರುಮೂಲಬಲಮಂ
ಕೆಲದೊಳ್ ಬರವೇಳ ನಡುವೆ ಮಿತ್ರರ ಬಲಮಂ
ಸಲೆಯೋಜೆಸಿಯಾಟವಿಕರ
ಬಲಮಂ ಕಡೆಯೊಳ್ ನಿಯಾಮಿಸಿದನಾ ಭೂಪಂ ೩೨

ಬಿರುದಿನ ತೋರ ಹೊನ್ನಕಡೆಯಂಗಳ ಬಾವುಲಿಯೋಳಿಯೋಳಿಯು
ದ್ದುರುತರ ಝುಂ ಝುಣಾಂ ಝುಣ ಝುಣ ಝುಣ ಝುಂ ಝುಣಮೆಂಬ ರಾವದಿಂ
ಹರಿದಧಿಪರ್ಗೆ ತನ್ನ ಜಯಮಂ ಸಲೆ ಸಾಱುತುಮಿರ್ದುದೆಂಬಿನಂ
ಪರಕಲಿಸೆತ್ತಲುಂ ನಡೆದುಬಂದುದು ಶೂರಪದಾತಿಸೈನ್ಯಕಂ ೩೩

ಕೂಡೆ ತೊಟ್ಟಿರ್ದ ವಜ್ರದ
ಜೋಡುಗಳ ಕವಲ್ತು ಪೊಳೆವ ಬೆಳಗಿನ ಬಳಗಂ
ನಾಡೆಯವಿಮ್ಮಡಿಸಿತ್ತೊ
ಳ್ಪೊಡೆದ ಪಲತೆಱದ ಕೈದುಗಳ ಪೊಳೆಪಿಂದಂ ೩೪

ವ: ಇಂತು ಸಕಳಚಾತುರ್ದಂತಬಲಂ ನೆರೆದು ಸಮರಸನ್ನದ್ಧಮಾಗಿ ದೆಸೆ ಬೆಸಲೆಯಾದಂತೆ ಸುತ್ತಲುಂ ಪಸರಿಸಿ ನಿಬಿಡಮಾಗಿ ಮೋಹರಿಸಿ ನಡೆವೆಡೆಯೊಳ್

ಪಿಂಗಲಿ ಶಾಂತದಲ್ಲಿ ಕಡುಬಿಂಕಮನಾಂತದು ನಿಂದು ಸುಸ್ವರಂ
ಸಂಗಳಿಸುತ್ತಿರಲ್ ಬಳಿದು ಬಾಯ್ಕೊಳುತಿರ್ದುದು ಕೃಷ್ಣಪಕ್ಷಿ ತ
ನ್ನಂಗನೆಯಂ ಪುರಸ್ಸರಿಸಿ ತಮ್ಮೆರಡುಂ ಬಲಚೇಷ್ಟೆಗೆಯ್ವುತುಂ
ಪಿಂಗದೆ ತಾಱನಿತ್ತು ಬೆಳೆಗೆಯ್ಕೊಳಗಿರ್ದುವು ತಮ್ಮೊಳೊಲ್ಮೆಯಿಂ ೩೫

ವ: ಅದಂ ಕಂಡು ಸುಷೇಣನೆಂಬ ಸೇನಾಧಿರಾಜಂಗೆ ವಿಜಯಪರಿಪಿಶು ನಂಗಳಾದ ಮಂಗಳ ಶಕುನಂಗಳನಾಲಿಸುತ್ತುಮವಳೋಕಿಸುತ್ತುಮಿರ್ದ ಸೈನಿಕರೆಲ್ಲಂ ಜಯಜಯಯೆಂದು ದ್ಘೋಷಿಸಿ ಲೇಸುಲೇಸೆಂದು ಮಿಗೆಪೊಗಳ್ವುದನಿಳಾತಳಾಧಿಪಂ ಕೇಳ್ದು ವಿಪುಳಪುಳಕ ಕಳಿಕಾಜಾಳಪರಿಕಳಿತಕಳೇವರನಾಗಿ ಪರಮಾನಂದಮನಪ್ಪುಕೆಯ್ದಿಕ್ಕೆಲನಂ ನೋಡುತ್ತುಂ ಸಡಗರದಿಂ ನಡೆಯೆ

ಅತಿಚಿತ್ರಂಬೆತ್ತ ಸೊಕ್ಕಾನೆಗಳ ನೊಸಲ ಸಿಂಧೂರರಾಗಪ್ರಭಾ ಸಂ
ತತಿಯುಂ ಸನ್ನದ್ಧಘೋಟಪ್ರಕಟವಿಕಟಪರ್ಯಾಣ ನಾನಾಪ್ರಕಾರ

ದ್ಯುತಿಯುಂ ಕೆಂಧೂಳಿಯೊಳ್ ಸಂಗಳಿಸಿ ಪುದಿದು ಚೆಲ್ವಾಯ್ತು ಪೋಪಲ್ಲಿ ಸೇನಾ
ದ್ಭುತದೊಡ್ಡಿಂಗಂದು ಕೆಂಬಟ್ಟೆಯ ಪಸರಿಪ ಮೇಲ್ಗಟ್ಟುಮಂ ಕಟ್ಟಿದನ್ನಂ ೩೬

ವ: ಅದಲ್ಲದೆಯುಂ

ಕೆಂಧೂಳಿ ಮಸಗಿ ಸೈನ್ಯಮ
ನಂದುಱೆ ಮೂವಳಸುವಳಸಿ ಸುತ್ತಲುಮೆಲ್ಲಂ
ಮಂದೈಸಿ ನಿಂದು ಕಱೆದುದು
ಕುಂದದ ನಡೆಗೋಟೆಯೆಂಬ ಶಂಕಾರಸಮಂ ೩೭

ಬಟ್ಟೆಯೊಳಿರ್ದ ಭಾವಿ ಕೆಱೆ ಪಳ್ಳ ಕೊಳಂಗಳ ನೀರನೆಲ್ಲಮಂ
ತೊಟ್ಟನೆ ಪೀರಿ ಬತ್ತಿಸಿದುದಾಕ್ಷಣಮಾ ಘನಸೈನ್ಯಪಾದಸಂ
ಘಟ್ಟನದಿಂದೆ ಪುಟ್ಟಿದ ರಜೋಬ್ರಜಮಾಗಳೆ ದಾನವಾರಿಯಿಂ
ದಿಟ್ಟಳವಾಗಿ ತುಂಬಿಸಿದುದಾನೆಗಳಾವಳಿ ಪಿಂದೆಪೋಗುತುಂ ೩೮

ಆ ರಜದಿಂ ಪೆರ್ಚಿದ ತಮ
ಮೋರಂತಿರೆ ಕಿಡಿಸಿದತ್ತು ರಿಪುಸತ್ವಮನೇಂ
ಕ್ರೂರಮ ಪೆರ್ಚಿರ್ದೊಡೆ ಸಂ
ಹಾರಿಸನೆ ನಿಜಾಗ್ರಜಾತರಾದೊಡಮಾರಂ ೩೯

ಮಿಕ್ಕು ಗಗನದೊಳೆ ಪಾಱುವ
ಪಕ್ಕಿಯುಮಾ ಸೇನೆಯಳವಿಯಂ ಕಾಣದೆ ತೇಂ
ಕಿಕ್ಕಿ ಪತಾಕಾಗ್ರದೊಳಂ
ದಿಕ್ಕೆಂದೊಡೆ ದಳದ ಪವಣನಱಿವವನಾವೊಂ ೪೦

ತೋಱಿಕೆವೆತ್ತ ಭೂರಿತರ ಬಾಡವ ಸಂಸ್ಥಿತಿಯಿಂದಮೊಪ್ಪಿ ಕೂ
ರ್ಪೇಱಿದ ತೀರದಂಬಗಳನೆಯ್ದೊಳಕೊಂಡು ಗಭೀರಘೋಷಮಂ
ಬೀಱಿ ಮಹಾಬಲಂ ಪ್ರಳಯಕಾಲಸಮುದ್ರಮೆ ತನ್ನ ಮೇರೆಯಂ
ಮೀಱಿಬರುತ್ತುಮಿರ್ದ ತೆಱದಿಂದಮಗುರ್ವನದಿತ್ತುದಾಕ್ಷಣಂ ೪೧

ಜವನ ವಿಜೃಂಭಣಮಂ ತೋ
ಱುವ ಮಹಿಮೆಯನಾಂತಕಾರಣಂ ತೆಂಕಣದಿ
ಗ್ವಿವರದ ತೆಱದಿಂದಿರ್ದುದು
ವಿವಿಧಾಳಂಕಾರಮಾನ್ಯಮಾ ಭಟಸೈನ್ಯಂ ೪೨

ಘನತರವಾರಿಯಿಂ ಪಡೆದುದದ್ಭುತಮಂ ಮಳೆಗಾಲಮೆಂಬಿನಂ
ಕನದುರುಮಂಡಳಾಗ್ರರುಚಿ ಭಾಸಿತದಿಙ್ಮುಖಮಾಯ್ತು ತೀವ್ರತೇ

ಜನುದಯಮೆಂಬಿನಂ ಪ್ರಬಳವಾಹಿನಿಯೆಂಬಿನಮಾಯ್ತು ರಾಜಹಂ
ಸ ನವವಿಹಾರಕಂ ಬಹಳಸೇವೆಯದಾವರಿಸಿತ್ತು ಚೋದ್ಯಮಂ ೪೩

ವ: ಇಂತುರ್ಬಿ ಕೊರ್ಬಿ ಬರುತ್ತುಮಿರ್ದ ಪೆರ್ವಡೆಯ ನಟ್ಟನಡುವೆ

ಪಣ್ಣಿದ ಱಂಚೆಯಿಂದೆಸೆವ ಮಿಕ್ಕುಱೆ ಸೊಕ್ಕಿದ ಪಟ್ಟದಾನೆಯಂ
ಬಣ್ಣಿಸಲೇಱೆ ಕೂರಿತೆನಿಪಾಯುಧಮಂ ಪಿಡಿದುದ್ಧವಜ್ರಸಂ
ಕೀರ್ಣಮೆನಿಪ್ಪ ಜೋಡಸಿರದಿಕ್ಕಿಯನೇಕ ರಣಾನಕಸ್ವನಂ
ಘೂರ್ಣಿಸೆ ಬಂದನಂದು ರಣಭೂಮಿಗೆ ಶೂರಸುಷೇಣಸೈನ್ಯಪಂ ೪೪

ಎತ್ತಿದ ಚೆಲ್ವ ಬೆಳ್ಗೊಡೆ ಸುಧಾಕರಬಿಂಬಮಿದೆಂಬ ಶಂಕೆಯಂ
ಚಿತ್ತ್ರಿಸಲ್ ಸುವರ್ಣಮಯದಂಡವಿಮಂಡಿತಚಾರುಚಾಮರಂ
ಸುತ್ತಲುಮೆಲ್ಲಿಯುಂ ಪೊಳೆದು ಸಂಚಳಿಸುತ್ತುಮಿರಲ್ ಸುಷೇಣನೆಂ
ಬುತ್ತಮಸೈನ್ಯನಾಥನುಱದಾಹವಭೂಮಿಯೊಳೊಡ್ಡಿ ನಿಲ್ವುದುಂ ೪೫

ರಕ್ಕಸರಂತೆ ಕಿಚ್ಚಿನುರಿಯಂತೆ ದಲುಗ್ರತೆವೆತ್ತ ವೀರರಂ
ದಿಕ್ಕಲದಲ್ಲಿ ಮತ್ತಮಿರದೊಡ್ಡಿದರೆಯ್ದೆ ವಿರೋಧಿವರ್ಗಮಂ
ತೆಕ್ಕದೆ ಕೊಂದು ಬಿರ್ದುಣಿಸನಿಕ್ಕುವ ಬೇವಸದಿಂ ಜವಂಗೆ ಕೈ
ಮಿಕ್ಕವರಾತ ನಿನ್ನೆರೆಯೊಳಿರ್ದವರಿಂಗೆಣೆಯಾದಕಾರಣಂ ೪೬

ಮೊನೆಯಲ್ಲೆಮ್ಮೊಡನಾರೊ ತಳ್ತಿಱಿವ ಗಂಡರ್ ನಮ್ಮವೊಲ್ ಕಾದುವೊಂ
ದನುವಂ ಬಲ್ಲವರಾರೊ ಮೆಯ್ಗಲಿಗಳುಂ ನಾವಲ್ಲದಿನ್ನಾರೊ ಪೇ
ಳೆನುತುಂ ಮುಖ್ಯಸಮಸ್ತನಾಯಕರಸಂಖ್ಯಾತೋರುಸೈನ್ಯಾವೃತರ್
ಘನಬಾಹಾಬಳರೊಡ್ಡಿ ನಿಂದರುಱದಾ ಸಂಗ್ರಾಮಸಂರಂಭದೊಳ್ ೪೭

ವ: ಮತ್ತಂ ರಿಪುಬಲತಿಮಿರಸಂಹಾರಣಪ್ರವೀಣನೆನಿಪ ಸೂರ್ಯಪ್ರಭನುಂ ಪರಿಪಂಥಿಕರಿಘಟಾವಿಘಟನಪಟುವೆನಿಪ ಸಿಂಹರಥನುಂ ಪರತುರಗದಳವಿದಳನ ವಿಳಸಿತಕದನಕೇಳೀನಿಪುಣನೆನಿಪ ಕೃತಾಂತವಕ್ತ್ರನುಂ ವೈರಿವರೂಥಿನೀರಥಯೂಥ ನಿರ್ಮಥನಗ್ರಥಿತಮನೋರಥನೆನಿಪ ಮಹಾರಥನುಮಭಿಯಾತಿಪದಾತಿಯಾತನಾ ಸಮುಪಜಾತಿಸಾತಿಶಯನಿರತನೆನಿಪ ವಿಜಯರಥನುಂ ವಿಪಕ್ಷಪಕ್ಷಪರಿಕ್ಷೇಪಣದಕ್ಷನಪ್ಪ ದುಷ್ಪ್ರೇಕ್ಷಕನುಂ ವಿರೋಧಿಸಮುದ್ದಂಡದಂಡನಾಥಪ್ರಬಳಬಳಕುಳಕುಧರಪರಿಖಂಡನ ಪ್ರಚಂಡದಂಭೋಳಿದಂಡನಿಭಬಾಹುದಂಡಕಾಂಡಮಂಡಿತನೆನಿಪ ದಂಡಧರನುಮೆಂಬ ಪೆಸರಪೆಸರ ಮೊನೆಯನಾಯ್ಕರುಂ ರಣರಸಿಕರಪ್ಪಧಿರಾಜ ಮಹಾರಾಜಮಂಡಳಿಕ ಪ್ರಮುಖನಿಖಿಳರಾಜಕುಮಾರಕರುಂ ಶರಭನುಂ ಮಹಾಬಳನುಂ ಪ್ರಿಯವಿಗ್ರಹನುಂ ಮಹೇಂದ್ರನುಂ ಮೊದಲಾದ ಸಕಳಘೋಳಾಯಿಲರುಂ ತಂತಮ್ಮ ಚಾತುರ್ದಂತಬಲಂ ಬೆರಸು

ಕರಿತುರಗರಥಾರೂಢರಾಗಿ ಸಂದಣಿಸಿ ಮುಂದೆನಿಂದ ಪಲವುಂ ಚಂದದ ಪೆಸರ ಪಳಯಿಗೆಗಳಂಬರಮನಳ್ಳಿಱಿದು ಮಿಳಿರ್ದು ಮಿಳ್ಳಿಸುತ್ತುಮಿರೆ ಚತುರಂಗಬಲದ ವಿದ್ಯಾಬಲದ ಭುಜಬಲದೆಸಕದಿಂ ಮಾಮಸಕಂಮಸಗಿ ಮುಳಿಸಂ ಮುಂದಿಟ್ಟು ಸಂಗ್ರಾಮ ಭೂಮಿಗೆ ಬಂದು ಸುಷೇಣನಿಯಮಿತಸ್ಥಾನದೊಳೊಡ್ಡಿ ನಿಲ್ವುದುಂ

ಒಂದೆಡೆಯಲ್ಲಿ ಭೀಮರಥನೊಡ್ಡಿದನೊಂದೆಡೆಯಲ್ಲಿ ಸಿಂಹಣಂ
ಬಂದಿರದೊಡ್ಡಿದಂ ಯಮಮುಖಂ ಬಿಡದೊಂದೆಡೆಯಲ್ಲಿಯೊಡ್ಡಿದಂ
ಮಂದರಧೀರನೊಡ್ಡಿದನದೊಂದೆಡೆಯಲ್ಲಿ ದಲಿಂತು ಕೂಡೆ ಸಾ
ರ್ತಂದಿರದೊಡ್ಡಿನಿಂದರಧಿನಾಯಕರಾಹವಭೂಮಿಯೊಳ್ ಕರಂ ೪೮

ವ: ಅಂತೆಡ್ಡಮಾಗೊಡ್ಡಿನಿಂದ ಪೆರ್ವಡೆಯೆಂಬಿಂಗಡಲ ನಟ್ಟನಡುವೆ ಮದಸಮುದಿತ ಮತಂಗಜದ ಮೇಲೆ ಕುಳ್ಳಿರ್ದು

ಅರುಣಮಣಿಭೂಷಣಪ್ರಭೆ
ಪರಕಲಿಸಿರೆ ಸುತ್ತಲುಂ ಸುಷೇಣಚಮೂಪಂ
ಶರನಿಧಿಯ ನಡುವೆ ಕುಳ್ಳಿದ
ವರುಣನ ರೂಪೆಂಬ ಶಂಕೆಯಂ ಪುಟ್ಟಿಸಿದಂ ೪೯

ವ: ಇಂತು ಸುಷೇಣಂ ಬಂದೊಡ್ಡಿನಿಂದುದನಾಗಳಖಿಳರಾಜಕುಮಾರಕರೆಲ್ಲಂ ಕೇಳ್ದು ಪರ್ಜನ್ಯದ ಗರ್ಜನಮಂ ಕೇಳ್ದ ಕಿಶೋರಕೇಸರಿಗಳಂತೆ ಕಿಸುಱಿ ತಾಮುಂ ಸಮರಸನ್ನದ್ಧರಾಗಿ ವಿಪುಳಕಳಕಳರವಂ ದಿಕ್ಕುಳಂ ಮುಕ್ಕಳಿಸುವಂತು ನಿಸ್ಸಾಳಮಂ ಸೂಳಯ್ಸಿ ತತ್ಸಮಯಕ್ಕುಚಿತ ಸಮುದಗ್ರಸಮಗ್ರಪ್ರಸಾದನ ಸಾಮಗ್ರೀಪ್ರಸಾದಿತಮುಮಾದ ತಂತಮ್ಮ ಚಾತುರ್ದಂತ ಬಲಮಂ ಕೂಡಿಕೊಂಡು ನಿಜಶಿಬಿರಮಂ ಪೊಱಮಟ್ಟದಿರದಿದಿರೆತ್ತಿ ಪೋಪಾಗಳ್

ಪ್ರತಿಕೂಲಾನಳನಿಂ ಮರಂ ಮುಱಿವುದಂ ದೇವಾಲಯಂ ಬೀಳ್ವುದುಂ
ನುತಘೋಟಂಗಳ ಕಣ್ಗಳಿಂ ಜಲಕಣಂ ಬೀಳ್ತಪ್ಪುದಂ ಕಂಡೊಡಂ
ಪ್ರತಿಪಕ್ಷಂ ಮುಱಿದಪ್ಪುದೆಂದುಱಿದವಂ ನಿಶ್ಶೇಷಭೂಪಾಲರು
ದ್ಧತಿಯಿಂ ದುರ್ನಯಮಂ ಕರಂ ಸುನಯಮೆಂದೂಳ್ದರ್ ಮಹಾಮೂರ್ಖರುಂ ೫೦

ವ: ಮತ್ತಮರ್ಥೀದೋಷಂ ನಪಶ್ಯತಿಯೆಂಬೀ ನಾಣ್ಣುಡಿಯಂ ವ್ಯಕ್ತೀಕರಿಸುತ್ತುಮವಶಕುನಂಗಳಂ ಬಗೆಯದೆ ವಿಗ್ರಹದಾಗ್ರಹಮನೆ ಮುಂದಿಟ್ಟು

ಮದಧಾರಾಪೂರದಿಂದಂ ಧರಣಿವಳಯಮುಂ ಕೂಡೆ ಜೋಗೇಳುವನ್ನಂ
ಮುದದೆತ್ತಿರ್ದಾತಪತ್ರಂಗಳ ಬಳಗದಿನಾಕಾಶಮಂ ತೀವುವನ್ನಂ
ಪದೆದುತ್ತುಳ್ಗಪ್ರಭಾಮಂಡಳದಿನಖಿಳದಿಗ್ಭಾಗಮುಂ ತುಂಬುವನ್ನಂ
ಪದುಳಂಬಂದತ್ತು ನಾನಾನೃಪತನಯಕದಂಬಂ ಪ್ರತಾಪಾವಳಂಬಂ ೫೧

ವ: ಅಂತು ಮಹಾಮಹಿಮೆಯಿಂ ಸಮರಮಹೀವಳಯಕ್ಕವಿಳಂಬನದಿಂದೆಳ್ತರ ದಿಳಿಬೆಳಿದಂತಿರಾ ವ್ಯೂಹಕ್ಕೆ ಪ್ರತಿವ್ಯೂಹಮಾಗೊಡ್ಡಿನಿಲ್ವುದುಮಾಗಳೆರಡುಂ ದಳದೊಳ್

ರಣಭೇರೀಭೂರಿಭಾಂಕಾರರುತಿ ಬಹಳನಿಸ್ಸಾಳಧಾಂಕಾರಘೋರ
ಕ್ಷಣನಂ ಕೋದಂಡಟಂಕಾರವಿಪುಳನಿನದಂ ಕಾಹಳೋತ್ತಾಳಸಂಭೀ
ಷಣಪೂತ್ಕಾರಪ್ರಣಾದಂ ಬಱುದನಿ ಗಡ ಝುಣ್ಕಾರನಿರ್ಘೋಷಣಂ ದಾ
ರುಣಹೇಷಾಸ್ಫಾರಿಸುತ್ತಂ ಪಸರಿಸೆ ಘನಕೋಳಾಹಳಂ ಪೊಣ್ಮಿತೆತ್ತಂ ೫೨

ಎರಡುಂ ಸೇನೆಯ ಪಣ್ಣಿದಾನೆಗಳನಾ ಕಾಲಾಳ್ಗಳಂ ತೇರ್ಗಳಂ
ಪರಮಾಶ್ವಂಗಳ ಲೆಕ್ಕದೊಂದು ಪವಣಂ ಬಲ್ಲನ್ನನಾವಂ ದಲೀ
ಧರಣೀಮಂಡಳದಲ್ಲಿ ಮತ್ತೆ ಚತುರಾಸ್ಯಂಗಾದೊಡಂ ಸಂಖ್ಯೆಯೊಳ್
ದೊರೆಕೊಳ್ಗುಂ ಭ್ರಮಮೆಯ್ದಲೆಂದೊಡದನೇನೆಂಬೆ ಬಾಹುಲ್ಯಮಂ ೫೩

ವ: ಇಂತುಭಯಬಲಮುಂ ನೆಲನೆಡೆನೆಱೆಯದಂತು ಸಮರಸಮುಚಿತವ್ಯೂಹ ಪ್ರತಿವ್ಯೂಹಸ್ಥಾಪನೆಗಳಿಂ ಕ್ರಮಮನತಿಕ್ರಮಿಸದೆಯೊಡ್ಡಿನಿಲ್ವುದುಮಾಗಳಲ್ಲಿ

ನೆಲಸೊಡೆವಂತಿರಂಬರತಳಂ ಮುಱಿವಂತಿರಲೆಂಟುದಿಕ್ಕುಮಂ
ತೊಲಗದೆ ನುಂಗುವಂತೆ ಕುಲಪರ್ವತಮುಂ ಚಳಿಪಂತೆ ಸೈನ್ಯಸಂ
ಕುಳದೊಳಗುಣ್ಮಿ ಪೊಣ್ಮುವ ಮಹಾಧ್ವನಿಯೊರ್ಮೊದಲಲ್ಲಿ ಭೋರೆನಲ್
ಕಲಿಭಟರುರ್ವಿದರ್ ಪಳಿಯಪುಣ್ಗಲೆಗಳ್ ಬಿರಿವನ್ನಮಾಕ್ಷಣಂ ೫೪

ವ: ಅಂತು ಪ್ರಳಯಕಾಲಪ್ರಕ್ಷುಭಿತಜಳನಿಧಿಧ್ವಾನಮೆಂಬಂತಿರದ್ಭುತಂ ಬೆತ್ತೆರಡುಂ ಪಡೆಯ ರಣಾನಕಸ್ವನಂ ಕಿವಿ ಸದ್ದುಂಗಿಡುವಿನಂ ಪರಿಘೂರ್ಣಿಸುತ್ತುಮಿರ ಲೆರಡುಂ ಬಲದ ದೊರೆಗಳ್ ಕಡುಕನಲ್ದೊನಲ್ದು ಕದನಕೇಳೀಕುತೂಹಳವಿಳೋಕನ ಸಮಾಕುಳಿತರಾಗಿ ಕಡೆಗಾಲದ ನಂಜಿನ ಪ್ರಭಂಜನಂ ಬೀಸುವಂತೆ ಕೈವೀಸುವುದುಂ

ಪಿರಿದುಂ ಕೈಮಿಕ್ಕ ಕೊರ್ಬಿಂ ಕುಬುಬುಬುಬುಬುವೆಂದಾಲುತುಂ ಬೊಬ್ಬೆಯೊಂದ
ಬ್ಬರಮುಬ್ಬೆದ್ದೆಯ್ದೆ ಪರ್ವಲ್ ಬಿಡದೆರಡುಬಲಂ ತಮ್ಮೊಳೊಂದಾಗಿಕೂಡಿ
ತ್ತೆರಡುಂ ತಾಳಂಗಳುಂ ಕೂಡುವವೊಲುಲಿಯುತುಂ ಮತ್ತಮಾ ಪೊತ್ತಿನಲ್ಲ
ಚ್ಚರಿಯಿಂ ಪೂರ್ವಾಬ್ಧಿಯುಂ ಪಶ್ಚಿಮಜಲನಿಧಿಯುಂ ಕೂಡುವಂತಾಯ್ತು ಚೋದ್ಯಂ ೫೫

ವ: ಆಗಳ್

ಬಳಯುಗಳದಿಂದೆ ಪುಟ್ಟಿದ
ಖಳಧೂಳೀಜಾಳಕಂ ಮುಸುಂಕಲ್ ದೆಸೆಯಂ
ಕುಲಗಿರಿಗಳ್ ಗೆಲೆವಂದವು
ನೆಲದೊಳಗರೆಪೊಳ್ದ ಗುಂಡುಗಲ್ಗಳ ಚೆಲ್ವಂ ೫೬

ವ: ಮತ್ತಂ

ಕುದುರೆಗಳೊಳ್ ಕುದುರೆಗಳು
ನ್ಮದದಾನೆಗಳೊಡನೆಯಾನೆಗಳ್ ತೇರ್ಗಳೊಳ
ಗ್ಗದ ತೇರ್ಗಳ್ ಕಾಲಾಳ್ಗಳೊ
ಳೊದವಿದ ಕಾಲಾಳ್ಗಳಮಮ ತಾಗಿದರಾಗಳ್ ೫೭

ವ: ಇಂತೆರಸು ಪಡೆಗಳುರವಣಿಸಿ ತಾಗಿ ತಳ್ತಿಱಿವ ಪೊತ್ತಿನೊಳ್

ಪಗಲಿರುಳಾಗಸಂ ನೆಲನಿದೆಂಬ ವಿಕಲ್ಪದನಲ್ಪಕಲ್ಪನಂ
ಬಗೆವೊಡದಾರಚಿತ್ತದೊಳಮಾಗದವೊಲ್ ಶರಪಂಜರಂಗಳಂ
ಮಿಗೆರಚಿಸುತ್ತುಮಚ್ಚರಿಯಿನೆಚ್ಚುಱಿ ಬಿಲ್ವಡೆ ಕಾದುತಿರ್ದುದೀ
ಜಗಮುರುತೀಕ್ಷ್ಣಬಾಣಮಯಮೆಂಬಭಿಶಂಕೆಯನುಂಟುಮಾಡುತುಂ ೫೮

ಪಱೆಗಳ ಘೋಷಣಂ ಮೊಳಗು ಕೈದುಗಳ ಪ್ರಭೆ ಮಿಂಚು ಜೋಡಿನೊಳ್
ಮೆಱೆವುರುಪಂಚರತ್ನಕಿರಣಪ್ರಸರಂ ದಿವಿಜೇಂದ್ರಚಾಪಮಂ
ತುಱಿದೆರಡುಂಬಲಂ ಕಱೆವುತಿರ್ದುದದಂಬಿನ ನಟ್ಟ ಸೋನೆಯಂ
ನೆಱೆಮಳೆಗಾಲಮೆಂಬ ತೆಱದಿಂದಮೆ ಕತ್ತಲಿಸುತ್ತುಮೆತ್ತಲುಂ ೫೯

ಅಂಬಂ ಹೂಡಿದರೀಗಳೀಗಳಿರದೆರ್ಚರ್ ಬಂದುದಿಂತೀಗಳೆಂ
ದೆಂಬೀ ಭೇದದ ನಿಟ್ಟೆ ಮತ್ತರಿದೆನಲ್ ಪುಂಖಾನುಪುಂಖಂ ಸಮಂ
ತಂಬಂಬಟ್ಟುವಿನಂ ದಲೆಚ್ಚು ಮೆಱೆದರ್ ಬಿಲ್ವಿದ್ಯೆಯಂ ಜೋದರಾ
ದಂ ಬಾಣಂ ತಟವುಚ್ಚಿಪೋಗಿ ತನುವಂ ಬೆನ್ನಲ್ಲಿ ತೋರ್ಪಂದದಿಂ ೬೦

ಒಂದಂಬಾಗಿಯೆ ಬಂದು ತಾಗುವೆಡೆಯೊಳ್ ನೂಱಾಗಿ ತಟ್ಟುಚ್ಚಿ ಬೆ
ನ್ನಿಂದಂ ತಾಂ ಪೊಱಮಟ್ಟುಪೋಗಿ ಪೆಣನಂ ಸಾಲಿಟ್ಟು ಪೂರೈಸುವಾ
ರ್ಪಿಂದಂ ಮಾಯದ ಬಾಣಮಲ್ಲದಿದು ಮತ್ತೊಂದಲ್ತು ನಟ್ಟಾಕ್ಷಣಂ
ಕೊಂದೇ ತೋರ್ಪುದು ನಂಜಿನಂಬಿದು ದಿಟಂ ತಾನೆಂದು ಕೊಂಡಾಡಿದರ್ ೬೧

ಸಲೆ ಚತುರಂಗಸೈನ್ಯಪದಘಟ್ಟನದಿಂದೊಡೆದಿರ್ದ ಸಂಗರ
ಸ್ಥಳದೊಳೆ ರಕ್ತವೃಷ್ಟಿಸುರಿದೆಲ್ಲೆಡೆಯುಂ ಪದನಾಗೆ ಬಾಣಮೊ
ಕ್ಕಲಿಗನವೊಲ್ವೆಣಂಗಳನೆ ಸಾಲಿಡುತುಂ ಪರಿತರ್ಪ ಬೀಜಸಂ
ಕುಳಮನೆ ಬಿತ್ತಿದತ್ತು ರಿಪುಮರ್ಮಭಿಧಾಗ್ನಿಕಣಾಳಿ ದಂಭದಿಂ ೬೨

ಸೊಗಯಿಪ ಧರ್ಮಗುಣಂಗಳ
ನಗಲಿದೊಡಾಕ್ಷಣದೊಳನ್ಯರಂ ಕೊಂದವವಂ

ಬುಗಳೆಂದಡೆ ವಿರಹಿತಧ
ರ್ಮಗುಣರ್ ಪೆಱರಂ ವಿಘಾತಿಸುವುದದ್ಭುತಮೇ ೬೩

ಘೂಣೆಗರೆಲ್ಲರುಂ ನೆರೆದು ಘೂಣಿಸಿಯಾರ್ದೆಸಲಂಬುಗಳ್ ಪರ
ಶ್ರೇಣಿಯನೆಯ್ದೆ ತಾಗೆ ಕರುಳೊಕ್ಕುದು ಕಣ್ಣಳಿದತ್ತು ಪಣ್ಗಳಿಂ
ಶೋಣಿತಪೂರಮುಣ್ಮಿದುದು ಕಾಲ್ಕಡಿಖಂಡಮುಮಾಯ್ತು ಪಾಣಿಯುಂ
ಮಾಣದೆ ಖಂಡಿಸಿತ್ತು ಕಿವಿ ಕಿತ್ತುದು ಕತ್ತರಿಸಿತ್ತು ನಾಸಿಕಂ ೬೪

ವ: ಅಂತಾಸುರಮಾಗಿ ನಿಂದು ಕಾದುವೆಡೆಯೊಳ್

ಬಿಲ್ಲಬಿತ್ತಿಗರ ಮೆಯ್ಗಳೊ
ಳೆಲ್ಲಂ ಗಱಿತೋಱುವಂತೆ ಕೀಲಿಸಿನಿಲೆ ಕಡೆ
ಯಿಲ್ಲದ ಶರಂಗಳಾವಳಿ
ಸಲ್ಲಕಿಯಂಕುರಿಸಿದಂತಿರವರೆಸೆದಿರ್ದರ್ ೬೫

ವ: ಮತ್ತಂ

ಶರಜಾಳಂಗಳ್ ತೀರಲ್
ತಿರುಗಳ್ ಪಱಿಯಲ್ ಶರಾಸನಂಗಳ್ ಮುಱಿಯ
ಲ್ಕುರವಣೆಯಿಂ ಬಿಲ್ಲಾಳ್ಗಳ್
ಸುರಿಗೆಗಳಂ ಕಿಳ್ತು ತಿವಿದು ಕಾದುತ್ತಿರ್ದರ್ ೬೬

ವ: ಬಳಿಯ ಮುಕ್ಕುಡಿಯ ಭೇಷಜವಶದಿಂದವುಂ ಚಿಕ್ಕನೆ ಮುಱಿಯೆ ಗೋಣ್ಮುರಿಗೆ ತಲೆವೊತ್ತು ಬಿತ್ತರಿಸಿ ಕಾದುತ್ತುಮಿರ್ಪಾಗಳ್

ಮುಷ್ಟಾಮುಷ್ಟಿ ಕಚಾಕಚಿ ಪ್ರಕಟದಂಡಾದಂಡಿ ದೀರ್ಘೀಭವ
ದ್ಯಷ್ಟಾಯಷ್ಟಿ ರಥಾರಥಿ ಪ್ರವರಪಾದಾಪಾದಿಯಾಗಿಂತು ಸಂ
ತುಷ್ಟರ್ ವೀರಭಟರ್ ಪರಸ್ಪರಮತೀವೋಗ್ರತ್ವದಿಂ ಕಾದಿದರ್
ಧಾರ್ಷ್ಟ್ಯಂ ಚಿತ್ತದೊಳುಣ್ಮೆ ಪೊಣ್ಮೆ ಕುತುಕಂ ನೋಳ್ಪರ್ಗೆ ತೋರ್ಪಂದದಿಂ ೬೭

ವ: ಆ ಪೊತ್ತಿನೊಳ್

ತಿರಿಪುತ್ತಂ ಲೌಡಿಯಂ ಬಂದಡಸಿ ಬಱಿಸಿಡಿಲ್ ತಾಗಿ ಪೊಯ್ವಂದಮಂ ಬಿ
ತ್ತರಿಸುತ್ತುಂ ಪೊಯ್ಯಲಾಗಳ್ ನಡು ಮುಱಿದು ಕೊರಲ್ ಕುಗ್ಗಿ ಮೆಯ್ ತಗ್ಗಿ ಮತ್ತಂ
ಚರಣಂ ನುಗ್ಗಾಗಿ ಕೆಯ್ಯುಂ ಕಡಿದುಡಿದು ಬೆರಲ್ಕೂಡೆ ಬೆನ್ನೆತ್ತರೆತ್ತಂ
ಸುರಿವನ್ನಂ ಪೂಣ್ಕೆಯಿಂದೆಕ್ಕಟಿಗರ ಗಡಣಂ ಕಾದುತಿರ್ದತ್ತು ಚೋದ್ಯಂ ೬೮

ವ: ಅದಲ್ಲದೆಯುಂ

ಗಡಣಿಸಿದೊಡ್ಡಿ ಹಡ್ಡಣದಗುರ್ವಿಸುವೊಡ್ಡಣಮೆಡ್ಡಮಾಗಿ ಸಂ
ಗಡಿಸಿದ ಕೂರಿದಾಯುಧದ ನುಣ್ಬೆಳಗಿಂ ಪೊಳಪೇಱ್ ಕೂರ್ಪ ಮುಂ
ದಿಡೆ ತೊಡೆಸಾಟೆಯಂ ಕೊಡುವ ಬಲ್ಲುಲಿಯಂ ಪರಿಘೂರ್ಣಿಸುತ್ತುಮಿ
ರ್ದೊಡನೆ ಪಣಂಚಿದತ್ತು ಪೊಸಕಾರ್ಮುಗಿಲೊಡ್ಡು ಪಳಂಚುವಂದದಿಂ ೬೯

ಕಡಿತಲೆಯಂ ಜಡಿಯುತ್ತುಂ
ಕಡಿತಲೆಕಾಱರ್ ಕಡಂಗಿಬಂದುಱ್ ತಮ್ಮೊಳ್
ಕಡಿಖಂಡಮಪ್ಪಿನಂ ಕೈ
ಮಡಗದೆ ಪೊಯ್ದಾಡುತಿರ್ದರಚ್ಚರಿಯಿಂದಂ ೭೦

ನೆತ್ತಿಯ ಚಿಪ್ಪೊಡೆದು ಸಿಡಿ
ಲ್ದತ್ತೆರ್ದೆಯುಂ ಜನ್ನಿವಾರ ಗಟ್ಟಾಗಿಯೆ ಸೀ
ಳ್ದತ್ತುಱ್ ಕುದುರೆಯ ಬೆನ್ನುಂ
ಕತ್ತರಿಸಿಯೆ ಪೋದುದೊಂದೆ ಘಾಯದ ವಶದಿಂ ೭೧

ಕಡಿತಲೆಯಿಂದಂ ತಲೆಯಂ
ಪೊಡೆಯಲ್ ಪಱಿದುರುಳುತಿರ್ದುದಂ ಬಲ್ಪಿಂದಂ
ಪಿಡಿದೆತ್ತಿ ಮುಂಡದೊಳ್ ಮ
ತ್ತಡಸಿಟ್ಟಂ ಕಳಶಮಿಡುವವೊಲ್ ಬೀರಕ್ಕಂ ೭೨

ಪಱಿದುಬಿದ್ದುರುಳ್ವ ತಲೆ ಬೊ
ಬ್ಬಿಱಿವುತ್ತುಂ ಮರಳೆ ಪಗೆಯನಿದಿರಟ್ಟಿಯೆ ಬಂ
ದುಱ್ ಮೇಲೆವಾಯ್ದು ಮೂಗಂ
ನೆಱೆಕಚ್ಚುತ್ತಿರ್ದು ಪಡೆದುದದ್ಭುತರಸಮಂ ೭೩

ತಲೆ ಪಱಿದೊಡಮಾ ಮುಂಡಂ
ಕಲಿತನದಿಂ ಸುರಿಗೆಗಿಳ್ತು ತಳ್ತಿಱಿವುತ್ತುಂ ಕೆಲ
ಬಲದ ಸುಭಟರೆರ್ದೆಯೊಳ್
ನೆಲೆಗೊಳಿಸಿತ್ತಂದು ಬೀರಸಿರಿಯಚ್ಚರಿಯಂ ೭೪

ಬಸಿಱಿಂದೊಕ್ಕ ಕರುಳ್
ಮಿಸುಪೆರಡುಂ ತೊಡೆಯ ನಡುವೆ ತೊಡದಿರ್ದವಲಂ
ಬಿಸುತಿರೆ ಮೆಱೆದಂ ಬೀರಂ
ಪೊಸವೀರಶ್ರೀಗೆ ತೋರಣಂಗಟ್ಟಿದವೊಲ್ ೭೫

ಕೆಂಬಲಗೆಗಳೊಡ್ಡುಗಳಾ
ಡಂಬರಮುಂ ಸಂಜೆಗೆಂಪು ಪಸರಿಸಿತೊಪ್ಪಂ
ತಿಂಬಾದುದದಱೊಳೆಸೆದುದು
ಕೆಂಬಿಸಿಲೆನೆ ರುಧಿರಮಿಶ್ರಖಿಳ್ಗಮಯೂಖಂ ೭೬

ವ: ಮತ್ತಂ

ಇಮ್ಮೊನೆಗಾಣ್ಬ ಕಕ್ಕಡೆಗಮಿಕ್ಕಡಿಯಾಗಿಯೆ ಪೊಯ್ವ ಕತ್ತಿಗಂ
ಘರ್ಮನೆ ಜೀವಮಂ ಕೊಳ್ವ ಪಿಂಡಿವಳಕ್ಕಮನೇಕರಂ ತಗು
ಳ್ದೊರ್ಮೊದಲಲ್ಲಿ ಬೀಳಸುವ ಕುಂತಗಣಕ್ಕಮಡುರ್ತು ಪೊಯ್ವ ಬ
ಲ್ಗೆರ್ಮಟಿಕಾಚಯಕ್ಕೆ ಪವಣೆಲ್ಲದಱಿಂದತಿಭೀಷಣಂ ರಣಂ ೭೭

ವ: ಇಂತಗುರ್ವುವಡೆದಿರ್ವಲದ ಪಾಯ್ದಳಮೆಲ್ಲಮಲಗಲಗಿನೊಳ್ ಪಳಂಚಿ ತಾಗಿ ಪಲವುಂ ತೆಱದಿನಿಱಿವ ಬಿನ್ನಣದೊಳ್ ಮೆಱೆದು ಕೃತಾಂತನ ಕೋಣಂಗಳೆಂಬಂತೆ ತಮ್ಮೊಳೊರ್ವೊರ್ವರ್ ಮಮ್ಮಳಿಯಾಗಿ ಪೋರುತ್ತು ಮೆಚ್ಚುಮಿಱಿದುಂ ಕುಱಿಗಳಂ ತಱಿವಂತೆ ತತ್ತಱಿಂದಱಿಯೆ ದೆಸೆದೆಸೆಗೆ ಮಸಗಿ ಪಾಱುವ ಪಣ್ದಲೆಗಳಿಂದಂ ಸುತ್ತಲುಂ ಸೂಸಿ ತೋಱುವ ಕಣ್ಣಾಲಿಗಳಿಂದಂ ಕಡಿಖಂಡಂಗಳಾದ ಮೆಯ್ಗಳಿಂದಂ ಪಿಂಡುಗೊಂಡುಬಿಳ್ದು ಕೀಳ್ತುವ ತನಿಗಂಡಂಗಳಿಂದಂ ತಂಡುಮುಂಡಾಗಿ ಮುಱಿದುಬಿಳ್ದ ಮೂಳೆಗಳ ಬಳಗದಿಂದಂ ಕಡುರೌದ್ರಮಾಗಿ ಕಾದಿ ಸಕಳರಾಜಕುಮಾರಕರ ಪದಾತಿ ಬಲಮೆಲ್ಲಂ ಪಡಲ್ವಟ್ಟಿಂ ಬಳಿಯಂ ತೆಱಪುವಡೆದೀರೊಡ್ಡಿನ ತೇರೊಡ್ಡುಗಳ್ ಸಾರಥಿ ಪರಿಪ್ರೇರಣವಶದಿಂದೊಂದೊಂದಂ ಪತ್ತೆಸಾರ್ಚಿ ಪೆಟ್ಟುವೆರ್ಚಿದಿರ್ಚಿ ತಾಗಿದಾಗಳ್

ರಥಿಗಳೊಡನೆಯ್ದೆ ರಥಿಗಳ್
ಪೃಥುತರಸಾರಥಿಗಳೊಡನೆ ಸಾರಥಿಗಳ್ ಪರಿ
ಮಥನದೆ ಪಳಂಚಿದರ್ ನೆಱೆ
ಪೃಥುವೀಜನಮಂದು ಮೆಚ್ಚಿಕೊಂಡಾಡುವಿನಂ ೭೮

ಅತಿರಥರುಂ ಮಹಾರಥ ಸಮಾನರಥಾರ್ಧರಥರ್ ಪರಸ್ಪರಂ
ಕುತುಕದೆ ತಾಗಿ ತಳ್ತೆಸೆ ರಥಾಂಗಮುರುಳ್ದುದು ಕೀಲ್ ಕಳಲ್ದುದು
ನ್ನತ ಜಯಕೇತುಗಳ್ ಮುಱಿದುವಚ್ಚು ಸಡಿಲ್ದುದು ವಾಜಿ ಬೀಳ್ದುದೆ
ಯ್ದತಿಶಯಚೋದಕಂ ಮಡಿದನಾಕ್ಷಣದೊಳ್ ಶರಜಾಳಘಾತದಿಂ ೭೯

ಸಾರಥಿ ಸತ್ತೊಡಮೊರ್ವನ
ತೇರಂ ಚೋದಿಸುತುಮುರ್ಬಿ ಕಾದುತ್ತುಂ ರಥಿ
ಮಾರಣಮನೆಯ್ದಿಸಿದನಂ
ದಾರಯೆ ಪಗೆವನುಮನಶ್ವಮಂ ಸಾರಥಿಯಂ ೮೦

ಎಚ್ಚಂಬಂ ಕಡುವೇಗದಿಂದೆ ಪೆಱಗೆಚ್ಚಂಬೆಯ್ದಿ ತಾಗುತ್ತಿರಲ್
ಪಚ್ಚಂತಾಗಿಯೆ ಪಿಳ್ಕಿನಿಂ ಮೊನೆವರಂ ಸೀಳ್ತಂದು ಸರ್ವಾಂಗಮಂ
ಚುಚ್ಚಿಂತಿಮ್ಮಡಿಯಾಗಿ ನಟ್ಟು ಕಡೆಗಣ್ಣಿಂದಿರ್ದುದಂ ಕೀಳ್ತು ಮ
ತ್ತೆಚ್ಚಂ ತನ್ನ ಸರಲ್ಗಳುಂ ತವೆ ಮಹಾವೀರಂ ರಥಾರೂಢಕಂ ೮೧

ನೊಸಲಲ್ಲಿ ನಟ್ಟ ಶರಮಂ
ಮಿಸುಗದೆ ನಾಂ ಕೀಳೆ ಕೂಡೆ ರಕ್ತಪ್ರಸರಂ
ಮಸಗಿ ಕೆಂಪಾಗಿ ತೋಱಲ್
ನೊಸಲುರಿಗಣ್ದೆಗೆದ ಶಿವನವೊಲ್ ಭಟನಿರ್ದಂ ೮೨

ವ: ಇಂತು ರೋಮಮಂ ರೋಮಂದಪ್ಪದೆ ಸರಳ್ಗಳ್ ನಾಂಟುವಂತೆಚ್ಚಾಡಿ ರಥಾರೂಢರೆಲ್ಲಂ ಪರಿಪೂರ್ಣಕಥನ ಮನೋರಥರಾಗೆ ರಾಜಕುಮಾರರ ತೇರೊಡ್ಡುಗಳ್ ಗಾಳಿಗೊಡ್ಡಿದ ಮುಗಿಲೊಡ್ಡುಗಳಂತೆ ತಾಱುಂತೀರಾಗಿ ಪರಿದುಪೋಗಲೊಡಂ

ರಣಕೇಳೀದೋಹಳಕ್ಕರ್ಥಿಗರೆನಿಸುವ ರಾವುತ್ತರೇಕೈಕವೀರಾ
ಗ್ರಣಿಗಳ್ ತಾವೇಱ ಪೊಂಬಕ್ಕರಿಗಳಿನೆಸೆವಶ್ವಂಗಳಂ ಬಿಟ್ಟೊಡಂದಾ
ಕ್ಷಣದೊಳ್ ಸಂಗ್ರಾಮವಾರಾಶಿಯ ತೆರೆಗಳಿವೆಂದೆಂಬಿನಂ ಬೇಗದಿಂದಂ
ಕುಣಿವುತ್ತುಂ ಕೂಡೆ ಸಂಚಾರಿಸಿಯೊಡನೊಡನೋಡುತ್ತುಮೆಯ್ದಿರ್ದುವೆತ್ತಂ ೮೩

ವ: ರೌದ್ರರಸಮೆ ಮೇರೆದಪ್ಪಿ ಕವಿತಪ್ಪಂತುಭಯಬಲತುರಂಗಿಗಳ್ ಕವಿತಪ್ಪುದುಂ

ಶಿಕ್ಷಿತ ವೀರತುರಂಗಮ
ಲಕ್ಷಂ ಮೋಹರಿಸಿ ನಿಂದು ಪಸರಿಸಿ ಸಂಗ್ರಾ
ಮಕ್ಷಮೆಯೊಳ್ ಸಂಚಾರಿಸು
ವಾಕ್ಷಣಮಾ ಧರೆ ತುರಂಗಮಯವಾಯ್ತು ಕರಂ ೮೪

ವ: ಇಂತೆರಡುಂ ಪಡೆಯ ದೊಡ್ಡಂಗಳಾದ ಕೂರಡ್ಡಣಂಗಳ ಪೊಳೆಪಿಂದೆಡ್ಡ ಮಾದ ವಡ್ಡರಾವುತ್ತರ ಮೊತ್ತಮೊಡ್ಡುಗೊಂಡು ಮಮ್ಮಳಿಯಾಗಿ ಕಾದುವ ಬೇವಸ ದೆಸಕದಿಂ ಮಾಮಸಕಂ ಮಸಗಿ ತಮ್ಮೊಳೊರ್ವೊರ್ವರ ದುರ್ವಹದೋರ್ವಲದಗುರ್ವಂ ಮೆಱೆವುದಕ್ಕರ್ಥಿವೆಟ್ಟು ಮೂದಲೆಯಂ ಮುಂದಿಟ್ಟು ಮರಳೆ ಮರಳೆ ಬಿಡಿತಮಂ ಬಿಟ್ಟು ಪೊಯ್ವಾಗಳ್

ಒರ್ವಂ ರಾವುತ್ತರಾಯಂ ಕುನಿದು ಕುದುರೆಯಂ ಬಿಟ್ಟು ಸಂಗ್ರಾಮಕೇಳೀ
ಗರ್ವಾವಷ್ಟಂಭಕಂ ಬೊಬ್ಬಿಱಿದು ರಭಸದಿಂ ಕೀಳ್ತ ಕೂರ್ವಾಳ ಬಾಯಿಂ
ದುರ್ವಿಂ ಮೇಲ್ವಾಯ್ದುಪೊಯ್ಯಲ್‌ತಲೆಯೊಡೆದುಮಿದುಳ್ ಚಲ್ಲಿ ವಕ್ಷಸ್ಥಲಂ ಸೀ
ಳ್ದಿರ್ಭಾಗಂಬೆತ್ತುದೆಯ್ದಿಕ್ಕಡಿವಡೆದೊಡನೇಕಕ್ಷಣಂ ಬಿಳ್ದುದಶ್ವಂ ೮೫

ವ: ಇಂತು ಪಣೆದಂ ಪೊಯ್ವಂತೆ ಪೊಯ್ದಾಡುತ್ತುಮಿರ್ಪುದುಂ

ಕರವಾಳೊಳ್ ಕರವಾಳ್ ಪಣಾಂಚಿ ವಿಕರಾಳಂಬೆತ್ತು ಪೊಯ್ದಾಡಲಂ
ದೊರಸಿಂದಂ ಕಿಡಿಗಳ್ ತಗುಳ್ದು ಸುರಿಯಲ್ ಘೋರೆಂದು ಸಂಗ್ರಾಮದು
ರ್ವರೆಯೊಳ್ ಕೆಂಡದ ವೃಷ್ಟಿ ತಾಂ ಪ್ರಳಯದೊಳ್ ಪೊಯ್ವುತ್ತುಮಿರ್ದಂದದಿಂ
ಪಿರಿದೊಂದದ್ಭುತಮಾಯ್ತರಳ್ದಡೆಯ ವಾಹವ್ಯೂಹದುಗ್ರಾಹವಂ ೮೬

ವ: ಅಂತು ಖಳ್ಗಾಖಳ್ಗಿಯಾಗಿ ಖಳ್ಗಗಳದ್ಭುತಂಬೆತ್ತು ಕಾದುತ್ತುಮಿರ್ಪುದುಂ

ಪಾಯಿಸೆ ಪೊಯ್ದುಡೊಳ್ಕುದುರೆ ಜಾಣತಮೋತ್ತಮತೀವಶಿಕ್ಷಣೋ
ಪಾಯವಿಶೇಷದಿಂದೆ ಮಸೆಮುಟ್ಟದವೊಲ್ ತನಗಂ ಸ್ವವಾಜಿಗಂ
ಘಾಯಮನೆಯ್ದೆಕಾಯ್ದು ಭಟರಟ್ಟೆಗಳಾವಳಿಯಾಡುತಿರ್ಪಿನಂ
ಭೀಯುಮನೀವ ಪಣ್ದಲೆಗಳುಂ ನೆಱೆಬಿಳ್ದವು ಯುದ್ಧಭೂಮಿಯೊಳ್ ೮೭

ಲೆಕ್ಕಮಣಮಿಲ್ಲ ತಾಗುವ
ಚಕ್ರಂಗಳ್ಗೆಯ್ದುವಮಮ ಸಬಳಂಗಳ್ಗಂ
ಮಿಕ್ಕು ಕೊಳ್ವಿಟ್ಟಿಗಳ್ಗಂ
ಕರ್ಕಶದಿಂ ಸುತ್ತಿಕೊಳ್ವ ಪಾಶಂಗಳ್ಗಂ ೮೮

ವ: ಮತ್ತಂ

ಧರಣೀಶಾದೇಶದಿಂ ಬಂದಧಿಕರೆನಿಪ ರಾವುತ್ತರುಗ್ರತ್ವಮಂ ಪೆ
ತ್ತರರೇ ಕಾಯ್ ಕಾಯೆನುತ್ತುಂ ಮಿಗೆ ಕುದುರೆಗಳಂ ಬಿಟ್ಟು ಪೊಯ್ವಲ್ಲಿ ಶೌರ್ಯೋ
ದ್ಧುರನೊರ್ವಂ ಕಾಯ್ವುದೆಂಬೀ ಬಿರುದೆನಗೆ ನಿಜಂ ತಪ್ಪದೆಂದಾ ತುರುಷ್ಕೋ
ತ್ಕರ ಶೂರಾಶ್ವಂಗಳಂ ತಾಂ ಪಿಡಿದಿರದವರಂ ಬಿಟ್ಟು ಕೀರ್ತೀಶನಾದಂ ೮೯

ವ: ಆ ತುರಂಗಮಸಂಗ್ರಾಮಸಮಯದೊಳರಸುಮಕ್ಕಳ ತುರಂಗಿಗಳೆಲ್ಲಂ ಭಂಗಂಬಡೆ ವಾರಣಾರೋಹಕರೆಲ್ಲಂದೋರಣೆಗೊಂಡೀರೊಡ್ಡಿನಾನೆಗಳಂ ಚೋದಿಸು ವುದುಂ

ಅಂಚೆಗಳಂ ಪಣ್ಣಿದ ಮದ
ಸಂಚಯದಿಂದೆಸೆವ ಬಿರುದಿನಾನೆಗಳದಱೊಳ್
ಸಂಚಾರಿಸುವೆಡೆಯೊಳ್ ಸಮು
ದಂಚಿತ ಗಜಮಯಮುಮಾಯ್ತು ಸಂಗರರಂಗಂ ೯೦

ಸೊಗಯಿಪ ವಜ್ರದಂಕುಶದಿನೊತ್ತಿ ಕುಕಿಲ್ದಿದಿರಾಗಿ ನೂಂಕೆ ವಾ
ಯುಗೆ ಗಱಿಮೂಡಿದಂತೆ ಪರಿತಂದೆರಡುಂ ಪಡೆಯಾನೆಗಳ್ ಮದಂ

ಮಿಗುತಿರಲಟ್ಟಿ ಮುಟ್ಟಿ ಬಿಡದೊಂದಱೊಳೊಂದುಱೆ ಕೀಱೆ ತಾಗಿ ಕೆ
ಯ್ಮಿಗೆ ಮೊಗಮಿಕ್ಕಿ ನಿಂದು ತಲೆಮುಟ್ಟವು ತಮ್ಮೊಳತೀವರೌದ್ರದಿಂ ೬೧

ವ: ಆಪೊತ್ತಿನೊಳ್ ನಿಷಾದಿಗಳೆಲ್ಲಂ ಸಮೀಪವಶದಿಂ ಬಿಲ್ಗಳ್ ಸಲ್ಲದೊಡೆ ತಕ್ಕಿನೆಕ್ಕತುಳದಿಂ ಕೀಳ್ತ ಕಟಾರ ಸುರಿಗೆ ಹಿಡಿಯಂಬುಗಳಿಂ ಕುತ್ತಿಯುಂ ಖಳ್ಗ ಮುದ್ಗರ ವಜ್ರ ಮುಷ್ಟಿ ಪರಶು ಪಾಶಾಂಕುಶಾದಿ ನಿಶಿತಸ್ತ್ರಂಗಳಿಂದಂ ಪೊಯಿದು ಭಯಂಕರಾ ಕಾರಮಾಗಿ ಕಾದುವಾಗಳ್

ಮಿಗೆ ಬೆಂಬತ್ತುವ ಕೂಡೆ ಮೆಯ್ದೆಗೆವ ಬಲ್ಪಂತೋರ್ಪ ಕಾಯಿದೊತ್ತು
ಬ್ಬೆಗಮಂ ಮಾಳ್ಪಿರದಟ್ಟಿಯಪ್ಪಳಿಸುವ ವ್ಯಾಘಾತಮಂ ವಂಚಿಪು
ಜ್ಜುಗದಿಂ ಮಾರ್ಮಲೆಯುತ್ತುಮಿರ್ಪ ತೆಱಪಂ ಕಂಡಾಂಪ ಜಾಣ್ ತಮ್ಮೊಳೆ
ಯ್ದೆಗೆಯಲ್ಕಿರ್ಬಲದಂಕದಾನೆಗಳ ಮೊತ್ತಂ ಕಾದಿದತ್ತದ್ಭುತಂ ೬೨

ದಿಕ್ಕರಿಗಳ್ ದಿಕ್ಕರಿಗಳೊ
ಳೆಕ್ಕೆಕ್ಕೆಯಿ ಮೊಗಮನಿಕ್ಕಿ ಕಾದುವ ತೆಱದಿಂ
ಸೊಕ್ಕಾನೆಗಳಚ್ಚರಿಯಿಂ
ಸೊಕ್ಕಾನೆಗಳೊಳ್ ಪಣಂಚಿ ಕಾದುತ್ತಿರ್ದವ್ ೬೩

ಕೋಡುಗಳಗ್ರದಿಂದಿಱಿಯೆ ಮಸ್ತಕಪಿಂಡದ ಶೋಣಮೌಕ್ತಿಕಂ
ಗೂಡಿದ ಕೊಳ್ಮಿದುಳ್ ಕವಿದು ಸೂಸುತಿರಲ್ ಭರಿಕೆಯ್ಯ ಖಳ್ಗದಿಂ
ಕೋಡಿಡುವಂತು ಪೊಯ್ಯೆ ಕರಿಣೀಪರಿಶಂಕೆಯಿನಂದು ಕೋಪಮಂ
ಮಾಡದೆ ಲಾಲನಕ್ಕುವಸಂ ಬಿಡದಾದುದದೊಂದು ಸಿಂಧುರಂ ೬೪

ಕುಡಿಮಿಂಚಂ ದಂತಕಾಂತಿಪ್ರಸರಮೆಸಗೆ ದುರ್ಗರ್ಜನಸ್ಫೂರ್ತಿಯಂ ಮುಂ
ದಿಡೆ ಭೂಯೋಬೃಂಹಿತಂ ಪೆರ್ಮಳೆಯನುರುರಥಾನ್ಯೋನ್ಯಸಂಘಟ್ಟದಿಂ ಬ
ಲ್ಕಿಡಿಗಳ್ ಬೀಳ್ತಪ್ಪುವಂದೆಯ್ದೊದರಿಸೆ ಭಯಮಂ ರಾಜಹಂಸಾಶಯಂ ತ
ಳ್ತಡರಲ್ ಸೊಕ್ಕಾನೆಗಳ್ ತಾಗಿದುವು ವಿಳಯಕಾಲಾಂಬುವಾಹಂಗಳನ್ನಂ ೬೫

ವ: ಅಂತು ದಂತಿಘಟೆ ದಂತಿಘಟೆಗಳೊಳಾಂತು ತಿಂತಿಣಿಗೊಂಡು ದಂತಾದಂತಿಯಾಗಿ ದುರಂತತಮಯುದ್ಧಂಗೆಯ್ಯುತ್ತುಮಿರ್ಪುದುಮಾ ಸೊಕ್ಕಾನೆಗಳ ಮೇಲೆ ಕುಳ್ಳಿರ್ದು

ಮೊನೆಯಂಬಂ ದೊಣೆಯಿಂದಮುರ್ಚಿ ತಿರುವಾಯೊಳ್ ಬೇಗದಿಂ ಸಾರ್ಚಿ ತ
ನ್ಮನಮುಂ ದಿಟ್ಟಿಯುಮೊಂದುಗೂಡಿ ಗುಱಿಯೊಳ್ ಮೆಯ್ವೆರ್ಚಿರಲ್ ಜೋದರಂ
ದೆನಸುಂ ತಮ್ಮೊಳಗೊರ್ವರೊರ್ವರುಱಿದೆಯ್ದೆಚ್ಚಾಡಿದರ್ ಕೊಂಡು ತೊ
ಟ್ಟನೆ ಬೆನ್ನಿಂ ಪೊಱಮಟ್ಟು ಪೋಪ ಸರಲಿಂ ಮುಂಪೋಪಿನಂ ಜೀವನಂ ೬೬

ವ: ಆಗಳ್

ಕವಲಂಬುಗಳಿಂದೆಚ್ಚಡೆ
ತವೆ ಪಱಿದುಱೆ ಸೀಸಕಂಗಳಿಕ್ಕಿದ ತಲೆಗಳ್
ಕವಿದವು ರಾಹುಸಮಾವೃತ
ರವಿಮಂಡಳಿಗ[ಳ]ವೊಲಿಳಿಗೆ ಗಗನಸ್ಥಳದಿಂ ೯೭

ವ: ಮತ್ತಮಾಹವಕ್ಕೆ ರಕ್ಕಸರೆನಿಪಂಗರಕ್ಕರ ಪಡೆ ಕಡಿಕೆಯ್ದು ಕಟ್ಬಾಳ್ತನಂ ಕೈಮಿಕ್ಕು ಕೆಕ್ಕಟಗೆರಳಿ ತೆಕ್ಕದೆ ನಿಂದು ಕಾದುತ್ತುಮಿರೆ

ಕರಿಘಟೆಗಳ ಕಾಲ್ಗಾಪಿನ
ನರರಿಕ್ಕೆಲದಲ್ಲಿ ನಿಂದು ಕೂರ್ಕೈದುಗಳಂ
ತಿರಿಪುತ್ತುಂ ತಳ್ತಿಱಿದರ್
ಕುರುಳ ಪಿಣಿಲ್ ತೆಪ್ಪಮಾಗೆ ನೆತ್ತರ ತೊಱೆಯೊಳ್ ೯೮

ವ: ಆಸಮಯದೊಳ್

ಭರಿಕ್ಕೆಗಳ್ ಪಱಿದುರುಳಲ್
ಪರಿರಂಜಿಸಿದವು ಮಹಾವರಾಹಂಗಳವೊಲ್
ಕರಿಣೆಗಳಂತಾದವು ಕೋ
ಡೆರಡುಂ ನೆಱೆಮುಱಿದು ಬೀಳೆ ಕೆಲವು ಗಜಂಗಳ್ ೯೯

ಕಡುಕೆಯ್ದು ಪಿಂದಣೆರಡುಂ
ತೊಡೆಗಳ್ ಕತ್ತರಿಸಿ ಕುಕ್ಕುಱಿಸಿ ಕುಳ್ಳಿರ್ದಾ
ಗಡೆ ಪಡೆದನೇಕದಂತನ
ಕಡುಚೆಲ್ವುಮನಾನೆಗಾಳೆಗಂ ಚಿತ್ರತರಂ ೧೦೦

ವ: ಇಂತನಂತಮಹೀಕಾಂತರ ಚಾತುರ್ದಂತಬಲಮೆಲ್ಲಮಂತಕಂಗಾಹಾರ ಮಪ್ಪಂತೆಚ್ಚು ಮಿಱಿದು ಮುನ್ನೆಂದುಮಿಂತಪ್ಪ ಕಾಳೆಗದ ಕೋಳಾಹಳಮಂ ವಿದ್ಯಾಧರ ದುರ್ದೈತ್ಯರೊಳಾದೊಡಂ ಕಂಡುದಿಲ್ಲೆಂಬಂತತೀವಕೌತೂಹಳಂ ಕೈಮಿಗೆ ಕಾದುವುದುಂ

ಜವದೇವಂ ತಣಿಯುಂಡು ಪೇಸಿ ರಣಮಂ ಮತ್ತಕ್ಕಿಸಲ್ಕಾಱದು
ರ್ಜವದಿಂ ಕಾಱಿದ ಮಾಳ್ಕೆಯಿಂದದು ಕರಂ ಭೀಭತ್ಸಮಂ ತಾಳ್ದಿ ನೋ
ಳ್ಪವರಿಂಗಂದತಿರೌದ್ರಮಾಯ್ತು ರಣರಂಗಂ ಶಾಕಿನೀಡಾಕಿನೀ
ನಿವಹಂ ಭೂತಪಿಶಾಚರಾಕ್ಷಸಗಣಂ ಸಂತೃಪ್ತಮಾಯ್ತಾಕ್ಷಣಂ ೧೦೧

ವ: ಇಂತಗುರ್ವುವಡೆದ ಸಂಗ್ರಾಮದುರ್ವಿಯೊಳ್

ಒಂದೆಡೆಯಲ್ಲಿ ಪರ್ದುಗಳ ಪಿಂಡುಗಳಾಡುತುಮಿರ್ದವಲ್ಲಿ ಮ
ತ್ತೊಂದೆಡೆಯಲ್ಲಿ ವೀರಭಟರಟ್ಟೆಗಳಾಂತುರಗಂಗಳಟ್ಟೆಗಳ್
ಕುಂದದಿಭಂಗಳಟ್ಟೆಗಳವಾಡುತುಮಿರ್ದುವು ತಮ್ಮ ಲೀಲೆಯಿಂ
ದಂದು ಪೆಣಂಗಳಿಂದೆ ರಣಮಂಡಳಮಾದುದು ರೌದ್ರಮಂಡಳಂ ೧೦೨

ವ: ತದನಂತರಮಖಿಳರಾಜಕುಮಾರಕರ ಪಡೆ ಪಡಲ್ವಟ್ಟು ಸೊಡರ್ಗುಡಿ ಯೊಳೆಱಗಿದ ಪತಂಗದಂತೆ ವಿನಾಶಮನೆಯ್ದಿ ಕುದುರೆಗಳ್ ಬಿಸಿಲ್ಗುದುರೆಗಳಂತೆ ಮಾಯಮಾಗಿ ದ್ವಿರದಂಗಳ್ ನಿದಾಘಸಮಯದ ನೀರದಂಗಳಂತೆ ಪರೆದುಪೋಗಿ ಬೆದಱೆ ಬೆಂಗೊಟ್ಟು ಕೆಟ್ಟೋಡುವುದಂ ಕಂಡು ನಿಜಸೈನ್ಯಮೆಲ್ಲಂ ಶೂನ್ಯಮಾದುದಱಿಂ ಮನ್ಯುಮಿಕ್ಕು ಕಳಿಂಗದೇಶಾಧೀಶ್ವರಂ ಪ್ರತಿಜ್ಞಾರೂಢನುಂ ಮದಗಜಾರೂಢನುಮಾಗಿ ಕರಿಸಮಾರೂಢ ಸಕಳರಾಜಕುಮಾರಕರ್ ಬೆರಸಿ ಬರ್ಪುದುಂ ಸುಷೇಣನೆಂಬ ಸೇನಾಧಿಪತಿ ಕಂಡು ಬಿರುದಿನ ಪಾಳಿಕೇತನಂಗಳಿಂದಿವಂ ಕಳಿಂಗಭೂಪಾಳಕನೆಂದಱಿದು ಸುಟ್ಟಿಸಿತೋಱಿ ತಾನುಮಿನ್ನೆನ್ನಯ ಕೂರ್ಪನಿಲ್ಲಿ ತೋರ್ಪೆನೆಂದು ಮುಂದಣ ತಂತ್ರಮಂ ಕೆಲಕ್ಕೆ ತೊಲಗಿಸಿ ದರ್ಪದಿಂದಿದಿರಾಗಿ ವಾರಣಮನಣೆದುನೂಂಕಲೊಡಂ

ಕೆಲರೆಚ್ಚರ್ ಕೆಲರಿಱಿದರ್
ಕೆಲರಿಟ್ಟರ್ ಕೆಲಬರಮಮ ಮೇಲ್ವಾಯ್ದುದುಱೆ ಮ
ಮ್ಮಳಿಯಾಗಿ ತಾಗಿ ಪೊಯ್ದರ್
ಬಲದೊಡೆಯನ ಪಡೆಯನಾ ಕುಮಾರಕರರೆಬರ್ ೧೦೩

ಘನಬಾಹಾಸಾಹಸಂಗುಂದದೆ ಭಟಸಟುಳಂ ಕೋಪದಾಟೋಪದಿಂದೊಂ
ದಿನಿಸುಂ ಮುಂಗಾಣದಾಲ್ದುಬ್ಬರಿಸಿಯೊಡನೆ ಮೇಲ್ವಾಯ್ದು ಕಾದುತ್ತುಮಿರ್ದ
ತ್ತನುವಾಗೆಂದೆಂದು ಮುಮ್ಮೊದಲಿಸಿ ನುಡಿಯುತುಂ ಮತ್ತಮಾತಂಗಯೂಥಂ
ಕುನಿದುರ್ವುತ್ತಿರ್ದ ಪಂಚಾಸ್ಯನ ವದನದ ಮೇಲ್ವಾಯ್ದು ತಾಂ ಕಾದುವನ್ನಂ ೧೦೪

ಹೂಣ ಹೊಕ್ಕಿಱಿವುತಿರ್ದ
ಕ್ಷೋಣೀಶಕುಮಾರರೆಲ್ಲರುಂ ತಂತಮ್ಮ
ಕ್ಷೂಣ ಚತುರಂಗಸೈನ್ಯ
ಶ್ರೇಣಿಕೆವೆರಸಾ ಚಮೂಪಬಲದೊಡನದಟಿಂ ೧೦೫

ವ: ಆಗಳಾ ಪತಾಕಿನೀಪತಿ ಪ್ರಕ್ಷೋಭಿಸಿ ಕಲ್ಪಾಂತಕಾಲಕೃತಾಂತನೆಂದು ಕರಾಳಲುಲಾಯಮ ನೇಱಿ ವಿಸಟಂಬರಿಯಿಸುವನಂತೆ ತಾನುಂ ನಿಜಾರೂಢವ್ಯಾಳ ಶುಂಡಾಳಮಂ ಕೂರಂಕುಶದಿಂದಣೆದೊತ್ತಿನೂಂಕಿ ಕೀಱಿ ಬಿಟ್ಟು ವಿಸಟಂಬರಿಯಿಸೆ ನೀಡಿಮೆಟ್ಟಿಯೆಂಟುಂ ದೆಸೆಯೊಳ್ ತನ್ನ ಮಯಮಾಗಿಯೆ ಪರಿದು

ಮೆಟ್ಟಿ ಕೆಲಂಬರಂ ಕೆಲಬರಂ ತುಳಿದಗ್ರನಖಂಗಳಿಂದೆ ಸೀ
ಳ್ದೊಟ್ಟಿ ಕೆಲಂಬರಂ ಕೆಲಬರಂ ಕರದಿಂ ಪಿಡಿದೆತ್ತಿ ಹಾಯ್ಕಿಯೆ
ಬ್ಬಟ್ಟಿ ಕೆಲಂಬರಂ ಕೆಲಬರಂ ಕಡೆವಾಯೊಳವುಂಕಿ ನಿಂದರಂ
ಘಟ್ಟಿಸಿ ಕೋಳ್ಗಳಿಂದಿಱಿದು ಕೊಂದುದು ಶೂರಸುಷೇಣವಾರಣಂ ೧೦೬

ವ: ಮತ್ತಂ ಕಾಲನ ಕೆಯ್ಯ ಪ್ರಚಂಡಕಾಳದಂಡದಂತಿರುಗ್ರತೆವೆತ್ತ ಭರಿಕೆಯ್ಯ ಖಳ್ಗದಿಂ ಪೊಯ್ದು ತಟ್ಟುಂತಾಱುಂಗೆಡಪಿ ಪರಿಪಂಥಿಗಳ ಪೃಥುಳಪೃತನಾ ಪ್ರತಾನಮಂ ಕಲ್ಲಗಾಣದ ದೋಣಿಯೊಳಾಡುವ ಕಣೆಯ ಬಾಯ್ಗೆ ಸಂದ ಜೋಳದ ಕಳಿಕೆಯಂತೆ ನುಗ್ಗುನುಱಿಮಾಡುತ್ತು ಮಿರ್ಪೆಡೆಯೊಳ್

ಅರಿದೆನಿಪ ಪಲವು ಶಸ್ತ್ರೋ
ತ್ಕರಪದ್ಮಾಪ್ರೌಢಿಯಂ ನಿಮಿರ್ಚುತ್ತಿರ್ದಂ
ನೆರೆದುನೋಡುವ ಸುರಾಸುರ
ರರೆಬರ್ ಬಾಪ್ಪೆಂದು ಮೆಚ್ಚಿ ಕೊಂಡಾಡುಪಿನಂ ೧೦೭

ಇಱಿದು ಕೆಲಂಬರಂ ತಡೆಯದೆಚ್ಚು ಕೆಲಂಬರನೆಯ್ದೆ ತತ್ತಱಿಂ
ದಱಿದು ಕೆಲಂಬರಂ ಜವದಿಸಿಟ್ಟು ಕೆಲಂಬರನಂದು ಕೊಂದು ನಾ
ಡೆಱೆಯರ ಮಕ್ಕಳಂ ತಪಿಸಿ ತನ್ನಯ ದೋರ್ವಲದೊಂದುಗರ್ವಮಂ
ಮೆಱೆದನದೇನುದಾತ್ತನೋ ಸುಷೇಣಚಮೂಪನವಾರ್ಯವೀರ್ಯಕಂ ೧೦೮

ವ: ಆ ಸಮಯದೊಳ್

ಮಿಗೆ ಪೊಸಪುಣ್ಗಳಿಂದುಗುವ ನೆತ್ತರ ಪೂರಮದುರ್ವಿ ಘುರ್ಘುಗಿಲ್
ಘುಗಿಲೆನಲುಣ್ಮಿ ಪೊಣ್ಮಿ ಸಮರಾಂಗಣಭೂಮಿಯೊಳೆಯ್ದೆ ತೀವಿರಲ್
ಬಗೆಗೊಳಿಸಿತ್ತು ಕೆಂಗೆಱೆಯವೋಲದಱೊಳ್ ಮುಱಿದಾಯುಧಾಳಿ ಶೋ
ಭೆಗೆ ನೆಲೆಯಾಯ್ತು ಮೇಗೆಪೊಳೆದಾಡುವ ಮೀಂಗಳ ಪಿಂಡಿದೆಂಬಿನಂ ೧೦೯

ವ: ಇಂತು ಕಟ್ಟಾಸುರಮಾಗಿ ಕಾದುವ ಕಳದೊಳ್ ಕಡಿಖಂಡವಾಗಿ ಪೊಯ್ದಾಡಿ ಬಸವಳಿದು ಕೋಡನೂಱಿ ಕೆಡೆದು ಸತ್ತ ಕೂರಾನೆಗಳಾವಳಿ ಕಾಳ್ಕಿಚ್ಚಿನ ದಳ್ಳುರಿ ಸುತ್ತಿಮುತ್ತಿ ಪತ್ತಿದ ಬೆಟ್ಟುಗಳಿಟ್ಟಳಮೆಂಬಂತಿರ್ದುದು ಸರ್ವಾಂಗದೊಳೆಡೆದೆಱಿ ಪಿಲ್ಲದೆ ಕೊಂಡು ತೋಱುವ ಬಲ್ಲೆಱುಗಳ ನೆಱಿವಣೆಯಿಂ ತಾಱುಂತೀಱಾಗಿ ಬೀಳ್ದು ಸತ್ತ ಕುದುರೆಗಳ ಬಳಗಂ ವಹ್ನಿಜ್ವಾಲಾಕಲಾಪಂ ಬಳಸಿ ಸುಡುವ ಕೇಸಿಟ್ಟಗೆಯೊಟ್ಟಿಲೋಳಿಯೆಂಬಂ ತಿರ್ದುದು ಕೊಂಡ ನೆಲನಂ ಕೊಡೆನೆಂಬ ಚಲದಿಂ ಬಲಿದಿರ್ದ ತೊಡೆ ಸಂಕಲೆಯ ಬಿರುದಿಂದೆಸೆವ ತುಳಿಲಾಳ್ಗಳ್ ಮಮ್ಮಳಿಯಾಗಿ ಕಾದಿ ಪಲವುಬಲು ಘಾಯಂಗಳ ಮೇಳದಿಂದತ್ತಲು ಮಿತ್ತಲುಂ ತಾಳುಂತಟ್ಟಾಗಿ ಬಿಳ್ದುಸತ್ತ ಪಾಯದಳಮೆಲ್ಲಂ ಜೋಳದ ಬೆಳೆಯಂ

ತಾಳಿಕ್ಕಿದಂತಿರ್ದುದೀ ತೆಱದಿಂದುಭಯಬಲದ ಬಲ್ಲಣೆಯ ನೆತ್ತರ ನೆಣದ ಬಣಬೆಗಲಸಿದ ಕರಿತುರಗನರಭಟಕೋಟಿಗಳ ಗಣನೆಯಿಲ್ಲದ ಪೆಣಂಗಳ ಗಣಂಗಳಿಂ ತಿಂತಿಣಿಗೊಂಡು ಪಡಲಿಟ್ಟ ರಣಾಂಗಣಂ ಧರಣಿಯೆಂಬ ರಕ್ಕಸಿ ತಿಂದು ಮಗುಳ್ದುಗುಳ್ದಳೆಂಬಂತೆ ಕಡುರೌದ್ರಮಪ್ಪಿನಂ ಕಡಿಕೆಯ್ದು ಕಾದುತುಮಿರೆ

ಸುಭಟ ಸುಷೇಣಸೈನ್ಯಪತಿ ಶಸ್ತ್ರಸಮಾಹತಿಗಳ್ಕಿಬಳ್ಕಿ ತಾ
ನಭಿನವಭಾವಮಂ ಪಡೆದು ಬಾಯನೆ ಬಿಟ್ಟು ಕುಮಾರಸಂಕುಳಂ
ಪ್ರಭಯದಿನೋಡಿದತ್ತು ಕಿಱಿದುಂ ಕಿಱಿದುಂ ಶರಣೆಂದು ಸಾರ್ದುದೆ
ಯ್ದಭಿನವದರ್ಪದಿಂ ಕಿಱಿದು ಸತ್ತುದು ಸಿಕ್ಕಿದುದಿತ್ತು ಸೂಱೆಯಂ ೧೧೦

ವ: ಇಂತು ಸಕಳಕುಮಾರಕರ ಚತುರಂಗಬಲಮೆಲ್ಲಂ ಕಡೆಗಾಲದೊಳಡಸಿದ ಬಱಿಸಿಡಲ ಗಡಣದ ಕಡುಪಿನೊಳ್ ತೊಡರ್ದ ನಂಜಿನ ಗಾಳಿ ಸುಟ್ಟುರೆತ್ತಿ ಬೀಸಿ ಪೊಯ್ದಡೆ ಸಾಲಿಟ್ಟು ಸತ್ತುದೆಂಬಂತೆ ಪೆಣಮಯಮಾದುದಂ ಕಂಡು ಕಳಿಂಗಭೂಪಾಳಕಂ ಕಿಡಿ ಕಿಡಿವೋಗುತ್ತುಂ ತಾಂ ಪೊರೆದ ತನ್ನ ನಚ್ಚಿನ ಮೆಚ್ಚಿನ ಲಕ್ಕಲೆಕ್ಕದ ಮೊನೆಯನಾಯಕರ್ ಸುತ್ತಿರ್ದೊಡವರನೆಕ್ಕಕ್ಕೆಯಿಂ ಬೇಱವೇಱ ಪೆಸಗೊಂಡು ಮೂದಲಿಸಿ ಬೆಸಸಿ ಬಿಡಲವರುಂ ಪೋಗಿ ಪೊಣರ್ದು ಸುಷೇಣನ ಕೈಯ ಕೈದುಗಳ ಮೊನೆಯ ಕೋಳಿ ಗಳ್ಕೋಡಿ ಬಲ್ಪಡಂಗಿ ಸಮುದ್ದಂಡಗಂಡಭೇರುಂಡನ ಪೆಂಡಿನೊಳ್ ಕಡಂಗಿದಿರ್ಚಿದ ಶರಭದ ನೆರವಿಯಂತೆ ಪರೆದು ಬಿಗುರ್ತೋಡುವುದುಂ

ಗಂಡುಗಲಿ ಬೂದಿಪಾಱಿದ
ಕೆಂಡದ ತೆಱದಿಂದಮಿರ್ದು ಕಗ್ಗನೆಗನಿದಂ
ಚಂಡಮನಂ ಪಡೆಯಳಿವಂ
ಕಂಡುಂ ಕಡುಗಾಯ್ದುಗುಂದಿ ತೋರ್ಪನೆ ಜಗದೊಳ್ ೧೧೧

ವ: ಅಂತತ್ಯುಗ್ರಮೂರ್ತಿಕನಾಗಿ ನಿಂದು ತನ್ನಂಗವಟ್ಟದೊಳ್ ತೊಟ್ಟು ಮೆಱೆವ ಬಿನ್ನಣದಿಂ ಸಮೆದ ಚೆನ್ನ ಹೊನ್ನ ರನ್ನದ ಪನ್ನಣದ ಬೆಳಗಿನೊಳ್ ಬೆರಸಿ ಪುದಿದಖಂಡವಾದ ಕೋದಂಡದ ಪ್ರಭಾಮಂಡಳದಿಂ ಥಳಥಳಿಸಿ ಪೊಳೆಯುತ್ತುಂ ಮಾರ್ತಂಡನಂತೆ ತೀವ್ರತೇಜಂಬಡೆದು ಸುಷೇಣನಂ ನೋಡಿ ತನ್ನೊಳಿಂತೆಂದಂ

ಕ್ಷುಲ್ಲಕಮೃಗಂಗಳಂ ತಳು
ವಿಲ್ಲದೆ ಗೆಲ್ದನಿತಱಿಂದೆ ಗೆಲಲಾರ್ತಪುದೇ
ಬಲ್ಲಿದ ಕೇಸರಿಯಂ ಗಜ
ಮೆಲ್ಲರನಾಂತನಿತಱಿಂದಮೆನಗಾಂತಪನೇ ೧೧೨

ವ: ಎಂದು ಸಾಹಸಮಂ ಪೂಣ್ದು ಸಾವಂಗೆ ಸಂಗಡಮೇಕೆಂಬಂತೆ ಮಾಣ ದೊಂದೆಮೆಯ್ಯೊಳೆ

ನಿಜಮತಂಗಜಮನಣೆದುನೂಂಕಿ ನಿಶ್ಶಂಕವೃತ್ತಿಯಿಂ ನಡೆದು ಸಾರೆಗೆಯ್ತಪ್ಪುದುಮಾಗಳವನಂ ಸುಷೇಣಂ ಕಂಡು ತಾನುಮೇಕಾಂಗದಿಂದವಂಗಿದಿರಾಗಿ ಮದಜಳದ ಕದಡುಕೆದಱುವ ಕಾಳಗತ್ತಲೆಯ ಮೊತ್ತಮನೊತ್ತರಿಸಿ ಬೆಳ್ದಿಂಗಳ ಬಿಸಿಲ ಪಸರಮಂ ಪತ್ತಿಸುವ ಮುತ್ತಿನ ಮಾಣಿಕದ ಜೋಡಿನ ಪೊಳೆಪಿಂದಸದಳಮೆಸೆವ ಮದಕಳಮನಣೆದು ನೂಂಕೆ ಮೆಟ್ಟುವ ಚರಣದುರವಣೆಗೆ ಧರಣೀವಳಯಮೊರ್ಗುಡಿಸಿ ಕಡುಸೆಡೆದಳ್ಳಾಡಿ ತಳ್ಳಂಕಗೊಳ್ವಿನಂ ಪಗೆವನ ಹರಣಮಂ ಕಬಳಂಗೊಳಲೆಂದು ಬರ್ಪ ಮಿಳ್ತುದೇವತೆಯೆಂಬಂತೆ ಬಂದು ಪ್ರಸಕ್ತಪಾಶಮಾತ್ರದಳವಿಯೊಳಾಂತುನಿಂದ ಪಹಾಸವಚನದಿಂದಾ ಸುಷೇಣನಿಂತೆಂದಂ

ಭಂಡತನದಿಂದ ಲೋಗರ
ಪೆಂಡತಿಯಂ ಬೇಡಿ ದೂತನಿಂ ನುಡಿಯಿಸುವು
ದ್ದಂಡಿಕೆಯಲ್ಲಿದು ಖಳರಣ
ಮಂಡಳಮಿನ್ನಱಿಯಲಕ್ಕುಮೆನಗಂ ನಿನಗಂ ೧೧೩

ವ: ಎಂದು ಮೂದಲಿಸಿ ಮಾರ್ಕೊಂಡರಾತಿಯನಾಂಕೆಗೊಂಡು

ಧರೆ ನಡುಗಿತ್ತು ಸಪ್ತಜಳರಾಶಿಗಳುಂ ಕದಡೆದ್ದವೆಂಟುದಿ
ಕ್ಕರಿಗಳ ಸೊಕ್ಕಡಂಗಿಮದು ದಿಕ್ಪತಿಗಳ್ ದೆಸೆಗೆಟ್ಟು ಭೀತಿಯಂ
ಧರಿಸಿದರಿರ್ವರುಂ ನೃಪತಿಗಳ್ ತಿರುವಂ ತಿರುವಾಯೊಳಿಟ್ಟು ಕೋ
ಪರಸದೆ ನೀಪಿ ಜೇವೊಡೆದ ಚಾಪದ ಟಂಕೃತಿ ತೀವೆ ಲೋಕಮಂ ೧೧೪

ವ: ಇಂತು ಸಮರಾವಷ್ಟಂಭದಾಡಂಬರಮನಪ್ಪುಕೆಯ್ದು

ಇವರೇಸಚ್ಚರಿ ನಿಟ್ಟಿಸಲ್ಕರಿದು ತೋಡುಬೀಡನಂತಾದೊಡಂ
ಜವದಿಂ ತಪ್ಪಿಸಿಕೊಳ್ವ ಬಿನ್ನಣಮನಾರುಂ ಕಂಡರಿಲ್ಲೀ ಮಹೀ
ಭುವನಾಭ್ಯಂತರದಲ್ಲಿ ಮುನ್ನಮೆನುತುಂ ಕೊಂಡಾಡಿ ಭಾಪೆಂದು ಮ
ಚ್ಚುವಿನಂ ನೋಡುವ ಪಾಡಿಗಳ್ ವಿವಿಧಶಸ್ತ್ರಾಭ್ಯಾಸಮಂ ತೋಱಿದರ್ ೧೧೫

ವ: ಅದಲ್ಲದೆಯುಂ

ಪರವೆಣ್ಗಾಗಿಸಿ ಬೇಡಿ ಬಾಯ್ವಿಡುವ ಬಾಯಂ ಸೀಳ್ವ ತಕ್ಕಿಮಗಮಿ
ಸರಮೆನ್ನೊಳ್ ಕದನಕ್ಕೊಡರ್ಚಿ ಜಯಮಂ ಕೈಕೊಂಬೆನೆಂಬೀ ಪರಿ
ಸ್ಮರಣಕ್ಕಾಶ್ರಯಮಾದ ನಿನ್ನೆರ್ದೆಯನಿರ್ಭಾಂಗಂಗೆಯಲ್ ತಕ್ಕುದೀ
ಸರಮಿನ್ನೇನೆಲೊ ಕೊಳ್ ಕೊಳೆಂದು ನೃಪನಂ ತೊಟ್ಟೆಚ್ಚನಾ ಸೈನ್ಯಪಂ ೧೧೬

ವ: ಆಗಳ್ ಬರ್ಪ ಬಾಣಂಗಳಂ ಖಂಡಿಸುವ ತಾಗುವಂಬುಗಳ ನಿವಾರಿಸುವ ಪ್ರೌಢಿಯಂ ಮಸೆಮುಟ್ಟದೆಚ್ಚಾಡುತ್ತಂ ಬಂದು ಸನ್ನಿದಮಾದಕಾರಣಂ ಬಿಲ್ಲಾಗ್ಗೆಗಮಂ ಬಿಟ್ಟು

ಮುಟ್ಟೆವಂದಿರ್ವರುಂ ಕಡು
ದಿಟ್ಟಿಸಿನೋಡುತ್ತು ಶಸ್ತ್ರವಿದ್ಯೆಯ ಜಾಣಂ
ಕಟ್ಟಿದಿರೊಳ್ ತೋಱಿಸಿದರ್
ಪುಟ್ಟುವಿನಂ ಕೈದು ಜಾಣರೋಳಿಗೆ ಚೋದ್ಯಂ ೧೧೭

ವ: ಮತ್ತಂ

ಪರನಿಟ್ಟ ಕುಂತಮಂ ನಿಜ
ಕರತಳಕುಂತದೆ ನಿಶಾತತೋಮರಮಂ ತೋ
ಮರದಿಂದೆ ನುಗ್ಗುಗುಟ್ಟಿದ
ನರವರಿಪರ ಮನದ ಸಂದೆಗಂ ಪೋಪಿನೆಗಂ ೧೧೮

ವ: ಇಂತು ಪಗೆವನ ಕರಮುಕ್ತವಿವಿಧಾಯುಧಂಗಳಿಂ ತನ್ನಯ ಕರತಳ ದಿವ್ಯಾಯುಧಂಗಳಿಂ ಖಂಡಿಸಿ ತದನಂತರಂ ಖಳನಂ ಕೊಂಡಾಡಲೇಕೆಂದು

ಇನ್ನಾದೊಡಮೆಲೆ ಭೂಪತಿ
ಯೆನ್ನಂ ಶರಣೆಂದು ಪೊಕ್ಕು ಸಾಯದೆ ಪೋಗೈ
ನಿನ್ನಯ ಸತಿಯರ ಮೊಗ
ಮನ್ನೋಡು ಪ್ರಾಣದಾನಮಂ ನಿನಗೀವೆಂ ೧೧೯

ಬೇಡಿಕೊಳ್ಳಭಯದಾನಮ
ನಾಡದಿರುದ್ದಂಡವೃತ್ತಿಯಂ ದಾಸತ್ವಂ
ಗೂಡಿಯೋಲಯಿಸೆ ನಿನ್ನಯ
ನಾಡೊಳ್ ಸುಖಮಿರು ದಲೆಯ್ದು ಮೃತ್ಯುಂಜಯಮಂ ೧೨೦

ವ: ಎನಲೊಡಂ ಕಡುಕನಲ್ದು ಕೆಡುವ ಸೊಡರ್ಗುಡಿಯಂತುದ್ದಮುರಿದು ಶಕ್ತಿಯಂ ಪಿಡಿದಿಡಲೊಡಮದಂ ವಂಚಿಸಿ

ಸಿಂಗದ ನಾದದಿಂ ಗಜಱಿ ಗರ್ಜಿಸಿ ವೀರಸುಷೇಣಸೈನ್ಯನಾ
ಥಂ ಗುರುಭಕ್ತಿಯಂ ಪಿಡಿದು ಹೂಣಿಸಿಡಲ್ಕೆ ಕಳಿಂಗಭೂಮಿಪಾ
ಳಾಂಗಮನುರ್ಚಿ ಪೋಗಲವನಾಕ್ಷಣದೊಳ್ ಗತಜೀವನಾಗಿ ಮಾ
ತಂಗದಮೇಲೆ ತಾಂ ಮಲಗಿದಂ ಪಗೆಗೀಯೆನು ಬೆನ್ನನೆಂಬಿನಂ ೧೨೧

ವ: ಅಂತು ಸತ್ತೊಡಂ ಶತ್ರುವಿಂಗೆ ಬೆಂದೋಱೆನೆಂಬೀ ಪ್ರತಿಜ್ಞೆಯಂ ವ್ಯಕ್ತೀಕರಿಸುವಂತೆ ಕಳಿಂಗಭೂಪಾಳಕನ ಕುಣಪಂ ಮೆಲ್ಲನೆ ಮಲಂಗುವುದುಂ

ಆಸಮಯದೊಳೊಗೆದುದು ದೇ
ವಾಸುರರೆಲೆ ವೀರ ಭಾಪುಭಾಪುರೆ ಸರಿಯಿ
ಲ್ಲೀಶಬ್ದಂ ಸುರತರುಕುಸು
ಮಾಸಾರಂ ಸುರಿದುದೊಡನೆ ತತ್ಕರಮುಕ್ತಂ ೧೨೨

ವ: ಅದಂ ಕಂಡು ವೀರರಸೋತ್ಸಾಹಪರಿವರ್ಧನದಿಂದುದ್ಧತನಾದ ಸುಷೇಣಚಮೂಪಂ ಮನದೊಳ್ ಪೆಟ್ಟುವೆರ್ಚೆ ಬಳಿಯಮಭಯಘೋಷಣಮಂ ಮಾಡಲ್ವೇಳ್ದು ಸುತ್ತಂ ನೋಡುತ್ತುಮಿರ್ಪುದುಂ

ರಕ್ತಾಪಗಾಪ್ರವಾಹಸು
ಯುಕ್ತಂ ಘನಪುಷ್ಕರಾರ್ಧಪರಿರಂಜಿತಮ
ಭ್ಯುಕ್ತೇಷ್ವಮಾನುಷೋತ್ಕರ
ಸಕ್ತಂ ನರಲೋಕದಂತಿರೆಸೆದುದು ಸಮರಂ ೧೨೩

ವ: ಅಲ್ಲಿ

ಉದಯಾಚಳದಂತಿರ್ದುದು
ಮದಗಜಮಂದದಱ ಮೇಲೆ ಘನತರತೇಜಂ
ಪುದಿದಿರ್ದುದಯಿಪ ರವಿಯಂ
ದದಿನೊಪ್ಪಿದನಾ ಸುಷೇಣನುನ್ನತರಾಗಂ ೧೨೪

ವ: ಆಗಳಿಷ್ಟಜನಮುಖಕಮಳವಿಳಾಸಮಂ ವಿದ್ವಿಷ್ಟಜನಲಪನಕುವಳಯ ಸಂಕೋಚಮಂ ಮಾಡುತ್ತುಂ ಸಂಗ್ರಾಮಭೂಮಿಯಂ ಪೊಱಮಟ್ಟು ತತ್ಸಮೀಪದೊಳೊಂದುನ್ನತ ಸ್ಥಾನದೊಳ್ ನಿಂದಿರ್ದು ಘಾಯಂಬಡೆದಾಳ್ಗಳಂ ಸನ್ಮಾನವಾಹನದಾನ ಪೂರ್ವಕಂ ಬೀಡಿಂಗೆ ಕಳಿಪಿ ಸ್ವೀಕೃತನಿಜಜೀವಿತ ಋಣನಿರ್ಣಯನಿಮಿತ್ತಂ ಸತ್ತ ತನ್ನಯ ಶರೀರಸಂಬಂಧಾದಿಗಳ ಬೇಕಾದ ಭೂಕಾಂತರ ಶರೀರದಹನಲೌಕಿಕಕ್ರಿಯಾವ್ಯಾಪಾರಮಂ ನಿರ್ವರ್ತಿಸಿ ಪಿಡಿದೆತ್ತಾನೆಕುದುರೆಗಳನವರವರ ವಶಕ್ಕೆ ಕೊಟ್ಟು

ಕಡುಚೆಲ್ವೆಳವೆಂಡಿರ್ಗಳ
ಗಡಣಮುಮಂ ಪಿಡಿದು ತಂದು ತನ್ನರಮನೆಯೊಳ್
ಮಡಗಿಟ್ಟಂ ಶರಣಂಬೊ
ಕ್ಕಡಮವರಂ ಕಾದು ತಮ್ಮ ಪದಮಂ ಕೊಟ್ಟಂ ೧೨೫

ವ: ಸೂಱೆಸಿಕ್ಕಿದ ಮುತ್ತಿನ ಮಾಣಿಕ ಪಚ್ಚೆವರಲ ಪರಿಪರಿಯ ಬಿನ್ನಣವೆಸೆದ ಜೋಡುಹಕ್ಕರಿಕೆ ಪೊಂದೊಡವು ಮುಂತಾದ ಸುವಸ್ತುಗಳೆಲ್ಲಮನವರವರ್ಗೆ ಯೋಗ್ಯತಿಕೆಯನತಿಕ್ರಮಿಸದಿತ್ತು ರಣಮನೂಡಲ್ವೇಳ್ದು ಬಳಿಯಮಲ್ಲಿಂ ತಳರ್ದು

ವಿಜಯಪತಾಕೆಗಳ್ ನಭಮನಳ್ಕಿಱಿಯಲ್ ಜಯಪದ್ಯಪಾಠಕ
ವ್ರಜನಿನದಂ ಮಹಾವಿಜಯವಾದ್ಯನಿನಾದದೊಳೊಂದಿ ದಿಕ್ಕಿನೊಳ್
ಗಜಬಜಿಸುತ್ತಿರಲ್ ಬಹಳಸೈನ್ಯಸಮಾವೃತನಾಗಿ ಬೇಗದಿಂ
ನಿಜಶಿಬಿರಕ್ಕೆ ಪೋದನತಿಲೀಲೆಯಿನಂದು ಸುಷೇಣಸೈನ್ಯಪಂ ೧೨೬

ವ: ಕಾಳಿಗಮಂ ಗೆಲ್ದು ವಿಜಯಲಕ್ಷ್ಮೀಭುಜಲತಾಸಮಾಲಿಂಗನಸಂಚಿತ ರೋಮಾಂಚನಾಗಿ ದೇವೇಂದ್ರವಿಭವದಿಂದಂ ಬರುತ್ತುಮಿರ್ದ ಸುಷೇಣನೆಂಬ ಸೇನಾಧಿಪತಿಯ ನಿದಿರ್ಗೊಳಲ್ ಪೊಱಮಡುವ ಕಳಶಕನ್ನಡಿಯ ಪುಣ್ಯವನಿತಾಜನದ ಮಂಗಳಾಚಾರದ ಸಂಗೀತನರ್ತನದ ತಿಂತಿಣಿ ಮುಂತಾದ ವಿಜಯೋತ್ಸಾಹ ಸಂಭ್ರಮಮಾಡಂಬರದಿಂ ವಿಡಂಬಿತಮಾದ ತನ್ನಯ ಬೀಡಂ ಪೊಕ್ಕು ತುಱುಗಿ ತಳ್ತು ಮಿಳಿರ್ದು ಮಿಳ್ಳಿಸುವ ಪರಿಪರಿಯ ಗುಡಿಗಳ ಗಡಣದಿಂ ಕೇರಿಗೇರಿಯೊಳ್ ಬಿತ್ತರಂಬೆತ್ತಿತ್ತರದೊಳಿಕ್ಕಿದ ಮುತ್ತಿನ ರಂಗಾವಲಿಗಳಾವಳಿಗಳಿಂದೆಲ್ಲೆಡೆಯೊಳಂ ನಿಲ್ಲದೆ ಬಾಜಿಸುವ ಬದ್ದವಣಂಗಳಿಂ ಚಂದ್ರೋದಯದೊಳಭಿವೃದ್ಧಿಯನೆಯ್ದಿದ ವಾರ್ಧಿಯಂತೆ ಬೆಡಂಗುವಡೆದು ಅಂಗಡಿಗೇರಿಗಳಂ ನೋಡುತ್ತುಮರಮನೆಗೆವಂದೊಳಗಂ ಪೊಕ್ಕು ತನ್ನೊಡನೆಬಂದ ರಾಜತನೂಜ ಸಮಾಜಮಂ ನಿಜನಿಜನಿವಾಸಕ್ಕೆ ಬೀಳ್ಕೊಟ್ಟು ಕಳಿಪಿ ತಾನುಂ ಮಜ್ಜನಭೋಜನವ್ಯಾಪಾರಪರನಾಗಿ ಮೇಳದ ಕೆಳದಿಯರೊಡನೆ ಸಂಜಾತಸಂಗ್ರಾಮ ಚರ್ಚಾಸಂಸ್ಥಿತಿಯಂ ನುಡಿಯುತ್ತುಮಂದಿನಿರುಳಂ ಕಳಿದು ಮಱುದಿನದೊಳ್

ಪಿಡಿವಡೆದಿರ್ದ ರಾಜಸುತರಂ ಕರಸಿನ್ನುಱೆ ನಾವು ಪೇಳ್ದುದಂ
ತಡೆಯದೆ ಮಾಡುತುಂ ಸುಖದೆ ನೀವಿರಿಯೆಂದು ನಿಯಾಮಿಸುತ್ತುಮಾ
ಗ[ಡೆ] ರಣದಲ್ಲಿ ಸಿಕ್ಕಿದ ತುರಂಗಮ ವಾರಣಸಂಚಯಂಗಳಂ
ಸಡಗರದಿಂದೆ ತಾಂ ತರಿಸಿ ನೋಡುತುಮಿರ್ದನುಪಾತ್ತಕೌತುಕಂ ೧೨೭

ವ: ಮತ್ತಮನೇಕರಾಜಕುಮಾರಕರಂ ಘನಪ್ರತಿಷ್ಠಾಧಿಷ್ಠಿತರಂ ಮಾಡುತ್ತು ಮಾ ಸುಷೇಣನೆಂಬ ಸೇನಾಧಿಪತಿ ಕತಿಪಯದಿನಮಲ್ಲಿರ್ದು ಸಮಸ್ತ ರಾಜಕಾರ್ಯಕಾರಣ ಕರಣಾನಂತರಂ ತನ್ನಯ ಸ್ವಾಮಿಯಪ್ಪ ಧರ್ಮನಾಥನ ಶ್ರೀಚರಣಸಮಾಳೋಕನದೊಳ್ ಕಡುತವಕ ಮನಪ್ಪುಕೆಯ್ದು ನಿಜಪುರಗಮನೇಚ್ಛೆಯಿಂ ಶುಭದಿವಸಾಗ್ರೇಸರಮಾದೊಂದು ವಾಸರದೊಳ್ ಬೀಡನೆತ್ತಿಸಿ ಸತ್ವರದಿಂ ನಿಚ್ಚವಯಣಂಬಂದು ರತ್ನಪುರಮರೆಗಾವು ದದರ್ಧಂತರಮೆನಲ್ ಬೀಡಂಬಿಟ್ಟಿರ್ಪುದುಮನ್ನೆಗಮಿತ್ತಲ್

ದೂತಂ ಸಂಗ್ರಾಮವೃತ್ತಾಂತದ ವಿವರಮದೆಂತಿರ್ದುದಂತೆಲ್ಲಮಂ ವಿ
ಖ್ಯಾತಂ ನೀತಂ ಸುಷೇಣಂ ಧುರದೊಳಹಿತರಂ ಕಾದಿ ಕೊಂದಂದಮಂ ಪೆ
ರ್ಮಾತಿಂದಿಂತೆಂದು ಪೇಳ್ದಂ ಸಭೆಯುಮರಸನುಂ ಮೆಯ್ವೆರ್ಚಿ ಕೇಳ್ದಂ
ದಾತಂಗೆಯ್ದಿತ್ತು ಬೇಳ್ಪರ್ಥಮನುಱೆತಲೆಯಂ ತೂಗಿ ಕೊಂಡಾಡುವನ್ನಂ ೧೨೮

ವ: ಇಂತಾ ದೂತಂ ಧರ್ಮನಾಥನ ಮುಂದೆ ಕಾಳೆಗದ ವಾರ್ತೆಯಂ ಸವಿಸ್ತರಂ ಪೇಳೆ ಕೇಳ್ದೆಲ್ಲರುಂ ಕೊಂಡಾಡುವೆಡೆಯೊಳಾಗಳೊರ್ವನಾ ಸುಷೇಣಪ್ರೇರಿತ ವಾರ್ತಾಹರಂ ಬಂದು ದೇವ ಸುಷೇಣಚಮೂಪಂ ಬಂದನೆಂದು ಬಿನ್ನಪಂಗೆಯ್ಯೆ ಬರವೇಳೆಂಬುದುಂ

ದೆಸೆಯಂ ಭೂಷಾಂಶುಜಾಳಂ ಬೆಳಗೆ ಗಗನಮಂ ಪಲ್ಲವಚ್ಛತ್ರಮೆಯ್ದು
ರ್ವಿಸೆ ಚಂಚಚ್ಚಾಮರಂಗಳ್ ಪೊಳೆದು ಪವನನಂ ಪೆರ್ಚಿಸಲ್ ವಾದ್ಯಮುಂ ಘೂ
ರ್ಣಿಸೆ ನಾನಾಚಾತುರಂಗಂ ಬಳಸಿ ಬರುತಿರಲ್ ಸುತ್ತಲುಂ ಭಟ್ಟರುಂ ಕೀ
ರ್ತಿಸೆ ತನ್ನಂ ಬಂದುಪೊಕ್ಕಂ ನಿಜನಗರಮನಾನಂದದಿಂದಂ ಸುಷೇಣಂ ೧೨೯

ಪಿರಿದಾದತಿಸಂಭ್ರಮದಿಂ
ಕರಮೊಪ್ಪಂಬಡೆದ ರತ್ನಪುರದೊಳಗಂ ಬಿಡ
ದರಸಂ ನೋಡುತ್ತುಂ ಬಂ
ದರಮನೆಯನ್ನೆಯ್ದೆ ಮೊದಲಬಾಗಿಲೊಳಿರ್ದಂ ೧೩೦

ವ: ಮತ್ತಂ ಸೇವಾಲಕ್ಷಣವಿಚಕ್ಷಣನಪ್ಪಾ ಸುಷೇಣಂ ತನ್ನೊಡನೆ ಬಂದ ಸಮಸ್ತಚಾತುರಂಗಬಲಮೆಲ್ಲಮನಲ್ಲಿರಿಸಿ ಸಭಾಪ್ರವೇಶಪ್ರಾಪ್ತ ಕತಿಪಯಾಪ್ತಜನಂಬೆರಸು ತನ್ನೆರಡುಂ ಕೈಗಳೊಳನರ್ಘ್ಯರತ್ನಂಗಳ ಕಾಣಿಕೆಯಂ ಪಿಡಿದು

ಸಕಳಸಭಾಜನಂಗಳ ವಿಲೋಲವಿಲೋಚನ ಕೈರವಂಗಳಂ
ವಿಕಚಿಸುತುಂ ವಿರಾಜದವತಂಸವಿಕೀಲಿತಪೀನಚಾರುಮೌ
ಕ್ತಿಕಕಿರಣಾಳಿ ಬಿತ್ತರಿಸೆ ನುಣ್ಜೆಳುದಿಂಗಳ ಚೆಲ್ವನಾ ಸಭಾ
ಧಿಕಗೃಹದಲ್ಲಿ ಪೊಕ್ಕನಿರದಂಬುದದೊಳ್ ಪುಗುವಿಂದುವೆಂಬಿನಂ ೧೩೧

ವ: ಅಂತು ಪೊಕ್ಕು ತತ್ಸಭಾಮಂಡಳಮಧ್ಯಸ್ಥಮಣಿಮಯಸಿಂಹಾಸನ ಸಮಾಸೀನನಾದ ಧರ್ಮಜಿನನಾಥನ ಶ್ರೀಪಾದದಂತಿಕಕ್ಕೆವಂದು ಮುಟ್ಟಿದ ಭಕ್ತಿಯಿಂ ಕಾಣಿಕೆಯಂ ಕೊಟ್ಟು ಸಾಷ್ಟಾಂಗಪ್ರಣತನಾಗಿರ್ದೇಳೆನಲೊಡಮೆಳ್ದು ಕೈಗಳಂ ಮುಗಿದು ನೊಸಲ್ಗೆತಂದು ಜಯಜಯಯೆಂದು ನಿಜಪತಿ ಭ್ರೂಲತಾಚಾಲನಭೇದಪರಿಸಂಜ್ಞಿತ ಸ್ಥಾನದೊಳ್ ಕುಳ್ಳಿರ್ದು

ಚಾರುಕರ್ಪೂರಪಾರೀ
ಪೂರಂಬೆರಸಿರ್ದ ಚೆಲ್ವವೀಳೆಯಮಂ ಜಗ
ದಾರಾಧ್ಯಂ ಕುಡೆ ಕೊಂಡಂ
ಕಾರುಣ್ಯರಸೈಕಪಾತ್ರನಪ್ಪ ಸುಷೇಣಂ ೧೩೨

ವ: ಮತ್ತಂ ತಾಂ ತಂದನರ್ಘ್ಯಂಗಳುಮಪೂರ್ವಂಗಳುಮಾದುಪಾಯನಂಗಳನಾ ಧರ್ಮನಾಥನ ಶ್ರೀಚರಣೋಪಾಂತದೊಳರ್ಚಿಸಿ ಬಳಿಯಂ ಕಾಳೆಗದ ಕೋಳಾಹಳಂ ಮೊದಲ್ಗೊಂಡು

ಕಡೆವರಂ ಪೇೞ್ದು ಭವದೀಯ ಶ್ರೀಪಾದಪ್ರಸಾದದಿಂದಂ ವಿಜಯಿಯಾಗಿ ಬಂದೆನೆಂದು ಬಿನ್ನಪಂಗೆಯ್ವುದುಂ

ತನ್ನಯ ಸೈನ್ಯನಾಯಕನೆನಿಪ್ಪ ಸುಷೇಣಚಮೂಪನಂ ಕರಂ
ಮನ್ನಿಸಿ ಮೆಚ್ಚಿಮೆಚ್ಚಿ ಪೊಗೞ್ದಾತನ ಬುದ್ಧಿಸಮೃದ್ಧಶೌರ್ಯಮಂ
ಸನ್ನುತನಾದ ಧರ್ಮಜಿನನಾಥನವಂಗಿರದಿತ್ತನರ್ಥಿಯಿಂ
ಪೊನ್ನನನರ್ಘ್ಯರತ್ನಮಯಭೂಷಣವಸ್ತ್ರಸುವಾಹನಂಗಳಂ ೧೩೩

ವ: ಇಂತು ತಣಿವೆ ಮೇರೆಯಾಗಿ ಸುಷೇಣಂಗೆ ಬೇೞ್ಪರ್ಥಮನಿತ್ತು ಮತ್ತಂ ಕರ್ಪೂರ ತಾಂಬೂಳಸಮರ್ಪಣಾನಂತರಂ ನಿಜನಿವಾಸಕ್ಕೆ ಪೋಗೆಂದು ಬೀಳ್ಕೊಟ್ಟು ಕಳಿಪಲೊಡಂ

ಒಡೆಯನರಮನೆಯ ಬಾಗಿಲೊ
ಳಡಸಿರ್ದ ಸಮಸ್ತಸೇನೆವೆರಸು ಸುಷೇಣಂ
ಕಡುಚೆಲ್ವ ತನ್ನ ಮನೆಯಂ
ಸಡಗರದಿಂ ಪೋಗಿ ಪೊಕ್ಕು ಸುಖದಿಂದಿರ್ದಂ ೧೩೪

ವ: ತದನಂತರಂ ಕೈಮಿಕ್ಕು ಪೆರ್ಮೆಗೆ ಪೆರ್ಮನೆಯಾದ ಧರ್ಮಜಿನನಾಥ ನೋಲಗದ ಸಾಲೆಯೊಳ್

ಪಲವುಂ ದೀಪಂಗಳಿಂ ಬಂದತಿಶಯಘನವಸ್ತ್ರಂಗಳಂ ಚೆಲ್ವರತ್ನಂ
ಗಳನುನ್ಮತ್ತೇಭವೃಂದಂಗಳನುರುತರಘೋಟಂಗಳಂ ತತ್ಪ್ರಧಾನರ್
ನಲವಿಂ ತೋಱುತ್ತುಮಿರ್ದರ್ ಪೆಸರನುಸುರ್ದೆಲೆ ಸ್ವಾಮಿ ಕೊಟ್ಟಟ್ಟಿದಂ ಕುಂ
ತಳರಾಜಂ ಗೂರ್ಜರೇಶಂ ಕಳಿಪಿದನಿರದಿತ್ತಂ ಮಹಾಮಾಳವೇಂದ್ರಂ ೧೩೫

ಓಲೈಸಿದನಂಧ್ರಮಹೀ
ಪಾಲಂ ಚಿತ್ತೈಸು ಪಾಗುಡಂಗೊಟ್ಟನಿವಂ
ಚೋಳನರಾಧೀಶ್ವರನಭಿ
ಮೇಳಿಸಿದಂ ದಲವಧಾನ ಸಿಂಹಣಭೂಪಂ ೧೩೬

ವ: ಇಂತೆಂದು ತಂದ ತಂತಮ್ಮ ಕಪ್ಪಂಗಳಂ ಬೇಱೆವೇಱೆವೇೞ್ದು ಕುಡೆ ತತ್ತನ್ನಿಯೋಗ ದೊಳಧಿಕೃತರಪ್ಪರನೊಪ್ಪುಗೊಳಲ್ವೇೞ್ದಪ್ಪಯಿಸಿ ಬಳಿಯಮವರವರನುಚಿತ ಸನ್ಮಾನದಾನಂ ಗಳಿಂ ಮನ್ನಿಸಿ ಬೀಡಿಂಗೆ ಕಳಿಪಿದನಂತರಮಪೂರ್ವಸಾರ್ವಭೌಮ ಶ್ರೀಯೊಳ್ ನೆರೆದಾ ಧರ್ಮನಾಥಮಹಾರಾಜನಪರಿಮಿತಪರಮಾನಂದ ಪರಂಪರೆಯ ನಪ್ಪುಕೆಯ್ದು ನಿಜಸಭೆಯಂ ವಿಸರ್ಜಿಸಿ ಸಿಂಹಾಸನದಿಂದೆೞ್ದುಪೋಗಿ ಮಜ್ಜನಭೋಜನಮಂ ಮಾಡಿ ಸುಖದಿಂದಿರ್ದಂ

ಕ್ಷಿತಿಯಂ ರಾಜಂ ರಾಜ
ನ್ವತಿಯಾಗಿಯೆ ಮಾಡಿ ನಾಡೆಯುಂ ರಕ್ಷಿಸಿದಂ
ಸತತಂ ಕಮಳಿನಿಯಂ ಶ್ರೀ
ಮತಿಯಾಗಿಯೆ ಮಾಡಿ ರಕ್ಷಿಪಂತೆ ದಿನೇಶಂ ೧೩೭

ವ: ಅಂತುಮಲ್ಲದೆಯುಂ ಸಪ್ತಜನಶರ್ಮಕರನಪ್ಪಾ ಧರ್ಮನಾಥನೆಂಬ ಮಹಾಪೃಥ್ವೀನಾಥಂ

ಕೆಲರಂ ರಾಜಕುಮಾರರಂ ಮರಳೆ ತಂತಮ್ಮಾಳ್ವ ರಾಜ್ಯಂಗಳೊಳ್
ನಿಲಿಸುತ್ತುಂ ನೃಪರಂ ಬಳಿಕ್ಕೆ ಕೆಲರಂ ತನ್ನಂ ದಲೋಲೈಸುವ
ಗ್ಗಳದುದ್ಯೋಗದೊಳಂ ನಿಯಾಮಿಸಿರಿಸುತ್ತುಂ ಪೇಳ್ದುದಂ ಮಾಳ್ಪವೊಲ್
ಕೆಲರಂ ಯೋಜಿಸುತುಂ ಕರಂ ಸಲಹಿದಂ ನಿಶ್ಶೇಷಭೂಪಾಳಕಂ ೧೩೮

ವ: ಮತ್ತಂ

ನೂತನಕ್ಷತ್ರಪರೀವೃತ
ನಾತತಕುಮುದಾಳಿಪೋಷಕಂ ಚಂದ್ರನವೊಲ್
ಪೂತಕಳೆಯೊಡನೆ ಕೂಡಿ
ಪ್ರೀತಂ ಸುಖದಲ್ಲಿ ನೃಪತಿ ತಣ್ಣನೆ ತಣಿದಂ ೧೩೯

ವ: ಇಂತಖಿಳಭೂತಳಾಂತರ್ವರ್ತಿ ಚಕ್ರವರ್ತಿಪರಿಸ್ಫೂರ್ತಿ ಮತ್ಕಿರೀಟ ಕೋಟಿಕೀಲಿತ ಹರಿನೀಲಮಾಣಿಕ್ಯಮಾಲಿಕಾ ಸಮುನ್ಮೀಲದುಲ್ಲೋಲಮರೀಚಿ ಕಾಲೋಲಂಬ ಲೇಖಾ ಲೇಲಿಹ್ಯಮಾನ ಲಾಲನೀಯ ಚಲನಕಮಲಯುಗಲ ಸನಾಥನಪ್ಪಾ ಧರ್ಮನಾಥನೆಂಬ ಮಹಾಪೃಥಿವೀತಳಾಧಿನಾಥನುಂ ಸಕಳಾಂಗನಾಕುಲಮಂಗಲ ತಿಲಕಾಯಮಾನ ಶೃಂಗಾರ ವತೀದೇವಿಯುಮೊಂದಾಗಿ ಸಂಭೋಗಸುಖೋನ್ಮುಖರಾಗಿ ಪರಮಪ್ರಮೋದ ಪರಂಪರೆಯನಪ್ಪುಕೆಯ್ದು ಪ್ರಾಜ್ಯರಾಜ್ಯಾಭಿರಕ್ಷಣಂಗೆಯ್ವುತ್ತುಮಿರೆ

ಸತತಂ ಧರ್ಮಪ್ರಭಾವಂ ಜಗದೊಳೆಸೆವಿನಂ ಮಾಡಿದಂ ಧರ್ಮನಾಥಂ
ಕೃತಕೃತ್ಯಂ ತರ್ಕತಂತ್ರಾತ್ರಿಶಯಿತ ಕುಶಲ ಸ್ತುತ್ಯನುದ್ದಾಮಸತ್ಯಂ
ನುತಚಾರಿತ್ರವ್ರಜಂ ಬಾಹುಬಲಿಸುಕವಿರಾಜಂ ದಯಾಂಬೋಧಿಚಂದ್ರಂ
ಕೃತಸಮ್ಯಗ್ದೃಷ್ಟಿಮೋಹಂ ಘನಸುಕೃತವಹಂ ಚಾತುರೀಜನ್ಮಗೇಹಂ ೧೪೦

ಗದ್ಯ: ಇದು ಸಕಳಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮಜಿನ ಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವ ಪ್ರಸಾದಸಂಪಾದ ಪಾದನಿಧಾನದೀಪವರ್ತಿಯುಭಯಭಾಷಾ ಕವಿಚಕ್ರವರ್ತಿ ಬಾಹುಬಲಿಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್ ಸಂಗ್ರಾಮಾಡಂಬರ ಪರಿವ್ಯಾವರ್ಣನಂ ತ್ರಯೋದಶಾಶ್ವಾಸಂ.

ಚತುರ್ದಶಾಶ್ವಾಸಂ

ಶ್ರೀಗೆ ನೆಲೆಯೆನಿಸಿ ವಿದ್ಯಾ
ಶ್ರೀಗಾಶ್ರಯಮೆನಿಸಿ ಸಕಳಜನನುತಕೀರ್ತಿ
ಶ್ರೀಗೆ ಗೃಹಮೆನಿಸಿ ನೆಗಳ್ದಂ
ಭೂಗಧಿಪಂ ಸರಸಚತುರಕವಿಕುಳತಿಳಕಂ ೧

ವ: ಅಂತಾ ಧರ್ಮನಾಥಮಹಾರಾಜನಪಾರ ಚಾರು ಮುಖ್ಯಸಾರಸರ್ವಸ್ವ ಸಮಾಸ್ವಾದನ ಕರಣಪರಿಣತಾಂತಃಕರಣಂ ಕರುಣತ್ರಯಶುದ್ಧಿಸಮೃದ್ಧನಭಿವರ್ಧಿತಪ್ರಸಿದ್ಧ ಸದ್ಧರ್ಮ ಪ್ರಭಾವಂ ಪ್ರಭಾವಶಾವಗುಂಠಿತ ಕಂಠೀರವಪೀಠಸಮುಪಕಂಠಸೇವಾಸ ಮುತ್ಕಂಠಾಕುಂಠಿತ ನಿಖಿಳವಿಷ್ಟಪಪ್ರತಿಪಾಳಕ ಪಾಪಠ್ಯಮಾನ ಮಹಿಮಾಸಮುಪ ಲಕ್ಷಿತವದಕ್ಷೂಣ ಪ್ರಾಜ್ಯಸಾಮ್ರಾಜ್ಯರಾಜ್ಯಲಕ್ಷ್ಮೀಪ್ರಮದೆಗೆ ಮೊಗಮಿತ್ತು ಭೋಗೋಪ ಭೋಗಾನುಭವನ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಮಿರ್ಪಲ್ಲಿ

ಆತನ ಪಜ್ಜಳಿಪ್ಪ ಜಸದೇಳ್ಗೆಯೆ ಪಾಲ್ಗಡಲೆಂಬಿನಂ ದಿಶಾ
ಬ್ರಾತಕಮಂ ಮುಸುಂಕಲದಱಲ್ಲಿ ಪವಳ್ಗುಡಿ ಬಳ್ಳಿಗೊಂಡವೊಲ್
ನೂತನತೇಜಮೊಪ್ಪಿದುದು ಮೂಜಗಮಂ ಘನಫೇನಪಿಂಡದಂ
ತಾತತಶೋಭೆವೆತ್ತುದುರುಪುಷ್ಕರದಂತೆಸೆದತ್ತು ಪುಷ್ಕರಂ ೨

ವ: ಅಂತಾ ನೃಪಾಳತಿಳಕನಪೂರ್ವಸಾರ್ವಭೌಮಲಕ್ಷ್ಮೀಸಪ್ತಾಂಗಸ ಮಾಲಿಂಗನ ಸಂಗತಿ ಯನಂಗೀಕರಿಸಿರ್ಪುದುಂ

ಪರಮಶ್ರೀಧರ್ಮನಾಥಂಗಿಳೆಗಭಿನವ ಸತ್ಕಾಮದೇವಾವತಾರಂ
ಗುರು ನಾನಾಕೇಳಿಕೌತೂಹಳದೊಳಧಿಸಹಾಯಂ ನೃಪಂ ತಾನೆ ಬಪ್ಪಂ
ತಿರೆ ಬಂದತ್ತಂದು ಪುಷ್ಪಸ್ತಬಕಚಮರವಾಂತ ದ್ವಿರೇಫೋದ್ಭಟಾಂತಂ
ಪರಪುಷ್ಟಾತೋದ್ಯತಾಂತಂ ಕಿಸಲಯಿತತರುಚ್ಛತ್ರಕಾಂತಂ ವಸಂತಂ ೩

ಅದು ಕಲಿಕಾಲದಂತೆಸೆದುದಾಱಡಿಗೇಳ್ಗೆಯನಾಗಿಸುತ್ತುಮಂ
ತದು ವಿರಹಾರ್ಥನಂತೆಸೆದುದುತ್ಕಳಿಕಾಳಿಯನುಂಟುಮಾಡುತುಂ

ಮದನವಿಕಾರಮಂ ಬಿಡದೆ ಪೆರ್ಚಿಸುತುಂ ಪರಿಪೂರ್ಣಚಂದ್ರನಂ
ತದು ಮೆಱೆದತ್ತು ಚೈತ್ರಸಮಯಾಗಮನಂ ಜಗದೊಳ್ ವಿಚಿತ್ರಕಂ ೪

ವ: ಅಂತು ಬಂದ ವಸಂತಕಾಲದೊಳ್

ಹಿಮಸಾರಂ ಮಂದಚಾರಂ ಧೃತಪರಿಮಳಪೂರಂ ಶ್ಲಥೀಭೂತ ನೀವೀ
ಕ್ರಮಚಾರಂ ಚಾಲಿತೋರಃಸ್ಥಳಮಣಿಮಯಹಾರಂ ಮಹಾನಂದಕಾರಂ
ಸಮುಪಾತ್ತಸ್ತ್ರೀವಿಕಾರಂ ರತಿಸುಖಸಹಕಾರಂ ಯಮಾಶಾವಿಹಾರಂ
ಶ್ರಮಜಸ್ವೇದಾಪಹಾರಂ ಮಿಗೆ ಸುಳಿದುದು ಧೀರಂ ಗಭೀರಂ ಸಮೀರಂ ೫

ಮಳಯಾದ್ರಿಸ್ಥಳದಲ್ಲಿ ಪುಟ್ಟಿದ ಮಹಾಶ್ರೀಗಂಧವೃಕ್ಷಂಗಳಂ
ಬಳಸಿರ್ದಗ್ರಫಣಿಪ್ರತಾನಮೊಲವಿಂದಂ ಪೀರ್ದು ಪೀರ್ದಾರ್ತ ದೋ
ರ್ವಳದಿಂ ಮೆಯ್ಯೆಱೆದಾದ ತೆಂಕಣನಿಲಂ ತನ್ನಂದನಶ್ರೀಯ ಮಂ
ಗಳವನ್ನಂದನನಂತೆ ದಟ್ಟಡಿಯಿಡುತ್ತಿರ್ದತ್ತು ಕೆಂಗೊಂಬಿನೊಳ್ ೬

ವ: ಆಗಳ್

ಬಿಡದವಿರ್ಗುಂತೆಯಗ್ಗಳದ ಮೊಗ್ಗೆಗಳಾವಳಿಯೆಂಬ ತೋರ ಚಿ
ಲ್ವೊಡೆ ಮಣಿಗಟ್ಟಿ ಕೋಗಿಲೆಯ ನುಣ್ಣನಿಯಿಂದಮೆ ಮುದ್ದುಮಾತುಮಂ
ನುಡಿದು ಮುಗುಳ್ತ ಮಲ್ಲಿಗೆಯ ಬಲ್ಲನೆಯೆಂಬ ತೊಳಪ್ಪ ಪಲ್ಗಳಂ
ಪಡೆಯದೆ ತೋಱುತುಂ ನಗುವವೊಲ್ ಮೆಱೆದತ್ತು ಪಯೋಜವಕ್ತ್ರದಿಂ ೭

ವ: ಇಂತು ಮನಂಗೊಳ್ವಿನಂ ಪಿಂಗದೆ ತೆಂಗಾಳಿ ಸಂಗಳಿಸಿ ಬೀಸುವುದುಂ

ಆಂ ಸಹಕಾರಿಯಾಗದೊಡಮೇಕೆನಗೀ ಸಹಕಾರನಾಮಮೆಂ
ದಾ ಸಹಕಾರಕಂ ಕೊನರ್ಗಳೋಳಿಯ ಕೂರ್ಮೊನೆದೋಱಲಾಗಳಂ
ತಾಳಯಸಂಭವಂ ಸಕಳದಿಗ್ವಿಜಯೋದ್ಯತನಾಗಿ ತೀಕ್ಷ್ಣ ಬಾ
ಣಾಸನದೊಳ್ ತೊಡರ್ಚಿ ಪೊಳೆವಂಬಿನ ಕೂರ್ಮೊನೆಮೋಱೆ ಕೊರ್ವಿದಂ ೮

ಒಸೆದೆನ್ನಲ್ಲಿಗೆ ಬಂದಪಂ ಸುರಭಿಕಾಲಂ ವಲ್ಲಭಂ ತಳ್ತ ಸಂ
ತಸದಿಂದುರ್ವಿ ತದಾಶಯಂಬಡೆವೆನೆಂಬೀ ತನ್ನ ಸಂಕಲ್ಪದಿಂ
ಪೊಸಕೆಂಬಟ್ಟೆಯನುಟ್ಟು ಮೌಕ್ತಿಕಮಯಾಲಂಕಾರಮಂ ತೊಟ್ಟವೋ
ಲೆಸೆವುತ್ತಿರ್ದುದು ಮಾಮರಂ ತಳಿರ್ಗಳಿಂದಂ ಪೂಗಳೊಂದೋಳಿಯಿಂ ೯

ಎನಸುಂ ಕೆಂದಳಿರೆಂಬ ಚೆಲ್ವಪೊಸಧೋತ್ರಂ ರಂಜಿಸಲ್ ಕೋಕಿಳ
ಧ್ವನಿಯಿಂದಂ ಪ್ರಣವೋತ್ಥಿತ ಶ್ರುತಿಯನೆಯ್ದುಚ್ಚಾರಣಂಗೆಯ್ವುತುಂ

ನನೆಯೆಂಬಕ್ಷತಪುಂಜಮಂ ಪಿಡಿದ ಶಾಖಾಹಸ್ತಮಂ ನೀಳ್ದು ಕಾ
ಮನ ಸದ್ಬ್ರಾಹ್ಮಣನೆಂಬಿನಂ ಪಡೆದುದತ್ಯಾಶ್ಚರ್ಯಮಂ ಮಾಮರಂ ೧೦

ಕೆಯ್ಗೊಂದೀ ಮಾಕಂದಂ
ಕೆಯ್ವಾರಂ ಬಂದುದೆನಗೆ ತೀರದುದಿಲ್ಲಾಂ
ಕೆಯ್ವಾರಲಾಗದೆಂದುಱೆ
ಮುಯ್ವಂ ನೋಡುತ್ತು ಕರ್ಬುಪಿಲ್ಲಂ ಬಲಿದಂ ೧೧

ವ: ಇಂತು ನಂದನವನದೊಳಂದಂಬಡೆದು ಸಾಲ್ಗೊಂಡು ನಿಂದ ಮಾಕಂದ ಸಂದೋಹದೊಳ್

ಕೂಡೆ ಮನೋಜನೊರ್ವನೆ ಜಗಂಗಳನಂಡಲೆವಂ ವಸಂತನೆ
ಯ್ದಾಡುತುಮೆಯ್ದೆಬಂದು ನೆರಮಾದೊಡೆ ದಂಡಿಸದಿರ್ಪನಲ್ಲ ನೀ
ವೋಡಿಯೆಪೋಗಿ ಪೋಗಿ ಪುಗದಿರ್ ಪುಗದಿರ್ ಬನಮಂ ದಲೆಂದು ಮಾ
ತಾಡಿ ವಿಯೋಗಿಗಳ್ಗುಸಿರ್ದವೋಲುಲಿದತ್ತು ಸಮಂತು ಕೋಕಿಳಂ ೧೨

ಗಿಳಿಗಳ್ ಮಾವಿನ ತನಿವ
ಣ್ಗಳ ರಸಮಂ ಪೀರ್ದು ಪೀರ್ದು ಸವಿಯಾದೊಡೆ ಪೆ
ಣ್ಗಿಳಿಗಳ್ಗೆತ್ತನೆ ಮಱಗ
ಳ್ಗೊಲವಿಂ ಮುಕ್ಕುಳಿಸಿ ಬಾಯೊಳೆಱೆದವು ಮತ್ತಂ ೧೩

ವ: ಅದಲ್ಲದೆಯುಂ ಪ್ರಫುಲ್ಲಮತಲ್ಲಿಕಾನೇಕ ಕುಸುಮವಲ್ಲರೀಸಮುಲ್ಲಸಿತ ಮಲ್ಲಿಕಾವಲ್ಲೀ
ವನಪ್ರಸರದೊಳ್

ಘನಮಾದ ಕಂಪಿನುಜ್ಜೀ
ವನಕರಮೋಗರದ ಕಂಪಿನಾಗರಮೆತ್ತಂ
ತನಿಗಂಪಿನ ನೆಲೆಮನೆ ತಾ
ನೆನಿಸಿದುದಿರುವಂತಿಯಲರ್ದ ಕುಸುಮಪ್ರಸರಂ ೧೪

ಮಲ್ಲಿಗೆ ಕಡುಗೆಳೆಯನ್ನಂ
ಮಲ್ಲಿಗೆ ಸಂಪಗೆ ಬಿಸುಟ್ಟದಿನಿಸಂಪಗೆಯಂ
ಗೆಲ್ಲಮೆನಗಾದುದೆಂದುಱೆ
ಸೊಲ್ಲುತ್ತುಂ ಮದನನುದಿತಮದಭರನಾದಂ ೧೫

ನೆಲಸಿರ್ದಳ್ ಮಾಣದೇ ನೋಳ್ಪರ ಮತಮ ಮಹಾಲಕ್ಷ್ಮಿಯೆಂಬೀ ಮದವ್ಯಾ
ಕುಳಿತಂ ತಾನಾಗಿ ಸೊಕ್ಕಿಮ್ಮಡಿಸಿ ಮಧುಪಸಂದೋಹಮಂ ಕೂಡಿಕೊಂಡಿ

ರ್ದಲರ್ದು ಕೀಳ್ಮಾಡಿ ಭಾಸ್ವದ್ಗುಣಮನಿಳೆಯೊಳುದ್ದಂಡಮಾಯ್ತಬ್ಜಷಂಡಂ
ಖಳಲಕ್ಷ್ಮೀಸಂಗದಿಂದಾವನೊ ಘನಮದದಿಂ ಸೊಕ್ಕಿಯುದ್ದಂಡನಾಗಂ ೧೬

ಪಱಿಮೆಗಳ ಕಿಱಿಯ ಮಱಿಗಳ್
ನೆಱೆಮಡುಗೊಂಡಿರ್ದ ಬಂದಿನಿಡುಕುಱೊಳಂ ಬಂ
ದೆಱಗಿ ತಂತಮ್ಮೊಳುಱೆ ಪರಿ
ಮಱಿಯಾಡುತ್ತಿರ್ದು ನೆಱಪಿದವು ತಾಯ್ಗ್ಗಣುಕಂ ೧೭

ವಿರಹಿಜನಹೃದಯವಿದಳನ
ಸರದರುಣಜಳಾಭಿರಂಜಿತಂ ಕಾಮನ ಕೂ
ರ್ಸರವಾಳ್ಗಳೋಳಿಯೆಂಬಂ
ತಿರಲಸುಕೆಯೊಳೆಸೆದುದಲಘುಪಲ್ಲವ ನಿವಹಂ ೧೮

ತರುಗಳ ತುದಿಕೊಂಬುಗಳೊಳ್
ಬೆರಸಿರ್ದೆಳಲತೆಗಳೊಂದನೊಂದಂ ತಾಗು
ತ್ತಿರೆ ಸುಳಿವೆಲರಿಂ ಪೋಲ್ತುದು
ತರದಿಂ ಕೋಲ್ವೊಯ್ಯುತ್ತು ಕುಣಿವ ಪೆಂಡಿರ ಚೆಲುವಂ ೧೯

ಅಗೆವೊಯ್ದು ಪೊತ್ತಿಸಿದ ದೀ
ವಿಗೆಗಳ್ ಕಾಮಾಧಿರಾಜನರಮನೆಯೊಳ್ ಕೈ
ಮಿಗೆ ಪಜ್ಜಳಿಸುವವೊಲ್ ಮೊ
ಗ್ಗಗಳೆತ್ತಂ ತೊಳಗಿ ಬೆಳಗಿದವು ಸಂಪಗೆಯೊಳ್ ೨೦

ಸೊಗಯಿಪ ಗುಚ್ಛಮೆಂಬ ಮೊಲೆ ಮಿಳ್ಳಿಸೆ ತೆಂಬೆಲರೆಂಬ ಸುಯ್ಯೆಲರ್
ಮಿಗೆ ಪೊಸಗಂಪಿನೇಳ್ಗೆ ಪಸರಂಬಡೆದೊಪ್ಪಿರೆ ಕಂಟಕಂ ಸಮಂ
ತೊಗೆದಿರೆ ಪೂತಪಾದರಿಯೊಳಂ ನೆರೆದತ್ತು ಮಧುವ್ರತಂ ಮನಂ
ಬುಗುವ ವಿಟಂ ಕರಂ ನಲಿದು ಪಾದರಿಯೊಳ್ ನೆರೆವಂತೆ ನಾಡೆಯುಂ ೨೧

ಕಳಪಿಕಹಸ್ತಿಯುಂ ಬಹಳಕೀರತುರಂಗಮಮಂ ರಥಾಂಗಸಂ
ಕುಳರಥಮಂ ಮಧುವ್ರತಪದಾತಿಕೆಯುಂ ನೆಱೆಕೂಡಿಯಾಳ್ಗಳಂ
ಕಲೆಯಿಳಿವಾಗಳೆಂದೆನೆ ವಸಂತಚಮೂಪತಿ ಕಾಮದೇವನೆಂ
ಬಿಳೆಗಧಿಪಂಗೆ ಸವ್ವರಣೆದೋಱಿಸಿದಂ ವನರಾಜಗೇಹದೊಳ್ ೨೨

ಎಲೆ ಸಹಕಾರ ನೀಂ ಸೊನೆಯ ಸೋನೆಗಳಂ ಕಱೆದಾಱಿಸೀಗಳ
ಗ್ಗಲಿಸಿದ ರುದ್ರನೊಳ್ ನೊಸಲ ಕಣ್ಣುರಿಯಂ ಕಡುಕೆಯ್ದಶೋಕ ನೀಂ

ಸಲೆ ತಳಿರೆಂಬ ಕೂರಲಗಿನಿಂ ಹರನಂ ಕೆಡೆ ಕುತ್ತಿ ನೂಂಕೆನು
ತ್ತಲಘುಪರಾಕ್ರಮಂ ಮದನನೀಕ್ಷಿಸಿದಂ ಮಿಗೆ ತನ್ನ ಸೈನ್ಯಮಂ ೨೩

ವ: ಆಗಳ್

ಎನ್ನಯ ವೈರಿಯಪ್ಪ ಮದನಂಗೆ ಬಲಂ ನೆಱೆಕೂಡಿದತ್ತು ಮ
ತ್ತಿನ್ನೆನಗೇನಪಾಯಮನೊಡರ್ಚುವನೆಂದಱಿಯಲ್ಕೆ ಬಾರದೆಂ
ಬುನ್ನತಚಿಂತೆಯಿಂದೆ ಗಿರಿಶಂ ಮರುಳಾಗಿ ತೊಳಲ್ದು ಶೂಲಿಯಾ
ದಂ ನರನಾವನೋ ಪಗೆಯ ಪೆರ್ಚುಗೆಯಂ ನಡೆನೋಡಿ ಸೈರಿಪಂ ೨೪

ವ: ಇಂತು ವಸಂತಸಮಯಂ ನಂದನವನದೊಳಾನಂದದಿಂ ವಿಹಾರಿಸಿ ವನಶಬ್ದಸಮಭಿದೇಯ
ಮಪ್ಪುದಱಿಂ ಪಥಿಕಜನಮೃಗಮೃಗಯಾವಿನೋದಾರ್ಥಮೆನ್ನಲ್ಲಿಗೆ ಬಂದಪನೆಂದು
ಕಾಂತಾರಕಾಂತೆ ಕಂಚನಾರದ ಚಂಪೆಯಮಂ ತಿಳಕದ ತಿವುರಿಯಂ ಸರಳದ ಚಾರಿಯಂ
ಬಕುಳದ ಗುಡಿಯಂ ನಿರ್ಮಿಸಿದ ಪೊಸಸಿಬಿರಮೆಂಬಂತಿರಿಂಬು ವಡೆದ ಮಹಾವಿಪಿನ
ಪ್ರದೇಶದೊಳ್

ಸೊಂಪೇಱಿತ್ತು ಕುಜಾತಿಗೆ
ಪೆಂಪೋಡಿತ್ತಮಮ ಜಾತಿಗದವೆಯರೆರ್ದೆ ಗದ
ಗಂಪಂಗೊಂಡುದು ಮಧುಮಾ
ಸಂ ಪುಗೆ ದುರ್ನಿತನೃಪನ ರಾಜ್ಯದ ತೆಱದಿಂ ೨೫

ವ: ಅದಱೊಳ್

ಸ್ಮರಚಕ್ರಾಧೀಶ್ವರಂ ದಿಗ್ವಿಜಯವಿರಚನಾಕಾರನಂ ಬಾಹ್ಯದೇಶಾಂ
ತರದೊಳ್ ಪೊಯ್ಸಿಟ್ಟ ಕೆಂಬಟ್ಟೆಯ ಪೊಸಗುಡಿಯೆಂಬಂತೆ ಮತ್ತಂ ವಿಯೋಗಾ
ತುರರೆಂಬೇಣಂಗಳಿಂದಂ ದವದಹನದ ಭಾಸ್ವನ್ಮಹೋಜ್ವಾಲಿಕಾ ಮಂ
ಜರಿಯೆಂಬಂತೆಯ್ದೆ ಪೂತಿರ್ದುದು ಬಹಲವಿಶಾಲೋತ್ಪಲಾಶಂ ಪಲಾಶಂ ೨೬

ತುಂಬಿಗಳ ಬಳಗಮುಱೆ ಬಂ
ದುಂಬೆಡೆಯೊಳ್ ತೋರಹೊನ್ನಪರಿಯಾಣಂಗಳ
ನಿಂಬಾಗಿರಿಸಿದ ತೆಱದಿಂ
ದಂ ಬಗೆಗೊಳಿಸಿದವು ಕೊಸಗಿನಲರ್ಗಳ್ ಪಿರಿದುಂ ೨೭

ಸನೆವೊತ್ತಿತ್ತದಿರ್ಗುಂತೆ ಪಲ್ಲವಿಸಿದತ್ತುದ್ವೃತ್ತಮಾಳಂ ಕರಂ
ಕೊನರೇಱಿತ್ತುರು ಪಿಪ್ಪಳಂ ಮುಕುಳಮಂ ತಾಳ್ದಿತ್ತು ಪುನ್ನಾಗಮೆ

ಯ್ದೆ ನಯಂಬೆತ್ತುದು ಪೊನ್ನೆ ಪೂಗುಡಿಗಳಂ ಪೇಱಿತ್ತು ಸತ್ಕೇಸರಂ
ಘನತಾರಾಂಕುರಭಾರಮಂ ಕುರವಕಂ ಪೆತ್ತತ್ತು ಕಣ್ಗೊಪ್ಪದಿಂ ೨೮

ವ: ಅಂತು ನಿರವಶೇಷ ವರನಾರೀಜನಂಗಳಿಂಗೆ ಸಮಾಹಿತಸುಖ ಮೆಂಬಮೃತದ ಪೂರಮಂ ನೆಱೆಕಱೆದು ತಣಿವನೀವುತ್ತುಮಿರ್ದ ಸುರಭಿಯೆಂಬಂತೆ ಬಂದ ನಿರತಿಶಯ ಸುರಭಿಸಮಯಶ್ರೀಯ ವಿಜೃಂಭಣಮೆಲ್ಲೆಡೆಯೊಳಂ ಪರಕಲಿಸಿ ನಿಬಿಡಮಾಗಿ ಪಸರಿಸು ವುದುಂ

ಪೆರ್ಚೀ ಪೆರ್ಚಾಗಿ ಬಾಳ್ವೆಮ್ಮಯ ಕಮಳತನೂಜಂಗಮೀ ರಾಜನಿಂದಂ
ಪೆರ್ಚುತ್ತಿಕ್ಕಟ್ಟಿಗಂ ನೋಳ್ಪನಿತು ಸಮನಿಸಿತ್ತೆಂಬ ಸಂತಾಪಮುಂ ಮೆ
ಯ್ವೆಟ್ಟಲ್ ತಟ್ಟಾಱುತಿರ್ದತ್ತೆನೆ ಪ್ರಥುಳಸರಸ್ಸಂಕುಳಂ ಕಂಠದಘ್ನಂ
ಬಿಟ್ಟತ್ತಾ ನಾಭಿದಘ್ನಂ ತಡೆಯದೆ ಕಟಿದಘ್ನಂ ಕರಂ ಜಾನುದಘ್ನಂ ೨೯

ವನಜಳಕೇಳಿಗೆಯ್ದೆ ತೆಱಪಂ ಕುಡಲೆಂಬಿನಮಾಕ್ಷಣಂ ಪಗಲ್
ಘನತರಮಾದಿದಂದಿನಿರುಳುಂ ಕಿಱಿದಾದುದು ಪದ್ಮಿನೀವಿಕ
ರ್ತನನ ವಿಯೋಗದುಃಖಮನಡಂಗಿಸಲೆಂಬಿನಮುತ್ತರಾಯಣಂ
ದಿನಪತಿಗಾದುದಂದೊಲಿದುದೆಂಬಿನೆಗಂ ಮಳಯಾದ್ರಿವಾಯುವಿಂ ೩೦

ಅವಿರಳಮಾದ ಬೆಳ್ದನೊಳಕೊಂಡು ವಿಜೃಂಭಿಸಿದತ್ತು ಚಂದ್ರಿಕಾ
ನಿವಹಮಗಲ್ದ ನಲ್ಲಳನಪೇಕ್ಷಿಪ ಕಾಮುಕವಕ್ತ್ರದಂತೆ ತೀ
ವ್ರವನವಳಂಬಿಸಿರ್ದ ಬಿಸಿಲಪ್ರಸರಂ ಕಡುಗಾಯ್ದುವೆತ್ತುದೀ
ಭುವನದೊಳಿಂದ್ರಿಯಂಗಳದಿದರ್ಪ ವಿಸರ್ಪಣದಂತೆ ಚೈತ್ರದೊಳ್ ೩೧

ಪೊಸಮಸೆಯೇಱಿ ಪುಷ್ಪಸರಮಾದುದು ಕೂರಿತು ಕರ್ವುವಿಲ್ಲುಮು
ಬ್ಬಸಮೆನಿಸಿರ್ದ ಬಲ್ಪನೊಳಕೊಂಡುದು ತುಂಬಿಯ ನಾರಿ ತೀಕ್ಷ್ಣದಿಂ
ದಸದಳಮಾಯ್ತು ಸರ್ವಬಲಸೇವಿತನಾಗಿ ಮನೋಜರಾಜನ
ರ್ಗಿಸಿ ಬಿಡದೆರ್ಚು ಸೋಲಿಸಿ ಜಗತ್ರಯಮಂ ವಶಮಾಗಿ ಮಾಡಿದಂ ೩೨

ವ: ಇಂತು ನಿರಂತರಿತ ಸಂತೋಷಸಂತಾನಮನೆಲ್ಲರ್ಗೆ ಸಂಪಾದಿಸುತ್ತುಂ ಬಂದ ವಸಂತಸಮಯದೊಳ್ ಪಿರಿಯ ಸಿರಿಗೆ ಕರುವೆನಿಪ ಕರುಮಾಡದ ಪಿಂದಣಭಾಗಕ್ಕೆ ಪರಭಾಗಮಾಗಿ ನಳನಳಿಸುವ ಶಿವಂಕರೋದ್ಯಾನದ ನಟ್ಟನಡುವಣ ದಿಶಾವಲೋಕನ ಪ್ರಾಸಾದಮಾದ ಸರ್ವತೋಭದ್ರಮೆಂಬೇಳನೆಯ ನೆಲೆಯ ಮಣಿಮಾಡದ ಮಧ್ಯ ವೇದಿಕೆಯ ಮೇಲಣ ಬಿತ್ತರಂಬೆತ್ತ ಮುತ್ತಿನ ಮಂಡಪದಲ್ಲಿ ಪರಿಹಾಸಕರ ನರ್ಮಸಚಿವರ ಕಬ್ಬಿಗರ ಕಳಾವತಿಯರ ಸುರಭಿಸಮಯ ಸಮುತ್ಕರ್ಷಸಮುಚಿತ ಚತುರವಚನರಚನಾ ಪ್ರಸಂಗಮೆಸೆವಪರಿಮಿತಮಾದ ವಿಳಾಸವತಿಯರೋಲಗದೊಳ್ ಶೃಂಗಾರವತೀದೇವಿ

ಕುಳ್ಳಿರ್ದು ಪಟ್ಟಗದ್ದುಗೆಯರ್ಧದೊಳಾಕೆಯನೌಂಕಿ ಸೋಂಕಿ ಕುಳ್ಳಿರ್ದು ಧರ್ಮನಾಥ ಮಹಾರಾಜಂ ಕಡುನಿಮಿರ್ದು ನೀಳ್ದ ತನ್ನಯ ನಿಕಾಮಕೋಮಳವಾಮತರಬಾಹು ದಂಡಕಾಂಡಮನರಸಿಯೆಡದ ಪೆಗಲೊಳ್ ಮಡಂಗಿ ವಿಸ್ತೃತಹಸ್ತತಳದಿಂ ವೃತ್ತಸ್ತನ ಮಂಡಳದೆಡೆಯಂ ಕುಪ್ಪಳಿಸುತ್ತುಮಿರ್ಪ ಪೊತ್ತಿನೊಳ್

ಆದೇವಿ ನುಡಿದು ನೀಡುವ
ಮೇದುರತಾಂಬೂಳದಳಮೃಣಾಳಶಕ[ಲ]ಮಂ
ಕಾದಲನ ದಂತಹಂಸಮ
ದಾದರಿಸಿ ಕರ್ದುಂಕೆ ಕಬಳಿಸಿತ್ತಾಕ್ಷಣದೊಳ್ ೩೩

ವ: ಮತ್ತಮಾ ಪಟ್ಟಮಹಾದೇವಿಯ ಬಲದ ನೆಲೆಮೊಲೆಯ ಪರಸ್ಪರ್ಶಹರ್ಷ ಪುಳಕಿತಮಾದ ಕ್ಷತ್ರಿಯಕುಳತಿಳಕನ ವಕ್ಷಸ್ಥಳಂ ಕುಂಕುಮಕರ್ಪೂರಂ ಬೆರಸಿದ ಚಾರುಹರಿಚಂದನ ಚರ್ಚೆಯೊಳೊಂದಿ ತಣ್ಪಿನ ಪೊಂಪುಳಿಯ ಸುಖದ ಸುಗ್ಗಿಯ ಹರವರಿಯಾಗಿರ್ಪುದುಮಾಗಳ್

ಕಸ್ತೂರೀಸಾರದಿಂದಂ ಬರೆದ ಮಕರಿಕಾಪತ್ರಮೆಂಬಂಕದಿಂದಂ
ವಿಸ್ತಾರಂಬೆತ್ತ ತದ್ದೇವಿಯ ನಗೆಮೊಗಮೆಂಬಿಂದುಬಿಂಬಂ ಪಳಚ್ಚಲ್
ವಿಸ್ತೀರ್ಣಾಪಾಂಗಮೆಂಬುರ್ವೊದವಿದಱ ಬೆಳ್ದಿಂಗಳಂ ಪೀರ್ದು ಪೀರ್ದುಂ
ಪ್ರಸ್ತುತ್ಯೋತೃಪ್ತಿಯಿಂದಾತನ ನಯನಚಕೋರಂಗಳೊಲ್ದಿರ್ದವಾದಂ ೩೪

ವ: ಅಂತು ಚರಾಚರಜಗದ್ವಲ್ಲಭಂ ನಿಜಪ್ರಾಣವಲ್ಲಭೆಯ ಕೆಲದೊಳಿರ್ದು ದಿಶಾಶೋಭಾವಳೋಕನಂಗೆಯ್ವಾಗಳ್ ತನ್ನಯ ಕಣ್ಬೊಣರಿನಿಂಬುವಡೆದು ಸನ್ನಿದಮಾದ ನಂದನಶ್ರೀಯಂ ಮನ್ನಿಸುವಂತೆ ನೀಡುಂನೋಡುತ್ತುಮಿರ್ಪುದುಮಾ ಪೊತ್ತಿನೊಳೋಲಗದ ಮಾಲಾಕಾರಕರ ವನಪಾಲಕರ ಕುಮಾರಿಕಾನಿಕರಂ ಪೊಸಗಂಪನುಗುಳ್ವ ಕುಸುಮಮಾಲಾ ವಿಸರದ ಶೃಂಗಾರದ ಬೆಡಂಗನಂಗೀಕರಿಸಿ ವನಲಕ್ಷ್ಮಿ ಶಂಕೆಯನಂಕುರಿಸುತ್ತುಂ ಬಂದು ಸುರಭಿಪರಿಮಳವಿಳಾಸಮನೆಸಗುತ್ತುಮಿರ್ದ ಸುರಭಿಸಮಯದ ಪಲತೆಱದ ಪೂಮಾಲೆಗಳಂ ತಂದು ಕಾಣಿಕೆಗೊಟ್ಟು ಪೊಡವಟ್ಟು ಭೂಪಾಲಭ್ರೂಲತಿಕಾಚಾಲನದಿಂ ಸಂಕೇತಿತ ಸ್ಥಾನದೊಳ್ ಕುಳ್ಳಿರ್ದು ಬಳಿಯಮಾ ಕುಮಾರಿಕಾ ನಿಕರದೊಳಗೆ ಮುಖ್ಯರಪ್ಪ ವಸಂತಮಾಲೆಯಂ ಕಾಮಲತೆಯುಮೆಂಬ ಮೇಳದ ವಿಳಾಸಿನಿಯರ್ ತಜ್ಜಾತಿಯಾದ ಚತುಃಪದೀ ಭೂತಛಂದೋವೃತ್ತಪಠನಮುಖದಿಂ ವಸಂತಕಾಲದ ಬರವಂ ಜಾಣಶಿರೋಮಣಿಗಱಿಪಿ ಮನಂಬಡೆದ ಬಗೆಯಿಂದೆಳ್ದು ತತ್ಪಾದಪೀಠೋಪಕಂಠಮನೆಯ್ದಿ ಮಾವಿನ ತನಿವಣ್ಣಂತೆ ರಸಂಬಡೆದು ತಾವು ವಿರಚಿಸಿದ ವಸಂತವಿಹರಣಮೆಂಬ ನಾಟಕದೊಳಗೆ

ಕಿವಿಗಿಂಬಾಗೆ ವಸಂತರಾಗದೆಸೆವೊಂದಾಳಾಮುತ್ಪ್ರೇಕ್ಷೆಯು
ತ್ಸವಮಂ ಪುಟ್ಟಿಸೆ ಬಂದು ಮುಂದೆ ನಲವಿಂ ನಿಂದಿರ್ದು ಬೇಱೊಂದು ಸು

ಚ್ಛವಿಯಿಂದೋದಿದರಿರ್ಬರುಂ ಪುಳಕಮೆಲ್ಲರ್ಗೇಳ್ವಿನಂ ಮೆಯ್ಯೊಳು
ಕ್ತ ವಸಂತಾಗಮನಪ್ರವೇಶಪರಿಶೋಭಾಪದ್ಯಮಂ ಪದ್ಯಮಂ ೩೫

ತಳಿರಿಂ ಕೆಂಪಾಗಿ ಪೂವಿಂದಮೆ ಕಡುಬಿಳಿದಾಗಿ ಭ್ರಮನ್ಮತ್ತಭೃಂಗೀ
ಕುಳದಿಂ ಕಪ್ಪಾಗಿ ಪತ್ರಾವಳಿಯಿನುಱೆ ಪಸುರಾಗಿ ಪ್ರಪಕ್ವೋರುಹೃದ್ಯೋ
ತ್ರಳದಿಂ ಪೊಂಬಣ್ಣಮಾಗಿರ್ದೆಸೆದುವಸದಳಂ ನಂದನಂ ಚೈತ್ರನೆಂಬ
ಗ್ಗಳಜಾಣಂ ಚಿತ್ರಿಕಂ ಚಿತ್ರಿಸಿದ ಮದನಚಕ್ರೇಶನಾಸ್ಥಾನದನ್ನಂ ೩೬

ವ: ಇಂತುಬಂದ ಬಸಂತಕಾಲದೊಳ್ ಪರಮಾನಂದಮನಪ್ಪುಕೆಯ್ದು ಕೆಯ್ಗೆಯ್ದ ವನಲಕ್ಷ್ಮಿ ಯೆಂತಿರ್ದಳೆಂದೊಡೆ

ತಿಳಕಂ ಕಾಂತಾಕಟಾಕ್ಷೇಕ್ಷಣಮನಸುಕೆ ನಾರೀಪದಾಘಾತಮಂ ಮಂ
ಜುಳಯೋಷೀದುಗ್ಗಂಡೂಷರಸಮನುರುಚಾಂಪೇಯಕಂ ಕಾಮಿನೀಮಂ
ಗಳವಕ್ತ್ರೋಜಾತದಾಲಿಂಗನಮನೆ ಕುರವಂ ಕಾಂಕ್ಷಿಸುತ್ತಿರ್ದುದೆಂದ
ಗ್ಗಳದುದ್ಯಾನಂ ಪಿಕೋದ್ಘೋಷಣದೆ ಕರೆವವೋಲ್ ಬಿನ್ನಪಂಗೆಯ್ದು ನಿಮ್ಮಂ ೩೭

ವ: ಎಂದು ವನವಿಹರಣವಿನೋದಕಾರಣ ನಿಮ್ಮಡಿಗಳ್ ಬಿಜಯಂಗೆಯ್ಯಲ್ ಬೇಕೆಂದು ಕಿವಿಗೆ ಸವಿಯನೊದಯಿಸುವ ಮಧುಮಾಸವ್ಯಾವರ್ಣನಮಂ ಪೇಳ್ವ ನಿರವದ್ಯ ಪದ್ಯಮ ನೋದುವ ವ್ಯಂಗ್ಯೋಕ್ತಿಯ ನೆವದಿಂ ವ್ಯಂಗ್ಯಂ ಭಂಗಿನಿಧಾನಂಗೆ ಬಿನ್ನಪಂಗೆಯ್ಯೆ ಕೌತುಕಾಯಮಾನಮಾನಸನಾಗಿ

ಪಿರಿದುಂ ರೀತಿ ವಿನೂತಮಾಯ್ತು ಸದಳಂಕಾರಂ ಮನಂಗೊಂಡುದು
ದ್ಧುರವಿಶ್ರಾಮದೊಳೆಯ್ದೆ ಠಾಯೆ ಸೊಗಸಿತ್ತೊಳ್ಮಾತು ಸೇರಿತ್ತು ಭಾ
ವರಸನ್ಯೂತನಮಾದುದೆಂದು ತಲೆದೂಗುತ್ತುಂ ಪೊಗಳ್ದಿತ್ತನಾ
ದರದಿಂ ಮೆಚ್ಚಿ ಪಸಾಯಮಂ ತಣಿವವೋಲಿರ್ಬರ್ಗಮಾ ಪಾರ್ಥಿವಂ ೩೮

ವ: ಬಳಿಯಮಾ ಸಭಾವಾಸಿಗಳೆಲ್ಲಂ ಕರಾಂಗುಳಿಚಾಳನಕ್ರಿಯಾವಿಳಾಸಂ ದೆಸೆವಡೆಯೆ ಲೇಸುಲೇಸೆಂದು ಕೊಂಡಾಡಿ ವನಕ್ರೀಡೆಗುನ್ಮುಖೀಕರಣವಚನಂಗಳಿಂದಭಿ ಮುಖಂಮಾಡಿದಾಗಳಾ ಸಭಾಮಾಣಿಕ್ಯದೀಪಾಂಕುರಂ ಕಡುನಲವಿಂದಾ ಲಲನಾಕುಲ ಲಲಾಮೆಯ ನಗೆಮೊಗಮಂ ನೋಡಿ ಮಿಸುಪ ಪೊಸಮಿಸುನಿಯಂ ಸಮೆದು ಮಸೃಣ ಮಣಿ ಕೇವಣದಿನಸದಳಮೆಸೆವ ದಂಡಕಾಂಡಪರಿಮಂಡನವಿಡಂಬಿತಮಾತ ಧವಳ ಚಳಚ್ಚಾಮರ ಸಮಾಜಕೋಮಳ ಪವನಪರ್ಯಟನವಶದಿಂ ಪರಕಲಿಸಿಯೊಪ್ಪುವಾಕೆಯ ಸುಳಿಗುರುಳಂ ತನ್ನಯ ಸೆಳ್ಳುಗುರಿಂ ಲಲಾಟಪಟ್ಟದೊಳ್ ಮೆಯ್ವಳಿಯಿಂತಿರ್ದುತ್ತು ಮಿಂತೆಂದಂ

ಲಲಿತಚ್ಛಾಯೆಯೊಳೊಂದಿ ವಿಭ್ರಮದಗುರ್ವಂ ತಾಳ್ದಿ ಸತ್ಕಂಟಕಾ
ವಳಿಯಿಂದೊಪ್ಪಿ ಲಸತ್ಪ್ರವಾಳಚಯದಿಂ ಚೆಲ್ವಾಗಿ ನಿನ್ನಂತೆ ರೂ

ಪಳವಟ್ಟಾ ವನಲಕ್ಷ್ಮಿ ತನ್ನ ಸಿರಿಯಂ ನೋಡಲ್ಕೆಲೇದೇವಿ ಕೋ
ಕಿಳಸಂರಾವದಿನೊಪ್ಪುತಿರ್ದುದು ಕರಂ ನಿನ್ನಂ ಬರಲ್ವೇಳ್ವವೋಲ್ ೩೯

ನಿನ್ನ ಕಟಾಕ್ಷವೀಕ್ಷಣದ ನುಣ್ಬೆಳಗಿಂ ಕಿಡಿಸಂಧಕಾರದೊಂ
ದುನ್ನತಿಯಂ ಮರಂಗಳೆಡೆಯಲ್ಲಿ ಕರಂ ತೆಱಪಾದ ತಾಣಮಂ
ನಿನ್ನಯ ಪಾದಪಲ್ಲವದ ಕೆಂಬೆಳಗಿಂ ತಳಿರೇಳಿಸಿಂತು ಸಂ
ಪನ್ನತೆ ನಂದನಕ್ಕೆ ಪರಿಪೂರ್ಣಮೆನಿಕ್ಕು ಬಳಿಕ್ಕಮೋಪಳೇ ೪೦

ನುಡಿಯಿಂ ಮುಡಿಯಿಂ ನಡೆಯಿಂ
ತಡೆಯದೆ ಕೋಗಿಲೆಗೆ ತುಂಬಿಗಂಚೆಗೆ ಮದಮಂ
ಕಿಡಿಸಿ ಸಡಗರಮನೆನಗೆ
ಯ್ದೊಡರಿಸು ನಡೆ ನಂದನಕ್ಕೆ ಪಂಕಜವದನೇ ೪೧

ವ: ಎಂದು ಶ್ರವಣರಮಣೀಯಮಪ್ಪ ನುಡಿಯಂ ಧರಣೀರಮಣಂ ನುಡಿಯ ಲೊಡಮಾ ರಮಣಿಯುಮುಪಚಿತ ಪರಿಹಾಸವಚನಲೀಲಾದ್ಯನುಭಾವಂಗಳಿಂದೊಡಂ ಬಟ್ಟುದಂ ನಿಟ್ಟೆಗೊಳಿಸಲಾಕೆ ತನ್ನಯ ಭಂಗುರಾಪಾಂಗರೋಚಿಃಕಳಿಕೆಯೆಂಬ ಸಮಿಾಚೀನ ಚೀನ ಚೇಳಮನಾ ಪ್ರಿಯಸಂಭಾಷಣಭೂಷಣಂಗಂಗಚಿತ್ತಮನೀಯಲೊಡಂ

ಪೊಸಗಂಪಂ ಕೆದಱುತ್ತುಮಿರ್ದ ವರಮಲ್ಲೀಮಾಲೆಯಿಂದಂ ವಿರಾ
ಜಿಸಿ ಮೂಲೋಕದೊಳತ್ಯಪೂರ್ವತಮರೂಪಂ ತಾಳ್ದಿ ಸದ್ಗಂಧದಿಂ
ದೆಸೆಯಲ್ ತಣ್ಬು ವಸಂತನುಂ ಮದನನುಂ ಶೀತಾಂಶುವುಂ ಕೂಡಿ ಸಂ
ತಸದಿಂದಂ ವನಕೇಳಿಗೇಳ್ವ ತೆಱದಿಂದೆಳ್ದಂ ಮಹೀಮಂಡನಂ ೪೨

ವ: ಅಂತಾ ದೇವಿಯರೋಲಗದ ಮಂಡಪದಿನೆಳ್ದು ನೆಲೆಮಾಡದಿಂದಿಳಿದು ಪೋಗಿ ಲಕ್ಷ್ಮೀಮಂಡಪದ ಮುಂದಣ ಮೊಗಸಾಲೆಯೊಳ್ ನಿಂದು ವನವಿಹರಣಕೇಳೀ ವಿನೋದಯಾತ್ರಾನಿಮಿತ್ತಮಾನಂದಭೇರಿಯಂ ಪೊಯ್ಸಿದಾಗಳ್

ಎಸೆವಿಂ ಮನ್ಮಥಚಕ್ರವರ್ತಿ ಬನದೊಳ್ ಬಿಟ್ಟಿರ್ದನಾತಂಗಮಾ
ಳ್ವೆಸನಂಗೆಯ್ದು ಬರ್ದುಂಕಿ ಕಾಣ್ಬುದು ನಿಮಿತ್ತಂ ಪೋಗಿ ಮಾಣ್ದಿರ್ದೊಡು
ಬ್ಬಸಮಂ ಮಾಡದೆ ಮಾಣನೆಂದು ನಡೆತಂದೆಲ್ಲರ್ಗೆ ಪೇಳ್ವಂದದಿಂ
ಪಸರಂಬೆತ್ತುದು ಧರ್ಮನಾಥಗಮನಪ್ರಸ್ಥಾನಭೇರೀರವಂ ೪೩

ವ: ಆ ಭೇರಿಯ ಭೂರಿವಿರಾವಂ ದಶದಿಶಾವಿವರಾಂತರಾಳಮನಾವರಿಸು ತ್ತುಮಿರಲಾಗಳಾ ರತ್ನಪುರದ ನಿರವಶೇಷಪುರುಷಪರಿಷದನಂತಸೀಮಂತಿನೀಸಂತತಿಗಳೆಲ್ಲ ಪರಿಪರಿಯ ಬಣ್ಣವಣ್ಣಿಗೆಯಿಂ ರಂಗಂಬಡೆದ ಕಡುಬೆಲೆಯಿಂ ತಿಣ್ಣಮಾದ ಸಣ್ಣಸೀರೆಗಳನನ್ನುಟ್ಟು

ನವವಿಧಮಣಿಕೇವಣದಿಂ ರಮಣೀಯಮಾಗಿ ಥಳಥಳಿಸಿ ಪೊಳೆವ ನವೀನಾಭರಣಂಗಳಂ ತೊಟ್ಟು ಕಂಪಿನ ಕರಂಡಕಮಾದ ರಾಗಾವಿಳವಿಳಸದಂಗರಾಗಾನು ಲೇಪನಂಗೆಯ್ದು ಪೊಸತಾಗಿ ಕೈಗೆಯ್ದು ಬಂದರಮನೆಯ ರಾಜಾಂಗಣದೊಳ್ ನಿಂದಿರ್ಪುದುಂ

ಪಣ್ಣಿದ ಪಟ್ಟವರ್ಧನಮದೇಭಮನೇಱಿ ನರೇಂದ್ರಕುಂಜರಂ
ಬಣ್ಣಿಸೆ ಪಿಂದೆ ಬಂದೊಡನೆ ಪಟ್ಟದರಾಣಿಯುಮಾಗಳೇಱಿದಳ್
ಪೆಣ್ಣುಗಳೆತ್ತಲುಂ ಪರಸೆ ರೋಹಿಣಿಚಂದ್ರನ ಪಿಂದೆ ಮೇಘಮಂ
ತಿಣ್ಣಮನಿಪ್ಪುದಂ ತಡೆಯದೇಱುವವೋಲೊಳಕೊಂಡು ರಾಗಮಂ ೪೪

ವ: ಆಗಳ್

ಆನೆಯ ಮೇಲೆ ನಾಲ್ಕುಕೆಲದೊಳ್ ನೆಲಸಿರ್ದೊಲವಿಂದೆ ಬೀಸಿದರ್
ಮಾನಿನಿಯರ್ ಕನತ್ಕನಕದಂಡ ಚತುಸ್ಸಿತಚಾಮರಂಗಳಂ
ಪೀನತರಂಗಳಾದ ಪೊಸಮುತ್ತುಗಳಿಂ ಸಮೆದಿರ್ದ ಪಲ್ಲವೋ
ತ್ತಾನದ ಚೌಕಸತ್ತಿಗೆಗಳಂ ಪಿಡಿದಿರ್ದರಿನಂಗೆ ಲೀಲೆಯಿಂ ೪೫

ವ: ಸಮನಂತರಂ

ರಾಜಕುಮಾರರಾನೆಗಳನೇಱಿ ರಥಂಗಳನೇಱಿ ಸೂಳೆಯರ್
ವಾಜಿಗಳಂ ಪ್ರಧಾನರಿರದೇಱಿ ಪುರಂಧ್ರಿಯರೇಱಿ ಕೇಸರಿ
ವ್ರಾಜಮನುದ್ಧೃತಂ ಪಿಡಿಯ ಪಿಂಡುಗಳಂ ಪಿಡಿದೇಱಿ ರಾಣಿಯರ್
ಪೂಜಿತರಾಗಿ ನಿಂದರಧಿರಾಜನ ಸುತ್ತಲುಮುಣ್ಮೆ ಸಂಭ್ರಮಂ ೪೬

ಮಂಗಳ ನಾನಾವಿಧ ತೂ
ರ್ಯಂಗಳ ರವಮುಣ್ಮೆ ಪೊಣ್ಮೆ ಪತ್ತುಂದೆಸೆಯಂ
ಪಿಂಗದೆ ದಿಂಕಿಡಿಸುತ್ತಿರೆ
ತುಂಗಮನಂ ಧರ್ಮನಾಥನಲ್ಲಿಂ ತಳರ್ದಂ ೪೭

ಎಳೆವೆಱೆಯಂತಿರೆ ಚೆಲ್ವಂ
ತಳೆದುಜ್ವಳಿಸುತ್ತುಮಿರ್ದ ವಜ್ರಾಂಕುಶದಿಂ
ದಿಳೆಗಧಿಪನೊತ್ತಿ ನೂಂಕಿದ
ನಳಿಗಳ ಬಳಸಿಂದಮೆಸೆವ ಪಟ್ಟದ ಗಜಮಂ ೪೮

ವ: ಅಂತು ತಳರ್ವುದುಂ ತಾವೇಱಿದ ವಾಹನಂಗಳಂ ತಿರಿಪಿ ರಾಜಾಂಗಣದೊಳ್ ಸಂದಣಿಸಿ ನಡೆವ ಮಹಾರಾಯರ ಮಕ್ಕಳ್ಗಳ ಸಿವಿಗೆಗಳ ಬಳಗಂಗಳುಂ ಪಡಿಯಜೀರ ಪರಿಹಾಸಕರ

ಕಬ್ಬಿಗರ ಕಳಾವಲ್ಲಭರಂದಣಂಗಳ ಗೊಂದಣಂಗಳ್ ಮಂದೈಸಿ ನೆರೆದರ ಮನೆಯ ಬಾಗಿಲ್ವಾಡದೊಳ್ ತಿಂತಿಣಿಗೊಂಡು ಮೆಲ್ಲಮೆಲ್ಲನೊರಸೊರಸಿಂ ಪೊಱಮಟ್ಟಂ ಗಡಿಗೇರಿಯೊಳ್ ನಡೆವಾಗಳ್

ಪಿಂಗದೆ ಚೆಲ್ವ ಪೀಲಿದಳೆಯೊಡ್ಡುಗಳಿಂ ಪಸುರಾಗಿ ಪುಲ್ಲಿಯೊ
ಳ್ದೊಂಗಲ ಶೋಭೆಯಿಂದೆ ತಳಿರಾಗಿ ವಧೂಸದಪಾಂಗರೋಚಿಯಿಂ
ಮಂಗಳಮಾದ ಪೂಗುಡಿಗಳಾಗಿ ನೃಪಂ ನಡೆವಲ್ಲಿ ಕೂಡೆ ತ
ಳ್ತಂಗಡಿವೀಥಿ ಚೈತ್ರವನಮೆಂಬಿನಮಾಂತುದಗುರ್ವನಾಕ್ಷಣಂ ೪೯

ವ: ಆ ನೃಪಾಳೋತ್ತಮಂ ಸುತ್ತಲುಮೊತ್ತುವ ತುಷಾರಸೀಕರಾಸಾರದ ಸಿಂಪಿಣಿಯ ಪೊಂಪುಳಿಯಂ ನಿಲ್ಲದೆಲ್ಲಿಯುಂ ಸುಳಿವ ಗರಗವಳ್ಳರ ಕೆಯ್ಯ ಪೀಲಿಗರಗಂಗಳ ಕಂಪಿನ ತಣ್ಪೆಣ್ಪನೊಳಗೊಂಡ ಜಳಧಾರಾಮೋಚನವಿಜೃಂಭಣಮನೊಪ್ಪಂಬಡೆದುಪ್ಪರ ಗುಡಿಗಳ ವಿಸರ್ಪಣಮಂ ನೀಡುಂನೋಡಿ ನಗುತ್ತುಂ ಪೋದೆಡೆಯೊಳ್

ಪಿಂದೆ ಕುಳ್ಳಿರ್ದ ದೇವಿಯ
ನಂದು ನೃಪಾಳಂ ಮಲಂಗೆ ಕಳಶಕುಚಂಗಳ್
ಸಂಧಿಸೆ ಬೆನ್ನಂ ಸೋಂಕಲ್
ಕುಂದದ ಸುಖದಿಂದಮೊಂದಿ ತಣ್ಣನೆ ತಣಿದಂ ೫೦

ಪೇರುರದಲ್ಲಿ ಪಜ್ಜಳಿಪ ಹಾರಮರೀಚಿಗಳುಂ ಕಪೋಳವಿ
ಸ್ತಾರದೊಳೆಯ್ದೆ ರಂಜಿಸುವ ಕುಂಡಳವಜ್ರಮಯೂಖಮಾಳೆಯುಂ
ಚಾರುಕಿರೀಟರತ್ನಘನಕಾಂತಿಗಳುಂ ಬೆರಸಿರ್ದು ಸುತ್ತಲುಂ
ಮಾರನ ಬಿಲ್ಗಳಂ ರಚಿಸಲಂಗಜನೆಂಬಿದನುಂಟುಮಾಡಿದಂ ೫೧

ವ: ಮತ್ತಮವರವರ್ಗೆ ಪಿಡಿದ ಝಲ್ಲರಿಗಳ ಪಲ್ಲವಸತ್ತಿಗೆಗಳ ಬೆಳ್ಗೊಡೆಗಳ ತಳೆಗಳ ತಣ್ಣೆಳಲೊಳ್ ಬಪ್ಪಂತಃಪುರಕಾಂತೆಯರ ಸಕಳಕಳಾಸಂಪನ್ನೆಯರಪ್ಪ ಕನ್ನೆಯರ ಗಾಯಕ ವಾದಕ ನರ್ತಕಾದಿ ಕಳಾಕೋವಿದರ ನಟ್ಟನಡುವೆ ಬರುತ್ತುಮಿರ್ದ ಮರ್ತ್ಯ ಪತಿಯಂ ಮೊತ್ತಂಗೊಂಡು ಬಳಸಿ ಪಾದಮಾರ್ಗದಿಂದ ಮೋಹರಿಸಿ ಬರ್ಪ ಖಳ್ಗವ್ಯಗ್ರ ಹಸ್ತಾಗ್ರಭಟಪೇಟಕದ ಸಂದಣಿಯುಮೆಸೆಯೆ

ಬಿಡದಂದಂಬಡೆದೊಡ್ಡುಗೊಂಡವರ ಮೇಘಾಡಂಬರಚ್ಛತ್ರದಿಂ
ಗಡಣಂಗೊಂಡ ಮತಂಗಜಪ್ರಬಳದಾನಾಸಾರದಿಂ ಚಾಳನಂ
ಬಡದುದ್ಯಚ್ಚಮರೀಜವೀಜನ ಬಳಾಕಶ್ರೇಣಿಯಿಂ ಚೆಲ್ವು ಮುಂ
ದಿಡೆ ಕಾರ್ಗಾಲಮೆ ನಂದನಕ್ಕೆ ನಲವಿಂ ಬರ್ಪಂತೆ ಬಂದಂ ನೃಪಂ ೫೨

ವ: ಇಂತಭಿನವಶೋಭಾವಿಭವಪರಿಭೂಷಿತನಾಗಿಯಾ ಮೂರ್ಧಾಭಿಷಿಕ್ತಂ ಮೇಳದ

ಕಡುಚದುರೆಯರಪ್ಪ ಚೆಲ್ಲಗಾರ್ತಿಯರೊಡನೆ ವಸಂತಸಮಯದ ಪೊಸಸುಗ್ಗಿಯ ಪೆಂಪಂ ನುಡಿದು ಕೊಂಡಾಡುತ್ತುಂ ಪುರಗೋಪುರದ್ವಾರಮಂ ಪೊಱಮಟ್ಟು ಬಂದು ನಂದನವನೋಪಾಂತಂಬರಂ ನೀಡಿ ಮೆಟ್ಟಿ ಪಟ್ಟದಾನೆಯಂ ಹೋಯೆಂದಪ್ಪಳಿಸೆ ಮುಂದೆ ಪರಿವ ಕೊಲ್ಲಣಿಗೆಯ ಭಲ್ಲೆಯದ ಪಡವಳಗಟ್ಟಿಗೆಯ ಬಿರುದಿನ ಸಿಂದದ ಸಂದಣಿಯ ಕೋಳಾಹಳದ ರಭಸಮೆಸೆಯೆ ಕುಸುಮಾಕರೋದ್ಯಾನದ ಪರಿಸರಕ್ಕೆ ಬರ್ಪಾಗಳ್

ಚೆಲ್ಲಿಕೊಳುತ್ತುಂ ನೀರಂ
ಫುಲ್ಲಾಂಬುಜಧೂಳಿಯಿಂದಲೊಟ್ಟಿಕೊಳುತ್ತುಂ
ನಿಲ್ಲದೆ ಮಳಯಾಚಳದೊಳ್
ಮೆಲ್ಲನೆ ಬಂದತ್ತನಂಗಗಜದಂತನಿಳಂ ೫೩

ಕೋಗಿಲೆ ಗಿಳಿ ತುಂಬಿ ಮನೋ
ರಾಗದಿನೆಳಮಾಪಿನಲ್ಲಿ ಕೊನರಂ ಪಣ್ಣಂ
ಪೂಗುಡಿಯಂ ಸೇವಿಸಿ ಕಿವಿ
ಗಾಗಿಸಿದುರುತಾರಮಂದ್ರಮಧ್ಯಸ್ವರಮಂ ೫೪

ಕಟ್ಟಿದಿಱೊಱಾ ವನಂ ನೆಱೆ
ದಿಟ್ಟಿಗೆ ಪೊಲನಾದುದಮಮ ಬಾಸಣಿಗೆಯುಮಂ
ತೊಟ್ಟನೋಸರಿಸಿ ಸಲೆಮುಂ
ದಿಟ್ಟುಱೆ ಪಚ್ಚೆಯ ಸುಚಿತ್ರಪಟಮೆಂಬಿನೆಗಂ ೫೫

ವ: ಆ ವನಮಂ ಮುಟ್ಟೆವರ್ಪುದುಂ

ಅಂಕುಶದಿಂದಮೊತ್ತಿ ಗಜಮಂ ಪೆಱಗಿರ್ದಿನಿಯಳ್ಗೆ ಕೈಗೊಡು
ತ್ತುಂ ಕರಮೊಯ್ಯನೊಯ್ಯನಿಳಿಪಿ ಸ್ಫುಟಕುಂಭಮನಂಟುನೋಡಿ ನಿ
ಶ್ಶಂಕತೆಯಿಂದೆ ಮೆಟ್ಟಿ ರದನಾಗ್ರಮುಮಂ ಭರಿಕೈಯ ಸಂಧಿಯಿಂ
ಭೋಂಕೆನೆ ತಾಂ ಕೆಲಕ್ಕೆ ಪರಿಲಂಘಿಸಿದಂಗಜಶಿಕ್ಷಣೋತ್ತಮಂ ೫೬

ವ: ಅಂತು ಸಿಂಧುರಸ್ಕಂಧದಿಂದಿಳಿದು ಕೂಡೆಬಂದ ಚಾತುರ್ದಂತಬಲಮೆಲ್ಲ ಮನಲ್ಲಿರಿಸಲ್ವೇಳ್ದು ವನಜಳಕೇಳಿಗುಪಯೋಗ್ಯ ಕತಿಪಯಾಪ್ತಪರಿವಾರಂಬೆರಸು ವನ ಪ್ರತೋಳಿಕಾ ಪ್ರದೇಶದವಸರದೊಳ್

ವನವಿನೋದಕ್ಕೆ ತಕ್ಕವ
ರನಿಬರವೇಳಲ್ಕೆ ನೃಪತಿ ತಜ್ಜನಮೆಲ್ಲಂ
ಬಿನದಿಗರಾಗಿಯೆ ನುಡಿದರ್
ಘನವಿಭವದ ಮಹಿಮೆಯಮಮ ಪೊಗಳಲಳುಂಬಂ ೫೭

ವ: ವೇತ್ರಧರಪರಿಶೋಧಿತ ವನದೊಳಗಂ ವನಮಹತ್ತರಪುರಸ್ಸರಂ ಪುಗುವುದುಂ

ಮುನ್ನಂ ಕತ್ತಲೆಯಿಂ ಸಂ
ಛನ್ನಂ ವನಮಾಯ್ತು ಪಡೆ ಮುಸುಂಕಲ್ ದೆಸೆಯಂ
ಸನ್ನುತಮಣಿಭೂಷಣಕಿರ
ಣೋನ್ನತಿಯಿಂ ತೋಱಸಿತ್ತು ಮತ್ತೆಳೆವಿಸಿಲಂ ೫೮

ಎಲರಿಂದುದಿರ್ವಲರ್ದೆಲರಂ
ಸಲೆ ಕಾಣಿಕೆಗೊಟ್ಟು ನುಡಿದು ಹಿತಮಂ ಕೋಗಿಲೆ
ಯುಲಿಯಿಂ ಬಿದ್ದಿನನೆಂಬಂ
ತಿಳಿಗಿನನಂ ಮನ್ನಿಸಿತ್ತು ನಂದನಮೊಲವಿಂ ೫೯

ವ: ಅದಲ್ಲದೆಯುಂ

ಪೊಂದೊಡವಿಂ ಬೆಡಂಗಮರ್ದ ರಾಣಿಯರುಂ ಪಿರಿಯಂದಣಂಗಳಿಂ
ದಂದಿಳಿದಿರ್ಪ ರಾಗಪರಿರಂಜಿತ ರಾಜಮರಾಳಿಗಳ್ ಮುದಂ
ಸಂದಿಸೆ ವಾರಿಜಾವಳಿಗಳಿಂದಿಳಿವಂತಿರೆ ಪಾದರಾಗದಿಂ
ದೊಂದಿ ತಳಿರ್ತವೋಲೆಸೆದುವಂದಣದೆಯ್ದೆಣಗಿರ್ದ ಕೊಂಬುಗಳ್ ೬೦

ಕುಂಭಸ್ಥಳಮಂ ನಿಜಕುಚ
ಕುಂಭದೆ ಗತಿಯಂ ತದಲಸಗತಿಯಿಂ ಗೆಲ್ಲಲ್
ರಂಭೋರುಪೆಂಡವಾಸಂ
ಕುಂಭಿಯನಿಳಿದುದು ದಲಿಕ್ಕಿ ಮೆಟ್ಟುವ ತೆಱದಿಂ ೬೧

ಪಲತೆಱದ ವಾಹನಂಗಳಿ
ನಿಳಿದರ್ ಲಾವಣ್ಯವತಿಯರೆಳೆಮಾವಿನ ಗೊಂ
ದ[ಳಿ]ಸಿದ ಕೊಂಬುಗಳಿಂದಂ
ಗಿಳಿವಿಂಡುಗಳಿಳಿದು ಬರ್ಪ ತೆಱದಿಂದಾಗಳ್ ೬೨

ವ: ಅಂತಿಳಿವುದುಂ

ಅಡಸಿರ್ದ ಕೊಂಬುಗೋಲಂ
ಬುಗಳೆಡೆಯೊಳ್ಕೂಡೆ ನಿಲಿಸಿ ತೆತ್ತಿಸಿ ಸುತ್ತಂ
ಮಡಗಿಟ್ಟರ್ ಸತ್ತಿಗೆಗಳ
ಗಡಣಮನಗೆವೊಯ್ದ ಚಂದ್ರಮಂಡಳಿಗಳವೊಲ್ ೬೩

ಕೃತಕಾಚಳಮಂ ನೋಡುವ
ರತಿಯಿಂ ಬಂದಿರ್ದ ಬೆಟ್ಟುಗಳವೋಲ್ ಸುತ್ತಂ

ಕ್ಷಿತಿಜಂಗಳಲ್ಲಿ ಕಟ್ಟಿದ
ಮತಂಗಜಾವಳಿಗಳಿತ್ತವಕ್ಕಿಗಗುರ್ವಂ ೬೪

ವ: ಮತ್ತಂ

ನಡೆ ನುಡಿ ತೋಳ್ಮೊಗಂ ತೊಡೆ ಕುಚಂ ಮುಡಿ ಕೊಂಡೆಯಮಮಂ ವಧೂಜನ
ಕ್ಕಡಿಗಡಿಗೂಳ್ಪು ಮಚ್ಚರಮನಾಗಿಸೆ ಹಂಸ ಪಿಕೀಲತಾಬ್ಜಮಂ
ಕಡುಕದಳೀರಥಾಂಗಮಧುಪಾಳಿಯನೊಲ್ದೊಳಕೊಂಡ ಕಾರಣಂ
ತಡೆಯದೆ ಮುತ್ತುವಂತೆ ಬನಮಂ ನಡೆತಂದುದು ಸೌಂದರೀಜನಂ ೬೫

ವ: ಅಂತು ಬಂದ ರಾಣಿವಾಸದ ಪೆಂಡವಾಸದ ವಾರನಾರಿಯರ ನರ್ಮಸಚಿವರ ನಟ್ಟನಡುವೆ ಮೋಹನವಿದ್ಯಾದೇವತೆಯರ್ ಬಳಸಿದ ಕರ್ಬುವಿಲ್ಲನಂತೆ ಜಗದ್ವಲ್ಲಭಂ ಮಹಾಪ್ರತೀಹಾರ ಕೋದ್ಘುಷ್ಯಮಾಣ ದೇವಾವಧಾನಧ್ವಾನಪೂರಿತ ದಿಗಂತರಾಳನುಂ ವಾಮಪಾರ್ಶ್ವಾನುಗತಶೃಂಗಾರವತೀ ಪಟ್ಟಮಹಾದೇವಿ ಕೋಮಳಕರ ತಳಪಲ್ಲವ ಪರಿಷ್ವಂಗ ಭಂಗುರ ಸವ್ಯಪಾಣಿಪ್ರಕೋಷ್ಠಕಾಂಡನುಮಾಗಿ ನಿಂದಿರ್ಪುದುಂ ವನಪಾಳಕರ ವಿನಿರ್ದಿಷ್ಟ ನಾರಂಗ ಮಾತುಳಂಗ ಪೂಗ ಪುನ್ನಾಗ ಜಂಬೀರ ನಾಳಿಕೇರ ಮಾಳಿಕೆಗಳಂ ನೋಡುತ್ತುಂ ನಡೆತಪ್ಪೆಡೆಯೊಳ್

ಪಿಡಿಯೊಳಡಂಗಿ ತೋರ್ಪ ನಡು ವೃತ್ತಕುಚಂಗಳ ಭಾರದಿಂ ಕರಂ
ನಡುಗೆ ನಿತಂಬಭಾಗ ಘನಭಾರದೆ ಮೆಲ್ಲನೆ ಗುಜ್ಜುಮೆಟ್ಟುತುಂ
ನಡೆವಡಿಗಳ್ ಪರಿಸ್ಖಳಿಸಿ ಭೂತಳಪಾಲನ ಪಿಂದುಗೊಂಡು ಕೈ
ವಿಡಿದು ಪರಸ್ಪರಂ ನಡೆದು ಬಂದುದು ವಿಶ್ವವಿಳಾಸಿನೀಕುಳಂ ೬೬

ಮಾಣಿಕದತುಳಾಕೋಟಿ
ಶ್ರೇಣಿಕೆಯ ವಿರಾವದೊಡನೆ ಕಳಕಾಂಚೀದಾ
ಮಾಣನಮದುಣ್ಮೆ ಪೊಣ್ಮಲ್
ಮಾಣಿಕ್ಯಂ ಬಳಸಿ ನಿಂದ ತದನಂತರದೊಳ್ ೬೭

ಇದು ನಾಗಕೇಸರದ ಸಾ
ಲಿದು ಜಂಬೂಕುಜದ ಪಂತಿಯಿದು ಚಂದನವೃ
ಕ್ಷದ ರಾಜಿಯಿದು ಲವಂಗದ
ಪೊದಱೆಂತೆಂದುಸಿರ್ದು ತೋಱಿದಂ ವನಪಾಳಂ ೬೮

ವ: ಮತ್ತಮಾ ಪ್ರತೋಳಿಕೆಯ ಬಲದ ಕೆಲದೊಂದು ತಾಣದೊಳ್ ಪಾಸಿದ ಪಾಸಿನಂತೆ ದೆಸೆವಡೆದ ನುಣ್ಪೆಳಂತಿಗೆ ಮಣಲ ತಣ್ಪುಳಿಲ ಮುಂದೆ ನಿಂದು ಸೂಳೆತನದ ಗಾಡಿಯಿಂ

ಬೆಡಂಗಮರ್ದು ಕೈವಂದ ಬಾಳಮಾಕಂದಲತೆಯಂ ಕಂಡು ರಸಿಕರತ್ನಾಕರ ನೆಂಬ ನಾಗರಕಂ ನರಪಾಲಶಿರೋಮಣಿಯ ಮೊಗಮಂ ನೋಡಿ ದೇವರಿತ್ತ ಚಿತ್ತೈಸುವುದೆಂದು ಸುಟ್ಟಿದೋ ಱಿಯುತ್ಪ್ರೇಕ್ಷಾವಚನದಿಂದಿಂತೆಂದಂ

ಶೃಂಗಾರಂಬೆತ್ತ ಭೂತೀಗಣಿಕೆ ವನಗೃಹದ್ವಾರದೊಳ್ ನಿಂದೊಡಾದಂ
ಪಾಂಗಿಂದಂ ನೋಡಿ ಚಿತ್ತಂಬರಿದು ಸುರಭಿಕಾಲಂ ವಿಟಂ ಪೂಗಳೆಂಬು
ತ್ತುಂಗಾತಿಸ್ಥೂಳಮುಕ್ತಾಫಳತತಿಗಳನೊಲ್ದೊತ್ತೆಗೊಟ್ಟು ಪ್ರಮೋದಾ
ಭಂಗಂ ಕೂಡಲ್ಕೆ ರೋಮಾಂಚದವೊಲೊಗೆದುದೆಯ್ದಂಕುರಶ್ರೇಣಿ ಸುತ್ತಂ ೬೯

ವ: ಆ ನುಡಿಗೆ ಮುಗುಳ್ನಗೆನಗುತ್ತಮಿರೆ ಮತ್ತೊಂದೆಡೆಯೊಳತಿಸೌರಭಂ ತನ್ನಯ ಲತಾಂತಪರಿಮಳಾಲೋಲಮಾಗಿ ಬಂದ ರೋಲಂಬಮಂ ಮನ್ನಿಸಿ ಕೋಕಿಲ ಲಲನಾಲಾಪನಮುಖದಿಂದಿಂತೆಂದದಕ್ಕುಸಿರ್ವಂತಿರ್ದುದೆಂದುತ್ಪ್ರೇಕ್ಷಿಸಿದಂ

ಎನಗೆ ಪುಟ್ಟಿರ್ದ ಸುಮನೋ
ಘನಮಂಜರಿ ನಿನಗೆ ನಲ್ಲಳಾದುದಱಿಂ ಮೇ
ದಿನಿಯೊಳನುಮಾನಿಸದನಾ
ವನೊ ಮಾವಂ ಮಾವನಳಿಯನಳಿಯಂ ದಿಟದಿಂ ೭೦

ವ: ಇಂತೆಂಬಂತಿರ್ದುದೆಂಬ ವಚನದರ್ಥದೃಷ್ಟಿತ್ವಕ್ಕನುರೂಪಮಾದುದೆನುತ್ತುಂ ಬರ್ಪನ್ನೆಗಂ ಶಿಶಿರಸ್ಥಾನಮಾಗಿ ಸುರ್ವುಗೊಂಡ ಮಾವಿನ ಬಾಳ್ದೊಂಪದೊಳ್

ಇನ್ನೆಗಮೆಮ್ಮ ನಾಲಗೆಗಳಂ ಸೆಱೆಗೆಯ್ದಭಿಮುದ್ರಿಸಿಟ್ಟನೀ
ತಂ ನೆರೆಯಂ ಖಳಂ ಶಿಶಿರನೆಲ್ಲಿದನೆಲ್ಲಿದನೀಗಳೆಂದು ಕೋ
ಪೋನ್ನತಿಯಿಂದೆ ಮೂದಲಿಸಿ ಪೋ ಪುಗಿಲೆಂಬತಿ ತರ್ಜನೋಕ್ತಿಯಿಂ
ದಂ ನೆಱೆಕೋಕಿಳಂ ಕದುಬುವಂತಲೆದತ್ತೆಳೆಗೊಂಬಿನಾಮ್ರದೊಳ್ ೭೧

ವ: ಅದಂ ವಿಸ್ಮಯಸ್ಮೇರಮುಖಾರವಿಂದನಾಗಿ ನೋಡುತ್ತುಂ ನಡೆಯೆ ಮುಂದೊಂದೆಡೆಯೊಳ್ ನೂತನಮಾಗಿ ಪೂತ ಮಲ್ಲಿಕಾವಲ್ಲರಿಯಂ ಕಂಡರಸಿ ವಿನೋದ ವಿಳಾಸಿನಿಯೆಂಬ ತನ್ನಯ ಪರಿಚಾರಕಿಯ ಕಿವಿಯಂ ಪಚ್ಚುವುದುಮಾಕೆ ದೇವಿಯೆಂದಳೆಂದಿಂತೆಂದಳ್

ಎಡೆವಿಡದೆಲ್ಲಿಯುಂ ನಿಬಿಡಮಾಗಿ ಕರಂ ತುಱುಗಿರ್ದ ಪೂಗಳಿಂ
ದಿಡಿದು ಪೊದಳ್ದ ಮಲ್ಲಿಗೆ ಮಹಾಸಹಕಾರಕುಮಾರನಂ ಸಮಂ
ತಡರ್ದಮರ್ದಪ್ಪಿ ನಿಂದು ಮೆಱೆದತ್ತು ದುಕೂಲಮನುಟ್ಟ ನಲ್ಲಳೋ
ಗಡಿಸದೆ ತನ್ನ ಕೇಳಿ ಸಹಕಾರ ಕುಮಾರನನಪ್ಪಿ ನಿಂದವೊಲ್ ೭೨

ವ: ಎಂಬುದುಮುರಸನದಕ್ಕೆ ಮೆಚ್ಚಿ ಮೆಚ್ಚುಗೊಟ್ಟು ಮಂದಸ್ಮಿತಪ್ರಸಾದಮಂ

ಹೇಳಾವಾಗ್ವಿಳಾಸದಿಂ ಪಡೆದು ನಡೆಯಲೊಂದೊಂದು ತಾಣದೊಳ್ ಪಳಿತ ಪನಸಮಂ ಫುಲ್ಲಿತ ಮಲ್ಲಿಕೆಯಂ ಪಲ್ಲವಿತ ಕಂಕೆಲ್ಲಿಮಂ ಕಂಡು ಭೂಪಾಳತಿಳಕನನಿಮಿಷದಾನತವದನೆ ಯಾದೋಪಳಿಂಗೆ ದರ್ಪಕನ ದರ್ಪಪ್ರಭಾವಕ್ಕಭಿವ್ಯಂಜಕಂಗಳಾಗಿರ್ದಪ್ಪುವೆಂದು ವಾಮಕೋಮಳ ಸೂಚೀಹಸ್ತದಿಂ ಸೂಚಿಸಿ ತೋಱಿ

ಕಡುನೀಲ್ದ ತೋರವಣ್ಗಳ್
ಪಡೆಯ ಸ್ಕಂಧಾವಳಂಬಮಾ ಪಲಸುಗಳಂ
ದೊಡರಿಸುತಿರ್ದುವು ಕಾಮನ
ಹಡಪಿಗರಂಬೊಂದು ಶಂಕೆಯಂ ನೋಳ್ಪರ್ಗಂ ೭೩

ಬಳ್ಳಿಯ ಮಲ್ಲಿಗೆಯ ಮೊಗ್ಗೆಗಳ್
ಉಳ್ಳಲರಲ್ ಮೇಲೆ ತುಂಬಿ ದುಱುದುಂಬಿ ಕರಂ
ಕುಳ್ಳಿರ್ದು ಮೊರೆಯೆ ಶಂಖಿಮ
ನೊಳ್ಳಿತ್ತಾಗೂದುವವನವೊಲ್ ಕಣ್ಗೆಸೆಗುಂ ೭೪

ಮಾರಂ ವಿರಹಿಜನಕ್ಕಂ
ಮಾರಣಹೋಮಮನೊಡರ್ಚುವೆಡೆಯೊಳ್ ಮಿಳ್ಳಿ[ಪ]
ಧಾರಾಗ್ನಿಜ್ವಾಲೆಗಳಂ
ತೋರಂತಸುಕೆಗಳೊಳೆಸೆದವಲರ್ಗಳ್ ಪಲವುಂ ೭೫

ವ: ಎಂದು ವಾಗ್ಭಾಮಿನೀಭೂಷಣನುತ್ಪ್ರೇಕ್ಷಾಭಾಷಣಮಂ ನುಡಿದು ಮಾಣಲೊಡ ಮೊಡೆಯನನೊಸಂಬಿಸುವ ಬೆಸಸೆಯಿಂ ಪರಿಹಾಸವಾಸವನೆಂಬ ನರ್ಮ ಸಚಿವನಿಂತೆಂದಂ

ಅಮಮ ಪಣೆಮುಟ್ಟಿ ಕೈವಂ
ದ ಮರಂ ಪೊಡವಡುವ ತೆಱದಿನಿರ್ದುದು ನಿಗಮಂ
ಸುಮನೋವೃತ್ತಿಯನಾಂತರ್
ಸುಮನೋವೃತ್ತಿಕರಪದ್ಧತಿಯನಱಿಯರೆ ಪೇಳ್ ೭೬

ವ: ಆಗಳಾ ಪೊಸಮಾತಿಂಗೆ ವಸುಧಾವಲ್ಲಭಂ ಮೆಚ್ಚಿ ಪಸಾಯದಾನಂಗೊಟ್ಟು ಮುಂದೆ ನಡೆಯೆ ನಡೆಯೆ

ಕಾಳಮರಾಳಿಗೊಳ್ಪುರುತಮಾಳಮನುರ್ಬಿದಮೈಂದವಾಳಿಯೊಂ
ದೋಳಿಯನೆಯ್ದೆಕಾಯ್ತು ಜಡಿವೀಳೆಯನಿಕ್ಕೆಲದಲ್ಲಿ ಚೆಲ್ವಪೊಂ
ಬಾಳೆಯನಾಂತು ಸಾಲ್ವಿಡಿದು ನಿಂದೆಳೆಗೌಂಗುಮನಳ್ತಿವಟ್ಟು ಭೂ
ಪಾಳಲಲಾಮನೀಕ್ಷಿಸಿದನಾ ವನಭೂರುಹಭೂರಿಶೋಭೆಯಂ ೭೭

ವ: ಮತ್ತಂ ಮೆಲ್ಲಮೆಲ್ಲನಲ್ಲಿಂ ತಳರ್ದು ವನಶ್ರೀಯ ವಿಳಾಸಮಂ ಭಾವಿಸಿ ನೋಡಿ ಕೊಂಡಾಡುತ್ತುಂ ಪೋಗಿ ಮುಂದೊಂದೆಡೆಯ ವನದ ನಡುವಣ ತೆಱಪಿನೊಳ್

ಬಾಳದ ಬೇರ್ಗಳಿಂ ಸಮೆದ ಕೇರ್ಗಳಿನೊಳ್ಪಳವಟ್ಟುನಿಂವ ಪೊಂ
ಬಾಳೆಯ ಕಂಬದಿಂ ತಳಿರ್ಗಳೋವರಿಯೊಳ್ ಪೊಸಗಪ್ಪುರಂಗಳಿಂ
ಮೇಳಿಸಿ ತೋರ್ಪ ನುಣ್ಣಗಲಿಯಿಂ ನವಚಂಪಕಕುಟ್ಮಳಂಗಳೊಂ
ದೋಳಿಯ ಕೀಲ್ಗಳಿಂ ರಚಿಸಿ ಕಣ್ಗೊಳಿಸಿತ್ತು ವಸಂತಮಂಡಪಂ ೭೮

ವ: ಮತ್ತಮೋರಂದಮಾದ ಕೆಂದಾವರೆ[ವೂ]ಗಳ ಸಂದೋಹಮನಲ್ಲಿಗಲ್ಲಿಗೆ ಬಂದಕ್ರಮದಿಂ ಸಂಧಿಸಿ ಬಣ್ಣವಿಟ್ಟು ತಿಣ್ಣಂ ಸಮೆದೆಳೆವಾಳೆಯ ಸುಳಿಯೆಲೆಯ ನಳನಳಿಪ ಮೇಲ್ಗಟ್ಟುಗಳಿಂದಂ ಸೇವಂತಿಗೆಯರಲ ವಂದನಮಾಲೆಗಳಸಿನೆಡೆಯೆಡೆಯೊಳ್ ತಡಂಗಲಿಸಿ ಬಿಟ್ಟ ಚೆಂಗಣಿಗಿಲೆಯ ಪೊಚ್ಚಪೊಸನನೆಯ ಸೂಸಕದ ತೋರತೊಂಗಲ ಸಮಾಲಂಬನದಿಂದಳುಂಬಮಾದ ರಚನಾವಿಶೇಷಂಗಳಿಂದಂ ಕೊಸಗಿನ ಕುಸುಮಂಗಳಂ ಪಿಣಿಲಿಱಿದು ಪೆಣದು ಪಸರಿಸಿ ಬಿಗಿದು ಮಾಧವೀಲತೆಯ ಮುಗುಳ ಮೊಳೆಗಳಂ ಸುತ್ತಲುಂ ತೆತ್ತಿಸಿ ಚೆಲ್ವುವಡೆದ ಜವಳಿವಡಿಗಳಿಂದಂ ಪನ್ನೀರಚಳಯದಿ ವಿಳಸನಮಂ ತಳೆದ ಸಮುತ್ತುಂಗರಂಗಸ್ಥಳದಾಳೋಕನಸಮಾಕಳಿತವಿಲೋಚನಚಯಕ್ಕಾಸುರಮಾದ ಭಾಸುರನಾಗಕೇಸರದ ಪರಾಗಪೂಗದಿಂದಿಕ್ಕಿದ ಮಂಗಳರಂಗಾವಳಿ ಭಂಗಿಯಿಂ ಬೆಡಂಗುವಡೆದುದಂತುಮಲ್ಲದೆಯುಂ

ಅತಿಶೈತ್ಯದ ನೃತ್ಯಗೃಹಂ
ನುತತರಶೃಂಗಾರದೊಂದು ಕಾರಾಗಾರಂ
ಕ್ಷಿತಿಪಂಗಚ್ಚರಿಯಂ ಮಾ
ಡುತುಮಿರ್ದುದು ಸುರಭಿಕುಸುಮಮಯಮಂಡಪಕಂ ೭೯

ವ: ಅಂತು ಕಂತುವಿನ ರತಿಯ ಮದುವೆಗೆಂದು ಸಮೆದ ಪಸುರ್ವಂದಲೆಂಬಂ ತಿರಸದಳಮೆಸೆವ ವಸಂತಮಂಡಪಮನೆಯ್ದೆವಂದು ಕ್ರೀಡಾವಿನೋದಪ್ರಸಂಗಪ್ರಗಲ್ಭಕತಿಪ ಯಾಪ್ತಪರಿ ವಾರಪರೀತಂ ಭೂಕಾಂತಂ ಶೃಂಗಾರವತೀಮಹಾದೇವಿವೆರಸು ತನ್ಮಧುಮಂಡ ಪಕ್ಕೆ ಮಂಡನಮಾದ ನಿಪ್ಪೊಸತಪ್ಪ ಕಪ್ಪುರದ ಘಟ್ಟಿಯಿಂ ನೇರ್ಪಟ್ಟು ಕಟ್ಟಿದ ಜಗಲಿಯ ಮೇಲೆ ಪಾಸಿದ ಬಹಳತರ ಪರಿಮಳಭರಮಂ ಪರಕಲಿಸುತುಮಿರ್ದ ಕುಸುಮದೆಸಳ ಪಸೆಯನಳಂಕರಿಸಿರ್ಪುದುಂ

ಪದಪದದಲ್ಲಿ ಮಾಳ್ಪ ಪೊಸತಾಯೆಯ ರಾಗದನೇಕಭೇದಮಿಂ
ಬೊದವಿದ ಕೈಯ ಬೀಣೆಯ ನಿನಾದದೊಳೋಯರಮಾಗೆ ತೋರ್ಪಿನಂ
ಹೃದಯದೊಳಂ ಚಮತ್ಕೃತಿ ನೃಪಾಳನ ಮುಂದೆ ವಸಂತರಾಗದಿಂ
ಪದುಳಿಸಿ ಪಾಡಿ ಮೆಚ್ಚಿಸಿದನೆಕ್ಕಲಗಾಣನದೊಂದು ಗೀತಮಂ ೮೦

ವ: ಕೇಳುತ್ತುಮಿರ್ದನನ್ನೆಗಮಿತ್ತ ಸೌಗಂಧ್ಯಬಂಧುರಮಂದಗಂಧವಹನ ಶೀಟದಿಂ ಪುಷ್ಪಾಪಚಯದ ಬಯಕೆ ಬಗೆಯೊಳೊಗೆಯಲಲ್ಲಿಂ ತಳರ್ವ ತರಳಲೋಚನೆಯರ ಚರಣತಳದರುಣಕಿರಣವಿಸರಪ್ರಸರಂ ತರುಲತಾಗುಲ್ಮಂಗಳ ಸಾಲ್ಗಳೆಡೆಯೆಡೆಯೊಳ್ ತಳಿರ್ದೊಂಗಲ ಚೆಲ್ವನೆಸಗುವಿನಂ ಕಂಕಣಕಿಂಕಿಣೀಝಣತ್ಕಾರದಿಂದಂಕಿತಮಾದ ಕರತಳಂ ಗಮನಾಗಮಸ್ಖಲನಕರನಿತಂಬಬಿಂಬದೊಡನೆ ಕಲಹಮನೊಡರ್ಚುವಿನಂ ಮಂಜುಳ ಮಂಜೀರಪುಂಜಶಿಂಜಾನರಂಜನೆ ಪೀವರಪಯೋಧರಭಾರದಿಂದುಡಿದಪುದು ಬಡನಡು ಮೆಲ್ಲನೆ ನಡಯಿಮೆಂದು ನುಡಿವಿನಂ ಬಂದು ಮಡದಿಯರ ಗಡಣಂ ಪಾಸುಂಪೊಕ್ಕಾಗಿ ಪರೆವುದುಂ

ತರುಣಿಯರೆಲ್ಲರುಂ ತಳರ್ದರುತ್ಕುಸುಮಾಪಚಯಾರ್ಥಿಯಿಂ ಮಹಾ
ಪರಿಮಳಭಾರವಾಂತ ಘನಕಾಂತ ಲತಾಂತ ಲತಾಪ್ರತಾನಮಂ
ನೆರೆದು ಮುಸುಂಕಿದರ್ ನಿಜಕಚಾಳಿಗೆ ಮಚ್ಚರಿಪ ದ್ವಿರೇಫಸಂ
ಕರಮನೆ ಕೂಡಿಕೊಂಡು ಪರಿರಕ್ಷಿಸುತಿರ್ದುದಿದೆಂಬ ಮಾಳ್ಕೆಯಿಂ ೮೧

ವ: ಆಗಳ್ ಅಂತರಂಗಭವನ ಜಂಗಮಕಲ್ಪಲತಿಕಾವಿತಾನಂ ಕವಿವಂತಿರಂಗ ನಾಜನಂ ಮೊದಲ್ಪಿಡಿದಡರ್ದಲರ್ಗುಡಿ ಗಿಡುಗಳ ಗಡಣಮನಿವೆಮಗೆ ತಮಗೆಂಬ ಸಡಗರದ ಕಡುನುಡಿ ಬಿಡದುಣ್ಮೆ ಪೊಣ್ಮುತ್ತುಮಿರೆ ಕವಿತಪ್ಪುದುಂ

ಕೆಲರಸುಕೆಗೆ ಕೆಲರಾಮ್ರ
ಕ್ಕೊಲವಿಂ ಸಂಪಗೆಗೆ ಕೆಲಬರುಂ ಪರಿತಂದರ್
ತಳಿರ್ದುಡಿಯಂ ಪಣ್ಗೊನೆಯುಮ
ನಲರ್ಗೊಂಚಲನಾಗಳೆಯ್ದೆ ಕೊಯ್ವುಜ್ಜುಗದಿಂ ೮೨

ಕೆಂದಳಿದಿಂದಂ ಭಂಗಂ
ಸಂಧಿಸಿತೆನಗೆಂದು ನಾಣ್ಚಿ ತಲೆಯೆಱಗಿದವೋ
ಲಂದು ಜೋಲ್ದಸುಕೆಯೊಳ್ದಳಿರ್
ಗೊಂದಣಮಂ ತಿಱಿವುತಿರ್ದಳಬಳೆಯದೊರ್ವಳ್ ೮೩

ಎಮ್ಮ ಕುರುಳ್ಗಳೊಳ್ ಕೆಳೆಯನೆಯ್ದಿ ಸಮಾನತೆವೆತ್ತು ಬಾಳ್ವ ಪೆಂ
ಪಂ ಮಿಗೆತಾಳ್ದ ತುಂಬಿಗಳ ವೈರಿಗಳೆಂದೆಳೆವೆಂಡಿರಾಕ್ಷಣಂ
ಸಮ್ಮದದಿಂದೆ ಸಂಪಗೆಯ ಚೆಲ್ವಲರ್ಗೊಯ್ದುಂ ತುಱುಂಬುತಿರ್ದರಾ
ದಂ ಮುಡಿಯಲ್ಲಿ ಮತ್ತಿರದಮಕ್ಕಮವಂ ಪಿಡಿದೊಪ್ಪಿಸೀವವೊಲ್ ೮೪

ವ: ಮತ್ತಮಾ ಸಂಪಗೆಯುದ್ದಗೊಂಬಿನೊಳಿರ್ದ ಗೊಂಚಲ ಪೂವಂ ಕೊಯ್ಯಲೆಂದು ಪತ್ತೆಸಾರ್ದು

ಉರದೊಳ್ ಪೆರ್ಮೊಲೆ ನಿಂದು ಮಿಳ್ಳಿಸೆ ಭುಜಾಮೂಲಂಗಳ ಸ್ಥಾನದೊಳ್
ಬೆರಸಲ್ ಪೆರ್ದೊಡೆ ನೀಳ್ದು ಕೂಡೆ ನಿಮಿರಲ್ ದೂಟಿಕ್ಕೆ ತಾಂ ನೀಳ್ಕಿ ಸೌಂ
ದರಿಯೊರ್ವಳ್ ಕಡುನೀಡಿ ಮೇಲೆ ನಳಿತೋಳಂ ಚಂಚಳಂಬೆತ್ತ ನು
ಣ್ಬೆರಳಿಂ ಪೂದಿಱಿವುತ್ತಮಿರ್ದಳೊಲವಿಂದೊಂದುಚ್ಚಶಾಖಾಗ್ರದೊಳ್ ೮೫

ವ: ಆಪೊತ್ತಿನೊಳ್

ಕಡುಬಲ್ಪಿಂ ಸೆಳೆದಡ್ಡಮಾಗಿ ನಿಮಿರ್ದಿರ್ದೊಂದುಚ್ಚಶಾಖಾಗ್ರಮಂ
ಪಿಡಿಯಲ್ಕಾಕ್ಷಣಮೆತ್ತಿಕೊಂಡು ನೆಗೆಯಲ್ ನೇಲುತ್ತುಮಿರ್ದಾಕೆಯೊ
ಳ್ದೊಡೆಯಿಂದಂ ನಿಱಿ ಜೋಲ್ದುಬೀಳೆ ನಗಿಸುತ್ತುಂ ನೋಳ್ಪ ಮಿಂಡರ್ಕಳಂ
ಪಡೆದಳ್ ಕಾಮಿನಿ ಪೊನ್ನ ಪುತ್ಥಳಿಯ ಚೆಲ್ವಂ ನಗ್ನಮಾಗಿರ್ದುದಂ ೮೬

ವ: ಆ ವಿಳಾಸವತಿಯಲ್ಲದೆ ಮತ್ತೊರ್ವಳೊಂದೆಡೆಯೊಳಲಗೊರ್ಯ್ವಲ್ಲಿ

ಮುಡಿಗಿಕ್ಕಿದೆನೆನ್ನಯ ಪೂ
ಗುಡಿಯೆಲ್ಲಮನೆಂದು ನಾಗಸಂಪಗೆಯ ಮರಂ
ಮುಡಿಗಿಕ್ಕುವವೋಲೆಳೆಗೊಂ
ಬುಡಿದುಱೆಬೀಳ್ದತ್ತು ಮುಂದೆ ಸತಿ ಸೆಳೆಯಲೊಡಂ ೮೭

ವ: ಅದಲ್ಲದೆಯುಮೊಂದು ತಣ್ಬುಳಿಲೊಳ್ ಬಳ್ಬಳಂ ಬಳೆದ ಸುರಹೊನ್ನೆಯ ಮರದ ಮೇಲ್ಗೊಂಬಿನೊಳ್ ತೋರ್ಪ ಪೂಗಳಂ ಕೊಯ್ಯಲೆಂದೊರ್ವಳ್ ತರಳನೇತ್ರೆ

ಅಲಗೊರ್ಂಬಂ ಸೆಳೆದಾಯ್ದು ಕೊಯ್ದು ನನೆಯಂ ಮತ್ತಂ ಬಿಡಲ್ಮೇಲೆ ತ
ನ್ನಲರಂ ಮಾಣದೆ ಸೂಱೆಗೊಂಡುದಱೆನಾದುಬ್ಬೇಗದಿಂ ಸೊಪ್ಪನೆ
ತ್ತಿ ಲಸದ್ಭೃಂಗನಿನಾದದಿಂ ಮೊಱೆಯಿಡುತ್ತಿರ್ದಂತೆ ಕಣ್ಗಾಗ್ಯುತ್ತ ಭೂ
ತಳದೊಳ್ ಕೇಡಡಸಿರ್ದಡಾವನೊ ಮಹಾದುಃಖಕ್ಕೆ ಪಕ್ಕಾಗದಂ ೮೮

ವ: ಆ ಮ[ಹಾ]ಗೊಂಬಿಂ ಬಳ್ಚಿಬಂದ ತುಂಬಿ ದುಱುದುಂಬಿ ತಾಂ ಸೇವಿಸುವ ಕುಸುಮಮಂ ಕೊಂಡಳೆಂಬ ಕೋಪದಿನೆಂಬಂತಿರಾಕೆಯ ಮೇಲ್ವಾಯ್ದು

ನೆಱೆಗುರುಳ ಕಪ್ಪಿನೊಪ್ಪದ
ತೆಱನೆನ್ನಯದೆಂದು ಬಂದು ತಲೆವಿಡುವಂತೆಳೆ
ಪಱಿಮೆ ತಲೆವಿಡುವುತಿರ್ದುದು
ನಱುಗಂಪಿನ ಸೊಂಪನಾಳ್ದ ನಳಿನಾನನೆಯಾ ೮೯

ಕೆಂದಾವರೆಯರಲೊಳ್ ಬಿಡ
ದಿಂದಿಂದಿರಮಿರ್ದವೊಲ್ ತಮಾಳದ ಕುಸುಮಂ

ಕೆಂದಳದೊಳ್ ಪತ್ತಿರ್ದು ದ
ಲಂದೆಸೆದುದು ಸೌಂದರಾಂಗಿ ಪೂಗೊಯ್ವೆಡೆಯೊಳ್ ೯೦

ಧವಳಕಟಾಕ್ಷವೀಕ್ಷಣದ ನುಣ್ಬೆಳಗಿಂ ಬಿಳಿದಾದಶೋಕಪ
ಲ್ಲವಕುಸುಮಂಗಳಂ ತರುಣಿಯರ್ ಕಡುಚೋಜಿಗಮೆಂದು ನೋಡುತಿ
ರ್ಪವಸರವಲ್ಲಿ ಮಯ್ಗರೆದು ಕೋಡಗಮವ್ವಳಿಸಲ್ಕೆ ಬೆರ್ಚಿ ತ
ಮ್ಮ ಪಿಟರನಪ್ಪಿಕೊಂಡು ನಡುಗುತ್ತಮವರ್ ಬಿಡದಿರ್ದರಾಕ್ಷಣಂ ೯೧

ಕತ್ತಲೆಯಂ ತಲೆವಿಡಿವದಿ
ಮುರ್ತ್ತೆಯ ಬಾಳ್ಗೊಂಪದಲ್ಲಿ ಕಣ್ಬೆಳಗದಱೊಳ್
ಬಿತ್ತರಿಸೆ ಕೆಳದಿಯರ್ ತೂ
ಗುತ್ತಿರಲಾಡುತ್ತುಮಿರ್ದಳುಯ್ಯಲನೊರ್ವಳ್ ೯೨

ವ: ಮತ್ತಮೊಂದೆಡೆಯೊಳ್ ಉತ್ತುಂಗಪೀನಪಯೋಧರೆಯೊರ್ವಳುತ್ಕಟ ಮಾಗಿ ಪಟಳಂಗೊಂಡ ಪಿಕಟಕುಟ್ಮಳಕುಳಕ್ಕಮಗ್ಗಳಿಸಿದ ಮೊಗ್ಗೆಯ ಮೊಗ್ಗರಕಂ ಸುಗ್ಗಿಯಾದ ಮಲ್ಲಿಗೆಯರಳ್ಗಳನಾಯ್ವಲ್ಲಿ

ಪುದಿದಲರ್ಗೊಯ್ಯಲೆಂದಬಳೆ ಮಲ್ಲಿಗೆಯೊಳ್ ಸಲೆ ಕೈಯನಿಕ್ಕಲೊ
ರ್ಮೊದಲೊಳೆ ತನ್ನ ಕೆಂದಳದ ಕೆಂಪು ಸಮಾವರಿಸಲ್ಕೆ ಪೂಗಳುಂ
ಪದೆದರುಣಂಗಳಾಗಿ ನೆಱೆತೋಱೆ ಮಲ್ಲಿಗೆಯಲ್ಲಿದೊಂದು ಮಾ
ಯದ ಗಿಡವೆಂದು ಪೂದಿಱಿಯಲೊಲ್ಲದೆ ಮುಗ್ಧೆ ಮರಳ್ದಳಾಕ್ಷಣಂ ೯೩

ಮುತ್ತೆಲೆಯ ಮೇಲೆ ಪಸರಿಸಿ
ಸುತ್ತಂ ಕರತಳದ ಕೆಂಪು ರಂಜಿಸೆ ತಳಿರೆಂ
ದುತ್ತರಳನೇತ್ರೆ ಕೊಯ್ವಳ್
ಬಿತ್ತರಿಸಲ್ ನಗೆಯನಂದು ಕೆಳದಿಯರನಿತುಂ ೯೪

ವ: ಆಗಳ್

ತರುಣಿಯರೀಕ್ಷಿಸಲ್ ತಿಲಕಮಂಕುರಿಸಿತ್ತೊದೆಯಲ್ಕಶೋಕಮುಂ
ಪರಕಲಿಸಿತ್ತು ಪಲ್ಲವಮನೊಲ್ದಮರ್ದಪ್ಪಿದೊಡಾಯ್ತು ಪುಷ್ಪಿತಂ
ಕುರವಕಮೆಯ್ದೆ ಮುಕ್ಕುಳಿಸಿ ಮೇಲುಗುಳಲ್ ಮಧುವಂ ಫಲಂಗಳಂ
ಧರಿಸಿ ವಿರಾಜಿಸಿತ್ತು ವಕುಳಂ ನಲವಾಯ್ತು ಮರಕ್ಕಮಾದೊಡಂ ೯೫

ವ: ಇಂತು ಕಾಂತೆ ತಿಂತಿಣಿಗೊಂಡು ತಂತಮಗೆ ಕೊನರ್ತಳಿರ್ಪೂಗುಡಿಗಳ ಬಳಗಮನಾಯ್ದಾಯ್ದು ಕೊಯ್ದು ಪುಷ್ಪಾಪಚಯವಿನೋದಮಂ ತೀರ್ಚಲೊಡಂ

ಅಳಿಬಂದುಂಬೊಡಮೊಂದುಮಿಲ್ಲ ಕುಸುಮಂ ಪಣ್ಗೊಂಚಲೊಂದಾದೊಡಂ
ಗಿಳಿ ಚಂಚೂಪುಟದಿಂ ಕರ್ದುಂಕುವೊಡಮಿಲ್ಲಂ ಕೋಕಿಳಂ ಕಚ್ಚಲೆಂ
ದೆಳಸಲ್ ನುಣ್ಗೊನರೊಂದುಮಿಲ್ಲ ನೊಸಲೊಳ್ ಬೊಟ್ಟಾಗಿಡಲ್ವೇಡಿ ಕೆಂ
ದಳಿರಂ ನೋಳ್ಪಡಮೊಂದುಮಿಲ್ಲ ಬಱಿದಾಗಿದ್ದತ್ತು ತನ್ನಂದನಂ ೯೬

ವ: ಅನಂತರಂ

ಸೊಗಸಂ ಕಣ್ಗೆತ್ತೊತ್ತಂ ಪೊಂದೊಡವುಗಳತಿಭಾರಂಗಳೊಳ್ಗೆಂಪಿನೊಂದೇ
ಳ್ಗೆಗೆ ಕಾರಾಗಾರಮಿಾ ಪೂದೊಡವಿನ ತೆಜದಿಂ ಕೂಡೆ ಪಂಚೇಂದ್ರಿಯಕ್ಕಂ
ಮಿಗಿಲಾದಾನಂದಮಂ ಮಾಳ್ಪುವೆ ಮೃದುತೆಯನಂಗಕ್ಕೆ ಮಾಧುರ್ಯದಿಂ ನಾ
ಲಗೆಗಂ ಮೂಗಿಂಗೆ ಕಂಪಿಂ ಕಿವಿಗಳಿರವದಿಂ ಲೋಚನಕ್ಕೆಯ್ದೆ ಚೆಲ್ವಿಂ ೯೭

ವ: ಎಂದು ತರುಣಹರಿಣನೇತ್ರೆಯರ್ ತಂತಮ್ಮ ಕೋಮಳ ತನುಲತೆಗಳಂ ನವೀನಪುಷ್ಪ ಮಾಲಾಮಯಾಲಂಕಾರಸಾರದಿಂ ಯಥೋಚಿತಮಾಗಿಯಳಂಕರಿಪಲಂಪು ಬಗೆಯೊಳ್ ಪೊಂಪುಳಿಯೋಗುತ್ತುಮಿರಲಂಬಿಂಗಂ ಬಿಲ್ಗ ಮರಲ್ಗಳನೀಯಲೆಂದು ಬನದ ದೇವಿಯ ರಲರ್ವಿಲ್ಲಬಲ್ಲಹನನಱಿಸಿ ಪುಗುವಂತೆ ಸಂಪಗೆಯ ಪೊದಱ ಜೊಂಪಮಂ ಶ್ರೀಖಂಡ ಷಂಡದ ಮಂಡಪಮಂ ಮಾಧವೀಲತೆಯ ಮನೆಯುಮಂ ಪೊಳೆವೇಳಾ ಲತೆಯ ನೀಳಮಂ ರಂಜಿತದ್ರಾಕ್ಷಾಲತೆಯ ಕುಂಜಮಂ ಪೊಕ್ಕು

ಬಾಳೆಯ ನಾರಿಂ ಕಟ್ಟಿದ
ಳಾಳಿಸಿ ಮಲ್ಲಿಗೆಯ ತೋರಮೊಗ್ಗೆಗಳಂ ಕಂ
ಪೇಳಿಪ ಮುತ್ತಿನ ಸರಮೆಂ
ಬಾಳೋಚದೆ ಬಂದು ಮುಗ್ಧೆಯರ್ ನೋಡುವಿನಂ ೯೮

ಇರುವಂತಿಯಲರ್ಗಳಂ ಸರ
ಸಿರುಹದ ನೂಲಿಂದೆ ಕಟ್ಟಿ ಪಂಚಶರಂಗೆ
ಯ್ದುದ್ದ ರಮಣಿ ಕೀಳ್ಪಡಿಸಿದಳಂ
ದುರವಣಿಸುವ ಪಂಚಶರನ ಶರಪಂಚಕಮಂ ೯೯

ಗೊಜ್ಜಗೆಯ ಚೆಲ್ವ ಮುಗುಳ್ಗಳ
ಗೆಜ್ಜೆಗಳಿಂದೆಸೆವ ಕಂಚನಾರದ ಕುಸುಮಾ
ತ್ಯುಜ್ವಳ ಕಾಂಚೀದಾಮಮ
ನುಜ್ಜೀವಿಸಿದಳ್ ಕುತೂಹಳಂ ತೋರ್ಪನ್ನಂ ೧೦೦

ಬಂದುಗೆಯಲರ್ಗಳಿನೆಸಗಿದ
ಳಂದುಗೆಗಳನೆಸೆವ ನಂದಿವಟ್ಟದ ಪೊಸಪೂ

ಏಂದೊಲ್ದು ಪಾಯವಟ್ಟಮ
ನಂದೊರ್ವಳ್ ಕಟ್ಟಿದಳ್ ಚಮತ್ಕೃತಿಯಿಂದಂ ೧೦೧

ವ: ಮತ್ತಮದಿರ್ಮುತ್ತೆಯ ಕುತ್ತುಂಗಱೆಯುಮಂ ಸುರಪೊನ್ನೆಯ ಚೆಲ್ವ ಪೆಱೆಯುಮಂ ಕರ್ಣಿಕಾರದ ಕರ್ಣಾವತಂಸಮಂ ನಾಗಕೇಸರದ ಕೇಯೂರಮಂ ವಕುಳದ ಮಕುಟಮುಮಂ ಕುರವಕದ ಕರವಳಯಮುಮಂ ತಿಳಕದಷ್ಪದಳಮುಮಂ ಚಂಪಕದ ಚಳಿಕೆಗೆಯುಮಂ ತಮಾಳಪತ್ರದ ಕರ್ಣಪತ್ರಮುಮಂ ಮೆಲ್ಪಂ ಬಲ್ಪಮೆಸೆದು ಮನೋಹರಮೆನಿಸುವಿನಂ ಸಮೆದು ತಮತಮಗೆ ಪೊಸಪೊಸತಾದ ಕುಸುಮದ ಪಸದನಂಗೊಂಡು

ಪೂವಿನ ಪಿಂಡುಗಂಕಣಮುಮಂ ಪೊಸಪೂವಿನ ತೋಳಬಂದಿಯಂ
ಪೂವಿನ ತೋರಮುದ್ರಿಕೆಗಳಂ ಸಲೆಪೂವಿನ ಕಂಠಮಾಲೆಯಂ
ಪೂವಿನ ಜೋಳಿಯಂ ಪೊಳೆವ ಪೂವಿನ ಚೌಕಳಿಯಂ ವಧೂಜನಂ
ಪೂವಿನ ಚೆಲ್ವಪಟ್ಟಿಕೆಗಳೆಂಬಲರ್ವಚ್ಚಮನಾಂತುದರ್ಥಿಯಿಂ ೧೦೨

ಅಚ್ಚರಿಯಂ ಪುಟ್ಟಿಸುವಲ
ರ್ವಚ್ಚಂಗಳನೆಯ್ದೆ ತೊಟ್ಟು ವಧುಗಳ್ ಪೋಲ್ತರ್
ಪೆರ್ಚಿದ ಶರಮಂ ಪೇಱಿದ
ನೆಚ್ಚಿನ ದೀವದ ಮೃಗಂಗಳಂ ಮನಸಿಜನಾ ೧೦೩

ವ: ಇಂತು ಕೈಗೆಯ್ದು ತಂತಮ್ಮ ತಾಣದಿಂ ಪೊಱಮಟ್ಟು ಮರಳ್ದರಳ್ದ ಪೂಗುಡಿಗಳ ಬಳಗಂಗಳಿಂದುದಿರ್ವ ಧೂಳೀಜಾಳಮೇಳಾಪಕದಿಂ ಮೃದುಳಮಾದ ಸಮಸ್ಥಳದೊಳ್ ಗುಜ್ಜುಮೆಟ್ಟುವ ಪಜ್ಜೆಯ ಮಡುಂಗಳಳ್ಬುಬರೆ ಲೀಲಾಗಮನ ವಿನೋದಮಂ ಮೆಱೆವುತ್ತುಂ ನೃಪಾಳನೋಲಗದ ಮಂಡಪಮಂ ಮುಟ್ಟೆವರ್ಪುದುಂ

ಪಲತೆಱನಾದ ಪುಷ್ಪಫಳಕೋರಕಪಲ್ಲವ ಭೂಷಣಂಗಳಂ
ತಳೆದು ವಧೂಜನಂ ನಿಜವಿಳಾಸಸುಧಾರಸದಿಂದೆ ಪೆರ್ಚಿಯು
ಜ್ಜಳಲತಿಕಾಳಿ ಬಪ್ಪ ತೆಱದಿಂದಮೆ ಬಂದಿದಿರಾಗಿ ನಿಲ್ವುದುಂ
ನೆಲೆಸಿದವಲ್ಲಿ ಭೂಪತಿಯ ದೃಷ್ಟಿಗಳೆಂಬ ಮಧುವ್ರತಂಗಳುಂ ೧೦೪

ಪೂವಿನ ಬಿಲ್ಗಳಂ ನನೆಯ ಬಾಣಗಣಂಗಳನಾಂತು ನಿಂದರಿಂ
ದೀವರನೇತ್ರೆಯರ್ ಕೆಲರರಲ್ಗಳ ಖೇಟಮುಮಂ ಕೃಪಾಣಮಂ
ಭಾವಕಿಯರ್ ಕೆಲರ್ ಪಿಡಿದು ನಿಂದರನಂಗಮಹೀಶಸೈನ್ಯಮಾ
ದಾವರಿಸಿರ್ದವೋಲ್ ಬಳಸಿ ನಿಂದುದು ಸುತ್ತಲುಮಂಗನಾಜನಂ ೧೦೫

ವನಲಕ್ಷ್ಮೀನಿವಹಂ ಪ್ರಸೂನಶರಸಂಘಾತಂಗಳಂ ಕೊಂಡುಬಂ
ದಿನನಪ್ಪಂಗಭವಂಗಮಾದ ತೆಱದಿಂದಾ ವಾರನಾರೀಜನಂ

ಜನಪಂಗಿತ್ತುದು ಕಾಣ್ಕೆಯಾಗಿ ಸುಮನೋಮಾಲ್ಯಂಗಳಂ ಪುಷ್ಪವೀ
ಜನಮಂ ಬಾಣಮೃಣಾಳಹಾರಲತೆಯಂ ಪಣ್ಗೊಂಚಲಂ ಪ್ರೀತಿಯಿಂ ೧೦೬

ವ: ಅನಂತರಮರಸಿವೆರಸರಸನುಮಲರ್ದೊಡವಂ ತೊಟ್ಟು ತುಂಬಿಯ ನಾರಿಯನಿಂಬುವಡೆದ ಕರ್ಬುವಿಲ್ಲುಮಂ ಕುಸುಮಸರಮುಮಂ ಪಿಡಿದು ಕಾಮನುಂ ರತಿಯುಮೆಂಬಂತೆ ಜಗನ್ಮೋಹನಮನೊಡರ್ಚುತ್ತುಂ ಹೂವಿನ ಹರಿಗೆಗಳ ನಡುವೆ ಸಡಗರದಿ ನಿಂದಿರ್ಪುದುಂ

ಘನಸುಮನೋವಿಭೂಷಣಭರಕ್ಕೆನಿತಳ್ಕಿ ಬಳಲ್ದರೆಲ್ಲರುಂ
ವನಿತೆಯರೀಗಳುದ್ಧಸುಕುಮಾರೆಯರೆಂದು ನೃಪಂಗೆ ಪೇಳ್ವವೊಲ್
ಜನಿಸಿದವೊಂದೆರಳ್ ಬೆಮರಬಿಂದುಗಳುತ್ಕುಚದೊತ್ತಿನೊಳ್ ಪ್ರಭಾ
ವಿನುತಕಪೋಳದೊಳ್ ತ್ರಿವಳಿಯೊಳ್ ನೊಸಲೊಳ್ ನಳಿತೋಳಮೂಳದೊಳ್ ೧೦೭

ವ: ಅಂತು ನಿಷ್ಪನ್ನ ಪುಷ್ಪಮಯಭೂಷಾವೇಷಮಂ ಘರ್ಮಜ[ಲ] ಬಿಂದುಗಳಿಮ್ಮಡಿಸಲದಂ ನೋಡಿ ದೇವರದೇವಂ ವನಕ್ರೀಡಾಪರಿಶ್ರಮಮಂ ಜಳಕ್ರೀಡಾನುಕ್ರಮದಿಂ ಕಳೆಯಲ್ವೇಡಿ ಬಗೆದಂದಲ್ಲಿಂದೆಳ್ದು ಪೂಗೊಳದಂತಿಕಕ್ಕೆ ಮೆಲ್ಲನೆ ತಳರ್ವುದುಮಾಗಳ್

ಮುನ್ನೆಱೆಕೊಯ್ದು ತೀರ್ಚಿದೊಡೆ ಬೀತವೊಲಿರ್ದ ಲತಾಳಿಗಳ್ಗೆ ಮ
ತ್ತಂ ನಳಿನಾಕ್ಷಿಯರ್ ನಿಜಕಟಾಕ್ಷನಿಪಾತದ ಮೂಱುಬಣ್ಣದಿಂ
ಚೆನ್ನಮೆನಿಪ್ಪ ಪೂಗುಡಿಯುಮಂ ತಳಿರ್ದೊಂಗಲನುನ್ಮದಾಳಿಯಂ
ಕೆನ್ನಮೊಡರ್ಚುತುಂ ಮರಳೆ ಸೊಂಪವಱೊಳ್ ಮೆಱೆವಂತೆ ಪೋಪುದುಂ ೧೦೮

ಮೀನಲೋಚನೆಯರರವಿಂ
ದಾನನೆಯರ್ ಚಕ್ರವಾಕಮಿಥುನಸ್ತನಿಯರ್
ಮಾನಿತಕಳಹಂಸವಧೂ
ಯಾನೆಯರಪ್ಕೇಳಿಗೆಳಸಿ ಪೋಪುದದುಚಿತಂ ೧೦೯

ವಾರಿಧಿ ದಿಕ್ಪತಿಕಡಲಂ
ಕ್ಷಾರಮಿದೆಂದುಳಿದು ದೇವಿವೆರಸೆಳ್ತಪ್ಪಂ
ತಾ ರಾಜಂ ಸತಿವೆರಸು ಮ
ನೋರಾಗದಿನಂದು ಪೂಗೊಳಕ್ಕೆಳ್ತಂದಂ ೧೧೦

ವ: ಅಂತೆಯ್ದೆವರ್ಪುದುಂ ಮುಂದೊಂದೆಡೆಯೊಳ್

ಸುಳಿಯ ಬಳಸಿಂದೆ ಚೆಲ್ವಂ
ತಳೆದು ಸುಗಂಭೀರಮಾಗಿ ವನಲಕ್ಷ್ಮಿಯ ಮಂ
ಗಳನಾಭಿಯೆಂಬಿನಂ ಕ
ಣ್ಗೊಳಿಸಿದುದು ಸರೋವರಂ ಧೃತೋಪರಿವಳಿಕಂ ೧೧೧

ವ: ಮತ್ತಂ ನಳನಳಿಸಿ ಬೆಳೆದು ಮರಳ್ದರಳ್ದ ಚೆಂಗಣಿಗಿಲೆ ನೆಯ್ದಿಲ್ ಕನ್ನೆಯ್ದಿಲ್ ತಾವರೆ ಕೆಂದಾವರೆ ಪೊಂದಾವರೆ ಮುಂತಾದ ಪಲತೆಱದ ನೀರ್ವೂಗಳ ಬಳಗದೊಳೋಲಾಡುತ್ತಿರ್ದ ಷಟ್ಚರಣಚರಣಸಮಾಘಾತದಿಂದೆಸಳ್ಗಳ ಪೊರ ಸಡಿಲ್ತು ಸುರಿವ ಮಂಜುಕಿಂಜಲ್ಕಮಂಜರಿ ಸುಳಿಗಾಳಿಯ ವಶದಿಂ ಮೇಗನೆಗೆದು ಪರಕಲಿಸಿ ಬೀೞ್ವು ಜಗದ್ವಲ್ಲಭನ ಜಳಕೇಳೀಸಮುತ್ಸವದೊಳ್ ಸೂಸಿದ ವಾಸಚೂರ್ಣ ಪರಿಪೂರ್ಣಮಾದುದೆಂಬಂತೆ ಕಣ್ಮಲೆವರ್ಗೊಲನೋಲಗಿಪ ಲೀಲಾಸರೋವರಂ ದೀರ್ಘಿಕಾವಾಪಿಕಾದಿಯಿಂ ಪೊಱಮಡುವ ಘಟೀಯಂತ್ರಪ್ರವಾಹಂಗಳಿಂ ತುಂಬುವ ಪವಣಿಂ ಮಿಗಿಲಾಗಿ ತುಂಬಿದ ನೀರಂ ತುಂಬುಗಳಿಂ ಕಳೆವ ಬೆಡಂಗುರ್ವನೊಡರಿಸೆ ಚರಣಹರಣಪಿಪಾಸಿಪೂರ್ಣೀಭೂತಜಳದೇವತಾನಿವಹಸಮವಗಾಹನಸಂಭ್ರಮನದಿಂ ವಿಡಂಬನಂಬಡೆದುದೆಂಬಿನಂ ಕೌತುಕಮಾಗಿರ್ಪುದುಂ

ಅದಱ ನಾಲ್ದೆಸೆಯೊಳಂ ಬೆ
ಳ್ದೊದವಿದ ಪೊಸಚಂದ್ರಕಾಂತಮಣಿಮಯಸೋಪಾ
ನದ ಪಂತಿ ನೀಳ್ದು ನಿಮಿರ್ದುದು
ಸುದತಿ ಸುಖಾರೋಹಣಾವರೋಹಣಕರಣಂ ೧೧೨

ವ: ಅದಕ್ಕೆ ತಲೆದೊಡಿಗೆಯೆನಿಸಿ ಸಿಱಿಸಿ ಮೆಱೆವ ನವರತ್ನಖಚಿತವಿಕಟ ಹಾಟಕಪರಿಘಟಿತಮಹಾಕಟಾಹಪಟಳಿಕಾಕೋಟಿರದೊಳಂ ರಜತರಚಿತದ್ರೋಣಿಶ್ರೇಣಿಯೊಳಮಲ್ಲಲ್ಲಿ ಪೇಱಿಪೇಱಿ ತೀವಿದ ಕಾಶ್ಮೀರಕರ್ಪೂರಕಸ್ತೂರಿಕಾಚಾರುಹರಿಚಂದನಪರಿರಕ್ಷೋದದಿಂ ಸಾರಮಾದ ನೀರಿಂದುಪಸರೋವರಂಗಳೆಂಬಂತಿರದಱ ಸುತ್ತಲುಂ ಪರಿವೇಷ್ಟಿಸಿ ವಿಸ್ಮಯಮಂ ಕದಱುತ್ತುಂ ಮುಂದೆ ಮೆಱೆದಿರ್ದವಂತುಮಲ್ಲದೆಯುಂ

ಬಳಸಿರ್ದ ತತ್ಕಟಾಹಂ
ಗಳ ನಡುವೆ ಸರೋವರಂ ಸಘೋಷಂ ಚೆಲ್ವಂ
ತಳೆದತ್ತು ಪೆತ್ತ ಮಱಿಗಳ
ನೊಲವಿಂದಂ ತಾಯಿ ಬಿಡದೆ ಮುದ್ದಾಡಿಪವೋಲ್ ೧೧೩

ವ: ಅದಂ ನೋಡುತ್ತುಂ ನಾಡೆಱೆಯುಂ ಮುಟ್ಟವರ್ಪುದುಂ

ನೆಗೆವ ನೀರ್ವನಿಗಳೆಂಬ
ಕ್ಕಿಗಳಿಂ ತೆರೆಗೈಗಳಿಂದೆ ಸೇಸಿಕ್ಕಿ ಕೊಳಂ
ಮಿಗುವ ಪೊಣರ್ವಕ್ಕಿಯುಲಿಯಿಂ
ಜಗದೊಡೆಯನನಂದು ಪರಸುತಿರ್ದವೊಲೆಸೆಗುಂ ೧೧೪

ವ: ಅಂತುಬಂದು ರಾಜಾಧಿರಾಜಂ ಕಂದರ್ಪನೆಂಬ ಕಲ್ಪವೃಕ್ಷದಭಿವೃದ್ಧಿನಿಮಿತ್ತಮುಪಕಲ್ಪಿತಾ

ನಲ್ಪತರ ಪರಿವಿಳಸದಾಳವಾಳಮೆಂಬಂತೆ ಕಣ್ಗೊಳಿಪ ತೀವಿದ ತಿಳಿಗೊಳದ ತೀರದೊಳ್
ಸುತ್ತಲುಂ ಬಳಸಿ ಸೌಂದರೀಜನಂ ಸಂದಣಿಸಿರೆ ನಿಂದಿರ್ಪುದುಂ

ತಡಿಯೊಳ್ ಕಾಂತೆಯರೆಯ್ದೆ ನಿಂದೊಳಗಣಂಭಃಶೋಭೆಯಂ ನೋಡಲಾ
ಗಡೆ ತಮ್ಮ ಪ್ರತಿಬಿಂಬಮಲ್ಲಿ ಪೊಳೆದೆತ್ತಂ ತುಂಬಿ ಕಣ್ಗೊಪ್ಪಮಂ
ಪಡೆಯಲ್ ತಜ್ಜಳದೇವತೆ ಪ್ರಿಯದೆ ನಾನಾರೂಪಮಂ ತಾಳ್ದ ನಾ
ಡೊಡೆಯಂ ಬಂದೊಡೆ ನೋಡುತಿರ್ದ ತೆಱದಿಂದಂದಿತ್ತುದಾಶ್ಚರ್ಯಮಂ ೧೧೫

ಕಡುತೋರಮಾಗಿ ಮೇಗ
ಣ್ಗಡರ್ದ ಸ್ತನಮಂಡಳಾಂತರಿತದಿಂ ಕಾಣ
ಲ್ಪಡೆಯದುದಂ ಬಾಸೆಯನಾ
ಗಡೆ ಕಂಡರ್ ತಮ್ಮ ರೂಪು ಮಾರ್ಪೊಳೆಯಲೊಡಂ ೧೧೬

ವ: ಆಗಳ್

ಸ್ತ್ರೀರತ್ನರಾಶಿಯೆಂಬ ಮ
ಹಾರತ್ನಸಮೂಹಮೆಯ್ದೆ ತುಂಬಿರ್ದ ಮನೋ
ಹಾರಿ ನಿಧಾನದ ಕುಳಿಯಂ
ಮಾರಬ್ರಹ್ಮಂ ವಿನಿರ್ಮಿಸಿದವೋಲೆಸೆಗುಂ ೧೧೭

ವ: ಬಳಿಯಮಿಳಾತಳಪಾಳಕನೈವರ್ಣದ ಚಿನ್ನರನ್ನದಿಂ ತಿಣ್ಣಂ ಬಣ್ಣಿಸಿ ಪಣ್ಣಿದ ಜೀರ್ಕೊಳವಿಯ ಕೊಂಬಿನ ಜಂತ್ರದ ಬಳಗಂಗಳೆಂಬೋಕುಳಿಯ ಘಳಿಯಂಗಳಂ ತರಿಸಿಕೊಡುವುದುಂ ತಮತಮಗೆ ತಳೆದುಕೊಂಡು

ಕುಸುಮಮನುಳ್ಳ ಬಾಹುಲತೆಗಳುಱೆ ಕೈವಶವಾಗಿ ಬಂದವೆಂ
ಬೆಸಕಮನಾಂತು ಹಂಸೆ ಗಿಳಿ ಕೋಗಿಲೆಯೆಂಬಿವಱಂತೆ ಮುತ್ತಿನಿಂ
ಪಸುರ್ವರಲಿಂ ವಿನೀಲಮಣಿಯಿಂದಮೆ ಮಾಡಿದ ವಾರಿಕೇಳಿಯಂ
ತ್ರಸಮಿತಿಯಂ ಲಸತ್ಕರತಳಂಗಳೊಳಂ ಪಿಡಿದಿರ್ದರೆಲ್ಲರುಂ ೧೧೮

ವ: ಮತ್ತಮಾ ಭುವನತ್ರಯಾಗ್ರಗಣ್ಯಾನಗಣ್ಯಲಾವಣ್ಯರಸವಿಸರದಿಂದೊಕ್ಕೆ ಸುಕ್ಕುಂಗುರುಳ ಸುತ್ತಲುಂ ತಳಿದ ಕತ್ತುರಿಯ ಪರಿಮಳದ ಪಸರದಿಂ ತೆಕ್ಕನೆ ತೀವಿದ ಜಳಕ್ರೀಡಾ ಸನ್ನದ್ಧೆಯರಾದ ಚೆನ್ನೆಯರಂ ಕೈವೀಸುವುದುಂ

ಪುರುಡಿಪವೆಮ್ಮೊಳೆಯ್ದೆ ನಡೆಯಿಂ ನುಡಿಯಿಂದಮಿವೆಂದು ಕಾಂತೆಯರ್
ಪರಿದೊಳಪೊಕ್ಕು ಜೀರ್ಕೊಳವಿಯಾದುಱೆ ಜಂತ್ರದ ಮುತ್ತಿನಂಚೆಯಂ
ಮರಕತದೊಂದು ಕೋಗಿಲೆಯುಮಂ ಪಿಡಿದೋವದೆ ನೀರೊಳದ್ದಿದರ್
ಬೆರಸಿದ ಕೋಪದಿಂ ಹುಡಿಕೆನೀರೊಳಗದ್ದುತುಮಿರ್ದರೆಂದೆಂಬಿನಂ ೧೧೯

ಸತಗರದಿಂದೆ ಜೀರ್ಕೊಳವಿಯಿಂ ಜಳಮಂ ತೆಗೆದೆತ್ತಿ ಕೈಯೊಳಂ
ಪಿಡಿವಿರದೊರ್ವರೊರ್ವರನಮರ್ತು ವಲೊತ್ತುತುಮಿರ್ದೊಡೆಲ್ಲಿಯುಂ
ಗವಣೆಸಿ ಕುಂಕುಮೋದಕದ ಸಿಂಪಿಣಿ ಪರ್ವಿರೆ ಕೆಮ್ಮುಗಿಲ್ಗಳೊಳ್
ಕಡುನಿಮಿರ್ದಿರ್ದ ಮಿಂಚುಗಳವೊಲ್ ವಧುಗಳ್ ಪೊಳೆದಾಡಿದರ್ ಕರಂ ೧೨೦

ನೆಲೆಮೊಲೆ ಮೀಱಿ ಮುಯ್ಯನಡರಲ್ ನಳಿತೋಳಮೊದಲ್ ಬೆಡಂಗಿನ
ಗ್ಗಳಿಸಿರೆ ಕೊಂಕಿ ಬಳ್ಕಿ ನಡು ಕೋಮಳೆ ಮಾಣಿಸಿ ಮೇಳದಾಳಿಯಂ
ತೊಲಗದೆ ಬೆನ್ನನೊಡ್ಡೆನುತೆ ಪೊಯ್ಯು ಮರಳ್ದಳನೋರ್ವಳದ್ದುಬಂ
ದಳವಡೆ ಪೊಯ್ಲುಳಪ್ಪಳಿಸುವಂತೊಡನಾಯುವರಂ ಮನೋಭವಂ ೧೨೧

ಓಕುಳಿಯಾಟದೊಳ್ ತರಳೆ ಪೂಸಿದ ಚಂದನಕರ್ದಮಂ ನಖ
ಪ್ರಾಕಟರೇಖೆ ತೋಱಿ ಕುಚಮಂಡಳದೊಳ್ ಕಡುಸಾಣ್ಟಿರಲ್ಕೆ ಮ
ತ್ತಾಕೆಯ ಮೇಳದಂಗನೆಯರೊತ್ತಿದ ಕುಂಕುಮಪಂಕವಾರಿಧಾ
ರಾಕುಳಮಲ್ಲಿ ಕಂಚುಳಿಕೆಯಂತಿರೆ ರಾಗಿಸಿಯಾಡಿದಳ್ ಕರಂ ೧೨೨

ಸೋಗೆನಿಱಿ ನಾಂದು ಸಡಿಲಲ್
ಬೇಗದಿನೋಸರಿಸಿ ಪಿಡಿದು ಮುರಿದೆಡಗೈಯಿಂ
ಬೀಗಿ ಬಲಗೈಯನೊಡ್ಡಿಸಿ
ತಾಗುವ ನೀರ್ವೊಯ್ಲನಾಂತು ನಿಂದಳಮೊರ್ವಳ್ ೧೨೩

ವ: ಇಂತಗುರ್ವುವಡೆದ ಜಳಕ್ರೀಡಾಪರ್ವಮನುರ್ವರಾಧಿಪತಿ ನಡೆನೋಡುತ್ತುಮಿರ್ಪೆಡೆಯೊಳ್

ಮಳಯಜವಾರಿಸೇಚನದಿನೊರ್ಮೆ ಕರಂ ಬಿಳಿದಾಗಿ ಕುಂಕುಮಾ
ವಿಳಜಳದೊಂದು ಸಿಂಪಿಣಿಯನೊರ್ಮೆ ಸಮಾವರಿಸಿರ್ದು ಕೆಂಪುಮಂ
ತೊಳಗುವ ಬೆಲ್ಪ ಕತ್ತುರಿಯ ನೀರ ಸುರಂಜನೆಯಿಂದಮೊರ್ಮೆ ಕ
ಪ್ಪಳವಡೆ ಮಾಯದಂಗನೆಯರೆಂಬಭಿಶಂಕೆಯನಿತ್ತರಾಕ್ಷಣಂ ೧೨೪

ಶೃಂಗಾರವತೀದೇವಿಯ
ನಂಗಜನಿಭಧರ್ಮನಾಥನಭಿಷಿಂಚಿಸಿದಂ
ಗಂಗೆಯೊಳಿಭವಲ್ಲಭೆಯಂ
ಮಂಗಳಯೂಥಾಧಿನಾಥನಭಿಷಿಂಚಿಪವೊಲ್ ೧೨೫

ಮತ್ತೀತನೆತ್ತಿದಪ್ಪಂ
ಚಿತ್ತಭವಂ ಕಾಮಕಲ್ಪಲತೆಗೆನೆ ನರಪಂ

ಚಿತ್ತರಿಸಿದ ಜಳಯಂತ್ರದಿ
ನೊತ್ತಿದನಾ ಸತಿಯ ಮೇಲೆ ಕುಂಕುಮಜಳಮಂ ೧೨೬

ಕುಂಕುಮಜಳಧಾರಾಪ್ರಸ
ರಂ ಕುಚದೆಡೆಯಿಂದೆ ಬಾಸೆಪಿಡಿದಿಳಿದುದು ತ
ತ್ಪಂಕಜವದನೆಯ ಚಿತ್ತದೊ
ಳಂಕಿತಮದನಾನುರಾಗರಸಮಿಳಿವನ್ನಂ ೧೨೭

ವ: ಮತ್ತಂ

ಕತ್ತುರಿಯ ರಸಮನವನಿಪ
ನೊತ್ತಿದೊಡಂದಿಯ ಧಾರೆಯಗ್ರದೊಳೆಸೆದಳ್
ಚಿತ್ತಭವನಸಿಯ ಧಾರೆಯ
ಮೊತ್ತದ ಮುಂದೆಸೆವ ವಿಜಯಲಕ್ಷ್ಮಿಯ ತೆಱದಿಂ ೧೨೮

ಒಪ್ಪಳಮೇಲೆ ಜೀರ್ಕೊಳವಿಯಿಂ ಪೊಸಗತ್ತುರಿನೀರನೊತ್ತೆ ತ
ದ್ಭೂಪತಿ ಧಾರೆಗಟ್ಟಿಳಿವ ಪೊತ್ತಿನೊಳಾಕೆಯ ವಕ್ತ್ರಪದ್ಮಮಂ
ವ್ಯಾಪಿಸಿದತ್ತು ಭೃಂಗಕುಳಮೆಂಬಿನಮೊಪ್ಪಿದಿಯಾದ ಮಧ್ಯಮಂ
ಧೂಪಿಸಿದತ್ತು ಮನ್ಮಥನ ಚಾಪಲತಾಘನಮೌರ್ವಿಯೆಂಬಿನಂ ೧೨೯

ವ: ತತ್ಸಮಯದೊಳ್

ಪರಮವಿಳಾಸಸಾರರದಿಂದಮದೊರ್ಮೆ ಬೆಡಂಗುವೆತ್ತ ಭಂ
ಗುರವದಪಾಂಗದೀಪ್ತಿರಸದಿಂದಮದೊರ್ಮೆ ಮನೋಗತೋರುಭಾ
ವರಸದಿನೊರ್ಮೆ ಕುಂಕುಮಕಳಂಕಿತಸದ್ರಸದಿಂದಮೊರ್ಮೆ ತ
ನ್ನರಸನ ಮೇಲೆ ಸಿಂಪಿಸಿದಳೊಪ್ಪುವ ಪಟ್ಟದರಾಣಿ ಲೀಲೆಯಿಂ ೧೩೦

ಬೆಳಗುವ ಪೊನ್ನಜೀರ್ಕೊಳವಿಯಿಂ ಮಿಗೆ ಸೀರ್ದೆಗೆದೆತ್ತಿ ದೇವಿ ಭೂ
ತಳಪನನೊಲ್ದು ಸಜ್ಜನಡುವಂ ಮುರಿದೊಯ್ಯನೆ ಕೈಯೊಳೊತ್ತಲು
ಚ್ಚಳಿಸುವ ಕಸ್ತುರೀಘುಸೃಣಚಂದನವಾರಿಯಧಾರೆ ಬೇಱೆವೇ
ಱಾಳಿದುದು ಕಪ್ಪು ಕೆಂಪು ಬಿಳಿದಾದಲರಂ ರತಿ ಚೆಲ್ಲುವಂದದಿಂ ೧೩೧

ಕಡುನಿಮಿರ್ದುರ್ವ ಪೊಳೆವ ಕಣ್ಗಳ
ಕುಡಿವೆಳಗಂ ಗಂಧಸಾರಜಳಧಾರೆಯುಮುಮಂ
ಗಡ ನಿಟ್ಟಿಸಲರಿದೆನೆ ತ
ನ್ನೊಡೆಯನ ಮೇಲರಸಿಯೊತ್ತುತಿರ್ದಳ್ ನಲವಿಂ ೧೩೨

ವ: ಮತ್ತಮಂತಃಪುರಪ್ರಧಾನಪುರಂಧ್ರೀನಿಕುರುಂಬಮುಂ ಶಂಬರಾರಿಪುಸ್ಪೃಶ್ಯ ಮೊದಲ್ದ
ಲೊಳ್ ಕವಿವಂತೆ ಮೇಲ್ವಾಯ್ದು

ತಡೆಯದೆ ಕಾಮಕಲ್ಪಲತೆಗಳ್ ತಳಿರ್ದೊಂಗಲಿಸರ್ಘ್ಯಪಾದ್ಯಮಂ
ಕುಡುವವೊಲಿಂದುಮಂಡಳಿಗ ರಾಣಿಯವಾಸದ ಪಂಡವಾಸದೊಳ್
ಮಡದಿಯರಾ ಮಹೀಪತಿಯ ಸನ್ಮುಖಬಿಂಬದಮೇಲೆ ಕೂಡಿ ಕೈ
ಮಡಗದೆ ತುಳ್ಕಿತುಳ್ಕಿ ಮಿಗೆಚಿಲ್ಮಿದರೊಪ್ಪುವ ಕೆಂದಳಂಗಳಿಂ ೧೩೩

ಸೊಂಪಾದ ಕುಂಕುಮಾಂಬುವ
ಸಿಂಪಿಣಿರಮಣಿಯರನರಸನೆಯ್ದೆ ಮುಸುಂಕಲ್
ಕೆಂಪೇಱಿದ ಮುಗಿಲೊಳ್ ಚಂ
ದ್ರಂ ಪುರುತಾರೆಗಳ ನಡುವೆ ಪೊಳೆವವೊಲೆಸೆದಂ ೧೩೪

ತೀವದೊಡಂ ಶಶಿಕಾಂತ
ಗ್ರಾವದ ಜೀರ್ಕೊಳವಿಯುಗುಳುತಿರ್ದುದು ಜಳಮಂ
ಭಾವಕಿಯರೊತ್ತೆ ಹಾಸ ವಿ
ಭಾಪಿಸರದಿನಸೆವ ಮುಖ ಹಿಮಾಂಶೂದಯದೊಳ್ ೧೩೫

ತವಕಿಸಿ ಕೂಡೆ ಸಿಂಪಿಸುವ ಕುಂಕುಮವಾರಿಯ ಕೆಂಪು ಸೀರೆಯೊಳ್
ಕವಿದಭಿರಂಜಿಸಿತ್ತು ಮದವಾನೆಗಳೆನ್ನಿಪೆಂದು ಕಾಮನಂ
ಬವನಿಪನೊತ್ತಿದುಂಡಿಗೆಯವೋಲ್ ವಧುಗಳ್ ಮೆಱೆದರ್ ಪಯೋಜಭೂ
ಳಿವಸರವಾರಿಯೊಳ್ ಸಲಿಲದೇವಿಯರಾಡುತುಮಿರ್ದರೆಂಬಿನಂ ೧೩೬

ವ: ಬಳಿಯಂ

ತರತರದಿಂದಿಳಿಪಿದ ಕೊ
ಪ್ಪರಿಗೆಗಳೊಳ್ ತೀವಿ ಪೊಯ್ದು ನೀರ್ ತೀವಿ ಬರು
ತ್ತಿರೆ ಮೊಗೆಯಲೆಯ್ದದಿರ್ದೊಡೆ
ಸರಸಿಯೊಳೊಳಪುಗುವ ಬಗೆಯನರಸಂ ಬಗೆದಂ ೧೩೭

ಈ ತರುಣೀಜನಂಗಳ ವಿಲೋಚನದೊಳ್ ಕುಮುದಂ ಪಯೋಧರ
ಸ್ಫಾತಿಯೊಳಂ ರಥಾಂಗಯುಗಮಾಸ್ಯದೊಳಂ ಕಮಳಂ ಪ್ರಶೋಭೆಯಿಂ
ದಾತತಮಾಗಿ ಮಚ್ಚರಿಸುತಿರ್ದುವವಂ ಪಡಿಯಿಟ್ಟು ನೋಳ್ಪೆನೆಂ
ದಾ ತನುಮಧ್ಯೆಯರ್ವೆರಸು ಪೂಗೊಳದೊಳ್ ಪುಗುತಂದನಾ ನೃಪಂ ೧೩೮

ವ: ಶ್ರುತಿಯೆಂತುಂ ಸರದೊಳ್ ಪೊಕ್ಕು ಪರಿವಡುವುದಂತಾ ರಾಜಹಂಸಮುಂ
ಸರೋವರದೊಳೊಳಪೊಕ್ಕಲ್ಲಿ

ಅರೆಬಿರಿದ ಕುತ್ತಸಳ್ಗಳ
ಪೊರೆಯೊಳ್ ಮಸ್ಗುರೆದು ಮೊರೆವ ಮಱಿದುಂಬಿಯ ಮೆ
ಲ್ಪರದಿಂದರವಿಂದದ ಸಿರಿ
ಧರಣಿಪನಂ ಪರಸುವಂತೆ ಪಡೆದುದು ಪದಪಂ ೧೩೯

ವ: ತದನಂತರಮನಂತ ಸೀಮಂತಿನೀಸಂತಾನಮುಂ ತಿಂತಿಣಿಗೊಂಡು ಸರೋವರಾಂತ
ರಾಳಮಂ ಪುಗುವಲ್ಲಿ

ಪಲಬರ್ ಬಂದೊಡೆ ತಾವರೆ
ಯೊಳಗಿರ್ದುದಲಕ್ಷ್ಮಿ ತೆರೆಯನಿಕ್ಕಿಸಿದವೊಲ
ಗ್ಗಳಿಸಿ ಪರ್ವಿತ್ತು ರತ್ನೋ
ಜ್ಜ್ವಳಸೋಪಾನೋತ್ಥ ಬಹಳಕಾಂತಿವಿತಾನಂ ೧೪೦

ಜಳದೇವತೆಯರ್ ತಮ್ಮ
ಗ್ಗಳಚೆಲ್ವಿನ ಗರ್ಭದಿಂದೆ ತಲೆಕೆಳಗಾಗಿ
ರ್ದಳಿಯೊಳ್ ನಡೆವಂತಿರೆ ಮಾ
ರ್ಪೊಳೆವಿಂದವಸಿಕ್ಕಿ ಮೆಟ್ಟುವಂತಿರೆ ನಡೆದರ್ ೧೪೧

ಉಡೆಯುದ್ದಂ ಜಳಮೆಂದು ಬಲ್ಪೊಡಮವರ್ ಕೇಳೀನಿಮಿತ್ತಂ ತಳ
ರ್ನಡೆಯಿಂದೊಯ್ಯನೆ ಗುಜ್ಜುಮೆಟ್ಟಿ ಪುಗುವಾಗಳ್ ಘಾತಕಾಸಾರಮಂ
ತಡವಿಂದೋಸರಿಸುತ್ತೆ ಚೆನ್ನಿಱಿಗಳಂ ಪೊಕ್ಕಿರ್ದರಾ ಸ್ತ್ರೀಯರೀ
ಗಡೆ ಮುಂಪೋಗಿ ಸಪತ್ನಿಯರ್ಗೆ ಕೆಳಗಾಗಿರ್ಪಂದಮೇಕೆಂಬವೋಲ್ ೧೪೨

ಪಿಡಿಯುತ್ತುಂ ಕಡುತೋರಬಟ್ಟಮೊಲೆಯಂ ಕಲ್ಲೋಲಹಸ್ತಾಗ್ರದಿಂ
ಜಡಿಯುತ್ತುಂ ನಿಱಿಯುಂ ನಿತಂಬದೆಡೆಯಂ ತಳ್ಪೊಯ್ದು ಮುಟ್ಟುತ್ತಮೊ
ಳ್ತೊಡೆಯಂ ಸೋಪಿ ತುಂಡುಂಕುತುಂ ಪುಳಕಮುಬ್ಬೇಳ್ವಂತೆ ಮೆಯ್ಯೋಂಕುತುಂ
ಮಡು ತಾಂ ಕಾಮುಕನೆಂಬಿನಂ ಸರಸವಾಡುತ್ತಿರ್ದುದಾ ಸ್ತ್ರೀಯರೊಳ್ ೧೪೩

ನಾರೀಲಾವಣ್ಯರಸಂ
ಸಾರಂ ತಿಳಿಗೊಳದೊಳೆಯ್ದೆ ತೆಕ್ಕನೆ ತೀವಲ್
ಭೋರೆನೆ ನೆಲೆವೆರ್ಚಿ ಸಮಂ
ತಾರಯಲಾ ಪಯಸಮಾಯ್ತು ನಾಭಿದ್ವಯಸಂ ೧೪೪

ಓಲಾಡಿ ವಿಮಳಜಳದೊಳ್
ಮೇಲಾಡಿ ಸರೋರುಹಕ್ಕೆ ತಮ್ಮಯ ಮೊಗಮಂ

ಲೀಲಾವತಿಯರ್ ಜಳದೇ
ವೀ ಲಾಸಮನಾಂತು ಕಣ್ಗೆ ಪಡೆದರಗುರ್ವಂ ೧೪೫

ಪೊನ್ನ ಜೀರ್ಕೊಳವಿಯೊತ್ತುವ
ಚೆನ್ನೆಯರಿಂದೆಸೆದು ಪೋಲ್ತುವದು ಪುತ್ತಳಿಯಂ
ಬಿನ್ನಣೆಸಿ ಕಡೆದು ಬಿಡಿಸು
ತ್ತಂ ನಿಲಿಸಿದ ಮದನಯಂತ್ರಧಾರಾಗೃಹಮಂ ೧೪೬

ವ: ಅಲ್ಲಿ ಮತ್ತೊರ್ಬಳ್

ತೊಲೆಯೆನೆ ಬಡನಡು ರೇಖಾ
ವಳಿಯೆನೆ ಪಳಿ ಮೊಲೆಯ ಜಘನದತಿಭಾರಮನ
ಗ್ಗಳಿಸದೆ ತೂಗುವನೆನೆ ಕರ
ತಳದಲೀಸಾಡಲಬಲೆಗಭ್ಯಾಸಿಸಿದಂ ೧೪೭

ಸವತಿಯ ಮೇಲೆ ಜಂತ್ರದೆ ಮನಃಪ್ರಿಯನೊತ್ತಿದ ವಾರಿಧಾರೆಗಳ್
ಕಪಿದುರದಲ್ಲಿ ಬೀಳ್ವರದ ಮುನ್ನಮೆ ಕೂರದ ಪೆಣ್ಣ ಕಣ್ಗಳಿಂ
ದವೆ ಕಪಿತಂದವಶ್ರುಗಳ ಬಿಂದುಗಳಾಗಳಸೂಯೆಯಿಂದೆ ಸಂ
ಭವಿಸಿದ ಘೋರಿಕೋಪರಸದಿಂದವಳಾಡಿದಳಂಬುಕೇಳಿಯಂ ೧೪೮

ಇನಿಯನನೊರ್ವಳ್ ಕಾಡುವ
ಮನದಿಂದಂ ಮುಳ್ಗಿಪೋಗಿ ನೀರೊಳಡಂಗಲ್
ತನುಗಂಧಕ್ಕೆಳಸುವ ಭೃಂ
ಗನಿಕರಮಾ ನೆಲೆಯನುಸಿರ್ವವೊಲ್ ಮೇಲೆಸೆಗುಂ ೧೪೯

ಕೊರಳ್ಗವಧಿಯಾ ಮುಗ್ಗಿದ
ತರುಣಿಯ ಮೊಗಮಂಬುಜಂಗಳೆಡೆಯೊಳ್ ಬೆರಸಿ
ರ್ದರಿದೆನಿಸಿ ತೋಱೆ ಭೇದಿಸ
ಲರವರಿಸಿದನವಳನಲ್ಲಿ ಕಾಣದೆ ತರುಣಂ ೧೫೦

ಮಸೆದಲರಂಬಂ ಕಾಮಂ
ಪೊಸಕುಂಕುಮರಸದಿನರ್ಚಿಸಿದನೆಂಬಿನಮಾ
ಬಿಸಜಾನನೆಯರ ಕಣ್ಗಳ್
ನಸುಗೆಂಪಂ ಪಡೆದವಾ ಜಳಕ್ರೀಡೆಯೊಳಂ ೧೫೧

ಪೋದುದತಿರಾಗಮಧರ
ಕ್ಕಾದುದು ದೃಷ್ಟಿಗೆ ನಿರಂಜನತ್ವಂ ತಣ್ಪಂ

ಬಾದುದು ಮೆಯ್ಯೊಳ್ ನಿರ್ಮಳ
ರಾದವರೊಳ್ ಕ್ರೀಡಿಪರ್ಗೆ ಲೇಸಾಗದುದೇಂ ೧೫೨

ಅವಚತ್ತವದರ ಕೈಗಳ್
ಕವಿತಂದುದು ನಡುಕಮವರ ಮೆಯ್ಯೊಳಗೆಲ್ಲಂ
ತವೆ ಪೋದುದು ಜಳಕೇಳಿಯ
ತವಕಂ ಮತ್ತವರ ಬಗೆಯೊಳದನಱಿದರಸಂ ೧೫೩

ವ: ನಿವಾರಿತರ್ಝಳಕ್ರೀಡಾವಸರನಾಗಿ

ಕರಿಣೀವೃಂದಂ ಬೆರಸಿದ
ಕರಿಪತಿ ನೀರಾಟವಾಡಿ ಪೊಱಮಡುವಂತಾ
ನರಪತಿ ಪೊಱಮಟ್ಟಂ ಸೌಂ
ದರಿಯರ್ ಬೆರಸಾಗಳಾ ಸರೋವರದಿಂದಂ ೧೫೪

ವ: ಅಂತು ಪೊಱಮಡುವಾಗಳ್

ಅಂದುಗೆಯೊಳ್ ತೊಡಂಕಿ ಬರುತಿರ್ದ ಮೃಣಾಳಮನಂಚೆವಿಂಡು ಕಂ
ಡಂದು ಕರ್ದುಂಕೆ ಬಲ್ಸೆಳೆವುತಿರ್ದೊಡವಂ ಬೆದಱಿಟ್ಟೆ ಸೋವುತುಂ
ಸೌಂದರಿಯರ್ ಬರಲ್ಕೆ ನಿಮಗೆನ್ನನೆ ಬಿನ್ನನೆಮಾಡಿ ಪೋಪುದ
ಲ್ತೆಂದೊಲವಿಂಗೆ ಕಾಲ್ವಿಡುವವೊಲ್ ತೆರೆಪೊಯ್ದುತುಮಿರ್ದುದಾಕ್ಷಣಂ ೧೫೫

ವ: ಬಂದು ತಡಿಯೊಳ್ ನಿಂದು ನೋಳ್ಪಾಗಳ್

ಓಕುಳಿಯನಾಡಿ ವನಿತಾ
ನೀಕಂ ಪೊಱಮಟ್ಟು ಪೋಪುದುಂ ಬಱಿದಾಗಿ
ರ್ದಾ ಕೊಳನಿಳಿದಾಯಕ್ಷಿಗೆ
ಬೇಕೆಂಬ ನಿಧಾನಮೆತ್ತಿದೊಡೆ ಕುಳಿಯನ್ನಂ ೧೫೬

ವ: ಅದಲ್ಲದೆಯುಂ

ಸಲಿಲಕ್ರೀಡೆಯೊಳಂಗನಾಂಗ ಗಳಿತಂ ಕಸ್ತೂರಿಕಾಕರ್ದಮಂ
ವಿಳಸತ್ಕುಂಕುಮಕಲ್ಕಮುನ್ಮಳಯಜಕ್ಷೋದಂ ಸುಕರ್ಪೂರ ಮಂ
ಜುಳರೇಣುಬ್ರಜಮುಂ ತರಂಗವಶದಿಂ ಮೇಲೆಲ್ಲಿಯುಂ ತೇಂಕಲಾ
ಜಲದಲ್ಲಿಕ್ಕಿದ ರಂಗವಾಲಿಯೆನೆ ಕಣ್ಗೆಂಬಾದುದಾ ಪೂಗೊಳಂ ೧೫೭

ವ: ಅನಂತರಂ

ವದನಂ ಘನಸೀತ್ಕಾರದ
ಸದನಂ ಕಾಯಂ ವಿಶೇಷಪುಳಕನಿಕಾಯಂ
ಸುದತಿಯರ ಜಲಕ್ರೀಡಾ
ಪದವಿರತಮದಾದುದುಷ್ಣಪೀಡಾವಿರತಂ ೧೫೮

ವಸ್ತ್ರಸ್ವಸ್ತಿಕಮೊಪ್ಪಿತ್ತೋಜೆ ಕುಚಕುಂಭದ್ವಂದ್ವದೊಳ್ ನಾಂದ ಸ
ದ್ವಸ್ತ್ರಂ ಪತ್ತಿರಲಾಸ್ಯದರ್ಪಣವಿಳಾಸಂ ಮೇಲೆ ಲೇಸಾಗಿ ವಿನ್ಯ
ಸ್ತಾಸ್ತಚ್ಛವಿಹಾರಂ ಪಲ್ಲವಮದೆಯ್ದುಂಬಾಗೆ ನಾರೀಜನಂ
ನ್ಯಸ್ತಂ ಮನ್ಮಥಮಂತ್ರದೇವಿಯರವೋಲ್ ತಾಳ್ದತ್ತು ಮಾಂಗಲ್ಯಮಂ ೧೫೯

ಅಡಿಗಡಿಗೆತ್ತಿ ಸಾವಗಿಸಿದತ್ತು ಸಡಿಲ್ದುಡೆನೂಲನಂದು ನಾಂ
ದಡಸಿ ಸುರುಳ್ದುಬೀಳ್ದ ಪೂಸಮೇಲುವನುತ್ಕಚಮಂಡಳಂಗಳಿ
ಟ್ಟೆಡೆಯೊಳೆ ಸಾರ್ಚಿದತ್ತು ಪೆಗಲೊಳ್ ಕಿವಜಾರ್ದುರುಕೇಶಪಾಶಮಂ
ಕೊಡಪಿ ಕಡಂಗಿ ನೂಂಕಿದುದು ಬೆನ್ನೊಳಮೆಯ್ದುಗೆವಾ ವಧೂಜನಂ ೧೬೦

ವ: ಆಪೊತ್ತಿನೊಳ್

ವನಿತೆಯರಂಗಸಂಗಸುಖಮಂ ಪಡೆದೊಪ್ಪಮನಾಳ್ದಪಿನ್ನೆಗಂ
ಘನಸುಖದಿಂದಗಲ್ದಿಸಿದರಿನ್ನವರೆಂದು ಜೊನಾಂದ ಸೀರೆಗಳ್
ತನುವನೆ ಪತ್ತಿಕೊಂಡಗಲಲಾಜದೆ ಮಾಯಿದೆ ಕೂಡೆ ಕಣ್ಣನೀ
ರ್ವನಿಗಳನಿಕ್ಕುವಂತಿರುದಬಿಂದುಗಳಾವಳಿ ಬೀಳ್ದುದೆತ್ತಲುಂ ೧೬೧

ವ: ಆಗಳ್ ಭಾಂಡಾಗಾರಾಧಿಕಾರನಿಯುಕ್ತರಪ್ಪ ಗೃಹಮಹತ್ತರಮುಖ್ಯರ್ ತಂದುಕೊಟ್ಟ ದೇವಾಂಗಯೋಗ್ಯ ದೇವಾಂಗಾದಿ ಪ್ರಶಸ್ತವಿಸ್ತೃತವಸ್ತ್ರಂಗಳನುಟ್ಟು ನವವಿಧಾಭಿನವ ಮಣಿಕೇವಣದಿನಂದಂಬಡೆದಾಭರಣಂಗಳಂ ತೊಟ್ಟು ತಾನುಂ ಶೃಂಗಾರವತೀ ಮಹಾದೇವಿಯುಂ ಪೊಸಶೃಂಗಾರಭಂಗಿಯನಂಗೀಕರಿಸಿ ಬಳಿಯಮಖಿಳ ವಿಳಾಸಿನೀಜನಕ್ಕಂ ಮುಂದಿಳಿಪಿದ ವಸನಕುಸುಮಾನುಲೇಪನ ಭೂಷಣಕಳಾಪಂಗಳನೀಯಲೊಡಮವರುಮೆಯ್ದು ಕೈಗೆಯ್ದು ಬಳಸಿನಿಂದಿರೆ

ವಾರಸ್ತ್ರೀಯರ ನಡುವೆ ಮ
ಹೀರಮಣಂ ದೇವಿವೆರಸು ಕಣ್ಗೆಸೆದಿರ್ದಂ
ತಾರೆಗಳ ನಡುವೆ ಚಂದ್ರಂ
ಶ್ರೀರೋಹಿಣಿವೆರಸಿ ತೋರ್ಕೆವೆತ್ತಿರ್ಪನ್ನಂ ೧೬೨

ವ: ಮತ್ತಂ ವನಮಹತ್ತರನಂ ಬರಿಸಿ

ಇದು ಕೌಂಗಿಂಗಿದು ನಾಗವಲ್ಲಿಗಿದು ವಲ್ಲೀಮಲ್ಲಿಗಿಮ್ಮಾವಿಗಿಂ
ತಿದು ಮತ್ತಂದುಱ ಬೇಱವೇಱ ಪೆಸರ್ಗೊಂಡೊಳ್ ಸೀರೆಯಂ ವಸ್ತುವಂ
ಪದಮಂ ನಂದನವಂಗೆ ಕೊಟ್ಟನಧಿಪಂ ದಾರಿದ್ರಮೆಯ್ದೋಡುವಂ
ದದಿನಲ್ಲಿರ್ದ ಮರಕ್ಕಮಾದೊಡುಡಕೊಟ್ಟಂ ವಂದಿಗೇಂ ಪೇಳ್ವುದೋ ೧೬೩

ವ: ಇಂತು ಸಫಳೀಕೃತಸಮಸ್ತಾರ್ಥಿಸಾರ್ಥಮನೋರಥನಾಗಿಯಾ ಧರ್ಮನಾಥಮಹಾರಾಜಂ ಕುಸುಮಂಕರೋದ್ಯಾನದಿಂ ಪೊಱಮಟ್ಟು ಪಟ್ಟದರಸಿವೆರಸು ಪಣ್ಣಿದ ಪಟ್ಟದಾನೆಯನೇಱ ಪರಿಕೃತಸಕಳಪರಿವಾರಪರಿವೃತನಲ್ಲಿಂ ತಳರ್ದು

ಮಂಡಳಿಗೊಂಡು ಬೆಳ್ಗೊಡೆಗಳಂಬರಮಂ ಪುದಿಯಲ್ ಸಮಂತು ಭೂ
ಮಂಡಳಮಂ ಮುಸುಂಕೆ ಘನವಾರಣವಾಜಿಪದಾತಿಸೈನ್ಯಕಂ
ಮಂಡನರತ್ನರಾಜಿಕಿರಣಪ್ರಸರಂ ದೆಸೆಯಂ ತುಡುಂಕಲಾ
ಖಂಡಳನೆಂಬಿನಂ ತಡೆಯದೆಯ್ದಿದನಾ ನಿಜರಾಜಧಾನಿಯಂ ೧೬೪

ವ: ಆ ಪುರಗೋಪುರದ್ವಾರಮಂ ಪುಗುವಲ್ಲಿ

ವನವಾರಿ ಕ್ರೀಡೆಯಂ ನಿರ್ಮಿಸಿ ಜಗದಧಿಪಂ ಬಂದನೆಂದಾ ಪುರಸ್ತ್ರೀ
ಜನಮೆಲ್ಲಂ ನೋಳ್ಪ ವಾಂಛಾತುರತೆಯನಿರದೆಯ್ತಂದು ನಿಂದಿರ್ದು ಕಾಮಂ
ಗಿನಿತೊಂದಾಶ್ಚರ್ಯರೂಪಂ ಘಟಿಸದಿನಿತುಸಂಪತ್ತಿ ಶಕ್ರಂಗಮಿಲ್ಲೆಂ
ದೆನುತುಂ ನೋಡಲ್ಕೆ ಪೊಕ್ಕಂ ಪುರದೊಳಖಿಳ ದೃಕ್ಕೈರವಾನಂದಚಂದ್ರಂ ೧೬೫

ವ: ಅಂತು ಪುರಮನರಮನೆಯಂ ಪೊಕ್ಕು ರಾಜಾಧಿರಾಜಂ ರಾಜಾಂಗಣದೊಳ್ ನಿಂದು ಗಂಧಗಜರಾಜನಿಂದಿಳಿವುದುಮಹಮಹಮಿಕಾಭಿವಾದಕ ಸಕಳ ಮೇದಿನೀ ಪಾಳಕರ್ ತಂತಮ್ಮ ಮಾಣಿಕ್ಯಮಯಕಿರೀಟಕೋಟಿಕಿರಣಮೇಳಾಪ ದೀಪಕಳಾಪದಿಂ ತದೀಯ ಚರಣಯುಗಳಕ್ಕಾರತಿಯನೆತ್ತುತ್ತುಮಿರೆ

ಕೆಲರಂ ಚಾಳಿತಮೌಳಿಯಿಂದೆ ಕೆಲರಂ ಹಸ್ತಾಂಗುಳೀ ಚಾಳದಿಂ
ಕೆಲರಂ ವೀಕ್ಷಣಭಂಗಿಯಿಂದೆ ಕೆಲರಂ ತಾಂಬೂಳದಾನಂಗಳಿಂ
ದೊಲವಿಂ ಬೀಳ್ಕೊಡೆ ಕೈಗಳಂ ಮುಗಿದು ಭಾಳಾಗ್ರಕ್ಕೆ ತಂದಿರ್ದದಂ
ಸಲೆಪೋದತ್ತು ಸಸೈನ್ಯಕಂ ನಿಜನಿಜಾವಾಸಕ್ಕೆ ರಾಜನ್ಯಕಂ ೧೬೬

ವ: ಮತ್ತಮುತ್ತುಂಗಮಣಿಮಯಮಂಡಪಮಧ್ಯಸಮುದ್ಭಾಸಿತ ಕನತ್ಕನಕ ಮಯ ಸಿಂಹಾಸನಸುಖಾಸೀನನಾಗಿರ್ಪುದುಮಾಘೂರ್ಣಿತ ಮಾಂಗಳಿಕಶಂಖಭೇರೀ ದುಂದುಭಿಸಂದೋಹಗಂಭೀರಧ್ವಾನಮೆಣ್ದೆಸೆಯಂ ಪಳಂಚಲೆಯಲಾಗಳಂಕಾರಕಳಿತ ಕಮನೀಯ ಕಾಮಿನೀನಿಕರಮನೇಕ ಕಳಧೌತ ಕಳಧೌತಭಾಜನ ಸಮಾಜಪಿನಿಹಿತ

ಸರೋಜರಾಗನೀರಾಜನರಾಜಿಗಳನೆತ್ತುವವಸರದೊಳ್ ಮಂಗಳಪಾಠಕರ್ ನೆರೆದು ಮಂಗಳವೃತ್ತಂಗಳನಿಂತೆಂದೋದಿದರ್

ನಲಿವಿಂ ನಿಮ್ಮಯ ರಾಜ್ಯದಭ್ಯುದಯದೊಳ್ ಪೆರ್ಚಿರ್ದ ಲಕ್ಷ್ಮೀಸದೃ
ಕ್ಷಲಸತ್ಕಾಂತೆಯರೆತ್ತುವಾರತಿಯ ಮಾಂಗಲ್ಯಕ್ಕೆ ಮಾಂಗಲ್ಯಮಂ
ಸಲಿಸುತ್ತುಂ ಜಗತ್ತ್ರಿತಯಾಧಿಪತಿ ನಿಮ್ಮೊಳ್ ದೇವದೇವಾರ್ಚಿತಾ
ನೆಲೆಗೊಂಡಾವಗಮಿಕ್ಕೆ ಕೂಡೆ ವಿಜಯಂ ಭದ್ರಂ ಶುಭಂ ಮಂಗಳಂ ೧೬೭

ಜನತಾ ನೀಲೋತ್ಪಲಕ್ಕಾವಗಮೊಗೆಗೆ ಮಹಾನಂದನಂದದ್ವಿಕಾಸಂ
ಜನಿತೋದ್ವೃತ್ತಾಪಮಾದಂ ಕಡುಗಮೃತಕಳಾವ್ಯಕ್ತಿಮಾಂಗಲ್ಯದಿಂದಂ
ಘನಮಿಥ್ಯಾತ್ವಾಂಧಕಾರಸ್ಥಿತಿಗಸುಗೆ ವಿನಾಶದೊಂದೇಳ್ಗೆ ನಿನ್ನಿಂ
ಜಿನಧರ್ಮಾಂಬೋಧಿ ಪೆರ್ಚಂ ತಳೆದು ಮಿಗುಗೆಲೇದೇವ ಭೂಚಕ್ರಚಂದ್ರಂ ೧೬೮

ವ: ಎಂದೋದುವ ಮಂಗಳವೃತ್ತಂಗಳನಾಲಿಸುತ್ತಮವರ್ ತಳೆದ ಮಂಗಳಾಕ್ಷ ತಂಗಳಿನುತ್ತಮಾಂಗದೊಳಾಂತುಕೊಳುತ್ತುಮಿರಲಾ ಪ್ರಸ್ತಾವನಾನುಗತಸಮುಚಿತ ವಿಕಟನಾಟಕ ಪಟುನಟನಾವಿನೋದವಿಲೋಕನ ಸಮನಂತರಮವರಂ ಕಳಿಪಿ ಬಳಿಯಂ ಮಜ್ಜನ ಭೋಜನವ್ಯಾಪಾರಮಂ ತೀರ್ಚಿ ಸುಖದಿನಿರುತ್ತುಮಿರೆ

ಪಿರಿದುಂ ಸಂಸಾರಸೌಖ್ಯಾನುಭವವಿಭವಮಂ ತಾಳ್ದಿದಂ ಧರ್ಮನಾಥಂ
ಪರಮೋದ್ಯದ್ಧೀಸನಾಥಂ ಸುಜನವಿನುತಪುಣ್ಯಂ ಚರಿತ್ರಾಗ್ರಗಣ್ಯಂ
ಪರಿಣಸ್ಯದ್ಭಾವಜಂ ಬಾಹುಬಲಿಸುಕವಿರಾಜಂ ಗುಣಾಂಭೋಧಿರಾಜಂ
ಧರಣೀಪಾಲಾರ್ಚಿತ ಶ್ರೀಪದಸರಸಿರುಹಂ ಚಾತುರೀಜನ್ಮಗೇಹಂ ೧೬೯

ಗದ್ಯ: ಇದು ಸಕಲಭುವನಜನವಿನೂಯಮಾನಾನೂನ ಮಹಿಮಾಮಾನನೀಯ ಪರಮಜಿನ ಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿ ದೇವಪ್ರಸಾದ ಸಂಪಾದಪಾದನಿಧಾನದೀಪವರ್ತಿಯುಭಯಭಾಷಾ ಕವಿಚಕ್ರವರ್ತಿ ಬಾಹುಬಲಿ ಪಂಡಿತದೇವಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್ ವಸಂತೋತ್ಸವ ವನ ಜಳಕೇಳೀವಿನೋದಪರಿವ್ಯಾವರ್ಣನಂ ಚತುರ್ದಶಾಶ್ವಾಸಂ.

ಪಂಚದಶಾಶ್ವಾಸಂ

ಶ್ರೀಲಲನಾ ಕುಚಕಳಶಸ
ಮಾಲಿಂಗನ ಭಂಗಿವೆತ್ತ ಪೇರುರದೊಳ್ ಪರಿ
ಲಾಲಿಸಿ ಕಿಣಾಂಕಮೆಸೆದಂ
ಲೀಲಾಪತಿಸರಸಚತುರಕವಿಕುಳತಿಳಕಂ ೧

ವ: ಅಂತು ಸುಖದಿನಿರ್ಪುದುಮನ್ನೆಗಂ

ಘನವೇಳಾವನಮಧ್ಯದೊಳ್ ಪಡುವಣಂಭೋರಾಸಿ ನೀರಂ ಕರಂ
ದಿನಪಂಗೀಯಲಗುರ್ವನಂಬರಗತಿಶ್ರಾಂತಂಗೆ ಕಂಡಿಲ್ಲ ದೇ
ವನವೊಲಾಂ ಜಳಕೇಳಿಯಂ ರಚಿಸುವೆಂ ದುಸ್ಸಹ್ಯತೇಜಪ್ರಭಾ
ವನೆಯಿಂದಂ ಸಮನೆಂದು ಮಚ್ಚರಿಸಿದಂತುಗ್ರಾಂಶು ಬಂದೆಯ್ದಿದಂ ೨

ವ: ಆಗಳ್

ತೆರೆತೆರೆಗೊಂಡು ಬಾಸರಬಿಸಿಲ್ ಕೆಲದೊಳ್ ತಿವರಲ್ಲಿ ಬೆಟ್ಟದೊಳ್
ಪರಕಲಿಸುತ್ತುಮಿರ್ದು ಪರಿರಂಜಿಸಿದತ್ತು ದಿವಾಕರಪ್ರಭಾ
ಪರಿಕರದುಷ್ಣಪೀಡನನಿವಾರಣಕಾರಣಮಾಗಿ ಧಾರಿಣೀ
ತರುಣಿ ಸಮಂತು ಬಾಸರದ ಸೀರೆಯನೆಯ್ದೆಮುಸುಂಕಿದಂದದಿಂ ೩

ವ: ಆ ಪ್ರಸ್ಥಾವದೊಳ್

ಪೊಸಕೆಂಬಟ್ಟೆಯನುಟ್ಟು ಮಿಂಚಡರ್ದು ಕೆಂಪಿಂ ಕೂಡೆ ಚೆಲ್ವಾಗಿ ರಂ
ಜಿಸುವೊಂದಡ್ಡಣಮಂ ದಲೊಡ್ಡಿಸಿ ವಿಸರ್ಪನ್ಮಂಡಳಾಗ್ರಾಂಶುವಿಂ
ದೆಸೆದಂದಟ್ಟಿಬರುತ್ತುಮಿರ್ಪ ತಮಮಂ ಮಾಜಾಂತು ಪೊಯ್ಯಲ್ಕೆ ಲೋ
ಪಿಸಿ ನಿಂದಿರ್ದವೊಲೊಪ್ಪಿದಂ ದಿನಕರಂ ಪ್ರೋದ್ರಿಕ್ತ ರಕ್ತಾಕರಂ ೪

ವಾರುಣಿಯಂ ಸೇವಿಸುವಾ ಮ
ನೋರಥದಿಂ ಬಿಟ್ಟು ಪೂರ್ವಗೋತ್ರಸ್ಥಿತಿಯಿಂ

ಸೂರಂ ನಡದೊಡೆ ನಭಮಪ
ಸಾರಸಿತುದ್ವೃತ್ತಿಗಾವನೋ ಸೈರಿಸುವಂ ೫

ಕತ್ತಲೆ ಸುತ್ತಲೆ ಸುತ್ತಲುಂ ಪರೆದು ಭಾಸ್ಕರನಂ ಬೆದಱಿಟ್ಟಿ ಮುಟ್ಟಿ ಬೆಂ
ಬತ್ತಿ ಬರುತ್ತಿರಲ್ಕಗಿದುಬಿಟ್ಟು ನಿಜಾಂಬರಮಂ ಸ್ವಪಾದಮಂ
ಮತ್ತುಱೀನೀಳ್ದು ಮುಂದೆ ನಿಡುಮೆಟ್ಟಿ ಕರಂ ಪರಿದೋಡಿ ಪೋಗಿ ತಾಂ
ಪತ್ತಿದನಸ್ತಭೂಧರಮನೆಂಬವೊಲೊಪ್ಪಿದುದರ್ಕಮಂಡಳಂ ೬

ವ: ತದಸ್ತಾಚಳಮಸ್ತಕವಲ್ಲಿ ಚೂಡಾಮಣಿಯೆಂಬಂತೆ ಕಡುರಮಣೀಯಮಾಗೆ

ಬಳಸಿಬರುತ್ತುಮಿರ್ದ ಪವಮಾನನ ತೀವ್ರತರಾಭಿಘಾತದಿಂ
ಚಳಿಸಿ ಕಳಲ್ಚಿ ತೊಟ್ಟು ಹರಿದುನ್ನತಪತ್ರದೊಳೊಂದಿ ನಾಡೆಯುಂ
ಪಿಳಸಿತಮೂಳಮಂ ಶತಪಿಶಾಬಿಯನಾಂತನಭೋಮಹೀಜದಿಂ
ಕಳಿವವನಾದ ಪಣ್ಣೆನಿಸಿ ತೊಪ್ಪನೆ ಬಿಳ್ದುದು ಸೂರ್ಯಮಂಡಳಂ ೭

ಪಿಂಬಗಲೆಂಬ ವೇಮಕರನರ್ಯಮಮಂಡಳಮೆಂಬ ಘಟ್ಟಿ ಚೆ
ಲ್ವಿಂಬಡೆದೆಯ್ದೆ ಕಾಯ್ದು ಪೊಳಪೇಱಲುದಗ್ರಕರಾಗ್ರದಿಕ್ಕುಳಿಂ
ವಂ ಬಿಡದೊತ್ತಿ ಸಾರ್ಚಿಯಪರಾಬ್ಧಿಯ ನೀರೊಳಗಳ್ದಿದಂ ದಲೆಂ
ದೆಂಬವೊಲರ್ಕಬಿಂಬಮುಱುಮುಳ್ಗಿದುದುಣ್ಮುವ ರಾಗರಂಜಿತಂ ೮

ವ: ಆ ಪೊತ್ತಿನೊಳ್

ಕಹಳಾಭೇರೀಮೃದಂಗಪ್ರತತಿವಿರುತಿವೇಳಾಪಕಂ ಕೂಡೆ ಭೋರೆಂ
ದು ಹಟಜ್ಜಿನೇಂದ್ರಗೇಹಂಗಳೊಳೆಸೆದುದು ಸಂಗೀತವಾದ್ಯಪ್ರನೃತ್ಯೋ
ದ್ಘಹಳಾನಂದಪ್ರಭಾವಕ್ಕನುಗತಮೆನೆ ದೇದೀಪ್ಯಮಾನಪ್ರದೀಪೋ
ನ್ಮಹಿಮಂ ಮೆಯ್ವೆರ್ಚೆ ಚೆಲ್ವಂ ತಳೆದುದಪರಸಂಧ್ಯಾನುವೇಳಾವಿಳಾಸಂ ೯

ನಾನಾಜಾತೀಯ ಪೂಜಾತಿಶಯದ ರಚನಾಕೌತುಕಂ ಸರ್ವದೇವ
ಸ್ಥಾನವ್ರಾತಂಗಳೊಳ್ ಕಣ್ಗೊಡರಿಸೆ ಸುಬಿಮಂ ಧೂಪಮುದ್ದಾಮ ಧೂಮೋ
ತ್ಥಾನಂ ಪ್ರಾಸಾದಪಾರಾವತವಿತತಿಗೆ ತುಚ್ಛೇತರಚ್ಛಾಯಿಕಾ ಸಂ
ತಾನಶ್ರೀಯಂ ನಿಮಿರ್ಚಲ್ ಮೆಱೆದುದಪರಸಂಧ್ಯಾದಿಕಾಲಾನುಬಂಧಂ ೧೦

ವ: ಅಪರಾಹ್ಣಕಾಲದೊಡವಶ್ಯಂ ಕರಣೀಯನಿತ್ಯದೇವತಾರ್ಚನಾ ಕ್ರಿಯಾನಿಯಾಮಮನಾ ದೇವಾಧಿದೇವಂ ಜಿನದೇವಾಗಾರದೊಳ್ ತೀರ್ಚಿ ತೀರ್ಥನಾಥಂಗೆ ಪುಷ್ಪಾಂಜಳಿಯನಿತ್ತು ಮುಕುಳಿತಪಾಣಿಪುಟರಾಗಾಭೋಗದಿಂ ನಿಜಲಲಾಟತಟವಲ್ಲಿಯ ಪಲ್ಲವಿತಂ ಮಾಡಿ

ಅಸ್ತಮನೊರ್ಮೆಯಿದ್ದ ತೇ
ಜಸ್ಥಿತಿಯಿಂದೊರ್ಮೆಯುಗ್ರನಾಗದ ಮತ್ತಂ
ನಿಸ್ತೇಜನಾಗದೊರ್ಮೆ ಸ
ಮಸ್ತಜಗನ್ಮಿತ್ರನಾದೆ ನೀನೆ ಜಿನೇಶಾ ೧೧

ಶಶಿರವಿಕೋಟಿದೀಧಿತಿಯೊಳೊಂದಿದ ನಿನ್ನಯ ದಿವ್ಯದೇಹದೊಳ್
ಪಸರಿಪ ಚೆಲ್ವನುಣ್ಬೆಳಗು ಚಿತ್ತದ ಕತ್ತಲೆಯಂ ಬಹಿಸ್ತಮೋ
ವಿಸರಮನೊರ್ಮೊದಲ್ ಕಿಡಿಸಿದತ್ತು ದಲೀದೃಶತೇಜದೇಳ್ಗೆ ಭಾ
ವಿಸುವಡೆ ದೇವರೆಂಬ ಪೆಸರ್ಪೊತ್ತವರ್ಗುಂಟೆ ಜಗತ್ತ್ರಯಾರ್ಚಿತಾ ೧೨

ವ: ಇಂತೆಂದು ತತ್ಸಮಯಸಮುಚಿತ ಜಿನಸಮಯಾಭಿರೂಪರೂಪ ಗುಣವಸ್ತುಸ್ತವನ ವಿಶೇಷದಿಂ ವೀತರಾಗಸರ್ವಜ್ಞನಂ ಸ್ತುತಿಗೆಯ್ದು ಗಂಧೋದಕಬಿಂದುವಂ ತಳಿದ ಸಿದ್ಧಶೇಷಾಕ್ಷತಪ್ರಸರದಿಂದಳಕಲತಾಜಾಳಕಮಂ ಕುಸುಮಿತಂ ಮಾಡಿ ಚಂದನ ತಿಳಕಮಂ ಭಾಳತಳದೊಳಂಗೀಕರಿಸಿ ಬಸದಿಯಿಂ ಪೊಱಮಟ್ಟು ಬಂದು ಸಭಾಭವನಭದ್ರ ವೇದೀಮಧ್ಯದೊಳಪರಿಮಿತ ಪರಿಜನಂಬೆರಸು ಕುಳ್ಳಿರ್ದು ಗಾಣಿಕ್ಯನೀರಾಜಿತಮಾಣಿಕ್ಯ ದೀಪನುಂ ಕವಿಜನಕೃತಪ್ರಶಂಸಾಳಾಪನುಂ ಕಾರ್ಯಾವಿಜ್ಞಾನೋತ್ಸುಕಕೃತಭೂಪನುಂ ಕೀರ್ತಿಸ್ಫೂರ್ತಿಪರಿಕೀರ್ತನಸಮರ್ಥಿತ ವನೀಪನುಂ ಸೇವಾವಿನೋದವಿಭಕ್ತಿಣೀಭೂತ ವಿಳಾಸಕಳಾಪನುಂ ಯುಕ್ತಾಯುಕ್ತ ವಿಚಾರವಿವೇಕನಿಯುಕ್ತ ನಿಖಿಳವಾದಿವಿವಾದ ಕೋಳಾಹಳಮೇಳಾಪನುಮಾಗಿ ಸುಖದಿನಿರ್ಪುದುಂ

ಪಿರಿದುಂ ಸುತ್ತಿರ್ದ ಕೈದೀವಿಗೆಗಳ ಬಳಗಂ ತಳ್ತು ತಾರಾಳಿಯೆಂಬಂ
ತಿರೆ ವಿಸ್ಫಾರೇಂದ್ರನೀಳಸ್ಥಳಿ ಗಗನಮಿದೆಂಬಂತೆ ಚೆಲ್ವಾಗೆ ದೇವಂ
ನರನಾರೀಲೋಚನೇಂದೀವರವನ ಪರಮಾನಂದಸಂಪಾದಕಂ ಭಾ
ಸುರತಾರಾನಾಥನೆಂಬಂತಿರೆ ಸೊಗಯಿಸಿದಂ ಸತ್ಕಳಾಲಾಲನೀಯಂ ೧೩

ವ: ತದನಂತರಂ

ರವಿಯೆನ್ನಾಸೆಗೆ ಬಂದನೆಂದು ವರುಣಂ ಮಿತ್ರಂಗಿದಿರ್ಪೋಗಿಯು
ತ್ಸವದಿಂ ಮಾಣಿಕದರ್ಘ್ಯಮಿತ್ತೊಡೆ ತದೀಯೋದ್ಯತ್ಪ್ರಭಾಮಾಳಿಕಾ
ಪ್ಲವಮಾ ತಾಣದೊಳೆಲ್ಲಮೆಯ್ದೆ ಪಸರಂಬೆತ್ತಿರ್ದುದೆಂಬಂತೆ ಪ
ರ್ಬುವ ನಲ್ಸಂಜೆಯ ಕೆಂಪು ಸೊಂಪುವಡೆದತ್ತಂ ರಂಜಿಸಿತ್ತಾ ಕ್ಷಣಂ ೧೪

ನಳನಳಿಸುತ್ತಮಿರ್ಪ ಪೊಸಮಾಲೆಯ ಚೆಲ್ವ ಕದಂಬುಗಂಪನ
ಗ್ಗಳಿಸಿ ಕವಲ್ತೆಗೊಂಡು ತುಱುಗಿರ್ದ ಗೃಹಾಳಿಗಳಲ್ಲಿ ಪೊಕ್ಕು ಬೆಂ
ಬಳಿಯೊಳೆ ಬಟ್ಟೆಗಾಣದೆ ಕರಂ ಸುಳಿದಾಡೆ ನುಸುಳ್ದ ಬೀದಿಯೊಳ್
ಮಳಯಸಮೀರಣಂ ಬಿಡದೆ ಬೀಸಿದುದೊಯ್ಯನೆ ಶೈತ್ಯಧಾರಣಂ ೧೫

ವ: ಇಂತು ಸಾಯಂತನಸಮಯಸಮೀರಣಂ ಸುಖದ ಸೊಕ್ಕನುಜ್ಜೀವಿಸುತ್ತುಂ ಬೀಸಿದಾಗಳ್

ಬಿಡದಮರ್ದಪ್ಪಿಕೊಂಡು ಕಡುಬೇಗದೆ ಚುಂಬಿಸಿ ಮುದ್ದುಗೆಯ್ದು ಕೈ
ಮಡಗದೆ ಕೂಡಿ ತೋಡುಮನಗಲ್ಚಿ[ಸಿ] ಪಿಂ[ಬ]ಗಳಿಂಗೆ ಕಾಯ್ದು ಕಣ್
ಕಿಡಿಕಿಡಿದೋಱುತ್ತುಂ ತಡಿಗಳಂ ಕಡೆದಾರ್ದುಱೆ ಬೇಱೆವೇಱೆ ತಾಂ
ಮಿಡುಕುವ ಜಕ್ಕವಕ್ಕಿಗಳ ದಂಪತಿಗಳ್ ಮೊಱೆಯಿಟ್ಟವಾಕ್ಷಣಂ ೧೬

ತಾವರೆಯಲರೆಸಳಾಸಿನೊ
ಳಾ ವಧುವಂ ಸೋಂಕಿ ಕುಳ್ಳಿದಿರ್ದಳಿಗೀತಾ
ರಾವಮನಾಲಿಸುತಿರ್ಪನು
ಭಾವಮುಮಂ ನೆನೆದು ನೊಂದುದು ಚಕ್ರಂ ೧೭

ಬಿರಸೆಳೆದೆಯ್ದೆ ಸಣ್ಣಮಳಲಂ ಪಸೆಯಾಗಿ ಕಳಲ್ದು ಬೀಳ್ವ ತಾ
ವರೆಗಳೆಸಳ್ಗಳಿಂ ಸಮೆದ ಪಾಸುಮನರ್ಪಿಸಿ ಶೀಕರಂಗಳಂ
ತರಳತರಂಗಮಾಳಿಕೆ ರಥಾಂಗವಧೂಟಿಗೆ ಶೀತಳಕ್ರಿಯಾ
ಪರಿಕರಭಾರಮಂ ಕೆಳದಿಯಂತಿರೆ ನಿರ್ಮಿಸಿದತ್ತು ಮೋಹದಿಂ ೧೮

ವ: ಇಂತು ವರಾಕಚಕ್ರವಾಕಸಿಕಾಯಂ ವಿಯೋಗವಿಕಾರಾತಿರೇಕಪರಿಪಾಕ ದಿಂದಸ್ತೋಕ
ಶೋಕವ್ಯಾಕುಳಮಾಗಿರ್ಪುದುಂ

ಅಸ್ತಗಿರೀಂದ್ರಮಸ್ತಕದ ಗಹ್ವರದೊಳ್ ಸಲೆಬಿಳ್ದುಪೋದನೋ
ವಿಸ್ತೃತಸಿಂಹ ತದ್ವನದ ಕುತ್ತುಱೋಳೀಗಳಡಂಗಿಪೋದನೋ
ದುಸ್ತರಮಾದ ಪಶ್ಚಿಮಸಮುದ್ರದ ಮಧ್ಯದೊಳಳ್ದುಪೋದನೋ
ಶಸ್ತಮದೀಶನೆಂದುಱೆ ಪಲುಂಬಿದಳಬ್ಜಿನಿ ಕಾಣದರ್ಕನಂ ೧೯

ಇವನೆನ್ನಂ ಬಿಟ್ಟುಪೋದಂ ಗಣೆಯಿಸದದರ್ಸಾನಿರ್ದೊಡಂ ರಾಜತಃಪೀ
ಡನಮಕ್ಕಿಂತೆಂದು ಪದ್ಮಾಲಯೆಯೆಸಳ್ಗದವಂ ಗಾಢಮಾಗಿಕ್ಕಿದಳ್ ತಾ
ನೆನೆ ಸಂಕೋಚಂ ದಲಾಯ್ತಂಬುರುಹಮದಱ ಮೇಗಿರ್ದು ಪೆಣ್ದುಂಬಿ ತದ್ವಂ
ಧನಮಂ ಪುಯ್ಯಲ್ಚಿ ಪೇಳ್ವಂತಮಮ ಮೊರೆವುತಿರ್ದತ್ತು ಗುಂಗುಮ್ಮೆನುತ್ತುಂ ೨೦

ಅಪರಾಶಾವಶನಾಗೀ
ತಪನಂ ಮುನ್ನೆನ್ನಮೇಲೆ ನೀಡಿದ ಕರಮುಮ
ನಪಸಾರಿಸಿದಂ ಚೀಯೆಂ
ದುಪತಾಪಿಸಿದಂತೆ ಮುಗಿದುದಂಭೋಜವನಂ ೨೧

ಪತಿ ಪೋದನೆಂದು ಮಧುಪಂ
ನುತಪದ್ಮಿನಿಯಾಸ್ಯಬಿಂಬಮಂ ಚುಂಬಿಸಲಾ

ಯ್ತಿಸಂಕುಚಿತಂ ಸದ್ಗುಣ
ವತಿಯರ್ ಮಲಿನಾತ್ಮರೊಲ್ದಡೀಯರ್ ಮೊಗಮಂ ೨೨

ವರಪದ್ಮಕೋಶದಗ್ರದೊ
ಳುರುಮಧುಕರಮೆಱಗಿ ಕುಳ್ಳಿದಿರ್ದೆಸೆದತ್ತು
ಸ್ಮರನೃಪನ ಪದ್ಮಕೋಶದೊ
ಳರಗಿನ ಪೊಸಮುದ್ರೆಯಂ ದಲಿಕ್ಕಿದ ತೆಱದಿಂ ೨೩

ಸಿರಿಯಂ ತಾಳ್ದೊಡಮೊಳ್ಗುಣಂಬಡೆದೊಡಂ ಬ್ರಹ್ಮಂ ಮಗಂ ಬಾಳ್ದೊಡಂ
ಖರತೇಜಂ ಸಖನಾದೊಡಂ ಕಮಳಷಂಡಂ ಕೂಡೆ ಸಂಕೋಚಮಂ
ಧರಿಸುತ್ತಿರ್ದುದು ರಾತ್ರಿ ಕಾಲವಶದಿಂ ಸಾಮರ್ಥ್ಯಮುಂಟಾದೊಡಂ
ಧರೆಯೊಳ್ ಪ್ರಾಪ್ತಿಯನಾವನೋ ತೊಲಗಿಪಂ ಕಾಲಕ್ಕೆ ಬಂದಿರ್ದುದಂ ೨೪

ಮಿಗಿಲೆನೆ ರಾಜಬಾಧೆಗೊಳಗಾಗಿ ಸರೋಜಿನಿ ನೊಂದು ರೂಪಮಂ
ಮುಗಿಯಲದಂ ಕುಮುದ್ವತಿ ನಿರೀಕ್ಷಿಸಿ ತಾಂ ನಗುವಂತರಲ್ದಿರಲ್
ಬಗೆವುಗೆ ಪೇಳ್ದು ಬಂಧನಮುಮಂ ಬಿಡಿಸಲ್ ನಳಿತೋಳ್ಗಳಿಂ ನಂಟರಂ
ತೊಗೆದಳಿಗಳ್ ಕುಮುದ್ವತಿಗೆ ಬಂದೆಱಗಿರ್ದವು ನುಣ್ಣೆನುಂಗುತುಂ ೨೫

ಎಮಗಂ ರಾಜಪ್ರಸಾದಂ ಪಿರಿದದಕನುಕೂಲಂ ತ್ರಿಯಾಮಾಬಲಂ ಮ
ತ್ತಮಿದುಂ ತಾರಾಬಲಂ ಕೂಡಿದಿದು ನೆಲಸಿದಳ್ ಪದ್ಮದ ಶ್ರೀಯುಮೆಮ್ಮೊಳ್
ನಮಗೀ ಸಂಪತ್ತಿ ಕೈಗೂಡಿದುದಣಮಿಲ್ಲೆಂಬ ಸಂತೋಷದಿಂದಾ
ದಮೆ ಮೆಯ್ಯೊರ್ವುತ್ತುಮಿರ್ದತ್ತೆನೆ ಕುಮುದಕುಳಂ ತತ್ತರಲ್ದತ್ತದೆತ್ತಂ ೨೬

ಮೂಡಣಭಾಗದಲ್ಲಿ ತಿಮಿರಪ್ರಸರಂ ತಲೆದೋಱೆ ಪರ್ವಿ ಪೆಂ
ಪೋಡದ ಸಂಜೆಗೆಂಪು ಪಡುವಲ್ ಪರಿರಂಜಿಸಿ ತೋರ್ಕೆವೆತ್ತಿರಲ್
ನಾಡೆಯುಮರ್ಧನಾರಿಯ ವಿಚಿತ್ರದ ತಪ್ಪರಮಂ ಸ್ವಮೂರ್ಧದೊಳ್
ಗಾಡಿಯಿನಿಕ್ಕಿದಂತಿರಪರಾಹಭಟಂ ಪಡೆದತ್ತು ಚೋದ್ಯಮಂ ೨೭

ಇನನನಗಲ್ದಿರಲಾಱದೆ
ತನು ಕಂದಿಯಡಂಗಿಪೋದಳೆನೆ ಸಂಧ್ಯಾಕಾ
ಮಿನಿ ನೋಡೆನೋಡೆ ಕರಗಿದ
ಡನುರಕ್ತೆ ಪ್ರಿಯನ ವಿರಹಮಂ ಸೈರಿಪಳೇ ೨೮

ಇನನಸ್ತಂಗತನಾಗಿ ಪೋದನುರುರಾಕಾಚಂದ್ರಮಂ ಪೂರ್ವದಿ
ಗ್ವನಿತಾಸನ್ನಿಧಿಗೆಯ್ದಿಬಂದಪನದಕ್ಕಂ ಮುನ್ನಮೇ ಪೋಗಿಯಾ

ತ್ರನೊಳಂ ಕೂಡುವೆನೆಂದು ಜಾರೆ ಗಗನಶ್ರೀಹಾರಕ್ಕಂದು ಪೋ
ಪನುವಿಂ ನೀಲಿಯ ಸೀರೆಯಂ ಪೊದೆದವೋಲ್ ಪರ್ವಿತ್ತು ತೀವ್ರಂ ತಮಂ ೨೯

ಪೂರ್ವಾಶಾಗಿರಿಕೂಟದಿಂದಡರ್ದು ತಳ್ತಾಕಾಶಮಂ ಪರ್ವಿ ಮೆಯ್
ಕೊರ್ವಿಂದಾನೆಗಳೊಪ್ಪುಗೊಂಡು ಪರೆದೆಯ್ತಪ್ಪಂದದಿಂ ಕೂಡೆ ಮೇಣ್
ಗೀರ್ವಾಣಾಪಗೆಯೊಳ್ ಪ್ರವೃದ್ಧಜಲನೀಲೀಜಾಲಸಂಚಾರದಿಂ
ತುರ್ವೀಳ್ಕ್ರೀಡೆಯಲ್ಲಿಯುಂ ಪಸರಿಸಿತ್ತಂದಂಧಕಾರಂ ಕರಂ ೩೦

ಬಿದಿ ಕಡೆದಿಂದ್ರನೀಲಶಿಲೆಯಂ ನೆಲನಾಗಸಮೆಂಟುದಿಕ್ಕುಮಂ
ಪಮಳಿಸಿ ಮಾಡಿ ರಂಜಿತಮಹಾಂಜನದಿಂ ಬಿಡದೊಪ್ಪವಿಟ್ಟನೆಂ
ಬಿದನೆಸಗುತ್ತುಮುದ್ಧತಮಸಂ ತಮಸಂ ಕಡುಗೊರ್ವಿ ಪರ್ವಿದ
ತ್ರಿದು ಕುಡಿಬೆಟ್ಟಮೆಂಬ ಪರಿಭೇದದ ಕಲ್ಪನೆ ಪುಟ್ಟದಂದದಿಂ ೩೧

ನೆಲೆವೆರ್ಚಿದ ಕತ್ತಲೆ[ಯ] ಬ
ಯಲೊಡಮಾದೊಡಮಿತ್ತುಪೆಡೆಯಸಿತ್ವರಿಕಾಸಂ
ಕುಳ ಸುರತಕ್ರೀಡೆಗೆ ಮಿಗೆ
ಮಳಿನಾತ್ಮರ್ ಖಳರನಲ್ಲದಿಂ ತಣಿಪುವರೇ ೩೨

ಕರಿ ಕರಿದಾ ಕರಿಗಂ ಮಧು
ಕರಿ ಕರಿದಾ ಕರಿ ಮಧುಕರಿಗಮನ್ಯಭೃತಮುಂ
ಕರಿದಾ ಕರಿಗಂ ಮಧುಕರಿ
ಗಿರಿದನ್ಯಭೃತಕ್ಕೆ ಕರಿದು ತಿಮಿರಪ್ರಸರಂ ೩೩

ಇಡುಕುಱೊಳೊತ್ತಿನೊಳ್ ಮುಱಿದ ಭಿತ್ತಿಯ ಸಂಧಿಯೊಳೆಯ್ದೆ ಕೇಳಿವಿ
ಟ್ಟಿಡೆಯೊಳೆ ಪಿತ್ತಿಲೊಳ್ ಪ್ರಕಟಮಿದ್ದೆಡೆಯೊಳ್ ಮಱೆಗೊಂಡು ಪಾಣ್ಬರುಂ
ಮಿಡುಕದೆ ಪಾಣ್ಬೆಯರ್ ನಲಿದು ಬಂದಪರೆಂದಡಗಿರ್ದರೆಲ್ಲಿಯುಂ
ತಡೆಯದೆಯುರ್ವಿ ಕೊರ್ವಿ ಕಡುಪರ್ವಿ ಮುಸುಂಕೆ ದಿಗಂತಮಂ ತಮಂ ೩೪

ತಮಸಂ ಕಲಕೋಕಿಳಕುಳ
ಸಮಮಂ ಕಜ್ಜಳವಿಶೇಷವಾರಿಚ್ಛಾಯೋ
ಪಮಮಂ ಮಧುಕರರುಚಿವಿ
ಭ್ರಮಮನದೇವೊಗಳ್ವೆನಾತ್ತಕುಲಟಾಭ್ರಮಮುಂ ೩೫

ನಿರುಪಮರೂಪವದ್ಗಗನಮಂಡಳಲಕ್ಷ್ಮಿ ಮನಃಪ್ರಿಯಂ ಕಳಾ
ಧರವರನೆನ್ನಸನ್ನಿಧಿಗೆ ಬಂದಪನೆಂಬ ವಿಶೇಷಹರ್ಷದಿಂ

ದುರುತರ ಮೌಕ್ತಿಕಾಭರಣಮಾಳಿಕೆಯಂ ನೆಱೆತೊಟ್ಟಳೆಂಬಿನಂ
ಸುರುಚಿರ ತಾರಕಾವಳಿಗಳಾಗಸದೊಳ್ ಪೊಳೆದಿರ್ದವೆತ್ತಲುಂ ೩೬

ಮೊದಲ ದಿಗಂಗನೆಯಂ ತ
ಣ್ಗದಿರಂ ಹಾವರಿಗನೊಲ್ದು ತಂಬುಲದಿಂದಂ
ದುದಯಾದ್ರಿಭಿತ್ತಿಯಂ ಮಾ
ಣದೆ ಮಱೆಗೊಂಡಿಟ್ಟ ತೆಱದೆ ತೋಱೆತ್ತರುಣಂ ೩೭

ರಾಜಂ ಬಂದಪನೀಗಳಭ್ಯುದಯಮಂ ಪೆತ್ತು ಪ್ರಭಾಚಕ್ರವಿ
ಭ್ರಾಜಂ ನಮ್ಮೆಡೆಗಾತನಂ ನಿವಳಿಸಲ್ವೇಡಿಂದ್ರದಿಕ್ಕಾಮಿನೀ
ವ್ರಾಜಂ ಮಾಣಿಕದೊಪ್ಪುವಾರತಿಗಳಂ ಮಾಡಿದ್ದೊಡಾ ಭೂರಿಭಾ
ರಾಜಿವ್ಯಾಪ್ತಿಯಿದೆಂಬವೋಲರುಣಿಮಂ ಪರ್ವಿತ್ತು ದಿಕ್ಪ್ರಾಂತಮಂ ೩೮

ಚಂದ್ರಮನಿಂದೆನ್ನಾಸೆಗೆ
ಬಂದಪನೆಂದಿಂದ್ರದಿಕ್ಕುಮಾರಿಕೆ ತೊಟ್ಟತಿ
ಸೌಂದರಮಣಿಭೂಷಣರುಚಿ
ಯಂದದೆ ಕಡುಗೆಂಪು ಪೆಂಪುವಡೆದುದು ಸುತ್ತಂ ೩೯

ವ: ಆಗಳಭಿನವ ಸುಧಾಕರೋದಯ ಸಮಯಮುಖದೊಳಖಿಳನಿಳಿಂಪ ವಿಲಾಸಿನೀ ಸಂಕುಳದೊಳೋಕುಳಿಯಾಟದೊಳೊಗುವ ಜೀರ್ಕೊಳವಿಗಳನೊತ್ತರಿಸಿ ನೂಂಕಿ ಮೇಗೆಮೇಗೆ ನೆಗೆವ ಕುಂಕುಮಪಂಕಪರಿಕಳಿತ ಹರಿಚಂದನರಸಧಾರಾಪೂರ ಪರಂಪರೆ ತಳ್ತೆಂಬಂತೆ ನಿರಂತರಿತ ಮುಖರಮಯೂಖಶಿಲಾಲೇಖೆಗಳುನ್ಮುಖತೆ ಯನಪ್ಪುಕೆಯ್ವುದುಂ

ಕತ್ತಲೆಯೆಂಬಾನೆಯ ಮೇ
ಲೊತ್ತಮಿಸಿಯೆ ಪಾಯಲೆಂದು ಶಶಿಕೇಸರಿ ಮೇ
ಲ್ಗೆತ್ತಿದ ಪದದುಗುರ್ಗಳವೋಲ್
ಬಿತ್ತರಿಸಿದವೆಯ್ದೆ ನಿಮಿರ್ದ ಕಿರಣಾಗ್ರಂಗಳ್ ೪೦

ನಲಿದು ಚಕೋರಿಯಾಡೆ ಕಮಳಂ ಮಿಗೆಬಾಡೆ ಮದಾಳಿ ಕೂಡೆ ಕ
ತ್ತಲೆ ಕೆರಳ್ದೋಡೆ ನೆಯ್ದಿಲೆಸಳಾವಳಿ ನೋಡೆ ರತೀಹೆ ತೀಡೆಯ
ಗ್ಗಳಿಸಿದ ಕಂತು ಕಾಡೆ ಬೆಳಗಂ ಜಗತೀತಳದಲ್ಲಿ ಮಾಡೆ ಕೋ
ಟಲೆಯನಯೋಗಿ ಮೂಡೆ ಸಲೆಮೂಡಿದುದೊಯ್ಯನೆ ಚಂದ್ರಮಂಡಲಂ ೪೧

ಉದಯಿಸಿದರ್ಧಬಿಂಬದೊಳಗೊಪ್ಪುವ ನುಣ್ಗಱೆ ಕಜ್ಜಳಂಬೊಲಿಂ
ಬೊದವಿರೆ ಮೇಲಣರ್ಧಮದು ಸುಸ್ಫಟಿಕೋಮಳರಾಜನಾರ್ಧದಿಂ

ಪದುಳಿಸಿ ರಾತ್ರಿಯೆಂಬಬಲೆ ಕಾಡಿಗೆಯಂ ಪಿಡಿಯಲ್ ಕಳಾಪ್ರದೀ
ಪದ ತುದಿಯಂ ಮುಸುಂಕಿದವೊಲಿರ್ದುದು ಖಂಡಹಿಮಾಂಶುಮಂಡಳಂ ೪೨

ಘನತರಕಾಂತಿಯಿಂದೆ ಪೊಳಪೇಱೆ ಸುವೃತ್ತತೆಯಿಂದಮೊಪ್ಪಿ ಮ
ತ್ತನುಪಮಮಾಗಿ ಕೋವಿದರ ಲಾಲನೆಯಂ ಬಿಡದಪ್ಪುಕೆಯ್ದು ಭೂ
ಜನತೆಯ ಕಣ್ಗುರ್ವನಿರದಿತ್ತು ವಿಜೃಂಭಿಸಿದತ್ತು ಪೂರ್ವದಿ
ಗ್ವನಿತೆಯ ಕರ್ಣದೇಕಮಣಿಕುಂಡಳದಂತಿರೆ ಚಂದ್ರಮಂಡಳಂ ೪೩

ಉದಯಗಿರೀಂದ್ರಗೈರಿಕರಜಂ ಪುದಿದಂತಿರೆ ರಕ್ತಮಾಗಿ ಪೂ
ರ್ವದ ದೆಸೆವೆಣ್ಣ ತೋಳರಿಸಿನಂ ಪೊರೆದಂತಿರೆ ಪೀತಮಾಗಿ ನಾ
ಕದ ನದಿಯೊಳ್ ಮುಳುಂಕಿ ತೊಳೆದಂತೆ ಪಳಚ್ಚನೆ ಶುಭ್ರಮಾಗಿ ಕ
ಣ್ಗೊ[ದಪಿ]ಸಿದತ್ತಗುರ್ವನುರುದೀಧಿತಿಮಂಡಲಮಿಂದುಮಂಡಲಂ ೪೪

ಪದೆದಿಂದ್ರನೀಲಮಾಣಿ
ಕ್ಯದ ಹಾರಮಸಿಕ್ಕಲುರದೊಳೊಪ್ಪಂಬೆತ್ತಿ
ರ್ದುದು ತೋರ್ಕೆವೆತ್ತುದೆಂಬಂ
[ತದು] ಪೊಳೆದುದು ಚಂದ್ರಬಿಂಬದಲ್ಲಿ ಕಳಂಕಂ ೪೫

ಪೊಳೆವ ಕಳಂಕಮೆಂಬ ಶಬರಂ ಶಶಿಮಂಡಳಮೆಂಬ ತೆಪ್ಪದೊಳ್
ನೆಲಸಿ ನಭಸ್ತಟಾಕದೊಳಗುಣ್ಮುವ ಕರ್ಕಟಮೀನರಾಸಿಗಂ
ದೆಳವೆಳುದಿಂಗಳೆಂಬ ಬಲೆಯಂ ನೆಱೆವೀಸಿದನೆಂಬ ಮಾಳ್ಕೆಯಿಂ
ಬಳಸಿದುದೆತ್ತಲುಂ ನಿಮಿರ್ದು ನೀಳ್ದು ಸುಧಾಕರಕಾಂತಿಸಂಕುಳಂ ೪೬

ನಸುನಸುಮಬ್ಜಿನೊಳ್ ನುಸುಳ್ವ ತಿಂಗಳ ನುಣ್ಗದಿರೆಳ್ಳುಮಕ್ಕಿಯುಂ
ಪಸರಿಸಿತೋರ್ಪವೊಲ್ ನಿಮಿರ್ದು ನೀಳ್ದಡರಲ್ ಗಗನಾಂತರಾಳದೊಳ್
ಪಸಿದ ಚಕೋರಿಕಾಶಿಶುಗಳೀಕ್ಷಿಸಿ ಬಂದೊಳಪೊಕ್ಕು ಪೀರ್ದು ಪೀ
ರ್ದೊಸೆದು ಕರ್ದುಂಕುತಿರ್ದುವು ಮನಂ ದಣಿವನ್ನೆವರಂ ದಲಾಕ್ಷಣಂ ೪೭

ರಾಜಂ ಬಂದು ಕರಾಗ್ರದಿಂ ರಜನಿಯಂ ತರ್ಕೈಸಲಾಗಳ್ ತಮೋ
ರಾಜಿವ್ಯಾಪೃತಿಯೆಂಬ ನೀಲಮಯವಸ್ತ್ರಂ ಪಿಂಗಿಪೋದತ್ತು ಸ
ದ್ರಾಜೀವಾಯತಲೋಚನಂ ಮುಗಿದುದುದ್ಯಚ್ಚಂದ್ರಕಾಂತೋಪಳ
ವ್ಯಾಜೋತ್ಸಾಹದಿನಾಕ್ಷಣಂ ದ್ರವಿಸಿದತ್ತೇಂ ಚೋದ್ಯಮೋ ಮೋಹನಂ ೪೮

ಸ್ಮರಚಕ್ರಾಧೀಶ್ವರಂಗೆತ್ತಿದ ಪೊಸಧವಳಚ್ಛತ್ರಮೆಂಬಂತೆ ಚೆಲ್ವಂ
ಧರಿಸಿತ್ತಂತಲ್ಲದಿರ್ದಂದದಱಿನಧಿಕಕಾಮಾಸ್ಪದಸ್ತ್ರೀಮುಖಾಭ್ಯಂ

ತರದೊಳ್ ಛಾಯಾವಿಶೇಷಂ ಸ್ಥಿತಿಯುದಯಮದೆಂತಕ್ಕುಮೋ ಗರ್ವಮೆಂಬು
ದ್ಧುರತಾಪಂ ಕೇಡನೆಂತೆಯ್ದುವುದೊ ಬಗೆವೊಡಿಂತೊಪ್ಪಿದತ್ತಿಂದುಬಿಂಬಂ ೪೯

ವರಪೀಯೂಷಾದಿಪಾತ್ರಂ ಯುವತಿವಿಕೃತಿಮಿತ್ರಂ ಸುತಾರಾಕಳತ್ರಂ
ಸರಸೀಜಾಸ್ಯಾತ್ತಮುದ್ರಂ ಕೃತಕುಮುದವಿನಿದ್ರಂ ಪ್ರಪುಷ್ಯತ್ಸಮುದ್ರಂ
ಪಿರಿದುಂ ಪೇಳಲ್ಕಳುಂಬಂ ಮದನಮುಕುರಬಿಂಬಂ ತಮಶ್ಶೈಲಶಂಬಂ
ಪರಿಶೋಭಾಭಾರರುಂದ್ರಂ ಬಹಳಕಿರಣಸಾಂದ್ರಂ ಮಹಾಪೂರ್ಣಚಂದ್ರಂ ೫೦

ವ: ಇಂತು ಸುಧಾಸೂತಿಮಂಡಳಮತಿಪ್ರೌಢಮಾಗೆ

ನವಚಂದ್ರೋಪಳದೊಂದು ಚೆಲ್ವನಯನಂ ತಾನೆಂಬಿನಂ ಪದ್ಮಸಂ
ಭವನುಂ ಪತ್ತುದಿಶಾಭಿಭಿತ್ತಿಗಳೊಳಿಟ್ಟೊಳ್ಳಂಖಮೆಂದೆಂಬಿನಂ
ದಿವಮೆಂಬಿಂದಿರೆಯುಟ್ಟುತೋರ್ಪ ದುಗುಲಂ ತಾವೆಂಬಿನಂ ಲೋಕಮೆ
ಲ್ಲಮನಾಚ್ಛಾದಿಸಿದತ್ತು ಬಣ್ಣಮದುಮೊಂದಾದಂತೆ ಚಂದ್ರಾತಪಂ ೫೧

ವ: ಮತ್ತಂ ಜಗದ್ವಳಯಮನದಟಲೆದು ನುಲಿದು ಕೋಟಲೆಗೊಳಿಸುವ ನನೆವಿಲ್ಲಬಲ್ಲಹನ ದಿಗ್ವಿಜಯಕ್ಕಾಗಿ ವಸಂತವನಪಾಲಕನಲರ್ಗಣೆಗಳ ಬಳಗಂಗಳನಗೆ ವೊಯ್ದನೆಂಬಂತೆ ಥಳಥಳಿಸಿ ತೊಳಗಿ ಬೆಳಗುವಚ್ಚಬೆಳ್ದಿಂಗಳ್ ಪಿರಿದುಂಪೆರ್ಚಿ ಬಿಚ್ಚದೆ ನಿಬಿಡಮಾಗಿ ಬಿಡದಡರ್ದು ಕೆದಱಿ ನಾಂದು ಪೊದಱುಗಟ್ಟಿ ಪರಕಲಿಸಿ ಪಸರಿಸುತ್ತುಮಿರೆ

ನೆತ್ತಿಯೊಳೊತ್ತಿ ಪೊತ್ತು ಪದದಿಂದೊಡೆದೊಯ್ಯನೆ ನೂಂಕಿ ಪಕ್ಕದಿಂ
ಮತ್ತಮದರ್ಪ್ಪಿಕೊಂಡು ನಿಜಚಂಚುಪುಟಾಗ್ರದೆ ಚಲ್ಲೆವೊಯ್ದು ಮೆ
ಯ್ವೆತ್ತು ನಖಂಗಳಿಂದೆ ಬಿಡದೋಡಿ ಕರಂ ನಲಿದಾಡುತಿರ್ದುದ
ತ್ತ್ಯುತ್ತಮಕೌಮುದೀತತಿಯನೊಲ್ದು ಚಕೋರಕುಳಂ ನಿರಾಕುಳಂ ೫೨

ತಿಱಿಗದಿರನಿತ್ತು ತನ್ನಯ
ಮಱಿಗಂ ತನಿಗದಿರನಿತ್ತು ತನ್ನಿನಿಯಂಗಂ
ತುಱುಗಿದ ನುಣ್ಗದಿರಂ ಬೇ
ಸಱದೀಂಟುತ್ತಿರ್ದುದಂದದೊಂದು ಚಕೋರಂ ೫೩

ವ: ಅದಲ್ಲದೆಯುಮೆಲ್ಲಾ ತಾಣದೊಳ್ ಬೆಳ್ಳಂಗೆಡೆದು ಬಳ್ವಿವರಿದಚ್ಚವೆಳ್ದಿಂಗಳು ತ್ತುಂಗಗಂಗಾಪ್ರವಾಹಮುದ್ರಿಕೆ ಸೆಜ್ಜೆಡೆಯಿಂದಿಳಿದು ಬಿಳ್ದು ಪರಕಲಿಸಿತೆಂಬಭಿಶಂಕೆಯಿಂ ಕೆದಱಿದ ಜೆಡೆಯೊಳ್ ಮಗುಳೆ ಮುದ್ರಿಸಿ ಸೈತೆಮಾಡುವುಜ್ಜುಗಮನುಮಾ ವಲ್ಲಭಂಗೊಗೆಯಿಸುತುಂ ಚಂದ್ರೋದಯದೊಳಚ್ಚರಿಯಾಗಿ ಪೆರ್ಚುವಡೆದ ಕ್ಷೀರೋದ ಭೂರಿಪೂರದ ಧೋರಣೆ ಮೇರೆಯಂ ಮೀಱಿ ನಿಖಿಳಧಾರಿಣೀತಳಮನೊರ್ಮೊದಲೊಳ್ ಮುಸುಂಕಿ ದಿಕ್ಕುಹರವಿವರಮಂ

ತಳ್ತೊಯ್ಯುತ್ತುಂ ತನ್ಮಯಮಾಗಿ ಪರಿಣಮಿಸಿ ತೆಂಬಂತಗುರ್ವನುರ್ವಿಸೆ ಪಾಲ್ಗಡಲ ನಡುವಿದಿಲ್ಲಿ ಜಲಶಯನಮನೆಸಗಲ್ವೇಳ್ಕುಮೆಂಬ ಬಗೆಯಂ ಹರಿಗೆ ಪುಟ್ಟಿಸುತುಂ ಕಟಾಕ್ಷಕಾಂತಿಯಿಂ ದ್ವಿಗುಣಿಸಿದ ಸಮುಜ್ಜ್ವಳಮಾದ ಸರಸ್ವತಿಯ ಮೆಯ್ವೆಳಗಿನ ಬಳಗದ ಪಸರದೆಸಕಮಿದೆಂದು ತರ್ಕೈಸುವ ಮೋಹನಮಂ ವಸುಗರ್ಭನಾಶಯದೊಳುಕ್ಕಿಸುತುಂ ನಂದನವನದ ಮರಂಗಳ್ಗೆ ಬಹುಳಮಾದಮೃತರಸದಿಂ ತುಂಬಿದ ಪೃಥುಳತರಾಳವಾಳವಳಯಂಗಳ ಮಧ್ಯವರ್ತಿ ಪಾರಿಜಾತಂಗಳ ಲೀಲೆ ಯನೋಲೈಸುತುಂ ಕಲ್ಗಳೆಲ್ಲಕ್ಕಂ ಚಂದ್ರಕಾಂತದ ರೂಪಿನ ಚೆಲ್ವಂ ನೆಲೆಗೊಳಿಸುತುಂ ಜಗಮನುಗೆ ಮಿಗಿಲಾವರಿಸಿ ತುಂಬಿ ತುಳುಂಕಾಡಿ

ಧವಳಿಸಿದಂ ಪಿರಿಂಚಿ ಜಗಮಂ ಪೊಸಪಾಲ್ಗೊದೆಯಿಂದಮೆಂಬಿನಂ
ನವತರಮಾಗಿ ಕಂಡರಿಸಿದಂ ನೆಱೆಕರ್ಪುರದಿಂದಮೆಂಬವೋ
ಲವಿರಳಚಂದನದ್ರವವ ಕಲ್ಕದೆ ಪೂಸಿದನೆಂಬಿನಂ ಮಹೀ
ಭುವನದೊಳೆಯ್ದೆ ತೀವಿದುದು ತಿಂಗಳ ಸುಣ್ಣೆಬೆಳುದಿಂಗಳಗ್ಗಳಂ ೫೪

ಇದು ಪುಷ್ಪೋದ್ಗಮರಾಶಿಯಿಂ ಸಮೆದುದಲ್ತಾಮೋದಯುಕ್ತಂ ಸಮಂ
ತದು ಮತ್ತಂ ವರಮೌಕ್ತಿಕೌಘಘಟಿತಂ ತಾನಲ್ತಿದಸ್ಪರ್ಶನಾ
ಸ್ಪದಮಾಗಿರ್ದುದವೆಯ್ದೆ ಪೆರ್ಚಿದಿದನಾನೇನೆಂದು ಪೇಳ್ ಬಣ್ಣಿಪೆಂ
ಪದೆಪಂ ಪೆತ್ತುದು ಕೌಮುದೀಮಯಮುಮಾಯ್ತಿ ಲೋಕಮೆಂದೆಂಬಿನಂ ೫೫

ವ: ಇಂತಮುಂದಚಂದ್ರಿಕಾಸಂದೋಹವಿವರಣಮಖಿಳ ಜಗದಾನಂದಕರಣ ನಿಪುಣೀಭಾವಮನಪ್ಪುಕೆಯ್ಸಿರ್ಪುದುಮಾಗಳಾ ಸಭಾಮಧ್ಯದಲ್ಲಿ ಸುಕರವಿಳಾಸನೆಂಬ ಪರಿಹಾಸಕಂ ಕೌಮುದೀವರ್ಣನವಿನೋದರೂಪರಸವಚನಂಗಳಿಂ ಸಭೆಯನಭಿರಂಜಿಸಿ ದೇವರ ದೇವಂ ಮೆಚ್ಚಿ ತಲೆದೂಗುವಿನಂ ಮನಂಗೊಳಿಸಿ ಬಳಿಯಮಿಂತೆಂದನಿಂದಿನ ತುಚ್ಛೇತರ ಕೃತ್ಸ್ನಜ್ಯೋತ್ಸ್ನಾಮಹೋತ್ಸವದೊಳ್ ಪುರದ ಸಿರಿಯಂ ನೋಡುವ ಬಯಕೆ ಬಗೆಯೊಳೊಗೆಯೆ ದೇವ ನಿಮ್ಮಡಿಗಳಂ ಕರೆಯಲಮ್ಮದೆನ್ನೊಡನೆ ನಾಗರಕಂ ಬೆರಲ ಕೊಂಕಿಂ ಸನ್ನೆಗೆಯ್ದಂ ವಿಟಂ ಶಿರಃಕಂಪನದಿಂ ದಿಟಂಮಾಡಿದಂ ವಿದೂಷಕಂ ಬಂದೆನ್ನ ಕಿವಿಯಂ ಪಚ್ಚಿದಂ ಪೀಠಮರ್ದಕಂ ಕಣ್ಸನ್ನೆಯಿಂ ನನ್ನಿಗೆಯ್ದನೆಂದು ಪ್ರಹಸನಮುಖದಿಂ ಬಿನ್ನಪಂಗೆಯ್ದು

ಅವರಂತಿಕ್ಕೆ ಭವತ್ಪದಾಂಬುರುಹಸೇವಾಸಕ್ತನಪ್ಪೆನ್ನ ಮು
ದ್ದುವಚೋವೃತ್ತಿಯನೊಲ್ದು ಮನ್ನಿಪುದಿದಂ ಚಿತ್ತೈಸಲೇ ದೇವ ಮಾ
ನವಪೂಜ್ಯಾಭಿನವಂಗಳಿಂದೆ ಬಿಜಯಂಗೆಯ್ದಿ ಪುರಶ್ರೀವಿಳಾ
ಸಮನೀಗಳ್ ನಡೆನೋಡಿ ಕಣ್ಗೆ ತಣಿವಂ ಪೆತ್ತೆಯ್ದು ಸಂತೋಷಮಂ ೫೬

ವ: ಅಂತುಮಲ್ಲದೆಯುಂ

ವಾತಾಯನ ವಿವರ ಸಮಾ
ಪಾತಿತಕರದಿಂದೆ ಪಿಡಿದು ನಿಮ್ಮಂಘ್ರಿಗಳಂ
ಸಾತಿಶಯ ಪ್ರೀತಿಯುತಂ
ಶೀತಕರಂ ಕಱೆವ ತೆಱದೆ ಪೊಱಗೆಸೆದಿರ್ದಂ ೫೭

ಎಂದು ಬಿನ್ನೈಸೆ ದೇವನ
ಮಂದಸ್ಮಿತವಚನಶೋಭೆ ಮನದನುಮತಿಯಂ
ಸಂಧಿಸಿ ಪೇಳಲ್ ಪೊಡೆವಡು
ವಂದದಿನವಧಾನಮೆಂದು ಕೈಗೊಡುತೆಳ್ದಂ ೫೮

ವ: ಇಂತು ಪರಿಹಾಸಕಂ ದೇವನಂ ರಾತ್ರಿವಿಹರಣಕ್ಕಭಿಮುಖಂಮಾಡ ಲೊಡಮಾ ತ್ರಿಲೋಕೀಭೂಷಣಂ ತತ್ಕಾಲೋಚಿತಭೂಷಣದಿಂದಭಿಭೂಷಿತನಾಗೆ

ಕಪ್ಪುರದಿಂದೆ ಕಂಡರಿಸಿ ಮಾಡಿದ ಕರ್ಣದ ಭೂಷಣಂ ಕಟಾ
ಕ್ಷಪ್ರಭೆ ಪಿಂಡುಗೊಂಡು ನೆಲಸಿರ್ದವೊಲುಟ್ಟ ದುಕೂಲಚೇಲಮುಂ
ನೇರ್ಪಡೆ ತೊಟ್ಟ ಮುತ್ತುಗಳ ನುಣ್ದೊಡವುಂ ಹರಿಚಂದನಾನುಲೇ
ಪಾರ್ಪಣಮುಂ ಮನಂಗೊಳಿಸಿದತ್ತುರುಚಂದ್ರಿಕೆಯಪ್ಪಿದಂದದಿಂ ೫೯

ಅಮೃತದ ಪೂರದಿಂ ತೊಳೆದವೊಲ್ ಪೊಳಪೇಱೆ ಪಳಚ್ಚನಾಗಲಾ
ದಮೆ ಪೊಳಲೆಲ್ಲಮಾಗಳವನೀಪತಿ ಪಾಲ್ತೊದೆಯಿಟ್ಟ ಸೌಧದು
ತ್ತಮಶಿಖರಾಗ್ರದಿಂದಮಿಳಿತಂದನುದಗ್ರವಿಮಾನದಿಂದೆ ಚಂ
ದ್ರಮನಿಳಿತಪ್ಪವೋಲ್ ಕುಸುಮಬಾಣವಸಂತಸಹಾಯಸೇವಿತಂ ೬೦

ಅರಮನೆಯಿಂದಂ ತಳರ್ದಾ
ನರನಾಥಂ ಮುದದೆ ನಡೆದು ಪೋಗುತ್ತಿರ್ದಂ
ಸ್ಮರಚಕ್ರವರ್ತಿ ತನ್ನಯ
ಪರಿಕರದೊಡಗೂಡಿ ನಡೆದು ಪೋಪಂತೆವೊಲಂ ೬೧

ವ: ಆಗಳಾ ಮನುಜಮನೋಜನ ರಜನೀವಿಹಾರಕೇಳಿಗುದ್ದೀಪಕರಪ್ಪ ಮೇಳದ ಕೆಳೆಯರ್ ನಾಲ್ವರನುನಾಯಕರಂ ನಾಲ್ವರ್ ಮುಖ್ಯನಾಯಕರಂ ಕೂಡಿಕೊಂಡು

ಪುರವೃತ್ತಾಂತವಿದಂ ನಾ
ಗರಕಂ ಪರಿಹಾಸಕಂ ವಿದೂಷಕನೆನಿಪಂ
ಸುರತಪ್ರೌಢಂ ವಿಟನೊ
ಲ್ದರಸನ ಪರಿಪೀಠಮರ್ದಕನುಮಾ ನಾಲ್ವರ್ ೬೨

ಅನುನಾಯಕರೆಂದೆನಿಸುವ
ರನುಕೂಲಂ ದಕ್ಷಿಣಂ ಶಠಂ ಧೃಷ್ಟನುಮೆಂ
ಬಿನಿಬರ್ ನಾಯಕಮುಖ್ಯರ್
ಬಿನದಿಗರಿಂತಣ್ಣರುಂ ವಿನೋದಸಹಾಯರ್ ೬೩

ವ: ಇಂತಿವರೊಡಗೂಡಿ ಮಹಾರಾಜಂ ರಾಜಮಾರ್ಗಂಬಿಡಿದು ನಡೆತಂದು ಮಂಗಳಮಾದಂಗಡಿಗೇರಿಯಿಕ್ಕೆಲಂಗಳೊಳ್ ಕಿಕ್ಕಿಱಿಗಿಱಿದು ಸಂಗಡಿಸಿ ನಿಂದು ಮಾಲ್ಯಾಂಗ ಲೇಪನಾಂಗಂಗಳೆಂಬ ನಾಮದ ಕಾಮಕಲ್ಪಲತೆಗಳ್ ಕೈವಂದುದೆಂಬಂತೆ ಮನಂಗೊಳಿಸಿ ನೀಱರ ಮನಮಂ ಪೆಱಗೊಂಡು ಪೂಮಾಲೆಯುಂ ಗಂಧಮುಮಳಿಯುಂ ಮಾಱುವ ಮಾಲೆಗಾತಿಯರ ಘಟ್ಟಿವಳ್ತಿಯರ ಶರೀರಸೌರಭಸಂಕುಳದಿಂ ದಳವೇಱಿ ಕೆಱಮಡುಗೊಂಡು ಸುತ್ತಲುಂ ಪಸರಿಸಿ ಪರಿವೋಗರದ ಪರಿಮಳಭರ ತರಂಗಿಣಿಯ ಸುಳಿಯೊಳೀ ಸಾಡುವಂತೆ ವಿಳಾಸದಿಂ ಸುಸುಳ್ದು ಸುಸುಳ್ದು ಬರ್ಪಾಗಳ್

ಅಸದಳದಮೌಕ್ತಿಕಾಭರಣದಿಂ ನಗೆಗಣ್ಣಿದ್ದಾದೇಳ್ಗೆಯುಂ
ಪಸರಿಪ ಬೆಳ್ಪ ಪೊಚ್ಚಪೊಸಜವ್ವನ ಮುಂದಿದಿರಿಂ ಬರುತ್ತಿರಲ್
ವಸುಮತಿಗೀಶನಾ ಮನುಜಮನ್ಮಥನಾಕೆಯುಮನೊಲ್ದುನೋಡಿದಂ
ರಸೆಯೊಳೆ ಮೂರ್ತಿವೆತ್ತ ಬೆಳುದಿಂಗಳ ಪುತ್ತಳಿಯೆಂಬ ಶಂಕೆಯುಂ ೬೪

ವ: ಆವಳಂ ಕಂಡು ಮನಂಗೊಂಡು ಸಾರಸೌಂದರೀಕೆಯ ರೂಪಕಳಾ ಕೌಮುದೀರಸ ಮಾಸ್ವಾದಿನಿಮ್ಮಯ ಲೋಚನಚಕೋರಿಕಾಭಂಗಳ್ ತಣಿದು ನಲಿದವು ನಡುಯಿಯೆನೆ ಮುಂದೊಂದೆಡೆಯೊಳ್ ಪುರೋಹಿತಸಂಕೇತಸವೀಧಿಕಾಪ್ರವೇಶಮನೆಯ್ದೆವರ್ಪುದು ಮಲ್ಲಿ

ತವಕಿಸಿ ಮಿಂಡನಂ ವಿಧವೆ ಕಂಡಘಸಾಟಿತಶಾಲೆಗೊಯ್ದು ಕೂ
ಡುವ ಪದವಲ್ಲಿ ಕೂಗಿಡುತುಮಿಕ್ಕೆಲೊಮಿಕ್ಕೆಲೊಯಿಕ್ಕುಯಿಕ್ಕು ನೀಂ
ಶಿವಶಿವ ಲಿಂಗಲಿಂಗ ಹರ ಶಂಕರ ಶಂಕರ ಶಂಕರ ಕಾಮಸೌಖ್ಯಮು
ತ್ಸವಮನೆ ನಿಚ್ಚಲುಂ ಕರುಣಿಸೀ ಪರಿಯಿಂದೆನುತಿರ್ದಳಾಕ್ಷಣಂ ೬೫

ವ: ಇಂತಪ್ಪ ವಿಕಾರವಿಜೃಂಭಣಮಂ ನೋಡುತ್ತುಂ ಕೇಳುತ್ತುಮಿರ್ದ ಪೆಂಡಿರ್ ಮಾಡಮುದೇನೆಂದು ತಮ್ಮೊಳ್ ಮಾತಾಡುತ್ತುಂ ವಿಳಾಸಿನೀನಿವಾಸದಂತಿಕಕ್ಕೆವರೆ

ಕೇಶವಭಟ್ಟರೆಮ್ಮಯ ಪೆಸರ್ ನಿನಗೇನಱಿಯಲ್ಕೆಬಾರದೇ
ಬಾಸುಳಪರ್ವವೋಲುರಮನೇಕೆಗ ಪೊಯ್ದಪೆ ಬೇಡಬೇಡ ನಾ
ಲ್ಕಾಸುರಮಾದ ಸೆಳ್ಪುಗರನೊತ್ತಿದುದುಱಿಯೆನುತೆಳ್ದು ಜಂಡೆ ಸಂ
ಕ್ಲೇಶಮನಿತ್ತಳೈ ಹರಿಹರೀಯೆನುತಂ ದ್ವಿಜಮುಗ್ಧನೋಡಿದಂ ೬೬

ವ: ಇದು ಮೊದಲಾದನೇಕವಿನೋದಂಗಳಂ ಕಂಡು ಮಹೀಮಂಡನಂ ಪ್ರಹಸನ ಪರಿಸ್ಫುರಿತಗಂಡಮಂಡಲನಾಗಿ ವಿದೂಷಾದಿಗಳ್ಗೆ ತೋಱುತ್ತುಂ ಮುಂದೆ ನಡೆವೆಡೆಯೊಳ್

ವಿರಹಾಸಕ್ತವಿಟೀವಿಟಾನನಭವಸ್ವಿಶ್ವಾಸದೊಂದುಷ್ಣದಿಂ
ಪೊರೆದಿರ್ದಾಕುಳಮಂದಗಂಧವಹನಂದೆಯ್ತಪ್ಪ ಭೂಮಂಡಳೀ
ಶ್ವರದೇಹಸ್ಥಿತ ನವ್ಯಶೈತ್ಯಭರಮಂ ಸೌಗಂಧ್ಯಮಂ ಕೀರಸು
ಸ್ವರದಿಂ ಯಾಚಿಸಲೆಂದು ಬರ್ಪ ತೆಱದಿಂ ಬಂದತ್ತು ವೇಶ್ಯಾನಿಳಂ ೬೭

ವ: ಅಂತು ಸೂಳೆಗೇರಿಯಂ ಗಾಳಿ ತೀಡಲೊಡಂ ಮೆಯ್ಪುಳಕಂಗಳೋಲಗಕ್ಕವಸರಂಗುಡೆಯನುಕೂಲನಾಯಕಂ ಲೋಕದೊಳಾವಾವ ಬಿನದಂಗಳುಂಟವೆಲ್ಲವನಿಲ್ಲಿಕಾಣಲಕ್ಕು ದೇವರಿತ್ತ ಬಿಜಯಂಗೆಯ್ವುದೆಂದು ಬಿನ್ನಪಿಸುವುದುಮಾ ಮನುಜೇಂದ್ರಚಂದ್ರಮಂ ತಾರಾಂತಃಪುರನಿವಾಸವೀಧಿಯಂ ಪುಗುವ ಚಂದ್ರಮನೆಂಬಂತೆ ಸೂಳೆಗೇರಿಯಂ ಪುಗುತಪ್ಪಾಗಳೊಂದು ಪಳುಕಿನ ಸೆಜ್ಜೆವನೆಯ ಕನಕವೇದಿಯ ಮುಂದಣ ಧವಳಪ್ರತೋಳಿಕಾಭ್ಯಂತರಾಳಮಣಿಕುಟ್ಟಿಮರಾಜಾಂಗಣಸ್ಥಳದೊಳಗೆ ಮಳಯರುಹತರುಗಳಂ ಕಂಡರಿಸಿಯಂತರಾಂತರಪ್ರದೇಶಮುಚಿತಮಾಗಿ ಕೀಲಿಸಿದ ನವರತ್ನಂಗಳ ವರ್ಣಕ್ರಮವಿನ್ಯಾಸದಿಂ ವಿಚಿತ್ರಂಬೆತ್ತು ವಿರಚಿಸಿದಮಳ್ಗಂಬಂಗಳಿಂದಂ ಪವಳದ ಮೇಲ್ವಲಗೆಯಿಂದಂ ಮುತ್ತಿನ ಮಿಳಿಯಿಂದಂ ಚಿತ್ರಂಬಡೆದು ಪಚ್ಚವಡಿಸಿದ ಮರಕತದ ಮಣಿಯಿಂದಂ ಮೇಲೆ ತೆತ್ತಿಸಿದ ಕನಕಕಳಶ ಮಣಿದರ್ಪಣಂಗಳಿಂದಂ ಥಳಥಳಿಸಿ ಪೊಳೆದು ತೋರ್ಕೆವೆತ್ತು ಸಮಾಲಂಬಮಾನಪುಷ್ಪಮಾಲಾಜಾಲಂಗಳಿಂದಚ್ಚರಿಯಾಗಿ ಮದನಮಂಗಳಾಗಾರದ್ವಾರ ತುಂಗತೋರಣದಂತೆ ರಮ್ಯಮಾದ ನವಿಲುಯ್ಯಲಂತಿಕಕ್ಕೆ ದಂತಾವಲಗಮನೆ ನಡೆತಂದು ನಿಂದು ತನ್ನೊಡನಾಡಿಗಳಪ್ಪ ಮೇಳದ ಕೆಳದಿಯರ್ಗೆ ಕರ್ಪೂರದ ವೀಳೆಯಮುಮಂ ಪೂವಿನ ಮಾಲೆಯುಮಂ ಕತ್ತುರಿಯ ತಿಳಕಮನಿತ್ತು ಬಾಯಿನ ಬೀಯಂ ಬೆಡಂಗಂ ಬೀಱೆ ಮಂಗಳಗೇಯಮಂ ಸಂಗಳಿಸಿ ಪೊಣ್ಮುತ್ತುಮಿರೆ

ಬಡನಡು ಕೊಂಕೆ ತೋರಮೊಲೆಯೊಡ್ಡು ವಿಜೃಂಭಿಸಿ ಮುಂದೆನೂಂಕೆ ನು
ಣ್ಬಡಸಿದ ರಜ್ಜುವಂ ಪಿಡಿದ ಕೆಂದಳಮಚ್ಚರಿಯಂ ತೊಡಂಕೆ ಚೆ
ಲ್ವೊದರಿಸೆ ದಕ್ಷಿಣಾಂಘ್ರಿತಳದಿಂ ಮಣೆಯಂ ಬಿಡದೊಂಕಿ ಮೆಟ್ಟಿ ಹಾ
ಸೆಡೆ ನವಿಲುಯ್ಯಲಂ ಲಲನೆಯೇಱಿದಳಂಗಜನೇಱೆ ಗರ್ಭಮಂ ೬೮

ವ: ಮತ್ತಂ ಚಿತ್ತವಲ್ಲಭಂ ಮಣೆಯ ಕಡೆಯಂ ಪಿಡಿದು ಮೆಲ್ಲಮೆಲ್ಲನೊಲೆದೊತ್ತಿನೂಂಕಿ ತೂಗಲೊಡಂ

ಪಿಡದಳ್ಕಾಡೆ ಸಡಿಲ್ದ ಮೇಲುದಿನ ವಸ್ತ್ರಂ ಬೇಟದಪ್ಪಾಡೆ ಬೆಂ
ಪಿಡದೊಳ್ಪಂಬಿಯ ಬಂಬಲಂಬರದೊಳಂ ಮೇಲ್ವಾಯ್ಯಕಂಪಿಂಗೆ ತ

ನ್ನೊಡನೆಳ್ದಾಡೆ ತಳಿರ್ತು ಪೀಲಿದಳೆಯೆಂಬಂತಿಂದುಬಿಂಬಕ್ಕೆ ಧಾ
ಳಿಡುವಂತುಯ್ಯಲನಾಡಿದಳ್ ತರುಣಿ ತನ್ನಂ ನೋಳ್ಪರಂ ಕಾಡಿದಳ್ ೧೯

ಮವದಿಂದಂ ಚಂದ್ರ ನೀನೆನ್ನಯ ವದನಸದೃಶಂ ದಲೆಂದೊಂದು ತಪ್ಪಿಂ
ಗಿದು ನೀನೆನ್ನಂ ವಿಯೋಗಕ್ಷಣದೊಳುರಿಯಿಸುತ್ತಿರ್ಪನೆಂಬೊಂದು ತಪ್ಪಿಂ
ಗಿದು ನೀನೆನ್ನೊಳ್ ಕಳಾಶೋಭೆಯಿನುಪಗತಮಾಶ್ಚರ್ಯನಾದೊಂದು ತಪ್ಪಿಂ
ಗಿದು ಮತ್ತೆಂದಿಂದುವಂ ಮೂದಲಿಸಿಯೊದೆವವೋಲುಯ್ಯಲಾಡುತ್ತಮಿರ್ದಳ್ ೨೦

ವ: ಆ ವಿಳಾಸವತಿಯ ಖೇಳನವಿಳಾಸಶ್ರೀಯಂ ನೋಡಿನೋಡಿ ಮೆಚ್ಚುತ್ತುಂ ಪೋಗೆ ಮುಂದೆ ಮತ್ತೊಂದುತಾಣದಲ್ಲಿ ಮಲ್ಲಿಗೆಯುರಲಮಾಲೆಗಳಿಂ ಪೊಂದಾವರೆಯ ಪೊಂಗಳಸದಿಂ ಕೊಸಗಿನ ಕುಸುಮದ ಕನ್ನಡಿಯಿಂ ಚಿನ್ನಂಬಡೆದಸುಕೆಯ ಕೆಂದಳಿರುಯ್ಯಲ ನೊರ್ವಗಪೂರ್ವಯವ್ವನೋನ್ಮತ್ತೆ ಬಸನಿಗನನೋಲೈಸುವ ಬೇವಸೆಯಿಂದವನ ಮನವ ನೇಱುವಂತೇಱಿ

ಕಾಮಿನಿ ತನ್ನ ಬಟ್ಟಮೊಲೆಯಂ ರಮಣಂಗೆಡೆಗೊಟ್ಟು ಕುಳ್ಳಿರ
ಲ್ಕಾ ಮಣೆಯಂ ಸಖಿರ್ ಪಿಡಿದು ತೂಗುತುಮಿರ್ದೆಡೆಯಲ್ಲಿ ಜೋಲ್ದುದಂ
ಪೂಮುಡಿಯಂ ಪದಗೊಳಿಸುತುಂ ಪೊಳೆಯಲ್ ತನುದೀಪ್ತಿಯಾಡಿದಳ್
ಪ್ರೇಮದೆ ರಾಗಸಾಗರದೊಳೀಸಿ ಮರಳ್ದಿರದೀಸುವಂದದಿಂ ೨೧

ಇನಿಯನೊಡಗೂಡಿಯಾಡುವ
ವನಿತೆ ಮಹಾರಾಗಭೇದಮಂ ತೋಱಿಸುತುಂ
ಮನಮೊಲ್ದು ಪಾಡುತಿರ್ದಳ್
ಘನಚಂದ್ರಮುಖಿಕ್ಕೆ ಗೋರಿಯಂ ಪಾಡುವವೋಲ್ ೨೨

ವ: ಇಂತಾಡುವುಯ್ಯಲ ತೂಕಮಾ ರಾಜಮನೋಜಂಗೆ ಕೂಡೆಗೂಡೆ ತಲೆದೂಕಮನೊಡರ್ಚೆ ಮೆಚ್ಚಿಮೆಚ್ಚಿ ನೋಡುತ್ತುಮಿರ್ಪೆಡೆಯೊಳ್ ವಿಟನಾಯಕಂ ದಕ್ಷಿಣ ನಾಯಕಂಗಿಂತೆಂದ ನಿವಳ್ದಿರ್ ನೋಟಕರನನಂಗಪೀಡಾವಸ್ಥೆಗುಯ್ಯಲಾಡುವಂದ ಮಲ್ಲದುಯ್ಯಲಾಡು ವಂದಮಲ್ತು ಬಱುಮೆಚ್ಚಿನೊಳೇನೀ ನೀಱೆಯರ ತೊಡೆಯನೇಱಿಯಾಡಿದೊಡೆ ಸುಖದೊಳೋಲಾಡಲಕ್ಕುಮೆಂದು ನುಡಿದು ನಗಿಸುತ್ತುಂ ನಡೆಯೆ ಮುಂದೊಂದು ದ್ರಾಕ್ಷಾಮಂಡಪದ ನಡುವೆ ಬೆಳುದಿಂಗಳ ಬಳಗಮಂ ರಾಸಿ ಪುಂಜಿಸಿದಂತೆ ರಂಜಿಸುವ ಚಂದ್ರಕಾಂತದ ಜಗುಲಿಯೊಳೊತ್ತೆಗೊಳಲೆಂದು

ಪಿರಿದುಂ ಚೆಲ್ವಾದ ಪೊಂಗೇದಗೆಯ ಗಱಿಗಳಂ ತೀಡುವ ವ್ಯಾಜದಿಂ ನು
ಣ್ಣೆರಳಾಂತೊಂದೊಪ್ಪಮಂ ತೋಱಿಸುತುಮೆಸೆವ ತನ್ನಾಸ್ಯದಚ್ಛಾಯೆಯಂ ಬಿ
ತ್ತರಿಸುತ್ತುಂ ಸುತ್ತಲುಂ ಕಾಮನ ವಿಜಯಮಹಾಲಕ್ಷ್ಮಿ ಬಂದಿರ್ದಳೆಂಬಂ
ತಿರೆ ಚೋದ್ಯಂಬೆತ್ತು ಕುಳ್ಳಿರ್ದಸಿಯಳನರಸಂ ನಿಂದು ನೋಡುತ್ತುಮಿರ್ದಂ ೨೩

ವ: ಆಗಳನುಕೂಲನಾಯಕಂ ದೇವನ ಮೊಗಮಂ ನೋಡಿ ಗಾಡಿವಡೆದಿವಳ ಶೃಂಗಾರಂ ನೋಳ್ಪ ಜನದ ಹೃದಯಾಂಗಾರಮಾಗಿರ್ದುದಿವಳನ್ನಳಪ್ಪ ಚೆಲ್ವೆಯನೆಲ್ಲಿಯುಂ ಕಾಣೆನದುಕಾರಣಮೆನ್ನ ಮನಂ ಬೇವುತ್ತುಮಿರ್ದುದೆಂದು ಮುಗುಳ್ನಗೆಯನೊಗೆಯಿಸುತ್ತುಂ ಪೋಗೆ ಮುಂದೊಂದು ಮತ್ತವಾರಣದ ಕೆಲದೊಳ್

ಕೆನ್ನೆಯ ಚೊಲ್ಲೆಯಂ ಪೊಳೆವ ಮುತ್ತಿನ ಮೂಕುತಿ ನೀಲದೋಲೆ ಚೆ
ಲ್ವಂ ನೆಱೆದುಟ್ಟ ಪಟ್ಟಣೆಗೆಯೊಳ್ನಿಱಿಯೊಳ್ ನಸುದೋರ್ಪ ನುಣ್ಖೊಡೆ
ಪ್ಪೊನ್ನತಿವೆತ್ತ ಲೋಚನದ ಕಾಡಿಗೆ ಸಾದಿನ ಬೊಟ್ಟು ದೋರೆವ
ಲ್ಚೆನ್ನಮದಾಗಿ ತೋಱುತಿರಲೊತ್ತೆಗೆ ನಿಂದಳದೊರ್ವಳೊಪ್ಪದಿಂ ೭೪

ವ: ನಾಗರಕಂ ಪೊಸದೇಸೆವೆತ್ತು ನಿಂದವಳ ಗಾಡಿಗೆಯಂ ನೋಡುತ್ತುಮಿರ್ಪೆಡೆಯೊಳೊಂದು ನೆವದಿಂದಾಕೆಯ ಮೇಲುದೋಸರಿಸಿ ಪೋಗಲೊಡಂ

ಮೊಗವಡಮಂ ಕಳಲ್ಚಿದ ಮನೋಭವನಂಕದ ಬಿಂಕದಾನೆಯ
ದ್ವಿಗುಣಿತಶೋಭಕುಂಭಯುಗದಂತಿರೆ ಮೇಲುದು ಜೋಲ್ದುಬೀಳೆ ಮೇ
ಲ್ನೆಗೆದ ಕುಚಂಗಳಿಟ್ಟಳಿಸಿ ಮಮ್ಮಳಿಯಾಗಿರೆ ಕಂಡು ಕೌತುಕಂ
ಮಿಗೆ ತಲೆದೂಗಿದಂ ನಡುವೆ ಕೀಲಿತದೃಷ್ಟಿಯನಂದು ಕೀಳ್ವವೋಲ್ ೭೫

ವ: ಆಗಳವನಿವಳಂತರಂಗಶೃಂಗಾರಭಂಗಿಯಂ ಪರೀಕ್ಷಿಸಿನೋಳ್ಪೆನೆಂದು ಪೋಗಿನುಡಿಸಿ ಬಂದು ಧೃಷ್ಟನಾಯಕಂಗಿಂತೆಂದ

ನುಡಿದೊಡೆ ಕಾಮಮಿಮ್ಮಡಿಸಿದಪ್ಪುದು ಸಾರೆಗೆ ಪೋಗಿ ಸೋಂಕಿದಾ
ಗಡೆ ಬಿಡದೆಯ್ದೆ ಮೂರ್ಮಡಿಸಿದಪ್ಪುದವಳ್ಗೆ ಮನೋಭವಂಗೆ ಸಂ
ಗಡಿಸಿದನಂಟಿದಾವ ತೆಱನೆಂದಱಿಯೆಂ ಸಲೆಗಾಡಿಕಾರ್ತಿಯೋ
ಗಡಿಸದೆ ಕೊಂದಪಳ್ ತವದ ಕಾಮದ ಕೋಟಲೆಯಿಂದೆ ಲೋಕಮಂ ೭೬

ವ: ಎಂದು ನುಡಿದು ನಗಿಸುತ್ತುಂ ಮತ್ತೊಂದೆಡೆಯೊಳೊರ್ವಳ್ ಮುನಿದಿ ನಿಯನಂ ತಿಳಿಪಲ್ ಕಳೆದಿಯಂ ಕಳಿಪಿದೊಡವಳ್ ತಡೆದುಬಂದುದಕ್ಕೆ ಕಡುಕನಲ್ದು ಸೈರಿಸಲಾಱದೆ ವ್ಯಂಗ್ಯದಿಂದಿಂತೆಂದಳ್

ಮೊಲೆಗಳ ಕುಂಕುಮಂ ತೆರಳಿಪೋದುದು ಕಣ್ಣೊಳಗಿದ್ದ ಕಜ್ಜಳಂ
ತೊಲಗಿದುದೆಯ್ದೆ ಬೆಳ್ಪನೊಳಕೊಂಡುದು ಕೆಂಪಧರಂ ಪೊದಳ್ದ ತ
ತ್ಪುಳಕಮಿದಾತನೊಳ್ ನೆರೆದಳೆಂದಭಿಶಂಕಿಸಿ ಮಿಂದುಬಂದೆಯೋ
ಕೆಳದಿ ಮದೀಶನಂ ಕರೆದುಬಂದೆಯೊ ಪೇಳೆನೆ ನಾಣ್ಚೆ ಬಾಗಿದಳ್ ೭೭

ವ: ಅದಂ ಕುಡೀಕೆ ತನ್ನ ಮರುಳಂ ಮುಚ್ಚಿ ಪೆಱರ ಮರುಳನಾಲೆಂಬ ನಾಣ್ನುಡಿಯಂ ನನ್ನಿಮಾಡಿ

ಮಱಸಿನುಡಿದೊಡಾಕೆಯಪರಾಧಮಱಿಯಲಾದು ದೆಂದರಸನನುಕೂಲಾದಿಗಳೊಡನೆ ನುಡಿಯುತ್ತುಂ ನಡೆಯೆ ಮುಂದೊಂದೆಡೆಯೊಳೊರ್ವನೆಂದುಮಿಲ್ಲದ ತಪ್ಪನಂದೆಮಾಡಿ ಪುರುಡಿಸಿ ಸೂಱುಳ್ತೊಡಲ್ಲದೊಲ್ಲೆನೆಂದು ರೋಷದಿಂ ಭಾಸಿಮಾಳ್ಪುದುಂ ನೊಂದ ಮನದ ಕಂದಂ ಕಳೆಯಲೆಂದು

ಬಿಡುಬಿಡು ನಲ್ಲ ಕೋಪದೊದವಂ ನಿನಗಲ್ಲದೆಯನ್ನರಿಂಗೆ ಕೂ
ರ್ತಡೆ ರತಿಯಾಣೆಯೆಂದು ತಿಳಿಪಲ್ ವಧು ಕುಂಟಿಣಿ ಕೇಳ್ದು ಪೇಳ್ದಪಳ್
ಸುಡುವುದೆ ಬಾಯನಾಣೆ ಬಳಿನೀರ್ ಪೊಱಪೊಯ್ಯುಱೆ ಪೊಟ್ಟೆಯಂ ಸಮಂ
ತೊಡವುದೆ ವಾರವಲ್ಲಭೆಯ ಸೂಱುಳಿದಂ ದಿಟಮೆನ್ನದಿರ್ ಗಡಾ ೭೮

ವ: ಸೂಳೆಯೊಲ್ದು ಬಿಡಲಾಱದಿನಿಯನನೊಸೆಯಿಸುವ ಬೇವಸೆಯಿಂ ಸೂಱೊಳ್ತೊಡದಂ ವಿಫಳಂಮಾಡಿ ಧನಹೀನನಿವನಿಂದೇನಾದಪುದೆಂದು ಮನಂ ಬಿಡಿಸುವ ಬಗೆಯಿಂ ನುಡಿದ ಮುದುಗುಂಟಣಿಯ ವಕ್ರೋಕ್ತಿಯಂ ಕೇಳ್ದವರಿರ್ವರ ಮೋಹಕ್ಕ ಪೋಹಮ ನೊಡರ್ಚಿದಳೆಂದು ದಕ್ಷಿಣನೊಡನನುಕೂಲಂ ನುಡಿದು ನಗುತ್ತುಂ ನಡೆವುದುಂ ಮುಂದೆ ಮತ್ತೊಂದು ಸೂಳೆವನೆಯೊಳಿರ್ವರುಂ ಬೇಟದ ಕಾಟದಿಂ ಕೋಟಲೆ ಗೊಂಡೊಡನೊಡನೆ ಮಸೆದು ತೋಟಿ ಮಸಗಿ

ಏಕೆದೆಗೊಯ್ಕಿ ಸೊಕ್ಕಿದಪೆ ಪೋ ಫಡ ಬೀಳೆದೆಗೊಯ್ಕಿ ನೀನೆ ನಾ
ಯೇಕೆಗ ಬಾಲಮಂ ಬಡಿದುಕೊಂಡಪೆ ಹೇಕುಳಿಗೊಂಡನಾಯಿ ನೀ
ನೇಕೆಲೆ ಹಂಚೆ ಬಾಯ್ಬಡಿಯದಿರ್ ಕೊಳೆದೆಂಜಲ ಹಂಚು ನೀನೆಯೆಂ
ದೊಯ್ಯನೆ ಬಂದು ಮಚ್ಚರಿಸಿ ಬನ್ನಮನೆತ್ತಿದರಂದು ಸೂಳೆಯರ್ ೭೯

ವ: ಅದಂ ಕಂಡು ಕುಟಿಳವಿಟನರಸನ ಮುಂದಿವಳ್ದಿರ್ ಕಾಮದೇವನಂಕದ ಸೊರ್ಕಾನೆಗಳುರ್ಕಿ ಹೋರಟೆಗೊಂಡಪುವೆಂದು ಕೈಮುಗಿದು ನುಡಿದು ನಗಿಸುತ್ತುಂನಡೆಯೆ ಮುಂದೊಂದೆಡೆ ಯೊಳ್

ಎಂದುಂ ನಲ್ಲರ ಕೂಟಮಿಲ್ಲದ ವಿದಗ್ಧಸ್ತ್ರೀಯ ಕೈಯಂ ಮಹಾ
ನಂದಂ ಪೊಣ್ಮರೆ ಕಾದಲಂ ಪಿಡಿಯೆ ಕಂಪಂಬೆತ್ತಳೊಲ್ಮಾತನಾ
ರ್ಪಿಂದೆಯ್ದಾಡಿಸಿ ಮೆಲ್ಲನೊಮ್ಮೆ ನುಡಿದಳ್ ಬಲ್ಪಿಂದವಂ ಚುಂಬಿಸ
ಲ್ಕಂದೂಹೂಹು ವುಹೂ ಹು ವೂಹುಯೆನುತುಂ ಜಾವಂಬರಂ ಕಾಡಿದಳ್ ೮೦

ವ: ಅದಂ ನೋಡಿ ಮುಂದಱಿಯದ ಮುಗ್ಧೆಯಂದಕ್ಕೆ ನಸುನಗುತ್ತುಂ ಪೀಠಮರ್ದಕಂ ಹಠವೃತ್ತಿಯ ಬೇಳನಮಂ ಶಠನೊಡನೆ ನುಡಿದು ನಡೆತಪ್ಪುದುಂ ಮುಂದಣೆಡೆಯೊಳೊಲುವ ಭುಜಂಗನುಳಿದೊಡೆ ಮನಂಮಱುಗಿ ಕಂದಿಕುಂದಿ ಚಿಂತಿಸುತ್ತುಮೊತ್ತಗೆ ಬೇಸತ್ತು ಪೊತ್ತಂಕಳೆವುತ್ತುಮಿರ್ದ ಮಗಳ್ಗೆ ಟೆಂಟಣಿಸಿ ಕುಂಟಣಿಯೊರ್ವಳಿಂತೆಂದಳ್

ಪಣಮುಂಟಾದ ವಿಟಂಗೆ ಕೂರಿಸಿ ಕಳಾಪ್ರೌಢತ್ವಮಂ ತೋಱುತುಂ
ಪಣಮಂ ಕೊಂಬುದು ಕಜ್ಜಮಿಲ್ಲದವನ ಸ್ನೇಹಾಭಿಸಂಬಂಧದಿಂ
ದಣುಮಾತ್ರಂ ಫಲಮಿಲ್ಲಮಾವನೊಳಮೋಹೋದ್ರೇಕದಿಂ ಸೂಳೆಯ
ರ್ಗುಣಿಸೇನಪ್ಪುದೆ ಸೀರೆಯಪ್ಪುದೆ ತೊಡಲ್ ಭಂಗಾರಮೇನಪ್ಪುದೇ ೮೧

ಸೊಡರ್ಗುಡಿಗೆಣ್ಣೆಯನೆಱೆವಂ
ತೊಡವೆಯನಡಿಗಡಿಗೆ ಕೊಡುವನಂ ಮೋಹಿಸುತುಂ
ನಡೆವುದವನಿಚ್ಛೆಯೊಳ್ ಮಿಗೆ
ಕೊಡದವನಂ ಕಾಣ್ಬುದಕ್ಕೆ ಕೊಡದವನನ್ನಂ ೮೨

ವ: ಎಂದು ಪಡಪಾಳಿತನಮನೆ ಮುಂದಿಟ್ಟು ಮಗಳ್ಗೆ ಬುದ್ಧಿಗಲಿಸುವ ಹಡಹು ಕಾರ್ತಿಯ ನುಡಿಯನಾಲಿಸಿ ಬೆಲೆವೆಣ್ಣ ಬೇಟಮೆಂಬುದಾನೆಯ ಮೊಗದಂತೆ ಕೋಡಿಂದಲ್ಲದೆ ಮೆಱೆಯದೆಂದು ನಾಡೊಡೆಯಂ ನಾಗರಕಾದಿಗಳೊಡನುಸಿರ್ದು ದರಹಾಸವಿಭಾಸಿತಾಸ್ಯಬಿಂಬನಾಗಿ ಬರುತ್ತುಮಿರೆ ಮುಂದೊಂದು ಕೆಂದಳಿರ ಪಂದ ರೊಳಗಣ ಬಾಳದ ಬೇರ್ಗಳ ಕೇರ್ಗಟ್ಟಿನೋವರಿಯೊಳಗೆ ಚಿತ್ತವಲ್ಲಭನುಳಿದ ವಿರಹ ಪರಿತಾಪದಿಂ ಬಾಡಿ ಗಾಡಿಕಾರ್ತಿಯೊರ್ವಳ್ ಪಾಡಿದಳ್

ಬಿದಿಯಂ ಬೈದು ವಿಲೋಚನಾಂಬುಕಣದಿಂದಂ ಸೀರೆಯಂ ತೊಯ್ದು ಮಾ
ಣದೆ ಶೀತಾಂಶುಗೆ ಕಾಯ್ದು ಕೆಯ್ಯತಳಮಂ ಗಂಡಸ್ಥಳಕ್ಕೊಯ್ದು ತಾಂ
ಪದಪೆಚ್ಚಂ ಬಿಡದಪ್ಪುಕೆಯ್ದು ನಿಡುಸುಯ್ಲಿಂ ಸುಯ್ದು ದುಶ್ಚಿಂತೆಯಂ
ಪದಪಿಂದಂದೊಳಕೆಯ್ದು ಪಂಬಲಿಸಿದಳ್ ತನ್ವಂಗಿ ಚಿತ್ತೇಶನಂ ೮೩

ವ: ಆಗಳಾ ಕುಸುಮಕೋಮಳೆಯಂ ಶೀತಳರಸದಿನೆಚ್ಚಱಿಸಲೆಂದು ಕೆಳದಿಯೊರ್ವಳೆಯ್ದಿ ಬಂದು ಶಿಶಿರೋಪಚಾರಂಗಳಿಂ ಸಂತೈಸಲೊಡಂ ಸಂತಾಪವಿಮ್ಮಡಿಸುತ್ತುಮಿರೆ ಬಸವಳಿದು

ವಿರಹಿಣಿ ವಕ್ಷದಲ್ಲಿ ಹರಿಚಂದನಕಲ್ಕಮನೊಟ್ಟಿಕೊಂಡಿರು
ತ್ತಿರಲುರಿಯಿಂದ ಮುಂದಣಗೆ ಕುಳ್ಳಿದ ತುಂಬಿ ಪದಂಗಳಳ್ದುವಂ
ತ್ವರಿತದೆ ಕೇಳಲಾಱದದು ಪಕ್ಕಮನೆತ್ತಲನಂಗನಂಬುಗಳ್
ಪರಿದೆನನಟ್ಟಿರಲ್ ಪೊಱಗೆ ತೋಱುವ ನುಣ್ಗಱಿಯಂತಿರೊಪ್ಪುಗುಂ ೮೪

ವ: ಅದಂ ಕಂಡು ನೀ ಮಾಳ್ಪ ಶಿಶಿರಕ್ರಿಯೆ ಎನಗವಕ್ರಿಯೆಯಾದುದಿದಕ್ಕೆ ಮನದೊಳಿರ್ದ ಕಡುನಲ್ಲನ ಕೂಟಮೆ ಮರ್ದುಮದಱಿಂದಲ್ಲದೀ ವಿರಹಜ್ವರಮುಪಶಮಿಸದೆಂದು ಕೆಳದಿಗಿಂತೆಂದಳ್

ಇನಿಯನ ಕೂಟಮೊಂದೆ ವಿರಹೋಷ್ಣಮನಾಱಿಪುದೆಂತಿರಂತೆ ಪಾ
ವನಶಿಶಿರೋಪಚಾರದಭಿಕೂಟಮಿದಾಱಿಸಲಾಱದಕ್ಕ ಚಂ

ದನರಸದಣ್ಬು ಚಂದ್ರಿಕೆಯ ಸೊಂಪು ಸಮಂತೊಡನೊತ್ತುತಿರ್ದ ಕಂ
ಪಿನ ಪೊಸನೀರಪೊಟ್ಟಣದ ತಂಪು ಸರೋಜದಲಂಪು ನಾಡೆಯುಂ ೮೫

ವ: ಅಂತಾದೊಡಮಿದೊಂದು ವಿಪರೀತಮಂ ಕೇಳೆಂದು ಮತ್ತಮಿಂತೆಂದಳ್

ಎನ್ನಯ ಕೈಯೊಳೋದಿದ ಶುಕಂ ನಡೆಗಲ್ತೆಳೆಹಂಸೆ ನುಣ್ಚರಂ
ಎನ್ನಮದಾಗಲಭ್ಯಸಿಸಿದುತ್ಕಳಕೋಕಿಳಮೆಂಬಿವೆಲ್ಲಮೆ
ಯೆನ್ನಯ ಶಿಷ್ಯಸಂತತಿಗಳಾಗಿಯುಮೇಕೆನಗಕ್ಕ ದುಃಖಮಂ
ಕೆನ್ನಮೊಡರ್ಚುತಿರ್ದಪುವನಂಗನ ಕೂಡೆ ನಿರೀಕ್ಷಿಸಿಂತುಟಂ ೮೬

ವ: ಆ ವಿರಹವಿಕಳತಾ ವ್ಯಾಕುಳಿತೆಯ ಮುಗ್ಧವಿಳಸನಕ್ಕೆ ಮೇಳದಾಳಿ ನಸುನಗುತ್ತು ಮಿರ್ಪುದುಮದಕ್ಕೆ ಕನಲ್ದು ಪೆಱರ ಪೀಡೆಯನಱಿಯದ ಬೋಡಿ ನೀಂ ಪೋಗೆಂದು ತನ್ನ ಕಾಮವ್ಯಸನಮನುಸಿರ್ವ ನೆವದಿಂತೆಂದಳ್

ಕಡುನಲ್ಲನ ಬಾಯೆಲರಿಂ
ತೊಡಲುರಿ ಕೆಡುವಂತಿರಕ್ಕ ಕೆಡದೀಯೆಲರಿಂ
ಬಿಡು ಪೀಲಿಯ ಬಿಜ್ಜಣಿಗೆಯ
ನಡಿಗಡಿಗಂ ಬೀಸುತಿರ್ಪ ಕೋಟಲೆಯೇಕೌ ೮೭

ವ: ಎಂದು ನೆಟ್ಟನೆ ಮುಟ್ಟಿದೆಡೆಯೊಳಿಂತಾದೊಡಮವನಂ ತಂದು ಕೂಡಿದೊಡೆ ಬರ್ದುಂಕುವೆನಲ್ಲದೊಡೆ ಸಾವೆನೆಂದು ಪರಿಚ್ಛೇದಿಸಿದ ನುಡಿಯಂ ಕೇಳ್ದಿಗಳೆ ತಂದೀವೆನೆಂದು ತತ್ಕಾಂತನಂತಿಕಕ್ಕೆ ಬೇಗದಿಂ ಪೋಗಿಯಾಕೆಯವಸ್ಥಾಭೇದದ ಸಂಸ್ಥೆಯಂ ತೋಱಿ ಚತುರಚಾಟುವಚನಂಗಳಿಂದಿಂತೆಂದಳ್

ಮನದೊಳ್ ನಿನ್ನಯ ರೂಪಮಂ ನೆನೆದು ಸಚ್ಚೈತ್ಯಕ್ರಿಯಾದಂಭದಿಂ
ವನಜಾತಂಗಳನರ್ಚಿಸಿ ಪ್ರಣಮನಂಗೆಯ್ದುದ್ಧನಾಮಪ್ರಭಾ
ವನೆಯಂ ಮಂತ್ರಮದಾಗಿಮಾಡಿ ಜಪಿಸುತ್ತುಂ ಸಾಧಿಸುತ್ತಿರ್ದಪಳ್
ತನುಸಂತಾಪವಿಮುಕ್ತಿಯಂ ಪಡೆಯಿಸಾ ನೀಂ ಪೋಗಿ ಸತ್ಸೌಖ್ಯಮಂ ೮೮

ವ: ಎಂದವಳ್ಗೆ ನಿನ್ನ ಮೇಲೆ ಕೈಮಿಗಿಱಿದ ಬೇಟವುಂಟೆಂಬಿದಂ ತೋಱೆ ಬಳಿಯಮೆಲೆ ಕರುಣಮಿಲ್ಲದ ಪಾಪಿಯಿನ್ನೆಗಮೇನಕ್ಕುಮೆಂದಱಿಯೆಂ ನೀಂ ಬಂದಾ ಬಿಂಬಾಧರೆಗೆ ಸಂತೋಷದುತ್ಕರ್ಷಮನೊಡರ್ಚೆಂದು ಕೆಯ್ಯಂ ಪಿಡಿದೆತ್ತಲೆಳ್ದು ಲೇಸಾಗಿ ಪೂಸಿದನು ಲೇಪನದಿಂ ವಾಸನೆವಡೆದು ಮಣಿಮಯಾಭರಣಕಿರಣದಿಂ ಮೆಯ್ವೆಳಗಂ ದಳವೇಱಿ ಸುತ್ತುಂ ಬಲದ ಕಾಲೊಳಿಕ್ಕಿದ ತೊಡರ ಹೊನ್ನಕಡೆಯದ ಕಡಾರವದೊಡನೆ ತಡಂಗಲಿಸಿ ನೆಗಳ್ದ ಬಿರುದಾವಳಿಯಂ ಪೊಗಳ್ವ ಭಟ್ಟರ ನುಡಿಯನಾಲಿಸುತ್ತುಂ ಸೇವಕ ರಾಜಕುಮಾರ

ನೊರ್ವನೆಯ್ದಿ ಬಂದು ಬಾಗಿಲೊಳ್ ನಿಂದು ಕೂಡೆ ಬಂದವರನಲ್ಲಿರಿಸಿ ಮನೆಯೊಳಗಂ ಪುಗುವುದುಂ

ಇನಿಯಂ ಬಂದುದನಂದು ಕಂಡರಲ ಪಾಸಿಂದಂ ಪೊರಳ್ದೆಳ್ದು ಕಾ
ಮಿನಿ ಜೋಲ್ದುಳ್ಳುಡೆಯಂ ಮರಳ್ದಿಡದ ಕೆಯ್ಯಿಂ ಸಯ್ತೆಮಾಡುತ್ತು ಭೋಂ
ಕೆನೆ ತಾಂ ಬಂದಮರ್ದಪ್ಪಿಕೊಂಡು ಪುಳಕಂ ಸಾಲೇಳ್ವಿನಂ ಕೂಡೆ ಚುಂ
ಬನಮಂ ಮಾಡಿ ಚಟೂಕ್ತಿಯಿಂದೆ ಪಿರಿದುಂ ಬೊಲ್ಲೈಸಿದಳ್ ಕಾಂತನಂ ೮೯

ವ: ಇಂತು ನೂರ್ಮಡಿಯಾದ ಕೂರ್ಮೆಯ ಪೆರ್ಮೆಯ ಮೆಱೆದು ಪೂವಿನ ಪಾಸಿನಮೇಲೆ ಕಾದಲನ ಮೆಯ್ಯೋಂಕಿಂ ಕುಳ್ಳಿರ್ಪುದುಂ

ಱೆತ್ತೆಕ್ಕೆಯಿಂ ಕಾಮಿನಿಗೆ ವಿರಹದಲ್ಲೊಂದೆರಳ್ಮೂಱು ನಾಲ್ಕೈ
ದಾಱೇಳೆಂಟೊಂಬತುಂ ಪತ್ತೆನಿಪಧಿಕದಶಾವಸ್ಥೆ ಕುಂದಿಕ್ಕು ತನ್ನಾ
ನೀಱಂ ಬಂದಿಂಬಳಿಕ್ಕಂ ಘನಪುಳಕಮನಾಳ್ದಳ್ಗೆ ಪತ್ತೊಂಬಡೆಂಟೇ
ಳಾಱೈದುಂ ನಾಲ್ಕುಮೂಱುಂ ತಡೆಯದೆರಡುಮೊಂದು ದಲಿಲ್ಲಾಗಿ ಮತ್ತಂ ೯೦

ವ: ಇಂತಪ್ಪ ವ್ಯಾಮೋಹಮುದ್ದಾಮತೆಯಿಂದಾದ ಕಾಮಡಾಮರದೊಳ್ ತೊಡಂಕಿ ಮಿಡುಂಕುವುದುಂ ಕಂಡು ಬೆಗಡುಗೊಂಡು ವಿದೂಷಕಂ ತನ್ನೊಡನಾಡಿಗಳ್ಗಿಂತೆಂದಂ

ನಲ್ಲನಗಲ್ಕೆಯಿಂದಳಲನೆಯ್ದಿ ಬರ್ದುಂಕುವುದೊಳ್ಪಿತಲ್ತು ಕೀ
ಳಲ್ಲದೆ ಬಳ್ಳೊಡಂ ನೆಱೆಯೆ ಕೂರ್ಪುದದಾರೊಳಮೊಳ್ಪಿತಲ್ತು ಮೇಣ್
ನಿಲ್ಲದೆ ಕೂರ್ತೊಡಂ ಮುನಿದಗಲ್ವುದು ಭಾವಿಪೊಡೊಳ್ಪಿತಲ್ತು ತ
ಳ್ಪಿಲ್ಲದಗಲ್ದು ಜೀವಿಪುದಿದಿಲ್ಲಿಯೆ ನಾರಕದುಃಖಮಲ್ಲದೇ ೯೧

ವ: ಎನೆ ವಿದೂಷಕನಿದು ಬರ್ದುಂಕುವನ್ನೆವರಂ ಪೋಗದ ರೋಗಮೆಂದು ನುಡಿದು ನಗಿಸುತ್ತುಂ ಪೋಗೆ ಮತ್ತಂ ಮುಂದೊಂದು ಚಂದ್ರಕಾಂತಮಯಮುಂ ಮಂಡ ಪಕ್ಕಳಂಕಾರ ಮಾದುಪರಿಮ ಸೌಧತಳದ ಸುರತಾಗಾರದೊಳಗೆ

ಮಂಚದ ಶಕುನಿಯ ಪಾರಿವ
ದಂಚೆಯ ಮೆಲ್ನುಲಿಯುಮೆಯ್ದೆ ಕೂಡುವರುಲಿಯುಂ
ಸಂಚಿಸಿ ಕಿವಿಗಳನೆಯ್ದೆ ಪ
ಳಂಚಲೆದುದು ಮದನದುಂದುಭಿಧ್ವನಿಯನ್ನಂ ೯೨

ವ: ಇಂತು ವಿಚಿತ್ರಸಂಭೋಗಸಂದರ್ಭಸಮಾವಿರ್ಭಾವನಿರ್ಭರಪ್ರಣಯ ಪರವಶತೆಯಿಂ ನೆರೆವ ಕಾದಲರ ಕಾಮಕೇಳೀಕಳಕೂಜನಕೋಳಾಹಳಂ ನಾಗರಕದಕ್ಷಿಣಾದಿಗಳ ಕಿವಿಗೆ ಸವಿಯನವಟೈಸುವುದುಂ

ಕರದಿಂ ಮೋದಿಕೊಳುತ್ತುಮಳ್ದಿರ್ದೆಯನಾ ದೇವಂಗಿದಿರ್ವಂದೆಲೇ
ಶರಣಾಯಾತನ್ನವಜ್ರಪಂಜರಕ ನೀಂ ಪೆಣ್ಬುಯ್ಯಲಂ ಕೇಳ್ದು ಘೂ
ವರನಾರಯ್ಯದೆ ನೋಡದಿರ್ದೊಡಮುಪೇಕ್ಷಾದೋಷಮಕ್ಕುಂ ದಲೀ
ಧರೆಯೊಳ್ ಗಂಡುತನಕ್ಕೆ ಬಕ್ಕು ಪಳಿ ಚಿತ್ತೈಸಿತ್ತಲೆಂದಂ ವಿಟಂ ೯೩

ವ: ಬಳಿಯುಮನುಕೂಲಾದಿಗಳ್ವೆರಸಿ ನರಪತಿಶಿರೋಮಣಿ ಪೋಗಿ ಗವಾಕ್ಷ ವಿವರ ಪರಿನಿಕ್ಷಿಪ್ತನಿರೀಕ್ಷಣರಾಗಿ ನಿಂದು ನೋಡುತ್ತುಮಿರ್ಪನ್ನೆಗಂ

ಪುಳಕಂಗಳ್ ಕೀಳ್ಗಳೆಂಬಂತೊಳನೊಳಪುಗೆ ತರ್ಕೈಸಿಕೊಂಡಿರ್ದ ಮೆಯ್ ಮೆ
ಯ್ಯೊಳೆ ಕಾಮಂ ಕಾಸಿ ಬೆಚ್ಚಂ ಮಿಥುನದ ತನುವಂ ನೋಳ್ಪಡೆಂಬಂದದಿಂದಂ
ತ್ತೊಳಗುತ್ತಿರ್ದಾ ಸ್ವರೂಪಂ ಬಗೆಯೊಳಗೆಯಿಸಿತ್ತರ್ಧನಾರೀಶ್ವರಾತ್ಮ್ಯ
ಜ್ವಳಮೂರ್ತಿಭ್ರಾಂತಿಯಂ ಕೂಟದ ಕಡುತವಕಂ ಚಿತ್ತದೊಳ್ ಕೊರ್ವಿಪರ್ವಲ್ ೯೪

ಗಂಡಸ್ಥಳ ಚಿಬುಕಾಧರ
ಮಂಡಳ ಚೂಚುಕವಿಲೋಚನ ಭ್ರೂಸ್ಥಾನಂ
ಗೊಂಡು ಪರಿಚುಂಬಿಸಿದನು
ದ್ದಂಡಂ ಪೀರ್ವಂದದಿಂ ಸುಖಾಮೃತರಸಮಂ ೯೫

ನಿಱಿವಿಡಿದುಟ್ಟ ಸೀರೆಯೊಳಗೆಂಬ ಧರಾತಳದಲ್ಲಿ ನಾಡೆಯುಂ
ಮಱಸಿದ ಕಾಮಿನೀಜಘನಮೆಂಬ ನಿಧಾನಮನೊಲ್ದು ಕಾಯ್ದುಕೊಂ
ಡುಱೆ ಬಳಸಿರ್ದ ಮೇಖಳೆಯುಮೆಂಬಹಿಯಂ ವಿಟನೆಂಬ ಮಾಂತ್ರಿಕಂ
ನೆಱೆಗಳ ರಾವಮಂತ್ರದುಲಿಯಿಂ ಪೆಱಪಿಂಗಿಸಿಕೊಂಡನಂತದಂ ೯೬

ವ: ಆ ಪೊತ್ತಿನೊಳ್

ಇರ್ಬರ ನಿತಂಬಮಂಡಳ
ಮುರ್ಬೆಳ್ದು ವಿಚಿತ್ರಮಾಗಿ ಕುಣಿದಾಡುವುದಂ
ನಿರ್ವಹಿಸಿ ತೋರ್ಪ ತೆಱನದ
ಗುರ್ವಿಸಿದುದುಮೊಳ್ಪುಗಂಡೊಡಾವನೊ ನಲಿಯಂ ೯೭

ಭಂಡಿಸಿ ಬೈದ ಬೈಗುಳನೆ ಲಾಲಿಸಿ ಬೇಡುವ ಪೊಯ್ವ ಪೊಲ್ಗೆಯು
ದ್ದಂಡಿಸಿ ಮೆಯ್ಯನೊಡ್ಡುವ ನಖಕ್ಷತಿಗಾಯತಮಪ್ಪ ಸೊಕ್ಕು ಮೆ
ಯ್ಗೊಂಡುಱೆ ನಿಲ್ವ ಕೂಡೆ ಕಡುಗೂಡುವ ಸಂಭ್ರಮಮುಣ್ಮೆ ಪೊಣ್ಮೆ ಕ
ಣ್ಗೊಂಡಿರೆ ಕೂಡುತಿರ್ದುದು ವಿದಗ್ಧವಿಟೀವಿಟಪೇಟಮುತ್ಕಟಂ ೯೮

ಸೂಳ್ವಡೆದ ಕೂಟದೊಳ್ ನಾ
ಣ್ಕೇಳ್ವನುವಿಂ ಬೇಟದಿಚ್ಛೆಯುಬ್ಬುವ ಜಾಣ್ನುಡಿ

ಗೇಳ್ವರವರಿಂದೆ ಸುಖದಿಂ
ಬಾಳ್ವಿನಿಯರ್ ನೆರೆದರತನುಜಂತ್ರದ ತೆಱದಿಂ ೯೯

ಕೊರಲಸರದೊಡನೆ ಕುಟ್ಟುವ
ಬೆರಲುಲಿಯನುಕೂಲಮಾಗಿ ಕೂಡಿ ಶ್ರುತಿವೆ
ತ್ತಿರೆ ರತಿ ಬಾಜಿಪ ಬೀಣೆಯ
ಪರಿಯಂ ಪೋಲ್ತೊಪ್ಪಿದತ್ತು ಕೂಡುವ ಮಿಥುನಂ ೧೦೦

ವ: ಇಂತು ಪೆಟ್ಟುವೆರ್ಚೆ ತಮ್ಮಿಚ್ಛೆಯಿಂ ನೆರೆವಾಗಳ್

ಉರಮಂ ಕುಟ್ಟಿದೊಡಂ ನಖಾಗ್ರಮುಖದಿಂ ದೋರ್ಮೂಲನಂ ಸೀಳ್ದೊಡಂ
ವರಕಾಠಿಣ್ಯಮನಾಂತ ಪೆರ್ಮೊಲೆಗಳಿಂದಂ ತಾಡನಂಗೆಯ್ದೊಡಂ
ಕೊರಲಂ ಕರ್ಚಿದೊಡಂ ವಿಟೀವಿಟಜನಕ್ಕಾಯ್ತಿಲ್ಲ ನೋವೇನುಮಾ
ದರದಿಂದಂದಧರಾಮೃತಪ್ಲವದ ಸೇವಾಸೌಖ್ಯಮೇಂಕಾರಣಂ ೧೦೧

ವ: ಮತ್ತಂ ನಿರ್ವರ್ತಿತವಿಚಿತ್ರನವೀನನಾನಾವಿಧಕರಣಪರಿವರ್ತನದಿಂ ಪುರುಷಾಯಿತ ಸುರತಸುಖದೊಳ್

ಇನಿಯನುರದಲ್ಲಿ ಬಿಳ್ದುದು
ವನಿತೆಯ ನೆಲೆಮೊಲೆಗಳಿಂ ಬೆಮರ್ವನಿಗಳ ಪಾ
ವನಧಾರೆಯುಪರಿಸುರತದೊ
ಳನುವಿಂ ಕಾಮಾಗ್ನಿಗಾಹ್ಯಗಾಹುತಿಯನ್ನಂ ೧೦೨

ವ: ಅನವರತಮನುಸ್ಯೂತ ಸ್ತ್ರೀಸೇವಾಸಂಬಂಧಮುಖದಿಂ ಪೂರ್ವಮಾದೊಡ ಮಭಿನವ ಮಣಿತಾದಿ ಕ್ರಿಯಾವಿಶೇಷವಶದಿಂದಪೂರ್ವಮಾಗಿ ಸಂಭವಿಸಿದ ನಿಮಿಲಿತನ ಯುಗಳಸಮಭಿನಂದದಾನಂದಸಂದೋಹಸಮಾಸ್ವಾದನರೂಪಸಂಭೋಗಸುಖಾನುಭವದ ರಸಾನುಸಮಯದೊಳ್

ಬೆಮರಿಳಿದೊಯ್ಯನಾಱೆ ಬೆಳರ್ವಾಯ್ ಮಿಸುಪೇಱೆ ಬಳಲ್ದು ನೀಳ್ದ ಸುಯ್
ಸಮನಿಸೆ ಕಣ್ಣ ಕೆಂಪು ಪರಿರಂಜಿಸೆ ವಾಸನೆ ಬೇಱದೊಂದು ದೇ
ಹಮನಡರ್ದೊಪ್ಪೆ ಬಲ್ಪು ನೆಱೆತಪ್ಪೆ ಗವಾಕ್ಷದ ಗಾಳಿಗಾಸೆಗೆ
ಯ್ದುಮಿರೆ ರತಾಂತ್ಯದೊಳ್ ವಿಟವಿಟೀಜನಮಾಂತುದಪೂರ್ವಶೋಭೆಯಂ ೧೦೩

ಮಿಱುಗುವ ಕೆಂಪಧರದ ನು
ಣ್ಗಱೆ ತೋಱೆಕೆವೆತ್ತುದಮೃತರಸಸೇವನೆಯಂ
ನೆಱೆಮಾಡಿಯುಳಿದುದಕ್ಕಂ
ಕುಱುಪಿನ ಪೊಸಮುದ್ರೆಯಿಟ್ಟನಿನನೆಂಬಿನೆಗಂ ೧೦೪

ಮೊದಲಿಂ ತುದಿವರೆಗಂ ಕೆಂ
ಪೊದವಿದ ನಖರೇಖೆ ಸುತ್ತಲುಂ ನೀಳ್ದಿರೆ ಪೆ
ರ್ಚಿದ ಮೊಲೆಯ ಮೇಲೆಯದು ಪೋ
ಲ್ತುದು ಮದನಸುವರ್ಣಕಳಶಮುದ್ರಾಕ್ಷರಮಂ ೧೦೫

ವ: ಇಂತು ಕಾಮುಕಕಾಮುಕೀನಿಕಾಯಂ ಮಾಳ್ಪ ಕಾಮವಿಕಾರದ ವಿನೋದಕೌತುಕಮಂ ಕಂಡು ಚತುರಚಕ್ರವರ್ತಿ ಮೆಚ್ಚುತ್ತುಮಲ್ಲಿಂ ಪೋಗಲನು ಗೆಯ್ವಾಗಳೊರ್ವಳೊಡರ್ಚಿದ ಸುರತಮಂ ಪೆರ್ಚಿದ ಕಡುಮೋಹದಿಂದಿನಿಯನಂ ಬಿಡಲಾಱದಾಲಿಂಗನಂಗೆಯ್ದು ಕಾರ್ಯಾಂತರಾತುರತೆಯಿಂದೊಳಗಂ ಪೊಱಮಟ್ಟಿದಿರಂ ಬರ್ಪಳಂ ನಾಗರಕಂ ನಡೆನೋಡಿ

ಮಿಗೆ ಗುಜ್ಜುಗೊಂಡ ಪೆರ್ಮೊಲೆ
ಬಿಗಿದಪ್ಪಿದ ಸವಿಯನೆನಗೆ ಪಿಸುಣಾಡುವವೊಲ್
ಬಗೆಗೆ ಬಂದತ್ತು ಚೋದ್ಯಂ
ಮಿಗುಪೀಕೆಯ ನಾಟುಗೊಂಡ ಬೇಟದ ಕಾಟಂ ೧೦೬

ವ: ಎಂದು ನುಡಿದ ನಾಗರಕನ ಮಾತಿಂಗೆ ನೀತಿರತ್ನಾಕರಂ ಮನಂಗೊಂಡು ನಗುತ್ತುಂ ಬರ್ಪನ್ನೆಗಂ ಪಿರಿದೊಂದು ಸಂಭೋಗಭವನದ ಮುಂದಣಪ್ರದೇಶದೊಳು ಗೊಟ್ಟಿಯಾಗಿ ನೆರೆದಿರ್ದ ಚಟುಪಟುಪಿಟಪಟಳಮಂ ಕಂಡಿಲ್ಲಿ ಕಾಮತತ್ತ್ವ ಮೀಮಾಂಸಾ ರಹಸ್ಯಮನೇನಾನುಮನೊಂದಂ ಕೇಳಲಕ್ಕುಮೆಂದು ಪೋಗಿ ನಟ್ಟನಡುವೆ ನಿಂದು ಕೇಳುತ್ತುಮಿಪ್ಪಿನಮೋಗರವೇಂಟದ ಭೋಗಿವಿಟನೊರ್ವಂ ಸುರತದೆಡೆಯೊಳ್ ತನ್ನೋಪಳ ಮಾಟಮಂ ನೆನೆನೆನೆದು ಮನಮುರ್ಬಿ ಸೈರಿಸಲಾಱದೆ ಕೆಳೆಯಂಗಿಂತೆಂದಂ

ಇಂದಿರುಳೆನ್ನಕೂಡೆ ನೆರವಾಕ್ಷಣಮೋಪಳದೊಂದು ಕೆಯ್ತಮಂ
ಸಂಧಿಸಿ ಬಯ್ತು ಬಯ್ಕೆಯೆನಲೆನ್ನಯ ಚಿತ್ತದೊಳಿರ್ದುದೀಗಳಾ
ಸೌಂದರಿಯಂದದಿಂ ಸುರತದೊಳ್ ಕಡುಜಾಣೆಯನಂತುಕಾಣೆನಾ
ನೆಂದು ಮುಧೂಡೆಯೊಳ್ ಕುಲಟೆಯೊಳ್ ಬೆಲೆವೆಣ್ಣೊಳಮಾರೊಳಾದೊಡಂ ೧೦೭

ವ: ಮತ್ತಂ

ಪದನಱಿದೊಲ್ದುಚುಂಬಿಸುವ ಸೋಂಕಿದೊಡಂ ಬಿಗಿದಪ್ಪಿಕೊಳ್ವ ಮಾ
ಣದೆಯಧರೋಷ್ಠಮಂ ಸವಿವ ಕಣ್ಮಲರಂ ನಸುಮುಚ್ಚಲೆಚ್ಚಱಂ
ಪದುಳಿಸಿ ಮಾಳ್ಪ ರಾಗರಸದಿಂದಮೆ ನೋಳ್ಪನಿಯಳ್ಗೆ ಬೇಡಿತಂ
ಪಡೆದಿರದೀವುದೊಲ್ದುದಿಳಿಕೆಯ್ವುದು ಪೊಳ್ಳಿಸಿ ತಿಂಬ ಥಾಳೆಯಂ ೧೦೮

ವ: ಇಂತೆಂಬೆಳವೆಂಡಿರ ತಂಡದ ನುಡಿಯಂ ಮೆಯ್ಗರೆದಾಲಿಸಿ ಭೂಮಂಡಳಾಧೀಶ್ವರಂ

ಸಡಗರಂಗೊಂಡು ಮೆಚ್ಚುತ್ತುಂ ನಡೆತಪ್ಪಾಗಳ್ ಮುಂದೊಂದು ಸಮುತ್ತುಂಗ ಶೃಂಗಾರಾಗಾರದ ಪುರೋಭಾಗದೊಳ್ ನಿಂದು ನಾಲ್ದೆಸೆಯಂ ನೋಡುತ್ತುಮಿಪ್ಪಾಗಳ್ ಪಡುವಗಡೆಗಿಳಿದು ಕಂದಿಕೊಂಡಿರ್ದ ಚಂದ್ರನಂ ಕಂಡು ವಿದೂಷಕನರಸನ ಮೊಗಮಂ ನೋಡಿ ದೇವರಿತ್ತಲವಧರಿಸಿಯೆಂದು ಸುಟ್ಟಿತೋಱಿ ಪ್ರಹಸನಮುಖದಿಂದಿಂತೆಂದಂ

ನೀವೆಲ್ಲಂ ನೋಡಿ ರಾಗಂಬಡೆದನುದಯದೊಳ್ವೆರ್ಚಿ ಬಾಳ್ವಾಕ್ಷಣಂ ಸ
ದ್ಭಾವಂ ಕೈಮಿಕ್ಕು ತಾಳ್ದಂ ಘನಶುಚಿತೆಯನೀಗಳ್ ಕರಂ ಕೊರ್ಬಿ ಶುಕ್ಲಂ
ದೇವಂ ವಾರಾಂಗನಾಂಗಳನುಱ ಕರದಿಂ ಮುಟ್ಟಿರಲ್ ಕಂದಿ ಚಂದ್ರಂ
ಮೂವಣ್ಣಂ ಬಂದನಾನಿನ್ನಱಿಯೆನಿವಗೆ ಮುಂದಪ್ಪುದಂ ಕೆಟ್ಟೆನಯ್ಯೋ ೧೦೯

ವ: ಅಂತುಮಲ್ಲದೆಯುಂ

ಕಡುಸೊಂಪಂ ಪಡೆದಿರ್ದ ಚಂದ್ರನಿರುಳೆಂಬೀ ಸೂಳೆಯೊಳ್ ಕೂಡಿ ಸಂ
ಗಡಿಸಿಂ ತೀರ್ದೊಡೆ ತೀರ್ದುದಾತನ ಸುವರ್ಣಂ ವಾರನಾರೀಚ್ಛೆಯೊಳ್
ತೊಡರ್ದಿರ್ದಂ ಕೆಡದಿರ್ಪನಾವನೊ ಧರಿತ್ರೀಚಕ್ರದಲ್ಲಿನ್ನುಮಿ
ರ್ದೊಡಮಕ್ಕುಂ ತದವಸ್ಥೆ ಮತ್ತೆ ನಮಗಂ ಚಿತ್ತೈಸಿಕೊಳ್ಳಿಂತುಟಂ ೧೧೦

ವ: ಇಂತೆಂಬವನುಕ್ತಿಯ ವಕ್ರಿಮಕ್ಕೆ ಸಾರ್ವಭೌಮಸರ್ವಜ್ಞಂ ಮನದೊಳ್ ಮೆಚ್ಚಿ ಬಳಿಯ ಮಾಪಣವಧೂಸಂಗದಿನೀ ಪಣಭಂಗಮಕ್ಕುಮಿನ್ನಿಲ್ಲಿರ್ಪುದನುಚಿತಮೆಂದು ಭೂಮಿನೀ ವಿರಾಮಸಮಯಮನುಪಲಕ್ಷಿಸುತ್ತುಮಿರ್ಪುದುಂ

ನವಕಾಮಕ್ರೀಡೆಯೊಳ್ ಮಾಡುವ ಸರಸವಿನೋದಂಗಳಾಲೋಕದಿಂ ರಾ
ತ್ರಿವಿಹಾರಂ ಮತ್ತೆ ಯಾಮತ್ರಿತಯದ ಕಡೆಯಂ ಕಾಣಿಸಿತ್ತೆಯ್ದೆನಲ್ಪೋ
ತ್ಸವದಿಂದಾ ಧರ್ಮನಾಥಂಗರೆಘಳಿಗೆಯಿಂದೆಂದೆಂಬಿನಂ ಯಾಮಭೇರೀ
ನಿವಹಂ ಭೋರೆಂದುದಾಗಳ್ ಕರೆವವೊಲವರಂ ಕೇಳ್ವದಂ ಧೃಷ್ಟನೆಂದಂ ೧೧೧

ವ: ತಡೆಯದೆ ಬಿಜಯಂಗೆಯ್ವುದಲ್ಲದೊಡೆ ನಮ್ಮ ಮನಮಿಲ್ಲಿಯ ಸೂಳೆಯರಂ ಕಂಡೊಡೆ ಸೈತೆ ನಿಲ್ಲದೆಂದು ಬಿನ್ನಪಂಗೆಯ್ದು ರಾಜಭವನಕ್ಕಭಿಮುಖನಂ ಮಾಡೆ

ನಗರ ಸ್ತ್ರೀಪುರುಷರ ದೃ
ಷ್ಟಿಗಳ ವಿಷಂ ಸೋಂಕೆ ಬಾಡೆ ಸೊಪ್ಪಾದುಱ ಮೈ
ಲಗೆವೆಳ್ದಿಂಗಳ ಸೋಂಕಂ
ಮಿಗೆ ಸೈರಿಸಲಾಱನೆಂಬಿನಂ ಪತಿ ಪೋದಂ ೧೧೨

ವ: ಅಂತು ಬೇಗದಿಂ ಪೋಗಿ ರಾಜಾಲಯದ ಬಾಗಿಲೊಳ್ ನಿಂದು ಕೂಡೆ ಬಂದವರಂ ವಿಸರ್ಜಿಸಿ ಕಾಮೋದ್ದೀಪಕೋಪಕರಣಸಜ್ಜಿತಮಾದ ಸೆಜ್ಜೆವನೆಗೆ ಬರ್ಪುದುಂ ಮುನ್ನಮೆ

ಸೂಳ್ಗವಂದು ಬರವಂ ಪಾರುತ್ತುಂ ತಳ್ಪತಳದೊಳಿರ್ದ ಶೃಂಗಾರವತೀದೇವಿಯಿದಿ ರೇಳ್ವುದು ಮಾಗಳ್

ಮುಟ್ಟಿದೊಡೆ ಸುಖದ ಸೊಕ್ಕಂ
ಪುಟ್ಟಿಸುವತಿಮೃದುಪೇಶಲಪ್ರವಾಪೃತಿಯಿಂ ನೇ
ರ್ಪಟ್ಟ ಗುಣದಿಂದೆ ಪೆಣ್ಣನೆ
ನೆಟ್ಟನೆ ಚೆಲ್ವಾದ ಹಾಸನರಸಂ ಸಾರ್ದಂ ೧೧೩

ವ: ಮತ್ತಂ ಕಾಮಂ ರತಿಯ ಕೆಯ್ಯಂ ಪಿಡಿದು ತೆಗೆವಂತಿರಾತನಾಕೆಯ ಕರಮಂ ಪಿಡಿದು ಬಲ್ಪಿಂದಲ್ಲಿ ಕುಳ್ಳಿರಿಸುವುದುಂ

ತಡೆದಾ ಭೂಪತಿ ಬಂದುದಕ್ಕೆ ಮುನಿದೀರ್ಷ್ಯಾಕೋಪದಿಂ ನೋಡಲಾ
ಗಡೆ ಚಾಟೂಕ್ತಿಯ ಲಲ್ಲೆಯಿಂದ ಸತಿಯಂ ಸಂತೈಸಿ ಚಿತ್ತಕ್ಕೊಡಂ
ಬಡುವಾಲಿಂಗನ ಚುಂಬನಾದ್ಯುಚಿತ ತದ್ವ್ಯಾಪಾರದಿಂದರ್ಥಿ ಮುಂ
ದಿಡೆ ಸಂಭೋಗಸುಖಂಗಳಿಂ ತಣಿಪಿದಂ ಕಾಮಾಂಗಮಭ್ಯಾಸಿತಂ ೧೧೪

ವ: ತದನಂತರಂ

ಸತಿ ಸುರತಾಂತ್ಯದೊಳ್ ನಿಜಮನಃಪ್ರಿಯನಂ ಬಿಗಿದಪ್ಪಿಕೊಂಡು ಮೋ
ಹಿತೆ ಬಿಡಲಾರದಪ್ಪಿಳಿಯದಿರ್ದೊಡೆ ನಿದ್ರೆಯ ಭಾರದಿಂದೆ ಮು
ದ್ರಿತಘನನೇತ್ರರಾಗೆಯೊಡಗೂಡಿದ ಬಾಯ್ ಪುದಿದಿರ್ದ ಪುರ್ವು ಮ
ತ್ತತಿಶಯಮಾದುದಿರ್ಬ್ಬರಿಗಮೊಂದೆಶರೀರಮಿದೆಂಬ ಮಾಳ್ಕೆಯಿಂ ೧೧೫

ವ: ಅಂತಡಿಕಿಲ್ಗೊಂಡಿರ್ದೇಳುಂಪಾಸಿನಮೇಲೆ ವಧೂವರರಿರ್ಬರುಂ ನಿಧುವನ ಪರಿಶ್ರಮದಿಂ ಸುಷುಪ್ತಿ ಸುಖಾಭಿಮುಖರಾಗಿರುತ್ತುಮಿರಲೊಂದು ಮುಹೂರ್ತ ಮಾತ್ರಮುಳಿದ ಮನೋಹರಿಯೆಂಬ ಬೆಳಗಪ್ಪ ಜಾವದ ಕಡೆಯೊಳ್

ಉದಿರ್ದಲ್ಲೊಕ್ಕ ನಭೋಭೂ
ಜದ ಪೂಗಳ ಬಳಗಮೆಂಬಿನಂ ತೊಳಗುವ ನು
ಣ್ಗದಿರೊಳ್ಪು ಮಸುಳಿಸುತ್ತಿರೆ
ಪದೆಪಿಂ ನೀರೋಡಿ ಬಾಡಿದವು ತಾರಗೆಗಳ್ ೧೧೬

ಮಿಗೆ ದೋಷಾಕರನಾಗಿಯುತ್ಪಳಮಧುಪ್ರೀತಂ ದಲಾಗಿರ್ದ ದಂ
ದುಗದಿಂ ತೇಜಮಡಂಗಿಪೋಗಿ ಪಿರಿದುಂ ಮೆಯ್ ಕಂದಿ ಕಪ್ಪಾಗಿ ಕೈ
ಮಿಗೆ ಸೊಕ್ಕುರ್ಬಿ ಕಡಂಗಿ ಸಾರ್ದನಪರಾಶಾ[ದ್ರೀಂ]ದ್ರಮಂ ಚಂದ್ರಮಂ
ಜಗದೊಳ್ ನಾಶಮನೆಯ್ದನಾವನೊ ಮಹಾದುರ್ವೃತ್ತಿಮತ್ತಾತ್ಮಕಂ ೧೧೭

ವ: ಆಗಳ್ ಪೂರ್ವಾಶಾಪ್ರದೇಶದಲ್ಲಿ

ಬಳಸಿ ಪೊಳೆಯುದಯರಾಗಂ
ಥಳಥಳಿಸಿತ್ತಿಂದ್ರದಿಕ್ಕುಮಾರಿಕೆ ನೀನು
ಜ್ಜ್ವಳದುದಯರಾಗಮೆಂಬ
ಗ್ಗಳಪಟ್ಟಾವಳಿಯನೊಲ್ದು ಕೊಟ್ಟಟ್ಟಿದವೋಲ್ ೧೧೮

ಪದೆಪಿಂ ಮೆಯ್ ಮುರಿದೆಳ್ದು ನೀಡಿ ಕೊರಳಂ ಪಕ್ಕಂಗಳಂ ಬಿರ್ಚಿ ಮಾ
ಣದೆ ಕುಕ್ಕೂಯೆನುತೊಲ್ದು ಕೂಗಿದುದು ಜಾವಂಗೋಳಿ ತತ್ಸುಪ್ರಭಾ
ತದೊಳಂ ಪಕ್ಕಿಗಳೆಯ್ದೆ ತಮ್ಮ ನೆಲೆಯೊಳ್ ಚೀಚೀಪುಚೀಚೀಪುಚೀ
ಪೊದವಲ್ ಚಿಂಚಿಲಿ ಚಿಂಚಿಲೆಂದು ದನಿಗೆಯ್ವುತ್ತಿರ್ದವಾ ಪೊತ್ತಿನೊಳ್ ೧೧೯

ಅರೆಬಿರಿವುತ್ತುಮಿರ್ದ ಕಮಳಂಗಳೆಸಳ್ಗಳನೆಯ್ದೆಬಿರ್ಚಿ ಬಂ
ಧುರಮಕರಂದದೊಳ್ ಪೊರೆದು ಶೈತ್ಯಸುಸೌರಭಮಾದ್ಯಮೆಂಬ ತ
ನ್ನುರುಗುಣಸಂಪದಂಬೆರಸು ಮಂದಸಮೀರಣಮಾ ಪ್ರಭಾತದೊಳ್
ಸುರುಚಿರಮಾಗಿ ಬೀಸಿದುದು ಸರ್ವಜನಕ್ಕೆ ಸುಖಪ್ರದಾಯಕಂ ೧೨೦

ವ: ಮತ್ತಂ

ತಿಮಿರಂ ಜಾಱೆ ಸರೋಜಷಂಡಮಲರ್ದ ವ್ಯಾನಂದಮಂ ಬೀಱೆ ಯೋ
ಗಿಮನಂ ಧ್ಯಾನಮನೇಱೆ ಕೋಕಮಿಥುನಂ ಸಂತೋಷಮಂ ಪೇಱೆ ಸಂ
ಭ್ರಮಮುಂ ಸರ್ವಜನಕ್ಕೆ ತೋಱೆ ದೆಸೆಗಳ್ ಕೆಂಪಾಗಿ ಪೂರ್ವಾದ್ರಿಯಂ
ಕ್ರಮದಿಂ ಬಂದಿರದೇಱಿದಂ ಭುವನದೊಳ್ ತೇಜಸ್ಕರಂ ಭಾಸ್ಕರಂ ೧೨೧

ಕಿರಣಂ ನಾಲ್ದೆಸೆಯಲ್ಲಿ ಲಂಬಿಸುವ ನೇಣೆಂದೆಂಬಿನಂ ತೋಱಲಂ
ಬರಮುಂ ತಾಂಗತುಳಾದಿದಂಡಮೆನೆ ಚೆಲ್ವಂ ತಾಳ್ದೆ ಪೂರ್ವಾಸ್ತಭೂ
ಧರಮುಂ ತ್ರಾಸಿನೆರಳ್ಕೊಡಂಬೊಲೆಸೆಯಲ್ ಚಂದ್ರಾರ್ಕಬಿಂಬಂಗಳಿಂ
ಬುರುರತ್ನಂಗಳನಿಕ್ಕಿ ತೂಗುವವೊಲಾ ಬ್ರಹ್ಮಂ ಬೆಡಂಗಾದುದೋ ೧೨೨

ಮೂಡಲ್ ಸೂರ್ಯನ ಕಿರಣಂ
ಮೂಡಲ್ ಪಡುವಲ್ ಸುಧಾಂಶುಬಿಂಬದ ಕಿರಣಂ
ಕೂಡಿರೆ ನಡುವಣ ಕತ್ತಲೆ
ಪಾಡಳಿದುದು ಕರ್ತರೀಶಿರೋರುಹದನ್ನಂ ೧೨೩

ನೋಡಲ್ಕಾಂ ದೇಶದೊಳ್ಪಂ ಪಡುವಗಡೆಗಿರುಳ್ ಪೋಗಿರಲ್ ನಾಲ್ಕುಜಾವಂ
ಕೂಡಿರ್ದಳ್ ಚಂದ್ರನೊಳ್ ಪಾದರಿಗಿ ಗಗನದುಷ್ಕಾಂತೆಯಂದೀರ್ಷ್ಯೆಯೊಳ್ ತೇಂ

ಕಾಡುತ್ತುಂ ಬಂದು ಹಸ್ತಶ್ರವಣಮನಿರದೆ ಛೇದನಂಗೆಯ್ದನಂ ಶು
ಕ್ರೋಡೋದ್ಯನ್ಮಂಡಲಾಗ್ರಸ್ಫುರಣದಿನಿನನೆಂಬಂತಿರಾಯ್ತಸ್ತಶೋಭಂ ೧೨೪

ಸುರದಿಕ್ಕಾಮಿನಿ ಪೊಯ್ದಡೆ
ಭರದಿಂ ಮೇಲೊಗೆವ ಶೋಣಕಂದುಕಮೆಂಬಂ
ತಿರೆ ತರುಣತರಣಿಬಿಂಬಂ
ಪಿರಿದು ಪುಟಂನೆಗೆದು ತೋರ್ಕೆವೆತ್ತುದು ನಭದೊಳ ೧೨೫

ವ: ಆ ಪ್ರಸ್ತಾವದೊಳ್

ಪೊರೆಪೊರೆಗೊಂಡೆಸಳ್ಮಸಗಿಯುಳ್ಳಲರ್ವಾಗಳನೂನಕಂಟಕೋ
ತ್ಕರಮೊಗೆತಂದು ಮೆಯ್ಯೊಳಗೆ ತಳ್ತೆಸೆಯಲ್ಕನುರಾಗದೇಳ್ಗೆಯು
ಬ್ಬರಿಸಿ ಕರಾಗ್ರದಿಂ ಪಿಡಿದು ಪದ್ಮಿನಿಯೊಳ್ ನೆರೆದು ಪ್ರಭಾಕರಂ
ನಿರುಪಮಸೌಖ್ಯಮಂ ಪಡೆದನಾವನೊ ತೋಷಿಸನಿಷ್ಟಯೋಗದಿಂ ೧೨೬

ಪಿರಿದುವಿಕಾಸಲಕ್ಷ್ಮಿ ಕುಮುದಾಲಯದೊಳ್ ನೆಲಸಿರ್ದು ಚಂದ್ರನೊಳ್
ನೆರೆದಳಿರುಳ್ ಪಗಲ್ ಕಮಳಗೇಹದ ಮುದ್ರೆಯನಂಜದಾಶಯೋ
ದ್ಧುರತರಧೈರ್ಯದಿಂದೊಡೆದು ತಾನದಱೊಳ್ ನೆಲಸಿರ್ದು ಸೂರ್ಯನೊಳ್
ನೆರೆದಳದಾರು ಬಲ್ಲರಬಳಾಜನಕೈತವದೊಂದುವೃತ್ತಿಯಂ ೧೨೭

ಘನಕೋಶಪಾನಮಂ ಕುಮು
ದಿನಿಯೊಳಿರುಳ್ಮಾಡಿ ಪಗಲೊಳಂ ಬೆರಸಿದುದ
ಬ್ಜಿನಿಯೊಳದಱಿಂದಮಾಱಿಡಿ
ಯೆನಿಸಿದುದಳಿದೂಷ್ಯಮಾಗದಾವುದು ಸತ್ಯಂ ೧೨೮

ಹಿಮಕರನಪ್ಪೊಡೆ ಪೋದಂ
ಸಮನಿಸಿದುದು ತೆಱಪಿದೆಂದು ರವಿಕರಮೆ ದಲಂ
ದಮರ್ದಿನಕರಮಲ್ತೆಂದಾ
ಕುಮುದಿನಿ ಮೊಗಮಿಾಯದಂತೆ ಮುಗಿದುದು ಪಿರಿದುಂ ೧೨೯

ಸುರಿಯುತ್ತುಂ ಪ್ರಮದಾಶ್ರುವಂ ಪರಿದುಬಂದೊಲ್ದಪ್ಪಿ ಪಕ್ಕಂಗಳಿಂ
ವರಚಂಚೂಪುಟದಿಂದೆ ಮುಂದಲೆಯ ನೀಳ್ದೊಳ್ಪುಪ್ಪುಳಂ ಕಚ್ಚಿ ತಾ
ವೆರಡುಂ ಚಲ್ಲಮನಾಡಿ ಬಾಕುಳಿಕೆಯಿಂ ಬಾಯ್ಗೂಡಿ ಚೆಲ್ವಾದ ತಾ
ವರೆವೋಕುತ್ತೆಸಳ್ವಾಸಿನೊಳ್ ನೆರೆದುದಾಗಳ್ ಚಕ್ರವಾಕದ್ವಯ ೧೩೦

ವ: ಅದಱಿಂಬಳಿಯಂ

ಬಸದಿಗಳ ಮುಂದೆ ಬಾಜಿಪ
ಪೊಸತೆನಿಸುವ ಪಲವುತೆಱದ ವಾದ್ಯಂಗಳ ರವ
ವಿಸರಂ ಪಸರಿಸಿದುದುಮಾ
ಗಸದೊಳಮದು ತೀವಿ ತೀವಿ ದಳವೇಱುವಿನಂ ೧೩೧

ವ: ಇಂತು ಮೆಲ್ಲಮೆಲ್ಲನೆ ಪ್ರಭೂತಮಾದ ಪ್ರಭಾತಕಾಲದ ಪ್ರಭಾವಂ ಪರೆದು ಪೋಗಲೊಡಂ

ಪಿಡಿದು ಕರಾಗ್ರದಿಂದಮೆ ತೊಡಂಕಿದ ನೇಣ್ಬುದಿಯಂ ವಿಳಾಸಮಂ
ಪಡೆದುಱೆ ನೀಡಿದೊಂಗುವೆಡೆಯೊಳ್ ಮಣಿಕಂಕಣರಾವದಿಂದಮಿ
ಮ್ಮಡಿಸಿರೆ ಮಂತು ಸಂಚಳಿಸುವ ಧ್ವನಿ ಮುತ್ತಿನ ಕರ್ಣಪತ್ರಮುಂ
ಪೊಡೆಯೆ ಕದಂಪನೆಯ್ದೆಮೊಸರಂ ಪೊಸೆದಳ್ ತರಳಾಕ್ಷಿಯಾಕ್ಷಣಂ ೧೩೨

ಖರತೇಜನ ಕರಪೀಡನ
ಭರದಿಂದಂ ತೊಡೆದ ಚಂದ್ರಮಂಡಳದಿಂದಂ
ಸುರಿತಂದಮೃತಂ ಘಟದೊಳ್
ಪಿರಿದುಂ ತುಂಬಿರ್ದ ತೆಱದಿನೆಸೆದುದು ತಕ್ರಂ ೧೩೩

ವ: ಮತ್ತಮಾ ಸಮಯದೊಳ್ ಚಿತ್ತಪ್ರಿಯರ ಸೆಜ್ಜಾಗೃಹದ ಗವಾಕ್ಷವಿವರಾಂತರಾಳದೊಳ್ ಪೊಕ್ಕು

ಉದಯದ ಗಾಳಿ ಬಂದು ಶಯನಸ್ಥವಧೂವರ ಕೋಮಳಾಂಗಮಂ
ಪದುಳಿಸಿ ಮುಟ್ಟಿದತ್ತು ಸುರತಕ್ರಿಯೆಯೊಳ್ ಪಿರಿದಾದ ಘಾಸಿಯಂ ಪ
ಡೆದು ಸಮಂತು ಸೈರಿಸಿದಿರೆಂದಳಿನೀರವದಿಂದೆ ಪೇಳ್ದು ಸಂ
ಮದದೊಳೆ ಬೆನ್ನನೆಯ್ದೆತೊಡೆದಾದರಿಪ ಪ್ರಿಯಮಿತ್ರನೆಂಬಿನಂ ೧೩೪

ಕಾದಲರ ಸುರತಕೇಳೀವಿ
ನೋದದ ಚೋದ್ಯಕ್ಕೆ ಮೆಚ್ಚಿ ತಲೆದೂಗುವವೊಲ್
ಮೇದುರ ಪವನಾಹತಿಯಿಂ
ದಾದಮೆ ಸೊಡರ್ಗುಡಿಗಳೋಳಿ ಚಳಿಸಿದವಾಗಳ್ ೧೩೫

ವ:ಆ ಪೊತ್ತಿನೊಳ್ ಸೇವಾಸಮಯಮಱಿದೋಲೈಸಲೆಂದು ಬಂದ ಪುಣ್ಯ ಪಾಠಕಪ್ರಧಾನ ಸಂದೋಹಂ ಬಾಗಿಲೊಳ್ ನಿಂದು ಭುವನತ್ರಯಕ್ಕಭಿನವಭಾನುವೆನಿಸಿದ ಧರ್ಮನಾಥಂಗೆ ಪ್ರಬೋಧಜನನಿಮಿತ್ತಂ ಭಾನೂದಯವಿಭವಮನಿಂತೆಂದು ಗಂಭೀರ ಮಂದ್ರಧ್ವನಿಯಿಂ ಸಮುದ್ಘೋಷಣಂಗೆಯ್ಯುತ್ತಿರ್ಪುದುಂ

ಎಲೆ ಜಿನರಾಜ ನಿನ್ನ ಪದಪದ್ಮದ ಸೇವನೆಗಾಗಿ ಬಂದು ಬಾ
ಗಿಲೊಳೆಸೆದಿರ್ದು ನಿನ್ನ ಬರವಂ ಸಲೆಪಾರ್ದಪರಂಧ್ರಚೋಳ ಕುಂ

ತಳ ಮರುಮಾಳವಪ್ರಮುಖದೇಶದಧೀಶ್ವರರೆಂದು ಸರ್ವಮಾಂ
ಗಳಿಕಜನಂಗಳಂದುಸಿರ್ದರಾತನ ಸೆಜ್ಜೆಯ ರಾಜಗೇಹದೊಳ್ ೧೩೬

ಆಗಸಮೆಂಬ ನೀಲಮಣಿಭಾಜನದಲ್ಲಿ ದಿನೇಶನೆಂಬ ಚೆ
ಲ್ವಾಗಿ ಸಮುಜ್ಜ್ವಳಂಬಡೆದ ಮಾಣಿಕದಾರತಿಯಂ ನಿವಾಳಿಪು
ದ್ಯೋಗಮೊಳಿರ್ದಳಿಂದ್ರನ ದಿಗಂಗನೆ ಭೂತ್ರಿತಯಾಧಿನಾಥ ನೀ
ನೀಗಳೆ ಬೇಗಮುಪ್ಪವಡಿಸೆಂದುಸಿರ್ದರ್ ಮಿಗೆ ಪುಣ್ಯಪಾಠಕರ್ ೧೩೭

ವ: ಮತ್ತಂ

ಜಗದೀಶ ನಿನ್ನ ತೇಜಂ
ಮಿಗಿಲಾಗೆ ಸಮಸ್ತಲೋಕದೊಳ್ ಗಿರಿದುರ್ಗಮ
ನಗಿದೇಱಿದಂತೆ ಸೂರ್ಯಂ
ಸೊಗಯಿಸಿದಂ ಪೂರ್ವಪರ್ವತಾಧಿತ್ಯಕದೊಳ್ ೧೩೮

ವ: ಅಂತುಮಲ್ಲದೆಯುಂ

ಅವಧಾನ ದೇವ ಪೊಱಮಡು
ಜವದೊಳ್ ಸಜ್ಜಾನಿವಾಸದಿಂದಂ ನೀಂ ಬ
ರ್ಪವಸರದೊಳುಚಿತಮಾದು
ತ್ಸವಮಂಗಳಮಂ ವಿನಿರ್ಮಿಸುವ ಬಗೆಯಿಂದಂ ೧೩೯

ಉದಯಧರಮೆಂಬ ಕಳಶಾ
ಗ್ರದೊಳಿರಿಸಿದ ಪೊಳೆವ ರತ್ನದರ್ಪಣಮೆಂಬಂ
ದದಿನಿರೆ ರವಿಬಿಂಬಮದಂ
ಪದುಳಿಸಿ ಪಿರಿದಿಂದ್ರದಿಕ್ಕುಮಾರಿಕೆಯಿರ್ದಳ್ ೧೪೦

ವ: ಇಂತು

ನೆರೆದು ಸಮಸ್ತಪಾಠಕಜನಂ ಬಿಡದೋದುವ ಸುಪ್ರಭಾತ ಬಂ
ಧುರತೆಯನೆಯ್ದೆ ಸೂಚಿಸುವ ಮಂಗಳಪಾವನಪದ್ಯಗದ್ಯಮೇ
ದುರನಿನದಂಗಳಿಂ ಸಕಳಮಂಗಳಗಾಯಕರೊಲ್ದುಪಾಡುವು
ದ್ಧುರತರಗೀತರಾವಮುಮನಾಲಿಸಿಯೆಚ್ಚರನೆಯ್ದಿದರ್ ಕರಂ ೧೪೧

ಪುಳಕದ ಕೀಳ್ ಸಡಿಲ್ದು ಬಿಗಿದಪ್ಪಿದ ಬಲ್ಪನಡಂಗಿಸಲ್ ತಡಂ
ಗಳಿಸಿದ ಮುಯ್ಯು ತೋಳ್ ತೊಡೆಗಳೆಚ್ಚಱುತುಂ ಶಿಥಿಲಂಗಳಾಗೆ ಮಂ

ಗಳಮನರಾಗಿ ಕಣ್ದೆಱೆದು ಮೆಯ್ಮುರಿದೆಳ್ದರನೂನರತ್ನಮಂ
ಜುಳತರ ಮಂಚತಳ್ಪತಳದಿಂದೆ ವಧೂವರರಾ ಪ್ರಭಾತದೊಳ್ ೧೪೨

ನರಪಂ ಕೆಯ್ಯ್ಕೊಱೆ ಶೃಂಗಾರವತಿಯ ಪೆಗಲೊಳ್ ಬಲ್ಪುಗೆಯ್ದರ್ಧಮೆಳ್ದಾ
ದರದಿಂ ಕಂಠಾಗ್ರಮಂ ತನ್ನೆರಡುರುಭುಜದಿಂದಪ್ಪಿಕೊಂಡೆತ್ತಿ ವಕ್ತ್ರಾಂ
ತರಮಂ ತಾಂ ಚುಂಬಿಸುತ್ತುಂ ಕೆಳಗೆ ಚರಣವಿನ್ಯಾಸಮಂ ಮಾಡಿ ನಿಂದಂ
ವರಚಂದ್ರಂ ಕ್ಷೀರವಾರಾಶಿಯ ಲಹರಿಕೆಯಿಂದೆಳ್ದುನಿಲ್ವಂದದಿಂದಂ ೧೪೩

ವ: ತದನಂತರಂ ಬೆಳ್ಮುಗಿಲ ಕೂಟದೊಳಗಿಂ ಪೊಱಮಡುವ ಕಳಾಧರನೆಂಬಂತೆ ಧರ್ಮನಾಥಮಹಾರಾಜಂ ಸೆಜ್ಜಾಗೃಹದೊಳಗಿಂ ಪೊಱಮಟ್ಟು ಸಕಳಜನಂಗಳ ಕರಕಮಳಂಗಳಂ ಮುಕುಳೀಕರಿಸುತ್ತುಂ ಬಂದು ದಂತಧಾವನ ಸ್ನಾನವಿಧಾನದಿ ವೈಭಾತಿಕ ಕ್ರಿಯಾವ್ಯಾಪಾರಮಂ ತೀರ್ಚಿ ದೇವತಾರ್ಚನಾಯೋಗ್ಯನವ್ಯ ದ್ರವ್ಯಸಂಸೇವ್ಯಂಗಳಪ್ಪ ರಜತ ಮಹಾರಜತಾದಿ ವಿರಚಿತ ಪವಿತ್ರಪಾತ್ರಂಗಳಂ ಪಿಡಿದು ಭವ್ಯಜನಂಗಳಿಕ್ಕೆಲದೊಳಂ ಬರೆ ವಿಚಿತ್ರಚೈತ್ಯಾವಾಸಮಂ ವಾಸವನಕೃತ್ರಿಮಚೈತ್ಯಾ ಲಯಮಂ ಪುಗುವಂತೆ ಪೊಕ್ಕೀರ್ಯಾ ಪಥಶುದ್ಧಿಯಿಂ ಮಾಡಿ ಗರಿಷ್ಠನಿಷ್ಠಾಧಿಷ್ಠಿತಂ ಪಂಚಪರಮೇಷ್ಠಿಸ್ವರೂಪಮನಂತ ರಂಗದೊಳ್ ಪ್ರತಿಷ್ಠೆಗೆಯ್ದು ಕ್ರಿಯಾಪೂರ್ವ ಕಮಭಿವಂದಿಸಿ

ಜಳಗಂಧಾಕ್ಷತೆ ಪುಷ್ಪಾ
ವಳಿ ಚರುದೀಪ ಪ್ರಧೂಪಫಳದಿಂದಾ ಭೂ
ತಳಪತಿ ಪೂಜಿಸಿದಂ ಮಂ
ಗಳಕಾರಣಮಾಗಿ ಭಕ್ತಿಯಿಂ ಜಿನಪತಿಯಂ ೧೪೪

ವ: ಅಂತನುಷ್ಠಾನವೇಳಾಕರಣೀಯಮಾದಷ್ಟವಿಧಾರ್ಚನೆಯಂ ಯಥಾಕ್ರಮದಿ ನರ್ಹದ್ದೇವ ಶ್ರೀಪದದೊಳನುಷ್ಠಿಸಿ ವಿಶಿಷ್ಟಸ್ತೋತ್ರಮುಖರಮುಖನಾಗಿ

ಜಯಜಯ ದೇವದೇವ ಕರುಣಾಂಬುಧಿವರ್ಧನ[ಚಾರು]ಚಂದ್ರ ದು
ರ್ನಯಹರ ನಿನ್ನಸೇವೆಯನೆ ಮಾಳ್ಪುದು ಮೋಕ್ಷಸುಖಾನುಭೂತಿಯಂ
ಬಯಸುವವಂ ಕುದೈವಮನೆ ಪೊರ್ದುವುದಲ್ತುಚಿತಂ ಬುಭುಕ್ಷಿತಂ
ಪ್ರಿಯಮೆನಿಪನ್ನಮಂ ಸವಿವುವಲ್ಲದೆ ಪೇಳ್ ವಿಷಭಕ್ಷಿಯಪ್ಪುದೇ ೧೪೫

ವ: ಎಂದನೇಕಸ್ತವನದಿಂದವನತನಾಗಿ ಕೌತೂಹಳಜಾತಿಗೀತಾತೋದ್ಯನೃತ್ಯ ಮಂಗಳಸಂಗತ ಸಂಗೀತಕ ಪ್ರಚುರದರ್ಶಿತಪ್ರಭಾವಂ ಪ್ರಭಾವಭಾಸುರ ಭಕ್ತಿಪ್ರಪಂಚ ಸಂಚಿತವ ದಾಶ್ಚರ್ಯಸಪರ್ಯಾಸಮೈಶ್ವರ್ಯಂ ನಿತ್ಯನಿರ್ವರ್ತ್ಯಮಾನಚತುರ್ವಿಧದಾನಮಂ ಜಿನಶಾಸನಪ್ರಕಾಶಕರಪ್ಪ ಸಮ್ಯಗ್ದೃಷ್ಟಿಗಳ್ಗಿತ್ತು ಧರ್ಮಕಥಾಪ್ರಸಂಗದಿಂ ಕಿಱಿದುಂ ಪೊತ್ತಂ ಕಳೆದರಮನೆಗೆ ಬಂದು

ಸಗ್ಗದೊಳಗ್ಗಳಂಬಡೆದು ಚಿತ್ರವಿಚಿತ್ರತರಂಗಭಂಗಿಯಿಂ
ದೊಗ್ಗಿ ವಿಲೋಚನಕ್ಕೆ ಸೊಗಸಂ ಬಿಡದೀವತಿದಿವ್ಯವಸ್ತ್ರಸ
ದ್ವರ್ಗಮನುಟ್ಟು ಮೂಜಗದೊಳಚ್ಚರಿಯಪ್ಪಿನಮಾಂತು ಚೆಲ್ವನಾ
ಮಾರ್ಗಸುವರ್ತಿ ಪಾರ್ಥಿವನೊಡರ್ಚಿದನೆಲ್ಲರ ಕಣ್ಗೆ ಹಬ್ಬಮಂ ೧೪೬

ಮಕುಟಂ ಕುಂಡಳಮುದ್ಧಹಾರಮುರುಕೇಯೂರಂ ಕಟೀಸೂತ್ರಕಂ
ಸುಕನತ್ಕಂಕಣಮುಚ್ಚಬಾಹುವಳಯಂ ಮಾಣಿಕ್ಯವನ್ಮುದ್ರಿಕಾ
ನಿಕರಂ ಚೆಲ್ವಿವು ಮುಖ್ಯಮಾದ ಸಕಳಾಳಂಕಾರಸಾರಂಗಳಿಂ
ದೆ ಕರಂ ಭೂಷಿತನಾಗಿ ಕಣ್ಗೆ ಸುಖಮಿತ್ತಂ ಧರ್ಮನಾಥಂ ನೃಪಂ ೧೪೭

ವ: ಇಂತು ದಿವ್ಯದೇವಾಂಗವಸ್ತ್ರಮನುಟ್ಟು ರಮಣೀಯ ಮಣಿಮಯ ಭೂಷಣಕಳಾಪಮಂ ತೊಟ್ಟು ಧರ್ಮನಾಥಮಹಾರಾಜನುಂ ಶೃಂಗಾರವತೀ ಮಹಾದೇವಿಯುಮಿಷ್ಟವಿಷಯ ಭೋಗೋಪಭೋಗಂಗಳನನುಭವಿಸುತ್ತುಮನ್ಯೋನ್ಯಾಸಕ್ತ ಚಿತ್ತರಾಗಿ ಲೀಲಾವಿನೋದಂಗಳಿಂದನೇಕದಿನಂಗಳಂ ನಿಮಿಷಮಾತ್ರಂಗಳಾಗಿ ಕಳಿಯುತ್ತು ಮಿರೆಯಿರೆ

ಸೊಗಯಿಪ ರೂಪುರೇಖೆ ಗುಣಮೆಂಬಿವು ತನ್ನೊಳಮಚ್ಚನೊತ್ತಿದಂ
ತಗಲದೆ ತೋಱಲಾ ನೃಪತಿಗಂ ಸತಿಗಂ ವರವರ್ಮನೆಂಬ ಪೆ
ರ್ಮಗನೊಗೆದಂ ಸಮಸ್ತಧರಣೀತಳರಕ್ಷಣದಕ್ಷಣಪ್ಪವಂ
ಮಿಗುವ ಹಿಮಾಂಶುಗಂ ಕಳೆಗಮಂದಮೃತಂ ಸಲೆಪುಟ್ಟುವಂದದಿಂ ೧೪೮

ಕಳೆಗಳನೆಯ್ದೆ ಕಲ್ತು ಯುವರಾಜಪದಸ್ಥಿತನಪ್ಪ ಪುತ್ರನುಂ
ನಳಿನದಳಾಕ್ಷಿಯಪ್ಪ ಸತಿಯುಂ ಬೆರಸಂದಧಿರಾಜನೊಪ್ಪಮಂ
ತಳೆದು ನಿಮಿರ್ಚಿದಂ ವಿಭವಮಂ ಸಿರಿ ಮುಪ್ಪುರಿಗೊಂಡುದೆಂಬಿನಂ
ಸಲೆನೆಲೆಯಾಗಿ ತೋಱೆ ಮೆಱೆದಂ ಜಗದೊಳ್ ಜಗದೇಕಬಾಂಧವಂ ೧೪೯

ಪರನರಪರಭಿಪ್ರಾಯಮ
ನುರುಚರರಿಲ್ಲದೊಡಮಱಿದು ನೆಗಳ್ವುದಮಾತಂ
ಗಿರದೆ ಬಿನ್ನೈಸಿದೊಡಮಾ
ಪರಿವಾರದ ಮನಮನಱಿದು ಕೊಡುವುದು ಸಹಜಂ ೧೫೦

ವ: ಆಗಳ್

ಪರಮಕಲ್ಯಾಣನಿಧಿಯೆನಿ
ಪರುಹಂ ರಾಜ್ಯಾರ್ಹನಾದನೆಂದವನಿತಳಂ
ಪಿರಿದಾದ ಬೆಳೆಯ ಚೆಲ್ವಂ
ಧರಿಸಿ ನಿಮಿರ್ಚಿತ್ತು ತನ್ನ ವಿಭವದ ಪೆಂಪಂ ೧೫೧

ಜಗಮೆಲ್ಲಂ ಕೂಡೆ ಕೊಂಡಾಡುವಿನಮೊಸೆದು ಸಜ್ಜೈನಧರ್ಮಪ್ರಭಾವಂ
ಮಿಗಿಲಾಗಲ್ ಮಾಡಿದಂ ಭಾಸುರಚರಿತನಿಧಾನಂ ವಿಪಶ್ಚಿತ್ಪ್ರಧಾನಂ
ದ್ವಿಗುಣೀಭೂತಪ್ರಭಂ ಬಾಹುಬಲಿಸುಕವಿರಾಜಂ ಜಗತ್ಕಲ್ಪಭೂಜಂ
ಸ್ಥಗಿತೈಕಾಂತಂ ಪ್ರವಾದ್ಯಾವನಸರಸಿರುಹಂ ಚಾತುರೀಜನ್ಮಗೇಹಂ ೧೫೨

ಗದ್ಯ: ಇದು ಸಕಳಭುವನಜನವಿನೂಯಮಾನ ಮಹಿಮಾಮಾನನೀಯ ಪರಮಜಿನ ಸಮಯ ಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿದೇವಪ್ರಸಾದ ಸಂಪಾದಪಾದನಿಧಾನ ದೀಪವರ್ತಿಯುಭಯಭಾಷಾಕವಿಚಕ್ರವರ್ತಿ ಬಾಹುಬಲಿಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಚಂದ್ರಿಕಾವಿಹರಣಪರಿವ್ಯಾವರ್ಣನಂ ಪಂಚದಶಾಶ್ವಾಸಂ.

ಷೋಡಶಾಶ್ವಾಸಂ

ಶ್ರೀಪತಿಜಸಮಂ ಸಕಳಾ
ಶಾಪದಮೊಳನೇಕ ಧನಮನದಿ ದಾನದೊಳಂ
ರೂಪುಗುಣಂ ಶೀಲದೊಳಾ
ರೋಪಿಸಿದಂ ಸರಸಚತುರಕಪಿಕುಳತಿಳಕಂ ೧

ವ: ಇಂತು ಚತುಸ್ಸಮುದ್ರಮುದ್ರಿತಮಾದ ನಿರವಶೇಷಧರಣೀವಳಯಮ ನವನೀಪಾಳ ಶಿರೋಮಣಿ ದುಷ್ಟನಿಗ್ರಹಶಿಷ್ಟಪ್ರತಿಪಾಳನಾಪೂರ್ವಕಮಾಗಿ ಪರಮ ಪ್ರಮೋದದಿಂ ಪರಿರಕ್ಷಣಂಗೆಯ್ಯುತ್ತುಮಿರ್ಪಲ್ಲಿ

ಒಡೆಯಂ ಸಾಮ್ರಾಜ್ಯರಾಜ್ಯಕ್ಕೊಡೆಯನೆಡರಣಂ ಪೊರ್ದಿದೆಂದುರ್ಬಿದತ್ತಾ
ಪಡೆ ಪೆಂಡಿರ್ ನಮ್ಮ ಗಂಡಂ ವಿಮಳಗುಣಕರಂಡಂ ದಲೆಂದಾಂತರೊಳ್ಪಂ
ಬಿಡದಾದಂ ಘೋತ್ರಯಿಾಬಾಂಧವನೆಮಗೆ ಕರಂ ಬಂಧುವೆಂದೆಯ್ದೆ ಹರ್ಷಂ
ಬಡೆದಿರ್ದರ್ ಬಾಂಧವರ್ ಪಾಳಿಸುವೆಡೆಯೊಳಿಳಾಲೋಕಮಂ ಧರ್ಮನಾಥಂ ೨

ಪೃಥುಳಗುಣನರಸುಗೆಯ್ಯಲ್
ಪೃಥಿವೀಜನಮೆಲ್ಲಮಾದುದತಿಶಯದಿಂ ಸ
ತ್ಪಥವರ್ತಿ ಯಥಾರಾಜಾ
ತಥಾಪ್ರಜಾಯೆಂಬ ನೀತಿಯಂ ಮಿಾಱದವೋಲ್ ೩

ಆತನ ತೇಜದೇಳ್ಗೆ ದೆಸೆವೆಂಡಿರ ತಂಡದ ಸತ್ಕುಚಾಗ್ರದೊಳ್
ನೂತನಕುಂಕುಮಂಬೊಲೆಸೆದತ್ತು ದಲಾತನ ಕಾಂತಕೀರ್ತಿ ವಿ
ಸ್ಫಾತಿಯುಮೆಯ್ದೆ ದಿಕ್ಪತಿಗಳಿಕ್ಕಿದ ಮುತ್ತಿನ ಹಾರಮೆಂಬಿನಂ
ಸಾತಿಶಯಪ್ರವರ್ತನಮುಮಾದುದು ಧರ್ಮನ ಪೆರ್ಮೆಯಗ್ಗಳಂ ೪

ನೆಲನೆಲ್ಲಂ ತೆಱಪಿಲ್ಲದಾಯ್ತು ನರಪಾಳಂ ಮಾಡಿಸುತ್ತಿರ್ದ ಮಂ
ಗಳಚೈತ್ಯಾಲಯಸಂಚಯಕ್ಕೆ ಘನಪಾತ್ರವ್ರಾತಮೆಲ್ಲಂ ಮಹೀ

ತಳದೊಳ್ ನೋೞ್ಪಡಮೆಯ್ದದಾಯ್ತು ನಲವಿಂದಂ ಮಾೞ್ಪ ದಾನಕ್ಕೆ ದಿ
ಕ್ಕುಲಮೆಲ್ಲಂ ಪವಣೆಲ್ಲದಾಯ್ತು ಬಹುಲಾಸ್ಫೂರ್ತಿಯೊಂದೇೞ್ಗೆಗಂ ೫

ವ: ಇಂತು ಕನತ್ಕರ್ಪೂರಧಾರಾವರ್ಷಂ ಹರ್ಷೋತ್ಕರ್ಷತೆಗಾಲಂಬನ ಮಾದಭಿನವವಿಭವಪ್ರಭಾವದೊಳೊಂದಿ

ಅರವಿಂದಂ ಜಲದಲ್ಲಿ ಪುಟ್ಟಿ ಜಲಮಂ ತಾಂ ಮುಟ್ಟದಿರ್ಪಂದದಿಂ
ದರಸಂ ರಾಜ್ಯಸುಖಾನುಭೋಗಪರನಾಗಿರ್ದುಂ ಮನಂಮುಟ್ಟಿದಾ
ದರಮಂ ಮಾಡದೆ ಧರ್ಮಮುದ್ಭವಿಸುವನ್ನಂ ನ್ಯಾಯದಿಂದಾ ಮಹೀ
ವರನಾಳ್ದಂ ಬಿಡದಯ್ದುವಲಕ್ಕೆ ಬರಿಸಂ ಪ್ರಾಜ್ಯಾದಿಸಾಮ್ರಾಜ್ಯಮಂ ೬

ದಶವಿಧಭೋಗಂಗಳನಂ
ದೊಸೆದನುಭವಿಸುತ್ತುಮಿರ್ದನಾ ನರನಾಥಂ
ಪೊಸತೆನೆ ಸಾಮ್ರಾಜ್ಯದೊಳಂ
ವಿಸರುಹದೊತ್ತಣೆದು ನಲಿವ ಕಳಹಂಸದ ವೋಲ್ ೭

ವ: ಅಂತು ಸದ್ಧರ್ಮನಾಥನಪ್ಪ ತದ್ಧರ್ಮನಾಥಮಹಾರಾಜಂ ರಾಜ್ಯರಕ್ಷಣಂ ಗೆಯ್ವುತ್ತುಮಿರ್ದೊಂದುದಿವಸಂ ಥಳಥಳಿಪ ಕುಳಿಶದಳಕುಳಕೀರ್ಣಿತಪ್ರವಾಳಕಪರಿ ಮಂಡಿತವರ್ಯವೈಡೂರ್ಯಸ್ತಂಭಸಂಭೃತಸಮುತ್ತುಂಗರಂಗಮಂಡಪರಮಣೀಯಮುಂ ನವೀನ ನಾನಾವಿನೋದವಿಚಿತ್ರಿತಭಾವರಸಪ್ರಪಂಚಪಾಂಚಾಳಿಕಾಸಂಚಯಸಮಂಚಿತ ಕಾಂಚನಭಿತ್ತಿವಿಸ್ತೃತಮುಂ ವಿಶಾಳವಳಭಿವಳಯಕೀಲಿತ ನೀಲಮಣಿಮಯವಂದನಮಾಳಿ ಜಾತಸಂಭಿನ್ನನಿರ್ಮುಕ್ತಮುಕ್ತಾಫಳಲಂ[ಬು]ಷಭೂಷಣವಿಶೇಷ್ಯಮಾಣಮಂಗಳಸ್ಥಾನ ವಿಳಸಿತಕಳಮಾಕ್ಷತಪುಂಜರಂಜನಾಯಮಾನ ನಕ್ಷತ್ರಮಾಳಿಕಾಸಂಭೂಷ್ಯಮಾಣ ಪುಷ್ಯ ರಾಗಮಾಣಿಕ್ಯಕಳಶಕಳಾಪಚೂಳಿಕಾಭಾಗಚೋಚುಂಬ್ಯಮಾನ ಭಾನುಬಿಂಬಾನನವಿಳಾಸ ಮುಮಾದಸರ್ವಾವಸರಸಮಯಮೆನಿಸುವ ಸಭಾಲಕ್ಷ್ಮೀಪ್ರಾಸಾದಭವನಮನೆಯ್ದಿವಂ ದೊಳಗಂಪೊಕ್ಕು

ಸ್ಥಿತನಾನಾಸಾಮಾನ್ಯರಾಜನ್ಯಕ ಮಕುಟತಟೀರತ್ನರೋಚೀಪ್ರವೀಚೀ
ಸ್ಫುತವತ್ತದ್ಗೇಹ ರತ್ನಾಕರದ ನಡುವೆ ಕಣ್ಗೊಂಡ ಪೋತಂ ದಲೆಂಬಂ
ತತಿಶೋಭಾಭಾರಮಂ ತಾಳ್ದಿದ ಮಿಸುನಿಯ ಸಿಂಹಾಸನಾಸೀನನಾದಂ
ಕೃತಕೃತ್ಯಂ ಧರ್ಮನಾಥಂ ಸಕಳಮಣಿಲಸದ್ದಿವ್ಯಭಾಷಾಸನಾಥಂ ೮

ಇದೆ ಪರಮಸೀಮೆಯೆನ್ನೊದ
ವಿದ ಮೆಯ್ಯೊಡವಿಂಗಮೆಂದು ಸೂಚಿಪ ತೇಜದಿಂ
ಪದೆದುಟ್ಟು ತೊಟ್ಟು ಮಾನವ
ಮದನಂ ನೋೞ್ಪರ್ಗೆ ಪುಟ್ಟಿಸಿದನಚ್ಚರಿಯಂ ೯

ವ: ಅಂತು ಜಾಣೊಡನೆ ಜವ್ವನವೇಱಿದ ರೂಪು ರೂಪಿಸಲರಿದೆನಿಸಿ ಮೆಱೆಯೆ ಕಡುನೀಱೆ ನೊಡ್ಡೋಲಗಂಗೊಟ್ಟು ಕುಳ್ಳಿರ್ದಾಗಳ್

ಇಕ್ಕೆಲದಲ್ಲಿ ಚಾಮರವನಿಕ್ಕುವ ವಾರವಿಳಾಸಿನೀಜನಂ
ಮಿಕ್ಕಭಿರಂಜಿಸಿತ್ತು ಪೊಸಕಂದಳಿರ್ದೊಂಗಲೊಳಿರ್ದು ಹಂಸೆಗಳ್
ಸೊಕ್ಕಿ ವಿನೋದದಿಂ ಚಳಿಸಲೊಪ್ಪುವ ಕಾಮನ ಕಲ್ಪವಲ್ಲಿಯಿಂ
ತಕ್ಕುಮಿದೆಂಬಿನಂ ಕುಸುಮಮಂಜರಿ ರಂಜಿತಮಾತ್ತವಿಭ್ರಮಂ ೧೦

ವ: ಮತ್ತಮುಕ್ಕುವ ಜವ್ವನದ ಸೊಕ್ಕಿಂ ನೋಳ್ಪ ಜಾಣರ ಮನಮಂ ಜಕ್ಕುಲಿಸುತ್ತು ಮಿರ್ದೋಲಗದ ಸೂಳೆಯರಾತನಂ ಬಳಸಿ ಕುಳ್ಳಿರ್ದು

ತೊಡಿಗೆಯ ತೋರ ಕೆಂಬರಲ ನುಣ್ಗದಿರಂ ಬಿಸಿಲಂ ಪೊದಳ್ದ ಸೋ
ರ್ಮುಡಿಗಳ ಕಪ್ಪಿನಿಂ ನಿಮಿರ್ವ ಕಳ್ತಲೆಯಂ ಕಡೆಗಣ್ಣ ಕಾಂತಿಯಿಂ
ಕುಡಿವೆಳುದಿಂಗಳಂ ವಿರಚಿಸುತ್ತುಮನಂಗಮಹೇಂದ್ರಜಾಲಮಂ
ಪಡೆದು ಕರಂ ಮರುಳ್ಗೊಳಿಸಿದತ್ತು ನಿರೀಕ್ಷಿಪರಂ ವಧೂಜನಂ ೧೧

ವ: ಅನಂತರಂ

ಬಗೆದೆರಡುಂ ಕೆಲಂಬಿಡಿದನುಕ್ರಮದಿಂದಮೆ ಮಾಲೆಗೊಂಡು ಗ
ದ್ದಿಗೆಗಳೊಳಿರ್ದುದಗ್ಗಳದ ರಾಯರನೇಕಕುಮಾರಸಂಕುಳಂ
ಸೊಗಯಿಪ ತತ್ಸಭಾಸದನಲಕ್ಷ್ಮಿಯ ರನ್ನದ ಹಾರದಂದದಿಂ
ಜಗದೊಡೆಯಂ ವಿರಾಜಿಸಿದನೊಪ್ಪುವ ನಾಯಕರತ್ನಮೆಂಬಿನಂ ೧೨

ವ: ಇಂತಾ ಭುವನತ್ರಯಪ್ರಭುವಿನುಭಯಪಾರ್ಶ್ವದೊಳ್ ಪ್ರತಾಪರಾಜನುಂ ವರಧರ್ಮ ಕುಮಾರನುಂ ಮೊದಲಾಗಿ ಮೂರ್ಧಾಭಿಷಿಕ್ತಮಕುಟವರ್ಧನ ಮಹಾಸಾಮಂತ ಮಂತ್ರಿಮಹತ್ತರಾದಿಗಳ್ ಯಥೋಚಿತಾಸನಂಗಳೊಳಿರೆ

ಮಿಗುವ ಪಂಚಾಂಗಮಂತ್ರಮೆ
ಸೊಗಯಿಪ ತನುವಡೆದು ಮಾನ್ಯತೆಯನಾಂತವೊಲಾ
ಜಗದೊಡೆಯನ ಮುಂದಿರ್ದ
ತ್ರಿಗಣಿತಮತಿಯನ್ವಿತಪ್ರಧಾನರ ಮೊತ್ತಂ ೧೩

ಒಂದೇ ಕಂಟದ ಮೊನೆಯೊಳ್
ಸಂದುದು ನಿಂದುದುಮನಾಯಮಂ ಬೀಯಮುಮಂ
ಕುಂದದೆ ನಿರ್ಣಯಿಸುವ ಬ
ಲ್ಪಿಂದೆಸೆದರ್ ನೃಪನ ಬಳಸಿ ಕರಣಾಗ್ರಣಿಗಳ್ ೧೪

ಕವಿ ಗಮಕಿ ವಾದಿ ವಾಗ್ಮಿಗ
ಳವನಿಪನಂ ಬಳಸಿ ಸುತ್ತಲುಂ ಕುಳ್ಳಿರ್ದರ್
ವಿವಿಧನಿರವದ್ಯವಿದ್ಯಾ
ನಿವಹಂ ನರಮೂರ್ತಿವೆತ್ತುದೆಂಬಂತೆವೊಲಂ ೧೫

ಬೀಣೆಯನೆಯ್ದೆ ಮೇಳವಿಸಿ ತಂತಿಯನೊಯ್ಯನೆ ನೀವಿ ನಾದಮಂ
ಕಾಣಿಸಿ ಪೊಯ್ದುನೋಡಿ ಪದೆದಂಡಿಗೆಯಂ ತಿರುವಿಟ್ಟು ತುಂಬಿಯಂ
ಮಾಣದೆ ಠಾಯೆಗಳ್ ಪದದೊಳೋಯರಮಾಗಿರೆ ಕೂಡಿಪಾಡುತುಂ
ಗಾಣರ ಮೊತ್ತಮಿರ್ದುದು ನೃಪಾಳಕನೋಲಗದಲ್ಲಿ ಸುತ್ತಲುಂ ೧೬

ವ: ಮತ್ತಮೇಕೈಕಪ್ರದೇಶದೊಳ್

ನಗೆಕಾಱರಾಟಕಾಱರ್
ಬಗೆಕಾಱರ್ ವಾಸಕಾಱರೊಳ್ನುಡಿಕಾಱರ್
ಮಿಗುವಸಿಕಾಱರ್ ಪತಿಯೋ
ಲಗದೊಳ್ ಕುಳ್ಳಿರ್ದು ಕಣ್ಗೆ ಪಡೆದರ್ ಸೊಗಸಂ ೧೭

ವ: ಮತ್ತಂ ಮೂವತ್ತೆರಡಾಯುಧದಭ್ಯಾಸದಿಂ ಬೀಸರಂಬೋಗದೆ ಕಂಡುದೆ ಕಳನಾಗಿ ತೆಗೆದಿಱಿವ ಜೋಳಿಗೊಂಡಂಕಮಾ ಪ್ರಸ್ತಾವದೊಳ್

ಕಲಿತನದಿಂದೆ ಕಂಡರಿಸಿದಂತೆ ವಿಶೇಷಿತ ಗಂಡಗರ್ವದಿಂ
ಸಲೆ ಕಡೆದಂತೆ ಕೂರ್ಪಸೆದು ಮಾಡಿಸುತುಂ ಬಿರಿದಾಳಿ[ಯಂ] ಮನಂ
ಗೊಳೆ ನಡೆತಂದು ಮಾಸವಳದಂಕಮದಾಸುರಮಾಗಿ ಭಾಷೆಯಂ
ಗಳಹುತುಮಿರ್ದುದಾ ನರಪನೋಲಗದಲ್ಲಿ ವಿಭೂಷಣಾಂಚಿತಂ ೧೮

ವ: ಅದಲ್ಲದೆಯುಂ ಪೊಸಪೊಸತಾದ ಮಲ್ಲಶ್ರಮದಿನುಲ್ಲಾಸಂಬಡೆದು ಸೊಲ್ಲಿಸದೆ ಮಲ್ಲನಂ ನಿಲ್ಲದೆ ಕೊಂದು ಗೆಲ್ಲಂಗೊಳ್ವೆನೆಂಬ ಪೂಣ್ಕೆಯಂ ಮನದೊಳ್ ತೊಡಂಕೆಗೊಳಿಸಿ ಬಲ್ಪಿನ ಬಾಳ್ಕೆಯಿಂ ಬಣ್ಣವಿಟ್ಟಂತೆ ತಿಣ್ಣಮಾದೊಡ್ಡುಂಗಾಡಿಯು ಮೆಡ್ಡಮಾಗೆ ಚಲ್ಲಣಂ ಬಿಗಿದುಟ್ಟು ಕುಂಕುಮದ ಪಂಕಮಂ ಮುಯ್ವಿನೊಳಂಕೆಗೆಯ್ದು ಭೂರಿಸಿದ ಗಂಧಸಾರದಿನಂದಂಬಡೆದ ಭೂರಿಭುಜಾದಂಡಂ ಸೌಂದರಸಿಂಧೂರರಾಗ ಪರಿರಂಜಿತ ಕುಂಭಸ್ಥಳದೊಳೊಂದಿದ್ಯೆ ರಾವತದ ಶುಂಡಾಳದಂಡದೊಡನೆ ಪುರುಡಿಸು ವಂತೆ ಕಡುಪನೊಳಗೊಂಡು ಬೆಡಂಗುವಡೆಯೆ ಜೆಟ್ಟಿಗಳೆಲ್ಲಂ ನೆರೆದುಬಂದು

ಬಿಸಿನೆತ್ತರ್ ಪೊಱಿಸೂಸುವಂತೊಡನೆ ಮೂಗುಂ ಬಾಯುಮಂ ಮುಚ್ಚೆ ಪ
ಟ್ಟಿಸದಿಂದಂ ಪ್ರತಿಮಲ್ಲನಂ ಕೆಡಹುವೆಂ ಸಂಸ್ಥಾನದೊಳ್ ಬಲ್ಪುದೋ

ಱಿಸಲಾನಾಳ್ವುದೆ ಕತ್ತರಂ ಕರವಡಂ ಸೀವಟ್ಟಣಂ ಧೊಕ್ಕರಂ
ಪಸರಂ ಸಂದಣಿವಟ್ಟಿ ಪೊಟ್ಟು ಮುಹಡಂ ಚೌವಟ್ಟಿ ಪಿಟ್ಟಾಳಸಂ ೧೯

ವ: ಎಂದು ಮಲ್ಲವಾತುಮಂ ನುಡಿದು ಪೊಡವಟ್ಟು ಕುಳ್ಳಿರ್ದುಮನಂತರ ಮಯ್ವಣ್ಣದ
ರನ್ನದಿಂ ಚೆನ್ನಂಬಡೆದ ಪೊನ್ನ ಹೊರಜೆಯಿಂ ಹತ್ತಿಸಿ ಬಿಗಿಯಲದಱ ಬೆರಕೆವೆಳಗಿಂ
ಥಳಥಳಿಸಿ ಪೊಳೆವಂಕದಾನೆ ಸುರಧನುವಿನ ಬಳಸುವೆರಸಿದ ಕಾರ್ಮುಗಿಲೊಡ್ಡು
ಕಾಲೂಱಿ ನಿಂದಿರ್ದುದೆಂಬಂತೆ ಬಿಂಕಂಬೆತ್ತು ಚೆಂದುರದ ರಂಚೆಯಿನಂದಮಾದ
ಕುಂಭಸ್ಥಳದೊಳ್ ಮಲಂಗಿದ ಕೂರಂಕುಸಂ ನೆಮ್ಮಿರ್ದ ಕೆಮ್ಮುಗಿಲ ಮೇಲೆ
ಮೂಡಿದೆಳವೆಱೆಯಂತೆ ಚೆಲ್ವೆಱ ತೋಱ ಮುಂದೆ ಬಾಜಿಸು ವಾನೆವಱೆಯ ದನಿಯಂ
ಪಿಂದೆ ಝಣಝಣೆಂಬ ಬಿರುದಿನ ತೊಡರ ನಿಗಡದೊಳ್ ತೊಡಂಕೆ ಬಿಡದೆಳಲ್ವ
ಬಾವುಲಿಗಳ ಬಲ್ಲುಲಿಯುಮನಾಲಿಸುತ್ತುಮುಬ್ಬರಿಸುವ ಸೊಕ್ಕಿನಳುರ್ಕೆಯಿನಿಕ್ಕಿಲಕ್ಕಮವ್ವಳಿಸೆ
ನೂಂಕುವಾನೆಕಾಜರ ಬಡಿವ ಕೊಡತಿಕಾಜಿರ ಮೊತ್ತಮನೊತ್ತಮಿಸುತ್ತುಂ ಬಂದು
ತವಂಗಮನಳ್ಕಾಡುಪಿನಂ ನಿಂದು ಮೇಲಿದ್ದ ಮಾವಂತಿಗನಾನೆವಾತಿನ ಸನ್ನೆಯಿಂದೊಡೆ
ಯಂಗೆ ಪೊಡೆವಟ್ಟು

ಬೀರದೊಳಾನೆ ಬಲ್ಲುವಡೆದು ಪ್ರತಿದಂತಿಯ ದಂತಮೂಲಮಂ
ಬೇರೊಡಗೀಳ್ವ ಸಾಹಸದೊಳಾನೆ ಕದರ್ಥಿತವೈರಿಸೈನ್ಯಸಂ
ಹಾರದೊಳಾನೆ ಮತ್ತನಗೆ ಮಾರ್ಮಲೆವಾನೆಗಳಿಲ್ಲಮೆಂದು ಸಂ
ಚಾರಿಸುವಂತಿರಾನೆ ಘರಿಕೆಯ್ಯನೆ ತೂಗುತುಮಿರ್ದುದಾಕ್ಷಣಂ ೨೦

ವ: ಅಲ್ಲಿಂಬಳಿಯಂ ಪಲ್ಲಣಿಸಿ ಬಂದ ವಾನಾಯುಜ ಪಾರಸಿಕ ಕಾಂಭೋಜ ಬಾಹ್ಲೀಕಮೆಂಬ
ನಾಲ್ಕುಜಾತಿಯೊಳ್ ಪುಟ್ಟಿದ ಸಮಾಸ್ಕಂದಿತ ರೇಚಿತ ಧೌರಿತ ವಲ್ಗಿತ ಪ್ಲುತಮೆಂಬೈದುಂತೆ
ಱದ ನಡೆಯಿಂ ಬೆಡಂಗುವಡೆದ ಪಟ್ಟದ ವಾರುವವರ್ಗಂ ರಥದಂತೆ ಮದಕಳವಡುವ
ಕೂಡಿದ ಕಡುನಲ್ಲಳಂತೆ ತೊಡೆಸೋಂಕಿಂಗೊಡಂಬಡುವ ಕೋಗಿಲೆಯಂತೆ ಸ್ವರಭೇದ
ದೊಳ್ ಸುಸರಮೆನಿಪ ಜೋಡೆವೆಂಡತಿಯಂತೆ ಕೈಸನ್ನೆಯಱಿವ ರಾಜಹಂಸನಂತೆ ಮಾನಸ
ವಱಿದು ವರ್ತಿಸುವ ಶೀಲದಿನುಲ್ಲಾಸಂಬಡೆದು ಪರಿಪರಿಯ ಭ್ಯಾಸದ ಬಿನ್ನಣಂ ಚೆನ್ನಂ
ಮೆಱೆವಿನಂನೀಡುಮೆಟ್ಟಿ ಭೂರಿಚಮತ್ಕಾರದಿನೋಡಿಯೋಡಿ ತಮ್ಮಯ ಸುಶಿಕ್ಷಣ
ಮನಿರ್ಮಡಿಯಾಗಿ ಪ್ರಕಟೀಕರಿಸುತ್ತುಮಿಪ್ಪೆಡೆಯೊಳ್ ಚತುರತುರಗ ವಾಹಕರೆಲ್ಲಂ ಕೈಯ
ಬೆರಳ್ಗಳನುದ್ದುಮೆತ್ತಿ ಸಂಚಳಿಸುತ್ತುಂ ಲೇಸುಲೇಸೆಂಬ ಕೊಂಡಾಟದೊಳಾಸಕ್ತರ್ ಮೆಚ್ಚಿಮೆಚ್ಚಿ
ತಲೆದೂಕಮನೊಡರ್ಚುವಿನಮೇಱ ತೋಱಸುವ ರಾಯರಾವುತ್ತರನು ಮಾನಕ್ಕನುಕೂಲ
ಮಾಗಿ ಬಂದು ಲಳಿಲುಳಿಯ ಮೇಲೆ ಹೋಹೋಯೆಂದು ಮೆಲ್ಲಮೆಲ್ಲನೆ ನಿಲಿಸಿ

ಓಜೆಯ ಕೇಣಮುಂ ಮನದ ಸಾಹಸಮುಂ ತೊಲೆಯಲ್ಲಿ ತೂಗಿ ಸಂ
ಯೋಜಿಸಿದಂತೆ ಸಕ್ಕಸಮನಾಗಿರೆ ಗಾಳಿಗೆ ಪಕ್ಕಮೂಡಿದಂ

ತೀ ಜಗದಲ್ಲಿಯೋಡುವ ತುರಂಗಮಪುಂಗವದೊಂದು ಚೆಲ್ವುಮಂ
ರಾಜಮನೋಜ ನೋಡೆನುತೆ ವಾಹಕರಾವಳಿ ತಾಳ್ದುದೊಪ್ಪಮಂ ೨೧

ವ: ಇಂತು ಸಕಳಸಾಮ್ರಾಜ್ಯಲೀಲಾವಿಭವಕ್ಕಿದುವೆ ಪರಮಸೀಮೆಯೆಂಬಂತಿ ರೊಡ್ಡೋಲಗವಡ್ಡಪರಪೆಡ್ಡಮಾಗಿರ್ದುದಾ ಪ್ರಸ್ತಾವದೊಳಲ್ಲಲ್ಲಿನಿಂದುಘೇಯುಘೇ ಬಾಗಬೊಲ್ಲಾಯೆಂದು ಗೋಸನೆಯನೆಸಗುತ್ತುಂ ಪುಷ್ಪಾಂಜಳಿಯಂ ಕೊಡುವ ಗೋಸನೆಕಾಜಿರ ಬಿನ್ನಪಂಗೆಯ್ವರಸುಗಳ ಬೇಡುವ ವಂದಿಗಳ ಪೊಗಳ್ವ ಭಟ್ಟರ ಗೊಟ್ಟಿಯ ಕೋಳಾಹಳಮಂ ಕಟ್ಟಿಗೆಕಾಜಿರ್ ಚಪ್ಪರಿಸಿ ನಿಲಿಸುತ್ತುಮಿರ್ಪೆಡೆಯೊಳ್

ಪೊಸತನಿಗಂಪು ಪೊಂಪುಳಿಸಿ ಪೊಂಪಿನ ಸಂಪದಮುಬ್ಬಿಕೊಬ್ಬಿ ಪೆಂ
ಪಸದಳಮಾಗೆಯೋಲಗಮದಾಯ್ತು ವಸಂತವನಂ ದಲೆಂಬಿನಂ
ಪಸರಿಸಿದತ್ತು ಕೋಕಿಳನಿನಾದದವೋಲುಅಬ್ಬೆಸ ಜಾವುರೇ
ಖುಸುರುಗಲಾಸೆ ಹೋ ಹಳು ಹಳೆಂಬ ಮಹಾಪ್ರತಿಹಾರಕಸ್ವನಂ ೨೨

ವ: ಆ ಸಮಯದೊಳ್

ಅಭಿನವತತ್ವಭಾವಿಭವಶೋಭೆಯ ಸಂಭ್ರಮಮಂ ನಿರೀಕ್ಷಿಸಲ್
ಪ್ರಭುಕರುಣಾವಲೋಕನಸುಚಂದ್ರಿಕೆ ರಂಜಿಸಲೆತ್ತಲತ್ತ ಭೂ
ವಿಭುಗಳ ಕಂಕಣಾಂಕಿತ ಕರಾಂಬುರುಹಂ ಮುಗಿದತ್ತು ಕೂಡೆ ಮ
ತ್ತಭವನೆ ಭಾಪು ಭಾಪು ಮಝು ಭಾಪುರೆ ಭಾಪೆನುತಿರ್ದರೆಲ್ಲರುಂ ೨೩

ಪೊಳೆವ ಚರಮಾಂಗನಂಗೋ
ಜ್ವಳಕಾಂತಿಯೊಳೆಯ್ದೆ ನೋಟಕರ ನಗೆಗಣ್ಗಳ್
ಸ್ಥಳಪದ್ಮಂಗಳ ಬಳಗಂ
ಬಳಸಿದ ಹೇಮಾದ್ರಿಯಂತೆ ಚೆಲ್ವಂ ತಳೆದಂ ೨೪

ವ: ಇಂತು ದೇವಾಧಿದೇವಂ ಬಹಳಗೊಂದಳಾಸ್ಥಾನದೊಳೋಲಗಂಗೊಟ್ಟು ಲೀಲೆಯಿಂ ನಾಲ್ದೆಸೆಯಂ ನೋಡುತ್ತುಮಿರ್ಪನ್ನೆಗಂ

ಪಲವುಂಕಾಲದ ಗಗನ
ಸ್ಥಳಿ ಕಡುಹಳದಾಗಿ ಜೀರ್ಣತೆಯನೆಯ್ದಿ ಮಹಾ
ಬಿಲನಾಗಿ ಸೀಳ್ದ ತೆಱದಿಂ
ದೊಳಕೊಂಡುದಗುರ್ವನಾಗಸದ ನಡುಭಾಗಂ ೨೫

ವ: ಆ ಪೊತ್ತಿನೊಳ್

ಪೊಸಕೆಂದಾವರೆವೂಗಳಿಂದಲರ್ದವೊಲ್ ಚೆಲ್ವೇಱುತಿರ್ದಪ್ಪುದಾ
ಗಸಮೆಲ್ಲಂ ಪವಳಂಗಳೊಳ್ಪಳಗಿನಿಂ ಸುತ್ತಂ ತಳಿರ್ತಂತಿರೆ
ಣ್ಪಸೆಯುಂ ರಂಜಿಸಿದಪ್ಪುದೇನೊ ತಸಿಗೆಂಪಾಗುತ್ತುಮಿರ್ದತ್ತಿದಾ
ವೆಸಕಂ ಮೂಡಿದುದೆಂದು ನೋಡಿದುದು ಸಭ್ಯಾನೀಕಮುತ್ಕಂಠದಿಂ ೧೬

ಪಗೆಯನಿಸಿರ್ದ ಕಾಮನ ಸಖಿಂ ವಿಧುವೆಂದವನಂ ಸುಡಲ್ಕೆ ತಾಂ
ಬಗೆದು ನಭಸ್ವರೂಪ ಗಿರಿಶಂ ತೆಱೆಯಲ್ ನೊಸಲಗ್ನಿವೃಷ್ಟಿಯಿಂ
ಮಿಗೆ ಪೊಱಪಾಯ್ದು ಮಿಳ್ಳಿಸುವ ದಳ್ಳುರಿಯೋಳಿಯ ಸುರ್ವುಗೊಂಡ ಪ
ರ್ವಗೆಯೊ ದಲಾತನೊಂದು ಪೊಱಪೇಱಿದ ಕೆಂಜೆಡೆಯ ಪ್ರಲಂಬಮೋ ೧೭

ಚೆನ್ನಮತೇಶ್ವರಂ ತ್ರಿಪುರಮಂ ಸುಡಲೆಂದನುಗೆಯ್ದು ಕಾಸಿ ಮ
ತ್ತಂ ನಲಿದೆಚ್ಚೊಡುಜ್ಜ್ವಳಿಸುತುಂ ಬರುತಿರ್ಪ ನಿಶಾತಬಾಣಮೋ
ತನ್ನಯನಂತನಾಮಮನಿದುಂ ತಳೆದಿರ್ದಪುದೆಂಬ ಮೋಹದಿಂ
ಸನ್ನಿಧಿಗೆಯ್ದಿಬಂದ ಧರಣೇಂದ್ರಫಣಾಮಣಿಯೊಂದು ಕಾಂತಿಯೊಳ್ ೧೮

ವ: ಇಂತು ಪರಕಲಿಸಿದರುಣಿಮಾಲೋಕನದಿಂ ಸಭಾಲೋಕದ ಚಿತ್ತಂ ನಿರಂತರಿತ ಶಂಕಾ ಕಳಂಕದಿಂ ವ್ಯಾಕುಳಿತಮಾಗಿ ಕಡುಚೋಜಿಗಮಿದಾವುದೆಂದು ಕೊರಳಂ ನೆಗಪಿ ನೋಡುವೆಡೆಯೊಳ್

ಆಗಸಮೆಂಬ ದೈತ್ಯನಗಿದೀ ಜಗಮಂ ನೆಱೆತಿಂದು ನುಂಗುವು
ದ್ಯೋಗದೆ ತೋರತಾರಗೆಗಳೆಂಬುಱುದಾಡೆಗಳಂ ನಿಮಿರ್ಚಿ ಮುಂ
ಬೇಗದೆ ಬಾಯನೆಯ್ದೆ ತೆಱೆಯಲ್ ಪೊಱಪೊಣ್ಮುವ ಜಿಹ್ವೆಯಂತೆ ಚೆ
ಲ್ವಾಗಿರೆ ನೀಳ್ದು ಬಿಳ್ಪಳುಕು ಪುಟ್ಟಿಸಿದತ್ತವಿಳರ್ಗೆಭೀತಿಯಂ ೧೯

ಘುಳುಘುಳು ಭುರ್ಭುಗಿಲ್ ಭುಗಿಲು ತಚ್ಛಟಿಲುಚ್ಛಟಿಲುಚ್ಛಟಚ್ಛಟ
ಚ್ಛಳಿತಳಿಯೆಂಬ ರೌದ್ರತರಭೀಷಣಘೋಷಣಮುಣ್ಮೆಪೊಣ್ಮೆ ಸಂ
ಗಳಿಸಿರಲುಗ್ರಿಮಂ ಪ್ರಳಯಕಾಲಮಹಾಗ್ನಿಯಿದೆಂಬ ಮಾಳ್ಕೆಯಿಂ
ದುಳುಕುನಿಮಿಳ್ದು ಬಿಳ್ದುದು ಮರೀಚಿ ಮುಸುಂಕೆ ದಿಗಂತರಾಳಮಂ ೨೦

ವ: ಅಂತು ಭಯಂಕರಾಕಾರದಿಂ ಸಾತಿಶಯಮಾದ ನೂತನತದುಳ್ಕಾಪಾತಂ ಸಭೆಯೆಲ್ಲಂ ಬೆಳ್ಕುಳಿಸುವಂತೆ ವಿಯತ್ತಳದಿಂ ಬೀಳ್ತಂದು ಸಂಕ್ರಂದನ ವಂದ್ಯಮಾನ ಪದದ್ವಂದನ ಮುಂದೆ ದೂರದೊಳ್ ನಿಂದು ತನ್ನಯ ಚಂಚದುದಂಚದಭಿಜ್ಯೋತಿರ್ಜಾಲದಿಂದಾರತಿಯನೆತ್ತುವ ಮಾಳ್ಕೆಯಿಂ ಬಳಸಿ ಪೊಳೆಯುತ್ತುಮಿರ್ಪುದುಂ

ಮೋಹಮೆಂಬಂಧಕಾರಸ
ಮೂಹಂ ವ್ಯಾಪಿಸಿದ ಮೋಕ್ಷಪಥಮಂ ಬೆಳಗಿ ಪು

ರೋಹಿತಮಂ ತೋಱಿ ಸಕರ
ವಾಹಿತದೀಪಂ ದಲೆಂಬಿನಂ ಸೊಗಯಿಸುಗುಂ ೩೧

ವ: ಅನಂತರಂ ನೋಡನೋಡಲದೃಶ್ಯಮಾಗಿ ಪರೆದುಪೋಪುದುಂ ಸಭೆಯೆಲ್ಲಂ ಬೆಕ್ಕಸಂಬೆಱಗಾಗಿ ಜಗದೊಡೆಯನ ಮೊಗಮಂ ನೋಡಿ ಕೌತುಕಮಿದೇನದಱಿಂದಮಂ ಬೆಸಸಲ್ವೇಳ್ಕುಮೆಂದು ಕರಕಮಳಂಗಳಂ ಮುಗಿದು ಬಿನ್ನಪಂಗೆಯ್ವುದುಮಾಗಳ್ ಜ್ಞಾನ ತ್ರಯನಿಧಾನಂ ಮುಗುಳ್ನಗೆವೆರಸಿದ ನುಡಿಯಿಂದಿಂತೆಂದಂ

ಒರ್ವಂ ಜ್ಯೋತಿಷ್ಕದೇವಂ ವಿಮಳಚರಿತನೆಂಬಂ ಸುರಾಧೀಶನಾಜ್ಞಾ
ಪೂರ್ವಂ ಬಂದಂಬರಸ್ಥಾನದೊಳಿರುತುಮದಂನೋಡಿ ಕಂಡಿಲ್ಲಿ ನಮ್ಮಂ
ಸರ್ವೇಶಂ ಬೇಸಱಂ ಸಂಸೃತಿ ವಿಷಯಸುಖಕ್ಕಿನ್ನುಮೆಂದೆಮ್ಮ ಚಿತ್ತ
ಕ್ಕುರ್ವೀವೈರಾಗ್ಯಮಂ ಪುಟ್ಟಿಸುವ ಬೆವಸೆಯಿಂದಿಂತುಟಂ ತೋಱಿಪೋದಂ ೩೨

ವ: ತೇಜೋಮಯಮಾದೊಡಮನ್ನಾಕಾರಮೆಂತಿಂತಪ್ಪ ತೋಱಿ ಪಾಱು ವವಸ್ಥೆಯನೆಯ್ದಿತ್ತಂತೆ ಸಂಪತ್ತಿಶರೀರಭೋಗಂಗಳುಮಸ್ಥಿರಂಗಳವಂ ತೊಱೆಯದೆ ನಿಮ್ಮ ವಂದಿಗರ್ ಮಱೆದಿರ್ಪುದನುಚಿತಮೆಂದು ಬಿಳ್ದ ಕೈದನೆತ್ತಿಕೊಟ್ಟು ಕಲಿಯಂ ಮೂದಲಿಸುವಂತೆ ಸಂಸಾರದ ಧ್ರುವತೆಯಂ ತೋಱೆಸಿ ವಿರಕ್ತಿಭಾವಮನೆಮಗೆಚ್ಚಱಿಸಿಕೊಟ್ಟು ಪೋದನೆಂದ ಪ್ರತಾಪರಾಜಂಗಂ ವರಧರ್ಮಕುಮಾರಂಗಮನಿತ್ಯತಾಪ್ರತಿಪಾದನ ಮುಖದಿಂ ದೇವನಿಂತೆಂದಂ

ಘನಸಂಕ್ಲೇಶವಿಭಾವಮೆಂಬ ತೆರೆಯಿಂದಂ ಕೂಡಿ ರೋಗಪ್ರವ
ರ್ಧನಮೆಂಬುನ್ನತ ಫೇನದಿಂ ಪುದಿದು ಚಿಂತಾವರ್ತದಿಂದೊಂದಿ ಕು
ತ್ಸನಸಂಸಾರಸಮುದ್ರದಲ್ಲಿ ಜವನೆಂಬೌರ್ವಾನಳಂ ಪೀರ್ವ ಜೀ
ವನಮಾದತ್ತು ಶರೀರಜೀವನಮಿದಕ್ಕೇಕಯ್ಯ ಮುಯ್ವಾಂತಪರ್ ೩೩

ಪಾಲುಂ ನೀರಂತಿರೈಕ್ಯಂಬಡೆದು ಸುಖಮನೀವುತ್ತುಮಿರ್ಪಾತ್ಮನಾಯು
ರ್ಮೂಲಂ ತೀರಲ್ಕೆ ಮೆಯ್ಯಿಟ್ಟಪರಗತಿಗೆ ಪೋಪಾಗಳೀ ದೇಹಮಂ ಮ
ತ್ತಾಲಂ ಮಿತ್ರಂ ದಲೀತಂ ಬಳಿಗಳಿಹಿ ಬರಲ್ವೇಳ್ಕುಮೆಂದೆಳ್ದುದಿಲ್ಲಂ
ಶೀಳರ್ ಪೆಂಡಿರ್ ತನೂಜರ್ ಬಹಿನುತರರರೇನನ್ಯರೆಂಬಲ್ಲಿ ಚೋದ್ಯಂ ೩೪

ಒಡೆಯನಿವಂ ಬಡವನಿವಂ
ಕಡುಜಾಣನಿವಂ ಜಡಂ ದಲಿವನೆಂದೆನ್ನಂ
ತಡೆಯದೆ ಸರ್ವಗ್ರಾಸಮ
ನೊಡರಿಸುವಂ ಕಿಚ್ಚಿನಂದದಿಂ ಕ್ರೂರ ಯಮಂ ೩೫

ಕರೆಯ ಮರದಂತೆ ಬೀಳ್ವುದು
ಶರೀರಮಿದು ಮಂಜಿನಂತೆ ಪರೆವುದು ಭೋಗಂ

ಸುರಚಾಪದಂತೆ ಕಿಡುವುದು
ಸಿರಿ ಚಿರಮಾಗಿರ್ಪುದಾವುದೋ ಮನುಜರ್ಗಂ ೩೬

ಪುದಿದ ಮಧುಮಕ್ಷಿಕಾದಂ
ಶದ ನೋವಂ ಬಗೆಯನೆಂತು ಮಧುಪರಂ (?)
ಪದೆಪಿಂ ಸಂಸ್ಕೃತಿದುಃಖದ
ಮದನೋವಂ ಬಗೆಯನಂತೆ ಸುಖಬಿಂದುಕರಂ ೩೭

ಮನಸಿಜನೆಂಬ ಬಲ್ಲ್ವಹಮದೊತ್ತಿ ನಿಪೀಡಿಸೆ ಹುಚ್ಚುಗೊಂಡು ಪೊ
ಲ್ಲೆನಿಸುವ ವಸ್ತುವಂ ಪಿರಿದುಮೊಳ್ಳಿತದೆಂಬರದೆಂತು ಮೂತ್ರ ರ
ಕ್ತನಿಳಯಮಾಗಿ ಕೊಕ್ಕರಿಕೆಯಂ ನೆಱೆಪುಟ್ಟಿಸುತಿರ್ಪ ಕಾಮಿನೀ
ಘನಜಘನಂ ಮನೋಹರಕಮೆಂಬರನಂಗನ ಸೊಕ್ಕು ಮೊಕ್ಕಳಂ ೩೮

ನೆರಪಿದ ಪುಣ್ಯಪಾಪಪರಿಪಾಕದೆ ಪುಟ್ಟುವ ಪೊಂದುತಿರ್ಪ ದು
ರ್ಧರತರದುಃಖದಿಂ ನಮೆದು ಕಷ್ಟಚತುರ್ಗತಿಯಲ್ಲಿ ಕೂಡಿ ಮಾ
ಣ್ದಿರದೆ ಸಮಂತು ಜಾಟಣದ ಗುಂಡಿಗೆಯಂತಿರನೇಕಕಾಲಮುಂ
ತಿರುತರುತಿರ್ದು ಸೇದೆವಡುತಿರ್ಪುವು ನೋಡಿರೆ ಜೀವರಾಶಿಗಳ್ ೩೯

ಜೀವಂ ಕೋಟಲೆಗೊಳ್ಗು ಕರ್ಮವಶದಿಂದಾ ಕರ್ಮಮುಂ ಸತ್ತಪ
ಸ್ಸೇವಾಯೋಗದೆ ಕೆಟ್ಟುಪೋಕದಱ ಕೇಡಿಂದಕ್ಕು ನಿತ್ಯತ್ವದು
ದ್ಭಾವಂ ಪೆರ್ಚಿದ ಮೋಕ್ಷಮಲ್ಲಿ ಸುಖರೂಪಂ ಸಾರ್ಗುಮೆಂದಾ ಮಹಾ
ದೇವಂ ಚಿತ್ತದೊಳಂ ದೃಢೀಕರಿಸಿದಂ ದೀಕ್ಷಾಗ್ರಹಾಕಾಂಕ್ಷೆಯಿಂ ೪೦

ಕೆಡುವುದದೆಲ್ಲಂ ಕೆಟ್ಟೊಡೆ
ತಡೆಯದೆ ಕೆಡದಿರ್ಪುದೆಯ್ದೆ ಬರ್ಪಡೆ ಮತ್ತಂ
ಕಡುಲಾಭಮಾವುದಿದಱಿಂ
ದೊಡನೆರಡನೊಡರ್ಚುವುಪ್ರತಪಮಂ ಮಾಳ್ಪೆಂ ೪೧

ವ: ಎಂದು ತಱಿಸಂದು ಮೋಕ್ಷಲಕ್ಷ್ಮೀಸಮಾಶ್ಲೇಷಾಭಿಲಾಷನಾಗಿಯಾ ಧರ್ಮನಾಥ ಮಹಾರಾಜಂ ತಪೋಗ್ರಹಣಪರಿಣಾಮಪರಿಸೂಚನ ನಿರತ ನಿರತಿಶಯವಚನದಿಂದಖಿಳಸಭಾಜನಕ್ಕೆ ಶರೀರಾದಿಪರದ್ರವ್ಯದಧ್ರುವತೆಯನಿಂತು ಬೆಸಸುವುದುಮಲ್ಲಿ ಸಂಸಾರಭೀರುಗಳಪ್ಪರಸುಮಕ್ಕಳೆಲ್ಲಂ ಮೆಚ್ಚಿ ಮತ್ತಮೆಮಗೆ ದೇವರಲೋಕಮೇ ಲೋಕಮೆಮ್ಮೊಡನೆ ಬಪ್ಪುದೆಂದನುಜ್ಞೆಯಂ ದಯೆಗೆಯ್ಯಲ್ವೇಳ್ಕುಮೆಂದಿಂತೆಂದರ್

ಪರುಷದ ಕೂಟದಿಂದಮಮ ಕಬ್ಬುನಮೆಂತು ಸುವರ್ಣಮಪ್ಪುದಂ
ತಿರೆ ಧರಣೀತಳಾಧಿಪತಿ ನಿನ್ನಯ ಬೆಂಬಳಿಸಂದು ದೀಕ್ಷೆಯಂ

ಧರಿಸುವೆವೆಂದು ಪೂರ್ವದರಧಿರಾಜರುಮಾಗಳೆ ಮಾಜಿರುತ್ತಮರ್
ಗುರುಜನಶೀಲಮಾಚರತಿ ಶಿಷ್ಯಕದಂಬಕಮೆಂಬ ನೀತಿಯಂ ೪೨

ಮಿಗುವ ವಿರಕ್ತಿಯೊಳೊಂದಿದ
ಸೊಗಯಿಪ ಸಾಸಿರ್ವರರಸುಮಕ್ಕಳ ಬಳಗಂ
ತೆಗೆಯಾಳನಾಯ್ದು ತೆಗೆದಂ
ತೊಗೆದುದು ಕೊಳಲೆಂದು ಮೋಕ್ಷದುರ್ಗಮನದಱೊಳ್ ೪೩

ವ: ಅನಂತರಂ ಜಗತ್ತ್ರಯಜ್ಯಾಯನಭಿಪ್ರಾಯಮನವಧಿಬೋಧದಿಂದಱಿದು

ವರವೈರಾಗ್ಯರಸಪ್ರವಾಹಭರದೊಳ್ ತೇಂಕುತ್ತಿರಲ್ ಧರ್ಮನಾ
ಥರಸಾಧೀಶ್ವರನಾಕ್ಷಣಂ ಪ್ರಮದದಿಂ ಸಾರಸ್ವತಾದಿತ್ಯವ
ಹ್ನ್ಯರುಣಪ್ರೋತ್ತಮ ಗರ್ದತೋಯತುಷಿತಾವ್ಯಾಬಾಧಕಾರಿಷ್ಟರೆ
ಣ್ಬರುಮೆಳ್ತಂದರಮರ್ತ್ಯಯೋಗಿಪತಿಗಳ್ ಬ್ರಹ್ಮಾಖ್ಯಕಲ್ಪಾಗ್ರದಿಂ ೪೪

ವ: ಬಂದು ಮುಂದೆ ನಿಂದು ಜಯಜಯನಿನಾದಸಮುತ್ತುಂಗರುಂ ವಿನಯ ಭರಾನತೋತ್ತಮಾಂಗರುಂ ಸಂತೋಷರಸತರಂಗಿತಾಂತರಂಗರುಂ ಪುಳಕಕಳಿತ ಸಕಳಾಂ ಗರುಮಾಗಿ ಪರಮನ ಚರಣದ್ವಂದದೊಳ್ ನಮೇರುಮಂದಾರಪಾರಿಜಾತ ಕುಸುಮಾಸಾರಮಂ ಸುರಿದು

ಎಲೆ ವಿಜ್ಞಾನನಿಧಾನ ನೀಂ ಬಗೆದ ಕಾರ್ಯಂ ಲೇಸುಲೇಸೆಂತು ವಿ
ಹ್ವಳಸಂಸಾರಸಮುದ್ರದಿಂ ತೊಲಗಿ ಮೋಕ್ಷಸ್ಥಾನದೊಳ್ ಸಂತತಂ
ನೆಲೆಗೊಂಡಿರ್ದಪೆನೆಂಬ ಬುದ್ಧಿಕರಣಂ ಸ್ಥೇಯಸ್ಸುಖೋಪಾರ್ಜನಂ
ಬಳಸಂಸಾರವಿವರ್ಜನಂ ಸಹಜಮಾರ್ಹಂತ್ಯೇಕರಪ್ಪರ್ಗೆ ತಾಂ ೪೫

ನಿನಗೆ ಜಗತ್ತ್ರಯೀಪತಿಗಳಾಳ್ವೆಸಮಂ ನೆಱೆಮಾಳ್ಪ ಭೂರಿಪಾ
ವನಮಹಿಮಾವಿಶೇಷಿತವಿಭೂತಿ ಜರತ್ತೃಣಮಾತ್ರಮೆಂದೊಡೀ
ತನವಧಿ ವಾರ್ಧಿಯಂ ಕುಡಿವ ಕುಂಭಭವಂಗರಿದೇ ಘಟೋದಕಂ
ವನಧಿವೃತೋರ್ವಿಯಂ ಬಿಸುಟೆಯೆಂಬುದು ವಿಸ್ಮಯಕಾರಿಯಲ್ಲದೇಂ ೪೬

ನೆಟ್ಟನನಂತನಾಥನಪವರ್ಗಮನೆಯ್ದಿದನಂತರಂ ಕರಂ
ಕೆಟ್ಟುದು ಧರ್ಮವರ್ತನೆಯದಂ ಪೊಸತಾಗಿ ವಿಶೇಷಮಪ್ಪಿನಂ
ಪುಟ್ಟಿಸಿ ಮತ್ತಮಿಾಗಳಧಿಕೇವಳಬೋಧಮನೆಯ್ದುವಾರ್ಪು ನೇ
ರ್ಪಟ್ಟುದು ನಿನ್ನೊಳಲ್ಲದುಳಿದರ್ಗಿದು ಕೂಡುಗುಮೇ ಸುರಾರ್ಚಿತಾ ೪೭

ಚರಮಶರೀರ ನಿನ್ನ ಪರಿನಿಷ್ಕ್ರಮಣೋದ್ಯಮಮಂ ನಿರೀಕ್ಷಿಸಿ
ತ್ವರಿತದಿನೆಮ್ಮ ಜನ್ಮ ಕೃತಕೃತ್ಯಮಿದಾಗಲವೇಳ್ಕುಮೆಂಬಧಿ
ಸ್ಫುರಣದ ಬಂದೆವಲ್ಲದ ನಿಜಾಶಯಮಂ ಪ್ರತಿಬೋಧಿಸಲ್ಕೆ ಶ
ಕ್ತರ ದಿನನಾಥನಂ ಬೆಳಗಲಾರ್ಪುದೇ ತುಚ್ಛಪತಂಗಪಾತಕಂ ೪೮

ವ: ಇಂತು ಸಾರಸ್ವತಾದಿ ಲೋಕಾಂತಿಕದೇವರುಷಿವೃಷಭರಾ ಪುರುಷೋತ್ತಮನ ಸಂಸ್ತವನಮುಖದಿಂ ಪ್ರತಿಬೋಧನಮನುಜ್ಜೀವಿಸಿ ನಿಜನಿವಾಸಕ್ಕೆ ಪೋಗಲೊಡಂ

ಪರಮನ ಪರಿನಿಷ್ಕ್ರಮಣೋ
ದ್ಧುರಕಲ್ಯಾಣಪ್ರಭಾವಮಂ ದೇವೇಂದ್ರಂ
ಪರಮಾವಧಿಬೋಧದಿನಱಿ
ದಿರದೆಯ್ದಿದನಂದು ಹರ್ಷದುತ್ಕರ್ಷತೆಯಂ ೪೯

ದೆಸೆಯೊಳ್ ನಾನಾವಿಮಾನಂ ಕೆದಱಿ ಸುರಧನುಶ್ರೀಯನೆಲ್ಲಾತಪತ್ರ
ಪ್ರಸರಂ ವ್ಯೋಮಾಗ್ರದೊಳ್ ಸಂದಣಿಸಿ ಪುದಿಯೆ ಸಂಗೀತವಾದ್ಯಪ್ರಘೋಷಂ
ರಸೆಯೊಳ್ ಮೆಯ್ವೆರ್ಚಿ ಚೋದ್ಯಂಬಡೆದಿರೆ ಭವನಾಭ್ಯಂತರಜ್ಯೋತಿರುತ್ಕ
ಲ್ಪಸುರರ್ ಮುಂತಾದ ಸರ್ವಾಮರಬಲಸಹಿತಂ ಬೇಗದಿಂ ಬಂದನಿಂದ್ರಂ ೫೦

ವ: ಅಂತು ಚತುರ್ನಿಕಾಯದೇವರ್ಕಳೆಲ್ಲಂ ನೆರೆದು ರತ್ನಪುರಕ್ಕೆವಂದರ ಮನೆಯಂ ಪೊಕ್ಕು ಸಭಾಭವನಮನಳಂಕರಿಸಿರ್ದ ಭುವನಭೂಷಣನ ಚರಣಪೀಠದೊಳ್

ಪಲತೆಱದಿಂ ಪೊಗಳ್ದು ಪರಿನಿಷ್ಕ್ರಮಣೋತ್ಸವಮಂ ನಮೇರು ಮಂ
ಜುಳಕುಸುಮೋಪಹಾರಚಯಮಂ ಮಿಗೆಸೂಸುವ ಪೊತ್ತಿನೊಳ್ ಸಮು
ಜ್ವ್ವಳಿತಕಿರೀಟಕೋಟಿ ಹರಿನೀಲಮಣಿಪ್ರಭೆ ತುಂಬಿವಿಂಡು ಮಂ
ಡಳಿಸಿದ ಮಾಳ್ಕೆಯಿಂದೊಡರಿಸಿತ್ತದು ನೋಳ್ಪರ ಕಣ್ಗೆ ಸೌಖ್ಯಮಂ ೫೧

ವ: ತನ್ನಯ ಬೆಸದಿಂ ಮುನ್ನಮೆ ಪೋಗಿ ಕಿನ್ನರೇಶ್ವರಂ ಸಮೆದ ತಪೋಲಕ್ಷ್ಮೀ ವಿವಾಹಮಂಡಪಮೆಂಬಿನಂ ಕಣ್ಗೊಂಡಭಿಷೇಕಮಂಡಪಕ್ಕೆ ಭೂಮಂಡಳೀಮಂಡನನಾ ಖಂಡಳಂ ತಾನೆ ಕೈಗೊಟ್ಟು ಬಿಜಯಂಗೆಯ್ಸಿ ದಿವ್ಯವಸ್ತ್ರಭೂಷಣಾದಿ ನವ್ಯಮಂಗಳದ್ರವ್ಯ ಧಾರಿಕರ ಸರಸಿರುಹೆಯರಪ್ಪ ಹರಿತ್ಕುಮಾರಿಕಾದಿ ಪರಿಕರಮಂ ಮಜ್ಜನಪೀಠದಿಕ್ಕೆಲದೊಳ್ ನಿಱಿಸಿ ಸಂಭೂರಿಗಂಭೀರಮಂಗಳಾಚಾರಚಾರಂ ವಿರಾವಬಹಳಕೋಳಾಹಳಂ ವಿಯತ್ತಳಮಂ ಮೂವಳಸು ಬಳಸೆ

ಇದು ಜನ್ಮಾಭಿಷವಕ್ಕೆ ಸಕ್ಕಸಮನೆಂಬಂತಾಗೆ ಹೇಮಾದ್ರಿಯಂ
ಪದೆಪಿಂದೇಱಿಳಿಯುತ್ತುಮಿರ್ಪ ಪದದೊಳ್ ತೋರ್ಪಾ ದುರಾಯಾಸಮಿ

ಲ್ಲದೆ ಚಿತ್ರಂ ಮಿಗೆಮಾಡಿದಂ ಪತಿಗೆ ಗಂಗಾಸಿಂಧುತೀರ್ಥಪ್ರತೋ
ಯದಿನಾಖಂಡಳನಂದು ಪಾವನತಪೋರಾಜ್ಯಾಭಿಷೇಕಾಂಗಮಂ ೫೨

ಇಂದೇ ದೇವನ ದೇಹಸಂಗಮೆಮಗಿನ್ನೆಲ್ಲೆಂಬಿದಂ ತೋರ್ಪವೋ
ಲಿಂದ್ರಂ ಭೂಷಿಸಿದುದ್ಧುರತ್ನಮಯ ನಾನಾಭೂಷಣಂ ಗಂಧಸಾ
ರಂ ದೇವಾಂಗದ ವಸ್ತ್ರಮಂದತಿಶಯಂಬೆತ್ತಿರ್ದುದಾ ಪೊತ್ತಿನೊಳ್
ಬಂದೆತ್ತಿತ್ತು ಸುರಾಂಗನಾಸಮುದಯಂ ನೀರಾಜನಾವೃಂದಮಂ ೫೩

ವ: ಮತ್ತಂ

ವರಧರ್ಮಕುಮಾರಕನಂ
ಕರೆಯಿಸಿ ರಾಜ್ಯಾಭಿಷೇಚನಂಗೆಯ್ದು ಜಗ
ದ್ಗುರು ಕಟ್ಟಿ ರತ್ನಪಟ್ಟಮ
ನಿರದಿತ್ತಂ ತನ್ನ ಸಕಳರಾಜ್ಯಶ್ರೀಯಂ ೫೪

ಬಿಸುಟೆಮ್ಮಂ ಪಿತೃ ಪೋದಪಂ ತಪಕೆ ಮತ್ತೇಗೆಯ್ವೆನಾನೆಂಬ ಬೇ
ವಸದಿಂದುಮ್ಮಳಿಸಲ್ಕೆವೇಡ ಸಹಜಂ ಮೋಕ್ಷಾರ್ಥಿಗಳ್ಗೆಂದು ಬೋ
ಧಿಸಿ ಸಂತೈಸಿ ಸಮಸ್ತರಂ ಪೊಳಲೊಳತ್ಯುತ್ಸಾಹಮಂ ಕೂಡೆಮಾ
ಡಿಸಿ ನೀವೆಂದೆನೆ ಡಂಗುರಂಬೊಡೆಸಿದರ್ ಸರ್ವೋರ್ವರಾಪಾಳರುಂ ೫೫

ವ: ಆ ಡಂಗುರದ ಬಲ್ಲುಲಿಯಗ್ಗಳಮಾಗಿ ಗಗ್ಗಲಿಸುತ್ತುಮಿರೆ

ಮೊಳಗುವ ಬದ್ದವಣಂಗಳ
ಥಳಥಳಿಸುವ ಪಲವುತೋರಣಂಗಳ ಬಳಗಂ
ರಾಗಾವಳಿಯಿಂ ತೊಳಗುವ
ಬೀದಿಗಳೊಳ್ ಭೋರೆನುತ್ತೆ ಮೇಳಯಿಸುವುದುಂ (?) ೫೬

ವ: ಆಗಳಾಡುವ ವೈತಾಳಿಕರ ಪಾಡುವ ಗಾಯಕರ ಬೇಡುವ ಯಾಚಕರ ನೋಡುವ ನೋಟಕರ ಸಂದಣಿಯಿನಂದಮಾದ ಪುರದ ಸಂಭ್ರಮಂ ಪರಮನ ಪರಿನಿಷ್ಕ್ರಮಣ ಕಲ್ಯಾಣದುಪಕ್ರಮಕ್ಕಂ ವರವರ್ಮಕುಮಾರನ ಪಟ್ಟಬದ್ಧಕಲ್ಯಾಣದನು ಕ್ರಮಕ್ಕಂ ಸಕ್ಕಸಮನಾಗಿ ತೆಕ್ಕನೆ ತೀವೆ

ಮಗನಂ ಮೋಹದೆ ನೋಡಿನೋಡಿ ಪುಳಕಂ ಸಾಲೊತ್ತೆ ತಳ್ಕೈಸಿಯ
ಶ್ರುಗಳುಣ್ಮುತ್ತಿರೆ ನಿಂದ ತಾಯನನುಕಂಪಾಲೋಕನಾಭಂಗಿ ಕೈ
ಮಿಗಲಾಲಿಂಗಿಸಿ ಬುದ್ಧಿವೇಳ್ದು ಪುರಮಂ ಬೀಳ್ಕೊಂಡು ಬಂದೇಱಿದಂ
ಮಿಗೆ ಚಂದ್ರಪ್ರಭನಾಮಮಂ ಸಿವಿಗೆಯಂ ಮುಕ್ತಾಫಳವ್ಯಕ್ತಮಂ ೫೭

ವ: ಅಂತು ಮೋಕ್ಷಲಕ್ಷ್ಮೀಪ್ರಾಸಾದ ಪ್ರಥಮಸೋಪಾನಮನೇಱುವಂತೇಱಲೊಡಂ

ದಂಡಿಗೆಯನೆತ್ತಿ ಪೊತ್ತುರು
ಮಂಡಳಿಕರ ಮಕುಟಘಟಿತಮಣಿಗಳ ಕಿರಣಂ
ಮಂಡಳಿಸಿ ನಭದೊಳದು ಕ
ಣ್ಗೊಂಡುದು ಕೆಂಬಟ್ಟೆಯೊಂದು ಮೇಲ್ಗಟ್ಟಿನವೋಲ್ ೫೮

ನೊರೆಗಳ ಪಿಂಡು ಮಂಡಳಿಸಿದಂತೆ ಸಹಸ್ರನೃಪಾಳಯಾನಮಾ
ವರಿಸಿರೆ ಪೂಜಿಪಾರತಿಯನೆತ್ತುವ ನೋಳ್ಪ ಪುರೀಜನಂಗಳು
ದ್ಧುರನಯನಾಂಶುಗಳ್ ಬಳಸೆ ಘೂಪರ ಸೂಳ್ ಪೆಗಲಲ್ಲಿ ಪೋದುದಾ
ಗುರುವರನೇಱದಳ್ಪಿಗೆ ದುಗ್ಧಪಯೋಧಿಯ ನಾವೆಯಂದದಿಂ ೫೯

ತೊಡವಂ ತಾಳ್ದ ನೃಪಾಳಜಾಳಮೊಲವಿಂ ಮುಂಪೊತ್ತುಕೊಂಡೊಯ್ದುದೇ
ಳಡಿಯಂ ಖೇಚರರಾಜರಪ್ರಮತಿಮತಂ ಪೊತ್ತೊಯ್ದು ಕೊಂಡೊಯ್ದುದೇ
ಳಡಿಯಂ ದಾನವರೋಳಿಯತ್ತಲದಱಿಂದಂ ಪೊತ್ತುಕೊಂಡೊಯ್ದುದೇ
ಳಡಿಯಂ ಪೊತ್ತುದು ಶಕ್ರರಾಳಿ ಬಳಿಯಂ ದೀಕ್ಷಾವನಾಂತಂಬರಂ ೬೦

ಪಾಡುವ ಕಿನ್ನರೀಜನದ ಗೀತರಸಕ್ಕನುಕೂಲಮಾಗಿ ಕೈ
ಗೂಡುವ ಖೇಚರೀಪಿತತಿ ಬಾಜಿಪ ವಾದ್ಯನಿನಾದದೊಳ್ ತಡಂ
ಮಾಡದೆಯಾಡುತಿರ್ಪ ನರ ಕಿಂಪುರುಷಪ್ರಮದಾಳಿನರ್ತನಂ
ಕೂಡೆ ಬೆಡಂಗನಿತ್ತುದದು ಯಾತ್ರೆಯೊಳಂದು ತಪೋವನಂಬರಂ ೬೧

ವ: ಆ ವಿಶಾಳಮಾದ ಸಾಳಮೆಂಬ ನಂದನವನದ ಮಧ್ಯಪ್ರದೇಶದೊಳ್

ಕೆಂಬರಲಿಂದೆ ಪಚ್ಚೆವರಲಿಂದೆ ವಿಮೌಕ್ತಿಕದಿಂ ಕುಬೇರನಂ
ದಂಬಡೆದೆಯ್ದೆ ನಿರ್ಮಿಸಿದ ದೀಕ್ಷೆಯ ಮಂಡಪಮಂ ಪಿಕಂ ಶುಕಂ
ತುಂಬಿ ನಿರೀಕ್ಷಿಗೆಯ್ದು ತಳಿರ್ಗಾಯಲರಿಂದೊಲೆದಾಡಿದತ್ತು ಮ
ತ್ತಿಂಬಿನೊಳಂ ಕರ್ದುಂಕಿದುದು ಬಂದೆಱಗಿತ್ತು ವಿಶೇಷಹರ್ಷದಿಂ ೬೨

ವ: ಆ ಮಂಡಪಮನೆಯ್ದೆಬಂದು ಮಕರತೋರಣದ್ವಾರ ಪುರೋಭಾಗದೊಳ್ ನಿಂದು ಸೌಧರ್ಮೇಂದ್ರಂ ದೇವಾವಧಾನಮೆಂದು ಕೈಗುಡೆ ಸಿವಿಗೆಯಿಂದಿಳಿದು ದಾನವ ಮಾನವ ವ್ಯಂತರಾನಂತಕೋಟಿ ಪಟುಪಟಹಸಮುತ್ಕಟರಟನಂ ದಿಕ್ತಟಕೋಟರದೊಳ್ ಪ್ರಕಟಮಾಗಿ ನಟನಂಗೆಯ್ಯುತ್ತುಮಿರೆ ಬಂದೊಳಗಂ ಪೊಕ್ಕು ನವರತ್ನವರ್ಣಪರಿಪೂರ್ಣ ಕರ್ಪೂರಚೂರ್ಣಮಯ ರಂಗಾವಲಿಯಿಂ ಭಂಗುರಮಾದ ರಂಗದ ನಟ್ಟನಡುವಣೆಂದು ಕಾಂತ ಶಿಲಾಪಟ್ಟಕದ ಮೇಲೆ ದೇವಂ ಪೂರ್ವಾಭಿಮುಖನಾಗಿ ಕುಳ್ಳಿರ್ದು

ತೊಟ್ಟ ತಿರೀಟಮಮಂ ತೆಗೆದುಕೊಟ್ಟು ಸುರೇಶ್ವರನಾಂತ ಹಸ್ತದೊಳ್
ತೊಟ್ಟನೆ ಬಿಟ್ಟ ಕೇಶಭರಮಂ ನೆಱೆ ಬಿರ್ಚಿದೊಡೊಕ್ಕುದಲ್ಲಿ ಬೈ
ತಿಟ್ಟ ನಮೇರುಪುಷ್ಪನಿವಹಂ ಚರಮಾಂಗದ ಸಂಗಸೌಖ್ಯಮಿಂ
ಕೆಟ್ಟಪುದೆಂದದುಮ್ಮಳಿಸಿ ಸೂಸುವವೋಲ್ ಬಿಡದಶ್ರುಬಿಂದುವಂ ೬೩

ಕಳೆದು ವರವಸ್ತ್ರಭೂಷಣ
ಕುಳಮಂ ದೇವಾಧಿದೇವನೊಪ್ಪಿದನಾಗಳ್
ಬಳಸಿದ ಮುಗಿಲಾವರಣಂ
ತೊಲಗಿದ ಹೇಮಾದ್ರಿಶಿಖರಮೆಂದೆಂಬಿನೆಗಂ ೬೪

ಮಾಣಿಕದಾರತಿಗಳ ಹರಿ
ಯಾಣಂಗಳನೆತ್ತಿಪಿಡಿದು ನಿಂದರ್ ಕೆಲರಿಂ
ದ್ರಾಣಿಯರಿಕ್ಕೆಲದೊಳ್ ಸುರ
ಗಾಣಿಕ್ಯಂ ಪಿಡಿದುದಷ್ಟಮಂಗಳಭರಮಂ ೬೫

ವ: ಆಗಳಾ ಮಂಡಪದುಭಯಪಾರ್ಶ್ವದೊಳ್ ಪೊಂಗಟ್ಟಿಗೆವಿಡಿದು ಸೌಧರ್ಮೇಂದ್ರನು ಮೀಶಾನೇಂದ್ರನುಂ ನಿಂದು ಪೂಜೆಗಳೊಳಗಣ ಕಳಕಳಂಗಳಂ ಮಾಣಿಸು ತ್ತುಮಿರೆ

ಸಮತೆಯನಪ್ಪುಕೆಯ್ದು ಕಮಳಾಸನಸಂಸ್ಥಿತಿ ಚೆಲ್ವನಾಗೆ ಪಂ
ಚಮಗತಿಗೆಯ್ದಿಸಲ್ ನೆಱೆವ ಪಂಚಪದಾಂಚಿತಪಂಚಮುಷ್ಟಿಯಿಂ
ದಮೆ ಪಱಿದಿಕ್ಕಿದಂ ಕುಟಿಳಕುಂತಳಜಾಳಕಭಾರಮಂ ಕುದುಃ
ಖಮನಿರದೀವ ಪಂಚಕರಣಂಗಳ ಮೂಲಮನೆಯ್ದೆಕೀಳ್ವವೋಲ್ ೬೬

ಪರಮನಮಸ್ಸಿದ್ಧೇಭ್ಯ
ಸ್ವರಮಾನದಿಂದಮೊಗೆಯೆ ಕಿತ್ತೊತ್ತುಳ್ಗುರುಳಂ
ಸುರಪಂ ಕನಕದ ಪಾತ್ರೆಯೊ
ಳಿರಿಸಿಯದಂ ಬಿಟ್ಟನೊಯಿದು ಪಾಲಿಂಗಡಲೊಳ್ ೬೭

ಸುಳಿಸುಳಿದು ಸುತ್ತುತಿರ್ಪ
ಗ್ಗಳ ಬೆಳ್ಸುಳಿಯೆಂಬ ಚಂದ್ರಮಂಡಳದೊಳ್ ಕ
ಣ್ಗೊಳಿಪ ಕಱೆಯಂತೆ ತೋಱಿದು
ದಳಿಕುಂತಳಭಾರಮಾ ತ್ರಿಲೋಕೇಶ್ವರನಾ ೬೮

ವ: ಇಂತು ಬಾಹ್ಯಾಭ್ಯಂತರಪರಿಗ್ರಹಮೆಂಬ ಕೆಸಱಿಂ ಕಳೆದು ತಪಸ್ತರುಣಿಯ ಪರಿಣಯನ ಕಲ್ಯಾಣಮನಾಂತ ಧರ್ಮನಾಥನಂ ಪೂಜಿಸುವ ಪೊಡವಡುವ ಪೊಗಳ್ವ ನೀವಳಿಸುವ

ಸಕಳದಿವಿಜದನುಜಮನುಜರಾಜರಾಜ ಜಯ ಜಯನಿನಾದಮನೇಕಾನಕ ಧ್ವಾನದೊಡ
ನೊಡನೆ ಬಾನಮನಾವರಿಸುತ್ತುಮಿರೆ

ಪಡೆವವರಾರೊ ಬೀಳುಡೆಯನೆಂದೆನುತುಂ ಸುರರಾಜರೆಲ್ಲರಾ
ಗಡೆ ಜನನುಟ್ಟು ತೊಟ್ಟು ತೆಗೆದಿಟ್ಟ ಸುವಸ್ತ್ರವಿಭೂಷಣಂಗಳಂ
ಸಡಗರದಿಂದೆ ತಂತಮಗೆ ಕೊಂಡು ಕರಂ ಬಿಗಿತೊಟ್ಟು ಕೊಟ್ಟು ನೇ
ರ್ಪಡೆ ತಣಿವಾಡುತಿರ್ದರಿರದಾರೊ ವಿಮೋಹಿಸರಿಷ್ಟಯೋಗದಿಂ ೬೯

ಶ್ರೀಯಂ ಪರಿಹರಿಸಿ ತಪಃ
ಶ್ರೀಯಂ ಮಾಘಾರ್ಜುನತ್ರಯೋದಶಿಯಪರಾ
ಹ್ಣಾಯತ್ತ ಪುಷ್ಯತಾರೆಯೊ
ಳೋಯರದಿಂ ತಾಳ್ದನಖಿಳಜನವಿನುತಪದಂ ೭೦

ರಾಜಕುಮಾರ ಸಹಸ್ರಂ
ಯೋಜಿಸಿ ಧೀರತೆಯನೊಡೆಯನೊಡನಾಂತುದದು
ಶ್ರೀಜೈನದೀಕ್ಷೆಯಂ ಗುಣ
ಭಾಜನರೊಡಸಲ್ವರಲ್ತೆ ತಮ್ಮಯ ಪತಿಯಾ ೭೧

ಜಿನಪಂ ತ್ರಿಸಾಕ್ಷಿಕಂ ತಾ
ನೆನಿಸಿ ತಪಂಗೊಂಡ ಪದದೊಳಾಕ್ಷಣಮೊಗೆದ
ತ್ತನುಪಮಮನಃಪರ್ಯಯಂ
ಘನಕೇವಳಬೋಧದುದಯದಿಂದಂ ಮುನ್ನಂ ೭೨

ವ: ಬಳಿಯಮಾ ತ್ರಿಳೋಕೀತಿಳಕನ ಚರಣಕಮಳಯುಗಳಮಂ ನಿಳಿಂಪ ಸಂಕುಳಂಬೆರಸು ಪೌಳೋಮಿಪತಿ ಮೂಮೆ ಬಲವಂದು ದಿವ್ಯವಸ್ತುಗಳಿಂದರ್ಚಿಸಿ ನಿರ್ಭರ ಭಕ್ತಿಯಂ ಪದಕ್ಕೆಜಿಗಿ ನರ್ತಿಸಿ ಕೀರ್ತಿಸಿ ಮಗುಳ್ದು ಪೊಗಳ್ದು ಸಂತುಷ್ಟಾಂತ ರಂಗನಾಗಿ ತೃತೀಯ ಕಲ್ಯಾಣಾರ್ಹಣಾವಿಧಾನಮಂ ವಿಸ್ತರಿಸಿ ತಾನುಂ ಶಚೀಮಹಾ ದೇವಿಯುಂ ಪತಿ ವಿರಹಪರಿತಪ್ತಾಂಗಿಯಪ್ಪ ಶೃಂಗಾರವತೀದೇವಿಯುಂ ಸುವ್ರತಾಮಹಾ ದೇವಿಯುಮಂ ವರಧರ್ಮಕುಮಾರನುಮಂ ಸಂತೈಸಿ ರತ್ನಪುರಕ್ಕೆ ಕಳಿಪಿ ತದನಂತರಂ

ಮಡದಿ ಶೃಂಗಾರವತಿ ತ
ನ್ನೊಡೆಯನನಡಿಗಡಿಗೆ ನೆನೆದು ಶರಣೆನಗಾರೆಂ
ದೊಡಲುರಿದು ಪಲುಂಬಿದಳಿ
ತ್ತಡಿಯೊಳ್ ಬೇಜಾದ ಜಕ್ಕವಕ್ಕಿಯ ತೆಱದಿಂ ೭೩

ವ: ಆಗಳ್

ಸುರರಾಜರ್ ನಿಚ್ಚಲಾರಾಧಿಸುವರೊಸೆದು ಗರ್ಭಾವತಾರಂ ಮೊದಲ್ಗೊಂ
ಡರೆಬರ್ ಲೋಕತ್ರಯಾಧೀಶ್ವರಪದವಿಗೆ ಸಂದಪ್ಪ ನೀನೆನ್ನ ಪುತ್ರಂ
ಪರಿಚಿಂತಾಭಾರಮೇಕೆಂದುಸಿರ್ದು ಕುವರನಂ ಪೆಂಡಿರಂ ನಂಟರಂ ಭೂ
ವರರಂ ಸಂತೈಸಿದಳ್ ತಜ್ಜನನಿ ಕೆಳದ ಲೇಸಪ್ಪುದೇಕಯ್ಯ ದುಃಖಂ ೭೪

ವ: ಎಂದಾ ಸುವ್ರತಮಹಾದೇವಿ ನುಡಿದು ವಿಯೋಗವಿಕಳತೆಯನಾಱಿಸು ತ್ತುಮಿರ್ದಳನ್ನೆಗ ಮಿತ್ತಲ್

ಗುರುಪಾದದ್ವಂದ್ವಮಂ ವಂದಿಸಿ ವಿನಯದೆ ಬೀಳ್ಕೊಂಡು ಸಾಹಸ್ರಯೋಗೀ
ಶ್ವರರಿಂಗಾನಮ್ರನಾಗಿ ತ್ರಿದಶಪರಿವೃಢಂ ವ್ಯೋಮಭಾಗಾಗ್ರದೊಳ್ ಪೀ
ವರ ನಾನಾದೇವಸೈನ್ಯಂ ಬಳಸಿ ಬರುತಿರಲ್ ಪೋಗಿ ಪೊಕ್ಕಂ ಲಸನ್ಮಂ
ದಿರಮಂ ಮತ್ತೆಲ್ಲರಂ ಬೀಳ್ಕೊಡೆ ನಿಜನಿಜವಾಸಕ್ಕವರ್ ಪೋದರಾಗಳ್ ೭೫

ವ: ಅನಂತರಮಿತ್ತಲಾ ದುರ್ಧರತಪೋನಿಧಾನಸಾಧಕಂ ದುರಿತಗ್ರಹೋಚ್ಚಾಟ ನಪಟಿಷ್ಠಪಂಚ ಪದಮಂತ್ರಮನುಚ್ಚಾರಣಂಗೆಯ್ವುತ್ತುಮಿರ್ದು

ಅಮೃತಸೇವನೆಯ ಬಗೆ ಸಂ
ದಮರ್ದಿರೆ ಕೈಯಿಕ್ಕುವಂತೆ ಕೈಯಿಕ್ಕಿದನಂ
ದಮಮ ಕೈಯೆತ್ತಿದಂ ಮ
ತ್ತಮರಗಣಂ ಕೈಯನೆತ್ತಿ ಪೊಡವಡುವನ್ನಂ ೭೬

ಮತ್ತಮನಂತತೀರ್ಥಕರ ಕಾಲದಿನಿತ್ತನಶೇಷಕರ್ಮ ಭೂ
ವರ್ತನದಲ್ಲಿ ಧರ್ಮದ ನೆಗಳ್ತೆಯದಿಲ್ಲದೆ ಪೋದುದಿನ್ನದಂ
ಬಿತ್ತರಿಸುತ್ತುಮಿರ್ದು ಸಮಯಾಭರಣಸ್ಥಿತಿಯ ಪ್ರಭಾವನಾ
ವೃತ್ತಿಯನೆಯ್ದೆತೋಱಿಸುವ ಬೇವಸದಿಂ ತಳರ್ದಂ ಮುನೀಶ್ವರಂ ೭೭

ಷಷ್ಠೋಪವಾಸಮಂ ಸಮ
ನುಷ್ಠಿಸಿ ನಾಲ್ಕನೆಯ ದಿನದೊಳತಿಶಯಿತತಪೋ
ನಿಷ್ಠನೀರ್ಯಾಪಥಸ್ಥಿತಿ
ಸೌಷ್ಠವಮಂ ಪಡೆಯಲಿಂದುಗತಿಯಿಂ ನಡೆದಂ ೭೮

ವ: ಇಂತು ಸಾಳವನದಿಂ ಪೊಱಮಟ್ಟು ಪಾರಣೆಯ ನೆವದಿಂ ದಾನಮಾರ್ಗ ವ್ಯಕ್ತೀಕರಣ ನಿಮಿತ್ತಂ ವೀರಭಾವರಿಯ ಕ್ರಮಮಂ ಮಾಜಿದೆ ಪಾಟಳೀಪುತ್ರಪುರಕ್ಕಭಿಮುಖನಾಗಿ ನಡೆದುಬರ್ಪಲ್ಲಿ

ನೋಡುತ್ತುಂ ನೊಗನೊಂದನಿಕ್ಕುವನಿತಂ ಮುಂಬಟ್ಟೆಯಂ ಭೂಮಿಯೊಳ್
ನೋಡುತ್ತುಂ ಸ್ಥಳಪದ್ಮಮಂ ನಿಜಪದನ್ಯಾಸಂಗಳಿಂ ತೋಳ್ಗಳೊಳ್

ಕೂಡುತ್ತುಂ ನೆಱೆನಿಶ್ಚಳತ್ವದೊದವಂ ಮಾರ್ಗಕ್ರಮಮಂ ತಳ್ತು ಕೈ
ಗೂಡುತ್ತುಂ ನಡೆತಂದುದಂದು ಸಮುದಾಯಂ ಪಿಂದೆ ಯೋಗೀಂದ್ರನಾ ೭೯

ವ: ಆಗಳ್

ಫಳಮಂಜರಿಯಂತೆ ಕಮಂ
ಡಲು ಪೂಗೊನೆಯಂತೆ ಕುಂಚಮೊಪ್ಪಿರೆ ಕೆಂ
ದಳಮೊಪ್ಪಿರೆ ಸಮುದಾಯಂ
ಜ್ವಳಿಸಿತ್ತಿದು ನಡೆವ ದಿವಿಜಕುಜವನದನ್ನಂ ೮೦

ವ: ಅಂತು ಬಂದಾ ಪುರಮಂ ಪೊಕ್ಕು ತದೀಯ ವೀಥಿಕಾಭಾಗದೊಳಗೆ

ಪರಿವರ್ಗಾಂಗಪಿಹಿತಸೂತಕ ವಧೂದುಷ್ಕರ್ಮಕಾನಾದ ಗೀ
ತರಸೋಜ್ಜೀವಕ ದೀನಯಾಚಕರ ಗೇಹದ್ವಾರಮಂ ಬಿಟ್ಟು ಭ
ವ್ಯರ ಭಾಗ್ಯೋದಯದಿಂದೆ ಬಂದನಧಿನಾಥಂ ವೀರಚರ್ಯಾರ್ಥಮಾ
ಗಿರದಂದುತ್ತಮ ಮಧ್ಯಮಾಧಮ ನಿವಾಸಂಗಳ್ಗೆ ಮಾನಾಪಹಂ ೮೧

ವ: ಆ ಪೊತ್ತಿನೊಳ್

ಅರಮನೆಯ ಮೊದಲ ಬಾಗಿಲೊ
ಳಿರಿಸಿದನರಸ ತಿಥಿಸಂವಿಭಾಗಾರ್ಪಣನೀಯ (?)
ಮರತನನಗಾರವೇಳೆಯೊ
ಳುರುಮುದದಿಂ ವಿಮಳನೆಂಬ ಮುನಿವೇದಕನಂ ೮೨

ವ: ಆತಂ ಸನ್ನಿಧಿಯೊಳ್ ಕುಡು ಮುನ್ನಮೆ ಪರಿದುಪೋಗಿ ಸತ್ಪಾತ್ರ ಸಮಾಗಮನಸಮಯಮಂ ಪಾರುತ್ತಮಿರ್ದ ಧನ್ಯಸೇನಮಹಾರಾಜಂಗೆ ಬಿನ್ನೈಸುವುದುಂ

ಅಷ್ಟವಿಧಾರ್ಚನೋಚಿತ ನವೀನ ಸುವಸ್ತುಗಳಿಂದೆ ತುಂಬಿದು
ತ್ಕೃಷ್ಟ ಸುವರ್ಣಪಾತ್ರೆಗಳನುತ್ಕಳಶಾಂಚಿತ ದರ್ಪಣಂಗಳಂ
ಶಿಷ್ಟವಧೂಜನಂ ಪಿಡಿದು ಮುಂದೆ ಬರಲ್ಕಿದಿರ್ವಂದನಾ ನೃಪಂ
ಹೃಷ್ಟನನೇಕಭೂಪರವಧಾನಮೆನುತ್ತವೆ ಸುತ್ತಿ ಬರ್ಪಿನಂ ೮೩

ವ: ಆಗಳೋದುವ ಪಾಠಕರ ಊದುವ ಶಂಖಂಗಳ ನರ್ತಿಸುವ ನಟ್ಟುವರ ಕೀರ್ತಿಸುವ ಭಟ್ಟರ ಸೂಳೈಸುವ ನಿಸ್ಸಾಳಂಗಳ ಸೂಳ್ವಡೆದ ಕಹಳೆಗಳ ಮೇಳಾಪಕದ ಕೋಳಾಹಳಂ ಬಹಳಮಾಗೆ ಕುಳಿರ್ವ ಕುಡಿಗಳಿಂ ಮಿಳಿರ್ವ ತೋರಣಂಗಳಿನಲಂಕಾರಂ ಬಡೆದ ರಾಜವೀಥಿಯೊಳತೀವ ಪ್ರಭಾವನಾವಿಭವದಿಂ ಧನ್ಯಸೇನಮಹಾರಾಜಂ ತನ್ನಯ

ಮನಮುಂ ಕಣ್ಗಳುಂ ಮುಂದೆ ಮಚ್ಚರಿಸಿ ಪರಿಯಲಾ ಪರಮಮುನೀಶ್ವರಂಗಿದಿರ್ವಂದು ವಂದಿಸಿ ಜಯಜಯಮೆನುತ್ತುಂ ಮೂಮೆ ಬಲವಂದು ಭಕ್ತಿಪೂರ್ವಕಮರ್ಚನಾ ದ್ರವ್ಯಂಗಳಿಂದರ್ಚಿಸಿ ತಚ್ಚರಣರೇಣುವಿಂ ನಿರ್ವಾಣರಮಣೀವಶ್ಯತಿಳಕಮೆಂಬಂತೆ ಪೊಳೆವ ತಿಳಕಮಂ ನೊಸಲೊಳ್ ತಳೆವುದುಂ ಪುಣ್ಯಪುಂಜಮೆ ನಿಲುವಂತೆ ನಿಂದು ಪರಸಿದ ಯತಿಕುಳತಿಳಕನಂ ನೋಡಿ

ಎನ್ನಯ ಜನ್ಮಮಿಂದು ಸಫಳತ್ವಮನೆಯ್ದಿದುದೆನ್ನ ವಂಶಮ
ತ್ಯುನ್ನತಮಾದುದಿಂದು ಬಿಡದೆನ್ನ ಗೃಹಸ್ಥತೆ ಪೂಜ್ಯಮಾದುದಿಂ
ದೆನ್ನವೊಲಾವನೋ ನೆಱೆಯೆ ನೋಂಪಿಯ ನೋಂತು ಕೃತಾರ್ಥನಾದನಿಂ
ದೆನ್ನಗೃಹಕ್ಕೆ ತೀರ್ಥಕರದೇವನೆ ಬರ್ಪವೊಲಾಯ್ತು ಪುಣ್ಯದಿಂ ೮೪

ಈ ಮನೆ ಪಾವನಮಾಗಿ ಮ
ಹಾಮಹಿಮೆಯನಾಂತುದಿಂದು ನಿಮ್ಮಡಿಗಳ ಪದ
ತಾಮರಸಪಾಂಸುಯೋಗದೆ
ವಾಮಗುಡಂ ಕೂಡೆ ಪಿಟ್ಟು ಸವಿಯಪ್ಪನ್ನಂ ೮೫

ವ: ಎಂದು ಯಥಾಸ್ತೋತ್ರಂಗೆಯ್ದನಂತರಂ ದೇವಾವಧಾನ ಬಿಜಯಂಗೆಯ್ಯಿಮೆಂದು ತಲೆಸುತ್ತಿ ತೆಗೆದುತ್ತರಾಸಮಿಟ್ಟು ಸ್ಥಾನತ್ರಯದೊಳರ್ಚನಾಪೂರ್ವಕಂ ನಮೋಸ್ತುಗೆಯಿದುದ ಕಶುದ್ಧಿವಿಲೋಕನಪುರಸ್ಸರಂ ನಿಜರಾಜಮಂದಿರದೊಳಗಂ ಪುಗಿಸಿ ಮಣಿಖಚಿತ ಚಂದ್ರಕಾಂತಪಟ್ಟಕಮಂ ತಂದಿಟ್ಟದಱಿಮೇಲೆ ಕುಳ್ಳಿರಿಸಿ

ಚರಣತಳಂಗಳನರಸಂ
ತೊಳೆದಾ ತೀರ್ಥೋದಬಿಂದುವಂ ಮಸ್ತಕದೊಳ್
ತಳಿದಮಳಮೌಕ್ತಿಕಂಗಳ
ತಲೆದೊಡವಂ ತೊಟ್ಟನೆಂಬಿನಂ ಕಣ್ಗೆಸೆದಂ ೮೬

ಜಳಗಂಧಾಕ್ಷತ ಪುಷ್ಪಾ
ವಳಿ ಚರು ಮಣಿದೀಪಧೂಪಫಳದಿಂದಂ ಮಂ
ಗಳನಂಘ್ರಿಗಳಂ ಪೂಜಿಸಿ
ಪುಳಕಾಂಕಂ ಪಂಚಮುಷ್ಟಿಯಿಂ ಪೊಡೆವಟ್ಟಂ ೮೭

ವ: ಮತ್ತಂ ಪ್ರತಿಗ್ರಹಾದಿ ನವವಿಧಪುಣ್ಯವರೇಣ್ಯನಾಗಿ ವಿಶಾಳಪ್ರಕಾಶ ಪೇಶಲಮಾದ ಶುಚಿತಮಾವಕಾಶದೇಶದೊಳ್ ನಿಱಿಸಿ

ಏಳುಗುಣಂಗಳಂ ತಳೆದು ಭವ್ಯಶಿರೋಮಣಿ ಸಿದ್ಧಭಕ್ತಿಯಂ
ಪೇಳೆ ಮುನೀಶ್ವರಂ ನೆನೆದು ಮಂತ್ರಮನಾಂತುರುಪಾಣಿಪಾತ್ರೆಯೊಳ್

ಮೇಳಿಸಿ ತುಪ್ಪದಿಂದೆ ಪರಮಾನ್ನದ ಪಾನೆಯನಿಕ್ಕಿದಂ ಮಹೀ
ಪಾಳಕನೆಯ್ದೆ ತಾಳ್ದ ಕರಣತ್ರಯಶುದ್ಧಿಸಮೃದ್ಧಭಾವಮಂ ೮೮

ವ: ಅಷ್ಟಚತ್ವಾರಿಂಶದ್ದೋಷದೂರಮಾದ ದಿವ್ಯಾಹಾರಮಂ ತ್ರಿವಾರಂ ಕೈಯಲಿಕ್ಕುವುದುಂ

ಸಮುದಾಯಂಗೂಡಿ ಚರ್ಯಾಕ್ರಮಮನೆಸಗೆ ಮತ್ತಕ್ಷಯಂ ದಾನವಸ್ತು
ತ್ರಮುವಾಕ್ಯಂ ಪೊಣ್ಮೆ ಕೈಯೆತ್ತಿರದೆ ಪರಸಿಯಾನಮ್ರಭೂಪಾಳನಂ ನಿ
ರ್ಗಮನಕ್ಕುದ್ಯುಕ್ತನಾಗುತ್ತಿರೆ ದಿವಿಜರತೋದಾತ್ತಪಾತ್ರಪ್ರಸಾದ
ರ್ಘಮಳುಂಬಂ ಬಣ್ಣಿಸಲ್ಕೆಂಬ ರುಚಿ ಗಗನದೊಳ್ ತುಂಬಿತುಳ್ಕಾಡಿತೆತ್ತಂ ೮೯

ಸುರದುಂದುಭಿ ಮಂದಾನಿಳ
ನಲರ್ವಳೆ ಪೊಮ್ಮಳೆ ಸಮಸ್ತದಿವಿಜಸಮಾಜೋ
ಚ್ಚರಿತಾಹೋದಾನಸ್ವರ
ಮರಮನೆಯಂಗಣದೊಳಾಯ್ತು ಪಂಚಾಶ್ಚರ್ಯಂ ೯೦

ಬಳಿಕಾ ಮುನಿವರನಲ್ಲಿಂ
ತಳರಲೊಡಂ ಕೂಡೆಪೋಗಿ ಬಿಡಲಾಜಿದೆ ಬೆಂ
ಬಳಿಸಂದನಾ ನೃಪಂ ಕರಿ
ಕಳಭಂ ಯೂಥಾಧಿಪತಿಯ ಬಳಿಸಲುವನ್ನಂ ೯೧

ವ: ಅಂತು ತಪೋವನಪರ್ಯಂತಂ ಕಳಿಪಿ ತದನುಜ್ಞೆಯಿಂ ಮಿಾಜಲಮ್ಮದೆ ಬೀಳ್ಕೊಂಡು ಬರುತ್ತುಮಲ್ಲಲ್ಲಿ ನಿಂದು ಮರಳೆ ನೋಡುತ್ತುಮೆತ್ತಾನುಂ ಮುಗುಳ್ದುಬಂದು ನಿಜನಿವಾಸಮಂ ಪೊಕ್ಕು

ಕಱೆದ ಸುವರ್ಣವೃಷ್ಟಿಯನಭೀಕ್ಷಿಸಿ ದಾನದಿನಾದ ವಸ್ತುವಂ
ನೆಱೆ ಪುರಭವ್ಯರಿಂಗೆ ಕೊಡುವನ್ನೆಗಮಲ್ತುಪಯೋಗಮೆಂದು ನಾ
ಡೆಱೆಯನದಂ ಮನಂದಣಿವಿನಂ ನಿಖಿಳರ್ಗಱೆ ಪಚ್ಚುಗೊಟ್ಟು ತಾಂ
ಮೆಱೆದನುದಾರವೃತ್ತಿಯನಿಳಾತಳದೊಳ್ ಜನಮೊಪ್ಪಿ ತೋರ್ಪಿನಂ ೯೨

ವ: ಅನ್ನೆಗಮಿತ್ತಲಾ ಧರ್ಮನಾಥಮುನಿನಾಥಂ ಪುಣ್ಯಾರಣ್ಯಮಂ ಪೊಕ್ಕತ್ಯಂತ ನಿರ್ಮಳ ಪ್ರಾಸುಕಪ್ರದೇಶಪ್ರಸಿದ್ಧಶುದ್ಧಸ್ಫಟಿಕಶಿಲಾತಳಾಗ್ರದೊಳ್ ಯೋಗನಿರೋಧಂಗೆಯ್ದು ಕಾಯೋತ್ಸರ್ಗಪ್ರತಿಮಾನುಯೋಗಯೋಗನಿಯೋಗದೊಳಿರ್ಪಲ್ಲಿ

ನೆಲನನವುಂಕಿ ಮೆಟ್ಟದೆ ಸಮಾನತೆವೆತ್ತ ಪದಂಗಳಿಂದೆ ನಿಂ
ದಲಘುಭುಜಂಗಳಂ ನಿಮಿರ್ದು ಲಂಬಿಸಿ ಜಾನುವನಂಟುತೋಱೆ ಕೆಂ

ದಳಮೆರಡುಂ ವಿಕಾರಮಣಮಿಲ್ಲದೆ ಯೋಗದೊಳಿರ್ದನಂದು ಮೆ
ಯ್ಗಲಿ ಕೆಳಗಣ್ಗೆ ಬೀಳ್ವವರನುದ್ಧರಿಪುಜ್ಜುಗದಿಂದಮಿರ್ದವೋಲ್ ೯೩

ವರಯೋಗಮೆಂಬ ದೀಪಾಂ
ಕುರದಿಂ ಪೊಱಮಟ್ಟುಪೋಪ ಕಜ್ಜಳಮೆಂಬಂ
ತಿರೆ ಯತಿಯ ಕುಂತಳಂ ಬಂ
ಧುರಮಾದುದು ಮಂದಗಂಧವಹ ಸಂಚಳಿತಂ ೯೪

ಪಿರಿದಾದ ಶಾಂತರಸದಿಂ
ದೊರೆಕೊಳಿಸಿ ಕ್ರೋಧಮಾನಮಾಯಾಲೋಭೋ
ತ್ಕರಮೆಂಬಗ್ನಿಗೆ ಕೇಡಂ
ವರುಗುಣೆ ತನ್ನಲ್ಲಿ ತಾನೆ ತಣ್ಣನೆ ತಣಿದಂ ೯೫

ಕಡುತಪದಿಂ ಮೆಯ್ ಬಡವಾ
ದೊಡಮರ್ಬಿಸಿದತ್ತು ಸತ್ತಪಸ್ತೇಜಂ ಪಾ
ಣೆಡೆ ಸಣ್ಣವಾದ ಮಣಿ ನೋ
ಳ್ಪಡೆ ತೇಜಂ ಬಂದು ಮತ್ತೆ ಪೊಳಪೇಱುವವೋಲ್ ೯೬

ಪಸರಂಬೆತ್ತುರುಮೋಹಮೆಂಬ ಬಲೆಯಂ ಸಂಕೋಚಿಸುತ್ತುಂ ಸ್ವಮಾ
ನಸದಿಂದಂ ತೆಗೆವಲ್ಲಿ ಸಿಕ್ಕಿದಪುದೀ ಮಿಾನೆನ್ನದೊಂದೆಂಬ ಬೇ
ವಸದಿಂ ಮುನ್ನಮೆ ಮಿಾನಕೇತನನವಂ ತನ್ನೊಂದು ಮಿಾಂಗೊಂಡು
ಬೀಸರದಿಂದೋಡಿದನೆಂಬಿನಂ ಮನಸಿಜಂ ಪೋದಂ ಮುನಿ ಸ್ವಾಂತದಿಂ ೯೭

ತನುವಿಂ ಬೇಱಾಗಿ ತೋರ್ಪಾತ್ಮನನವಗಮದಿಂ ಕಂಡು ಮೆಯ್ಯೆನ್ನ ದಲ್ಲೆಂ
ದನವದ್ಯಂ ಬಿಟ್ಟುದಾಸೀನತೆವಡೆದ ನಿಮಿತ್ತಂ ಬಿಸಿಲ್ ತಣ್ಣೆಳಲ್ ಕಾ
ಱಿನಮಾದಂ ಕೋಮಳಂ ಪೇಡದ ಪರಿ ಬಗೆಯೊಳ್ ಪುಟ್ಟದು ಧ್ಯಾನ ನಿಃಕಂ
ಪನನಂ ಪೆರ್ವಾವುಗಳ್ಪೊರ್ದಿರಲೆಸೆದನಗಂ ಬೀಳಲಂ ತಾಳ್ದಿದನ್ನಂ ೯೮

ಪುಲಿಗಳ್ ಪುಲ್ಲೆಗಳೊಂದುಗೂಡಿ ಕರಿಗಳ್ ಸಿಂಹಂಗಳೊಂದಾಗಿ ಮುಂ
ಗುರಿಗಳ್ ಪಾವುಗಳುಂ ಕರಂ ಬೆರಸಿ ಕೋಣಂಗಳ್ ತುರಂಗಂಗಳಾ
ವಳಿಗಳ್ ಸಂಗತಿವೆತ್ತು ಜಾತಿಜನಿತ ಪ್ರದ್ವೇಷಮಂ ಬಿಟ್ಟು ತ
ಮ್ಮೊಲಪಿಂದಿರ್ದವು ತತ್ತಪಸ್ವಿಯ ಸಮಿಾಪಸ್ಥಾನದೊಳ್ ಸುತ್ತಲುಂ ೯೯

ಎಳೆನಾಗರ ಮಱಿಗಳ್ ಮಿಗೆ
ಪೊಳೆದಾಡುತ್ತಿರ್ದವಲ್ಲಿ ಮಱೆಸೋಗೆನವಿ

ಲ್ಗಳ ಕಣ್ಣಪೀಲಿಗಳ ತ
ಣ್ಣೆಳಲೊಳ್ ತಮ್ಮಿಚ್ಚೆ ತಳ್ತು ಕೈಗೂಡುವಿನಂ ೧೦೦

ಎರಲೇಕೇಂದ್ರಿಯಮಾದೊಡಂ ಸಮನುಕೂಲಂಬೆತ್ತು ಬೀಸುತ್ತುಮಿ
ರ್ದಲರಂ ಬೀಳ್ವವನಂದು ತಂದು ಮುನಿಪಾಂಘ್ರಿದ್ವಂದ್ವಮಂ ಪೂಜಿಸಿ
ತ್ತೊಲವಿಂದೆಂದೊಡೆ ಸಿಂಹಮುಖ್ಯಮೆನಿಪಾ ಪಂಚೇಂದ್ರಿಯ ಪ್ರಾಣಿಸಂ
ಕುಲಮಂ ಮತ್ತನುಕೂಲಮಪ್ಪುದರಿದೇ ಸತ್ತೇವೆ ಸಾಮಾನ್ಯಮೇ ೧೦೧

ವ: ಇದು ಮೊದಲಾದನೇಕವಿಧದತಿಶಯಮನೊಡರ್ಚುತ್ತುಮೇಕಮಾಸ ಪ್ರಕಲ್ಪಿತಪ್ರತಿಮಾ ಯೋಗಮನಲ್ಲಿ ನಿರ್ವರ್ತಿಸಿ ಬಳಿಯಂ ತಳರ್ದು ಯೋಗಯೋಗ್ಯಸ್ಥಳಂಗ ಳೊಳನುಷ್ಠಿತ ಧ್ಯಾನನಾಗುತ್ತುಮೇಕವಿಹಾರಿಯಾಗಿ

ಗ್ರಾಮದೊಳಗೊಂದುದಿನಮಭಿ
ರಾಮಪುರೀ ಖೇಡ ಖರ್ವಡ ಮಡಂಬ ದ್ರೋ
ಣಾಮುಖದೊಳೈದುದಿವಸಂ
ಭೀಮಾಟವಿಯಲ್ಲಿ ದಶದಿನಂಬರಮಿರ್ದಂ ೧೦೨

ವ: ಇಂತು ಸಕಳಸತ್ವಗುಣಾಧಿಕ ಕ್ಲಿಶ್ಯಮಾನಾವಿನೇಯಜನಂಗಳಲ್ಲಿ ಮೈತ್ರೀ ಪ್ರಮೋದಕಾರುಣ್ಯ ಮಧ್ಯಸ್ಥವೃತ್ತಿಗಳನವಲಂಬಿಸುತ್ತುಂ ವಿಹಾರಿಸುವಲ್ಲಿ

ಪಗೆ ಕೆಳೆಯೊಳ್ ತೃಣಮಣಿಯೊಳ್
ಮಿಗುವ ಸ್ತುತಿನಿಂದೆಯಾಳ್ದನಂ ಧನದೊಳ್ ಕೈ
ಮಿಗೆ ಸುಖದುಃಖದೊಳಂ ಸರಿ
ಬಗೆಯಂ ಮಾಡುತ್ತುಮಿರ್ದನಧಿಕಾಪೇಕ್ಷಂ ೧೦೩

ದೋಷಂಗಳಲ್ಲಿ ಬಹಳ
ದ್ವೇಷಮನಧಿಮೋಕ್ಷದಲ್ಲಿಯನುರಾಗಮನೆ ವಿ
ಶೇಷಿಸಿಯುಮಿಲ್ಲ ರಾಗ
ದ್ವೇಷಂ ಮುನಿಗೆಂಬ ಮಾತು ಚಿತ್ರಮಿದಲ್ತೇ ೧೦೪

ಮಿಗೆ ಮುನಿದು ಘಾತಿಕರ್ಮಾ
ದಿಗಳಂ ಕೆಡಿಸುತ್ತುಮಿರ್ದ ಮುನಿಮುಖ್ಯಂ ಕೈ
ಮಿಗಲುತ್ತಮಕ್ಷಮಾಶೋ
ಭೆಗೆ ಭಾಜನನಾದನೆಂಬಿದತ್ಯಾಶ್ಚರ್ಯಂ ೧೦೫

ಅಯ್ವಾಚಾರಂಗಳಂ ಪನ್ನೆರಡುತಪಮನೀರಯ್ದುಧರ್ಮಂಗಳಂ ಮ
ತ್ತಯ್ದಾವಶ್ಯಂಗಳಾಜಂ ವಿಮಳಸಮಿತಿಯೈದಂ ವ್ರತಾಂಗಂಗಳೈದಂ

ಕಾಯ್ದಂ ಯೋಗೇಂದ್ರಚಂದ್ರಂ ಚರಿತದಪದ ಮೂಱಿಕ್ಕೆ ಗುಪ್ತಿತ್ರಯಕ್ಕೇ
ಗೆಯ್ದುಂ ಸಂದಂ ಮಹಾಮೂಲಗುಣದೊಳಧಿಕಂ ಸರ್ವಶೀಲಾಭಿರಮ್ಯಂ ೧೦೬

ಶಿಷ್ಟ ತಪಸ್ತರುಣೀಪತಿ
ಗಷ್ಟಮಹಾರುದ್ಧಿಗಳ್ ಕ್ರಮಂಗೊಂಡೊಗೆದಭಿ
ಚೇಷ್ಟಿಸಿದವು ಮಚ್ಚರಿಪಂ
ತಷ್ಟಮಹಾಪ್ರಾತಿಹಾರ್ಯ ವಿಭವೋದಯದೊಳ್ ೧೦೭

ವ: ಅವಾವುವೆಂದೊಡೆ

ನರನಾವನಾವ ತತ್ತ್ವದ
ಪರಿಯಂ ಬೆಸಗೊಂಡಡಾಕ್ಷಣಂ ಪೇಳ್ವ ಸುವಿ
ಸ್ತರಕೋಷ್ಠಬುದ್ಧಿಯೆಂಬು
ದ್ಧುರರಿದ್ಧಿಯನೆಯ್ದಿದಂ ತಪೋಧನತಿಳಕಂ ೧೦೮

ಪರಮಾಣುಮಾತ್ರರೂಪಂ
ಧರಿಸೀರ್ಯಾಶುದ್ಧಿಕಾರಣಂ ಮುನಿವರನಂ
ಬರಮಾರ್ಗದಲ್ಲಿ ನಡೆದಂ
ನಿರತಿಶಯಶ್ರೇಣಿ ಚಾರಣತ್ವದ ಬಲದಿಂ ೧೦೯

ಮುಂದಿರೆ ವಜ್ರದ ಬೆಟ್ಟಂ
ಸಂಧಿಸಿ ತನ್ನಂಗಮಂದೊಡಾಕ್ಷಣಮೊದೆವಾ
ರ್ಪೊಂದಿತ್ತು ಯೋಗಿನಾಥಂ
ಗಂದು ಪ್ರತಿಘಾತಮೆಂಬ ರಿದ್ಧಿಯ ಗುಣದಿಂ ೧೧೦

ಅತಿದುರ್ಧರ ತಪದಿಂದಂ
ಸ್ವತನುಕರಂ ತಪ್ತಮಾದೊಡಂ ಕಂದದೆ ಮ
ತ್ತತಿಶಯಕಾಂತಿಯನಾಂತುದು
ನುತತಪ್ತತಪಂ ದಲೆಂಬ ರಿದ್ಧಿಯ ಬಲ್ಪಿಂ ೧೧೧

ಸಿದ್ಧಾಂತಮೆಲ್ಲಮಂ ಸಂ
ಶುದ್ಧಮನಂತರ್ಮುಹೂರ್ತಕಾಲದೊಳಾನಂ
ದೋದ್ಧಾರಕನುಚ್ಚರಿಸುವ
ನಿದ್ಧ ವಚೋಬಳ ಸಮೃದ್ಧರಿದ್ಧಿಯ ಪೆಂಪಿಂ ೧೧೨

ಎಲ್ಲರ ರೋಗಮುಮಂ ತ
ಳ್ವಿಲ್ಲದೆ ಮಾಣಿಸುದಮಮ ತನ್ನಯ ತನುವಿನ

ಜಲ್ಲಮಲಮೆಂದೊಡಾ ಮುನಿ
ವಲ್ಲಭನಂ ತೋಷದರ್ಧಿಯಂ ತಳೆದವರಾರ್ ೧೧೩

ನೀರಸವಸ್ತುವನಿಕ್ಕಲ್
ಸಾರಾಮೃತಮಯಮೆನಿಪ್ಪ ರಸರಿದ್ಧಿಯನಾ
ಸೂರಿವರಂ ತಳೆದಂ ಕೈ
ಸಾರದು ನೋಳ್ಪರ್ಗೆ ಮತ್ತೆ ಪಸಿವುಂ ತೃಷೆಯುಂ ೧೧೪

ಪಾನೆಯೋಗರಮನೆಲ್ಲಾ
ಸೇನಾಜನಮುಂಡೊಡಾ ದಿನಂಬರಮಿಕ್ಕುಂ
ತೇನುಂಗುಂದದೆನಿಪ್ಪು
ನ್ಮಾನವದಕ್ಷೀಣರಿದ್ಧಿಯಂ ಯತಿ ತಾಳ್ದಂ ೧೧೫

ವ: ಇವು ಮೊದಲಾಗಿ ಸಮನಿಸಿದ ಪದಿನೆಂಟು ತೆಱನಪ್ಪ ಬುದ್ಧಿರಿದ್ಧಿಯೊಳಂ ದ್ವಿಪ್ರಕಾರಮಪ್ಪ ಕ್ರಿಯಾರಿದ್ಧಿಯೊಳಂ ಬಹುಭಂಗಿಸಂಗತಮಾದ ವಿಕ್ರಿಯರ್ಧಿಯೊಳಂ ಸಪ್ತವಿಧಮಪ್ಪ ತಪೋರಿದ್ಧಿಯೊಳಂ ಮೂಱುತೆಱನಾದ ಬಲರಿದ್ಧಿಯೊಳಂ ನಾಲ್ಕು ತೆಱನಾದ ಸರ್ವೌಷಧಿಯೊಳಂ ಮೂಱುತೆಱನಾದ ರಸರಸರಿದ್ಧಿಯೊಳಂ ದ್ವಿವಿಧಮಪ್ಪ ಕ್ಷೀಣರುದ್ಧಿಯೊಳಂ ನೆಱೆದು

ಎಲ್ಲಾ ಪ್ರಾಣಿಗಣಂಗಳಂ ಕರುಣದಿಂ ತನ್ನಂತೆ ಕೊಂಡೋವುವಂ
ಸೊಲ್ಲಂ ಲೌಕಿಕವಾರ್ತೆಯಂ ಸ್ವಸಮಯಾಚಾರಕ್ರಮಂಗುಂದನೆ
ಯ್ದಲ್ಲಂ ರಾಗನಿಬಂಧವಸ್ತುಚಯ ಸಂಯೋಗಂಗಳಂ ಮೋಹದೊಳ್
ನಿಲ್ಲಂ ಮೋಕ್ಷಸುಖಪ್ರಸಾದಕ ತಪಂ ಮೆಯ್ವೆತ್ತುದಾ ಧರ್ಮನೊಳ್ ೧೧೬

ವ: ಮತ್ತಂ

ಕೊನರಿಂ ತಳಿರಿಂ ನನೆಯಿಂ
ಘನಫಳದಿಂ ಕಲ್ಪವೃಕ್ಷಮೆಂತೊಪ್ಪುವುದಂ
ತನುಪಮಮತಿಶ್ರುತಾವಧಿ
ಮನಃಪರ್ಯಯಬೋಧದಿಂದಮೊಪ್ಪಿದನಮಳಂ ೧೧೭

ವ: ಅವಗ್ರಹಮುಮೀಹೆಯುಮವಾಯುಮುಂ ದಾರಣಮುಮೆಂಬೀ ನಾಲ್ಕುಂ ಪಲತೆಱದಿಂ ಕವಲ್ವರಿದು ಮೂನೂಱಮೂವತ್ತಾಱು ಭೇದಮಾದ ಮತಿಜ್ಞಾನಮುಂ ತನ್ಮತಿಪೂರ್ವಕಮಾಗಿ ಪುಟ್ಟಿ ಲಿಂಗಜಮುಂ ಶಬ್ದಮುಮೆಂಬ ದ್ವಿಪ್ರಕಾರಮನಾಂತು ಬಹುವಿಧಕಲ್ಪದಿಂದನೇಕಭೇದಮಾದ ಶ್ರುತಜ್ಞಾನಮುಂ ಭವಪ್ರತ್ಯಯಮುಂ ಗುಣಪ್ರತ್ಯಯಮುಮೆಂದು

ದ್ವೈವಿದ್ಯಮುಂ ತಾಳ್ದಿ ಪಲವುಂತೆಱನಾಗಿ ಬಹುಭೇದಮಾದವಧಿಜ್ಞಾನಮುಂ ಋಜುಮತಿಯುಂ ವಿಪುಳಮತಿಯುಮೆಂಬೆರಡು ಭೇದಮಾದ ಮನಃಪ್ರರ್ಯಯ ಜ್ಞಾನಮುಮೆಂಬ ಚತುರ್ವಿಧಬೋಧಮನೊಳಕೊಂಡು ತ್ರಿಳೋಕಮಾಣಿಕ್ಯಂ ಮಾಣಿಕ್ಯ ನಿಕರಮನೊಳಕೊಂಡ ಮಾಣಿಕ್ಯಾಕರದಂತೆ ಸಮುತ್ತುಂಗ ಪ್ರಕಾಶಮಯಾಂತರಂಗನಾಗಿ

ಚಳನಾತ್ಯುಜ್ಜಿತಯೋಗಯೋಗ್ಯಮೆನಿಪಾದಂ ವೃಕ್ಷಸಮ್ಮೂಲದೊಳ್
ಪುಳಿನಸ್ಥಾನದೊಳುಚ್ಚಪರ್ವತನಿತಂಬೋಚ್ಛೂಳಿಕಾಭಾಗದೊಳ್
ವಿಳಸದ್ಧ್ಯಾನದ ಪೆಂಪನೊಲ್ದು ರಚಿಸುತ್ತುಂ ಘಾತಿದುಷ್ಕರ್ಮಸಂ
ಕುಳಮಂ ನಿರ್ಜರಿಸುತ್ತುಮಿರ್ದನಧಿಮೋಕ್ಷಪ್ರಾಪ್ತಿಬದ್ಧೋದ್ಯಮಂ ೧೧೮

ವ: ಇಂತು ಧರ್ಮಮಾರ್ಗಪ್ರಭಾವನಾರ್ಥಂ ಛದ್ಮಸ್ಥಾವಸ್ಥೆಯಿಂದೊಂದು ವರ್ಷಪರ್ಯಂತಂ ವಿಹಾರಿಸುತ್ತುಮಿರ್ದು

ಎಲ್ಲಿ ತಪಂಗೊಂಡಂ ಮ
ತ್ತಲ್ಲಿಗೆ ಬಂದಂ ವಿಬೋಧಲಾಭಾರ್ಥಂ ಮುನಿ
ವಲ್ಲಭನಧಿಕಫಲಾರ್ಥಂ
ನಿಲ್ಲದೆ ಬರ್ಪಂತೆ ಬಿತ್ತಿದಲ್ಲಿಗೆ ವನಪಂ ೧೧೯

ವ: ಇಂತು ಶ್ರುತಾವಧಿಮನಃಪರ್ಯಯಂಗಳೆಂಬ ವಿಶೇಷಬೋಧ ಚತುಷ್ಟಯಂಗಳಿಂದ ಳಂಕೃತನಪ್ಪ ಧರ್ಮನಾಥಂ ಸಕಳವಿಮಳಕೇವಳಜ್ಞಾನಾದಾನ ಪರಮ ಪಂಚಮಜ್ಞಾನ ಸಂಜನಕಾರಣಾತ್ಯಂತಶುದ್ಧಶುಕ್ಲಧ್ಯಾನ ಸಮುದ್ಯಾತನಸಕ್ತಚಿತ್ತನಾಗಿ ಮುನ್ನಂ ದೀಕ್ಷಾಗ್ರಹಣ ಮಾದ ಸಾಳವನಕ್ಕೆ ಬಂದೊಂದು ಸಪ್ತಪರ್ಣವೃಕ್ಷಮೂಳದೊಳ ಕ್ಷೂಣಚ್ಛಾಯಾಚ್ಛನ್ನಮೆನಿಸಿ ನಿಜನಿಕಟವರ್ತಿರಕ್ತಾಶೋಕಪಲ್ಲವಪ್ರತಿಬಿಂಬದಿಂ ಶೋಣ ಮಾಣಿಕ್ಯಮಯಮೆಂಬಂತೆ ಕಾಣ್ಕೆವಡೆದ ಚಂದ್ರಕಾಂತಶಿಳಾತಳದೊಳೀರ್ಯಾಪಥಶುದ್ಧಿ ಕರಣಾನಂತರಂ ಪೂರ್ವಾಭಿ ಮುಖನಾಗಿ

ಕೃತಕಾಯೋತ್ಸರ್ಗರೂಪಂ ಕೆಡಿಸಿ ಪೊಱಗಣ್ಕೈದಿಂದ್ರಿಯಾಕ್ಷೇಪಮಂ ಸಂ
ಹೃತಿಗೆಯ್ದುದ್ಯೋಗದಿಂ ಘಾತಿಗಳನಿರದೆ ಕೆಯ್ಯಿಕ್ಕುವಂತಿಕ್ಕಿ ಕೆಯ್ಯಂ
ನತವದ್ಭ್ರೂಮಧ್ಯದೊಳ್ ಸ್ಥೈತಿರಿಸಿ ಮನಮನೇಕಾಗ್ರನಿಷ್ಠಾಪ್ರತಿಷ್ಠಂ
ನುತಶುಕ್ಲಧ್ಯಾನಮುದ್ರಾವಿಭವನಭವಂ ಭಾವಿಸುತ್ತಿರ್ದನಾದಂ ೧೨೦

ವ: ಆಗಳ್

ಉಲಿಯದ ಪಕ್ಷಿಗಳೋಳಿಗ
ಮೆಲೆಮಿಡುಕದ ತರುಗಳಿಂಗೆ ನೆಲೆಯಾಗಿ ವನಂ

ಸಲೆ ಚಿತ್ರಿಸಿದಂತಿರ್ದುದು
ಕಲಿಲಘ್ನ ಧ್ಯಾನವಿಘ್ನ ಶಂಕಾರಸದಿಂ ೧೨೧

ವ: ಅಂತು ಬಹಿಸ್ಸಾಮಗ್ರಿಯನಪ್ಪುಕೆಯ್ದು ಲೋಕಾಗ್ರಮನೆಯ್ದುವಾಗ್ರಹದಿಂದ ವ್ಯಗ್ರನಾಗಿ ಕ್ಷಾಯಿಕಸಮ್ಯಕ್ತ್ವಮನಂತಜ್ಞಾನಮನಂತದರ್ಶನಮನಂತವೀರ್ಯಮವಗಾಹನತ್ವ ಮಗುರುಲಘುತ್ವಮವ್ಯಾಬಾಧತ್ವಂ ಸೂಕ್ಷ್ಮತ್ವಮೆಂಬ ತದೀಯಸ್ಥಾನ ನಿಷ್ಠಿತರಪ್ಪ ಸಿದ್ಧಪರಮೇಷ್ಠಿಗಳಷ್ಟಗುಣಂಗಳಂ ಮನದೊಳ್ ನೆನೆದು

ವರನವಪದಾರ್ಥದರ್ಥೋ
ತ್ಕರಮಂ ಪರಿಭಾವಿಸುತ್ತುಮಿರ್ದಾ ಮುನಿಪಂ
ಸ್ಥಿರಮಾದ ತನ್ನ ಚಿತ್ತದೊ
ಳಿರದಾಜ್ಞಾವಿಚಯಮೆಂಬ ಯೋಗಮನಾಂತಂ ೧೨೨

ಕಡುಬಲ್ಪಿಂದಘಕುಳಮಂ
ಕೆಡಿಸುವುದಂ ಲಸದಪಾಯವಿಚಯಮನಾ ಮುನಿ
ಸಡಗರದಿಂ ವ್ಯಾಪಿಸಿದಂ
ತೊಡರ್ದತಿಶಯಮಾದ ಶುದ್ಧಲೇಶ್ಯಾತ್ರಯದೊಳ್ ೧೨೩

ಪರಮಯತಿ ಪುಣ್ಯಪಾಪ
ಸ್ವರೂಪಮಂ ತತ್ಫಲಂಗಳಂ ಧ್ಯಾನಿಸುತುಂ
ಧರಿಯಿಸಿದಂ ತನ್ನಭ್ಯಂ
ತರದಲ್ಲಿ ವಿಪಾಕವಿಚಯಮಮಂ ನಿಶ್ಚಳದಿಂ ೧೨೪

ಪರಿವಡಿಯಿಂ ಚಿಂತಿಸಿ ಪ
ನ್ನೆರಡುಮನುಪ್ರೇಕ್ಷೆಗಳ ಸುಸಂಸ್ಥಾನಮನಾ
ದರದಿಂ ತಾಳ್ದಂ ಮುನಿಪತಿ
ಸುರುಚಿರಸಂಸ್ಥಾನವಿಚಯಮಮಂ ಮುಕ್ತಿರತಂ ೧೨೫

ವ: ಇಂತು ಚತುರ್ವಿಧಮಾದ ಧರ್ಮಧ್ಯಾನಮಂ ಧ್ಯಾನಿಸುತುಮಪ್ರಮತ್ತ ಗುಣಸ್ಥಾನದೊಳ್ ನಿಂದು ಮುನ್ನಮಪ್ರವೃತ್ತಮಪೂರ್ವನಿವೃತ್ತಮೆಂಬ ಕರಣತ್ರಯದಿಂದೊರ್ಮೊದಲೊಳನಂತಾನುಬಂಧಿ ಕ್ರೋಧಮಾನಮಾಯಾಲೋಭಂಗಳೆಂಬ ಚತುಃ ಕಷಾಯಮಂ ಲಯಕ್ಕೆ ಸಲಿಸಿ

ಉಳಿದೀರಾಜಿಜೋಳಾಗಳೆ
ಖಳದುರಿತತಮೋರುಣಂ ವಿಸಂಯೋಜಿಸಿದಂ

ಬಳಿಯಂ ವಿಶ್ರಮಿಸಿದ ನರ
ನೊಳಕೊಂಡೆಚ್ಚಱುಮನೇಳ್ವ ಪೊತ್ತನಿತಱೊಳಂ ೧೨೬

ವ: ಮತ್ತಂ ಪೂರ್ವೋಕ್ತಕರಣತ್ರಯಮನೊಳಕೆಯ್ದನುಕ್ರಮದಿಂ ಪ್ರಥಮ ದ್ವಿತೀಯ ಚರಮಸಮಯದೊಳ್ ಮಿಥ್ಯಾತ್ವ ಸಮ್ಯಜ್ಮಿಥ್ಯಾತ್ವ ಸಮ್ಯಕ್ತ್ವ ಪ್ರಕೃತಿಗಳೆಂಬ ದರ್ಶನ ಮೋಹನೀಯತ್ರಯಮಂ ಕೆಡಿಸೆ

ತ್ರಿಕರಣಶುದ್ಧಂ ಸಪ್ತ
ಪ್ರಕೃತಿಗಳಂ ಕ್ರಮದೆ ಕೆಡಿಸಿ ಸತ್ಕ್ರಿಯದಿಂ ಕ್ಷಾ
ಯಿಕ ಸಮ್ಯಗ್ದೃಷ್ಟಿತ್ವಮ
ನಕುಟಿಳಮನನೆಯ್ದೆ ಶುದ್ಧದರ್ಶನನಾದಂ ೧೨೭

ವ: ಸಮನಂತರಂ ಚಾರಿತ್ರಮೋಹೋದಯಮುಂ ಜ್ಞಾನವೈರಾಗ್ಯ ಸಂಪತ್ತಿಯು ಮೊಂದನೊಂದನುಕ್ರಮಿಸುತ್ತುಮಿರೆ ಮತ್ತಾ ಪ್ರಮತ್ತ ಪರಾವರ್ತನ ಸಹಸ್ರಂಗಳ ನಂತರ್ಮುಹೂರ್ತದೊಳ್ ನಿರ್ವರ್ತಿಸಿ ಶುದ್ಧೋಪಯೋಗ ಸಮುದ್ಧತೆಯಿಂ ನಿಶ್ರೇಯಸ ಪ್ರಾಸಾದಸಮಾರೋಹಣನಿಶ್ರೇಣೀಭೂತಕ್ಷಪಕಶ್ರೇಣಿಯನೇಱಲೆಂದಧಃಪ್ರವೃತ್ತಾಧಿಕರಣ ಪರಿಣತಿಯನೊಳಕೊಂಡು

ಒಮದಾಯುಃಕರ್ಮಮಂ ಬಳಿ
ಸಂದಿರಲುಳಿದೇಳುಕರ್ಮದನುಭಾಗಸ್ಥಿತಿ
ಬಂದ ಪ್ರದೇಶಗುಣಮಂ
ಕುಂದಿಸಿದಂ ನಿರ್ಜರಾವಿಧಾನಕ್ರಮದಿಂ ೧೨೮

ವ: ಅನಂತರಮನಂತಗುಣಪ್ರಭಾವದೊಳೊಂದಿದೋರೊಂದೇ ಪರಿಣಾಮದಿಂ ಪೂರ್ವ ಕರಣ ಗುಣಸ್ಥಾನದಿನಗಲ್ದ ನಿವೃತ್ತಕರಣ ಕ್ಷಪಕಗುಣಸ್ಥಾನಮಂ ಪೊರ್ದಿದಂತ ರ್ಮುಹೂರ್ತ ದೊಳ್ ನಿದ್ರಾನಿದ್ರಾ ನಿದ್ರಾಪ್ರಚಲಾ ಪ್ರಚಲಾಪ್ರಚಲಾ ಸ್ಥಾನಗೃದ್ಧಿನರಕ ತಿರ್ಯಗ್ಗತಿ ತತ್ತತ್ಪ್ರಯೋಗ್ಯಾನುಪೂರ್ವೇಂದ್ರಿಯ ವಿಕಳೇಂದ್ರಿಯಜ್ಯಾತಾತಪೋದ್ಯೋತ ಸ್ಥಾವರ ಸಾಧಾರಣಸೂಕ್ಷ್ಮಂಗಳೆಂಬ ಪದಿನಾಱುಂ ಪ್ರಕೃತಿಗಳಂ ನಿರ್ಮೂಲಂ ಪಡಲ್ವಡಿಸಿ ಬಳಿಯಮಂತರ್ಮುಹೂರ್ತದೊಳ್

ಅಪ್ರತ್ಯಾಖ್ಯಾನ ಕಷಾ
ಯಪ್ರತ್ಯಾಖ್ಯಾನ ದುಷ್ಕಷಾಯಾಷ್ಟಕಮಂ
ಕ್ಷಿಪ್ರಂ ಕೆಡಿಸಿದನಾ ಧೀ
ರಪ್ರಭು ಕೈವಲ್ಯಸೌಖ್ಯಲಾಭನಿಮಿತ್ತಂ ೧೨೯

ವ: ಮತ್ತಮುತ್ತರಕ್ಷಣದೊಳ್ ನಪುಂಸಕವೇದಂ ಸ್ತ್ರೀವೇಮೆಂಬೆರಡಂ ಕೆಡಿಸಿ ಬಳಿಯಂ

ಹಾಸ್ಯರತ್ಯರತಿಶೋಕಭಯಜುಗುಪ್ಸೆಗಳೆಂಬಾಱ ಱೊಡನೆ ಪುಂವೇದಮುಮಂ ಬೆಂಕೊಂಡು ಪಾಯಿಡಿಯೆ ಸಂಜ್ವಳನ ಕ್ರೋಧಮಾನಮಾಯಾಲೋಭಂಗಳಂ ಪರಿಹರಿಸಿ

ಅತಿಸೂಕ್ಷ್ಮಸಾಂಪರಾಯ
ಸ್ಥಿತಂ ಪರಾಭವಿಸಿ ಸೂಕ್ಷ್ಮಲೋಭಕಷಾಯ
ಪ್ರತಿಪಕ್ಷಮನಷ್ಟಾವಿಂ
ಶತಿಭೇದಗ ಮೋಹನೀಯಬಲಮಂ ಗೆಲ್ದಂ ೧೩೦

ಕಿಡೆ ರಾಗದ್ವೇಷಂಗಳ್
ಪಡೆದು ಯಥಾಖ್ಯಾತ ಪರಮಚಾರಿತ್ರಮನಾ
ಗಡೆ ಪೆರ್ಮುಗಿಲಾವರಣಮ
ಮಡುಗಿ ರವಿಬಿಂಬದಂತೆ ಬೆಳ್ಪಂ ತಳೆದು ೧೩೧

ವ: ಮತ್ತಂ ಪೃಥಕ್ತ್ವ ವಿತರ್ಕವಿಚಾರವೆಂಬ ಪ್ರಥಮಶುಕ್ಲಧ್ಯಾನಮಂ ಧ್ಯಾನಿಸಿ ಕ್ಷೀಣಕಷಾಯವೀತರಾಗಚ್ಛದ್ಮಸ್ಥಗುಣಸ್ಥಾನಮಂ ಪೊರ್ದಿ ಕರಣಲಬ್ಧಿಯ ಪರಮ ಪ್ರಕರ್ಷಮನೆಯ್ದಿ ಬಳಿಯಮೇಕತ್ವವಿತರ್ಕವಿಚಾರಮೆಂಬೆರಡನೆಯ ಶುಕ್ಲಧ್ಯಾನದಿಂ ಬಹುಳಪ್ರದೇಶ ನಿರ್ಜರೆಗಳನಾಗಿಸಿ ಚರಮಸಮಯದೊಳೊರ್ಮೊದಲೊಳ್

ತವಿಸಿದನಂದು ಮತಿಶ್ರುತ
ಮನಃಪರ್ಯಯಂ ಮಹಾಕೇವಳಮೆಂ
ಬಿವಱಾವರಣಮನಯ್ದಂ
ನವಕೇವಳಲಬ್ಧಿಯೋಗ್ಯನೆನಿಪಾ ಮುನಿಪಂ ೧೩೨

ಪರಿಹರಿಸಿದನಾ ಮುನಿಪಂ
ಖಿರಚಕ್ಷುರ ಚಕ್ಷುರವಧಿಕೇವಳಮೆಂಬೀ
ಪರಿಯಾದ ನಾಲ್ಕು ಭೇದಂ
ಬೆರಸಿದ ಸಲೆಕಷ್ಟದರ್ಶನಾವರಣಮುಮಂ ೧೩೩

ಪ್ರಭುದಾನ ಲಾಭ ಭೋಗೋ
ಪಭೋಗ ವೀರ್ಯಂಗಳಂತರಾಯಮಿವೈದುಮ
ನಭಿಭವಿಸಿ ಕೆಡಿಸಿದಂ ಜಗ
ದಭಿವಂದ್ಯಂ ಕೆಡಿಸುವಂತೆ ರವಿ ಕತ್ತಲೆಯಂ ೧೩೪

ವ: ಇಂತು ಜ್ಞಾನಾವರಣೀಯ ದರ್ಶನಾವರಣೀಯ ಮೋಹನೀಯಾಂತ ರಾಯಂಗಳೆಂಬ ಘಾತಿಕರ್ಮಚತುಷ್ಟಯಂಗಳಂ ನಿರವಶೇಷಂ ವಿನಷ್ಟಂಗೆಯ್ಯಲೊಡಂ

ಪ್ರಕಟಂ ಪಿಂಪೋದುದುಂ ವರ್ತಿಸುವುದುಮಿೞ್ ಮುಂಬಪ್ಪುದುಂ ದ್ರವ್ಯಸಂಸ್ಥಾ
ನಕಮುಂ ಮೂಲೋಕದಾಕಾರಮನಜಿವ ಮಹಾಶಕ್ತಿವೆತ್ತಾ ನಿಮಿತ್ತಂ
ಸಕಳಪ್ರತ್ಯಕ್ಷಮಾದುತ್ತಮವಿಮಳಲಸತ್ಕೇವಳಜ್ಞಾನಮಾಗಳ್
ಸುಕೃತಾವಾಸಂಗೆ ಪುಟ್ಟಿತ್ತಮಿತಮಹಿಮವದ್ಧರ್ಮನಾಥಂಗೆ ಬೇಗಂ ೧೩೫

ಬೆಳಗನಪೇಕ್ಷೆಗೆಯ್ಯದೆ ವಿಲೋಚನಗೋಚರಭಾವಮಂ ಸಮಂ
ತೆಳಿಸದೆ ದೂರಮಂ ತ್ವರಿತಮೆನ್ನದದೊರ್ಮೊದಲಲ್ಲಿ ವಸ್ತುಸಂ
ಕುಳಮನೆಲ್ಲಮಂ ವಿಶದಮಾಗಿ ಕರಸ್ಥಿತರೇಖೆಯಂತಿರೊಂ
ದುಳಿಯದೆ ಕಾಣ್ಬ ಕೇವಳವಿಬೋಧಮದುಜ್ಜ್ವಳಿಸಿತ್ತು ದೇವನೊಳ್ ೧೩೬

ರಮಣೀಯಮತಿಶ್ರುತಮನ
ದಿ ಮನಃಪರ್ಯಯಮಡಂಗಿ ಪುದಿದುಸಿರದಿರೆ
ಕ್ರಮಕರಣವ್ಯವಧಾನಂ
ಸಮನಿಸದೆ ವಿಜೃಂಭಿಸಿತ್ತು ಕೇವಳಬೋಧಂ ೧೩೭

ಉದಯಿಸಿದುದು ಕೇವಳಬೋ
ಧದ ವಿಭವಂ ಮಾಘಮಾಸ ಪೌರ್ಣಮಿಯಪರಾ
ಹ್ಣದೊಳದುವೆ ಪುಷ್ಯನಕ್ಷ
ತ್ರದ ಸಿರಿ ಶುಭಲಗ್ನದಲ್ಲಿ ಗುರುವಾರದೊಳಂ ೧೩೮

ಅತ್ಯುಗ್ರತೇಜದಿಂದಾ
ದಿತ್ಯಂ ಬೆಳ್ಪೇಱ್ ತೋರ್ಪ ತೆಱದಿಂದಾ ಕೃತ
ಕೃತ್ಯಂ ಬೆಳ್ಗಂ ತಾಳ್ದಂ
ನಿತ್ಯಂ ಕೇವಳವಿಬೋಧಮಹಿಮೋದಯದಿಂ ೧೩೯

ವ: ಮತ್ತಮಾ ಪೊತ್ತಿನಲ್ಲಿ ಮುನ್ನ ಪಲಬದ್ಧಕ್ಷಾಯಿಕಸಮ್ಯಕ್ತ್ವಂ ನವಕೇವಳ ಲಬ್ಧಿಯ ಪ್ರಭಾವಮನವಗೈಸುವುದುಂ

ಚಂದ್ರಾರ್ಕಕೋಟಿದೀಧಿತಿ
ವೃಂದಮನೊಳಕೊಂಡು ಪೊಳೆವ ಮೆಯ್ವೆಳಗಿಂದೆ
ಯ್ದಂದಂಬಡೆದುದು ಜಿನತನು
ಕುಂದದೆ ಪೊಱವಳಿಸಿದಂತೆ ಶುಕ್ಲಧ್ಯಾನಂ ೧೪೦

ಜರೆರಾಗದ್ವೇಷರೋಗಂ ಪಸಿವು ತೃಷೆ ಭಯಂ ಚಿಂತೆ ನಿದ್ರಾವಿಷಾದಂ
ಮರಣಂ ಸ್ವೇದಂ ವಿಮೋಹಂ ಮದರತಿಜನನಂ ವಿಸ್ಮಯಂ ಕ್ಲೇಶಮೆಂಬೀ

ಪರಿಭೇದಂಗೂಡಿದಷ್ಟಾದಶವಿಧಖಿಳದೋಷಂಗಳಂ ಗೆಲ್ದು ತಾಳ್ದಂ
ಪರಮಾರ್ಹಂತ್ಯಾದಿಲಕ್ಷ್ಮೀನಿರತಿಶಯಪರೀರಂಭಮಂ ಧರ್ಮನಾಥಂ ೧೪೧

ವ: ಆ ಸಮಯದೊಳ್

ಪರಮೌದಾರಿಕ ದೇಹಂ
ಧರಣೀತಳದಿಂದಮೈದುಸಾವಿರಬಿಲ್ಲಂ
ತರಮನುೞ್ ಬಿಟ್ಟು ಗಗನೋ
ದರಕ್ಕೆ ನಗೆಗದತ್ತುದಕ್ಷಿಗಮೃತಾಂಜನಮಂ ೧೪೨

ವ: ಇಂತು ಭೋಂಕನೆ ನಭಕ್ಕೆ ನೆಗೆಯಲೊಡಮಮೇಯ ಕಾಂತಿನಿಕಾಯದಿಂದ ಖಿಳವಿಯತ್ತಳ ದಂತರಾಳಮೆಳೆಮಿಂಚುಗಳ ಬಳಗಮನೊಳಕೊಂಡುದೆಂಬಂತೆ ಥಳಥಳಿಸಿ ಪೊಳೆಯುತ್ತು ಮಿರ್ಪುದುಮಾಗಳ್

ಕೇವಳಬೋಧೋದಯ ಸಂ
ಸ್ಥಾಪಿಭವಂ ಧರ್ಮನಾಥಜಿನಪಂಗಾಯೆಂ
ಬೀ ವಿಧಮಂ ತಿಳಿದಂ ಪರ
ಮಾವಧಿಯಿಂ ದಿಪಿಜರಾಜನವನತಮಕುಟಂ ೧೪೩

ವ: ಮತ್ತಂ

ಕರಸಿ ಕುಬೇರನನುಸಿರ್ದಂ
ವಿರಚಿಸು ನೀಂ ಮುಂದೆ ಪೋಗಿ ಧರ್ಮಜಿನೇಶಂ
ಗುರುಸಮವಸರಣಮಣಿಮಂ
ದಿರಮಂ ನಾನಾನವೀನಘನಕೌಶಲಮಂ ೧೪೪

ವ: ಎಂದು ಬೆಸಸುವುದುಮಾತನಾತನ ಮಾತಂ ಶಿರದೊಳಾಂತು ಮಹಾ ಪ್ರಸಾದಮೆಂದು ಕೈಕೊಂಡು ಶಿಲ್ಪಿಕ ಕಳಾಕೌಶಲ್ಯಸಂಕಲ್ಪನ ನೈಪುಣ್ಯಾಪಣ್ಯಾಜನಂಬೆರಸು ಧರ್ಮನಾಥ ತೀರ್ಥಂಕರನಿರ್ದೆಡೆಗೆವಂದು ವಂದಿಸಿ ತದನಂತರಮಂತರಿಕ್ಷದಲ್ಲಿ ಕಂತು ಕೈವಾರಂ ಬೀಸಿದಂತೆ ಸಮವೃತ್ತಮಾಗಿ ಪಂಚಯೋಜನವಿಸ್ತಾರದಿಂ ಪ್ರಶಸ್ತಮಾದ ನಿಸ್ತೂಳ ಹರಿನೀಳಮಾಣಿಕ್ಯಮಯ ಧರಣೀವಳಯಮಂ ಕಣ್ಗಗುರ್ವಾಗಿ ವಿಗುರ್ವಿಸಿ

ಕೊತ್ತಳಗಳಿಂದೆ ಚೆಲ್ವಂ
ಬೆತ್ತು ಮಹಾಟ್ಟಾಳಜಾಳದಿಂ ಪೊಳೆಯುತ್ತುಂ
ಸುತ್ತಿರ್ದುದದಱ ಮೇಲೆ ಸ
ಮುತ್ತುಂಗ ಸುವಜ್ರರತ್ನಧೂಳೀಜಾಳಂ ೧೪೫

ರಸೆಯಿಂ ಪಂಚಸಹಸ್ರಚಾಪನಿಯತೋತ್ಸೇಧಂಬರಂ ನೀಳ್ದು ರಂ
ಜಿಸುವಿಪ್ಪತ್ತುಸಹಸ್ರಸುಸ್ಫಟಿಕ ಸೋಪಾನಂಗಳ ಶ್ರೇಣಿ ನಾ
ಲ್ದೆಸೆಯೊಳ್ ಪರ್ಬಿದುದಿಂದ್ರನೀಲಮಹಿಯಂ ಮುಟ್ಟರ್ಪಿನಂ ಪಾದಲಿ
ಪ್ತ ಸಮಗ್ರೌಷಧಿಯಿಂದಮೊರ್ಮೊದಲೆ ಮೇಲೇಱರ್ಪರಾನಂದದಿಂ ೧೪೬

ವ: ಆ ಸೋಪಾನಂಗಳಗ್ರಭಾಗದೊಳ್

ರಾಗಂಬೆತ್ತಿರ್ದ ನಾನಾನವಮಣಿಖಚಿತೋತ್ತೋರಣಶ್ರೇಣಿ ಮುಂದೊಂ
ದಾಗಿಂಬಂ ಮಾಡೆ ಮಾಣಿಕ್ಯಮಯಕಳಶಸಂದೋಹಮಾಕಾಶಮಂ ಪೊ
ತ್ತೇಗೆಯ್ದೆತ್ತಲ್ಕೆ ಪತ್ತುಂ ನೆಲೆಗಳನೊಳಕೊಂಡಿರ್ದ ಚೆಂಬೊನ್ನ ನಾಲ್ಕುಂ
ಬಾಗಿಲ್ವಾಡಂಗಳೊಪ್ಪಂಬಡೆದವು ದೆಸೆಯಂ ಪೊಂಗದಿರ್ ನುಂಗುವನ್ನಂ ೧೪೭

ಅವಱೊಳಗಣ ಪೊಱಗಣ ಪೊಸ
ಪವಳದ ಜಗಲಿಗಳ ಮೇಲೆ ಬಾಗಿಲ್ಗಾಪಿನ
ನೆವದಿಂ ಜ್ಯೋತಿಷ್ಕಾಮರ
ನಿವಹಂ ಪಿಡಿದಿರ್ದುದೆಸೆವ ಪೊಂಗಟ್ಟಿಗೆಯಂ ೧೪೮

ಪದಿನಾಲ್ಕುಂ ರತ್ನಂಗಳ್
ಪದೆಪಿಂ ನವನಿಧಿಗಳಷ್ಟಮಂಗಳಮುಂ ಕನ
ಕದ ಮುರಜೋದ್ಯುಪಕರಣಮು
ಮೊದವಿರ್ದುವು ಬೇಱವೇಱ ನೂಱೆಂಟವಱೊಳ್ ೧೪೯

ವ: ಆ ನಾಲ್ಕು ಬಾಗಿಲ್ವಾಡಂಗಳ್ ಮೊದಲ್ಗೊಂಡು ಜಿನಪತಿಯ ಮೊದಲ ಪೀಠಂಬರಂ ನೀಳ್ದು ಪರ್ವಿದ ನಾಲ್ಕು ಪೆರ್ಬೀದಿಗಳುಭಯಪಾರ್ಶ್ವದೊಳಳವಟ್ಟ ಪಳಿಕಿನ ಕೇರ್ಗಟ್ಟಿನ ನಡುವೆ ನಡುವೆ ಮಕರತೋರಣಂಗಳಿಂದಳಂಕೃತಮಾದೊಂದು ಗವ್ಯೂತಿ ಮಾತ್ರಾಂತರ ದೊಳ್

ಮಾನಸ್ತಂಭಂಗಳ್ ನಾ
ಲ್ಕೇನೆಸೆದುವೊ ನಾಲ್ಕುದೆಸೆಯೊಳಂ ಮಣಿಮಯ ಘಂ
ಟಾನಿಚಿತಂಗಳ್ ಮಿಥ್ಯಾ
ಜ್ಞಾನಾಹಂಕೃತಿಯನೊರಸುವವು ಕಾಣಲೊಡಂ ೧೫೦

ವ: ಮತ್ತಂ ನಾಲ್ದೆಸೆಯ ಗೋಮೇಧವೇಧಿಗಳ ಮೇಲೆ ಕನತ್ಕನಕಮಯ ಜಿನಬಿಂಬಂಗಳ್ ನಾಲ್ಕು ಪೊಳೆಯುತ್ತುಮಿರ್ಪುವವಂ ಬಳಸಿ ಪ್ರತ್ಯೇಕಂ ಚತುರ್ಗೋಪುರಂಗಳಿಂದ ಳಂಕಾರಂಬಡೆದ ಮೂಱುಪ್ರಾಕಾರಂಗಳಿಂ ನಾಲ್ಕುಕೊಂಡಂಗಳಿಂ ಕಣ್ಗೊಂಡು ಬೇಱ

ವೇಞೊಂದೊಂದಿಂತು ವಿಳಾಸಮನೊಳಕೊಂಡ ನಾಲ್ದೆಸೆಯನಾಲ್ಕು ಮಾನಸ್ತಂಭಂಗಳಡೆಡಯೆಡೆಯೊಳರ್ಧಯೋಜನದಗಲವನವಗಯಿಸಿದ ಪ್ರಾಸಾದಂಗಳೈದು ಜಿನಚೈತ್ಯಾವಾಸಮೊಂದೀ ಕ್ರಮದಿಂ ವಿನ್ಯಾಸಂಬಡೆದು ಪಂಚರತ್ನಂಗಳ ನಡುವೆ ಚಿಂತಾಮಣಿಯನಿರಿಸಿ ಬಣ್ಣಸರಂಗೊಯಿದಂತೆ ತಿಣ್ಣಂ ರಂಜಿಸುವ ಪ್ರಾಸಾದಚೈತ್ಯ ನಿಳಯದಿಳಾವಳಯದಿಂದೊಳಗೆ

ಪೊಸಬೆಳ್ಳಿಯ ಕೋಟೆ ವಿರಾ
ಜಿಸುಗುಂ ಥಳಥಳಿಪ ನಾಲ್ಕುಗೋಪುರದಿಂದೊ
ಳ್ಪೆಸುನಿಯ ವೇದಿಕೆಯೊಳ್ ಮು
ನ್ನುಸಿರ್ದವೊಲಿರ ಮಂಗಳಂಗಳುಂ ರಕ್ಷಕರುಂ ೧೫೧

ಪರಿಖಾವಳಯಂ ಚೆಲ್ವಂ
ಧರಿಸಿತ್ತಲ್ಲಿಂದಮೊಳಗೆ ಸಿದ್ಧರಸಂ ಕಾ
ಳ್ಪುರಮಾದುದೆನೆ ಪರಾಗೋ
ತ್ಕರರಂಜಿತ ಸಲಿಲಮುದ್ಧಮಣಿಸೋಪಾನಂ ೧೫೨

ಇರುಳುಂ ಪಗಲುಂ ಬಿಡದಂ
ಬುರುಹವನಂ ಕುಮುದವನಮುಮಲರ್ದಿಂದೊಂದೇ
ಪರಿಯಾಗಿ ಚಿತ್ರದಿಂ ಬಿ
ತ್ತರಿಸಿದವೊಲ್ ತೋರ್ಕೆವೆತ್ತುದಾ ಖಾತಿಕೆಯೊಳ್ ೧೫೩

ಜಳಕೇಳಿಗೆ ಬರ್ಪಮರೀ
ಕಳಕಾಂಚೀದಾಮ ನೂಪುರಂಗಳ ರವದಿಂ
ಪಲವು ನೀರ್ವಕ್ಕಿಯುಲಿಯುಂ
ಜಳಖಾತಿಕೆ ಮುಖರಮಾಯ್ತು ಪೆರ್ದೆರೆಯುಲಿಯಿಂ ೧೫೪

ವ: ಆ ನೀರ್ಗಾದಿಗೆಯುಮರ್ಧಯೋಜನಮಕ್ಕುಮಲ್ಲಿಂದೊಳಗೆಯಾ ಪರಿಯ ಚತುರ್ಗೋಪುರ ವೇದಿಕಾ ದೌವಾರಿಕನಿಧಿಮಂಗಳಂಗಳ ಸ್ವೀಕಾರದಿನಾಕಾರಂಬೆತ್ತ ರಾಜತಪ್ರಾಕಾರ ಮಿಕ್ಕುಮವಱಂತರ್ಭಾಗದೊಳ್

ಪಿರಿದುಂ ಪೂತಿರುವಂತಿ ಬಲ್ಮುಗುಳನಾಂತೊಳ್ಮೊಲ್ಲೆ ಪೂದೊಂಗಲಂ
ಭರದಿಂ ತಾಳ್ದದಿರ್ಮುತ್ತೆ ಕನ್ನಲರಿನಿಂ ಸೊಂಪಾದ ಸೇವಂತಿ ಬಿ
ತ್ತರದಿಂ ಮೊಗ್ಗೆಗಳುಳ್ಳ ಮಲ್ಲಿಗೆಗಳಿಂ ಚೆಲ್ವಾದ ವಲ್ಲೀವನಂ
ಕರಮೊಪ್ಪಿತ್ತು ಸಮಸ್ತಪುಷ್ಪವಸರಂ ನಿತ್ಯತ್ವಮಂ ಪೆತ್ತವೋಲ್ ೧೫೫

ಜಿನಪನ ಸೀಮೆಯೆಂದು ಪುಗಲಮ್ಮದೆ ದೂರದೊಳಿರ್ದು ಮನ್ಮಥಂ
ಘನಮೆನೆ ಗಾಳಿ ತಂದು ಪೊಜಿಸೂಸಿದ ಮುತ್ತಲರಿಂದೆ ಮಾಡಿ ಮೋ

ಹನಸರಮಂ ಜಗದ್ವಿಜಯಿಯಾದನದಂ ನಸುಸೋಂಕಿ ಬೀಸಲಾ
ಯ್ತನುಪಮಮಾದ ಗಂಧವಹಮೆಂಬಭಿಧಾನದ ರೂಢಿ ಗಾಳಿಗಂ ೧೫೬

ಅಳಿ ತುಂಬಿಯೆಂಬ ಪೆಸರಂ
ತಳೆದುದು ತದ್ವನದ ಪೂಗಳೆಸಳ್ಗಳನಿನಿಸುಂ
ಬಳಲಿಸದೆ ಬಹಳತರ ಪರಿ
ಮಳಭರಮಂ ತುಂಬಿಕೊಂಡ ಕಾರಣದಿಂದಂ ೧೫೭

ವ: ಇಂತೊಂದುಯೋಜನ ಸಮುಲ್ಲಸಿತಮಾದ ಸಂಪುಲ್ಲವಲ್ಲೀವನದಿಂದೊಳಗೆ

ಪೊಂಬೆಸದ ಪರಿಧಿ ನಯನ
ಕ್ಕಿಂಬಾದುದು ನಾಲ್ಕುರಜತಗೋಪುರದಿಂದಂ
ಕೆಂಬರಲ ಜಗಲಿಯಲ್ಲಿ ವಿ
ಡಂಬಿಸುವ ದ್ವಾರಪಾಲ ಯಕ್ಷಾಮರರುಂ ೧೫೮

ವ: ಒಂದೊಂದು ಗೋಪುರದಿಕ್ಕೆಲಂಬಿಡಿದೆರಡೆರಡಾಗಿ ಮೂಱುನೆಲೆಯ ಮಣಿಮಯ ನಾಟಕಶಾಲೆಗಳ್ ಪದಿನಾಱಿಕ್ಕುಮವಱೊಂದೊಂದು ನೆಲೆಯೊಳ್

ಲಯದೊಡನೆ ಗೀತವಾದ್ಯನಿ
ಚಯ ಮೃದುರವದಿಂದೆ ವಲಭಿ ಮಾರ್ದನಿಗುಡೆ ದೇ
ವಿಯರುಂ ಮೂವತ್ತಿರ್ವರ್
ನಯದಿಂ ನರ್ತಿಸುವರೆಸೆವಿನಂ ರಸಭಾವಂ ೧೫೯

ಒಂದೊಂದು ನಾಟ್ಯಶಾಲೆಯ
ಮುಂದೊಂದೊಂದೆನಿಸಿಯಗರುಧೂಪಘಟಂಗಳ್
ಕುಂದದೆ ಪದಿನಾಱಿಕ್ಕುಂ
ಸಂದಡರಲ್ ದೀವಮನಮಿತಧೂಮಸ್ತೋಮಂ ೧೬೦

ವ: ಮತ್ತಮಲ್ಲಿ

ಕೆಂದಳಿರ್ದೊಂಗಲಿಂದೆಸೆವಶೋಕವನಂ ಪೊಸಗಂಪನಾಂತಿರಲ್
ಕುಂದದ ಚಾರುಚಂಪಕವನಂ ತನಿವಣ್ಗೊನೆಯಿಂದೆ ಜೋಲ್ದು ಚೆ
ಲ್ವೊಂದಿದ ಸಪ್ತಪರ್ಣವನಮೆಲ್ಲೆಡೆಯೊಳ್ ಕಡುತೋರಗಾಯ್ಗಳಿಂ
ದಂದಮನಾಳ್ದ ಚೂತವನಮಾ ಕ್ರಮದಿಂದಮೆ ನಾಲ್ಕುಮೊಪ್ಪುಗುಂ ೧೬೧

ಆ ನಾಲ್ಕುಂ ಬನದಲ್ಲಿ ಮೂಱು ಕನಕಪ್ರಾಕಾರದಿಂ ಸುತ್ತಿ ಮ
ತ್ತಾ ನಾಲ್ಕುಂ ಜಿನಬಿಂಬಮಿಕ್ಕು ಮಣಿಭಾಸ್ವತ್ಸಿಂಹಪೀಠತ್ರಯಾ

ಚಿನ್ನಂ ಕಾಂಚನಕೂಟದಲ್ಲಿ ಪರಮಾಸ್ಥಪ್ರಾತಿಹಾರ್ಯಪ್ರಭಾ
ಮಾನ್ಯಂ ಜಿನನಾಯಕಂಗೆ ಧರ್ಮಚಕ್ರಮಂ ಪರ್ಯಂತದೊಳ್ ಧಾವನಂ ೧೬೨

ವ: ಅಂತಪ್ಪತಿಶಯ ವಿಶಾಲತಾವರ್ಧಿಯುಸಂಪೂರ್ಣಮಾಗಿ ಮಹಾವನಂಗಳ್ ಪ್ರದೇಶದ ನಾಲ್ಕುಸೆಯೊಳಿರ್ದ ಪೆರ್ವಾಗಿಲ ನಾಲ್ಕುಮಣಿಮಯ ಚತುರ್ಗೋಪುರ ಮಾರ್ಗಮದೆಳ ಕೊಂಡು ಪೋಗಲುಮಪ್ಪ

ಒಂದೊಂದು ಬನದ ನಡುವಣ
ಸೌಂದರತರ ಚೈತ್ಯವೃಕ್ಷಮೊಂದೊಂದೆಸೆಗಂ
ಬಂದು ಚತುರ್ವಿಧ ವಿವಿಜರ
ವೃಂದಂ ಪೂಜಿಸುವ ಸಂಭ್ರಮಂ ಪೆರ್ಚಿದಂ ೧೬೩

ನಾನಾಫಲತರುಗಳ ಸಂ
ತಾನಂ ಪೂವಿದಿರ್ದವೊಂದುದೊಂದಿನ ಮಿತಭೂ
ಸ್ನಾನಂಬರೆಗಂ ಮಧುರ
ಧ್ವಾನಂ ದೊಂಗುತ್ತು ಚಿರದೊಳೆಸೆಪುದಿದ ೧೬೪

ವ: ಅಂತಮಾನದೊಳ್ ಧಾವಳಿಯನಮಾಮಹಾವನದವನಿಯಿಂದೊಳಗೆ

ಪೊಸಪೊನ್ನಕೋಟೆ ನಾಲ್ಕುಂ
ದೆಸೆಗಳೊಳೊಳ್ಪೆಸೆವ ಬಾಗಿಲ್ವಾಡಂ
ಪಸುರ್ವರಲ ಪಗಲಿಯೊಳ್ ದೊರೆ
ಬಿಸುಗಂ ನಿಧಿ ಯಕ್ಷರಕ್ಷಕರ್ಮಂಗಳುಮಂ ೧೬೫

ವ: ಅಂತದಱ ಪ್ರದೇಶದೊಳ್

ನಭಮಂ ಮುಂದಾಡುವತ್ಯುಚ್ಚ್ರಿತಕನಕಮಯಸ್ತಂಭಚೂಡಾಗ್ರದೊಳ್ ಚೆ
ಲ್ವಿಭವಂಬೋದಂ ಮಯೂರಂ ವೃಷಭಪತಿ ಮರಾಳಂ ಸ್ರಜಂ ಚಕ್ರವಾಕಂ
ಸುಭವಂಬಾಸ್ಯಂ ಗರುತ್ಮಂ ಧಳಧಳಿಸುವ ತಳ್ತಂಬರಂ ಪತ್ತುಜಾತಿ
ಪ್ರಭವ ಚಿಹ್ನಂಗಳಿಂ ರಂಜಿಸುವವು ವಿಜಯಂಬೆತ್ತು ಪತ್ತುಂ ಧ್ವಜಂಗಳ್ ೧೬೬

ವಚನ : ಇಂತು ಪತ್ತುಂತೆಱದ ಮಹಾಧ್ವಜಗಳೊಂದೊಂದಕ್ಕೆ ನೂಱೆಂಟು ನೂಱೆಂಟಾಗಿ ನಾಲ್ದೆಸೆಯೊಳಿರ್ದವಲ್ಲಿ ನಾಲ್ಕಾಗಿರದ ಮೂಱುಱೆಪತ್ತು ಮುಖ್ಯಧ್ವಜಂಗಳಪ್ಪು ಮತ್ತಮದೊಂದೊಂದಕ್ಕೆ ಪರಿವಾರಗಳಾಗಿ

ಬಿತ್ತರಿಸೆ ನಾಲ್ಕುಲಕ್ಕಂ
ಮತ್ತಱುವತ್ತಾಱುಸಾಸಿರಂ ಪಂಚಶತಂ

ಚಿತ್ರಜಿನಪತ್ರಾಗೆಸ್ತಂ
ಮೊತ್ತಂಗೊಂಡಿರ್ದ ಪದ್ಮಜಂಗಳ್ ಸುತ್ತಂ ೧೬೭

ಪರಕಲಿಸಿದ ಬೆಳೆಯ ಮುಗಿ
ಲ್ವೆರಂಟಿನೆ ತಧ್ವಜಾಳಿಗ್ಗಲೆಯಲ ದುಕೂಲಂ
ಬರಜಾಳಂ ಪುಳ್ಳಿಸಿದ
ತ್ತೆರಲ್ವಿಂದುದಿರ್ದ ತೆಜಿದಿನಪಮಾನದಲ್ಲಳ್ ೧೬೮

ವ: ಆ ಧ್ವಜಾವನಿವಳಯಮೊಂದು ಯೋಜನಮಕ್ಕುಮಲ್ಲಿಂದೊಳಗೆ

ಅರ್ಜುನಮಾರ್ಗದ ಸಾಲಂ
ಸಜ್ಜಿತರಜತಪ್ರತೋಳಿಕಾದಿ ಚತುಷ್ಕಂ
ದುರ್ಜಯನಾಗಕುಮಾರ ಸ
ಮುಜ್ಜ್ರಂಭಿತರಕ್ಷಣಂ ಸಮಂಗಳಮೆಸಗುಂ ೧೬೯

ವ: ಅಲ್ಲಿ ಮುನ್ನಿನಂತೆ ಪದಿನಾಱುಂ ನಾಟಕಶಾಲೆಗಳುಮನಿತೆ ಧೂಪ ಘಟಂಗಳು ಮನೊಳಕೊಂಡು ಸಾಲತ್ರಯಪರಿವೃತ ತೃತೀಯ ವಿಷ್ಟರಾಗ್ರ ಕಾಯೋತ್ಸರ್ಗ ಸ್ಥಿತ ಶುದ್ಧಸ್ಫಟಿಕಮಯಸಿದ್ಧ ಪ್ರತಿಮಾಪ್ರತಿಬಿಂಬದ್ಯೂಲಶಾಲೆಗಳುಂ ಪ್ರತೀತಿಪಿಟಿಪಿ ಘಂಟಾಜಾಳಮುಕ್ತಾದಾಮದಾಮರೋದ್ದಾಮಂಗಳಪ್ಪ ನಮೇರು ಮಂದಾರ ಪಾರಿಜಾತ ಸಂತಾನಕಮೆಂಬ ಸಿದ್ಧಾರ್ಥಕವೃಕ್ಷಂಗಳಿಂದಿಕ್ಕೆಲಮುಂ ಸೆಜ್ಜೆಗೆಯ್ದಿರ್ಕುಯೋಜನ ಪ್ರಕಲ್ಪಿತ ಮಾದವಲ್ಲಿತರ ಕಲ್ಪವೃಕ್ಷವನಕ್ಷೋಣೀಮಂಡಳಮಿಕ್ಕುಮಲ್ಲಿ

ಮಾಲ್ಯಾಂಗಂ ಭೋಜನಾಂಗಂ ಪೊಸತೆನಿಸುವ ವಸ್ತ್ರಾಂಗಮುಜ್ಯೋತಿರಂಗಂ
ಸಲ್ಲೇಪಾಂಗಾಂಗಂ ಬಹುವಿಧವರ ತೂರ್ಯಾಂಗಮುದ್ಭೂಷಣಾಂಗಂ (?)
ಲಾಲೆಸ್ವೇಪ್ಪಿಪಾಂಗಮತ್ಯುಜ್ವಳಿತ ಕನಕಪಾತ್ರಾಂಗಮೆಂದಿಂತು ಪೇಳ್ದ
ಗೆಲ್ಲಗೋರ್ಲ್ಪಿವ ಪತ್ತುಂತೆಱದತಿಶಯಮಕ್ಕಲ್ಪವೃಕ್ಷಂಗಳಿರ್ಕುಂ ೧೭೦

ವ: ಇಂತತ್ಯಾಶ್ಚರ್ಯಶೋಭಾಸಮುಪಲಕ್ಷಿತಮಾದ ಕಲ್ಪವೃಕ್ಷನಂದನವನದಿಂದೊಳಗೆ

ಬಳಸಿತ್ತು ಕನಕವೇದೀ
ವಳಯಂ ಧರಣೇಂದ್ರರೆಂಬ ದೌವಾರಿಕರು
ಜ್ವಳಿಸುವ ಬೆಳ್ಳಿಯ ನಾಲ್ಕು
ಗ್ಗಳವಾಗಿಲ್ವಾಡದಿಂದೆ ಕಣ್ಗೆಸೆಯುತ್ತುಂ ೧೭೧

ವ: ಅಲ್ಲಿಂದೊಳಗೆ

ಎಡೆಯೆಡೆಯೊಳ್ ಮಣಿತೋರಣ
ಮೆಡೆಗಿಜೆದಿರೆ ಜಿನರ ಸಿದ್ಧರ ಪ್ರತಿಮೆಗಳುಂ
ತೊಡರ್ದಿರೆ ನಾಲ್ಕುಂ ವೀಥಿಯ
ನಡುವಿರ್ಪವು ಬೇಱೆ ನವನವಸ್ತೂಪಂಗಳ್ ೧೭೨

ವ: ಅವಱ ಕೆಲಂಬಿಡಿದು ಸುತ್ತಿ

ಒಲಿದಾಡುತ್ತಿರ್ಪ ವಾದ್ಯಂಗಳನತಿಶಯದಿಂ ಬಾಜಿಸುತ್ತಿರ್ಪ ಸನ್ಮಂ
ಗಳಮಂ ಪಾಡುತ್ತಮಿರ್ಪಚ್ಚರಿಯಿನೆಸೆವ ಮಾಣಿಕ್ಯಸಂಗೀತಹರ್ಮ್ಯಾ
ವಳಿ ಚಿತ್ರಂಬೆತ್ತುಂ ಸಂಗೀತಮನ ಪ್ರಿಯದವರ್ಗಾದೊಡಂ ಪೊಕ್ಕೊಡಂದಾ
ಗಳೆ ಪಾಡುತ್ತಾಡುತಿರ್ಪಚ್ಚಿಯನೊಡರಿಸುಗುಂ ತುಂಬಿ ದೇವರ್ಕಳಿಂದಂ ೧೭೩

ಸಂಗೀತತ್ರಯವಿಭವಂ
ಪಿಂಗದ ನವರತ್ನರಚಿತ ನಾನಾವಳಭೀ
ತುಂಗಭವನಂಗಳಿಂದಂ
ಮಂಗಳಮಾಯ್ತರ್ಧಯೋಜನಕ್ಷಿತಿಚಕ್ರಂ ೧೭೪

ವ: ಇಂತು ನಿಳಿಂಪದಂಪತಿಗಳಭಿನವ ಕ್ರೀಡಾಸಂಭ್ರಮಸಂಪದದಲಂಪಿಂ ಪೊಂಪುಳಿವೋಪ ಸಂಗೀತಶಾಲಾಮಾಲಿಕಾವಳಯಿತ ಮಹೀತಳದಿಂದೊಳಗೆ

ಪಳಿಕಿನ ಕೋಟೆಗೊಪ್ಪಿದವು ನಾಲ್ಕುವಿನೀಲದ ಗೋಪುರಂಗಳು
ಜ್ವಳಿಸುವವಿಕ್ಕೆಲಂಬಿಡಿದು ರತ್ನದ ವೇದಿಕೆಗಳ್ ತದಗ್ರದೊಳ್
ಬಳಸಿದ ಕಲ್ಪಜಾಮರಕುಮಾರಮಹಾಪ್ರತಿಹಾರಕರ್ ಮನಂ
ಗೊಳಿಸಿದರಾಂತು ಪೊಂಬೆಳೆಗಳಂ ಮಣಿಭೂಷಣದಿಂದಮೊಪ್ಪುತುಂ ೧೭೫

ವ: ಆ ವಿಕಟಸ್ಫಾಟಿಕಕೋಟಾವಳಯಲಕ್ಷ್ಮಿಯ ಚತುರ್ಮುಖಮಂಡಳದಂತೆಸೆವ ಹರಿನ್ಮಣಿಮಯಚತುರ್ಗೋಪುರದ್ವಾರದಭ್ಯಂತರಾಳದೆರಳ್ದೆಸೆಯೊಳಿರ್ದ ವಿತರ್ದಿಕಾಸ್ಥಳೀಮಧ್ಯದೊಳಶ್ವರತ್ನಮುಂ ಗಜರತ್ನಮುಂ ಸೇನಾಪತಿರತ್ನಮುಂ ಗೃಹಪತಿರತ್ನಮುಂ ಪುರೋಹಿತರತ್ನಮುಂ ಸ್ತ್ರೀರತ್ನಮುಂ ವಿಶ್ವಕರ್ಮರತ್ನಮುಮೆಂದಿಂತು ಸಪ್ತಜೀವರತ್ನಂಗಳುಂ ಚಕ್ರರತ್ನಮುಂ ದಂಡರತ್ನಮುಂ ಖಳ್ಗರತ್ನಮುಂ ಛತ್ರರತ್ನಮುಂ ಚರ್ಮರತ್ನಮುಂ ಮಣಿರತ್ನಮುಂ ಕಾಕಿಣೀರತ್ನಮುಮೆಂದಿಂತೇಳುಮಜೀವರತ್ನಂಗಳುಮಿಾ ಪ್ರಕಾರದಿಂ ಚತುರ್ದಶರತ್ನಂಗಳುಂ ಬಳಿಯಂ ಕಾಳಮುಂ ಮಹಾಕಾಳಮುಂ ಮಾಣವಕಮುಂ ಪಿಂಗಳಮುಂ ಪದ್ಮಮುಂ ಪಾಂಡುಕಮುಂ ನೈಸರ್ಪಣಮುಂ ಶಂಖಮುಂ ಸರ್ವರತ್ನಮುಮೆಂಬ ನವನಿಧಿಭಂಡಾರಂಗಳುಂ ಮತ್ತಂ

ಪ್ರತ್ಯೇಕಮಷ್ಟೋತ್ತರಶತಂಗಳಾಗಿ ತೋರ್ಕೆವೆತ್ತ ಮಂಜುಳಕಳಶಮುಂ ಮಣಿದರ್ಪಣಮುಂ ಸಮುತ್ತುಂಗಭೃಂಗಾರಮುಂ ವಿಮಳ ಚಾಮರಮುಂ ಧವಳಾತಪವಾರಣಮುಂ ವಿಜಯಧ್ವಜಮುಂ ಯಜನವ್ಯ ಜನಮುಂ ಗರಿಷ್ಠ ಸುಪ್ರತಿಷ್ಠಕಮುಮೆಂಬಷ್ಟ ಮಹಾಮಂಗಳಂಗಳುಂ ನಾರಂಗ ನಾಳಿಕೇರ ಮಾಕಂದ ಮಾತುಳಂಗಾದಿ ಸಕಳರ್ತುಕ ಫಳಕುಳಕಳಿತ ವಿಪುಳ ಪರಿಮಳಭರವಿರಸನ ಮಿಳಿತ ಮಾಳತೀ ಲತಾಂತಾನಂತಮಾಳಾದಿ ಮಾಳಿಕೆಗಳುಂ ಥಳಿಥಳಿಸಿ ಪೊಳೆವ ಸ್ಥೂಳಸುವರ್ಣರೂಪ್ಯಮಯ ವಿಶಾಳಸ್ಥಳಾದಿ ನಾನಾವಿಧ ಭಾಜನಸಮಾಜಂಗಳುಂ ನಿರತಿಶಯಕಿರಳಗಣಮನುಗುಳ್ವ ಪಲತೆಱದ ಪರಿಪರಿಯ ವಿಳಸದಭಿನವಮಣಿ ವಿಳಾಸವಿಶೇಷಿತ ಮಕುಟಕುಂಡಳ ಕೇಯೂರಹಾರಾಂಗದಾದಿ ಬಹುವಿಧಭೂಷಣ ಕಳಾಪಂಗಳುಂ ಪ್ರಶಸ್ತನಿಧಾನಾದಿ ಸಮಸ್ತ ವಸ್ತುಗಳುಂ ನಿರಂತರಂ ನೆಲೆಗೊಂಡು ನಯನಾ ನಂದಮನಜನಿಸುತ್ತುಮಿರೆ

ಅದಱಂತರ್ಭಾಗದಲ್ಲಿ ಸ್ಫಟಿಕಘಟಿತ ಕೌಶಲ್ಯಸಾಕಲ್ಯಶೋಭಾ
ಸ್ಪದಲಕ್ಷ್ಮೀಮಂಡಪಂ ವಿಸ್ಮಯಮನೊಡರಿಸುತ್ತಿರ್ದುದೆಲ್ಲರ್ಗೆ ನೈರ್ಮ
ಲ್ಯದಿನಾಕಾಶಸ್ವಭಾವಂ ಪೊಳೆವವೊಲದಱ ಸ್ಫೀತಕಾಂತಿಪ್ರಭಾವಂ
ಪುದಿಯಲ್ ಕ್ಷೀರೋದನೀರಿಂದಭಿಷವಣಮನಾಂತಂತೆ ತೀರ್ಥೇಶನಿರ್ದಂ ೧೨೬

ಆ ಲಕ್ಷ್ಮೀಮಂಡಪದ ವಿ
ಶಾಲಂ ಯೋಜನಮದೊಂದಱನಿತಕ್ಕದಱೊಳ್
ಸಾಲದ ಮೂಲಂಬಿಡಿದು ಗ
ಣಾಲಯ ಭೂವಳಯಮಿರ್ದುದೇಕಕ್ರೋಶಂ ೧೨೭

ಆದಿಯ ನಾಲ್ಕುವೀಥಿಗಳೆರಲ್ಕೆಲದಲ್ಲೆರಡಾಗಿ ತಮ್ಮೊಳೆಂ
ಟಾದವು ಮತ್ತಮಂತವಱೆರಳ್ದೆಸೆಯಲ್ಲೆರಡಾಗಲಿಂತು ಸ
ಮ್ಮೇದುರಚಂದ್ರಕಾಂತಮಯಭಿತ್ತಿಗಳುಂ ಪದಿನಾಱನಿಕ್ಕುಮಿಾ
ದ್ವಾದಶಕೋಷ್ಠಮೊಪ್ಪಿದುದು ಪೂರ್ವದಿಗಾದಿಜಿನಪ್ರದಕ್ಷಿಣಂ ೧೨೮

ವ: ಆ ಪೂರ್ವದಿಗ್ವೀಥೀಪ್ರದೇಶಂಬಿಡಿದು ದಕ್ಷಿಣದಿಗ್ವೀಥೀಪ್ರದೇಶಪರ್ಯಂತ ಮಂತರಾಳ ದೊಳನುಕ್ರಮಂಗೊಂಡು

ಮುನಿಜನಮುಂ ಕಲ್ಪಾಮರ
ವನಿತಾಜನಮುಂ ಮನುಷ್ಯನಾರೀವೃತ ಪಾ
ವನಗುಣವದಬ್ಜಿಕಾ ವಿಭು
ಜನಮುಂ ನೆಲಸಿತ್ತು ಮೊದಲ ಕೋಷ್ಠತ್ರಯದೊಳ್ ೧೨೯

ವ: ಆ ದಕ್ಷಿಣದಿಗ್ವೀಥಿಕಾಸ್ಥಾನಂ ಮೊದಲ್ಗೊಂಡು ಪಶ್ಚಿಮದಿಗ್ವೀಥಿಕಾವಧಿಯಾಗಿ ಮಧ್ಯದೊಳ್ ನಿಮಿರ್ದು

ಜ್ಯೋತಿಷ್ಕ ಕಾಮಿನೀತತಿ
ನೂತವ್ಯಂತರವಧೂಚಯಂ [ತಾಂ]ನೆಲಸಿ
ದ್ದೋ೯ತು ಭವನಾಮರಸ್ತ್ರೀ
ಜಾತಮುಮೆರಡನೆಯ ದೆಸೆಯ ಕೋಷ್ಠತ್ರಯದೊಳ್ ೧೮೦

ವ: ಆ ಪಶ್ಚಿಮದಿಗ್ವೀಥಿಯಿಂ ತೊಟ್ಟುತ್ತರದಿಗ್ವೀಥಿಯ ಸೀಮೆಯಾಗಿ ನಡುವೆ ನಿಬಿಡಮಾದ

ಭವನಾಮರರುಂ ವ್ಯಂತರ
ನಿವಹಂ ಜ್ಯೋತಿಷ್ಕದೇವರುಂ ಬಹಳತರೋ
ತ್ಸವದಿಂ ನೆಲಸಿರ್ದರ್ ಭ
ಕ್ತಿವಶರ್ ಮೂಱನೆಯ ದೆಸೆಯ ಕೋಷ್ಠತ್ರಯದೊಳ್ ೧೮೧

ವ: ತದುತ್ತರದಿಗ್ವೀಥಿ ತೊಡಗಿ ಪೂರ್ವದಿಗ್ವೀಥಿಯೇ ಮೇರೆಯಾಗಿ ಚಕ್ರವಾಕಸ್ಥಳದೊಳ್

ಕಲ್ಪಜದೇಹಸಮೂಹಮ
ನಲ್ಪಮಹಾಚಕ್ರವರ್ತಿನಿಕರಂ ನೆಲಸಿ
ತ್ತೊಳ್ಪಿಂ ತಿರ್ಯಗ್ಜಾತಿವಿ
ಕಲ್ಪಂ ನಾಲ್ಕನೆಯ ದೆಸೆಯ ಕೋಷ್ಠತ್ರಯದೊಳ್ ೧೮೨

ವ: ಮತ್ತಮರಿಷ್ಟಸೇನಾಚಾರ್ಯರ್ ಮೊದಲಾದ ನಾಲ್ವತ್ತಿರ್ವರ್ ಗಣಧರರು ಮೊಂಭೈನೂರ್ವರ್ ಪೂರ್ವಧರರುಂ ಸಾಸಿರದೇಳುನೂಱನಾಲ್ವತ್ತು ಶಿಕ್ಷಕರುಂ ಮೂಱು ಸಾಸಿರದಱುನೂರ್ವರವಧಿಜ್ಞಾನಿಗಳುಮಯಿನೂಱನಾಲ್ವತ್ತು ಮನಃಪರ್ಯಯಜ್ಞಾನಿ ಗಳುಮನಿತೆ ಕೇವಲಜ್ಞಾನಿಗಳುಮೇಳುಸಾಸಿರ್ವರ್ ವಿಕ್ರಿಯರ್ಧಿಪ್ರಾಪ್ತರುಮಿರ್ಛ್ಛಾಸಿರ ದೆಂಟುನೂರ್ವರ್ ವಾದಿಗಳುಂ ಮೂಱುಸಾಸಿರದ ನಾನೂರ್ವರಜ್ಜಿಯರುಮೆರಡುಲಕ್ಕೆ ಶ್ರಾವಕರುಂ ನಾಲ್ಕುಲಕ್ಕೆ ಶ್ರಾವಕಿಯರುಮಸಂಖ್ಯಾತ ದೇವಿಯರುಮಸಂಖ್ಯಾತ ತಿರ್ಯ ಗ್ಜಾತಿಜೀವಸಮಾಜಮುಂ ಪೂರ್ವೋಕ್ತಕ್ರಮದಿಂ ನಿಜನಿಜಕೋಷ್ಠಪ್ರದೇಶಂಗಳೊಳ್ ಪರಮೇಶ್ವರಪ್ರಭಾವದಿ ಸಂಕ್ಲಿಷ್ಟರೂಪಮಾಗಿರ್ಪುದುಂ

ದ್ವಾದಶವಿಧಕೋಷ್ಠಂಗಳ್
ಮೇದುರಸೌವರ್ಣಗಂಧಕುಟಿಯಂ ಬಳಸಿದ
ವಾದರಿಸೆ ಮೇರುಗಿರಿಯಂ
ದ್ವಾದಶರವಿಮಂಡಳಂಗಳುಂ ಬಳಸಿದವೋಲ್ ೧೮೩

ವ: ಅನಂತಚಾತುರ್ವರ್ಣಮಹಾಸಂಘದಿಂ ಸಂಪೂರ್ಣಮಾಗೆ ತುಂಬಿ ತಿಂತಿಣಿವೋಪ ಗಣಕ್ಷೋಣಿಯಿಂದೊಳಗೆ

ಥಳಥಳಿಪಿಂದ್ರನೀಲಮಣಿಯಿಂದವೆ ಮಾಡಿದ ನಾಲ್ಕುಗೋಪುರಂ
ಗಳ ಕೆಲದಲ್ಲಿ ವಿದ್ರುಮದ ವೇದಿಕೆಯೊಳ್ ನಿಧಿ ಮಂಗಳಂಗಳುಂ
ತೊಳಗುವ ಕಲ್ಪಜಾಮರ ಕುಮಾರಮಹಾಪ್ರತಿಹಾರಕಾಳಿ ಸಂ
ಗಳಿಸೆ ನಭೋನಿಭಸ್ಫಟಿಕವೇದಿಕೆ ಮಂಡಳಿಸಿತ್ತು ಸುತ್ತಲುಂ ೧೮೪

ವ: ಮತ್ತದುಚಿತಸ್ಥಾನಕದೊಳತೀವ ನವೀನಬಂಧಪ್ರಬಂಧಬಂಧುರಮಾಗೆ ಕೀಲಿಸಿದ ನವರತ್ನಂಗಳ ಮೊತ್ತದಿಂ ಬಿತ್ತರಂಬೆತ್ತ ಮುತ್ತಿನ ದ್ವಾರಬಂಧದ ಮುಂದೆ ಗದಾದಂಡ ಚಕ್ರಪಾಶ ಫಳಕಂಗಳಂ ಪಿಡಿದು ನಿಂದ ವೃಂದಾರಕವರ್ಯನಂ ದೌವಾರಿಕ ಗೌರವಂ ವಿಜೃಂಭಿಸುತ್ತುಮಿರಲಲ್ಲಿಂದೊಳಗೆ

ನವಶತದಂಡದುನ್ನತಿಯಿನೊಪ್ಪಮನಾಂತಱುನೂಱದಂಡಮೇ
ಪವಣಗಲಕ್ಕೆ ನೀಳಕೆ ಕುಬೇರನೆ ಸೂತ್ರಿಸಿ ಚಿತ್ರಮಿಟ್ಟು ಸಂ
ಭವಿಸಿದ ಚೆಲ್ವಗಂಧಕುಟಿಯಂ ಪೊಗಳ್ವನ್ನನದಾವನೋ ತ್ರಿಭೂ
ಭುವನದೊಳಿನ್ನುಮಿಲ್ಲೆನಿಪ ರನ್ನದ ಮಾಟದೆ ತೋರ್ಕೆವೆತ್ತುದಂ ೧೮೫

ಅದು ಪರಮಾರ್ಹಂತ್ಯಶ್ರೀ
ಸುದತಿಯ ಮದುವೆಯೊಳೊಡರ್ಚಿದುರುಮಂಡಪದಂ
ದದೆ ಚಿತ್ತದ ಗೊತ್ತಾದುದು
ಬಿದಿ ಪೊಗಳಲ್ಕಾಱನದಱ ಶೋಭೆಯ ಪೆಂಪಂ ೧೮೬

ಪರಮೌದಾರಿಕ ದಿವ್ಯದೇಹಘನಗಂಧಂ ತುಂಬಿ ತುಳ್ಕಾಡೆ ಬಿ
ತ್ತರಿಸುತ್ತಿರ್ದುದು ಸಾರ್ಥಗಂಧಕುಟಿಯೆಂಬೀ ನಾಮಮಂ ಪಂಚರ
ತ್ನರುಚಿಪ್ರಾಂಚಿತಮಂಡಪಂ ಜಿನಪತಿಸ್ನಾನಂ ಕರಂ ನಾಣ್ಚಿದಂ
ತಿರೆ ಕಾಳಾಗರುಧೂಪಧೂಮಮಡರ್ದತ್ತಲ್ಲಿಂದಲರ್ವಟ್ಟೆಯಂ ೧೮೭

ಆ ಗಂಧಕುಟಿಯ ಗಂಧ
ಕ್ಕೋಗಡಿಸದೆ ಸೋಲ್ತು ಬೆಳ್ಮೊಗಂ ಬಿರ್ದಪೊಲಿಂ
ಬಾಗಿರ್ದುದು ಕರ್ಪೂರಂ
ಪೂಗಳ್ ಮಧುಬಿಂದು ವಿಷದೆ ನೀರೋಡುವವೊಲ್ ೧೮೮

ವ: ಇಂತು ನವೀನರಚನಾತಿಶಯದಿಂ ಬಂಧುರಮಾದ ಗಂಧಕುಟಿಯ ಮಧ್ಯಸ್ಥಳಕ್ಕ ಳಂಕಾರಮೆನಿಸಿಯೇಳುನೂಱಯ್ವತ್ತು ಬಿಲ್ಲಗಲಮನೆಂಟುಬಿಲ್ಲುದ್ದಮನಪ್ಪುಕೆಯ್ದು

ರಮಣೀಯಾಂಶುತರಂಗಿತಂ ಮೊದಲಪೀಠಂ ಚಾರುವೈಡೂರ್ಯರ
ತ್ನಮಯಂ ರಂಜಿಸಿದತ್ತು ಮತ್ತದಱ ನಾಲ್ಕುಂ ದಿಕ್ಕಿನೊಳ್ ಧರ್ಮಚ

ಕ್ರಮನುದ್ಯನ್ಮಕುಟಾಗ್ರದೊಳ್ ತಳೆದು ಯಕ್ಷಶ್ರೇಣಿ ನಿಂದಿರ್ದುದು
ತ್ತಮ ನಾನಾವಿಧಪೂಜನೋಪಕರಣಂಗಳ್ ಸಂದವಲ್ಲಲ್ಲಿಗಂ ೧೮೯

ವ: ಚಕ್ರವರ್ತಿ ಖಚರೇಂದ್ರಾದಿ ಸಮಭ್ಯರ್ಚಿತ ಪ್ರಥಮಪೀಠದ ಮೇಲೇಳು ನೂಱು ಧನುಃಪ್ರಮಿತವಿಶಾಲಮಂ ಚತುಶ್ಚಾಪೋತ್ಸೇಧಮನೊಳಕೊಂಡು

ಎರಡನೆಯ ಹೇಮಮಯವಿ
ಷ್ಟರಮಷ್ಟವಿಧಧ್ವಜಂಗಳಿಂ ಬಳಸಿ ಮನೋ
ಹರಮಾದುದಮಳಮೌಕ್ತಿಕ
ಪುರುರಾಶಿಯ ಪುಂಜರಾಜಿ ಪೊಳೆಯಲ್ ಸುತ್ತಂ ೧೯೦

ವ: ದಿವಿಜಸಮಾಜಪ್ರಭೃತಿಪರಿಪೂಜ್ಯಮಾನ ದ್ವಿತೀಯಪೀಠದ ಮೇಲೆ ಪಂಚಶತಚಾಪ ವಿಸ್ತಾರದಿಂದಂಚಿತಮಾಗಿ ಚತುಶ್ಚಾಪದುನ್ನತಿಯಿಂ ಚೆನ್ನಂಬಡೆದು

ಮೂಱನೆಯ ರತ್ನಪೀಠಂ
ತೋಱಿಸವೆತ್ತಿರ್ದ ಪಂಚವಿಧಮಣಿಖಚಿತಂ
ಮಿಾಱಿದ ನುಣ್ಪೆಳಗಿಂ ಪೊಳ
ಪೇಱಿಸಲಾ ಶ್ರೀಯ ಮಕುಟಮಿರ್ಪಂತಿರ್ಕುಂ ೧೯೧

ಪೊಳೆವಷ್ಟಮಂಗಳಂಗಳ
ಬಳಗಂ ನವನಿಧಿ ವಿತಾನಮುಪನಿಧಿನಿಚಯಂ
ಜ್ವಳಿಸುವ ತೃತೀಯಪೀಠದ
ಕೆಲದೊಳ್ ನಿಲಿಸಿರ್ದು ಕಣ್ಗೆ ಪಡೆದವಗುರ್ವಂ ೧೯೨

ಮುತ್ತಿನ ನೀಲದ ಪಚ್ಚೆಯ
ಮೊತ್ತದ ಮಾಣಿಕದ ಪವಳದುರುರಾಶಿಗಳಿಂ
ಬಿತ್ತರಿಸಿದ ಪುಂಜಂಗಳ್
ಸುತ್ತಂ ಥಳಥಳಿಸುತಿರ್ದವಚ್ಚರಿಯಿಂದಂ ೧೯೩

ಮಗಮಗಿಸುವ ಕಡುಗಂಪಿಂ
ಮಿಗಿಲಾದ ನಮೇರು ಪಾರಿಜಾತದ ಕುಸುಮಾ
ಳಿಗಳೆತ್ತಂ ಚೆಲ್ಲಿರ್ದವು
ಸೊಗಸಂ ಸರ್ವರ್ಗೆ ಪುಟ್ಟಿಸುತುಮತಿಶಯದಿಂ ೧೯೪

ವ: ಇಂತಮೂಲ್ಯರತ್ನರೋಚಿರ್ವೀಚೀನೂತ್ನ ಸಮವಸರಣರತ್ನಾಕರಮಧ್ಯ ವರ್ತಿಬಹಿತ್ರ ಬಿಂಬಾಡಂಬರವಿಡಂಬಿ ಸಮುದಗ್ರಪೀಠತ್ರಯಾಗ್ರದೊಳ್ ಪಲವಂದದ ಬಂಧಮನನು

ಕರಿಸಿ ತೋರ್ಪಂತೆ ವಿಚಿತ್ರಮಾಗಿ ಕೇವಣಿಸಿದನಂತಾನಂತ ಚಿಂತಾಮಣಿ ಸಂತಾನ ಪಂತಿಗಳಿಂ ನಿರಂತರಿತಮಾದ ಪರುಸದ ಪಸುರ್ವರಲ ಪೊಸವೆಸದಿನಸದಳ ಮೆಸೆವ ಮಹಾರ್ಹ ಸಿಂಹಾಸನಮಂ ಮುಟ್ಟದೆ ನಾಲ್ವೆರಳಿಂ ಮೇಲೆ

ಪದೆಪಿಂ ಪೊಂಬಣ್ಣಮಂ ಕೀಳ್ಪಡಿಸಿ ಪೊಳೆವ ಮೆಯ್ವಣ್ಣದಿಂ ಚೆಲ್ವನಾಂತು
ರ್ವಿದ ನಾಲ್ವತ್ತೈದು ಬಿಲ್ಲುದ್ದದಿನೆಸೆದುವರಾಶ್ಚರ್ಯ ಸೌಂದರ್ಯದಿಂದಂ
ಪುದಿದು ಶ್ರೀಧರ್ಮನಾಥಂ ಮುದದೆ ನೆಲಸಿನಿಂದಂ ಮಹಾರಾಗಮಂ ಪಾ
ದದ ಕೆಂಪಿಂದಿಕ್ಕಿ ಮೆಟ್ಟಿರ್ದುರುಮಹಿಮೆಯನೀ ಲೋಕದೊಳ್ ತೋಱುವನ್ನಂ ೧೯೫

ಜಿನಪನ ಪಿಂದಶೋಕತರು ರಂಜಿಸುತಿರ್ದುದು ಪುಷ್ಪಮಂಜರೀ
ಘನತರಮಾಗಿಯುಲ್ಲಸಿತಪಲ್ಲವವಲ್ಲರಿಯಿಂದಮೊಪ್ಪಿ ಪಾ
ವನಬಹುಶೋಭೆಯಿಂದಡರಿ ತಣ್ಣೆಳಲಿಂದಮೆ ತಿಣ್ಣಮಾಗಿ ದೇ
ವನ ನಿಕಟತ್ವದಿಂದೆ ಮರನಾದೊಡಮೆಯ್ದಿದತಶೋಕಭಾವಮಂ ೧೯೬

ನಳನಳಿಪೈದುಮಾಣಿಕದ ಗೊಂಡೆಯದಿಂದೆ ವಿಚಿತ್ರಮಾಗಿಯ
ಗ್ಗಳಿಸಿದ ತೋರಮುತ್ತುಗಳ ಮಾಲೆಯ ಲಂಬನದಿಂದೆ ಸುತ್ತಲು
ಜ್ವಳಿಸಿ ಸುಪದ್ಮರಾಗಮಣಿದಂಡದಿನೊಪ್ಪಮನಾಳ್ದು ಶೋಭೆಯಂ
ತಳೆದುದು ಚಂದ್ರಕಾಂತಮಯಮಾಗಿಯೆ ಮುಕ್ಕೊಡೆ ಭೂತ್ರಯಿಶನಾ ೧೯೭

ಕನಕಮಣಿದಂಡಮಂ ಪಿಡಿ
ದನಿಮಿಷರಱುವತ್ತುನಾಲ್ಕುಚಮರರುಹಂಗಳ
ನನುನಯದಿಂದಿಕ್ಕಿದರಾ
ಜಿನಪನ ನಾಲ್ದೆಸೆಯೊಳಿರ್ದು ವಿಭವಾಧಿಕನಾ ೧೯೮

ಸುರಿದುದು ಪುಷ್ಪವೃಷ್ಟಿ ನಭದಿಂದೆ ಜಿನಂಗೆ ಮನೋಜನಂಜಿ ಮೆಯ್
ಗರೆದುಮನಂಗನಾಗಿ ನಭದೊಳ್ ನೆಲಸಲ್ ನಡುಗುತ್ತುಮಿರ್ದ ತ
ತ್ಕರತಳದಿಂದೆ ಬೀಳ್ವರಲಬಿಲ್ಗಳುಮಂಬುಗಳೆಂಬ ಮಾಳ್ಕೆಯಿಂ
ಪರಿಕಿಸೆ ಪುಷ್ಪಸಂಸ್ಥಿತಿಯಕಾರಣಮೆತ್ತಣದಂತರಿಕ್ಷದೊಳ್ ೧೯೯

ಸುರದುಂದುಭಿಗಳ ಬಳಗಂ
ಪಿರಿದುಂ ಮೊಳಗುತ್ತುಮಿರ್ದುದೊರ್ಮೊದಲೊಳ್ ತ
ದ್ವಿರುತಿಯ ಭರದಿಂದಂದಿಂ
ಬರವಾರಿಧಿ ಘೂರ್ಮಿಸುತ್ತುಮಿರ್ದುದು ಗಾಢಂ ೨೦೦

ದಿವ್ಯಧ್ವನಿ ಪುಟ್ಟಿದುದುರು
ಭವ್ಯಜನಾರ್ಚಿತಪದಂಗೆ ನಾನಾಜೀವ

ದ್ರವ್ಯಕ್ಕೆ ನಿಜನಿಜೋಚಿ
ತ್ರವ್ಯಂ ವಸ್ತುಸ್ವಭಾವನಿರ್ಣಯನಿಪುಣಂ ೨೦೧

ಪರಮೌದಾರಿಕದೇಹೋ
ದ್ದುರಭಾಮಂಡಳಮಶೇಷಮಂ ವ್ಯಾಪಿಸೆ ಮಂ
ದರರೂಪಮೆಂಬ ಶಂಕಾ
ಕರಮಾದುದು ಸಮವಸರಣದೇಶಮದೆಲ್ಲಂ ೨೦೨

ವ: ಅಂತು ವಿಶಿಷ್ಟಪರಮೈಶ್ವರ್ಯವಿಭವಪರಿಜುಷ್ಟತೋಷ್ಟಕಾಯಮಾನ ವಿಲಸದಷ್ಟ ಮಹಾಪ್ರಾತಿಹಾರ್ಯಪ್ರಕೃಷ್ಟನಾಗಿ ಶ್ರೀಧರ್ಮನಾಥತೀರ್ಥನಾಥಂ ಸಕಳ ಜನಂಗಳ ಕಣ್ಗಳ್ಗೆಂಗೆ ಕೌತುಕಮಂ ಪಿಂಗದೆ ನೆಲೆಗೊಳಿಸುತ್ತುಮಿರ್ಪುದುಂ

ಕರದಿಂ ಮಾಳ್ಪುದರ್ದೇನುಮಿಲ್ಲ ನಡೆಯಿಂದಂ ಪ್ರಾಪ್ಯಮಿಲ್ಲಿಂತು ತಾ
ನಿರದಾಲಂಬಿತಹಸ್ತಕಂ ಸಮಪದದ್ವಂದ್ವಂ ದಲಾಗಿರ್ದು ಮೂ
ಧರೆಯೊಳ್ ತನ್ನ ಕೃತಾರ್ಥತಾಮಹಿಮೆಯಂ ಸಂಸೂಚಿಸುತ್ತಿರ್ದನಾ
ಪರಮೇಶಂ ನೆಱೆನಿರ್ವಿಕಾರತನುವಿಂ ಹೃಚ್ಛಾಂತಿಯಂ ತೋಱಿದಂ ೨೦೩

ತ್ರಿಭುವನ ಭೂಷಣಂಗೆ ವಿಗತಾಭರಣಂಗತಿಚಾರಕಾರಿಯ
ಪ್ಪಭಿನವಭೂಷಣಂ ವಸನದಾವರಣಂ ಬಗೆವಂದಿದೇವುದೆಂ
ದುಭಯರಮಾಧಿಪಂ ತೊಱೆದು ಭೂಷಣಮಂ ವರವಸ್ತ್ರಮಂ ಕರಂ
ಪ್ರಭವಿಸಿದಂ ಸ್ವಭಾವಜವಿಳಾಸವಿಶೇಷಮನಾಂತ ರೂಪದಿಂ ೨೦೪

ರತ್ನಂಗಳನೊಳಕೊಂಡಧಿ
ರತ್ನಾಕರಮೊಪ್ಪುವಂತೆ ಧರ್ಮಜಿನೇಶಂ
ರತ್ನತ್ರಯಂಗಳಂ ಘನ
ಯತ್ನದಿನೊಳಕೊಂಡು ತೊಳಗಿ ಬೆಳಗುತ್ತಿರ್ದಂ ೨೦೫

ವ: ಅಂತೆನಿಸಿ ನಿಖಿಳಜಗದಳಂಕರಣಮುಂ ಭವ್ಯಗಣಶರಣಮುಮಾಗಿ ಸಮಸ್ತ ವಾಸ್ತುವಿದ್ಯಾಶ್ರಯಣನಪ್ಪ ವೈಶ್ರವಣಂ ಮಣಿಮಯ ಸಮವಸರಣಮಂಡಳಮನಾ ಖಂಡಳನಾಜ್ಞೆಯಿಂ ವಿಗುರ್ಬಿಸುವುದುಂ

ಮಿಗೆ ಮೋಕ್ಷಪುರಕೆ ಪೋಪು
ಜ್ಜುಗದಿಂ ಶ್ರೀಧರ್ಮನಾಥಪತಿ ಬಿಡಿಸಿದ ಶೋ
ಭೆಗೆ ನೆಲೆ ಪೊಱಗೆಯ್ದಿದನೆನೆ
ಸೊಗಯಿಸಿದುದು ಸಮವಸರಣ ಧರಣೀವಳಯಂ ೨೦೬

ಜಿನತನುವಿಂ ದ್ವಿಷಡ್ಗುಣ
ಮೆನಿಕುಂ ವರಚೈತ್ಯವೃಕ್ಷಮಂಡಪಗೋಪುರ
ಘನಹರ್ಮ್ಯವಸತಿಕಾ ಸ್ತೂ
ಪನಿಚಯದುನ್ನತಿಕೆಯಾಗಮಜ್ಞರ ಮತದಿಂ ೨೦೭

ಸುತ್ತಂ ಬಳಸಿದ ಕೋಟೆಗ
ಳುತ್ತಮವೇದಿಗಳ ಬಳಗದುನ್ನತಿ ಬಿಡದ
ರ್ಹತ್ತನುವಿಂ ನಾಲ್ಮಡಿ ಭಾ
ಸ್ವತ್ತೋರಣಮುಮದಱಿನಿನಿತಕ್ಕಧಿಕಂ ೨೦೮

ಅಂತರ್ಮುಹೂರ್ತದೊಳಗನಿ
ತುಂ ತೆಱಪಿನ ಸಮವಸರಣಮಂ ಪೊಕ್ಕು ತೊಳ
ಲ್ದಂತಾಗಳೆ ಪೊಱಮಡುವರ್
ಸಂತಸದಿಂದೆಲ್ಲರೆಯ್ದೆ ಜಿನನತಿಶಯದಿಂ ೨೦೯

ಪುಗೆ ಪಸಿವುಂ ನೀರಳ್ಕೆಯು
ಮಗಲ್ವುದು ಚಿತ್ತಾನುರಾಗಮಪ್ಪುದು ಸದ್ದೃ
ಷ್ಟಿಗಳಿಂಗೆ ಮತ್ತಭವ್ಯಾ
ಳಿಗಳಿಂ ನವಗೋಚರಂ ಮಹಾಸಭೆ ಜಿನನಾ ೨೧೦

ವಾರಿಧಿಯಂತಿರೆ ಪರಿಖಾ
ನೀರಂ ವರವಜ್ರವೇದಿಯಂತಿರೆ ತತ್ಪ್ರಾ
ಕಾರಂ ಜಿನಪತಿ ಮೆಱೆದಂ
ಮೇರುವೆನಲ್ ಜಂಬು[ದೀ]ಪದಂತೆಸೆದುದದುಂ ೨೧೧

ವ: ಇಂತು ಕುಬೇರ ವಿರಚಿತ ಸಮವಸರಣಮತಿರಮಣೀಯಮಾಗಿರ್ಪುದು ಮನ್ನೆಗಮಿತ್ತಲಾ ಧರ್ಮನಾಥನ ಕೇವಲಜ್ಞಾನೋತ್ಪತ್ತಿಲಕ್ಷಣ ಚತುರ್ಥಕಲ್ಯಾಣ ಪರಿಸೂಚನಾಕಾರಣಮಾಗಿ

ಆನಕದ ಶಂಖದುರುಪಂ
ಚಾನನದ ಸುವರ್ಣಘಂಟೆಯ ಸ್ವನಮಕೃತಂ
ವಾನವ್ಯಂತರಕ ಜ್ಯೋ
ತಿರ್ನಾಕದೊಳೊಗೆಯಲಱಿದರವರೊರ್ಮೊದಲೊಳ್ ೨೧೨

ಧರಣೇಂದ್ರಂ ಮುಖ್ಯಮಾಗಿರ್ದಹಿಗಳ ಗಡಣಂ ವ್ಯಂತರೇಂದ್ರಂ ದಲಗ್ರೇ
ಸರಮಾದ ವ್ಯಂತರಾಳಿದ್ಯುಮಣಿ ಹಿಮಗು ಮುಂತಾದವರ್ ಜ್ಯೋತಿಗಳ್ ನಿ

ರ್ಜರರೀಶಾನೇಂದ್ರವರ್ಯರ್ ನಿಜನಿಜನಿಳಯಂ ಪಾಳದೆಂಬಂತೆ ಬಂದರ್
ನೆರೆದಾ ಸೌಧರ್ಮದೇವೇಂದ್ರನ ಮಣಿನಿಳಯಕ್ಕುತ್ಸುಕ್ಯದಿಂದಂ ೨೧೩

ವ: ಬಳಿಯಮನೇಕಚ್ಛಂದನ ಪೊಂದೊಡವುಗಳಿನಂದಂಬಡೆದಿಂದ್ರಾಣಿ ಯೊಳೊಂದಿ ಪುರಂದರಂ ಪೊಱಮಟ್ಟು

ಗಗನಂ ಚಂಚದ್ವಿಮಾನಾವಳಿಗಳ ಬೆಳಗಿಂ ತುಂಬುವಂತೆಂಟುದಿಕ್ಕೋ
ಣೆಗಳುಂ ದಿಂಕಿಟ್ಟು ತೋರ್ಪಂತನಿಮಿಷವನಿತಾಗೀತದಿಂ ಭೂಮಿಯೆಲ್ಲಂ
ಮಿಗೆ ಚಲ್ಲುತ್ತಿರ್ಪ ಮಂದಾರದ ಕುಸುಮಸಮೂಹಂಗಳಿಂ ಮುಚ್ಚುವಂತೆ
ದ್ವಿಗುಣಾನಂದಂ ಸುರೇಂದ್ರಂ ಸುರಬಲಸಹಿತಂ ಬಂದನೈರಾವತಸ್ಥಂ ೨೧೪

ವ: ಆ ಸಮಯದೊಳ್

ನೇಸಱ ತೇರಗಾಲಿ ನಡೆಯಲ್ ಪಥಮಿಲ್ಲೆನೆ ಕೂಡೆ ತುಂಬಿಕೊಂ
ಡಾಸುರಮಾದ ಸತ್ತಿಗೆಗಳೋಳಿಗಳಿಂ ಬಿಡದಲ್ಲಿಗಲ್ಲಿಗಂ
ಬೀಸುವ ಚಾಮರಂಗಳನತೀವಕುತೂಹಳಮಾಗಿ ಬಂದುದಾ
ವಾಸವಮುಖ್ಯಮಾದ ಚತುರಂಗದ ದೇವನಿಕಾಯಸೈನಿಕಂ ೨೧೫

ನಳನಳಿಸಿ ಪೊಳೆದು ಮಿಳಿರ್ವಂ
ತೆಳಿಮಿಂಚುಗಳೋಳಿ ಗಗನತಳರಂಗದೊಳು
ಜ್ವಳಿಸುವ ಸುರನರ್ತಕಿಯರ
ಬಳಗಂ ಸುಳಿದಾಡಿದತ್ತು ಗೀತಾನುಗತಂ ೨೧೬

ಪದೆಪಿಂಗಾಶ್ರಯಮಾದ ಶೋಣಮಣಿದೀಪಶ್ರೇಣಿಯಂ ತಳ್ತು ತಾ
ಳ್ದಿದ ಮಂದಾರದಳಪ್ರಸೂನಘನಮಾಲಾಜಾಳಮಂ ಕೂಡೆ ತಾ
ಳ್ದಿದ ಗೀರ್ವಾಣನಿವಾಸಿನೀಸಮುದಯಂ ಕಣ್ಗೊಂಡುದು ಜ್ಯೋತಿರಂ
ಗದ ಮಾಲ್ಯಾಂಗದ ಕಲ್ಪವೃಕ್ಷದ ಸಮೂಹಂ ತಾಂ ಬರುತ್ತಿರ್ಪಿನಂ ೨೧೭

ಗಗನಕ್ಕವಗಾಹನಮೆಂ
ಬ ಗುಣಂ ದಿಟಮಲ್ಲದಿರ್ದೊಡೆಯ್ದೆಬರುತ್ತಿ
ರ್ಪಗಣಿತ ಸಮಸ್ತಸುರಸೇ
ನೆಗೆ ತೆಱಪಂ ಕೊಡುವ ಶಕ್ತಿಯೆಂತಾದಪುದೋ ೨೧೮

ವ: ಮತ್ತಂ ಶತಕ್ರತು ಮುಂತಾದ ಸಕಳಚತುರ್ನಿಕಾಯದೇವರ್ಕಳೆಲ್ಲಂ ನೆರೆದು ಧರ್ಮನಾಥನೆಂಬರ್ಹತ್ಪರಮೇಶ್ವರಂಗೆ ವಿಮಳಕೇವಲಜ್ಞಾನೋದಯಮೆಂಬ ಚತುರ್ಥಕಲ್ಯಾಣಪೂಜಾಸಮುತ್ಸವಂ ನಿರ್ವರ್ತಿಸಲೆಂದು ಬರುತ್ತುಮಿರ್ಪ ಪೊತ್ತಿನೊಳ್

ತುಮುಳಕೋಳಾಹಳಂಗೊಂಡು ಕಡುಸಂಭ್ರಮದಿಂ ನಿಳಿಂಪರಾವಳಿ ಸುಳಿದು ಸೂಸುವ ವಾಸಚೂರ್ಣದ ಸುತ್ತಲುಂ ಸುರಿವರಲ ಬಲ್ಸರಿಯ ಮೊಳಗುವಡೆವ ತೂರ್ಯದ ರವದ ತೊಳಗುವ ಕನ್ನಡಿಯ ಕಳಶದ ಪಾಡುವ ಗಂಧರ್ವದೇವರ ಕೂಡುವ ತಾಳಲಯಭೇದದ ಕುಣಿದಾಡಿ ನಗಿಸುವ ವೈತಾಳಿಕವೇಷದ ವೈಮಾನಿಕದೇವ ವೈನಟ್ಯದ ವೈಕುರ್ವಣದಗುರ್ವು ಕೊರ್ವುವಡೆದು ವಿಚಿತ್ರಮಾಗಿ ಪ್ರಭವಿಸಲಭಿನವ ಚತುರ್ಥಕಲ್ಯಾಣ ಸಮರ್ಪಣಾಕರಣ ರಣರಣಕಪರಿಣತವದಂತಃಕರಣ ನಿರವಶೇಷದೇವದೇವೀಯಾತ್ರಾ ಪ್ರಭಾವನಾ ವೈಭವಮಹಾನುಭಾವಂ ವಿಸ್ಮಯಮನಜನಿಸುತ್ತುಮಿರೆ

ಅತಿಚಿತ್ರಂಬೆತ್ತ ನಾನಾನವಮಣಿಮಯವಿಸ್ಫಾರನೈಜಪ್ರಭಾಳೀ
ಸ್ಫುತರತ್ನಾಮತ್ರಗೋತ್ರಂಗಳೊಳತಿಶಯದಿಂ ತುಂಬಿಕೊಂಡಿರ್ದ ಗಂಧಾ
ಕ್ಷತನೈವೇದ್ಯ ಪ್ರದೀಪೋತ್ಪಳಕುಳಮುಕುರಾದ್ಯರ್ಚನಾಯೋಗ್ಯ ನವ್ಯ
ಸ್ತುತ ದಿವ್ಯದ್ರವ್ಯಮಂ ತಾಳ್ದಿದ ಸುರವನಿತಾಕೋಟಿ ಬಂದತ್ತು ಸುತ್ತಂ ೨೧೯

ರುಚಿರಾಳಂಕಾರ ಸಾರೋಜ್ವಳಮಣಿಕಿರಣಾಪೂರದೊಳ್ ಕೂಡಿದಂಗ
ಪ್ರಚುರಚ್ಛಾಯಾವಿಶೇಷಂ ಪುದಿದು ಗಗನದೊಳ್ ತೀವಿ ತುಳ್ಕಾಡಲಾಗಳ್
ವಿಚಳನ್ನಾನಾಪತಾಕಾಪಟಪಟಳತರಂಗತ್ತರಂಗಂ ತುರಂಗ
ಪ್ರಚಯೋದ್ಯನ್ನಕ್ರಚಕ್ರಂ ನಡೆದುದಮರಸೇನಾಸಮುದ್ರಂ ಸುಭದ್ರಂ ೨೨೦

ವ: ರುತುಮಾನದ ದ್ವಾರಕುಟ್ಯಂ ಮೊದಲ್ಗೊಂಡು ಧೂಳೀಸಾಳಂಬರ ಮಂತರಾಳ ಚಕ್ರವಾಳಸ್ಥಳದೊಳೆಲ್ಲಂ ಕಿಕ್ಕಿಱಿಗಿಱಿದಿಕ್ಕೆಲಂಬಿಡಿದೆರಡೆರಡಾಗಿ ಮಾಲೆ ಗೊಂಡು ಪರಿಪರಿಯ ಪಂತಿರೂಪದಿಂ ನೀಳ್ದು ನಿಮಿರ್ದು ವಿಯತ್ತಳದೊಳ್ ತುಂಬಿ ಬರುತ್ತುಮಿರ್ದ ನೂತ್ನರತ್ನಮಯ ನಾನಾವಿಧವಿನೂಯವಿಮಾನವಿತಾನ ಜೌಜಾಯ ಮಾಯ ನಿರತಿಶಯ ಕಿರಣಜಾಳಮೇಳಾಪರಂ ಗಗನಲಕ್ಷ್ಮೀದೇವೇಂದ್ರಸಮಾ ಗಮನ ಸಂತೋಷದಿಂದೆತ್ತಿಸಿದ ಮಕರತೋರಣದೋರಣೆ ವಿಳಾಸಮನನುಕರಿಸುತ್ತುಮಿರ್ಪುದುಂ

ಜಯಜಯ ಘಾತಿಕರ್ಮ ತರುಮೂಲವಿಶೋಷಣ ನಂದನಂದ ಭೂ
ತ್ರಯಜನವಂದ್ಯ ಕೇವಳವಿಬೋಧವಿಭೂಷಣಯೆಂಬ ಘೋಷಣಂ
ನಯದಿನಶೇಷದಿಕ್ತಟಕುಟೀರಕಕೋಟರದಲ್ಲಿ ದೇವಕೋ
ಟಿಯ ಪಟಹಸ್ವನಂಬೆರಸು ತುಂಬಿ ತುಳುಂಕುತುಮಿರ್ದುದಾಕ್ಷಣಂ ೨೨೧

ವ: ಇಂತನಣುತರ ಪ್ರಭಾವದಿಂ ಶಚೀರಮಣನಾ ಸಮವಸರಣ ಪರಿಸರಣ ಪ್ರದೇಶಕ್ಕವ ತರಿಸುವುದುಂ ತೊಟ್ಟನೆ ಕಟ್ಟಿದಿರೊಳ್

ಪಿರಿದಾದೈವಣ್ಣದಿಂ ಚಿತ್ರಿಸುತುಮಖಿಳದಿಗ್ಭಿತ್ತಿಯಂ ರಾಜನಂ ಭಾ
ಸುರಮಧ್ಯಸ್ಥಾನದೊಳ್ ತಾಳ್ದುತುಮುರುದುರಿತಾರಾಶಿನಿರ್ನಾಶಮಂ ಮೂ

ಧರೆಗಂ ಸಾಱುತ್ತುಮಿರ್ದಾ ಸಮವಸರಣಮಂ ಕಂಡು ಸಂತೋಷಿಸುತ್ತುಂ
ಪರಿವೇಷಂಬೆತ್ತ ಶೀತದ್ಯುತಿ ರುಚಿರಮಹಾಬಿಂಬದಂತಿರ್ದುದೆಂದಂ ೨೨೨

ವ: ಎಂದಿಕ್ಕಲದ ದೇವರ್ಕಳೊಡನೆ ನುಡಿಯುತ್ತುಂ ಬಂದು ರಮಣೀಯ ಸಮವಸರಣಲಕ್ಷ್ಮಿಗೆ ದೃಷ್ಟಿದೋಷಪರಿಹರಣಕಾರಣಮಾಗಿ ವಿಚಿತ್ರವರ್ಣ ಸಂಕೀರ್ಣ ಮಂಜಿಷ್ಠಿಕಾ ಕಾಂಡಪಟವನವಟಯಿಸಿದಂತೆ ಸುತ್ತಲುಂ ವಿಮಾನಪಂತಿಗಳಂ ನೆಲೆಗೊಳಿಸಲ್ವೇಳ್ದು ತನ್ನಯ ಸಂಚಳತ್ತ್ರಾಣಪಲ್ಲವ ಸಮುಲ್ಲಸನದಿಂ ಪಂಚಮಹಾಶಬ್ದ ಪರಿಘೂರ್ಣನ ಕೋಳಾಹಳಮಂ ನಿಲಿಸಿ

ಬಳಿಯಂ ಛತ್ರಧ್ವಜಂ ಚಾಮರಮಿವು ಮೊದಲಾಗಿರ್ದುವಂ ರಾಜಚಿಹ್ನಂ
ಗಳನಾ ಸಂಕ್ರಂದನಂ ದೂರದೊಳಿರಿಸಿ ಜಿನಾಸ್ಥಾನಮಂ ನೋಳ್ಪಲಂಪ
ಗ್ಗಳಮಾಗಲ್ ದೇವದೇವೀತತಿವೆರಸಿ ಕರಂ ನೋಡುತುಂ ಬಣ್ಣಿಸುತ್ತುಂ
ಜ್ವಳನಾನಾಚಿತ್ರಶೋಭಾಸಮವಸರಣಮಂ ಪ್ರೀತಿಯಿಂದಂದು ಪೊಕ್ಕಂ ೨೨೩

ಮೂಡಣ ದಿಕ್ಕಿನ ಬಾಗಿ
ಲ್ಮಾಡದ ಮುಂದಣ ವಿಯತ್ತಳಾಂಗಣದೊಳ್ ಪೆಂ
ಪೋಡದಸಿತಕುಂಜರದೊಡ
ಗೂಡಿರಿಸಿದನೆಯ್ದೆ ತನ್ನ ಪರಿಕರಮನಿತಂ ೨೨೪

ಇಂದ್ರಾಣಿಯೊಳೊಂದಿದ ದೇ
ವೇಂದ್ರಂ ನಿಖಿಳಾಮರಾಮರೀಜನಸಹಿತಂ
ಗಂಧಕುಟೀ ಶಿಬಿಗೆಱಗುತು
ಮೈಂದ್ರೀದಿಗ್ವೀಥಿವಿಡಿದು ನಡೆತಪ್ಪಾಗಳ್ ೨೨೫

ವ: ಅಂತು ನಡೆವ ಸಹಸ್ರಾಕ್ಷನ ಸಹಸ್ರಲೋಚನ ಮರೀಚೀನಿಚಯಂಗಳೊಡ ನೊಡನನೇಕ ನಾಕೀನಾಯಕನಿಕಾಯ ಕೇಕರಮಯೂಖ ಮಾಳಿಕೆಗಳುಮಖಿಳನಿಳಿಂಪ ವಿಳಾಸಿ ನೀಸಂಕುಳಸಮುತ್ತರಳತರನಯನ ಕರನಿಕರಂಗಳೆಳಸಿ ಬಳಸಿ ತವಕಿಸಿ ತಳ್ಪೊಯ್ದು ಗೋಪುರವೇದಿಕಾಪ್ರಾಕಾರದಾಕಾರಮನೇಕವರ್ಣಮಾಗಿ ಧವಳಿಸೆಯುಂ ಮಾನಸ್ತಂಭಂ ಗಳಂ ನಿಮಿರ್ದುನೀಳ್ದ ಪೂಮಾಲೆಗಳಾಲಂಬನದಿನಂದಂಬಡೆದಂತಿರಳಂಕರಿಸೆಯುಂ ಪ್ರಾಸಾದ ಚೈತ್ಯನಿಳಯಂಗಳ ಬಳಗಮನೊಳಕೊಂಡ ಚಕ್ರವಾಳಭೂಮಿಯಂ ಮೂವಳ ಸುವಳಸಿಯುಂ ಜಳಖಾತಿಕಾಕಳಹಂಸೀಕುಳದ ಬಳಿಸಂದು ಪೊಳೆದಾಡೆಯುಂ ವಲ್ಲೀವ ನಾವನಿಯ ಮಱಿದುಂಬಿಯ ಬಂಬಲೊಡನೆ ಪಱಿಮಱಿಯಾಡಿಯುಮುಪವನ ಮಹಿಯನಪರಿಮಿತ ಹಿಮಾನೀಪರಿ ಪಿಹಿತಮೆಂಬಂತೆ ಮಾಡಿಯುಂ ಧ್ವಜಭೂಮಿಯ ಬಳಯಿಗೆಗಳೊಡನೊಡನೆ ಬಳೆದು ಬಳಸೆಯುಂ ದಶಾಂಗಕಲ್ಪವೃಕ್ಷನಂದನವನಮಂ

ಮಾಲ್ಯಾಂಗಮಯಮೆಂಬ ಸಂದೆಗದೊಳೊಂದಿಸೆಯುಂ ಸಮುತ್ತುಂಗಮಂಗಳಸ್ತೂಪಂಗಳಂ ಧವಳಕಮಳದಳಾಳಂಕೃತಂಗಳೆಂಬ ಸಂಕೆಯನನುಕರಿಸೆಯುಂ ಸಂಗೀತಹರ್ಮ್ಯಂಗಳೋಳಿಯಂ ಪೊಸತಾಗಿ ಸೊದೆವಳಿದಂತೆ ಕಣ್ಗೊಗ್ಗಿಳಿಸೆಯುಂ ದ್ವಾದಶಕೋಷ್ಠಂಗಳ ಗೋಪುರಾಗ್ರಮಣಿಕಳಶಪ್ರಭಾಪ್ರಭಾವ ಪಲ್ಲವದೊಡನೆ ಚಲ್ಲವಾಡಿಯುಂ ಗಂಧಕುಟಿಯನಸಮಯಾಮಂದಚಂದ್ರಿಕಾಸಂದೋಹ ಪ್ರವಾಹದೊಳವಗಾಹ ಮಿರಿಸೆಯುಂ ಪರಮೇಶ್ವರನ ಪರಮೌದಾರಿಕ ಶರೀರಮನಪಾರ ಸಾರಭೂತಿ ಕ್ಷೀರೋದಧಾರಾಪೂರದಿನಭಿಷೇಕದಾಡಂಬರಮನೊಡರ್ಚಿದಂತೆ ರಂಜಿಸೆಯುಂ ಕಣ್ತಣಿವಿನಂ ವಿನೋದ ವಿಕಸಿತ ಮುಖಕಮಳನಾಗಿಯಾ ಪುಳೋಮಜಾಮನೋರಮಣಂ ತನ್ನಯ ಬೆಸದಿಂ ಮುನ್ನಮೆ ಕಿನ್ನರನುನ್ನತಭಕ್ತಿಯಿಂ ಸಮೆದ ಸಮವಸರಣಮಂ ನೀಡುಂ ನೋಡಿ

ಇದಱ ವಿಳಾಸಮಂ ಪೊಗಳ್ವಡೆನ್ನಳವಲ್ತು ವಿಚಿತ್ರಚಿತ್ರಸಂ
ಪದದಳವಿಂತುಟಿಂತುಟು ಸುವಿದ್ಧದ ಪದ್ಧತಿಯಿಂತುಟಿಂತುಟೆಂ
ಬಿದನುರಗೇಂದ್ರನುಂ ಕಮಳಸಂಭವನುಂ ಪೊಗಳಲ್ಕಮಾಱರಿ
ನ್ನಿದಱತಿಶೋಭೆಯಿಂದೆ ಮಿಗಿಲಾದಭಿಶೋಭೆಯದುಂಟೆ ಲೋಕದೊಳ್ ೨೨೬

ವ: ಎನುತ್ತುಂ

ರೋಮಾಂಚಂ ಮೆಯ್ಯೊಳೇಳಲ್ ಬಗೆಯೊಳೊಗೆಯೆ ಕೌತೂಹಳಂ ನೋಡಿ ನೋಡಲ್
ಪ್ರೇಮಂ ಕೈಮಿಕ್ಕು ಕಣ್ಸಾಸಿರಮುಮನಿರದೋಲಾಡಿಸುತ್ತಿರ್ದನಾ ಸು
ತ್ರಾಮಂ ಸಂತೋಷಪೀಯೂಷರಸದೊಳಧಿಕಂ ತೂಗುತುಂ ರತ್ನರೋಚೀ
ಸ್ತೋಮೋದ್ಯನ್ಮೌಲಿಯಂ ಮೆಚ್ಚಿನ ಭರವಸದಿಂದೋಸರಂದೋಱದನ್ನಂ ೨೨೭

ಕೆದಱದ ಚೆಲ್ವ ಪೂವಲಿಯನಾಗಿಸೆ ಪಾದನಖಾಂಶು ತೊಟ್ಟ ರ
ನ್ನದ ಬೆಳಗಲ್ಲಿ ಪೊತ್ತಿಸಿದ ದೀವಿಗೆಯಂದದಿನೊಪ್ಪಿ ಮಾಳ್ಪವೊಲ್
ಪದೆದು ಗೃಹಾರ್ಚನಾ ರಚನೆಯಂ ಸುನಾಯಕನೊಲ್ದು ಮೂಱುಸೂಳ್
ತ್ರಿದಶದೊಳೊಂದಿ ಗಂಧಕುಟಿಯಂ ಬಲಗೊಂಡನತೀವ ಭಕ್ತಿಯಿಂ ೨೨೮

ವ: ಅಂತು ತ್ರಿಪ್ರದಕ್ಷಿಣಂಗೆಯ್ದು

ಸಾಸಿರ ಕಣ್ಗಳ ಪಂತಿಕೆ
ಲೇಸಾದುದು ಬರೆದ ಲಿಪಿಗಳೋಳಿಯ ತೆಱದಿಂ
ವಾಸವನಿರ್ದಂ ಮಣಿಮಯ
ಶಾಸನಮಂ ನಿಲಿಸಿದಂತೆ ಬಾಗಿಲ ಕೆಲದೊಳ್ ೨೨೯

ವ: ಅಂತು ನಿಂದು

ಜಳಮಂ ಪೊಂಗುಂಬದೊಳ್ ಸಂಗಳಿಸು ಮಳಯಜಕ್ಷೋದಮಂ ತೀವು ಮಂತ್ರಂ
ಗಳೊಳಂ ಮತ್ತಕ್ಷತಕ್ಷಾಳನಮನೆಸಗು ಮಾಲ್ಯಂಗಳಂ ಸೈತೆಮಾಡು
ಜ್ವಳಮಾಣಿಕ್ಯಪ್ರದೀಪಂಗಳನಳವಡಿಸುದ್ಧೂಪಮಂ ಕೂಡು ನಾನಾ
ಫಳಮಂ ತುಂಬೆಂದು ಪೇಳ್ದಂ ಸುರಪರಿವೃಢನಿಂದ್ರಾಣಿಗಾನಂದದಿಂದಂ ೨೩೦

ವ: ಇಂತು ಪೇಳ್ದು ನಮೇರು ಮಂದಾರ ಪಾರಿಜಾತದರಲ್ಗಳಂ ತನ್ನಯ ಕರತಳಪುಟದೊಳ್ ತೆಕ್ಕನೆ ತೀವಿಕೊಂಡು

ಕಡುಥಾಳಂಬೆತ್ತು ತೋರ್ಪಾರತಿಗಳ ಹರಿಯಾಣಂಗಳಂ ದೇವಿಯರ್ ಸಂ
ಗಡದಿಂದಂ ತಾಳ್ದಿ ಸುತ್ತಂಬರೆ ಪಲತೆಱದರ್ಚನಾದ್ರವ್ಯಮಂ ನೇ
ರ್ಪಡೆ ಹಸ್ತಾಗ್ರಂಗಳಿಂದಂ ಪಿಡಿದೊಡವರೆ ದೇವರ್ಕಳೆಲ್ಲಂ ಸುರೇಂದ್ರಂ
ನುಡಿಯುತ್ತುಂ ನಿಷದ್ಯುಕ್ತಿಯನೊಳಗೆ ಮಹೋತ್ಸಾಹದಿಂ ಬಂದು ಪೊಕ್ಕಂ ೨೩೧

ವ: ಅಂತು ಬಂದೊಳಗಂ ಪೊಕ್ಕು ತನ್ಮಧ್ಯಸಮುದ್ಭಾಷಿತಸಿಂಹಾಸನಮನಳಂ ಕರಿಸಿರ್ದ ಲೋಕತ್ರಯೈಕಸ್ವಾಮಿಯ ಶ್ರೀಪಾದಪೀಠೋಪಕಂಠದೊಳ್ ಪುಷ್ಪಾಂಜಳಿ ಕ್ಷೇಪದೊಡನೆ ಸರ್ವಾಂಗಪ್ರಣಮನಮನೊಡರ್ಚಿ ಹರ್ಷೋತ್ಕರ್ಷಪುಳಕಸಂಕುಳಂ ಮುನ್ನಮೇಳೆ ಬಳಿಯಂ ತಾನೆಳ್ದು ಸಮುಚಿತಪ್ರದೇಶದೊಳ್ ನಿಂದು ಕಿಂಚಿನ್ನಮಿತಮಣಿ ಮಕುಟನುಮಾ ಮುಕುಳಿತಕರಸರೋಜಪುಟನುಮನುವಿಕಸಿತಾಧರೋಷ್ಠತಟನುಮಾಗಿ ಧರ್ಮನಾಥನ ಸಮ್ಮುಖದೊಳ್ ನಿಂದು ಅಷ್ಟಕಂಗಳ ಹೇಳಿಹನು

ಶ್ರೀಯಂ ಶ್ರೇಯಮನಾಯುಮಂ ವಿಭವಮಂ ಸತ್ಕೀರ್ತಿಯಂ ಮೂರ್ತಿಯಂ
ದೀಯಂ ಬೀಯದ ಪೆಂಪನೀವಧಿಕಸತ್ವಂ ನಿನ್ನೊಳುಂಟೆಂಬಭಿ
ಪ್ರಾಯಂ ನೋಯದೆ ಪುಟ್ಟೆ ಮನ್ಮನದೊಳಂ ನಿನ್ನಂಘ್ರಿಯಂ ಪೊರ್ದಿದೆಂ
ಹೇಯಾದೇಯವಿವೇಕಮಾದೆನಗೆ ನೀಂ ಶ್ರೀಧರ್ಮತೀರ್ಥೇಶ್ವರಾ ೨೩೨

ಪರಮಧ್ಯಾನದಿವಾಕರಂ ಸಮುದಯಂಗೆಯ್ದಾಕ್ಷಣಂ ಪುಟ್ಟಿದಂ
ತಿರೆ ನಿರ್ನಾಶಮದಾಯ್ತು ಘಾತಿತಿಮಿರಂ ಮೂಲೋಕಮಂ ವ್ಯಕ್ತಮಾ
ಗಿರೆ ಮಾಳ್ಪೊಂದಧಿಕಪ್ರಕಾಶಮೊಗೆದೊಪ್ಪುತ್ತಿರ್ದುದೀ ಶಕ್ತಿಯ
ನ್ಯರೊಳೇಂ ತೋರ್ಪುದೆ ನಿನ್ನೊಳಲ್ಲದೆ ದಿಟಂ ಶ್ರೀಧರ್ಮತೀರ್ಥೇಶ್ವರಾ ೨೩೩

ವಿಳಸತ್ಕೇವಳಬೋಧಲಕ್ಷ್ಮಿಯೊಡಸಂದಿರ್ದೈಕ್ಯಮಂ ತಾಳ್ದಿಯ
ಗ್ಗಳಮಾಗೊಪ್ಪುವ ನಿನ್ನ ರೂಪುಮನಿದಂ ಸ್ತ್ರೀರೂಪಮೆಂದೆಂಬೆನೋ
ಜ್ವಳರೋಚಿಃಪುರುಷಸ್ವರೂಪಮಿದು ಮತ್ತಿಂತೆಂಬೆನೋ ಭೇದಮಂ
ತಿಳಿಯಲ್ಬಾರದಗಮ್ಯರೂಪನದಱಿಂ ಶ್ರೀಧರ್ಮತೀರ್ಥೇಶ್ವರಾ ೨೩೪

ಜಗಮೆಲ್ಲಂ ನೆಲಸಿತ್ತು ನಿನ್ನಯ ಮಹಾಕೈವಲ್ಯವಿಜ್ಞಾನದೊಳ್
ಮಿಗುವಾ ಜ್ಞಾನಮುಮೆಯ್ದೆ ನಿನ್ನೊಳಗೆ ಬಂದಿರ್ದತ್ತು ನೀನುಂ ಸುಭ
ಕ್ತಿಗೆ ಸಂದೆನ್ನಯ ಚಿತ್ತದಲ್ಲಿ ನೆಲೆಗೊಂಡಿರ್ದಪ್ಪೆ ತತ್ಕಾರಣಂ
ಜಗದೊಳ್ ಮತ್ತೆನಗಾವುದೇನರಿದು ಪೇಳ್ ಶ್ರೀಧರ್ಮತೀರ್ಥೇಶ್ವರಾ ೨೩೫

ಅಱಿವುತ್ತಿರ್ದಪೆ ಮೂಜಗಂಗಳನಿವಂ ನಿನ್ನಿನ್ನನಾರುಂ ಸಮಂ
ತಱಿಯರ್ ಮತ್ತಮವೆಲ್ಲಮಂ ಬಿಡದೆ ನೀಂ ಕಾಣುತ್ತಮಿರ್ದಪ್ಪೆ ಕಂ
ಡಱಿಯರ್ ನಿನ್ನನದಾರುಮೆಲ್ಲರೆದೆಯೊಳ್ ನೀನಿರ್ದೆ ನಿನ್ನಲ್ಲಿ ಮೇಣ್
ತಱಿಸಂದಿರ್ದವರಾರುಮಿಲ್ಲ ಕುತುಕಂ ಶ್ರೀಧರ್ಮತೀರ್ಥೇಶ್ವರಾ ೨೩೬

ಪಡೆವೆಂ ತಪ್ಪದೆ ಮೋಕ್ಷಸೌಖ್ಯಪದಮಂ ತ್ವದ್ಭಕ್ತಿಯಿಂದಂತದಾ
ದೊಡಮಿಾ ನಿನ್ನಯ ಪಾದಸೇವೆ ಬಳಿಕಂ ಕೈಸಾರದೆಂದುಬ್ಬೆಗಂ
ಬಡುತಿರ್ದಪ್ಪುದು ಮನ್ಮನಂ ದಲದಱಿಂ ತ್ವತ್ಸೇವನಾಸೌಖ್ಯಮಿಾ
ಗಡೆ ಮಚ್ಚಿತ್ತದೊಳುಂಟುಮಾಳ್ಕೆ ತಣಿವಂ ಶ್ರೀಧರ್ಮತೀರ್ಥೇಶ್ವರಾ ೨೩೭

ಕೆನ್ನಂ ನುಣ್ಪೆಳಗೆಂಬ ಸಾರಜಳದಿಂದಂ ತುಂಬಿತುಳ್ಕಾಡುತುಂ
ಚೆನ್ನಂಬೆತ್ತ ಸಭಾಸರೋವರದ ಮಧ್ಯಸ್ಥಾನದಲ್ಲೊಪ್ಪುವೀ
ನಿನ್ನ ಶ್ರೀಪದಪದ್ಮದಲ್ಲಿ ನೆಲೆಗೊಂಡಿರ್ಕಾವಗಂ ಪ್ರೀತಿಯಿಂ
ದೆನ್ನೀ ಮಾನಸಮೆಂಬ ಹಂಸೆ ಪರಮಶ್ರೀಧರ್ಮತೀರ್ಥೇಶ್ವರಾ ೨೩೮

ಕೊಡುವೈ ನಿನ್ನನೆ ಪೂಜಿಪರ್ಗೆ ಸುಖಮಂ ಮತ್ತನ್ಯರಿಂಗಂತದಂ
ಕುಡೆ ನೀನೆಂದೊಡೆ ವೀತರಾಗನೆನಿಪೀ ಕೊಂಡಾಟಮೆಂತೊಪ್ಪಮಂ
ಪಡೆಗುಂ ನೋಳ್ಪಡುಪೇಕ್ಷೆಯಂ ಧರಿಸಿಕೊಂಡಿರ್ದಪ್ಪೆ ಸರ್ವರ್ಗೆ ಕ
ನ್ನಡಿಯಂತೆಯ್ದೆ ಸಮಾನಮಾಗಿ ಪೊಳೆಗುಂ ಶ್ರೀಧರ್ಮತೀರ್ಥೇಶ್ವರಾ ೨೩೯

ವ: ಎಂದನೇಕಪ್ರಕಾರ ಪವಿತ್ರಶತಸಹಸ್ರಂಗಳಿಂ ಸುತ್ತಿಗೆಯ್ದು ಬಳಿಯಂ ನಿರ್ಜರರಾಜಂ ನಿರ್ಜಿತಮನೋಜ ಜಿನರಾಜನ ಪೂಜೆಗುಜ್ಜುಗಿಸಿ ಪುಳೋಮಜೆಯ ಮೊಗಮಂ ನೋಡುವುದುಮಾಕೆ ಗಂಗಾಜಳಸಂಗತ ಗಾಂಗೇಯಮಯ ಸಮುತ್ತುಂಗ ಮಂಗಳ ಭೃಂಗಾರಸಂಘಾತಂಗಳಂ ಕುಂಕುಮಪಂಕಸಂಕಳಿತ ಮೇದುರಾಮೋದಪರಿಹ್ಲಾದನೀಯ ಹರಿಚಂದನರಸಕ್ಷೋದಪೂರಿತಮಾದ ಹಾರೀತಕಶುಕ್ತಿಕಾಸಾರಂಗಳಂ ಪ್ರಕ್ಷಾಳಿತವದಕ್ಷತ ಸ್ವರೂಪಕಳಮಾಕ್ಷತ ರಾಶಿಭಾಸುರ ಕರ್ಕೇತನವರ್ತುಳಸಾರ್ಥಂಗಳಂ ನಮೇರುಮಂದಾರ ಮಾಳಾಮೇಳಾಪಮಿಳಿತನದಿಂದ್ರನೀಲಪಟಳಕಪಟಳಂಗಳನು ಪರಿಪರಿನಿಹಿತ ಸುಧಾರಸಮಯ ವಿವಿಧಭಕ್ಷ್ಯೋಪಲಕ್ಷಿತ ಪರಮಾನ್ನಸಾನ್ನಾಯ್ಯ ಪರಿಪೂರ್ಣ ಸೌವರ್ಣಸ್ಥೂಳ ಸ್ಥಾಲೀಜಾಳಂಗಳಂ ಪೃಥುಳಕಿರಣಶ್ರೇಣಿರಮಣಿತಾಪರಿಣಾಯ

ಮಾನಶೋಣಮಾಣಿಕ್ಯ ನೀರಾಜನಾವ್ಯಾಜವಿಭಾಜಿತ ಮಹಾರಜತರಜತಭಾಜನ ಸಮಾಜಂಗಳಂ ಧೂಪಿತಪರಿದ್ವಳ ಯಾಂತರಾಳಪರಿಸ್ಫುರದಗರುಧೂಪಸಮುದ್ದಾಮ ಧೂಮಸ್ತೋಮ ಸಮಾವೃತಧೂಪ ಕುಂಡಿಕಾಮಂಡಳಿಗಳಂ ಚೌಚನೋಚಬೀಜಪೂರಾದಿ ನಾನಾನವೀನ ಕೋಮಳ ಪಕ್ವಫಳಂಗಳಿಂ ತುಂಬಿದ ಡೆಳ್ಳಿಗಳ ಬಳಗಂಗಳಂ ತಂದವಟಯಿಸಿ ನೀಡುವುದುಮವಂ ಕಳೆದುಕೊಂಡು

ಸುರುಚಿರವಾರಿಯಿಂ ಸುರಭಿಚಂದನಗಂಧದಿನಕ್ಷತಾಕ್ಷತೋ
ದ್ಧುರುತರಪುಂಜದಿಂ ಪರಿಮಳೋನ್ನತಚಾರುಲತಾಂತ ಮಾಲೆಯಿಂ
ನಿರತಿಶಯಾಮೃತಾನ್ನಚರುವಿಂದೆ ಸಮುಜ್ವಳರತ್ನದೀಪದಿಂ
ನಿರುಪಮಧೂಪಧೂಮಲತೆಯಿಂ ಬಹುಪೀವರಸತ್ಫಲಂಗಳಿಂ ೨೪೦

ಮಣಿಮಯದಂಡ ಚಾರುಚಮರಂಗಳಿನಾತಪವಾರಣಂಗಳಿಂ
ಫಣಿಕುಳಮಗ್ನಚಿತ್ರರಚನಾಭರಣಂಗಳಿನಾತ್ತಶೋಭ ದ
ರ್ಪಣಕಳಶಂಗಳಿಂ ಪರಮಧರ್ಮಜಿನೇಶ್ವರಪಾದಪದ್ಮಮಂ
ತಣಿಪಿನಮೊಲ್ದು ಪೂಜಿಸಿದನಿಂದ್ರನತೀಂದ್ರನುಪಾಸ್ತಿರುಂದ್ರನಂ ೨೪೧

ವ: ಅದಲ್ಲದೆಯುಂ

ಚರುವಿಡುತಿಪ್ಪ ರತ್ನಮಯಭಾಜನದೋಳಿಗೆ ಪುಣ್ಯತೀರ್ಥವಾ
ರ್ಭರಿತಸುಧಾಂಶುಕಾಂತಕಳಶಕ್ಕೆ ನಿವಾಳಿಸುತಿರ್ಪ ಪಂತಿಗೊಂ
ಡಿರಿಸಿದ ಚೆಲ್ವಮಾಣಿಕದ ಪಜ್ವಳಿಪಾರತಿಗಳ್ಗೆ ಪುಷ್ಪಮಂ
ಜರಿಕೆಗೆ ಲೆಕ್ಕಮಿಲ್ಲೆನಿಸಿ ಪೂಜಿಸಿದಂ ಜಿನನಂ ಸುರೇಶ್ವರಂ ೨೪೨

ವ: ಅಂತನೇಕ ಪ್ರವೇಕದಿವ್ಯಾರ್ಚನಾದ್ರವ್ಯಂಗಳಿನರ್ಥಿವೆರಸರ್ಚಿಸುತ್ತುಮಿರ್ಪಲ್ಲಿ

ಪರಮಹರಿನ್ಮಣಿಕಳಶೋ
ತ್ಕರಕಿರಣಂ ಪೀಠದಲ್ಲಿ ನಿಮಿರ್ದುದು ದೂರ್ವಾಂ
ಕುರದರ್ಚನೆಯೆನೆ ಮೌಕ್ತಿಕ
ವಿರಚಿತ ಕಳಶಂ ಸುಶಾಂತಿಧಾರಾಂಬುವವೋಲ್ ೨೪೩

ಮಱಿದುಂಬಿಗಳಾವಳಿ ಬಂ
ದೆಱಗಿರ್ದುದು ಧೂಪಧೂಪಮಲತಿಕಾಶೋಭೆಯೊ
ಳುಱುವೆಳಗಾಯ್ಗಳ ಬಳಗಂ
ತುಱುಗಿದುದೆಂಬೊಂದು ಶಂಕೆಯಂ ಪುಟ್ಟಿಸುತುಂ ೨೪೪

ವ: ಅಂತನಂತಮಂತ್ರಪ್ರಮುಖ ಮಹಾಪೂಜಾವಿಧಾನದಿಂ ವಾಕ್ಪೂಜಾ ವಿಶೇಷದಿ ನಿಖಿಳಾರಾಧ್ಯನ ಚರಣಸರೋಜಸಮಾರಾಧನಂಗೆಯ್ದು

ಮನಮಂ ಯೋಜಿಸಿ ಭಕ್ತಿಯೊಳ್ ನಿಲಿಸಿ ವಾಗ್ವ್ಯಾಪಾರಮಂ ಸ್ತೋತ್ರದೊಳ್
ತನುವಂ ಸೇವೆಯೊಳಂ ನಿಯಾಮಿಸಿ ಸಹಸ್ರಾಕ್ಷಂಗಳಂ ದಿವ್ಯರೂ
ಪನಿರೀಕ್ಷಾಪ್ರವಿಧಾನದಲ್ಲಿರಿಸಿ ಹಸ್ತದ್ವಂದ್ವಮಂ ಪಾದಪೂ
ಜನದುದ್ಯೋಗದ ವೃತ್ತಿಯೊಳ್ ಸಲಿಸಿ ತಾಳ್ದಂ ಜನ್ಮಸಾಫಲ್ಯಮಂ ೨೪೫

ಎಂತಮರೇಂದ್ರನರ್ಚಿಸಿದನಷ್ಟವಿಧಾರ್ಚನೆಯಿಂ ಜಿನೇಂದ್ರನಂ
ಸಂತೊಸದಿಂದಮಾ ತೆಱದೆ ಬಾಹುಬಲಿವ್ರತಿನಾಯಕಂ ಜಗ
ತ್ಕಾಂತಮೆನಿಪ್ಪ ತನ್ನಯ ವಚೋಮಯ ಮಂಗಳ ಶಸ್ತವಸ್ತುವಿಂ
ದಂ ತಣಿವಂತು ಪೂಜಿಸಿದನಷ್ಟವಿಧಾರ್ಚನೆಪೂರ್ವಮಾಕ್ಷಣಂ ೨೪೬

ವಿಳಸಿತವಾಙ್ಮಯಂ ಭುಜಬಳೀಯಕಮುತ್ತಮವಾರಿಯಾಯ್ತು ಸ
ನ್ಮಳಯಜಮಾಯ್ತು ಧೌತಕಳಮಾಕ್ಷತಮಾಯ್ತು ಸುಪುಷ್ಪಮಾಯ್ತು ಮಂ
ಜುಳಚರುವಾಯ್ತು ದೀಪಮಣಿಯಾಯ್ತು ಧೂಪಮುಮಾಯ್ತು ಸ
ತ್ಫಳಕುಳಮಾಯ್ತು ಧರ್ಮಜಿನರಾಜನ ಪಾದಪಯೋಜಪೂಜೆಯೊಳ್ ೨೪೭

ವ: ಇಂತು ನಿರ್ಭರಭಕ್ತಿಯಿಂ ಬಾಹುಬಲಿಪಂಡಿತದೇವರುಂ ರೂಪಸ್ಥಮೆಂಬ ಧ್ಯಾನದಿಂ ಮನದೊಳನುಷ್ಠಿತ ತತ್ಸ್ವರೂಪರಾಗಿ ವಾಕ್ಪೂಜೆಯನೊಡರ್ಚಿ ಕೃತಕೃತ್ಯತೆಯ ನೆಯ್ದುವುದುಂ

ನವರತ್ನರಾಶಿಗಳಿನೊ
ಪ್ಪುವ ದೇವಾಂಗಾದಿವಸ್ತ್ರತತಿಯಿಂದೆ ಮಹಾ
ನವನಿಧಿಗಳನರ್ಚಿಸಿದಂ
ದಿವಿಜೇಂದ್ರಂ ಧರ್ಮನಾಥನ ಶ್ರೀಪದಮಂ ೨೪೮

ವ: ಅನಂತರಂ

ಆಳಾಪಂಗೆಯ್ವ ರಾಗಚ್ಛವಿಗನುವಶಮಪ್ಪಂತೆ ಸೌವರ್ಣ ನಾನಾ
ಲೀಲಾ ವಾದ್ಯಂಗಳಂ ಬಾಜಿಸುವ ಗತಿಗೊಡಂಬಟ್ಟು ಸನ್ಯಾಸದಿಂದಂ
ತ್ರೈಲೋಕ್ಯಾಧೀಶ್ವರಾಭ್ಯರ್ಚಿತ ಚರಣನ ಮುಂದಾಡಿ ತನ್ನೊಂದು ಸೇವಾ
ಕೇಳೀ ಸಾಮರ್ಥ್ಯಮಂ ಬೀಱಿದನಮರವರಂ ಭಕ್ತಿಸಕ್ತಿಪ್ರಯುಕ್ತಂ ೨೪೯

ವ: ಆಗಳಖಿಳದೇವತಾಚಕ್ರವರ್ತಿಯ ಬಹಳಾಶ್ಚರ್ಯಕಾರಿಯಪ್ಪ ಪರಮೈಶ್ವರ್ಯ ವಿಭವ ಸಮುತ್ಕರ್ಷಮಂ ಮೂಜಗಕ್ಕೆ ಸಾಱಿತೋಱಿಸುವಂತಿರೊರ್ವೊರ್ದಲೊಳ್ ಭೋರ್ಗರೆದು ಘೂರ್ಮಿಸುವ ಸುರಕುಮಾರಕರ ಪರಿತಾಢ್ಯಮಾನಸಾರ್ಧ ದ್ವಾದಶಕೋಟಿ ಮಹಾದೇವದುಂದುಭಿ ಸಂದೋಹದ ಸೂಳ್ಪಡೆದು ದೇವರ್ಕಳೂದುವ ಸಪ್ತಕೋಟಿ ಶಂಖವಾಸ ಕಹಳಾಕಳಾಪನಿನದ ಕೋಳಾಹಳದ ವಿಂಶತಿಕೋಟಿ ದೇವಗಾಯಕರ

ಕರತಳ ಕಳಿತವೀಣಾತಾಳಕರ ವಿರಾಮಮೇಳದೊಳಗೂಡಿದ ಪರಿಪರಿಯ ಠಾಯೆಗ ತಾರ ಮಂದ್ರ ಮಧ್ಯಮಮೆಂಬ ಭೇದತ್ರಯದಿಂ ಮೇದುರಮಾದ ಗಂಭೀರ ಶುಂಭಧ್ವಾನಕ್ಕೆ ತಕ್ಕಂದದಿಂದಾನಂದನಾಟ್ಯಮನದ್ಭುತಮೆನಲೊಡ್ಡಯಿಸಿದಿಂ ಬಳಿಯಂ

ಪಿಡಿದಿರ್ಪಂ ತಾನೆ ಮೂಱುಂ ನೆಲೆಯ ಮಣಿಮಯಚ್ಛತ್ರಮಂ ಪೂಜೆಯಂ ನೇ
ರ್ಪಡೆ ಮಾಳ್ಪಂ ತಾನೆ ನಾನಾಸ್ತುತಿಯನೆಸಗುವಂ ತಾನೆ ದೇವರ್ಕಳಂ ಸೈ
ತಿಡುವಂ ತಂತಾನೆ ಭಾಸ್ವಚ್ಚಮರರುಹಮುಮಂ ಬೀಸುವಂ ತಾನೆ ಮತ್ತೆ
ನ್ನೆಡೆಯೊಳ್ ಬೇಱಾವನೋ ಸೇವಕನೆನೆ ಸುರಪಂ ಸೇವೆಯಂ ಮಾಡುತಿರ್ದಂ ೨೫೦

ವ: ಇಂತು ಸಮಸ್ತದೇವಸಮೂಹಂಬೆರಸು ಸೌಧರ್ಮೇಂದ್ರಂ ಸಾಸಿರ್ಮಡಿ ಯಾದ ಪೆರ್ಮೆಯಿಂ ಧರ್ಮನಾಥಜಿನೇಂದ್ರನಂ ಪೂಜಿಸಿ ಪೊಗಳ್ದಡಿಗಡಿಗಂ ಪೊಡವಟ್ಟು ಹರ್ಷಸಮುತ್ಕರ್ಷವರ್ಷಿತಬಾಷ್ಪವಾಃಪೂರಂ ತನ್ಮಹಾಮಹಿಮೆಯಂ ಮನಂದಣಿವಿನಂ ನೀಡುಂನೋಡಿ ಕೊಂಡಾಡುತ್ತುಂ ಬಂದು ಗಣಧರಕೋಷ್ಠದೊಳಶೇಷಗಣಧರ ವಿಶೇಷಕರಾಗಿರ್ದ ವಿಶಿಷ್ಟಗುಣಸಮಭಿಷ್ಟುತವದರಿಷ್ಟಸೇನರೆಂಬ ಮುಖ್ಯಗಣಧರರಂ ಪರಿವಂದಿಸಿ ಮುಂದೆ ಕುಳ್ಳಿರ್ದು ತತ್ಸ್ವರೂಪದ ತೆಱನಂ ಸರ್ವಜ್ಞನಂ ಕೇಳಿ ನೀವೆಂದು ಸೌಧರ್ಮೇಂದ್ರಂ ಪ್ರಾರ್ಥಿಸಿ ತಂತಮ್ಮ ಕೋಷ್ಠದೊಳ್ ಕುಳ್ಳಿರ್ಪುದುಮಿಂದ್ರಪ್ರೇರಿತನುಂ ಭವ್ಯಸಾರ್ಥ ಪ್ರಾರ್ಥಿತನುಮಾಗಿ

ಅತಿಶಯಬೋಧಚತುಷ್ಟಯ
ಯುತನಮಳನರಿಷ್ಟಸೇನಗಣಧರರಾ ಜಿನ
ಪತಿಯಂ ಬೆಸಗೊಂಡಂ ವಿರ
ಚಿತನತಿತತ್ತ್ವ ಸ್ವರೂಪಭೇದಸ್ಥಿತಿಯಂ ೨೫೧

ವ: ಅಂತು ವಿನಯಭರವಿನಮಿತಮಸ್ತಕನುಂ ಮುಕುಳೀಕೃತಹಸ್ತನುಮಾಗಿ ಬೆಸಗೊಳಲೊಡಮಾ ಧರ್ಮನಾಥಜಿನವಲ್ಲಭನ ವದನಮಂಡಳಮೆಂಬ ಹಿಮವದ್ಗಿರಿ ಶಿಖರ ವಳಯದಿಂ ದಿವ್ಯಧ್ವನಿಯೆಂಬ ಸ್ವರ್ಧುನೀಪ್ರವಾಹಂ ಪೊಱಮಡುವುದುಂ

ರಮಣೀಯಂ ಮುಕ್ತತಾಲೋಷ್ಠಪುಟಚಳನಕಂ ದೂರಸಮೀಪದೊಳ್ ತಾಂ
ಸಮರೂಪಂ ಸರ್ವಭಾಷಾತ್ಮಕಮಖಿಳಹಿತಂ ತ್ಯಕ್ತವಾಯುಪ್ರಚಾರೋ
ದ್ಗಮಕಂ ಹಿಂಸಾದಿ ದೋಷೋಜ್ಜಿತಮಭಿವಿಸರದ್ಯೋಜನೈಕಪ್ರಮಾಣಂ
ಪ್ರಮದಂ ಪೆರ್ಚಲ್ಕೆ ದಿವ್ಯಧ್ವನಿ ಜಿನಮುಖದಿಂ ಪುಟ್ಟಿ ಪೊಣ್ಮುತ್ತದೆತ್ತಂ ೨೫೨

ವ: ಆ ದಿವ್ಯಧ್ವನಿಯರ್ಧಮಾಗಧೀಭಾಷೆಯೆಂಬ ಪೆಸರಿಂದೇಕರೂಪಮಾಗಿ ಪುಟ್ಟಿದೊಡಮನೇಕ ಭಾಷಾಮಯಮುಮಾಗಿ ಪರಿಣಮಿಸುವುದದೆಂತೆನೆ

ಮಳೆವನಿಯೊಂದೇಪರಿಯಿಂ
ದಿಳೆಯೊಳ್ ಬಿಳ್ದಂದು ಮತ್ತೆ ಭೂಮಿಯ ಗುಣದಿಂ

ಪಲವಂದಮಾಗಿ ತೋರ್ಪಂ
ತೊಳಕೊಂಡುದನೇಕಜಾತಿಭಾಷೆಯ ತೆಱನಂ ೨೫೩

ವ: ಇಂತು ಸರ್ವಶ್ರವ್ಯಮಾದ ದಿವ್ಯಭಾಷೆಯಿಂ ಭುವನಭೂಷಣನಿಂತೆಂದು ಬೆಸಸಿದಂ ತತ್ತ್ವಮೆಂಬುದು ಜೀವಾಜೀವಶ್ರವಬಂಧ ಸಂವರನಿರ್ಜರಾಮೋಕ್ಷಭೇದದಿಂ ಸಪ್ತ ವಿಧಮಕ್ಕುಮಲ್ಲಿ ಬಂಧಾಂತರ್ಭಾವಿಗಳಪ್ಪ ಪುಣ್ಯಪಾಪಂಗಳೆರಡಂ ಕೂಡಿದೊಡೆ ನವಪದಾರ್ಥಮಕ್ಕು ಸಪ್ತತತ್ತ್ವಂಗಳೊಳ್ ಮುಖ್ಯಮಪ್ಪ ಜೀವತತ್ತ್ವಸ್ವರೂಪಮೆಂತೆನೆ

ದ್ರವ್ಯಪರ್ಯಾಯರೂಪನಿ
ಷೇವ್ಯಂ ಚೈತನ್ಯಲಕ್ಷಣಂ ತನುಮಾತ್ರ
ಸ್ವವ್ಯವಧಿಕರ್ತೃಭೋಕ್ತೃ
ದ್ರವ್ಯೋತ್ಪತ್ತಿವ್ಯಯಸ್ವಭಾವಂ ಜೀವಂ ೨೫೪

ವ: ಅದು ಮುಕ್ತಿಜೀವಂ ಸಂಸಾರಿಜೀವನೆಂದಿತ್ತೆಱನಕ್ಕುಮಲ್ಲಿ ಮುಕ್ತಿಜೀವನ ನಂತಚತುಷ್ಟಯಮಯನಾಗಿಕ್ಕು ಮತ್ತೆ ಸಂಸಾರಿಜೀವಂ ನರಕತಿರ್ಯಙ್ಮನುಷ್ಯ ದೇವಗತಿ ಸಂಜನವಿಕಲ್ಪದಿಂ ನಾಲ್ಕುಪ್ರಕಾರಮಕ್ಕುಮಾ ನಾರಕಜೀವನಧೋಧಃಸಪ್ತ ಭೂಮಿಸಂಭಿನ್ನ ರತ್ನಶರ್ಕರಾವಾಳುಕಪಂಕಧೂಮತಮೋಮಹಾತಮ ಪ್ರಭಾಭಿಧಾನಸಪ್ತ ಭೂಮಿ ಸಂಬಂಧದಿಂ ಸಪ್ತವಿಧಮಾಗಿಯಧಿಕಾಧಿಕ ಸಂಕ್ಲೇಶ ಪ್ರಮಾಣಾಯುಷ್ಯ ವಿಶೇಷ ದೊಳೊಂದಿ ನವೆಯುತ್ತುಮಿರ್ಕುಮಲ್ಲಿ

ಮೊದಲೊಳ್ ಮೂವತ್ತುಲಕ್ಕಂ ದ್ವಿತಯಮಹಿಯೊಳಿಪ್ಪತ್ತು ಮತ್ತೈದುಲಕ್ಕಂ
ಪದಿನೈದುಂ ಲಕ್ಕಮಾ ಮೂಱನೆಯ ನರಕದೊಳ್ ನಾಲ್ಕಱೊಳ್ ಪತ್ತುಲಕ್ಕಂ
ಪದೆಪಿಂ ಲಕ್ಷತ್ರಯಂ ಪಂಚಮನರಕದೊಳಂತೈದುಗುಂದೊಂದುಲಕ್ಕಂ
ಪುದಿದಿರ್ದಿತ್ತಾಱಱೊಳ್ ಸಪ್ತಮನರಕದೊಳೈದೆ ಬಿಲಂಗಳ್ದವಿಕ್ಕುಂ ೨೫೫

ವ: ಇಂತೇಳುಂ ನರಕಭೂಮಿಯೊಳಿರ್ದಿಂದ್ರಶ್ರೇಣೀಬದ್ಧಪ್ರಕೀರ್ಣಕರೂಪ ಮಾದಂಗಳಾದ ಬಿಲಂಗಳೆಲ್ಲಂ ಕೂಡಿಯೆಣ್ಬತ್ತನಾಲ್ಕುಲಕ್ಕಮಾಗಿರ್ಕುಂ

ಕಾಗೆಯ ನಾಯ ಕತ್ತೆಯ ಸೃಗಾಳದ ಗೂಗೆಯ ಬಾಯ್ಗಳಂದದಿಂ
ದಾಗರಮಾಗಿ ಪೇಸಿಕೆಗೆ ನಾಱುತುಮಿಪ್ಪೆಡೆಯಲ್ಲಿ ಪುಟ್ಟುವರ್
ಪೋಗಿ ಘನಾರ್ತರೌದ್ರಪರಿಣಾಮದೊಳೊಂದಿದ ಕೃಷ್ಣನೀಲಲೇ
ಶ್ಯಾಗತಪಾಪಿಗಳ್ ನರಕಕಷ್ಟಬಿಲಂಗಳ ತಾಣವೆಲ್ಲಿಯುಂ ೨೫೬

ವ: ಪುಟ್ಟಿದಂತರ್ಮುಹೂರ್ತದೊಳಾಹಾರಿಕ ಶರೀರೇಂದ್ರಿಯೋಚ್ಛ್ವಾಸ ನಿಶ್ವಾಸ ಭಾಷಾಮನಂಗಳೆಂಬ ಷಟ್ಪರ್ಯಾಪ್ತಿಗಳ್ ನೆಱೆದು ಪರಿದ ಪಾದರಸ ಬಿಂದುಗ

ಳಿಂತೊಡಗೂಡುವಂತೆ ಶತಖಂಡಂಗಳಾದಂಗಂಗಳೆಲ್ಲಮೊಂದುಗೂಡಿ ಮುದ್ರಿಸಿದ ಮಸಿಯ ಪಾಪೆಯಂತೆ ಕಡುಕರಂಗಿ ಮೊಡೆನಾತಕ್ಕೆಡೆಯಾದ ಮೆಯ್ಯಂ ಪಡೆದು ಶಾರೀರಿ ಮಾನಸ ಕ್ಷೇತ್ರಜ ಪರಸ್ಪರೋದೀರಿತ ದನುಜೋದೀರಿತಂಗಳೆಂಬ ಪಂಚಪ್ರಕಾರದುಃಖಮೆ ಪಂಚಮಹಾಭೂತಮಾಗಿ ಮೂರ್ತಿವೆತ್ತುದೆಂಬಂತೆ ಕೋಟಲೆಯನವಗಯಿಸಿರ್ಕುಂ

ಆಱಂಗುಲಂ ತ್ರಿಹಸ್ತಂ
ಮಾಱದೆ ಕೂಡಿರ್ದ ಸಪ್ತಚಾಪೋತ್ಸೇಧಂ
ತೋಱುವುದು ಮೊದಲನರಕದೊ
ಳಾಱಡಿವೆತ್ತಿರ್ದ ನಾರಕರ ಮೆಯ್ಗಳೊಳಂ ೨೫೭

ತದ್ವಿಗುಣ ದ್ವಿಗುಣಂಬಡೆ
ದುದ್ದಂ ಮತ್ತುಳಿದ ನರಕದವರ್ಗೆಲ್ಲಂ ಮೆ
ಯ್ಯೊದ್ದಿದ ಪಂಚಧನುಃಶತ
ದುದ್ದಂ ತೋರ್ಪನ್ನೆವರಮದೆಯ್ದುಗು ಪೆರ್ಚಂ ೨೫೮

ಒಂದು ಮೂಱೇಳು ಪತ್ತುಂ
ಕುಂದದೆ ಪದಿನೇಳುಮಿಪ್ಪತೆರಡುಂ ಮೂವ
ತ್ತೊಂದಿದ ಮೂಱಱ ಸಾಗರ
ಮಂದಾಯುಃಪ್ರಮಿತಿಯೋಳಿಯಿಂದೇಳಱೊಳಂ ೨೫೯

ಕರಗುಗು ಕಗ್ಗಲ್ಲಾದೊಡ
ಮಿರದಾಗಳೆನಿಪ್ಪ ತೀವ್ರತರಮುಷ್ಣಂ ನಾ
ಲ್ಕರೆಭೂಮಿಯೊಳಿಕ್ಕುಂ ಮ
ತ್ತೆರಡರೆಭೂಮಿಯೊಳತೀವಶೀತಂ ತೋರ್ಕುಂ ೨೬೦

ವ: ಇಂತು ದುಃಖಾಕರಮಾದೇಳುಂ ನರಕದೊಳನುದಿನಮನವಧಿವೇದನೆ ಯನನುಭವಿಸುತ್ತಿರ್ಪ

ನಾರಕಜೀವನ ತೆಱನುಮ
ನೋರಂತಿರೆ ತಿಳಿಯೆ ಪೇಳ್ದು ಸರ್ವಜ್ಞಂ ಮ
ತ್ತಾರಯೆ ತಿರ್ಯಗ್ಜೀವನ
ಘೋರಾವಸ್ಥೆಯುಮನಿಂತು ಪೇಳುತ್ತಿರ್ದಂ ೨೬೧

ವ: ಅದೆಂತೆಂದೊಡೆ ತಿರ್ಯಗ್ಜೀವಂ ತ್ರಸಮಂ ಸ್ಥಾವರಮುಮೆಂದಿತ್ತೆಱನದಱೊಳ್ ತ್ರಸಮೆಂಬುದು ಸರ್ವಸಾಧಾರಣಸ್ಪರ್ಶನೇಂದ್ರಿಯುಮನುಳ್ಳ ಶರೀರಿಯಲ್ಲಿ ಕ್ರಮಂಗೊಂಡೊಂದೊಂದು ರಸನಂ ಘ್ರಾಣಂ ಚಕ್ಷು ಶ್ರೋತ್ರಮೆಂಬಿಂದ್ರಿಯಂಗಳ ಪೆರ್ಚುಗೆ

ಯಿಂದಪ್ಪುದು ದ್ವೀಂದ್ರಿಯಾದಯಸ್ತ್ರಸಾಯೆಂದು ಜಿನಾಗಮಪ್ರತಿಪಾದಿತಮಾದುದಱಿಂ ದ್ವೀಂದ್ರಿಯ ಪ್ರಾಣ ಮೊದಲ್ಗೊಂಡು ಪಂಚೇಂದ್ರಿಯಪ್ರಾಣಪರ್ಯಂತಂ ತ್ರಸಮೆನಿಕ್ಕು ಮಿಂತು

ದ್ವೀಂದ್ರಿಯಜೀವದ ತನುಮಾ
ನಂ ದ್ವಾದಶಯೋಜನಂ ಸಮುತ್ಕರ್ಷತೆಯಿಂ
ದಂ ದ್ವಾದಶವರ್ಷಮಿತಂ
ಸಂದಾಯುಷ್ಯದ ಪವಣ್ ಜಿನೋಕ್ತಕ್ರಮದಿಂ ೨೬೨

ಒಂದೂನಮಾಗಿಯೈವ
ತ್ತುಂ ದಿನಮಕ್ಕುಂ ಸ್ಥಿತಿಪ್ರಮಾಣಂ ಮಾನಂ
ದ್ವೀಂದ್ರಿಯಜೀವದ ದೇಹದೊ
ಳೊಂದಿರ್ದುದು ಮುಖ್ಯವೃತ್ತಿಯಿಂ ತ್ರಿಕೋಶಂ ೨೬೩

ಚತುರಿಂದ್ರಿಯಜೀವನದ
ಸ್ಥಿತಿ ಷಣ್ಮಾಸಪ್ರಮಾಣಮುತ್ಕೃಷ್ಟತೆಯಿಂ
ದೆ ತನು ಸಮುನ್ನತಿಯೋಜನ
ಮಿತಮಿಂತೆಂದುಸಿರ್ದನಾ ಜಿನೇಶಂ ಸಭೆಗಂ ೨೬೪

ಒಂದುಯೋಜನಸಹಸ್ರಂ
ಕುಂದದೆ ತೋರ್ಪುದು ಶರೀರದುದ್ದಂ ನಿಯತಂ
ಸಂದಮರ್ದುದು ತಿರ್ಯಕ್ಪಂ
ಚೇಂದ್ರಿಯಕಂ ಪೂರ್ವಕೋಟಿಪರಮಾಯುಷ್ಯಂ ೨೬೫

ವ: ಮತ್ತಮೇಕೇಂದ್ರಿಯಮನುಳ್ಳ ಸ್ಥಾವರಜೀವಂ ಪೃಥಿವ್ಯಪ್ತೇಜೋವಾಯು ವನಸ್ಪತಿ ಕಾಯಿಕವಿಕಲ್ಪದಿಂ ಪಂಚಪ್ರಕಾರಮಕ್ಕುಮಲ್ಲಿ ಪರಮಾಯುಷ್ಯಂ ಪೃಥ್ವೀಕಾಯಿ ಕಕ್ಕೆಪ್ಪತ್ತೆರಡುಸಾಸಿರ ವರ್ಷಮಕ್ಕುಮಪ್ಕಾಯಿಕಕ್ಕೇಳುಸಾಸಿರ ವರ್ಷಮಕ್ಕುಂ ತೇಜಸ್ಕಾಯಿಕಕ್ಕೆ ಮೂಱುದಿನಮಕ್ಕುಂ ವಾಯುಕಾಯಿಕಕ್ಕೆ ಮೂಱುಸಾಸಿರವರ್ಷಮಕ್ಕುಂ ವನಸ್ಪತಿಕಾಯಿ ಕಕ್ಕೆಪ್ಪತ್ತುಸಾಸಿರವರ್ಷಮಕ್ಕುಮಿಂತು

ಶೀತದ ಪೀಡೆಯಿಂ ರುಜೆಯ ಪೀಡೆಯಿನುಷ್ಣದ ಪೀಡೆಯಿಂ ಮಹಾ
ವಾತದ ಪೀಡೆಯಿಂದೆ ಪೊಣರ್ದೊಂದನದೊಂದು ಱಿಪೊಯ್ವ ಶೃಂಗನಿ
ರ್ಘಾತದ ಪೀಡೆಯಿಂ ಕ್ಷುಧೆಯ ಪೀಡೆಯಿನೆಯ್ದೆ ತೃಷಾದಿಪೀಡೆಯಿಂ
ದಾತತ ತಿರ್ಯಗಂಗನಿಚಯಂ ಕಡುದುಃಖದೊಳೊಂದಿ ಬಳ್ದುಗುಂ ೨೬೬

ಆರ್ತಧ್ಯಾನಂ ಮನದೊಳ್
ಸಾರ್ತರಲುದ್ಭವಿಸಿ ಕಷ್ಟತಿರ್ಯಗ್ಗತಿಯೊಳ್

ವರ್ತಿತ ಪಾಪೋದಯದಿಂ
ದರ್ತಿಯೊಳೋಲಾಡುತಿರ್ಕು ತಿರ್ಯಗ್ಜೀವಂ ೨೬೭

ಇಂತಖಿಳಜ್ಞಂ ತಿರ್ಯ
ಗ್ಜಂತು ಸಮೂಹಸ್ವರೂಪ ನಿರೂಪಣಾ ಸಮ
ನಂತರಮೆಲ್ಲರ್ಗುಸಿರ್ದಂ
ಸಂತಸದಿಂದಂ ಮನುಷ್ಯಜೀವನದ ತೆಱನಂ ೨೬೮

ವ: ಅದೆಂತೆಂದೊಡೆ ಮನುಷ್ಯಜೀವಂ ಭೋಗಭೂಮಿ ಕರ್ಮಭೂಮಿ ಸಮುದ್ಭವಭೇದದಿಂ ದ್ವಿವಿಧಮಕ್ಕುಮಾ ಭೋಗಭೂಮಿಯುಂ ದೇವಕುರೂತ್ತರಕುರ್ವಾದಿ ಭೇದದಿಂ ಮೂವತ್ತು ತೆಱನಕ್ಕು ಮತ್ತಮದುತ್ತಮ ಮಧ್ಯಮ ಜಘನ್ಯಭೂಮಿ ಭೇದದಿಂ ಮೂದೆಱನಾಗಿ ತೋರ್ಕು ತಮುತ್ತಮಭೋಗಭೂಮಿಜರ್ಗಾಱುಸಾಸಿರಬಿಲ್ಲುದ್ದಮುಂ ಮೂಱುಪಲ್ಯೋಪಮಂ ಜೀವನಮುಮಕ್ಕುಮಾ ಮಧ್ಯಮಭೋಗಭೂಮಿಜರ್ಗೆ ನಾಲ್ಕು ಸಾಸಿರಬಿಲ್ಲುತ್ಸೇಧಮುಂ ಎರಡುಪಲ್ಯೋಪಮಮಾಯುಷ್ಯಮುಮಕ್ಕು ಜಘನ್ಯಭೋಗ ಭೂಮಿಜರ್ಗೆರಡುಸಾಸಿರ ಚಾಪೋನ್ನತಿಯುಮೊಂದು ಪಲ್ಯೋಪಮಮಾಯುಃಪ್ರಮಾಣ ಮುಮಕ್ಕುಮಲ್ಲಿ

ಪತ್ತುತೆಱನಾದ ಸುರತರು
ಪಿತ್ತ ಮಹಾಭೋಗ ಸಮುಪಭೋಗಮನನುಭವಿ
ಸುತ್ತಿರ್ಪರ್ ದಂಪತಿಗಳ್
ಉತ್ತಮಪಾತ್ರಕ್ಕೆ ಕೊಟ್ಟ ದಾನದ ಫಲದಿಂ ೨೬೯

ವ: ಮತ್ತಂ ಕರ್ಮಭೂಮಿಗಳ್ ಭರತಾದಿಭೇದದಿಂ ಪದಿನೈದು ಪರಿಯಕ್ಕುಂ ತದ್ಭೂವಿಭವರಾರ್ಯಮ್ಲೇಚ್ಛ ಪ್ರಭೇದದಿಂ ದ್ವಿವಿಧರಪ್ಪರವರ್ಗುತ್ಕೃಷ್ಟದಿಂದೈ ನೂಱೆಪ್ಪತ್ತೈದು ಚಾಪೋತ್ಸೇಧಮುಂ ಪೂರ್ವಕೋಟಿಪ್ರಮಾಣಾಯುಷ್ಯಮುಂ ವಿದೇ ಹಂಗಳೊಳ್ ನಿಯಮಿತಮಕ್ಕು ಭರತೈರಾವತಂಗಳುತ್ಸರ್ಪಿಣ್ಯವಸರ್ಪಿಣಿಗಳೆಂಬೆರಡು ಕಾಲವಶದಿಂ ವೃದ್ಧಿ ಹ್ರಾಸಮನೆಯ್ದುಗುಮವೊಂದೊಂದಕ್ಕೆ ಪತ್ತುಕೋಟಾಕೋಟಿ ಸಾಗರೋಪಮಕಾಲ ಪ್ರಮಾಣಮಕ್ಕು ಮತ್ತಮುತ್ಸರ್ಪಿಣೀಕಾಲಮುಂ ಸುಷುಮಸುಷ ಮೆಯುಂ ಸುಷಮೆಯುಂ ಸುಷಮದುಷ್ಷಮೆಯುಂ ದುಷ್ಷಮಸುಷುಮೆಯುಂದುಷ್ಷಮೆ ಯುಮತಿದುಷ್ಷಮೆಯುಮೆಂದು ಷಟ್ಪ್ರಕಾರಮಕ್ಕುಮಿಾ ಕ್ರಮದಿಂದವಸರ್ಪಿಣೀ ಕಾಲಮುಮಂತೆಯಕ್ಕುಮಲ್ಲಿ ಮೊದಲಕಾಲಕ್ಕೆ ನಾಲ್ಕು ಕೋಟಾಕೋಟಿಸಾಗರೋಪಮ ಮೆರಡನೆಯದಕ್ಕೆ ಮೂಱು ಕೋಟಾಕೋಟಿಸಾಗರೋಪಮಂ ಮೂಱನೆಯದಕ್ಕೆರಡು ಕೋಟಾಕೋಟಿ ಸಾಗರೋಪಮಂ ನಾಲ್ಕನೆಯದಕ್ಕೆ ನಾಲ್ವತ್ತೆರಡು ಸಾಸಿರವರುಷಗುಂದಿ ದೊಂದು ಕೋಟಾಕೋಟಿ ಸಾಗರೋಪಮಮೈದನೆಯದಕ್ಕಿಪ್ಪತ್ತೊಂದು ಸಹಸ್ರ ಸಂವತ್ಸರ ಮಾಱನೆಯದಕ್ಕನಿತೇ ಪ್ರಮಾಣಮುಮಕ್ಕುಮಿಂತು

ವ್ಯವಸಾಯಂ ಗಣಕತ್ವಂ
ವ್ಯವಹಾರಂ ವಿದ್ಯೆ ಶಿಲ್ಪಸೇವನಮುಂ ಸಂ
ಭವಿಸುವ ಷಟ್ಕರ್ಮಕದಿಂ
ದವೆ ಷಡ್ವಿಧಮಕ್ಕು ಪಾಪಹರದಾರ್ಯಜನಂ ೨೭೦

ವ: ಮತ್ತಂ ಮಿಥ್ಯಾದೃಷ್ಟಿ ಸಾಸಾದಾನಸಮ್ಯಗ್ದೃಷ್ಟಿ ಸಮ್ಯಗ್ಮಿಥ್ಯಾದೃಷ್ಟಿ ಅಸಂಯತಸಮ್ಯಗ್ದೃಷ್ಟಿ ದೇಶವ್ರತಿ ಪ್ರಮತ್ತಸಂಯತನಪೂರ್ವಕರಣ ಕ್ಷಪಕೋಪಶಮಕ ಸಂಯತನನಿವೃತ್ತಿಕರಣ ಕ್ಷಪಕೋಪಶಮಕಸಂಯತ ಸೂಕ್ಷ್ಮಸಾಂಪರಾಯಕ್ಷಪ ಕೋಪಶಮಕ ಸಂಯತನು ಪಶಾಂತಕಷಾಯ ವೀತರಾಗಚ್ಛದ್ಮಸ್ಥಸಂಯತಕ್ಷೀಣಕಷಾಯ ವೀತರಾಗಚ್ಛದ್ಮಸ್ಥಸಂಯುತ ಸಯೋಗಕೇವಳಿ ಅಯೋಗಕೇವಳಿಯೆಂಬ ಪದಿನಾಲ್ಕು ಗುಣಸ್ಥಾನಭೇದದಿಂ ತದಾರ್ಯ ಜನಮುಂ ಪದಿನಾಲ್ಕುತೆಱನಾಗಿ ತೋಱುತ್ತುಮಿರ್ದು

ಧರ್ಮಕರಣಪ್ರವೀಣಂ
ನಿರ್ಮಳಚಾರಿತ್ರಶೀಲಮಮಂ ತಾಳ್ದಿರ್ದುಂ
ಕರ್ಮಕ್ಷಯಮಮಂ ಮಾಡುವ
ಪೆರ್ಮೆಗೆ ಸಂಪ್ರಾಪ್ತಮಪ್ಪುದಖಿಳಾರ್ಯಜನಂ ೨೭೧

ಮ್ಲೇಚ್ಛಖಂಡಂಗಳೈದು ಸ
ಮುತ್ಸವದಿಂದಲ್ಲಿ ಪುಟ್ಟಿ ನೆಲಸಿರ್ದು ಮಹಾ
ಮ್ಲೇಚ್ಛರುಮೆಯ್ದೆಱನಪ್ಪರ
ತುಚ್ಛಜಿನಾಗಮಪಯೋಧಿಪಾರಗಮತದಿಂ ೨೭೨

ಪುಟ್ಟುವುದು ಮನುಜಜೀವಂ
ನೆಟ್ಟನೆ ಮಲಮೂತ್ರಜಂತು ದುರ್ಗಂಧಕ್ಕೆಡೆ
ಗೊಟ್ಟ ಸ್ತ್ರೀಗರ್ಭದೊಳಂ
ಪುಟ್ಟುವ ತೆಱದಿಂದಮಲ್ಲಿ ದುಷ್ಕ್ರಿಮಿನಿಕರಂ ೨೭೩

ಈತೆಱದ ಮನುಜಗತಿವಿ
ಖ್ಯಾತಶರೀರಸ್ವರೂಪಮಮಂ ಪೇಳ್ದಿನ್ನುಂ
ಸಾತಿಶಯದೇವಗತಿಯ ವಿ
ಭೂತಿಯನಿಂತೆಂದು ಪೇಳುತಿರ್ದಂ ಜಿನಪಂ ೨೭೪

ವ: ಅದೆಂತೆಂದೊಡೆ ಜೀವಜೀವಂ ಭವನ ವ್ಯಂತರ ಜ್ಯೋತಿಷ್ಕ ವೈಮಾನಿಕ ಭೇದದಿಂ ಚತುರ್ವಿಧಮಕ್ಕುಮಲ್ಲಿ ಭವನವಾಸಿಕರ ಸುರನಾಗವಿದ್ಯುತ್ಸುವರ್ಣಾಗ್ನಿ ವಾತಸ್ತನಿತೋದ ಧಿದ್ವೀಪ ದಿಕ್ಕುಮಾರವಿಕಲ್ಪದಿಂ ಪತ್ತುತೆಱನಪ್ಪವರೊಳಸುರಕುಮಾರಕರ್ಗಿಪ್ಪತ್ತೈದು

ಬಿಲ್ಲುದ್ದಮುಳಿದವರ್ಗೆ ಪತ್ತುಬಿಲ್ಲುದ್ದ ಮುತ್ಕರ್ಷದಿಂದೊಂದು ಸಾಗರೋಪಮ ಮಾಯುಷ್ಯಂ ವ್ಯಂತರರ್ ಕಿನ್ನರ ಕಿಂಪುರುಷ ಗರುಡ ಗಂಧರ್ವ ಯಕ್ಷರಾಕ್ಷಸಭೂತ ಪಿಶಾಚ ಭೇದದಿಂದೆಂಟುತೆಱನಪ್ಪವರ್ಗೆ ಪತ್ತುಬಿಲ್ಲುತ್ಸೇಧಂ ಪಲ್ಯೋಪಮಂ ಪರಮಾಯು ಜ್ಯೋತಿಷ್ಕ ಚಂದ್ರಾದಿತ್ಯ ಗ್ರಹ ನಕ್ಷತ್ರಪ್ರಕೀರ್ಣಕ ತಾರಕಭೇದದಿಂದೈದುತೆಱನಪ್ಪರವರು ತ್ಸೇಧಮಂ ಸಪ್ತಚಾಪೋದಯಂ ಪರಮಾಯುಷ್ಯಮುಂ ವ್ಯಂತರರಂತಿರ್ಕುಂ

ಮತ್ತೆ ಜಘನ್ಯಾಯುಷ್ಯಂ
ಪತ್ತುಂ ಸಹಸ್ರಾಬ್ದಮಕ್ಕು ಭವನ ವ್ಯಂತರ
ಗೋತ್ತಮಿಕುಂ ಜ್ಯೋತಿಷ್ಕರ
ಮೊತ್ತಕ್ಕದಮಾಯುಪಲ್ಯದಷ್ಟಮಭಾಗಂ ೨೭೫

ವ: ಅದಲ್ಲದೆಯುಂ ವೈಮಾನಿಕದೇವರ್ ಕಲ್ಪಜರೆಂದುಂ ಕಲ್ಪಾತೀತರೆಂದೆರಳ್ತೆಱನಪ್ಪರಾ ಕಲ್ಪಂಗಳುಂ ಸೌಧರ್ಮ ಈಶಾನ ಸನತ್ಕುಮಾರ ಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾಂತವ ಕಾಪಿಷ್ಠ ಶುಕ್ರ ಮಹಾಶುಕ್ರ ಶತಾರ ಸಹಸ್ರಾರ ಆನತ ಪ್ರಾಣತ ಆರಣ ಅಚ್ಯುತಂಗಳೆಂದು ಪದಿನಾಱಕ್ಕುಮಲ್ಲಿ ಸೌಧರ್ಮೈಶಾನಕಲ್ಪಜರ್ಗೆ ಶರೀರಮಾನ ಮೇಳುರತ್ನಿ ಪರಮಾಯುಷ್ಯಮೆರಡುಸಾಗರೋಪಮಂ ಸನತ್ಕುಮಾರ ಮಾಹೇಂದ್ರಕಲ್ಪ ಜರ್ಗೆ ಆಱುರತ್ನಿ ಸಪ್ತಸಾಗರೋಪಮಂ ಬ್ರಹ್ಮಬ್ರಹ್ಮೋತ್ತರಕಲ್ಪಜರ್ಗೆ ಪಂಚರತ್ನಿ ಪತ್ತು ಸಾಗರೋಪಮಂ ಲಾಂತವ ಕಾಪಿಷ್ಠ ಕಲ್ಪಜರ್ಗಂ ಪಂಚರತ್ನಿ ಪದಿನಾಲ್ಕು ಸಾಗರೋಪಮಂ ಶುಕ್ರಮಹಾಶುಕ್ರಕಲ್ಪಜರ್ಗೆ ನಾಲ್ಕುರತ್ನಿ ಪದಿನೆಂಟುಸಾಗರೋಪಮಂ ಆನತ ಪ್ರಾಣತಕಲ್ಪ ಜರ್ಗೆ ಮೂಱುವರೆರತ್ನಿ ವಿಂಶತಿ ಸಾಗರೋಪಮಂ ಆರಣ ಅಚ್ಯುತ ಕಲ್ಪಜರ್ಗೆ ಮೂಱು ರತ್ನಿ ದ್ವಾವಿಂಶತಿಸಾಗರೋಪಮಮಕ್ಕುಂ ಮತ್ತಂ ಕಲ್ಪಾತೀತಂಗಳಪ್ಪಧೋಗ್ರೈವೇಯ ಕತ್ರಯದವರ್ಗೆರಡುವರೆ ಹಸ್ತಂ ಮಧ್ಯಮ ಗ್ರೈವೇಯಕತ್ರಯದವರ್ಗೆರಡು ಹಸ್ತಮೂರ್ಧ್ವ ಗ್ರೈವೇಯಕ ತ್ರಯದವರ್ಗೆ ಒಂದುವರೆಹಸ್ತಮಲ್ಲಿಂ ಮೇಲಣವರ್ಗೆಲ್ಲಂ ಹಸ್ತಪ್ರಮಾಣ ಮಕ್ಕುಮವರವರಾಯುಷ್ಯಮುಂ ಪ್ರತ್ಯೇಕಮೇಕೈಕವೃದ್ಧಿಯಿಂ ಕಡೆಯ ಸರ್ವಾರ್ಥ ಸಿದ್ಧಿಪರ್ಯಂತಂ ಮೂವತ್ತಮೂಱು ಸಾಗರೋಪಮಮಕ್ಕುಮಿಂತು

ತಪಮಂ ಬಾಲ್ಯದೊಳಪ್ಪುಕೆಯ್ದನತಿಚಾರಂ ಮಾಡುತುಂ ನಾಡೆ ವ
ರ್ತಿಪರುಂ ಮಾಳ್ಪರಕಾಮನಿರ್ಜರೆಗಳಂ ಸಮ್ಯಕ್ತ್ವಸಂಧಾರಿಗಳ್
ಕೃಪೆಯೊಳ್ ಕೂಡಿ ಸಮಾಧಿಯಂ ಪಡೆದರುಂ ರತ್ನತ್ರಯಾಧಾರರುಂ
ವಿಪುಳಶ್ರೀಸರಲೋಕದೊಳ್ ಜನಿಸಿ ನಾನಾಸೌಖ್ಯಮಂ ಸೇವಿಪರ್ ೨೭೬

ನರಕಾದಿ ಚತುರ್ಗತಿಯೊಳ್
ಬೆರಸಿದ ಜೀವಸ್ವರೂಪಭೇದಮನಾ ಜಿನ

ವರನುಸಿರ್ದು ಮತ್ತಜೀವನ
ಸ್ವರೂಪಭೇದನಮನಿಂತು ಪೇಳುತ್ತಿರ್ದಂ ೨೭೭

ವ: ಅಂತೆಂದೊಡೆ ಧರ್ಮಾಧರ್ಮಾಕಾಶ ಕಾಲ ಪುದ್ಗಲಭೇದದಿನಜೀವಂ ಪಂಚಪ್ರಕಾರ ಮಕ್ಕುಮಲ್ಲಿ

ದೊರೆಕೊಂಡಡೆ ಜೀವಂ ಮ
ತ್ತಿರದೌಷಡ್ದ್ರವ್ಯಮೆನಿತುಕಾಲಮದೊಂದಂ
ಬೆರಸದೆಯದಱೊಳ್ ಕಳೆದೊಡೆ
ಧರಿಸುಗು ಪಂಚಾಸ್ತಿಕಾಯಮೆಂಬೀ ಪೆಸರಿಂ ೨೭೮

ವ: ಮತ್ತಂ ಲೋಕಾಕಾಶವ್ಯಾಪಾರಂಗಳಪ್ಪ ಧರ್ಮಾಧರ್ಮಂಗಳೆಂಬೆರಡುಂ ಜೀವಪುದ್ಗಲಗಳ ಗತಿಸ್ಥಿತಿಗೆ ಕಾರಣಂಗಳಕ್ಕು ಮತ್ಸ್ಯಂಗಳ್ಗೆ ಜಲದಂತಿರಶ್ವಂಗಳ್ಗೆ ನೆಲದಂತೆಯುಂ ಧರ್ಮಾಧರ್ಮಗಳೇಕಜೀವಮಯಂಗಳಸಂಖ್ಯಾತಪ್ರದೇಶಂಗಳಾಗಿ ತೋಱುತ್ತುಮಿರ್ಕುಮಾ ಕಾಶಮೆಂಬುದು ನಿತ್ಯಂ ವ್ಯಾಪಕಮುಮಾಗಿ ಲೋಕಾಕಾಶಮೆಂದು ಮಲೋಕಾಕಾಶಮೆಂದೆರ ಳ್ತೆಱನಕ್ಕುಂ

ಜೀವಾದಿದ್ರವ್ಯಂಗ
ಳ್ಗಾವಗಮವಗಾಹನೈಕಲಕ್ಷಣಗುಣಸ
ದ್ಭಾವಂ ಲೋಕಾಕಾಶಂ
ಕೇವಳಮದಱಿಂದೆ ಪೊಱಗಲೋಕಾಕಾಶಂ ೨೭೯

ವ: ಮತ್ತಂ ಜೀವಾದಿದ್ರವ್ಯವರ್ತನಾಪರಿಣಾಮರೂಪೋಪಯೋಗ್ಯಮಪ್ಪುದು ಕಾಲ ದ್ರವ್ಯಮದುಂ ಮುಖ್ಯವ್ಯವಹಾರಭೇದದಿಂ ದ್ವಿವಿಧಮಕ್ಕುಂ

ವ್ಯವಹಾರಕಾಲಮೆಂದುಂ
ರವಿಶಶಿಯುದಯಾಸ್ತಮಾನಘಟಿಕಾಸಂಖ್ಯಂ
ತವೆಯುದದು ಮುಖ್ಯಕಾಲಂ
ಭುವನದೊಳನುಮೇಯರೂಪಮೆನಿಕುಂ ನಿರುತಂ ೨೮೦

ಪರಿಕಿಸೆ ಪುದ್ಗಲಮೆಂಬುದು
ಪಿರಿದೆನಿಪ ಸ್ಪರುಶಗಂಧವರ್ಣರಸಂಗಳ
ಬೆರಕೆಯನುಳ್ಳದದುಂ ಮ
ತ್ತೆರಡುತೆಱಂ ಸ್ಪಂದಮಣು ದಲೆಂದೀ ಕ್ರಮದಿಂ ೨೮೧

ವ: ಅದಕ್ಕಂ ಸ್ಥೂಲಸೂಕ್ಷ್ಮಚ್ಛಾಯಾತಪಾದಿ ರೂಪವಿಕಲ್ಪದಿನನೇಕಭೇದ ಮಕ್ಕುಮಿಂತು

ಸುರಸಭೆಗಜೀವತತ್ತ್ವ
ಸ್ವರೂಪಮಂ ತಿಳಿಯಪೇಳ್ದು ಸಕಳಜ್ಞಂ ಬಂ
ಧುರಮಾದಾಸ್ರವತತ್ತ್ವದ
ಪರಿಯಂ ಪೇಳುತ್ತುಮಿರ್ದನಂದಾದರದಿಂ ೨೮೨

ವ: ಅದೆಂತೆನೆ

ಪಿರಿದುಂ ಮಾಳ್ವ ಶುಭಾಶುಭಾಧಿಕ ಮನೋವಾಕ್ಕಾಯಕರ್ಮಂಗಳಿಂ
ದೊರೆಕೊಳ್ಗುಂ ಸಲೆಪುಣ್ಯಪಾಪದ ಸಮಾಯಾನಂ ಸಮಂತೆಯ್ದೆ ಪೊ
ರ್ದಿರವೇಯಾಸ್ರವಮಕ್ಕು ಸಂಯಮಸರಾದಿ ಕ್ಷಾಂತಿಶೌಚಾದಿ ಸ
ತ್ಪರಿಣಾಮಂಗಳಿನಪ್ಪುದಂತದಶುಭಧ್ಯಾನಂಗಳಿಂ ನಿಂದೆಯಿಂ ೨೮೩

ಸಲೆ ಬಹ್ವಾರಂಭದಿಂ ಪೊರ್ದುವುದು ನರಕದಾಯುಷ್ಯಮಾತ್ಮಪ್ರದೇಶಂ
ಗಳೊಳಲ್ಪಾರಂಭದಿಂ ಸಾರ್ವುದು ನರಗತಿಯಾಯುಷ್ಯಮುಂ ಮಾಯೆಯಿಂ ಸಂ
ಗಳಿಸಿರ್ಕುಂ ತಿರ್ಯಗಾಯುಸ್ಥಿತಿ ಸುರಗತಿಯಾಯುಷ್ಯಮಾಶ್ರೈಸುಗುಂ ಮಂ
ಜುಳರಾಗಂಗೂಡಿದೊಳ್ಸಂಯಮಗುಣವಿಮಳಾಚಾರಶೀಲಂಗಳಿಂದಂ ೨೮೪

ಅಱಿಪಿದನಾಸ್ರವತತ್ತ್ವದ
ತೆಱನಂ ಶ್ರೀಧರ್ಮನಾಥಜಿನಪತಿಸಭೆಗಂ
ಕಿಱಿದಾಗಿ ಬಂದ ತತ್ತ್ವದ
ತೆಱನುಮನಿಂತೆಂದು ಮತ್ತೆ ಪೇಳುತ್ತಿರ್ದಂ ೨೮೫

ವ: ಅದೆಂತೆಂದೊಡೆ

ನೆಲಸಿದ ದುಷ್ಕಷಾಯವಶದಿಂದೆ ಶರೀರನಿಜಪ್ರದೇಶದೊಳ್
ತೊಲಗದೆ ಕರ್ಮರೂಪಕನುಯೋಗ್ಯಮೆನಿಪ್ಪುರು ಪುದ್ಗಲಂಗಳಂ
ಸಲೆಧರಿಸುತ್ತುಮಿರ್ದಿರವೆ ಬಂಧಮಿದಕ್ಕಮಿವೈದುಕಾರಣಂ
ದಲವಿರತಿ ಪ್ರಮಾದ ಖಳಯೋಗ ಕಷಾಯ ಕುಮಿಥ್ಯದರ್ಶನಂ ೨೮೬

ಪ್ರಕೃತಿಸ್ಥಿತ್ಯನುಭಾಗಾ
ದಿಕಪ್ರದೇಶಂಗಳೆಂಬ ಭೇದದೆ ಬಂಧಂ
ಪ್ರಕಟಚತುರ್ವಿಧಮಕ್ಕುಂ
ಪ್ರಕೃತಿಯುಮೆಂಟುಪ್ರಕಾರಮೆನಿಸುವುದದಱೊಳ್ ೨೮೭

ವ: ಜ್ಞಾನಾವರಣೀಯಮುಂ ದರ್ಶನಾವರಣೀಯಮುಂ ವೇದನೀಯಮುಂ ಮೋಹನೀಯ
ಮುಮಾಯುಷ್ಯಮುಂ ನಾಮಮುಂ ಗೋತ್ರಮುಮಂತರಾಯಮುಮೆಂ ದಿಂತನುಕ್ರಮದಿಂ

ಅಯ್ದುಮೊಂಭತ್ತುಮೆರಡುಮ
ದೆಯ್ದಿಪ್ಪತ್ತೆಂಟುನಾಲ್ಕು ನಾಲ್ವತ್ತೆರಡೆರ
ಡಯ್ದೆಂಬೀ ಪರಿಭೇದಮ
ನೆಯ್ದುವುದು ಜ್ಞಾನವೃತ್ತಿಮೊದಲ್ಗೊಂಡೆಂಟುಂ ೨೮೮

ವ: ಮತ್ತಂ ಜ್ಞಾನಾವರಣೀಯ ದರ್ಶನಾವರಣೀಯ ವೇದನೀಯಾಂತ ರಾಯಂಗಳ ಸ್ಥಿತಿಪ್ರತ್ಯೇಕಮುತ್ಕೃಷ್ಟದಿಂ ಮೂವತ್ತುಕೋಟಾಕೋಟಿಸಾಗರೋಪಮಂ ಮೋಹನೀಯದ ಸ್ಥಿತಿಯೆಪ್ಪತ್ತುಕೋಟಾಕೋಟಿಸಾಗರೋಪಮ ನಾಮಗೋತ್ರಂಗಳ ಸ್ಥಿತಿ ಪ್ರತ್ಯೇಕಮಿಪ್ಪತ್ತು ಕೋಟಾಕೋಟಿಸಾಗರೋಪಮಮಾಯುಷ್ಯಕರ್ಮದ ಸ್ಥಿತಿ ಮೂವತ್ತ ಮೂಱು ಕೋಟಾಕೋಟಿ ಸಾಗರೋಪಮಮಕ್ಕು ಜಘನ್ಯಸ್ಥಿತಿ ವೇದನೀಯಕ್ಕೆ ದ್ವಾದಶ ಮುಹೂರ್ತಂ ನಾಮಗೋತ್ರಂಗಳ್ಗೆಂಟುಮುಹೂರ್ತಮುಳಿದವಕ್ಕಂತ ರ್ಮುಹೂರ್ತ ಮುಮಕ್ಕುಮಿಂತು

ಭಾವಕ್ಷೇತ್ರಾಪೇಕ್ಷಂ
ಜೀವನ ಕರ್ಮಸ್ವಭಾವ ಪರಿಪಾಕಮದೇ
ಭಾವಿಪೊಡನುಭಾಗಮಿದೆಂ
ಬೀ ವಿಧಮುಂ ಪ್ರಕಟಮಾದುದರ್ಹನ್ಮತದೊಳ್ ೨೮೯

ಸಲೆಬಂಧಭೇದದಿಂದ
ಗ್ಗಳಿಸಿದ ಸರ್ವಾತ್ಮಸುಪ್ರದೇಶಂಗಳೊಳಂ
ಕಲಿಲಪ್ರದೇಶಮೆಲ್ಲಂ
ನೆಲಸಿರ್ದುದೆ ತಾಂ ಪ್ರದೇಶಮೆಂಬುದದಕ್ಕುಂ ೨೯೦

ಇಂತು ಚತುರ್ವಿಧಮಾಗಿ ಸ
ಮಂತೊಪ್ಪುವ ಬಂಧತತ್ತ್ವಮಂ ವಿವರಿಸಿ ಜಿನ
ಪಂ ತಿಳಿಪುತ್ತಿರ್ದಂ ಮುನಿ
ಸಂತತಿಗಂ ಸಂವರಾದಿತತ್ತ್ವದ ತೆಱನಂ ೨೯೧

ವ: ಅದು ಮತ್ತಮೆಂತೆನೆ

ಕರ್ಮಂಗಳಾಸ್ರವಂಗಳ
ನೊರ್ಮೊದಲೊಳ್ ನೆಱೆನಿರೋಧನಂಗೆಯ್ವುದಿಟಂ
ಪೆರ್ಮೆಯೆ ಸಂವರಮೆನಿಕುಂ
ಧರ್ಮಂ ಸಮಿತಿ ತ್ರಿಗುಪ್ತಿಯಿಂ ಪುಟ್ಟುಗದುಂ ೨೯೨

ಸಂಸಾರಮೂಲಮಾಶ್ರವ
ಕಂ ಸಂವರಮೆಯ್ದೆ ಮೋಕ್ಷಮೂಲಮೆನಿಕ್ಕುಂ

ಸಂಶಯಮಿಲ್ಲಿದುವೆ ರಹ
ಸ್ಯಂ ಶಾಸನದಲ್ಲಿ ನಿರತಿಶಯಜಿನಪತಿಯಾ ೨೯೩

ಮಿಗೆ ಸಂವರತತ್ತ್ವಮನಾ
ಜಗದೀಶ್ವರನುಸಿರ್ದು ನಿರ್ಜರಾತತ್ತ್ವದ ದಂ
ದುಗದಂದಮನಿಂತೆಂದೊ
ಳ್ದೊಗೆವನ್ನಂ ಜಗೆಗೆ ಮತ್ತೆ ಪೇಳುತ್ತಿರ್ದಂ ೨೯೪

ತಳೆದು ಶುಭಾಶುಭಕರ್ಮಂ
ಗಳನಾತ್ಮಂ ಬಿಡದೆ ನಿರ್ಜರಿಸುತಿಪ್ಪುದಱಿಂ
ದಳವಟ್ಟುದಿದಕೆ ಸಾರ್ಥಮ
ನೊಳಕೊಂಡ ವಿನಿರ್ಜರಾಭಿಧಾನಂ ನಿಯತಂ ೨೯೫

ವ: ಅದು ಮತ್ತೆ ಸಕಾಮನಿರ್ಜರೆಯೆಂದಕಾಮನಿರ್ಜರೆಯುಮೆಂದು ಮೆರಳ್ತೆಱ ನಕ್ಕುಮಲ್ಲಿ ಪ್ರತೋಪಕ್ರಮದಿಂ ಮಾಡಲ್ಪಟ್ಟುದು ಸಕಾಮನಿರ್ಜರೆಯೆಂಬುದು ಸ್ವವಿಪಾಕ ದಿಂದಿಪ್ಪುದಕಾಮನಿರ್ಜರೆಯೆಂಬುದಿಂತು

ಅಭಿವರ್ಣಿಸಿದಂ ದಿವಿಜರ
ಸಭೆಗೆ ಜಿನಸ್ವಾಮಿ ನಿರ್ಜರಾತತ್ತ್ವಮನಿಂ
ತು ಭವಹರಮೋಕ್ಷತತ್ತ್ವ
ಪ್ರಭಾವಮಂ ಬಳಿಕೆ ತಿಳಿಯಪೇಳುತ್ತಿರ್ದಂ ೨೯೬

ಸಲೆ ಬಂಧ ಹೇತ್ವಭಾವದಿ
ನಲಘುವಿನಿರ್ಜರೆಯಿನಖಿಳಕರ್ಮಕ್ಷಯಮೇ
ವಿಳಸಿತಮೋಕ್ಷಮೆನಿಕ್ಕು
ಜ್ವಳರತ್ನತ್ರಯಮದಕ್ಕೆ ಕಾರಣಮಕ್ಕುಂ ೨೯೭

ಬಪ್ಪಘಮಂ ನಿರೋಧಿಸುತುಮಿರ್ಪುದು ಬೋಧಮುಪಾರ್ಜಿತಾಘಮಂ
ತಪ್ಪದೆ ನಾಡೆಯುಂ ಕೆಡಿಸುತಿರ್ಪುದು ಚಾರುಚರಿತ್ರಮೆಯ್ದುವ
ಕ್ಕೊಪ್ಪುವ ಪುಷ್ಟಿಯಂ ಪಡೆವುತಿರ್ಪುದು ದರ್ಶನಮಿಾ ತ್ರಯಕ್ಕೆ ಸ
ಮ್ಯತ್ವದ ಯೋಜನಂ ಬೆರಸಲಿಂತಿವು ಮೋಕ್ಷಸುಖಕ್ಕೆ ಕಾರಣಂ ೨೯೮

ತತ್ತ್ವಾವಗತಿಜ್ಞಾನಂ
ತತ್ತ್ವಶ್ರದ್ಧಾನಮೆಸೆವ ದರ್ಶನಮುರು ಚಾ
ರಿತ್ರಂ ಪಾಪಾರಂಭನಿ
ವರ್ತನಮಿದು ಲಕ್ಷಣಂ ಸುರತ್ನತ್ರಯದಾ ೨೯೯

ವ: ಮತ್ತಮಾ ರತ್ನತ್ರಯಸಂಪತ್ತಿಯಿಂ ರಾಗದ್ವೇಷಾದಿಗಳ್ಗೆ ನಿರ್ನಾಶ ಮಕ್ಕುಮವಱ ನಾಶದಿಂ ಸಕಳಕರ್ಮಂಗಳುಂ ಕೆಟ್ಟುಪೋಕಿಂತು

ಕರ್ಮಕ್ಷಯದೊಳ್ಚರಮವ
ಘರ್ಮಾತ್ರಾಕಾರದಿಂದೆ ಲೋಕಾಗ್ರದೊಳಂ
ಪೆರ್ಮೆವಡೆದಿಪ್ಪನಾತ್ಮಂ
ನಿರ್ಮಳಮಪ್ಪಷ್ಟಗುಣಸುಪುಷ್ಟ ಹೃಷ್ಟಂ ೩೦೦

ಅಳುರ್ವಗ್ನಿಶಿಖಾವೃಂದಂ
ಗಳ ತೆಱದಿಂದೂರ್ಧ್ವಗಾಮಿಯಾದೊಡಮದಱೊಳ್
ನೆಲಸಿರ್ದಂ ಪೋಗದೆಯ
ಗ್ಗಳಿಸಿದ ಧರ್ಮಾಸ್ತಿಕಾಯಮಿಲ್ಲಾದುದಱಿಂ ೩೦೧

ವ: ಆ ಮೋಕ್ಷಪದದಲ್ಲಿ ನಿತ್ಯಸ್ಥಿತಿವೆತ್ತ ಮುಕ್ತಿಜೀವಂ ಪ್ರಾಗ್ದೇಹದಿಂ ಕಿಂಚಿದೂನನಾಗಿ ನಿರಂತರ ಸುಖಮನವಲಂಬಿಸುತ್ತಿರ್ದು

ನಿರತಿಶಯಮಾಗಿ ಪೆರ್ಚಿದ
ಪರಿಭೋಧಾರಹಿತಮಾದ ಶಾಶ್ವತಸುಖದಿಂ
ಪಿರಿದುಂ ತಣಿವುತ್ತಿರ್ದಂ
ದೊರೆಕೊಂಡ ಜರಾಮರತ್ವಶುದ್ಧಂ ಸಿದ್ಧಂ ೩೦೨

ವ: ಇಂತು ನಿರೂಪಿತಸ್ವರೂಪಂ ಪಂಚಾಸ್ತಿಕಾಯ ಷಡ್ದ್ರವ್ಯ ಸಪ್ತತತ್ತ್ವ ನವ ಪದಾರ್ಥಂಗಳ ನಾಮೂಳಚೂಳನ್ನೆರಂತರ್ಯದಿನೊಳಕೊಂಡು ಚತುರ್ದಶರಜ್ಜೂತ್ಸೇಧದಿ ನಂದಂಬಡೆದ ತ್ರಸನಾಳಾಂತರಾಳಮಧೋಲೋಕಂ ಮಧ್ಯಲೋಕಮೂರ್ಧ್ವಲೋಕಮೆಂಬ ಭೇದದಿಂ ಮೂದೆಱನಕ್ಕುಮಲ್ಲಿ ಸಪ್ತರಜ್ಜುಪ್ರಮಿತ ದಕ್ಷಿಣೋತ್ತರಾಯಾಮಮನುಳ್ಳುದು ನರಕಮಲ್ಲಿಂ ಮೇಲೆ ಭವನಮೆಂಬ ನಾಗಲೋಕಮಿಕ್ಕುಮಲ್ಲಿಂದಂ ಮೇಲೇಕ ರಜ್ಜುವಿಸ್ತಾರಿತ ಮಧ್ಯ ಪ್ರದೇಶದೊಳೇಕದ್ವೀಪಾಕೂಪಾರವರುಷಧರಪರ್ವತ ಮಂದರ ಮಹೀಧರ ಪೂರ್ವಾಪರವಿದೇಹಭರತೈರಾವತ ಕರ್ಮಭೋಗಭೂಮಿಸಮಾಕೀರ್ಣ ಸ್ವಯಂಭೂರಮಣ ಸಮುದ್ರ ಮೇರೆಯಾಗಿರ್ಪುದು ಮನುಷ್ಯಲೋಕಮಲ್ಲಿಂಮೇಲೆ ಜ್ಯೋತಿರ್ಲೋಕಮಾದಿಯಾಗಿ ಪಂಚರಜ್ಜುಪ್ರಮಾಣವಿಶಾಳಮಾದ ಮೇಗಣಭಾಗದಲ್ಲಿ ಷೋಡಶಕಲ್ಪಂಗಳಿರ್ಪವಲ್ಲಿಂ ಮೇಲೊಂಭತ್ತುಗ್ರೈವೇಯಕಂಗಳಿಕ್ಕುಮಲ್ಲಿಂದಂ ಮೇಲೆ ನವಾಣುತ್ತರೆಗಳೆಸೆವವಲ್ಲಿಂ ಮೇಲೆ ಸರ್ವಾರ್ಥಸಿದ್ಧಿಮಧ್ಯವಪ್ಪ ಪಂಚಾಣುತ್ತರೆಗಳೆ ಸೀಮೆಯಾಗಿರ್ಪುದು ದೇವಲೋಕಮಿಾ ಮೂಱುಂಲೋಕಮುಂ ಘನೋದಧಿ ಘನೋ ನಿಳಯ ತನುವಾತಮೆಂಬ ಪೆಸರನುಳ್ಳ ವಾಯುತ್ರಯಸಮಾವೇಷ್ಟಿತಮಾಗಿರ್ದುದು

ಮಿಂತುಪಲಕ್ಷಿತಮಾದ ತ್ರಿಳೋಕನಾಳಿಕಾಶಿಖರಶಿಖಾಶೇಖರಾಯಮಾಣ ಸಿದ್ಧಪರಮೇಷ್ಠಿ ಸಮಧಿಷ್ಠಿತಮಪ್ಪ ಕ್ಷಯಾನಂದಮೋಕ್ಷಮಿಕ್ಕುಮದಕ್ಕೆ ನಿರ್ಮಳಮಪ್ಪೇಕಾದಶನಿಳಯನಿಷ್ಠಿತ ಸಾಗಾರಧರ್ಮದೊಳಂ ಬಾಹ್ಯಾಭ್ಯಂತರಭೇದಭಿನ್ನ ದ್ವಾದಶವಿಧ ತಪೋಲಕ್ಷಣಮಪ್ಪನ ಗಾರಧರ್ಮದೊಳಂ ನೆಗಳ್ವಣುವ್ರತ ಮಹಾವ್ರತದೊಳ್ ಕೂಡಿದ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳೆಂಬ ರತ್ನತ್ರಯಸಾಕಲ್ಯಮೇಕಾರಣಮದೆ ಭವ್ಯಜನಪರೋಪಾದೇಯಮೆಂದು ಸರ್ವವಿಶ್ವೇಶ್ವರಂ ನಿರವದ್ಯ ಸ್ಯಾದ್ವಾದಪ್ರತಿಷ್ಠಾಮುಖದಿಂ ಸಪ್ತಭಂಗಿ ಸಮಾಲಿಂಗನ ಭಂಗುರಮಾದ ಸಪ್ತತತ್ತ್ವಸ್ವರೂಪಮಂ ಪ್ರತಿಪಾದಿಸುತ್ತುಮಿರ್ಪಲ್ಲಿ

ಪರಮಜಿನೇಂದ್ರಚಂದ್ರಮುಖಮಂಡಳದಿಂದಮೃತಪ್ರವಾಹಮುಂ
ಕರಮೊಸರುತ್ತುಮಿರ್ದಪುದಿದೆಂಬಿನೆಗಂ ಪೊಜಿಪೊಣ್ಮುತಿರ್ದ ದಿ
ವ್ಯರವಮಶೇಷಭವ್ಯಜನಮಾನಸಕೈರವಷಂಡಮಂ ಸಮಂ
ತಿರದೆ ವಿಕಾಸಿಸುತ್ತುಮುರುಹರುಷದೊಳೊಂದಿಸುತಿರ್ದುದಾಕ್ಷಣಂ ೨೦೩

ವ: ಇಂತನಂತಚತುಷ್ಟಯ ಲಕ್ಷ್ಮೀಸಮಾಶ್ಲಿಷ್ಟನಪ್ಪಾ ಧರ್ಮನಾಥಂ ಸಕಳ ತತ್ತ್ವಸಮುಚ್ಚಯಮಂ ಸಂಕ್ಷೇಪದಿಂ ತಿಳಿಪಂತು ಬೆಸಸುವುದುಮರಿಷ್ಟಸೇನಗಣಧರಾಗ್ರಗಣ್ಯಂ ಮಾಘಮಾಸದ ಕೃಷ್ಣಪಕ್ಷದ ಪಾಡಿವದ ಪೂರ್ವಾಹ್ಣದೊಳ್ ದ್ವಾದಶಾಂಗದರ್ಥಂಗಳು ಮನಪರಾಹ್ಣದೊಳ್ ಚತುರ್ದಶಪೂರ್ವಪದಂಗಳುಮನವಧಾರಿಸಿ ಪ್ರಥಮಾನುಯೋಗಂ ಚರಣಾನುಯೋಗಂ ಕರಣಾನುಯೋಗಂ ದ್ರವ್ಯಾನುಯೋಗಮೆಂಬ ನಾಲ್ಕು ವಿಕಲ್ಪಮಾಗಿ ಗ್ರಂಥರಚನೆಯಂ ಮಾಡಿ ಸಮಸ್ತಸಭಾಜನಹೃದಯಮಣಿಭಾಜನದಲ್ಲಿ ನಿಜವಚನ ರಸಾಯನಮನಿರಿಸುತ್ತು ಮಿರ್ಪುದುಂ

ಅವಧಿವಿಬೋಧದಿಂದಱಿದು ದೇವನ ಧರ್ಮವಿಹಾರ ಕಾಲಮಂ
ದಿವಿಜವರಂ ಕೃತಾಂಜಳಿಯನಿಟ್ಟು ಲಲಾಟದೊಳಂದು ಬಿನ್ನಪ
ಕ್ಕವಸರಮೆಂದು ಬಿನ್ನಪಿಸಿದಂ ಜಿನರಾಜನ ಮುಂದೆ ನಿಂದಿದೇ
ಭುವನದೊಳಂ ವಿಹಾರಿಸುವ ಪೊತ್ತು ಜಗತ್ತ್ರಿತಯೈಕಪಾಲಕಾ ೨೦೪

ಸಕಳಾರ್ಯಾಖಂಡದೊಳ್ ಪಾವನತರ ಭರತಕ್ಷೇತ್ರದೊಳ್ ಜೈನಧರ್ಮಾ
ಧಿಕಮಧ್ಯಾತ್ಮಪ್ರಭಾವಂ ಪ್ರಬಳಿಸಿ ಪಿರಿದುಂ ಪೆರ್ಚುವಂತಾಗಿ ಸತ್ಕೌ
ತುಕಮಪ್ಪ ಶ್ರೀವಿಹಾರಾಶ್ಚರ್ಯಮನೆಸಗಲ್ವೇಳ್ಕುಮೆಂದಾಗಳಾನಂ
ದಕರಪ್ರಸ್ಥಾನಶಂಸೀಪ್ರಪಟುಪಟಹಮಂ ಪೊಯ್ಸಿದಂ ದೇವರಾಜಂ ೨೦೫

ದೆಸೆಗಳ್ ಮಾರ್ದನಿಯಿಂದೆ ಧಿಂಕಿಡುವಿನಂ ಗಂಭೀರಭೇರೀರವ
ಪ್ರಸರಂ ಮಂಗಳಗೀತತುಂಗನಿನದಂ ವೀಣಾಮಹಾಕ್ವಾಣಮ
ರ್ಡಿಸುವೆಲ್ಲಾಮರಮಂಡಳೀಜಯಜಯಪ್ರಧ್ವಾನಮುಂ ಕೂಡಿಯಾ
ಗಸಮಂ ಮೂವಳಸಾಗಿ ಮುತ್ತಿದುದು ಯಾತ್ರಾರಂಭಸಂದೋಹದೊಳ್ ೨೦೬

ಧರ್ಮಚಕ್ರಾಧಿಪತ್ಯು
ತ್ಯಾರ್ಮಂ ತಾನಾಗಿ ಸಕಳದಿಗ್ವಯಯಾತ್ರಾ
ನರ್ಮಮೆನೆ ತಳರ್ದನಲ್ಲಿಂ
ಧರ್ಮಜಿನಂ ಬಳಿಯೆ ಜನದ ಕೋಳಾಹಳಮುಂ ೩೦೭

ವ: ಇಂತಖಿಳಭವ್ಯಜನಂಗಳ ಪುಣ್ಯಪ್ರೇರಣದಿನನೇಕಾಡಂಬರವಿಡಂಬನದಿಂ ಕಣ್ಗೊಂಡ ಸಮವಸರಣಮಂಡಳಮನಾಖಂಡಳಂ ನಭಸ್ಥಳದೆಡೆಯೊಳ್ ನಡಯಿಪಲ್ಲಿ

ಮುಂದೇಳಂ ಪಿಂದೇಳಂ
ಕೆಂದಾವರೆವೂಗಳಂ ಜಿನೇಶಂ ಪದವಿಡು
ವಂದು ತಂದಿರಿಸಿದಂ ದಿವಿ
ಜೇಂದ್ರಂ ಹರಿಪೀಠಿಕಾತ್ರಯಾಗ್ರಸ್ಥಳದೊಳ್ ೩೦೮

ವ: ಅಂದಿಂತೊಟ್ಟು

ಶ್ರೀಪದಮಂ ಧರಿಸಿದೆನೆಂ
ಬೀ ಪದವಾಸಿಯನೆ ಮೆಱೆವ ಪದ್ಮದೊಳಿನ್ನುಂ
ಶ್ರೀಪದದೆಪಿಂ ನೆಲಸಿರ್ದು
ವ್ಯಾಪಿಸಿದಳ್ ಪದ್ಮನಿಳಯೆಯೆಂಬೀ ಪೆಸರಂ ೩೦೯

ಪರಮಾನುರಾಗದತಿಶಯ
ಮಿರದೊಗೆವುತ್ತಿರ್ದುದಖಿಳಜನಚಿತ್ತದೊಳಂ
ವರಸಮವಸರಣಮಂಡಳಿ
ಭರದಿಂದೆ ವಿಹಾರಿಸುತ್ತುಮಿರ್ಪಾ ಪದದೊಳ್ ೩೧೦

ಸೂಸುತ್ತುಂ ಸೌರಭಮಂ
ಲೇಸಂ ಮೆಯ್ಗೊಡರಿಸುತ್ತುಮಾಡಿಸುತುಂ ಧ್ವಜ
ರಾಶಿಗಳನೊಯ್ಯನೊಯ್ಯನೆ
ಬೀಸಿದುದನುಕೂಲಮಾಗಿ ಮಂದಸಮೀರಂ ೩೧೧

ಸುತ್ತಂ ಯೋಜನದಗಲದೊ
ಳೆತ್ತಂ ತೃಣಧೂಳಿಕೀಟಕಂಟಕಶಿಲೆಗಳ
ಮೊತ್ತಮದಿಲ್ಲದ ತೆಱದಿಂ
ಬಿತ್ತಿರಿಸಿದರಾ ಮರುತ್ಕುಮಾರರ್ ನೆಲನಂ ೩೧೨

ಚಳೆಯಂಗೊಟ್ಟರ್ ತನ್ಮಹಿ
ತಳದೊಳ್ ಕರ್ಪೂರರಸಾರಕುಂಕುಮವಿಳಯ

ನ್ಮಳಯಜರಸಮಿಶ್ರಿತದಿಂ
ಜಳದಿಂದಂ ಸ್ತನಿತರೆಂಬ ಕುವರರ್ ನಲವಿಂ ೩೧೩

ಕನ್ನಡಿಯಂತಿರೆ ಥಳಥಳಿ
ಪುನ್ನತಿಯಂ ತಳೆದು ರತ್ನಮಯಭೂಮಿತಳಂ
ಚೆನ್ನನೆನಿಸಿತ್ತು ಸುತ್ತಂ
ಸನ್ನುತಪರಿಸೂತ್ರಮಾಗಿ ಪರಿರಮಣೀಯಂ ೩೧೪

ಸರ್ವರ್ತುಪುಷ್ಪಫಳಮಂ
ನಿರ್ವಹಿಸಿ ದಶಾಭಿಕೋಪಶಾಖಾವಳಿಯಿನ
ಖರ್ವಘನವೃಕ್ಷತತಿಯಿನ
ಗುರ್ವಾಮುದು ಪೂಜಿಗೆ ಬಳಸಿದುಪವನಷಂಡಂ ೩೧೫

ತೋರಮಾಗಿರ್ದ ತೆನೆಗಳ
ಭಾರದಿನುಱೆಬಾಗಿ ಬೀಗಿ ಬೆಳೆದ ವ್ರೀಹಿ
ಸ್ಫಾರಸಸ್ಯಂಗಳಿಂದಂ
ಧಾರಿಣಿ ರೋಮಾಂಚಭರಮನಾಂತಂತೆಸೆಗುಂ ೩೧೬

ಪರೆದಿರ್ದಖಿಳಸುರಾಸುರ
ಪರಿಕರಮಂ ಶ್ರೀವಿಹಾರದುತ್ಸವವಿಭವ
ಕ್ಕಿರದೆ ಕರೆಯುತ್ತುಮಿರ್ಪಮ
ರರ ಕಳಕಳನಿನದಸಂಭ್ರಮಂ ಕರಮೆಸೆಗುಂ ೩೧೭

ನೆಱೆಪತ್ತುವಿಟ್ಟು ತಮ್ಮೊಳ್
ತಱಿಸಂದಭಿಜಾತಿವೈರಮಂ ಮಿತ್ರತ್ವ
ಕ್ಕೆಱೆವಟ್ಟೆನಿಸಿದುದಾಗಳ್
ತುಱುಗಿರ್ದು ಸಮಸ್ತತಿರ್ಯಗಾಧಿಕಜೀವಂ ೩೧೮

ಪರೆದೋಡೆ ತಮಂ ಕಿಡೆ ರಜ
ಮುರುಪ್ರಸನ್ನಂ ದಲಾಗಿ ತೋಱಿಕೆವೆತ್ತುದ
ದಿರದೆ ಪತ್ತುಂ ದಿಗಂತಂ
ಪರಮಮುನೀಶ್ವರ ಮನಃಪ್ರಚಾರದ ತೆಱದಿಂ ೩೧೯

ವ: ಮತ್ತಂ ಲೋಕತ್ರಯೈಕ ಚಕ್ರವರ್ತಿಯ ನಿತ್ಯತ್ವಂಬೆತ್ತ ಮಹಾಚಕ್ರವರ್ತಿಪದಮನಿಳಾಚಕ್ರಕ್ಕೆ ಕೈಮಿಕ್ಕು ಸೂಚಿಸುತ್ತುಂ

ಪರಿವೇಷಂಗೊಂಡ ಚಂಡಾಂಶುವ ಪೊಳೆವ ಮಹಾಮಂಡಳಂ ಸೇವೆಗಾಗಿ
ಸ್ಫುರಿಸುತ್ತುಂ ಬಂದು ಮುಂದಂ ನಡೆದಪುದೆನೆ ಕಾಲ್ಗಾಪಿನೊಳ್ ಬಪ್ಪ ಯಕ್ಷಾ
ಮರಸೇನಾಚಕ್ರಚೂಡಾಮಣಿಗಣಕಿರಣಂ ಸುತ್ತಲುಂ ರಂಜಿಸುತ್ತುಂ
ಬರೆ ಪೋಗುತ್ತಿರ್ದುದಾ ದೇವನ ಸಭೆಯ ಪುರೋಭಾಗದೊಳ್ ಧರ್ಮಚಕ್ರಂ ೩೨೦

ಅದಱ ಮುಂದೊಪ್ಪದಿಂ ನಡೆ
ದುದು ಕನದುರುವಜ್ರಚಿಹ್ನದಿಂದಂ ಚಿತ್ರಂ
ಪುದಿದ ಮಹಾವಿಜಯಧ್ವಜ
ಮದು ನಾನಾಕ್ಷುಲ್ಲಕ ಧ್ವಜಾವೃತಮುಚ್ಚಂ ೩೨೧

ವ: ಅದಱಿಂದಂ ಮುಂದೆ ಪಲವುಂತೆಱದ ಪಲ್ಲವಚ್ಛತ್ರಚಾಮರಾದಿ ಮಂಗಳ ಪರಿಕರಂಗಳಿಂದಳಂಕಾರಂಬಡೆದು

ಥಳಥಳಿಸುತ್ತುಮಿರ್ಪ ಪೊಸಪೊಂಗಳಸಂಗಳ ಮೇಲೆ ಕೂಡೆ ಮಂ
ಗಳಮಣಿದರ್ಪಣಾವಳಿಗಳೊಪ್ಪಲವಂ ಪಿಡಿದಿರ್ದ ದೇವಸಂ
ಕುಳಲಲನಾಜನಂ ನಡೆವುತಿರ್ದುದು ಜಂಗಮಕಲ್ಪವಲ್ಲಿ ಮಂ
ಜುಳಲತಿಕಾವಿತಾನದ ಬೆಡಂಗನೆ ಭಂಗಮನಂದು ಮಾಡುತುಂ ೩೨೨

ಇಂತಷ್ಟಮಂಗಳಂಗಳ
ನಾಂತು ಬರಲ್ ಮುಂದೆ ದಿಗ್ವಧೂಜನಮಾಗಳ್
ಸಂತೊಸಮನೊದವಿಸಿದತ್ತ
ನಂತರದೊಳ್ ನೋಡೆ ಸಮವಸರಣವಿಹಾರಂ ೩೨೩

ವ: ಈ ತೆಱದಿಂ ಚತುರ್ನಿಕಾಯದೇವರ್ಕಳಿಂದುಪಕಲ್ಪಿತಮಾದ ಚತುರ್ಥ ಸಾತಿಶಯದಿಂ ಮೆಱೆದು

ಕಣ್ಣೆಮೆಯಿಕ್ಕದಿರ್ಪಿರವು ನಾಲ್ಕು ಮುಖಂಗಳವಾಗಿ ತೋರ್ಪ ನೈ
ಪುಣ್ಯಮಶೇಷವಿದ್ಯೆಗಧಿನಾಥತೆ ಮೆಯ್ನೆಳಲಿಲ್ಲದಿರ್ದ ಲಾ
ವಣ್ಯವಿಶೇಷಮೆಯ್ದೆ ಸಮಕೇಶನಖಸ್ಥಿತಿ ಭುಕ್ತ್ಯಭಾವಮಾ
ತಿಣ್ಣಮೆನಿಪ್ಪ ಶಕ್ತಿ ಚರಮಾಂಗದೊಳಂದೊಗೆದತ್ತು ನಾಡೆಯುಂ ೩೨೪

ದೆಸೆಗಿನ್ನೂಱುವಿಯೋಜನಾಂತರದೊಳಂದಿಲ್ಲಾಯ್ತು ದುರ್ಭಿಕ್ಷದೊಂ
ದೆಸಕಂ ಪ್ರಾಣಿವಧಂ ದುರಿತಪರಪೀಡಾಚಾರಮುಂ ರೋಗದು
ಬ್ಬಸಮುಂ ತಳ್ತುಪಸಗ್ಗಮುಂ ಬಡತನಂ ಮುಂತಾದಿವೆಲ್ಲಂ ಮಹಾ
ತಿಶಯೋತ್ಕರ್ಷವಿಶೇಷಸಂಪದದಿನಾ ಲೋಕತ್ರಯಸ್ವಾಮಿಯಾ ೩೨೫

ವ: ಇಂತು ಘಾತಿಕರ್ಮಕ್ಷಯಾನಂತರ ಜನಿತ ದಶಾತಿಶಯದಿಂ ಮೆಱೆದು

ಮುನ್ನೊಡವುಟ್ಟಿ ಪತ್ತತಿಶಯಂ ಮೆಱೆದತ್ತು ಬಳಿಕ್ಕೆ ಘಾತಿಕ
ರ್ಮಂ ನೆಱೆಪೋಗಿ ಪತ್ತತಿಶಯಂ ಬಿಡದಾದುದು ಮತ್ತೆ ಭಕ್ತಿಸಂ
ಪನ್ನಸುರಾಳಿ ಮಾಳ್ಪತಿಶಯಂ ಪದಿನಾಲ್ಕೊಗೆದಿರ್ದುದಿಂತು ಚೋ
ದ್ಯೋನ್ನತಿವೆತ್ತುದಂತತಿಶಯಂ ಸಲೆಮೂವತನಾಲ್ಕು ಧರ್ಮನೊಳ್ ೩೨೬

ವ: ಅಂತನಂತಚತುಷ್ಟಯವಿಶಿಷ್ಟನಪ್ಪಾ ಧರ್ಮನಾಥಂಗೆ ವರ್ಯಾಷ್ಟ ಮಹಾಪ್ರಾತಿಹಾರ್ಯ ಪ್ರಭಾವಿತ ಚತುಸ್ತ್ರಿಂಶದತಿಶಯಶೋಭಾವಿಭವಮುಂ ತ್ರಿವಿಷ್ಟಪಾಧಿ ಪತ್ಯಮಂ ಸ್ಪಷ್ಟಂ ಮಾಡುತ್ತುಮಿರಲಾ ಪರಮಪಾವನಪ್ರಯಾಣ ಪ್ರಭಾವದೊಳ್

ಬಿಳಿಯ ಗಜಂ ತಗರ್ ಮಹಿಷಿಕಂ ಮಕರಂ ಮೃಗಂ ಸಮು
ಜ್ವಳಿತತುರಂಗಮಂ ವೃಷಭಮೆಂಬಿವನೇಱಿ ಸಮಸ್ತಸೈನಿಕರ್
ಬಳಸಿರಲಿಂದ್ರನಗ್ನಿ ಯಮ ನೈರುತಿ ಪಾಶಿ ಮರುತ್ಕುಬೇರ ಮಂ
ಜುಳಶಿತಿಕಂಠನೆಂಬಖಿಳದಿಕ್ಪತಿಗಳ್ ನಡೆದರ್ ನಿಜಾಶೆಯೊಳ್ ೩೨೭

ಭರದಿಂ ಕಟ್ಟಿದ ಗೆಜ್ಜೆಗಳ್ ಕುಣಿದು ಮೆಟ್ಟುತ್ತಿರ್ದ ಮೇಲ್ವಜ್ಜೆಗಳ್
ದುರಿತಾಳಂಗುಡೆ ಕಾಲೆ ನಾಲಗೆಯವೊಲ್ ಬೀಱಿಲ್ ಗತಿಚ್ಛಾಯೆಯಂ
ಪರಮಸ್ವಾಮಿಯ ಮುಂದೆ ಗೊಂದಣಿಸಿ ಸಂಗೀತಕ್ಕೆ ತಕ್ಕಂದದಿಂ
ಸುರವೈತಾಳಿಕರಾಳಿ ಪೇರಣೆಯೊಳಂ ತೋಱಿತ್ತು ವೈಚಿತ್ರ್ಯಮಂ ೩೨೮

ಬರವೇಳ್ ದಿಕ್ಪಾಳರಂ ಸಂಗಡಿಸಿ ನಡೆಯವೇಳಿಂದ್ರನಂ ಚಂದ್ರಸೂರ್ಯಾ
ಮರರಂ ಮುಂಪೋಗವೇಳೆಂದುಸಿರ್ವ ಚಮರವೈರೋಚನರ್ ಸರ್ವಂ ಚ
ಪ್ಪರಿಸುತ್ತುಂ ಚೆಲ್ವ ಪೋಂಗಟ್ಟಿಗೆವಿಡಿದು ಕರಂ ಯೋಜಿಸುತ್ತಿರ್ದರಾಗಳ್
ಪಿರಿದುಂ ಪುಷ್ಪಂಗಳಂ ಚೆಲ್ಲುವ ಪದದೊಳುಘೇಯೆಂಬಿದುನ್ಮೃತ್ತು ಸುತ್ತಂ ೩೨೯

ವ: ಇಂತು ಪೆಂಪಿನ ಸಂಪದಮೆ ರೂಪುಗೊಂಡುದೆಂಬಂತೆ ಪೊಂಪುಳಿಯೋಪ ಸೊಂಪನೊಳಕೊಂಡ ಸರ್ವಜ್ಞನ ಸಭಾಮಂಡಳಂ ಕುಂತಳಾವಂತಿ ಕುರುಜಾಂಗಣ ಲಾಳ ಮಾಳವ ಚೋಳ ಪಾಂಚಾಳ ಮಹಾರಾಷ್ಟ್ರ ರಾಷ್ಟ್ರ ಮರು ಮಳಯ ಮಗಧಾದಿ ನಿಖಿಳ ವಿಷಯಂಗಳೊಳ್ ಧರ್ಮತೀರ್ಥಪ್ರಭಾವನಿಮಿತ್ತಂ ವಿಹಾರಿಸುತ್ತುಮಿರ್ಪಲ್ಲಿ

ಮಿಗೆ ನಿಷ್ಕಲಾಭರಾದರ್
ಜಗದೊಳ್ ದುರ್ಜನರ ತೆಱಿದೆ ಸಜ್ಜನರೆಲ್ಲಂ
ದ್ವಿಗುಣಿಸಿ ನಿಷ್ಕಂಟಕಮಾ
ಯ್ತಗಣಿತಜನದಂತೆ ಸಕಳಭೂತಳಮನಿತುಂ ೩೩೦

ಎಲ್ಲಿ ವಿಹಾರಿಸುವಂ ಜಿನ
ನಲ್ಲಿ ಮನೋದುಃಖಶೋಕಚಿಂತಾತಂಕಂ
ಪೊಲ್ಲಮೆ ಮೊದಲಾದವುಮಣ
ಮಿಲ್ಲದೆ ಜನಮೆಲ್ಲಮೆಯ್ದೆ ಸುಖಿಯಾಗಿಕ್ಕುಂ ೩೩೧

ವ: ಮತ್ತಮಾ ಸಮವಸರಣಮಂಡಳಮೆಂತಿರ್ದುದೆಂದೊಡೆ

ಧರ್ಮಮೆಂಬಮೃತಪೂರದ
ಪೆರ್ಮಳೆಯಂ ಕಱೆದು ಭವ್ಯಜನಸಸ್ಯಂಗಳ
ನೊರ್ಮೆಯು ಮಾಣದೆ ಸಲಹುವ
ಪೆರ್ಮೆಯನೊಳಕೊಂಡ ಮೇಘಮಂಡಳಮೆನಿಕುಂ ೩೩೨

ಕಿಡಿಸುತ್ತುಂ ದುರ್ಮತಧ್ವಾಂತಮನುಱೆ ನಿಜತೇಜಃಪರಿವ್ಯಾಪ್ತಿಯಿಂ ಧಿಂ
ಕಿಡಿಸುತ್ತುಂ ದಿಕ್ಕನೆಲ್ಲಾಮರರ ಜಯಜಯಧ್ವಾನದಿಂ ಭವ್ಯರಂ ನೂ
ರ್ಮಡಿ ಸದ್ರತ್ನತ್ರಯಾಳಂಖರಣಚರಿತರಂ ಮಾಡುತುಂ ನಿಷ್ಪೃಹತ್ವಂ
ಬಡೆದಾರ್ಯಾಖಂಡದೊಳ್ ಮಾಣದೆ ವಿಹರಿಸಿದಂ ಧರ್ಮಚಕ್ರಾಧಿನಾಥಂ ೩೩೩

ಸುರತರು ಕುಸುಮಾಸಾರಂ
ಪುರುಹೂತಾನಂದಕಾರಮಿತಿವಿದೂರಂ
ಪರಮಧರ್ಮಾವತಾರಂ
ಕರಮೆಸೆದುದು ಸಮವಸರಣವಳಯವಿಹಾರಂ ೩೩೪

ವ: ಮತ್ತಂ ದ್ಯಾವಾಪೃಥಿವೀವಿಭಾಗಮೆಲ್ಲಮತ್ಯಾಶ್ಚರ್ಯ ಮಂಗಳ ಪೂಜಾ ಕಾರ್ಯಕರಣ ಸಂಜಾತ ಕಾಳಾಗರು ಧೂಪಕಳಾಪಸಮುದ್ದಾಮಧೂಮಲತಾಸ್ತೋಮಾ ಮೋದ ಮಯಮುಂ ಸಮಸ್ತಪ್ರಸ್ತೂಯಮಾನವಿಸ್ತೀರ್ಣವದಸ್ತೋಕನಿಸ್ತೂಳಸ್ಥಿಮಿತ ಗಭಸ್ತಿಮಯಮಂ ಪೊಗಳ್ತೆವಡೆದ ಸದ್ಧರ್ಮಪೀಯೂಷರಸಸಮುತ್ಕರ್ಷವಿಶೇಷಿತಮಹಾ ಪ್ರವಾಹಸಮೂಹಮಯಮುಂ ನಿರಂತರಿತ ಪರಮಸುಖಮಯಮುಮಾಗೆ ನಿರವಶೇಷ ದಿವಿಜ ದನುಜ ಮನುಜ ತಿರ್ಯಕ್ಸಮಾಜಮಂ ಸುಕೃತಭಾಜನಮಂ ಮಾಡುತ್ತುಂ ವಿಹಾರಿಸುತ್ತುಂ ಬಂದು ಸಪ್ತಲಕ್ಷವರ್ಷಪ್ರಮಿತಮಪ್ಪ ಕೇವಳಿಕಾಲಂ ಮಾಸಾವಶೇಷ ಮಾದುದೆಂಬಂದಿಗೆ

ಹಡಗೆಂತಾಗಸಮೆಂಬಿಂ
ಗಡಲಂತ[ರ್ದೀ]ಪಮಂ ಕರಂಪೊರ್ದುವುದಂ
ತಡಸಿ ಪೊರ್ದಿತ್ತು ತತ್ಸಭೆ
ತಡೆಯದೆ ಸಮ್ಮೇದಗಿರಿಯ ಮಸ್ತಕದೆಡೆಯಂ ೩೩೫

ಆಗಳರ್ಹತ್ತ್ವಭಾವಮ
ದಾಗಿಸಿದುದಪೂರ್ವಶೋಭೆಯಂ ತತ್ಸಮ್ಮೇ
ದಾಗದೊಳೆಲ್ಲಾ ರುತುಗಳ್
ಬೇಗಂ ಬಂದಿರ್ದು ಪಡೆವವೆನೆ ಚೋಜಿಗಮಂ ೨೩೬

ತೋರಿದವಾದ ಪಣ್ಗೊನೆಗಳೋಳಿಯ ಭಾರದೆ ಬಾಗುತಿರ್ದ ಭೂ
ಮಿಾರುಹಸಂಕುಳಂ ಮೊರೆದು ಬಂಡುಣುತಿರ್ಪಳಿಮಾಲೆಯುಂ ಮನೋ
ಹಾರಿಗಳಾದ ಪೂಗಿಡುಗಳಾವಳಿ ತಳ್ತರಳುತ್ತುಮಿರ್ದ ಕ
ಲ್ಹಾರಮನುಳ್ಳ ಚೆಲ್ವ ತಿಳಿನೀರ ಕೊಳಂಗಳವಾಳ್ದವೊಪ್ಪಮಂ ೨೩೭

ಪಲವುಂ ಬೆಟ್ಟುಗಳಿರ್ದೊಡಂ ಬಗೆಯದಿಂದೆನ್ನಲ್ಲಿಗೆಳ್ತಂದು ಮಂ
ಗಳಚೂಡಾಮಣಿಯಾದನಲ್ತೆ ಪರಮಶ್ರೀಧರ್ಮನಾಥಂ ದಲ
ಗ್ಗಳಿಸಿತ್ತೆನ್ನಯ ಜನ್ಮಮೆಂದು ಮುದಮಂ ತಾಳ್ದಂತೆ ಸಮ್ಮೇದಮೆ
ಯ್ದುಲಿಯುತ್ತಿರ್ದುದು ಸೋಗೆವಿಂಡುಗಳ ಕೇಕಾರಾವದುದ್ರೇಕದಿಂ ೨೩೮

ಅಮಮ ದ್ವಿತೀಯಕಲ್ಯಾ
ಣಮನಾಂತಂ ಮೇರುಗಿರಿಯೊಳೀ ಜಿನಪತಿ ಪಂ
ಚಮಕಲ್ಯಾಣಮಿದೆನ್ನೊಳ್
ಸಮನಿಸಿದಪುದೆಂಬ ಮದದಿನೆನೆ ಸೊಂಪೆಸೆಗುಂ ೨೩೯

ಮಾನಿತವಿಚಿತ್ರಕೂಟವಿ
ತಾನಂ ವಿಂಶತಿಜಿನೇಶಪರಿನಿರ್ವಾಣ
ಸ್ಥಾನಂ ನಿರ್ಜರಲಹರೀ
ಪೀನಂ ಸಮ್ಮೇದಶೈಲಮಾಯ್ತುಪಮಾನಂ ೨೪೦

ವ: ಅಂತತೀವರಮ್ಯಮಾದ ಸಮ್ಮೇದಮೆಂಬ ಶೈಲದ ಚೂಳಿಕಾಗ್ರಭಾಗದೊಳೊಂದು ಸೌಂದರತರ ಚಂದ್ರಕಾಂತಶಿಲಾಮಯ ಪಾವನಪ್ರದೇಶದೊಳ್ ನಿಜಪರ ಮೌದಾರಿಕ ಶರೀರಸ್ಥಿತಿಕಾಲಮೇಕಮಾಸಮೆನೆ ಯಜನವಿಹರಣಕ್ರಿಯಾವಿಭೂತಿಯಂ ವಿಸರ್ಜಿಸಿ ನವೋತ್ತರಾಷ್ಟಶತಸಂಖ್ಯಾಗಣಧರಮುನಿವೃಷಭಪ್ರಭೃತಿಸಭಾಪರಿವೃತನಾಗಿ ಏಕಮಾಸ ಪರ್ಯಂತ ಕಾಯೋತ್ಸರ್ಗಸ್ಥಿತನುಮುತ್ತರಾಭಿಮುಖನುಮಾಗಿ

ಪಿರಿದುಂ ಸ್ವಾಘಾತಿಕರ್ಮಕ್ಷಯಮನೆಸಗುವುದ್ಯೋಗದೊಳ್ ನಿಂದನಂದಂ
ಬರದೊಳ್ ಮುಂಬಿಟ್ಟು ತನ್ನಾ ಸಮವಸರಣಮಂ ಲಂಬಮಾನೋರುಬಾಹು
ಸ್ಫುರಿತಂ ಜ್ಯೋತಿಸ್ಸ್ವರೂಪಂ ಚರಮಸುಧವಳಧ್ಯಾನನಿಷ್ಠಾಪ್ರತಿಷ್ಠಂ
ಪರಮಶ್ರೀಧರ್ಮನಾಥಂ ಗುಣಭವನಮಣಿಸ್ತಂಭಮಿಪ್ಪಂತಿರಿರ್ದಂ ೨೪೧

ವ: ಅಂತಿರ್ದು ಸಾಮಾನ್ಯಶುಕ್ಲಧ್ಯಾನಾಪೇಕ್ಷೆಯಿಂ ತೃತೀಯಮುಂ ಪರಮ ಶುಕ್ಲಧ್ಯಾನಾಪೇಕ್ಷೆಯಿಂ ಪ್ರಥಮಮುಮಪ್ಪ ಸೂಕ್ಷ್ಮ ಕ್ರಿಯಾಪ್ರತಿಘಾತಿಯೆಂಬ ಪರಮ ಶುಕ್ಲಧ್ಯಾನದೊಳ್ ನೆಲಸಿದಂತರ್ಮುಹೂರ್ತದಿಂ ಮೇಲೆ ಲಘುಕರ್ಮ ಪರಿವಾಚನ ಶಕ್ತಿ ಪ್ರಾಪ್ತಿನಿಮಿತ್ತಂ ಸೂಕ್ಷ್ಮಶರೀರದೊಳ್ ಕೂಡಿ ಚರಮಾಂಗತ್ರಿಗುಣಬಾಹುಲ್ಯದಿನೇಕ ಸಮಯದೊಳ್ ಚತುರ್ದಶರಜ್ಜೂತ್ಸೇಧಜೀವಪ್ರದೇಶವಿಸರ್ಪಣಮಪ್ಪ ದಂಡಸಮುದ್ಘಾತಮಂ ದ್ವಿತೀಯ ಸಮಯದೊಳ್ ಪೂರ್ವಪ್ರಣೀತ ಬಾಹಲ್ಯಾಯಾಮದಿಂ ಯಮಳ ಕವಾಟಾಕೃತಿಯಾಗಿ ಜೀವಪ್ರದೇಶಪ್ರಸರ್ಪಣಮಪ್ಪ ಕವಾಟಸಮುದ್ಘಾತಮಂ ತೃತೀಯ ಸಮಯದೊಳ್ ವಾಯುತ್ರಯಾವಶೇಷಲೋಕಾಕಾಶ ಜೀವಪ್ರದೇಶಪ್ರವರ್ತನಮುಮಪ್ಪ ಪ್ರತರ ಸಮುದ್ಘಾತಮುಮಂ ಚತುರ್ದಶಸಮಯದೊಳ್ ಸಕಳಲೋಕವ್ಯಾಪ್ತಿಜೀವಪ್ರದೇಶ ಪ್ರವರ್ತನಮಪ್ಪ ಲೋಕಪೂರಣಸಮುದ್ಘಾತಮುಮಂ ನೆಱಪಿ ಇಂತು ದಂಡಕವಾಟ ಪ್ರವರ ಲೋಕಪೂರಣಮೆಂಬ ನಾಲ್ಕು ಸಮುದ್ಘಾತಂಗಳನನುಕ್ರಮದಿಂ ನಿರ್ವರ್ತಿಸಿ

ಈ ತೆಱದಿಂದಂ ನಾಲ್ಕುಮ
ಘಾತಿಸ್ಥಿತಿಕಾಲಮೆಲ್ಲಮಂ ಸರಿಮಾಡಿ ಬಳಿ
ಕ್ಕೋತು ನಿಜಮೂಲದೇಹದೊ
ಳಾತಂ ನೆಲಸಿರ್ದು ಕಿಡಿಸಲುದ್ಯತನಾದಂ ೩೪೨

ವ: ಮತ್ತಮಂತರ್ಮುಹೂರ್ತದೊಳ್ ಬಾದರಮನೋವಚನೋಚ್ಛ್ವಾಸ ಕಾಯಯೋಗ ಸೂಕ್ಷ್ಮಮನೋವಚನೋಚ್ಛ್ವಾಸಂಗಳುಮನಡಂಗಿಸಿ ಸೂಕ್ಷ್ಮಕಾಯ ಯೋಗನಾಗಿ ಸಮನಂತರಂ ನಿರೋಧಂಗೆಯ್ದು ಯೋಗಕೇವಳಿಗುಣಸ್ಥಾನಮಂ ಪೊರ್ದಿ ಸಮುಚ್ಛಿನ್ನ ಪ್ರಾಣಾಪಾನಪ್ರಚಾರ ಸರ್ವಕಾಯವಾಗ್ಮನೋಯೋಗಪರಿಸ್ಯಂದಕ್ರಿಯಾ ವ್ಯಾಪಾರಮಪ್ಪ ಸಮುಚ್ಛಿನ್ನಕ್ರಿಯಾನಿವೃತ್ತಿಯೆಂಬ ಚತುರ್ಥ ಪರಮಶುಕ್ಲಧ್ಯಾನದೊಳ್ ನಿಂದು

ಪರಿಪೂರ್ಣಸಕಳಗುಣಕಂ
ಪರಮಯಥಾಖ್ಯಾತಚರಿತಕಂ ವರಶೀಲಾ
ಕರನಾಗಿ ಮೋಕ್ಷಲಕ್ಷ್ಮೀ
ಪರಿರಂಭಾರಂಭಕೇಳಿಗುತ್ಸುಕನಾದಂ ೩೪೩

ವ: ಆಗಿ ತದುಪಾಂತ್ಯಸಮಯದೊಳನ್ಯತರವೇದನೀಯ ದೇವಗತಿ ತತ್ಪ್ರತಿ ಯೋಗ್ಯಾನುಪೂರ್ವ ಶರೀರಬಂಧನಸಂಘಾತವರ್ಣರಸಪ್ರತ್ಯೇಕಪಂಚಕಂ ಸಂಹನನ ಸಂಸ್ಥಾನ ಷಟ್ಕಂಗಂದ ದ್ವಿತಯಂ ವಿಹಾಯೋಗತಿದ್ವಿತಯಂ ಸ್ಪರ್ಶಾಷ್ಟಕಮಗುರುಲಘು ಚತುಷ್ಕ ಶುಭಾಶುಭ ಸ್ಥಿರಾಸ್ಥಿರ ಸುಸ್ವರದುಸ್ವರ ಸುಭಗದುರ್ಭಗ ಪ್ರತ್ಯೇಕ ಶರೀರ ಯಶಸ್ಕೀರ್ತ್ಯನಾದೇಯ ನಿರ್ಮಾಣಪರ್ಯಾಪ್ತ ನೀಚೈರ್ಗೋತ್ರಂಗಳೆಂಬೆಪ್ಪತ್ತೆರಡುಂ ಪ್ರಕೃತಿಗಳಂ ನಿರವಶೇಷಂ ಕೆಡಿಸಿ ಚರಮಸಮಯದೊಳವಶಿಷ್ಟಾನ್ಯತರವೇದ್ಯ ಮನುಷ್ಯಾ ಯುರ್ಗತೀತ

ಪ್ರಯೋಗ್ಯಾನುಪೂರ್ವ ಪಂಚೇಂದ್ರಿಯ ತ್ರಸನಾಮ ಸುಭಗಾದೇಯ ಪರ್ಯಾಪ್ತ ಬಾದರ ಯಶಸ್ಕೀರ್ತ್ಯುಚ್ಚೈರ್ಗೋತ್ರತೀರ್ಥಕರನಾಮಂಗಳೆಂಬ ಪದಿಮೂಱುಂ ಪ್ರಕೃತಿಗಳನು ನ್ಮೂಳನಂಗೆಯ್ದಿಂತು ವೇದನೀಯಾಯುಷ್ಯನಾಮಗೋತ್ರಂಗಳೆಂಬ ನಾಲ್ಕು ಮಘಾತಿಕರ್ಮಂಗಳನೊರ್ಮೊದಲೊಳ್ ನಿರ್ಮೂಳಂ ಮಾಡುವುದುಂ

ವರಶುಕ್ಲಧ್ಯಾನಮೆಂಬುಜ್ವಳತರಣಿಸಮುದ್ಯೋತನಾಶ್ಚರ್ಯದಿಂದಂ
ದುರಘಾತಿಧ್ವಾಂತಮಲ್ಲಂ ಕಿಡಲ್ಕೆ ಪರೆದುಪೋಗಲ್ಕೆ ಕೆಟ್ಟೋಡಿ ದೋಷಂ
ಪರೆಯಲ್ ಭೈಷಜ್ಯದಿಂ ಭಾಸುರಕನಕದವೋಲ್ ದೀಪ್ಯಮಾನಸ್ವರೂಪಂ
ಪರಿಶುದ್ಧಂ ಪೊರ್ದಿದಂ ಶಾಶ್ವತಸುಖಮಯಂ ಮೋಕ್ಷಮಂ ಧರ್ಮನಾಥಂ ೩೪೪

ತನುವಾತವಾಯುಮಂಡಳಿ
ಘನಮಂಡಪಮಾಗಲಷ್ಟಮಂಗಳಮಾಗಲ್
ವಿನುತಾಷ್ಟಗುಣಂ ಮೋಕ್ಷಾಂ
ಗನೆಯೊಳ್ ನಲವಿಂದೆ ಮದುವೆನಿಂದಂ ಧರ್ಮಂ ೩೪೫

ಸಕಳನೃಚಕ್ರವರ್ತಿಗಳ ಸೌಖ್ಯಮದೆಲ್ಲಮಮರ್ತ್ಯರೊಂದು ಸೌ
ಖ್ಯಕಣಸಮಾನಮಾಗದು ಸಮಸ್ತಸುರಾಳಿತದಿಂದ್ರಸೌಖ್ಯರಾ
ಶಿಕಮಹಮಿಂದ್ರರೊಂದೊಂದು ಸುಖಲೇಶಮಾನಮನೆಯ್ದದಾ ಸುಖ
ಪ್ರಕರಮುಮಿದ್ಧಸಿದ್ಧರನಿಮೇಷಸುಖಕ್ಕೆಣೆಯಾಗದಂತದಂ ೩೪೬

ಉಪಮಾತೀತಮೆನಿಪ್ಪತಿ
ವಿಪುಳಮೆನಿಪ್ಪೀ ದ್ರುಗಧಿಕಶಾಶ್ವತಸುಖದಿಂ
ದೆ ಪರಮಧರ್ಮಜಿನೇಶಂ
ಸ್ವಪರಹಿತಂ ಮುಕ್ತಿಯಲ್ಲಿ ತಣ್ಣನೆ ತಣಿದಂ ೩೪೭

ನಲವಿಂ ಕ್ಷಾಯಿಕಮೆಂಬ ಚಾರುತರಸಮ್ಯಕ್ತ್ವಂ ಮಹಾನಂತ ಬೋ
ಧಲಸದ್ದರ್ಶ ವೀರ್ಯಮುಂ ಸಮವಗಾಹಂ ಬಾಧಕಾಭಾವದ
ಗ್ಗಳಮುಂ ಗೌರವಲಾಘನಾಪಘನಮುಂ ಸೂಕ್ಷ್ಮತ್ವಮೆಂದಿಂತು ಮಂ
ಗಳಮಾದಷ್ಟಗುಣಂ ಕರಂ ನೆಲಸಿ ತನ್ನೊಳ್ ನಿಂದನಾ ನಿಶ್ಚಳಂ ೩೪೮

ತಾಂ ತನ್ನಂ ತನ್ನಾಂತನ
ಗಂತುಂ ವಶವಾಗಿಮಾಡಿ ತನ್ನತ್ತಣಿನಾ
ದಂತಪ್ಪ ತನ್ನ ಗುಣಮೆಂ
ಟುಂ ತನ್ನೊಳ್ ನೆಱೆಯೆ ಮುಕ್ತಿಯೊಳ್ ನೆಲಸಿರ್ದಂ ೩೪೯

ಪದಪಿಂದೆ ಚೈತ್ರಮಾಸವಿ
ಶದಪಕ್ಷ ಚತುರ್ಥಿ ತಿಥಿಯೊಳಪರಾಹ್ಣದ ಕಾ

ಲದೊಳಂ ಧರ್ಮಜಿನೇಶಂ
ಮುದದಿಂದಂ ಮೋಕ್ಷಲಕ್ಷ್ಮಿಗಧಿಪತಿಯಾದಂ ೩೫೦

ವ: ಆ ಮೋಕ್ಷದ ಸ್ವರೂಪಮೆಂತುಟೆಂದೊಡೆ

ಮನುಜಕ್ಷೇತ್ರದವೊಲ್ ಪಾ
ವನಮೋಕ್ಷಮದೊಂದು ಲಕ್ಷಯೋಜನದಗಲಂ
ಘನಮಾದ ತೋರದಭಿಶೋ
ಭನಮುಂ ನಾಲ್ವತ್ತಮೈದುಯೋಜನಮಕ್ಕುಂ ೩೫೧

ಸಮವೃತ್ತಮೆಂಟುಯೋಜನ
ಮಮಳತರಸ್ಫಟಿಕಮಯಮದತಿರಮಣೀಯಂ
ಸಮನಿಸಿದನಂತಸಿದ್ಧರ
ಸಮಿತಿಗೆ ಕಡುತೆಱಪನೀವುತಿಕ್ಕುಂ ಸತತಂ ೩೫೨

ಆರಯ್ವಡಮಿಾಷತ್ಪ್ರಾ
ಗ್ಭಾರಶಿಳಾವಳಯಮಾಯ್ತು ಶೋಭಾನಿಳಯಂ
ಸಾರಜಗತ್ತ್ರಯಲಕ್ಷ್ಮಿಯ
ಚಾರುಸಿತಚ್ಛತ್ರದಂತಿರಾನಂದಕರಂ ೩೫೩

ಅಕ್ಷಯಮಪುನರ್ಭವಮವಿ
ಪಕ್ಷಮತೀಂದ್ರಿಯಮನಿಂದ್ರಮನುಪ್ರದವಮನ
ಪೇಕ್ಷಮೆನಿಪ್ಪತಿಶಯಪರಿ
ಲಕ್ಷತಿಮಪ್ಪುದು ಪವಿತ್ರಸಿದ್ಧಕ್ಷೇತ್ರಂ ೩೫೪

ವ: ಇಂತು ವಿಶಿಷ್ಟಶೋಭಾಸಮುಪಜುಷ್ಟಮಾದಷ್ಟಮಭೂಮಿಯೆನಿಸಿದ ತ್ರೈಲೋಕ್ಯಶಿಖರದೊಳತಿಪ್ರಸಿದ್ಧಮುಂ ಶುದ್ಧಮುಮಾಗಿರ್ದ ಸಮಿದ್ಧಸಿದ್ಧಶಿಲೆಯ ಮೇಲಣ ವಾಯುತ್ರಯಭಾಗದೊಳ್ ಕಿಂಚಿನ್ನ್ಯೂನ ಚರಮಶರೀರಮಾತ್ರ ಜೀವಘನಾಕಾರನುಂ ನಿರಾಕಾರನುಂ ಪರಿಧೃತಪರಮಾತ್ಮಸ್ವಭಾವನುಂ ಸಕಳವಿನುತಮಹಾನುಭಾವನುಂ ನಿರಾಮಯನುಂ ನಿಭಾಮಯನುಂ ನಿತ್ಯನುಂ ಸ್ತುತ್ಯನುಂ ನಿರವಯವನುಂ ನಿರುಪಮನುಂ ನಿರಂತರಘನಸುಖನುಂ ನಿರಂತರ ಚಿದಭಿಮುಖನುಂ ನಿರಂಜನನುಂ ನಿರಭಿರಂಜನನು ಮಾಗಿ ಧರ್ಮನಾಥಜಿನೇಶ್ವರಂ ಸಿದ್ಧಪದವಿಯೊಳ್ ನಿಂದನನ್ನೆಗಮಿತ್ತಲ್

ಅವಧಿವಿಬೋಧದಿನಱಿದಾ
ದಿವಿಜೇಂದ್ರಂ ಸಿಂಹವಿಷ್ಟರಾಗ್ರದಿನೆಳ್ದಂ

ದಿವಿಜಸಭೆವೆರಸು ತದ್ದಿ
ಗ್ವಿವರಕ್ಕೇಳಡಿಯನೆಸಗಿಯವನತನಾದಂ ೩೫೫

ವ: ಆಗಳಾ ಪರಮೇಶ್ವರನ ಪರಿನಿರ್ವಾಣ ಕಲ್ಯಾಣಸ್ಥಳಸಮಭ್ಯರ್ಚನ ವಂದನೋತ್ಸಾಹ ಸಮುತ್ಸುಕಚಿತ್ತನಾಗಿ

ಇಂದ್ರಾಣೀಯುಕ್ತನಿಂದ್ರಂ ಧವಳಗಜಸಮಾರೋಹಣಂಗೆಯ್ದು ದೇವೀ
ವೃಂದಂ ಮಂದಾರುವೃಂದಾರಕಸಮುದಯಮಂ ಯಾನವೈಮಾನನಾ
ಬೃಂದಂಬೆತ್ತಿರ್ದ ಸದ್ವಾಹನನಿಚಯಮನಂದೇಱಿ ಸುತ್ತಂ ಬರಲ್ ಬ
ೞಿಂದಂ ನಿರ್ವಾಣಕಲ್ಯಾಣಮನೆಸಗುವೆನೆಂಬುತ್ಸವಮಂ ಪೆರ್ಚೆ ಬಂದಂ ೩೫೬

ವ: ಆ ಪೊತ್ತಿನೊಳ್

ಪರಿವಿಡಿಯಿಂ ಭವನಭ್ಯಂ
ತರಕ ಜ್ಯೋತಿಷ್ಕ ಕಲ್ಪವಾಸಿಕಲೋಕದೊ
ಳುರು ಶಂಖಾನಕ ಸಿಂಹೋ
ದ್ಧುರ ಘಂಟಾರವದಿನಱಿದರವರೊರ್ಮೊದಲೊಳ್ ೩೫೭

ಜ್ಯೋತಿಷ್ಕಾಮರಸಂಕುಳಂ ಭವನವಾಸಿವ್ಯೂಹಮುಂ ವ್ಯಂತರ
ಬ್ರಾತಂ ಕಲ್ಪಜನಿರ್ಜರಪ್ರತತಿಯುಂ ಸ್ವಸ್ವಾಂಗನಾವಾಹನೋ
ತ್ಕೇತುಶ್ರೇಣಿ ಸಮಸ್ತಸೈನಿಕಜನಂ ಮುಂತಾದುವಂ ಕೂಡಿಕೊಂ
ಡೈತಂದಿಂದ್ರನೊಳೊಂದಿ ಮೆಲ್ಲನೆ ಬರುತ್ತಿರ್ದತ್ತದಾನಂದದಿಂ ೩೫೮

ವ: ಅಂತು ಕಂತುರಾಜನ ಮಂತ್ರದೇವತೆಯರಂತಿನಂತಸುಮನಸ್ಸೀಮಂತಿನೀ ಸಂತತಿಯಂತರಿಕ್ಷದಲ್ಲಿ ತಿಂತಿಣಿಗೊಂಡು ನಡೆತಪ್ಪಾಗಳದಱೊಳ್ ಕಡುಚೆನ್ನೆಯರ್ ಕೆಲಂಬರ್ ತಮ್ಮಯ ಬಟ್ಟಮೊಲೆಗಳ ಚೆಲುವಿಂಗೆ ಪಡಿಯಿಟ್ಟು ನೋಳ್ಪಂತೆ ಕನ್ನಡಿ ಕಳಸಂಗಳಂ ಪಿಡಿದು ನೆಗಪಿ ಕುಚಕಳಶಾಗ್ರದೊಳ್ ಪತ್ತೆಸಾರ್ಚಿ ನಡೆಯೆಯುಂ ಮತ್ತೆ ಕೆಲರ್ ಕಡುನೀಱೆಯರ್ ತಮ್ಮಯ ಮಿಸುಪ ನೊಸಲ ವಿಳಾಸದೊಳಸೂಯೆಗೆಯ್ವುದಱಿಂ ಕೆಂಪೇಱಿ ಮೂಡುತ್ತುಮಿರ್ದೆಳೆವೆಱೆಯುಂ ಪಿಡಿದು ತಮ್ಮಂಗೆಯ್ಯೊಳಗಿಕ್ಕಿ ತೋಱುವಂತೆ ಕುಂಕುಮರಸಕಲಂಕಿತಮಾದ ಮಳಯಜದ ಪಂಕಂ ತೀವಿಕೊಂಡಿರ್ದ ಚಂದ್ರಕಾಂತವ ಶುಕ್ತಿಕೆಗಳಂ ಕರತಳದೊಳ್ ಪಿಡಿದು ನಡೆಯೆಯುಂ ಮತ್ತಂ ಕೆಲರ್ ದೇವಕನ್ನೆಯರ್ ಗಗನತಳದೊಳ್ ಬೀಳಲ್ವರಿದಂಗಜ ಜಂಗಮ ಕಲ್ಪವೃಕ್ಷಲತೆಗಳಂತೆ ಲಂಬಮಾನ ಪುಷ್ಪಮಾಲಾಜಾಲಂಗಳಂ ಪಿಡಿದು ನಡೆಯೆಯುಂ ಕೆಲಂಬರ್ ಕಡುಜಾಣೆಯರ್ ತಮ್ಮಯ ವದನಮೆಂಬವಿಂದುಬಿಂಬಮನೋಲೈಸಲೆಂದು ಸಾರಿಗೆ ಬಂದು ನೆರೆವ ತಾರೆಗಳ

ಬಳಗದಂತೆ ಥಳಿಥಳಿಸಿ ಪೊಳೆವ ಮುಕ್ತಾಫಳಮಯಾಕ್ಷತ ಸಂಕುಳಂ ತುಂಬಿದ ವರ್ತುಳಂಗಳಂ ಪಿಡಿದು ನಡೆಯೆಯುಂ ಬಳಿಯಂ ಕೆಲಂಬರ ಮರನಿತಂಬಿನಿಯರ್ ಪರಮಾಮೃತರಸಮನೊಳಕೊಂಡ ಸೂರ್ಯಮಂಡಳಮಂ ಪಾಣಿತಳದೊಳ್ ತಳೆದು ಬರುತ್ತಿಮಿರ್ದಪ್ಪರೆಂಬಂತೆ ಪರಿಪರಿಯ ಸಮೂಷ್ಮಾಯ ಮಾಣಂಗಳಂ ಪಿಡಿದು ನಡೆಯೆಯುಂ ಮತ್ತಂ ಕೆಲರ್ ಸುಪರ್ವಪ್ರಮದೆಯರ್ ಪ್ರದ್ಯುಮ್ನ ಚಕ್ರವರ್ತಿಯ ಸರ್ವರತ್ನನಿಧಿಲಕ್ಷ್ಮೀದೇವೀಯರೆಂಬಂತೆ ತೊಳಗಿ ಬೆಳಗಿ ಪೊಳೆವುತ್ತು ಮಿರ್ಪ ಪದ್ಮರಾಗ ಮಾಣಿಕ್ಯದೀಪ ಪ್ರದೀಪಕಳಿಕಾಕಳಾಪಮಂ ಪಿಡಿದು ನಡೆಯೆಯುಂ ಕೆಲಂಬರ್ ವಿಬುಧವಧುಗಳ್ ಮಿಳಿರ್ದು ಮಿಳ್ಳಿಸುವ ತಮಾಳದೆಳೆಗದಿರ್ಗಳಾವಳಿ ಬಳಸಿದ ಶರದದ ಮುಗಿಲನಾಂತ ನಂದನ ಮಂಗಳದೇವತೆಯರೆಂಬಂತೆ ಮಗಮಗಿಸು ವಗರು ಧೂಪದ ಪೊಗೆಯ ಪೊದರ್ ಕವಲ್ವರಿದು ನೊಗದಿಂದೊಗೆದು ಸಮಾವರಿಸುವ ಧೂಪಘಟಂಗಳಂ ಕರಪಲ್ಲವದಿಂ ಪಿಡಿದು ನಡೆಯೆಯುಂ ಮತ್ತೆ ಕೆಲರಮರ ಕೋಮಳೆ ಯರಗಣ್ಯಾಪುಣ್ಯಕರು ಕೆಯ್ಯ ಮೇಲೆ ಸಫಲಮಾದುದೆಂಬಂತೆ ನವೀನನಾನಾವಿಧ ವಿಪುಳಫಳಕುಳ ಕಳಿತಂಗಳಾದ ಪಳಿಕಿನ ಪಟಳಿಕೆಗಳಂ ಪಿಡಿದು ಸೌಧರ್ಮೇಂದ್ರನ ಸುತ್ತಲುಂ ನಡೆದುಬರ್ಪಲ್ಲಿ

ಕುಸರಂಬೆತ್ತು ತೊಳಪ್ಪ ಪಂಚವಿಧರತ್ನಪ್ರೋತನಾನಾವಿಮಾ
ನಸಮೂಹಂಗಳಿನುಚ್ಚ ಕೇತನದಿನುದ್ಯುತ್ತೋರಣಶ್ರೇಣಿಯಿಂ
ದೆಸೆವುತ್ತುಂ ಪಲವಂದಮಾದ ಬೆಳಗಿಂದಂ ತುಂಬಿತುಳ್ಕಾಡುತುಂ
ಪೊಸಚಿತ್ರಂ ಬರೆದಂಬರಕ್ಕೆ ದೊರೆಯಾಗಿರ್ದೊಪ್ಪಿದತ್ತಂಬರಂ ೩೫೯

ಪಲವಂದಂಬೆತ್ತ ತೂರ್ಯಧ್ವನಿಯ ರಭಸಮುಂ ಮಂಗಳಾಚಾರಸಂಪಾ
ದಲಸದ್ಗಂಭೀರಗೀತಧ್ವನಿಯ ರಭಸಮುಂ ದೇವದೇವಿಪ್ರಕೋಳಾ
ಹಳಮುಂ ದ್ಯಾವಾಪೃಥಿವ್ಯಂತರದ ತೆಱಪಿನೊಳ್ ತುಂಬಿತುಳ್ಕಾಡುತುಂ ದಿ
ಕ್ಕುಳಮಂ ತಳ್ಪೊಯ್ಯುದ್ದತ್ಯದ್ಭುತಮೊ ಕಡೆಯ ಕಲ್ಯಾಣಪೂಜಾಪ್ರಯಾಣಂ ೩೬೦

ವ: ಇಂತಗುರ್ವುವಡೆದ ದೇವರ್ಕಳ ಪೂರ್ವದೇವರ್ಕಳ ಪೆರ್ವಡೆ ನಿರ್ಭರ ವಿಭವದಿಂದಾ ಧರ್ಮನಾಥನ ನಿರ್ವಾಣಸ್ಥಳಮಂ ತೊಟ್ಟನೆ ಮುಟ್ಟೆವಂದು ಮುಟ್ಟಿದ ಭಕ್ತಿಯಿಂ ಪೊಡೆವಟ್ಟು

ಆ ಸಮ್ಮೇದಾದ್ರಿಚೂಡಾಗ್ರದ ತೆಱಪನಿತುಂ ಮಂಗಳದ್ರವ್ಯಧಾರಿ
ಸ್ತ್ರೀಸಂದೋಹಕ್ಕೆ ಸರ್ವಾಮರರ ಸಮುದಯಕ್ಕಂ ಸುನೀರಾಜನಾಸ್ಥಾ
ಳೀಸಂಘಾತಕ್ಕಮಿಂಬಿಲ್ಲದೆ ನೆಱೆತುಱುಗಿರ್ದತ್ತು ತಚ್ಛೃಂಗಮಂ ದೇ
ವೇಶಂ ಮುಂತಾದ ದೇವರ್ ತ್ರಿವಿಧಿ ಮಿಗೆ ಬಲಗೊಂಡರಾನಂದದಿಂದಂ ೩೬೧

ವ: ಅಂತು ಧರ್ಮನಾಥನಾಲಿಂಗನಂಗೆಯ್ದು ಮೋಕ್ಷಲಕ್ಷ್ಮಿಯ ಸಿರಿಮಂಚದ ಕೆಳಗೆ ಪೊಳೆವ ಪಳಚ್ಚನಾದಚ್ಚವಳಿಕಿನ ಪಾವುಗೆಗಳಂತೆ ಥಳಥಳಿಪಚಂದ್ರಕಾಂತದ ಸಮಾಧಿ

ಶಿಲಾಪಟ್ಟಕಮನಾಖಂಡಳಂ ಕಂಡು ತ್ರಿಪ್ರದಕ್ಷಿಣಂಗೆಯ್ದು ತನ್ನಯ ಕೋಟೀರ ಕೋಟಿ ಪರಿಘಟಿತ ಮಣಿಮರೀಚಿನಿಚಯದಿಂದದಕ್ಕೆ ವಾಸವಶರಾಸನದ ಬಾಸಣಿಗೆಯನಿಕ್ಕುವಂತೆ ಮೆಯ್ಯಿಕ್ಕಿ ಮುಂದೆ ಕುಳ್ಳಿರ್ದು

ತಣಿಯದು ತಂದುಕೊಟ್ಟು ಸುರಕೋಟಿ ಸುರದ್ರುಮಮಿತ್ತ ಪೂಗಳಂ
ತಣಿಯದು ಪೂಜೆಯಂ ಬಿಡದೆ ಮಾಡಿಯುಮಿಂದ್ರನ ಹಸ್ತಪಲ್ಲವಂ
ತಣಿಯದು ಮತ್ತಮಾತನ ಮೊಗಂ ಪೊಗಳ್ದುಂ ಗುಣಭಾರದೇಳ್ಗೆಯಂ
ಪ್ರಣುತಮೆನಿಪ್ಪ ಧರ್ಮಜಿನನಿರ್ವೃತಿಪೂಜೆಯದೇನುದಾತ್ತನೋ ೩೬೨

ವಿಳಸಿತ ಪರಿನಿರ್ವಾಣ
ಸ್ಥಳಮಂ ಪೂಜಿಸಿದುದೊಸೆದು ಪೊಡವಟ್ಟುದು ಕ
ಣ್ಗೊಳಿಪಂತಖಿಳಸುರಾಸುರ
ಕುಳಮದಱೊಳ್ ಕ್ರೀಡಿಸುತ್ತುಮಿರ್ದುದು ಪಿರಿದುಂ ೩೬೩

ಪಂಚಮಕಲ್ಯಾಣೋದ್ಧ ಸ
ಮಂಚನದುತ್ಸವಮನಿಂತು ಬಿತ್ತರಿಸಿದುದಾ
ದಂ ಚಿಲ್ವನಾಗಿ ಸುರ (?)
ಸಂಚಯಮಚ್ಚರಿ ಜಗತ್ತ್ರಯಕ್ಕಪ್ಪನ್ನಂ ೩೬೪

ವ: ಇಂತು ಪುರಂದರಪುರಸ್ಸರಮಾದ ಸರ್ವಗೀರ್ವಾಣಗಣಮೆಲ್ಲಂ ಧರ್ಮನಾಥ ತೀರ್ಥಂಕರನ ಪರಿನಿರ್ವಾಣಕಲ್ಯಾಣಪ್ರದೇಶಮನೆ ಶಸ್ತಸಮಸ್ತ ಮಂಗಳ ವಸ್ತುಗಳಿಂ ಸವಿಸ್ತರಮಾರಾಧಿಸಿದನಂತರಂ

ನವರಸಮೊಪ್ಪಿತೋಱೆ ಗಮಕಂ ನೆಱೆಕ್ಕೆಮಿಗೆ ಪಂಚಭಾವಮುಂ
ತವೆಯದ ಶೋಭೆಯಂ ತಳೆಯೆ ಕೋಮಳಹಸ್ತತಳಾಭಿಚಾಳನಂ
ಪ್ರವರಪದಾಗ್ರಚಾಳನದೊಳೊಂದಿ ಚಮತ್ಕೃತಿಯಾಗಿ ತೋರ್ಪಿನಂ
ಸವಿವಡೆದಿರ್ದ ನಾಟ್ಯಮನೊಡರ್ಚಿದನಾ ದಿವಿಜಾಧಿನಾಯಕಂ ೩೬೫

ವ: ಇಂತು ಪುರುವಿಭೂತಿಯಿಂದಾ ಪುರುಹೂತಂ ವಿಷ್ಟಪತ್ರಯಕ್ಕೆ ವಿಸ್ಮಯಮಪ್ಪಂತು ನಿರ್ವಾಣನೃತ್ಯಮಂ ಬಿತ್ತರಿಸಿ ಮಾಡಿ ಮಮಗಳಸಂಗೀತಮಂ ಪಾಡಿ ತದೀಯ ಮಹಾಮಹಿಮೆಯಂ ಕೊಂಡಾಡಿ ಘನಾನುರಾಗದೊಳ್ ಕೂಡಿ ಪುಳಕಾಂಕುರಸಂಕುಳಂ ಮೂಡಿ ತತ್ತೀರ್ಥಂ ದಿವ್ಯಮೂರ್ತಿಯಂ ನೀಡುಂ ನೋಡುತ್ತುಮಿರ್ಪುದುಂ

ಮಂಜಿನ ಮಾಳ್ಕೆಯಿಂ ಪರೆದುಪೋಗಿ ಜಿನೇಶ್ವರದಿವ್ಯದೇಹಮಾ
ರಂಜಿತ ಕೇಶಮುಂ ನಖಮುಮೆಯ್ದುಳಿದಿರ್ದೊಡೆ ಗಂಧಸಾರದಿಂ

ಮಂಜರಿಗೊಂಡ ಕಪ್ಪುರದ ಘಟ್ಟಿಗಳಿಂದಮೆ ಮಾಡಿ ದಗ್ಧಮಂ
ಪುಂಜಿಸಿತೋರ್ಪ ಭಸ್ಮದಿನೊಡರ್ಚಿದುದಾ ಸಭೆ ಬೂದಿಯಾಟಮಂ ೩೬೬

ವ: ಅಂದಿಂತೊಟ್ಟು ಬೂದಿಯಾಟಂ ಲೋಕದೊಳ್ ಪರೆದು ಪ್ರಸಿದ್ಧಮಾದುದು ಮತ್ತಮಾ ಕೃತಕೃತ್ಯನಾದ ಧರ್ಮನಾಥಸ್ವಾಮಿಯ ಮಹಾಮಹಿಮೆಯಂ ಮನದೊಳ್ ಮೆಚ್ಚಿ ಮೆಚ್ಚಿ ವಿಚಿತ್ರಂಬಡುತ್ತುಮಿದ್ದಾಖಂಡಳಂ ನಿಟಿಳತಟಘಟಿತಕರ ಕುಟ್ಮಳನುಂ ಜಯಜಯೋಚ್ಚಾರಿತ ಮುಖಮಂಡಳನುಮಾಗಿ

ಮೂಜಗಮೆಲ್ಲಮಂ ಕಿಡಿಸಿ ದುಃಖಮನೂಡುವ ಸರ್ವಕರ್ಮಕ
ವ್ರಾಜಮನೊರ್ಮೊದಲ್ ತವಿಸಿದುನ್ನತಿ ಕಾಲನನಿಕ್ಕಿಮೆಟ್ಟಿ ಸಂ
ಯೋಜಿಸಿದಾರ್ಪು ಸಂಸರಣವಾರ್ಧಿಯನೀಸಿದ ಶಕ್ತಿ ಶಾಶ್ವತ
ಶ್ರೀಜಸುಖಾನುಭೂತಿ ನಿನಗಲ್ಲದೆ ಕೂಡುಗುಮೇ ಜಿನೇಶ್ವರಾ ೩೬೭

ಮುನ್ನಂ ಸಾಮ್ರಾಜ್ಯಮಂ ಬಿಟ್ಟಧಿಕತರತಪೋನಿಷ್ಠನಾದಿಂಬಳಿಕ್ಕಂ
ಕೆನ್ನಂ ತ್ರೈಲೋಕ್ಯವಂದ್ಯಾತಿಶಯಿತಪರಮಾರ್ಹಂತ್ಯಲಕ್ಷ್ಮೀಪ್ರಭಾಸಂ
ಪನ್ನಂ ನೀನಾಗಿ ಮತ್ತಂ ಕೆಡದಮೃತಪದಪ್ರಾಪ್ತನಾಗಿರ್ದೆ ನಿನ್ನಂ
ತೌನ್ನತ್ಯಂಬೆತ್ತನಾವಂ ತ್ರಿಭುವನನುತವತ್ಪಂಚಕಲ್ಯಾಣಯೋಗ್ಯಾ ೩೬೮

ಎನಗಂ ನಿನ್ನಂತಿರ್ಪೈದುಂತೆಱದ ಪರಮಕಲ್ಯಾಣಸಂಪತ್ತಿಯಂ ಪಾ
ವನಮಂ ನೀನಿತ್ತು ಧನ್ಯತ್ವಮನೊದವಿಪುದೆಂದಿಂದ್ರನಾನಂದದಿಂದಂ
ಘನವಿಜ್ಞಾನಾತ್ಮನಂ ಧರ್ಮಜಿನಪನನತಿಪ್ರಾರ್ಥನಂಗೆಯ್ದು ಮಂದಾ
ರ ನಮೇರೂತ್ಫುಲ್ಲಪುಷ್ಪಾಂಜಳಿಯನೆಸಗಿದಂ ಮೋಕ್ಷಸೌಖ್ಯವ್ಯಪೇಕ್ಷಂ ೩೬೯

ವಚನಂಗಳೆಂಬ ಪುಷ್ಪ
ಪ್ರಚಯಂಗಳಿನೆಯ್ದೆಪೂಜಿಸಿದನಾ ಜಿನನಂ
ಶುಚಿ ಬಾಹುಬಲಿಮುನೀಶಂ
ಶಚಿಯೊಡೆಯನ ತೆಱದಿನೈದುಕಲ್ಯಾಣದೊಳಂ ೩೭೦

ವ: ಸಮನಂತರ ಸಮಾನಸಮಾಧಿಸಮೇತ ಕೇವಳಿಗಳ ಕಳೇವರಮಂ ಬೇಱವೇಱೆ ಪೂಜಿಸಿ ಪೊಡವಟ್ಟು ಮಗುಳ್ದು ಪೊಗಳ್ದುಂ ಕುಂದದ ಪರಮಾನಂದ ದಿನಂದಂಬಡೆದು ತೋಱುವ ವೃಂದಾರಕವೃಂದದೊಳೊಂದಿದ ಸೌಧರ್ಮೇಂದ್ರಂ ಸೌಂದರತರ ಚಂದನರಸ ಧಾರಾಪೂರಪರಂಪರಾಸಂದೋಹದಿಂದೋಕುಳಿಯನಾಡಿ

ಸುರಪಂ ನಿರ್ವಾಣಕಲ್ಯಾಣಮನೊಡರಿಸಿ ಪೂರೈಸಿದಂ ಧರ್ಮನಾಥಂ
ಗಿರದಿಂತೀ ಪಂಚಕಲ್ಯಾಣದ ವಿಭವಮನೆಯ್ದೆ ಕ್ರಮಂಗೊಂಡು ಯಾತ್ರೋ

ದ್ಧುರ ಶೋಭಾಸಂಪದಂ ಭೂತ್ರಯದೊಳೆಸೆವಿನಂ ಜೈನಮಾರ್ಗಪ್ರಭಾವ
ಸ್ಫುರಣಾಭಿವ್ಯಕ್ತಿಸಕ್ತಂ ಜಿನಪತಿಚರಣಾರಾಧನಾಭಕ್ತಿಯುಕ್ತಂ ೩೭೧

ವ: ಬಳಿಯಮರಿಷ್ಟಸೇನಗಣಧರರ್ ಮುಖ್ಯರಾದ ಸಕಳಗಣಧರರ ಪಾದಾರವಿಂದಂಗಳನಭಿವಂದಿಸಿ ಬೀಳ್ಕೊಂಡು ತೀರ್ಥಭೂತಸಮ್ಮೇದಶೈಲಮಂ ತ್ರಿಃಪ್ರದಕ್ಷಿಣಂ ಗೆಯ್ದು

ಪಿರಿದಾದುತ್ಸಾಹದಿಂದೆತ್ತಿದ ಪರಿಪರಿಯ ಛತ್ರದಿಂದಂ ಚಳಚ್ಚಾ
ಮರಸಂದೋಹಂಗಳಿಂ ಪೆಂಪೊದವಿ ಗಗನದೊಳ್ ತುಂಬಿ ಮಂದೈಸೆ ಸೈನ್ಯಂ
ಪರಿವಾರಂಗೂಡಿ ರಾಗಂಬಡೆದು ನಿಜನಿವಾಸಕ್ಕೆ ಪೋದಂ ಮಹಾಬಂ
ಧುರತೂರ್ಯಾರಾವಮೆಂಟುಂದೆಸೆಯನಲೆವಿನಂ ಪುಣ್ಯಮಾ ನೃತ್ಯರಂಗಂ ೩೭೨

ವ: ಅಂತತೀವ ಪ್ರಭಾವನಾ ವಿಭವದಿಂ ಧರ್ಮಜಿನನಾಥನ ನಿರ್ವಾಣ ರಮಣೀಯ ಪರಿಣಯನಲಕ್ಷಣ ಚರಮಕಲ್ಯಾಣದೊಸಗೆಯನೆಸಗಿ ಪುಳೋಮಜಾತಂ ನಿಜ ನಿಶಾಂತಕ್ಕೆ ಬೇಗದಿಂ ಪೋಗಿ ತನ್ನೊಡನೆ ಬಂದ ಚತುರ್ನಿಕಾಯದೇವರ್ಕಳೆಲ್ಲರಂ ತಂತಮ್ಮ ನೆಲೆಗೆ ಬೀಳ್ಕೊಟ್ಟು ಕಳಿಪಿ ಸುಖದಿನಿರ್ಪುದುಮನ್ನೆಗಮಿತ್ತಲ್

ಈ ಸಮ್ಮೇದಶಿಲೋಚ್ಚಯಾಗ್ರದೊಳಘಪ್ರಧ್ವಂಸನಂಗೆಯ್ದು ಮು
ಕ್ತೀಶತ್ವಂ ದೊರೆಕೊಂಡುದಾ ಪಿತೃಭರಶ್ರೀಧರ್ಮನಾಥಂಗಮೆಂ
ಬೀ ಸೂಕ್ತಂ ವರಧರ್ಮಭೂಪತಿಯ ಕರ್ಣಾಭ್ಯರ್ಣಮಂ ಸಾರ್ತರಲ್
ಸೂಸುತ್ತುಂ ಪ್ರಮದಾಶ್ರುವಂ ಪುಳಕಸಸ್ಯೌಘಕ್ಕಮೆಳ್ದಂ ನೃಪಂ ೩೭೩

ವ: ಅಂತು ಸಿಂಹಾಸನದಿನೆಳ್ದು ದಿಕ್ಕಿಂಗೇಳಡಿಯ ನಡೆದು ಸಾಷ್ಟಾಂಗ ಪ್ರಣತನಾಗಿ ತದ್ವಾರ್ತೆಯಂ ಪೇಳ್ದವಂಗಂಗಚಿತ್ತಮನಿತ್ತು

ತಂದೆಯೆಂಬೊಂದು ಮೋಹಂ
ಸಂದಂ ಮೋಕ್ಷಕ್ಕೆ ಮತ್ತಮೆಂಬೀ ಮೋಹಂ
ಕುಂದದಿಮ್ಮಡಿಸೆ ವರಧ
ರ್ಮಂ ದಮಯುತನಾ ಸ್ಥಳಕ್ಕೆ ಪೋಗಲ್ ಬಗೆದಂ ೩೭೪

ವ: ಬಳಿಯಮಾನಂದಭೇರಿಯಂ ಪೊಯಿಸಿ ನೆರೆದುಬಂದ ಪರಿಜನಂ ಪುರಜನಂಬೆರಸು ಮಹಾಮಹಿಮೆಯಿಂ ಪೋಗಿ ನವೀನಶೋಭಾಸ್ಥೂಳೀಕೃತ ನಿರ್ವಾಣ ಸ್ಥಳಮನೆಯ್ದಿ

ನಿರ್ವಾಣಶ್ರೀವಿವಾಹೋತ್ಸವದೊಳೆಸೆವ ನಾನಾಪ್ರಕಾರಪ್ರಶೋಭಾ
ಪೂರ್ವಂ ತಾನಾದ ವೇಳೀವಳಯದ ತೆಱದಿಂ ತೋರ್ಕೆವೆತ್ತಿರ್ದ ಭಾಸ್ವ
ನ್ನಿರ್ವಾಣಸ್ಥಾನಮಂ ನೋಡುವುದು ಜಯಜಯೋಚ್ಚಾರಣಂಗೆಯ್ವುತುಂ ಬಂ
ದುರ್ವೀಶಂ ಮೌಳಿಚೂಡಾಮಣಿಕಿರಣದಿನಾ ಭೂಮಿಯಂ ಬಣ್ಣವಿಟ್ಟಂ ೩೭೫

ವ: ಇಂತು ಸಾಷ್ಟಾಂಗಪ್ರಣತನಾದಿಂಬಳಿಯಮೆಳ್ದು ಕೈಗಳಂ ಮುಗಿದು ನೊಸಲ್ಗೆತಂದು

ನಿನ್ನಂತೆ ಪಂಚಕಲ್ಯಾ
ಣೋನ್ನತಿಯಂ ತಾಳ್ದುವಧಿಕಸಾಮರ್ಥ್ಯಮನಿ
ತ್ತೆನ್ನನುದ್ಧರಿಸು ದುಃಖಾ
ಪನ್ನನನೀ ಭವದಿನಿಂತು ಧರ್ಮಜಿನೇಂದ್ರಾ ೩೭೬

ಧಾತ್ರೀಭೂತಜಗತ್ತ್ರಯಾಧಿಪತಿಕ ಶ್ರೀಧರ್ಮತೀರ್ಥೇಶ್ವರ
ಸೋತ್ರೈಕಾಲಯದೇವ ನೀನೆನಗೆ ಮಾಡತ್ಯಂತಕಾರುಣ್ಯದಿಂ
ಧಾತ್ರೀಸಂಸ್ತುತಿಪಾತ್ರಮಪ್ಪ ಘನಸಮ್ಯಗ್ದರ್ಶನಜ್ಞಾನ ಚಾ
ರಿತ್ರಶ್ರೀಯುಮನುತ್ತರೋತ್ತರ ಯಶಶ್ರೀಯಂ ಸುಖಶ್ರೀಯುಮಂ ೩೭೭

ವ: ಎಂದು ಕೀರ್ತಿಸಿಯುಮರ್ಥಿಸಿಯುಂ ಧರ್ಮನಾಥತೀರ್ಥನಾಥನ ಮೂರ್ತಿಧ್ಯಾನಮಂ ಭಾವಿಸಿ ನಾಮಸ್ಥಾಪನಂಗೆಯ್ದು

ಪರಿಮಳಜಳದಿಂದಂ ಕುಂಕುಮಾರಂಜನಾಬಂ
ಧುರಮಳಯಜದಿಂದಂ ತಂಡದೊಳ್ ಪುಂಜದಿಂದಂ
ಪರಿಪರಿಯಲರಿಂದಂ ಚಾರುನೈವೇದ್ಯದಿಂದಂ
ವರಮಣಿಮಯರಾಜದ್ದೀಪಿಕಾಶ್ರೇಣಿಯಿಂದಂ ೩೭೮

ಸರಳತರಳಧೂಮಸ್ತೋಮವದ್ಧೂಪದಿಂದಂ
ಸುರುಚಿರಕದಳೀ ಜಂಬೀರನಾರಂಗಚೋಚಾ
ದ್ಯುರುತರಫಳದಿಂದಾರಾಧನಂಗೆಯ್ದನಾ ಭೂ
ವರತಿಳಕನುದಾತ್ತಸ್ಥಾನಮಂ ಭಕ್ತಿಯಿಂದಂ ೩೭೯

ವ: ಇಂತು ವಿಶಿಷ್ಟಾಷ್ಟವಿಧಾರ್ಚನಾದ್ರವ್ಯದಿಂದಾ ಧರ್ಮನಾಥಸ್ವಾಮಿ ಕರ್ಮಕ್ಷಯಂಗೆಯ್ದ ತಾಣಮನರ್ಚಿಸಿ ಪೊಡವಟ್ಟು ಪೊಗಳ್ದು ನಿಖಿಳಕರ್ಮ ಬಾಧಾನಿರ್ಮೋಚನಕ್ಕಿದು ಲಕ್ಷ್ಮರಕ್ಷೆಯಿಂದುಳಿದ ರಕ್ಷೆಯನಂಟಂಟು ನೊಸಲೊಳ್ ಬೊಟ್ಟಿಟ್ಟು ಮೆಯ್ಯೊಳೆಲ್ಲಂ ಪೂಸಿಕೊಂಡು ಪಾಡಿಯಾಡಿ ವಿವಿಧಪ್ರಕಾರ ನೂತನಬ್ರತಾ ರೋಪಣಮಂ ನೆಗಳ್ದು

ಪಲವು ಜೈನಾಗ್ರಹಾರಂ
ಗಳನಾಗಳ್ ಕೊಟ್ಟನಲ್ಲಿ ರತ್ನತ್ರಯಮಂ
ಜುಳ ಜೈನೋಪಾಧ್ಯಾಯರ
ಬಳಗಕ್ಕೆ ಹಿರಣ್ಯಕಾದಿ ಧಾರಾಪೂರ್ವಂ ೩೮೦

ವ: ಸುವರ್ಣ ವಸ್ತ್ರಕಪಿಲಾದ್ಯನೇಕವಿಧ ನೈಮಿತ್ತಿಕದಾನಮಂ ನೃಪಾಳೋತ್ತಮಂ ಕೈವಂದ ಕಲ್ಪವೃಕ್ಷ

ಮೆಂಬಂತೆ ನಿರ್ವರ್ತಿಸಿ ಮತ್ತಂ ಬೀಳ್ಕೊಂಡು ಕಿಱಿದಂತರಂ ಪಾದ ಮಾರ್ಗದಿಂ ಪೋಪವಸರದೊಳ್

ಇವರಿಗಿದುತ್ಸೇಧಂ ಮ
ತ್ತಿವರಿಗಿದೀ ವರ್ಣಮೆಂಬ ನಿಯಮಂ ಬಿಡದೊ
ಪ್ಪುವ ಜಿನಬಿಂಬಂಗಳನಭಿ
ನವರತ್ನಮಯಂಗಳಂ ನಿರೀಕ್ಷಿಸಿ ನರಪಂ ೩೮೧

ವ: ಭರತ ಸಗರಾದಿ ಚಕ್ರವರ್ತಿಗಳವಸರ್ಪಣದ ಕಡೆಯಕಾಲದೊಳಪ್ಪ ಚತುರ್ವಿಂಶ ತೀರ್ಥಂಕರರ ಸ್ವರೂಪವನೋತ್ಸೇಧಮಂ ಜ್ಞಾನರ್ಧಿಸಂಪನ್ನರಪ್ಪ ಗಣಧರ ದೇವರಿಂ ತಿಳಿದಾ ಪರಿಯೊಳ್ ಮುನ್ನಮೆ ತತ್ಪರ್ವತೋಪತ್ಯಕದೊತ್ತಿನೊಳ್ ಮಾಡಿಸಿದ ವಿಶಾಳಕಳಧೌತ ಕಳಧೌತಮಯ ಚೈತ್ಯಾಲಯದೊಳ್ ಪಂತಿಗೊಂಡು ಪೊಳೆವ ತಜ್ಜಿನ ಪ್ರತಿಮೆಗಳಂ ಕಂಡು ಮಸಂಗೊಂಡಲ್ಲಿಗೆ ಪೋಗಿಯಪವರ್ಗಸುಖಸಮುಪಾರ್ಜ ನೋನ್ಮುಖಿಂ ವರಧರ್ಮಭೂಪನವಕ್ಕಭಿಮುಖತೆಯನೆಯ್ದಿ ನಿಂದು ಸಮಾರಾಧನಂಗೆ ಯ್ವುತ್ತುಂ ಮಂಗಳಸ್ತೋತ್ರಮುಖರಮುಖನಾಗಿ

ಆದಿಪರಮೇಶ್ವರಂ ಮೊದ
ಲಾದಾತಂ ವರ್ತಮಾನಜಿನರಿಂಗೀತನ
ನಾದಿಯೆನಿಸಿರ್ದೊಡಂ ತಾ
ನಾದರದಿಂ ಕೊಡುಗೆ ನಮಗೆ ಹಿತಮಂ ನುತಮಂ ೩೮೨

ಬಿಡದದ್ವಿತೀಯವಿಭವ
ಕ್ಕೊಡೆಯಂ ತಾನಾಗಿಯುಂ ದ್ವಿತೀಯಕನೆಂಬೀ
ನುಡಿಯಂ ಪಡೆದಜಿತಜಿನಂ
ಸಡಗರಮಂ ಕಿಡದುದಂ ದಲೊಡರಿಸುಗೆಮಗಂ ೩೮೩

ಸಂಭವಿಸುವುದಮೃತಸುಖಂ
ಸಂಭವಜಿನನಿಂ ತೃತೀಯನಿಂದೆಮಗೆ ಕರಂ
ಜಂಭಾರಿಮಕುಟತಟಗತ
ಶುಂಭನ್ಮಣಿಕಿರಣರಂಜಿತಾಂಘ್ರಿಕನಿಂದಂ ೩೮೪

ವಂದಿಸುತಮಿರ್ಪೆನಾನಭಿ
ನಂದನ ಜಿನನಾಥನಂ ಸನಾತನ ಪರಮಾ
ನಂದಮಯರೂಪನಂ ನಲ
ವಿಂದಂ ನಾಲ್ಕನೆಯ ತೀರ್ಥಕರನಂ ವರನಂ ೩೮೫

ಸುಮತಿಜಿನನಾಥನಂ ಪಂ
ಚಮತೀರ್ಥಂಕರನನನುದಿನಂ ಪೂಜಿಸುವೆಂ
ಕ್ರಮನತಜನತಾಕಲ್ಪ
ದ್ರುಮನಂ ಸನ್ಮತಕುಮುದ್ವತೀಚಂದ್ರಮನಂ ೩೮೬

ಪದ್ಮಪ್ರಭಜಿನನಂ ಗುಣ
ಸದ್ಮನನಾಱನೆಯ ತೀರ್ಥನಾಥನನುಭಯಿಾ
ಪದ್ಮಾಲಿಂಗಿತ ತನುವಂ
ಪದ್ಮನನಾರಾಧಿಪೆಂ ಸುಪದ್ಮೇಕ್ಷಣನಂ ೩೮೭

ನೆನೆವೆಂ ಸುಪಾರ್ಶ್ವಜಿನನಂ
ಮನಮೊಲ್ದೇಳನೆಯ ತೀರ್ಥನಾಯಕನಂ ನೂ
ತನಬೋಧಮಯಾತ್ಮಕನಂ
ಕನದುರುಮಣಿನಿಚಯಖಚಿತಹರಿವಿಷ್ಟರನಂ ೩೮೮

ಚಂದ್ರಪ್ರಭಜಿನನಾಥನ
ನಿಂದ್ರಸ್ತುತನಂ ನಿರಂತರ ಧ್ಯಾನಿಸುವೆಂ
ಸಂದಷ್ಟಮತೀರ್ಥಂಕರ
ನಂ ದಿನಕರಕೋಟಿದೀಪ್ಯಮಾನಪ್ರಭನಂ ೩೮೯

ನವಮಜಿನಾಧೀಶ್ವರನಂ
ನವಮಂದಾರಪ್ರಸೂನವರ್ಷಣಶೋಭಾ
ಪ್ರವರನನಭಿವರ್ಣಿಸುವೆಂ
ದಿವಿಜಸ್ತುತ ಪುಷ್ಪದಂತಪರಮೇಶ್ವರನಂ ೩೯೦

ಪತ್ತನೆಯ ತೀರ್ಥನಾಥನ
ನುತ್ತಮಶೀತಳಜಿನೇಶನಂ ಚಿಂತಿಸುವೆಂ
ಸುತ್ತಿರ್ದ ದುಃಖತಾಪನಿ
ವೃತ್ತಿನಿಮಿತ್ತಂ ಕೃಪಾಬ್ಧಿವರ್ಧನವಿಧುವಂ ೩೯೧

ಶ್ರೇಯಾಂಶ ಜಿನೇಶ್ವರನನ
ಮೇಯಗುಣಾಸ್ಪದನನರ್ಥಿಯಿಂ ಸ್ತುತಿಯಿಸುವೆಂ
ಸಾಯದ ಹುಟ್ಟದ ಸುಖದೊಂ
ದಾಯಪರಿಪ್ರಾಪ್ತಿಗಾಗಿಯೇಕಾದಶನಂ ೩೯೨

ಶ್ರೀವಾಸುಪೂಜ್ಯಜಿನನಂ
ದೇವಂ ಮಹಿಮಾವಿಶೇಷಭಾಭಾಸುರನಂ

ಭಾವಿಸುವೆಂ ದ್ವಾದಶನಂ
ಕೇವಳಬೋಧಪ್ರಭಾವಲಾಭನಿಮಿತ್ತಂ ೩೯೩

ಪದಿಮೂಱನೆಯ ಜಿನಂ ಸ
ಮ್ಮದಮಂ ನಮಗೀಗೆ ವಿಮಳತೀರ್ಥಾಧೀಶಂ
ವಿದಿತಜಗತ್ತ್ರಯಭಾವಾ
ಭ್ಯುದಯಸ್ಥಿತಿಕಂ ವಿಶಿಷ್ಟವಿಮಳವಿಬೋಧಂ ೩೯೪

ಅನಂತಚತುಷ್ಟಯಯುತನ
ನನಂತಜಿನಾಧೀಶನಂ ಚತುರ್ದಶನಂ ಪ
ರಿಚಿಂತಿಸುವೆನೆನ್ನಮನದೊ (?)
ಳನಂತಸುಖಾಸ್ಪದಲಾಭಮಂ ಬಯಸಿ ಕರಂ ೩೯೫

ಧ್ಯಾನಿಸುವೆಂ ಧರ್ಮಜಿನಾ
ಧೀಶನನೀ ಪಂಚದಶಸುತೀರ್ಥಾಧಿಪನಂ
ಮಾನಿತಧರ್ಮಸ್ಥಿತಿಯನ
ನೂ [ನಂ ದಲ್] ಪ್ರಭವಿಸುತ್ತುಮಿರ್ದನನೊಲವಿಂ ೩೯೬

ಶಾಂತಿಜಿನಾಧೀಶ್ವರನಂ
ಚಿಂತಿಸಿ ಮನದಲ್ಲಿ ನಿಲಿಸಿ ಲಾಲಿಸುತಿಪ್ಪೆಂ
ಕಂತುಮಾನಾದ್ರಿಕುಲಿಶನ
ನಂತಕವಿಧ್ವಂಸದಕ್ಷನಂ ಷೋಡಶನಂ ೩೯೭

ವರಕುಂಥುನಾಥನಂ ಬಂ
ಧುರಮಹಿಮಸನಾಥನಂ ಪರಿಷ್ಕೃತಿಗೆಯ್ವೆಂ
ಪಿರಿದುಂ ಪದಿನೇಳನೆಯನ
ನುರುತರಕಾರುಣ್ಯಪುಣ್ಯಪಣ್ಯಾಪಣನಂ ೩೯೮

ಅರಜಿನವರನಂ ಪರಿಹೃತ
ಧರನಂ ಹೃದಯದೊಳೆ ಧರಿಸಿಕೊಂಡಾಡುವೆನಾ
ದರದಿಂ ಪದಿನೆಂಟನೆಯನ
ನುರುಗುಣಗಣಮಣಿಪಯೋಧಿಯಂ ವೃಷನಿಧಿಯಂ ೩೯೯

ಮಲ್ಲಿಜಿನಂ ಜಗತ್ತ್ರಿತಯನ
ವಲ್ಲಭನೇಕೋನವಿಂಶತೀಶಂ ಧೀಶಂ

ಫುಲ್ಲಶರಬಾಣಭಂಜನ
ನುಲ್ಲಾಲಿತಮುಕ್ತಿಸುಖಮನೀಗೆಮಗನಿಶಂ ೪೦೦

ಮುನಿಸುವ್ರತನಂ ವಿಂಶತಿ
ಜಿನಪತಿಯಂ ಭಕ್ತಿಯಿಂದೆ ಭಾವಿಸುತ್ತಿರ್ಪೆಂ
ವಿನುತಾನೇಕಾಂತ ಶ್ರೀ
ಗಿನನಂ ಮುನಿಸುವ್ರತಾದಿವಂದಿತಪದನಂ ೪೦೧

ನಮಿಜಿನರಾಜನನರ್ಚಿಪೆ
ನಮಳಗುಣಾಕರನನೇಕವಿಂಶತಿತಮನಂ
ಸಮವಸರಣಾದಿ ವಿಭವನ
ನಮಮ ಮಹಾದುರಿತತಿಮಿರಭಾಸ್ಕರಕರನಂ ೪೦೨

ನೇಮಿನಾಥಂ ದಯಾರಥ
ನೇಮಿ ದ್ವಾವಿಂಶತೀರ್ಥಕರನಖಿಳಜಗ
ತ್ಸ್ವಾಮಿ ನಮಗೀಗೆ ಸುಖಮಂ
ಕಾಮಿತಮಂ ಕಾಮಿತಾಮರಸವನಸೋಮಂ ೪೦೩

ವರ ವಿಜಯಪಾರ್ಶ್ವಜಿನನಂ
ಪರಮನನಿಪ್ಪತ್ತಮೂಱನೆಯ ತೀರ್ಥಾಧೀ
ಶ್ವರನಂ ಪರಿಪೂಜಿಸುವೆಂ
ಶರಣಾಗತಸಕಳಭವ್ಯರಕ್ಷಾಮಣಿಯಂ ೪೦೪

ಶ್ರೀವರ್ಧಮಾನಜಿನಪನ
ನಾವಗಮಿಪ್ಪತ್ತನಾಲ್ಕನೆಯ ಪರಮಾರ್ಹ
ದ್ದೇವನನಾರಾಧಿಸುವೆಂ
ಕೈವಲ್ಯಸುಖಪ್ರದಾಯಕನನತಿಮುದದಿಂ ೪೦೫

ವರಕೈಳಾಸದೊಳಾದಿನಾಥಜಿನಪಂ ಚಂಪಾಪುರೀಸ್ಥಾನದೊಳ್
ಪರಮಶ್ರೀಯುತವಾಸುಪೂಜ್ಯಜಿನಪಂ ತಳ್ತೂರ್ಜಯಂತಾದ್ರಿಯೊಳ್
ಸುರರಾಜಾರ್ಚಿತ ನೇಮಿನಾಥಜಿನಪಂ ಪಾವಾಪುರೀಸ್ಥಾನದೊಳ್
ಕರುಣಾವಾರಿಧಿ ವರ್ಧಮಾನಜಿನಪಂ ಗೆಲ್ದಿಕ್ಕಿದರ್ ಕರ್ಮಮಂ ೪೦೬

ಉಳಿದಿಪ್ಪತ್ತುಜಿನೇಶ್ವರರ್ ತಡೆಯದೀ ಸಮ್ಮೇದಶೈಲಾಗ್ರದೊಳ್
ಖಳಕರ್ಮಕ್ಷಯಮಂ ವಿನಿರ್ಮಿಸಿ ಮಹಾಮೋಕ್ಷಕ್ಕೆ ಸಂದಿರ್ದವರ್

ನಲವಿಂದಂ ಸಲುತಿರ್ದವರ್ ಸಲೆ ಸಲಲ್ವೇಡಿರ್ದವರ್ ಕೂಡೆ ನಿ
ರ್ಮಳರೂಪರ್ ನಮಗೀಗೆ ಕೂರ್ತು ವಿಜಯಶ್ರೀಯಂ ನಿಜಶ್ರೀಯುಮಂ ೪೦೭

ಭರದಿಂದೀ ಸ್ತವನಂಗಳಂ ಪೊಗಳ್ವ ವರ್ಗಕ್ಕೈಹಿಕಾಮುತ್ರಿಕೋ
ದ್ಧುರಸೌಖ್ಯಂ ಕ್ರಮದಿಂ ವಿರಾಜಿಸುತುಮಿರ್ದಿಪ್ಪತ್ತನಾಲ್ವರ್ ಜಿನೇ
ಶ್ವರರಂ ಪೂಜಿಸಿ ನಚ್ಚಿ ಮೆಚ್ಚಿ ನುತಿಗೆಯ್ದು ಧ್ಯಾನಿಸುತ್ತಿರ್ಪ ಭವ್ಯ
ವರವರ್ಗಕ್ಕೆ ನಿರಂತರಂ ಸಮನಿಕುಂ ಭದ್ರಂ ಶುಭಂ ಮಂಗಳಂ ೪೦೮

ವಚನ : ಇಂತತ್ಯಂತಭಕ್ತಿಯಿಂ ಭೂತಳಕಾಂತಂ ವರ್ತಮಾನಚತುರ್ವಿಂಶತಿ ತೀರ್ಥಂಕರರಂ ಸ್ತುತಿಗೆಯ್ದು ವಂದಿಸಿ ಬೀಳ್ಕೊಂಡು ಬಸದಿಯಂ ಪೊಱಮಟ್ಟು ಕಿಱಿದೆಡೆಯಂ ನಡೆದುಪೋಗಿ ಬಳಿಯಂ ಸಕಳಚಾತುರ್ದಂತಬಲಮೆಲ್ಲಮಂ ಕೂಡಿಕೊಂಡು

ಸೊಕ್ಕಿದ ಪಟ್ಟವರ್ಧನಗಜೇಂದ್ರಮನೇಱಿ ನರೇಂದ್ರನಂದು ನಾ
ಲ್ದಿಕ್ಕಿನೊಳಿರ್ದು ಚಾಮರಮನಿಕ್ಕಿದುದುದ್ಧವಿಳಾಸಿನೀಜನಂ
ಪಕ್ಕದ ವಂದಿಗಳ್ ಬಿಡದೆ ಬಣ್ಣಿಸಿ ಭಾಪುರೆ ಭಾಪು ಭಾಪೆನಲ್
ಮಿಕ್ಕ ವಿಭೂತಿಯಿಂ ತಳರ್ದು ತಾಂ ನಡೆಗೊಂಡನನೂನಸೈನ್ಯಕಂ ೪೦೯

ವ: ಇಂತು ಸೂರ್ಱಡಿ ಪೆರ್ಮೆವಡೆದ ವರಧರ್ಮಭೂಪಾಲನನ್ವಯರಾಜ ಧಾನಿಯಾದ ರತ್ನಪುರಕ್ಕಭಿಮುಖನಾಗಿ

ನಾನಾಳಂಕಾರಸಾರೋಜ್ವಳಮಣಿಘೃಣಿಯಿಂದಂ ತಳೆರ್ತಂತಿರಾದಾ
ಸ್ಥಾನಂ ಚೆಲ್ವಾಗಲಾಕಾಶದ ತೆಱಪುಱಿ ಪೂತಂತಿರೊಪ್ಪಲ್ ಸಿತಚ್ಛ
ತ್ರಾನೀಕೋಲ್ಲಾಸದಿಂದಂ ಧರಣಿ ತೆಱಪಿದಿಲ್ಲೆಂಬಿನಂ ತೋಱಲೆಲ್ಲಾ
ಸೇನಾಭಾರಕ್ಕೆ ಬಂದಂ ಪುದಿಯೆ ಸಕಳಮಂ ಮಂಗಳಾತೋದ್ಯನಾದಂ ೪೧೦

ವ: ಅಂತಾ ಸೋಮಪುವಡೆದ ಸಂಪದಂಬೆರಸಿ ಬಂದು

ಥಳಥಳಿಸುತ್ತುಮಿರ್ಪ ಮಣಿತೋರಣದೋರಣೆಯಿಂದೆ ಶೋಭೆಯಂ
ತಳೆದು ಸಮಂತು ಬಾಜಿಸುವ ಬದ್ದವಣಂಗಳಿನೊಪ್ಪುವೆತ್ತು ಮಂ
ಜುಳಮನೆ ಕಟ್ಟಿದೊಳ್ಗುಡಿಗಳೋಳಿಗಳಿಂ ಪೊಳೆಯುತ್ತುಮಿರ್ಪ ಮಂ
ಗಳಮಯಮಾದ ರತ್ನಪುರಮಂ ಪುಗುತಂದನಿಳಾತಳಾಧಿಪಂ ೪೧೧

ವ: ಇಂತು ನಿಜರಾಜಧಾನಿಯಂ ಪೊಕ್ಕು ವಿಜಯವೈಜಯಂತಿಗಳ ಸಂತತಿ ತಿಂತಿಣಿಗೊಂಡು ಸಂದಣಿಸಿ ಮುಂದೆ ನಡೆಯೆ ಸೂಳುಸೂಳುವಡೆದೂದುವ ಬಿರುದಿನ ಕಹಳೆಗಳ ಬಹಳಕೋಳಾಹಳಮೇಳಾಪಕದೊಡನೊಡನೆ ಪದನಱಿದು ಸೂಳೈಸುವ ಸಮುತ್ತಾಳ

ನಿಸ್ಸಾಳ ನಿರ್ಘೋಷಣಂ ದಿಕ್ಕುಳಮಂ ಮೂವಳಸುವಳಸಲುತ್ತುಂಗ ಶೃಂಗಾರ ಭಂಗಿಯ
ನಂಗೀಕರಿಸಿದಂಗಡಿಗೇರಿಯೊಳ್ ಬರುತ್ತುಮಿರ್ಪಾಗಳ್

ಇನಿತೊಂದಾಶ್ಚರ್ಯರೂಪಂ ಬಗೆವಡೆ ಮದನಂಗುಂಟೆ ಮೇಣ್ ದೇವರಾಜಂ
ಗಿನಿತೊಂದಾಶ್ಚರ್ಯ ಸಂಪದ್ವಿಭವಮಹಿಮೆ ಪೇಳುಂಟೆ ಮೇಣ್ ಸೂರ್ಯದೇವಂ
ಗಿನಿತೊಂದಾಶ್ಚರ್ಯಮುಂ ತೇಜಃಪ್ರಸರದೆಸಕಮೇನುಂಟೆ ಪೇಳೆಂದು ತಮ್ಮೊಳ್
ಜನಮೆಲ್ಲಂ ಕೂಡೆ ಮಾತಾಡುತುಮವನಿಪನಂ ನೋಡುತಿರ್ದತ್ತದಾದಂ ೪೧೨

ವ: ಎಂದು ನುಡಿವ ಪೌರರ ನುಡಿಯನಾಲಿಸುತ್ತು ಲೀಲಾವಿನೋದದಿಂ ದಿಕ್ಕೆಲನಂ ನೋಡುತ್ತುಂ ರಾಜಮಂದಿರಮಂ ಮುಟ್ಟೆವಂದು

ರಮಣೀಯಾಕಾರ ಕಾಂತಾತತಿ ಪಿಡಿದು ಬರಲ್ ಮುಂದೆ ಸತ್ವಲ್ಲವೋಲ್ಲಾ
ಸಮನೆಯ್ದಾಂತಿರ್ದುದಂ ಕನ್ನಡಿಕಳಶಮನಾ ವೃದ್ಧರೆಲ್ಲಂ ನೃಪಾಳೋ
ತ್ತಮನಂ ಕಾಣ್ಬರ್ಥಿಯಿಂದಂದಿದಿರ್ವರಲವರಂ ನೋಡುತುಂ ನಾಡೆಯುಂ ಸಂ
ಭ್ರಮದಿಂ ಕೈಮಿಕ್ಕು ಚೆಲ್ವಂಪಡೆದರಮನೆಯಂ ಪೊಕ್ಕನುತ್ಸಾಹದಿಂದಂ ೪೧೩

ವ: ಆ ಪಿರಿಯ ಸಿರಿಗೆ ಕರುವೆನಿಸಿ ಗರಗರಿಕೆವಡೆದರಮನೆಯನರಸಂ ಪೊಕ್ಕು ರಾಜಾಂಗಣದೊಳ್ ನಿಂದು ವಿಜಯಗಜದಿಂದಿಳಿದು ಮುಗಿವ ಕೈಯಂ ನೊಸಲ್ಗೆ ತಂದರಸುಮಕ್ಕಳಂ ತಂತಮ್ಮ ನಿಳಯಕ್ಕೆ ಬೀಳ್ಕೊಟ್ಟು ಕಳಿಪಿ ಮಜ್ಜನಭೋಜನ ವ್ಯಾಪಾರಮಂ ತೀರ್ಚಿ ಸುಖದಿನಿರ್ದು

ಪೊಂಗಳಸಂಗಳಿಂ ಗಗನಮಂ ಪರಿಚುಂಬಿಸುತಿರ್ದ ಕೋಟಿಕೂ
ಟಂಗಳಿನೊಪ್ಪಮಂ ಪಡೆದ ಬೆಳ್ಳಿಯ ಮಾಟದ ಚೈತ್ಯಗೇಹಮಂ
ತುಂಗಮೆನಿಪ್ಪುದಂ ನೆಱೆಯ ಮಾಡಿಸಿದಂ ವರಧರ್ಮಭೂಮಿಪಂ
ಪಿಂಗದೆ ಮಾಡೆ ನುಣ್ಪಡಗು ದಿಕ್ಕುಗಳಂ ಪೊಱೆಯಿಟ್ಟರೆಂಬಿನಂ ೪೧೪

ಸಲೆ ನಾಲ್ವತ್ತೈದು ಚಾಪೋನ್ನತಿಮಿತನಿಯತೋತ್ಸೇಧದಿಂ ನಾಡೆಯುಂ ಕ
ಣ್ಗೊಳಿಪನ್ನಂ ಧರ್ಮನಾಥಪ್ರತಿಮೆಯನತಿಶಾಯಿ ಪ್ರಭಾಭಾರದಿಂದಂ
ಪೊಳಪೇಱುತ್ತಿರ್ಪಿನಂ ಕಾಂಚನಮಯಮನದು ಪೂರ್ವದಾಕಾರದೊಂದ
ಗ್ಗಳಮೆಂತುಂಟಂತೆ ತಾಂ ಮಾಡಿಸಿದನೆಸೆಯಲೆಂಟುಂ ಮಹಾಪ್ರಾತಿಹಾರ್ಯಂ ೪೧೫

ವ: ತದನಂತರಂ

ಕೂಡೆ ಜಗಕ್ಕೆ ಚೋಜಿಗಮನಾಗಿಸುತುಂ ಜನಮೆಲ್ಲಮೆಯ್ದೆ ಕೊಂ
ಡಾಡುವಿನಂ ಮಹಾವಿಭವದಿಂದಮೆ ಧರ್ಮಜಿನಪ್ರತಿಷ್ಠೆಯಂ

ಪಾಡಿಸಿ ಬೇಡಿವರ್ಗಿಗದೆ ಬೇಡಿತನಾಳಿತೊಪ್ಪ ದರ್ಮದಾಂ
ಪಡೆದೀಗಳ್ವಿಯಂ ಪ್ರಭುಪವಿತ್ರನಂ ಪರಧರ್ಮಭೂಭುಜಂ ೧೧೬

ವ ಅದಲ್ಲದೆಯುಂ

ಸಿರಿಯಂ ದಿಕ್ಪಾಲ ಕುಂಭಸ್ಥಳದೊಳದಿರ್ಪ ಸಿಂಧುರಾನಾಶ್ರಯಂ
ಪಡೆದಂಬಂತೊಪ್ಪುವತ್ತಾತನ ಪದಪಂಕ್ಕೇರುಹದೊಂದೆಸಳ್ದಿರ್ಪ ದಿ
ಕ್ಪಾ ಸಾರ್ವಾಂಗಂಗಳೊಳ್ ಪೂಸಿದ ಪೊಸಪೊಸರ್ವ್ಯ ಸಿದಂತಂತೆ ಬೆಳ್ದ
ದಿಂಚತ್ತುರ್ವರ್ತ್ತ ಮತ್ತಾತನ ನೆಗೞ್ದಿರ್ದ ಕೀರ್ತಿಪ್ರಭಾವಂ ೧೧೭

ವ ಆ ಕಾಲದೊಳ್

ಜನಪನಿತುಂ ನಿರಂತರ ಸಮಸ್ತಜನಾನುಭವಂಗಳಿಂದೆ ತ
ನ್ನನೆ ತಣಿದೆಯ್ದೆ ತಂಗಲೆಂಜಿ ಪ್ರಜಾಪಾಲಿಸಿ ಬಾಳ್ವನು ಮಹಾ
ಜನಿತಳನಾಪ್ತಮೆಲ್ಲಮನಿದಾ ಪ್ರತಿಪಾಳಿಸುವ ಸದ್ಧರ್ಮದಿಂ
ವಿನುತ ಕಳಾಧಿಪಂ ನೆಗಳ್ಚಿದಂ ಪರಧರ್ಮಭೂಮಿಪಂ ೧೧೮

ವ ಇಂತಪಳಿರಾಜಿತ ರಾಜನ್ಯಂ ಮಾನ್ಯನುಂ ವದಾನ್ಯತಾವಿಭವಸಂಪನ್ನನುಂ ಧನ್ಯನುಂ ಧರ್ಮನಾಥಮಹಾರಾಜತನೂಜನುಮೆನಿಪ ಪರಧರ್ಮನೆಂಬ ಮಹಾರಾಜನ್ಯಂ ದುಷ್ಟನಿಗ್ರಹಶಿಷ್ಟಪ್ರತಿಪಾಲನಾಪೂರ್ವಕಮಾಗಿ ಸಕಲಸಂಭಾವನೆಯಿಂ ಸಾಮ್ರಾಜ್ಯ, ಮಹಾಲಕ್ಷ್ಮಿಯಿರ್ದಂ

ನವರಸಯುಕ್ತಮಂ ಸುಜನಸೇವ್ಯಮನಾಮುದಿತ ಪ್ರಭಾವ್ಯಮಂ
ಸಿವಿಜನಭಾವ್ಯಮಂ ಪರಮಧರ್ಮಜನೇಶ್ವರ ಚರಿತಾವ್ಯಮಂ
ತವೆಯದ ಭಕ್ತಿಯಿಂ ನೆಱೆಯೆ ಮಾಡಿ ಸಮುದ್ಘಕೀರ್ತಿಯಿಂ ಸಮಂ
ತವನಿಯೊಳೆಯ್ದೆ ಬಾಹುಬಲಿಪಂಡಿತದೇವನಿದಂ ನಿಮಿರ್ಚಿದಂ ೧೧೯

ಈ ಕಲಿಕಾಲದಲ್ಲಿ ಬುಧಸಂತತಿ ಮೆಚ್ಚೆ ಪೊಗಳ್ವಿನಂ ದಸೋ
ದ್ದೇಶದೊಳೊಂದಿ ಧರ್ಮಜಿನನಾಥಪುರಾಣಮನೊಲ್ದು ಪೇಳ್ದ ಶ
ಕ್ತ್ಯತಿಶಯ ಬಾಹುಬಲಿಪಂಡಿತದೇವನವೋಲ್ ಸುವಿದ್ಯರು
ಲೋಕದೊಳಾವನೋ ನೆಱೆಯೆ ನೋಂತವನಾನ್ಯತಪೋನ್ಯದೇಶ್ಯರು ೧೨೦

ವಾಗರ್ಥತ್ರಯದಿಂ ವಿರಾಜಿಸುವ ಗಂಭೀರಂ ಪದಾರ್ಥ ಶ್ರೀ
ಪಾದಮಾದುತ್ತಮಧರ್ಮನಾಥ ಚರಿತಾಂಭೋರಾಶಿಯಂ ಭಕ್ತಿಭಾ
ರದಾಯಿಬುದ್ಧಿಸ್ಥಿತಿಯೆಂಬ ಬೆಳ್ಪಡೆಗಿಂದಂ ಪಾಂಚಿ ಪೋದಂ ಸಮು
ದ್ಯದ್ವಾ ಸಾಯಾತ್ರಿಕನೆಂಬಿನಂ ಭುಜಬಳಿಪ್ರಖ್ಯಾತ ಯೋಗೀಶ್ವರಂ ೧೨೧

ಪರಮಾರ್ಥಭಾವಮಂ ಪಡೆ
ದುರುಸುಖದಿಂದಿರ್ದನೆಲ್ಲರುಂ ಪೊಗಳ್ವನ್ನಂ
ಪಿರಿದುಂ ವಿವೇಕಿಯೆನಿಪಂ
ವರವಸ್ತುಪರೀಕ್ಷೆಯುಳ್ಳ ಭಾವಕಮುಖ್ಯಂ ೪೨೨

ಅಸಹಾಯನಾಗಿ ಮಾಡಿದ
ನಸದೃಶಮೆನಿಪೀ ಪ್ರಬಂಧಮಂ ಭುಜಬಳಿಮುನಿ
ಯಸಹಾಯನಾಗಿ ನಿಶ್ಶ್ರೇ
ಯಸಮಂ ಜಿನನೆಂತು ಮಾಡದಂ ನಿಜವಸಮಂ ೪೨೩

ಈ ಕೃತಿಯೊಳ್ ಜಿನಾಗಮರಹಸ್ಯಮನೆಯ್ದುಸಿರ್ವಲ್ಲಿ ಕೇಳನ
ಸ್ತೋಕಸುಖಾಸ್ತ್ರಿಪಿದ್ಗುರುಗಳಂ ಪರತತ್ತ್ವವಿಭೇದ ಸಂಸ್ಥಿತ
ಪ್ರಾಕಟದಲ್ಲಿ ಪ್ರಜ್ಞಜನಮಂ ಬೆಸಗೊಳ್ಳದ ಬಲ್ಪನೇಳ್ಗ್ಗಿಂ
ತಾಕರಮಾಗಿ ಬಾಹುಬಲಿದೇವನದೇನಸಹಾಯನಲ್ಲನೇ ೪೨೪

ವಿಕಸಿತಪಂಕಜಂ ಸುಳಿವ ತೆಂಕಣ ತೆಂಬಲರಿಂಬು ಪೂರ್ಣಚಂ
ದ್ರಕಳೆ ನಿತಂಬಿನೀಪಿಕ್ಕೃತಿಭಾವಮಲರ್ಚಿಸಲಾರ್ಪುದೇ ಮಹಾ
ಧಿಕ ಕವಿಚಕ್ರವರ್ತಿಯ ಚಮತ್ಕೃತಕಾವ್ಯರಸಂ ಸಮಸ್ತ ಭಾ
ವಕಜನದಂತರಂಗಮನಲರ್ಚಿಸಿ ರಾಗದೆ ರಂಜಿಪಂದದಿಂ ೪೨೫

ಶ್ರವಣಾನಂದದ ಪದ್ಯಮಂ ಪ್ರಿಯನೆನಿಪ್ಪಾವಂಗೆ ಪೇಳ್ವಂ ಸಮಂ
ತವನತ್ಯುನ್ನತ ಸಂಪದಂಬೆರಸಿ ಬಾಳ್ಗುಂ ಖ್ಯಾತನಾಗಿರ್ಕುಮಿಂ
ತವನೀಚಕ್ರದೊಳೆಯ್ದೆ ರೂಢಿವಡೆದೊಪ್ಪುತ್ತಿರ್ದುದಾಶ್ಚರ್ಯದಿಂ
ದವೆ ರಾಜತ್ಕವಿಚಕ್ರಿಯೊಂದಮೃತವಾಣಿತ್ವಂತು ಲೋಕೋತ್ತರಂ ೪೨೬

ವರ ಸಮ್ಯಕ್ತ್ವಪ್ರಭಾವಸ್ಫುರಣದೊಳಧಿಚೂಡಾಮಣಿ ಪ್ರೀತವಿದ್ವ
ತ್ಪರಿಷತ್ಸದ್ಗೋಷ್ಠಿಯೊಳ್ ಭಾಳತಳನಯನಕಂ ಲೇಸನೊಂದಲ್ಲದೇನಂ
ಪರರೊಳ್ ಮಾತಾಡದಿಪ್ಪುತ್ತಮಗುಣನಿಳಯಂ ಭಾಪು ಸಾಮರ್ಥ್ಯಮಂ ಪೀ
ವರಮಂ ತಾಳ್ದಿರ್ದ ವಿಖ್ಯಾತಿಯನು ಜೀ ಪಡೆದಂ ಚಾತುರೀಜನ್ಮಗೇಹಂ ೪೨೭

ಬಲ್ಲವರೆಲ್ಲರುಂ ನೆರೆದು ಮಾನಸವೆಂಬೊರೆಗಲ್ಲ ಮೇಲೆ ಕೀ
ಳಲ್ಲದ ಮಾಳ್ಕೆಯಿಂದೊರೆದುನೋಡಿ ಪರೀಕ್ಷಿಸಿ ತಿದ್ದಿಕೊಟ್ಟ ಕುಂ
ದಿಲ್ಲದ ಮೌಕ್ತಿಕಸ್ಥಿತಿಯಿನೊಪ್ಪುವ ಕಾವ್ಯಸುವರ್ಣಮಾವಗಂ
ಪ್ರೋಲ್ಲಸಿತಾತಿ ಚಿತ್ರರಚನಂ ಶ್ರವಣಕ್ಕೆರಡಕ್ಕೆ ಭೂಷಣಂ ೪೨೮

ಪೊಳೆಯುತ್ತುಮಿರ್ದುದೆನ್ನೀ
ವಿಳಸತ್ಕೃತಿಯಲ್ಲಿ ಷೋಡಶಾಶ್ವಾಸಂಗಳ್
ತೊಳಗುವ ಷೋಡಶಭಾವನೆ
ಗಳವೆಂತೊಪ್ಪುತ್ತುಮಿರ್ದವಾ ಜಿನಪತಿಯೊಳ್ ೪೨೯

ವಿಪುಳಪ್ರೌಢಪದಂಗಳಿಂ ಮೆಱೆದು ಚಿತ್ರಾರ್ಥಂಗಳಿಂದೊಂದಿ ಮ
ತ್ತುಪಮಾತೀತ ನವೀನಭಾವರಸದಿಂ ಚೆಲ್ವಾಗಿ ವಿದ್ಯಾಪ್ರಭಾ
ವಪರಂ ಬಾಹುಬಲಿವ್ರತೀಶನೊಲವಿಂದಂ ಪೇಳ್ದ ಸದ್ಧರ್ಮನಾ
ಥಪುರಾಣಂ ನೆಲೆಗೊಂಡು ನಿಲ್ಕೆ ಜಗದೊಳ್ ಚಂದ್ರಾರ್ಕತಾರಂಬರಂ ೪೩೦

ಮನಮೊಲ್ದೋದುವ ಪೇಳ್ವ ಕೇಳ್ವ ಪುಳಕಂ ಮೆಯ್ದೋರ್ಪಿನಂ ಮೆಚ್ಚಿ ಲಾ
ಲನಮಂ ಮಾಳ್ಪ ಸಮಸ್ತಭವ್ಯನಿವಹಕ್ಕಂ ಧರ್ಮನಾಥಾಹ್ವಯಂ
ಜಿನನೀ ಸತ್ಕೃತಿನಾಯಕಂ ಪರಮಮುಕ್ತಿಶ್ರೀಮನೋವಲ್ಲಭಂ
ಘನಕಾರುಣ್ಯದಿ ಮಾಳ್ಕೆ ಮಂಗಳಮಹಾಶ್ರೀಯಂ ಯಶಶ್ರೀಯುಮಂ ೪೩೧

ಸ್ವಸ್ತಿಶ್ರೀ ಶಕವತ್ಸರಂ ಸಲೆ ಚತುಸ್ಸಪ್ತದ್ವಯೈಕಾಂಕವಿ
ನ್ಯಸ್ತಂ ನಂದನವರ್ಷದಲ್ಲಿ ಮಧುಮಾಸ ಶ್ವೇತಪಕ್ಷಾಷ್ಟಮಿ
ವಿಸ್ತಾರೀಕೃತ ಸೋಮವಾರದೊಳಿದಂ ಸಂಪೂರ್ಣಮಂ ಮಾಡಿದಂ
ಪ್ರಸ್ತುತ್ಯಂ ಪ್ರತಿಭಾಪರಂ ಭುಜಬಲಿಪ್ರಖ್ಯಾತಯೋಗೀಶ್ವರಂ ೪೩೨

ಪಿರಿದುಂ ಸಂತೋಷಮಂ ತಾಳ್ದಿದನತಿಶಯವತ್ಕಾವ್ಯಮಂ ಮಾಡಿ ತೇಜ
ಸ್ಫುರಣಂ ವಿದ್ಯಾಸಮುದ್ರಾಮೃತಮಯಕಿರಣಂ ವಂದಿಮಂದಾರರೂಪಂ
ಸ್ಮರರೂಪಂ ನೀರಜಂ ಬಾಹುಬಲಿಸುಕವಿರಾಜಂ ವಿಪಶ್ಚಿತ್ಸಹಾಯಂ
ಧರಣೇಶೋಲ್ಲಾಲನೀಯಂ ಘನಗುಣನಿಲಯಂ ಚಾತುರೀಜನ್ಮಗೇಹಂ ೪೩೩

ಗದ್ಯ: ಇದು ಸಕಳಭುವನಜನವಿನೂಯಮಾನ ಮಹಿಮಾಮಾನನೀಯ ಪರಮಜಿನ ಸಮಯ ಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿದೇವಪ್ರಸಾದ ಸಂಪಾದಪಾದನಿಧಾನ ದೀಪವರ್ತಿಯುಭಯಭಾಷಾಕವಿಚಕ್ರವರ್ತಿ ಬಾಹುಬಲಿಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಧರ್ಮತೀರ್ಥಕರ ನಿರ್ವಾಣಗಮನ ಪರಿವ್ಯಾವರ್ಣನಂ ಷೋಡಶಾಶ್ವಾಸಂ.

ಮಧುರ ಕವಿ ವಿರಚಿತ

ಧರ್ಮನಾಥ ಪುರಾಣಂ

ಪ್ರಥಮಾಶ್ವಾಸಂ

ಶ್ರೀಭಾಸ್ವದ್ಬಿಂಬಮೆಂಬಂತುದಯಿಸಿ ದಶಧರ್ಮಕ್ಕಡರ್ಪಾದ ತೇಜೋ
ಭಾಭಾಸ್ವದ್ಧರ್ಮಚಕ್ರಂ ಸಮನಿಸೆ ಸುಮನೋಧರ್ಮನಂ ಧರ್ಮನಂ ಧಾ
ತ್ರೀಭಾಗಂ ಜಾಗೆನಲ್ ಚಾಳಿಸಿ ಚತುರತೆಯಿಂ ಗೆಲ್ದ ಕೈವಲ್ಯಲಕ್ಷ್ಮೀ
ಲಾಭಾಯತ್ತಾತ್ಮಧರ್ಮಂ ಸಲಹುಗೆ ಸಲೆ ಸದ್ಧರ್ಮಮಂ ಧರ್ಮನಾಥಂ ೧

ಕಲುಷಂಗಳ್ ಪಿಂಗಿರಲ್ ಕಾಳಿಕೆಗಳೆದ ಸವರ್ಣಂಬೊಲಿಂಬಾದ ನಿತ್ಯೋ
ಜ್ವಲಚೈತನ್ಯಂ ನಿಜಾಕಾರದಿನೆಸೆವ ನಿರಾಕಾರಮಾತ್ಯಂತಿಕ ಶ್ರೀ
ಲಲನಾಲೀಲಾವತಂಸಂ ಸಮುಪಕಲಿತ ಕೈವಲ್ಯಮಾಂಗಲ್ಯಮೆಮ್ಮೊಳ್
ನೆಲೆಗೊಳ್ಗೀರಂದದಿಂ ತೀರದ ಶಿವಸುಖಮಂ ಸಾರ್ದ ಸಿದ್ಧಸ್ವರೂಪರ್ ೨

ಸೂಚೀನಿರ್ಭೇದ್ಯಮಾಗಿರ್ದಗಣಿತ ಭವಮಿಥ್ಯಾತ್ವಮಂ ತೂಳ್ದಿ ಸಂದೈ
ದಾಚಾರಂ ಸದ್ಗುಣಂಗಳ್ ತಮಗಮರ್ದಿರೆ ಭವ್ಯಾಳಿಗವ್ಯಾಜದಿಂ ಶಿ
ಕ್ಷಾಚಾತುರ್ಯೋಕ್ತಿಯಂ ಕೆಯ್ಕೊಳಿಸಿ ಜಿನಮತಸ್ಫೂರ್ತಿಯೊಳ್ ಕೀರ್ತಿವೆತ್ತಿ
ರ್ದಾಚಾರ್ಯರ್ ಸಮ್ಯಗಾಚಾರಮನೊದವಿಸುಗೆಮ್ಮೊಳ್ ಮನಃಪ್ರೀತಿಯಿಂದಂ ೩

ಮಧ್ಯಸ್ಥೀಭಾವದಿಂ ಮಚ್ಚರಮನುಳಿದು ಕೇಳ್ವಂದದಿಂ ಸರ್ವಲೋಕಾ
ರಾಧ್ಯಂ ಸಿದ್ಧಂ ವಿಶುದ್ಧಂ ಜಿನಮತಮೆನಿಪೊಂದಂದದಿಂ ಕೂರ್ಮೆಯಿಂ ಧ
ರ್ಮಧ್ಯಾನಂ ಸಲ್ವವೋಲ್ ಚೆಲ್ವಳವಡೆ ನಿಜಶಿಷ್ಯರ್ಗೆ ಮುಂ ಪೇಳ್ದ ಜೈನೋ
ಪಾಧ್ಯಾಯರ್ ಪ್ರೌಢಿಯಿಂ ಚೋದಿಸುಗೆಮಗನವದ್ಯಶ್ರುತಶ್ರೀಯ ಕೂರ್ಪಂ ೪

ನೆಗಳ್ದುದ್ದಂಡದ ಪುಷ್ಪಕಾಂಡನಲರಂಬಂ ನೆರ್ಗಿ ಕೋದಂಡಮಂ
ತೆಗೆದಾರ್ಪಿಂ ಮುಱಿದಿಕ್ಕಿ ಗಾಢ ಗುಣದಿಂದಂ ತೋಳ್ಗಳಂ ಕಟ್ಟಿ ರ
ಚ್ಚೆಗೆ ತಂದುಬ್ಬಟೆಯಿಂದೆ ದೂಱುವಡೆದಿರ್ದುಂ ಮತ್ತಿನರ್ ಸರ್ವಸಾ
ಧುಗಳೆಂತಾದರೆನಿಪ್ಪವರ್ ಕಿಡಿಸುಗೆಮ್ಮನೋವಿತಾನಂಗಳಂ ೫

ಗುರುಪದಮೆಮಗರ್ಹತ್ವದ
ಮುರುಸಿದ್ಧಪದಂ ಪ್ರಸಿದ್ಧದಾಚಾರ್ಯಪದಂ

ಪರಮೋಪಾಧ್ಯಾಯಪದಂ
ವರಸಾಧುಪದಂ ಪದಂಗಳೊಳ್ ಮಂಗಳದಂ ೬

ಗುಜ್ಜುಗುಱುಕಿಲ್ಲದೆನಸುಂ
ಪಜ್ಜಳಿಸಿರೆ ದಿಟ್ಟಿ ನಿಟ್ಟೆಯಿಂ ಮುಕ್ತಿಪದ
ಕ್ಕುಜ್ಜುಗಿಸಿ ಪಂಚಗುರುಗಳ
ಪಜ್ಜೆಗಳಂ ಪಿಡಿದು ನಡೆದವಂಗರಿದುಂಟೇ ೭

ಮಿಸುನಿಯ ಬಣ್ಣಮಂ ಮಿಗುವ ಮೆಯ್ವೆಳಗಿಂದುಚಿತಾಯುಧಂ ವಿಜೃಂ
ಭಿಸಲೆಸೆವೆಂಟು ತೋಳ್ತೊಳಪ ಯಕ್ಷಿ ಮನೋಮುದದಿಂ ಮದೀಯ ಮಾ
ನಸ ಬಿಸಜಾತದೊಳ್ ನೆಲಸಿ ತಾನಸಿತಾಂಬುಜಾಕ್ಷಿ ಕೂ
ರಿಸುಗೆ ಕುತರ್ಕನೋದೆ ಕುಲಿಶಾನನೆ ಶಾಸನಮಂ ಜಿನೇಂದ್ರನಾ ೮

ಮಸಕಂಬೆತ್ತ ಮತಿಪ್ರಕಾಶಮನಲಂಪಿಂದಿತ್ತು ಮತ್ತಾವ ದು
ರ್ವ್ಯಸನಂಗಳ್ ಪುಗದಂತೆ ಪೂಣ್ದು ಪುದುವಂದೇಕಾಂಗದಿಂ ತಾನೆ ಮಾ
ನಸದೊಳ್ ನಿಂದು ಜಿತಾರಿಪಕ್ಷನದಟಿಂ ಯಕ್ಷೋತ್ತಮಂ ಕೂರ್ತು ರ
ಕ್ಷಿಸುಗೋರಂತೆ ಜಿನೇಂದ್ರಶಾಸನವಚಸ್ಸಂಪನ್ನರಂ ಕಿನ್ನರಂ ೯

ಪರಮ ದಯಾರಸಂ ಪೊರೆಯೆ ಪೊಂಗಿ ಮಡಲ್ತೆಸೆವಂಗಯಷ್ಟಿ ಸುಂ
ದರಮೆನೆ ಸಂದನೇಕ ನಯಶಾಖೆ ಮಸಂಗೊಳೆ ಸಪ್ತಭಂಗಿ ಭಾ
ಸುರಕುಸುಮಂ ಜಸಂಬಡೆಯೆ ಜೈನಮುಖಾವನಿಜಂ ಸರಸ್ವತೀ
ಸುರಲತೆ ಮಾಡುಗಿಷ್ಟಫಲಮಂ ನಿರಪಾಯಮೆನಲ್ ವಿನೇಯರಾ ೧೦

ಮಿಗೆ ಮುಕ್ತಾಮಯಮಾಗಿಯುಂ ಜಡಧಿಯೊಳ್ ಮೆಯ್ದೋಱದಚ್ಛಿದ್ರಮಾ
ಗಿ ಗುಣಂಗಳ್ಗಿಡೆಗೊಟ್ಟು ತನ್ನನೆರ್ದೆಯೊಳ್ ಚೆನ್ನಾಗೆ ತಾಳ್ದಿರ್ದ ಸಾ
ಧುಗಳಂ ನಾಡೆ ವಿರೂಪರೆಂದೆನಿಸಿ ಮತ್ತಂ ಮುಕ್ತಿ ಕೂರ್ಪಂತೆ ಮಾ
ಡುಗುಮೆಂದೆಂದೆ ಮಹತ್ವಮೇಂ ಬಹಳಮೋ ರತ್ನತ್ರಯಾಕಲ್ಪದಾ ೧೧

ಪರಮಬ್ರಹ್ಮಸಮುದ್ಭವಂ ವಿಗತದಂಡಂ ವೀತರಾಗಾತ್ಮಕಂ
ವಿರಜಸ್ಕಂ ದ್ವಿಜರಾಜಪೂಜ್ಯನಮಲಂ ನಿಷ್ಕಂಟಕಂ ತಾನೆನಲ್
ಪಿರಿದುಂ ಧಾತ್ರಿಗೆ ಚಿತ್ರಮಾದ ಪದಪಿಂ ಮೆಯ್ವೆತ್ತ ಜೈನಾಗಮಾಂ
ಬುರುಹಂ ಮಾಳ್ಕೆ ಮನೋನುರಾಗದೊದವಂ ಭವ್ಯಾಳಿಗವ್ಯಾಕುಳಂ ೧೨

ರುತುವಾಱು ಬೇಱೆ ಮೆಯ್ದೋಱಲೆಸೆವ ವಸಂತಾಗಮಕ್ಕಲ್ಲದುತ್ಕಂ
ಠತೆಯಿಂದಂ ರಾಗಮಂ ಕೋಗಿಲೆ ರಚಿಯಿಸದೆಂತಂತೆ ಷಡ್ದರ್ಶನಂ ಸಂ

ತತಮೊಪ್ಪಂಬೆತ್ತು ತಾಮಿರ್ದೊಡಮಮಲಿನ ಜೈನಾಗಮಕ್ಕಲ್ಲದೆಂದುಂ
ಮತಿದಾರಂ ಭವ್ಯನವ್ಯಾಕುಳಮವೆನೆನಲೇನಾರ್ಮಮೋ ಜೈನಧರ್ಮಂ ೧೩

ಮಾಣೆನ್ನಾವುದುಮೇವುದುದ್ಭವಕರಂ ಗರ್ಭಾವತಾರಾದಿ ನಿ
ರ್ವಾಣಾಂತಂ ತವದೇಳ್ಗೆವೆತ್ತ ಮಹಿಮಾಲೋಕಂ ತ್ರಿಲೋಕೀಜನ
ಶ್ರೇಣೀ ನಿರ್ಮಿತ ನಿತ್ಯ ವೈಭವ ವಿಲಾಸೋದಂಚಿತಂ ಪಂಚಕ
ಲ್ಯಾಣಂ ಮಾಳ್ಕೆ ಕಳಾವಿಳಾಸ ವಿಳಸತ್ಕಾವ್ಯಕ್ಕೆ ಕಲ್ಯಾಣಮಂ ೧೪

ಶ್ರೀ ಜಿನಪತಿಯ ಜಗತ್ರಯ
ಪೂಜಿತಮೆನಲೊಪ್ಪುವಾತಪತ್ರತ್ರಯಮಂ
ಪೂಜಿಸಿ ನೆಗಳ್ದ ಮಹಾಕವಿ
ರಾಜಂಗರಿದಾಯ್ತೆ ಧರೆಯೊಳೇಕಚ್ಛತ್ರಂ ೧೫

ತೊಳಗುವನುಬದ್ಧಕೇವಲಿ
ಗಳೆನಿಪ ಗೌತಮ ಸುಧರ್ಮ ಜಂಬೂಗಣಭೃ
ತ್ತಿಳಕರ ಚಳನನಖದ್ಯುತಿ
ತಿಳಕಿಸುಗೋರಂತೆ ಭವ್ಯಭಾಳಸ್ಥಳಮಂ ೧೬

ಕೇವಳಿಗಳಿವರಿವರ್ ಶ್ರುತ
ಕೇವಳಿಗಳೆನಿಪ್ಪ ಭೇದಮಿಲ್ಲೆನೆ ನೆಗಳ್ದರ್
ಭಾವಿಸೆ ನಂದ್ಯಪರಾಜಿತ
ಗೋವರ್ಧನ ಭದ್ರಬಾಹು ವಿಷ್ಣುಪ್ರಮುಖರ್ ೧೭

ಪತ್ತುಂ ಪೂರ್ವಮನುನ್ನತಿ
ವೆತ್ತಸೆವೇಕಾದಶಾಂಗಮಂ ಧರಿಯಿಸೆ ಲೋ
ಕೋತ್ತಮರೆನಿಸಿದ ಸೂರಿಗ
ಳಿತ್ತೆಮಗೊದವಿಸುಗೆ ವಿಶ್ರುತಶ್ರುತದಜೀವಂ ೧೮

ಭೂತಬಲಿ ಪುಷ್ಪದಂತರ್
ಮಾತೇಂ ಪರಮಪ್ರಸಾದರುಚಿಯಿಂ ತ್ರಿಜಗ
ತ್ಪ್ರೀತಿಯನಾಶಾಂಬರ ವಿ
ಖ್ಯಾತಿಯನಾಗಿಪುದು ಪೊಸತೆ ವಸುಧಾತಳದೊಳ್ ೧೯

ಜಿನಸೇನ ವೀರಸೇನರ
ನನುಕೂಲಮರ್ಮಾಡಿ ನಡೆವವಂಗತಿಭಯದಿಂ

ಮನವಗಿದರಿವಾದಿ ಬಲಂ
ಮೊನೆಯೊಳ್ ಜಗುಳ್ದೊಡದಿದಿರೊಳೇಂ ನಿಂದಪುದೇ ೨೦

ಭಜಿಯಿಪೆನೆನ್ನ ಸತ್ಕೃತಿಗೆ ಸತ್ಕೃತಿ ಸಾಧನಮೆಂದು ನಾಂದಿಯೊಳ್
ನಿಜಕವಿತಾನುಕೂಲ ಗುಣಭದ್ರನನೆಮ್ಮ ಸಮಂತಭದ್ರನಂ
ವಿಜಿತ ವಿರೋಧಿ ವಾದಿಕುಲದೇವನನೊಲ್ದಕಳಂಕದೇವನಂ
ಸುಜನಮನಃಪ್ರಸಾದಕರಪಾದನನಗ್ಗದಪೂಜ್ಯಪಾದನಂ ೨೧

ಮಲಮೊಗೆಯದು ಮದ ಮಧುಕರ
ಕುಲಪರಿಚಯಮೊಂದದಾವ ಕಂಟಕಮಿಲ್ಲೆಂ
ದಲಸದೆ ಮನ್ಮತಿ ಗೋಮಿನಿ
ನೆಲಸುಗೆ ಗುಣಭದ್ರಪದಪಯೋಜಾಸನದೊಳ್ ೨೨

ಮುಟ್ಟದ ನೆಜೆ ನಾಲ್ವೆರಲಂ
ಬಿಟ್ಟಿಳೆಯಂ ನಡೆವ ಕುಂಡಕುಂದಾಚಾರ್ಯರ್
ನೆಟ್ಟನೆ ಹೃದಯದೊಳಿರಲೇಂ
ಪುಟ್ಟುಗುಮೆ ವಿನಯರೊಳ್ ಕುಮಾರ್ಗಾಚರಣಂ ೨೩

ಭುವನನುತಶ್ರುತದೇವಿಯ
ನವಯವದಿಂದೊಲಿಸಿ ಮತ್ತೆ ಮೊಜೆಗಿಡರಿವರೆಂ
ಬ ವಿಶುದ್ಧಕೀರ್ತಿ ಬವರಿಪ
ಕವಿಪರಮೇಷ್ಠಿಗಳ ಕರುಣಮೆಮಗಾಭರಣಂ ೨೪

ಪೋಷಿಸುಗೆಮ್ಮಂ ಸಲೆ ನಿ
ರ್ದೋಷಿ ಬಲಾತ್ಕಾರಗಣ ಗರಿಷ್ಠರ್ ಕರುಣಾ
ಭಾಷಣರಮಳಿನ ಜಿನಮತ
ಭೂಷಣರೆನೆ ನೆಗೆಳ್ದ ಧರ್ಮಭೂಷಣದೇವರ್ ೨೫

ಗುಣಗಣಮುಗ್ರಸಂಯಮ ವಿಭೂಷಣ ಮುಕ್ತಿ ವಿದಗ್ಧ ಕರ್ಣಭೂ
ಷಣಮುರುಕೀರ್ತಿ ದಿಗ್ವಿವರಭೂಷಣಮಾತ್ಮನುತಂ ದಯಾವಿಭೂ
ಷಣಮಮಲಾಂಘ್ರಿ ಭವ್ಯಜನ ಬಾಳವಿಭೂಷಣಮಾದ ಧರ್ಮಭೂ
ಷಣಯತಿ ಚಕ್ರವರ್ತಿಯ ಚರಿತ್ರಮೆ ಭೂಭುವನೈಕಭೂಷಣಂ ೨೬

ಆ ಸಕಲಾವನಿಪತಿ ಚೂ
ಡಾಸೇವಿತ ಚರಣ ಧರ್ಮಭೂಷಣಗುರು ಸಿಂ

ಹಾಸನಮನೆಸಗಿದಂ ಜಿನ
ಶಾಸನವರ್ಧನ ದೇವ ವರ್ಧಮಾನಮುನೀಂದ್ರಂ ೨೭

ಜಿನಧರ್ಮಂ ವರ್ಧಮಾನಂ ಗುಣಗಣಮನಿತುಂ ವರ್ಧಮಾನಂ ತಪಸ್ಸಾ
ಧನ ಧೈರ್ಯಂ ವರ್ಧಮಾನಂ ನಿಯಮವಿಧಿ ಸದಾ ವರ್ಧಮಾನಂ ಸುವಿದ್ಯಾ
ಧನಮೆಂದುಂ ವರ್ಧಮಾನಂ ತ್ರಿಜಗದೊಳದಱಿಂ ವರ್ಧಮಾನಾಭಿಧಾನಂ
ತನಗೇಕಚ್ಛತ್ರಮಾದುನ್ನತಿಯೊಳೆ ನೆಗಳ್ದಾ ವರ್ಧಮಾನವ್ರತೀಂದ್ರಂ ೨೮

ಸುಮನೋಮಾರ್ಗಣನೆಂದು ಮನ್ನಿಸದೆ ಮುನ್ನಂ ತನ್ನ ಮೆಯ್ಯುಗ್ಗಿದಿದ
ಕ್ಷಮನೆಂದೀಕ್ಷಿಸಿದಂಗಜನ್ಮನಿವನೆಂದಾರಯ್ಯದಾ ಕಾಮನಂ
ಸಮಸಂದುಗ್ರತಪೋಗ್ನಿಯಂ ಮರಳಿ ಪುಟ್ಟಲ್ಲೆಂಬಿನಂ ಸುಟ್ಟು ಸಂ
ಯಮಿಭಟ್ಟಾರಕ ವರ್ಧಮಾನಮುನಿಚಂದ್ರಂ ಶಾಂತನೆಂತಾದನೋ ೨೯

ಮಾಸಕ್ಕೋರೊರ್ಮೆ ಪಾಲೊರ್ಕುಡಿತೆಯನೊಲವಿಂ ಕೊಂಡು ಸಮ್ಯಕ್ತಪಃಪ್ರಾ
ಯಾಸಕ್ಕೋರಂದದಿಂದೊಪ್ಪಿಸಿ ನಿಜತನುವಂ ಶೀತವಾತಾತಪಾದಿ
ವ್ಯಾಸಂಗಳ್ಕಳ್ಕದಱಿಂತನುಪಮ ಘನನಿಶ್ರೇಯಸಶ್ರೀಗೆ ನಿತ್ಯಾ
ವಾಸಂ ತಾನಾಗಿ ಭೂಭಾಗದೊಳಮಮ ಮಹಾನಂದಿಯೋಗೀಂದ್ರನಿರ್ದಂ ೩೦

ತನತನಗವರಿವರೆನ್ನದೆ
ಜಿನಪತಿಕೃತಿಯೊಸಗೆಗಖಿಳ ಜಿನಮುನಿಗಳ್ ಬಂ
ದನುಸರಿಸಿ ನಿಲ್ಕೆ ನಿಯಮದಿ
ನ್ನನುಕೂಲರೆನಲ್ ಮದೀಯ ಹೃದಯಾಂಗಣದೊಳ್ ೩೧

ಪರಮನಗಲ್ಚುವಿಂದಿಹದೊಳೆಗ್ಗನೊಡರ್ಚುವ ಜಾರಚೋರವೀ
ರರ ಕಥೆವೇಳದಿಂಪಮರ್ದ ಕರ್ವಿನ ಕೋಲೆನೆ ಕೆಯ್ಯೊಳಿರ್ದೊಡಂ
ಕರಮನುರಾಗದಿಂ ಸವಿದೊಡಂ ಸುಖಮಂ ತನಗೀವ ದೇವತಾ
ಪರಮನೆ ಸಂದ ಸತ್ಕೃತಿಗಳಂ ಸಮೆದಂಗರಿದುಂಟೆ ಧಾತ್ರಿಯೊಳ್ ೩೨

ಜೋಡಿಸೆ ಪುಣ್ಯದಿಂ ಕವಿತೆ ನೀಂ ಪೆಱರಂ ಪೊಗಳ್ದಂತೆ ಸೈಪನೀ
ಡಾಡದಿರಿಂದ್ರವಂದಿತನೆ ಭಾಜನನೇನಿದು ಹುಸಿ ಹುಂಡನೆಂ
ದಾಡಿದ ಮಾತೆ ನಿರ್ವ್ಯಜಿನನಪ್ಪ ಜಿನೇಂದ್ರನನೊರ್ಮೆ ಕೂರ್ತು ಕೊಂ
ಡಾಡಿದೊಡಣ್ಣ ಮುಕ್ತಿ ಮನೆದೊಳ್ತೆನೆ ಮಚ್ಚಿ ಮಱಲ್ದುಬಾರಳೇ ೩೩

ಚತುರಂ ಧರ್ಮಜಿನೇಶ್ವರಂಗೆ ಪದಪಿಂ ಸರ್ವಾಂಗದೊಳ್ ಸಂದಲಂ
ಕೃತಿ ಚೆಲ್ವಾಗಿರೆ ನವ್ಯದಿವ್ಯರಸಧಾರಾಪೂರ್ವಮಾಗಿತ್ತ ಸ

ತ್ಕೃತಿ ಮುಕ್ತ್ಯಂಗನೆಗಳ್ತ್ರಿಯಿಂ ಸವತಿಯಪ್ಪುದ್ವಾಹದುತ್ಸಾಹಸಂ
ಗತಿಯೊಳ್ ಸೈತಮರ್ದಿಕ್ಕೆ ಸತ್ಕವಿಗಳಿಂ ಭದ್ರಂ ಶುಭಂ ಮಂಗಳಂ ೩೪

ತೊಳತೊಳಗೆ ದಿಗಂಬರಮಂ
ಬೆಳಗುವ ರುಚಿಯಿರ್ದುಮೇನೊ ಸಕಲ ಜನಾಂತ
ಸ್ಥಳತಮಮಂ ತಮ್ಮುದಯದೊ
ಳಳಱಿಸಿದರೆ ರವಿಗಳೆಮಗೆ ಕವಿಗಳೆ ವಂದ್ಯರ್ ೩೫

ಆದಿಕವಿ ಪಂಪನೆಂದನು
ವಾದಿಸಿ ವಾದಿಸಿ ವಿರೋಧಿ ವಿಪರೀತತೆಯಿಂ
ದೋದೆ ವಿಲೋಮದೆ ಪೆಸರಂ
ಮೇದಿನಿಯೊಳಗವನ ಪೆಸರೆ ಪೆಸರ್ವಡೆದೆಸೆಗುಂ ೩೬

ಬಿನ್ನಣದ ಕುಸುರಿ ಪಸರಿಸು
ವನ್ನಂ ಗುಣಜಾತಿಬಂಧಮಳವಡೆ ನೆಗಳ್ದಾ
ಪೊನ್ನಂ ರನ್ನಂ ಕೂಡಿದೊ
ಡೆನ್ನೀ ವಾಗ್ವಧುಗೆ ಭೂಷಣಂ ಪೆಱತುಂಟೇ ೩೭

ಘಳಿಲನೆ ವಿಬುಧರ್ ತುಷ್ಟಿಯ
ನೊಳಕೆಯ್ದು ಮನಃಪ್ರಸಾದಮಂ ಪಡೆವುದಱಿಂ
ಕಳೆಯಿಂ ಚಂದ್ರಂ ಕವಿತಾ
ಕಳೆಯಿಂ ಕವಿ ನಾಗಚಂದ್ರನಾಂತುದೆ ಸಫಲಂ ೩೮

ಏಮಾತೊ ನವ್ಯಕಾವ್ಯಕ
ಲಾಮಹಿಯೊಳ್ ಬಿಡದೆ ಬಿದಿವರಿವೊಡೆ ಮೊದಲೊಳ್
ನೇಮಿಯ ನೆಮ್ಮುಗೆಯಿಲ್ಲದೊ
ಡೀ ಮತ್ತಿನ ಕವಿಮನೋರಥಂ ನಡೆದಪುದೇ ೩೯

ತನ್ನ ತಱುವಾಯ ಸತ್ಕೃತಿವೇ
ಳ್ಪನ್ನಂ ನೀನಲ್ಲದಿಲ್ಲವೆಂದತಿಮುದದಿಂ
ಮನ್ನಿಸಿ ಸಲಹುಗೆ ಸತ್ಕವಿ
ಜನ್ನಂ ಜಾಣೆಸೆಯಲಿತ್ತು ನುಡಿಗಳನೆನ್ನಂ ೪೦

ಸರ್ವರ ಸಮ್ಮತಮೆನಗಿದು
ಗರ್ವದ ಮಾತಲ್ಲ ಶಾಸ್ತ್ರಲೌಕಿಕ ಕಳೆಯೊಳ್

ಬೇರ್ವರಿದ ನೇಮಿ ಜನ್ನಿಗ
ರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ ೪೧

ಚಂದದ ಬಂಧದೊಳ್ನುಡಿಯ ದೇಸಿಯ ಮೆಯ್ಸಿರಿಯೊಳ್ ಪೊದಳ್ದ ಸೈ
ಪೊಂದೆ ಕರಂ ರಸಂಬಡೆದು ರಂಜಿಪ ಸತ್ಕವಿತಾ ವಿಲಾಸದೊಳ್
ಸಂದೊಡೆ ಸಾಲ್ವುದಿಂದಿನವರಂದಿನವರ್ ಕೆಲರೆಂದು ಪಿರ್ಕುವೀ
ದಂದುಗದಿಂದಮೇ ನಮಗನಿಂದ್ಯ ಕವೀಂದ್ರರೆ ವಂದ್ಯರಾವಗಂ ೪೨

ತಿರ್ದಿದೊಡಂ ಸಮಂತೊಸೆದು ತಿರ್ದಿದೊಡಂ ನಯದಿಂದೆ ನೇರ್ಪುವ
ಟ್ಟಿರ್ದ ಮದೀಯ ಸತ್ಕೃತಿಯ ಬಿಂಕದ ಕೊಂಕಿನ ಮಾತನೋತು ಕೈ
ಸಾರ್ದನುಭಾವದೊಳ್ ಸರಸರಾದ ಕವೀಶ್ವರರೆಯ್ದೆ ನೇಹದಿಂ
ತಿರ್ದುಗೆ ತಿರ್ದುವಂತೆ ಸುರತಾಂತದ ಕಾಂತೆಯ ನುಣ್ಗುರುಳ್ಗಳಂ ೪೩

ತನಗೆ ಕವಿತ್ವದೊಳ್ನುಡಿಗಳೊಳ್ನುಡಿಯಾದ ರಸಂಗಳಿಂಪುವೆ
ತ್ತನುವಶಮಾದ ಭಾವಮತಿಬಂಧುರಮಾದ ಪೊದಳ್ದ ರೀತಿ ನೆ
ಟ್ಟನೆ ನೆಲೆಯಾದ ದೇಸಿ ಕಡುಮಾಸರಮಾದ ಗಣಂಗಳೋಳಿಗೊಂ
ಡನುಗುಣಮಾದ ನಂಬುಗೆ ಮನಂಬುಗೆ ಪೇಳ್ವುದು ನವ್ಯಕಾವ್ಯಮಂ ೪೪

ಚತುರ ಕವಿಯಾದವಂ ಸ
ತ್ಕೃತಿವೇಳ್ವುದು ತನಗಮಿತರ ಜನಕಂ ಸುಮನಃ
ಸ್ಥಿತಿವಾಸನೆಬಡೆದಿರೆ ಸ
ನ್ನುತ ಮಾಲೆಯನೆತ್ತುವಂತೆ ಮಾಲಾಕಾರಂ ೪೫

ಕೊರ್ವಿ ಪೊಂಜಪೊಣ್ಮೆ ತನಿರಸ
ಮುರ್ವೆ ಕರಂ ಕೊಂಕು ಕಿವಿವರಂ ನವ್ಯಗುಣಂ
ಪರ್ವೆ ತೆಗೆದೆಸುವ ಕಾವನ
ಕರ್ವಿನ ಬಿಲ್ಲಂತೆ ಕಾವ್ಯಮೇಂ ಮೋಹಿಸದೇ ೪೬

ಅಂಗದ ಪೊಲಬಿನಿಸಿಲ್ಲದ
ನಂಗಂ ಮೋಹಿಗುಮೆಂದೊಡೊಪ್ಪುವ ಪದಿನೆಂ
ಟಂಗದ ಕೃತಿಸತಿ ಚತುರಜ
ನಂಗಳನೆರ್ದೆಗೊಳಿಪುದರಿದೆ ಸರಸೋಕ್ತಿಗಳಿಂ ೪೭

ತಿಂಗಳ ಬೆಳಕಿಗೆ ಬೆಳಗಿನೊ
ಳಿಂಗಡಲೆಸೆವಂತೆ ಬಹುಕಳಾಪರಿಣತರೊ

ಲ್ದಂಗೀಕರಿಸಿದ ಕೃತಿ ಭುವ
ನಂಗಳೊಳೋರಂತೆ ಮಱೆವುದೊಂದಚ್ಚರಿಯೇ ೪೮

ತಲೆಯಂ ತೂಗಿ ಬೆರಲ್ಗಳಂ ಮಿಡಿದು ಸದ್ವಿದ್ಯರ್ ಸಭಾಮಧ್ಯದೊಳ್
ಪಲಬರ್ ಸತ್ಕವಿಗಿತ್ತ ತಕ್ಕಿನ ಪೆಸರ್ ಸಲ್ವಂತೆ ನೀಚಂಗೆ ವಾ
ಗ್ಬಲದಿಂ ಬಂಟಿನ ನಂಟಿನಗ್ಗಳಿಕೆಯಿಂದರ್ಗನ್ನ ದೂರ್ವೆಳ್ದು ಗಾ
ವಿಲನೊರ್ವಂ ಕುಡೆ ಕೊಂಡ ತೊಂಡುವೆಸರಿಂದೇಂ ಸಲ್ವುದೇ ನಿಲ್ವುದೇ ೪೯

ತಲೆದೂಗೆ ಬುಧರ್ ಖಳನಂ
ತಲೆವಾಗಿಸಿ ಸಭೆಯ ನಡುವೆ ನಿಲ್ಲದೆ ಪಾವಂ
ತಲೆಗಂಡ ಪಂದೆಯಂದದೆ
ತಲೆಬಾಲಂಗೆಟ್ಟು ಜಗುಳ್ವ ಕವಿಯುಂ ಕವಿಯೇ ೫೦

ತಳ್ತಳವಟ್ಟಿರಲವಯವ
ದೊಳ್ತೊಳಗದ ಕೃತಿಯೊಳಿಟ್ಟಲಂಕಾರಮದೇ
ವಾಳ್ತೆ ನಡೆನೋಡೆ ಬಡವರ
ತೊಳ್ತಿನ ಶೃಂಗಾರದಂತಿರೆರವಾಗಿರದೇ ೫೧

ಕತ್ತುರಿಯನೆರೆಯ ಮಣ್ಗೆ ರ
ಸೋತ್ತರ ಕವಿಕೃತಿಯನಧಮಕೃತಿಗೆಣೆಯೆಂಬಂ
ಗೆತ್ತಣ ಮಾತೊ ವಿದಗ್ಧರ್
ಚಿತ್ತೈಸಿದೊಡಿಳೆಯೊಳುಂಟೆ ಮೂಗುಂ ಕಿವಿಯುಂ ೫೨

ಕುಟಿಳಾಳಾಪದೆ ಪಿಂದೆ ಕಾಳ್ಗೆಡೆದು ಮುಂದಾ ಸತ್ಕವೀಂದ್ರರ್ಕಳು
ಬ್ಬಟೆಯಂ ಕಂಡು ಕನಲ್ದು ಕೇದಗೆಯ ತೂಱಲ್ಗೊಂಬನೇಱರ್ದ ಮ
ರ್ಕಟನೆಂತಂತೆ ಕುನುಂಗಿ ಪಲ್ಗಿರಿದು ಬಾಯಂಬಿಟ್ಟು ಬೆಂಬೀಳ್ವನ
ಕ್ಕಟ ಧಾತ್ರೀತಳದಲ್ಲಿ ದುಷ್ಕವಿಯದೇಂ ಹಾಸ್ಯಕ್ಕೆ ಪಕ್ಕಾದನೋ ೫೩

ಉತ್ತಮರುತ್ಪಾದಕನೆನಿ
ಪುತ್ತಮಕವಿಗಗಿಯದುಂತೆ ತಲೆಯೆತ್ತಿದೊಡೇ
ನುತ್ತಮನೆ ಕುಕವಿ ನಿಡುಗೊರ
ಲೆತ್ತಲ್ ಶರಭಕ್ಕೆ ಕರಭನೆಣೆಯೆನಿಸುಗುಮೇ ೫೪

ಸಲೆ ನಿಲೆ ಸುಕವಿ ಸುವರ್ಣದ
ನೆಲೆಯಱಿದೊರೆದೊರೆದು ನೋಡಿ ಬಗೆಯೊರೆಗಲ್ಲೊಳ್

ತಲೆದೂಗದಂತೆ ಸಭೆಯೊಳ್
ತಲೆದೂಗುವವಂ ಪರೀಕ್ಷಿಸಲ್ ಬಲ್ಲವನೇ ೫೫

ನವರಸರಸಿಕಂ ಸುಮನ
ಸ್ತವನೀಯವೆನಿಪ್ಪ ಕಾವ್ಯದತಿಶಯಮಮಂ ದುಃ
ಕವಿಯ ಱಿಯನೆಂದು ಜಱಿಯೆ
ಪ್ಲವಗಕ್ಕೇವಾಳ್ತೆ ಪಾರಿಜಾತಸ್ತಬಕಂ ೫೬

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೆ ಬೀದಿವರಿಯ ಬೀರನ ಕಥೆಯೇ ೫೭

ನೆರೆಯಱಿಯದ ಪೊರೆಯಱಿಯದ
ಬಿರುದಗಳೇಕೆಮಗೆ ಕೃತಿಯನೀಕ್ಷಿಸಿ ಮಿಗೆ ಮ
ಚ್ಚರಿಸುವ ಕವಿಯೆರ್ದೆ ಬಿಕ್ಕನೆ
ಬಿರಿದಿರ್ದುದೆ ಬಿರಿದು ಮಿಕ್ಕ ಬಿರಿದದು ಬಿರಿದೇ ೫೮

ಭೂನುತ ಕೃತಿಯಂ ಚತುರಕ
ಳಾನಿಳಯರ್ ನೋಡಿ ಮೆಚ್ಚಿ ತಲೆದೂಗೆ ಖಳಂ
ಮೋನಮಿರದೇಕೆ ಪಳಿವನೊ
ತಾನೇಡಿಸಿ ನೋಡುವಂತೆ ಮಣಿದರ್ಪಣಮಂ ೫೯

ತಪ್ಪಿನಿಸುಮಿಲ್ಲದೆಲ್ಲರು
ಮೊಪ್ಪಿದ ಕೃತಿಯಂ ಕುತರ್ಕೆ ಪಳಿದೊಡೆ ತನಗೇ
ನುಪ್ಪಾದುದೆ ಸೊಪ್ಪಾದುದೆ
ಮುಪ್ಪುರಿಗೊಂಡೇಕೆ ಬಱಿದೆ ಬಾಯಳಿದೊಳ್ವಂ ೬೦

ಚಂದನದೊಳ್ ಪಾವಿನ ಭಯ
ಮಿಂದುವಿನೊಳ್ ರಾಹುಬಾಧೆ ಸತ್ಕೃತಿಯೊಳ್ ತ
ಳ್ತೊಂದಿದ ದುರ್ಜನದೂಷಣ
ವಿಂದಾದುದೆ ತಾನನಾದಿಯುಗ ಸಂಸಿದ್ಧಂ ೬೧

ಮಾಡಿದನೇಕೆಯೊ ಮೇಲಂ
ನೋಡದೆ ಬಿದಿ ವಿಷಮಫಣಿಗಣಲ್ಗಳ ಪಲ್ಲಂ

ರೂಡಿಸಿದ ತೇಳ್ಗೆ ಮುಳ್ಳಂ
ನಾಡತಱಿಕಯ ದುರ್ಜನಂಗೆ ನಿಡುನಾಲಗೆಯಂ ೬೨

ಪಳಿಯೆಂದೊಡಂಜುಗುಂ ಪೇ
ಕುಳಿನಾಯೊಳಗಾಗಿ ಖಳನದೇಂ ಕಷ್ಟನೊ ಚೀ
ಪಳಿಯೆಂದೊಡಗಿದು ಸಜ್ಜನ
ಕುಳಮಂ ಕಂಡಾಗಳುದ್ದಮೂಳಂ ಬಾಳಂ ೬೩

ನ್ಯಾಯಮಿದು ಧರೆಗೆ ದುರಭಿ
ಪ್ರಾಯದ ದುರ್ಜನನ ಮೋರೆಯಂ ಕಂಡೊಡೆ ಥೂ
ಚೀಯೆಂಬುದುಱ್ ಬಗುಳ್ವನ
ಬಾಯೊಳಗುಗುಳೆಂಬ ನಾಡಗಾದೆಯ ಬಲದಿಂ ೬೪

ಪದುಳದೆ ಪೊಳ್ತುಪೋಗದೊಡೆ ರಾಗದಿನಲ್ಲಿ ಸರಸ್ವತೀಮುಖಾ
ಬ್ಜದ ಮಧುಸೇವೆಯಿಂ ಕಳಿವುದಂತದರೋಚಕಮಾದೊಡಿಲ್ಲ ಬಂ
ದೊದವಿ ಕಳಾಪಿಳಾಸ ಕವಿತಾಮೃತಮಂ ಮನವಾರೆ ಪೀರ್ದುದ
ಲ್ಲದೆ ಬಱಿದೇಕೆ ಮಾಡುಗುಮೊ ದುಷ್ಟರಸೋವೊ ಸರೋಜವಿಷ್ಟರಂ ೬೫

ಅವರಿವರಂ ಕಸಲ್ದು ಬಿಱುವಾತುಗಳಿಂ ಜಱಿದಾನೆ ಲೋಕದೊಳ್
ಕವಿಯೆನುತುಂತೆ ಕಂತೆವೊರೆದಂತಳಿಗಬ್ಬಮನುಬ್ಬಿ ಪೇಳ್ದ ಸಂ
ಭವರಸಭಾವಮಂ ಬಱಿದೆ ಬಿಣ್ಣನೆ ಬೀಗಿ ಮಹಾಕವೀಂದ್ರ ಮಾ
ಧವನೆಣೆಯಪ್ಪೆನೆಂಬ ಕೊಳೆಗಬ್ಬಿಗ ನಿನ್ನಯ ಗರ್ಬಮೆಂತುಟೋ ೬೬

ಪೆಸರೆಸಕದ ಪಾಲಯ್ಯಂ
ಪೊಸತೇನೆಱಿದುಂಬುದಂಬಿಲಂ ಗಡಮೆಂಬೀ
ಗಸಣೆಯೊಳೊಂದದೆ ನೆಗಳ್ದೊ
ಳ್ಪೆಸರುಂ ಮಧುರಂ ದಲವನ ಮಾತುಂ ಮಧುರಂ ೬೭

ಸುಧೆ ಸುರಭಿ ಸಗ್ಗಕಗ್ಗದ
ಮಧು ಮಧುರಕವೀಂದ್ರ ಕವಿತೆ ವಸುಧಾತಲಕೆಂ
ತಧರತೆ ತನಗಾಗದವೊಲ್
ವಿಧಿ ವಿಬುಧರ್ ಮೆಚ್ಚೆ ಪೆಚ್ಚೆ ಪವಣಿಸಿ ಪಡೆದಂ ೬೮

ಗಣೆದಂಗೊಳ್ವೊಡೆ ಮಿಕ್ಕಿನಕ್ಕರದ ಮಾತಂತಿರ್ಕೆ ತನ್ನಾಣೆಗೋ
ಸಣೆ ಸಲ್ಗುಂ ಸುಕವೀಂದ್ರವೃಂದ ಸಭೆಯೊಳ್ ತಾನೆಂದೊಡಮ್ಮಮ್ಮ ಧಾ

ರಿಣೆಯೊಳ್ ಕೇಳ್ದಱಿಯಾ ಜಡಾ ಮಧುರನಂ ನಿರ್ಣೀತ ಕರ್ಣಾಟಲ
ಕ್ಷಣಭಾಷಾಕವಿರಾಜನಂ ಪ್ರವಿಲಸದ್ವಾಣೀಮುಖಾಂಭೋಜನಂ ೬೯

ಬಣ್ಣಣೆಯ ಕುಸುರಿವಾತುಗ
ಳಣ್ಣಂದಿರ ತೆಱದೆ ನನ್ನದಿನ್ನದೆನುತ್ತಾಂ
ಬಣ್ಣಿಸಲಱಿಯೆಂ ಕವಿತೆಗೆ
ಕಣ್ಣೆಲೆಯಾದುದು ಕಳಾವಿಳಾಸನ ಕಾವ್ಯಂ ೭೦

ಚದುರ ನೆಗಳ್ತೆ ತೆಂಬೆಲರ ಸೋಂಕು ಸುಧಾರಸದಿಂಪು ಬಂದ ಚೂ
ತದ ಕೊನರಂಚೆಯಾಟವಳಿನೀರುತಿ ತಿಂಗಳ ಸೊಂಪು ಪುಷ್ಪಬಾ
ಣದ ಪೊದೆ ರಾಗದಾಗರಮನಂಗನ ಕೈಪಿಡಿ ನಲ್ಲಳೊಲ್ಮೆಯೆ
ನ್ನದೆ ಪೆಱತೆಂಬುದೇ ಮಧುರ ಮಾಧವ ನಿನ್ನಯ ವಾಗ್ವಿಲಾಸಮಂ ೭೧

ಮದನನ ಬಿಲ್ಲ ಬಲ್ಮೆ ಬಲಿದತ್ತು ವಸಂತದ ಮೋಹನಂ ಪೊದ
ಳ್ದುದು ಕಡುಗಾಡಿವೆತ್ತಲೆವ ತೆಂಕಣಗಾಳಿಯ ಸೋಂಕು ಸೊರ್ಕುವೆ
ತ್ತುದು ಪುದುವಂದುದೆಂದು ನೆಲೆವೆರ್ಚಿರೆ ಭಾವರಸಂ ರಸಜ್ಞೆಯೊಳ್
ಮೃದುಪದವಿಟ್ಟಳಕ್ಕುಮೆನೆ ಭಾರತಿ ಬಂದು ಕಳಾವಿಳಾಸನಾ ೭೨

ಆವ ರಸಾತಿರೇಕಮೊ ಕರಾಗ್ರದೊಳೋದುವ ರಾಜಕೀರ ಲೀ
ಲಾವಚನಂಗಳೋಗಡಿಸಲುಕ್ಕೆವದಿಂ ಕುಡುಕೆಂದು ತಂದು ಚಂ
ಚೂವಿವರಕ್ಕೆ ಮಾಣಿಕದ ಮುದ್ರಿಕೆಯಂ ಪಡಿಗೆತ್ತು ಭಾರತೀ
ದೇವಿ ನಿರಂತರಂ ಸವಿವಳಾತನ ನವ್ಯವಚೋವಿಳಾಸಮಂ ೭೩

ಕವಿ ಮಧುರನ ಮಾತುಗಳೇಂ
ಸವಿಯೊ ಮದಪ್ಲವಕೆ ಮೊರೆವ ಮಱಿದುಂಬಿಗಳಂ
ತವೆ ತೊಲಗಿಸಿ ತನ್ನಯ ಮೊಱಿ
ಗಿವಿಯಂ ಮೊಗೆ ಮೊಗೆದು ಸುಮುಖನಾಸ್ವಾದಿಸುವಂ ೭೪

ನೆಲೆವಡೆದೆಮ್ಮ ಪೆರ್ಮೊಲೆಯ ಹಾರಮೆ ಚಾರುನಿತಂಬಬಿಂಬದು
ಜ್ವಲಿಪುಡೆನೂಲೆ ಸೋರ್ಮುಡಿಯ ಮಲ್ಲಿಗೆಯೇ ನೊಸಲಕ್ಕೆಬೊಟ್ಟೆ ಬೈ
ತಲೆಯೆಳೆಮುತ್ತೆ ಬಾ ಕೊರಲ ದೇವರ ಹೊನ್ನೆಯೆನುತ್ತೆ ಕೂರ್ತು ಕೋ
ಮಲೆಯರಲಂಪಿನಿಂದೆ ತೆಗೆದಪ್ಪುವರೊಲ್ದು ಕಳಾವಿಳಾಸನಾ ೭೫

ಬಂಧಕದಂಬದುಲಮೆ ಚುಂಬನವಿತ್ತು ತುಱುಬಿನೊಂದೆ ಪೂ
ಮುಂದಲೆಯೊಳ್ಗುರುಳ್ಗಿಡಿತವಟ್ಟಿದ ಬೀಳುಡೆ ತೋಳ ಸೋಂಕು ಪೋ

ಗಂದಿವನಾವಗಂ ಬಯಸಿ ಬಾತಪರೋತೆಳೆವೆಂಡಿರೆಂದೊಡೇ
ನೆಂದಪೆನೊಂದು ಸಂದ ಸೊಬಗಂ ಕವಿರಾಜವಿಳಾಸನಾ ೨೬

ರೂಢಿಸಿದ ಸೊಬಗದೆಂತುಟು
ಗಾಡಿಯ ಗರುವೆಯರ ಬಯಸಿ ಬಾಯೊಱದೊಲವಿಂ
ನೋಡುವಿನಂ ಸರಸತಿ ಬಾ
ಯ್ಗೂಡುವಳೋರಂತೆ ಮಧುರಕವಿ ಮಾಧವನಾ ೨೭

ಕವಿತಾಶ್ರೀಗೆ ಜನಾರ್ದನಂ ಪುರುಷರತ್ನಂ ಪುಷ್ಪದಂತಂ ರಿಪು
ಪ್ರವರೋತ್ತುಂಗ ಗಜಾಂಕುಶಂ ಮನಸಿಜಾಕಾರಂ ಸಭಾಮಧ್ಯಲ
ಬ್ಧವರ ಶ್ರೀವಿಜಯಂ ಸಮಸ್ತ ಸುಜನೋತ್ತಂಸಂ ಯಶಶ್ಚಂದ್ರನು
ತ್ತವಲೀಲಾರಥ ನೇಮಿಯೆಂದು ಮಧುರಂ ಪೆತ್ತಂ ಮಹಾಖ್ಯಾತಿಯಂ ೨೮

ವಸುಧಾಚಕ್ರಪ್ರಸಿದ್ಧಂ ವಿಜಯನಗರಿಯೊಳ್ ಯಾದವೋರ್ವೀಶಭಾಗ್ಯಾ
ವಸಥ ಶ್ರೀಬುಕ್ಕಭೂಪಾತ್ಮಜ ಹರಿಹರರಾಜಪ್ರಧಾನೋತ್ತಮಂ ನೀ
ತಿಸಮುದ್ರಂ ಮುದ್ದದಂಡೇಶ್ವರನೆ ಪೊರೆದ ಸೌಭಾಗ್ಯದಿಂ ಭಾರತೀ ಮಾ
ನಸಕೇಳೀ ರಾಜಹಂಸಂ ನೆಗಳ್ದನವನಿಯೊಳ್ ವಾಜಿವಂಶಾವತಂಸಂ ೨೯

ನಾಗಾಂಬಿಕೆ ತಾಯೆನೆ ನಿಜ
ಭೋಗಂ ವಿಷ್ಣು ತಾನೆ ತಂದೆಗಡೆನೆ ಭೂ
ಭಾಗಮನೆಱಗಿಪ ರೂಪ ವಿ
ಭಾಗಂ ಸತ್ಕವಿ ಕಳಾವಿಳಾಸಂಗೆರವೇ ೩೦

ಭಾರದ್ವಾಜ ವಿಶಾಲ ಗೋತ್ರಮನುದಂಚದ್ಭಾರತಕ್ಷೇತ್ರಮಂ
ನಾರೀ ನಿರ್ಮಳನೇತ್ರಮಂ ನೆಗಳ್ದಲಂಪಿಂ ಭಾರತೀ ಶ್ರೋತ್ರಮಂ
ಸಾರಂಬೆತ್ತೆಸೆವಂತಲಂಕರಿಸಿತೆಂಬಾಗಳ್ ತಗುಳ್ದೆಂಬರಿ
ನ್ನಾರಂತಿಂತು ಕಳಾವಿಳಾಸ ನಿಜ ಶೀಲೋದಾರ ಚಾರಿತ್ರಮಂ ೩೧

ಎಂದೋರಂತೆ ಕಳಾವಿದರ್ ಸುಕವಿತಾ ಸಾಮ್ರಾಜ್ಯದೊಳ್ ನೋಡೆ ನಿ
ನ್ನಂದಂಬೆತ್ತ ಮಹಾಕವೀಂದ್ರರಿಳೆಗಿನ್ನುಂ ಮುನ್ನಮೇಗೆಯ್ದುಮಿ
ಲ್ಲೆಂದುತ್ಸಾಹರಸೋಕ್ತಿಯಿಂ ಪೊಗಳಲೆನ್ನಂ ಮಲ್ಲಿನಾಥಂ ಮನಂ
ಬಂದೆನ್ನೀ ಮಧುರೋಕ್ತಿಯಂ ಬಯಸಿದಂ ಸನ್ಮಾನಿ ಜನ್ಮಾಲಯಂ ೩೨

ಆವನಾರೆಂದೆನಲೀ ಚತುರ್ಜಲಧಿಮುದ್ರಾಮುದ್ರಿತೋರ್ವೀತಳ
ಕ್ಕವತಂಸಂ ಸಲೆ ಕೊಟ್ಟುಬಾಗೆವೊಳಲಂತಾ ಪಟ್ಟಣಕ್ಕಿಟ್ಟು ಬೊ

ಟ್ಟವನೆಂಬುತ್ತಮಕೀರ್ತಿವೆತ್ತು ನೆಗಳ್ದಂ ಭವ್ಯೋತ್ತಮಂ ಬೊಮ್ಮಿಸೆ
ಟ್ಟಿ ವಿದಗ್ಧರ್ಕಳ ಪೊನ್ನಘಟ್ಟಿಯೆನೆ ತನ್ನೊಂದೀವ ಕಾವೊಳ್ಗುಣಂ ೮೩

ಆ ಚತುರ ಬೊಮ್ಮಿಸೆಟ್ಟಿಗೆ
ಖೇಚರಸಮದಾನಿಗಮಲ ಶೀಲೆ ಸಮಸ್ತೋ
ರ್ವೀ ಚಿಂತಾಮಣಿ ಸುಚರಿತೆ
ಬೈಚಾಂಬಿಕೆಯೆಂಬ ಸುದತಿ ವಲ್ಲಭೆಯಾದಳ್ ೮೪

ಆಕೆಯ ಬಸಿಱೊಳಮರ್ತ್ಯಾ
ನೋಕಹ ಮಣಿಧೇನುಗಳ್ ಮನುಷ್ಯಾಕೃತಿಯಂ
ಸ್ವೀಕರಿಸಿ ಬಂದುವೆನಲ
ಪ್ರಾಕೃತ ಗುಣೆ ಬೊಮ್ಮಿಸೆಟ್ಟಿಗಾದರ್ ತನಯರ್ ೮೫

ವಿನುತಾಶೇಷ ಕಳಾವಿಳಾಸ ರಚನಾವಿಸ್ತಾರದಿಂ ಬ್ರಹ್ಮನೆಂ
ಬ ನಿಜೋದ್ಯಜ್ಜಿನಧರ್ಮಧಾರಣಧುರೀಣೋದ್ಯೋಗದಿಂ ನಾಗನೆಂ
ಬನವದ್ಯೋರ್ಜಿತ ಮಲ್ಲಿಕಾರ್ಜುನ ಯಶಸ್ಸಂಪತ್ತಿಯಿಂ ಮಲ್ಲಿಕಾ
ರ್ಜುನನೆಂಬುತ್ತಮ ನಾಮಮಂ ಪಡೆದರಾ ಮೂವರ್ ಧರಾಭಾಗದೊಳ್ ೮೬

ಧಾತ್ರಿ ನಿರಂತರಂ ಪೊಗಳೆ ಸದ್ರುಚಿವೆತ್ತಸೆವೊಳ್ಗುಣಂಗಳಿಂ
ಸೂತ್ರಿಸಿ ತಾವೆ ಭವ್ಯಹೃದಯಸ್ಥದೊಳ್ ನೆಲೆಗೊಂಡ ಮೈಮೆ ಲೋ
ಕತ್ರಯದೊಳ್ ವಿಜೃಂಭಿಸೆ ನಿರಸ್ತತಮಂ ನಿಜದಿಂದೆ ಬಂದು ರ
ತ್ನತ್ರಿತಯಂ ನರಾಕೃತಿಯನಾಂತುದೆನಿಪ್ಪ ಬೆಡಂಗಿನೊಪ್ಪದೇ ೮೭

ಮೂವರೊಳಾ ಮಲ್ಲಪನೆ ಕ
ಲಾವಲ್ಲಭ ವಿದಿತನುದಿತ ಜಿನಪತಿಮತ ಪಾ
ರಾವಾರವಿಧು ಸುಕೀರ್ತಿ ಲ
ತಾವಲ್ಲೀಭೂತ ದಾನಧಾರಾಸಲಿಲಂ ೮೮

ತೊದಳಲ್ಲಲ್ಲೆಲೆ ಕೊಟ್ಟುಬಾಗೆಯ ವಿಭು ಶ್ರೀಮಲ್ಲಿನಾಥಾಂಕನಂ
ದದೆ ನಾನಾ ಭಯಬಂಧಬಾಧಿತ ಧರಾದೀನಾರ್ತರಂ ತನ್ನ ಕ
ಣ್ಣೆದಿರೊಳ್ ಕಂಡೊಡೆ ನೊಂದು ತಿಂದೆಡೆಗೆ ಕೈಬರ್ಪಂದದಿಂ ಬಂದು ಕಾ
ಯದವಂಗಸ್ಮದ ಬಂದಿ ಸೋಧನವನೆಂಬೀ ಕೀರ್ತಿ ಕೈಸೂಱೆಯೇ ೮೯

ಪ್ರಿಯವಚನಂಗಳಿಂ ಕರೆದು ಕೆಯ್ಮುಗಿದೀ ಮಹಿಗೆಮ್ಮ ಧರ್ಮಕೀ
ರ್ತಿಯ ತವರಿನ್ನದಾರೆಮಗೆ ನೀಮಿರೆ ಬಂಧುಗಳೆಂದು ಬಂದ ವಂ

ದಿಯ ಬಗೆ ಮೆಚ್ಚಿದಿಚ್ಚೆಯಱಿದಾವಗಮಿಾವೊಡೆ ಭಾಪ್ಪು ಕೊಟ್ಟುಬಾ
ಗೆಯ ವಿಭು ಮಲ್ಲನಲ್ಲದಳಿವಾನಸರೇನೊಸದೀಯ ಬಲ್ಲರೇ ೬೦

ಧರೆಯೊಳ್ ಪೂಮಳೆಸೂಸಿದಂತೆ ನಭದೊಳ್ ಛತ್ರತ್ರಯಾಚ್ಛ ಪ್ರಭಾ
ಪರಿರಂಭಂ ನೆಗಳ್ದಂತೆ ದಿಕ್ಕಿನೊಳುದಂಚಚ್ಚಾಮರಂ ಚೆಮ್ಮಿದಂ
ತುರು ಹೇಮಾಚಲದೊಳ್ ಜಿನಸ್ನಪನದುಗ್ಧಂ ತೀವಿದಂತಿರ್ಪುದೊ
ಪ್ಪಿರೆ ಕೀರ್ತಿಪ್ರಭೆ ಕೊಟ್ಟುಬಾಗೆಯ ವಿಭು ಶ್ರೀಮಲ್ಲಿನಾಥಾಂಕನಾ ೬೧

ಎಲೆ ಮಲ್ಲಿನಾಥನಿದಿರೊಳ್
ಚಲದಿಂ ಕೆಲರಿತ್ತರಿತ್ತರೆಂಬೀ ಮುನ್ನಂ
ಬಲಿ ಮಣ್ಣನಿತ್ತನಕಟಕ
ಟೆಲೆ ಶಿಬಿಯರೆದರ್ಗೆ ತನ್ನ ಖಂಡವನಿತ್ತಂ ೬೨

ಶೋಭಾಕರಮೆನಿಪಾಹಾ
ರಾಭಯ ಭೈಷಜ್ಯ ಶಾಸ್ತ್ರದಾನಾದಿಗಳಂ
ಭೂಭುವನ ಮಱೆಯೆ ನೆಗಳ್ದೀ
ಸೌಭಾಗ್ಯಂ ಮಲ್ಲಿಕಾರ್ಜುನಂಗೆ ನಿಸರ್ಗಂ ೬೩

ಕಿಡೆ ನುಡಿಯ ನೆರಪಿ ಮಣ್ಣೊಳ್
ಮಡಗುವ ಗುಣಪಣಮನೋತು ಪಡೆಯದೆ ಜಸಮಂ
ಪಡೆವೊಡೆ ಮಲ್ಲಪನಂತಿರೆ
ಪಡೆವುದು ಮಾನವರುದಾರ ಗುಣಮಂ ಪಣಮಂ ೬೪

ಸದಮಳ ಭದ್ರಲಕ್ಷಣನನುಸ್ಮತನಂ ಕವಿರಾಜ ಪೂಜ್ಯನಂ
ಪುದಿದ ಗುಣಂಗಳಿಂ ಮಧುರನಂ ಮನವಾರೆ ತೊಡರ್ಚಿ ಪೆರ್ಚಿದ
ಭ್ಯುದಯಮ ಕೊಟ್ಟುಬಾಗೆಯ ಮಹಾಪ್ರಭು ಮಲ್ಲನೀಗಳಾನೆಗ
ಟ್ಟಿದನರಸೆಂಬ ನಾಡ ನುಡಿಯಂ ನೆಲದೊಳ್ ನೆಱೆ ನನ್ನಿಮಾಡಿದಂ ೬೫

ಮತಿಗೊಳ್ವಂತಿರೆ ಕೊಟ್ಟುಬಾಗೆಯ ವಿಭು ಶ್ರೀಮಲ್ಲಿನಾಥಂಗೆ ಮಾ
ನಿತ ಜೈನಾಗಮ ಮಾರ್ಗಮಂ ತಿಳಿವ ಸಮ್ಯಗ್ದರ್ಶನಾವಾಪ್ತಿ ಶಾ
ಶ್ವತಮಪ್ಪಂತಿರೆ ಸುವ್ರತಾಚರಣಮಂ ಕಾರುಣ್ಯದಿಂ ಕೊಟ್ಟ ಪಂ
ಡಿತ ದೇವಪ್ರಥಿತಾನ್ವಯಂ ಪೊಗಳ್ವೊಡಿನ್ನೇನನ್ಯಸಾಮಾನ್ಯಮೇ ೬೬

ಆ ಗುರುಪಜ್ಞಾಗಾದಿಯೆನೆ ಸಂದ ಪೊಗಳ್ತೆಯ ಕುಂಡಕುಂದ ವಂ
ಶಾಗತ ಮೂಲಸಂಘದೊಳಲಂಘ್ಯ ಯಶಃಪ್ರಸರಾವಕಾಶ ದೇ

ಶೀಗಣದೊಳ್ ಪ್ರಸಿದ್ಧಿವಡೆದಂ ವಿಹಿತಕ್ರಮದಿಂ ಸಮಸ್ತ ವಿ
ದ್ಯಾಗುರು ಚಾರುಕೀರ್ತಿಮುನಿಪಂಡಿತ ದೇವನವಾರ್ಯವೈಭವಂ ೯೭

ಕೃಪೆಮೂಲಂ ಜೈನಧರ್ಮಕ್ಕೆನಿಪ ವಚನಮಂ ನಂಬಿ ಬಂದಳ್ತಿಯಿಂ ಮಿಾ
ನಪತಾಕಂ ತನ್ನ ರೂಪಂ ಮಱೆಗೊಳಲು ದೋರಂತಿರುಗ್ರೋಗ್ರ ನಾನಾ
ತಪದಿಂದೆಬ್ಬಟ್ಟಿ ಮತ್ತುತ್ತಮ ಗತಿರತಿಯೊಳ್ ಕೂಡಿ ಶೌಚವ್ರತೀಶಾ
ಧಿಪನಾದಂ ಚಾರುಕೀರ್ತಿವ್ರತಿಪತಿ ಚದುರಿಂ ಚಾರುಕೀರ್ತಿಪ್ರಭಾವಂ ೯೮

ಉತ್ಸಾಹ|| ಪೇಳಲೇನೊ ಸಂದಿಗೊಂದಿಯಲ್ಲಿ ಪರೆದ ಬಿರುದೆ ಬ
ಲ್ಲಾಳರಾಯ ಜೀವರಕ್ಷಪಾಲನೆಂಬ ಮೈಮೆ ಕೆಯ್
ತಾಳಮಾಗೆ ಕೂಡೆ ಲೋಕಮೆಯ್ದೆ ಪಾಡುತಿರ್ಪಿದಂ
ಕೇಳ ಚಾರುಕೀರ್ತಿಪಂಡಿತ ವ್ರತೀಂದ್ರ ಕೀರ್ತಿಯಂ ೯೯

ಆ ಪಟ್ಟವನಾಂತಖಿಳ ಧ
ರಾಪಾಲ ಕಿರೀಟಕೋಟಿ ತಾಟಿತ ವಿಮಳ
ಶ್ರೀಪಾದರೆನಿಸಿ ನೆಗಳ್ದರ್
ಭಾಪಭಿನವ ಚಾರುಕೀರ್ತಿಪಂಡಿತ ದೇವರ್ ೧೦೦

ವಿಭವದ ಮಾತಿದಲ್ಲ ಹಱೆಹೊಯ್ದು ನೆಗಳ್ತೆಯ ಕೀರ್ತಿ ರೂಢಿವೆ
ತ್ತುಭಯ ನಯ ಪ್ರಮಾಣಮತದಿಂ ಜಿನಮಾರ್ಗಮೆ ಮಾರ್ಗಮೆಂದು ತ
ತ್ಸಭೆಯೊಳೆ ಪೂಣ್ಕೆಯಂ ನಿಲಿಸಿದರ್ ನಲವಿಂದೆನಲೇನನೆಂಬೆನಾ
ನಭಿನವ ಚಾರುಕೀರ್ತಿಮುನಿಪಂಡಿತದೇವ ಮಹಾಪ್ರಭಾವಮಂ ೧೦೧

ಚತುರಂಭೋನಿಧಿಮುದ್ರಿತಾವನಿತಳಂ ಕೊಂಡಾಡೆ ಲೋಕತ್ರಯೀ
ಪತಿಗಾಶಾಂಬರ ಭೂಷಣಂಗೆ ಮುದದಿಂ ಶ್ರೀಗೋಮಟೇಶಂಗೆ ವಿ
ಶ್ರುತಮಪ್ಪಂತಿರೆ ಮಸ್ತಕಾಭಿಷವಮಂ ಮುಂ ಮಾಡಿದೀ ಸೈಪು ಪಂ
ಡಿತದೇವವ್ರತಿ ಚಕ್ರವರ್ತಿಗೆ ಸಮಂತಕ್ಕುಂ ಪೆಱಂಗಕ್ಕುಮೇ ೧೦೨

ಒಂದೆರಡು ಮೂಱು ಸೂಳ್ವರ
ಮೆಂದೊಡೆ ಪುಸಿ ಪಲವುಸೂಳ್ ಚತುಸ್ಸಂಘಮುಘೇ
ಯೆಂದೆನೆ ಪಂಡಿತಮುನಿ ಮುದ
ದಿಂದೆಸಗಿದನೊಸೆದು ಭುವನವಿಭುಗಭಿಷವಮಂ ೧೦೩

ಆ ಪಂಡಿತ ದೇವಗುರು
ಶ್ರೀಪಾದನಖೇಂದು ರುಚಿಯಿನೊದವಿದ ಹೃದಯಾ

ಕೂಪಾರದೊಡನೆ ವಿಮಲದ
ಯಾಪಗೆ ನೆಲೆವೆರ್ಚೆ ಮಲ್ಲಿನಾಥಂ ನೆಗಳ್ದಂ ೧೦೪

ಪುಸಿಯೆಂದುಂ ನುಡಿಗಿಲ್ಲ ಲೋಭದೊದವಾರ್ಪಿಂಗಿಲ್ಲವನ್ಯಾಂಗನಾ
ವ್ಯಸನಂ ಭಾವನೆಗಿಲ್ಲ ದುಷ್ಕೃತಿ ಚರಿತ್ರಕ್ಕಿಲ್ಲ ಪ್ರಖ್ಯಾತಿ ಬ
ಪ್ಪಸಕಂ ಬಾಳುವೆಗಿಲ್ಲವೆಂದು ಪಿರಿಯರ್ ಕೊಂಡಾಡುಗುಂ ಸದ್ಯಶಃ
ಕುಸುಮಾಲಂಕೃತ ಸರ್ವ ದಿಗ್ವರವಧೂಧಮ್ಮಿಲ್ಲನಂ ಮಲ್ಲನಂ ೧೦೫

ಪ್ರಾಣಹಿತ ಧರ್ಮಗಿರಿ ನಿ
ಶ್ರೇಣಿಗಳೆನಿಸಿದ ಯಶೋಧರ ಶ್ರೇಯಾಂಸ
ಶ್ರೇಣಿಕರ ಮುಖ್ಯವಿನಯ
ಶ್ರೇಣಿಯೊಳೆಣಿಸುವುದು ಮಲ್ಲನಂ ಮಹಿಯೆಲ್ಲಂ ೧೦೬

ಆ ವಿಶ್ವಸ್ತುತ ಮಲ್ಲಿನಾಥನಿಹದೊಳ್ ಸತ್ಕೀರ್ತಿಯಪ್ಪಂತು ಸೌ
ಖ್ಯಾವಾಸಂ ಪರದೊಳ್ ಪ್ರಸಿದ್ಧಗತಿ ಸಲ್ವಂತೊಂದು ಪುಣ್ಯೋದಯಂ
ಭಾವಾಂತರ್ಗತಮಾಗೆ ಬಂದೆನಗೆ ಚಿತ್ತಪ್ರೀತಿ ಕೆಯ್ಗೂಡೆ ನಾ
ನಾ ವಸ್ತುಪ್ರತಿಪತ್ತಿಯಂ ಸಲಿಸಿ ಮತ್ತಂ ಪ್ರಾರ್ಥನಾಪೂರ್ವಕಂ ೧೦೭

ಸಾರತರೋಕ್ತಿಯಿಂದುಚಿತ ವೃತ್ತಿಯ ನೀಂ ಬಱಿದೆನ್ನ ಚಿತ್ತಮಂ
ಪ್ರೇರಿಸಿ ವರ್ಧಮಾನಮುನಿಸನ್ನಿಧಿಗೊಯ್ದವನೆನ್ನ ವಾಂಛೆಯಂ
ಪೂರಿಸುವಂತೆ ನಿಮ್ಮಡಿಗೆ ರೂಪಿಪುದೆಂಬುದುಮಾ ಪ್ರಸಿದ್ಧ ಭ
ಟ್ಟಾರಕರಾಜ ರಾಯಗುರುವೆನ್ನನರಲ್ಚಿಂ ಕೃಪಾಕಟಾಕ್ಷದಿಂ ೧೦೮

ಇಂತೊದವೆ ದಿವ್ಯಕೃತಿಯಂ
ನೀಂ ಪೇಳೆನೆ ಪೊಂಗಿ ರೋಗಿ ಬಯಸಿದುದುಂ ವೈ
ದ್ಯಂ ಪೇಳ್ದುದು ಪಾಲೆಂಬವೊ
ಲಾಂ ಪಡೆದೆಂ ಧರ್ಮನಾಥಚರಿತಾಮೃತಮಂ ೧೦೯

ಮುನ್ನೊಗೆದ ಕೃತಿಗಳಿರೆ ಬಳಿ
ಕಿನ್ನೇವುದೊ ಕಾವ್ಯಮೆನ್ನದಿರ್ ಕನ್ನೆಗೆ ಮು
ನ್ನಂ ನಗೆಗಣ್ ನೆಗಳಲ್ ಬಳಿ
ಯಂ ನೆಲೆಮೊಲೆ ಮೂಡಿ ಮಾಡವೇ ಮೋಹನಮಂ ೧೧೦

ಪಡೆದುಚಿತಾರ್ಥಮಂ ಸುಕೃತಿ ಪಣ್ಣಿದ ಪುಣ್ಯನಿಬಂಧನಾರ್ಥಮಿ
ತ್ತೊಡೆ ಕಿಡದೇಕೆ ಲೋಕದೊಳನೇಕ ನವಪ್ರಸವಾದ್ಯಗಂಧಮಂ

ಪಡೆದನುರಾಗದಿಂದಮೊಡನಾಡುವ ಪಾಡುವ ನೀಱದುಂಬಿಗಿ
ತ್ತೊಡೆ ಕಡುದಣ್ಪುವೆತ್ತಲೆವ ತೆಂಕಣಗಾಳಿಯ ಕಂಪು ತೀರ್ವುದೇ ೧೧೧

ಸಲೆ ನೆಲಸಿದ ಸತ್ಕಾರಮೆ ಬೆಲೆ
ಬೆಲೆ ಬೇಱುಂಟೆ ಕೃತಿಗೆ ಕೃತಿವೇಳಿಸಿದಂ
ಬೆಲೆಗುಡುವುದೆಂಬುದುಚಿತಮೆ
ಬೆಲೆವೆಣ್ಣಳಿಗೂರ್ಮೆ ಪೆರ್ಮೆಯಂ ಮಾಡುಗುಮೇ ೧೧೨

ಬೆಲೆಯಿಂದಾದುವೆ ಕೂಳ ಕೇಳ ಕೃತಿಗಳ್ ಮುಂಭಾಗ್ಯದಿಂದಾದುವೇಂ
ಬೆಲೆಯಿಂ ಪೆತ್ತುವೆ ತುಂಬಿ ಪುಷ್ಪರಸಮಂ ಚಂಚಚ್ಚಕೋರೀಚಯಂ
ಬೆಲೆಯಿಂ ಪೆತ್ತುವೆ ಚಾರುಚಂದ್ರಕಳೆಯಂ ಕೀರಾಳಿ ಪಾರತ್ತ ನೀಂ
ಬೆಲೆಯಿಂ ಪೆತ್ತುವೆ ನವ್ಯಚೂತರಸಧಾರಾಸಾರಮಂ ಧಾತ್ರಿಯೊಳ್ ೧೧೩

ಉಱುವನುಚಿತೋಕ್ತಿಗಳಿಂ
ಕಿಱಿದುಪಚಾರಂಗಳಿಂದೆ ಮನ್ನಿಸಲವನೆ
ತ್ತೆಱಗಿ ಕೃತಿವೇಳೆ ಕಱುಬರ್
ಜಱಿವರದೇಕಣ್ಣ ಪಾಲ್ಗೆ ಮುರವೇಂ ಬೆಲೆಯೇ ೧೧೪

ಆಲಿಸೆ ಜಿನಪತಿಚರಿತಂ
ಮೂಲೋಕದೊಳಧಿಕ ಮಧುರಮದು ಮಧುರಕವಿ
ಶ್ರೀಲಲಿತಕವಿತೆ ಬೆರಸಲ್
ಪಾಲೊಳ್ ಸಕ್ಕರೆಯನಿಕ್ಕಿದಂದಮೆ ಪೆಱತೇಂ ೧೧೫

ಸ್ವಸಮಯ ಪರಸಮಯಮಿದೆಂ
ದಸಹ್ಯಮಂ ಮಾಡದೆನ್ನ ಕಾವ್ಯದ ನಾನಾ
ರಸಭಾವಮನಱಿವವರಾ
ಲಿಸುವುದು ಮುದ್ದಿಂಗೆ ಮುನಿವರೇ ಬಾಲಕರಾ ೧೧೬

ಏಮಾತೊ ಕೇಳಲಾಕ್ಷಣ
ಮಾಮಯ ಹರಮಖಿಲ ಸುಖದಮಜರಾಮರಮೆಂ
ಬೀ ಮಹಿಮೆವೆತ್ತ ಧರ್ಮಕ
ಥಾಮೃತಮಂ ಕುಡಿಯರಾರೊ ಕಿವಿಗುಡಿತೆಗಳಿಂ ೧೧೭

ಆದಿಪುರಾಣಂಗಳ್ ಪಳ
ವಾದುವೆನಲ್ ಮತ್ತೆ ಮಧುರ ಕವಿತಾಮೃತಮು

ತ್ಪಾದಿಸೆ ಚೋದ್ಯಮಿದಭಿನವ
ಮಾಮುಮ ಧಾರಿಣಿಗೆ ಧರ್ಮನಾಥಪುರಾಣಂ ೧೧೮

ನಿರ್ವಹಿಸಿ ಪೇಳ್ವನುಜ್ಝಿತ
ಗರ್ವಂ ಸತ್ಕವಿ ಕಳಾವಿಳಾಸಂ ಕೇಳ್ವಂ
ಸರ್ವಜ್ಞನೆನೆ ನಿಬಂಧಮ
ನುರ್ವರೆಯೊಳಗಂ ತದಿಂತದೆಂಬವನಾವಂ ೧೧೯

ಸಕಲಜ್ಞಗೊಂದೆ ಶಾಂತಂ ರಸಮದಱೊಳಗಾತ್ಮಾನುರಾಗಪ್ರದಂ ಲೌ
ಕಿಕಮಪ್ಪೆಂಟು ರಸಂಗಳ್ ಬೆರಸೆ ವಿರಸಮೆಂದೆನ್ನದಿರ್ಗಾಂಪ ನೀಂ ಪೋ
ಗು ಕರಂ ನಿಷ್ಪನ್ನ ಶಾಂತಿಪ್ರದ ಸಮರಸ್ಮೃತಿ ಕ್ಷೇತ್ರಮೊಳ್ಪ್ರಾತಿಹಾರ್ಯಾ
ಷ್ಟಕಮಾದಂ ಕೂಡಿಯುಂ ಮಾಡದೆ ಮಱೆದುದೆ ಕೈವಲ್ಯಮಾಂಗಲ್ಯದೊಳ್ವಂ ೧೨೦

ಮಟ್ಟರಗಳೆ॥

ಶ್ರೀ ಪರಮಪುರುವರ್ಧಮಾನ ಜಿನಸಭೆಯೊಳಗೆ
ಭೂಪಾಲ ಭರತ ಮಗಧ ತ್ರಿಪೀಠದ ಕೆಳಗೆ
ಪುಷ್ಪಾಂಜಲಿಯ ಪೂಜೆಯ ಮಾಡಿ ಮನವಾರೆ
ನಿಷ್ಪನ್ನ ಭಕ್ತಿಭಾವನೆ ಬೆರಸಿ ಬಗೆಗೂಡೆ
ವರವೃಷಭಸೇನ ಗೌತಮರ ಮೊಗಮಂ ನೋಡಿ
ನಿರವದ್ಯ ಧರ್ಮಕಥನಪ್ರಶ್ನಮಂ ಮಾಡಿ
ಕೈಮುಗಿಯಲಾ ಗಣಾಧೀಶ್ವರರ್ ಮುಂ ಪೇಳ್ವ
ಮೈಮೆಗೆಡದುತ್ತಮ ವಚೋವೃತ್ತಿಯಂ ತಾಳ್ದ
ಪೂರ್ವಾನುಯೋಗದಿಂ ಪುಟ್ಟಿ ಪುಣ್ಯಂವಳೆದ
ಸರ್ವಜನದಂತರಂಗದ ಕಲುಷಮಂ ಕಳೆದ
ನಿರ್ಮಲ ದಯಾಮೂಲಮೆನೆ ಧರೆಗೆ ದೊರೆವಡೆದ
ಕರ್ಮಖಳಬಲವಣೆಯ ಪಣೆಯಕ್ಕರಂದೊಡೆದ
ಮೂಱುಮೂಢಂಗಳತ್ತೆಱಗಿಸದೆ ತೊಲಗಿಸುವ
ಮೀಱುವ ಕಷಾಯಭಟರಂ ಕಳಲೆನಲಗಿಸುವ
ಮದದ ಮಸಕಮನೇಳದಂತಿರಡಿಗರ್ದಿಸುವ
ಸದಮಳ ಶ್ರೀ ಶೀಲಮಂ ಪೊರೆದು ಪೊರ್ದಿಸುವ
ಸುವ್ರತಾಚರಣಂಗಳಂದಮಂ ತೋಱಿಸುವ
ತೀವ್ರ ಭವಸಂತಾಪಮಂ ತಣ್ಣನಾಱಿಸುವ
ತನುವನೆಡೆಗೊಂಡ ದುರ್ಗುಣಶಲ್ಯಮಂ ಕಳೆವ
ಮನದ ಮೈಲಗೆಗೆಸಱನಾಗಳಂತಿರೆ ತೊಳೆವ

ವಸ್ತುಸ್ವಭಾವಮಿಂತೆಂದು ಕಣ್ದೆಱೆಯಿಸುವ
ನಾಸ್ತಿಕಾದಿ ಪ್ರತಿಭೆಯಂ ಪಾಱೆ ಜಱೆಯಿಸುವ
ಧರ್ಮಜಿನನಾಥಕಥೆಯಂ ಕೇಳ್ದು ಬಳಿಸಂದು
ಧರ್ಮಾರ್ಥಕಾಮಮೋಕ್ಷಕ್ಕೆ ಕಾರಣಮೆಂದು

ಕಿವಿಗಿಂಪಂ ಬೀಱುವನ್ನಂ ನವರಸಮೆರ್ದೆಯೊಳ್ ಭಾವಮಚ್ಚೊತ್ತುವನ್ನಂ
ಭುವನಂ ಕೊಂಡಾಡುವನ್ನಂ ಸುವಿದಿತ ಕವಿತಾಧರ್ಮದಿಂ ಧರ್ಮನಾಥ
ಸ್ತವ ಪುಣ್ಯಶ್ಲೋಕಮಂ ತಾಳ್ದಿದನುದಿತ ಕೃಪಾಲೋಕನನಸ್ತಾರ್ತಶೋಕಂ
ಸವಿವೇಕಂ ವಿಶ್ವವಿದ್ಯಾಸಮುದಯ ಸುಮನಸ್ಸಂಚರಂ ಚಂಚರೀಕಂ ೧೨೧

ಇದು ಸಕಲ ಸುಕವಿಜನಮನಃಸುಧಾಕರಕಾಂತ ಸಂತತ ದ್ರವೀಕರಣ ಕಾರಣ ಕರ್ಣಾಟಕವಿತಾಕಳಾವಿಳಾಸವಿದು ಮಧುರಕವೀಂದ್ರನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಪೀಠಿಕಾಪ್ರಕರಣಂ ಪ್ರಥಮಾಶ್ವಾಸಂ.

ದ್ವಿತೀಯಾಶ್ವಾಸಂ

ಶ್ರೀಧರ್ಮಚರಿತ ನವ ಸುಮ
ನೋಧರಣೀರುಹದೊಳುರು ಕಥಾಕೇಳಿಯನು
ದ್ಬೋಧಿಸಿದನೊಸೆದು ಸಕಳ ಸು
ಖಾಧಾರಂ ಸರಸಕವಿರಸಾಳವಸಂತಂ ೧

ವೃತ್ತ ॥

ಆದೆಂತೆನೆ ಪುರಾಣಸಂಗತಿಗೆ ಸಲ್ವುವೆಂಟಂಗದೊಳ್
ಮೊದಲ್ ಕಡೆಯ ವರ್ಣನೋಚಿತದ ಲೋಕದಾಕಾರಮಂ
ವಿದಗ್ಧರಱಿವಂತು ಪೇಳ್ದಪೆನಪಾರವಿಸ್ತಾರ ಸಂ
ಪದಂ ಪುದಿದು ಪುಷ್ಕರಂ ನೆಗಳ್ದುದಾ ಮಹಾವ್ಯೋಮದೊಳ್ ೨

ಮೊದಲಿಂದ್ರಕ್ಕೇಕರಜ್ಜುಪ್ರಮಿತಿ ನೆಗಳ್ದುದೀರೇಳೆನಲ್ಕೋಜೆಯಿಂ ಚೆ
ಲ್ವೊದವಲ್ ವೇತ್ರಾಸನಂ ಝಲ್ಲರೀಮುರಜಮನೊಂದೋಳಿಯಿಟ್ಟಂತಿರಿನ್ನಾ
ರಿದಱಿಂದಂಗಾಣ್ಬರೆಂಬಗ್ಗಳಿಕೆ ಬರಲೆರಳ್ಕೂಱಱಿಂ ಸುತ್ತಿ ಪೆಂಪಂ
ಪುದಿದಿರ್ಕುಂ ಲೋಕಮುಜ್ಜೃಂಭಿತ ಜಿನಪತಿ ಬೋಧಾವಲೋಕೈಕಗಮ್ಯಂ ೩

ಪೆಱರಳಿವ ಪೊರೆವ ಪೂಡುವ
ತೆಱಕ್ಕೆ ಪೊಱಗಾಗಿ ಮತ್ತೆ ತುದಿನಡುಮೊದಲೆಂ
ದುಱೆ ಪಸುಗೆವಡೆದು ನೇರ್ಪಿಂ
ನೆಱೆದುದು ಷಡ್ದ್ರವ್ಯನಿಯತ ಭವನಂ ಭುವನಂ ೪

ಚತುರಸ್ರಂ ತ್ರಸನಾಳಮೊಂದೆ ನಿಜರಜ್ಜುಪ್ರಾಪ್ತಿಯಿಂದಾ ತ್ರಿಲೋ
ಕತಳಾಗ್ರಂಬರಮೆತ್ತಿ ನಿಂದ ಮಣಿಗಂಬಂಬೊಲ್ ಬೆಡಂಗಾದುದ
ಲ್ಲಿ ತಗುಳ್ದಿರ್ಪುವನಂತ ಜಂತುವುಳಿದಾಲೋಕಪ್ರದೇಶಂಗಳೊಳ್
ಸತತಂ ಸ್ಥಾವರಮಲ್ಲದುದ್ಭವಿಸವೆಂದುಂ ಜೀವಮಾವಶ್ಯಕಂ ೫

ವ: ಆ ತ್ರಸನಾಳಮೆಂಬ ಸೂತ್ರದಿಂ ಸೂತ್ರಿಸಿದ ಜಗತ್ತ್ರಯನಟನ ಕಟಿಸೂತ್ರ ಮೆಂಬಂತೆ ಬೆಡಂಗುವಡೆದ ಮಧ್ಯಮಲೋಕದೊಳಗೆ

ದ್ವೀಪಾಕೂಪಾರಮಾದೀಕ್ರಮದಿನಗಣಿತಂ ಸುತ್ತಲುಂ ಸುತ್ತಿರಲ್ ಮೆ
ಯ್ಯಾಗ್ಗಪಾಗಿನ್ನುಂ ಸ್ವಯಂಭೂರಮಣ ಜಲಧಿ ಪರ್ಯಂತಮೊಲ್ದೋಲಗಂಗೊ
ಟ್ಟೀ ಪೂರ್ಣಶ್ರೀಗೆ ಮೇರುಕ್ಷಿತಿಧರಮೆ ಜಯಸ್ತಂಭಮಾಗಿರ್ದ ಜಂಬೂ
ದ್ವೀಪಂ ಕಣ್ಗೆಂ ಬೆಡಂಗಾದುದೋ ಲವಣಸಮುದ್ರೈಕ ಮುದ್ರಾತಿಭದ್ರಂ ೬

ವ: ಆ ಜಂಬೂದ್ವೀಪದ ನಟ್ಟನಡುವೆ

ಮಾಲಿನಿ|| ಕುಳನದಿ ಪದಿನಾಲ್ಕುಂ ಗೋತ್ರಶೈಲಂಗಳಾಱುಂ
ಬಳಸಿದ ಭರತಾದಿ ಕ್ಷೇತ್ರಮೇಳುಂ ಬೆಡಂಗಂ
ತಳೆಯೆ ತೊಳಪ ಜಂಬೂದ್ವೀಪ ಸೌವರ್ಣಪಾತ್ರ
ಕ್ಕಳವಡೆ ಸೊಡರೆಂಬಂತಾಯ್ತು ಹೇಮಾಚಲೇಂದ್ರಂ ೭

ಜಿನಜನ್ಮಸ್ನಾನಪೂಜಾವಿಧಿ ವಿಬುಧಗಣಾತಿಥ್ಯಕಂ ಮಿತ್ರಸದ್ವ
ರ್ತನಮೆಂದುಂ ಕುಂದದುದ್ಯೋತಿಪ ವಿಪುಳ ಸುವರ್ಣಪ್ರಭಾರಂ ತ್ರಿಲೋಕೀ
ಜನಮೆಲ್ಲಂ ಕೂಡೆ ಕೊಂಡಾಡುವ ಮಹಿಮೆಗಡರ್ಪಾದ ಮಧ್ಯಸ್ಥಭಾಗಂ
ತನಗೇಕಚ್ಛತ್ರಮಾಗಲ್ ನೆಗಳ್ದುದು ಮಹಿಭೃತ್ಸ್ವಾಮಿ ಹೇಮಾಚಲೇಂದ್ರಂ ೮

ಆ ಮಂದರದಿರ್ವಕ್ಕದ
ಭೂಮಿಗಳೊಳ್ ಕಡಲಕಡೆವರಂ ನಿಮಿರ್ದ ಮಹಾ
ಸೀಮೆಯ ಭರತೈರಾವತ
ನಾಮದ ವಿಷಯದ್ವಯಂ ಪೊದಲ್ದತ್ತದಱೊಳ್ ೯

ತಣಿವಂ ಕಣ್ಬರಿಗೀವುದುಚ್ಚಳಿತ ಗಂಗಾ ಸಿಂಧು ಸೌಗಂಧಿಕೋ
ಲ್ಬಣ ಗಂಧಂ ವಿಜಯಾರ್ಧರತ್ನಕಟಕಂ ಷಟ್ಖಂಡಭೂಮಂಡಳಂ
ಪ್ರಣುತೋದಾರ ಚರಿತ್ರಮಾದ ಭರತಕ್ಷೇತ್ರಂ ಮನಂಗೊಂಡು ದ
ಕ್ಷಿಣದೊಳ್ ದಕ್ಷಿಣಬಾಹುದಂಡಮನೆ ಜಂಬೂದ್ವೀಪಭೂಪಾಲನಾ ೧೦

ಆ ಭರತಕ್ಷೇತ್ರದೊಳೆ ಮ
ಹಾ ಭೋಗಮನಪ್ಪುಕೆಯ್ದು ವಿಷಮೊಂದದ ನಾ
ನಾ ಭೋಗಿಗಳೇ ತಾನೆ ಸ
ನಾಭಿ ಶ್ರೀಖಂಡಮೆನಿಪುದಾರ್ಯಾಖಂಡಂ ೧೧

ವ: ಅಲ್ಲಿ

ದ್ರುತವಿಳಂಬಿತಂ॥ ಕರಮೆ ಕಣ್ಗೆಸೆದಿರ್ಪುದು ಪುಷ್ಪ ಸುಂ
ದರಮರಂದ ಪರಿಪ್ಲವಭೃಂಗರುಘುಂ
ಕರಣ ಸೂಚಿತ ಮನ್ಮಥವಾಹಿನೀ
ಬಿರುದ ಪೇಶಲಮುತ್ತರ ಕೋಶಲಂ ೧೨

ಅದು ಮದಕರಿ ವಿದಳಿತಮೃಗ
ಮದ ವಿದಿತ ಘುರೀರಘುರೀ ಸಮುದ್ಭೂತ ನದೀ
ನದ ಸಮುದಿತ ಕುಮುದ ಕುಟೀ
ವಿದಳನ ಪಟು ಜನನಪವನ ಸುರಭಿದಿಗಂತಂ ೧೩

ಆ ವಿಷಯದೊಂದು ಪೆಂಪಂ
ಭಾಪಿಸಿ ಬಗೆಗಿಡದೆ ಪೊಗಳ್ವನಂತರನಂತ
ಭೂವಳಯದೊಳುಳ್ಳೊಡೆ
ಶೋಭಾವಹಮೆನೆ ಪೊಗಳಲಳವದುಳಿದರ್ಗಳವೇ ೧೪

ಪಳು ನಾನಾ ಫಲಭೂಜದಿಂ ನಗಕುಲಂ ನಾನಾ ಮಣಿಶ್ರೇಣಿಯಿಂ
ದೆಳೆ ನಾನಾವಿಧ ಸಸ್ಯದಿಂದುಪವನಂ ನಾನರ್ತು ಸಂಪತ್ತಿಯಿಂ
ಬೆಳೆ ನಾನಾಜನ ಹರ್ಷದಿಂ ಪರಿಜನಂ ನಾನಾವಿಧ ಶ್ರೀಯಿನ
ಗ್ಗಳಿಸಲ್ಕಗ್ಗಳಿಸಿರ್ಪುದಾ ಜನಪದಂ ನಾನಾಸುಖೈಕಾಸ್ಪದಂ ೧೫

ಆ ವಿಷಯಾಂತರಾಳದಗಲಕ್ಕೆ ಬಯಲ್ವಿಡಿದುಳ್ಳರಲ್ದ ಬೆ
ಳ್ದಾವರೆವೂಗಳಿಂ ನೆಗಳ್ದ ಧೂಳಿಗಳುಬ್ಬರಮಾಗಿ ಮಾರ್ಗದೊಳ್
ತೀವಿರೆ ನಟ್ಟ ಬಟ್ಟೆಗರ ಪಜ್ಜೆಗಳಂ ಬಳಿಸಂದು ಪೋಪನಾ
ದಾವಗಮೋವದೇಜಿಸಿದ ಪೂವಿನ ಬಿಲ್ವೆರಸುದ್ಗಮಾಯುಧಂ ೧೬

ಪೊಲನ ಪೊದಳ್ಕೆವೆತ್ತ ಸಿರಿಯಂ ಸಲೆಬಣ್ಣಿಪನಾವನಾವಗಂ
ನಲಿವರಿದಾಡೆ ಕತ್ತುರಿಮಿಗಂ ಕರಿದಾದೊಡೆ ಕುಂಕುಮಂ ಪೊದ
ಳ್ದಲರ್ದುಗೆ ಕೇಸರಂಬೊರೆದ ಕೆನ್ನೆಲನಲ್ಲದೆ ಬೇರೆ ಮತ್ತೆ ಕೆ
ನ್ನೆಲನೆರೆಯೆಂಬುದಿಲ್ಲ ಪರಿಭಾವಿಪೊಡಾ ವಿಷಯಾಂತರಾಳದೊಳ್ ೧೭

ಬಿತ್ತಿದೊಡೆ ಬೆಳೆವುದಗ್ಗದ
ಭತ್ತಮನದು ಪಿರಿದೆ ಪಿರಿದು ಮಾತೇನಾರುಂ
ಬಿತ್ತದೆ ಪೊನ್ನಂ ಬೆಳೆವುದು
ಮತ್ತಿನ ನೆಲನದಜಿ ಪೊಲನ ನೆಲದೋರಗೆಯೇ ೧೮

ಎಳನೀರ ಚಂದ್ರಕಾಂತೋ
ಪಳದ ಪೊನಲ್ ಪೊರೆಯೆ ಸಂತತಂ ಪೆರ್ಚೆಳಸಂ
ಮಳೆಯಂ ಪೊಳೆಯಂ ಪಾರದೆ
ಬೆಳೆವುದು ಪೊಲನಾವ ಮಾತೃಕಮದೆಂದಱಿಯಂ ೧೯

ಬಿಲ್ಗೊನೆಯಾಱಿಂದು ಮದನಂ ತಲೆದೂಗೆ ನೆಗಳ್ತೆವೆತ್ತ ನೆ
ಯ್ದಿಲ್ಗೊಳನಚ್ಚದಾವರೆಗೊಳಂ ತಿಳಿನೀರ್ಗೊಳನಿಂಪುವೀಱುವಾ
ಬಲ್ಗೊಳನಲ್ಲಿ ತನ್ನ ಬೆಳಸಂ ಪಸಮೋಡುವಿನಂ ಧರಿತ್ರಿ ನೋ
ಡಲ್ಗಡಿಗೆಟ್ಟ ಕಣ್ದೆಱೆದುದೆಂದೆನೆ ಸಂತತಮೊಪ್ಪಿ ತೋಱುಗುಂ ೨೦

ಪಲ್ಲವಿಸೆ ಪರ್ವೆ ಪರ್ವದೊ
ಳೆಲ್ಲೊದವಿಸಿದಮೃತರಸಮನೆಱೆದಿಂದುವೆ ಪೂ
ಣ್ದಲ್ಲಿ ಮದನಂಗೆ ಪೊಸಪದ
ವಿಲ್ಲನೆ ಬೆಳೆದಂತೆ ಬಿಳಿಯ ಕರ್ವುಗಳೆಸೆಗುಂ ೨೧

ಧವಳೇಕ್ಷುರಸದ ಕುಸುಮಾ
ಸವದ ಪೊನಲ್ ಪೊರೆಯೆ ಕಳಮೆಗಳ್ ಬೆಳದಪುವೆಂ
ಬವರ ನುಡಿಗೇಳಲೇಂ ಪೇ
ಳವೆ ತವಕದಿನವಱೊಳುಣ್ಮಿದಿಂಪುಂ ಕಂಪುಂ ೨೨

ಮೊಳೆವ ಪದಂ ಮಡಲಿಱಿದುದೆ
ಬೆಳವ ಪದಂ ಪೊಡೆಗಳೊಡೆದು ಪಾಲ್ದೆನೆದುಱುಗ
ಲ್ದಳೆವ ಪದಂ ಗಿಳಿವಿಂಡುಗ
ಳಿಳಿವ ಪದಂ ಕೆಯ್ಗಳೊಳ್ ಪದಂಬಡೆದೆಸೆಗುಂ ೨೩

ಕಿಱುವದದ ಕಳಮೆಯೊಳ್ ಪೂ
ತೊಱಗಿದ ಚೆನ್ನೆಯ್ದಿಲಲರ ರಜಮಮರ್ದಿರೆ ಪ
ಣ್ತುಱುವ ತೆನೆದುಱುಗಲೆಂದಗಿ
ದೆಱಗುವ ಗಿಳಿವಿಂಡು ಬಂಜೆವಡಿಪುದು ಬಗೆಯಂ ೨೪

ಆ ಕಾಲ್ಗರ್ದೆಯ ಮಡಿಯೊಳ
ನಾಕುಳಮುಳ್ಳಲರ್ದ ಕಮಲಕುವಲಯಕುಮುದಾ
ನೀಕಂ ಕಳಮಕ್ಷೇತ್ರ
ಶ್ರೀ ಕಣ್ದೆಱೆದಂತೆ ಕಣ್ಗೆ ಸೊಗಯಿಸಿ ತೋರ್ಕುಂ ೨೫

ವ: ಮತ್ತಮೊಂದೆಡೆಯೊಳ್ ಪಚ್ಚೆವರಲ ಪಸುರ್ಗದಿರನಗೆವೊಯ್ದಂತೆ ನೆಗೆದ ಬಾಗದ ಜವ್ವನಕ್ಕೆ ಮೊಗಸಿ ಮೊಗಮಿಕ್ಕಲೆಂದು ಬಂದಾ ೨೬

ವದನ ಸುಗಂಧಮಂ ಬಯಸಿ ಪಾಯ್ವಳಿಮಾಲೆಯೆ ಮೇಳಮಾದ ತಾ
ನದೊಳನುರಾಗಮಂ ಪಡೆದು ಪಾಮರಿ ಪಾಡುವ ಸೀಯನಪ್ಪ ಗೇ
ಯದ ಬಲೆಯೊಳ್ ತೊಡಂಕಿ ಬಿಡದಾಲಿಪ ಪುಲ್ಲೆಯನಲ್ಲಿ ಕಂಡು ಲೆ
ಪ್ಪದ ಮಿಗಮೆಂದೆ ಬಂದೆಳಸಿ ನೋಡುಗುಮಧ್ವಗಕಾಮಿನೀಜನಂ ೨೭

ಪಾಱಿಸಲೆಂದು ಬಂದು ಬಳಿಗಳ್ ಘಳಿಲೆಂಬಿನಮಿಂಪುವೀಱೆ ಮೆ
ಯ್ತೋಱುವ ತಮ್ಮ ಕೆಯ್ಪುಱಿಗೆ ಬೆರ್ಚಿ ಶುಕಂ ತೆನೆಗರ್ಚಿ ಬೇಗದಿಂ
ಪಾಱೆ ಮಡಲ್ತು ಮಂಡಳಿಸೆ ಗರ್ದೆಗಳೆರ್ದು ನಭಕ್ಕೆ ಮೊಕ್ಕಳಂ
ಪಾಱಿದುವೆಂದು ಪಾಮರಿಯರೀಕ್ಷಿಪರಾರ್ದು ನಭೋವಿಭಾಗಮಂ ೨೮

ಪವಣಂ ನೋಡದೆ ನಾಡೆಯುಂ ಸೆಣಸಿ ಮುನ್ನೆಕ್ಕೆಕ್ಕೆಯಿಂ ಪಕ್ಕಿ ಸೋ
ವವರ ಸ್ತ್ರೀಯರ ಸೀಯನಪ್ಪ ನುಡಿಯಂ ಕೇಳ್ದಾಗಳಂತಾತ್ಮಗ
ರ್ವವನೀಡಾಡಿ ಬಿಗುರ್ತುತಂಬುಲಕೆ ಬಾಯಾಂಪಂದದಿಂ ಬಂದು ಪಾ
ಯ್ವುವು ಕೀರಾಳಿಗಳಲ್ಲಿ ಪಾಮರವಧೂಬಿಂಬಾಧರಕ್ಕಾವಗಂ ೨೯

ವ: ಮತ್ತಮೊಂದೆಡೆಯೊಳ್ ತುಂಬಿಬೆಳೆದ ಪೊಂಬೆಳೆವದದ ಗದ್ದೆಗಳ ಮಡಿಯ ತಡಿವಿಡಿದು ಪರಿವ ಪರಿಕಾಲ್ಗಳ ಪಕ್ಕಂಬಿಡಿದು ಕಿಕ್ಕಿಱಿಗಿಱಿದು ಪೊಂಗೇದಗೆಯ ಬಾಳ್ವೇಲಿಗಳ ಕೆಲ್ಲೆಯೊಳಲ್ಲಲ್ಲಿ ಪಲ್ಲವಿಸಿದ ಸುರಹೊನ್ನೆಯ ತಣ್ಣೆಳಲ ಕೆಳಗೆ ಸಂಚಿಸಿದುಂಚಮಾದ ಮಂಚಿಕೆಗಳ ಮೇಲೆ

ಸಮುದಗ್ರಾಟೋಪದಿಂ ಗೋಪಿಯರರಗಿಳಿಯಂ ಬೆರ್ಚಿಸಲ್ಕೆಂದು ನಿಂದು
ದ್ಗಮಬಾಣಂ ಬಾಪುಬಾಪೆಂದೆನೆ ಪದಮಿಡಿವಿಲ್ಲಿಂ ತಗುಳ್ದೆಚ್ಚೊಡುಚ್ಚ
ಕ್ರಮದಿಂ ಪಾಯ್ವಿಂದ್ರನೀಲೋಪಲ ಘಟಿಕೆಗಳೆಂಬಂತಿರತ್ತಿತ್ತ ಮತ್ತ
ಭ್ರಮರಂಗಳ್ ಪಾಱೆ ಕಮ್ಮಂಗಳವೆಯ ಮಡಿಯೊಳ್ ಗಾಡಿವೆತ್ತಾಡುತಿರ್ಕುಂ ೩೦

ಅರಗಿಳಿವಿಂಡು ಪಾಯೆ ನಸುಸೋಕಿಂದೆಱಂಕೆಯ ಗಾಳಿಗೊಂದನೊಂ
ದೊರಸಿ ನಿರಂತರಂ ಸುರಿವ ನುಣ್ದೆನೆ ಕಾಲ್ಗಳ ಧಾರೆಗೊಡ್ಡಿ ಚಂ
ಚುರ ನಿಜಚಂಚುವಿಂ ಸವಿದು ಸಂತಸದಿಂದೆರಡಕ್ಕೆ ಪಿಗ್ಗಿ ಮಂ
ಥರಗತಿಯಿಂ ಮರಲ್ದು ಸುಳಿದಾಡುಗುಮಲ್ಲಿ ಮರಾಳಮಂಡಲಂ ೩೧

ಕರ್ಚಿ ಸವಿನೋಡಿ ನಲ್ಲ
ಳಿಚ್ಚೆಯನಱಿದಱಿದು ನೀಡಿ ಪಾಲ್ದೆನೆ ಗುಟುಕಂ

ಬಿಚ್ಚತಮಿಾವರೆ ಗಿಳಿಗಳ್
ಬೆಚ್ಚನೆ ಬೆರ್ಚಿಸುವುವಲ್ಲಿ ಪಥಿಕರ ಮನಮಂ ೩೨

ವ: ಮತ್ತಮಾ ನಾಡ ನಾಲ್ವಟ್ಟೆಯೊಳಲ್ಲಲ್ಲಿ ಫುಲ್ಲಶರಧರಾವಲ್ಲಭಂಗೆ ಶುಕಪಿಕ ಶಿಖಾವಳ ಮರಾಳಾದಿ ಚತುರಂಗಬಲಮಂ ತೋಱಲೆಂದು ಪಾಡಲೆಂದು ಪಾಡಿವಳನಾದ ವಸಂತಂ ಸವೆದ ತವಂಗದಂತೆ ತೆವರೊಳವಿರಳಮಾದರವಂಟಿಗೆ ದಾಣಂಗಳೊಳ್ ಸ್ತನಕಳಶಕ್ಕೆ ಪೊಂಗಳಸಮಂ ಪಡಿಯೆತ್ತುವ ತೋಳಧಾರೆ ತಾನೆನೆ ಕರವಾಳಧಾರೆಯೆನೆ ಧಾರೆಗೆ ಕೆಯ್ಗಳನೊಡ್ಡಿ ತಮ್ಮ ಜವ್ವನವನೆ ಕೂರ್ತು ಧಾರೆಯೆಱೆವಿಷ್ಟ ಫಲಂಗಳನಿತ್ತು ತನ್ಮಹಾ ಜನಪದದೊಳ್ ಪ್ರಪಾವನಿತೆಯರ್ ಪಡೆವರ್ ಪಥಿಕಪ್ರಮೋದಮಂ ೩೩

ತವೆತೃಷೆ ಪಿಂಗೆ ಪೋಪನಿವನೆಂದುಮವಳ್ಕರವಾರಿ ತೀರೆ ಪಿಂ
ಗುವಳಿವಳೆಂದುಮಾ ಪಥಿಕನೊಯ್ಯನೆ ಕೂರ್ತೆಱೆವೀಂಟುವಿಚ್ಚೆಗಿಂ
ಡವಸರಮಿಂತಿದೆಂದಲರ ಮುಮ್ಮೊನೆ ಬೊಳೆಯನಾಯ್ದು ಕಾಯ್ದು ಕೊ
ಲ್ಲವಗಣೆಗಾಣಲಾರ್ದೆಸುವನಂಗಜನಿರ್ವರನೊಂದೆ ಬಾಣದಿಂ ೩೪

ವ: ಮತ್ತಮಾ ಮಹಿಯೊಳ್ ಮನೋಜರಾಜನೆಂಬೊ ತನುಜನೋಜೆಯಿಂ ಪೂಗಣೆಯ ಗಳೆಯೊಳಳೆದು ಪವಣಿಸಿ ನವಿಲ್ವಾರುವಳವಿಯೊಳಳವಡಿಸಿ ಕಟ್ಟಿದೂರೂರ್ಗಳ ಸೀಮೆಯೊಳ್ ತೀವಿದ ಜೀವಧನಧಾನ್ಯಸಮೃದ್ಧಿಗಳನೀಕ್ಷಿಸು ವಿಕ್ಷುಚಾಪವಧೂಟಿಯ ಕಟಾಕ್ಷದಂತೆ ಕಮನೀಯಮಾದ ತಟಾಕಂಗಳಾಧಾರಮಾಗಿ ನಿಡುವುರ್ವಿನಂತೆ ಪರ್ವಿದ ಪಿರಿಯೇರಿಗಳ ಕೆಳಗೆ

ಕವಿದು ಕವಲ್ತು ತಳ್ತ ಮರದೊಂಗಲ ಕೀಳ್ಕೆಲದೊಳ್ ಪೊದಳ್ದು ಕೋ
ಡುವ ಪರಿಕಾಲ್ಗಳಿರ್ತಡಿಯ ತಣ್ಪುಳಿಲಿಂಬಿನೊಳಿಚ್ಚೆವೇಟಮಂ
ಸವಿಯದೆ ಪೋಪ ಬಟ್ಟೆಗರ ಪೊಳ್ತಿರ್ದೆ ಪವ್ವನೆ ಪಾರೆ ಕೂಡೆ ಪಾ
ಡುವವೆಳದುಂಬಿ ಬೆಂಬಿಡದೆ ಕಾವನ ಕರ್ವಿನ ಬಿಲ್ಲ ಬಿಂಕಮಂ ೩೫

ಬಳ್ವಳಬಳಿದೆಳಲತೆಗಳ್
ಬಾಳ್ವೇಲಿಯ ಕೆಲದೊಳಲೆದು ಬೇಟದ ಬಿಣ್ಪಂ
ಬೀಳ್ವೆಳವೆಂಡಿರ ಮನಮಂ
ಪೋಳ್ವರಗಿಳಿವುಲಿಗಳಸದಳಂ ಬನಬನದೊಳ್ ೩೬

ಪಲಸಿನ ಪಂಕ್ತಿ ಚಂದನದ ಸಂದಣಿ ಬಾಳೆಗಳೋಳಿ ಮಾವಿನಾ
ವಲಿ ನಸೆಯೋದ ಪಾದರಿಯ ಬೀದಿ ಲವಂಗದ ಪೊಂಗು ನೀಳ್ದ ನೆ
ಯ್ದಿಲ ಪೊಲನಬ್ಜದಾಗರವಶೋಕದನೀಕನಿಯಾಜು'ಯೋಳಿ ಕ
ತ್ತಲಿಪೆಲೆವಳ್ಳಿ ಮಲ್ಲಿಗೆಯ ವಲ್ಲರಿ ಚೆಲ್ವೆಸೆದಿರ್ಪುದೆತ್ತಲುಂ ೩೭

ರೂಢಿಸಿದ ಪಲಸಿನೊಳ್ ಪ
ಣ್ಮೊಡಲ್ ಮದ್ದಳೆಯನೊತ್ತೆಗೊಂಡವೊಲಿರೆ ಕಂ
ಡೋಡಿಸಿ ನಗುವಂತೆಸೆವುವು
ದಾಡಿಮಗಳ್ ಬಿರಿವ ಬೀಡೆವಣ್ ಬನಬನದೊಳ್ ೩೮

ಮಿಸುಪ ಕೊಳಂ ಕೊಳಂಗಳೆಡೆಯೊಳ್ ಬಿರಿದಂಬುಜವಂಬುಜಂಗಳೊಳ್
ಮುಸುಱಿದ ತುಂಬಿ ತುಂಬಿಗಳನೋವದೆ ಸೋವೆಲದೊಳ್ಳೆಲರ್ಗೆ ಕಂ
ಪಿಸುವ ಲತಾಗೃಹಂ ನವಲತಾಗೃಹದೊಳ್ ಸೊಗಮಿರ್ಪ ಭೋಗಿವಾ
ನಸರೆಸೆದಿರ್ಪರಾ ವನದೊಳೇವೊಗಳ್ವೆಂ ತದಿಳಾವಿಳಾಸಮಂ ೩೯

ಆ ವನಮಧ್ಯದೊಳ್ ಪಥಿಕದಂಪತಿಳ್ ತಲೆಯಂ ಪಳಂಚುವಿ
ಮ್ಮಾವಿನ ಪಣ್ಗಳಂ ಸವಿದು ಸಯ್ಪನೆ ಸೋರ್ವೆಳನೀರನೀಂಟಿ ನೀ
ರ್ವೂಪಿನ ಗಾಳಿ ತಣ್ಣಲೆಯೆ ತಳ್ತ ತಮಾಳ ಲತಾವಿತಾನದೊಳ್
ತಾವಿರೆ ಕೂರ್ತು ಸಾರ್ಗುಮೆ ರತಶ್ರಮಮಲ್ಲದೆ ಪೇಳ್ ಪಥಶ್ರಮಂ ೪೦

ಬಗ್ಗಿಪ ಕಳಕಂಠಂ ಬರಿ
ಮೊಗ್ಗೆಯ ಬಂಡುಂಡು ನಲಿವ ಪೆಣ್ದುಂಬಿ ಸಮಂ
ತಗ್ಗಳಿಸಿ ಗಳಪುವರಗಿಳಿ
ಸುಗ್ಗಿಯ ಸಿರಿಯೊದವನಾವಗಂ ಬಿತ್ತರಿಕುಂ ೪೧

ನೆರೆದ ಬನಂಗಳೊಳ್ ಪಿಕದ ಬಗ್ಗಳೆ ಪರ್ವಿದ ಪೂಗೊಳಂಗಳೊಳ್
ತಿರುಗುವ ತೊಂಡುದುಂಬಿಗಳ ಪಲ್ಮೊರಪಂ ಪೊಲಗೆಯ್ಗಳೊಳ್ ಪೊದ
ಳ್ದರಗಿಳಿಯಬ್ಬರಂ ತಗುಳೆ ಬಂದ ವಿಯೋಗಿಜನಕ್ಕೆ ನಾಡೆ ನಿಂ
ದಿರಲೆಡೆಯಲ್ಲದಿರ್ದುಮೆಲೆ ಸರ್ವಸುಖಕ್ಕೆಡೆಯಾದುದಾ ನೆಲಂ ೪೨

ಪರಿಮಳದಿಂ ನಿಜಕುಂತಳ
ಭರಮಂ ಪೊರೆಯೆಂಬರಲ್ಲದೊರ್ವರನೊರ್ವರ್
ಪೊರೆಯೆಂಬವರಿಲ್ಲಲ್ಲಿಯ
ನರನಾರೀಜನದೊಳಿನ್ನದೆನ್ನದೋ ದೇಶಂ ೪೩

ವನಮಿಲ್ಲದೂರ್ಗಳಿಳೆ ಜ
ವ್ವನಮಿಲ್ಲದ ಪೆಣ್ಗಳಾವಗಂ ತೀವಿದ ಗೋ
ಧನಮಿಲ್ಲದ ಪಟ್ಟಿ ಯಶೋ
ಧನಮಿಲ್ಲದ ಜನಸಮೂಹಮಿಲ್ಲಾ ನಾಡೊಳ್ ೪೪

ಶರಕಟಕಾವೃತಿಭೃತ ಮಧು
ಕರ ಮಾತಂಗಪ್ರವರ್ತನಂ ಸತ್ಪಥ ಭೀ
ಕರಕಂಟಕ ವಂಶೋನ್ನತಿ
ಪರಿಭಾವಿಪೊಡಿಲ್ಲ ನಗದೊಳಲ್ಲದೆ ನಾಡೊಳ್ ೪೫

ಪಿಡಿಕಟ್ಟಾಱಡಿ ತೊಂಡುಬಂಡು ಮೊಱೆಪೊಕ್ಕೇಱೂಯಿಲಂ ಚೌರ್ಯಮಂ
ಬೊಡವೆಂದುಂ ತಲೆದೋಱವೇಱವೆಳಗುಂ ಭೂಭೂಮಿಪರ್ ಧರ್ಮದಿಂ
ನಡೆವರ್ ನಚ್ಚಿನ ಜೈನಧರ್ಮಮೆ ವಲಂ ಧರ್ಮಂ ದಲೆಂದಾಗಳಿ
ನ್ನೆಡೆವಾತೇಂ ಕಡೆಗಾವ ನಾಡೊ ಪಡೆದತ್ತಾ ದೇಶದಾದೇಶಮಂ ೪೬

ಆ ಕಡುಪೆಂಪನಾಂತು ನಿಜನಂದನ ಬಂಧುರ ಗಂಧಪುಷ್ಪಮಾ
ಲಾಕುಳ ಷಟ್ಪದಾಳಿ ಕುರುಳೋಳಿಗಳಂತೆ ಬೆಡಂಗನೀಯೆ ಶೋ
ಭಾಕರಮಾದ ತದ್ವಿಷಯ ವಲ್ಲಭೆಗಂಗಜರಾಜನಿತ್ತ ಚೂ
ಡಾಕಮನೀಯ ರತ್ನಮೆನೆ ರತ್ನಪುರಂ ಕರಮೊಪ್ಪಿ ತೋಱುಗುಂ ೪೭

ತಳಿಯೊಳ್ ಪೋರ್ವ ಮದಾಂಧಸಿಂಧುರಚಯಂ ವಾಹ್ಯಾಳಿಗೈತರ್ಪ ಶೂ
ಕಳವಾಹಾವಳಿ ಕೆಯ್ದುವಿನ್ನಣದ ಕೂರ್ಪಂ ತೋರ್ಪ ಬಲ್ಲಾಳ್ಗಳಿ
ಕ್ಕುಳದಂತಕ್ಕಡದೊಳ್ ಕಡಂಗಿ ಪಿಡಿದೌಂಕಲ್ ಬಲ್ಲ ಮಲ್ಲರ್ ಮನಂ
ಗೊಳಿಕುಂ ತನ್ನಗರೀಬಹಿಃಪುರವನಪ್ರಾಂತಪ್ರದೇಶಂಗಳೊಳ್ ೪೮

ವ: ಮತ್ತಮಲ್ಲಿ

ಪೂವಿನ ಬಂಡನುಂಡು ನಲಿದಾಡುವ ಪಾಡುವ ತುಂಬಿ ತಳ್ತ ಪೊಂ
ದಾವರೆಯಕ್ಕಿಯಂ ಬಯಸಿ ನೋಡುವ ಕೂಡುವ ಜಕ್ಕವಕ್ಕಿಯಿ
ಮ್ಮಾವಿನ ಬಿಂಕಮಂ ಬಿರಯಿಗಗ್ಗಿಪ ಬಗ್ಗಿಪ ಕೋಕಿಲಂ ತಗು
ಳ್ದಾವಗಮಿರ್ಪುವಾ ಪೊಳಲ ಪೆಂಪಿನ ಸೊಂಪಿನ ನಂದನಂಗಳೊಳ್ ೪೯

ಭಾವಜನ ಬೇಂಟೆಯಂ ಮಧು
ಭಾವಿಸಿ ಕಳಕಂಠಕಂಠ ಘಂಟಾನಿನದಂ
ತೀವಿರೆ ಬಳಿವಳಿಯೊಳ್ ಕೈ
ದೀವಿಗೆವಿಡಿದಂತೆ ಪೂತ ಚಂಪಕಮೆಸೆಗುಂ ೫೦

ರಸಮುಂ ಕಂಪುಂ ಕನಕದೊ
ಳೆಸೆದಿರವೆಂಬವರ ಮಾತನಲ್ಲಿಯ ಬನದೊಳ್
ಪುಸಿಮಾಡುವವೋಲಂತಿರೆ
ರಸಮಾದುಫಲಂಗಳಮರ್ದ ರಸಪರಿಮಳದಿಂ ೫೧

ಎಣೆಪೆಂದೆಮ್ಮಯದೊಂದೆ ಕೋರಕಮೆ ನಿನ್ನೀ ಕೋಕಿಲಾನೀಕಮಂ
ಪೆಣೆದಿರ್ದೆಮ್ಮಯದೊಂದೆ ಪೂಗುಡಿಯೆ ನಿನ್ನೀ ತುಂಬಿವಿಂಡಂ ರಸೋ
ಲ್ಬಣಮಾದೆಮ್ಮಯದೊಂದೆ ಪಣ್ಣೆ ಗಡ ನಿನ್ನೀ ಕೀರಸಂದೋಹಮಂ
ತಣಿಪಲ್ ಸಾಲ್ಗುಮೆನುತ್ತೆ ಕಾಮನಿದಿರೊಳ್ ಕೈದೋರ್ಪುವಿಮ್ಮಾವುಗಳ್ ೫೨

ಈಳೆಯ ಬಾಳೆಯ ಬಕ್ಕೆಯ
ದಾಳಿಂಬದ ನಾಳಿಕೇರದಡಕೆಯ ಪೊಸಪೇ
ರೀಳೆಯ ನಿಂಬೆಯ ಜಂಬುವಿ
ನೋಳಿಗಳೋರಣದೊಳೋಲಗಂಗೊಟ್ಟೆಸೆಗುಂ ೫೩

ನಸುವಿರಿದಿರ್ದ ಪದ್ಮವನದೊಳ್ ನಲಿವಂಚೆಗಳಿಂ ಕಱುಂಗಿ ಕ
ಣ್ಗೆಸೆವುದು ಕೈರವಾಕರದೊಳೊಂದಿದ ತುಂಬಿಗಳಿಂ ರಸಾಲದೊಳ್
ಪೊಸ ತನಿವಣ್ಗಳಂ ಸವಿದು ರಾಗಿಪ ರಾಜಶುಕಂಗಳಿಂ ನಿರೀ
ಕ್ಷಿಸೆ ಸೆಱೆಗೆಯ್ವುದೊರ್ಮೊದಲೊಳಾ ವನಮಾವನ ಲೋಚನಂಗಳಂ ೫೪

ಸುರಿವ ಮಕರಂದ ರಜದೊಳ್
ಪೊರಳ್ವ ನಿಜವಧುವನಾತ್ಮವಧುವೆಂದೆ ಮರ
ಲ್ದುರವಣಿಪ ಜಕ್ಕವಕ್ಕಿಯ
ನರಸಂಚೆಗಳಟ್ಟಿ ಪುರುಡಿಕುಂ ಪೂಗೊಳದೊಳ್ ೫೫

ಸೀಪೊದವಿದ ನುಣ್ಗೊನೆಯಂ
ತೂಪ ರಸದ್ರಾಕ್ಷೆಗೆಸೆವಕುಸುಮದ ರಜದಿಂ
ಕಾಪುವರೆದೊಸರ್ವ ಸೊನೆಯಿಂ
ತೂಪಿಱುವ ರಸಾಲಲತೆಗಳೇನೊಪ್ಪಿದುವೋ ೫೬

ಭುವನದೊಳೆನ್ನನೇಳಿಪರ ಬೆಟ್ಟಿರ್ದೆ ಕಟ್ಟೊಡೆವಂತಿರೆಸಲಿ
ನ್ನವಸರಕಿಂದೆ ಬರ್ಪುದೆನುತಂಗಜನಟ್ಟಿದನೆಂದು ತುಂಬಿಗಳ್
ತವಕದಿನೂಱ್ ಸಾಱ್ ಪಸುರ್ಮಿಟ್ಟೆ ಪೊಟ್ಟೆಯನಲ್ಲಿ ಪೊತ್ತು ಬಂ
ದವೊಲೆಳೆಗೌಂಗು ಕಣ್ಗೊಳಿಸಿ ತೋರ್ಪುವು ಬಿಣ್ಗೊಲೆವೇಱಿಸಂತತಂ ೫೭

ಕಳಕಂಠ ದುಂದುಭಿಧ್ವನಿ
ಬಳಸಿರೆ ವನರಾಜಿ ಪಟ್ಟದಭಿಷೇಕಕ್ಕೆಂ
ದಿಳೆ ಪಲವುಂ ಕೆಯ್ಕೊಳ್ ಪೊಂ
ಗಳಸಂಬಿಡಿದಂತೆ ತೆಂಗುಗಳ್ ಕಣ್ಗೊಳಿಕುಂ ೫೮

ಮತ್ತಲ್ಲಿ ಪುರದ ವನಿತೆಯ
ರೊತ್ತಂಬದ ಸುಸಿಲ ಮಸಕದಿಂ ನೆರೆದೆಡೆಯೊಳ್
ಬಿತ್ತರದಿನುದಿರ್ದು ಪರೆದಿರೆ
ಮುತ್ತುವವಳಿವಿಂಡು ಮುಡಿಯ ಪುಡಿಗತ್ತುರಿಯಿಂ ೫೯

ಅಳವಿಗಳಿದಚ್ಚವೇಟದ
ಬೆಳವಿಗೆಯೊಡನೊಡನೆ ಪುರುಡು ಬಳೆದಿರೆ ಕಾಯ್ಪಿಂ
ದೊಳಗೊಳಗೆ ಬಯ್ದು ಬಗ್ಗಿಸಿ
ತಿಳಿಪುವುವರಗಿಳಿಗಳಲ್ಲಿ ನಲ್ಲರ ಮುಳಿಸಂ ೬೦

ಮಿಱುಗುವ ತನ್ನ ಪೂಗಣೆಗಳೆಚ್ಚೆಡೆಯೊಳ್ ಪರಿವಲ್ಲಿ ಸಂದೆಗಂ
ಪಱಿಪಡುವಂತು ನುಣ್ಗಱಿಗಳಿಂ ಗಱಿಗಟ್ಟಿಸುವೆನ್ನನಂಗಜಂ
ನೆಱಿಪೊಱಗಿಕ್ಕಿದಂಬಿನದಿನೆಂದುಱೆ ಕಂದಿ ಕಱುಗಿದಂತೆ ಕಿ
ಕ್ಕಿಱಿಗಿಱಿದಿರ್ಪುವಾ ಬನದ ಕೇದಗೆಗಳ್ ಸುಳಿಯೇಱಿ ಸುತ್ತಲುಂ ೬೧

ವ: ಮತ್ತಮಲ್ಲಲ್ಲಿ ಪಲ್ಲವ ಪ್ರಸೂನಫಲಭರದಿನೆಱಗಿ ತುಱುಗಿದಶೋಕ ವಕುಳ ಕುರವಕ ಕದಳಿ ಖರ್ಜೂರ ಸರ್ಜಾರ್ಜುನ ಸರಳಕೇಸರ ಶಿರೀಷ ಪನಸ ಪಾಟಳ ಪಟೀರಾದಿ ಮೇದಿನೀರುಹಂಗಳ ತಳದಿನಗ್ರಂಬರಂ ನಿಮಿರ್ದು ಪರ್ವಿ ಪರಕಲಿಪ ಗಂಡುಗೊಂಡು ದಾಂಗುಡಿವಿಡಿದೇಲಾಮಾಲತೀಮಲ್ಲಿಕಾದಿ ನಾನಾ ಲತೆಯ ಕಾವಣಂಗಳೋವರಿಯೊಳಾವರಿಸಿದ ಕಪ್ಪುರದ ಪುಳಿನ ತಳದೊಳೇಳೆಲೆವಾಳೆ ಯೆಲೆವಾಸಿನೊಳೆರ್ದೆ ದಣಿಯೆ ಸವಿವ ಸುಸಿಲ ಮಸಕದಿನಸುವಱೆಯಾದ ಸುರಮಿಥುನ ದೊಳೊದವಿದ ರತಭೇದಮನಾಱಿಸುವ ಮೆಲ್ಲೆಲರ ತೀಟದಿ ನೊಂದೊಂದನೊಂದೊರಸಿ ಸುರಿವೆಳನೀರ ಪಣ್ಣರಸದ ಪೂವಂಡಿನ ಸೊನೆಯಸೋನೆಗೆ ನಿಲಲಱಿಯದೆ ನೆಗೆದು ಕೃತಕಗಿರಿಯ ಮಣಿಕೂಟದೊಳ್ ಕುಣಿವ ನವಿಲ್ಗಳ ಬಾಂಬರಂ ನೆಗೆದನಟ್ಟೆಗೊಂಬಂ ಮೆಟ್ಟಿ ಕುಕಿಲ್ವ ಕೋಗಿಲೆಗಳ ಪಣ್ಗೊನೆಯ ಬಿಣ್ಪಂ ಬಳ್ಳಿಬಾಳ್ವೇಲಿಯ ಕೆಳಗಣ್ಣೆ ಪರಿದಳ್ಳೆಗೊಂಬನಿಂಬುಗೊಂಡು ಬಂಡಳಿಪರಗಿಳಿಗಳ ಕನಕ ಕದಳೀದಳದ ಕೆಳಗೆ ತೂಗಾಡುವ ಸೆಳ್ಳೆಗೊಂಬಿನ ತೂಱಲತುದಿಯೊಳಲರ್ದ ಕುಸುಮದೆಸಳ್ವಸೆಯೊಳೆಸೆದು ಪಾಡುವೆಳೆದುಂಬಿಗಳ ಪೊಂಗಾವಿನ ತಾವರೆಯ ಕೊಡೆಯೆಲೆಗಳೆಡೆಯೆಡೆಯೊಳೆಡೆ ಯಾಡುವರಸಂಚೆಗಳ ಮುದ್ದಿನ ಮುಱುಕೆದಾಡೊಂಬೊಲನಲರಂಬಿನ ನೆಲೆವೀಡು ಬಸಂತನ ಬಂಡಾರಂ ರತಿಯ ನಟನರಂಗಂ ತಂಗಾಳಿಯ ವಾಹ್ಯಾಳಿಯೆಂಬ ಬಿಂಕದಂಕಮಾಲೆಯಂ ಮಱಿದುಂಬಿ ಬಿರಿದೆತ್ತಿ ಪಾಡೆ

ಪೊಗಳಲ್ವೇಡದ ನಿನ್ನದೆನ್ನೊಳೆಣೆಯಾಗಲ್ ತಕ್ಕುದೇ ಚಿಃ ಸುರಾ
ಪಗೆಯೊತ್ತಿಂಗೊಳಗಾದುದೆಂದು ತಳಿರ್ಗೊಂಬೆಂಬಚ್ಚದೋರ್ದಂಡಮಂ

ನೆಗಪುವ್ವದ್ಗ್ರತ ಕೋಕಿಲಾರವದಿ ನಾದಂಬೊಯ್ದುರಲ್ಪೊಂಗಲಿಂ
ನಗುವಂತಿರ್ಪುದು ನಾಕನಂದನವನಾ ಕೇಳೀವನಂ ಪಾವನಂ ೬೨

ವ: ಆ ಬಹಿರ್ವನದಿನಾಡೆಯುರಮುರ್ಪಿ ಪರಿದು ಕಾಳ್ಪುರಮಾಗಿ ತನ್ನೊಳ್ ಪೊಂಗುವ ಪುಷ್ಪರಸದ ತೊಱೆಗಳೊಳ್ ತೇಂಕಿಬಂದ ಮರಾಳ ಸಂಕುಳಮೆಂಬ ಸಂದೆಗದಿಂ ಬಿಂಕಂಬಡೆದು ತವಿಪಿದಿದು ತುಱುಗಿದಸುಕೆಯ ಕೆಂದಳಿರ ನೆಳಲೆಂಬ ಪವಳವಳ್ಳಿಯಿಂ ಪಸರಂಬಡೆದು ದುಱುದುಂಬಿದುಂಬಿಗಳ ಕಾಲ್ಪುಳಿಪದಿಂ ನೀರೊಳಲ್ಲಲ್ಲುಗುವ ಮಲ್ಲಿಗೆಯ ಮುಗುಳ್ಗಳೆಂಬ ಮುತ್ತುಗಳಿಂ ಚಿತ್ರಂಬಡೆದು

ಕಡಲೆನ್ನನಂದಿನಂದದೆ
ಕಡೆಯದಿರಿನ್ನೆಂದು ಬಂದು ಮಂದರಮಂ ಕಾ
ಲ್ವಿಡಿದಂತೆ ಪೊನ್ನ ಕೋಂಟೆಯ
ನೆಡಪಡೆಯದೆ ಬಳಸಿ ಪಿರಿಯಗಳ್ ಸೊಗಯಿಸುಗುಂ ೬೩

ಮಿಳಿರ್ವುತ್ತುಂಗಧ್ವಜಂ ಮಾರ್ಪೊಳೆವ ಜಲಚರವ್ರಾತಮೆಂಬಂತೆ ಪೇರ
ಟ್ಟಳೆಗಳ್ ತಳ್ತಿತ್ತಲುಂ ಬಿಂಬಿಸೆ ಬಹಳ ಬಹಿತ್ರಾಳಿಯೆಂಬಂತೆ ಕೋಟಾ
ವಳಿಯುಪ್ರೋತಪ್ರದೀಪೋಜ್ವಳ ಮಣಿಯ ನೆಳಲ್ ಪರ್ವತೌರ್ವಾಗ್ನಿಯಂತಾ
ಗಳುಮಂಘೋರಾಶಿಗೆತ್ತಾರ್ದೆ ಜಡಪುದದಭ್ರಾಭ್ರಮಭ್ರಾಜ್ವದಿಂದಂ ೬೪

ವ: ಅಂತು ನಿಸರ್ಗ ದುರ್ಗಮವಾದ ನೀರ್ಗಾದಿಗೆಯ ಬಳಸಿಂಗೊಳಗಾಗಿ

ಅಕಳಂಕೋಜ್ವಳವಜ್ರನಿರ್ಮಿತ ಕವಾಟಂ ನೀಲರತ್ನಪ್ರಭಾ
ವಿಕಟಾಟ್ಟಾಳಮುದಗ್ರ ಮೌಕ್ತಿಕಮಯೋದ್ಯದ್ಗೋಪುರಂ ಕಣ್ಗೆ ಮಾ
ಣಿಕವಂತೊಪ್ಪಮನಪ್ಪುಕೆಯ್ದು ಮಣಿಕೋಟಾಚಕ್ರಮೋರಂದದಿಂ
ಪ್ರಕಟಂಗೆಯ್ವುದು ತನ್ನ ರನ್ನವೊಳಲೆಂಬನ್ಯೂನ ವಿನ್ಯಾಸಮಂ ೬೫

ತನ್ನಂ ಸಲೆ ಮೆಯ್ಯಾಗ್ಗಣದ
ಮುನ್ನಂ ಧರೆಗಿಳಿದುದುರಗಲೋಕಂ ನಾಕಂ
ಬನ್ನದೆ ಬಯಲೊಳ್ ಪಾಱಿದು
ದಿನ್ನುಳಿದ ಪುರಂಗಳಾ ಪುರಕ್ಕೋರಗೆಯೇ ೬೬

ಇಟ್ಟಳಿಸಿರೆ ಕೋಟೆಯ ಮುಗಿ
ಲಟ್ಟಳೆಗಳ್ ತನೆಯ ಸಂದಿಸಂದಿಯೊಳೊಂದೊಂ
ದಟ್ಟುವಳಿಗೊಂಡು ಪಾಯ್ದುವು
ತಟ್ಟದೆ ಮುಟ್ಟದೆ ವಿಮಾನಮಂಬರಚರರಾ ೬೭

ಆ ಪೊಳಲ ಪೊಳೆವ ರನ್ನದ
ಗೋಪುರದಾದಲೆಯ ನೆಲೆಯೊಳೊಲೆವುಚ್ಚಪತಾ
ಕಾ ಪವನನಲ್ಲದಿರ್ದೊಡ
ದೇಪರಿಯಿಂ ಕಳೆವನರ್ಕನಧ್ವಶ್ರಮಮಂ ೬೮

ಆ ಗೋಪುರ ದೆಸೆವಂತ
ಭಾಗದೊಳಿತ್ತರದಿನಮರ್ದು ನೆಲೆಮಾಡದ ಚೆ
ಲ್ವಾಗಸಮನಿಂಬುಗೊಳೆ ಸುಖ
ದಾಗರಮೆನೆ ವಿಪಣಿವೀಥಿ ಸೊಗಯಿಸಿ ತೋರ್ಕುಂ ೬೯

ಮನೆಮನೆಗೆಯ್ದೆ ಚೆನ್ನೆಸೆವ ರನ್ನದ ಸೂಸಕಮಿಟ್ಟ ಚೀನಕೇ
ತನಮಳವಟ್ಟ ಪೊಂಗಳಸದೋಳಿ ಮನಂಗೊಳೆ ಬೀದಿಬೀದಿಯೊಳ್
ಕನಕದ ತೋರಣಂ ತಳಿದ ಕತ್ತುರಿನೀರ್ ದೊರೆವೆತ್ತ ತೋರಮು
ತ್ತಿನ ಕಡೆ ಪೂರ್ಣ ಪುಷ್ಪಬಲಿ ಪಿಂಗದೆ ಕಣ್ಗೊಳಿಸಿರ್ಪುದಾವಗಂ ೭೦

ಬೇಟದ ಬೇಗೆಯಲ್ಲದಱಿಯರ್ ಬಿಸಿಲಿಂ ಮೃದು ತಾಲವೃಂತದೊಳ್
ತೀಟದ ಗಾಳಿಯಲ್ಲದಱಿಯರ್ ಬಿಱುಗಾಳಿಯನೆಂಬ ಪೆರ್ಮೆ ತಾ
ವಾಟದ ಡಂಗುರಂ ನರರ ನಾಲಗೆಯಾದ ನೆಗಳ್ತೆ ಧಾತ್ರಿಯೊಳ್
ನಾಟದುದೆಂದೊಡಾ ಪುರದ ಗೇರಿಯ ನಾರಿಯರೊಳ್ಪದೆಂತುಟೋ ೭೧

ತ್ರಿಜಗದೊಳಿನ್ನರನ್ನರೆಣೆಯೆಂದಪನೆಂದು ವೃಥಾನಿರೋಧದಿಂ
ಗುಜುಗುಜುಗುಟ್ಟಲೇಂ ನೆಗಳ್ದ ತನ್ನವಲೋಕನ ಮಾತ್ರದಿಂ ವೃಷ
ಧ್ವಜನುರಿಗುಣ್ಣ ಕೊಂಡಮೊಳಕೊಂಡರಲಂಬನ ನೆತ್ತಿ ಮತ್ತೆ ಚಿ
ತ್ತಜನೆನಿಸಿಟ್ಟ ಪಾರ್ವತಿಯ ಪಾಟಿಯ ಪೆಂಡಿರೆ ಪೆಂಡಿರಲ್ಲಿಯಾ ೭೨

ಬಿತ್ತರದ ಪೊದಕೆಗಳ ಬಿಡು
ಮುತ್ತುಗಳಂ ಮೊಗೆದು ಸುರಿದು ಪಾಮರಿಯರ ಪೆ
ರ್ಮುತ್ತಲ್ಲಿವು ವಿನಂಬಸೆ (?)
ಪತ್ತಿದ ಪಣ್ಗೊಳ್ವರಲ್ಲಿ ಪರದರ ಮಕ್ಕಳ್ ೭೩

ಮತ್ತದಱ ಬೀದಿಯೊಳ್ ಪುಡಿ
ಗತ್ತುರಿಯಂ ಪರಪಿ ಬಾಲಕರ್ ಸುದ್ದಗೆಯಂ
ಬಿತ್ತರದಿಂ ಬರೆದೋದುವ
ರಿತ್ತರದಂಗಡಿಗಳೆಡೆಗಳೋದುವ ಮಠದೊಳ್ ೭೪

ತಾವರೆಯೆಂಬರಿರ್ದು ಮನೆಯಂ ವಿಬುಧರ್ ಕಡುಗೂರ್ತು ವಲ್ಲಭಂ
ಗೋವಳನೊಂದೆ ಪಾಸದುವೆ ಪಾವಿನ ಪುತ್ತದಱಿಂದಮಿನ್ನುಮ
ತ್ತಾವುದುಪಾಯಮೆಂದುಸಿರೆ ಸಿಕ್ಷಯದಿಂದವನೆಯ್ದೆ ಬಿಟ್ಟುಬಂ
ದಾವಣಗಾಲಯಂಗಳೊಳಪರ್ಸಿಶಮಿಪ್ಪಳದೇಂ ವಿದಗ್ಧೆಯೋ ೨೫

ಮೊರೆವಡೆವಿತ್ತರಂಬಿಡಿದ ಕತ್ತುರಿಗಪ್ಪುರದುದ್ದರಾಸಿಗಳ್
ಚರಿಸುವ ವಾರನಾರಿಯರ ಲೋಚನಚಂದ್ರಿಕೆಯಿಂದೊಸರ್ತು ಕಾ
ಳ್ಪುರವರಿಪಿಂದುಕಾಂತಮಣಿಕುಟ್ಟಿಮದೊಳ್ ಜಱಿದೆಯ್ದೆ ಜಾಱೆ ಜಾ
ಣರ ಬಗೆಗೊಳ್ಗಿಸರ್ಪುಸಗುತಿರ್ಪುದು ಸಂತತಮಾ ವಣಿಕ್ಪಥಂ ೨೬

ಬಗೆಗೊಳುತಿರ್ಪುವಲ್ಲಿ ಸಿರಿಗಂಪಿನ ಬಲ್ಪೊಱೆ ತೊಟ್ಟಿಲಿಟ್ಟು ಪಾ
ಯ್ಗುರುಪಿನೇರಿ ಕುಂಕುಮದ ಕತ್ತುರಿ ರನ್ನದ ರಾಸಿ ಪೊನ್ನ ಪುಂ
ಜಿಗೆ ಪೊಸಕಂಚುಮುಟ್ಟುಗಳ ತಿಂತಿಣಿ ಮುಂತಮರ್ದಿರ್ಪ ಬಣ್ಣವ
ಣ್ಣಗೆಗಡೆಗೊಟ್ಟ ಪಟ್ಟಗಳ ದಿಂಡುಗಳಂಗಡಿ ಬೀದಿಬೀದಿಯೊಳ್ ೨೭

ಉಟ್ಟ ತೊವಲೇಕೆ ತೆಗೆ ಹರಿ
ಗಟ್ಟಿದ ಪೀತಾಂಬರಕ್ಕೆ ಪಡಿನೋಡಿ ಪೊಂ
ಬಟ್ಟೆಯನೆಂದೊಲವಿಂ ಮುಂ
ದಿಟ್ಟೀಕ್ಷನಲ್ಲಿ ದೂಸಿಗರ್ ಬೇಸಱಿಪರ್ ೨೮

ವ: ಅಂತನರ್ಘ್ಯಾನುಲೇಪನ ಮಣಿಭೂಷಣ ನವ್ಯ ದಿವ್ಯಾಂಬರಂಗಳಿಂದ ಕೆಯ್ಗೆಯ್ದು ಪುರಶ್ರೀಸೀಮಂತಿನಿಯ ಸುಳಿಗುರುಳ್ಗಳೆನೆ ಸುಳಿದಾಡುವ ಮದಾಳಿಗಳೆ ಕಂಪಿನ ಕಾಣ್ಕೆಯಂ ನೀಡುವಂತೆ ಗಾಡಿವಡೆದ ಪೂವಿನ ಸಂದಣಿಗಳೊಳ್

ನಯನಮರೀಚಿಗಳ್ ಪುದಿಯೆ ನೀಲದ ಮಾಲೆಗಳಂತೆ ಕೆಯ್ಯ ಕಾಂ
ತಿಯ ಪುದುವಿಂದೆ ಮಾಣಿಕದ ಮಾಲೆಗಳಂತಿರೆ ನಿಚ್ಚಮಚ್ಚ ಜಾ
ದಿಯ ಪೊಸಮಾಲೆಗಳ್ವಿಡಿದು ಮಾಱುವ ನೀಱೆಯನಲ್ಲಿ ಮಾಲೆಗಾ
ರ್ತಿಯೊ ಮಣಿಗಾರ್ತಿಯೋ ಎನುತೆ ನೋೞ್ಪುದು ವಿಸ್ಮಯಭಾಜನಂ ಜನಂ ೨೯

ಕಡು ನಿಡುಗಂಗಳಂಗಜನ ಕೀರ್ತಿಪತಾಕೆಯನೆತ್ತೆ ನೆಟ್ಟನೊ
ಳ್ನಡು ನಿಡುವಾಸೆಯೊಳ್ ಪುದಿದ ಮೆಯ್ಸಿರಿಯಂ ಪಿಡಿದೆತ್ತಿ ಪೊಂಗಿ ಪೊಂ
ಗೊಡಮೊಲೆ ಮೇಲುದಂ ಭರದಿನೆತ್ತೆ ನೆಗಳ್ತೆಯ ಮಾಲೆಯೆತ್ತಿ ಕೆ
ಯ್ಯೊಡನಗೆಯೆತ್ತುವರ್ ವಿಟರ ಬಿಂಕಮನಂಕದ ಮಾಲೆಗಾರ್ತಿಯರ್ ೩೦

ನೋಡಿದೊಡೀಕೆ ಪೊಚ್ಚಪೊಸನೆಯ್ದಿಲ ಮಾಲೆಗಳಾದುವೋತು ಮಾ
ತಾಡಿದೊಡೋವೊ ಬಂದುಗೆಯ ಮಾಲೆಗಳಾದುವು ಮಂದಹಾಸಮಂ

ಮಾಡಿದೊಡಚ್ಚಮಲ್ಲಿಗೆಯ ಮಾಲೆಗಳಾದುವಿದೊಂದು ಚೋದ್ಯಮಂ
ನೋಡಿರೆ ಮಾಲೆಗಾರ್ತಿಯೊ ದಿಟಕ್ಕಿವಳಗ್ಗದ ಮಾಯಕಾರ್ತಿಯೋ ೮೧

ವ: ಎಂದು ಬೆಗಡುಗೊಂಡು ನೋಡುವ ನಾಗರಿಕರ ನಯನಾಳಿಯಂ ಕವಿವ ಮದಾಳಿಯಿಂ ಮೆಯ್ಯ ಸೊಂಪಿಂ ಸುಯ್ಯ ಕಂಪಿಂ ಪೊಂಪುಳಿಯೋಗಿಸುತ್ತೆ

ಪೂವಿನೆಸಳೊತ್ತೆ ಕೆಂದಳ
ಮಾವಗಮೊಡನೊಡನೆ ಕಂದಿ ಕುಂದುವ ಸುಕುಮಾ
ರಾವಯವೆಯರೀಕ್ಷಣದಿನ
ದೇವೊಗಳ್ವುದೊ ನಾಡೆ ಬಾಡಿಪರ್ ನೋಡಿದರಂ ೮೨

ಕುಂದದೆ ಪುಷ್ಪಬಾವಿಗೆಯರೆತ್ತಿದ ದೇಸೆಯ ಬಾಸಿಗಂಗಳಿಂ
ದಂದೊಱದುಣ್ಮಿಪಾಯ್ವ ಕುಸುಮಾಸವಮಂ ಸವಿದುರ್ಕಿ ಸೊಕ್ಕಿ ದ
ಕ್ಕುಂದಲೆವಾಯ್ವವಾಗಳರೆದಣ್ಕೆಯ ಕುಂಕುಮಮಂ ಬಳಲ್ದು ಕೆ
ಯ್ಗುಂದಿದ ಘಟ್ಟಿವಳ್ತಿಯರ ಸೂಸುಗುರುಳ್ಗಳೊಳುನ್ಮದಾಳಿಗಳ್ ೮೩

ಪೃಥ್ವಿ॥

ನಿಮಿರ್ಕೆವಡೆದೋಳಿಯಿಂದೊಲೆಯೆ ಕುಂತಳಂ ಮೇಲುದಂ
ತೆಮಳ್ಚಿ ಕುಚಮಂಡಳಂ ಕುಣಿಯೆ ಗಂಡದೊಳ್ ಕುಂಡಳಂ
ಕ್ರಮಂಬಿಡದೆ ಕಂಕಣಕ್ವಣಿತಮುಣ್ಮೆ ಕಾಶ್ಮೀರಮಂ
ಸಮಂತೆಸೆವ ಘಟ್ಟಿವಳ್ತಿಯರದೇಂ ಮನಂಗೊಂಡರೋ ೮೪

ನೆಲೆಮೊಲೆ ಮೇಲುದಿಂದಿನಿಸು ಪಾಯ್ತರೆ ತಮ್ಮನೆ ಪಾಯುವೆಂದು ಕೋ
ಟಲೆಗೊಳುತಿರ್ಪ ನೋಟಕರನೋವಮದರ್ಳ್ದಿರ್ದೆಗಳ್ ತೆಮದುರ್ದದಂ
ದಲಸದೆ ಕೂರ್ಮೆವೆತ್ತ ಕೃಪೆಯಿಂದರವಂತರೇವರ್ ವರಾಂಗಿಯರ್
ಮಲಯಜಮಂ ಮರಲ್ದು ತನು ಪುಣ್ಣಿಡೆ ಪೂಣ್ದಿಸೆ ಮತ್ತೆ ಮನ್ಮಥಂ ೮೫

ಚಳದಳಿಲೋಲಕುಂತಳೆ ಮನಂಗೊಳೆ ನುಣ್ಗಱಯೊಳ್ ತಗುಳ್ದ ತಿಂ
ಗಳ ತಿರುಳಂದದೊಳ್ಪಿರಕೆಗತ್ತುರಿಗಪ್ಪುರಮಂ ಪೊದಳ್ವ ಸು
ಯ್ಗಳ ನಱುಗಂಪಿನಿಂ ಪೊರೆದು ಸಣ್ಗೆಗೊಂಡರೆಯಲ್ ತಗುಳ್ಚಿದಾ
ಗಳೆ ತನಿವೇಟವಿಟ್ಟರೆಯೆ ಬಣ್ಣಿಸುಗುಂ ಬಗೆ ಕೇಳ ಕೇಳ್ವರಾ ೮೬

ಹರಿಯುರದಲ್ಲಿ ಪೆರ್ಮೊಲೆಯ ಲಚ್ಚಣಮಿಟ್ಟ ಜನಾನನಂಗಳೊಳ್
ಚರಣದಲಕ್ತಕ ದ್ರವದಿನುಂಡಿಗೆಯೊತ್ತಿದ ರೂಢಿವೆತ್ತ ಶಂ
ಕರನೊಡಲರ್ಧಮಂ ಕವರ್ದುಕೊಂಡೆಳೆವೆಂಡಿರ ಗಾಡಿಯಂ ನಿರಾ
ಕರಿಪೆಸಕಂ ಜಸಂಬಡೆಯಲೊಪ್ಪುಗುಮಾ ಪೊಳಲಂಗನಾಜನಂ ೮೭

ವ: ಅಂತಖಿಳವಿಷಯ ಸುಖಾನುಭವಸಾಧನ ಭೋಗೋಪಭೋಗ ವಸ್ತು ವಿಸ್ತರ ಪ್ರಘಾಣಂಗಳಾದಾಪಣಂಗಳೊಳ್ ವಿಹರಿಸುವ ಮಹಿಮೆಯ ಮಹಾ ಜನಂಗಳ ಪುರಾಕೃತ ಪುಣ್ಯಂಗಳ್ ತಣ್ಣನೆ ಪಣ್ಣನಿರ್ಪ ಸದ್ಧರ್ಮ ಹರ್ಮ್ಯಾರಂಭಕ್ಕೆ ಮೂಲಸ್ತಂಭಂಗಳಾಗಿ

ನಗರಾಂತರ್ಭಾಗದೊಳ್ ಭಾಸುರ ಮಣಿಖಚಿತಾಘಾತ ಕೂಟಂಗಳಂ ತೊ
ಟ್ಟಿಗೆ ಬಂದೆಕ್ಕೆಕ್ಕೆಯಿಂ ಪಾಯ್ವುಱ್ ಪಱಿದ ಮುಗಿಲ್ಮುತ್ತುಗಳ್ ಭೋರೆನುತ್ತಾ
ವಗಮಾತ್ಮಾವಾಸಮಂ ಬಾಸಣಿಸಿರೆ ಜಿನಜನ್ಮಾಭಿಷೇಕಾಮೃತಾಘ
ಸ್ಥಗಿತ ಶ್ರೀಮಂದರಕ್ಕೋರಗೆಯೆನಿಸಿದುವುತ್ತುಂಗ ಚೈತ್ಯಾಲಯಂಗಳ್ ೮೮

ಪದೆದೆಮ್ಮಂ ಭಕ್ತಿಯಿಂ ಬಂದಿಸಿ ನಲಿದು ಬಲಂಗೊಂಡು ಶಕ್ರಾದಿಗಳ್ ಸ
ಗ್ಗದ ಸೌಧರ್ಮಾದಿ ಕಲ್ಪಂಗಳೊಳೊಡೆತನಮಂಬೆತ್ತುದಂ ನೋಡಿಮೆಂದೆ
ತ್ತಿದ ಕೆಯ್ಯಂ ತೋಱುವಂತೇನೆಸೆದುವೋ ಜಿನಗೇಹಂಗಳುತ್ತಾಳಚೂಳಾ
ಗ್ರದೊಳೆತ್ತಂ ತಳ್ತು ಪೆಂಪಂ ತಳೆದುವಿಳಿಗೆ ನಾನಾ ಪತಾಕಪ್ರತಾನಂ ೮೯

ವಿದಿತ ದಯಾಮೂಲಂ ಧ
ರ್ಮದ ಪೊಲನೆಂದಱಿದು ಹಿಂಸೆಯಂ ಬಿಟ್ಟುಱ್ ಲೆ
ಪ್ಪದ ನೆವದಿನಿಲ್ಲಿ ನಿಂದಂ
ದದಿನೊಪ್ಪಿದುವವಱ ಶಿಖರದೊಳ್ ಸಿಂಹಂಗಳ್ ೯೦

ದಿನಮಣಿ ನಡುವಗಲಡ
ರ್ದನುದಿನಮಲ್ಲಿಯ ಕಳಶಮಂ ದಿಗಂಬರ ಲಕ್ಷ್ಮೀ
ವನಿತೆ ನಿಜನೊಸಗೆಗೆತ್ತಿದ
ಕನಕದ ಕನ್ನಡಿಯ ನನ್ನಿಯಂ ನೆನೆಯಿಸುಗುಂ ೯೧

ಕಂಟಳಿತ ಪ್ರಸೂನಬಲಿಯೊಳ್ ನಡೆವಲ್ಲಿ ಮುನೀಂದ್ರರೆಂಬಿನಂ
ಗೆಂಟಱೊಳೊಪ್ಪಿತೋರ್ಪ ಮಣಿಕುಟ್ಟಿಮದೊಳ್ ಪೊಳೆಯಲ್ ತೊಡಂಬೆಗಳ್
ಗಂಟೊಡೆದುಣ್ಮಿ ಪೊಣ್ಮುವ ನವಪ್ರಸವಾಳಿ ಮಡಲ್ತ ಮಾಧವೀ
ಮಂಟಪಮೇಂ ಮನಂಗೊಳಿಸಿತೋ ಜಿನಮಂದಿರದಗ್ರಭಾಗದೊಳ್ ೯೨

ಸೊಗಯಿಸುವ ಪಾಣಿವಟ್ಟದಿ
ನುಗುವ ಮಲಿನ ಕುಸುಮಸುರಭಿಗಂಧೋದಕದೊಳ್
ಮೊಗಸಿದಳಿ ಸಗ್ಗಕಾಗಳೆ
ನೆಗೆವಂತಿರೆ ನೆಗೆವುವಗರುಧೂಮಾವಳಿಗಳ್ ೯೩

ತೆರಳುವ ಕುಕ್ಕುಟಾಸನದ ಗಂಡವಿಮುಕ್ತಿಯ ತಳ್ತ ವೀರ ಬಾ
ವರಿಯ ದಿನಾಂತರಂಗಳುಪವಾಸದ ಬೇಸಱದೇಕಪಾರ್ಶ್ವದು

ಬ್ಬರದ ನಿರೋಧಮಂ ತಳೆದು ತೀವ್ರತಪಂ ತನುವೊತ್ತು ಬಂದುದೆಂ
ಬರ ನುಡಿಗಿಂಬುಗೊಟ್ಟ ಮುನಿಗಳ್ ಮೊಗಸಾಲೆಯೊಳಿರ್ಪರಲ್ಲಿಯಾ ೯೪

ಸಾವದ್ಯಮನಾಗಿಸುವವ
ಱಾವರಿಸಿದ ಪಚ್ಚೆದೋರಣಂ ರನ್ನದ ಕ
ಣ್ದೇವಿಗೆ ತೀವಿದ ಮುತ್ತಿನ
ಪೂವಲಿ ಕಪ್ಪುರದ ಕಡೆ ಸುವರ್ಣದ ಕುಸುಮಂ ೯೫

ರಂಜಿಪ ಪಳವಿಗೆ ನವಫಲ
ಮಂಜರಿ ಪೊಂಗಳಸಮೋಜೆಗೊಳಿಸಿದ ಮುಕ್ತಾ
ಪುಂಜಿಕೆ ಚಾಗದ ಪಡಲಿಗೆ
ಮಂಜುಳಮೆನಿಕುಂ ಮಹಂಗಳೊಳ್ ಜಿನಪತಿಯಾ ೯೬

ಆ ರಾಜದ್ರಚನಾವಗಾಹ ಜಿನಗೇಹ ಶ್ರೀಯನಂತಿಂತೆನು
ತ್ತಾರೇನಾದೊಡಮೆಂಗೆ ಮಂಗಳಮಹಾಶ್ರೀ ಬರ್ಪ ಪುಣ್ಯಾಶ್ರವ
ದ್ವಾರಂ ದ್ವಾರಮನಂತ ವೈಭವದ ಕೂಟಂ ಕೂಟಮಾರ್ಹಂತ್ಯ ಧ
ರ್ಮಾರಂಭಾದಿ ದಯಾರಸೋಜ್ವಲ ತರಂಗಂ ರಂಗಮೇನೆಂದಪೆಂ ೯೭

ವ: ಅಂತನಂತ ವೈಭವಾನುಬಂಧ ಬಂಧುರ ಗಂಧಕುಟಿಗಳಂತೆ ವಿವಿಧ ವಿಬುಧಜಿನಾರ್ಚನ
ಯಂಗಳಾದ ಚೈತ್ಯಾಲಯಂಗಳೊಳ್

ನವಪುಷ್ಪಾಸಾರ ದಿವ್ಯಧ್ವನಿ ಸುರಪಟಹಾದೀಶ್ವರಂಗೇಂ ಮನಂಗೊಂ
ಡುವೋ ವಜ್ರಪ್ರಾಜ್ಯ ಸಿಂಹಾಸನಮರುಣಮಣಿ ಶ್ರೀಪ್ರಭಾಮಂಡಲಂ ಸಂ
ಸ್ತವನಾಧಾರಪ್ರವಾಳ ಪ್ರಸರಲಸದಲೋಕಂ ಹರಿದ್ರತ್ನದಂಡೋ
ಚ್ಛವ ಲೀಲಾಚಾಮರಂ ಕೋಮಲರುಚಿಮಚಿರೋತ್ತಾನಮುಕ್ತಾತಪತ್ರಂ ೯೮

ಆ ಕಮನೀಯ ಜಿನೇಂದ್ರ
ಪ್ರಾಕಾರ ಪ್ರಾಂತದಲ್ಲಿ ನಿಂದನೊಳೆಂದುಂ
ಶೋಕಂ ಪುಗದೆಂಬಂತಿರ
ಶೋಕಾದಿ ವನಂಗಳೇಂ ಮನಂಗೊಳಿಸಿದುವೋ ೯೯

ಗಳಗಳನೆ ಪೊಯ್ವ ಪೊಸಪಾ
ಲ್ಗಳ ತಿಳಿ ನಱುನೆಯ್ಯ ಸುರಭಿ ಸಲಿಲದ ಕಂಪಂ
ಸೆಳೆದು ತಳೆದಲ್ಲಿ ಮೆಲ್ಲನೆ
ಸುಳಿವುದು ಜಿನಸವನ ಸಮಯ ಪಾವನಪವನಂ ೧೦೦

ವಿತತಾನಕರವಮಂ ಕೇ
ಳ್ದತಿಮುದದಿಂ ಬಂದು ಸೋಗೆ ಸೋಗೆಯ ತುದಿಯಿಂ
ಪ್ರತಿದಿವಸಮಲ್ಲಿ ಪದಪಿಂ
ಪ್ರತಿಲೇಖಿಪುವಾ ಜಿನೇಂದ್ರಭವನಾಂಗಣಮಂ ೧೦೧

ಯುಗದಳವಿಯನೀಕ್ಷಿಸುತೊ
ಯ್ಯಗೆ ನಡೆವ ಮುನೀಂದ್ರರೊಡನೆ ನಡೆದಲ್ಲಿಯ ಹಂ
ಸಿಗೆ ಸುಗತಿಯಾದುದಲ್ಲದೆ
ಮಿಗೆ ಪಾಱುವ ಪಕ್ಕಿಗಲ್ಲಿದುವೋ ಮೆಲ್ನಡೆಗಳ್ ೧೦೨

ಪರಮಾಗಮಂಗಳಂ ಸ್ಥೈ
ತಿರೆ ಕೇಳ್ದೋದುವರದೊಂದು ವಾಸನೆ ನೇರ್ಪ
ಟ್ಟಿರೆ ಮಱೆದುಂ ಪೂರ್ವಾಪರ
ನಿರೋಧಮಂ ನುಡಿಯುವಲ್ಲಿ ಗಳಪುವ ಗಿಳಿಗಳ್ ೧೦೩

ಬಾಡುವಿನಮೆಜಗವವಱೊಳ್
ಮೂಡಿದ ಜೀವಗಳಳಿಗುಮೆಂದೊಯ್ಯನೆ ಬಂ
ದಾಡುವುವಳಿಯೆನೆ ಪೂವಿನ
ಬಾಡಂ ಸವಿವರ ನಿನ್ನದೇನೆಂದಪುದೋ ೧೦೪

ಶ್ರುತಪೂಜಾಭಕ್ತಿಯಂ ಮಾಡುವ ವಿವಿಧ ಪುರಾಣಂಗಳಂ ಕೇಳ್ವ ನಿತ್ಯ
ವ್ರತಮಂ ಕೈಕೊಳ್ವ ದಾನವ್ಯಸನಮನೊಸೆದಾಲೋಕನಂಗೆಯ್ವ ನಿಚ್ಚಂ
ಯತಿಚರ್ಯಾಕಾಲಮಂ ಪಾಲಿಸಿ ನಿಯಮದೆ ಪೊರ್ದಿಪ್ಪ ಪುಣ್ಯಪ್ರಭಾವಂ
ಮತಿಯೊಳ್ ಮೆಯ್ವೆತ್ತ ಭವ್ಯಪ್ರತತಿಯ ಪುದುವಿಂ ಸೇವ್ಯಮಾಯ್ತಾ ಪ್ರದೇಶಂ ೧೦೫

ಸವಣರ್ ಸಾಧುಗಳೆಂದು ಪೋದೊಡುಡಿದೆನ್ನೀ ಬಿಲ್ಲನೊಳ್ಗಂಬಿಯಂ
ಸವೆದೆನ್ನಗ್ಗದ ನಾರಿಯಂ ಪಱಿದು ದಾರಂಮಾಡಿ ತಮ್ಮಾರ್ಪು ಪೊ
ಣ್ಮುವಿನಂ ಪುಸ್ತಕದೊಳ್ ತೊಡರ್ಚೆ ರತಿಯಂ ನಿರ್ಧಾಟಿಪರ್ ಯೋಗಿಪುಂ
ಗವರೆಂದಾ ಜಿನಮಂದಿರಕ್ಕೆ ಮಱೆದುಂ ಪೋಗಂ ಪ್ರಸೂನಾಯುಧಂ ೧೦೬

ವ: ಅಂತನನ್ಯ ಸಾಮಾನ್ಯ ಪ್ರಭಾವಂಗಳಾದನನ್ಯಜಾರಾತಿ ನಿಕೇತನಂಗಳಿ ನಿಜವಿಜಯಕೇತನಂ ಭಂಗಮಾದ ಮಱುಕದಿಂದಳವರಿಯೆ

ಆ ಕಂದರ್ಪಂಗೆ ದೋರ್ದರ್ಪಮನೊದವಿಪೆ ನಿನ್ನಿತ್ತ ಬಾಯೆಂಬವೋಲ್ ನೀ
ಳ್ದಾಕಾಶಕ್ಕೆತ್ತಿದುಚ್ಚಧ್ವಜಕರವಿಲಸರ್ ಸಂಜ್ಞೆ ಸೌಭಾಗ್ಯಘಂಟಾ

ನೀಕಪ್ರಧ್ವಾನ ಕೋಳಾಹಳಮೊದಮೆ ಮುದಂಬೆತ್ತು ಕಣ್ಣಾಗಿವಗಂ ನಾ
ನಾ ಕೇಳೀ ಜನ್ಮವಾಸಂ ನೆಗಳ್ದುದು ಗಣಿಕಾವಾಸವೀಥೀವಿಳಾಸಂ ೧೦೭

ಚದುರ ಕವರ್ತೆದಾಣಮಲರಂಬನ ನಚ್ಚಿನಮರ್ದು ಮಾಯ್ದ ಮಾ
ಯದ ನೆಲೆಯೋರೆ ಜೂರುಳತವರ್ವವದುಕ್ಕೆವದಿರ್ಕೆ ಟಕ್ಕುವೇ
ಟದ ಬೆಳೆಗೆಯ್ ತಗುಳ್ದಳಿಪಿನಂಗಡಿ ಗನ್ನದ ಗೊತ್ತು ತಥ್ಯಮೆ
ನ್ನದೆ ಪೆಱತೆಂಬುದೇತಕದೇರಿಯನಲ್ಲಿಯ ಸೂಳೆಗೇರಿಯಂ ೧೦೮

ವ: ಮತ್ತಮದಱೊಳಂಗಭವನ ಭಂಡಿಯ ಬಳಿಯೆಕ್ಕತುಳದೊಕ್ಕಲೆಂಬ ಲಚ್ಚಣಮನ ಚ್ಚೊತ್ತಿದಂತೆ ಮನೆಮನೆಗೆ ನೆಗಪಿದ ಮಕರ ತೋರಣದ ಮಾನಕೇತನದ ನವಿಲುಯ್ಯಲನೇಱದ ಸೌಭಾಗ್ಯದ ಘಂಟೆಯ ಪಚ್ಚೆವಂಜರದೊಳೆಡೆವಿಡದೆ ಪಡಪಿನ ಬಿಂಕಮಂ ಬೀಱ ಬಂಡಳಿಸಿ ತೊಂಡುಗೆಡೆವರಗಿಳಿಯ ಪುರುಡಿಸುವ ಪುರುಳಿಯ ಮಣಿತರಣಿ ತಮಂದಾರಿದೆಗೆವ ಪಾರಿವದ ಪಟ್ಟಶಾಲೆಯ ಭಿತ್ತಿಯೊಳ್ ಮೆಱೆವ ವಿವಿಧ ಕರಣಬಂಧುರ ಭಾವರಸಚಿತ್ರದ ಮೊಗಸಾಲೆಯೊಳ್ ಬಿತ್ತರಿಸಿದ ಮುತ್ತಿನ ಗದ್ದುಗೆಯ ಕಾಂಚನದ ಕೌಳುಡೆಯ ರನ್ನದ ಕನ್ನಡಿಯ ಪೊನ್ನ ಪಡಿಗದ ಪವಳದ ಡವಕೆಯ ಕೆಲದೊಳಿಟ್ಟ ನೀಲದೆಲೆವಟ್ಟೆಯ ವಿವಿಧ ವೀಣೆಯ ನೆತ್ತವಲಗೆಯ ಚದುರಂಗದ ಚದುರೆಯರ್ ಪದನಱದರೆವ ಸಿರಿಗಂಪಿನ ಕುರುಳ್ಗೆ ಪುಡಿಗತ್ತುರಿಗೆಯ್ವ ನಿಗರಗತ್ತುರಿಯ ಕಾಲ್ಗಳಿವ ಕಪ್ಪುರದ ತೊಳೆವ ಜವಾದಿಯ ಮೇದಿಸುವ ಸಾದಿನ ಪೊಗೆಗೊಳಿಸುವಗರುವಿನ ಪೊರೆವರಲ ಪೊಟ್ಟೆಳದ ಪೆಂಪಿಟ್ಟಳವಾದ ತಂತಮ್ಮ ಮನೆಗಳೊಳ್ ಮೇಳದಾಳಿಯರೊಳ್ ಸೂಳೆವಿನ್ನಣದ ಪಡೆಮಾತಿನೋಳಿಯಿಂ ವೇಳೆಗಳೆವುತ್ತ ಬಾಲೆಯರ್ ಲೀಲೆಯಿಂದಿರೆ

ಮುನಿವಧುಗಾತ್ಮವಲ್ಲಭನನಿತ್ತ ಪುಲೋಮಜೆ ಗೊಲ್ಲವೆಣ್ಗೆ ನ
ಲ್ಲನನೆಡೆಗೊಟ್ಟ ಲಕ್ಷ್ಮೀಪತಿಯಂ ಸುರಸಿಂಧುಗೆ ಪಚ್ಚುಗೆಯ್ದುಮಾ
ವನಿತೆಯಿವಳ್ದಿರೊ ದೊರೆ ಗಡೆಂಬಿನಮುಣ್ಮುಗುಮಲ್ಲಿ ಮಾನಕೇ
ತನನ ಕರಾಗ್ರದೊಳ್ ನಿಮಿರ್ದ ಕರ್ವಿನ ಬಿಲ್ದನಿಯೆಂಬ ಡಂಗುರಂ ೧೦೯

ಆ ಸತಿಯರ ಸೋರ್ಮುಡಿಯಿಂ
ಸೂಸಿದ ಕೆಲವರೆ ತನಗೇ ಸರಲೆನಲಾಯ್ದಾ
ಯ್ದೋಸರಿಸಿದ ತನು ವಿವಿಧ ವಿ
ಲಾಸಿಗಳೆರ್ದೆವಿರಿಯಲೆಸುವನೇಂ ನಿರ್ದಯನೋ ೧೧೦

ಮನಮೊಲ್ದೊಡ್ಡೋಲಗಂಗೊಟ್ಟಱಕೆಯ ಗಣಿಕಾವಾಟದೊಳ್ ಪೊಕ್ಕು ಮುಕ್ಕ
ಣ್ಣನ ಕಣ್ಗಿಚ್ಚೆಂಬ ಕೆಯ್ದೀವಿಗೆಯ ಬೆಳಗುಗೊಂಡೋದೆ ಕೀರಾಳಿ ವೈಕುಂ

ತನ ವಕ್ಷೋಭಾಗದೊಳ್ ವಾಗ್ಗರನ ವದನದೊಳ್ ವಜ್ರಿಯಂಗಂಗಳೊಳ್ ಮು
ನ್ನಿನ ತಾಣಂ ತಪ್ಪದೇಂ ನೋಡುವನೋ ಕಲೆಯನಾಟೋಪದಿಂದಿಕ್ಷುಚಾಪಂ ೧೧೧

ಪೂವಲಿಗೆಯ್ದು ಕುಂಕುಮದ ಕೇಸರಮಂತುಳಿದಂಗಣಂಗಳೊಳ್
ತೀವಿ ಜಗಿಲ್ತ ಕತ್ತುರಿಯ ಸಿಂಪಿಣಿಯೊದ್ದೆಯೊಳಿರ್ದು ಬೀದಿಗೊಂ
ಡೋವದೆ ಪಿಟ್ಟುಗೆಯ್ದು ಕಡೆಯಿಕ್ಕಿದ ಕಪ್ಪುರದೊಳ್ ಪೊರಳ್ದು ಬಂ
ದಾವಗಮಪ್ಪುಗುಂ ಪಣವಧೂಮಣಿಮಂದಿರ ಮಂದಮಾರುತಂ ೧೧೨

ವ: ಆ ಮಂದಗಂಧವಹನೆಂಬ ಕಂದರ್ಪ ಮದಾಂಧಸಿಂಧುರದ ವಿಸಟಂಬರಿಗಿಂಬಾದ ಬೀದಿಯೊಳಲ್ಲಲ್ಲಿ ಚಾಗದ ಬೀಯದ ಬಿಂಕಮಂ ಬಾಯಿಗೆ ವಂದುಂದದಿನೊಳ್ಪ ಮಾತಾಳಿ ಬೊತುಗರ್ ನೆರೆದು ಮುಂದಲೆಯ ಮುಂಜೆಱಂಗು ನೆಲದೊಳಲೆವಿನಂ ದೇಸೆಮೆಱೆಯ ಉಟ್ಟ ಪಟ್ಟಣಿಗೆಯ ಕಾಲಮುರಿಗೆವೆಂಡೆಯದ ಮುಂಗೈಗಿಳಿವಲುಳಿಯ ಸರದ ಸರಪಣಿಯ ತಾತಿಯ ತೋಳರಕ್ಕೆವಣಿಯ ಮುಡುಪಿ ನೋಳಂತು ತೆಱೆಯಲಙ್ಕೆಗೆಯ್ದ ಕುಂಕುಮದ ಕೊರಲೊಳಿಳಿವಟ್ಟ ಪೊಂಗಿಱುಗವಡೆಯ ಕಿವಿಯೊಳಿಕ್ಕಿದ ಕೇದಗೆಯ ನುಣ್ಗಱೆಯ ಮಱೆಯೊಳೊಱೆವ ಜವಾದಿಯ ನೊಸಲೊಳಿಟ್ಟ ಕತ್ತುರಿಯಮಳ್ಕೊಟ್ಟಿನ ಕೆನ್ನೆವರಮೆಱಗಿ ಮಱುಗುಮಱುಪಿನ ಚೆಲ್ವು ಪಲ್ಲಪಿಸಿತುಱುಗೆ ತುಱುಗಿ ತುಱುಟವ ಕದಂಬವಲರ ಕಂಪಿಂಗೆ ಕೌವರೆಗೊಂಡು ಕಪಿವ ಮಱುಮಂಬಿಗಳ ಡೊಂಬಿಂಗೆ ಕೆಲದ ತಂಬುಲದ ತರುವಲಿಯ ಕೈಯ ಕಠಾರದ ಕೋಲಂ ಕೊಂಡು ಚಾರಿಸುತ್ತೆ ಬಂದೊಡ್ಡಿ ಪಿಡಿವ ಕವಡಿಕೆಯ ಪೊಯ್ದು ಕರ್ಪಿನ ಪಣೆದದ ಪಾಯ್ದು ತಗರ ಕೊಳ್ದ ಕೋಳಿಯ ಕಾಳೆಗದ ನೆವದ ಕಾಲ್ಮೆಟ್ಟಿನೊಳಾದ ಜಗಳಕ್ಕೆ ನಿಗಳಮನಿಕ್ಕುವೆಕ್ಕತುಳದ ಕೊಯ್ಕೈವಿಂಡರಂ ಬಗೆದು ಬಾಳ್ತಿಗೆಯ್ಯದೆ ತೊಱೆವಾಯ್ದನಂತೆ ನೆಲೆಯಱಿಯ ಕಡಲಂ ತೊಳಗುದೋಱದೆ ಸಾಮುದ್ರಿಕನಂತರ್ಘರೇಖೆಯಂ ಸೋಡಿ ನೆಳಲಂತೆ ಮೆಯ್ವಳಿಗೊಂಡು ಬವೆಗನಂತೆ ಪದನಱಿದು ರಸವಾದಿಯಂತೆ ಕಣ್ಗೆಡೆ ಕರಗಿಸಿ ಗುಟಿಯುಂತೆಂದುದನೆಂದು ಅಲತೆಗೆಯಂತೆ ಕಾಲ್ವಿಡಿದನುರಾಗವನೊಡರ್ಚಿ ಉಮ್ಮತದಂತುಪಭೋಗದೊಳ್ ಮರುಳ್ಮಾಡಿ

ಪುಸಿಯಳಿಪಂ ನಿಮಿರ್ಚಿ ತಮಗಿಲ್ಲದ ಬೇಂಟಮನುಂಟಮಾಡಿ ಕೂ
ರಿಸಿ ಕಡುಕೂರ್ತರಂತೆ ಪುರುಡಂ ಪೊಸದೇವಮನೆತ್ತಿ ಲಲ್ಲೆಯಂ
ಪಸರಿಸಿ ಬಯ್ದು ಪೊಯ್ದುಳಲನಗ್ಗಿಸಿ ಮುಟ್ಟಿದಮುನ್ನಮೆನ್ನರಂ
ದೆಸೆವಲಿಗೆಯ್ದರೋವೊ ಕಡುಘಾಳೆಯರೊಂದಿರುಳಲ್ಲಿ ಸೂಳೆಯರ್ ೧೧೩

ಸಮಸಂವಲ್ಲಿಯ ಸಿಂಬಿಗೇಂ ಸರಿಯೆ ಪೇಳಾ ರಂಭೆ ನೋಡಲ್ ತಿಲೋ
ತ್ತಮೆಗಿಂತುತ್ತಮರೂಪಮಾವೆಡೆ ವಿಲಾಸಂಚೆತ್ತ ತನ್ನೊಂದು ಬಿಂ
ಮಕನಾಳ್ವೂರ್ವಶಿಗೀ ವಶೀಕರಣಮೆಲ್ಲಿರ್ಪುದೆಂಬೊಂದು ವಿ
ಭ್ರಮದಿಂ ದಿಗ್ಭ್ರಮೆಯಂ ವಿಟರ್ಗೆ ಪಡೆಗುಂ ತದ್ವಾರನಾರೀಜನಂ ೧೧೪

ಇನ್ನುಳಿದಾದರೇದೊರೆ ದೃಗಂಚಲದಂಜನದಿಂದೆ ಸಿದ್ಧರಂ
ಸನ್ನುತಮಾದ ಚೆಲ್ವಧರಪಲ್ಲವದಿಂದಮೃತಾಶನರ್ಕಳಂ
ಪನ್ನ ಗರಂ ಬಳಲ್ಕುಡಿಗಳಿಂ ಕಳಕಂಠ ಸುಕಂಠನಾದದಿಂ
ಕಿನ್ನರರಂ ಮರುಳ್ಗೊಳಿಪುವಲ್ಲಿಯ ವಾರವಿಲಾಸಿನೀಜನಂ ೧೧೫

ಗಣನಾತೀತಪ್ರಸೂನ ಪ್ರಸರದೊಳು ದೆಕ್ಕೆಕ್ಕೆಯಿಂ ಪಾಯ್ವ ಗಂಧಾ
ಪಣದೊಳ್ ಭೋರೆಂದು ಬೆಂಬತ್ತುವ ಮದಗಜದಾನಪ್ಲವಾಪೂರ್ಣರಾಜಾಂ
ಗಣದೊಳ್ ಮೇಲ್ವಾಳ್ವ ಭೃಂಗಾವಳಿಯ ಭಯದಿನುಳ್ಕಳ್ಕಿ ತದ್ವಾರನಾರೀ
ಗಣಮಾಟಂದಾವಗಂ ಸಂಪಗೆದಳೆಯ ನೆಳಲ್ದಂಪಿನೊಳ್ ಪೋಪುದೆತ್ತಂ ೧೧೬

ಮಲ್ಲಿಕಾಮಾಲೆ ॥

ಆ ಮನೋಹರಮಪ್ಪ ಪಟ್ಟಣ ಮಧ್ಯಭಾಗದೊಳುದ್ಗತ
ವ್ಯೋಮಗಾಮಿನಿಜಧ್ವಜಾನಿಲಧೂತಮೇಘಮುದಗ್ರ ನಾ
ನಾ ಮಣಿಪ್ರಭೆಯಿಂ ನಭೋಮಣಿಯಂ ವಿಡಂಬಿಸುತಿರ್ಪುದು
ದ್ದಾಮಮುದ್ಧ ಜಯಾಂಗನಾ ಶ್ರುತಿಕುಂಡಳಂ ರಣಮಂಡಳಂ ೧೧೭

ರಣಮಂಡಳವೆಂಬ ಮಹಾ
ಫಣಿ ಗಳಗಳನುಗಳ್ದ ವಿಷದ ಮಡುವೆನೆ ಮದವಾ
ರಣ ಕಟವಿಗಳಿತ ದಾನೋ
ಲ್ಬಣಾಂಬು ಮೇಚಕಿತಮಾದಗಳ್ ಸೊಗಯಿಸುಗುಂ ೧೧೮

ವ: ಅದಱೊಳ್

ಜಳಪಾನಮುಕ್ತಮದಕರಿ
ಗಳರ್ದಿಕೊಳೆ ಕಟತಟಂಗಳಿಂದೆರ್ದಳಿಗಳ್
ತಳೆವುವರಿ ವಿಕ್ರಮಾನಳ
ನಳಿವನ್ನಂ ಮುಳುಗೆ ನೆಗೆದ ಪೊಗೆಯ ಬೆಡಂಗಂ ೧೧೯

ಆ ಪೆಂಗಳೆಂಬ ಮಹಾ
ಪಾಪದ ನಡುವಖಿಳ ಪೌರಜನದನುರಾಗಂ
ರೂಪೊಗೆದು ಬೆಳೆದು ತೆನೆವೋ
ದೀ ಪೆರ್ಮೆಗೆ ನೋಂತ ಪೆರ್ಮಗಿಲ್ ಸೊಗಯಿಸುಗುಂ ೧೨೦

ಪೆರ್ವಾಗಿಲ ನೆಲೆವಾಡದ
ಗುರ್ವನದೇನೆಂಬೆನದಱ ಪಳಯಿಗೆದುಱುಗಳ್

ಗೀರ್ವಾಣನದಿಯ ತೀರದ
ನೀರ್ವಕ್ಕಿಯನಲ್ಲಿ ಸೋವಿ ಮೂವಿಧಿಗೊಳಿಕುಂ ೧೨೧

ವ: ಅಲ್ಲಿ

ಪಸರಂಬೆತ್ತೊಪ್ಪುಗುಂ ಮಂಡಳಿಕಮಣಿಮಹಾಮಂದಿರಂ ದಂಡನಾಥಾ
ವಸಥಂ ಸಾಮಂತ ಸೌಧಾವಳಿ ಪರಿಣತ ಪಂಚಪ್ರಧಾನಾಲಯಂ ವಾ
ಜಿಸಮಾಜ ಪ್ರಸ್ಫುರನ್ಮಂದುರಮಿಭಶುಭಶಾಲಾಳಿ ಶಸ್ತ್ರಾಸ್ತ್ರಸದ್ಮಂ
ವಸುವಸ್ತ್ರಾನರ್ಘ್ಯ ರತ್ನೋದವಸಥಮವರೋಧಾಂಗನಾ ರಮ್ಯಹರ್ಮ್ಯಂ ೧೨೨

ಶ್ರೀರಾಜಾಲಯಮವಱೊಳ್
ರಾರಾಜಿಪುದುಚಿತರುಚಿರಮಣಿಖಚಿತ ನಿಜ
ದ್ವಾರಮುಖಕಾಂತಿ ದೆಸೆಯಂ
ಪೂರಿಸೆ ನಗುವಂತೆ ರಾಜರಾಜಾಲಯಮಂ ೧೨೩

ವ: ಅಂತನೇಕ ಮಣಿಮಯ ನಿರ್ಮಾಣಕೌಶಲ ಕಮನೀಯಮಾದ ರಾಜಭವನದೊಳ್

ಸೊಗಯಿಪ ಗೃಹವನದೊಳ್ ಮ
ಲ್ಲಿಗೆದಿಱಿದಪವೆಂದು ಪೋಗಿ ಭೃಂಗಾವಳಿಗಳ್
ತಗುಳೆ ತರಹರಿಸಲಱಿಯದೆ
ಪೊಗುವರ್ ಸಂಪಗೆಯ ಜೊಂಪಮಂ ಬಾಲಕಿಯರ್ ೧೨೪

ವಿಕಚ ಸರೋಜಮಂದಮಕರಂದ ಕೋಳ್ಗೆಸಱಾದನರ್ಘ್ಯ ದೀ
ರ್ಘಿಕೆಗಳ ತೀರದತ್ತಿಳಿಯಲಣ್ಮದೆ ಘಮ್ಮನೆ ಪೋಗಿ ರಾಗದಿಂ
ಪ್ರಕಟಿಪರಿಂದುಕಾಂತಕೃತಕೋಪಲದಿಂದಿಳಿತರ್ಪ ನಿರ್ಮಳೋ
ದಕಪರಿಪೂರ್ಣಮಾದ ಕೊಳನೊಳ್ ಜಲಕೇಳಿಯನಿಂದುವಕ್ತ್ರೆಯರ್ ೧೨೫

ಚಿತ್ರಂ ಬರೆವಾಗಳ್ ಮೃಗ
ನೇತ್ರೆಯರುಱೆ ತಮ್ಮ ರೂಪು ಮಣಿಭಿತ್ತಿಗಳೊಳ್
ಚಿತ್ರಿಸಿದಂತಿರೆ ಕಂಡು ವಿ
ಚಿತ್ರಮೆಂದೆಂದಲ್ಲಿ ಚಿತ್ರಮಂ ಚಿತ್ರಿಸುವರ್ ೧೨೬

ನಸುನಗುವಂತೆ ಕೂರ್ತು ನುಡಿವಂತೆ ಮನಂಬಡೆದಪ್ಪುವಂತೆ ರಂ
ಜಿಸುವ ನವೀನ ಚಿತ್ರದ ಚಮತ್ಕೃತಿಯೊಳ್ ಚಲಲೋಚನಾಳಿ ಕೇ
ಲೀಸೆ ನಡೆನೋಡುವಗ್ಗಳದ ಜಾಣರ ಚಿತ್ತದ ಭಿತ್ತಿಯಲ್ಲಿ ಚಿ
ತ್ರಿಸುವುದು ಚಿತ್ರಶಾಲೆ ಶಚಿಯೋಪನ ರೂಪನೆವೆತ್ತ ಚಿತ್ರಮಂ ೧೨೭

ಒಳಗಮರ್ದಿರ್ಪ ಭಂಗುರ ಮೃದಂಗಲಯಕ್ಕನುರೂಪಮಾದ ಕೋ
ಮಳೆಯರ ಲಾಸ್ಯಮಂ ಪ್ರಿಯದಿನಾಲಿಪ ನೋಟಕರಾಲಿನಾಟಕಂ
ಗಳನೊಡನಾಡೆ ರೂಢಿಸಿದ ನಾಟಕಶಾಲೆಗಳಗ್ರಭಾಗದೊಳ್
ಬಳಸುಗುಮಾವಗಂ ನೃಪತಿಕೇತನಜಾತಿಶಿಖಂಡಿ ತಾಂಡವಂ ೧೨೮

ಬಾಂದೊಱೆಯ ಹಂಸೆ ಪುಳಿನದ
ಪೊಂದಾವರೆಯೆಸಳಿಗೆತ್ತು ತತ್ತಿಯನಿಟ್ಟಂ
ತಂದಂಬಡೆವುವು ಸೌಧದೊ
ಳೊಂದಿದ ಪೊಂಗಳಸದೆಸಳ್ಗಳೊಳ್ ತಾರಗೆಗಳ್ ೧೨೯

ಮರಕತ ಕೂಟ ಕೋಟಿ ತಟದಿಂದೊಗೆದರ್ವಿಸಿ ಪರ್ವೆ ಕಾಂತಿಮಂ
ಜರಿ ಹರಿದಶ್ವನಶ್ವಚಯಮಂಬರದೊಳ್ ಗಿಳಿಯಂತೆ ಪಾಯಲ
ಚ್ಚರಿವಡೆವಂಬರೇಚರರ ಕಣ್ಗೆ ಮನಂಗೊಳೆ ಪಕ್ಕಿ ಸೋವ ಪಾ
ಮರಿಯರ ಲೀಲೆಯಂ ನೆರಪುಗುಂ ನೆಲೆಮಾಡದೊಳಂಗನಾಚಯಂ ೧೩೦

ಬಿತ್ತರದ ಸೌಧಶಿಖರದೊ
ಳೊತ್ತಂಬದಿನಾಡುವಂದು ಕಂದುಕಮನುಗೆ
ಟ್ಟತ್ತಿತ್ತ ಪೋಗೆ ಪಾಯ್ವರ್
ಮುತ್ತಿನಸೆಂಡೆಂದು ಮುಗ್ಧೆಯರ್ ಮೃಗಧರನಂ ೧೩೧

ಹರಿನೀಳದ ಕತ್ತಲೆ ಕೆಂ
ಬರಲೆಳೆವಿಸಿಲೆಂಬ ನೆವದಿನಿರುಳುಂ ಪಗಲುಂ
ಬೆರಸಿರ್ಪುವೆಂದೊಡಾ ಪುರ
ದರಸನ ಪೆಸರೆನಿಸಿದಾಜ್ಞೆಯೇನಗ್ಗಳಮೋ ೧೩೨

ವ: ಮತ್ತಮದಱೊಳೊಂದೊಂದೆಡೆಯೊಳ್ ತೊಂಡೆವಾಯ್ಗಳಂ ತುಡುಂಕುವ ತೊಂಡುಗಿಳಿಗೆ ಬೆದಱಿ ಬಿಡಾಳ ನಯನಭೀಷಣಂಗಳಪ್ಪ ವೈಡೂರ್ಯ ಭಿತ್ತಿಯನೊತ್ತುಂಗೊಂಬ ಬಿಂಬಾಧರೆಯರಿಂ ಒಂದೊಂದೆಡೆಯೊಳ್ ನೂಪುರದುಲಿಯ ಸನ್ನೆಗೆ ಬಿನ್ನನೆ ಬಂದು ಮೆಲ್ಲಡಿಗಳಂ ತಡಂಗಲ್ವೊಯ್ವುರಸಂಚೆಗಂಜಿಸೆ ಮಿಂಚಿನಂತೆ ಮಿಱುಗುವೆಳವಳುಕಿನ ಧಾರಾಗೃಹದ ಮಣಿಗಂಭಮನಿಂಬುಗೊಳ್ವ ಮಂದಗಮನೆಯರಿನೊಂದೊಂದೆಡೆಯೊಳ್ ಸೋರ್ಮುಡಿಗೆ ಪಾಯ್ವ ಸೋಗೆಗೋಗಡಿಸೆ ಪುಳಿಂದ ನಿಳಯದಂತೋಳಿಗೊಂಡ ನೀಲದ ಸಾಲಭಂಜಿಕೆಗಳಿಂದೊಪ್ಪುವೋಲಗ ಶಾಲೆಯಂ ಪುಗುವ ಕಾಳೋರಗಕೇಶಪಾಶೆಯರಿಂ ಒಂದೊಂದೆಡೆಯೊಳ್ ಮೆಯ್ಗಂಪಿಂಗೆಱಗುವ ಪಱಮೆವಱಿಗುಱಿಪದ ಸಂಪಗೆಯ ಜೊಂಪದಂತೆ ತುಱುಗಿದ ಮರಕತ ವಿತರಣ ಮಂಟಪದ ಪೊನ್ನರಾಶಿಯಂ ಮಱೆಗೊಳ್ವ

ಚಂದನಗಂಧಿಯರಿಂ ಒಂದೊಂದೆಡೆಯೊಳ್ ಮಂದಹಾಸಚಂದ್ರಿಕೆಗೆ ಮೊಗಸಿ ಮೊಗವಿಡುವ ಜೊನ್ನವಕ್ಕಿಗೆ ತಕ್ಕಳಿದು ಪಸುವಿಸಿಲಮಸಕಮನಾಣೆಯಿಡುವ ರಾಣಿವಾಸದ ಮಾಣಿಕದ ಮೊಗಸಾಲೆಗೆ ಸಯ್ಪರಿವ ಶಶಿಮುಖಿಯರಿಂ ಒಂದೊಂದೆಡೆಯೊಳ್ ನೆಲೆಮೊಲೆಗೆ ಝೊಂಪಿಸುವ ಜಕ್ಕವಕ್ಕಿಗೆ ಜಗುಳ್ದ ಬೆಳ್ದಿಂಗಳಂತೆ ತಣ್ಗದಿರ್ಗಳಂ ಸೂಸುವ ದೇವತಾಗಾರದಿಂದು ಕಾಂತರಂಗಮಂಡಪದ ಮುತ್ತಿನ ಮತ್ತವಾರಣಮಂ ಮಲಂಗುವ ಮೃಣಾಳ ಕೋಮಳೆಯರಿಂ ಒಂದೊಂದೆಡೆಯೊಳ್ ಪೆಚ್ಚಿಯವಿಂದುಗಂಕಣದ ಪಸುರ್ಪಿಂಗೆ ಪರಿವುತ ಪುಲ್ಲೆಗೆ ಮಲ್ಲಳಿಗೊಂಡು ಸೆಜ್ಜೆವನೆಯ ವಜ್ರದ ವಳಭಿಗಡರ್ದು ಪಣ್ಣಿದ ಕಣ್ಣವಲೆಯಂತೆ ಕವಲ್ತು ದಾಂಗುಡಿವೋದ ಮಾಧವೀಲತೆಯ ಕೆಲದೊಳಲರಂಬನಿಟ್ಟ ಬೇಗೆಯಂತೆ ಮಿಳಿರ್ವ ನಿಱದಳಿರ ತುಱುಗಲಿಂ ಕೆಂಕಮಾದ ಕಂಕೆಲ್ಲಿಯ ಕಾವಣದೊಳ್ ಮೆಯ್ಗರೆವ ನಿತಂಬಿನಿಯರಿಂ ಅಂಗಭವನ ತೋಹುದಾಣದಂತೆ ಮೋಹನಮನೊಳಕೆಯ್ವ ಮಣಿಗೇಹಂಗಳ ಮಧ್ಯದೊಳ್

ನಯಮಳವಟ್ಟ ಕುಟ್ಟಿಮಮೆ ನೀಲಮಯಂ ಮಿಱುಪೊಂದಿ ನೀಳ್ದ ಭಿ
ತ್ತಿಯ ದೊರೆವೆತ್ತ ಮೌಕ್ತಿಕಮಯಂ ತಳಗಂಭಮೆ ತಳ್ತ ವಜ್ರ ಸಂ
ಚಯಮಯಮಾಗಿ ರತ್ನಮಯಮಾದ ಬೆಡಂಗು ಮಯಂಗೆ ಚಿತ್ತ ವಿ
ಸ್ಮಯಮನೊಡರ್ಚಿ ಕಣ್ಗೆ ಕರುಮಾಡುಮದೇಂ ಕಡುಗಾಡಿವೆತ್ತುದೋ ೧೩೩

ಅದು ಸಮುದಿತ ಘಂಟಾ ಸ
ಮ್ಮದಕರ ಶಾಖಾಪ್ರವಾಳ ಮಾನಪತಾಕಾ
ಸ್ಪದಮಾಗಿ ಪೋಗೆ ಪಳಿವುದು
ಮದಗಜ ಕಂದ ಮನ್ಮಥಾಡಂಬರಮಂ ೧೩೪

ಮಂಜುಳಮಾದ ಮೌಕ್ತಿಕದ ಲಂಬಣಮಂ ಬಗೆಗೊಳ್ವ ಮಲ್ಲಿಕಾ
ಮಂಜರಿಯೆಂದು ಬಂದೆಱಗಿದುನ್ಮದ ಭೃಂಗಮನಂಗಕಾಂತೆ ಕ
ಣ್ಗೆಂಜಲದೋಷಮಂ ಕಳೆಯಲೆಂದು ಕರಾಂಗುಲಿಯಿಂದಮಿಟ್ಟ ರ
ಕ್ಷಾಂಜನಪುಂಜದಂದಮನದೇಂ ಪುದುಗೊಂಡುದೋ ರತ್ನಭಿತ್ತಿಯೊಳ್ ೧೩೫

ಆ ವಸುಧಾಧಿನಾಯಕ ನಿಕೇತನಕೇತನದಗ್ರದಲ್ಲಿ ಕೆ
ಯ್ದೀವಿಗೆಯಂತೆ ಕಂಗೊಳಿಪ ಪೊಂಗಳಸಂಗಳ ದೀಪ್ತಿ ಸುತ್ತಲುಂ
ತೀವಿರದಿರ್ದೊಡೆದ್ದಗರುಧೂಪದ ಕರ್ವೊಗೆಯೆಂಬಮರ್ವು ಬಂ
ದಾವರಿಸಿರ್ದ ಕೂಟದೊಳೆ ಮುಗ್ಗವೆ ಭಾನುಚರತ್ತುರಂಗಮಂ ೧೩೬

ಮಂದರವೊಂದನೆ ತಂದೋ
ರಂದಿನೆಸೆವಂತಿರೇಳು ನೆಲೆವಡೆದಿನಿತೊಂ

ದಂದಕ್ಕೆ ತಂದ ತೀರಮೆ
ಕಂದರ್ಪಂಗಕ್ಕುಮಕ್ಕುಮೇ ಮಿಕ್ಕವಱೊಳ್ ೧೩೭

ಪೆಱತೇನಿಂತಂತದೆಂದಲ್ಲಿಯ ಕುಸುರಿಗಳಂ ಕೂಡೆ ಕೊಂಡಾಡಲಿಂ ನಾ
ನಱಿಯೆಂ ತದ್ರಾಜಗೇಹೋಪಚಿತರಚನೆಯಂ ಕಂಡು ನಿರ್ವೇಗದಿಂ ಕೆ
ಯ್ಮಱೆದಂ ವೈಚಿತ್ರ್ಯಶಿಲ್ಪಪ್ರಥಿತ ನಿಜಕಳಾಕರ್ಮದೊಳ್ ವಿಶ್ವಕರ್ಮಂ
ತೊಱೆದಂ ಚಾತುರ್ಯಧುರ್ಯ ಪ್ರಕಟಬಿರುದ ಸಂದರ್ಭಮಂ ಪದ್ಮಗರ್ಭಂ ೧೩೮

ವ: ಅಂತನವದ್ಯ ಶೋಭಾಭಿರಾಮಮಾದ ರಾಜಾಲಯಲಕ್ಷ್ಮಿತೊಲಗದೆ ನೆಲೆಗೊಂಡು ರಾಜೀವಲಕ್ಷ್ಮಿಯಂ ಧರಿಸಿ

ನೆಟ್ಟನೆ ತನ್ನಗರದ ಪೆಂ
ಪಿಟ್ಟಳಮೆನೆ ಕಂಡು ಕಾಯ್ಪಿನಿಂ ಮುಗಿಲುದ್ದಂ
ಕಟ್ಟೊಗೆದು ಪಾಱಿ ಕಣ್ಣಂ
ಬಿಟ್ಟೊಡೆ ಸಗ್ಗಕ್ಕೆ ಬಕ್ಕುಮೇ ಸೌಭಾಗ್ಯಂ ೧೩೯

ಹಯರತ್ನಂ ಗಜರತ್ನಮುತ್ತಮಗುಣಸ್ತ್ರೀರತ್ನಮುರ್ವೀಪತಿ
ಪ್ರಿಯರತ್ನಂ ದೊರೆವೆತ್ತ ಸತ್ಪುರುಷರತ್ನಂ ತಾನಿದರ್ಕಾವಗಂ
ನಿಯತಸ್ಥಾನಮೆನಿಪ್ಪುದೆಂದು ಪದೆದಿತ್ತಂ ಚಿತ್ತದೊಳ್ ಮಾಡಿ ನಿ
ಶ್ಚಯಮಂ ರತ್ನಪುರಂ ದಲೆಂದು ಚತುರಾಸ್ಯಂ ಪ್ರೇಮದಿಂ ನಾಮಮಂ ೧೪೦

ಲೋಚನದ ಸುಕೃತದಾಕೃತಿ
ಸೂಚಿಪ ನಾಲಗೆಯ ಸುಧೆಯದೆನ್ನದೆ ಪೊಗಳಲ್
ಗೋಚರಮಲ್ತೆನೆ ನಿಖಿಳ ಪು
ರೀ ಚೂಡಾರತ್ನಮೆನಿಸದೇ ರತ್ನಪುರಂ ೧೪೧

ಆಭಾಸ್ವನ್ನಗರಾಧಿನಾಥನಖಿಳೋರ್ವೀನಾಥ ಕೋಟೀರ ಕೋ
ಟೀ ಭೂಷಾಮಣಿ ಮಂಜರೀಮಹಿತ ಪಾದಂ ಸಾಧಿತಾರಾತಿ ಲ
ಕ್ಷ್ಮೀಭಾಳಾಕ್ಷರ ದರ್ಪ ನಿರ್ಜಿತ ಮಹಾಸೇನಂ ಮಹಾಸೇನನೆಂ
ದೀ ಭೂಮಂಡಳದೊಳ್ ನೆಗಳ್ತೆವಡೆದಂ ಸನ್ಮಾನಜನ್ಮಾಲಯಂ ೧೪೨

ಸಿರಿವಕ್ಷೋರಂಗದಿಂ ಪಿಂಗದ ಸೊಬಗು ಜಯಶ್ರೀ ಮನಂಗೊಳ್ವಿನಂ ತೋ
ಳ್ದೆರಗಂ ಪಾರ್ದಿರ್ಪ ದರ್ಪೋನ್ನತಿ ವಿತತ ಯಶೋಲಕ್ಷ್ಮಿ ಸಪ್ತಾರ್ಣವಂ ಸೈ
ತಿರೆ ಕೆಯ್ಸಿರ್ರಾಗೆ ತನ್ನೊಳ್ ನೆರೆದ ಮಹಿಮೆ ಮೆಯ್ವೆತ್ತ ಪುಣ್ಯಪ್ರಭಾವ
ಕ್ಕರಸಾದಂ ವಿಶ್ವವಿದ್ಯಾಸಮುದಯ ಸುಮನಸ್ಸಂಚರಂ ಚಂಚರೀಕಂ ೧೪೩

ಇದು ಸಕಲ ಕವಿಜನಮನಸ್ಸುಧಾಕರಕಾಂತ ಸಂತತ ದ್ರವೀಕರಣ ಕಾರಣ ಕರ್ನಾಟಕವಿತಾ ಕಳಾವಿಳಾಸವಿದು ಮಧುರಕವೀಂದ್ರ ನಿರ್ಮಿತಮುಮಪ್ಪ ಧರ್ಮನಾಥಪುರಾಣದೊಳ್. ರತ್ನಪುರವರ್ಣನಂ ದ್ವಿತೀಯಾಶ್ವಾಸಂ.

ತೃತೀಯಾಶ್ವಾಸಂ

ಶ್ರೀನಿಳಯಂ ವಿಶದಯಶ
ಶ್ರೀನಿಳಯಂ ತಳೆದನಿಳೆಯನಿಕ್ಷ್ವಾಕುಕುಳ
ಶ್ರೀನಿಳಯನೆನಿಸಿದಖಿಳಕ
ಳಾನಿಳಯಂ ಸರಸಕವಿರಸಾಲವಸಂತಂ ೧

ಆ ಜನನಾಯಕನಸಿಧಾ
ರಾಜಳವಗಳಾಣೆ ಕೋಟೆ ತೋಳ್ವಲಮೆ ಬಲಂ
ನೈಜಮೆನಲಿಂತು ದೊರೆವಡೆ
ದೀ ಜಗತೀಭರಮನೊಂದೆ ಪುರಮೆನಲಾಳ್ವಂ ೨

ಪರಿರಂಭಂಗೆಯ್ವೊಡೊಂದಲ್ಲದೆ ಕರಮೆರಡಿಲ್ಲೋವೋ ದಿಗ್ದಂತಿಗೊಲ್ದಾ
ದರದಿಂ ಬಾಯ್ಗೂಡಲಿಚ್ಚೈಪೊಡೆ ಸುಡು ಪಲವುಂ ನಂಜುವಾಯ್ ಪನ್ನಗೇಂದ್ರಂ
ಗೆರದಾನೋರಂತೆ ಬೆಂಬತ್ತೆಯುಮೆರ್ದೆಗೊಡದೆಗ್ಗಾದಿ ಕೂರ್ಮಂಗೆನುತ್ತು
ರ್ವರೆ ಬಿಟ್ಟಾ ಮೂವರಂ ಭೂವರನ ಭುಜದೊಳಿರ್ಪಳ್ ಮನೋರಾಗದಿಂದಂ ೩

ಬಗೆಯೊಳ್ ಬೆರ್ಚದೆ ಬಂದು ತಾಗಿದರಿರಾಜೋರ್ವೀಶರಂ ಕಂಡು ನೆ
ಟ್ಟಗೆ ಕಣ್ಬೇಟದೊಳಾದ ಮಚ್ಚರದಲಂಪಿಂ ಪೋರ್ವ ದಿವ್ಯಾಂಗನಾ
ಳಿಗೆ ನಾಣ್ಪಿಂ ನಿನಗೀತನೀತನೆನುತುಂ ಕೆಯ್ಯಾರೆ ತಾನೊತ್ತುವುಂ
ಡಿಗೆಗೋಲ್ವಂತೆಸೆದಿರ್ದುದಾಂತಿ ಜೀವ ಕುಂತಂ ಧಾರಿಣೀಕಾಂತನಾ ೪

ಪಿಡಿದಡಸಿ ಜಡಿಯಲಸಿವೆಣ್
ನಡುಗುವುದೇನರಿದೆ ಜಡಿವ ವಾರ್ತೆಗೆ ಪಿರಿದುಂ
ಕಡುಗಲಿಗಂಡರ್ ನಡ ನಡ
ನಡುಗುವರಳವೆಂತುಟೋ ನೃಪಾಲಾಗ್ರಣಿಯಾ ೫

ಪರಮ ಪ್ರತಾಪತಪನ
ಸ್ಫುರಣೆಯೊಳೆರ್ದೆಗಾಯ್ದು ಬಂದು ಸಂಗರಮುಖದೊಳ್

ಭರದಿಂದರಿನೃಪರಾ ಭೂ
ವರನಸಿಧಾರಾಜಲಕ್ಕೆ ಬಾಯ್ವಿಡುತಿರ್ಪರ್ ೬

ಪಿರಿಮಂ ಸಂಗರರಂಗದೊಳ್ ಕವಿವ ಧಾರಾಪಾತದಿಂ ಪಾರ್ವುದ
ಚ್ಚರಿಯಲ್ತುದ್ಗತರಾಜಹಂಸನಿವಹಂ ತದ್ವಾಹಿನೀ ಜೀವನಂ
ಪರಿಗೆಟ್ಟುಂ ಗಡ ಭಂಗಮಂ ತಳೆವುದೋರಂತೆಂದೊಡೇನಿಂದಿದ
ಚ್ಚರಿಯಂ ಪುಟ್ಟಿಸದೇ ನೃಪೇಂದ್ರಕರವಾಳಾಮೋಘಮೇಘಾಗಮಂ ೭

ಸಮವ ವಿರೋಧಿ ವಿಕ್ರಮದವಾನಳನಾ ಜುಗುಮಾಗಳಂತೆ ಸಂ
ಕ್ರಮಿಸಿದ ಧಾರೆಯಿಂ ನಿಜಭುಜೋಜ್ವಳ ವಿಕ್ರಮಪಾವಕಂ ವಿರು
ದ್ಧಮಿದೆನೆ ಬಿದ್ದಮುದ್ದಮುರಿಗುಂ ಪರಿಭಾವಿಸೆ ಪಾರ್ಥಿವ ಪ್ರಭಾ
ವಮೋ ದೊರೆವೆತ್ತ ತನ್ನ ಪಕೃಪಾಣಮದುಂಡ ಜಲಸ್ವಭಾವಮೋ ೮

ಖುರಟಂಕಾಘಾತದಿಂ ಭೂತಳಮೆನಿತನಿತುಂ ತೂಂತುವೋದಲ್ಲಿ ಭೋಗೀ
ಶ್ವರ ಚೂಡಾರತ್ನ ಸಂಘಪ್ರಭೆ ನೆಗೆದು ಮಹಾಸೇನಭೂಪಪ್ರತಾಪಾಂ
ಕುರಮಾದಂ ದಂತಿದಾನೋದಕದೊಳೆ ತಳಿರೇ ಱಿರ್ದುದೆಂಬಂದದಿಂ ತ
ಳ್ತಿರಲೆತ್ತಂ ಧಾತ್ರಿಯೊಳ್ ಸ್ವೈರಿದು ನಿದಾಘೌಘದಾರ್ಘೀ ತುರಂಗಂ ೯

ಬಲಭಾರಕ್ಕಹಿನಾಥನಳ್ಕಿ ತಲೆದೊಂಗಲ್ ಪಿಂಗದಲ್ಲಾಡೆ ಭೂ
ವಲಯಂ ಬಾಲದಮೇಲೆ ಬಿರ್ದು ಕಡುನೊಂದೋರಂತೆ ಪಾತಾಳದೊಳ್
ತಲೆಬಾಲಂಗಿಡುವಂಗಡೆಂದೋಡಿದಿರೊಳ್ ಮಾಱೂಂತಸಿಕ್ಷೇಪದಿಂ
ತಲೆಬಾಲಂಗಿಡುವರ್ ವಿರೋಧಿಗಳವಂಗೆಂದೆಂಬುದಾಶ್ಚರ್ಯಮೇ ೧೦

ಪಡೆಮಾತೇನೆಡೆಗೊಟ್ಟು ಪೇರಡವಿಯಂ ಪೊಕ್ಕಾಗಳಾಗಳ್ ಬಳ
ಲ್ಕುಡಿಯಂ ಕಂಡೆರೆವಾವುಪಾಱೆ ನಗೆಗಣ್ ಗಂಡೆಯ್ದುಗುಂ ವ್ಯಾಘ್ರನೊ
ಳ್ನಡುವಂ ಕಂಡು ಮದೇಭಮೋಡೆ ಮೊಲೆಗಂಡಾರ್ದಟ್ಟುಗುಂ ಸಿಂಹಮೊಂ
ದೆಡೆಯೊಳ್ ನಿಂದಿರಲೀಯದಂಗನೆಯರಂ ತದ್ವೈರಿಭೂಪಾಲರಾ ೧೧

ಗಜಕುಂಭಂಗಳ ಮುತ್ತುಗಳ್ ಬಱಸೆ ವಲ್ಕವ್ರಾತಮೇನಾದುವೀ
ಭುಜಗ ಪ್ರೌಢಫಣಾಮಣಿ ಪ್ರಚುರದೀಪಂ ಪೋದುವೇ ಪಣ್ ಫಲಂ
ಕುಜದೊಳ್ ಬೀತುವೆ ಭೀತಿವಟ್ಟೆರ್ದೆಗೆಡಲ್ವೇಡೆಂದು ತದ್ವೈರಿ ಭೂ
ಭುಜಂ ಮೆಯ್ವಿಡದಂತೆ ಸಂತಮಿಡುವರ್ ಕಾಂತಾರದೊಳ್ ಕಾಂತೆಯರ್ ೧೨

ಪಿರಿದುಮೊಡನಡಪಿದರಗಿಳಿ
ಸರಸ ಫಲಾವಳಿಯಾನಂಚೆ ಮೃದುಳ ಮೃಣಾಳಾಂ

ಕುರಮನುಡಿದಿತ್ತು ಸಲಹುವು
ವರಣ್ಯದೊಳಗಾ ನೃಪೇಂದ್ರರಿಪುಕಾಂತೆಯರಂ ೧೩

ವಿದಿತ ಯಶಸ್ಫಾಟಿಕ ಮುಕು
ರದೊಳೊದವಿದ ಸಕಲ ಜನಮನೋರಾಗಂ ಪೋ
ಗದೆ ಬಿಂಬಿಸಿತೆಂಬಿನಮೆಸೆ
ದುದು ವಸುಧಾಧವನ ಭುವನ ಭುಂಭುಕ ತೇಜಂ ೧೪

ಧರೆಗಾನಿರ್ದಂತೆ ತಾನುಂ ಸಕಲ ಧರಣಿ ಭೃನ್ನಾಥನೆಂಬೊಂದು ಬಿಂಕಂ
ಬೊರೆದಿರ್ದತ್ತೊಂದು ಕಾಯ್ಪಿಂ ಕಳುಪೆ ವಿಪುಳ ಬಾಹಾಪ್ರತಾಪಾಗ್ನಿ ಬಂದಾ
ವರಿಸಲ್ ಸ್ವರ್ಣಾದ್ರಿ ಬೇಗಂ ಕರಗಿ ಪರಿದು ತೀವಿರ್ದುದೆಂಬಂದದಿಂ ಸಾ
ಗರಮೆಲ್ಲಂ ಕೆಂಕಮಾಗಲ್ ಪಸರಿಸಿತು ಮಹಾಸೇನತೇಜೋವಿತಾನಂ ೧೫

ಧುರಜಲಧಿಯೊಳಾಡದೆ ಖೇ
ಚರಮೆನಿಸಿದುದನಿಮಿಷಾಳಿಯೆನೆ ಮತ್ತಿನ ಭೂ
ಚರಜಂತುಗಳಾಂತಳಿವುವೆ
ಪಿರಿದುಂ ವಿಕ್ರಮತಿಮಿಂಗಳಂಗಾ ನೃಪನಾ ೧೬

ಮಱಿಮಾತೇಂ ಸಿಡಿಲಂತೆ ಕೂರಸಿ ಕಱುತ್ತುಗ್ರಾಜಿಯೊಳ್ ವ್ಯಗ್ರದಿಂ
ದೆಱಪಲ್ಲಿಂದೊಳಗಳ್ಕಿ ಬಂದೆಱಪ ಭೂಭೃತ್ಕೋಟಿ ಕೋಟೀರದೊಳ್
ಮಿಱುಗುತ್ತಿರ್ಪುದನಾರತಂ ನೆಲಸಿದಾಜ್ಞಾದೇವತಾಪಾದಮ
ಚ್ಚಿಱಿದಂತರ್ಚಿತಮಾಗಿ ತೋರ್ಪ ಪದ್ಮಚ್ಛಾಯೆ ಭೂಪಾಲನಾ ೧೭

ಮದವಳಿದೆಱಪರಿಬಾಹಾ
ಗ್ರದೊಳಾಜ್ಞಾದಂಡದವನಿಮಂಡಲಮೇನೊ
ಪ್ಪಿದುದೋ ಜಯಲಕ್ಷ್ಮಿ ತನ್ನೃಪ
ಪದಲಕ್ಷ್ಮಿಗೆ ತಂದ ಚಂದ್ರಕಚ್ಛತ್ರದ ವೋಲ್ ೧೮

ಖಳವದ್ಬಾಹುವನುರ್ವರಾವನಿತೆ ವಕ್ಷೋರಂಗಮಂ ಲಕ್ಷ್ಮಿನಿ
ರ್ಮಳ ವಕ್ತ್ರಾಂಬುಜಮಂ ಸರಸ್ವತಿ ಮನಂಗೊಂಡಪ್ಪಿ ತಂತಮ್ಮ ಮೆ
ಯ್ವಳಿಯಿಂದಿರ್ಪಿನಮೊಲ್ಮೆದೋರ್ಪ ಪುರುಡಿಂ ತಾನೆಯ್ದಿದೆನೆಂಬ ಬಾ
ಕುಳಿಯೋ ಲಕ್ಷಣಲಕ್ಷ್ಮಿ ಸಾರ್ದು ಬಿಡಳುರ್ವೀನಾಥ ಸರ್ವಾಂಗಮಂ ೧೯

ತಣ್ಣಾಳಿಗೆ ತಣ್ಗದಿರನ
ನುಣ್ಗದಿರ್ಗೆ ಪುಳಿಲ್ಗೆ ಪೂವಿನಂಬಿಂಗೆ ಕರಂ

ಕಣ್ಗಡೆ ಗುಱಿಮಾಡುವುದೆಳೆ
ವೆಣ್ಗಳನೆಡೆವಿಡದೆ ನೆಗಳ್ದ ಭೂಪನ ರೂಪಂ ೨೦

ಭುವನಂ ಬಣ್ಣಿಪ ಭೂಭುಜಂಗನೆಳವೇಟಂ ನಾಂಟಿ ನಂಜಾಗಿ ಚಿ
ತ್ತವನುನ್ಮೋಹಿಪ ಗಾಡುಗಂಡು ನನೆವಿಲ್ಲಂ ಕೊಂಡು ಕೋಲ್ಕೋಲನು
ರ್ಚುವಿನಂ ಮನ್ಮಥನೆಚ್ಚ ಪೂವಿನ ಪುಳುಂಬಿಂ ನೊಂದು ಪುಲ್ಗೊಂಡು ದೂ
ಱುವ ಪೆಣ್ಬುಯ್ಯಲೆ ಪುಯ್ಯಲಲ್ಲದಱಿಯೆಂ ಮತ್ತಾವ ಬಲ್ಬುಯ್ಯಲಂ ೨೧

ಅಳುಪಿಂ ರಾಜಮನೋಜನಂ ಬಯಸಿ ಬೇಗಂ ಲಂಚಮಿವಂದದಿಂ
ತಳಿರ್ವಾಸಿಂಗೊಡಲಂ ಪ್ರಸೂನಶರಪಾತಕ್ಕಾರ್ದ್ರ ಚಿತ್ತಂಗಳಂ
ಗಿಳಿವಿಂಡಿಂಗೆ ಕಳಲ್ದ ಬಾಯ್ದೆಱೆಗಳಂ ಭೃಂಗಾಳಿಗುರ್ವೆಳ್ದ ಸು
ಯ್ಗಳ ಕಂಪಂ ತೆಱೆದೆತ್ತುತೆತ್ತು ತವಿಲಕ್ಕುಂ ಕಾಮಿನೀಸಂಕುಳಂ ೨೨

ಗೆಲವಿನ ಮಾತು ಬೀತು ನಳಿತೋಳ್ ಬಿಸವಲ್ಲಿಯ ಪಂಗುದಾಳ್ದ ಪೆ
ರ್ಮೊಲೆ ತಲೆಗೊಟ್ಟು ತಾವರೆಯ ಮೊಗ್ಗೆಗಳಂ ಮಱೆಗೊಳ್ವ ಕಣ್ಗಳು
ತ್ಪಲದಳಮಂ ಶರಣ್ಬುಗುವ ಮೆಯ್ ಮಲಯೋದ್ಭವದಾಸೆಗೆಯ್ವ ಕ
ಕ್ಕುಲಿತೆಯನುಂಟುಮಾಡಿದುದು ಪೆಣ್ಗಳೊಳಾವನಪಾಂಗ ವಿಭ್ರಮಂ ೨೩

ಅರಸಂಗೆಯ್ದುದೆ ಪೇಳ ಪೆಣ್ಗೊಗಲೆಗೆನುತ್ತುಂ ತದ್ವಿಯೋಗಾರ್ತ ಸುಂ
ದರಿಯರ್ ಪೊಕ್ಕವನಂಗಳಂ ಪೊಱಿಸಿ ತಂದೀಡಾಡುವರ್ ನಾಡೆ ಬೆಂ
ದರೆವೊತ್ತಿರ್ದ ಮೃಣಾಳಮಂ ಪುರಿದ ಬಂಬಲ್ವೂಗಳಂ ಸೀದು ಸೀ
ಕರಿವೋದೊಳ್ದಳಿರಂ ಸಮಂತು ವನಪಾಲರ್ ಮುಂದೆ ಭೂಪಾಲನಾ ೨೪

ವಿಲಸದ್ರಾಜ ಕಲಾವಿಲಾಸ ನಿಜಸೌಂದರ್ಯಕ್ಕೆ ಬೇಳಾದ ಕೋ
ಮಲೆಯಂ ಬಾಳ್ವೆಣನಾಗಿ ಬೀಳೆ ಬಱಿದೆನ್ನಂ ದೂಱುಗುಂ ಲೋಕಮಿಾ
ಗಳೆನಿತ್ತೆಯ್ದಲರ್ವಿಲ್ಲನೈದುಸರಲಂ ಮುಂದಿಟ್ಟು ಮುಂಕೊಂಡು ಮೆ
ಯ್ವಳಿಯಿಂದೋಲಗಿಪಂ ಮನೋಭವನಜಸ್ರಂ ರೂಪಮಂ ಭೂಪನಾ ೨೫

ಶುಚಿತೆಯನಱಿಯದೆ ಭೂಭುಜ
ನುಚಿತವಯೋರೂಪವಿಭವಮಂ ಕಂಡೊಲಿವಳ್
ಶಚಿಯೆನುತೆ ಸಹಸ್ರಾಂಬಕ
ನ ಚಂಚಲಾನಿಮಿಷ ದೃಷ್ಟಿಯಿಂದೀಕ್ಷಿಸುವಂ ೨೬

ಪೆಱತೇಂ ರಾಜಕಲಾವಿಲಾಸನ ಕಲಾವಿನ್ಯಾಸದಿಂಬಾದ ಬಾ
ಯ್ದೆಱೆಯಂ ಮಚ್ಚಿಸೆ ಕೂರ್ಮೆಯಿಂ ಮಗುಳೆವಾರಳ್ ತಾನಿದೊಂದಲ್ಲದೊಂ

ದಱೊಳಿಂಬಿಂ ಮಡಗಿಟ್ಟು ಕಾವೆನೆನುತಂ ನಾಲ್ಕುಂ ಮೊಗಂಬೆತ್ತುಮೇಂ
ಬಱಿದಾದಂ ಬಿದಿ ಭಾರತೀವನಿತೆ ಮತ್ತಲ್ಲಿರ್ಪುದಂ ಮಾಣ್ದಳೇ ೨೭

ಬಳಸಿನ ಮಾತೇನಾ ನೃಪ
ತಿಳಕನ ವಾಗ್ವೈಭವಕ್ಕೆ ಮೂಱುಜಗಮುಮಂ
ತೊಳಸಿದೊಡೊರ್ವನೆ ಸಮನಾ
ಗುಳಿದುದು ಱಿಂ ಶೇಷನೆನಿಪನಿನ್ನುಂ ಶೇಷಂ ೨೮

ಕ್ರಮದಿಂ ವಿಕ್ರಮದಿಂ ಕಡಲ್ಗಡೆವರಂ ಪೆರ್ಚಿರ್ದ ದುಷ್ಪಾರಿವ
ರ್ಗಮಸಂಖ್ಯಾತಮನೆಯ್ದೆ ಗೆಲ್ದನೆನಲಿನ್ನಿರ್ದಲ್ಲಿ ಮೆಯ್ವೆರ್ಚಿದ
ಶ್ರಮದಿಂದಾತ್ಮವಶಕ್ಕೆ ಸಿಲ್ಕಿಕ್ಕಿದರಿಷಡ್ವರ್ಗಂಗಳಂ ನಾಡೆ ಗೆ
ಲ್ದ ಮಹಾಮಂತ್ರದ ಮೈಮೆ ಸದ್ಗುಣನಿಧಾನಂಗೇನದಾಶ್ಚರ್ಯಮೇ ೨೯

ನಯಮಳವಟ್ಟಿರಲರಿಸಮು
ದಯಜಯಕೆ ಧಾರೆಮೇರೆಯಂ ಮೀಱಿದ ಬು
ದ್ಧಿಯೊಳೆ ವಶಂಮಾಡಿದನಿಂ
ದ್ರಿಯಾಶ್ವಮಂ ಧರೆಗೆ ಧಾರಕಂ ಪೆ ನಾವಂ ೩೦

ಅಕ್ಷಯಧರ್ಮಾರ್ಥೋಭಯ
ಪಕ್ಷಂ ಬೆಳೆವಂತು ರಾಜಹಂಸನದೇಂ ಕಾ
ಮಕ್ಷೀರಮನನುಭವಿಪನೊ
ಲಕ್ಷಿಸಿ ಮೋಹಾಂಬುಪೂರದೊಳ್ ಬೆರಸಿದುದಂ ೩೧

ಜಗದೊಳ್ ಕಣ್ಬಡೆದಿರ್ದ ನೀತಿ ನಿಡುದೋಳಂ ತಾಳ್ದ ವಿಕ್ರಾಂತಿ ನಾ
ಲಗೆಯಂ ಪೆತ್ತ ಸಮಸ್ತ ವಿದ್ಯೆ ಸೊಬಗಂ ಕೆಯ್ಕೊಂಡ ಶೌಚಂ ಮನಂ
ಬುಗೆ ಚೆಲ್ವಂಗಮನಪ್ಪಿದಾರ್ಪು ನೆಱೆ ಜೀವಂಬೆತ್ತ ಸತ್ಕೀರ್ತಿಯೆಂ
ಬ ಗುಣಕ್ಕಾಗರಮಾದುದಾ ಕೃತಿ ವಿಶೇಷಂ ತನ್ನರಾಧೀಶನಾ ೩೨

ಕಳೆಯಿಂದುವಿಂ ಚತುರ್ಗುಣ
ಮಳವಡೆ ತನಗಮುಮ ಮಿಕ್ಕ ಬುಧಕಳೆಯಂ ಸೈ
ತಿಳಿಕೆಯ್ವೆಮ್ಮೊಡನೆಣಿಸದೆ
ಕಳಿಕಳೆಯೆನಿಪುದು ಕಳಾವಿಳಾಸನ ಕಳೆಗಳ್ ೩೩

ಅಯ್ದುಮರಭೂರುಹಂಗಳ್
ಮೆಯ್ದೆಗೆಯದೆ ಕುಡುವ ನೃಪನ ವಿತರಣದಳವಿಂ

ಗೆಯ್ದದೆ ಜಗವಱಿಯಲ್ಕೀ
ರೆಯ್ದಾದುವು ದಲ್ ದಶಾಂಗಮೆಂಬೀ ನೆವದಿಂ ೩೪

ಧರಣೀ ಭೃತ್ಪತಿ ಪದವಿಗೆ
ಸರಿಯಾದೊಡಮೇನೊ ಮಂದರಾಗಂ ಪ್ರಜೆಯೊಳ್
ಪರಮಾನುರಾಗಮಂ ಪಡೆ
ವರಸನ ಬಿಣ್ಪಿಂಗೆ ಸೆಣಸೆ ಸರಿಯಾದಪುದೇ ೩೫

ಕಡುಗುಣ್ಪಿಂ ಪೆಂಪಿಂದೆಣೆ
ವಡೆದೊಡಮೇನಕಟ ಕಂಡ ವಿಬುಧರ ಕೆಯ್ಯೊಳ್
ಕಡೆಯಿಸಿಕೊಂಡುದು ಗಡ ಪಾ
ಲ್ಗಡಲದನಿನ್ನಾ ನೃಪಾಲನಂ ಪೋಲಿಪನೇ ೩೬

ಚಂದನಮಿನಿದಾದಂಬಳಿ
ಳೀಂದುಗೆ ಕಱೆ ಪೊರ್ದದಂದು ಸುಧೆ ವಸುಧೆಗೆ ಬಂ
ದಂದು ಪೊಸಮುತ್ತು ಮೃದುವಾ
ದಂದೆಣೆಯಕ್ಕುಂ ನರೇಂದ್ರನುತ್ತಮಗುಣದೊಳ್ ೩೭

ಪೆಱತೇನಾ ಭೂನಾಯಕ
ನ ಱಿಪ ಗುಣಂ ಪೂರ್ಣಚಂದ್ರನಂದದ ಕಳೆಯೊಳ್
ನೆಱೆದಿರ್ದುಂ ಭಾವಿಸದೆಳ
ವೆಱೆಯಂತೆ ಗಿಪುದು ಸಕಳ ಭೂಮಂಡಳಮಂ ೩೮

ಅಮೃತ ವಿಷಂಗಳ ತೆಱದಿಂ
ಸಮಗ್ರಕೋಪಪ್ರಸಾದ ಗುಣಮೆರಡುಂ ಸಂ
ಕ್ರಮಿಸಿರೆ ವಸುಧಾರಮಣಂ
ಸಮುದ್ರವೆಂತಂತಿರೊಳಗುಮಾಡಿದನಿಳೆಯಂ ೩೯

ಪಡೆವಾತೇಂ ತನ್ನಾಣೆಯ
ನಿಡೆ ತೊಟ್ಟನೆ ದುಷ್ಟಭೂಭುಜಂಗರ್ ಭಯದಿಂ
ಪಡೆಯುಡುಗುವರಾಕ್ಷಣಮೆಂ
ದೊಡದೇಂ ಸನ್ಮಂತ್ರತಂತ್ರಸಿದ್ಧನೋ ಭೂಪಂ ೪೦

ಸ್ಥಿರೆಯಾದಳ್ ಶ್ರೀವಿಶ್ವಂ
ಭರೆಯಾದಳ್ ಕೀರ್ತಿಯಚಲೆಯಾದಳ್ ವಾಕ್ಸುಂ

ದರಿ ನೃಪನನೊಲಿಸಿ ನೆರೆದು
ರ್ಧರೆಯೊಳ್ವಿಸರೊಡನೆ ನಾಡೆ ಮಚ್ಚರಿಸುವವೋಲ್ ೪೧

ಕನ್ನೆಯರವನಂ ಕಾಣದ
ಮುನ್ನಮೆ ಕಂಟಕಿತ ತನುಗಳಕ್ಕುಮೆನಲ್ಕಾ
ಸನ್ನಕರ ಸ್ಪರ್ಶನಮಿ
ರ್ದುನ್ನಾಂಟವು ಕಂಟಕಂಗಳಿಳೆಯೊಳಿದೇನೋ ೪೨

ಇನ್ನೇನೆಂದೆಂಬೆನಾ ಭೂಭುಜನ ನಿಜಯಶಃಪ್ರೌಢಿಯಂ ಮಿಾಱೆ ಮಾಱೂಂ
ಪನ್ನರ್ ಮತ್ತಾರುಮಿಲ್ಲಾದೊಡಮನುದಿನಮೆಕ್ಕೆಕ್ಕೆಯಿಂ ಮಿಕ್ಕು ತೋರ್ಕುಂ
ತನ್ನೇಕಚ್ಛತ್ರದಂಡಂ ವಿಬುಧ ವಿನುತ ಸನ್ಮಾನದಾನಂ ಸದರ್ಪಾ
ಸನ್ನಪ್ರೇಮಾನಭೇದಂ ವಿರಹವಿಧುರ ಸೀಮಂತಿನೀ ಪ್ರೇಮಸಾಮಂ ೪೩

ಶುಚಿಧರ್ಮಂ ಪುಣ್ಯಜನ
ಪ್ರಚೇತನಹಿತ ಪ್ರಭಂಜನಂ ಧನದಂ ಸ
ದ್ರುಚಿ ರಾಜಮೌಳಿಯೆನಲೇ
ನುಚಿತಮೋ ಜಿಷ್ಣುಗೆ ಸಮಸ್ತ ದಿಗ್ವಿದಿತಯಶಂ ೪೪

ಲಾವಣ್ಯಕ್ಕೆಣೆವಾರನಂಗಭವನಾರ್ಪಿಂಗೆಯ್ದುರರ್ಥಾರ್ತ್ಥಿಗಳ್
ಭೂಮಿಖ್ಯಾತಗುಣಕ್ಕೆ ಸಾಲವು ಮಹಾಕಾವ್ಯಂಗಳಾ ಪೂರ್ಣ ವಿ
ದ್ಯಾವಷ್ಟಂಭ ವಿಜೃಂಭಣಕ್ಕೆ ಮಱುಮಾತಂ ಕಾಣ್ಬತಿಪ್ರೌಢರಿ
ಲ್ಲೀ ವಿಶ್ವಕ್ಕೆನಿಪೊಂದು ಕೀರ್ತಿವಡೆದಂ ಭೂಮಂಡಲಾಖಂಡಲಂ ೪೫

ಇಂತೆನಿಸಿದ ಸಕಲಕಲಾ
ಕಾಂತನೆ ನಿಜಕಾಂತನಾದ ಮಹಿಮೆಗೆ ಮುನ್ನಂ
ನೋಂತಗ್ರಮಹಿಷಿಯೆನಿಸಿದ
ಕಾಂತೆಗೆ ಸುವ್ರತೆಯೆನಿಪ್ಪ ಪೆಸರದು ಪುಸಿಯೇ ೪೬

ಸತ್ಕುಲಮೋವೊ ಪೆಣ್ಬಾರಿಜನಾಳ್ದುದು ಶೀಲಮೆ ಬಾಲೆಯಾಯ್ತು ಸಂ
ದುತ್ಕಟ ಪುಣ್ಯಮಂಗನೆಯ ಭಂಗಿಯನೆಯ್ದಿದುದೆಯ್ದೆ ಸಚ್ಚರಿ
ತ್ರೋತ್ಕ ಪತಿವ್ರತಾಗುಣಮೆ ಮಾನಿನಿಯಾದುದೆನಿಪ್ಪ ಮೈಮೆ ವಿ
ದ್ವತ್ಕವಿಸೇವ್ಯಮಾದುದೆನೆ ಸುವ್ರತೆ ಸುವ್ರತೆಯಪ್ಪುದೊಪ್ಪದೇ ೪೭

ಆ ವ್ರತೆಯರಪ್ಪೊಡಂ ಸುಭ
ಗವ್ರತೆಯರ್ ತಾನೆನಿಪ್ಪೊಡಂ ಮಾನಿನಿಯರ್

ಸುವ್ರತೆಯನೊರ್ಮೆ ನೆನೆಯೆ ಪ
ತಿವ್ರತೆಯರನಿಪ್ಪರೆಂದೊಡೇವಣ್ಣಿಪುದೋ ೪೮

ಆ ನಿರ್ಮಳ ವೃತ್ತೆಯ ಸುಮ
ನೋನಯನಮನಿಂಬುಗೊಳ್ವ ಗುಣವತಿಯೆಂದೀ
ಭೂನುತೆಯಾಗದೊಡೆ ಮಹಾ
ಸೇನನ ಪೇರುರದ ಹಾರಲತೆಯೆನಿಸುವಳೇ ೪೯

ಪತಿಗಾತ್ಮೀಯ ಕರಪ್ರವಾಳ ಸುಭಗಶ್ರೀಯಿಂ ಸುಗಂಧಾನನ
ಸ್ಮಿತ ಪುಷ್ಪಾವಳಿಯಿಂ ಸುಧಾಧರಫಲ ಪ್ರಾಚುರ್ಯದಿಂ ತಾನೆ ಸ
ನ್ನುತ ಸರ್ವರ್ತುಕಮಾದ ಸೌಖ್ಯದೊದವಂ ಸಂಪ್ರೀತಿಯಿಂದೀವ ಸು
ವ್ರತೆಯಂ ಕಾಮಿತಮೀವ ಕಲ್ಪಲತೆಯೆಂದಾರೆಂದೊಡಂ ತೀರದೇ ೫೦

ಪೆಱತೇವುದಾಕೆ ಗುರುವೆಂ
ದೆಱಗದರಾರ್ ಕಂಡು ನೇಹದಿಂ ನೆಲೆಮೊಲೆಯಂ
ಪೊಱವಾಱನೋತು ಗುರುವೆಂ
ದೆಱಗುಗುಮಾ ಸತಿಯ ಪತಿಯ ಕಣ್ಣುಂ ಮನಮುಂ ೫೧

ಕಡುಚೆಲ್ವ ಚಲ್ಲಗಣ್ಗಳ
ಪೊಡಕರಿಸುವ ಪುಲ್ಲೆಗಣ್ಗಳಂದಮನಾಂ ತೋ
ಳ್ಪಿಡುಗಣ್ಗಳ ನೀಱೆಯನಾಂ
ಬಿಡುಗಣ್ಗಳ ದಿವಿಜವಧುಗಳಂ ಪೋಲಿಪೆನೋ ೫೨

ಕಱೆಕಱೆಗಂದಿದಂ ಮೊಗದ ಮೈಸಿರಿಗಂಡಮೃತಾಂಶು ಲಜ್ಜೆಯಿಂ
ಕುಱುಕುಱುಗೊಂಡು ಕಾಲ್ಪಿಡಿದುದೊಳ್ನಡೆಗಳ್ಕಿ ಮರಾಳನಾವಗಂ
ಪಱಿವಱಿಯಾಯ್ತು ಪಜ್ಜಳಿಪ ಮೆಯ್ವೆಳಗಿಂತೆಳಮಿಂಚೆನಲ್ಕದಾ
ರಱಿದಭಿವರ್ಣಿಪರ್ ಸತಿಯ ರೂಪಿನ ರೂಢಿಸಿದೊಂದು ಗಾಡಿಯಂ ೫೩

ಅದು ಕಂದಿಲ್ಲದ ಚಂದ್ರಬಿಂಬಮದು ಮೌರ್ವೀಬಂಧಮಂ ಪೂಣ್ದು ಕೊಂ
ಕಿದ ಕೃಷ್ಣೇಕ್ಷು ಧನುರ್ವಿಲಾಸಮದು ಝುಂಕಾರಕ್ಕೆ ಪಕ್ಕಾಗದು
ನ್ಮದ ಭೃಂಗಾಳಿಯದಾಗಳಂ ತಳಿಯದೊಪ್ಪಂದೋರ್ಪ ಮಿಂಚೆಂದು ಮಾ
ಣದೆ ಬೇಱೆಂಬುದೆ ಗಾಂಪು ನೀಱೆಯ ಮುಖಭ್ರೂಕುಂತಳಾಪಾಂಗಮಂ ೫೪

ಎಳೆಮಿಂಚಂ ಕಱೆವುತ್ಪಲಂ ಪೆಱಗೆ ಪಾಯ್ದೊಳ್ದುಂಬಿ ಬೆಳ್ದಿಂಗಳಂ
ಗೆಳೆಗೊಂಡಂಬುಜಮಿಂಬುವೆತ್ತಮೃತಮಂ ಬೈತಿಟ್ಟ ಬಂಧೂಕಮು

ಜ್ವಳ ವಜ್ರಾಂಶುವನಪ್ಪಿ ಮಾರ್ಪೊಳೆವ ಕುಂದಂ ಮಂದಯಾನಂ ಮನಂ
ಗೊಳೆ ತಮ್ಮೊಳ್ ಸಲೆಸಂದ ಕೆಂದಳಿರ್ಗಳಂದಂಬೆತ್ತುವಬ್ಜಾಕ್ಷಿಯಾ ೫೫

ವ: ಅಂತು ಸೊಗಯಿಸುವ ಸುವ್ರತಾದೇವಿ

ಪೂವಿನ ಬಿಲ್ಗೆ ತುಂಬಿದಿರುವೀಶನ ಜೂಟಕೆ ಚಂದ್ರಲೇಖೆ ಲ
ಕ್ಷ್ಮೀವರನೊಳ್ಪುರಕ್ಕೆ ವನಮಾಲೆ ಸುಧಾಬ್ಧಿಗೆ ರತ್ನ ವೇಲೆಗೈ
ರಾವಣವಾರಣಕ್ಕೆ ಮದಧಾರೆ ಸಮಂತಮದರ್ಂತೆ ಪೆರ್ಮೆವೆ
ತ್ತಾ ವಸುಧಾಧಿಪಂಗಮದರ್ು ನಚ್ಚಿನ ವಲ್ಲಭೆಯಾದಳಾವಗಂ ೫೬

ನಿರ್ಮಳ ಶೀಲೋಜ್ವಳ ಶುಭ
ಕರ್ಮ ಮಹಾಸೇನ ನೃಪತಿಗಾಸತಿ ಸುಮನೋ
ಧರ್ಮಾನುಕೂಲೆಯಾದೀ
ಪೆರ್ಮೆಗೆ ರತಿಯೆಂದು ಪೊಗಳದಿರ್ಕುಮೆ ಲೋಕಂ ೫೭

ತತ್ಪತಿಯ ಕೂರ್ಮೆಯಿಂ ತ್ರಿಜ
ಗತ್ಪೂಜಿತೆಯಾದಳಾಕೆ ಸಲೆ ಗಿರಿಜಾಯೋ
ಕ್ಷಿತ್ಪತಿಯೊಲವಿಂ ಶಶಿಕಳೆ
ಸತ್ಪದವಿಗೆ ಬಂದು ವಂಧ್ಯಮಾದವೊಲಿಳೆಯೊಳ್ ೫೮

ಪದೆದಾಳೋಕಿಸೆ ಲೋಕಮಿಂದುವಿನೊಳೆಂದುಂ ಚಂದ್ರಿಕಾಲಕ್ಷ್ಮಿಸಂ
ಮದದಿಂ ಕೇಳಿ ನವೀನಧಾತುವಿನೊಳೋತೊಳ್ಮಾತು ತಳ್ತೊಂದಿದಂ
ದದ ಕಣ್ಗಂ ಕಿವಿಗಳ್ಗಮುತ್ಸುಕತೆಯಂ ಮಾಡಿತ್ತಭೇದಪ್ರಸಾ
ದದೆ ತನ್ನೋಪನೊಳೊಂದಿದೊಂದು ಸುಭಗತ್ವಂ ಸುವ್ರತಾದೇವಿಯಾ ೫೯

ವ: ಆ ಮಹಾಸತಿಯ ರೂಪಾತಿಶಯಮದೆಂತೆನೆ

ಮದಕಳಮರಾಳಗಮನೆಯ
ಪದಮಂ ಪಲ್ಲವದೆ ಪೋಲ್ವೆನೆಂಬನುರಾಗಂ
ಪುದಿದಿರ್ದಶೋಕವಲ್ಲರಿ
ಸುದತಿಯರೆಡಗಾಲೊಳೊದಸಿಕೊಂಡಪುದಿನ್ನುಂ ೬೦

ನಡೆನೋಡಿ ನಾಣ್ಚೆ ಕೆಯ್ಯಾ
ಲೊಡಲಂ ಪುಗೆ ತಲೆಯನೆತ್ತಲಣ್ಮದೆ ಕೂರ್ಮಂ
ಮಡುವಂ ಬಿಳ್ದುದೆನಲ್ಕಾ
ಮಡದಿಯ ಮೇಗಲಾಪಾಂಗನದು ಪೋಲ್ತಪುದೇ ೬೧

ಮದದಾನೆ ಸೋಲ್ವುದೆನ್ನಯ
ಮೃದುಗತಿಗೇವಾಳ್ತೆ ನೀನೆನುತ್ತಂಚೆಗಳಂ
ಪದಲಕ್ಷ್ಮಿ ಜಱೆವ ತೆಱದಿಂ
ಸುದತಿಯ ನೂಪುರದ ಝಣ್ಝಾರಂ ಸೊಗಯಿಸುಗುಂ ೬೨

ತತ್ತರುಣಿಯ ಮೆಲ್ಲಡಿಗಳ
ಚಿತ್ತರಮಂ ನೋಡಿನೋಡಿ ತರಳಾಪಾಂಗಂ
ಪತ್ತುಮೊಗಮಾಗಿ ಮೆಲ್ಲಡಿ
ಮುತ್ತಂ ಮುಕ್ಕುಳಿಸಿದಂತೆ ಸೊಗಯಿಪುವುಗುರ್ಗಳ್ ೬೩

ಕಡುಪಳಿದನಂಗನಂ ಬೆಂ
ಬಿಡಮುಪಜೀವಿಸುವ ಕೊಱತೆಗಳ್ಕದೆ ತನ್ನೊಳ್
ತೊಡರ್ದೊಡೆ ಮಡದಿಯ ಕಿಱುದೊಡೆ
ತೊಡೆಯದೆ ಪೂಗಣೆಯ ದೊಣೆಯ ಪಣೆಯಕ್ಕರಮಂ ೬೪

ಕಣ್ದಣಿಯೆ ನೋಡಿ ಕಾಂತೆಯ
ಸುಣ್ಣೊಡೆಗಗ್ಗಳಿಪ ಗೆಲವಸಿತ್ತಂಗಭವಂ
ಪೂಣ್ದುಡಿಸಿ ನಾರನಟ್ಟಿದೆ
ಮಾಣ್ದನೆ ಪೇಳ್ ವನಕೆ ಕನಕ ಕದಳಿಯನಿಳೆಯೊಳ್ ೬೫

ಅಚ್ಚರಿಯಿದು ಪೊಗಳ್ವರ ಬಗೆ
ಯಚ್ಚುಡಿದಿರಲೊಡನೆ ಬಿಡದೆ ನೋಳ್ಪರ ಕಣ್ಗಂ
ದಚ್ಚಿಱಿದ ಚಿತ್ತಜನ್ಮನ
ನಚ್ಚಿನ ರಥಚರಣಮೆನಿಪುವಾಕೆಯ ಜಘನಂ ೬೬

ಬಿಟ್ಟು ಬಳಸಿದೊಡೆ ಬಾನೆಡೆ
ಗೆಟ್ಟಪುದೆಂದಡರಿ ನೋಡಿ ಜಘನಸ್ಥಳಮಂ
ನೆಟ್ಟನೆ ಬಿದಿ ಬಿಗಿದಂ ಪೊಂ
ಗಟ್ಟಿನೊಳೆನೆ ಕಾಂಚಿ ಕಣ್ಗೆವಂದುದು ಸತಿಯಾ ೬೭

ತುಂಗ ಕುಚಭರೆಯ ನಡುವಂ
ಭಂಗುರ ಯೌವನವನ್ನೈಕಲತೆಯೆನ್ನದೆ ನೀಂ
ಸಿಂಗದ ನಡುವೆಂದೊಡೆ ಪೇಱ
ಪಿಂಗದೆ ಕರಿಕುಂಭಮೆಂತು ಮೇಲಿರ್ದಪುವೋ ೬೮

ಎಲ್ಲರ್ ಕಂಡವೊಲಿದು ನನೆ
ವಿಲ್ಲೊಳ್ಪಡಿಗಾಳಿಗಲುಗುವೆಳಲತೆಯಾದ

ಲ್ಲಲ್ಲಿ ಮಿಗೆ ಪೊಗಳ್ವದಾರ್ ಮಿಂ
ಚಲ್ಲದ ಸೆಳೆನಡುವನಱಿಯೆನಾ ಕೋಮಳೆಯಾ ೬೯

ಕಡು ಚೆಲ್ವವಯವಮಂ ಸ್ಮರ
ನಡರೆ ಕರಂ ಗುಣಿಸಿ ನೋಡಿ ನಡುವಿಲ್ಲೆಂದು
ಗ್ಗಡಿಸಿಟ್ಟ ಸೊನ್ನೆಯಂತೇ
ನೊಡರಿಸಿದುದೋ ಚೆಲ್ವನವಳ ನಾಭೀವಳಯಂ ೭೦

ನೆಲೆಮೊಲೆಯೆರಡಱ ಸಂದಂ
ಸಲೆ ಭೇದಿಪೆನೆಂದು ಮದನನತಿಸಾಹಸದಿಂ
ಸಲಿಸಿದ ನೀಲದ ಸಲಿಗೆಯ
ನಿಲವೆನಿಪುದು ರೋಮರಾಜಿ ರಾಜಾಂಗನೆಯಾ ೭೧

ಇನ್ನೆಲೆ ಬಡವಾದೊಡೆ ನಿನ
ಗೆನ್ನಾಣೆ ವಸಂತನಾಣೆ ರತಿಯಾಣೆಯೆನು
ತ್ತುಂ ನಡುವಿಂಗಂಗಜನಿ
ಟ್ಟಂ ನಿಯಮದ ಗೆರೆಯೆನಿಪ್ಪುವಾಕೆಯ ವಳಿಗಳ್ ೭೨

ನಿಡುದೋಳಿಂದಮರ್ದಪ್ಪುವ
ಕಡುನೇಹದ ಕಾಂತನೆರ್ದೆಯನೊದೆದಪ್ಪುಗೆಯಂ
ಬಿಡದೊಡನೆ ಬಳೆವ ನೆಲೆಮೊಲೆ
ಸಡಿಲ್ಬಿ ಬಳಯಿಸಿದುವಸಿಯಳೆಳೆಜವ್ವನದೊಳ್ ೭೩

ಮೃಗನಯನೆಯ ಮೊಲೆ ಪೊಣರ್ವ
ಕ್ಕಿಗಳ್ಗೆಣೆಯಾದಂದು ಜಗದೊಳಗಲದ ತಲೆಯಂ
ನೆಗಪಿ ನಗೆಜೊನ್ನವೆಳಗಿಂ
ಗಗಿಯದೆ ಮೊಗಸಸಿಯನಿಂತು ನಡೆನೋಡುಗುಮೇ ೭೪

ಮದನೇಂದ್ರಜಾಲಿಗಂ ಲೋ
ಕದ ಬಗೆಸೆಂಡುಗಳನಗಲದಿಟ್ಟಳವಡೆ ಮು
ಚ್ಚಿದ ಮಿಸುನಿವೆಸದ ಕಣ್ಮಾ
ಯದ ಕೌಳಿಗಳೆನಿಪುವವಳ ವೃತ್ತಕುಚಂಗಳ್ ೭೫

ಅಣೆಯರದಿನತನು ತನುಲತೆ
ಗೆಣೆಸದೆ ಲಾವಣ್ಯರಸಮನೆತ್ತುವ ಪೊಸಱಾ

ಟಣಮಾಲೆಯಂತಿರೆಸೆದುದು
ಮಣಿಹಾರಂ ನಾಭಿಸರಸಿವರಮಂಗನೆಯಾ ೭೬

ಬಾಳದು ಪೊಗರಿಂ ಸೆಣಸಲ್
ಬಾಳದು ತಾನಿವಱೊಳೆಂದು ಮೊದಲೀಕೆಯ ನು
ಣ್ದೋಳೆ ಮನೋಭವ ಭೂಪನ
ಬಾಳನೆ ಬಾಳೆಂದು ಪೊಗಳರಾರಱಿದೆನ್ನಂ ೭೭

ಕೆಂದಾವರೆಯಲರ್ಗಳೊ ಪೊಸ
ಕೆಂಪಳಿರ್ಗಳೊ ಮೇಣಿವೆಂದು ಬಗೆವರ ಮನದೊಳ್
ಸಂದೆಗಮಂ ಮಾಣಿಸಿದುದು
ಕೆಂಪಳದಂಗುಲಿಗಳುಗುರ ಬೆಳಗಂಗನೆಯಾ ೭೮

ಸೊಗಯಿಪ ಮೃಗನಯನೆಯ ಸೆ
ಳ್ಳುಗುರ್ಗಳ್ ಮೂವಳಸಿ ಮುತ್ತಿಮುಸುಕಿದ ಮುಳ್ಳಂ
ಬಗಿದೆಂತು ಪೊಕ್ಕ ಚದುರಿಂ
ತೆಗೆದುವೊ ಕೇಪಗೆಯ ಮಿಱುಪ ಗಱಿಗಳ ಚೆಲ್ವಂ ೭೯

ಪರಿಕಿಸೆ ಕಳಾವಿಳಾಸನ
ಪರಿರಂಭಕ್ಕಮರ್ದ ಚುಂಬನಕಿಂಬಾಗಿ
ರ್ದರಸಿಯ ಕೊರಲ್ಗಕಟ ಕ
ಣ್ಗುರುಡರ ಕಯ್ವಾಯೆ ಬರ್ಪ ಶಂಖಂ ಸರಿಯೇ ೮೦

ಮೃಗಶಿಶುನಯನೆಯ ನಚ್ಚಿನ
ಮೊಗಮಂ ಕಂಡು ಕಂಡು ಸೈರಿಸದೆ ಸಮಂ
ತೊಗೆದ ಕಳಂಕದ ನೆವದಿಂ
ಮೃಗಧರನೆರ್ದೆ ಪೊತ್ತಿ ಪೊಗೆವುತಿರ್ದಪುದಿನ್ನುಂ ೮೧

ತೊಲಗದೆ ನೋಡುವ ಮನ್ಮಥ
ಲಲನೆಯ ಮಣಿಮುಕುರದಳವನದಟಲೆವಾ ಕೋ
ಮಳೆಯ ಕದಪಿಂಗೆ ತಂಬುಲ
ದೆಲೆ ಸೆಣಸುವವಾವ ಮೂಗನೊಳಕೊಂಡಿಳೆಯೊಳ್ ೮೨

ತೊಳಗುವ ನಗೆಗಣ್ಣೆಯ್ದಿ
ಲ್ಗಳ ಕಾವಮೃತಾಂಶುಬಿಂಬಮಂ ಬಿಗಿದವೊಲು

ಜ್ವಳಿಸಿದುವು ಕರ್ಣಪಾಲಿಕೆ
ಯೊಳಕೆಯ್ದೆಳೆಮುತ್ತಿನೋಲೆಯಂ ಬಾಲಕಿಯಾ ೮೩

ಪಿರಿದುಮನುರಾಗದಿಂ ಬೀ
ಗಿರೆ ಸೊಗಯಿಪ ಸೊಬಗುಗಂಡು ನಿಜಪರಿಮಳದಿಂ
ಪೊರೆದು ಮುಖಲಕ್ಷ್ಮಿ ಬಂದುಗೆ
ಯರಲಂ ಸೂಡಿದವೊಲಾಯ್ತು ಬಾಯ್ದೆಱೆ ಸತಿಯಾ ೮೪

ಬಿಂಬಫಳಮಂ ಕಳಾಧರ
ಬಿಂಬದ ನಡುವಿರಿಸಿ ಮದನನಮೃತದ ರಸಮಂ
ತುಂಬಿದನೆನ್ನದೆ ಪೇಱತೇ
ನೆಂಬುದೊ ವಿಧುಮುಖಿಯ ವಿಳಸದರುಣಾಧರಮಂ ೮೫

ಮಿಱುಗುವ ಮಿಂಚಿನ ಮೊಳೆಗಳ
ಮಱೆಗಳೆವೆನಿಪವಳ ಧವಳ ದಶನಾವಳಿಯೆ
ಚ್ಚಱಿಸಿದುದು ವದನ ಸದನದೊ
ಳುಱುವ ಸರಸ್ವತಿಯ ಕೊರಲ ಹೀರಾವಳಿಯಂ ೮೬

ಮುಂಪಡೆದುದವಳ ನಾಸಿಕೆ
ಪೆಂಪಿನ ಕಣ್ಮೀನ್ಗಳೆಂಬಮಳ್ವಳವಿಗೆಯಂ
ತಾಂ ಪೊತ್ತು ನಿಂದ ಮದನನ
ಸಂಪಗೆಯೊಳ್ನನೆಯ ಕಿತ್ತ ದಂಡಶ್ರೀಯಂ ೮೭

ಬಗೆಗೊಳಿಸಿದುದಚ್ಚರಿಯೆನೆ
ಸೊಗಯಿಪ ತಾವರೆಯ ನಡುವೆ ನಳನಳಿಸುವ ಸಂ
ಪಗೆಯ ನನೆಯಲ್ಲಿ ಪೊಸಮ
ಲ್ಲಿಗೆಯ ಮುಗುಳ್ ಮೂಡಿದಂತೆ ಮೂಕುತಿ ಸತಿಯಾ ೮೮

ಲಾವಣ್ಯರಸದೆ ತೆಕ್ಕನೆ
ತೀವಿದ ಮುಖಸರಸಿಯೊಳಗಳೆಳಮೀನೆನಿಸಿ
ರ್ದಾವಗಮಲರ್ಗಣ್ಗಗ್ಗದ
ಧೀವರರಂ ಬೆಱಗಿದುಱೆ ತೊಡರ್ಚುವುವವಳಾ ೮೯

ಚೆಕ್ಕನೆ ಚಕೋರವಕ್ಕಿಗ
ಳೆಕ್ಕೆಕ್ಕೆಯ್ದುಂಡು ತಣಿದು ತಿಂಗಳಬೆಳಗಂ

ಮುಕ್ಕುಳಿಸಿ ಮಗುಳೆ ಮಗುಳ್ವುಗು
ಳ್ವಕ್ಕಜಮಂ ಪಡೆದುದವಳ ಧವಳಾಪಾಂಗಂ ೯೦

ಭಾವಭವನವಳ ಚೆಲ್ವಂ
ಭಾವಿಸಿ ಕಾಲಕ್ಕೆ ಕಯ್ಪುಯ್ಯಾಗಿರೆ ಮತ್ತೊ
ಳ್ದೇವಿನೆಸಳಿಟ್ಟ ಗಾಳಿಯ
ನಾವರಿಸಿದುವೆಸೆವ ಪುರ್ವು ಬಿಸಜಾನನೆಯಾ ೯೧

ಜನವಿನುತೆಯ ನೊಸಲೆಸೆದುದು
ನಿನಗೆಣೆಯಲ್ಲಖಿಳ ರಾಜಮಂಡಳವೆಂದಾ
ನನಕಧಿರಾಜತೆ ಸಲೆನಿಲೆ
ಮನಸಿಜನೆಳೆವೆಱೆಯ ಪಟ್ಟಮಂ ಕಟ್ಟಿದವೋಲ್ ೯೨

ಓರಣದಿನೆಸೆದುವಿಳೆಯಂ
ಹರಿಸಿ ಕಡೆಗಣ್ಣ ಮಿಂಚು ಮಿಱುಗುವಿನಂ ಶೃಂ
ಗಾರರಸಮಂ ನಿಮಿರ್ಚುವ
ಕಾರಮುಗಿಲ್ಮಾಲೆಯಂತೆ ಕುಂತಳಮವಳಾ ೯೩

ಪರಿಮಳಕೆ ಪೊರೆಯೊಳಿರೆ ಮಧು
ಕರಮಾಲೆಯನೆಣೆಯೆನಲ್ಕೆವೇಡೆಣೆಯೆಂದಾ
ದರದಿಂ ಕುರುಳೇ ಪೊಸಕ
ತ್ತುರಿಯುರುಳಿಗೆ ಕಾಂತಿ ಪುಟ್ಟಿದಂತಂಗನೆಯಾ ೯೪

ಪೋಲಿಸೆ ತಮ್ಮ ಕಣ್ದ
ಕ್ಕಾಲಿಗಳಾಗಿರ್ದು ಬರ್ದವಲ್ಲದೆ ದಿಟಮಾ
ಗಾಲಿಸಿ ಕಂಡೊಡೆ ನಾಣ್ಚದೆ
ಪೀಲಿಯ ಗಱಿಯವಳ ಜಡಿವ ಮುಡಿಯ ಬೆಡಂಗಂ ೯೫

ನೋಡುವ ನೆಯ್ದಿಲೊಯ್ಯನುಸಿರಿಕ್ಕುವ ಸಂಪಗೆ ಮುದ್ದುವೀಱೆ ಮಾ
ತಾಡುವ ದರ್ಪಣಂ ನಡೆವ ತಾವರೆ ಪಾಡುವ ಕಂಬು ಪೋತುಬಾ
ಯ್ದೂಡುವ ವಿದ್ರುಮಂ ಪ್ರಿಯದಿನಪ್ಪುವ ಚಂಪಕಮಾಲೆ ಮಾಲೆಯಂ
ಸೂಡುವ ಸೋಗೆಯೆನ್ನದವಳಂಗದ ಚೆಲ್ವನದೇನನೆಂಬುದೋ ೯೬

ಸುದತೀನಿರ್ಮಾಣದೊಳ್ ಜಾಣನೆ ಜಡಜಜನೇವಾಳ್ತೆಯೆಂದಂಗಜನ್ಮಂ
ಪದವಿಲ್ಲಂ ಪೂವಿನಂಬಂ ಬಿಡದೆ ಪಿಡಿದು ತತ್ಕಾರ್ಶ್ಯಮಂ ತಾಳ್ದಿ ಕೆಯ್ಗಳ್

ಪದನಲ್ಲೆಂದೊಲ್ಲದೇಕಾಂತದೊಳೆ ಮನಮೆ ಕೆಯ್ಯಾಗೆ ಕಣ್ಗೊಳ್ಪಿನಂ ಮಾ
ಡಿದನೀ ಮಾದೇವಿಗಂತಲ್ಲದೊಡಿನಿತುವರಂ ಸಾರ್ಗುಮೇ ಸೌಕುಮಾರ್ಯಂ ೯೭

ಕಾಂಚನದ ಬೊಂಬೆಗಳವಡೆ
ಮಿಂಚಿನ ಪೊಳಪಿಟ್ಟು ತಾನೆ ಜೀವಂಬೊಯ್ದಂ
ಪಂಚಶರನಕಟ ಪಳೆಯ ವಿ
ರಿಂಚನ ಕೈಚಳಕದಳವ ನಾನಱಿಯದುದೇ ೯೮

ನಿಲ್ಲದೆ ಕಣ್ಗಳೊಳ್ ಪೊಳೆದು ಪೋಪಳಿಮಿಂಚನೊಱಲ್ದು ಸೋಂಕೆ ಮೆ
ಲ್ಪಿಲ್ಲದ ಬೆಂದ ಪೊನ್ನನೆಳೆಗಂಪಿನ ಗಾಳಿಗೆ ಬೆರ್ಚಿ ತುಂಬಿವಿಂ
ಡೊಲ್ಲದೆ ಬೀವ ಸಂಪಗೆಯನೇಂ ಪಗೆಯೆನ್ನದೆ ಪಾಚಿಯೆಂದಣಂ
ಸೊಲ್ಲಿಸಲಕ್ಕುಮೇ ಮಱಿದುಮಾಕೆಯ ಮೆಯ್ವೆಳಗಿಂಗೆ ಬಲ್ಲವಂ ೯೯

ಅನುಲೇಪನಮೆನಿಪುವು ಚಂ
ದನಾದಿಗಳ್ ಮುನ್ನಮಿಾಗಳಾಕೆಯ ತನುಸೋಂ
ಕಿನೊಳುಱೆ ಸುಗಂಧಮೆನಿಸಿದು
ವೆನೆ ಸೊಗಯಿಪ ಸೊಬಗದೆಂತುಟೋ ಸುವ್ರತೆಯಾ ೧೦೦

ಮದವತಿಯಾ ರೂಪುಗಂಡಳು
ಪಿ ದಿಟಂ ಪೆಱರಱಿಯದಂತು ನೆರೆದಪೆನೆಂದೋ
ವದೆ ಮನಸಿಜನೆನಿಸಿದನ
ಲ್ಲದೊಡಂಗಜನುಂತೆ ದೇಹಮಂ ತೊಱೆದಪನೋ ೧೦೧

ಕಡೆಗಣ್ಗಳ್ ತನ್ನ ಚೈತ್ರಧ್ವಜಕೆ ಪೊಳಪನೊಲ್ದೀಯದಂದಾಸ್ಯಬಿಂಬಂ
ಬಿಡದಂಭೋಜಾರಿಗೋರಂತಮೃತಕಳೆಗಳಂ ಬೀಱದಂದುರ್ವಿ ಪುರ್ವಿಂ
ಮಡಿಚೆಲ್ವಂ ಕರ್ವುವಿಲ್ಗೀವದೆ ಕರುಣಿಸದಂದಾವಗಂ ಬಂದು ಚಿತ್ತಂ
ಬಿಡದೆತ್ತಂ ಪೋಗದಿಂ ತೊಲಗಿಪನೆ ತರುಣೀರೂಪಮಂ ಪುಷ್ಪಚಾಪಂ ೧೦೨

ವ: ಅಂತಖಿಳ ಲಕ್ಷಣೋಪಲಕ್ಷಿತರೂಪಸಂಪನ್ನೆಯಾಗಿ ಪ್ರಸಿದ್ಧ ಗೋತ್ರಾಧಿ ರಾಜಕುಲದೊಳು
ದಯಿಸಿದ ಸುವ್ರತಾ ಸರ್ವಮಂಗಳೆ ಮಹಾಸೇನ ರಾಜಚೂಡಾ ಮಣಿಗರ್ಧಾಂಗಿಯಾಗಿ

ಉರದೊಳ್ ಲಕ್ಷ್ಮಿಗೆ ಮಿಾಱಿ ತನ್ನ ಸೊಬಗಂ ಬೀಱುತ್ತೆ ಬಿಂಬೋಷ್ಠದೊಳ್
ಪಿರಿದುಂ ವಾಗ್ವಧುಗಾತ್ಮಕೌಶಲಮನಾರ್ಪಿಂ ತೋಱುತುಂ ತೋಳೊಳು
ರ್ವರೆಗಾಶ್ಲೇಷನುದಾರಮಂ ಕಲಿಸುತುಂ ಕಣ್ಗೊಳ್ಪಲಂಪಿಂ ತಳೋ
ದರಿ ನಾನಾ ರತಲೀಲೆಯಂ ಸಲಿಸುವಳ್ ತತ್ಕಾಂತನೊಳ್ ಸಂತತಂ ೧೦೩

ವ: ಅಂತನಂತ ಭೇದಾಭಿರಾಮ ಕಾಮಕೇಳಿವಿಳಾಸಮನಾತ್ಮಪತಿಯೊಳನು ಭವಿಸುತ್ತುಮ ಭೇದ ಪ್ರಣಯಪ್ರಸಾದಮನಪ್ಪುಕೆಯ್ದು ಮಹಾದೇವಿಯೊಂದುದಿವಸಂ ನಿಜಮಂದಿರ ಮಹನೀಯ ಮಣಿಮಂಟಪಕ್ಕೆ

ಉಗುರ್ಗಳ ನೀಳ್ದ ನುಣ್ಬೆಳಗು ಬಾಳಮೃಣಾಳಮನೀಯೆ ಮುತ್ತುವಂ
ಚಿಗೆ ಕಡುಚೆಲ್ವ ಮೆಲ್ಲಡಿಯ ಕೆಂಬೊಳಪೊಂದಿದ ತನ್ನ ಚೆನ್ನ ಪಾ
ವುಗೆ ಪಳುಕಲ್ತು ಮಾಣಿಕದವೆಂಬ ನೆಗಳ್ತೆಯನಿಟ್ಟು ಪಜ್ಜೆ ಪ
ಜ್ಜೆಗೆ ಮಣಿನೂಪುರಂ ಪೊಗಳೆ ಬಾಲಕಿಬಂದಳದೊಂದು ಲೀಲೆಯಿಂ ೧೦೪

ಕೆಳದಿಯ ಪೆಗಲೊಳ್ ಮೆಲ್ಲನೆ
ನಳಿತೋಳಂ ನೀಡಿ ಬಲದ ಕೆಯ್ಯೊಳ್ ಲೀಲಾ
ನಳಿನಮಿರೆ ಮದನಜಯ ಮಂ
ಗಳಲಕ್ಷ್ಮಿಯ ದೆಸೆಯಂ ವಿಳಾಸಿನಿ ತಳೆದಳ್ ೧೦೫

ವ: ಅಂತಾ ಮನೋಹರಿ ಮಂದಾಲಸಗಮನದಿಂ ಬಂದು ಮಣಿಮಯಾಸನ ಮನಲಂಕರಿಸಿ ದಾಗಳ್

ಮಂದಗತಿವಡೆಯಲೊಡನೆ
ಯ್ತಂದೋಲಗಿಸಿರ್ದ ಹಂಸಮಿಥುನವಿದೆನಲೇ
ನಂದೆಸೆದುದೊ ಮಣಿಪೀಠದ
ಮುಂದಾ ಸತಿ ಕಳೆದ ಪಳುಕಿನೆಳೆವಾವುಗೆಗಳ್ ೧೦೬

ಕಾಂಚನಪೀಠಕಾಂತಿ ಕಮನೀಯ ವಿಭೂಷಣಕಾಂತಿ ನೀಳ್ದನೇ
ತ್ರಾಂಚಲಕಾಂತಿ ತಳ್ತ ತನುಕಾಂತಿ ತೆಱಂಬೊಳೆದೊಂದನೊಂದು ಕೆ
ಯ್ಮಿಂಚಿ ಪಳಂಚಿ ಪಜ್ಜಳಿಸೆ ಮಧ್ಯದೊಳಾ ತನುಮಧ್ಯೆ ಗೆಲ್ದಳೊ
ಳ್ಮಿಂಚಿನ ಜೊಂಪದೊಳ್ ಪ್ರಿಯದಿನೋಲಗಮಿತ್ತಮೃತಾಂಶುಲಕ್ಷ್ಮಿಯಂ ೧೦೭

ವ: ಆಗಳ್

ಕೆಂದಳಿರೊಳ್ ಕೇದಗೆಯೆಸ
ಳಂದಂಬಡೆದಿರ್ದುವೇನಿದಚ್ಚರಿಯೆನೆ ಪಿಂ
ದೊಂದಿದಡಪದ ಲತಾಂಗಿಯ
ಕೆಂದಳದೊಳ್ ತುಱುಗಿ ಮಱುಗಿದುವು ಬೆಳ್ಳೆಲೆಗಳ್ ೧೦೮

ಮಿಂಚಿನ ಬೊಂಬೆಯ ಕೈವಶ
ಕಂಚೆಗಳನನಂಗನಭವನಮನೆಂಬಿನಮಂ

ದೇಂ ಚೆಲ್ವಂ ತಳೆದುವೊ ಪೊಳ
ಪಿಂ ಚಾಮರಮಿಕ್ಕುವಬಲೆಯರ್ ಕೋಮಳೆಯಾ ೧೦೯

ನಂಬದೊಡೆ ನೋಡು ನೀಂ ಧವ
ಳಾಂಬಕಿ ನಿಜವದನಬಿಂಬವಿಂದುವಿನಿಂ ಚೆ
ಲ್ವೆಂಬರ ನುಡಿಗಳನೆಂಬವೊ
ಲಂಬುಜಮುಖಿ ಪಿಡಿದಳೊರ್ವಳೊಳ್ಗನ್ನಡಿಯಂ ೧೧೦

ಮಾತೇನೊ ನೋಡಿದವರ್ಗಳ
ನೋತು ಮರುಳ್ಮಾಡಲೊಂದೆ ಕನಕದ ಪೂವಂ
ಪೂತ ತನುಲತೆಯಿದೇನೆನಿಸಿದ
ಳಾ ತರುಣಿಯ ಕೆಲದ ಡವಕೆವಿಡಿದವಳೊರ್ವಳ್ ೧೧೧

ಅರಸಿಯ ಗುರುಪೀನಪಯೋ
ಧರದೊಪ್ಪಮನೊಯ್ಯನೆಂದು ಪೊಸಪೊಂಗಳಸಂ
ಪಿರಿದುಂ ಬಳಿನೀರ್ಗುಡಿದಂ
ತಿರಲೊರ್ವಳ ಕರದೊಳೊಪ್ಪಿದುದು ತಣ್ಗರಗಂ ೧೧೨

ಗಾವರಿಸಲ್ ತೆಱದಿಱಿವ ತುಂಬಿ ತುಱುಂಬಿನ ಸೌರಭಕ್ಕೆ ಬಂ
ದೋವಿ ಸಖೀಜನಂ ಬಳಸಿಬಳ್ವಳಮಾಗಿರೆ ಚೆಲ್ವುವೆತ್ತು ಸುತ್ತುಗೊಂ
ಡಾವರಿಸಿರ್ದ ಪೂಗಣೆಯ ಮಧ್ಯದೊಳರ್ಚಿಸಿದಿಕ್ಷುಚಾಪ ಲ
ಕ್ಷ್ಮೀವಿಭವಕ್ಕದೇಂ ದೊರೆಗೆವಂದುದೊ ಮೋಹನಮೂರ್ತಿ ಕಾಂತೆಯಾ ೧೧೩

ವ: ಅಂತು ಲೀಲೆಯಿಂದೋಲಗಂಗೊಟ್ಟು ಮುಂದೆ ಪಾಡುವ ಗಾಯಿನಿಯರ ಸೀಯನಪ್ಪ ರಸಗೇಯಮನಾಲಿಸುತ್ತಾಕೆಗಳ ಕರಪಲ್ಲವದಿಂ ಪಲ್ಲವಿಸಿದಂತೆಸೆವ ವಲ್ಲಕಿಯ ಮೆಲ್ಲುಲಿಗಳನಲ್ಲಿಲ್ಲಿಗಲ್ಲವೆಂದು ತಪ್ಪುವಿಡಿವಂತೆ ಕೆಳದಿಯರೊಳೊಯ್ಯನೊಯ್ಯನಾಡುವ ಸವಿಮಾತುಗಳ್ಗೆ ಬಾಯಂ ಪಱಿದುಕೊಳುತ್ತ ಬರ್ಪರಗಿಳಿಗೆ ಸರಸದಾಡಿಮಮೆಂದು ಕೆಂದಳದ ಕೆಂಪುಪೊರೆದ ಕಪ್ಪುರದ ವಳುಕುಗಳಂ ನೀಡುವೆಡೆಯೊಳ್ ಸೆಳ್ಳುಗುರ ಬಂಬಲ್ವೆಳಗಂ ಬಳಿವಾಲ ಧಾರೆಗಳ್ಗೆತ್ತು ಬಾಯ್ವಿಡುವ ಬಾಳಮರಾಳಂಗಳ್ಗೆ ಲೀಲಾರವಿಂದದ ಕಾವಂ ಸುಲಿಸುಲಿದು ನೀಡುತ್ತಮಿರ್ಪ ಸಮಯದೊಳ್

ಶ್ರೀರಮೆಯೋಲಗಕ್ಕೆ ನಿಜಶಿಲ್ಪವಿಕಲ್ಪಮನೊಯ್ದು ತೋಱಿಸಲ್
ಭಾರತಿ ಪುಸ್ತಕಂಬಿಡಿದು ಬಂದಪಳೆಂದೆನಿಪೊಂದು ಗಾಡಿಯಿಂ
ದಾ ರಮಣೀಮನೋನಯನ ವಿಸ್ಮಯಕಾರಿಣಿ ಮಂದ ಮಂದ ಸಂ
ಚಾರಿಣಿ ಚಾರುಚಿತ್ರಪಟಧಾರಿಣಿ ಬಂದಳದೊಂದು ಲೀಲೆಯಿಂ ೧೧೪

ವ: ಅಂತು ಬಂದು ಚಿತ್ರಿಕೆ ನಿಜಾಂಗುಳಿಯೊಳ್ ಪೊರೆದಿಂಗುಳಿಕಂ ಕೇಸರಿಯ ಕೆಂಬೊಗರಂ ದ್ವಿಗುಣಿಸೆ ಮೆಲ್ಲಮೆಲ್ಲನೆ ಶರಲ್ಲಕ್ಷ್ಮಿ ಬೆಳ್ದಿಂಗಳ ಪೊರೆಯಿನಿಂದ್ರಚಾಪಮಂ ತೆಗೆದು ಪಸರಿಸುವಂತೆ ಸುತ್ತಿದ ಮುಗುಲಮನಗಲೆ ನೂಂಕಿ ಚಿತ್ರಪಟಮಂ ಪದಪೀಠದ ಮುಂದೆ ಪಸರಿಸಲರಸಿ ಕೌತುಕರಸಂ ಕಣ್ಣಾಡೆದಂತೆ ನೀಡುಂಭಾವಿಸಿ ನೋಡುವಾಗಳ್ ಅನೇಕಭಂಗಿಭಂಗುರ ಭಾವರಸ ಚಿತ್ರದೊಂದೆಡೆಯೊಳ್ ಬರೆದ ಸರಸ ಸಲ್ಲಕೀಕಾನನದೊಳ್

ಮೊಲೆಗಳ ನುಣ್ಪ ಪೆಪ್ಪಳಿಸಿ ನೋಡುವ ತಾಯ್ವಿಡಿಮೆಲ್ಲೆ ಸಲ್ಲಕೀ
ದಲಮನಲಂಪಿನಿಂ ತೆಗೆದು ಸೂಸುವ ಸುಂಡಿಲನೆತ್ತಿ ಸುತ್ತನಾ
ಲ್ಗೆಲದೊಳಡುರ್ತು ಪಾಯ್ದು ಪರಿದಾಡುವನೇಕ ರಸಾನುಭಾವಮ
ಗ್ಗಲಿಸಲದೊಂದು ಪಲ್ಲಮಱಿ ಲಲ್ಲೆಯ ಚಲ್ಲಮನೇನೊಡರ್ಚಿತೋ ೧೧೫

ವ: ಅಂತು ಜೀವಂಬಡೆದಿರ್ಪುದೆಂಬಂತೆ ಮುದ್ದುವೀಱುವಾನೆವಱಿಯಾಟಮಾಟಂದು ಮಾನಸಮಂ ಕಲಂಕೆ ಕೌತುಕದಿಂ ನೋಡುವಾಗಳ್ ಅದಱ ಕೆಲದೊಳ್

ಉಡಿದು ಲವಂಗದೊಳ್ತಳಿರನೊಯ್ಯನೆ ಮೇಯಿಸಿ ನಿರ್ಝರಾಂಬುವಂ
ಕುಡಿಯಿಸಿ ಪದ್ಮಪಾಂಸುವಿನೊಳಾಡಿಸಿ ಪುಷ್ಕರದಿಂದೆ ಕೂಡೆ ಮೆ
ಯ್ದಡುವುತೆ ಸೋಂಕಿಲೊಳ್ ಮಡಗಿ ಮಾಡುವ ಮುದ್ದನೊಱಲ್ದು ನೋಡುತುಂ
ಪಿಡಿ ಪಿಡಿದಿರ್ದುದಲ್ಲಿ ಮಱಿಯಂ ಮಱೆದುಂಬಿಡದಾತ್ಮಮೋಹದಿಂ ೧೧೬

ಮೆಲ್ಲನೆ ಕಿಱುಮೊನೆಗೋಡಿಂ
ಗಲ್ಲಮನಂತಂತೆ ತುಱಿಸುತಂ ಮಱಿಮಿಗೆ ಪೋ
ಪಲ್ಲಿಗೆ ಪೋಪಾಸೆಯ ಗಜ
ವಲ್ಲಭೆಯಂ ಕಂಡು ಕಳಿಯೆ ಮಾನಿನಿ ಮನದೊಳ್ ೧೧೭

ವ: ಚಿತ್ರದೊಳಾದೊಡಂ ಪುತ್ರವತಿಯೆಂಬ ಬರಪಕ್ಕೆ ಬಾರೆನೆಂದು ತನ್ನೊಳ್ ತಾನೆ ದೂನಿಸುತ್ತುಂ ಸುಱ್ದನೆ ಸುಯ್ದು

ವಲ್ಲಭಜನಾನುರಾಗಂ
ಪಲ್ಲವಿಸಿದ ಫಲವಿಹೀನ ಕುಸುಮೋದಯದಿಂ
ದಿಲ್ಲನಿಸು ಭೇದಮಸುಕೆಯ
ವಲ್ಲರಿಗಂ ನೋಳ್ಪಡೆನ್ನ ತನುವಲ್ಲರಿಗಂ ೧೧೮

ವ: ಎಂದೇವಯ್ಸಿ ದೇವಿ ಮನದೊಳಳಲ್ದು ಮತ್ತಂ

ಬಿತ್ತರಮಾಗಿ ತೂಪ ಮಣಿದೊಟ್ಟಿಲೊಳಂಜದೆ ನಿಂದು ಪೊನ್ನ ನೇ
ಣೊತ್ತೆ ಕರಾಬ್ಜಮಂ ಬೆದಱಿ ಬಾಲನಳುತ್ತಗದತ್ತಲಿತ್ತ ನೋ

ಡುತ್ತಿರಲಳ್ಕಱಿಂ ಪರಿದು ದಾದಿಯರಂ ಕದಲುತ್ತುಮಾನೆ ಬಂ
ದೆತ್ತುವ ಸಯ್ಪುದೊಂದೆನಗೆ ಮುನ್ನುಱಿನೋನದೆ ತಾನೆ ಸಾರ್ಗುಮೇ ೧೧೯

ಅಂದುಗೆ ಕಿಱುಗೆಜ್ಜೆಗಳುಲಿ
ಸಂದಿಸಿ ಕಿವಿಗಿನಿದುಗಱೆಯೆ ಕೆಯ್ಪುಱೆಗೊಲವಿಂ
ಮುಂದೆ ಮಿಗೆ ಕುಣಿವ ಕಂದನ
ನೆಂದೆನ್ನಯ ದಿಟ್ಟಿ ತಣಿವಿನಂ ನಿಟ್ಟಿಪೆನೋ ೧೨೦

ಕೆಯ್ಯಾರಲೆತ್ತಿಯಾನೀ
ಮೆಯ್ಯಾರ್ವಿನಮಪ್ಪಿಕೊಂಡು ಪಣೆಯಂ ಪಣೆಯಿಂ
ದೊಯ್ಯನಣೆದಣೆದು ತಣೆಯದೆ
ಚಯ್ಯಾಡುವ ತನಯನೆನಗದೆಂದಾಪನೋ ೧೨೧

ಅಂಗಣಕಿದೆತ್ತಣಿಂ ಪೊಸ
ಸಿಂಗದ ಮಱಿ ಬಂದುದೆಂದು ಮುದ್ದಾಡಿಸುತಾ
ಲಿಂಗಿಪೆನೆನೆ ಪರಿಪರಿದಯ
ಸಂಗೊಳಿಸುವ ಮಗನನೆಂದು ನಡೆನೋಡುವೆನೋ ೧೨೨

ಪಿಂದಣಿನೊಯ್ಯನೆ ನಲವಿಂ
ನಂದನನೆಯ್ತಂದು ಕೊರಲನಪ್ಪಲ್ ಭರದಿಂ
ಮುಂದೆಚ್ಚುವಾಯ್ವ ತನಿವಾ
ಲೆಂದೀ ನೆಲೆಮೊಲೆಯ ಮೇಲುದಂ ನಾಂದುಗುಮೋ ೧೨೩

ಮೆಲ್ಲನೆ ಮಲಗಿರೆ ಕದಪಂ
ಮೆಲ್ಲನೆ ಜಕ್ಕುಲಿಸೆ ನಕ್ಕು ಮಗನಗಿದೊದೆಯಲ್
ಮೆಲ್ಲಡಿಗೆ ಸಿಲ್ಕಿ ಹಾರಂ
ಝಲ್ಲನೆ ಪಱಿದೊಕ್ಕೆ ಮುತ್ತನೆಂದಾಯ್ದಪೆನೋ ೧೨೪

ಬಿನದದಿ ನೋಡುತಂದುಗೆಯ ಗೆಜ್ಜೆಯ ಮೆಲ್ಲುಲಿಯುಣ್ಮೆ ಪೊಣ್ಮೆ ಭೋಂ
ಕನೆ ಪರಿತಂದು ನುಣ್ದೊದಳ ಮಾತುಗಳಂ ಕಿಱಿದಾಡಲಾನದೇ
ನೆನೆ ಕಡುನಾಣ್ಚಿ ಪಾಯ್ದು ಕೊರಲಂ ಬಿಗಿಯಪ್ಪಿ ಮರಲ್ದುನೋಳ್ಪ ನಂ
ದನನೆಳೆಲೋಳೆವಾಯ ಸವಿಮುದ್ದಿನ ಸಮ್ಮದಮೆಂತು ಸಾರ್ಗುಮೋ ೧೨೫

॥ಮಲ್ಲಿಕಾಮಾಲೆ॥
ನಾಡಮಾತಿನೊಳೇನೊ ಪುತ್ರನನಳ್ತಿಯಿಂ ತೆಗೆದೆತ್ತಿಕೊಂ
ಡಾಡದಾಕೆಯ ಕೆಯ್ ಮರುಳ್ಗಳ ಕೆಯ್ ಮನಂಬುಗುವಳ್ಕಱಿಂ

ನೋಡದಿರ್ದಳ ಕಣ್ ಕಳಲ್ಚಿದ ಪೀಲಿಗಣ್ಣುಱೆ ಜೋಗುಳಂ
ಬಾಡದಿರ್ಪಳಿವೆಣ್ಣ ಬಾಯದು ಪುಣ್ಣಬಾಯೆನಿಸಲ್ಲದೇ ೧೨೬

ವ: ಎಂದು ಮನದೊಳೆ ಬಗೆಯುತ್ತುಮಾರೊಳಂ ಮಾತನಾಡದಾ ತಳೋದರಿ ತನೂಭವಲಾಭ ಸಂಕ್ರಾಂತ ಚಿಂತೋದ್ರೇಕದಿಂ ಮೌನಮುದ್ರೆಯನೊಳಕೊಂಡಿರ್ಪ ಸಮಯದೊಳ್

ಪೂವಿನ ಬಿಲ್ಲನೈಸರಲನಾವಡೆಯೊಳ್ ಮಡಗಿಟ್ಟುಬಂದನೀ
ಭಾವಜನೆಂಬ ಕೌತುಕದಿನೋತು ಸಖೀಜನಮೆಳ್ದು ದೂರದಿಂ
ಭಾವಿಸೆ ಮಂದ ಸಂಚರಣ ಚಾಲಿತ ಕುಂಡಲನೆಯ್ದೆಬಂದನಾ
ದೇವಿಯರಿರ್ಪ ತಾಣಕರಸಂ ಸರಸ ಪ್ರಣಯಾನುರಾಗದಿಂ ೧೨೭

ವ: ಅಂತು ನಿರ್ಭರಪ್ರಣಯ ಪರವಶತೆಯಿನರಸನೇನುಮಂ ಭಾವಿಸದೆ ದೇವಿಯ ಕಾಣ್ಕೆಯೆ ಕಣ್ಣಾಗಿಬರ್ಪಾಗಳ್

ನೊಸಲೊಳಮರ್ಕೆವೆತ್ತಲೆವ ಸೂಸುಗುರುಳ್ ನಿಡುಸುಯ್ ಕಳಲ್ದ ಮೆಯ್
ಪೊಸದಲರಂತೆ ಬಾಡಿದ ಮೊಗಂ ಕರಪಲ್ಲವದಲ್ಲಿ ಕೀಱ ಕೀ
ಲಿಸಿದ ಕದಂಪು ಜಾಱಿದ ಜಗುಳ್ಮಡಿ ಬೇಱೆಬೆಡಂಗನೀಯೆ ಜಾ
ನಿಸುವಳ ಭಾವಮೇಂ ಬಗೆಯೊಳಚ್ಚಿಱಿದಿರ್ದುದೊ ತನ್ನರೇಂದ್ರನಾ ೧೨೮

ವ: ಅಂತೆರ್ದೆಗೊಳ್ವ ಚಿಂತಾಭಾವಮನಾ ಜೀವಿತೇಶ್ವರಂ ಭಾವಿಸಿ

ಕೆಂದಾವರೆಯುಂ ಕೆಳೆಗೊಂ
ಡಿಂದುವನನುಕರಿಸಿ ಕದಪು ನೊಸಲಂ ಕಳಿದೆ
ಯ್ತಂದಳಿ ಸಂಪಗೆಯೊಳ್ ಪಾ
ಯ್ವಂದಮನೊಳಕೊಂಡವೊಳ್ಗುರುಳ್ ಕೋಮಳೆಯಾ ೧೨೯

ಪಗಲೆ ಚಕೋರಂ ಪೊಣರ್ವ
ಕ್ಕಿಗೆ ತಿಂಗಳ ಬಿತ್ತನೊಯ್ದು ಕುಡುಕಿಕ್ಕುವ ಭಂ
ಗಿಗೆ ನೆಲೆಯು[illegible]ವು ಮೇಲುದ
ನುಗುಳ್ವಬಲೆಯ ಮೊಲೆಯೊಳುಗುವ ಬಾಷ್ಪಕಣಂಗಳ್ ೧೩೦

ನಸುಬಿಸುಪಿಂಗೆ ಬೆರ್ಚಿ ಪೆಱಪಾರೆ ಮದಾಳಿಗಳೋಳಿಗೊಂಡ ನಿ
ಟ್ಟುಸಿರ್ಗಳ ದಾಳಿಯಿಂ ನಿಜಶರೀರಶಲಾಕೆಯನೀಕೆ ನಾಡೆ ಕಂ
ದಿಸಿ ನಱುಗಂಪು ನುಣ್ಪುಗಳ ಮೆಯ್ಸಿರಿಯಿಂ ಸಲೆಸೋಲ್ತು ಚಂಪಕ
ಪ್ರಸವದ ಪಾಡುಗುಂದಿದಳಿಗಾಡಿಯನೇಕೆಣೆಮಾಡಿಕೊಂಡಳೋ ೧೩೧

ದೇವಿಯ ಸೊಗಯಿಪ ತನುಲತೆ
ಪೂವಿನ ಬಿಲ್ಲಂತೆ ಬಾಡಿ ಬಳ್ಕಿರುತಿರ್ದು೯ಂ
ಭಾವಿಸಿ ನೋಡೆ ಮನಂಗೊ
ಳ್ವೀ ವಿಸ್ಮಯ ರಸಮನೆನ್ನೊಳೇಂ ಮಾಡಿದುದೋ ೧೩೨

ವ: ಎಂದೆವೆಯಿಕ್ಕದೆ ನೋಡುತ್ತೆ ಮನದೊಳಿನಿಸಾನುಮುಮ್ಮಳಿಸಿ

ತನ್ನಾಣೆ ತನ್ನ ಗೋಸನೆ
ತನ್ನ ಪೆಸರ್ ತನ್ನ ಜಸಮೆ ಜಸಮೆನಲೆಸೆವೀ
ಮನ್ನಣೆಯ ಮನದ ಮಚ್ಚಿನ
ಚೆನ್ನೆಗೆ ಕಡುನೋವಿದಾರ ಕಡೆಯಿಂದಾಯ್ತೋ ೧೩೩

ವ: ಎಂದು ಮನದೊಳನೇಕ ವಿಕಲ್ಪಮಂ ಭಾವಿಸುತ್ತೆ ಚಿತ್ತಪ್ರಿಯಂ ಕಟ್ಟಿದಿರೊಳ್ ಬಂದುನಿಂದುದನೊಂದಿನಿತುವರಮಱಿಯದೆ ಮೇಳದಾಳಿಯರ ಕಳಕಳದಿನಱಿದು

ಕೆಲದೊಳೆ ತೋರ್ಪ ಕೌಳುಡೆಯನೊಯ್ಯನೆ ಕೆಯ್ಯೊಳವುಂಕಿ ಕಂಕಣಂ
ಘಲಕೆನೆ ಕಣ್ಣನೀರ್ದೊಡೆದು ಪೊಣ್ಮೆ ಪೊದಳ್ದುಡೆನೂಲನುಣ್ಚಾರಂ
ನೆಲೆಮೊಲೆಯಿಂದಮೊಂದಿನಿಸು ಜಾಱುವ ಮೇಲುದನೇಱನೂಂಕಿ ತೆ
ಳ್ಪಲಘು ನಿತಂಬೆಯಂದಮೆರ್ದೆಗೊಂಡುದು ರಾಜಕಳಾವಿಳಾಸನಾ ೧೩೪

ವ: ಅಂತು ಭೋಂಕನೇಳ್ವೆಳದಿಂಗಳ ತನಿವೆಳಗಂ ಪೊರೆಯೆತ್ತಿ ಚಕೋರಕ್ಕೆ ನೀಡುವರಾಕೆಯಂತಿರಾಕೆ ದುಗುಲದ ಸೆಱಗನೊಯ್ದು ಮಗುಳೆ ಮಗುಳೆ ಪತ್ರ ಭಂಗಕ್ಕೆ ಭಂಗಮಂ ತರ್ಪ ಬಾಷ್ಪಜಕಳಿಕೆಗಳನಂತೊತ್ತುತ್ತ ಮತ್ತೆ

ಇಂದೀವರಮನಿದೇನೆಲೆ
ಕೆಂದಾವರೆ ಭರದಿನಪ್ಪಿ ಮೆಯ್ದುಡವಿದುದೆಂ
ಬಂದದೆ ಕಣ್ಬನಿಗಳನರ
ವಿಂದಾನನೆ ತೊಡೆದಳಮರೆ ಕರಕಿಸಲಯದಿಂ ೧೩೫

ವ: ಅಗಳ್

ಕೆಂದಳದ ಕಾಂತಿ ಪೊರೆದುದೊ
ಬಂದಿನಿಯನನೀಕ್ಷಿಸಲ್ಕೆ ಮನದನುರಾಗಂ
ಮುಂದಿರ್ದುದೊ ಪೇಳೆಂಬಿನ
ಮಂದಲರ್ಗಣ್ ಕೆಂಪನೇಂ ಪುದುಂಗೊಳಿಸಿದುವೋ ೧೩೬

ವ: ಅಂತು ನಿಜಮನೋಗತ ಸುತದೋಹಳಚಿಂತಾಸಂತಾಪ ಪರಿಮ್ಲಾನಮಾದ ಮುಖಾರವಿಂದಕ್ಕೆ ಸುರಭಿರಜಂ ನಿಶ್ವಾಸ ಪವನನಿಗೊಸೆದು ಪುಗೆ ಕಲಂಕಿದಂತೆ ಕೆಂಪು ಪೊಂಪುಳಿಸುವ ವಿಲೋಚನದ ಸೊಂಪಂ ನೋಡುತ್ತೆ ಕೆಯ್ನಾಡಿ ತೆಗೆದುತ್ತುಂಗ ರತ್ನಪೀಠದೊಳ್ ಕುಳ್ಳಿರ್ದು ಭೂಮೀಶ್ವರನಾ ಮನೋಹರಿಯಂ ನಿಜಾಂಕಪೀಠದೊಳಿರಿಸಿ ಸೂಸುಗುರುಳ್ಗಳನುಗುರ್ನೊನೆಯಿನೊಯ್ಯನೊಯ್ಯನೇಯಾರಿಸುತ್ತುಂ

ದೇವಿ ಬಿಡು ಖೇದಮಂ ನಿನ
ಗಾವುದಱೊಳ್ ಕೊಱತೆ ಬಱದೆ ಜಳಕಳಿಕೆಗಳಂ
ತೀವಿ ನಿಜನಯನಮೆಲೆ ಕೆಂ
ದಾವರೆಯಸಳೊಡನಿದೇಕೆ ಸರಿಯಾದಪುವೋ ೧೩೭

ಆನೊಳಗಾಗಿರೆ ಕೇಳೆಲೆ
ಮಾನಿನಿ ನೀಸಿಕ್ಕಿದುಗುಳುಮಂ ದಾಂಟೆನೆನಿ
ಪ್ಪೀ ನುಡಿಗೇಳ್ದು ನಿಜಾಜ್ಞೆಯ
ನೇನಾನುಂ ಮಿಱಿಮಿಕ್ಕು ನಡೆವವರೊಳರೇ ೧೩೮

ವ: ಎಂದು ನಲ್ಮೆದೋಱಿ ನುಡಿದು ಬಿಸುಸುಯ್ಗೆ ಬಾಡಿದಧರಕಿಸಲಯಮಂ ನೋಡಿ

ಬಂದು ನಱುಸುಯ್ಗೆ ನೆಱೆ ಮೆ
ಯ್ದುಂದದ ಕೆಂಪಿಂಗೆ ಸೋಲ್ತು ಬಿಂಬಾಧರಮಂ
ಕಂದಿಸು ನೀನೆಂದಸುಕೆಯ
ಕೆಂದಳಿರೇಂ ಲಂಚಮಿತ್ತುದೇ ಲಲಿತಾಂಗೀ ೧೩೯

ನಡೆಯೊಡನೇನೊ ಮಚ್ಚರಿಸಿದಂತೆ ನೆಗಳ್ತೆಯ ರಾಜಹಂಸನೊಳ್
ನುಡಿಗಳ ಜಾಣ್ಮೆಯಂ ಸೆಳೆದುದೇ ಗಿಳಿ ಸೋಲದೆ ಸೋಗೆ ಬೀಗಿ ಸೋ
ರ್ಮುಡಿಗೆಣೆಯಾದುದೇ ನುಡಿ ಮನೋಹರಿ ನಿನ್ನ ಮೊಗಂ ಕನಲ್ದು ನೀಂ
ನುಡಿಯದೆ ಮೌನಮಂ ಪಿಡಿಯೆ ತಾವರೆಯೊಳ್ ಸರಿಯಾಗಿ ಪೋಗದೇ ೧೪೦

ವ: ಎಂದನುನಯಿಸುವಿನಿಯನನುರಾಗಕ್ಕೆ ಕೆಯ್ಗನ್ನಡಿಯಾದ ಜಾಣ್ನುಡಿಗೆ ಮಱುಮಾತಂ ಕುಡಲಱಿಯದಂತೆ ಮೆಯ್ಯಿಕ್ಕಿರೆ ಚಕೋರಚಂಚು ಸಂಚಾರದಿನಿಂದು ಬಿಂಬದಿನಲ್ಲುಗುವಮೃತಬಿಂದುಗಳಂತೆ

ತಳ್ತಳಿಸಿ ಪೊಳೆಯೆ ಕಣ್ಬನಿ
ಗಳ್ಪೊಟ್ಟನೆ ಸತಿಯ ತೋರಮೊಲೆಗಾರಮನಾ
ಗಳ್ತುಡಿಸಿ ನನ್ನಿಮಾಡಿದು
ವಳ್ತರೆ ಮುತ್ತೊಕ್ಕವೆಂಬರಣಕದ ನುಡಿಯಂ ೧೪೧

ವ: ಅಂತಳವಿಗಳಿದು ಗಳಗಳನುಗುವ ಕಣ್ಬನಿಯಂ ಕರಾಂಬುಜದಿಂದ ತೊಡೆದು ತಲೆಯಂ ತಳ್ಕೈಸಿ ತೆಗೆದಗಲುರದೊಳೊತ್ತಿಕೊಂಡು ಗಲ್ಲಮಂ ಪಿಡಿದು ಲಲ್ಲೆವಾತಿಂ ನಲ್ಲಳಂ ಬೋಳೈಸುತ್ತಿಳೇಶ್ವರಂ ಕೆಲದ ಸಲುಗೆಯ ಸಹಚರಿಯರ ಮೊಗಮಂ ನೋಡಿ

ದೇವರೆ ಮಾಳ್ಪ ಮನ್ನಣೆಯೊಳೀಕೆಗೆ ತೀರದುದೇನುಮಿಲ್ಲಮಿಂ
ದೀವರನೇತ್ರೆ ಚಿತ್ರಪಟಮಂ ಪರಿಭಾವಿಸುತೀಗಳಿಂತು ನಾ
ನಾವಿಧಮಾದ ನಿಮ್ಮ ಪಡೆಮಾತುಗಳಂ ಪಡೆದಾಡುತಿರ್ದಳಿ
ನ್ನಾವುದೊ ಭೇದಮಾಳ್ದಳಿದೆ ಮಾಗಿಯಕೋಗಿಲೆಯಂತೆ ಮೌನಮಂ ೧೪೨

ವ: ಎಂದು ನಿಷ್ಕಪಟೆಯಾ ಪಟಮಂ ಮುಂದಿಟ್ಟು ಮುಟ್ಟೆ ತೋಱುತ್ತು ಮಿರ್ಪಾಗಳ್

ಮುನಿಸಿಂದೊಯ್ಯನೆ ಬಂದು ಪೂತ ಲತೆಯಂ ನೆಮ್ಮಿರ್ಪುದುಂ ದೇವಿ ಬೆ
ನ್ನನೆ ಬಂದಾನಪರಾಧಿಯೆಂದು ಲತೆಯಂ ತಾನೆಂದೆ ನೀನಂದು ನೆ
ಟ್ಟನೆ ಪಾದಾನತನಾದುದಂ ಬರೆದ ಭಾವಂ ಭಾವ ಲೇಸೆಂದು ಕಾ
ಮಿನಿ ಕೊಂಡಾಡುವ ಕೆಯ್ತದಿಂದೆ ಮೆಱೆದಳ್ ತನ್ನೊಂದು ಸೌಂದರ್ಯಮಂ ೧೪೩

ವ: ಮತ್ತಮಿಾಯೆಡೆಯೊಳ್

ಪೂವನೊಱಲ್ದು ತಾಂ ತಿಱಿವ ಸಂಭ್ರಮದಿಂ ಮುಡಿಬಿಟ್ಟೊಡಳ್ಕಱಿಂ
ದೇವರೆ ಪೋಗಿ ಸಾವಗಿಪೆವೆಂದು ಸಮಿಾಪದೆ ಸೋಗೆ ಪಾಯ್ದ ಲೀ
ಲಾವನದಲ್ಲಿಗೆಯ್ದೆ ಸಖಿಯರ್ ನಗೆನಾಣ್ಚಿದನಿಂತು ಭಾವಮಂ
ಭಾವಕಿ ಚೆಲ್ವೆನಲ್ ಬರೆದಳೆಂದು ಮನಂ ಮಿಗೆ ಮೆಚ್ಚಿ ನೋಡಿದಳ್ ೧೪೪

ಸರಸಿರುಹಾಯತಾಕ್ಷಿ ಜಳಕೇಳಿಯೊಳೊರ್ಮೆ ವಿನೋದದಿಂದೆ ತಾ
ಮರೆಗೊಳದಲ್ಲಿ ಮೆಯ್ಗರೆಯೆ ಮೇಳಿಸಿ ನೀನೆಲೆದೇವ ಹೇಮತಾ
ಮರಸಮನಾನನಾಂಬುರುಹಮೆಂಬನುರಾಗದಿನಾಸೆಮಾಡುವಾ
ತುರತರಭಾವಮಂ ಬರೆದ ಭಾವಮನೀಕ್ಷಿಸಿ ನಕ್ಕಳಿನ್ನೆಗಂ ೧೪೫

ಮಾನವಮಿಾನಕೇತನ ಮನಂಗೊಳೆ ನಿನ್ನೊಡನಾಡಿ ನೆತ್ತಮಂ
ತಾನುಱೆ ಸೋಲ್ತು ಮುದ್ದುಗಳನೀವೆಡೆಯೊಳ್ ಮಿಗಿಲಾಗಿ ಕೊಂಡೆಯೆಂ
ದಾ ನಳಿನಾಕ್ಷಿ ನಿಮ್ಮನೆನೆ ನೀಂ ಮಗುಳ್ದಿತ್ತಪೆನೆಂದು ತೊಂಡೆವಾ
ಯಾನನಮಂ ತಗುಳ್ಚಿದೆಡೆಯಂ ನಡೆನೋಡಿ ಮೃಗಾಕ್ಷಿ ನಾಣ್ಚಿದಳ್ ೧೪೬

ವ: ಮತ್ತಮಿಾ ಬರೆದ ಕೇಳೀನಿಳಯದೊಳ್

ಅದನೇನೆಂದಪೆನೀಕೆ ತನ್ನನೊಲವಿಂ ನೀನಪ್ಪಿದಂತಿರ್ದ ಭಾ
ವದ ಚಿತ್ರಾಕೃತಿಗಾಣುತಾವಳಿವಳೆಂದಕ್ಷಿದ್ವಯಂ ಕೆಂಪನಾ

ಳ್ದುಮಾಗಳ್ ಬಗೆಗಂಡು ದರ್ಪಣಮನೊಯ್ವಾಂ ತೋಱಲಂತಾಕ್ಷಣಂ
ವದನಾಂಭೋಜಮರಲ್ದು ಪೊಂಗಿ ಕಳೆದಳ್ ತನ್ವಂಗಿ ರೋಮಾಂಚಮಂ ೧೪೭

ವ: ಆಗಳ್

ಮಡದೀಸೌಭಾಗ್ಯಸಂಪನ್ನೆಗೆ ನೆಗಳ್ವೆಸವೀ ಚೆನ್ನಗೇನೆಂದು ನೀಂ ಕ
ನ್ನಡಿಯಂ ಕಣ್ಗೊಳ್ವಿನಂ ತೋಱಿದೆ ಮದವತಿ ತನ್ನಂದಮಂ ಚೆಂದಮಂ ಕಂ
ಡೊಡೆ ಪೇಳೀ ಚಿತ್ರವಿದ್ಯಾಕಳೆ ಮಸುಳಿಸದೇ ರೂಢಿವೆತ್ತನ್ನ ಕೆಯ್ ಜಾ
ಣ್ಗಡದೇ ಪೂರ್ಣ್ವೇಕೆಯಾಕಾರಮನುಱೆ ಬರೆಯಲ್ ಬರ್ಕುಮೇ ಬಾರದಾರ್ಗಂ ೧೪೮

ವ: ಎಂದು ವಕ್ರೋಕ್ತಿಯಿಂದೆನ್ನಂ ತೆಗಳ್ದ ತನ್ನಂ ಪೊಗಳ್ವ ಚಿತ್ರಿಕೆಯ ಚೇತಶ್ಚಕೋರಮಂ ದರಸ್ಮಿತ ಚಂದ್ರಿಕೆಯನಲರ್ಚಿ ಮತ್ತೀಯೆಡೆಯೊಳಚ್ಚಿಱಿದಂತಣ್ಕೆಗೆಯ್ದ ಪಚ್ಚುಗೂಂಟಮಂ ಕಂಡು

ನಲವಿಂ ನಾನಾವಿಧಕ್ರೀಡೆಯೊಳಖಿಳ ಕಳಾವಲ್ಲಭಂ ವಲ್ಲಭಂ ತ
ನ್ನೊಲವೆನ್ನೊಲ್ವೆಚ್ಚಿಯಿಂ ಪೆರ್ಚಿಸೆ ನೆರೆವೆಡೆಯೊಳ್ ತೊಟ್ಟನೋರೋರ್ಮೆ ಗೋತ್ರ
ಸ್ಖಲನಂ ಕೆಯ್ಗನ್ಮಲಾನುತ್ಪಲದಲ ವಿಲಸನ್ಮಾಲಿಕಾಲೋಲ ನೇತ್ರಾಂ
ಚಲದಿಂದೇಕಾಂತದೊಳ್ ಪೊಯ್ದುದನಱಿದಿವಳೆಂತೆಂತೊ ಚಿತ್ರಕ್ಕೆ ತಂದಳ್ ೧೪೯

ವ: ಎಂದನುರಾಗಿಸುವ ತನ್ನ ಭಾವಮಂ ಕೆಳದಿಯರಱಿಯದಂತೆ ಮಱೆ ಮಾಡುತ್ತೆ ಮತ್ತೆ

ಭುವನಮನೆಯ್ದೆ ಮೋಹಿಸುವ ನಿನ್ನಯ ರೂಪನೊಱಲ್ದು ನೋಡಿ ಸಂ
ಭವಿಸೆ ಮುದಶ್ರುಗಳ್ ಮಗುಳೆ ಭಾವಿಸಿ ಭಾವಿಸಿ ಕರ್ಣಪೂರ ಕೈ
ರವದ ರಜಂ ತೆಱುದಿರದೆ ಮೆಲ್ಲಲರಿಂ ಪೊಱಸೂಸಿ ಪೊಕ್ಕುದೆಂ
ಬವಚಱೋಳೀಕೆ ಚಾಮರದ ಕಾಮಿನಿಯಂ ಕಿಸುಗಣ್ಚೆ ನೋಡಿದಳ್ ೧೫೦

ವ: ಮತ್ತಮೀಯೆಡೆಯೊಳ್ ಮನುಜಕಂಠೀರವ ನಿನ್ನ ಸುರತೋತ್ಕಂಠಭಾವಮಂ ಕಂಡು

ನುಡಿದಪೆನೆಂಬಿನಂ ಪ್ರಿಯದೆ ನಂಬಿಸಿ ಭೂಭುಜನೆನ್ನ ನೀವಿಯಂ
ಪಿಡಿದಪೆನೆಂಬಿನಂ ಮೊಗದೊಳುಣ್ಮುವ ನುಣ್ಚೆಮರಂ ಕರಾಬ್ಜದಿಂ
ತೊಡೆದಪೆನೆಂಬಿನಂ ನಯದಿನೀ ನಳಿದೋಳ್ಗಳ ನೀಳ್ದ ತೋಳ್ಗಳಿಂ
ತೊಡರ್ದಪೆನೆಂಬಿನಂ ಬರೆದಳೆಂಬನುರಾಗಮನೆಯ್ದಿದಳ್ ನೃಪಾ ೧೫೧

ವ: ಅಂತತನುಭಾವಕ್ಕೆ ಬಂದ ಭಾವದ ತೆಱನಮಱಿಸಿ ನೋಡುವ ಬಗೆಯಱಿದುಱುವ ಕೆಳದಿಯರೊಳೊರ್ವ ಭಾವಕಿ

ಈ ನಲ್ಲನ ಪೆಱೆನೊಸಲೊಳ
ಗೇನಲತೆಗೆವಜ್ಜೆಯೆಂದು ಬೆಸಗೊಳೆ ಸತಿ ಲೀ

ಲಾ ನಿಜಹಾಸದೆ ಮುಸುಕಿದ
ಳಾನತಮುಖಿ ತನ್ನ ಚೆನ್ನ ಪದಪಲ್ಲವಮಂ ೧೫೨

ವ: ಮತ್ತಮೊರ್ವಳೀಯೆಡೆಯ ಸುರತಾವಾಸನೋಪಚಾರಮಂ ವಿರಚಿಸುವ ದೇವರ ಪಡಿವರಿಜಂ ಕಂಡು

ತಾಱಿವಱಿದ ಸೂಸುಗುರುಳಂ ತವೆ ತಿರ್ದುವ ತೀರ್ಕೆಯೊಳ್ಪಮ
ಣ್ಮೇಱಿದ ಸುಯ್ಗೆ ಪಾಯ್ವ ಮಱಿದುಂಬಿಯನೋವದೆ ಸೋವ ಬೀಗಿ ಬೆ
ಳ್ಪೇಱಿದ ತೊಂಡೆವಾಯ್ಗೆ ನಱುದಂಬುಲಮಂ ಕುಡುಕಿಕ್ಕುವಂದಮಂ
ತೋಱೆ ಕಡಂಗಿ ತೋಱಿದುದು ಕಣ್ಗುಡಿಯೊಳ್ ನಸುಜರ್ವು ಕಾಂತೆಯಾ ೧೫೩

ವ: ಆ ಪುಸಿಮುನಿಸನಱಿದೋರ್ವ ಪರಿಹಾಸ ಕುಶಲೆಯಿಾಯೆಡೆಯ ಸಂಭೋಗ ಸಂಭ್ರಮಂ ತೋಱೆ

ಭಂಗಿವಡೆದತ್ತು ಸುರತದೊ
ಳಂಗಂ ಕಳಕಂಠಕಂಠಿ ಪೇಳಿವಳಿನ್ನಿಂ
ನಿಂಗೊರಲದನಿಯನೆಂತು ಮ
ನಂಗೊಳೆ ಬರೆದಪ್ಪಳೆಂದು ನಗಿಸಿದಳೀಗಳ್ ೧೫೪

ವ: ಆಕೆಯೊಡನೆ ಮತ್ತೊರ್ವಳ್ ರಯ್ಯಮಾದೊಳ್ನುಡಿಯ ಕಡುಜಾಣೆ

ಬಂದೆಳೆಜವ್ವನಂ ಬಯಸುವಗ್ಗದ ರೂಪು ಪೊದಳ್ದ ನಲ್ಮೆ ತ
ಳ್ತೊಂದಿದ ಚೆಲ್ವ ದಂಪತಿಯಿದಾರೆನೆ ಕುಂದದರಸ್ಮಿತಾಸ್ಯೆ ಬಾ
ಯ್ಗುಂದದೆ ಕಾಮನುಂ ರತಿಯುಮೆಂದೆನೆ ಕರ್ಬಿನ ಬಿಲ್ಲದೆಲ್ಲಿ ಪೋ
ಯ್ತೆಂದೊಡೆ ನಾಣ್ಚಿ ಮಾಧವಿ ಮುಗುಳ್ತವೊಲೀಕೆಯದೇಂ ಬೆಮರ್ತಳೋ ೧೫೫

ವ: ಎಂದಾ ಚತುರೆ ಚತುರಕಳಾವಿಳಾಸಂಗೆ ವಿನೋದದೊಳಮಾದೊಡಮಿಾಕೆ ನಿನ್ನ ನೇಹಮೆ ಪಾಡುಂಗೂಡುಮಾಗಿ ನೋಡುತ್ತಮಿರ್ದೀಯೆಡೆಯೊಳ್ ಬರೆದ ಕರಿಕಳಭ ಕ್ರೀಡೆಗಳನಾಳೋಕಂಗೆಯ್ದಾಗಳ್ ತೊಟ್ಟುಮಾರೊಳಮುಸಿರದಿರ್ದಪಳೆನೆ ರಾಜ ಸರ್ವಜ್ಞನಾ ರಾಜ್ಞಿಯ ಮನದ ಬಯಕೆಯನಱಿದು ತಾಂ ಕಂಡ ಪುತ್ರೋತ್ಪತ್ತಿ ಕಾರಣಮಪ್ಪ ಸ್ವಪ್ನಂಗಳಂ ನೈಮಿತ್ತಿಕರ್ ಪೇಳ್ದ ನಿಮಿತ್ತಂಗಳಂ ನಿರೂಪಿಸಿ ಕಾಂತೆಯಂ ಸಂತಮಿಡುತ್ತೆ ಮನದೊಳ್ ಮಱುಗಿ

ಈ ಕುಲವತಿಗೀ ಗುಣವತಿ
ಗೀ ಕೂರ್ಮೆಯ ರೂಪವತಿಗೆ ನಂದನನೊಗೆದಿ
ಕ್ಷ್ವಾಕುಲತಿಲಕನೆನಿಸದೊ
ಡೇಕೆನ್ನೆಯ ಬಾಳ್ಕೆಯೆಂದು ಸುಜ್ಞನೆ ಸುಯ್ದಂ ೧೫೬

ವ: ಅಂತು ಮನದೊಳ್ ಮಱುಗಿ

ಘನಮಹಿಮಾಭಿರಾಮನೆನಿಪಾದಿವರಾಹನ ಕೋಡೊಳಿರ್ದನಂ
ತನ ಪೆಡೆಯೊಳ್ ಬೆಡಂಗುವಡೆದಂದದಿನೀನಳಿತೋಳೊಳೇಳ್ಗೆವೆ
ತ್ತನುದಿನಮೊಪ್ಪಿ ತೋರ್ಪಖಿಳಭೂಭರಮೆನ್ನ ಬಳಲ್ಕೆ ಪಿಂಗೆ ನಂ
ದನನ ಸಮಗ್ರಬಾಹು ಶಿಖರಾಗ್ರದೊಳೆಂದಳವಟ್ಟು ತೋರ್ಕುಮೊ ೧೫೭

ಭುವನಕ್ಕಕ್ಕಜಮಾಗಲೀಕ್ಷ್ವಸೆ ಪೊದಳ್ದಿಕ್ಷ್ವಾಕು ಸಂತಾನದು
ದ್ಭವಮಿಂತೇಕೆಡೆಗೊಟ್ಟುದೆಂಬ ಪಿರಿದುಂ ಪೀಡಾತಮಂ ಪೊರ್ದೆ ಬಾ
ಡುವ ಸಾಮ್ರಾಜ್ಯರಮಾ ಮುಖಾಂಬುರುಹಮಿಂಬಿಂ ಪೊಂಗುವಂತೆಂದು ತೋ
ಱುವುದೋ ಮತ್ಕುಲಪೂರ್ವಶೈಲದೊಳಪತ್ಯಾದಿತ್ಯನಿತ್ಯೋದಯಂ ೧೫೮

ವ: ಎಂದವನಿಕಾಂತಾ ಸಂತಾನ ಸಂಜೀವನಾಭಿಲೋಪಚಿಂತಾತುರನಾಗಿ ಬಾಯ್ವಿಡುವ ಸಮಯದೊಳಭ್ರ ಸಮಯಮಮರಚಾಪಂಬಿಡಿದು ಚಾತಕ ಚಕ್ರವರ್ತಿಯ ಚಾವಡಿಗೆ ಬರ್ಪಂತೆ ವಿಚಿತ್ರ ವೇತ್ರಲತೆವೆರಸುತ್ತೆ ಕೆಯ್ಮುಗಿವುತ್ತೆ ಬಂದು

ಕಂಚುಕಿ ಬಾಗಿಲೊಳೊರ್ವನು
ದಂಚಿತ ಪುಳಕಾಂಕುರಪ್ರಸೂನ ಫಲಾಮೋ
ದಾಂಚಿತ ಕರಶಾಖಿಂ ಬಂ
ದಂ ಚಿತ್ತೈಸರಸ ಸರಸ ಸಂತಾನದವೋಲ್ ೧೫೯

ವ: ಎಂದು ಬಿನ್ನವಿಸಿದ ಬಿನ್ನಪಮುಪಶ್ರುತಿಯಾಗೆ ಬೀಗಿ ಬರವೇಳೆಂದು ಬೆಸಸೆ ಮಹಾಪ್ರಸಾದಮೆಂದಾ ದ್ವಾರಪಾಲಂ ವನಪಾಲನಂ ಕಳುಪಲವಂ ಸರ್ವರ್ತುಕ ಪ್ರಸೂನ ಫಲಂಗಳಂ ಕಾಣ್ಕೆಗೊಟ್ಟು ಕಣ್ಣಾಣೆಯೆ ಕಂಡವನೀಂದ್ರದರ್ಶನೋತ್ಕರ್ಷಮುನೀಂದ್ರ ದರ್ಶನೋತ್ಕರ್ಷ ಹರ್ಷದೊಳ್ ಬೆರಸೆ ಧರಿಸಲಾಱದೆ ಬಳ್ಕುವಂತೆ ಮೊಕ್ಕಳಮೆಱಗಿ ಕೆಯ್ಮುಗಿದು ನಿಂದು

ಪದತಳಕಾಂತಿಗಳ್ ಪೊರೆಯೆ ಪಲ್ಲವಿಸಿರ್ದುದೊ ಮೇಣ್ ನಖಾಂಶುವಿಂ
ಪುದಿದರೆ ಪೂತುದೋ ನಿಜದಯಾರಸ ಪೂರಮ ಪಾಯೆ ಪೆರ್ಚಿ ಪೊಂ
ಗಿದುದೊ ಲತಾವನೀರುಹಮೆನಲ್ಕೆಲೆ ದೇವರ ದೇವ ನಂದನಾ
ಭ್ಯುದಯದ ಕಾರಣಂ ಗಗನದಿಂದಿಳಿತಂದನದೊರ್ವ ಚಾರಣಂ ೧೬೦

ವ: ಎಂದಾನಂದರಸ ವೀಚೀವಿಚಾರಿತ ಪ್ರಚೇತಂ ಪ್ರೀತಿಯಿಂ ಪ್ರಚೇತನೆಂಬ ದಿಂಗಬರ ಮುನೀಂದ್ರನ ಬರಮನಱಿಪೆ ನೃಪೇಂದ್ರಂ ನಂದನಾಭ್ಯುದಯ ವಾಕ್ಯ ಪದಾವಕರ್ಣನ ಪ್ರಸನ್ನ ಮುಖನಖಂಡ ಮಣಿಮಂಡನ ಮರೀಚಿ ವಿಚಿತ್ರಿತ ನಿಖಿಲ ದಿಗ್ಮುಖಂ

ಸುಖಾಸೀನಂ ನಡೆದೇಳಡಿಯಂ ನಡೆದು ಮುನೀಂದ್ರನಿರ್ದ ದಿಗ್ಮುಖಾಭಿಮುಖನಾಗಿ ಕೆಯ್ಗಳಂ ಮುಗಿದು ಭಕ್ತಿಭರದಿಂ ಹರಿಸಿದಂತೆ ಮಗುಳೆ ಕುಳ್ಳಿರ್ದು

ಮನದೊಳ್ ನಂದನಲಾಭ ಚಿಂತೆಗನುಕೂಲಂ ತಾನೆನಲ್ ತಂದನಂ
ದನ ನಾನಾ ಫಲಪುಷ್ಪಮಂ ತಳೆದುಕೊಂಡುತ್ಸಾಹದೊಳ್ ತಾನೆ ಮಾ
ನಿನಿಗಾನಂದಮನಿತ್ತು ಕೂರ್ತು ಕರೆದಿತ್ತಂ ಚಿತ್ತಮಾರ್ವಂತು ನಂ
ದನ ಪಾಲಂಗಭಿವಾಂಛಿತಾರ್ಥ ಫಲಮಂ ಸನ್ಮಾನಜನ್ಮಾಲಯಂ ೧೬೧

ಪುಳಕಾಂಕೂರಂಗಳಂ ಪೂರಿಸಿ ನವ ಸುಮನೋವೃದ್ಧಿಯಂ ಬೇಗದಿಂ ತ
ನ್ನೊಳಮುದ್ಯಾನಾವನೀಜಾತದೊಳಮೊದವಿರಲ್ ಮಾಡಿದಾತ್ಮಪ್ರಭಾವೋ
ಜ್ವಳಯೋಗೀಂದ್ರ ಕ್ರಮಾಂಭೋರುಹದೊಳೆ ಱುವಾಸಕ್ತಿಯಿಂದಾ
ದಲಂಪಂ ತಳೆದಿರ್ದಂ ವಿಶ್ವವಿದ್ಯಾಸಮುದಯ ಸುಮನಸ್ಸಂಚರಂ ಚಂಚರೀಕಂ ೧೬೨

ಗದ್ಯ॥ ಇದು ಸಕಲ ಸುಕವಿಜನ ಮನಸ್ಸುಧಾಕರಕಾಂತ ದ್ರವೀ ಕರಣ ಕಾರಣ ಕರ್ಣಾಟಕಕವಿತಾ ಕಲಾವಿಲಾಸವಿಧುಮದು ಮಧುರ ಕವೀಂದ್ರ ನಿರ್ಮಿತಮಪ್ಪ ಧರ್ಮನಾಥ ಪುರಾಣದೊಳ್ ಪುತ್ರದೋಹಳವರ್ಣನಂ **ತೃತೀಯಾಶ್ವಾಸಂ.**

ಚತುರ್ಥಾಶ್ವಾಸಂ

ಶ್ರೀಪತಿ ಮುದಮೊದವೆ ತಪ
ಶ್ರೀಪತಿಯಂ ಕಾಣ್ಬ ನಿಯಮಮಂ ಪ್ರಿಯದಿಂ
ತನ್ನೋಪಳ್ಗೆ ನಲ್ಮೆ ನೆಗಳೆ ನಿ
ರೂಪಿಸಿದಂ ಸರಸಕವಿ ರಸಾಲವಸಂತಂ ೧

ಸುದತೀ ಸನ್ಮುನಿಪಾಗಮ ಶ್ರವಣಮೆಂಬೀಧಾತ್ರಿಯೊಳ್ ನಂದನಾ
ಭ್ಯುದಯ ವ್ಯಾಪ್ತಿಯನಿತ್ತುದೆಂದೊಡೆಮಗಿನ್ನೋರಂತೆ ಸಂತಾನ ಸ
ಮ್ಮದ ಲೀಲಾವಿಭವಂ ಪೊದಳ್ವುದರಿದೇ ತತ್ಪಾದ ಪೂಜಾಪ್ರಸಾ
ದದಿನೆಂದುತ್ಸುಕಚಿತ್ತನಾಗಳೆಸೆದಂ ಸೌಭಾಗ್ಯಸಂಕ್ರಂದನಂ ೨

ವ: ಅಂತು ಸಂತಸದಂತನೆಯ್ದಿ ಮೆಯ್ವೆಗೆಯದುತ್ಸಾಹಭೇರಿಯಂ ಪೊಯ್ಸಿದಾಗಳ್

ಮದಧಾರಾಸಾರದಿಂ ಸಿಂಪಿಸುಗೆ ಕರಿಧರಾಚಕ್ರಮಂ ವಾಜಿಗಳ್ ಸ
ಮ್ಮದ ಲಾಲಾಪೂರದಿಂ ಪೂವಲಿಗೆದಱುಗೆ ರಾಜನ್ಯಚಿಹ್ನಧ್ವಜಂ ಬೇ
ಗದೆ ಬಾನಿಂಬೆಯ್ದುದೆಂಬಂತೊಸಗೆ ಗುಡಿಗಳಂ ಬಂದು ಪೊತ್ತೆತ್ತುಗೆಂಬಂ
ದದಿನಾಯ್ತಾಗಳ್ ಮುನೀಂದ್ರಾಭ್ಯುಪಗಮನ ಸಮುದ್ಭೂತ ಭೇರೀನಿನಾದಂ ೩

ಆನಕಘನ ನಿನದಂ ಪರ
ಮಾನಂದಮನೀಯೆ ನಲಿದು ನರ್ತಿಸೆ ನಿಜ ಪೌ
ರಾನೀಕ ಕೇಕಿ ವೃಂದಮ
ದೇನೆಸೆದುದೋ ನೃಪಸುಚಿತ್ತಚಾತಕಚಕ್ರಂ

ವ: ಅಂತು ಘನಸಮಯದಂತೆ ಮುನಿಸಮಯಂ ಸಕಲ ಜನೋತ್ಸವಕಾರಿಯಾದ ಸಮಯದೊಳ್

ಕಾಂಚನ ಪತಾಕೆ ಮಿಱುಗುವ
ಮಿಂಚೆನೆ ಮಣಿದೋರಣಾಳಿ ಸುರಧನುವೆನೆ ಕಾ

ರಂಚೆಲ್ಲವಾಡಿದುದು ಕುಸು
ಮಂ ಚೆಲ್ಲಿದ್ ಕರಮೆನೆ ಕರಂ ರತ್ನಪುರಂ ೫

ವ: ಮತ್ತಮಾ ಸಮಯದೊಳ್ ಶುಂಡಾವಿಕಾರಿಗಳಾಗಿಯುಂ ದಾನೋನ್ಮುಖಂಗಳಾಗಿ ಬರ್ಪ ಮದಕರಿಗಳಂ ಮಾರ್ಗೋಲ್ಲಂಘನಮನಂಗೀಕರಿಸಿಯುಂ ಪವನಾಚಾರದಿಂ ಪರಿದುಬರ್ಪ ತುರಗಂಗಳಂ ಪಳಿಗೊಳಗಾಗಿಯುಂ ಸ್ವಧರ್ಮ ಚಕ್ರಾನುವರ್ತನಮಂ ಬಿಡದೆ ನಡೆತರ್ಪ ವರೂಥಂಗಳಂ ಜೀವಾಕರ್ಷಣೋದ್ಯೋಗಾನು ರಾಗಿಗಳಾಗಿಯುಂ ಧರ್ಮಹಸ್ತ ಪ್ರಶಸ್ತರಾಗಿ ಬರ್ಪ ಕಾಲಾಳ್ಗಳಂ ಕಂಡು ಮನಂಗೊಂಡಾ ನಗರಲಕ್ಷ್ಮೀ ಸಂಯಮಿ ಸಾರ್ವಭೌಮ ನಾನಾಸಾಮರ್ಥ್ಯಮಂ ಸಾಱುವಂತೆ ದೆಸೆದೆಸೆಗೆ ಪಸರಿಸುವ ಸನ್ನೆವಱಿಯ ದನಿಯಂ ಕೇಳ್ದು ಹರ್ಷರಸದಿಂ ಪೊಂಗಿ ಪೊರೆಯೇಱಿದ ತನುಗೆ ತಂತಮ್ಮ ಮನೆಗಳ್ತೆಱಪೆಯ್ದವೆಂಬತೆ ಪೊಱಮಡುವ ಪುರಜನದ ಕಳಕಳಮೆ ಕರ್ಣಾಭರಣಮಾಗೆ

ಪರಿಮಳಲೋಲ ಮತ್ತಮಧುಪಾಳಿಯ ಕಾಲ್ದುಳಿಪಕ್ಕೆ ಮೆಲ್ಲನೋ
ಸರಿಸುವ ಪುಷ್ಪಮಂಜರಿಯನೊಯ್ಯನೆ ಕೂರ್ತನುಗೆಯ್ವ ಕಾಮಿನೀ
ಕರತಳರಾಗಮಾಗಳೊಸೆದಿರ್ಕುವ ಪಲ್ಲವ ಕರ್ಣಪೂರದಂ
ತಿರೆ ಹರಿಪೀಠತಳ್ಪತಳದಿಂದಿಳಿದಿರ್ದನಿಳಾಧಿನಾಯಕಂ

ವ: ಅಂತು ಸಿಂಹಾಸನಾವತರಣ ಸಮಯ ಸಂಚಲನ ಕಿಂಚಿದವಗಳಿತ ಮುನಿ ನಿವೇದಕೋಪನೀತ ನೂತನ ನವಕುಸುಮಮಂಜರೀ ಕರ್ಣಪೂರಂ ಬಿರುದ ಕಟಕ ಪಟುನಿನಾದ ದ್ವಿಗುಣಿತ ಕುಸುಮೋಪಹಾರಲೀನ ಮಧುಕರ ಝುಂಕಾರಂ ಭೂಷಣ ಮಣಿಮರೀಚಿ ಮಂಜರೀಕ ಮಣಿಮಂಟಪ ಮರಕತಸ್ತಂಭಂ ಸ್ತಂಭೇರಮಗತಿಯಿ ನೊಯ್ಯನೊಯ್ಯನೆ ಮೆಯ್ವಳಿಯ ನೆಳಲಂತೆ ಬರ್ಪ ಕಾಂತೆಯ ಕರದೊಳ್ ಕರಮ ತಳ್ಕಿಕ್ಕಿ ಬಂದು ನಿಕೇತನದ್ವಾರ ದೇಶಮನಲಂಕರಿಸಿದಾಗಳ್ ೬

ತೊಲಗದೆ ತಮ್ಮತಮ್ಮ ಕೆಲಸಕ್ಕಿದಿರುಂ ಬಳಿವಾಯ್ದು ಬರ್ಪ ಕೋ
ಮಲೆಯರ ಹಾರದಿಂ ಸುರಿವ ಮುತ್ತಿನ ಸೋರ್ಮುಡಿಯಂತೆ ಸೂಸುವೊ
ಳ್ಮಲರ ಕುರುಳ್ಗಳಿಂದುಗುವ ಕತ್ತುರಿಯುಬ್ಬರಮುರ್ವೆ ಪರ್ವಿ ಬ
ರ್ಪಲಘು ನಿತಂಬೆಯರ್ಗಯಸಮಂ ಪಡೆದತ್ತು ನರೇಂದ್ರಮಂದಿರಂ ೭

ವ: ಅಂತು ಬಂಬಲಂ ತುಱುಗಲಂಗೊಂಡು ಬಂದು ನೆರೆದ ಪರಿಚಾರಿಕೆಯರೊಳಗೊರ್ವಳ್

ಇಂದುನಿಭಾನನೆ ಪೂಜಾ
ಚಂದನಮೆಲರಲೆಯೆ ನಾಡೆ ಪದನಾಱುಗುಮೆಂ
ದಂದಗಿದು ಮುಚ್ಚಿಪಿಡಿದೆ
ಯ್ತಂದಳ್ ಚಂದ್ರಕಾಂತಮಣಿಭಾಜನಮಂ ೮

ವ: ಮತ್ತೊರ್ವಳ್

ತೊಲಗದೆ ಪೊಸಕುಸುಮದ ಮಿಾ
ಸಲ ಕಂಪಿಂಗಳಿಗಳಳಿಪಿ ಘೋರನೆ ಬಂದೆಂ
ಜಲಿಸುಗುಮೆಂದಾಂತಳ್ ಕೋ
ಮಲ ಚಂಪಕಗಂಧಿಮಾಲಿಕಾ ಪಟಲಿಕೆಯಂ ೯

ವ: ಮತ್ತಮೊರ್ವಳ್

ಬಿಸ ಶಕಲ ಶಂಕೆಯಿಂದೀ
ಕ್ಷಿಸಲಂಚೆಗಳಕ್ಕಿಯಂ ಪಯೋಧರಭಾರಾ
ಲಸೆ ಮಿಸುಪಲರ್ಗಣ್ಮೆಂಚೆಂ
ಮುಸುಕಿವಳಕ್ಷತ ಬಳಕ್ಷಮಣಿಭಾಜನಮಂ ೧೦

ಘಳಿಲನಿಳಿದೆಳಸಿ ಪಾಯ್ವರ
ಗಿಳಿಗಿಂಮುಟಿ ತೊಂಡೆವಣ್ಣಸಿತ್ತಮಳಫಳಾ
ವಳಿಯ ಪಡಲಿಗೆಯನೊರ್ವಳ್
ತಳಿದಳ್ ತಳಿದಂತೆ ಕಲ್ಪಲತೆ ಫಳಭರಮಂ ೧೧

ಭಾವಿಸೆ ವರೋರುವೊರ್ವಳ್
ತೀವಿದ ಪೊಂಬಾಳಿವಣ್ಣ ಬಿಡ್ಗೊಗ್ನೆಯಂ ತಾ
ಳ್ದೋವೋವೆಡೆಯಾಡುವವರಂ
ಭಾವಿಭವಮನಲ್ಲಿ ಪಡೆದಳೆಲ್ಲರ ಮನದೊಳ್ ೧೨

ಸನ್ನುತ ಪುಷ್ಪಮಾಲೆ ನವಚಂದನಮಕ್ಷತಮಕ್ಷತಂ ರಸೋ
ತ್ಪನ್ನಫಲಂ ಪ್ರಸನ್ನ ಮಣಿದೀಪಿಕೆ ಧೂಪಘಟಂ ಘಟಾಂಚಲ
ಚ್ಛನ್ನ ಪವಿತ್ರವಾರಿಕಳಶಂ ಕರದೊಳ್ ಕರಮೊಪ್ಪಿ ರೂಪಸಂ
ಪನ್ನೆಯರೇಂ ಮನಂಬಿಡಿದರೋ ಕಡುಚೆನ್ನೆಯರಾ ನರೇಂದ್ರನಾ ೧೩

ವ: ಅಂತು ಸಮುಚಿತ ಸಪರ್ಯಾ ಪರ್ಯಾಪ್ತ ಪಾವನದ್ರವ್ಯಂಗಳಂ ಮನಂಗೊಳೆ ತಳೆದು ಬರ್ಪ ವಿಳಾಸಿನೀಜನದ ವಿಳಾಸಮಂ ಸುಚರಿತ ಪುರಂದರನಾನಂದದಿಂ ನೋಡುವಾಗಳ್

ಮದಧಾರಾಸಾರದಿಂ ಧಾರಿಣಿಯನಣೆಯರಂ ನಾಂದುತಂದಂತಧಾವ
ಳ್ಯದ ಮಿಂಚೆಂದೆಲ್ಲದಿಕ್ಕಂ ತೊಳಗೆ ಬೆಳಗುತುಂ ಬೇಗದಿಂ ಬೃಂಹಿತಾಧ್ವಾ
ನದೆ ಬರ್ಹಿವ್ರಾತಮಂ ಪ್ರೀತಿಯೊಳೆ ಕುಣಿಯಿಸುತ್ತುಂ ಕರಂ ಕಾರಕಾಳಾಂ
ಬುದಮೆಂಬೊಂದಂದದಿಂ ಬಂದುದು ಸಮುದಿತ ನೀಲಾಚಲಾಭಂ ಮದೇಭಂ ೧೪

ಇದಿರ್ಗೊಳ್ಳೇಳೆಲೆ ಭೂಮಿಪಾಲಮುನಿಪಾಲ ಪ್ರಖ್ಯನಂ ಮುಖ್ಯಸಂ
ಪದದಿಂದೆಂದು ಹಿತಂ ಪುರೋಹಿತನಲಂಪಿಂ ಬಂದವೊಲ್ ಬಂದು ಕ
ಟ್ಟಿದಿರೊಳ್ ನಿಂದುದು ಭದ್ರಲಕ್ಷಣನುದಂಚತ್ಪೂರ್ಣ ಕುಂಭಂ ಮಹೋ
ನ್ಮದ ಗಂಧಾಕ್ಷತ ಹಸ್ತನುತ್ತಮಮಣಿ ಶ್ರೀಕಂದರಂ ಮಂದರಂ ೧೫

ಚಟುಲಮಣಿ ಕಿಂಕಿಣೀಪರಿ
ಘಟಿತ ನಿಜಾಯೋಗಮಾಗಳೆಸೆದುದು ಮದ ಸಂ
ಕಟತಟಯುಗ ರಟದಳಿ
ಪಟಲಂ ಸಿಂಧೂರಪೂರ ಜಟಿಲಿತ ನಿಟಿಲಂ ೧೬

ವ: ಅಂತು ಪಣ್ಣಿ ಬಂದ ಪಟ್ಟದಾನೆಯಂ ನಿರೀಕ್ಷಿಸಿ ನರೇಂದ್ರಂ ಕೆಲದ ಕವೀಂದ್ರನ ಮೊಗಮಂ ನೋಡಲಾತಂ

ಚಿತ್ತೈಸೀ ಪುರವಾರ್ಧಿಯೊ
ಳುತ್ತಮ ಲಾವಣ್ಯರಸಮನಂಬುಧರಂ ಮೆ
ಯ್ವೆತ್ತಮರಪುರಿಗೆ ಭರದಿಂ
ಪೊತ್ತಡಕುವ ಕುಂಭಮೆನಿಪುದೀ ಗಜಕುಂಭಂ ೧೭

ಪುರದೆಳೆವೆಂಡಿರೊಳ್ ಸೆಣಸದತ್ತಲೆ ಪಾಱಿಮೆನುತ್ತ ಮಿಾಱಿದ
ಚ್ಚರಸೆಯರಂ ಜಸಂಗಿಡೆ ವಿಡಂಬಿಸಿ ಬೃಂಹಿತನಾದದಿಂ ನಿರಾ
ಕರಿಸುತೆ ನೂಂಕುವಂಬರ ವಧೂಟಿಯ ಕೆಂದಳದಂತೆ ಸಿಂಧುರಂ
ಬೊರೆದುರು ಕರ್ಣತಾಳಮೆಸೆದತ್ತರಿಭಂಜನ ಕುಂಜರೇಂದ್ರನಾ ೧೮

ರನ್ನದ ಮೊಗರಂಬಂ ಪೆಡೆ
ಯನ್ನೆಟ್ಟನೆ ಪೋಲೆ ಚೆಲ್ವುಮಡಸಿದ ಭರಿಕೈ
ಪನ್ನಗಪತಿಯಿಂದಮನೇಂ
ಕನ್ನಡಿಸಿದುದೋ ಕರೀಂದ್ರಚೂಡಾಮಣಿಯಾ ೧೯

ಮಂಡಳಿಸಿ ಮುಂದೆ ಮೊಳಗುವ
ಡಿಂಡಿಮರವಮೊಗೆಯಲಗಿದು ನೆಗಪಿದ ಶುಂಡಾ
ದಂಡಮಿದಾಖಂಡಲ ವೇ
ತಂಡಮನೆಳೆವಂತಿರೆಸೆದುದೀ ಗಜಪತಿಯಾ ೨೦

ತೊಡರ್ದರಿಗಳುಳ್ಳ ರಸಮಂ
ಕುಡಿದವರಡಿಗೆಱಗಿ ಮತ್ತೆ ಕರುಣೆಸಿ ಬೇಗಂ

ಕಡೆವಾಯಿಂದುಗುಳ್ವಂತಿರೆ
ನಿಡುನಿಗ್ಗಮಮೆಸೆದುದಗ್ಗಳಂ ಮದಕರಿಯಾ ೨೧

ನೀಮೆಂಟುಂ ತಳೆದವನಿಯ
ನೀ ಮಹೀಪತಿ ತಳೆಯ ತಳೆವನೀತನನೆಂದಾ
ಶಾಮದ ಕರಿಯಂ ನಗುವವೊ
ಲೀಮಾತುಜ್ಜಳಿಪುವಿದಱ ದಂತಪ್ರಭೆಗಳ್ ೨೨

ಪಿಂಗದೆ ಸೋರ್ವ ಕಪೋಳತ
ಳಂಗಳ ಮದಧಾರೆಗೆಱಗಿದಳಿಮಾಳಿಕೆ ಚೆ
ಲ್ವಿಂಗೆಡೆಯಾದುದು ಪೀಲಿಯ
ತೊಂಗಲ ನೆಳಲಿಕ್ಕಿದಂದದಿಂದಿಭಪತಿಯಾ ೨೩

ಱುವ ಸುರೇಂದ್ರನಂದನದ ಪೂವನುದುರ್ಚಿತೊ ಮೇಣಡರ್ತುರ್ಜ ಬಾಂ
ದೊಱೆಯ ತರಂಗಮಂ ತೆರಳೆ ತೂಳ್ದುದೋ ಸುಂಡಿಲನೆತ್ತಿ ತಾರೆಯಂ
ತಿಱಿದುದೋ ಪೇಳಿಮೆಂಬಿನೆಗಮುಣ್ಮುವ ಪುಷ್ಕರವಾತಘಾತದಿಂ
ಪಱಿವಱಿಯಾದ ಸೀವರಪಿಳಾವರ ತೀವಿದುದೀ ಮದೇಭದಾ ೨೪

ಮಣಿಘಂಟಾರವದಿಂ ಸದಾಳಿಯನಲಂಪಿಂ ತನ್ನ ದಾನಕ್ಕೆ ತಿಂ
ತಿಣಿಯಪ್ಪಂತಿರೆ ಬರ್ಪುದೆಂದು ಕರೆವಂತುದ್ಯತ್ಕರಂ ಭದ್ರಲ
ಕ್ಷಣಸುತ್ತಾಳ ಲಲಾಟಪಟ್ಟನಧಿಕ ಶ್ರೀಕಾರಣಂ ಪಟ್ಟವಾ
ರಣಮೇಂ ಪೋಲ್ತುದೊ ನಿನ್ನನುನ್ನತ ಧರಾಧೌರೇಯ ದಿಕ್ಕುಂಜರಾ ೨೫

ವ: ಎಂದನವಸರ ಭೀತಿಯಿಂದಂ ತಾಂತುವೇಳ್ದ ಕವಿತಾಕಲಾವಿಳಾಸನ ನಶೇಷ ಮಣಿಭೂಷಣ ಕನಕ ಕರ್ಪೂರ ತಾಂಬೂಲಾದಿ ಸನ್ಮಾನದಿಂ ಮನ್ನಿಸಿ

ರದನದೊಳಿಟ್ಟ ಪೊಂಬಳೆ ತೊಂಡಕೆಯ ಚಾಮರಮೋದಮಾದ ರ
ನ್ನದ ಮೊಗರಂಬವಂಬರಮನಳ್ಕಿಱಿವಗ್ರಪತಾಕೆ ಪಲ್ಲವಂ
ಪುದಿದಮಳಾತಪತ್ರಮಳವಟ್ಟಿರೆ ನೆಟ್ಟನೆ ಪಣ್ಣಿ ಬಂದ ಪ
ಟ್ಟದ ಕರಿಯಂ ನರೇಂದ್ರನೊಸೆದೇಱಿದನೇಱೆ ಮುದಂ ಮುಖಾಬ್ಜಮಂ ೨೬

ವ: ಅಂತು ಸಚಿವೆರಸು ಸಂಕ್ರಂದನನೈರಾವತಮನೇಱುವಂತೆ ಸುವ್ರತಾದೇವಿವೆರಸು ಮಹಾಸೇನ ಮಂಡಳೇಶ್ವರನಾನೆಯನೇಱಿದಾಗಳ್

ಉದಯಾದ್ರೀಂದ್ರವಿಭೇಂದ್ರಮಾ ವಸುಮತೀಂದ್ರಂ ವಾಸವೇಂದ್ರಂ ಸಮಂ
ತುದಿತೋದ್ಯತ್ಪ್ರಭೆ ಸುವ್ರತಾವನಿತೆಯೆಂದಂದೇನುಮಾಶ್ಚರ್ಯಮಾ

ಗದೆ ದಲ್ ದರ್ಶನಮಾತ್ರದಿಂ ಕುವಲಯಕ್ಕಾನಂದಮುರ್ವೀಳೆ ಪ
ರ್ವಿದ ಭೂಪಾಲಕರಾಂಬುಜಂ ಮುಗಿದುದಕ್ಕಾಶ್ಚರ್ಯಮಾಯ್ತಗ್ಗಳಂ ೨೭

ಪಸರಿಸೆ ಮೆಯ್ಯೊಳ್ ಸುತ್ತಲ್
ಪ್ರಸಾದಮಂ ಪಾರ್ವ ನೃಪರ ಕಣ್ಗಳ್ ಕಣ್ಣೊ
ಳ್ವಸಿಯಳ್ ಶಚಿಯವೊಲಿರೆ ಪಾ
ಲಿಸಿದಂ ಮನುಜೇಂದ್ರನಿಂದ್ರಲೀಲಾಶ್ರೀಯಂ ೨೮

ಇದು ಚಿತ್ರಂ ಕಾರಕರ್ಗಳ್ತಲೆ ದಿನಮಣಿಯಂ ಪೊತ್ತುದೆಂಬನ್ನೆಗಂ ತೀ
ವಿದ ವಜ್ರಾಕಲ್ಪಕಾಂತಪ್ರಭೆ ಪಸರಿಸೆ ರಾಜೇಂದ್ರನಾ ಸಿಂಧುಸ್ಕಂ
ಧದೊಳೊಪ್ಪಂಬೆತ್ತಿರಲ್ ಮತ್ತಮಮ ಸಮನಿಸಿತ್ತಿತ್ತ ಪೂರ್ಣೇಂದುವೆಂಬಂ
ದದೆ ಮೌಳಿಪ್ರಾಂತದೊಳ್ ಪಜ್ಜಳಿಸಿ ಪೊಳೆದುದೂರ್ಜಾಭ್ರಶುಭ್ರಾತಪತ್ರಂ ೨೯

ತನಗಂ ತಳ್ತುದು ರಾಜನಾಮಮಮರ್ದೆಂಬೀ ಗರ್ವದಿಂ ಕೊರ್ವಿ ಕಾಂ
ಚನ ದಂಡಕ್ಕೊಳಗಾಗಿ ತನ್ನೆರ್ದೆಯ ಕಂದಂ ಬಿಟ್ಟು ಮತ್ತೀಗಳೊ
ಯ್ಯನೆ ಪೂರ್ಣೇಂದು ನೃಪೇಂದ್ರನಂ ಪ್ರತಿದಿನಂ ಪೋದತ್ತ ಪೋದತ್ತ ಬೆ
ನ್ನನೆ ಬಂದೋಲಗಿಪಂದಮಾಯ್ತು ಧವಳಚ್ಛತ್ರಂ ಧರಾಕಾಂತನಾ ೩೦

ಚೆಂಬೊಂಗಳಸದ ಬೆಳಗುಗ
ಳಂಬರದೊಳ್ ಮಿಱುಗೆ ಮಿಂಚಿನಂದದೆ ಮೇಘಾ
ಡಂಬರಮನಾಗಳಲ್ಲಿ ವಿ
ಡಂಬಿಸಿದುದು ಮೇಘಡಂಬರಂ ಭೂಭುಜನಾ ೩೧

ವಳಯಾಳೀರವಮಿಂಚರಂಬೊಲೊಗೆಯಲ್ ತಳ್ತಂಚೆಗಳ್ ತೀರಸಂ
ಚಳವಲ್ಯಂಚಳದಿಂದಿಳೇಶ್ವರ ತಿರೀಟೋದ್ಯತ್ಪ್ರಭಾಪೂರನಿ
ರ್ಮಳ ಕಾಸಾರದೊಳಾಗಳಾಗಳೆಱಗುತ್ತಿರ್ದಪ್ಪವೆಂಬಂತೆ ಕ
ಣ್ಗೊಳಿಸುತ್ತಿರ್ದುವು ಚಾಮರಂ ಚತುರ ಕಾಂತಾಹಸ್ತ ಶಾಖಾಗ್ರದೊಳ್ ೩೨

ಇದು ಭೂಪಾಲ ವಿಲಾಸಮಲ್ತು ರತಿಯುಂ ಕದರ್ಪನುಂ ತಮ್ಮ ಸ
ಮ್ಮದದಿಂದಾನೆಯನೇಱಿ ಮಾಱಿ ವನಕೇಳೀಲೀಲೆಗೆಯ್ತಂದರಲ್ಲ
ಲ್ಲದೊಡೀ ಪುರ್ವಿನ ಕರ್ಪುವಿಲ್ಗಳಲರ್ಗಣ್ಣಚ್ಚಂಬುಗಳ್ ತಮ್ಮ ನ
ಚ್ಚಿನ ಕೈಗೈದುಗಳಾದ ಪೆಣ್ಬಡೆಯ ಪಿಂಡಾವೆತ್ತಣಿಂ ಬಂದುದೋ ೩೩

ಎಂಬ ಪೊಗಳ್ತೆಗೆ ಪಿರಿದುಮ
ಳುಂಬಮೆನಲ್ ಬಂದರಾಗಳಂತಃಪುರದಿಂ

ದಂಬುಜಮುಖಿಯರ್ ಕವಿವೆಳಿ
ದುಂಬಿಗಳೆರ್ದ ದಣಿಯೆ ತಮ್ಮ ತನುಪರಿಮಳದಿಂ ೩೪

ಎಳೆಮಿಂಚಿಂ ಪೂಳ್ತುಪುದಿದಂತೆ ಪೂಗಣೆಗಳಿಂ ಪೀಯೂಷದಿಂ
ತಳೆದಂತುತ್ಪಲಪತ್ರದಿಂ ಪೊದಸುವಂತಿಂದುಪ್ರಭಾಜಾಳದಿಂ
ದೊಳಕೆಯ್ವಂತಳಿಮಾಲೆಯಿಂ ಪ್ರಣಯದಿಂ ಪೊಯ್ವಂತೆ ತಂತಮ್ಮ ಕ
ಣ್ಬೆಳಗಿಂ ಬಾಸಣಿಸುತ್ತೆ ಬಂದುದಬಳಾನೀಕಂ ಮಹೀಕಾಂತನಾ ೩೫

ಇದು ಮೂಲೋಕಕ್ಕೆ ಕಣ್ಮಾಯಮನೊದವಿಪ ಕಾಮೇಂದ್ರಜಾಲಂ ದಲೆಂಬಂ
ದದೆ ಭೂಷಾಮಂಡಲಂ ಪೊಂಬಿಸಿಲನಸದಳಂ ಕೂಡೆ ಬಂಬಲ್ಗುರುಳ್ ಪ
ರ್ವಿದ ಮರ್ವಂ ಪೂಡೆ ಕಣ್ದಿಂಗಳ ತನಿವೆಳಗಂ ತೀಡೆ ಸೌರಂಭದಿಂ ಬಂ
ದುದು ಸೌಭಾಗ್ಯಸ್ಮಯಂ ವಿಸ್ಮಯರಸ ವಿಸರಾಲಂಬಮಾ ಸ್ತ್ರೀಕದಂಬಂ ೩೬

ವ: ಅಂತು ಬಂದ ಶುದ್ಧಾಂತಕಾಂತೆಯರ ಸಂದಣಿಸಿದಂದಳದ ಸುಖಾಸನ ದೋಜೆವಿಡಿಯ ಮುಂದೆ ಗೊಂದಣಿಸಿ ಜಡಿವ ಪಡಿಯ ಆರೊತ್ತೊತ್ತೆಗತ್ತತ್ತ ಸಾರ್ವ ಸಾಮಂತ ಮಂಡಳಿಕ ದಂಡನಾಥಯೂಥಮಂ ಸಸ್ಮಿತಾವಲೋಕನದಿನವಲೋಕಿಸು ತ್ತಮಪರಿಮಿತ ಪಿಛಾವಷ್ಟಂಭ ಪರಿತುಷ್ಟಂ ಪಾಠಕಪರಿಪಠಿತ ಬಿರಿದಂಕಮಾಲಾ ದ್ಯುತಿಯೆ ಮಣಿಮಂಡಲನಾಖಂಡಲ ವಿಲಾಸದಿಂ ರಣಮಂಡಲದ ಗೋಪುರಮಂ ಪೊಱಮಟ್ಟಾಗಳ್

ವಸುಧಾನಾಯಕನಗ್ರದೊಳ್ ವಿನುತ ತೇಜೋವಾರಣಂ ವಾರಣಂ
ವಿಸರದ್ವೀರರಸ ಪ್ರವಾಹ ಭರವಾಹಂ ವಾಹಮುದ್ಯೋಗಯೋ
ಗಸಹಾಯಾತ್ಮ ಮನೋರಥಂ ರಥಮುದಗ್ರೋತ್ಸಾಹ ಸಂಪತ್ತಿಪ
ತ್ತಿಸಮಂತೇನೆಸೆದಿರ್ದುದೋ ವಿಜಯಭೇರೀ ಭಾಂಕೃತಾಲಂಕೃತಂ ೩೭

ಆ ಚತುರಂಗ ಬಲಾಂಬುಧಿ
ವೀಚೀರವದಂತೆಮೊ...........
-ಚೆಸಿತೋ ಮಹಾಸೇನ ಮ
ಹಾಚಕ್ರೇಶ್ವರ........ಯಂ ೩೮

ಬಳಮಂ ಬಾಯ್ಬಲ್ಮೆಯಿಂ ಬಣ್ಣಿಪೊಡಹಿಪತಿಗಂ ತೀರದೇನೆಂಬೆನಾಂ ದಿ
ಕ್ಕುಳಮುತ್ಯಾಹೋಚ್ಚಳಚ್ಚಾಪಳ ತುರಗರಜೋರಾಜಿ ಪೂರ್ಣ ನಭೋಮಂ
ಡಳಮುದ್ದಂಡ ಧ್ವಜಾಗ್ರಾಂಚಳ ಪವನಪರಿಸ್ಪಂದ ಪೂರ್ಣಂ ಧರಿತ್ರೀ
ವಳಯಂ ವೇತಂಡಗಂಡಸ್ಥಳ ತಟವಿಗಳದ್ದಾನಪಾನೀಯ ಪೂರ್ಣಂ ೩೯

ವ: ಅಂತು ನೆರೆದ ಚತುರಂಗಮಂ ನೋಡಿ ನಿಜಾಂತರಂಗಮನಾನಂದಲಕ್ಷ್ಮಿಗೆ ನೃತ್ಯರಂಗಮಂ ಮಾಡಿ ವಿಜಯಾಂಗನಾ ಭುಜಂಗನಂಗಡಿವೀದಿಯೊಳ್ ನಡೆವಾಗಳ್

ಕಿವಿಯೊಳ್ ಪ್ರಸ್ಥಾನಶಂಖಧ್ವನಿ ಪಸರಿಸೆ ಬಂದಾ ಧರಾಧೀಶನಂ ನೋ
ಡುವ ಪೊಳ್ತಂ ಪಾರ್ದು ಚಿತ್ತೋದ್ಭವನೊಡನೆ ನಿಜಜ್ಯಾರವಂ ಮಾಡೆ ಮಾನಂ
ತವಿಲಾಗಳ್ ಬೇಗದಿಂ ಮೆಯ್ಮಱಿದು ತೊಱೆದು ಕಜ್ಜಂಗಳಂ ಪಜ್ಜೆ ಲಜ್ಜಾ
ಪ್ಲವಪಂಕಂ ಪ್ರಾಂತದೊಳ್ ಕೀಲಿಸಿ ನಡೆಗೆಟ್ಟತ್ತು ಕಾಂತಾಕದಂಬಂ ೪೦

ವ: ಅಂತು ಮೆಯ್ಮಱಿಯದೆ ಮೇಱಿದಪ್ಪಿ ಬರ್ಪಲ್ಲಿ

ಚಾಪಲ ಲೋಚನೆಯರ ಪದ
ನೂಪುರದುಡೆನೂಲ ಕಿಂಕಿಣಿಯ ಮಣಿಮಯ ಘಂ
ಟಾಪಟಲದ ಪಟುರವಮಾ
ಶಾಪತಿಗಳನೆಯ್ದೆ ಕಿವುಡುವಡಿಸಿತ್ತಾಗಳ್ ೪೧

ಪಾಣಿತಳಂಗಳಿಂ ಪದತಳಂಗಳಿನುಣ್ಮುವ ಕೆಂಪು ಕೂಡೆ ನಿ
ಶ್ರೇಣಿಯನಾಗಳಲ್ಲಿ ತಳಿರೇಱಿಸಲೇಱಿದ ಜವ್ವನಂ ಜನ
ಶ್ರೇಣಿಯ ಕಣ್ಗೆ ಕೌತುಕಮನೇಱಿಸಲೊರ್ವಳಪೂರ್ವರೂಪೆ ಗೀ
ರ್ವಾಣವಧೂಟಿಯಂತೆ ಮಣಿಮಾಡಮನೇ ವರಲ್ದು ನೋಡಿದಳ್ ೪೨

ವ: ಮತ್ತೊಂದು ಮಣಿಮಂದಿರದಿಂ ನವಯೌವನಕ್ರಾಂತೆಗಾದಶರಾಯುಮಂ ಕಂಡು

ನೇವುರದಿಂಚರಕ್ಕೆ ಕವಿವಂಚಿಗೆ ಹಾರಮನಿತ್ತಳಾನನ
ಕ್ಕೋವದೆ ಪಾಯ್ವ ಪಾಱಿಗೆ ಸೂಡಿದ ಮಾಲೆಯನಿತ್ತಳಿನ್ನಿವಳ್
ಭಾವಿಸೆ ತಮ್ಮತಮ್ಮ ಭರದಿಂ ನಡೆಯಂ ತಡೆವೀ ನಿತಂಬ ಶೋ
ಭಾವಲಯಕ್ಕಮಿಾ ನೆಗಳ್ದ ಪೆರ್ಮೊಲೆಗಂ ಪದೆದೇನನೀವಳೋ ೪೩

ವ: ಎಂದು ನುಡಿವ ಜಾಣರ ಜಾಣ್ಮೆಯಂ ಜಕ್ಕುಲಿಸುತ್ತೆ ಮತ್ತೊರ್ವಳ್

ಬಟ್ಟಮೊಲೆ ನೂಂಕೆ ಮೇಲುದ
ನುಟ್ಟುಡೆನೂಲ್ ಜಗುಳ್ದು ತೊಡರೆ ಕಾಲೊಳ್ ಕಡುಪಿಂ
ದಿಟ್ಟೆ ಪರಿತಂದಳರಸನ
ಕಟ್ಟಿದಿರ್ಗಂದಾನೆಗಾನೆ ಮೊಗಮಿಕ್ಕುವವೋಲ್ ೪೪

ವ: ಆ ಮದೋನ್ಮತ್ತೆಯೊಡನೆ ಮತ್ತೋರ್ವಳ್

ನಲಿವರಿಯೆ ಜಗುಳ್ದ ಮಣಿಮೇ
ಖಲೆ ಕಾಲಂ ತೊಡರೆ ನಡೆಯಲಱಿಯದೆ ನಿಡುಗ
ಣ್ಮಲರ್ವೆಳಗಿಂ ನೆಯ್ದಿಲ ಪೂ
ವಲಿಗೆದಱಿದಳಬಲೆ ನಾಡೆಯುಂ ನಾಲ್ದೆಸೆಯೊಳ್ ೪೫

ವ: ಆ ಪುಲ್ಲೆವಱಿಯಂತೆ ಬೆರ್ಚುವ ಪೊಚ್ಚಪೊಸಜವ್ವನೆಯಂ ಕಂಡು ಪೆಪ್ಪಳಿಸುತ್ತೆ

ಮದನಾಕಾರನನೀಕ್ಷಿಸಲ್ ಭರದಿನೊರ್ವಳ್ ಮುಗ್ಧೆ ಬರ್ಪಲ್ಲಿ ಮೇ
ಲುದನೀಡಾಡಿ ಪೊದಳ್ದ ಪೆರ್ಮೊಲೆಗಳಂ ಕಂಡಿತ್ತಬಾ ತನ್ವಿ ತೋ
ಱಿದಪೆಂ ಭೂಪನನೆಂದು ನಿಲ್ಕಿ ನಿಡುದೋಳಿಂದೆತ್ತಿ ಮತ್ತೆತ್ತಲಾ
ಱದವೋಲ್ ತನ್ನುರದೊಳ್ ತಗುಳ್ಚಿ ತಳೆದಂ ಸಮ್ಮೋಹದಿಂ ಕಾದಲಂ ೪೬

ವ: ಮತ್ತೊಂದಲಂಕಾರಮಂಟಪದಿಂ ತಳರ್ದು

ಭುವನಾಧೀಶನನೀಕ್ಷಿಪೊಂದು ತವಕಂ ಕೆಯ್ಗಣ್ಮೆ ಕೆಯ್ಗ್ಬವುತಾ
ರವನಿಕ್ಕಲ್ ಮಱಿದಂತದಂ ಪಿಡಿದು ಲಾವಣ್ಯಾಬ್ಧಿಯೊಳ್ ಕೂಡೆ ತೇಂ
ಕುವ ಲೋಕಂಗಳ ಕಣ್ಗಳೆಂಬ ಕುಡುಮೀನ್ಗಳ್ಗಾಗಳೆಯ್ತಂದು ತಾ
ಸವನೋರಂತಿರೆ ಬೀಸುವಂತೆಸೆವಳೊರ್ವಳ್ ವಿಭ್ರಮಾವೇಗದಿಂ ೪೮

ನೆಲೆಮಾಡಂಗಳೊಳೆತ್ತಿದುನ್ನತ ತವಂಗಶ್ರೇಣಿಯೊಳ್ ಸೌಧದಾ
ವಲಿಯೊಳ್ ಗೋಪುರದಗ್ರದೊಳ್ ಕೃತಕಭೂಭೃತ್ಕೂಟದೊಳ್ ದೇವತಾ
ನಿಲಯಾಗ್ರಸ್ಥಲದೊಳ್ ಸಮಗ್ರ ಗೃಹಲೀಲಾರಾಮದೊಳ್ ಪ್ರೇಮಮ
ಗ್ಗಲಿಸಲ್ ತಳ್ತೆಸೆಪಿಟ್ಟದೀಕ್ಷಿಸಿದರೋಪರ್ ಭೂಪಕಂದರ್ಪನಾ ೪೯

ವ: ಅಂತೆಲ್ಲೆಡೆಯೊಳ್ ತೆಲ್ಲಯಿಸಿ ತಳ್ತ ತಂತಮ್ಮ ನಲ್ಲರೆರ್ದೆ ತಲ್ಲಣಿಸಿ ಮಲ್ಲಳಿಗೊಳ್ವಿನಂ ಎಮೆಯಿಕ್ಕದೆ ನೋಡುವ ಗಾಡಿಕಾರ್ತಿಯರ ಚಿತ್ತಮಂ ಕವರ್ತೆಗೊಳುತ್ತಂ ಬರ್ಪ ಮನುಜ ಮಕರಧ್ವಜನ ಗಂಡಗಾಡಿಗೆ ಕಣ್ಸೋಲ್ತು

ನೆಲೆಮೊಲೆ ಮೇಲುದಂ ತೊಲಗೆ ನೂಂಕೆ ಬಳಲ್ಮುಡಿ ಮುಯ್ಯನಪ್ಪೆ ಕಾ
ದಲನೆರ್ದೆಯೊಳ್ ತಗುಳ್ದ ನಳಿತೋಳ್ ಕದಪಂ ಕೆಳೆಗೊಂಡ ಕೆಂದಳಂ
ತಲೆವಿಡಿಯಲ್ ತಗುಳ್ದಳಿಪನೊಯ್ಯನೆ ಕೆಯ್ಯೊಳೆ ಕೆಯ್ಯನಿಟ್ಟು ಬಾ
ಯೆಲೆ ಬೆಳರ್ವಾಯೊಳಚ್ಚಱಿಯೆ ನೋಡಿದಳೊರ್ವಳಪೂರ್ವ ರೂಪನಂ ೫೦

ವ: ಮತ್ತೊರ್ವಳೊಂದೆಡೆಯ ಸೌಧತಳದೊಳಿನಿಯನುಂ ತಾನುಂ ವಿಲಾಸದಿಂ ಕೂಡುತ್ತೆ ರಾಜಕಳಾವಿಳಾಸನ ವಿಳಾಸಮಂ ಕಂಡು ಕಣ್ಬೇಟದಿಂ ಪರವಶೆಯಾಗಿ

ತನು ಮರವಟ್ಟು ಜೋಲ್ದು ಕೆಲದೋಪನನೊಯ್ಯನೆ ನೆಮ್ಮಿಪೋಪ ಭೂ
ಪನನಿನಿಸೊಂದಿ ಬಂದಲೆವ ಕಮ್ಮೆಲರಿಂದಸು ತೀವಿ ಮತ್ತೆ ಕಂ
ಪನಮೊಡನುಣ್ಮೆ ಕೈತವದಿನಪ್ಪಿ ನಿಜಪ್ರಿಯನಂ ತಗುಳ್ಚಿ ಸೋಂ
ಕಿನ ನೆವನಂ ಲತಾಂಗಿ ಪುಸಿಯಂ ತಳೆದಳ್ ಪುಳಕಾಂಕುರಂಗಳಂ ೫೧

ವ: ಅಂತು ಸೊಬಗಿನ ಬಗೆಯಿಂದಬಲೆಯರನಾರ್ಪುಗೆಡಿಸುವ ಪೂರ್ವ ಕಂದರ್ಪನ ಮೇಲೆ ಕರ್ವುವಿಲ್ಲಂ ಕಳುಪಿದ ಕೂರಾಳ್ಗಳಂತೆ ತೆರಳದೆ

ಕೂಡೆ ಕಡಂಗಿ ನೆಯ್ದಿಲೆಸಳಿಂ ತಿರಿಪಿಟ್ಟರೊ ಬಳ್ಳಿಮಿಂಚಿನಿಂ
ಕೂಡಿದರೋ ಪುದುಂಗೊಳಿಸಿ ಪೆರ್ವಲೆಯಿಂ ಸರಪಂಜರಂಗಳಂ
ಮಾಡಿದರೋ ಮಡಲ್ತ ನನೆಯಂಬಿನೊಳೆಂಬಿನಮಿರ್ಕೆಲಂಗಳೊಳ್
ನೋಡಿದರಾ ಪುರಾಂಗನೆಯರಳ್ಕದೆ ನಿಳ್ಕಿ ಮಹೀಮನೋಜನಂ ೫೨

ವ: ಅಂತು ನೋಡುವಾಗಳ್

ದಂತಿಯ ಮೇಲೆ ಬೆಳ್ಗೊಡೆಯ ಮೇಲೆ ಪತಾಕೆಯ ಮೇಲೆ ಧಾರಿಣೀ
ಕಾಂತನಮೇಲೆ ಕೆಯ್ದಣಿವಿನಂ ಕಡೆಗಣ್ಮುವ ಹರ್ಷವಾರಿಯಿಂ
ದಂತವೆ ತೊಯ್ದು ತೊಯ್ದು ಪೊಸನೆಯ್ದಿಲೆಸಳ್ಗಳನೊಯ್ದು ಪೊಯ್ದರೆಂ
ಬಂತೆಸೆದಿರ್ದುವೀಕ್ಷಿಸುವ ಪೆಣ್ಗಳಪಾಂಗ ಮರೀಚಿಮಾಲೆಗಳ್ ೫೩

ಪುರದೆ ನೆಗಳ್ತೆವೆತ್ತ ನೆಲೆಮಾಡಮನೆಯ್ದಳೆವೆಂಡಿರಿಟ್ಟ ನೂ
ಪುರದುಲಿಯಿಂದೆ ನೂರ್ಮಡಿಸುತುಂ ಕಡೆಗೋಂಟೆಗೆ ಬಂದು ದಾಂಟಿ ಗೋ
ಪುರಮನಲಂಪು ಪೊಂಪುಳಿಸೆ ಕಾಮಿನಿಯಂ ನಡೆನೋಡಿ ತದ್ಬಹಿಃ
ಪುರದ ವಿಳಾಸಮಂ ಪಡೆದು ತೋಱಿದನೊಲ್ದು ನರೇಂದ್ರನಾಯಕಂ ೫೪

ಶಾಖಾನಗರೋಪವನಂ
ಶಾಖಾಯತ ಕರಮನೆತ್ತಿ ಮಾನಿನಿ ನೋಡೀ
ಲೇಖಾಪಗೆಯಂ ತೋರ್ಪುದ
ಲೇಖಾಗ್ರಮನೆಯ್ದೆ ಕೋಡಿಲಾಲಾಪರವಂ ೫೫

ಕಳಮ ವನಂಗಳ ಶುಕ ಕಳ
ಕಳಮವನಿಯನೆಯ್ದೆ ತೀವೆ ತೀವಿದ ಬೆಳೆಯಂ
ಗಳಗಳನೆ ಪೊಗಳ್ವ ದೆಸೆವೆ
ಣ್ಗಳ ಗಳರವದಂತೆ ಬಗೆಗಿದೇಂ ಸೊಗಯಿಪುದೋ ೫೬

ಸ್ವಾಗತಂ

ನಾರಿಕೇಳಮೆಸೆಗುಂ ಫಳಾಳಿಯಿಂ
ನಾರಿಕೇಳ ನೆಗಳ್ದೆಮ್ಮೊಳೊಪ್ಪುವಿ
ನ್ನೀರದಾವಸವಿ ನೋಡಿಮೆಂದಣಂ
ನೀರದಾವಳಿಗೆ ನೀಡುವಂದದಿಂ ೫೭

ಪೊಂಬಣ್ಣಮನೇಳಿಪ ಪೊಸ
ಪೊಂಬಣ್ಣಮರಾಧ್ರುಮಂ ಪುದುಂಗೊಳೆ ನೆಗಳ್ದಿ

ಜಂಬೀರಮನೆಯ್ದಿ ಮನೋ
ಜಂಬೀರಮನೆಯ್ದಿ ಪಾಡಿಪಂ ಪಱಮೆಗಳಿಂ ೫೮

ಕೆಂಬರಲ್ಗೆಣೆಮಾಡುವರೇ
ಕೆಂಬ ರಸಂಬಡೆದು ರಂಜಿಪೊಳ್ತಿತ್ತಿನ ದಾ
ಳಿಂಬದ ಬನದ ಶುಕಾಳಿಗ
ಳಿಂ ಬದವಣ್ಗೆಱಗಿ ತುಱುಗಿದುವು ನೋಡಬಲೇ ೫೯

ಪಲಸಿನ ತನಿವಣ್ಗಳ ಕಂ
ಪಲಸಿಕೆಯಂ ಪಡೆಯೆ ಪರಿದು ಮಧುಪಾವಳಿಗಳ್
ಕೆಲದಿಮ್ಮಾವಿನ ಬನದೊಳ್
ಕೆಲದಿಂದೀಂಟಿದುವದೆಸುವ ಕುಸುಮಾಸವಮಂ ೬೦

ಕಾವನೆ ಕಡುಪಿಂ ತಂಮಂ
ಕಾವನೆನಲ್ ಕೊರ್ವಿ ಕೊಂಬುಗೊಂಡು ಮಡಲ್ತಿ
ಮ್ಮಾವುಗಳಂ ವಿರಹಿಗಳ
ಮ್ಮಾವುಳೆಂದಲ್ಲಿ ಬೆಚ್ಚುವರ್ ಮೃಗನಯನೇ ೬೧

ತರಲಂಬಿಂಗಿದಱವೊಲಿಂ
ತರಲಂ ಬಿಂಕದೊಳೆ ತಳೆದುದಾವುದೆನುತ್ತೈ
ಸರಲನತಿಪ್ರಿಯದಿಂ ಕೇ
ಸರ ಲಲಿತ ಸ್ತಬಕಮಂ ಮನಂಗೊಳೆ ನೋಳ್ಪಂ ೬೨

ಮಂಗಳಮೆನೆ ಬನದೊಳ್ ಕಾ
ಮಂಗಳವಂ ಕುಡುವ ತಿಲಕಮಲೆದಲರ್ಗುಡಿಯಿಂ
ತಿಂಗಳ ತನಿವೆಳಗಂ ಮ
ತ್ತಿಂಗಳದಂತೇಕೆ ಸುಡುವುದೋ ವಿರಹಿಗಳಂ ೬೩

ಪಗೆಗೊಂಡು ಬಿಸುಟು ಪೊಸ ಸಂ
ಪಗೆಗಳನಾಱಡಿಯ ಪಾಱುದುಂಬಿಗಳೆಮ್ಮ
ಲ್ಲಿಗೆ ಬಂದುವೆಂದವಂ ಮ
ಲ್ಲಿಗೆ ನಗುವಂತಿರೆ ಲತಾಂಗಿ ಬಿರಿಮೊಗ್ಗೆಗಳಿಂ ೬೪

ಕಾದಲರಂದದಿನಳಿಗಳ್
ಕಾದಲರಂ ಮುತ್ತಿ ಮುಸುಱಿಕೊಂಡಿರ್ದೊಡಮೀ

ಪಾದರಿಯ ಪಾಯ್ವ ಮೆಯ್ಗಂ
ಪಾದರಿಸಲ್ ತಕ್ಕುದಾಯ್ತು ನೋಡಬ್ಜಮುಖೀ ೬೫

ತೀರದ ಚೆಲ್ವಾವರಿಸಲ್
ತೀರದಳಲ್ ಮಲ್ಲಿಕಾದಿ ವಲ್ಲರಿಯಿಂದೀ
ಸಾರಸವನಮೇನೆಸೆದುದೊ
ಸಾರಸ ಸರಸಾರವಾವೃತಾಶಾವಲಯಂ ೬೬

ತಾಮರೆ ಪರಿಕಿಸೆ ಚೆಲ್ವಿಂ
ತಾಮರೆಯಾಗಿರ್ದುಮಿರುಳುಮಲರ್ವೀ ಮೊಗದೊಳ್
ಕಾಮಿನಿ ಸೆಣಸುವವಕಟಂ
ಕಾಮಿನಿ ತಕ್ಕಱಿಯವೇ ನಿಜಾಭ್ಯಂತರಮಂ ೬೭

ನವನಳಿನಾನನೆ ಕೊಳಗಳ
ನವನಲಸದೆ ಬಳಸಿ ತಳೆದು ತುಂತುರ್ವನಿಯಿಂ
ಪವನನಿದೆ ಬಂದುದೀಗಳ್
ಪವನ ನವಪ್ರಸವ ಪರಿಮಳಾಮೋದಭರಂ ೬೮

ಸರ್ವರ್ತುಕಮೆನುತೋಲವಿಂ
ಸರ್ವರ್ತುತಿಸಲ್ಕೆ ಪೊಕ್ಕು ಬನಮಂ ಸವಿವೇ
ಕರ್ವಿನಯದೆ ಜಿನಮುನಿಗಳ್
ಕರ್ವಿನಬಿಲ್ಲವನ ಬಿಂಕಮಂ ಮಾಣಿಸಿದರ್ ೬೯

ದೆಸೆದೆಸೆಯಂ ಪಳಂಚಲೆದು ಕಾಳ್ಪುರಮಾಗಿ ಕವಲ್ತು ಭೂಮಿ ಭೃ
ದ್ವಿಸರದನೇಕವಾಹಿನಿಗಳುಬ್ಬರದಿಂ ಪರಿಪೂರ್ಣಮಾಗಿ ಘೂ
ರ್ಣಿಸುತೆ ಮದೀಯ ಸೈನ್ಯಜಲರಾಸಿಯ ಪೆರ್ದೆರೆಯಂ ತೆರಳ್ದ ಪಾ
ವಸೆಯೆನಿಪೀ ವನಂ ಕರಮೆ ಪಾವನಮಾಯ್ತು ಮುನಿಪ್ರವೇಶದಿಂ ೭೦

ಚನ್ನೆ ನಡೆನೋಡ ಬನಮಿದು
ಸನ್ನುತ ಸಮವಿಭವದಿಂ ಮನಂಗೊಂಡುದು ತ
ಳ್ತೆನ್ನನಿದಿರ್ಗೊಂಬವೋಲ್ ನಿಜ
ಪುನ್ನಾಗ ಸ್ಯಂದನೋಚ್ಚಲದ್ವಾಜಿಗಳಿಂ ೭೧

ಎಳದಳಿರಭಿನಯಮಲರ್ಗಂ
ಗಳ ನೋಟಂ ದೆಸೆವೆತ್ತಿರಲ್ ತಾಳದ ಮೆ

ಯ್ವಳಿಯೊಳ್ ತೆಂಬೆಲರಾಡಿಸ
ಲಳವಟ್ಟುದು ನರ್ತನಂ ಲತಾತನ್ವಿಯರಾ ೭೨

ಲತೆಗಳ್ ನರ್ತಿಸೆ ತುಂಬಿವಿಂಡುಗಳಲಂಪಿಂ ಪಾಡೆ ಕೀರಾಳಿ ಸ
ನ್ನುತಿಗೆಯಲ್ ಕಳಕಂಠ ಕಂಠರವದಿಂ ಮಾತಾಡಿಸುತ್ತತ್ತಲ
ಕ್ಷತಗಂಧ ಪ್ರಸವಂಗಳಿಂ ತಳೆದು ತಾನೆಯ್ತಂದುದೆಮ್ಮಿಂ ಸಮು
ನ್ನತಿಗಾನಂದದಿನಾರುತಂ ಮುನಿಪ ಸದ್ಗೋಷ್ಠೀರುತಂ ಮಾರುತಂ ೭೩

ಎನಸುಮಶೋಕನೆತ್ತಿದನರಲ್ಗುಡಿಯಂ ನಲವಿಂದೆ ಬಂದು ಸೈ
ಕನೆ ಸಹಕಾರನೆಳ್ದು ಸೊನೆನೀರ್ದಳಿದಿಂ ಪುಳಕಾಂಕುರಂ ಪೊದ
ಳ್ದನುಪಿಸೆ ಮಾಧವಂ ನೆಗಳ್ದ ಮಾಧವಿ ಪೂವಲಿಗೆಯ್ದುಳಿಯ್ದೆ ಚಂ
ದನ ತಿಲಕಂಗಳಂ ಪಿಡಿದು ಮಾಲತಿಮಲ್ಲಿಗೆ ಮುಂದೆ ನಿಲ್ವಿನಂ ೭೪

ವ: ಎಂದರಸನರಸಿಗೆ ಶುಭಸೂಸಕಂಗಳಾದ ವಚನವಿಲಾಸಂಗಳಂ ತೋಱುತ್ತೆ ಬಂದು ಗಂಧಸಿಂಧುರಸ್ಕಂಧದಿಂದಿಳಿದಾ ಸಮುಚಿತ ಪರಿಜನಂ ಬೆರಸನವದ್ಯ ಯಾನನುದ್ಯಾನಮಂ ಪೊಕ್ಕಾಗಳ್

ಮೇಳಿಸಿ ಮುಂದೆ ಕೋಗಿಲೆಗಳಬ್ಬರಮುಬ್ಬರಮಾಗೆ ಬರ್ಪ ಭೂ
ಪಾಳ ಪುರಂದರಂಗಿದಿರೊಳೀಂ ಬಗೆಗೊಂಡುದೊ ರಾಜಲೀಲೆಯಂ
ಪಾಳಿಸಿಪಾಯ್ದ ಸೋಗೆಗಳ ಸೋಗೆಯ ಸೀಗುರಿಯೋಳಿವೆತ್ತ ಪೊಂ
ಬಾಳೆಯ ಚಾಮರಂತರದೆ ತಳ್ತ ತಮಾಳದ ಮೇಘಡಂಬರಂ ೭೫

ವ: ಅಂತು ಗುರುಜನದರ್ಶನೋತ್ಸುಕತೆಯಿನುಜ್ಜ್ಹಾರಿತ ಸಕಲರಾಜಚಿಹ್ನನಾಗಿ ಮಹಾಸೇನ ಮಹಾರಾಜಂ ವನರಾಜಚಿಹ್ನಮನಪ್ಪುಕೆಯ್ದು ಬರೆವರೆ

ಪಳುಕಿನ ನೀಳ್ದ ಪಾಸಱೆ ನಿಜಸ್ತಬಕಂಗಳ ಕಾಂತಿಗಳ್ ಪುದುಂ
ಗೊಳೆ ಪೊಳಪಿಟ್ಟ ಮಾಣಿಕದ ಪೀಠದವೋಲಿರಲಲ್ಲಿ ಬಂದು ಮಂ
ಡಳಿಸಿದ ಯೋಗಿಪುಂಗವರನಾಸನದಿಂ ಪೊಱಮಟ್ಟರಾಗದೊ
ಬ್ಬುಳಿಯೆನಲೊಂದಶೋಕತರು ಕಣ್ಗೊಳಿಸಿರ್ದುದು ಮುಂದಿಳೇಂದ್ರನಾ ೭೬

ಆ ಕಂಕೆಲ್ಲಿಯ ಪಲ್ಲವಂ ಪಳಿಯೆ ಸಂಧ್ಯಾಕಾರಮಂ ತನ್ನ ದಿ
ವ್ಯಾಕಾರಂ ಶಶಿಯಂ ಪಳಂಚಲೆಯೆ ನಕ್ಷತ್ರಂಗಳಂ ನಾಣ್ಚಿಸಲ್
ನಾಕೇಂದ್ರಸ್ತುತರಾದ ಸಂಯಮಿಗಳಿರ್ದರ್ ಮಧ್ಯದೊಳ್ ಮುಕ್ತಿಲ
ಕ್ಷ್ಮೀಕಾಂತಂ ಮುನಿಪೋತ್ತಮಂ ಮುಗಿವಿನಂ ಭೂಪಾಲಹಸ್ತಾಂಬುಜಂ ೭೭

ತನಿಗೆಂಪು ತಳ್ತಶೋಕಾ
ವನರುಹಮೆಸೆದತ್ತು ಪಿಂಸೆ ಸೋಂಕದವೋಲ್ ತ

ನ್ಮುನಿಪತಿಯ ಜಾತರೂಪಮ
ನೆನಸುಂ ಪುಟವಿಡುವ ತಪದ ತಣ್ಗಿಚ್ಚಿನವೋಲ್ ೭೮

ಬಿಡದೊಡವುಟ್ಟಿದೆನೆನ್ನಂ
ಬಿಡಬೀಸಿದನೀ ಮುನೀಂದ್ರನೆಂದೇವದಿನಾ
ಗಡೆ ಕಳಿಗಳಿಗಂದಿದವೋಲ್
ಬೆಡಂಗುವಡೆದತ್ತು ಮೆಯ್‌ಮದಾಲೇಪನದಿಂ ೭೯

ಜ್ಞಾನಾಂಬೋಧಿಯ ಪೆರ್ದೆರೆ
ತಾನಲಸದೆ ನೂಂಕೆ ಪಡೆದ ಪಾವಸೆಯೆಂದೆಂ
ಬೀ ನುಡಿಗೆಡೆಗುಡುತೊಡಲೊಳ
ದೇನೆಸೆದುದೋ ಮಲದಮಸಕವಾ ಮುನಿಪತಿಯಾ ೮೦

ತನುವಂ ನಿಜಸುಮನೋವಾ
ಸನೆ ಪಾವನಚರಿತದಿಂ ಪುದುಂಗೊಳೆ ಬಂದೊ
ಯ್ಯನೆ ಬಳಸಿದಳಿಸಮೂಹಮಿ
ದೆನಿಸಿದುದು ಮಲಂ ಮಲಪ್ರಹಾರಿಯ ಮೆಯ್ಯೊಳ್ ೮೧

ಜನವಿನುತಮಾದ ನಿಜದ
ರ್ಶನ ಬೋಧಾಚರಣಮೊಂದಿದುತ್ತಮ ತೇಜಂ
ಮುನಿರಾಜಂ ರತ್ನತ್ರಯ
ವನೆರಗಿಸಿ ಪೊಯ್ದ ಕರುವಿನಂತೆಸೆದಿರ್ದಂ ೮೨

ತನುವನಗಲ್ಚಿ ತಳ್ತ ಬಹಿರಿಂದ್ರಿಯದಿಚ್ಛೆಯನೆಯ್ದೆ ನೀಗಿ ಮೂ
ಗಿನ ತುದಿಯಂ ಜಲಕ್ಕನೆಮೆಯಿಕ್ಕದೆ ನೋಳ್ಪರೆ ಮೊಗ್ಗೆಗಣ್ ನಿರಂ
ಜನ ಪದದೊಳ್ ತಗುಳ್ದ ಬಗೆ ಕೆಯ್ಮಿಗೆ ಶಾಂತರಸಂ ಪೊದಳ್ದ ತ
ನ್ಮುನಿಪನ ಮಾನಸಂ ಮನಮನೀಳ್ಕುಳಿಗೊಂಡುದು ರಾಜಹಂಸನಾ ೮೩

ಮಱದೂಟ ಮಿಾಹಮಂ ಮೆ
ಯ್ವೆಱದುಱ ತನ್ನೊಳಗೆ ತಾನೆ ಮನಮಿಕ್ಕುವದೊಂ
ದುಱುವ ನಿಜಭಾವಮೇಂ
ಧರೆಗಱಪದೆ ಮುನಿ ಮುಕ್ತಿಕಾಂತೆಯೊಳ್ ತೊಡರ್ದಳಿಪಂ ೮೪

ವ: ಅಂತು ಪಂಚಾಚಾರ ನಿಯಮಯೋಗದಿನಿರ್ದ ಯೋಗೀಂದ್ರನ ಸಮಿಾಪಕ್ಕೆ ಸಕಳ ಮಂಗಳದ್ರವ್ಯಗಳಂ ಧರಿಯಿಸಿ ದಿವ್ಯಕಾಂತೆಯರಂತೆ ಕಾಂತೆಯರ್ ಬಳಸಿಬರೆ ಭವ್ಯಲೋಕಂ ಬೆರಸು ಮಹಾಸೇನ ಮಂಡಳೇಶ್ವರಂ ಬಂದು

ಮಂದರಮಮಂ ಬಲಗೊಳ್ವ ಪು
ರಂದರನೆಂಬಂತೆ ಮೂಮೆ ಬಲಗೊಂಡೊಲವಿಂ
ವಂದಿಸಿ ಮನಿಪತಿಯಂ ಮುದ
ದಿಂದಾ ಮಾನವಪುರಂದರಂ ಪೂಜಿಸಿದಂ ೮೫

ಎಱಗೆ ಮುನಿಮೂರ್ತಿಯೊಳ್ ಕ
ಣ್ಣೆಱಗೆ ಮನಂ ಭಕ್ತಿಯೊಳ್ ನೃಪೋತ್ತಮನೊಲವಿಂ
ದೆಱಗೆ ಪುರೆವಿಡಿದು ನಿಱುಗುರು
ಳೆಱಗಿದವೆಱಪಂತೆ ಪಱಮೆವಱ ಪಂಕಜದೊಳ್ ೮೬

ವ: ಅಂತಾ ನೃಪಶ್ರೀಕಾಂತಂ ತಪಶ್ರೀಕಾಂತಂಗೆಱಗಿ ಪರಮಾಶೀರ್ವಾದ ವಚನಂಗಳಂ ಕೆಯ್ಕೊಂಡು ತದೀಯ ಪಾದೋಪಾಂತದೊಳ್ ಪ್ರೀತಿಯಿಂ ಕುಳ್ಳಿರ್ದು ಧರ್ಮ ಸ್ವರೂಪಂಗಳಂ ಕೇಳ್ದು ತದನಂತರಂ

ಮುನಿನಾಥಾಂಘ್ರಿ ನಖೇಂದುಕಾಂತಿ ತನುವಂ ತಳ್ತೊಯ್ಯುದು ತಳ್ಕೈಸೆ ತೆ
ಕ್ಕನೆ ತೀವಿರ್ದ ಮನೋರಥಾಮೃತರಸಂ ಕೆಯ್ಮಿಕ್ಕು ತುಳ್ಕಾಡಿ ತ
ಣ್ಣನೆ ತನ್ನೊಳ್ ತೆರೆಗೊಂಡು ಮಂಡಳಿಪಿನಂ ತದ್ವೇಳೆಯಂ ಮೀಱಿದಿಂ
ಪಿನಲಂಪಿಂ ನುಡಿದಂ ಗಭೀರರವದಿಂ ರಾಜೇಂದ್ರರತ್ನಾಕರಂ ೮೭

ವ: ಆಗಳ್

ರಸನಾರಂಗದೊಳುಱೆನ
ರ್ತಿಸುವ ಸರಸ್ವತಿ ಸಮಂತು ಸೂಸಿದ ದಿವ್ಯ
ಪ್ರಸವಾಂಜಲಿಯೆಂಬಿನಮೇ
ನೆಸೆದುದೋ ವಸುಧಾಧಿಪತಿಯ ದಶನಪ್ರಭೆಗಳ್ ೮೮

ತಾಪಸವರೇಣ್ಯ ಪಲವಾ
ಳಾಪದೊಳೇಂ ಮನದೊಳೊರ್ಮೆ ನೆನೆದವನಕ್ಷ ಸಂ
ತಾಪಮನಾ ಪಱಿನಿನ್ನೀ
ಶ್ರೀಪಾದಂ ಕಲ್ಪಪಾದಪಮನೇಳಿಸದೇ ೮೯

ಏತತ್ಕಾರ್ದರ್ಶನಮವ
ನೀತಲದೊಳ್ ಪೊಗಳ್ವರದು ಭವದ್ದರ್ಶನದಂ
ತೀತೆಱದಿಂ ಪರಿಭಾವಿಸೆ
ಭೂತಭವದ್ಭಾವೀಜನ್ಮಮಂ ತೋಱಿದುದೇ ೯೦

ಮಿತ್ರನೆನುತುಷ್ಣಕರನಂ
ಧಾತ್ರಿತಳಂ ಮೇಗೆ ಪಿಂಗದಂತಸ್ತಮಮಂ
ಚಿತ್ರಮೆನೆ ತವಿಸಿ ಕುವಲಯ
ಮಿತ್ರನೆನಲ್ ಸಂದೆ ನೀಂ ಜಗತ್ರಯಮಿತ್ರಾ ೯೧

ಮೃಡನುತ್ತಮಾಂಗಮಂ ಸಾ
ರ್ದೊಡಮಱಿಕೆಯ ರಾಜನನಘ ನಿಮ್ಮಡಿಯಂ ಬ
ಲ್ವಿಡಿದೆನ್ನ ತೆಱದಿನಿಳೆಯೊಳ್
ಪಡೆದನೆ ನಿರ್ದೋಷಿಯಾಗಿ ಪರಿಪೂರ್ಣತೆಯಂ ೯೨

ವಿಷಯಾತೀತ ತಪಶ್ರೀ
ವಿಷಯಮೆನಲ್ ಸಂದ ನಿನ್ನ ಮಹಿಮೆ ಮನೋವಾ
ಗ್ವಿಷಯಮೆ ನೋಡದ ಮುನ್ನನಿ
ಮಿಷಪದವಿಯನೇಂ ಕಣ್ಗೆ ಮಾಡಿದುದೀಗಳ್ ೯೩

ಪೆಱತೇಂ ಮುನಿನಾಯಕ ನಿ
ನ್ನಱಿಕೆಯ ಕರುಣಾವಲೋಕನಾಮೃತದಿಂ ತ
ಳ್ತುಱುವೆನ್ನ ಕೀರ್ತಿವಲ್ಲಿಗೆ
ನೆಱೆಯದು ಮೂಲೋಕವೆನಗೆ ನೆಱೆಯದುದುಂಟೇ ೯೪

ಖೇಚರವಂದ್ಯ ಹಿಮಾಹಿಮ
ರೋಚಿಯ ಪಂಗಿಲ್ಲದಲರ್ದು ಮೂಱುಂ ಜಗದೊಳ್
ಗೋಚರಿಪ ನಿನ್ನ ಬೋಧ
ವಿಲೋಚನಕೊಳಗಾಗದುಳಿದ ವಸ್ತುಗಳೊಳವೇ ೯೫

ಅಂಗೆಯ್ಯ ನೆಲ್ಲಿಯಂತೆ ಜ
ಗಂಗಳ್ ನಿನ್ನಱಿವಿನೊಳಗೆ ಮಿಱುಗುವುವೆನೆ ಮಾ
ನಂಗೊಳ್ಳದುಸಿರಲೇಕೆ
ನ್ನಿಂಗಿತಮಂ ನಿನಗೆ ನಿಖಿಳಬೋಧನಿಧಾನಾ ೯೬

ವ: ಎಂದು ಯಥಾರ್ಥವೃತ್ತಮಂ ಸಂಸ್ತುತಿಗೆಯ್ದು ಮತ್ತಂ

ನೀನಱಿಯದುದಿಲ್ಲಾದೊಡ
ಮಾನೆಂತಾತುರತೆಯಿಂದೆ ಬಿನ್ನವಿಸುವೆನೀ
ಮಾನಿನಿಗೆ ಸಮಯದೊಳ್ ಸಂ
ತಾನಂ ಸಮನಿಸದ ಚಿಂತೆ ಸಮನಿಪುದೆನ್ನಂ ೯೭

ಆದರಿಸೆನ್ನ ಜಾಡ್ಯಮಿದು ನಿನ್ನಯ ಸನ್ನಿಧಿಯಿಂದಲಿನ್ನೆಗಂ
ಪೋದುದು ಮತ್ತೆ ಬಂದಲೆವ ಸಂಸೃತಿಯಂ ಮಱಗೊಂಡು ಮೊಕ್ಕಳಂ
ಮೂದಲಿಪಂತಿರಿಂತೆನಗೆ ತಂದುದು ದೇವ ನೆಗಳ್ತೆವೆತ್ತ ಶಾ
ತೋದರಿಯೊಳ್ ಮನಂಗೊಳೆ ತನೂಭವರಾಗರೆನಿಪ್ಪ ರಾಗಮಂ ೯೮

ಈ ಮತ್ಪ್ರಾಣಸಮಾನೆಯಾದ ಸತಿಯೊಳ್ ಸಂತಾನಮಿಲ್ಲೆಂದಳ
ಲ್ಲೇಮಾತ್ರೋರ್ವನೆ ಚಿಂತಿಸೆಂ ಸುಖದೆ ನಾನಿರ್ಪಂದಿಂದಾವನೀ
ಭೂಮಿಾಭಾರಮನಾಂಪನೆಂದಗಿದು ಶೇಷಾಹೀಶ್ವರಂ ದಿಗ್ಗಜ
ಸ್ತೋಮಂ ಕೂರ್ಮವರಂ ಕುಲಾಚಲಕುಲಂ ಚಿಂತಿಪ್ಪುವಿನ್ನಾವಗಂ ೯೯

ಕಟ್ಟಾಣಿಯ ವಸ್ತುಗಳಳ
ವಟ್ಟಿರೆ ತನ್ನೊಳಗೆ ನೆಗಳ್ದ ಭೂಭರಮಿಾಗಳ್
ನೆಟ್ಟನೆ ವಶಮಾಗಿರ್ದುಂ
ಬಿಟ್ಟಿಯ ಪೊಱೆಯಂತೆ ಬನ್ನವಡಿಸುಗುಮೆನ್ನಂ ೧೦೦

ಪ್ರಾಚಿಗೆ ಮಿತ್ರಂ ಮೃಗಶಿಶು
ಲೋಚನೆಗೆ ಪುತ್ರನುದಯಮಾಗದೊಡೆ ಧರಿ
ತ್ರೀಚಕ್ರದ ಬಹಿರಂತ
ಗೋಚರಮೆನಿಸಿರ್ದ ತಮಮನಾರ್ ತವಿಸುವರೋ ೧೦೧

ಅದಱಂದೆನ್ನಯ ತೋಳ ತಿಣ್ಣಪೊಱೆಯಂ ತಾಂ ಪಿಂಗಿಪಾಂಪನ್ನಸೈ
ನ್ಯದ ಕೂರ್ಪಂ ಕುಡಿಯೊಳ್ ಮುರುಂಟಿಸುವ ನಾಂಟಲ್ಕೆಂಟು ದಿಕ್ಕೆಟ್ಟುದಂ
ದದೆ ಸತ್ಕೀರ್ತಿಯನಾಂತು ಬಿತ್ತುವದಟಂ ತಳ್ಕೈಸಿ ಮತ್ಕಾಂತಿಗೆಂ
ದುದಯಂಗೆಯ್ದಪನೋ ಮದನ್ವಯ ಮಹೀಶಾನಂದನಂ ನಂದನಂ ೧೦೨

ಇನ್ನೆನಗೆಂದಪ್ಪನೊ ಪೇ
ಳೆನ್ನಯ ಬಲಗೆಯ್ಯ ಬಲ್ಪು ಕಾಮಿನಿಯರ ಕೈ
ಗನ್ನಡಿಯ ಜಸಱವೆಟ್ಟೇ
ಚೆನ್ನೆಯ ಜವ್ವನದ ಜಸಮೆನಿಪ್ಪ ಕುಮಾರಂ ೧೦೩

ಪಡೆದಳ್ ಕೀರ್ತಿ ಸಮಸ್ತದಿಗ್ವಲಯಮಂ ವಿಸ್ತೀರ್ಣಸದ್ವಸ್ತುವಂ
ಪಡೆದಳ್ ಧಾತ್ರಿ ಸಮಸ್ತವೈರಿಜಯಮಂ ಸಂಗ್ರಾಮರಂಗಾಗ್ರದೊಳ್
ಪಡೆದಳ್ ವಿಕ್ರಮಲಕ್ಷ್ಮಿ ನಿನ್ನ ಕೃಪೆಯಿಂದೆನ್ನೀ ಮಹಾದೇವಿ ತಾಂ
ಪಡೆದಳ್ ಭಾಗ್ಯಮನೇಕೆ ಪಡೆಯಳ್ ಸುಕ್ಷಾತ್ರನಂ ಪುತ್ರನಂ ೧೦೪

ವ: ಎಂದು ಸಂತಾನ ಕಾಮವ್ಯಾಮೋಹದಿಂ ನುಡಿವ ವಸುಧಾವಲ್ಲಭನನಾ ತಪೋನಿಧಾನ ನಾಲಿಸಿ ಕರುಣಾರಸಂ ಕಾಳ್ಪುರಮಾಗೆ

ತೆಱನಱಿದು ನುಡಿದನಾವಗ
ಮೊಱೆವ ಹೃದಂಬುಧಿಯಿನೊಗೆದು ಕರುಣಾಮೃತಮಂ
ಕಱೆವ ವಚನಾಂಬುಮುಖದೊಳ್
ಮಿಱುಗುವ ಮಿಂಚೆನಿಸೆ ತೊಳಪ ದಂತದ್ಯುತಿಗಳ್ ೧೦೫

ಎಲೆ ವಸ್ತು ತತ್ವಕೋವಿದ
ನಿಲಲಱಿಗುಮೆ ನಿನ್ನ ಮುಂದೆ ಸಂಸೃತಿಮೋಹಂ
ಪಲವೇಂ ಕಟ್ಟಿದಿರೊಳ್ ಕ
ತ್ತಲೆ ಮುಟ್ಟುಳಿಯಲಾರ್ಪುದೇ ದಿನಕರನಾ ೧೦೬

ಈ ಚಿಂತಾಭಾಜನಮೆ ಸ
ದಾಚಾರವಿಶುದ್ಧ ನಿನ್ನ ನಿರ್ಮಲಮತಿ ಧಾ
ತ್ರೀಚಕ್ರಮಱಿವುಲೂಕ ವಿ
ಲೋಚನ ಗೋಚರಮೆ ತಿಗ್ಮರೋಚಿಯ ತೇಜಂ ೧೦೭

ನಿರ್ಜರ ನರೋರಗರೊಳಂ
ತರ್ಜ್ಜಡತೆಯನೆಯ್ದೆ ಪಾಯ್ದು ಪಾಪಾಸ್ರವಮಂ
ವರ್ಜಿಸಿ ನಿನ್ನವೊಲಲಸದು
ಪಾರ್ಜಿಸಿದವರುಂಟೆ ಪುಣ್ಯಮಂ ಪುರುಷನಿಧೀ ೧೦೮

ಸಿರಿಯೊಲ್ವ ತಿಲಕವಮರ್ದು
ರ್ವರೆ ಮಚ್ಚುವಮರ್ದು ಕೀರ್ತಿ ಬಯಸುವವಶ್ಯಂ
ಸರಸತಿ ಸಾರ್ವ ಸುಮಂತ್ರಂ
ನಿರುತಂ ಸಚ್ಚರಿತ ನಿರತ ನಿನ್ನಯ ಚರಿತಂ ೧೦೯

ಇಂಬಳಕೆಯ ಭೂಭುಜರಾ
ಡಂಬರಮಂತಿರ್ಕೆ ಸಿರಿಯ ಸಡಗರದಿಂ ಕ
ಣ್ಣಂ ಬಿಡುವ ಸಗ್ಗಿದರ್ ಬಾ
ಯಂ ಬಿಡುವಂತಾಯ್ತು ಬಯಸಿ ನಿನ್ನಯ ಚರಿತಂ ೧೧೦

ಸುರನಾಥನಾವನೊರ್ವನ
ಚರಣಾಂಬುಜಮನಱಸಿ ಪಡೆಯಂ ಪಡೆದೈ
ನರನಾಥ ತತ್ತ್ರಿಲೋಕೀ
ಗುರುವಿನ ಗುರುವಪ್ಪುದೊಂದು ಪುಣ್ಯೋದಯಮಂ ೧೧೧

ಚಿಂತೆ ಬಱಿದೇಕೆ ನಿನ್ನೀ
ಕಾಂತೆಯ ಬಸಿಱೊಳ್ ತ್ರಿಲೋಕಗುರು ತೀರ್ಥಕರಂ

ಮುಂತಱುದಿಂಗಳುದಯಿಸು
ವಂ ತೊದಳಳಲ್ಲರಸ ಸರಸಸೂಕ್ತಿ ನಿಧಾನಾ ೧೧೨

ವ: ಎಂದು ನರೇಂದ್ರಾಭಿಮತಮಂ ನಿರೂಪಂಗೆಯ್ದು ಸುವ್ರತಿ ಸುವ್ರತಾದೇವಿಯಂ ನೋಡಿ

ಇದು ಭುವನತ್ರಯ ಭೂಷಣ
ಮಿದು ಪಾಪವಿಷಾಪಹಾರಿ ಕುಲದೀಪಕಮಿಂ
ತಿದು ಸುಕೃತ ನಿನಗೆ ಕೆಯ್ಸಾ
ರ್ದುದು ಸುವ್ರತೆವೆಸರೊಳೆಸೆವ ಕಾಂತಾರತ್ನಂ ೧೧೩

ಜನ ವಿನುತನಾದ ಪದಿನ್ಱೆ
ದನೆಯ ಮಹಾತೀರ್ಥನಾಥನಂ ಸಲೆಪಡೆವೊಂ
ದನುಪಮ ಸುಕೃತಂ ಸಾರ್ದುದು
ತನಗೆನೆ ಸೌಭಾಗ್ಯಮೆಂತುಟೋ ಸುವ್ರತೆಯಾ ೧೧೪

ಜಿನನಂ ಪಡೆವೀಯನುವಶೆ
ಗಿನನಂ ಪಡೆವಿಂದ್ರದಿಶೆಗೆ ಪರಿಭಾವಿಸೆ ಮಿ
ಕ್ಕಿನ ವನಿತೆಯರುಂ ಜಡದಿ
ಗ್ವನಿತೆಯರುಂ ಪಡೆಯ ಪಾರ್ಥಿವಾನ್ವಯತಿಲಕಾ ೧೧೫

ಪೆಱತೇನಾ ನಾಕದಿಂ ಬಂದವತರಿಸುವನೀ ಕಾಂತೆಯೊಳ್ ನಿನ್ನ ಭಾಗ್ಯಂ
ನೆಱೆವನ್ನಂ ನಿನ್ನ ಪೆಂಪಂ ಬಯಸಿ ಬಹುವಿಧಾಮರ್ತ್ಯರತ್ನಾರ್ಥದಿಂ ಬಾ
ಯೊಱೆವನ್ನಂ ನಿನ್ನ ಲೋಕೋನ್ನತಮೆನೆ ನೆಗಳ್ದಿಕ್ಷ್ವಾಕುರಾಜಾನ್ವಯಂ ಕ
ಣ್ಣೆಱೆವನ್ನಂ ತಾನೆ ನಿರ್ಮೂಲಿತನಖಿಳ ತಮೋಯೂಥನಾ ತೀರ್ಥನಾಥಂ ೧೧೬

ವ: ಎಂದು ಸಂದೆಗಂ ಪಱಿಪಡೆ ನುಡಿದು ಮತ್ತಂ

ಈ ಮನುಜಜನ್ಮದೊಳ್ ನಾ
ನಾ ಮಯ ಮಯದೊಳ್ ಸಮಂತು ಜನಿಯಿಸಿ ದೊರೆವೆ
ತ್ತೀ ಮಹಿಮೆವಡೆದೆ ನೀನೇಂ
ಸಾಮಾನ್ಯನೆ ಸಕಲ ನೃಪಲಲಾಟ ಲಲಾಮಾ ೧೧೭

ತೊದಳೇಂ ಶೇಷೋರಗಂ ಬಿಗಿದ ಬಿಸಲತೆ ತಾರಾಚಳೇಂದ್ರಂ ತಗುಳ್ದು
ಣ್ಮಿದ ಫೇನಂ ಚಂದ್ರಬಿಂಬಂ ಚರಿಸುವ ಕಳಹಂಸಂಬೊಲಿಂಬಾಗೆ ತನ್ನೊಳ್
ಪುದಿದೆತ್ತಂ ತಳ್ತು ಮೆಯ್ವೆತ್ತನುಮಿಷಕುಳಮಾಡಲ್ ತ್ರಿಲೋಕಂಗಳಂ ತೀ
ವಿದುದೀಗಳ್ ನಿನ್ನ ಕೀರ್ತಿ ತ್ರಿಪಥೆಗೆ ವಿಪುಳಾಭಾಗ ಭೋಗಾಮರೇಂದ್ರಾ ೧೧೮

ಕಡುಪಿರಿದಾದೊಡಮೇಂ ಕ
ನ್ನಡಿಯೊಳ್ ಕರಿ ಸಿಲ್ಕುವಂತೆ ಶಕ್ರಾದಿಗಳು
ರ್ಕುಡುಗಿ ನೃಪ ನಿನ್ನ ತೇಜದೊ
ಳಡಂಗಿದರ್ ನೋಡ ಪುಣ್ಯದೊಳ್ ಪುರುಡುಂಟೇ ೧೧೯

ಮಾತೇನವನೀಶ್ವರ ಧರ
ಣೀತಳದೊಳ್ ನೀನೆ ಧನ್ಯನೀ ಭವದೊಳ್ ಮು
ನ್ನೇತೆಱದಿ ನೋಂತೊಡಂ ನೆಗ
ಳ್ದೀ ತೆಱದ ಸುಪುತ್ರಲಾಭಮಾತಂಗಾಯ್ತೋ ೧೨೦

ವ: ಎಂದು ಪೊಗಳ್ದು ಮುನೀಂದ್ರನವನೀಂದ್ರಂಗೆ ಸಮನಿಸಿದ ಸುತೋತ್ಪತ್ತಿ ವಾರ್ತಾವಿಲಾಸ ಸುಕೃತ ಪ್ರಪಂಚಮಂ ಪ್ರಕಟಿಸೆ

ಮುನಿವಾಕ್ಯಾಮೃತಸೇಕದಿಂ ನನೆದು ಚಿತ್ತಕ್ಷೇತ್ರದೊಳ್ ನಾಂಟಿ ನೆ
ಟ್ಟನೆ ಬೇರೂಱಿದ ನಂದನಾಭ್ಯುದಯ ಲಾಭೋರ್ವೀಜ ಬೀಜಾಂಕುರಂ
ಮೊನೆದೋರ್ಪಂತೆ ನಿಜಾಂಗದೊಳ್ ಪುಳಕಜಾಳಂ ಮೂಡೆ ಮೆಯ್ವೆಚ್ಚಿ ಮಾ
ನಿನಿಯಂ ನೋಡಿ ಮರಲ್ದದೇನೆಸೆದನೋ ಸನ್ಮಾನಜನ್ಮಾಲಯಂ ೧೨೧

ಪ್ರಣಯಂ ಕೈಗಣ್ಮೆರಲ್ ಕಣ್ಮಲರೊಳಲಸದಾನಂದವಾರ್ಬಿಂದುಗಳ್ ಸಂ
ದಣಿಸಲ್ ಸೌರಂಭದಿಂ ವಂದಿಸಿ ಮುನಿಪತಿಯಂ ತತ್ತ್ರಿಲೋಕೈಕಚೂಡಾ
ಮಣಿ ತೀರ್ಥಾಧೀಶ ಪೂರ್ವಪ್ರಥಿತ ಜನನಮಂ ಕೇಳಲುದ್ಯುಕ್ತನಾದಂ
ಪ್ರಣುತಾತ್ಮಂ ವಿಶ್ವವಿದ್ಯಾ ಸಮುದಯ ಸುಮನಸ್ಸಂಚರಂ ಚಂಚರೀಕಂ ೧೨೨

ಗದ್ಯ॥ ಇದು ಸಕಲ ಸುಕವಿಜನಮನಸ್ಸುಧಾಕರಕಾಂತ ಸಂತತ ದ್ರವೀಕರಣ ಕಾರಣ ಕರ್ಣಾಟ ಕವಿತಾಕಳಾವಿಳಾಸವಿಧು ಮಧುರ ಕವೀಂದ್ರ ನಿರ್ವಿತಮಪ್ಪ ಧರ್ಮನಾಥ ಪುರಾಣದೊಳ್ ಮುನಿದರ್ಶನ ವರ್ಣನಂ ಚತುರ್ಥಾಶ್ವಾಸಂ.

ಪಂಚಮಾಶ್ವಾಸಂ

ಶ್ರೀವರನಿಕ್ಷ್ವಾಕುಕುಲೇಂ
ದೀವರಮಲರ್ವಂತು ನೆಗಳ್ದ ತೀರ್ಥೇಶ್ವರ ತಾ
ರಾವರನುದಯಮನೇಂ ಪರಿ
ಭಾವಿಸಿದನೋ ಸರಸಕವಿ ರಸಾಳವಸಂತಂ ೧

ಅಂತು ಮನದೊಳಗೆ ಭಾವಿಸಿ
ಸಂತಸದಿಂ ನುಡಿದನರಸನಧರಚ್ಛವಿಗಳ್
ಮುಂತೊಗೆದು ಸೊಗಯಿಪುತ್ಸವ
ಸಂತಾನದ ತಳಿರಗಾಡಿಯಿಂ ನೀಡುವಿನಂ ೨

ರದನಾಚ್ಛಪ್ರಭೆ ಕೌಮುದೀವಿಭವಮಂ ಕೈಗೆಯ್ಯೆ ವಕ್ತ್ರಕ್ಕೆ ಸ
ಮ್ಮದ ವಾಕ್ಯಾಮೃತಮುಣ್ಮೆ ತನ್ಮುನಿಪನಂ ನೀಂ ಪೇಳ್ದ ಪುಣ್ಯೋದಯಾ
ಸ್ಪದನಾನಂದಮಯಂ ವಿನೇಯನಿಧಿ ಮುನ್ನೆಲ್ಲಿರ್ದ ನಿನ್ನಾವ ಸ
ಗ್ಗದಿನೆಯ್ತಂದಪನೆಂದು ಕೂರ್ತು ಬೆಸಗೊಂಡಂ ಗೋಮಿನೀಮಂಡನಂ ೩

ಆವನ ಜನ್ಮೋದಯದಿಂ
ದಾವಳ ಬಸಿಱಾವ ದೇಶಮಾವೆಡೆ ಪಿರಿದುಂ
ಪಾವನಮಾಯ್ತೆನಗಱಿಪು ದ
ಯಾವಾರಿಧಿಯೆಂದು ಭೂಭುಜಂ ಬೆಸಗೊಂಡಂ ೪

ವ: ಅಂತು ಬೆಸಗೊಂಡ ಧರಾಮಂಡನನ ಹೃದಯ ಸುಧಾಕರಕಾಂತಮೊಸರ್ದು ಘಳಿಲೆನೆ ಕುಳಿರ್ಕೋಡುವಿನಂ ವಿನಯನಿಕರ ಚಕೋರಂ ನಲಿದು ನರ್ತಿಸುವಿನಂ ಪರವಾದಿವದನ ಸರಸೀರುಹಂ ಕಂದಿ ಕಳಿಯೆ ಬಾಡುವಿನಂ ಧರ್ಮಾಮೃತಾಂಬುನಿಧಾನಂ ನೆಲೆವೆರ್ಚುವಿನಂ ದುರಹಾಂಧಕಾರಂ ತೊಟ್ಟನೆ ತೊಲಗುವಿನಂ ನಿಜಬೋಧಾವಧಿ ವಿಲೋಚನೋತ್ಪಲ ಮುನ್ಮೀಲಿಸುವಿನಂ ನೆಟ್ಟನುದಯಂಗೆಯ್ದು

ಮುಂದೆ ಪರಿತಂದು ಭೂಪನ
ಸಂದೇಹಧ್ವಾಂತ ಪಟಲಮಂ ಪಱಿಪಡೆ ತೂ

ಳ್ವಿಂದುಕಿರಣಂಗಳೆಂಬೊಂ
ದಂದದಿನಿರೆ ದಂತಕಾಂತಿ ಮುನಿಯಿಂತೆಂದಂ ೫

ನಿನಗಂ ಪೇಳ್ವೆನಗಂ ದಲಲ್ತಖಿಳ ಲೋಕಕ್ಕೆಯ್ದೆ ಸಮ್ಮೋಹಮಂ
ಜನಿಯಿಕ್ಕುಂ ಜಿನಜನ್ಮನಿರ್ಮಳಕಥಾಪೀಯೂಷವೆಂತೆನ್ನ ಪೂ
ವಿನ ಕಂಪೆತ್ತಿಪ ಭೋಗಿಗಂ ಸಮೆವ ಮಾಲಾಕಾರಿಗಂ ಸಾರ್ದು ಮೆ
ಲ್ಲನೆ ಮೇಲ್ವಾಯ್ವಳಿಮಾಲೆಗಂ ನೃಪಮನಸ್ಸಂಪ್ರೀತಿಯಂ ಮಾಡದೇ ೬

ಎಂದಖಿಳ ಲೋಕಹೃದಯಾ
ನಂದಮನರ್ಹತ್ಪುರಾಣ ಭವಕಲ್ಪಲತಾ
ಕಂದಮನಗೆವೊಯ್ಕಲ್ ಬಗೆ
ದಂದಂ ಮುನಿಪತಿ ನೃಪಾಲಚಿತ್ತಾವನಿಯೊಳ್ ೭

ಆದೊಡೆ ಕೇಳಿಳಾಧಿಪ ಪಯೋಧರಮೊಯ್ಯನೆ ಸೋಂಕೆ ಫೇನಮಾ
ಲಾದರಮುಣ್ಮೆ ಪೊಣ್ಮೆತೆರೆದೋಳ್ಗಳಿನಪ್ಪಿ ನಿಜೋಪಕಂಠಮಂ
ಮೇದಿನಿಗಿಷ್ಟಮಂ ಸಲಿಸುತ್ತಿರ್ಪುದು ಕೂರ್ಪ ವಿಟಂಬೊಲೊಂದಿ ಕಾ
ಳೋದ ಸಮುದ್ರ ಮುದ್ರವಸುಭಾಷಣಮುತ್ತಮ ರತ್ನಭೂಷಣಂ ೮

ಬುಧವಿದಿತಮಾದ ತದ್ವಾ
ರಿಧಿ ಬಳಸಿರೆ ಪೊಱಗನೊಳಗನಳವಡೆ ಲವಣಾಂ
ಬುಧಿ ಸುತ್ತೆ ನಡುವೆ ಚೆಲ್ವಾ
ಯ್ತು ಧಾತಕೀಷಂಡಮೆನಿಪಖಂಡದ್ವೀಪಂ ೯

ತುಂಬಿ ತಗುಳ್ದ ತಾರಗೆ ತೊಡರ್ಚಿದ ಮುತ್ತುಗಳಂದಮಾದ ನೀ
ಲಾಂಬರಮೆಂಬ ರನ್ನದ ವಿತಾನಮೊಡಂಬಡೆ ದೇಸೆವೆತ್ತು ಕ
ಣ್ಗೆಂಬೆನೆ ಸಂದ ಭೂಭುವನ ಮಂದಿರಮಂ ಧರಿಸಿರ್ದ ಪೊನ್ನಮ
ಳ್ಗಂಬಮಿದೆಂಬಿನಂ ಸೊಗಯಿಕುಂ ನೆಗಳ್ದಲ್ಲಿಯ ಮಂದರದ್ವಯಂ ೧೦

ವ: ಅಂತಾ ಧಾತಕೀಷಂಡಮೆಂಬ ನೀಲಾಂಬರಮನಂಬುಧಿಯೊಳಲದಾಱಿಸಲ್ ನೆಗಪಿದಪಾರ ಕಾಶ್ಮೀರ ಭೂಷಿತ ಬಾಹುಯುಗಮೆಂಬಂತಗುರ್ವುವಡೆದ ಪೂರ್ವಾಪರ ಮಂದರದ್ವಯದೊಳ್

ಮುಗಿಲಂ ಮುಟ್ಟುವ ಪೆರ್ಮೆ ಕೂಡೆ ದೆಸೆಯಿಂ ತಳ್ಪೊಯ್ವ ತೇಜಂ ಮನಂ
ಬುಗೆ ಬಂದುದ್ಗತ ರಾಜಹಂಸನೊಲವಿಂದಂ ವೇಳೆಗೊಂಡಿರ್ಪ ಮೈ
ಮೆಗೆ ತಾರಾವಳಿ ಸೇಸೆಯಾಗೆ ಮಹಿಭೃನ್ನಾಥಾದಿಪಟ್ಟಕ್ಕೆ ನೆ
ಟ್ಟಗೆ ಸಂದಗ್ಗದ ಪೂರ್ವಮಂದರಮದೇಂ ಕಣ್ಬೇಡಿಗಿಂಬಾದುದೋ ೧೧

ತದಮಳಪೂರ್ವಮಂದರದ ಪೂರ್ವವಿಭಾಗದೊಳಿಂಪುದೋರ್ಪ ಸಂ
ಪದಮನನಾರತಂ ವಿಬುಧಸಂತತಿಗೀವ ನೆಗಳ್ತೆವೆತ್ತ ಬಿಂ
ಕದ ಪದಿನಾಱುನಾಡು ಕಳೆಯಂದಮನಾಳ್ದರೆ ತಾಳ್ದುದಿಂದುಬಿಂ
ಬದ ಸೊಬಗಂ ಮನಂಗೊಳಿಪ ಪೂರ್ವವಿದೇಹಮಪೂರ್ವಶೋಭೆಯಿಂ ೧೨

ಜಿನಮತವೊಂದುಳಿದಿರೆ ಮಿ
ಕ್ಕಿನ ಕುಮತಂ ಪುಟ್ಟವೆಂಬಿದಲ್ಲದೆ ಮತ್ತಾ
ವ ನವೀನಮಾದ ಸದ್ವ
ಸ್ತು ನಿಕಾಯಂ ಪುಟ್ಟದಾ ಮಹೀಮಂಡಲದೊಳ್ ೧೩

ಆಱನೊಳ್ ಪೂಣ್ದು ಸರ್ವಜನದಾರ್ಪಿನ ಕೂರ್ಪನುದಗ್ರಕೀರ್ತಿವೆ
ತ್ತಱಿಕೆಯ ಚಕ್ರವರ್ತಿಗಳ ವಿಕ್ರಮಮಂ ಭುವನಪ್ರಸಿದ್ಧರಾ
ಗುಱುವ ಜಿನೇಂದ್ರರುತ್ಸವದ ಪೆರ್ಚುಗೆಯಂ ನೆಱೆ ನೋಡಿ ನೋಡಿ ಬಾ
ಯೊಱೆಪರಮರ್ತ್ಯರೆಂದುಮನಲೇವಿರಿದೋ ಸೊಬಗಾ ವಿದೇಹದಾ ೧೪

ಆ ಪೂರ್ವವಿದೇಹ ಶ್ರೀ
ರೂಪಳವಡೆ ತೊಟ್ಟನರ್ಘ್ಯ ಮುಕ್ತಾಲತೆಯಿಂ
ಬೀ ಪೆರ್ಮೆಯನಾಳ್ದುದು ಸೀ
ತಾಪಗೆ ಲಲಿತೋಪಕಂಠ ಕಮನೀಯತೆಯಿಂ ೧೫

ಆ ನದಿಯೆರಡುಂ ತಡಿಯೊಳ್
ನಾನಾನೋಕಹ ಲತಾವಿತಾನ ವಿಚಿತ್ರ
ಸ್ಥಾನಂ ನಿಳಿಂಪ ದಂಪತಿ
ಗಾನಂದಮನಾವಗಂ ಮನಂಗೊಳೆ ಮಾಳ್ಕುಂ ೧೬

ಜಳದೊಳನಿಮೇಷ ಕುಳಮಂ
ತಳೆದಸೆವುವು ಮಿಕ್ಕ ನದಿಗಳೀ ನದಿ ಪೆಂಪಿಂ
ವಿಳಸದನಿಮೇಷಕುಳಮಂ
ತಳೆದಸೆವುದು ತನ್ನ ನೀರೊಳಂ ತೀರದೊಳಂ ೧೭

ಬೀಸುವ ಮೆಲ್ಲೆಲರಿಂ ಪೊಱ
ಸೂಸಿ ಕರಂ ಪಡೆದು ನಿಮಿರ್ದ ನೀರೇಜರಜಂ
ಬಾಸಣಿಸಿ ಹೇಮವೇದೀ ವಿ
ಳಾಸಮನನುಕರಿಪುವದಱ ಪುಳಿನತಳಂಗಳ್ ೧೮

ಜಲಮಮೃತಮಯಂ ಸೊಗಯಿಪ
ಜಲವಿಹಗಂ ಪರಮಹಂಸಮಯಮೆಂದುಂ ತ

ಜ್ಜಲಚರಮನಿಮಿಷಮಯಮೆನೆ
ಸಲೆ ಬಣ್ಣಿಪನಾವನದಱ ತೀರದ ಸಿರಿಯಂ ೧೯

ವ: ಮತ್ತಮದು ಕಮಳ ಜನಕಮಂಡಲದೊಳಡಂಗಿದಲ್ಪತೆಯ ವಾಸವನ ಕಾಲ್ದೊಳೆದು ಬರ್ದ ಕಕ್ಕುಲಿತೆಯ ಜಹ್ನುವಿನ ತೊಡೆಯೆಡೆಯಿಂ ನುಸುಳ್ದ ಪರಾಭವದ ಮನುಜಂಗೆ ಮಕ್ಕಳಂ ಪಡೆದ ನಿಂದೆಯ ಮಂದಾಕಿನಿಯ ಮೈಮೆಯನೆನ್ನ ಮುಂದೆ ನುಡಿಯದಿರಿಮೆಂದು ನಗುವಂತೆ ಪಸರಿಸಿದ ಫೇನ ಪಿಂಡ ಪಾಂಡುರತೆಯಿಂ ಕಳಹಂಸ ಕಳಕಳದಿಂ ಬಳ್ವಳಿಕೆವಡೆದುದಂತುಮಲ್ಲದೆಯುಂ

ರಣದಾಲೋಲಾಲಿಮಾಲಾ ಕುಲಕುವಳಯ ಸೌಗಂಧಿತಾಂಭೋಜ ಗರ್ಭೋ
ಲ್ಬಣ ಗಂಧಂ ಬಂಧುರೋರ್ಮಿ ಪ್ರಸರ ವಿಸರದಾಂದೋಳ ಕೇಳೀ ಸಮಾರೋ
ಹಣ ಹಂಸೀ ಸ್ಪರ್ಶಹರ್ಷಂ ತಟನಿಕಟ ಪಟೀರಾಟವೀವಾಟ ಸಂಚಾ
ರಣಮೆಂದುಂ ಬಂದು ಬಂದೊಯ್ಯನೆ ಸುಳಿವುದು ಸೀತಾನದೀಮಾತರಿಶ್ವಂ ೨೦

ವ: ಅಂತು ಸೊಗಯಿಸುವ ಸೀತಾನದಿಯ ದಕ್ಷಿಣತಟದೊಳ್

ದಳಿತಾಬ್ಜಾಂಬಕಮೊಪ್ಪಲುತ್ಪಲವನ ಶ್ಯಾಮಾಂಗಮಿಂಬಾಗೆ ಕ
ಣ್ಗೊಗ್ಗಿಸುತ್ತಿರ್ಪ ವಿದೇಹ ವಿಷ್ಣುವಿನ ವಕ್ಷೋಭಾಗದೊಳ್ ಕೌಸ್ತುಭೋ
ಜ್ವಳ ರತ್ನಕ್ಕೆಡೆಯಾಗಿ ದಿವ್ಯವನಮಾಲಾಮಂಡನಶ್ರೀ ಮನಂ
ಗೊಳೆ ತನ್ನೊಳ್ ತಳೆದತ್ತು ವತ್ಸವಿಷಯಂ ಶ್ರೀವತ್ಸವಿಭ್ರಾಂತಿಯಂ ೨೧

ಆ ವತ್ಸವಿಷಯಮಿಾಗುಂ
ಶ್ರೀವತ್ಸ ವಿಹಾರ ಭೂಮಿಯೆನೆ ಚೆಲ್ವಿಂ ಚೇ
ತೋವತ್ಸಲತೆಯನಖಿಳ ಕ
ಳಾವತ್ಸಭೆ ತನ್ನೊಳಾವಗಂ ತೀವುವಿನಂ ೨೨

ತತ್ಸೇವ್ಯಮಾದ ವಿಷಯಂ
ವತ್ಸಂ ತಾನಾಗದಂದು ಸಮುದಂಚಿತ ಸ
ಸ್ಯೋತ್ಸವ ಗೋಮಂಡಲಮದು
ಸತ್ಸಭೆಗಭಿಮತಮನಾವಗಂ ಕಱೆದಪುದೇ ೨೩

ಪಳುವೆಲ್ಲಂ ನಂದನಂ ಪರ್ವತಪರಿಕರಮೆಲ್ಲಂ ಮನಂಗೊಳ್ವ ಲೀಲಾ
ಚಳಮುಚ್ಚಸ್ಥಾನಮೆಲ್ಲಂ ಜಿನಮಣಿವನಶ್ರೇಣಿಯಂ ಮಮ್ಮನಿಮ್ನ
ಸ್ಥಳಮೆಲ್ಲಂ ಪೂಗೊಳಂ ನಿರ್ಝರ ಪರಿಕರಮೆಲ್ಲಂ ಪೊದಳ್ದಾಪಗಾಸಂ
ಕುಳಮಂದಂದೇನನೇನಂ ಬಗೆದು ಪೊಗಳ್ವೆನಾ ರೂಢಿವೆತ್ತಿರ್ದ ನಾಡಂ ೨೪

ನಳಿನೀಗರ್ಭ ವಿಚಿತ್ರ ಶಿಲ್ಪಗೃಹಮಪ್ಪಾ ದೇಶದೊಳ್ ಸಂತತಂ
ದಳಿತಾಂಭೋಜಕುಳಂ ಕೊಳಂ ಪರಿಮಿಳದ್ಭೃಂಗಾಳಿ ತಂಗಾಳಿ ನಿ
ರ್ಮಳ ರತ್ನಾವೃತಕಂದರಂ ಧರಮುದಂಚಚ್ಚಂದನಂ ನಂದನಂ
ವಿಳಸದ್ಭೂರಿಧನಂ ಪೃಥುಘಟಾಪೀನಾಕುಲಂ ಗೋಕುಲಂ ೧೫

ಬಗ್ಗಿಪರಿಲ್ಲ ಕೋಗಿಲೆಗಳಲ್ಲದೆ ನಿಲ್ಲದೆ ಕೊಂಡು ಬಂಡಿನಿಂ
ಬಗ್ಗನೆ ಬಯ್ವರಿಲ್ಲ ಗಿಳಿಯಲ್ಲದೆ ಪಲ್ಮೊರೆವನ್ನರಿಲ್ಲ ಪಾ
ಯ್ವಗ್ಗಳ ದುಂಬಿಯಲ್ಲದೆನೆ ಮತ್ತಿನ ಸುತ್ತಿನ ಸುಳ್ಳುವಾತದೇಂ
ಸುಗ್ಗಿಯ ಸೂಱೆ ತೆಂಬೆಲರ ಮುಂಬರಿ ಕಾಮನಸೀಮೆಯಾ ನೆಲಂ ೧೬

ವಿಹರದ್ಗಂಧ ಗಜೇಂದ್ರಗಂಡತಟಮಂ ತಳ್ಪೊಯ್ವು ಕರ್ಪೂರ ಭೂ
ರುಹ ಪತ್ರಾವಳಿಯಂ ಪಳಂಚಿ ಮೃಗನಾಭೀಮೂಲಮಂ ಮುಟ್ಟಿದು
ರ್ವಹ ಧೂಳಿಸ್ಥಳ ಪದ್ಮಿನೀಪಟಲಮಂ ಪೊಕ್ಕಾಡಿ ಕಾಲ್ಗುಂದಿ ತ
ನ್ಮಹಿಯೊಳ್ ಮೆಲ್ಲನೆ ಬರ್ಪುದುತ್ಪತಿತ ಭೃಂಗಾಳೀರುತಂ ಮಾರುತಂ ೧೭

ಕಾಡದೆ ಗೋಕುಲಮೆಲ್ಲಿಯ
ಕಾಡದೆ ನೆಲೆವಟ್ಟಿಯಾಗೆ ಕಱೆವುವು ಬಱಿಂದ
ಬಾಡದ ಸಸಿಗಳನೆಂದುಂ
ಬಾಡದ ಪೊರೆಯೊರೆಯ ಕೆಯ್ವೊಲಂ ಸೊಗಯಿಸುಗುಂ ೧೮

ಉಱುವ ಜನಪದದ ಪಳ್ಳಿಯ
ಪೊಱಗಣ ಬನದೊಳಗೆ ನಡೆವ ಪಾಂಥರ್ ಮುಂತಾ
ಗಱಿಯರೆನೆ ಮನೆಗಳೊಳಗಿ
ರ್ದಱಿಗುಮೆ ತಜ್ಜನಮದುಗ್ರತರ ಬಾಧೆಗಳಂ ೧೯

ಲಲಿತಮುಖಂ ದ್ರೋಣಾಮುಖ
ಮಲಘು ನಿತಂಬಂ ಮಡಂಬಮಿಂಬಿನ ಹಾರಂ
ಸುಲಭಾಗ್ರಹಾರಮೆನಲೇ
ನಲೆದುದೊ ಬಗೆಯಂ ನೆಗಳ್ತೆ ದೇಶಶ್ರೀಯಾ ೨೦

ನೆಗಳ್ದಾ ದೇಶಕ್ಕಿದೊಂದಲ್ಲದೆ ಪೆಱತು ಭಯಂಗಾಣೆನೇನೆಂಬೆ ನಿನ್ನುಂ
ಬಗೆಗೊಳ್ವಾ ರೂಪ ಪೇರಾರವೆಗಳ ಬಳಿಯೊಳ್ ತಾಗಿ ಮೇಲ್ವಾಯ್ವ ಬಲ್ದ
ಟ್ಟಿಗರಂ ಪೆಣ್ಗ ಡಿದೆಂದಾರ್ದಗಿಯದುಗಿಪಱಂಗೊಳ್ವನಾವೇಗದಿಂದಾ
ವಗಮೆಯ್ತಂದೊಂದೆ ಬಿಲ್ಲಿಂ ತಡೆದು ಕಡುಪಿನಿಂ ಮಾರನೆಂಬುಗ್ರಚೋರಂ ೨೧

ದೇಸದೊಳಂ ತನ್ಮಣಿಮಯ
ವಾಸದೊಳಂ ನೆಗಳ್ವುದನುದಿನಂ ನಂದನ ಲೀ

ಲಾಸುಭಗ ಹಂಸಗಮನ ವಿ
ಲಾಸಂ ನೆಲೆವೆತ್ತ ಪದ್ಮಿನೀ ನಿಕುರುಂಬಂ ೩೨

ವಾರಿಜಲಕ್ಷ್ಮಿಯಂ ತಳೆದನಂತ ಸುಖಾಸ್ಪದಮಾಗಿ ಸಂತತಂ
ಕ್ಷೀರಸಮುದ್ರದಂತಿರೆ ಮನಂಗೊಳೆ ಪೆರ್ದೊಱೆಗಳ್ ಪೊದಳ್ದ ಕೀ
ಳ್ವೇರಿಗಳೊತ್ತುಗೊಂಡಡಸಿ ಭೋರನೆ ನೀರುಣಲೆಂದು ಬಂದ ಮುಂ
ಗಾರ ಮುಗಿಲ್ಗಳಂದದೆ ಕಱಂಗಿದ ಕರ್ವಿನ ಕೆಯ್ಗಳೊಪ್ಪುಗುಂ ೩೩

ಮಾಸರಮಾದವು ಬೆಳೆ ಸಿರಿ
ಯೋಸರಿಸದೆ ತಣಿಯೆ ಕುಣಿಯಲೆಂದಳವಡಲ
ಬ್ಬಾಸನ ನಡಸಿದ ಪಚ್ಚೆಯ
ಪಾಸಱೆಯೆನೆ ಪಸಲೆಗವಿದ ಕಳಮಕ್ಷೇತ್ರಂ ೩೪

ಭಾರತಿಯರಗಿಳಿ ಗಿರಿಶ ಕು
ಮಾರನ ನವಿಲಾ ವಿರಿಂಚಿಯಂಚೆ ಮನಂಗೊಂ
ಡೋರಂತೆ ಬರ್ಪುವೆನಲೇಂ
ಸಾರಮೊ ಬೆಳೆಗೈ ಪೊಲಂಗಳಾ ಜನಪದದಾ ೩೫

ತಲೆವಿಲ್ಲೊಗ್ಗಿಂಡುದ್ಗಮಾಸ್ತ್ರಂ ಕವಿದೆಸುತೆ ಕನಲ್ದಟ್ಟೆ ಕಣ್ಗೆಟ್ಟು ಬೆಂಗೊ
ಟ್ಟಲರ್ವಂಡಿಂದಾದ ಬಂಬಲ್ದೊಱೆಗಳನಳವಿಂ ಪಾಯ್ದು ಪೋಪನ್ನೆಗಂ ತ
ತ್ಕಲಮ ಕ್ಷೇತ್ರಂಗಳೊಳ್ ಪಾಮರಿಯರ ನವಲಾವಣ್ಯ ವಾರಾಶಿಯಡ್ಡಂ
ನಿಲೆ ನಿಲ್ಕುಂ ಸಿಲ್ಕಿ ಕಾಲ್ಕುಪ್ಪಳಿಸಿ ಚಳಿಸದಲ್ಲಿಂದೆ ಪಾಂಥಪ್ರತಾನಂ ೩೬

ಬಿಡದುಗುವ ಸೊನೆಯ ಸೋನೆಯ
ಕಡುಗೆಸಱೊಳ್ ಸಿಲ್ಕಿ ಬಂದ ಮಾವಿನ ಕೆಯ್ಯಂ
ಪಿಡಿದಲ್ಲಿ ಮೆಲ್ಲ ಮೆಲ್ಲನೆ
ನಡೆವುದು ಕಣ್ಬುಗ್ಗುಡನಂತಿರುಪವನ ಪವನಂ ೩೭

ಆಱಡಿಗೊಳಲೇಕಾಬನ
ದಾಱಡಿಯ ಪಕ್ಕೆ ಪಿಗ್ಗಿ ಬಿರಿಮೊಗ್ಗೆಗಳಿಂ
ಪಾಱಡಿಯೊಳೊಕ್ಕ ಕೆಸಱಡೆ
ಮಾಱಡಿಯಿಡಲಮ್ಮದಂಚೆ ಸಿಡಿಮಿಡಿಗೊಳ್ಗುಂ ೩೮

ಪಡೆಮಾತೇಂ ಮೃದುಕರಮುಂ
ಕಡುಚೆಲ್ವುಪಕಂಠಮುಂ ಮನಂಗೊಳೆ ಚೆಲ್ವಿಂ

ಗೆಡೆಗೊಂಡು ಮಧ್ಯದೇಶಂ
ಬಡಮಾಗದೆ ರತ್ನಗರ್ಭೆಗೇನೊಪ್ಪಿದುದೊ ೩೯

ನಗದೊಳಗೆಯ್ದೆ ಕತ್ತುರಿಯ ಕಂಪು ಪೊಲಂಗಳೊಳೆಯ್ದೆ ಗಂಧಶಾ
ಲಿಗಳಲರ್ದಚ್ಚಗಂಪು ಗಡಿಗೆಟ್ಟ ಬನಂಗಳೊಳೆಯ್ದೆ ಬಳ್ಳಿಮ
ಲ್ಲಿಗೆಗಳ ಕಂಪು ಪೆಂಪಿನ ಪೊಳಲ್ಗಳೊಳೆಯ್ದೆ ನಭಕ್ಕೆ ನೀಳ್ದು ಪಾ
ಯ್ವಗರುವ ಕಂಪು ಪೊಂಪುಳಿಸೆ ಕಂಪಿನ ತಾಯ್ವೊಲನಾದುದಾ ನೆಲಂ ೪೦

ಸ್ಥಳನಳಿನ ಪಾಂಸು ಪಟಲಂ
ಗಳಂಗದೊಳ್ ಪೊಳೆಯ ಸುರಿಯೆ ಮದನಿರ್ಜ್ಝರ ಮಾ
ಪಳುವಳುದಪ್ಪದೆ ಮೆಲ್ಲನೆ
ಸುಳಿವುವು ಮಂದರದ ಮಱಿಗಳೆನೆ ಕಳಭಂಗಳ್ ೪೧

ತುಱುಗಿದ ದಾಡಿಮಬೀಜಂ
ಮಱಿಗಳೊಯ್ವಲ್ಲಿ ಚಂಚುವಿಂದುಗೆ ನೆಲದೊಳ್
ಮಿಱುಗುವ ಮಾಣಿಕವರಲಂ
ಕುಱುಪಱಿಯದೆ ಕರ್ಚಿ ಪೋಪುವಲ್ಲಿಯ ಗಿಳಿಗಳ್ ೪೨

ಆ ನೆಲದೊಳ್ ನೆಗಳ್ತೆವಡೆಗುಂ ಜಿನಧರ್ಮದ ಸೀಮೆ ದಾನ ಸ
ನ್ಮಾನದ ಸೀಮೆ ಸದ್ಗುಣದ ಸೀಮೆ ಸುಶೀಲದ ಸೀಮೆ ಸೌಖ್ಯ ಸಂ
ತಾನದ ಸೀಮೆ ಮಂಗಳದ ಸೀಮೆ ಮಹಂಗಳ ಸೀಮೆಯೆಂಬ ಪೆಂ
ಪಾನೆ ಸುಸೀಮೆಯೆಂಬ ಪೊಳಲಗ್ಗದ ಸಗ್ಗದ ಸೀಮೆಯೆಂಬಿನಂ ೪೩

ನೋಡುವೊಡಿಂದ್ರನೊಳ್ ಸಮನಿಸಿರ್ದುವು ಸಾಸಿರಕಂಗಳಾರ್ತು ಕೊಂ
ಡಾಡುವೊಡಾದುವೆಯ್ದೆರಡು ಸಾಸಿರ ನಾಲಗೆ ನಾಗನಾಯಕಂ
ಗಾಡುವೆನೇನನಂಬುಜ ಭವಂಗಿಳೆಯೊಳ್ ಪಲವಾಗಿ ನೀಳ್ದ ಕೆಯ್
ಮೂಡದದೆಂತು ಮಾಡಿದನೊ ಗಾಡಿಯ ಸೀಮೆಯೆನಲ್ ಸುಸೀಮೆಯಂ ೪೪

ಅಲ್ಲಿಯ ಸೊಗಯಿಪ ಸುದತಿಯ
ರೆಲ್ಲರೆಳೆಳ್ಳನಿತು ಚೆಲ್ವ ನೆರದಬ್ಜಭವಂ
ಮೆಲ್ಲನೆ ಮಾಡಿದನೊರ್ವಳ
ನಲ್ಲನೆ ಸಗ್ಗಕ್ಕೆ ಮುಂ ತಿಲೋತ್ತಮೆಯುಂಟೇ ೪೫

ಕಡುಸಿರಿಯಿಂ ಪುರುಷರ್ ಪೊ
ಮಡಿಸಲ್ ಕೃಪೆಯಿಂದೆ ತಮ್ಮ ಮಧ್ಯದೊಳಿಡುವರ್

ಬಡತನಮನೆಂದೊಡಲ್ಲಿಯ
ಮಡದಿಯರ ಗುಣಕ್ಕೆ ಮಿಕ್ಕವರ್ ಪಾಸಟಿಯೇ ೪೬

ಕಡು ನಿಡುಗಂಗಳೊಳ್ ನಿಱಿಸುಗುನ್ನತ ಪೀನ ಪಯೋಧರಂಗಳೊಳ್
ಮಡಗುಗೆ ಮೈಮೆವೆತ್ತುರು ನಿತಂಬದೊಳಿಂಬನೆ ಸಾರ್ಚುಗಬ್ಜಜಂ
ಪಿಡಿಗೊಳಗಾದ ತತ್ಪುರ ನವೋತ್ಪಲಗಂದಿಯ ಗಂಧಮೊಂದಿದಳ್
ನಡುವಿನೊಳೆಂತು ಸಂತಮಿರಿಸಿಟ್ಟನೊ ಲೋಕದ ಚೆಲ್ವನೆಲ್ಲಮಂ ೪೭

ತ್ರೈಲೋಕ್ಯಮನಱಿವೆಮ್ಮಯ
ಲೀಲಾವಧಿ ಬೋಧಕುಚಿತಮಾಗಿರೆ ಪಲವುಂ
ನಾಲಗೆ ನೆಲಸಿರೆ ಪೇಳವೆ
ಭೂಲಲನಾನಾಥ ಪುರದ ಪರಮೋನ್ನತಿಯಂ ೪೮

ತೀವಿರೆ ಪೆಂಪು ವತ್ಸವಿಷಯಾಚ್ಯುತ ಸಗ್ಗದ ನಾಭಿಯಂತೆ ಚೆ
ಲ್ವಾವರಿಸಿರ್ದ ಪೇರಗಳ ಪಾರಿಯ ಮಧ್ಯದೊಳುಳ್ಳಲರ್ದ ಬೆ
ಳ್ದಾವರೆಯಂತೆ ತತ್ಪುರಮದೊಪ್ಪಿರೆ ಕರ್ಣಿಕೆಯಿಂದಮಾದ ರಾ
ಜಾವಸಥಕ್ಕೆ ತಾನೆ ಚತುರಾನನನೆಂದೆನೆ ಸಂದು ಸಂತತಂ ೪೯

ಅದನಾಳ್ವಂ ರಿಪುಭೂಮಿಭೃದ್ಭುಜ ಭುಜಂಗೋತ್ಖಾತ ಖಡ್ಗಸ್ಫುರ
ದ್ರದನ ಸ್ತಂಭನ ಸಿದ್ಧಮಂತ್ರನುರುತಂತ್ರಂ ವಿಕ್ರಮಶ್ರೀ ಪದಾ
ಸ್ಪದ ದೋರ್ಮಂಡಲ ಮಂಡನ ಪ್ರಥಿತ ದಾನಾಸಾರ ಸಂಪೂರ್ಣ ಕೋ
ವಿದ ಲೋಕೈಕ ಮನೋರಥಂ ದಶರಥಂ ತಾನೆಂಬ ಭೂನಾಯಕಂ ೫೦

ದಶದಿಗಧಿಪ ಸಭೆಯೊಳ್ ದ್ವಾ
ದಶ ರವಿಗಳನುಱದೆ ನಗುವ ವಿಕ್ರಮಲಕ್ಷ್ಮೀ
ದಶನದ್ಯುತಿಯೆನೆ ನೆಗಳ್ವುದು
ದಶರಥ ವಸುಧಾಧಿಪತಿಯ ಕೀರ್ತಿವಿತಾನಂ ೫೧

ಕಡುಸಿರಿಯೊಳವನ ಜಸವೆ
ಣ್ಣಡಸಿಯು ಮಱಿಯೊಳ್ ಪೊದಳ್ದ ಪೊಂಬೆಟ್ಟಮನೆಂ
ದೊಡೆ ಮಿಾಱಿ ನಡೆವೊಡೆಡೆಯೊಳ್
ತಡೆಯಲ್ಕಾರ್ತಪುದೆ ಮಿತ್ರಭೂಭೃತ್ಪ್ರಕರಂ ೫೨

ಬಂದಗಿದಾಸೆಯಂ ಕುಡುವ ದೊರೆಯರೊಳ್ನುಡಿ ಜೀವಮಾಗಿರಲ್
ನಂದನದೊಳ್ ಲತಾಭವನದೊಳ್ ಪುಳಿನಸ್ಥಳದೊಳ್ ನಿರಂತರಂ

ಮುಂದೆಲೆಗೊಯ್ಯು ಸೀಳ್ದುರದ ಮುಯ್ಪಿನ ಪುಣ್ಗಳ ಪೆಣ್ಗಳೈದೆ ಮಾ
ನಂದೊಱೆದಿರ್ಪರೆಂದಱಿವೆ ನಾನಱಿಯೆಂ ಸೊಬಗಂ ನರೇಂದ್ರನಾ ೫೩

ತೊಡರ್ದ ರಿಪುರಾಜ ಮಂಡಲ
ದೆಡೆದೋಱೆನಗೆಂದು ವಿಷಮ ವಿಷಧಾರೆಗಳಂ
ಬಿಡದುಗಳ್ವ ಬಾಹುರಾಹುವ
ನಿಡುನಾಲಿಗೆಯಂತಿರೆಸೆದುದಸಿ ದಶರಥನಾ ೫೪

ಬಂದರಿಕರಿಕಟಮಂ ಭರ
ದಿಂದಾ ನೃಪನೆಱಗೆ ಪೊರೆದ ಮದಜಲಧಾರಾ
ಬಿಂದುಗಳಸಿಯೊಳ್ ಮಿಸುಗಿದು
ವಿಂದೀವರಮಾಲೆಗೆಱಗಿದಳಿಮಾಲೆಯವೋಲ್ ೫೫

ಖಳಕಾಂತಾಜನದೊಂದು ಕೈತವಮನಾವಂ ಬಲ್ಲನಾ ಭೂಭುಜಂ
ಗೊಳಗಾದಂತಸಿಕಾಂತೆ ಕೈವಿಡಿದು ಧಾರಾಪೂರ್ವಕಂ ಕೂರ್ಪದ
ಗ್ಗಳಿಸಲ್ ಕೋಶಮನಿಂಬುಗೊಂಡುಱದೆ ಮತ್ತೊಮ್ಮೊಮ್ಮೆ ಕೈಮೀಱೆ ತಾ
ಯ್ದಳವಿಂತಪ್ಪುರಳೆಯ್ದೆ ಪಾಯ್ದು ಕೊರಲಂ ತದ್ವೈರಿ ಭೂಪಾಲರಾ ೫೬

ಪೊಸತೆನಲರಿ ಕರಿಬಿದುಗಳ
ಬೆಸುಗೆ ಬಿಡಲ್ ಸುರಿವ ಮುತ್ತು ಕುಸುಮಾಂಜಲಿಯಂ
ಪಸರಿಸೆ ಸಂಗರರಂಗದೊ
ಳೆಸೆದಪುದಸಿವೆಣ್ಣ ನರ್ತನಂ ಭೂಭುಜನಾ ೫೭

ಪುರುಡೇ ಪುಣ್ಯಕ್ಕೆ ತದ್ಭೂಭುಜನ ವಿಪುಳದೋಃಖಡ್ಗನಿರ್ಘಾತದಿಂ ಸಿಂ
ಧುರ ಕುಂಭಂ ನುಚ್ಚುನೂಱಾಗೊಡೆಯೆ ಪಟುತುರಂಗಾಂಘ್ರಿ ಸಂಘಾತದಿಂ ಸಂ
ಗರ ಭೂಭಾಗಸ್ಥಳಿ ವೇದಿಕೆ ವಿದಳಿಸೆ ವಿದ್ವಿಷ್ಟ ವೀರಾಂಗನಾಕ್ರಂ
ದರವಂ ಕೈಗಣ್ಮಲೇನುಣ್ಮುಗುಮೊ ಜಯವಧೂದ್ವಾಹ ಮಾಂಗಲ್ಯಕರ್ಮಂ ೫೮

ಪೆಱತೇನವನವನೀತಳ
ವಱಿಯೆ ಜಗನ್ಮಿತ್ರಪದಮನೆಯ್ದಲ್ ಕಾಯ್ಪಿಂ
ಕಱುಬಿ ಗ್ರಹಗುಹೆಯೊಳೆಯ್ದಿದ
ರುಱುವಹಿತ ಮಹೀಶರೆಯ್ದೆ ಕೌಶಿಕಪದಮಂ ೫೯

ಸಿರಿವಕ್ಷಸ್ಥಳಸೀಮೆಯಂ ಧರಣಿಬಾಹಾ ಸೀಮೆಯಂ ಕೀರ್ತಿ ಸ್ಥೈ
ತಿರೆ ಸಪ್ತಾರ್ಣವ ಸೀಮೆಯಂ ಸಮುದಿತಾಜ್ಞಾಲಕ್ಷ್ಮಿ ಸರ್ವೋರ್ವರೇ

ಶ್ವರ ಚೂಡಾಮಣಿ ಸೀಮೆಯಂ ಪ್ರಮುದದಿಂದಾಳ್ವನ್ನ ಮಾಳ್ವಂ ವಸುಂ
ಧರೆಯೊಳ್ ಸಂದ ಸುಸೀಮೆಯಂ ದಶರಥಂ ಸದ್ಧರ್ಮ ಕೇಳೀರತಂ ೬೦

ವ: ಅಂತಖಂಡ ಭುಜಾದಂಡಮಂಡಿತ ಮಂಡಲಾಗ್ರ ಸಹಾಯ ಸಫಲೀಕೃತ ನಿಜಮನೋರಥಂ ಮಹಾರಥಂ ದಶರಥಂ ರಥಾಂಗಪಾಣಿಯಂತೆ ಪುರುಷೋತ್ತಮನೆನಿಸಿ ಪುಣ್ಯಜನವಿರೋಧಮಂ ಪಡೆಯದೆ ಸಕಲ ಜನಾಭೀಷ್ಟ ಕಾಮೋತ್ಪತ್ತಿಗೆ ನೆಲೆಯಾಗಿ ಗೋಮಿನಿಯೊಳಂ ನಿಜ ಕಾಮಿನಿಯೊಳಂ ಸಕಲ ಭೋಗೋಪಭೋಗಮಂ ಸಲಿಸುತ್ತುಮಿರ್ಪಿನಂ ಒಂದು ದಿವಸಂ ದಿವಸಾವಸಾನಸಮಯದೊಳ್

ರವಿಯಸ್ತಂಗತನಾದನಾದುದಳಿವಾ ಲೋಕಕ್ಕೆ ಶೂನ್ಯಂಗಳು
ಧ್ರುವಮಿನ್ನಾಗದವೋಲ್ ರಯಪ್ಪರರಾಗಿಂ ಬೇಗಮೆಂದೂಱಿ ಸಾ
ಱುವವೋಲ್ ಪೊಣ್ಮಿದುದೊರ್ಮೆ ದಲ್ ಸಮುದಿತೇನಸ್ತರ್ಜನಂ ಸಜ್ಜನ
ಶ್ರವಣಾಬ್ಬಾಮೃತ ಪಾವಕಂ ಜಿನಗೃಹಪ್ರಾರಬ್ಧ ಸಂಧ್ಯಾನಕಂ ೬೧

ವ: ಅಂತಾ ಗಜಘಟಾ ಪಟಲಮನಳಱಲಂಜಿಸುವ ಕುಂಜರಾರಾತಿಯಾ ರಥದಂತೆ ರಂಜಿಸುವ ಸಂಜೆವಱೆಯಿಂಚರಂ ಕಿವಿಯಂ ಪಳಂಚಲೆಯೆ ಸಮುಚಿತ ಸಂಧ್ಯಾಸಮಯ ನಿಯಮನಿರತಂ ಕರಚರಣ ಪ್ರಕ್ಷಾಳನಂಗೆಯ್ದು ನಿಸರ್ಗಪವಿತ್ರ ಚಾರಿತ್ರಂ ಪಂಚಪರಮೇಷ್ಠಿಗಳ್ಗೆ ನಿಷ್ಠೆಯಿಂದರ್ಘ್ಯಮೆತ್ತಿ ಪರಮ ಪಾವನ ಪೂಜಾ ದ್ರವ್ಯಪರೀತಮಾಗಿ ಜಿನಮಂದಿರಕ್ಕೆ ವಂದು ಭಕ್ತಿಭರಾನತೋತ್ತಮಾಂಗಂ ರಂಗಮಂಟಪದೊಳ್ ನಿಂದು ನಿಟಿಲತಟಘಟಿತ ಕರಸಂಪುಟನಾಗಿ

ಶ್ರೀಪಾಂಡುಚ್ಛತ್ರರತ್ನಂ ಸಿತಸರಸಿಜಸಂಪತ್ತಿಯಂ ಚಾಮರಂ ಹಂ
ಸೀಪಾತಪ್ರೌಢಿಯಂ ಭಾವಲಯ ವಿಲುಳಿತಚ್ಛಾಯೆ ಕಲ್ಲೋಲವಲ್ಲೀ
ಳಾಪಾಥ ಪ್ರೀತಿಯಂ ಪುಟ್ಟಿಸುವಿನಮತಿದುರ್ವಾರ ಸಂಸಾರ ಸಂ
ತಾಪಾಪನ್ನರ್ ನಿನ್ನ ಸಾನ್ನಿಧ್ಯಮನೆಳಸುವುದಾಶ್ಚರ್ಯಮೇ ಚಂದ್ರನಾಥಾ ೬೨

ಇದಿರೊಳ್ ನಿಂದಿರ್ದೊಡಂಗಕ್ಕಡರೆ ತೊಡರ್ದ ಬಾವನ್ನದಂತಾವಗಂ ನೋ
ಡಿದ ಕಣ್ಗಳ್ಗಿಟ್ಟ ತೆಳ್ಗಪ್ಪುರದ ಸಲಗೆಯಂತಳ್ಕಱಿಂ ಕೂಡೆ ಕೊಂಡಾ
ಡಿದ ಬಾಯ್ಗೋರಂದದಿಂ ತೀವಿದ ತನಿಗೆನೆವಾಲಂತೆ ನೇರ್ಪಟ್ಟ ನಿನ್ನ
ಗ್ಗದ ದೇಹಚ್ಛಾಯೆಯಿಂ ತಣ್ಣನೆ ತಣಿಯದೆ ಲೋಕತ್ರಯಂ ಚಂದ್ರನಾಥಾ ೬೩

ಬಹಮಾಲಾಲೇಪ ವಸ್ತ್ರಾಭರಣಮಳವಡಲ್ ಗಾಡಿಯಿಂ ರೂಢಿವೆತ್ತಿ
ರ್ದಹಿಮರ್ತ್ಯಾಮರ್ತ್ಯಲೋಕಾಧಿಪರ ಮಣಿಕಿರೀಟೋತ್ತಮಾಂಗಾಳಿ ನಿನ್ನೀ
ಸಹಜೋತ್ಪೂಜಾಂಘ್ರಿ ದಿವ್ಯನ್ನಖಕಿರಣದಿನೊಪ್ಪಿಪ್ಪುದೆಂಬಾಗಳಾ ಕಿಂ
ಬಹುನಾ ಬಣ್ಣಿಪ್ಪನಾವಂ ನಿರುಪಮ ನಿಜಸೌಂದರ್ಯಮಂ ಚಂದ್ರನಾಥಾ ೬೪

ಪದೆದೆಂದುಂ ಬೀಸರಂಬೋಗದ ಮಲಯರುಹಂ ಬಾಡದೊಳ್ವಾಸಿಗಂ ಬಾ
ಡದ ತೆಳ್ಪೀಳ್ವಟ್ಟೆ ಥಾಳಂಗಿಡದ ತೊಡವಿನೊಳ್ಮುತ್ತಿದೆಂಬಂತೆ ನಿನ್ನಂ
ಗದ ಕಾಂತಿಸ್ತೋಮಮಾದಂ ಕುಡೆ ತನಗೊಲವಂ ಸಂತತಂ ತಾನೆ ಕೂರ್ತ
ಪ್ಪಿವಳಾಟಂವದಕ್ಷಯಶ್ರೀಯೆನೆ ಸೊಬಗರದಾರ್ ನಿನ್ನವೋಲ್ ಚಂದ್ರನಾಥಾ ೬೫

ದಯೆಯಿಂ ನಿಶ್ಚಿಂತಮಪ್ಪಂತಿರೆ ಹೃದಯದೊಳೋರಂತಿರಿಂಬಿಟ್ಟು ನಾನಾ
ನಯದಿಂ ಸಮ್ಯಕ್ತಪೋಲಕ್ಷ್ಮಿಗೆ ತನುಮನಮಂ ತೆತ್ತು ತತ್ವಾರ್ಥ ಭಾಷಾ
ಪ್ರಿಯೆಯೊಳ್ ಮಾತಾಡಿ ಮತ್ತಕ್ಷಯರಮೆಯೊಡನುತ್ಸಾಹದಿಂ ಕ್ರೀಡಿಪೈ ಕಾ
ಮಿಯೋ ನೀಂ ನಿಷ್ಕಾಮಿಯೊ ಪೇಳೆನನುಪಮ ನಿನ್ನಂದಮಂ ಚಂದ್ರನಾಥಾ ೬೬

ಮುನ್ನಂಗೋದ್ಧುತನಂಬಿಂಗಳವಳಿದರೆವೆಣ್ಣಾಗುರಂಗೊಟ್ಟು ವೆಟ್ಟಂ
ಮುನ್ನೀರಂ ಪೊಕ್ಕ ದೇವರ್ಕಳನಹಹ ಮಹಾದೇವರೆಂದೆಂಬವರ್ಗಾ
ನಿನ್ನೇನೆಂಬೆಂ ತಪಸ್ತೇಜದಿನರಲಸರಲ್ ಸೀಯೆ ಕಂದರ್ಪನಂ ಗೆ
ಲ್ದಿನ್ನಂ ಮಚ್ಚಿಪ್ಪ ನೀನಲ್ಲದೆ ಮಹಿಗೆ ಮಹಾದೇವರಾರ್ ಚಂದ್ರನಾಥಾ ೬೭

ನಿನಗಂ ಸ್ವರ್ಣಾದ್ರಿ ಪೀಠಾಗ್ರದೊಳತಿಮುದದಿಂ ಮಜ್ಜನಂ ಮಾಡಿಪಂದೊ
ಯ್ಯನೆ ಮೆಯ್ಯಂ ನಿನ್ನಮಿಾವಾಲ್ಗೊನಲ ಪನಿ ಪಗಿಲ್ತಂದದಿಂ ಪತ್ತಿರಲ್ ಮು
ಕ್ತಿನ ಜೊಂಪಂದೊಟ್ಟ ನಿನ್ನಿಂ ಜನಿಸಿದೊಸಗೆಗೆಂಬಂತಿರಾನಂದದಿಂ ನ
ರ್ತನಮಂ ಮಾಳ್ಪಿಂದ್ರನೆಂದುತ್ಸವವವನಿಗದೇಂ ವಂದ್ಯಮೋ ಚಂದ್ರನಾಥಾ ೬೮

ಪ್ರಿಯಮಂ ಸಚ್ಚಕ್ರದೊಳ್ ಪುಟ್ಟಿಸುವ ಜನಮನೋಜಾತ ಸಂತಾಪಮಂ ನಿ
ಶ್ಚಯದಿಂದಂ ತೂಳ್ದ ನಾನಾ ಭವಜಲನಿಧಿಯಂ ಬತ್ತಿಪೋರಂತೆ ಪದ್ಮಾ
ಶ್ರಯಮಾಗಿರ್ಪಗ್ಗದಾಶಾವಶಮೆನಿಸದೆ ಲೋಕಾಗ್ರಮಂ ಪೊರ್ದುವೀ ನಿ
ನ್ನಯ ಪಾದಂ ಚಂದ್ರಪಾದಂಗಳಿನತಿಶಯಮೆಂದೊಂದಿಪೆಂ ಚಂದ್ರನಾಥಾ ೬೯

ವ: ಎಂದು ದರ್ಶನಸ್ತವನಂಗೆಯ್ದುಂ

ಜಳಮಳಯಜ ಕಳಮಾಕ್ಷತ
ಕುಳಕುಸುಮ ಚರುಪ್ರದೀಪ ಧೂಪಾದ್ಯ ಫಲಾ
ವಳಿಯಿಂದರ್ಚಿಸಿದಂ ನಿ
ರ್ಮಳಚಿತ್ತಂ ಚಂದ್ರನಾಥನಂ ನರನಾಥಂ ೭೦

ವ: ಅಂತಾ ತ್ರಿಲೋಕ ಚೂಡಾಮಣಿಯಂ ರಾಜಚೂಡಾಮಣಿ ಮನಂದಣಿ ಯಲರ್ಚಿಸಿ ಮಣಿಮುಕುಟದೊಳ್ ತಳೆದ ಗಂಧೋದಕದ ಬಂಬಲ್ ಬಾಂದೊಱೆಯ ಬರಿವೊನಲಂತೆ ನೆನೆಯಿಸೆ ತಳಿವ ಶೇಷಾಕ್ಷತಂ ನಕ್ಷತ್ರಲಕ್ಷ್ಮಿಯನಾಕ್ಷೇಪಂಗೆಯ್ಯೆ ಸುರನಗಮೆ

ನಡೆದುಬರ್ಪಂತೆ ಬಂದೊಯ್ಯನೊಯ್ಯನೊಸರ್ವಿಂದುಕಾಂತದ ಮೊಗಸಾಲೆಯ ಸೂಸಕದ ನೇರ್ಪನಿಗಳಂಗಸೌರಭಕ್ಕೆಱಗುವ ಪಱಮೆವಱಿಗಳ ಗಱಿಯ ಗಾಳಿಯಿಂ ತಣ್ಣನೆ ತನುವಂ ನಂಕುಳಿಕೊರ್ಳಿಡಿಸ ಜಿನೇಂದ್ರನಂಕಮಾಲೆಯಂ ಪಾಡುವ ಜೈನಗಾಯಿನಿಯರ ರಸಗೇಯ ಮನಾಲಿಸುತ್ತುಂ ನೋಡುವಾಗಳ್

ಕಳಧೌತಾಯತಯಷ್ಟಿಗಳ್ ಪರಿವವೋಲ್ ಕೂರ್ಪಿಂ ಕರಶ್ರೇಣಿ ಪ
ಜ್ವಳಿಸಲ್ ಕಜ್ಜಳದಂತೆ ಪಾಯ್ವ ತಮದೊಳ್ ತಳ್ವೊಯ್ಯೆ ಬೆಳ್ಪಭ್ರಮಂ
ಡಳಮಂ ಕಣ್ಬರಿಗೊಂಡಲಂಕರಿಸಿದತ್ತಾ ಖಂಡಲಾಶಾಸ್ಯಮಂ
ಡಳಮಂ ಮೌಕ್ತಿಕಕುಂಡಲಂಬೊಲಿದಿರೊಳ್ ಪೀಯೂಷರುಜ್ಮಂಡಲಂ ೭೧

ಕಣ್ಬರಿಗೆ ಬಾಂದೊಱೆಯ ಕಿಱು
ನುಣ್ಬುಳಿಲೆಳೆಗಱಿಯ ಸಿರಿಗಿರುಳ್ ಪಾಸಿದರ
ಲ್ಬುಣ್ಬಸೆಯೊಸೆದು ಚಕೋರಿಗ
ಳುಣ್ಬಗಲೆನಲಿಂದುಬಿಂಬಮಾಯ್ತವಲಂಬಂ ೭೨

ತರದೊಳ್ ತಾರಗೆವೆಂಡಿರೊಪ್ಪಿರೆ ಕಳಾಸಂರಂಭಮಿಂಬಾಗೆ ಸಂ
ದಿರೆ ಚಂದ್ರಾತಪಕೀರ್ತಿ ಸತ್ಕುವಲಯ ಶ್ರೀವಿಭ್ರಮಂ ಪೊಂಗೆ ಪಿಂ
ಗಿರೆ ವಿದ್ವಿಷ್ಟತಮಂ ಚಕೋರಪರಿವಾರಂ ಮೆಚ್ಚೆ ಮೈವೆಚ್ಚೆ ಕೂ
ರ್ತಿರೆ ಕಣ್ಗೊಂಡುದಖಂಡ ರಾಜವಿಭವಂ ರಾಕಾನಿಶಾಕಾಂತನಾ ೭೩

ವ: ಅಂತು ಪರಿಪೂರ್ಣ ರಾಜವಿಭಮನಾ ರಾಜವಿಭವಮಂ ನೋಡಿ

ಚಂದನ ಕರ್ಪೂರಾದಿಗ
ಳಿಂದಮದೇಂ ಬಡವರೊಡೆಯರೆನ್ನದೆ ಸುಲಭಂ
ಸಂದೆಗಮೆ ಸಕಲಜನಾ
ನಂದಕರಂ ಚಂದ್ರನಲ್ಲದಿಂ ಪೆಱನಾವಂ ೭೪

ಸುಮನೋಮಾರ್ಗಣನಂ ನಿಜಪ್ರಿಯನನಾರ್ಪಿಂ ಕಾಯ್ದು ಕಣ್ಗೆಚ್ಚನಿಂ
ದಮೆ ಸುಟ್ಟಗ್ರನನೆಯ್ದೆ ಮೂದಲಿಸುವಂತಾ ಕಾಮನಂ ಕಾದು ಮಾ
ರಮೆ ನಣ್ಪಂ ನಡೆನೋಡಿನೋಡೆ ಚಲದಿಂದಂ ನೆತ್ತಿಯೊಳ್ ತನ್ನ ಪಾ
ದಮನಿಟ್ಟಂಕದ ಬಿಂಕದಿಂದುಗಿದಿರಾಂ ಪೋಳ್ಗಂಡನಿನ್ನಾವನೋ ೭೫

ವ: ಎಂದರಸಂ ಸರಸನಾಗಿ ಬಗೆಯೊಳ್ ಭಾವಿಸುತ್ತಿರ್ಪಾಗಳ್

ಅದನೇನೆಂದಪೆನೋವೋ ಭಾವಿಸೆ ವಿಚಿತ್ರಂ ದೈವಸೂತ್ರಂ ನಿಜಾ
ಭ್ಯುದಯಶ್ರೀ ಪರಿಪೂರ್ಣವೃತ್ತರುಚಿ ಸನ್ಮಾರ್ಗಾಶ್ರಯಂ ನಾಡೆ ತ

ನ್ನಿದಿರೊಳ್ ಬೂದಿಯ ಬೊಟ್ಟಿನಂತೆ ಬಯಲಾಗಲ್ ಭೋಂಕನಂದೌಂಕಿಕೊಂ
ಡುದು ಕಂಡಾ ಸಿತಭಾನುವಂ ಬಗೆಗಿಡಲ್ ಸ್ವರ್ಭಾನು ಬಂದಾಕ್ಷಣಂ ೭೬

ಒಯ್ಯನೆ ಬಂದಂಬರದೊಳ್
ಮೆಯ್ಯಂ ಮಱೆಮಾಡಿ ಕಲಸಿದಮೃತದ ತುತ್ತಂ
ಸುಯ್ಯದೆಳೆದುಂಬ ಕಾಲನ
ಕೆಯ್ಯನೆ ನಿಮಿರ್ದತ್ತು ರಾಹು ಸಸಿವಿಡಿದೆಡೆಯೊಳ್ ೭೭

ನುಂಗುವ ರಾಹುವ ವದನದ
ತಿಂಗಳ್ ನೆನೆಯಿಸಿದುದಾಗಳಂತಿರೆ ಕಳೆಗಳ್
ಪಿಂಗೆ ಮಸಮಸನೆ ಮಸುಳ್ದರಿ
ವಿಂಗಳದೊಲೆವಾಯ್ಗೆ ಬೀಳ್ವ ಬೆಳ್ದಾವರೆಯೊಲ್ ೭೮

ಅದು ನೋಡಲ್ ನೋಡಲಡಂ
ಗಿದುದರಸನ ಮುಂದೆ ಕೊಳ್ವ ರಾಹುವಿನ ಮಹಾ
ವದನೋದ ಪಾತ್ರದೊಳ್ ಮುಳು
ಗಿದ ಫಳಿಗೆಯ ಬೆಳ್ಳಿವಟ್ಟಲೆನೆ ವಿಧುಬಿಂಬಂ ೭೯

ಬಂದಿನಿಸಾನುಮೊಯ್ಯನೆಮೆಯಿಕ್ಕದ ಮುನ್ನಮೆ ನೆಟ್ಟನೀಗಳಿ
ರ್ದಿಂದುವ ಬಿಂಬಮಂಬುಧಿಯೊಳಳ್ದವೊಲಿಂತಿದೆ ಮಾಯವಾಗಿ ಪೋ
ಯ್ತೆಂದು ಕಿರೀಟರತ್ನ ಕಿರಣಾಳಿ ಸುಪರ್ವಧನುರ್ವಿಳಾಸಮಂ
ಮುಂದಿದೆ ಮೂಗುವಟ್ಟು ತಲೆದೂಗಿದನಾಗಳಿಳಾಧಿನಾಯಕಂ ೮೦

ಆ ಪರಿಪೂರ್ಣೇಂದುಗೆ ನೆಗ
ಳ್ದೀಪರಿಭವವೆತ್ತಣಿಂದೆ ಬಂದುದೆನುತ್ತು
ರ್ವೀಪತಿ ಬಗೆಯೊಳ್ ಭಾವಿಸಿ
ಭಾಪುರೆ ವಿಧಿಯೆಂದು ನೊಂದು ಸೈವೆಱಗಾದಂ ೮೧

ತಳ್ವದೆ ತವಕಿಪ ರಾಹುಗೆ
ಬಳ್ವಳ ಬಳಸಿರ್ದ ತಾರೆ ಮಸುಳಿಸೆ ಚಂದ್ರಂ
ಕೇಳ್ವೋದನೆಂದೊಡಿಳೆಯೊಳ್
ಕೇಳ್ವರ್ ಮರುಳಲ್ತೆ ಚಂದ್ರತಾರಾಬಲಮಂ ೮೨

ಅಮೃತಾಂಭೋನಿಧಿ ತನ್ನ ಪುಟ್ಟುವನೆ ಗೋತ್ರಂ ನೋಳ್ಪೊಡಾತ್ರೇ
ಯಮೆಲ್ಲಮರರ್ ಬಂದೆರೆವರ್ತಿಗಳ್ ನಿಜಶರೀರಂ ಸತ್ಕಳಾಪೂರ್ಣಮು

ದ್ಗಮಬಾಣಂ ಪ್ರಿಯಬಂಧು ತನ್ನಯ ಬಲಂ ಲೋಕಕ್ಕೆ ಮೈಗಾಪೆನಿ
ಪ್ಪ ಮಹತ್ವಂ ನೆಱೆದಿಂದುಗಿಂದು ನೆಗಳ್ದೀ ಕೋಡೆತ್ತಣಿಂ ಮೂಡಿತೋ ೮೩

ವ: ಎಂದು ವಿಚಿತ್ರ ರಸಾನುವಿದ್ಧಮಾದ ಚಿತ್ರಮೆ ವೈರಾಗ್ಯಚಿತ್ರಕ್ಕೆ ಭಿತ್ತಿಯಾಗೆ

ಕಿಱಿಯಂದು ಲೋಕಮೆಱಗುವ
ನೆಱದಡೆ ವಿಬುಧಾಳಿ ತುಷ್ಟಿವಡುವಮೃತಕರಂ
ಗಱೇಡಾದುದನಱಿದಱಿ
ದೆಱಗುವರೇಕಕಟ ರಾಜಪದವಿಗೆ ಮನುಜರ್ ೮೪

ಏಮಾತಮೃತಮನುಂಡಜ
ರಾಮರರೆನಿಸಿರ್ಪನಾವನಿಂ ದೇವರೆನಿ
ಪ್ಪಾ ಮಹಿಮೆಯ ವಿಧುಗಾಯ್ತುತ
ಮೋಮುಖದಿಂದಳಿವು ತಮದಿನಳಿಯದನಾವಂ ೮೫

ಮುಂಚೆ ಚತುರ್ಭೂತಂಗಳ
ಸಂಚಯದೊಳ್ ನಾಡೆ ಕೂಡಿದಾಗಳ್ ಮನಮಂ
ವಂಚಿಸಲೇಕಿನ್ನಿಳೆಯೊಳ್
ಪಂಚತ್ವಮನಕಟ ಪಡೆಯದಿರ್ಪನೆ ಜೀವಂ ೮೬

ನವರಂಧ್ರಮೆಂಬ ಕನ್ನಂ
ಸವೆದಿರಲೊಡಲೆಂಬ ಮನೆಯನೊಯ್ಯನೆ ಪೊಕ್ಕಾ
ಜವನೆಂಬಾ ಱಡಿಗಳ್ಳಂ
ತವಕದಿನಸುವೆಂಬ ವಸುವನೊಯ್ಯದೆ ಮಾಣಂ ೮೭

ಸಾರೆಯ ಸಚಿವರ್ ಭಯಮಂ
ಬಾರಿಪ ಬಲ್ಬಂಟರಗಿದುಕೊಳ್ವಗ್ಗದ ಕಾ
ಳೋರಗನಂ ಬಾರಿಪರೆನೆ
ಬಾರಿಸಲಾರ್ತಪುವೆ ಬಯಲಮಂತ್ರಂ ತಂತ್ರಂ ೮೮

ಮಿಸುಗುವೊಡಲ್ ಮಿಂಚಾರಯೆ
ಬಿಸಿಲರಿಸಿನಮಮರ್ದ ಜವ್ವನಂ ಜಾಣರ್ ಭಾ
ವಿಸಿ ಬಗೆದು ನೋಡೆ ನೆಲೆಗೆ
ಟ್ಟುಸಿರೆಂಬುದೆ ಗಾಳಿವಾತದಂ ನಂಬುವುದೇ ೮೯

ಮಲಯಜಮನೊಟ್ಟಿ ಚಾಮರ
ದೆಲರಿಂದಂ ಬೀಸಿ ತಳ್ತ ಬೆಳ್ಗೊಡೆಯಂ ಕೆ

ಯ್ವಲದೆ ನೆಳಲ್ಮಾಡಿದ ಕ
ಕ್ಕುಲಿತೆಯ ನಿಂದಪುದು ನಿಲ್ಲದುಸಿರವನಿಪರಾ ೯೦

ತೊಂಡು ತೊಳಸುಗರನವನಿಯೊ
ಳಂಡಲೆದಗಲಕ್ಕೆ ಪರಿದು ಕಡೆಯೊಳ್ ತನ್ನಂ
ಗಂಡುಗಿಡೆ ಪಿಡಿದು ಕಾಲಂ
ಕೊಂಡೊಯ್ವಂದರಸನಾಣೆ ಕೋಣೆಯೊಳಳಿಗುಂ ೯೧

ಪೊಣ್ಮೆ ಭಯಂ ಭೂಮಿಯೊಳಿರ
ಲಣ್ಮದೆ ಪರಿದುದ್ಗಮೇಱಿಕೊಂಡನವರತಂ
ಕಣ್ಮುಚ್ಚದಿರ್ಪ ಸುರರಂ
ಘಣ್ಮನೆ ಕೊಂಡೊಯ್ವ ಕಾಲನೊಯ್ಯನೆ ನರರಂ ೯೨

ಸಾವನ್ನೆವರಂ ಸ್ಥಿತಿರ
ದಾವನೊಳಂ ಶೈಶವಂ ಯುವತ್ವಂ ಮುಪ್ಪೆಂ
ಬೀ ವಿಧಿವಡೆದಿರ್ದಲ್ಲಿಯೆ
ಮೂವಣ್ಣಂಬರಿಪ ದೇಹದೊಳ್ ಮೋಹಿಪುದೇ ೯೩

ನರರೊಡಲಡವಿಗಳಿರ್ಪೊ
ಸರಿಸಲ್ ಕಡುಕೆಯ್ದು ಕಾಯ್ದು ಕಾಲನಿದಾಘಂ
ಬರೆ ನರೆಗಳ್ ಪೋಲವೆ ತರ
ತರದಿಂ ತಲೆವೊಲದೊಳಾಗಳೊಣಗಿದ ಪುಲ್ಲಂ ೯೪

ಕೆಂಬಲ್ಲನೊಸೆದು ರಸದಾ
ಳಿಂಬದ ಬಿತ್ತೆಂದು ಪೊಗಳ್ವ ಕವಿಗಳ ಮಾತಂ
ನಂಬಿದೆನಲ್ಲದೊಡೇಂ ಗಡ
ತಿಂಬುದೆ ಕಳಿವದಱೊಳೆಱಗಿ ಖಳಕಾಲಶುಕಂ ೯೫

ಬಱೆಯೆ ವಯಸ್ಸಲಿಲಮೊಡ
ಲ್ದೊಱೆದಡಿಯೊಳ್ ನಿಂದು ನಿಮಿರ್ದ ವಾರ್ಧಿಕಬಕನಾ
ಯ್ದುಱಿಸಿ ಕುಱುಕುವ ಕಣ್ಣಂ
ಮಿಱುಗುವ ಮೀನೆನ್ನದಿನ್ನದೇನೆಂದಪುದೋ ೯೬

ತರಕಾಱಂಬೊಲದರ್ತು ಮುಪ್ಪಡಿಸಿ ಬೇಗಂ ಬಂದು ಕೈಕಾಲ್ಗಳಂ
ಸೆರೆಯೆಂಬಗ್ಗದ ಪಗ್ಗದಿಂ ಬಿಗಿದು ನಂಟರ್ನೋಡ ನೋಡಲ್ ಜವಂ

ಗಿರದೊಯ್ದಾಗಳೆ ಮಾಱಲೆಂದು ತಲೆಯೊಳ್ ಪುಲ್ಗಟ್ಟಿದಂತಿರ್ದ ಬೆ
ಳ್ನರೆಯಂ ಕಂಡಕಟೇಕೆಮಾಡುವನೊ ಮತ್ತಂ ಮಾನವಂ ಮಾನವಂ ೯೭

ಓವೊ ನಿಜದೇಹ ಮೋಹಮ
ನೇವೇಳ್ವುದೊ ಕೆಲದೊಳಿರ್ದ ಕಿಸುಗುಳಮಂ ಕಂ
ಡೇವೈಸುವ ಜೀವಂ ಪರಿ
ಭಾವಿಸನೇಕೊಡಲನಕಟ ಶುದ್ಧದ ಮಡಲಂ ೯೮

ಎಂದು ಮರೀಚಿಕಾಜಲಮನೀಸುವನಂಬರ ಪುಷ್ಪಮಾಲೆಯಂ
ಸಂದಿಸಿ ಕಟ್ಟುವಂ ದಿವಿಜಚಾಪದ ನಾರಿಯನೇಱಿಪಂ ದಿಟ
ಕ್ಕಂದವನೊಳ್ ಸ್ವಯಂವರವಿಳಾಸದಿನೋತಿ ಱಗಿರ್ಪಳಲ್ಲದೇ
ನೆಂದೊಡಮೊಲ್ವಳೇ ಚಪಳೆ ಗೋಮಿನಿ ಕಾಮಿನಿಗಾಳುಗಂಡರಂ ೯೯

ಬಂದೆಲ್ಲಿಯಾನುಮೊರ್ವಂ
ಸಂದಿಸಿ ಪಗೆಗೊಲ್ಗುಮೆಂದೊಡೆಡೆವಿಡದೊಡಲೊಳ್
ನಿಂದುಱುವಱುವರ್ ಪಗೆಗಳ್
ಕೊಂದೀ... ಸಿರಿಯ ಮಱಪಿನೊಳ್ ಮಾನಸರಂ ೧೦೦

ಪೃಥ್ವಿ॥ ಕುಲಂ ಕುಲಟೆಯರ್ಕಳಿಂದನಮಪಾಯದಿಂದೀ ವಯೋ
ವಿಲಾಸಗತಿಕಾಲದಿಂ ವಿವಿಧ ವಿದ್ಯೆ ಸಂವಾದದಿಂ
ಪೊಲಂಬಳಿದು ಪೋಪುದಂ ಕಳಿಯೆ ಕಂಡು ಕಂಡಕ್ಕಟಿಂ
ತಲಂಪು ಮಿಗೆ ಮಾಳ್ಪುದೇ ದುರಭಿಮಾನವಂ ಮಾನವಂ ೧೦೧

ಮದದುದ್ರೇಕದಿನುರ್ಕಿ ಸೊರ್ಕಿ ಪಳಿಗಂ ಪಾಪಕ್ಕಮುಳ್ಳಳ್ಕಿದಾ
ಡದ ಗೊಡ್ಡಾಟಮನಾಡಿ ಕೂಡಿ ಬಯಲಾರ್ತಕ್ಕರ್ಥಮಂ ಸಿಲ್ಕಿ ಕಾ
ಲದ ಕೆಯ್ಯೊಳ್ ಕೆಡೆಪಟ್ಟ ದುರ್ನರಕದೊಳ್ ಬಿರ್ದಲ್ಲಿ ಪಾಳೂರ ಕೋ
ಳದ ಕಳ್ಳಂಗೆಣೆಯಾಗಿ ಜೀವನಕಟಾ ಮೋಕ್ಷಕ್ಕೆ ಗೆಂಟಾಗನೇ ೧೦೨

ಕಟ್ಟೋಗರವಿಲ್ಲದೆ ಗಡ
ಬಟ್ಟೆ ಗರಡಿಯೆತ್ತರಡಸಿ ಕಡು ನಿಡುವಯಣಂ
ಮುಟ್ಟಿರೆ ಸಂಬಳದಱಸಂ
ಕಟ್ಟದೆ ಮಱುಭವದ ಬಟ್ಟೆಪೋಪವನೆಗ್ಗಂ ೧೦೩

ಮನಮೆರಡಂತೆ ಮುಂಬರೆಯದೊಳ್ ಪರಿದಾಯುವ ತೀರ್ಕೆಯಲ್ಲಿ ತೊ
ಟ್ಟನೆ ಬಗೆಬೆಚ್ಚಿತೆನ್ನ ತೆಱಸಂ ಸವೆದೊಯ್ಯನೆ ಬಪ್ಪೆನೊಂದೆರ

ಳ್ದಿನದೊಳಗನ್ನೆಗಂ ಪದೆದು ಸೈರಿಪುದಾಂ ಬರಲೊಲ್ಲನೆಂದು ಮು
ಟ್ಟಿನ ನೆವದಿಂ ತಗುಳ್ದು ತಲೆದೂಗಿದೊಡಂತಕನೊಯ್ಯದಿರ್ಪನೇ ೧೦೪

ವ: ಎಂದು ಸಂಸಾರ ಶರೀರ ಸಂಪದಾದಿಗಳಧ್ರುವಮಂ ಭಾವಿಸಿ

ಕಿಡುವೊಡಲ ಬಲ್ಪನಳಿಪಿಂ
ಕಿಡಿಸದೆ ತಪದಿಂದೆ ತವಿಸಿ ಸವೆಯದ ಸುಖಮಂ
ಪಡೆವುದೆ ಕಜ್ಜಂ ಸಜ್ಜನ
ರ್ಗೆಡೆವಾತಿನ್ನೇನೆನುತ್ತೆ ಮತ್ತಂ ಮನದೊಳ್ ೧೦೫

ಕರಣಂಗಳ್ ಪಟುಗಳ್ ಜಿನೇಂದ್ರಪದ ಮಂತ್ರಂ ಸಿದ್ಧಮಾಯ್ತಾಹ ಸೈ
ತಿರೆ ರತ್ನತ್ರಯಮೆಂಬ ರಕ್ಕೆವಣೆ ಸಾರ್ದತ್ತೇಕೆ ತಳ್ವಿಗೆನ್ನೆನು
ತ್ತರಸಂ ಕಾಲಪಿಶಾಚನಂ ತಗುಳ ತೂಳ್ದಟ್ಟಿ ಕಟ್ಟೀವದೇಂ
ಪರಮಾರ್ಥೈಕ ನಿಧಾನಮಂ ಪಡೆವೆನೆಂಬುದ್ಯೋಗಮಂ ತಾಳ್ದಿದಂ ೧೦೬

ವ: ಅಂತು ಪರಮವಿರಕ್ತಿ ರಮಾನುರಕ್ತಚಿತ್ತನಾನಕ್ತಾವಸಾನಮಂ ಪಾರ್ದುದಯದೊಳಾಪ್ತ
ಬಾಂಧವ ಪ್ರಧಾನ ಪುರುಷರಂ ಕರಸಿ ನಿಜವೈರಾಗ್ಯ ವ್ಯವಸ್ಥೆಯನೆರಡಿಲ್ಲದಱಿಪಿ

ಪರಮ ವಿರಕ್ತಿಯಂ ಕೊಳತ ಪುಲ್ಗೆಣೆಗೊಂಡು ಸಮಸ್ತ ಧಾತ್ರಿಯಂ
ಧರಣಿದನಾಸೆಗೆಯ್ಯದಿರಲೊಯ್ಯನೆ ಕೈಮುಗಿದೆಂದನಂದನೊ
ತ್ತರಿಸಿ ಮುಖಾಬ್ಜದೊಳ್ ದಶನದೀಧಿತಿ ಮಂಜಿನ ಪುಂಜಮೆಂಬಿನಂ
ಪೊರೆಯೆ ಸುಮಂತ್ರನೆಂಬ ನಿಜಮಂತ್ರಿ ಸುಧಾಶನಮಂತ್ರಿ ಸನ್ನಿಭಂ ೧೦೭

ದೇವ ಸಮಂತು ನೀಂ ನೆಗಳ್ದ ಕಜ್ಜಮೆ ಸಜ್ಜನಮಾಗದೀಗಳಾಂ
ಭಾವಿಸೆ ಜೀವಮೆಂಬ ಪುರುಳುಳ್ಳೊಡೆ ತತ್ಸುಖಹೇತುವಾದ ಲೋ
ಕಾವಳಿಯಿಕ್ಕೆಗಿಕ್ಕುವಮದಿಲ್ಲದೆ ತತ್ಪರಲೋಕಮಂಬರೇಂ
ದೀವರ ಗಂಧದೊಂದೊರೆಗೆ ಬಾರದೆ ಭಾವಿಸೆ ನೋಡೆ ಬಲ್ಲವಂ ೧೦೮

ಮೊದಲೊಳ್ ಪುಟ್ಟುವ ಕಾಲದೊಳ್ ಪೊಱಗಣಿಂದೈತಂದುದಂ ಸಾಯ ಸೈ
ತಿದಿರೊಳ್ ನೆಟ್ಟನೆ ಪೊರ್ದುದಂ ಚಳಿಯದಂಗೋಪಾಂಗಮಂ ಚಲ್ಲಿ ಮಾ
ಡಿದೊಡಂ ತಳ್ತೊಳಗಿರ್ದೊಡಂ ಕಡೆಗದೆಂದುಂ ತರದೇ
ಹದಿನಾತ್ಮಂ ಪೆಱನೆಂಬ ಬುದ್ಧಿ ನಿನಗೀಗಳ್ ಸಾರ್ದುದುರ್ವೀಶ್ವರಾ ೧೦೯

ವ: ಎಂದು ದೇಹಾತ್ಮವಾದುಮನೆ ಪಡಿಯಚ್ಚುವಿಡಿದು ಮತ್ತಂ

ತಡೆಯದೆ ಮದಶಕ್ತಿಯನಾ
ಗುಡಾನ್ನ ಪಿಷ್ಟಾಂಬು ಧಾತಕೀ ಸಂಯೋಗಂ

ಪಡೆವಂತೆ ಶಕ್ತಿಯಂ ಪಡೆ
ವೊಡಲೆ ಚತುರ್ಭೂತಯೋಗದಿಂ ಚರಿಯಿಸುಗುಂ ೧೧೦

ನೆನೆದಿಲ್ಲದ ಪರಸುಖಮಂ
ಕನಸಿನ ಭತ್ತಕ್ಕೆ ಗೋಣಿವೊಯ್ವವೋಲಿಹದೊಳ್
ತನಗತನುಸುಖಮನೀವೀ
ತನುವಂ ತಪಕೊಡ್ಡಿ ಗೊಡ್ಡುಮಾಡುವನೆಗ್ಗಂ ೧೧೧

ಎಳೆಮಿಂಚಂ ತೂಳ್ವ ತೆಳ್ಗೆಯ್ ತೊಳಗುವ ಸುಲಿಪಲ್ ತೊಂಡೆವಾಯ್ ನೀಳ್ದಕಣ್ಗಳ್
ನಳಿತೋಳ್ ತೊಂಗಲ್ಗುರುಳ್ ಪೊಂಗಿದ ನೆಲೆಮೊಲೆ ಕಣ್ಗೊಳ್ವ ಪೆಣ್ಗಳ್ ಮನಂಗೊ
ಳ್ವಳಿಪಿಂ ಕೂರ್ತಪ್ಪುವಾರ್ಪಿಂ ಮುಳಿವ ತಿಳಿವ ಸಂಸಾರಸೌಖ್ಯಂಗಳಂ ಮೈ
ತಳೆವನ್ನಂ ರಾಗದಿಂ ಭೋಗಿಸದರಸ ತಪಕ್ಕಾಂಪನಿಂ ಗಾಂಪನಾವಂ ೧೧೨

ಕಟ್ಟಿದಿರ ಸುಖಮನಿನಿತಂ
ಬಿಟ್ಟೀಗಳೆ ಬರ್ಪುದೆಂದು ಬರೆದಱಿಗುಱುಪಂ
ಕೊಟ್ಟು ಪರಲೋಕದೋಲೆಯ
ನಟ್ಟಿದರಾರಾರ ಪಿತೃಪಿತಾಮಹರರಸಾ ೧೧೩

ಧರೆಯೊಳ್ ಮುನ್ನಱಿಯೆವಿದಂ
ಧರಣೀಶ್ವರ ನಿನ್ನ ಕಾಲದೊಳ್ ಕಡುಗೂರ್ಪಂ
ಕುರಿಸಿರ್ದ ಮೊದಲ ಕೋಡುಂ
ಪರಲೋಕದ ಬೀಡುಮಾಗಳೊಡವುಟ್ಟಿದುವೇ ೧೧೪

ಎಲ್ಲಿತ್ತೊ ಸಗ್ಗಮಮಱಿವೊಡ
ದೆಲ್ಲಿತ್ತೋ ನರಕವಕಟ ಬಱಿದಱಿ ಮರುಳರ್
ಮೆಲ್ಲನೆ ಕಿವಿಯೊಳ್ ಪೇಳ್ದುದೆ
ಗೆಲ್ಲಂ ನಿನಗಾಗಿ ನೀಗದಿರ್ ನಿಜಸುಖಮಂ ೧೧೫

ಮೊದಲೊಳ್ ಲಜ್ಜೆಯನೆಯ್ದೆ ಸುಟ್ಟು ಕುರುಳಂ ಕೊಟ್ಟುಟ್ಟುದಂ ಬಿಟ್ಟು ಲೋ
ಕದ ಹಾಸ್ಯಕ್ಕೊಳಗಪ್ಪ ಬೂತುಗಳ ಮಾತೇಂ ಸತ್ತು ಕಾಣ್ಬೊಂದು ಸ
ಗ್ಗದಿನಿರ್ದಲ್ಲಿಯೆ ನಾಡೆ ಕಾಣ್ಬ ನರಕಂ ಲೇಸೆಂದು ಮೈಸೋಲ್ವ ಲೋ
ಕದ ಬಾಯ್ಗಾದೆಯನೆಯ್ದೆ ಕೇಳ್ದುಮೆಲೆ ಧಾತ್ರೀನಾಥ ಬೇಳಪ್ಪುದೇ ೧೧೬

ಈ ವಿಧದ ದೃಷ್ಟಸುಖಮಿರೆ
ಭಾವಿಸದೆಡೆಗೊಟ್ಟದೃಷ್ಟ ಫಲಮೊಲ್ವಂ ಪಾ

ಲ್ತೀವಿದ ಮೊಲೆಯಿರೆ ಮತಿಗೆ
ಟ್ಟಾವಿನ ತುದಿಗೋಡನೀಸಿ ಕಱೆಯದೆ ಮಾಣಂ ೧೧೭

ವ: ಎಂದು ಸುಮಂತ್ರಂ ಸುರಮಂತ್ರಿಯ ಮಾತನೆ ಪ್ರತಿಷ್ಠೆಗೆಯ್ಯಲಕಳಂಕ ಚರಿತ್ರಂ ಸಕಲ ತತ್ತ್ವವೇದಿಯಪ್ಪುದಱಿನರಸನೀ ಮಾತು ಸುಮಂತ್ರನೆಂಬ ಪೆಸರು ನಿನ ಗುಚಿತ ಮಾಯ್ತೆಂದಾತ್ಮತತ್ತ್ವಮಂ ಸಮರ್ಥಿಸುವ ಬಗೆಯಿನಿಂತೆಂದಂ

ವಿಪುಳ ಸುಖದಂದದಿಂ ನಿಜ
ವಪುವಿನೊಳಾತ್ಮನೆ ವಲಂ ಸ್ವಸಂವೇದ್ಯಂ ತೋ
ರ್ಪುಪಚಿತ ಪರಾಂಗದೊಳ್ ಬು
ದ್ಧ್ಯಪೂರ್ವಚರಿತಂಗಳಿಂ ಸಮಂತನುಮೇಯಂ ೧೧೮

ಬಿಡೆ ಪೋದ ಜನ್ಮದೊಳ್ ನೇ
ರ್ಪಡೆ ವಾಸನೆವಡೆದು ಪುಟ್ಟಿದಾಗಳೆ ಶಿಶುವಿಂ
ಗೊಡನೆ ಮೊಲೆಯುಣ್ಬ ವಿವರಮ
ನೊಡಲಾಳಾಗಿರ್ದಾತ್ಮನಲ್ಲದಾರ್ ಕಲಿಸಿದರೋ ೧೧೯

ಅಱಿವಿನೊಳೆ ಕಾಣ್ಬ ಮೂರ್ಖನ
ನಱಿಗುಮೆ ಜಡದೃಷ್ಟಿ ನಿಟ್ಟೆವಡೆದನುಗೆಯ್ದಾ
ರ್ದುಱುವ ಭಟನಾವನಾದೊಡ
ಮಿಱಿದೊಡೆ ನಡುಗುಮೆ ಕಡಂಗಿ ಕೂರಿಸಿ ನಭಮಂ ೧೨೦

ಭೂತಚತುಷ್ಟಯ ಯೋಗದೆ
ಚೇತನನುದಯಿಸುಗುಮೆಂಬೊಡನಿಲ ಶಿಖಿಜ್ವಾ
ಲಾತಾಪಿತಾಂಬು ಕುಂಭದೊ
ಳೇತಕ್ಕೊಡವೆರಸಿ ಚೇಷ್ಟೆಯಂ ಪುಟ್ಟಿಸದೋ ೧೨೧

ವಿನುತ ಗುಡಾದಿಯ ಸಮ್ಮೇ
ಳನದಿಂ ಮದಶಕ್ತಿ ತಿದಿಯೊಳುದಯಿಸೆ ದನಿ ದ
ರ್ಶನಮನುವಿಸಿ ನೋಡೆ ಸಚೇ
ತನ ಚೇತನನೊಡನೆ ಸಾರ್ದುವೇನಾದಪುದೋ ೧೨೨

ಅದಱಿಂದಾತ್ಮಂ ಜಡದೇ
ಹದಿಂದ ಭಿನ್ನಂ ಸಚೇತನಂ ನಿತ್ಯಂ ತೋ
ಱಿದಮೂರ್ತಂ ಬೋಧ ಕಲಾ
ವಿದಿತಂ ನಿಜಕರ್ತೃಭೋಕ್ತೃವೆಂದಱಿಗಱಿವಂ ೧೨೩

ಆ ಸಂತತೋರ್ಧ್ವಗತಿ ಮುಂ
ಬಾಸಣಿಸಿದ ಕರ್ಮದಿಂ ತೊಳಲ್ವಂತವೆ ನಾ
ನಾ ಸುರಗತಿಗಳೊಳೆಲರಿಂ
ಸೂಸುವವೋಲ್ ದೆಸೆಗೆ ಶಿಖಿಶಿಖಾಸಂದೋಹಂ ೧೨೪

ಪೆಱವಱೊಳೇನೊ ದೃಷ್ಟಮಿದೆ ಪುಟ್ಟಿದ ಮಾನವರಲ್ಲಿ ತಾನೆ ತ
ಳ್ತಱಿಕೆಯ ನಾಡನಾಳ್ವ ಬೆಸಕೈವ ರಸಾಳೆನಿಪೊಂದು ಭೇದಮೆ
ಚ್ಚಱಿಸದೆ ಜೀವಮುಂಟು ಭಯಮುಂಟು ನೆಗಳ್ಚುವ ಪುಣ್ಯಮುಂಟು ಬೇ
ಸಱಿಸುವ ಪಾಪಮುಂಟೆನಿಪುದಂ ಪರಿಭಾವಿಸು ನೀಂ ಮಹಾಮತೀ ೧೨೫

ಅದಱಿಂ ಕರ್ಮಕಳಂಕಳಂಕದೊಳಗರ್ದಿರ್ದಾತ್ಮನೆಂಬೊಂದು ರ
ತ್ನದ ತೇಜಂ ಪೊಱಪೊಣ್ಮುವಂತೆ ತಪಮೆಂಬಚ್ಛಾಂಬುವಿಂ ಸ್ವಚ್ಛಚಿ
ತ್ತದೊಳಿಂದಂ ತೊಳೆದೊಳ್ಗುಣಂಗೊಳೊಳಲಂಪಿಂ ತೋದು ಮುಕ್ತ್ಯಂಗನಾ
ಹೃದಯಗ್ರಾಹಿಯೆನಲ್ ವಿಭೂಷಣಮನಾನುದ್ಘೋಷಣಂ ಮಾಡುವೆಂ ೧೨೬

ವ: ಎಂದು ಸುಮಂತ್ರನ ದುರ್ಮಂತ್ರಧ್ವಾಂತಮಂ ವಿಧ್ವಂಸನಂಗೈವ ಸೂರ್ಯ ಕಿರಣಂ ಗಳೆಂಬಂತಿರ್ದ ಸುವ್ರತವಾಕ್ಯಂಗಳಿಂದೊಡಂಬಡೆ ನುಡಿದು

ವಿಶದಮತಿ ಪಾರಲೌಕಿಕ
ವಿಶಾರದಂ ಸಕಲ ರಾಜ್ಯಮಂ ಪ್ರಾಜ್ಯಯಶೋ
ವಶಮಾಗೆ ದಶದಿಗಂತಂ
ದಶರಥನತಿರಥಕುಮಾರನೊಳ್ ನಿರವಿಸಿದಂ ೧೨೭

ಪಟುತಪದೊಳ್ ತಗುಳ್ದು ಕೃಪೆಯಿಂದಿಳೆಯಂ ಪಳಿಯಂತೆ ಪನ್ನಗ
ಸ್ಫಟಿನಳಿವಂದದಿಂದಿಳಿಪನಾತ್ಮ ಸುತಾಯತ ಬಾಹುಪೀಠದೊಳ್
ಸ್ಫುಟಮೆನಲಿಟ್ಟು ಕಪ್ಪುಱನ ಕಾಣ್ಕೆಗೆ ತಾಂ ಕಡೆಯಾಣೆಯಾದನಂ
ತುಟೆ ಪರಿಭಾವಿಸಲ್ ನಿಯಮದಿಂ ದಯೆಯಿಲ್ಲದ ಧರ್ಮಮೇವುದೋ ೧೨೮

ಗರಳಾಹಿಸ್ಫುಟಿಯಂ ಕಠೋರ ಕುಲಭೂಭೃತ್ಕೂಟದಿಂ ಕೂರ್ಮ ನಿ
ಷ್ಠುರಪೃಷ್ಠಾಶ್ರಯದಿಂದಗಲ್ಚಿ ತಳೆದೆನ್ನಂ ತನ್ನ ವೈರಾಗ್ಯದೊಳ್
ಪಿರಿದುಂ ಮತ್ತವಱೊಳ್ ತಗುಳ್ಚದೆ ನಿಜಾತ್ಮೋದ್ಭೂತ ದೋರ್ಮಂಡಲ
ಸ್ಥಿರ ಪೀಠಾಗ್ರನೊಳಿಟ್ಟಂದು ತಳೆದಳ್ ಭೂಕಾಂತೆ ಸಂತೋಷಮಂ ೧೨೯

ಶಾಂತರಸಭರಿತ ವಿಮಳ
ಸ್ವಾಂತನ ವೈರಾಗ್ಯದೊಳ್ ಧರಾಧಿಸ್ತ್ರೀಯರ್

ಪಿಂತುಳಿದೊಡಮಮಲಯಶಃ
ಕಾಂತೆಬಿಡಳ್ ಬೆನ್ನ ನಿನ್ನೊಳಾಗಲ್ವೇಡಾ ೧೩೦

ಪದುಳದಿನಾತ್ಮಕುಳಮಂ ಪ್ರಜೆಯಂ ಪರಿವಾರಮಂ ನಿಜಾ
ಭ್ಯುದಯ ಪರಪ್ರಧಾನರನೊಡಂಬಡೆ ಮೆಚ್ಚಿಸಿ ಸಚ್ಚರಿತ್ರದೊಳ್
ಪುದಿಯೆ ನಿಜಾಗ್ರಹಂ ಬಹುಪರಿಗ್ರಹಮಂ ತೊಱೆದಂ ನರೇಂದ್ರನ
ಗ್ಗದ ಮದವಾರಣಕ್ಕಿದಿರೆ ಸುತ್ತಿಮಡಲ್ತ ಮೃಣಾಳಜಾಳಕಂ ೧೩೧

ವ: ಅಂತು ಸಕಳ ಪರಿಗ್ರಹನಿವೃತ್ತನಾಗಿ ರಾಜತ್ವಮಂ ಬಿಟ್ಟು ಸನ್ಮಾರ್ಗಾವಲಂಬಮಂ ಬಿಡದೆ ಸರ್ವಜ್ಞ ಚೂಡಾಮಣಿಯೆನಿಸಿ ನೂರ್ವರುರ್ವೀಶ್ವರರ್ವೆರಸು ವನಮಂ ಪೊಕ್ಕು ಅಚಲಿತ ದೀಕ್ಷಾಪ್ರಧಾನವಿಧಾನಂ ಉತ್ತರಾಭಿಮುಖನಾಗಿ ಪಂಚಪದಂಗಳಂ ಸ್ಮರಿಯಿಸಿ ಜಾತರೂಪಮನಂಗಿಕರಿಸಿದಾಗಳ್

ಮುಂ ಪಂಚಗುರುಪದಾಕ್ಷರ
ಚಂಪಕವಾಸನೆ ನಿಜಾಸ್ಯದಿಂ ಪೊಱಮಡುವನ್ನ
ತ್ತಂ ಪಾಱುವ ಮೋಹಾಳಿಗ
ಳಂ ಪೋಲ್ತುವು ಪಱಿವ ನಿಱಿಗುರುಳ್ ಗುಣನಿಧಿಯಾ ೧೩೨

ಕುಂತಳಮನಿತ್ತು ಮಂಚನೆ
ಯಂ ತಾಳ್ದದ ತನ್ನ ಜಾತರೂಪಕ್ಕೆ ತಪಃ
ಕಾಂತೆ ಕರಮೊಲ್ದಳರಸಂ
ಗಂತುಟೆ ದಲ್ ಪೊಂಗೆ ಪೆಣ್ಣಳೊಲೀವುದು ತಿರಿದೇ ೧೩೩

ಸಂಚಿತ ಮೂಲೋತ್ತರಗುಣ
ಸಂಚಯಮಂ ಶೀಲಮಾಲೆ ನೆಲೆಗೊಳೆ ಪದುಳಂ
ಪಂಚಮಹಾವ್ರತದೋಜೆಗ
ರಂ ಚೆಲ್ವಡೆದತ್ತು ಚೋದಮೆನೆ ಗುಣನಿಧಿಯಾ ೧೩೪

ಬಾಹ್ಯಾಭ್ಯಂತರ ದೇಹ ಸ
ದೂಹ್ಯ ದ್ವಾದಶ ವಿಧೋಗ್ರತಪಮಂ ಸುಜನ
ಗ್ರಾಹ್ಯಮೆನೆ ಚರಿಸಿ ದುರಿತಾ
ಸಹ್ಯಂ ಸಯ್ಯೆಯಿಂ ದಾನನೆನಿಸಿದನಾಗಳ್ ೧೩೫

ಪೋಳಲ್ಗೊಂಡಮರ್ದಿರ್ದ ಪುತ್ತಿನೆಡೆಯಿಂ ವ್ಯಾಳಾಹಿಗಳ್ ಚಂದನ
ಸ್ಥೂಳಾನೇತಹಮೆಂದು ಶಾಂತರಸದಿಂದಂ ತಣ್ಣನಾದಂಗದೊಳ್

ತೋಳೊಳ್ ಕಂಧರದೊಳ್ ಜೋಲಲ್ ಜಾತರೂಪಾತ್ತದಿಂ
ಬೀಳಲ್ವಿಟ್ಟ ಮಡಲ್ತ ಕಲ್ಪತರುವಂ ಪೋಲ್ತಂ ಮುನೀಂದ್ರೋತ್ತಮಂ ೧೩೬

ವ: ಅಂತು ವಿಧಿವಿಹಿತ ದೀಕ್ಷೆಯಂ ಕೈಕೊಂಡು ವಿರುದ್ಧಮಾನಸ ವಿರುದ್ಧ ತಪಂಗಳಿಂ ಚರಿಯಿಸಿ ಸಕಲಸನ್ಯಸದ ಸಮಾನ್ವಿತ ನವನಧಿವಿಧಿಯಂ ಶರೀರಮನಗಲ್ಚಿ ನಿರ್ವಾಣಭೂಮಿ ಗೊರ್ವೆರಲೂನಮಾದ ಸರ್ವಾರ್ಥಸಿದ್ಧಿಯೊಳ್

ಸಮುದಿತ ಸರ್ವಲಕ್ಷಣದೊಡಂಬಡೆ ಪೂರ್ಣ ಸುಧಾಂಶು ಶೋಭೆಯಂ
ಸಮ ಜಿ ಶರೀರಕಾಂತಿ ಪೊರೆವೆತ್ತಮಳ್ವಾಸಿನ ಪಕ್ಕದಾಣದಿಂ
ಸಮನಿಸಿ ದಿವ್ಯರಾಮ ಮಣಿಭೂಷಣ ವಸ್ತ್ರಲೇಪನಾದಿ ತ
ಳ್ತಮರ್ದಹಮಿಂದ್ರಣದ.....ಪುಣ್ಯಮದೇನಗಣ್ಯಮೋ ೧೩೭

ನೂತ್ನಾಮಳ ಚಳಮುಕ್ತಾ
ರತ್ನ ದುತಿಮಂಜರಿ ಮನೋಹರ ನಿಯತಾ
ರತ್ನಿಮಿತಾಕೃತಿ ವಿತ ತಾ
ಯತ್ನ ಸುಖಂ ನೆಗಳ್ದನೆಂತು ನೋಂತನೋ ದಿವಿಜಂ ೧೩೮

ಅನುಬಂಧಗಳು

೩.೨ ಹಂಪೆ ಶಾಸನ

ಬಾಹುಬಲಿ ವಿರಚಿತ ಧರ್ಮನಾಥ ಪುರಾಣಂ ಶಬ್ದಾರ್ಥಕೋಶ

ಮಧುರ ಕವಿ ವಿರಚಿತ ಧರ್ಮನಾಥ ಪುರಾಣಂ ಶಬ್ದಾರ್ಥಕೋಶ

ಪಾರಿಭಾಷಿಕ ಪದಕೋಶ

ಸಹಾಯಕ ಸಾಹಿತ್ಯ

ಅನುಬಂಧ ೧

೩೨ ಹಂಪೆ ಶಾಸನ

ಕ್ರಿ.ಶ. ೧೪೧೧

ಪ್ರೌಢದೇವರಾಯನ ಮಂತ್ರಿ ಲಕ್ಷ್ಮೀಧರನ ಸ್ವಪ್ನದಲ್ಲಿ ವಿಘ್ನೇಶ್ವರನು ಬಂದು ಮಾಲ್ಯವಂತ ಪರ್ವತದ ದಕ್ಷಿಣಭಾಗದಲ್ಲಿ ಅಕೃತಿಮವಾದ ಒಂದು ಗುಹೆಯಿದೆ. ಅಲ್ಲಿ ನನ್ನನ್ನು ಪ್ರತಿಷ್ಠಿಸು ಎನ್ನಲು ಮಂತ್ರಿ ಹಸಾದವೆಂದು ಹೇಳಿ, ಅಲ್ಲಿ ವಿಘ್ನೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ದತ್ತಿಬಿಟ್ಟನೆಂದು ಈ ಶಾಸನ ತಿಳಿಸುತ್ತದೆ. ಇಲ್ಲಿ ಹೇಳಿದ ಲಕ್ಷ್ಮೀಧರಾಮಾತ್ಯನ (ನೀತಿವಾಕ್ಯಾಮೃತ, ಆನಂದ ರಾಮಾಯಣ, ಕೃಷ್ಣಲೀಲಾ) ಕೃತಿಗಳು ಇನ್ನೂ ಸಿಕ್ಕಿಲ್ಲ. ಆತನ ತಾಯಿ ಹೇಳಿದ "ಕೆರೆಯಂ ಕಟ್ಟಿಸು.........." ಎಂಬ ಪದ್ಯದಲ್ಲಿ ನಮ್ಮ ಸಂಸ್ಕೃತಿ ಮಡುಗಟ್ಟಿ ನಿಂತಿದೆ. ಪುಟ್ಟ ಚಂಪೂಕಾವ್ಯದಂತಿರುವ ಈ ಶಾಸನವನ್ನು ಬರೆದವ ಧರ್ಮನಾಥ ಪುರಾಣದ ಕರ್ತೃ, ಮಧುರಕವಿ.

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ [1*] ತ್ರೈಲೋಕನಗರಾ-ರಂಭ ಮೂಲಸ್ತಂಭಾ-

೨ ಯ ಶಂಭವೇ ॥ [೧*] ಶ್ರೀಮತ್ಸಿಂಧೂರಬಂಧಾರುಣಬಿದು ನವಸಂ-ಧ್ಯಾಂಬುದಂ ಪುಷ್ಕರಪ್ರೋ-

೩. ದ್ದಾಮಾಂಭಃಶೀಕರಂ ತಳ್ತು[ಡು]ಗಣಮುರುದಂಷ್ಟ್ರಾಂಕುರಂ ಬಾಲ-ಚಂದ್ರಂ [1*] ಪೋ ಮಾತೇನೆಂಬ ನೇರ್ಪಿಂ ನಭಮ [ನ]ಣಕಿ-

೪. ಪಂತಿರ್ದ್ದ ನಿತ್ಯೋಂನಮತ್ತೇಜೋಮೂರ್ತ್ತಿ ಶ್ರೀಮಹೇಭಾನನನನವರ-ತಂ ಕೂರ್ತು ರಕ್ಷಕ್ಕೆ ನಿಂಮಂ । [೨*]ತಣಿಯೆ

೫. ಸದಾಳಿಯಂ ಪೊರವ ದಾನಗುಣಂ ಪರಿಪೂ [ರ್ಣ]ಭದ್ರಲಕ್ಷಣಮಳಮಟ್ಟ ಶಕ್ತಿಸುಮನಸ್ತುತಮಾದನವದ್ಯವಿದ್ಯೆ

೬. ಸಂ [1*] ದಣೆಯರಮಾವನೊಳ್ನೆಗಳ್ದುದೆಂನವೊಲೆಂದು ಮುದಂಮಿಗ-ಲ್ಮಹಾಗಣಪತಿ ಕೂ[ರ್ಮ್ಮೆ] ಯಿಂ ಕುಡು-

೭. ಗೆ ಲಕ್ಷ್ಮಣಮಂತ್ರಿಗಭೀಷ್ಟಸಿದ್ಧಿಯಂ॥ [೩*] ಘೋರಭವಭಯನಿದಾ-ಘದಿನೋರಂತಳ[ವ]ಳಿದು ಬಂದವ-

೮. ರ್ಗ್ಗೊಳ್ಪಂ ಭಾ [1*] ಗೀರಥಿ ಜನಿಯಿಸಿದಾನಂದಾರಾಮಪದಂಗಳೀಲು-ದೊಂದಚ್ಚರಿಯೇ॥ [೪*] ಶ್ರೀಲಕ್ಷ್ಮೀಧರಗುರುಪದನಾ[ಳೀ] -

೯. ಕನವೀನಗಂಧದೊಳ್ಪಗೆದಂ[ದಾ] [1*] ಲೋಲತೆಯನುಳಿದ ಮನುಜ-
ಮದಾಳಿಗೆ ಸೊಗಯಿಪುದೆ ಜಡಪದಾಂಬುಜಸಂಗಂ ॥ [೫]

೧೦. ಪೊಂಬೆಟ್ಟಮೆ ಪೊಸಕೇಸರಮೆಂಬವೊಲಲಳವಟ್ಟ ಕುವಲಯಂ ಕುವಲಯ-
ದಂ[1*] ತಿಂಬಾಗಿರೆ ತಂನಯ ತುದಿಗೊಂಬಿನೊಳಂಬು-

೧೧. ಧಿಯೊಳೆಸೆದನಾದಿ [ವ] ರಾಹಂ॥ [೬*] ಆ ಮಾಯಾಪೋತ್ರಿ ದಾತ್ರೀಭರ-
ಮನಱಿ ತುಳ್ಕಾಡಿದಂದಾರ್ದ್ದಮರ್ತ್ಯಸ್ತೋಮಂ ಮಂಥಾ-

೧೨. ದ್ರಿಯಂ ಮಂನಿಸದೊ[ದೆ] ಗಡೆದಂದಿಂಬುಗೊಂಡೋವದಂಬಿಂ [1*]
ರಾಮಂ ಕೈವೋಗದೆಚ್ಚಂದಳವಳಿಯದೆ ಗಾಂಭೀರ್ಯ್ಯ-

೧೩. ಧಾಮಂ ತಿತಿ[ಕ್ಷಾ]ಸೀಮಂ ಭೂಮಂಡಲಕ್ಕಾಭರಣಮೆನಿಸಿದಂ ಭೂರಿಭ-
ದ್ರಂ ಸಮುದ್ರಂ ॥ [೭*] ಅಂತಸೆವಂಬುರಾ [ಶಿ] -

೧೪. ಯ ಮಗಳ್ಸಿರಿ ತಂನಯ ರಾಣಿಯಾಗ[ಲೋ]ರಂ[ತಿ]ರನಂತತಳ್ಪತಳದೊ-
ಳ್ಜಲೀಲೆಯನಿಂಬುಗೊಂಡು ನಿ[1*]ಶ್ಚಿಂತೆಯಿನಿ [ರ್ದ್ದ]

೧೫. ನೀರರುಹನಾಭಿಯ ನಾಭಿಸರೋಜದೊಳ್ಜಗತ್ಕಾಂತನಲಂಪಿನಿಂ [ದೊ] ಗೆದ-
ನೂರ್ಜ್ಜಿತಶಾಸನನಂಬುಜಾಸನಂ॥ [೮*] ಸರ-

೧೬. ಸಿಜಭವಾತ್ರಿವಿಧುಬುಧಪುರೂರವಾಯುಃಕ್ಷಿತೀಶನಹುಷಯಯಾತ್ಯಾ [1*]
ದ್ಯರನುಕ್ರ [ಮ] ದಿಂ ಯದುಧರೆಗರ-

೧೭. ಸೆನಿಸಿದನಾದುದಾತನಿಂ ಯದುವಂಶಂ ॥ [೯*] ಶ್ರೀಮತ್ಸೋಮಾ (ಂ)-
ನ್ವಯಕ್ಕುದ್ಭವಿಸಿದ ಯದುವಂಶಾವನೀಪಾಲರೊಳ್ನಿಸ್ಸೀಮಶ್ರೀ-

೧೮. ಸಂಗಮಕ್ಷ್ಮಾಪತಿ ದೊರೆವಡೆದಂ ತತ್ತನೂಜಂ ಸಮಸ್ತೋ [1*] ರ್ವ್ವೀ-
ಮಾನ್ಯಂ ರೂಢಿವೆತ್ತಂ ಹರಿಹರನಧಟಿಂ ತಂನರೇಂದ್ರಾನುಜಂ

೧೯. ಸುತ್ರಾಮೊದ್ದಾಮಪ್ರತಾಪಂ ತಳೆದನಖಿಳಭೂಚಕ್ರಮಂ ಬುಕ್ಕರಾಯಂ ॥
[೧೦*] ಆತಂಗೆ ಜನಿಸಿದಂ ವಿಖ್ಯಾತಂ ನಳ-

೨೦. ನಹುಷನ್ರುಗಭಗೀರಥರೊರೆಗೇ [1*] ಮಾತೊ ಸರಿಮಿಗಿಲೆನಲ್ಧರ್ಮ್ಮಾತತ-
ರೂ [ಪಂ] ಪ್ರತಾಪಹರಿಹರಭೂಪಂ ॥ [೧೧*]ದಾನ-

೨೧. ವಮರ್ದ್ದನನಂತಿರೆ ಮಿನಾಗದೆ ಪಂದಿಯಾಗದಪ್ರತಿರೂಪಂ [1*] ತಾನಾ
ಪ್ರತಾಪಹರಿಹರನೇನುದ್ಧರಿಸಿದನೊ ವೇದಮಂ ಮೇದಿನಿ-

೨೨. ಯಂ॥ [೧೨*] ಆ ಭೂಮೀಪಾಲಪುಣ್ಯಾಂಕುರಮದು ಪುರುಷಾಕಾರದಿಂ
ಪುಟ್ಟಿದಂತಾಶಾಭಾಗಪ್ರಸ್ಫುರತ್ಪಾವನಯ-

೨೩. ಶನಶನಿಪ್ರೌಢಬಾಹುಪ್ರತಾಪಂ[1*] ಸೌಭಾಗ್ಯಶ್ರೀನಿವಾಸಂ ಜನಿಯಿಸಿ
ಸಕಲಕ್ಷತ್ರಚೂಡಾಧಿರೂಢಾ-

೨೪. ಗ್ಭಾಭಾರಂ ಸಾರ್ವ್ವಭೌಮೋಂನತಿಯೊಳೆಸಗಿದಂ ದೇವರಾಜಾವನೀಂದ್ರಂ ॥
[೧೩*] ಸಲೆ ನಾ[ನಾ]ಸಸ್ಯಸಂಪತ್ತಿಯನೊದವಿಸಿ ಸ-
೨೫. ಂತುಷ್ಟಿಯಂ ದಾನಧಾರಾಜಲದಿಂ ಸಂತಾಪಮಂ ತಳ್ಗಿಸಿ ವಿತತಸಿತಚ್ಛತ್ರ-
ಸುಚ್ಛಾಯೆಗೊಯ್ದು [1*] ಜ್ವಲಿಪಾಗ್ಲಾದಾಮ-
೨೬. ದಿಂದಂ ನಿಯಮಿಸಿ ನಿಜದೋ[ಃ*] ಸ್ತಂಭದೊಳ್ಕಟ್ಟಿ ಗೋಮಂಡಲಮಂ
ಸತ್ಕೀರ್ತಿದುಗ್ಧಂಗಱದನಱೆಯಿಂ ದೇವರಾ-
೨೭. ಜಾವನೀಂದ್ರಂ ॥ [೧೪*] ಮಱಿಮಾತೇಂ ಪಗೆಗೊಂಡಪಾರ್ತ್ಥಿವರನ-
ತ್ಯುಗ್ರಾಜಿಯೊಳ್ಕಾಯ್ದು ತಳ್ತಿಱಿವಾಗ[ಳ್ನೆ]ಗಳ್ದ [ಚ್ಛ] ವಂಬೆರಸು
೨೮. ಭೇತಾಳಾಳಿ ಬೆಂನೆತ್ತರಂ [1*]ಸುಱಿದಿರ್ಪ್ಪಾಱದ ಕೈಗಳಿಂ ಕಡೆವರ[ಂ*]
ದಿಗ್ಭಿತ್ತಿಯೋಳ್ಪೂಡಿ ಚಟ್ಟಿಱಿದಂತಿರ್ದ್ದಪುದಪ್ರ-
೨೯. ತರ್ಕ್ಯತರತೇಜಂ ದೇವರಾಜೇಂದ್ರನಾ ॥ [೧೫*] ಪೊಡಕರಿಪಗಂಡಗು-
ಣದುಗ್ಗಡಮೆಂತು[ಟೊ] ಬಿಡದೆ ಜಡಿಯೆ ಜಯವಧುವತ್ತಿ [1*]ತ್ತ [ಡಿ]-
೩೦. ಯಿಡದೆ ಬಾಳಬಾಯೊಳೆ ನ[ಡ]ವಳ್ ಶ್ರೀದೇವರಾಯಭೂವಲ್ಲಭನ ॥
[೧೬*] ಆ ದೇವರಾಯಭೂಪನ ಯಾದವವಂಶಪ್ರದೀಪನ (ಂ)-
೩೧. ನ್ವಯದೊ[ಳ್ಸಂ] [1*] ದಾದಿ ಪ್ರಧಾನರೀ ಧರೆಗಾದ [ರ್ಮ್ಮಾ] ದರಸ [ಸಾ]-
ಯಣ್ಣಾಖ್ಯಮ್ಮುಖ್ಯ [ರ್]॥ [೧೭*]ತೋಡದ ಭಾವಿಯಿಲ್ಲ ಮರೆಕಟ್ಟದ
ಪೇರ್ಗ್ಗೆಱಿ-
೩೨. ಯಿಲ್ಲ ಲೀಲೆಯಂ ಮಾಡದ ದೇವತಾಭವನಮಿಲ್ಲೊಲವಿಂ ಬಿಡದಗ್ರಹಾ-
ರಮಿ [1*]ಲ್ಲಾಡಲದೇನೊ ಭೂಭುವನಭುಂ[ಭು]ಕಮಾ-
೩೩. ದು[ದು] ಕೀರ್ತ್ತಿ ಬಾಪು [೧]ನಾ ಪಾಡಿಯೆ[೧] ಸೈಪು ಮಾದರಸ ಸಾಯಣ-
ರೆಂಬ ಮಹಾಪ್ರಧಾನರಾ॥ [೧೮*]ಅವರಂ [ಬ]ಲಭದ್ರಾಚ್ಯುತ-
೩೪. ರಿವರನೆ ಜನವವರ ತಂಗಿ ಸಿಂಗಲೆ ಭುವನ [1*]ಸ್ತ[ವ]ನೀಯ್ಯಚರಿತೆ
ಸಂತತಮವನೀತಳದೊಳ್ಸುಭದ್ರೆಯೆನಿಪುದು ಪಿರಿದೇ [॥೧೯*] ಆ
೩೫. ತರುಣೀಶಿಖಾಮಣಿಗೆ ವಲ್ಲಭನಾರೆನೆ ವಿಷ್ಣುಉದ್ಧವಿಖ್ಯಾತಪವಿತ್ರಗೋತ್ತ-
ದೊಳು ಗೋಸನವೆತ್ತೊಗೆದಂ ಜಗಜ್ಜನ [1*]ಪ್ರೀತಿ-
೩೬. ಕರಂ ಗುಣಾಕರನಲಂಕೃತಭೂಭುವನಂ ಬುಧಾಳಿಲೀಲಾತಿಶಯೈಕತಾ-
ಮರಸನೆಂದೆನೆ ರಾಮರಸಂ ಧರಿತ್ರಿಯೊಳು ॥ [೨೦*] ಅ-

೧–೧ 'ನಾಡಾಡಿಯೆ' ಎಂದು ಇರಬಹುದು.

೩೭. ನಿಮಿಷನಂದನಕ್ಕಮರಭೂರುಹಪಂಚಕಮೀಶ್ವರಂಗೆ ನೆಟ್ಟನೆ ಮುಖಪಂಚಕಂ ನೃಪನಯಾಭಿಮತಕ್ಕಮ[ರ್ದಂ]ಗಪಂಚಕ-
೩೮. ೦ [1*] ಜನಿಯಿಸಿ ಲೋಕರೂಢಿವಡದಂತೆ ಸಮಸ್ತಜನಂ ಮನಂಗೊಳ-ಲ್ಚಿನಿಸಿದು[ದಾ]ಗುಣೈಕನಿಧಿರಾಮರಸಂಗೆ ತನೂಜಪಂಚಕಂ ॥ [೨೧*] ಕ್ರಮ-
೩೯. ದಿಂ ಲಕ್ಷ್ಮೀಧರ ಚೆನ್ನಮಂತ್ರಿ ಬುಕ್ಕಂಣ ಮಾಧವಂ [ಪೆ]ರ್ಗ್ಗಡೆಯೆಂ [1*] ದಮರ್ದಿರೆ ನಾಮಂ ನೆಗಳ್ದರ್ಸ್ಸಮನಿಸಿ ಸಿಂಗಾಂಬಿಕಾಪವಿತ್ರೋದರ-ದೊಳು ॥ [೨೨*]
೪೦. ಆ ಮೆಯ್ವರೊಳಾಂತಂ ಶ್ರೀಮದ್ಭೀಮಪ್ರತಾಪನರ್ಜ್ಜುನಕೀರ್ತ್ತಿ [1*] ಪ್ರೇಮಂ ಲಕ್ಷ್ಮೀಧರನೆನೆ[ಲೀ] ಮಹಿಯೊಳ್ಧರ್ಮಸಂಭವಪ್ರಾಭವಮಂ ॥ [೨೩*] ಕಂನ
೪೧. ಡಿಗಕುಲಕೆ ರಂನದ ಕಂನಡಿಯೆನೆ ವಿಶ್ವವಿದಿತಉತ್ತಶ್ರೀಸಂ [1*]ಪಂನಂ ಲಕ್ಷ್ಮೀಧರದೇವಂ ನಿರ್ಮ್ಮಲನಾಗಿ ನೆಗಳ್ದನೊಳಗಂ ಪೊ-
೪೨. ಱಗಂ ॥ [೨೪*]ಶ್ರೀರಾಮಂ ತಂದೆ ದೇವೋತ್ತಮ ದಶರಥರಾಮಂ ಮನೋದ್ಯೈವಮಾನಂದಾರಾಮಂ [ರೂ]ಢಿವೆತ್ತಗ್ಗದ ಕುಲಗುರುವೆಂದಂದೆ ಪೋ-
೪೩. ಷಿಷ್ಪದೇನಿಂ[1*]ನಾರಂ ಸಿಂಗಾಂಬಿಕಾಮಂಗಳಜಠರಸುಧಾವಾರ್ಧಿಸಂ-ಜಾತನಂ ತಾನಾರಾಮಂ ಲಕ್ಷ್ಮಣಾಮಾತ್ಯನೆ ಸಕಲಜಗಜ್ಜಾತಚೇತೋಭಿರಾ-
೪೪. ಮಂ॥ [೨೫*] ಕೆಱೆಯಂ ಕಟ್ಟಿಸು ಭಾವಿಯಂ ಸವಸು ದೇವಗಾರಾಮಂ ಮಾಡಿಸಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯಿ ನಂಬಿ-
೪೫. ದ [1*]ರ್ಗ್ಗಱೆವೆಟ್ಟಾಗಿರು ಶಿಷ್ಟರಂ ಪೊರಯೆನುತ್ತಿಂತೆಲ್ಲವಂ ಪಿಂದೆ ತಾಂ ಯೆಱದಳ್ಪಾಲೆಱವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥[೨೬*]
೪೬. ಕಯ್ಯೆಂದೊಡೆ ಮಂದಾರದ ಕಯ್ಯುಂ ಮಂತ್ರೀಂದ್ರ ಲಕ್ಷ್ಮಣಾಂಕನ ಕಯ್ಯುಂ [1*] ಕಯ್ಯಲ್ಲದುಳಿದ ಮನುಜರ ಕಯ್ಯೆಂಬುಲು ಮರುಳಕೈಗಳೇತ-
೪೭. ಱ ಕೈಗಳ್ ॥ [೨೭*]ಪೊಡವೆಯನೋವಿ ನೋಡಿ ಬಿಡಲಾಱದೆ [ಚ]ರ್ಮ್ಮ-ಮ[ನೆಲ್ಲ] ನೊಳ್ಪುವೆತ್ತೊಡಲ ನೆಗಲ್ಚಿ ಕೊಟ್ಟಳಿದರಂತಕಟಾ ಶಚಿವೇಂದ್ರಲ-
೪೮. ಕ್ಷ್ಮಣಂ [1*]ಪೊಡವಿಯೊಳಂದೆ ಪುಟ್ಟಿ [ವ]ಡೆ ವಂದಿಗಳಿಷ್ಟಮನಿತ್ತು ಜೀವಮಂ ವಡೆಯನ ಸೂತಜಾತನ ದಧೀಚಿಯ ಖೇಚರಚಕ್ರವರ್ತ್ತಿಯಾ॥[೨೮*]
೪೯. ಮಾತೇನೋ ದೇವರಾಯಂಗಾತಂ ಸ(ಂ) [ನ್ಮಂ]ತ್ರಿಯೆನಿಸಿ ನೆಗಳ್ದಿರೆ ವಿಬುಧ [1*]ಪ್ರೀತಿ ಮಿಗೆ ನಿಖಿಳವಿದ್ಯಾನೀತಿಗೆ ಗುರುವೆಂನದಿರ್ಪ್ಪರೇ ಲಕ್ಷ್ಮಣನಂ॥ [೨೯*]ಸು-

೫೦. ಮನೋವಿ(ಂ)ನ್ಯಾಸದಿಂ ವಿಶ್ರುತವಿಬುಧಜನಾನೂನಸ(ಂ) ನ್ಮಾನದಾನ-
ಕ್ರಮದಿಂದೀ ರಾಮಚಂದ್ರಾತ್ಮಜ ಶಚಿವಶಿರೋರತ್ನ ಲಕ್ಷ್ಮೀಧರಂಗಾ[1*]-
ಸ್ವರ್ಗ್ಗಮ-

೫೧. ರೆಂದಾನಳ್ಕಱಿಂ ಕೇಳ್ದೊಡೆ ಬಿಡು ಪೊಸತೇಂ ಪೋಗಿಯುಂ ಬಂದು
ಕಲ್ಪದ್ರುಮಮೊಂದಂ ಪೇಳ್ವೆ ಮತ್ತುಳ್ಳೆಡೆ ನುಡಿ ಜಗತೀಚಕ್ರದೊಳ್ಸತ್ಕ-

೫೨. ವೀಂದ್ರಾ॥[೩೦*] ಪುಸಿದಾನರ್ಜ್ಜಿಸುವರ್ತ್ಥವೇಂ ಮುನಿ[೧]ದ ಕಯ್ಯೊಳ್ವೇ-
ಳಲೇ ವಂದಿ ವಾದಿಸರದಿರ್ವಂಶವಿಶುದ್ಧಿಯೊಳ್ವಿಭವದೊಳ್ವಿಖ್ಯಾತಿಯೊಳ್ನೀತಿ-

೫೩. ಯೊ[1*] ಳ್ಜಸದೊಳ್ದಾಜ್ಞೆಯೊಳತ್ಯುದಾರಗುಣದೊಳ್ಗಾಂಭೀರ್ಯ್ಯದೊ-
ಳ್ಕೀರ್ತ್ತಿ ಲಕ್ಷಿಸೆ ಲಕ್ಷ್ಮೀಧರನಲ್ಲದುಂಟೆ ಸಭೆಯೊಳ್ ಶ್ರೀದೇವರಾಜೇಂ
ದ್ರನಾ ॥ [೩೧*]

೫೪. ಧರಣೀಚಕ್ರಂ ಮನಂಗೊಳ್ವುದೆಯಮುರುತಮಸ್ತೋಮವಲ್ಲಾಡುವಾ-
ತ್ಮಾಚರಣಂ ಸ(ಂ)ನ್ಮಾರ್ಗ್ಗಮುದ್ಯೋತಿಸುವ ರುಚಿ ಸದಾಲೋಕಮು
ರ್ವ್ವೀಳ್ವ ತೇ-

೫೫. ಜ[1*]ಸ್ಫುರಣಂ ನಿತ್ಯಾನುರಾಗಕ್ಕೆಡೆಗುಡಲೆಸೆವೀ ಪೆರ್ಮೆಯಿಂ ದೇವ-
ಭೂಭೃದ್ವರ ಪಾದಾಸಂನನೇನುಂನತಿವಡದನೊ ಲಕ್ಷ್ಮೀಧರಾಮಾತ್ಯ-

೫೬. ಮಿತ್ರಂ ॥ [೩೨*]ಪೂವಿನ ಬಿಲ್ಲನೇಱಿಸುವ ಬಂಡ[೨]ಬಸಂತನನಾಸೆಮಾ-
ಡುವಿಂಮಾವಿನರಲ್ಗಳಂ ಬನಸಗೆಯ್ವೆಳೆದಿಂಗಳ ಪಂಗುಗೊಳ್ವ ಬ[1*]
ಲ್ಪೇಲು-

೫೭. ದೆನುತ್ತ ಚಿತ್ತಭವನಾವನ ಮೆಯಿವಳಿಗೊಂಡು ಕಂಡ ಕಾಂತಾವಳಿಯಂ
ಮರಳ್ಚುವನೆನಲ್ಲೊಬಗೆಂತುಟೊ ಲಕ್ಷ್ಮಣಾಂಕನಾ॥ [೩೩*]ಸಾರಶ್ರೀ-

೫೮. ನೀತಿವಾಕ್ಯಾಮೃತಪರಿಸರದೊಳ್ಪುಟ್ಟಿ ಮೆಯಿಗುಂದದಾನಂದಾರಾಮಾ-
ಸಂನರಾಮಾಯಣದೊಳಮರ್ದು ತಳ್ತಾವಗಂ [ಕೃ]ಷ್ಣಲೀಲಾ [1*]ಧಾರಂ
ತಾನಾ-

೫೯. ಗಿ ನಾನಾಫಲಮನಿಳೆಗೆ ಬೀಱಿತ್ತು ಸಂಸಾರಸೌಖ್ಯಾಕಾರಂ ಸ(ಂ)ನ್ಮಂತ್ರಿ
ಲಕ್ಷ್ಮೀಧರನುರುಕವಿತಾಕಲ್ಪವಲ್ಲೀವಿತಾನಂ ॥ [೩೪*]ಪದಪಿಂದಂ ಕವಿರಾಜಲ-

೬೦. ಕ್ಷ್ಮಣನ ಕಾವ್ಯಲಾ[ಪ] ಮಂ ಕೂರ್ತ್ತು ಕೇಳದೆ ಮುಂ ಪೋದರೆ ಪಾದ
[ಪೊಂ]ಮೆ [೧]ಕವಿಗೊಟ್ಟೆತ್ತಾನುಮಾರೈದು ಸಂ[1*] ಮುದದಿಂ ಸೈತಿರ-
ದೋರುದೂತಿಯರ ಮಾ-

---

೧. 'ಗ' ಇರಬಹುದು ೨ 'ದ' ಇರಬಹುದು

೧ 'ಕಿ' ಇರಬಹುದು

೬೧. ತಂ ಮಿಾ ಱ ಕ(ಂ)ಣ್ಗೊಂಡು ನೋಡಿದ ಪೆ(ಂ)ಣ್ಗಳ್ಪುದಿದಿದ್ದ ಪೂಗಣೆಯ
ಪುಂಣೆಂದಂಣೆ ಪುಯ್ಯಲ್ಲರೇ ।।[೩೫*] ವೋದಿ ಪರವಂಚನಂಗೆಯ್ವೋದು-
ಗಳಂತಿರ್ಕ್ಕೆ ಲ-
೬೨. ಕ್ಷ್ಮಣಾಮಾತ್ಯನವೊ [1*]ಲಾದರಿಸಿ ಶಚಿವರಾದವರೋದುಲು[ದೋ]ರಂತೆ
ಪತಿಹಿತಾರ್ಥಾಗಮಮಂ।। [೩೬*]ಸ್ವಾಮಿದ್ರೋಹರ್ಕ್ಕೆಲಂಬರ್ಮ್ಮಸಗಿ
ಮಸೆದ ಬಾಳ್ಗೊಂಡು ಚ-
೬೩. ಂಡಪ್ರತಾಪೋದ್ದಾಮಶ್ರೀದೇವಭೂವಲ್ಲಭನ ಗ್ರುಹಮಹಾದ್ವಾರಮಂ ಮುತ್ತೆ
ಮತ್ತಿಂ [1*]ನೇ ಮಾತೀಮಾತಿನಿಂ ಮುಂನುಱುಬಿ ತಱು[ಬೆ] ನೂಱಂಕಮಂ
೬೪. ಸ್ವಾಮಿಕಾರ್ಯ್ಯಕ್ಕಾಮೆಂದುರ್ವ್ವೀಳ್ವರುತ್ಸಾಹಮನದಟಲದಂ ಲೋಕದೊಳು
ಲಕ್ಷ್ಮಣಾಂಕಂ ।। [೩೭*] ಕೆಲಬಲನಂ ವಿಚಾರಿಸದೆ ಬಂದ ಭಟರ್ಬ್ಬಲ[ವ]-
ಂತರೆಂದೆನು-
೬೫. ತ್ತಲಸದೆ ನಿಂದು ತಂನ ಪತಿಕಾರ್ಯ್ಯಮೆ ಕಾರ್ಯ್ಯಮೆನುತ್ತ [ಪೂ]-
ಣ್ದು ಮೆಯ್[1*] ಗಲಿ ತಲೆಮಟ್ಟ[ವೀರ್ವ್ವಡೆ]ದ ಮುಂ[ದ್ವ]ಲೆಯೊಂದೆ
ಜಗಜ್ಜನಕ್ಕೆ ಮೂದಲೆಯೆನಿಸಿ-
೬೬. ತ್ತದೇವೆಱಗೊ ಲಕ್ಷ್ಮಣಮಂತ್ರಿಯ ಸಂದಸಾಹಸಂ ।। [೩೮*] ನೆಲದೊ-
ಳ್ಪತಿಹಿತರಾವೆಂದುಲಿವರ ನಾಲಿಗೆಯನಲುಗಲಿಯ್ಯದ ಬಲು ಸಂ[1*] ಕಲೆ-
ಯಾದುದು ಮುಂ
೬೭. ಕೀರ್ತ್ತಿಯ ಕಲೆ ಮೂಜಗವಱಿಯೆ ಮಂತ್ರಿಲಕ್ಷ್ಮೀಧರನಾ।। [೩೯*]
ಆರಾನುಂ ದಾನೋದಕಧಾರೆಯನೊಸದಾಂಪರವನಿಸುರರೊಳ್ವೆರಗಂ [1*]
ಪಾರದೆ ಲಕ್ಷ್ಮಣ-
೬೮. ನಂತಸಿಧಾರೆಯನಾಂಪವರ್ಗಳುಂಟೆ ವಸುಧಾತಳದೊಳ್।। [೪೦*] ಗಣ-
ನಾ ಮಾತ್ರಮೆ ದೇವರಾಯನರನಾಥಾಸ್ಥಾನದೊಳ್ಮಾನವಾಗ್ರಣಿಗಳ್ಸೈತೆ ವಿ-
ಚಾರಿಪಾ-
೬೯. ಗಳುಪಧಾಸಂಶುದ್ಧಿಯಿಂ ಬುದ್ಧಿಯಿಂ[1*] ಗುಣದಿಂ ಗೌರವದಿಂ[ಪೊ]-
ದಳ್ದಿಸವ ಮುದ್ರಾಮಾತ್ಯ ಯೋಗಂಧರಾಯಣ ಚಾಣಾಕ್ಯ ಸುಮಂತ್ರರೊ-
೭೦. ಳ್ದೊರೆಗೆವಂದಂ ಮಂತ್ರಿ ಲಕ್ಷ್ಮೀಧರಂ ।। [೪೧*] ವಚನ।। ಆ ಮಹಾಪ್ರ-
ಧಾನ ಲಕ್ಷ್ಮೀಧರನೊಂದು ರಾತ್ರಿಯೊಳ್ಸುಖಸುಪ್ತಿಯನಪ್ಪುಗೆಯ್ದಿರ್ಪ್ಪಿನಂ
ಸ್ವಪ್ನ-

೭೧. ದೊಳಪ್ರತಿಮತೇಜನಖಿಲಚರಾಚರಜನನಬೀಜಂ । ಬೀಜಾಪೂರಸಮುಚಿತಾ-
ಯುಧವಿಶೇಷವಿಲಸಿತದಶಭುಜಾದಂಡಂ । ಖಂಡೇಂದುಮಂ-
೭೨. ಡಿತಮಣಿಮಕುಟಮಹನೀಯ್ಯಶಿಖಂಡಂ। ಗಂಡಸ್ಥಳಗಳಿತಮದಮದಿರಾ-
ಪ್ರಮತ್ತಮಧುಕರಝೇಂಕಾರಮುಖರಿತನಿಖಿಲದ್ವಿಲಯಂ । ವ-
೭೩. ಲಯಾಂಗದಾಂಗುಲೀಯ್ಯಕಾದಿಭೂಷಣವಿಭೂಷಿತ್ಸರ್ವ್ವಾಂಗನಂಗೀಕ್ರುತ-
ಭುಜಂಗಪರಿಉಗ್ರಥ ಪ್ರಾಲಂಬಂ । ಲಂಬೋದರಕಲಿತಕಾಕೋದ-
೭೪. ರಫಣಾಮಣಿಮರೀಚಿನಿರಾಕೃತನಾಭೀಕುಹರವಿಹರದಪಾರಾಂಧಕಾರಂ। ಕ-
ನಕಕಟಿಸೂತ್ರವಿಚಿತ್ರಿತಜಘನಮಂಡಲಂ । ವೀರಕಟಕನೂ-
೭೫. ಪುರಪುರಸ್ಕ್ರುತಪದಸರೋಜಸನಾಥಂ । ಯಥೋಚಿತದಿಶಾನಿಷಂಣನಿಜನಿ-
ಜಶಕ್ತಿಯುಕ್ತಹರಿಹರವ[ರಾ] ಹಕುಸುಮಸಾಯಕಂ । ಸೇವಕಜ-
೭೬. ನಮನೋರಥದಾಯಕಂ । ಸಕಲಲೋಕೈಕನಾಯಕಂ ಮಹಾವಿನಾಯಕಂ
ಬಂದೆಲೆ ಲಕ್ಷ್ಮೀಧರಾ।। ಲವಣಾಂಭೋನಿಧಿ ತಳ್ತು ಸುತ್ತಿಱಿದ ಜಂಬೂ-
೭೭. ದ್ವೀಪಮಧ್ಯಸ್ಥ ಮೇರುವ ತೆಂಕಲ್ಭರತಾವನೀತಳದೊಳುಂಟಾಹ್ಲಾದಕಂ ಪು-
(ಂ)ಣಸಂ [1*]ಭವಸದ್ಮಂ ಹರಿಪದ್ಮಗರ್ಬ್ಭಮುಖಲೇಖಾನೀಕಲೀಲಾ-
೭೮. ಮಹೋತ್ಸವಗೇಹಂ ಪರಿಧೂತಮೋಹಮಮಲನ್ಧಾಮಂ ವಿರೂಪಾಕ್ಷನಾ।।
[೪೨*]ಅಲ್ಲಿ।। ಯೆಡದ ಮಡದಿಗೆ ಬಿಗುರ್ತ್ತೆ ಜಡವೆಱಗೊಂಡಮರನದಿ-
೭೯. ಯದೇ ಸೊಬಗೆನೆ ನೇ[1*]ರ್ಪ್ಪಡೆ ತುಂಗಭದ್ರೆ ದೇವನೆ ಬಿಡದಡಸಿದ
ವಾಮಭಾಗದೊಳ್ಸೊಗಯಿಸುಗುಂ ।। [೪೩*] ಜಲಮಮ್ರುತಮಯಂ
ಸೊಗಯಿಪ ಜಲವಿ-
೮೦. ಹಗಂ ಪರಮಹಂಸಮಯಮೆಂದುಂ ತ[1*] ಜ್ಜಲಚರಮನಿಮಿಷಮಯ-
ಮೆನಲೆಲೆ ಬಂಣಿಪನಾವನದಱ ತೀರದ ಸಿರಿಯಂ ।। [೪೪*] ವಚನ।। ಆ
ಪಾವನನದೀಪ-
೮೧. ಯಃಪಾನಪರಿಣತ [ಪಕ್ವ]ಲತೃಣನಾರಿಕೇಳಚೂತಮಾತುಳುಂಗರಂಭಾಜಂ-
ಬೀರಪೂಗನಾಗಕೇಸರಾದಿಭೂಜಾತಜಾತಿಕೇತಕೀಮುಖನಿಖಿಲಕುಸುಮಸು-
೮೨. ಗಂಧಬಂಧುರಗಂಧಶಾಳಿಪಾಳೀಪರಿಕಲಿತಕಳಹಂಸಶುಕಪಿಕಶಿಖಾವಳಕೇಕೀ ವಿಳಾಸ-
ವಿಚಿತ್ರಂ । ಸಕಲಭವಪವಿತ್ರಂ । ದುರಿತಲತಾಲವಿತ್ರಂ । ಭವಾಂಬುಧಿ-
೮೩. ಬಹಿತ್ರಂ । ವಾರಾಣಶೀ ಶ್ರೀಪರ್ವ್ವತಾದಿಸಿದ್ಧಸ್ಥಾನಮಣಿಗಣಮಾಲಾಸೂ-
ತ್ರಂ । ಪಂಪಾಕ್ಷೇತ್ರಂ ಸೊಗಯಿಪ್ಪುದದಱ ಪೂರ್ವ್ವದಿಗ್ಭಾಗದೆ ಮಾಲ್ಯವ-
ತ್ಪರ್ವ್ವತ-

೮೪. ದ ತೆಂಕವಕ್ಕದೊಳೊಂದು ಮಹಾಗುಹೆಯುಂಟದಕ್ರುತ್ರಿಮದಿವ್ಯಾಗಾರ-
ಮದಱೊಳೆಂನಂ ಸುಪ್ರತಿಷ್ಠೆಗೆಯ್ವುದೆಂದು ನಿರೂಪಿಸೆ ಮಹಾಪ್ರಸಾದ-

೮೫. ವೆಂದು ಕೈಕೊಂಡು ॥ ಆ ಸ(ಂ)ನ್ಮಂತ್ರೀಂದ್ರಲಕ್ಷ್ಮೀಧರನಮರಗುರು
ಶ್ರೀವಿರೂಪಾಕ್ಷಲೀಲಾವಾಸಂ ತಾನಾದ ಪಂಪಾಪುರಪರಿಸರದೀ ಮಾಲ್ಯವ-
ದ್ಭೂಭೃ-

೮೬. ದೊಳ್ನಾ [1*]ನಾಸಿದ್ಧಿಶ್ರೀಯ್ಯ[ನೀ] ಯ್ಯಲ್ನೆಲೆಗೊಳಿಸಿ ಮಹಾಶಹೇರಂ-
ಬನಂ ವಿಶ್ವಾಸಂ ಮೆಯ್ವೆತ್ತ ಭಕ್ತಿಪ್ರಭವವಿಭವದಿಂ ಧಾತ್ರಿಯೊಳ್ಕೀರ್ತ್ತಿ-
ವೆತ್ತಂ॥ [೪೫*]

೮೭. ತತ್ಸಮಯಕ್ಕೆ ದ್ರುಕ್ಪುರಶಿಖೀಂದು ಶಶಾಂಕಮಿರಲ್ವಿರೋಧಿಸಂವತ್ಸರ
ಫಾಲ್ಗುನ ಪ್ರಥಮವಾಸರದೊಳ್ಗುರುವಾರಮೊಂದೆ ವಿ[1*] ದ್ವೆತ್ಭಭೆ ಬಂಣಿ-
ಪಂತೆ-

೮೮. ಸಗಿದಂ ಶಚಿವಾಗ್ಮಣಿ ಲಕ್ಷ್ಮಣಂ ಸಮಸ್ತೋತ್ಥವಮುಣ್ಮೆ ಪೊಣ್ಮರೆ ಮಹಾ
ಗಣನಾಥನವಪ್ರತಿಷ್ಠೆಯಂ ॥ [೪೬*] [ವಚನ॥ ಅಂತಾ ಪ್ರತಿಷ್ಠೆಯಂ

೮೯. ನಿಷ್ಠೆಯಿಂ ಮಾಡಿ ಮತ್ತಮದಱೊತ್ತಿನೊಳ್ತಾನೆ ಕಯ್ಯಾರೆ ಕೆಯ್ಯಮನ -
ಲ್ಲಿಟ್ಟು ತೆಂಗು ಕೌಂಗ ಮಾಲು ಮಾದಳೆ [ಅತ್ತಿ] ಜಂಬು ನಿಂಬೆ ಕಂಕೇಲಿನೆಲ್ಲಿ

೯೦. ಬಾಳೆ ರಸ್ತಾಳೆ ದಾಳಿಂಬಬಂ ಮೊದಲಾದ ಫಲತರುಗಳಿಂ । ಪಲಉಂ ಪೂಗಿ-
ಡುಗಳಿಂ ಬೆಳಂಗುವ ಧ [ರ್ಮ್ಮ]ತೋಂಟಮಂ। ಕಂನಡಿಯ ಕೆಱೆಯ ಕೆಳಗೆ

೯೧. ಮಾಱುಗೊಂಡ [ಮಣ್ಣು]ವಿನ ಖಂ॥ ಹತ್ತು ಕೊಳಗದ ಗದ್ದೆಯಂ
ದೇವರ ಅಂಗರಂಗಭೋಗಕ್ಕೆ ಧಾರಾಪೂರ್ವ್ವಕಂ ಕೊಟ್ಟು । ಧೂಪದೀಪ-
[ನೀ*]ರಾಜನಂ ಮುಂತಾದ

೯೨. ವಿವಿಧೋಪಕರಣಂಗಳಂ । ಮಂಗಳ ಮಕುಟಮಂ । ಸುವರ್ನ್ನಕರ್ನ್ನತಾ-
ಳಮಂ। ರಜತರದನಾದಿಶರೀರಪರಿಷ್ಕಾರಮಂ ದೇವಿಯರ್ಗ್ಗೆ ಸರ್ವ್ವಾ-
ಭರಣಮಂ ಸಮರ್ಪ್ಪಿ-

೯೩. ಸಿ ಸಕಲಭುವನಂ ಪೊಗಳೆ ಪು(ಂ)ಣ್ಯಕೀರ್ತ್ತಿಯನುಪಾರ್ಜಿಸಿ ॥ ಗುರು-
ದೈವಂ ಮೆಚ್ಚೆ ನಿಚ್ಚಂ ಬಗೆದಣಿವ ಮನೋಭಕ್ತಿ ವಿದ್ವಜ್ಜನಂ ಬಾಪುರೆ
ಬಾಪೆಂದೆತ್ತಿಕೊಂಡಾ-

೯೪. ಡುವ ವಿವಿಧಕಳಾಪ್ರೌ [ಢಿ] ವಂದಿಬ್ರಜಂ ಕಂ[1*]ಡಿರದಿಷ್ಟಾರ್ಥಂಗಳಂ
ಕೊಂಡ[ಡ]ರೆ ಪೊಗಳ್ವ ವಿಶ್ರಾಣನಂ ವಿಶ್ವ [ವಂದ್ಯಂ] ಚರಿತಂ ತಾನಾಗಲೇ-
ನುಂನತಿವ-

೯೫. ಡೆದನೊ ಲಕ್ಷ್ಮೀಧರಾಮಾತ್ಯವರ್ಯ್ಯಂ ॥ [೪೭*]ಅವನಿಯನಾಕ್ರಮಿ-
[ಪ]ದು ದಾನವಿಚಿತ್ರಂ ಲೋಕವಜಿ‌ಯೆ ಶುಚಿಯೆನಿಸಿ[ರ್ದ್ದಂ] [1*]
ಶಿವನುಟ್ಟ ಸೀರೆಯಂ ಪಿಡಿದವಗಡಿಪ-
೯೬. ಳ್ಕೀರ್ತ್ತಿಲಕ್ಷ್ಮಿ ಲಕ್ಷ್ಮಿಧರನಾ ॥ [೪೮*] ಪೊಗಳಲ್ಪೊಂಬುಳಿಯೋದ
ಪೆಂಪಿನ ಯಶೋಲಕ್ಷ್ಮೀಧರಂ ಬಲ್ಲವರ್ಬ್ಬಗೆಗೊಳ್ವಿಂಪಿನ ಸೊಂಪುವೆತ್ತ
ಕವಿತಾಲಕ್ಷ್ಮೀಧರಂ ರಾಜನೀ[1*]ತಿಗೆ ನೇ-
೯೭. ರ್ಪ್ಪಾದ ಮಹಾಪ್ರಧಾನಪದವೀಲಕ್ಷ್ಮೀಧರಂ ಧಾತ್ರಿಯೊಳ್ನೆಗಳ್ದಂ ನಿರ್ಮ್ಮ-
ಲರಾಮಚಂದ್ರತನಯಂ ಸ(ಂ)ನ್ಮಂತ್ರಿಲಕ್ಷ್ಮೀಧರಂ ॥ [೪೯*] ಧರೆ ಪೊ-
ಗಳ್ವಿನಮಾ ಲ-
೯೮. ಕ್ಷ್ಮೀಧರಂಗೆ ದೇ[ವಕಿ] ಯುಮೆಸೆವ ಸೋಮಲೆಯುಂ ಗೃ[1*]ನೆರದರ-
ಸಿಯರಾದರ್ [ಗೊ] [1]ರ್ತ್ತರಸಿಯರಾದಂತೆ ಹರಿಗೆ ಸಿರಿಯುಂ ಧರೆಯುಂ॥
[೫೦*]
೯೯. ಆ [ಇ]ರ್ವ್ವರೊಳು ॥ ಪಿರಿಯಳೆನೆ ಸಂದ ಪೆರ್ಮ್ಮೆಯ ಪಿರಿಯ[ಳ್]
ಸೌಭಾಗ್ಯದಿಂದ ಪಿರಿಯಳ್ಗುಣದಿಂ [1*] ಪಿರಿಯಳ್ಪಾತಿವ್ರತ್ಯದೆ ಪಿರಿಯಳೆ-
ನಲ್ಪಿರಿಯಳಮಮ ದೇವಕಿ ನೆಗ-
೧೦೦. ಳ್ದ [ಳ್] ॥ [೫೧*] ಪೂವಿನಮಾಲೆ ತುಂಬಿ[ದಿರುಳೀ] ಶನ ಜೂಟಕೆ
ಚಂದ್ರಲೇಖೆ ಲಕ್ಷ್ಮೀವರನೊ[ಳ್ವರಕ್ಕೆ] ವನಮಾಲೆ ಸಮಂತಮರ್ದಂತೆ
ವಿಶ್ವಧಾ[1*] ತ್ರಿವಿನುತಪ್ರಸಿದ್ಧಗು-
೧೦೧. ಣ ಲಕ್ಷ್ಮ ಮಂತ್ರಿಗೆ ತಾನೆ ಸ[ತ್ಕ]ಳಾಭಾವಕಿ ಸೇಸೆವೆತ್ತೆಸದ ದೇವಕಿ
ವಲ್ಲಭೆಯಾದಳಾವಗಂ ॥ [೫೨*] ಆ ನೆಗಳ್ದೊಳ್ಪುವೆತ್ತೆಸವ ದೇವಕಿ
ದೇವಕಿಯೆಂತು ಸರ್ವ್ವ[2]ಧಾತ್ರೀ[3]ಸಮ್ಮಾ[ನಿತ]-
೧೦೨. ರಾಮಕೃಷ್ಣಯುಗಮಂ ಪಡೆದಳ್ದ [ಡೆದಳ್ದ]ಲಂತೆ ಪ[1] ದ್ಮಾಸ[3]ನದೊ-
ಳ್ಪುಮಿಾ ಕುವಲಯಾಂಗದ ನೇರ್ಪ್ಪುಮೊಡಂಬಡಲ್ಕೆ ತೇಜೋನಿಧಿಭಾ-
ನುವಂ ವಿಬುಧಸೇವ್ಯಕಳಾನಿಧಿರಾಮಚಂದ್ರನಂ [॥೫೩]
೧೦೩. ....ಗುರುವೆನೆ ರೂಢಿವೆತ್ತ ಲಕ್ಷ್ಮೀಧರನಂ ॥ [೫೪*]
೧೦೪. ....ಆಚಂದಾರ್ಕವಾಗಿ ನಾಗಜೀಯಗೆ ಕೊಟ್ಟರು ॥

ಇದೇ ಕಲ್ಲಿನ ಒಂದು ಪಕ್ಕದಲ್ಲಿ

೧೦೫. ವೀರಾವತಮೆಸೆವಂತಿರೆ ಚಾರುಚಮ[ತ್ಕಾ -

---

೧ [ಕೂ] ಇರಬಹುದು ೨ ಧಾತ್ರೀ ಅನವಶ್ಯ ೩ 'ನ' ಇರಬಹುದು

೧೦೬. ರ] ದಿಂದ ವಿಬುಧಜನಂ ಕೈ[।*] ದೋರಿಸೆ ಲಕ್ಷ್ಮ[ಣ]-
೧೦೭. ಮಂತ್ರಿ ಕುಮಾರಚತುಷ್ಟಯದಿನೆಸೆದನ-
೧೦೮. ವನೀತಳದೊಳ್ ॥ [೫೫*]ತನುವಂ ಮ(ಂ)ನ್ಮಥ ಸೌಮ್ಯ ಭಾ-
೧೦೯. ವಮೊಳಕೆಯ್ಯಲ್ನಂದನಶ್ರೀಮುಖಂ ತನ-
೧೧೦. ಗಾನಂದಮನೀಯೆ ವಿಕ್ರಮಜಯಂಗ-
೧೧೧. ಳ್ದೋಳೊಳಿಂಬಾಗೆ ನೆ[।*] ಟ್ಟನೆ ಸಾಧಾರಣಮಲ್ಲದೀ-
೧೧೨. ಶ್ವರಪದಾಬ್ಜಂ ಪಾರ್ಥಿವಶ್ರೀಯ್ಯನೀಯ್ಯೆ ನಯ-
೧೧೩. ಂಬೆತ್ತುದು ಕೀರ್ತ್ತಿದುಂದುಭಿನಿನಾದಂ ಲಕ್ಷ್ಮ-
೧೧೪. ಣಾಮಾತ್ಯನ ॥ [೫೬*] [ಪಿಂಗ]ದೆ ಲಕ್ಷ್ಮೀಧರಶಚಿವಂ -
೧೧೫. ಗಾಚಂದ್ರಾರ್ಕ್ಕಮೊದವಿದಾಯುಂ ಶ್ರೀಯು-
೧೧೬. ಂ[।*]ಸಂಗತಿವಡದಿರೆ ಬರೆದಂ ಮಂಗಳಮಯ-
೧೧೭. ವಾಗೆ ಮಧುರನೀ ಶಾಸನಮಂ ॥ [೫೭*]ಬಗೆಗೊಳ್ವಂತಿವರ-
೧೧೮. ಂ ಮೆಚ್ಚಿಸಿದ ಸುಕವಿ ಸುಕ್ಷೇತ್ರಹಸ್ತಶ್ವಭೂ
೧೧೯. ಷಾದಿಗಳಂ ಮುಂಪೆತ್ತೊಡಂ [ಭೂಭರದೊ]ಳಣ-
೧೨೦. ಯದೀ ಲೋಕಮೆಂದೆಂಬು ದು[।*]. ಗಮು[ಂ] ವೇಳ-
೧೨೧. ಳ್ಕವೀಂದ್ರಾಭರಣಮಧುರನಂ ಮಾ(ಂ)ನ್ಯನಂ ಗೂ-
೧೨೨. ಡಿ ತಂನಿಂ ಮಿಗಿಲೆಂಬಂತಳ್ಕಱಿಂ....ನವ-
೧೨೩. ನಿಯೊಳ್ಮಂತ್ರಿಲಕ್ಷ್ಮೀಧರಾಂಕಂ ॥ [೫೮*]ಗಣಿದಂಗೊ-
೧೨೪. ಳ್ವಿಡೆ ಮಿಕ್ಕಿನಕರದ ಮಾತಂತಿ[ರ್ಕ್ಕೆ] ತನ್ನಾಣೆ
೧೨೫. ಘೋಷಣೆ ಸಲ್ಗುಂ ಸುಕವೀಂದ್ರಬ್ರುಂದಸಭೆಯೊ
೧೨೬. ಳ್ ತಾನೆಂದೊಡಂಮಂಮ ಧಾ[।*] ರಿಣಿಯೊಳ್ಕೇಳ್ದಱಿಯಾ-
೧೨೭. ರ್ಜಡಾ ಮಧು[ರ] ನಂ [ನಿ]ರ್ನ್ನೀತಕರ್ನ್ನಾಟಲಕ್ಷ್ಮಣ-
೧೨೮. ಪಾದಸರೋಜನಂ ಪ್ರವಿಲಸದ್ಧಾತ್ರೀಮುಖಾಂಭೋ-
೧೨೯. ಜನಂ ॥ [೫೯*] ಯಿಾ ಸಿದ್ಧಶಾಸನಂ ಕೈಲಾಸಂ ಹಿಮಗಿರಿ ಸು-
೧೩೦. ಮೇರು ವಾರಾಶಿ[ನಿಲಂ] [।*]ನೇಸಱು ನೆಗಳ್ವಿನಮೆಂದುಂ
೧೩೧. ಮಾಸದೆ ಮುಸುಳಿಸದೆ ನಿಲ್ಕೆ ನಿಃ(ಪ್ರ)ತೂ ಹಂ ॥ [೬೦*]

ಇದೇ ಕಲ್ಲಿನ ತಲೆಯ ಮೇಲೆ

೧೩೨. ಹರಿಹರದ
೧೩೩. ಧರಣೋಜ-
೧೩೪. ನ ಬರಹ [॥*]

ಅನುಬಂಧ ೨

ಬಾಹುಬಲಿ ವಿರಚಿತ

ಧರ್ಮನಾಥ ಪುರಾಣಂ ಶಬ್ದಾರ್ಥಕೋಶ

ಮೊದಲನೆಯ ಅಂಕಿ ಪುಟವನ್ನೂ ಎರಡನೆಯ ಅಂಕಿ ಪದ್ಯವನ್ನೂ ನಿರ್ದೇಶಿಸುತ್ತದೆ.

ಅ

ಅಂಗಚಿತ್ತ ೧೪೮-೨೨ ಪಾರಿತೋಷಿಕವಾಗಿ ತನ್ನ ಮೈಮೇಲಿಂದ ತೆಗೆದುಕೊಡುವ ವಸ್ತ್ರ, ಆಭರಣ

ಅಂಗದಾಹ ೮೨-೯೦ ಶರೀರದ ತಾಪ

ಅಂಗವಟ್ಟ ೧೩೦-೧೦೪ವ ಮೈಮೇಲೆ ಹೊದೆಯುವ ಬಟ್ಟೆ

ಅಂಚಳ ೧೭೦-೮೪ ವಸ್ತ್ರದ ತುದಿ

ಅಂಚಿರ ೨೨-೧೦೯ವ ಚಂಚಲ

ಅಂಚೆ ೧೩೩-೧೧೬ ಹಂಸ

ಅಂಜಳಿಪುಟ ೫೮-೪೮ವ ಬೊಗಸೆ

ಅಂಡಲೆ ೧೪೩-೫ ಕಾಡು, ಹಿಂಸೆಮಾಡು

ಅಂತಿಕ ೧೬೯-೨೬ವ ಹತ್ತಿರ, ಸಮೀಪ

ಅಂಬುದ ೨೫-೧೨೧ ಮೇಘ

ಅಂಬುದುರ್ಗ ೪೦-೩೫ ನೀರಿನ ಕೋಟೆ

ಅಂಶುಕ ೮೭-೧೧ ಬಟ್ಟೆ

ಅಕುಲೀನತೆ ೫೫-೩೩ ಸತ್ಕುಲದಲ್ಲಿ ಹುಟ್ಟಿಲ್ಲದಿರುವುದು, ಭೂಮಿಯ ಸ್ಪರ್ಶವಿಲ್ಲದಿ ರುವುದು

ಅಕೂಪಾರ ೮೪-೧ವ ಸಾಗರ, ಸಮುದ್ರ

ಅಗಾರ ೨೩-೧೧೧ಮನೆ

ಅಗಿ ೩೬-೧೬ ಹೆದರು, ಅಂಜು

ಅಗುರ್ವು ೩-೩ ಅತಿಶಯ, ಭಯ, ಬೆರಗು

ಅಚ್ಚಬಾಸಿಗ ೧೩೨-೧೧೦ವ ಒಳ್ಳೆಯ ಹೂವುಗಳಿಂದ ಕಟ್ಟಿದ ಹಾರ

ಅಜನಿಸು ೬೧-೬೩ ಉಂಟುಮಾಡು, ಹುಟ್ಟಿಸು

ಅಜ್ಜಿಕೆ ೪-೧೦ ಜೈನಸಂನ್ಯಾಸಿನಿ

ಅಟ್ಟಂಕ ೧೬೫-೯ ಮೇಲ್ಭಾಗ (?)

ಅಟ್ಟಳೆ ೨೯೧-೧೨೫ ಕೊತ್ತಳ, ಬುರುಜು

ಅಟ್ಟಾಳ ೨೫-೧೨೩ ಕೊತ್ತಳ, ಬುರುಜು

ಅಡಗು ೨೫೮-೧೩೭ವ ಮಾಂಸ

ಅಡಬಳ ೨೫೬-೧೩೧ ಮಾಂಸ

ಅಡಸು ೮೯-೩೦ ಒಳಸೇರಿಸು, ತುರುಕು

ಅಡರ್ಪು ೧೩೪-೧೧೮ವ ಊರೆ, ಆಧಾರ

ಅಡಿಕಿಲ್ಗೊಳ್ ೩೧-೧೫೪ ಒಂದರಮೇಲೊಂದಾಗಿ ಪೇರಿಸಿರು, ದಟ್ಟವಾಗಿರು

ಅಡುಕುವಾಸು ೧೩೩-೧೧೬ವ ಒಂದರ ಮೇಲೊಂದು ಸೇರಿಸಿದ ಹಾಸು

ಅಡ್ಡಣ ೧೨೩-೭೫ ಗುರಾಣಿ

ಅಡ್ಡತಾಳ ೨೦೬-೧ವ ಸಪ್ತತಾಳಗಳಲ್ಲಿ ಒಂದು

ಅಣಂ ೬೯-೩೦ ಸ್ವಲ್ಪವೂ

ಅಣೆವಣ ೨೯೮-೧೫೬ ಅಣೆವಿಣೆ, ಬಿಕ್ಕಟ್ಟು(?)

ಅಣೆದುನೊಂಕು ೧೭೭-೧೧೦ವ ಗುರಿಯನ್ನು ತೋರಿಸಿ ತಟ್ಟಿ ಮುಂದಕ್ಕೆ ಬಿಡು

ಅತನು ೧೩೫-೧೨೪ ಮನ್ಮಥ

ಅತಿಶಯಿಸು ೫೮-೪೬ ಮೀರು, ಮೇಲಾಗು

ಅತೀತಜನ್ಮ ೯೬-೭೭ವ ಹಿಂದಿನ ಜನ್ಮ

ಅದಿಮುರ್ತ್ತೆ ೨೪೯-೮೬ ಒಂದು ಬಗೆಯ ಹೂವು, ಮಾಧವಿ

ಅಧರತ್ವ ೨೪-೧೨೦ ಕೀಳಾಗಿರುವುದು, ಕೀಳುತನ

ಅಧಿವಾಸನ ೧೩೪-೧೧೮ವ ಸುಗಂಧದ್ರವ್ಯಗಳಿಂದ ವಾಸನೆ ಕಟ್ಟುವುದು
ಅಧ್ವಗ ೧೮-೯೦ ದಾರಿಹೋಕ
ಅಧ್ಯಾನಿಸು ೨೫೦-೯೭ ತೊಂದರೆಮಾಡು
ಅನವದ್ಯ ೧೬೫-೧೦೮ ನಿಷ್ಕಳಂಕವಾದ
ಅನಾಗತ ೧೦೫-೧೦೦ವ ಭವಿಷ್ಯ
ಅನಾರತಂ ೫-೧೩ ನಿರಂತರವಾಗಿ
ಅನಿಶಂ ೩-೧ ಯಾವಾಗಲೂ
ಅನುಭೂತಿ ೮೭-೧೬ ದರ್ಶನ, ಸಾಕ್ಷಾತ್ಕಾರ
ಅನುಮಾನ ೯೭-೬೬ವ ತರ್ಕ, ಊಹೆ
ಅನುಮೇಯ ೯೭-೬೬ವ ತರ್ಕದಿಂದ ತಿಳಿಯಬಹುದಾದುದು
ಅನೋಕಹ ೨೧-೧೦೨ ಮರ
ಅನ್ನಯ ೧೬೯-೧೨೮ ಅನ್ಯಾಯ
ಅಪಲಾಪನ ೯೭-೬೬ವ ಅಸತ್ಯ, ಮುಚ್ಚುಮರೆಮಾತು
ಅಪವರ್ಗ ೪-೭ ಮುಕ್ತಿ
ಅಪಾಂಗ ೧೫೫-೫೬ ಕಡೆಗಣ್ಣು
ಅಪೋಹಿಸು ೨೪೯-೮೮ ಕಳೆ, ನಿವಾರಿಸು
ಅಪ್ಪಯಿಸು ೧೧೨-೧೬ವ ಒಪ್ಪಿಸು, ವಹಿಸು, ಆಶ್ರಯಿಸು
ಅಪ್ಪುಕೆಯ್ ೨೨೦-೬೧ವ ಅಂಗೀಕರಿಸು, ಒಪ್ಪು
ಅಭಿಜ್ಞ ೧೦-೪೬ ಚೆನ್ನಾಗಿ ತಿಳಿದವನು
ಅಭಿನೂತ ೧೯೯-೧೨೮ ಹೊಗಳಲ್ಪಟ್ಟ, ಶ್ರೇಷ್ಠವಾದ
ಅಭಿರಾಮ ೨೦-೧೦೦ ಮನೋಹರವಾದ
ಅಭಿವಾಂಛೆ ೨೮-೧೪೦ ಉತ್ಕಟವಾದ ಅಪೇಕ್ಷೆ
ಅಭಿಷವ ೧೯೨-೯೪ ಅಭಿಷೇಕ
ಅಭಿಷಿಂಚಿಸು ೪೦೪-೧೨೫ ಅಭಿಷೇಕಮಾಡು
ಅಭಿಷ್ಟುತ ೬-೨೨ ಕೊಂಡಾಡಲ್ಪಟ್ಟ
ಅಭೀಕ್ಷಿಸು ೨೦೨-೧೪೧ ಚೆನ್ನಾಗಿ ನೋಡು
ಅಮಳ್ಗಂಬ ೨೨೦-೬೫ ಜೋಡಿಕಂಭ
ಅಮ್ಮು ೨೦೦-೧೩೪ ಸಮರ್ಥವಾಗು
ಅಯ ೭೩-೪೭ ಒಳ್ಳೆಯ ಅದೃಷ್ಟ
ಅರಳ್ಚು ೭೦-೩೫ ಅರಳಿಸು
ಅರಳ್ಚಿಸು ೧೭೬-೧೫ ಅರಳಿಸು
ಅರಿಷ್ಟ ೧೪೬-೧೬ವ ಶುಭ, ಮಂಗಳ
ಅರ್ಧಮಾಗಧಿ ೫೦೩-೨೫೨ವ ಜೈನಾಗಮಗಳ ಭಾಷೆ
ಅರ್ಯಮ ೧೧೯-೪೮ ಸೂರ್ಯ
ಅರ್ವಿಸು ೮೦-೮೧ ಸುಡು
ಅಲಕ್ತಕ ೧೭೦-೧೩೩ ಅರಗು
ಅಲರ್ ೧೫೬-೬೦ ಹೂವು
ಅಲರ್ಚಿಸು ೧೩೫-೧೨೨ ಅರಳಿಸು
ಅಲರ್ಚು ೩೨೪-೯೫ವ ಅರಳಿಸು
ಅವಗತ ೨೮-೧೩೮,೨೧೨-೨೩ವ ಚೆನ್ನಾಗಿ ತಿಳಿದುಕೊಂಡ, ಕಳೆದುಹೋದ
ಅವಗಮ್ಯ ೯೭-೬೬ವ ತಿಳಿಯಬಹುದಾದ
ಅವಗವಿಸು ೨೬-೧೩೪, ೩೦-೧೫೨, ೨೨೧-೬೮ವ, ಪಡೆ, ಹೊಂದು, ಪರಿಹಾಸ ಮಾಡು
ಅವಗುಂಠಿತ ೨೯೨-೧೨೭ವ ಹೊದಿಸಲ್ಪಟ್ಟ, ಮರೆಮಾಡಲ್ಪಟ್ಟ
ಅವತಂಸ ೨೧೯-೫೭ (ಕಿವಿಯ) ಆಭರಣ
ಅವಭಾಸಿತ ೧೯-೯೩ವ ಹೊಳೆಯುವ, ಕಾಂತಿಯಿಂದ ಕೂಡಿದ
ಅವಲೀಢ ೭೫-೫೮ ನೆಕ್ಕಲ್ಪಟ್ಟ, ವ್ಯಾಪಿಸಲ್ಪಟ್ಟ
ಅವಷ್ಟಂಭಿಸು ೨೮೪-೮೭ವ ಆಶ್ರಯಿಸು
ಅವಸರಂಬಡು ೩೧೧-೨೭ವ ಅವಕಾಶವನ್ನು ಹೊಂದು
ಅವ್ವಳಿಸು ೧೩೮-೧೪೧ ಮೇಲೆಬೀಳು, ಆಕ್ರಮಿಸು
ಅಷ್ಟಚತ್ವಾರಿಂಶ ೪೬೮-೮೮ವ ನಲವತ್ತೆಂಟು
ಅಸಮಮಾಯುಧ ೪೬-೬೬ ಮನ್ಮಥ
ಅಸಿಕಾಱ ೪೫೧-೧೭ ಕತ್ತಿಯನ್ನು ಹಿಡಿದ ಸೈನಿಕ
ಅಸುಕೆ ೪೯-೯ ಅಶೋಕ ವೃಕ್ಷ
ಅಸ್ತೋಕ ೧೩-೬೧ವ ಅಧಿಕವಾದ, ಮಹತ್ತಾದ
ಅಹಿಜ ೩೮-೨೩ವ ಹಾವು(?)
ಅಳುಂಬ ೪೬-೬೭ವ ಆಧಿಕ್ಯ
ಅಳುರ್ಕೆ ೨೦೮-೩ವ ಹರಡುವುದು, ಅತಿಶಯವಾಗುವುದು
ಅಳ್ತಿ ೧೪೨-೧೫೭ ಪ್ರೀತಿ
ಅಳ್ಳಿಱ್ ೫೪-೨೯ವ ಅಲುಗಾಡು, ಸ್ಪಂದಿಸು

ಅಱುದಿಂಗಳು ೧೧೭-೩೮ವ ಆರುತಿಂಗಳು

ಅಱುನೀರು ೮೦-೮೦ ಬತ್ತಿದ ನೀರು

ಅಱೆ ೧೮೧-೪೦ ಬಂಡೆ

ಅಱೆಯಟ್ಟು ೧೬೫-೧೦೬ ಬೆನ್ನಟ್ಟಿಹೋಗು, ಹೊಡೆದೋಡಿಸು

ಆ

ಆಂಕೆಗೊಳ್ ೪೮-೧ವ ಪ್ರತಿಭಟಿಸು, ಎದುರಿಸು

ಆಕಳನ ೧೪೭-೨೨ ಶೇಖರಿಸುವುದು

ಆಕಳಿತ ೧೪-೬೭ ಸೇರಿದ, ಕೂಡಿದ

ಆಕೀರ್ಣ ೧೨-೫೯ ಹರಡಿದ, ತುಂಬಿದ

ಆಕುಳಿತ ೯೯-೭೩ವ ತುಂಬಿದ

ಆಕೃಷ್ಟಿ ೨೮೨-೭೭ ಆಕರ್ಷಿಸಲ್ಪಟ್ಟ

ಆಖಂಡಳ ೨೦೯-೮ ದೇವೇಂದ್ರ

ಆಗತಿ ೮೮-೨೩ ಬರುವುದು, ಸೇರುವುದು

ಆಗಿಸು ೧೦೯-೧ ಉಂಟುಮಾಡು

ಆಗುಳಿರ್ಕೆ ೭೧-೩೮ ಆಕಳಿಕೆ

ಆಟಕಾಱ ೪೫೧-೧೭ ಆಟವಾಡುವವನು

ಆಡುಂಬೊಲ ೬೮-೨೩ವ ಆಟದ ಬಯಲು

ಆತಪವಾರಣ ೩೦೮-೧೭ ಛತ್ರಿ, ಕೊಡೆ

ಆತ್ತಚಿತ್ತ ೧೩೯-೧೪೫ ಮನಸ್ಸಿನ ಏಕಾಗ್ರತೆಯುಳ್ಳವನು

ಆದಂ ೨೪-೧೧೮ ವಿಶೇಷವಾಗಿ

ಆದಮೆ ೩೦-೧೫೨ ವಿಶೇಷವಾಗಿ

ಆಧರಿಸು ೧೦೪-೯೫ ಆಧಾರವಾಗಿಮಾಡಿಕೊ

ಆನಕ ೪೯೩-೨೧೨ ನಗಾರಿ

ಆಪಣ ೨೦-೯೭ ಅಂಗಡಿ

ಆಭೋಗ ೧೧೫-೨೮ ಸುಖ, ಸಂತೋಷ

ಆಮುತ್ರಿಕ ೩೨೪-೯೩ವ ಮೋಕ್ಷ

ಆಯತ್ತ ೯-೪೦ ಪಡೆದ, ಹೊಂದಿದ

ಆಯಾತ ೨೩೦-೩ವ ಬಂದ

ಆರ್ಪು ೨೬-೧೨೮ ಸಾಮರ್ಥ್ಯ

ಆಲ್ ೧೯೧-೮೮ ಗಟ್ಟಿಯಾಗಿ ಕೂಗು

ಆಲಾನಸ್ತಂಭ ೧೭೯-೨೭ವ ಆನೆಯನ್ನು ಕಟ್ಟುವ ಕಂಬ

ಆವಗಂ ೨೦೫-೧೫೭ ಯಾವಾಗಲೂ

ಆವಸಥ ೨೦-೯೯ವಾಸಸ್ಥಾನ, ಮನೆ

ಆವಿಳ ೨೬-೧೩೦ ಕದಡಿದ, ಕೂಡಿದ, ಸೇರಿದ

ಆವೆಯೋಡು ೨೫೭-೧೩೦ ಮಣ್ಣಿನ ಮಡಕೆ

ಆಶಾಂತ ೧೫೦-೩೬ ದಿಕ್ಕಿನ ಕೊನೆ

ಆಸವ ೨೫೬-೧೨೪ವ ಮದ್ಯ

ಆಱಡಿ ೨೨-೧೦೯ವ, ೭೫-೭ ತುಂಬಿ, ಸೂರೆ

ಇ

ಇಂದಿಂದಿರ ೨೨-೧೦೯ವ ತುಂಬಿ

ಇಂದಿರೆ ೨೬-೧೨೭ ಲಕ್ಷ್ಮಿ

ಇಂಬು ೨೧೧-೧೯, ೨೯-೧೧೪ ಆಶ್ರಯ, ನೆಲೆ, ಪ್ರೀತಿ

ಇಕ್ಷುವಾಟ ೧೪-೭೨ ಕಬ್ಬಿನ ತೋಟ

ಇಟ್ಟೆಡೆ ೨೪೪-೬೭ ಇಕ್ಕಟ್ಟು

ಇದ್ದ ೬-೨೨ ವೃದ್ಧಿಹೊಂದಿದ

ಇನಿಮಿನಿ ೮೭-೧೫ವ ಚೆನ್ನಾಗಿ, ವಿಶೇಷವಾಗಿ(?)

ಇಬ್ಬರಿ ೮೫-೭ ಎರಡುಮಗ್ಗುಲು

ಇಮ್ಮಡಿಸು ೨೬-೧೨೯ ಎರಡರಷ್ಟುಮಾಡು

ಇರೆ ೩೮-೨೩ ಭೂಮಿ

ಇಳಿಕೆಯ್ ೧೩೧-೧೦೫ ಕಡೆಗಣಿಸು, ಕೀಳಾಗಿ ಕಾಣು

ಇಳ್ಕುಳಿಗೊಳ್ ೨೧೬-೪೩ ಸೆಳೆದುಕೊಳ್ಳು, ಆಕರ್ಷಿಸು

ಈ

ಈಡಾಡು ೯೨-೪೬ವ ಚೆಲ್ಲಾಡು, ತೂರಾಡು

ಈಡಿಱ ೧೯೯-೧೨೮ ಕೊಂಬಿನಿಂದ ಬಲವಾಗಿ ತಿವಿ

ಈರೇಳು ೧೩-೬೦ ಹದಿನಾಲ್ಕು

ಈರೈದು ೨೧೦-೧೪ ಹತ್ತು

ಈಸು ೪೨೯-೭೦ ಈಜು

ಈಱಾಱು ೧೩೯-೧೬೬ ಹನ್ನೆರಡು

ಉ

ಉಕ್ಕೆವ ೩೭-೧೬ ಉತ್ಸಾಹ, ಸಡಗರ

ಉಗ್ಘಡಿಸು ೨೩-೧೧೨ ಘೋಷಿಸು, ಗಟ್ಟಿಯಾಗಿ ಕೂಗಿ ಹೇಳು
ಉಚ್ಚು ೧೧೬-೩೨ ಭೇದಿಸು, ಚುಚ್ಚು, ತಿವಿ
ಉಜ್ಜುಗ ೧೨-೫೮ ಉದ್ಯೋಗ, ಕಾರ್ಯ
ಉಜ್ಜನ ೧೯-೯೪ ಬಿಡುವುದು
ಉಠಬೈಸ ೪೫೩-೨೨ ಮಲ್ಲಯುದ್ಧದ ವರಸೆ
ಉಡುಚೋರ ೧೬೯-೧೨೮ ನಕ್ಷತ್ರಗಳ ಕಾಂತಿಯನ್ನು ಮಸಳಿಸುವವನು, ಚಂದ್ರ
ಉಣ್ಮು ೩-೫ ಹೊಮ್ಮು, ಹೊರಸೂಸು
ಉತ್ಕಂಪ ೧೨-೫೮ ನಡುಕ
ಉತ್ಕರ ೧೧-೫೧ ರಾಶಿ, ಸಮೂಹ
ಉತ್ಕಳಿಕ ೬೬-೧೨ ವಿರಹಕಾತರತೆ
ಉತ್ತಂಸ ೨೭೫-೪೪ವ ಆಭರಣ
ಉತ್ಸೇಧ ೧೬೯-೧೨೪ವ ಎತ್ತರ, ಔನ್ನತ್ಯ, ಉದ್ದ
ಉದಗ್ರ ೨೦೧-೧೩೮ವ ಎತ್ತರವಾದ
ಉದೀರಣ ೩೩೮-೧೬೦ವ ಹೇಳುವಿಕೆ
ಉದ್ಧ ೩-೨ ಶ್ರೇಷ್ಠವಾದ
ಉದ್ಧವ ೪೮-೧ವ ಹಬ್ಬ, ಉತ್ಸವ
ಉದ್ಧುರ ೩-೩ ಶ್ರೇಷ್ಠವಾದ
ಉದ್ಧೂತ ೧೦೬-೧೦೧ವ ಮೇಲಕ್ಕೆಸೆಯಲ್ಪಟ್ಟ
ಉದ್ವರ್ತನಂಗೆಯ್ ೨೭೫-೪೪ವ ಸುಗಂಧ ದ್ರವ್ಯಗಳನ್ನು ಲೇಪಿಸು
ಉಪಚಯ ೭೮-೨೨ ರಾಶಿ, ಸಮೂಹ
ಉಪಪತ್ತಿ ೯೭-೬೬ವ ಸಿದ್ಧಾಂತವನ್ನು ಸಮರ್ಥಿಸುವುದಕ್ಕೆ ಮಾಡುವ ತರ್ಕ
ಉಪಾಧಿ ೨೮೬-೧೦೧ ತೊಂದರೆ, ಹಿಂಸೆ
ಉಪ್ತ ೧೯-೯೩ ಬಿತ್ತಿದ
ಉಪ್ಪವಡಿಸು ೧೩೯-೧೪೨ವ ನಿದ್ರೆಯಿಂದ ಎಚ್ಚರಗೊಳ್ಳು
ಉಪ್ಪುಗಂಡ ೨೫೭-೧೩೨ವ ಉಪ್ಪನ್ನು ಸವರಿದ ಮಾಂಸದ ತುಂಡು (?)
ಉಬ್ಬೆಗ ೩೧-೧೫೭ ದುಃಖ, ಸಂತಾಪ, ಚಿಂತೆ
ಉಭಯಜಿಹ್ವ ೮-೩೪ ಹಾವು
ಉಮ್ಮಳ ೨೨೫-೮೮ ದುಃಖ
ಉರವಣಿಸು ೨೨೮-೧೦೧ ರಭಸದಿಂದ ನುಗ್ಗು, ಆಕ್ರಮಿಸು

ಉರ್ಕು ೧೬೮-೧೨೩ ದರ್ಪ, ಪೌರುಷ
ಉರ್ವು ೧೫೩-೪೬ವ ಅತಿಶಯ, ಹೆಚ್ಚಳ
ಉಲಿ ೧೧೨-೧೫ ಧ್ವನಿಮಾಡು
ಉಷ್ಣಕರ ೫೫-೩೪ ಶಾಖವಾದ ಕಿರಣಗಳುಳ್ಳವನು, ಸೂರ್ಯ
ಊಡು ೧೨೪-೬೭ ತಿನ್ನಿಸು
ಊರ್ಮಿ ೨೪-೧೧೫ ದೊಡ್ಡ ಅಲೆ

ಎ

ಎಕ್ಕತಾಳ ೨೦೭-೧ವ ಸಪ್ತತಾಳಗಳಲ್ಲಿ ಒಂದು ಸ್ವರಮೇಳ
ಎಕ್ಕತುಳ ೩೬೨-೯೧ವ ಪರಾಕ್ರಮ, ಶೌರ್ಯ
ಎಕ್ಕಾವಳಿ ೧೩೯-೧೪೪ ಒಂದೆಳೆಯ ಸರ
ಎಗ್ಗ ೮೨-೫೪ ಅಸಂಸ್ಕೃತ, ದಡ್ಡ, ಒರಟ
ಎಡೆದೆಱಹು ೧೫-೭೨ ಬಿಡುವು, ವಿರಾಮ
ಎಡೆಯಾಡು ೧೫-೭೪ ಅಲೆದಾಡು, ಸಂಚರಿಸು
ಎಡೆಯುಡುಗು ೬೬-೧೨ವ ನಡುವೆ ನಿಂತುಹೋಗು
ಎಡೆವಱಿ ೧೧೯-೩೪ವ ನಡುವೆ ಕತ್ತರಿಸಿಹೋಗು
ಎಡ್ಡ ೨೧೦-೧೬ವ ಸುಂದರ, ಮನೋಹರ
ಎನಸುಂ ೧೯೩-೯೭ ಬಹಳವಾಗಿ
ಎಯ್ದೆ ೧೭-೮೫ ಚೆನ್ನಾಗಿ, ವಿಶೇಷವಾಗಿ
ಎಯ್ಯಮೃಗ ೨೫೩-೧೧೩ ಮುಳ್ಳುಹಂದಿ
ಎಲರ್ ೧೫೬-೬೦ ಗಾಳಿ
ಎಸಕ ೬೯-೨೭ ಕಾರ್ಯ
ಎಸು ೨೬-೧೨೯ ಬಾಣಪ್ರಯೋಗಮಾಡು
ಎಳೆಮುದ್ದು ೭೮-೬೮ ಸಣ್ಣಮಕ್ಕಳ ಮುದ್ದು
ಎಱಕ ೨೧೬-೪೧ ಪ್ರೀತಿ

ಏ

ಏಗಳುಂ ೧೬-೮೧ ಯಾವಾಗಲೂ
ಏಡಿಸು ೩೦೫-೬ ತಿರಸ್ಕರಿಸು, ಜರೆ
ಏಳಾಲತೆ ೨೪೯-೮೭ ಏಲಕ್ಕಿಬಳ್ಳಿ
ಏಳಿಸು ೧೦೬-೧೦೩ ಅವಹೇಳನಮಾಡು, ನಿಂದಿಸು, ಹೀಯಾಳಿಸು

ಐ

ಐಸರ ೧೩೧-೧೦೭ ಐದು ಎಳೆಯ ಹಾರ
ಐಳಬಿಳ ೧೦೬-೧೦೩ ಕುಬೇರ

ಒ

ಒಗು ೮೬-೧೪ ಹೊರಸೂಸು, ಚೆಲ್ಲು
ಒಟ್ಟಜೆ ೮೮-೨೩ ಗುಂಪು, ಸಮೂಹ
ಒಟ್ಟೆ ೨೪೧-೫೩ ಒಂಟಿ
ಒಟ್ಟೈಸು ೧೯೭-೧೧೫ ಗುಂಪುಕೂಡಿಸು, ರಾಶಿ ಮಾಡು
ಒಡರಿಸು ೭೯-೭೫ ಮಾತು, ನರೆವೇರಿಸು
ಒಡರ್ಚಿಸು ೧೬೫-೧೦೭ ಉಂಟುಮಾಡು
ಒಡರ್ಚು ೧೭೩-೧೪೪ ತೊಡಗು, ಮಾಡು
ಒಡವರು ೨೭೭-೫೧ವ ಜೊತೆಯಲ್ಲಿ ಬರು
ಒಡ್ಡಯಿಸು ೧೨೭-೮೫ವ ಪ್ರದರ್ಶಿಸು, ತೋರಿಸು
ಒಡ್ಡುಗೊಳ್ ೧೭೯-೨೭ವ ಗುಂಪಾಗು
ಒತ್ತಮಿಸು ೧೨೫-೭೫ ಮೀರು, ಅತಿಕ್ರಮಿಸು
ಒದ ೨೭-೧೩೫ ಹೆಚ್ಚಳ, ಆಧಿಕ್ಯ
ಒದವು ೧೮-೯೧ ಹೆಚ್ಚಳ, ಆಧಿಕ್ಯ
ಒಯ್ಯನೆ ೧೯೮-೧೨೩ ನೆಟ್ಟಗೆ, ನೇರವಾಗಿ
ಒರಸೊರಸು ೧೧೪-೫೪ವ ತಿಕ್ಕಾಟ, ಘರ್ಷಣೆ
ಒಸಗೆ ೭೧-೩೮ವ ಶುಭ, ಮಂಗಳಕಾರ್ಯ
ಒಸರು ೭೦-೩೧ ಜಿನುಗು
ಒಸೆ ೨೪-೧೧೫ ಶೋಭಿಸು, ಸೊಗಸು, ಹಿಗ್ಗು
ಒಳುವಂಡ ೨೫-೧೨೫ ಒಳ್ಳೆಯ ಮಕರಂದ
ಒಳ್ಕವಿಲ್ ೧೭೦-೧೩೩ ಒಳ್ಳೆಯ ಕಪಿಲವರ್ಣ
ಒಳ್ತೊಡಿಗೆ ೨೫೨-೧೦೬ ಒಳ್ಳೆಯ ಆಭರಣ
ಒಳ್ಪು ೫-೧೬ ಸಜ್ಜನಿಕೆ, ಸುಖ, ಕ್ಷೇಮ, ಶ್ರೇಯಸ್ಸು
ಒಳ್ವಾಲು ೭೮-೬೮ ಒಳ್ಳೆಯ ಹಾಲು

ಓ

ಓ ೮೭-೧೮ ಪ್ರೀತಿಸು
ಓಗಡಿಸು ೩೯೨-೭೨ ಜುಗುಪ್ಸೆಹೊಂದು, ವಾಂತಿಮಾಡು
ಓಪಳ್ ೩೮೪-೪೦ ಪ್ರಿಯೆ, ನಲ್ಲೆ
ಓರಂತೆ ೮೪-೩ ಒಂದೇಸಮನೆ
ಓರಣಿ ೨೮-೧೩೮ವ ಸಾಲು
ಓಲಯಿಸು ೩೨-೧೬೧ವ ಸೇವೆಮಾಡು
ಓಲಾಡು ೯೬-೬೨ ಹಿಗ್ಗು, ನಲಿದಾಡು
ಓಸರ ೨೦೮-೪ ಒಂದುಮಗ್ಗುಲಿಗೆ ಸರಿಯುವುದು
ಓಹ ೨೫೫-೧೨೨ ಸಾಲು, ಗುಂಪು
ಓಳಿ ೪೯೭-೨೨೯ ಪಂಕ್ತಿ, ಸಮೂಹ, ಕ್ರಮ

ಔ

ಔರ್ವಜ್ವಳನ ೭೯-೭೨ ಸಮುದ್ರದ ಕಿಚ್ಚು

ಕ

ಕಂಚನಾರ ೩೮೦-೨೪ವ ಒಂದು ಜಾತಿಯ ಮರ
ಕಂಚುಕಿ ೧೨೦-೪೯ವ ಅಂತಃಪುರದ ಅಧಿಕಾರಿ
ಕಂಡರಣೆ ೩೧-೧೫೬ ಕೊರೆಯುವುದು
ಕಂತುಱು ೨೫೩-೧೧೩ ಕುಳಿ, ಬಿಲ
ಕಂಪಾಕ್ಷಿ ೨೩೭-೩೧ ಚಂಚಲವಾದ ಕಣ್ಣು
ಕಂಪಾಪಾಂಗಿಕೆ ೧೩೬-೧೨೮ ಕಂಪನದಿಂದ ಕೂಡಿದ ಕಡೆಗಣ್ಣ ನೋಟವುಳ್ಳವಳು (?)
ಕಂಬಳ ೧೭೦-೧೩೩ ಕಂಬಳಿ, ಜಾಡಿ
ಕಕ್ಕಪಾಳ ೨೫೫-೧೨೪ ಬಗಲುಚೀಲ
ಕಚಾಕಚಿ ೩೫೭-೬೭ ಪರಸ್ಪರ ಕೂದಲು ಹಿಡಿದು ಎಳೆದಾಡುವುದು
ಕಜ್ಜಳ ೧೪-೬೭ ಕಣ್ಣಿಗೆ ಹಚ್ಚಿಕೊಳ್ಳುವ ಕಾಡಿಗೆ
ಕಟಾರ ೩೬೨-೯೧ವ ಬಾಕು, ಚೂರಿ
ಕಟಿದಘ್ನ ೩೮೧-೨೯ ಸೊಂಟದವರೆಗೆ ಮುಳುಗುವ
ಕಟ್ಟಾಯತ ೨೦೯-೬ ಶ್ರೇಷ್ಠವಾದ
ಕಟ್ಟಿಗೆಕಾಱ ೫೫-೩೫ ದೊಣ್ಣೆ ಹಿಡಿದು ಓಲಗದಲ್ಲಿ ಶಿಸ್ತು ಕಾಯುವವನು, ವೇತ್ರಧಾರಿ
ಕಟ್ಟಿದಿರು ೮೫-೮ವ ಸಮಕ್ಷ, ಕಣ್ಣಿನ ಮುಂದೆ
ಕಡಪ ೩೧-೧೫೬ ಕಡೆಯುವಿಕೆ
ಕಡವ ೭೭-೬೫ ದೊಡ್ಡ ಜಿಂಕೆ, ಸಾರಂಗ
ಕಡಿತಲೆ ೩೫೮-೭೦ ಖಡ್ಗ, ಕತ್ತಿ
ಕಡಿಯಾಣ ೧೭೯-೨೯ ಕಡಿವಾಣ
ಕಡುಗಲಿ ೨೪೦-೪೭ ಅತ್ಯಂತ ಶೂರ

ಕಡುಗಾಳಿ ೧೭೪-೩ ಬಿರುಗಾಳಿ

ಕಡುನೀಱೆ ೧೨೨-೫೯ ಅತಿಸುಂದರಿ

ಕಡುಪು ೨೩೯-೪೧ ಉಗ್ರತೆ, ತೀವ್ರತೆ

ಕಡುವಿಳಿದು ೧೨೬-೮೩ ಅಚ್ಚಬಿಳಿಯದು

ಕಡೆಯ ೨೩೭-೩೦ ಕಾಲಕಡಗ

ಕಡೆಯಾಣಿ ೧೨೯-೯೬ವ ಚೊಕ್ಕ ಚಿನ್ನ, ಅಪರಂಜಿ

ಕಣಿಶ ೨೬೭-೧೪ ಧಾನ್ಯದ ತೆನೆ

ಕಣೆ ೬೭-೧೫ ಬಾಣ

ಕಣ್ಗಾಯ್ ೧೬೨-೯೪ ಮನೋಹರವಾಗು(?)

ಕಣ್ಗೊಳ್ ೨೬-೧೨೮ ಮನೋಹರವಾಗು

ಕಣ್ಗೊಳಿಸು ೩೧-೧೫೭ ಮನೋಹರವಾಗು

ಕಣ್ಣೆಮೆ ೨೯-೧೪೭ ಕಣ್ಣಿನ ರೆಪ್ಪೆ

ಕಣ್ಬೊಲ ೨೪೭-೭೮ವ ಕಣ್ಣಿಗೆ ಕಾಣಿಸುವಷ್ಟು ಪ್ರದೇಶ

ಕತ್ತರ ೪೫೨-೧೯ ಕುಸ್ತಿಯಲ್ಲಿ ಒಂದು ವರಸೆ

ಕತ್ತಲಿಸು ೨೪೭-೭೮ವ ಕತ್ತಲೆಯಾಗು, ಕಪ್ಪಾಗು

ಕದಂಬಕ ೨೬೬-೯ ಗುಂಪು, ಸಮೂಹ, ಮೊಸರು ವಡೆ(?)

ಕದಿರ್ ೨೭೩-೩೬ ಕಿರಣ

ಕನಲ್ ೨೫೨-೧೦೪ ಸಿಟ್ಟಾಗು, ರೇಗು

ಕನ್ನೆ ೭೮-೬೭ ಕುಮಾರಿ, ಕನ್ಯೆ

ಕಬಳಂಗೊಳ್ ೩೬೮-೧೧೨ವ ತಿನ್ನು, ನುಂಗು

ಕಮ್ಮೆಣ್ಣೆ ೧೨೯-೯೯ ಸುವಾಸನೆಯ ಎಣ್ಣೆ

ಕಯ್ವಾರ ೩೧೧-೩೦ವ ಹೊಗಳಿಕೆ, ಕೊಂಡಾಟ

ಕರವಡ ೪೫೨-೧೯ ಮಲ್ಲಯುದ್ಧದ ಒಂದು ಪಟ್ಟು

ಕರಿಣಿ ೧೯-೯೫ ಹೆಣ್ಣಾನೆ

ಕರಿವೋಗು ೮೦-೭೯ ಸುಟ್ಟು ಕರಿಕಾಗು

ಕರುಮಾದ ೪೬-೭೮ವ ಉಪ್ಪರಿಗೆ ಮನೆ

ಕರುವಿಡು ೨೨೩-೭೮ ಎರಕಹೊಯ್

ಕರ್ಕಟಕ ೧೬-೭೮ ಏಡಿ

ಕರ್ಣಪಾಲಿಕೆ ೧೨೫-೭೬ವ ಕಿವಿಯ ಹಾಲೆ

ಕರ್ಣಪೂರ ೧೪೨-೧೫೮ ಕಿವಿಯ ಆಭರಣ

ಕರ್ದುಂಕು ೨೭೩-೩೮ ಕೊಕ್ಕಿನಿಂದ ಕುಕ್ಕು, ಕಚ್ಚು

ಕರ್ಬುರಿತ ೨೬೧-೧೪೯ ಮಿಶ್ರವರ್ಣವಾದ

ಕಲಾಪ ೯೪-೫೫ವ ಗುಂಪು, ಸಮೂಹ

ಕಲ್ಕ ೨೦೧-೧೩೭ವ ಕದಡು, ರಾಡಿ

ಕಲ್ಲಿ ೨೫೧-೧೦೦ ಹೆಣಿಕೆಯ ಬಲೆ, ಬಲೆಚೀಲ

ಕವಲ್ವರಿ ೨೭೮-೫೮ ಕವಲು ಕವಲಾಗಿ ಹರಡು, ವಿಸ್ತರಿಸು

ಕವಿ ೧೫೫-೫೭ ಆವರಿಸು, ಮುತ್ತು

ಕಳ್ ೩೧-೧೫೭ ಕದಿ, ಅಪಹರಿಸು

ಕಳವೆ ೧೬-೭೯ ಬತ್ತ

ಕಳೆ ೯೬-೭೪ವ ವಾದ್ಯವಿಶೇಷ (?)

ಕಱುತ್ತು ೪೦-೩೫ ಕೆರಳಿ, ಆವೇಶಗೊಂಡು

ಕಾಪು ೨೨೧-೬೮ ರಕ್ಷಣೆ

ಕಾದಂಬಿನಿ ೯೫-೬೦ವ ಮೋಡಗಳ ಗುಂಪು

ಕಾಲ್ಗಣ್ಣೆ ೨೫೧-೧೦೦ ಕಾಲಿಗೆ ಕಟ್ಟುವ ಹಗ್ಗ

ಕಾವಡಿಕಾಱ ೨೪೨-೫೭ ಕಾವಡಿಹೊರುವವನು, ಕಂಬಿಕಾರ

ಕಾಳಭ ೧೨-೫೫ ಆನೆಯ ಮರಿ

ಕಾಳಾಗರು ೧೩೩-೧೧೬ವ ಕರಿಯ ಅಗರು

ಕಾಳ್ಪುರ ೨೦೭-೩ ಕಾಡಿನ ಪ್ರವಾಹ

ಕಿಂಕಿರಾತ ೨೫೨-೧೦೫ ಕೆಂಪುಗೋರಂಟಿ

ಕಿಂಜಲ್ಕ ೧೩೭-೧೩೫ ಹೂವಿನ ಕೇಸರ

ಕಿಸುಗಲ್ ೧೭೦-೧೩೩ ಕೆಂಪಾದ ಕಲ್ಲು

ಕೀರ್ತಿಮುಖ ೧೨೪-೭೧ ಬಳೆಯಾಕಾರದ ಒಂದು ಆಭರಣ

ಕೀಲಿಸು ೨೮-೧೪೧ ಸೇರಿಸು, ಕೂಡಿಸು

ಕೀಳ್ನೆಲ ೨೫೩-೧೧೩ ಕೆಳಗಿನ ನೆಲ, ಒಳಭೂಮಿ

ಕೀಳ್ಮಾಡು ೧೭೪-೫ ಕಡಮೆಮಾಡು, ತಿರಸ್ಕರಿಸು

ಕುಂಟಣಿ ೪೩೧-೭೭ ತಲೆಹಿಡುಕಿ

ಕುಂತಲ ೧೦೬-೧೦೦ವ ತಲೆಗೂದಲು

ಕುಂಭಭವ ೪೫೮-೪೬ ಅಗಸ್ತ್ಯ

ಕುಟ್ಟಿಮ ೧೪೬-೧೬ವ ಸಮಮಾಡಿದ ನೆಲ

ಕುಡಿ ೧೧೯-೪೪ವ ಗುಡಿ, ಬಾವುಟ

ಕುಡಿವೆಳಗು ೧೨೧-೫೫ ಬೆಳಕಿನ ಕಿರಣ

ಕುತ್ತು ೨೫೩-೧೧೦ ಚುಚ್ಚು, ತಿವಿ

ಕುಮಾರಕಾಲ ೨೨೭-೯೮ವ ಹದಿನಾರು ವರ್ಷದ ಒಳಗಿನ ಪ್ರಾಯ

ಕುಮುದ್ವತಿ ೮೫-೫ ಸರೋವರ

ಕುರವಕ ೩೮೧-೨೮ ಗೋರಂಟಿ
ಕುಲ್ಯ ೧೫-೬೨ ಹಳ್ಳ, ಕಾಲುವೆ
ಕುಸುಮಿಸು ೨೯೪-೧೩೯ವ ಹೂ ಬಿಡು
ಕುಳಿರ್ ೧೪೬-೨೦ವ ತಂಪಾಗಿರು
ಕುಜುಪು ೧೫೦-೩೮ ಗುರುತು
ಕೂಗುರಿ ೨೭೬-೧೩ ಒಂದು ಬಗೆಯ ಕಾಯಿಪಲ್ಯ
ಕೂರಿದು ೧೭-೬೯ ಹರಿತವಾದ
ಕೂರ್ಚಧರ ೨೩೦-೩ ಕುಂಚವನ್ನು ಹಿಡಿದವನು
ಕೂರ್ಪು ೨೬೦-೨೫ ಪ್ರೀತಿ, ಸ್ನೇಹ
ಕೂರ್ವಾಳ್ ೩೪೬-೧೨ ಹರಿತವಾದ ಕತ್ತಿ
ಕೂಸುಮೃಗ ೮೧-೮೭ ಮರಿಜಿಂಕೆ
ಕೆಂಬರಲ್ ೧೮೨-೪೨ ಕೆಂಪುಹರಳು, ಮಾಣಿಕ್ಯ
ಕೆಕ್ಕಟಗೆರಳ್ ೩೭೩-೯೬ವ ಹೆಚ್ಚು ಕೋಪಗೊಳ್ಳು
ಕೆಕ್ಕಳಿಸು ೨೫೩-೧೦೯ ರೇಗು, ಕಣ್ಣುಕೆಂಪಗೆ ಮಾಡಿ ಕೊಂಡು ನೋಡು
ಕೆಯ್ಮಿಗು ೨೧೨-೨೪ವ ಅಧಿಕವಾಗು, ಹೆಚ್ಚಾಗು
ಕೆಲಗೆಲ ೧೩೮-೧೪೧, ಸ್ವಲ್ಪ, ಕೊಂಚ
ಕೆಳೆಗೊಳ್ ೬೯-೬೨ ಜೊತೆಗೂಡು, ಸೇರು
ಕೇಗು ೩೧೨-೩೩ ನವಿಲಿನ ಕೂಗು
ಕೇರ್ ೧೩೩-೧೧೭ವ ಗೋಡೆ
ಕೇವಣ ೨೯೯-೧೭೨ ಹರಳುಗಳನ್ನು ಕೂಡಿಸುವುದು, ಕುಂದಣ
ಕೇವಣಿಸು ೧೨೯-೯೭ವ ಜೋಡಿಸು, ಪೋಣಿಸು
ಕೇಸಡಿ ೨೬೬-೫೧ವ ಕೆಂಪಾದ ಪಾದ
ಕೈಗಣ್ಮು ೧೮೪-೫೧ವ ಮೀರು, ಅತಿಶಯವಾಗು
ಕೈಗೆಯ್ ೨೧೨-೨೨ವ ಅಲಂಕರಿಸು, ಸಿಂಗರಿಸು
ಕೈಘಟ್ಟಿಗೊಳ್ ೩೦೨-೧೬೬ವ ಸುಗಂಧವನ್ನು ಕೈಗೆ ಲೇಪಿಸಿಕೊ
ಕೈನಿಱ್ ೧೮೯-೬೫ ಕೈಬಾಚು
ಕೈಮಡಗು ೨೩೧-೬ ಕೈಮಾಡು, ಹೋರಾಡು(?)
ಕೈಮಿಗು ೧೧೫-೨೮ ಹೆಚ್ಚಾಗು, ಅಧಿಕವಾಗು
ಕೈಲಡೆಗೊಡು ೩೦೫-೬ ರಕ್ಷಣೆಯಾಗಿ ಕೊಡು
ಕೊಕ್ಕರಿಸು ೯೨-೪೭ವ ಅಸಹ್ಯಪಡು
ಕೊಪ್ಪು ೧೩೧-೧೦೮ ಕಿವಿಯ ಆಭರಣ
ಕೊಮ್ಮು ೮೧-೮೨ ಕೊಂಕಿಸು, ಹೊರಳಿಸು
ಕೊಲ್ಲಣಿಗೆ ೩೮೮-೫೨ವ ಸಂದಣಿ, ನೆರವಿ
ಕೊಸಗು ೪೨೮-೬೯ವ ಬೆಟ್ಟದಾವರೆ
ಕೊಳ್ಕೊಡೆ ೨೩೩-೧೩ ವಿನಿಮಯ
ಕೊಳ್ಗೆಸರ್ ೨೧೩-೨೬ ಮಂದವಾದ ಕೆಸರು
ಕೋಡು ೬೨-೪೨ ಕೊಂಬು, ತಂಪಾಗು
ಕ್ರೋಡ ೧೯೧-೮೪ವ ಕಾಡುಹಂದಿ

ಖ

ಖನಿ ೧೫-೬೧ ಗಣಿ
ಖರಕರ ೨೯-೧೪೮ ಸೂರ್ಯ
ಖರದಂಡ ೨೯-೧೪೫ವ ತಾವರೆ
ಖರ್ಪರ ೧೪-೭೬ ತಲೆಬುರುಡೆ
ಖರ್ವ ೩೪೫-೧೪ವ ಒಂದು ಸಂಖ್ಯೆ
ಖರ್ವಡ ೪೬೦-೧೦೨ ನಗರ ಮತ್ತು ಹಳ್ಳಿಗಳ ಮಧ್ಯದಲ್ಲಿ ನದಿ ಪರ್ವತಗಳಿಂದ ಕೂಡಿದ ಗ್ರಾಮ
ಖಳ್ಗ ೩೬-೧೫ ಖಡ್ಗ, ಕತ್ತಿ
ಖುಸುರುಗಲಾಸೆ ೪೫೩-೨೨ ಒಂದು ಬಗೆಯ ಮಾತು(?)

ಗ

ಗಂಗಾಸಾಗರ ೨೫೭-೧೨೭ ಒಂದು ಬಗೆಯ ಮದ್ಯ
ಗಗ್ಗರಿಕೆ ೩೩೭-೧೫೧ ಅಸ್ಪಷ್ಟವಾದ ಧ್ವನಿ
ಗಣಿಕೆ ೨೬-೧೩೩ ಸೂಳೆ
ಗದಗಂಪು ೨೧೦-೧೪ ಗದ್ಗದಧ್ವನಿ
ಗರಜಾಕರಣ ೧೪೭-೧೭ವ ದಿನದ ಒಂದು ವಿಭಾಗ
ಗಱಿಗಟ್ಟು ೧೨೪-೬೩ ಗರಿಯನ್ನು ಕಟ್ಟು, ಬಲಗೊಳ್ಳು
ಗಾಂಧಾರ ೨೦೬-೧ವ ಸಪ್ತಸ್ವರಗಳಲ್ಲಿ ಒಂದು
ಗಾಡಿ ೨೬-೧೩೭ ಸೌಂದರ್ಯ
ಗಾವಿಲ ೯೭-೭೩ ಗಾಂಪ, ದಡ್ಡ
ಗುಂಟ ೨೫೧-೧೦೦ ಗೂಟ
ಗುಂಡಿಗೆ ೨೪೭-೬೫ ಪಾತ್ರೆ
ಗುಜ್ಜು ೧೪೫-೧೫ ಕುಳ್ಳು
ಗುಜ್ಜುಮೆಟ್ಟು ೩೯೦-೭೭ ಕಿರಿದಾದ ನಡಗೆ
ಗೊಂದಣಿಸು ೧೪೮-೨೪ ಗುಂಪುಕೂಡು

ಗೊಂದಳ ೩೨೭-೧೦೬ವ ಗುಂಪು, ಸಮೂಹ
ಗೊಲೆಗೊಳಿಸು ೨೧೧-೧೭ ತುದಿಮುಟ್ಟಿಸು
ಗೋತ್ರವಿಭೇದಿ ೨೦-೯೯ (ಬೆಟ್ಟಗಳನ್ನು ಸೀಳುವವನು) ಇಂದ್ರ
ಗೋಪಶಿಖಿ ೭೨-೪೩ ಈಶ್ವರನ ಹಣೆಗಣ್ಣಿನ ಬೆಂಕಿ
ಗೋರಿ ೪೨೯-೭೧ ಆಕರ್ಷಣ, ಸೆಳೆತ
ಗೋಸನೆಕಾಱ ೪೫೩-೨೧ವ ಗಟ್ಟಿಯಾಗಿ ಸಾರುವವನು
ಗ್ರೈವೇಯಕ ೨೦೨-೧೩೮ವ ಒಂದು ಬಗೆಯ ಹಾರ

ಘ

ಘಟ್ಟಿ ೨೬-೧೩೧ ಗಂಧ
ಘೂರ್ಣಿಸು ೨೩೮-೩೩ ಗರ್ಜಿಸು, ಶಬ್ದಮಾಡು
ಘೋಣ ೧೬೭-೧೧೪ ಕುದುರೆಯ ಮೂಗು, ಮೂಗಿನ ಹೊಳ್ಳೆ
ಘೋಟಾಯಿಲ ೩೫೩-೪೭ವ ಕುದುರೆಸವಾರ
ಘೋಳಿಸು ೧೩೪-೧೧೮ವ ಹುರಿ

ಚ

ಚಂಡಾಂಶು ೫೧೮-೩೨೦ ಸೂರ್ಯ
ಚಂಪೆ ೨೩೪-೧೯ ಸುಗಂಧದ್ರವ್ಯ
ಚಕ್ರಿ ೮-೩೪ ಕೃಷ್ಣ, ವಿಷ್ಣು
ಚಚ್ಚರ ೧೦೩-೮೮ವ ಬೇಗನೆ, ತ್ವರಿತವಾಗಿ
ಚಚ್ಚರುಚು ೨೯೨-೧೩೧ ರಭಸ, ವೇಗ(?)
ಚಟ್ಟಳಿ ೨೫೭-೧೩೦, ೨೫೯-೧೪೧ ಮಣ್ಣಿನ ಪಾತ್ರೆ
ಚರಣವಾರಿಪ್ರಯೋಗ ೨೧೦-೧೪ ನಡಗೆಯ ಒಂದು ಭೇದ
ಚರಿಗೆ ೭೬-೬೧ವ ಜೈನಮುನಿಗಳ ಪಾರಣೆ
ಚರ್ಚೆ ೫೯-೫೦ವ ಲೇಪನ
ಚಲ್ಲವಾಡು ೪೯೭-೨೨೫ವ ವಿಹರಿಸು, ಕ್ರೀಡಿಸು
ಚಳಯ ೫೨-೧೫ ಸಿಂಪಡಿಸುವಿಕೆ
ಚಳಿಸು ೨೫೧-೧೦೨ ಕುಟ್ಟು
ಚಾಟುಕಾರ ೨೪೭-೪೦ವ ಚತುರೋಕ್ತಿಯನ್ನು ಆಡುವವನು
ಚಾತುರ್ದಂತ ೨೪೩-೬೩ವ ಆನೆ
ಚಾಮೀಕರ ೨೨-೧೦೯ವ ಚಿನ್ನ
ಚಿಂಚಿಲಿ ೪೪೧-೧೧೮ ಒಂದು ಅನುಕರಣ ಶಬ್ದ
ಚಿತ್ತರ ೧೧-೫೧ ಚಿತ್ರ
ಚಿನ್ನಕಬ್ಬುನ ೧೭-೮೬ ಒಂದು ಬಗೆಯ ಲೋಹ
ಚಿಬುಕ ೩೦೬-೧೦ವ ಗಲ್ಲ
ಚಿಬ್ಬಂಬೊಯ್ ೨೬-೧೨೮ ಹಚ್ಚೆಹಾಕು
ಚಿಲ್ಲ ೨೪೮-೮೪ ಒಂದು ಜಾತಿಯ ಮರ
ಚುಳಕ ೧೯೩-೯೭ ಅಂಗೈ ಗುಳಿ
ಚೂಳಿಕೆ ೧೪-೬೬, ೭೦-೩೪ ತುದಿ, ಕೊನೆ, ನೆತ್ತಿ, ತಲೆ
ಚೆಚ್ಚರ ೮೬-೧೨ ಬೇಗನೆ
ಚೆನ್ನತ್ತಿ ೨೪೮-೮೪ ಒಂದು ಜಾತಿಯ ಮರ
ಚೇಷ್ಟಿಸು ೯೬-೬೪ವ ಮಾಡು, ಚಲಿಸು
ಚೋಚುಂಬ್ಯ ೨೩೦-೧ವ ತಾಗುವ, ಮುತ್ತಿಡುವ
ಚೋದಿಸು ೩೬೨-೮೯ವ ಓಡಿಸು, ನಡೆಸು
ಚೌಕಳಿ ೩೯೯-೧೦೨ ಕಿವಿಯ ಆಭರಣ
ಚೌಪಳಿಕೆ ೨೭೨-೩೨ವ ಹಜಾರ
ಚೌರಿಗೆ ೨೩೪-೧೯ ಅಂಗಳ
ಚೌವಟ್ಟ ೪೫೨-೧೯ ಮಲ್ಲಯುದ್ಧದ ಒಂದು ವರಸೆ

ಜ

ಜಕ್ಕುಲಿಸು ೨೦೮-೩ವ ಚಕ್ಕಳಗುಳಿಯಿಡು, ವಿನೋದ ಪಡಿಸು
ಜಡಾಶಯ ೩೧೫-೪೯ ಜಲಾಶಯ
ಜರ್ವು ೪೬-೬೬ ಠೀವಿ
ಜಾಂಬೂನದ ೧೩೦-೧೦೦ವ ಚಿನ್ನ
ಜಾಗರ ೧೮೨-೪೫ ಹೊದಿಕೆ, ಕವಚ
ಜಾನುದಘ್ನ ೩೮೧-೨೯ ಮೊಳಕಾಲು ಮುಳುಗುವ ವರೆಗೆ
ಜಾವುರೆ ೪೫೩-೨೨ ಸಂಗೀತದ ಒಂದು ಪ್ರಭೇದ
ಜಿಗೀಷು ೩೩೧-೧೨೮ ಜಯಿಸಲು ಬಯಸುವವನು
ಜೇವಡೆ ೨೦೭-೨ ಬಿಲ್ಲಿನ ಹೆದೆಯನ್ನು ಠಂಕಾರ ಮಾಡು
ಜೋಗಿಣಿ ೨೫೫-೧೨೪ ಯೋಗಿಣಿ, ಸಂನ್ಯಾಸಿನಿ
ಜೋಡು ೨೪೦-೪೭ ಕವಚ
ಜೋಳಿ ೩೯೯-೧೦೨ ಜೋಡಿ, ಜೊತೆ

ಝ

ಝುಂಪೆ ೨೦೭-೧ವ ಸಂಗೀತದ ತಾಳ

ಝುಲ್ಲರಿ ೧೧೪-೨೩ ಜಾಲರಿ

ಟ

ಟೆಂಟಣಿಸು ೪೩೧-೭೯ವ ರೇಗು

ಠ

ಠಾಯ ೨೦೭-೧ವ, ೩೩೫-೧೪೪ ಕೀರ್ತನೆಯಲ್ಲಿ ಒಂದು ಬಗೆ

ಡ

ಡಂಬರ ೨೨೪-೮೨ ಆಡಂಬರ

ಡಕ್ಕೆ ೧೨೭-೮೯ ಒಂದು ಚರ್ಮವಾದ್ಯ

ಡವಕೆ ೧೨೬-೮೪ ಉಗುಳುವ ಪಾತ್ರೆ, ಪೀಕದಾನಿ

ಡಿಂಡಿಮ ೧೫೦-೩೬ ಚರ್ಮವಾದ್ಯ

ಡಿಳ್ಳಿಸು ೨೨೨-೭೧ ಹೆದರು, ಭಯಪಡು

ಡೆಳ್ಳೆ ೫೦೦-೨೩೯ವ ಹೆಡಗೆ (?)

ಡೋಂಗು ೨೫೮-೧೩೫ ಕಂಪಿಸು, ನಡುಗು

ಢ

ಢಾಳೆ ೪೩೮-೧೦೭ ಕ್ರಮ, ರೀತಿ (?)

ಢೊಕ್ಕರ ೪೫೨-೧೯ ಮಲ್ಲಯುದ್ಧದಲ್ಲಿ ಒಂದು ವರಸೆ

ತ

ತಂಡಸ ೨೪೭-೮೧ ಇಕ್ಕುಳ, ಒಂದು ಜಾತಿಯ ಮರ

ತಂದಲ್ ೨೨-೧೦೯ವ ಸೋನೆ, ತುಂತುರುಮಳೆ

ತಂಪು ೨೫೬-೧೨೬ ಒಂದು ಬಗೆಯ ಹೆಂಡ

ತಂಬೆರಲ್ ೧೩-೧೧೬ವ ತಂಪಾದ ಗಾಳಿ

ತಕ್ಕೈಸು ೨೭-೧೩೬ ಅಪ್ಪು, ಆಲಂಗಿಸು

ತಗುಳ್ ೭೦-೩೫ ಕೂಡು, ಸೇರು

ತಟವುಚ್ಚು ೨೨೩-೮೦ ಎಲ್ಲೆಮೀರು, ಮೇರೆಮೀರು

ತಟಿಲ್ಲತೆ ೨೩೯-೩೮ ಬಳ್ಳಿಮಿಂಚು

ತಟ್ಟುಂತಾಱು ೩೬೫-೧೦೬ವ ಕೂಡು, ಸೇರು

ತಣ್ಗದಿರು ೧೩೨-೧೧೧ ತಂಪಾದ ಕಿರಣ, ಬೆಳುದಿಂಗಳು

ತಣ್ಣೆಲರ್ ೭೦-೩೪ ತಂಪಾದ ಗಾಳಿ

ತತ್ತು ೨೧೫-೩೭ ಸೇರು, ಕೂಡು

ತದುಕು ೨೪೯-೯೨ ಬೇಲ

ತನೂದರ ೭೧-೩೭ ತೆಳುವಾದ ಹೊಟ್ಟೆ

ತನ್ವಂಗಿ ೪೨-೪೬ ಹೆಂಗಸು

ತಪ್ಪಣೆಗುಟ್ಟ ೨೫೯-೧೩೯ವ ತಪ್ಪು ಹೆಜ್ಜೆ ಹಾಕು, ತೂರಾಡು

ತರ್ಕಜ್ಞೆ ೪೫-೬೨ ತರ್ಕದಲ್ಲಿ ಪರಿಣತೆ

ತರ್ಕಯಿಸು ೧೭೭-೨೦ ಅಪ್ಪು, ಆಲಂಗಿಸು

ತವಿಸು ೩೪೮-೨೬ ನಾಶಮಾಡು, ಹಾಳುಮಾಡು

ತಳರ್ ೫೨-೧೯ ಚಲಿಸು

ತಳರ್ನಡೆ ೨೧೮-೫೧ ಚಂಚಲವಾದ ನಡಗೆ

ತಳವಱ ೯೧-೪೧ ಕಾವಲುಗಾರ

ತಳಿ ೧೮೫-೫೫ ಚಿಮುಕಿಸು

ತಳೆ ೯-೩೬ ಹೊಂದು, ಧರಿಸು

ತಳ್ತಿಱಿ ೩೪೪-೭ವ ಎದುರಿಸಿ ಹೊಡೆ

ತಳ್ಪೊಯ್ ೧೫೪-೫೨ ಕೂಡು, ಸೇರು

ತಳ್ಳಳಿಸು ೨೫೪-೧೧೭ ತಲ್ಲಣಿಸು

ತಱ ೨೪೮-೮೪ ಕದಿರ ಮರ

ತಱಿಸರ್ ೯೫-೬೦ವ ನಿಶ್ಚಯಿಸು

ತಾಂಬೂಲಿಕ ೪೬-೬೮ವ ವೀಳೆಯದೆಲೆ ಮಾರುವವನು

ತಾಣ ೧೧೩-೧೭ ಸ್ಥಾನ, ಸ್ಥಳ

ತಾಮರಸ ೫೭-೪೫ ಕಮಲ

ತಾಯ್ಗಡಲ್ ೧೯೩-೯೬ ಸಮುದ್ರದ ತಳ

ತಾರ ೨೦೮-೩ವ ಸಂಗೀತದ ಏರಿಳಿತಗಳಲ್ಲಿ ಒಂದು

ತಾರಗೆ ೮೭-೧೫ವ ನಕ್ಷತ್ರ

ತಾರೇಲ್ಯೆಯ ೨೫೯-೧೪೦ವ ಒಂದು ಬಗೆಯ ಅನುಕರಣದ ಹಾಡು

ತಾಳಿಸು ೮೦-೭೯ ಸುಡು, ಬೇಯಿಸು

ತಿಂತಿಣಿ ೧೧೦-೬ ಗುಂಪು, ಸಮೂಹ

ತಿಟ್ಟವಿಡು ೨೨೩-೭೮ ಚಿತ್ರಬರೆ

ತಿಣ್ಣ ೨೧೨-೨೨ವ ತೀಕ್ಷ್ಣ, ಅಧಿಕ, ಹೆಚ್ಚು
ತಿರೀಟ ೪೬೨-೬೩ ಕಿರೀಟ
ತಿರುಪು ೨೧೦-೧೬ ತಿರುವು
ತಿರೋಹಿತ ೨೪೭-೭೯ ಕಳೆದುಹೋದ, ಮರೆಯಾದ
ತಿವುರಿ ೨೩೪-೧೯, ೩೮೦, ೨೪ವ ಒಂದು ಬಗೆಯ ಸುಗಂಧ ದ್ರವ್ಯ
ತಿಳಕ ೩೮೦-೨೪ವ ಒಂದು ಜಾತಿಯ ಮರ
ತೀವು ೧೪೭-೨೧ ತುಂಬು
ತುಂಬೀಫಲ ೯೮-೬೭ವ, ೨೪೩-೬೫ ಸೋರೆ ಬುರುಡೆ, ಒಂದು ಬಗೆಯ ವೀಣೆ
ತುಡುಂಕು ೫೬-೩೮ವ ಹಿಡಿ
ತುಪ್ಪುಳ್ ೧೩೩-೧೧೭ ಹಕ್ಕಿಯ ಪುಕ್ಕ
ತುಱುಂಬು ೧೭೦-೧೩೭ ಹೂಮುಡಿ
ತುಱುಗು ೨೨-೧೦೮ ಮುಡಿ
ತೂಣೀರ ೨೫೦-೧೦೦ ಬತ್ತಳಿಕೆ
ತೂಳ್ ೮೮-೨೦ ಬೆನ್ನಟ್ಟು, ಅಟ್ಟು
ತೆಂಬೆರಲ್ ೨೪೩-೬೩ ತೆಂಕಣಗಾಳಿ, ತಂಪಾದ ಗಾಳಿ
ತೆತ್ತಿಸು ೧೬೩-೯೮ವ ನಾಟಿಸು, ಅಂಟಿಸು, ಕೂಡಿಸು
ತೇಂಕಾಡು ೩೦-೧೫೧ ತೃಪ್ತಿಹೊಂದು
ತೇಂಕು ೪೫೮-೪೪ ತೇಲು
ತೇರ್ಕೈಸು ೨೩೯-೪೧ ಅಧಿಕವಾಗು, ಹೊರಸೂಸು
ತೊಂಗಲು ೧೯೬-೧೧೧ ಸಮೂಹ
ತೊಂಡಿ ೧೧೨-೧೪ ಒಂದು ರಾಗ
ತೊತ್ತುಗೆಯ್ ೧೪೫-೧೬ ಸೇವೆಮಾಡು
ತೊಳಲ್ ೮೧-೮೨ ಸುತ್ತಾಡು, ಅಲೆ
ತೋರ ೧೬-೮೧ ದೊಡ್ಡ, ದಪ್ಪ
ತೋರಿತ್ತು ೬೯-೨೬ ದೊಡ್ಡದು, ದಪ್ಪವಾದುದು
ತೋಳಬಂದಿ ೧೩೧-೧೦೭ ತೋಳಿನ ಆಭರಣ
ತ್ರಾಸ ೩೬-೧೩ ಹೆದರಿಕೆ, ಭಯ
ತ್ರಿಪಥೆ ೨೪೭-೭೮ ಗಂಗೆ
ತ್ರಿವಿಷ್ಟಪ ೨೦೪-೧೫೨ವ ಸ್ವರ್ಗ

ದ

ದಂಡೆ ೧೩೧-೧೦೮ ಹಾರ
ದಂದುಗ ೫೯-೫೨ ಕಷ್ಟ, ಕ್ಲೇಶ
ದಂಭ ೨೮-೧೪೦ ಅಹಂಕಾರ, ಗರ್ವ
ದಟ್ಟಡಿ ೨೧೮-೫೧ ತಪ್ಪು ಹೆಜ್ಜೆ
ದಸರಿದೊಡಕು ೨೫೯-೧೩೯ವ ಅಸಂಬದ್ಧ (?)
ದಳವೇಱು ೭೮-೬೬ವ ಹೆಚ್ಚಾಗು, ಅತಿಯಾಗು
ದಾಸಣ ೨೫೫-೧೨೩ ದಾಸವಾಳದ ಹೂವು
ದಿಂಕಿಡಿಸು ೩೦೬-೭ವ ಹಾರಿಸು, ನೆಗೆಯಿಸು
ದಿನಮಾಳಿಕೆ ೪೪-೫೯ವ ಸೂರ್ಯ
ದೀಪಕಳಿಕೆ ೨೮೪-೮೭ವ ದೀಪದ ಉರಿ
ದೀವ ೨೩-೧೧೧ ಬೇಟೆಯ ಪ್ರಾಣಿಗಳನ್ನು ಹಿಡಿಯಲು ಬಳಸುವ ಸಾಕಿದ ಪ್ರಾಣಿ
ದುಮ್ಮಳ ೨೩೪-೧೯ ದುಃಖ
ದೂಟಿಕ್ಕು ೩೯೫-೮೫ ಓಡಿಸು, ನಿವಾರಿಸು
ದೂದವಿ ೯೦-೩೫ ಸೇವಕಿ, ದೂತಿ
ದೇಯ ೨೫೮-೧೩೪ ಕಾಣಿಕೆ, ಬಹುಮಾನ
ದೇವಳ ೩೩೧-೧೨೬ ದೇವಪೂಜೆ (?)
ದೇವಾಂಗ ೨೦೯-೯ ವಸ್ತ್ರ
ದೇಹಾರ ೩೨-೧೬೫ ದೇವಸ್ಥಾನ
ದೇಹಾರಾಗಾರ ೧೩೩-೧೧೫ವ ದೇವಾಲಯ
ದೈವತ ೨೦೭-೧ವ ಸಪ್ತಸ್ವರಗಳಲ್ಲಿ ಒಂದು
ದೌವಾರಿಕ ೧೨೩-೬೫ ದ್ವಾರಪಾಲಕ
ದ್ಯುಗಂಗೆ ೧೫೮-೭೧ ದೇವಗಂಗೆ
ದ್ಯುಮಣಿ ೧೧೫-೩೦ ಸೂರ್ಯ
ದ್ರೋಣಾಮುಖ ೪೭೦-೧೦೨ ನದೀದಡದ ಮೇಲಿರುವ ಊರು
ದ್ವಿರೇಫ ೨೭೮-೫೯ ತುಂಬಿ
ದ್ವೀಂದ್ರಿಯ ೫೦೫-೨೬೧ವ ಎರಡು ಇಂದ್ರಿಯಗಳುಳ್ಳ

ಧ

ಧನಾಳಿ ೧೮-೯೨ ಐಶ್ವರ್ಯವಂತ, ಸಿರಿವಂತ
ಧನ್ವಿ ೨೪೦-೪೬ ಬಿಲ್ಲುಗಾರ
ಧಮ್ಮಿಲ್ಲ ೧೩೯-೧೪೩ ಮುಡಿ, ತುರುಬು

ಧಾತ್ರೀಧರ ೬-೧೯ ಪರ್ವತ, ಬೆಟ್ಟ
ಧುರಧರ ೬೦-೩೮ ಭಾರವನ್ನು ಹೊರುವವನು

ನ

ನಟ್ಟವಿಗ ೫೫-೩೫ವ ನರ್ತನವನ್ನು ಕಲಿಸುವವನು, ನರ್ತಕ
ನಟ್ಟುವ ೨೪೭-೮೧ ನರ್ತನಕಾರ, ನಟ
ನನೆವಿಲ್ಲ ೪೨೩-೫೦ವ ಮನ್ಮಥ
ನವತಿ ೨೧೦-೧೪ ತೊಂಬತ್ತು
ನಾಗವಲ್ಲಿ ೧೩೪-೧೧೮ವ ವೀಳಯದೆಲೆಯ ಬಳ್ಳಿ
ನಾಡಾಡಿ ೬೮-೨೩ವ ಸಾಮಾನ್ಯ ಮನುಷ್ಯ
ನಾಡೆ ೨೦-೯೯ ವಿಶೇಷವಾಗಿ, ಚೆನ್ನಾಗಿ
ನಾಭಿದಘ್ನ ೩೮೧-೨೯ ನಾಭಿ ಮುಳುಗುವಷ್ಟು
ನಿಕುರುಂಬ ೧೫೫-೫೬ ಸಮೂಹ, ಗುಂಪು
ನಿಚಿತ ೩೦-೧೫೨ ಸಮೂಹ
ನಿಚ್ಚ ೩-೪ ನಿತ್ಯ
ನಿಟ್ಟಿಸು ೮೮-೨೩ ನೋಡು
ನಿಡುಸುಯ್ಯು ೪೩೨-೮೨ ನಿಟ್ಟುಸಿರು
ನಿತ್ತರಿಸು ೮೧-೮೨ ನಿಭಾಯಿಸು, ನಿರ್ವಹಿಸು
ನಿಪೀಡಿಸು ೪೫೭-೩೮ ಹಿಸುಕು, ಯಾತನೆಪಡಿಸು
ನಿಪ್ಪೊಸತು ೪೩-೫೦ ಹೊಚ್ಚ ಹೊಸದು
ನಿರ್ಮೋಕ ೨೪೫-೭೧ ಹಾವಿನ ಪೊರೆ
ನಿರ್ಯಾಣ ೨೧೨-೨೩ವ ಮೋಕ್ಷ
ನಿರ್ವಾದ ೧೨-೫೭ ದೋಷ, ಕಲಂಕ
ನಿಲೀನ ೩೦-೧೫೦ ಆವರಿಸಿದ, ಸುತ್ತುವರಿದ
ನಿವಿಷ್ಟ ೯೪-೫೫ವ ಕುಳಿತುಕೊಂಡ
ನಿಶೀಥಿನಿ ೭೦-೩೪ ರಾತ್ರಿ
ನಿಷಣ್ಣ ೨೨೫-೮೮ವ ಕುಳಿತ, ವಿಶ್ರಾಂತಿ ಹೊಂದಿದ
ನಿಷಾದ ೨೦೭-೧ವ ಸಪ್ತಸ್ವರಗಳಲ್ಲಿ ಒಂದು
ನಿಷೇವೆ ೩೪೦-೧೭೬ ಪರಿಚರ್ಯೆ, ಸೇವೆ
ನಿರ್ವೃತಿ ೪-೧೦ ಸಂತೃಪ್ತಿ, ಮುಕ್ತಿ
ನಿಷ್ಕ ೫೨೦-೩೩೦ ಚಿನ್ನ, ಚಿನ್ನದ ನಾಣ್ಯ
ನಿಷ್ಪ್ರವೀಚಾರತೆ ೧೦೫-೯೮ ಮೈಥುನಸೇವನೆ (ಕಾಯ ಮನ ವಚನ) ಇಲ್ಲದಿರುವಿಕೆ
ನಿಸ್ಸಂಖ್ಯ ೨೩೮-೩೩ ಲೆಕ್ಕವಿಲ್ಲದಷ್ಟು
ನಿಳಿಂಪಕಾಂತೆ ೧೧೪-೨೩ ದೇವತೆ
ನೀರ್ಮನುಷ್ಯ ೧೯೯-೧೨೭ ಜಲದೇವತೆ
ನೀರ್ದಳಿ ೧೨೯-೯೯ ನೀರನ್ನು ಚಿಮುಕಿಸು
ನೀಱೆ ೪೨-೪೫ ಸುಂದರಿ, ಚೆಲುವೆ
ನುಗುಳ್ ೧೩೩-೧೧೬ವ ನುಸುಳು
ನೆಗಪು ೨೭೧-೨೮ವ ಮೇಲೆತ್ತು
ನೆಗಳ್ತೆ ೪೬-೬೭ವ ಪ್ರಸಿದ್ಧಿ, ಖ್ಯಾತಿ
ನೆಮ್ಮು ೧೮೨-೪೬ ಅವಲಂಬಿಸು, ಆಶ್ರಯಿಸು
ನೆರಪು ೮೯-೨೯ ಕೂಡಿಸು, ನೆರವೇರಿಸು
ನೆಲವಡಲಿಗೆ ೧೮೨-೪೫ ಕಂಬ (?)
ನೆಲೆಮಾಡ ೩೧-೧೫೯ ಉಪ್ಪರಿಗೆ
ನೇರಿತು ೨೬-೧೨೮ ನೇರವಾದ
ನೇರ್ಪಡು ೪೬-೬೭ವ ಹೊಂದಿಕೊಳ್ಳು, ಸರಿಮಾಡು
ನೇರ್ಪು ೧೦೩-೯೦ ನೆಟ್ಟಗೆ
ನೇವುರ ೧೩೧-೧೦೭ ಕಾಲಂದುಗೆ
ನೇಳಕ ೨೧೫-೩೮ ಹಗ್ಗ (?)
ನೊಚ್ಚಿತು ೯೯-೭೨ ಕಳಪೆ, ಕೀಳು, ಹಗುರ
ನೋಂಪಿ ೧೪೦-೧೫೧ ವ್ರತ

ಪ

ಪಂಚಧಾರೆ ೧೭೬-೧೨ ಕುದುರೆಯ ಐದು ಬಗೆಯ ನಡಗೆ
ಪಂಚಮ ೨೦೭-೧ವ ಸಪ್ತಸ್ವರಗಳಲ್ಲಿ ಒಂದು
ಪಂಚಾಸ್ಯ ೩೬೫-೧೦೪ ಸಿಂಹ
ಪಂತಿ ೧೦೯-೨ ಸಾಲು, ಪಂಕ್ತಿ
ಪಂತಿಕೆ ೪೯೭-೨೨೯ ಸಾಲು, ಪಂಕ್ತಿ
ಪಕ್ಕ ೧೭-೮೨ ರೆಕ್ಕೆ
ಪಕ್ಕಣ ೨೫೧-೧೦೦ ಬೇಡರ ಬೀಡು
ಪಚ್ಚಿಡು ೭೯-೭೫ ವಿಭಾಗಿಸು, ಹಂಚು
ಪಜ್ಜಳಿಸು ೨೦೯-೧೧ ಪ್ರಕಾಶಿಸು, ಹೊಳೆ
ಪಟವೈಶ್ಯಜ ೨೬-೧೨೬ ಬಟ್ಟೆಮಾರುವವನು
ಪಟಹ ೨೩೮-೩೪ ನಗಾರಿ
ಪಟಳಿಕೆ ೫೬-೩೮ ಸಮೂಹ, ಗುಂಪು
ಪಟ್ಟಣಗೆ ೪೨೯-೭೩ ವಸ್ತ್ರ
ಪಟ್ಟವರ್ಧನ ೨೩೫-೨೧ವ ಪಟ್ಟದಾನೆ

ಪಟ್ಟಸಾಲೆ ೨೮-೧೩೮ ಮೊಗಸಾಲೆ, ಹಜಾರ
ಪಡಲ್ವಡಿಸು ೩೪೪-೭ವ ಚೆಲ್ಲಾಪಿಲ್ಲಿಮಾಡು
ಪಡವಳಗಟ್ಟಿಗೆ ೩೮೮-೫೨ವ ಬಟ್ಟೆಬರೆಗಳನ್ನು ಅಲಂಕಾರ ಮಾಡುವವನು ಹಿಡಿದುಕೊಳ್ಳುವ ಕೋಲು
ಪಡಿ ೨೩೧-೭ ಪ್ರತಿ, ಸಮಾನ
ಪಡಿಗ ೩೦೫-೪ವ ಉಗುಳುವ ಪಾತ್ರೆ, ಪೀಕದಾನಿ
ಪಡಿಮಟ್ಟೆ ೨೦೭-೧ವ ಸಪ್ತತಾಳಗಳಲ್ಲಿ ಒಂದು
ಪಡಿಯಱ ೫೦-೧೦ವ ಬಾಗಿಲುಕಾಯುವವನು
ಪಡಿರಾಣಿ ೧೨೧-೫೫ ಸಮಾನವಾದ ರಾಣಿ
ಪಡೆಮಾತು ೨೬೮-೧೮ ಪ್ರತಿಮಾತು, ಸುದ್ದಿ
ಪಣ್ಣು ೧೭೮-೨೧ ಸಜ್ಜುಮಾಡು, ಸಿದ್ಧಪಡಿಸು
ಪಣ್ಯಾಂಗನೆ ೨೯೪-೧೩೯ವ ವೇಶ್ಯೆ
ಪತ್ತನ ೨೪-೧೧೫ ಪಟ್ಟಣ
ಪತ್ತನಕ ೨೯-೧೪೬ ಪಟ್ಟಣ
ಪತ್ತಳಿಕೆ ೨೨-೧೦೯ವ ಬತ್ತಳಿಕೆ
ಪತ್ತೆಸಾರು ೪೬-೬೮ವ ಹತ್ತಿರ ಬರು
ಪತ್ರವಲ್ಲಿ ೪೨-೪೮ ಸುವಾಸನೆಯ ಪರಿಕರಗಳಿಂದ ದೇಹದ ಮೇಲೆ ಬರೆದ ಚಿತ್ರಗಳು
ಪದಪು ೧೫-೭೪ ಸಡಗರ
ಪದುಳ ೧೭೬-೧೪ ಕ್ಷೇಮ
ಪದುಳಿಸು ೩೪೯-೩೦ ಚೆನ್ನಾಗಿರಿಸು, ಸಿದ್ಧವಾಗಿಡು
ಪದೆ ೧೮-೮೮ ಬಯಸು, ಅಪೇಕ್ಷಿಸು
ಪದೆಪು ೩-೩ ಸಡಗರ, ಸಂಭ್ರಮ
ಪರಕಲಿಸು ೧೧೧-೮ ಹಬ್ಬು, ವ್ಯಾಪಿಸು
ಪರಪುಷ್ಟ ೩೭೬-೩ ಕೋಗಿಲೆ
ಪರಿಕಲಿಸು ೧೮೩-೪೭ವ ಹಬ್ಬು, ಆವರಿಸು
ಪರಿಕಲ್ಪಿಸು ೨೧೩-೨೭ವ ನಿಶ್ಚಯಿಸು, ಗೊತ್ತುಮಾಡು
ಪರಿಕಾಲು ೧೭-೮೭ ಹರಿಯುವ ಕಾಲುವೆ
ಪರಿಕೀಲಿಸು ೨೪೫-೭೧ವ ಸೇರು, ಕೂಡು
ಪರಿಖೆ ೨೬೯-೨೧ ಅಗಳು, ಕಂದಕ
ಪರಿಘೂರ್ಣನ ೪೯೬-೨೨೨ವ ಗಟ್ಟಿಯಾದ ಧ್ವನಿ
ಪರಿಣಾಹಕ ೧೯೧-೮೬ ವಿಸ್ತಾರ, ವಿಶಾಲ
ಪರಿತಪ್ತ ೨೨೦-೬೪ ದುಃಖಕ್ಕೀಡಾದ
ಪರಿಧಾನ ೧೩೫-೧೨೦ ಉಡುಗೆ, ತೊಡುಗೆ
ಪರಿಪಂಥಿ ೨೦-೯೭ ಶತ್ರು, ವೈರಿ
ಪರಿಪೀಡೆ ೧೭-೮೭ ದೊಡ್ಡ ತೊಂದರೆ
ಪರಿಯಷ್ಟಿ ೧೨೨-೬೦ವ ಆಹಾರ
ಪರಿಯಾಣ ೩೦೫-೪ವ ಹರಿವಾಣ, ತಟ್ಟೆ
ಪರಿವಿಗಳೆ ೨೭೬-೪೬ವ ತುಂಬಿ ಹರಿ, ಮೇರೆ ಮೀರು (?)
ಪರಿಶಂಕೆ ೧೭೧-೧೩೮ ಅಪನಂಬಿಕೆ, ಅನುಮಾನ
ಪರಿಷೇಕ ೩೪೦-೧೬೯ ಸುತ್ತುವರಿಯುವಿಕೆ
ಪರೆ ೧೪೯-೩೨ ಹರಡು, ವ್ಯಾಪಿಸು
ಪರ್ಯಂಕಾಸನ ೧೬೧-೮೫ವ ಒಂದು ವಿಧದ ಆಸನ
ಪರ್ವು ೧೨-೫೯ ಹಬ್ಬು
ಪರ್ವುಗೆ ೧೬೮-೧೨೦ ಹಬ್ಬುವಿಕೆ
ಪಲ್ಲಣ ೧೬೯-೨೯ ಜೀನು
ಪಲ್ಕಿಸು ೧೭೯-೨೯ ಹಲ್ಲುಕಿಸಿ, ನಗು
ಪಲ್ಸುಲಿ ೨೮-೧೪೨ ಹಲ್ಲುಜ್ಜು
ಪವಣಿಸು ೫೨-೧೬ವ ಪೋಣಿಸು
ಪವಣು ೨೦೬-೧೬೦ವ ಹವಣು, ಪ್ರಮಾಣ
ಪವಳ್ಗುಡಿ ೩೭೬-೨ ಹವಳದ ಬಳ್ಳಿಯ ಕುಡಿ
ಪವಿಧರ ೬೩-೭೨ ಇಂದ್ರ
ಪಸಾರಿತ ೫೭-೪೨ವ ಹರಡಿದ
ಪಸಾಯದಾನ ೩೮೩-೭೬ ಉಡುಗೊರೆ
ಪಳಂಚಲೆ ೩೦೦-೧೬೫ವ ಮೇಲೆಬಿದ್ದು ಹೊಡೆ
ಪಳಂಚು ೧೩೩-೧೧೫ ತಾಗು, ತಟ್ಟು
ಪಳಚ್ಚನೆ ೧೨೮-೯೪ ಕಾಂತಿಯುಕ್ತವಾಗಿ
ಪಳಯಿಗೆ ೩೫೩-೪೭ವ ಧ್ವಜ
ಪಳವಿಗೆ ೧೫೬-೬೦ ಧ್ವಜ, ಬಾವುಟ
ಪಳಿ ೯-೩೮ ಹಳಿ, ನಿಂದಿಸು
ಪಳಿಕು ೨೮-೧೪೨ ಸ್ಫಟಿಕ
ಪಱಮೆ ೨೬-೧೩೦ ತುಂಬಿ
ಪಱುಗೋಲು ೨೪೬-೭೫ ಹರುಗೋಲು, ದೋಣಿ
ಪಱೆ ೨೬೫-೧ವ ತಮಟೆ
ಪಾಗುಡ ೩೦-೧೪೯ ಉಡುಗೊರೆ, ಕಾಣಿಕೆ
ಪಾಣ್ಬ ೪೨೦-೩೩ ಜಾರ, ವಿಟ
ಪಾಣ್ಬೆ ೪೨೦-೩೩ ಜಾರೆ

ಪಾದಪ ೨೨-೧೦೯ವ ವೃಕ್ಷ, ಮರ
ಪಾಮರಿ ೧೭-೮೨ ಹಳ್ಳಿಯ ಹೆಂಗಸು
ಪಾರ್ ೧೬-೭೯ ನಿರೀಕ್ಷಿಸು
ಪಾವುಗೆ ೧೨೩-೬೫ ಹಾವುಗೆ, ಎಕ್ಕಡ
ಪಾಶಿ ೫೧೯-೩೨೭ ವರುಣ
ಪಾಸ ೨೫೧-೧೦೦ ಹಗ್ಗ
ಪಾಸಟಿ ೨೦-೯೯ ಸಮಾನ, ಸಾಟಿ
ಪಾಸು ೧೬೯-೧೪೩ ಹಾಸಿಗೆ
ಪಾಸುಗೆ ೧೬೩-೧೧೭ ಹಾಸಿಗೆ
ಪಿಂಡುಗೊಳ್ ೨೮೧-೭೫ವ ಗುಂಪಾಗು, ಒಟ್ಟಾಗು
ಪಿಂದುಗೊಳ್ ೨೨೬-೯೨ ಅನುಸರಿಸು
ಪಿಕ್ಕು ೧೨೬-೭೯ ಬಾಚು, ಬಿಡಿಸು
ಪಿಡಿ ೧೯-೯೫ ಹೆಣ್ಣಾನೆ
ಪಿಡಿಕಟ್ಟು ೬೫-೭ ಸೆರೆ, ಬಂಧನ
ಪಿಟ್ಟಾಳಸ ೪೫೩-೧೯ ಮಲ್ಲಯುದ್ಧದ ಒಂದು ವರಸೆ
ಪಿಣೆ ೨೭-೧೩೭ ಪೆಣೆ, ಸೇರು, ಕೂಡು (?)
ಪಿಪ್ಪಳ ೩೮೧-೨೮ ಒಂದು ಜಾತಿಯಮರ
ಪಿಲ್ಲಿ ೧೩೧-೧೦೮ ಕಾಲುಂಗುರ
ಪಿಶಂಗ ೨೪-೧೧೬ ನಸುಗೆಂಪು
ಪುಂಜಿಸು ೫೬-೩೮ವ ರಾಶಿಮಾಡು, ಗುಂಪು ಕೂಡಿಸು
ಪುಂಸವನ ೧೪೫-೧೪ವ ಗರ್ಭಿಣಿಸ್ತ್ರೀಗೆ ಮಾಡುವ ವೊಂದು ಧಾರ್ಮಿಕ ಸಂಸ್ಕಾರ
ಪುಗು ೨೬೩-೧೫೪ವ ಪ್ರವೇಶಿಸು, ಒಳಹೋಗು
ಪುಟಮಿಕ್ಕು ೨೩೦-೧ವ ಬೆಂಕಿಯಲ್ಲಿ ಕಾಯಿಸು
ಪುಟ್ಟು ೯೧-೪೨ ಆಶ್ರಯ, ನೆಲೆ
ಪುಡಿಗಸ್ತುರಿ ೧೨೬-೭೯ ಕಸ್ತೂರಿಯ ಪುಡಿ
ಪುದಿ ೧೬೩-೯೬ ಸೇರು, ಕೂಡು
ಪುನ್ನಾಗ ೨೬೦-೧೪೫ ಬಿಳಿಯಜಿನೆ, ಸುರಹೊನ್ನೆಯಮರ
ಪುರಂದರ ೧೯೩-೯೭ವ ಇಂದ್ರ
ಪುರಂಧ್ರಿ ೨೩-೧೧೧ ಪತಿವ್ರತೆ
ಪುರುಡಿಸು ೮೫-೮ವ ಸ್ಪರ್ಧಿಸು
ಪುಲ್ಲಿ ೩೮೭-೪೯ (?)
ಪುಳಿಂದಿನಿ ೨೫೨-೧೦೬ ಬೇಡಿತಿ, ಬೇಡರ ಹೆಂಗಸು
ಪುಳಿನ ೭೮-೬೯ ಮರಳಿನ ದಿನ್ನೆ
ಪೂಗುಡಿ ೭೭-೬೫ ಹೂಗೊಂಚಲು
ಪೂತ್ಕರಿಸು ೧೫೭-೬೯ ಧ್ವನಿಮಾಡು
ಪೂವಲಿ ೧೮೨-೪೩ ರಂಗವಲ್ಲಿ
ಪೂಸು ೧೩೧-೧೦೬ ಸವರು, ಬಳಿ
ಪೆಂಡೆಯ ೧೩೧-೧೦೮ ಕಾಲ ಬಿರುದಿನ ಬಳೆ
ಪೆಟ್ಟುವೆರ್ಚು ೧೪೧-೧೫೫ವ ಪೆಟ್ಟುತಿನ್ನು
ಪೆರ್ಗೆಱೆ ೬೭-೧೬ ದೊಡ್ಡಕೆರೆ
ಪೆರ್ಚು ೧೧-೪೮ ಹೆಚ್ಚುಗೆ, ಅಧಿಕ
ಪೆರ್ಚುಗೆಡು ೧೯೦-೭೯ ಕುಂದು
ಪೆರ್ಮಡದಿ ೨೩೫-೩೪ ವೃದ್ಧಸ್ತ್ರೀ, ಹಿರಿಯ ಹೆಂಡತಿ
ಪೆರ್ಮೆ ೧೨೩-೬೫ ಹೆಮ್ಮೆ
ಪೆಸರಿಲಿ ೨೫೬-೧೨೯ ಹೆಸರಿಲ್ಲದ, ಅನಾಮಿಕ
ಪೆಱಪಿಂಗು ೭೯-೭೫ವ ಹಿಂದೆಗೆ, ಮರೆಯಾಗು
ಪೇಟ ೨೬-೧೨೭ ಗುಂಪು
ಪೇಡಿವಡು ೧೪೩-೫ ಹೇಡಿಯಾಗು, ಅಂಜು, ಹೆದರು
ಪೇರಡವಿ ೨೪೮-೮೨ ದೊಡ್ಡಕಾಡು
ಪೇರಣೆ ೧೨೭-೮೫ ಕುಣಿತ, ನೃತ್ಯ
ಪೇಱು ೨೨-೧೦೭ ಒಂದರ ಮೇಲೊಂದು ಜೋಡಿಸು
ಪೊಂಪುಳಿ ೨೨-೧೦೯ವ ರೋಮಾಂಚನ
ಪೊಗಳ್ತೆ ೪೬-೬೭ವ ಹೊಗಳಿಕೆ
ಪೊಚ್ಚಿಸು ೧೪೬-೧೯ ಹತ್ತಿಸು
ಪೊಡವಡು ೯೪-೫೫ವ ನಮಸ್ಕರಿಸು
ಪೊಡೆ ೧೯-೯೫ ಹೊಡೆ, ಧಾನ್ಯದ ತೆನೆ
ಪೊಣರ್ ೨೨೬-೯೩ ಹೋರಾಡು
ಪೊಣರ್ವಕ್ಕಿ ೧೨೪-೭೦ ಚಕ್ರವಾಕಪಕ್ಷಿ
ಪೊದಲ್ ೧೧-೫೨ ಹೊರಬರು, ವ್ಯಾಪಿಸು, ಕಾಣು
ಪೊನಲು ೪೪-೫೭ ಪ್ರವಾಹ
ಪೊರೆಯೇಱು ೫೮-೪೬ ಉತ್ಸಾಹಗೊಳ್ಳು
ಪೊರ್ದು ೩-೩ ಸೇರು, ಕೂಡು
ಪೊರ್ದುಗೆ ೬೮-೨೩ ಸೇರುವಿಕೆ
ಪೊಲ ೧೬೮-೧೨೪ ಸ್ಥಳ, ನೆಲೆ, ನೋಟದ ಜಾಗ

ಪೊಲಂಬು ೯೬-೬೩ ದಾರಿ, ಮಾರ್ಗ, ರೀತಿ
ಪೊಲಂಬುಗೆಡು ೨೦೫-೧೫೪ ದಾರಿತಪ್ಪು
ಪೊಲಗೆಡಿಸು ೧೮೨-೪೫ ದಾರಿತಪ್ಪಿಸು
ಪೊಸಂತಿಲು ೧೫೭-೬೭ ಹೊಸ್ತಿಲು
ಪೊಸಯಿಸು ೧೭೨-೧೩೯ ಉಜ್ಜಿಸು, ತಿಕ್ಕಿಸು
ಪೊಱಮಡು ೧೩೦-೧೦೪ವ ಹೊರಹೊರಡು
ಪೊಱವೀಡು ೧೫೨-೪೫ವ ಹೊರಗಡೆ ಬಿಡುವ ಬೀಡು
ಪೊಱವೊಳಲು ೫೪-೨೮ ಊರಿನ ಹೊರಭಾಗ
ಪೌಳಿಂದಿನಿ ೨೫೧-೧೦೨ ಬೇಡರ ಹೆಂಗಸು
ಪ್ರಚೇತ ೩೮-೨೩ವ ವರುಣ
ಪ್ರಣಮನ ೭೫-೫೭ ನಮಸ್ಕರಿಸುವುದು
ಪ್ರಣಾದ ೩೦-೧೫೦ ಧ್ವನಿ
ಪ್ರಣಾಶಿ ೩-೫ ಹಾಳುಮಾಡುವವ
ಪ್ರಣುತ ೩೧-೧೫೮ ಹೊಗಳಲ್ಪಟ್ಟ
ಪ್ರತಿಪನ್ನ ೯೭-೬೬ವ ಪಡೆದ, ಹೊಂದಿದ
ಪ್ರತಿಹಾರಕ ೯೪-೫೬ ಬಾಗಿಲುಕಾಯುವವನು
ಪ್ರತೀಚಿಕ ೩೧೨-೩೬ ಪಡೆಯುವ, ಹೊಂದುವ
ಪ್ರತೋಳಿಕ ೧೫೮-೭೩ವ ರಾಜಮಾರ್ಗ, ಮುಖ್ಯ ಬೀದಿ
ಪ್ರಥಿತ ೧೨-೫೯ ಪ್ರಸಿದ್ಧವಾದ
ಪ್ರಪಂಚಿಸು ೧೦೯-೩ವ, ೧೪೭-೨೦ವ ಹರಡು, ವಿಸ್ತರಿಸು, ಪ್ರಕಟಿಸು
ಪ್ರಪಾಕಳಾಪ ೧೮-೮೯ವ ಅರವಟ್ಟಿಗೆಯ ಕೆಲಸ
ಪ್ರಭಂಜನ ೩೮-೨೩ವ ಗಾಳಿ
ಪ್ರಭವಿಸು ೩೯-೩೦ ಹುಟ್ಟು
ಪ್ರರಾಗ ೬೬-೧೧ ಬಣ್ಣದಿಂ ತುಂಬಿದ
ಪ್ರರಿಂಖ ೧೯೪-೧೦೨ ಧ್ವನಿ (?)
ಪ್ರಲಂಬ ೪೫೪-೨೭ ನೇತಾಡುವಿಕೆ
ಪ್ರಲುಂಟನ ೨೩೨-೮ ಅಂದೋಲನ, ಹೊರಳಾಡುವುದು
ಪ್ರವಾಳ ೧೨೯-೯೭ ಹವಳ
ಪ್ರವಿಭಾಸನ ೨೨೬-೯೧ವ ಚೆನ್ನಾಗಿ ಹೊಳೆಯುವ
ಪ್ರವೇಕ ೧೯೮-೧೨೪ ಶ್ರೇಷ್ಠ, ಮುಖ್ಯ
ಪ್ರಶ್ರಯ ೨೧೬-೩೮ವ ವಿನಯ, ಆದರ
ಪ್ರಸೂನ ೨೯೬-೧೪೬ವ ಹೂ, ಹಣ್ಣು
ಪ್ರಸ್ಥಾನಭೇರಿ ೫೧-೧೩ವ ದಂಡಯಾತ್ರೆಗೆ ಹೊರಡುವ ಸಮಯದ ವಾದ್ಯ
ಪ್ರಸ್ಥಾನಶಿಬಿರ ೨೩೮-೩೩ವ ದಂಡಯಾತ್ರೆಯ ವೇಳೆಯಲ್ಲಿ ಬಿಡುವ ಬೀಡು
ಪ್ರಹೇಳಿಕೆ ೧೨೯-೯೬ವ ಒಗಟು, ಸಮಸ್ಯೆ
ಪ್ರಾಂಚಿತ ೧೩೩-೧೧೭, ೧೬೨-೯೦ ಮುಂಭಾಗ
ಪ್ರಾದುರ್ಭಾವ ೨೧೩-೨೭ವ ಕಾಣುವ, ತೋರುವ
ಪ್ರಾಪಣ್ಯಕ ೭೫-೫೮ ಹೊಂದುವುದು, ಪಡೆಯುವುದು
ಪ್ರೇಷಿತ ೩೦೪-೨ವ ಕಳುಹಿಸಲ್ಪಟ್ಟ
ಪ್ರೋತ್ತಾಲ ೨೫-೧೨೧ ಗಟ್ಟಿಯಾದ
ಪ್ರೋದ್ದಾಮ ೯-೪೧ ಶ್ರೇಷ್ಠವಾದ
ಪ್ರೋಲ್ಲಸಿತ ೧೯೨-೮೯ ಪ್ರಕಾಶಿಸುವ, ಹೊಳೆಯುವ
ಪ್ಲುತ ೪೫೨-೨೦ವ ಕುದುರೆಯ ಒಂದು ನಡಗೆ

ಫ

ಫೇನ ೧೩-೬೨ ಸಮುದ್ರದ ನೊರೆ

ಬ

ಬಕುಳ ೩೮೦-೨೪ವ ರೆಂಜೆಮರ, ರೆಂಜೆಹೂ
ಬಕ್ಕೆವಲಸು ೧೯೦-೮೨ವ ಸಿಹಿಯಾದ ಹಲಸು
ಬಗೆಕಾಱ ೪೫೧-೧೭ ಮನಸ್ಸಿಗೆ ಬಂದಂತೆ ನಡೆಯುವವನು
ಬಗೆಗೊಳಿಸು ೧೨೮-೯೪ವ ಆಕರ್ಷಿಸು, ಸೆಳೆ
ಬಗ್ಗಿಸು ೨೩-೧೧೨ (ಕೋಗಿಲೆ) ಧ್ವನಿಮಾಡು, ಕೂಗು
ಬಚ್ಚಿಸು ೧೨೫-೭೭ ಮುಚ್ಚಿಡು, ಅಡಗಿಸು
ಬಟ್ಟಿದು ೩೪-೩ವ ಗುಂಡಾದ
ಬಟ್ಟೆ ೨೪೧-೫೨ ಮಾರ್ಗ
ಬಣ್ಣವಣ್ಣಗೆ ೧೨೩-೬೬, ೨೩೫-೨೦, ೨೭೭-೫೨ ೩೦೧-೧೭೧ ವಿಧವಿಧವಾದ ಬಣ್ಣ
ಬದ್ದವಣ ೭೧-೩೮ವ ಮಂಗಳವಾದ್ಯ
ಬನ್ನ ೧೩೨-೧೧೩ ಕಷ್ಟ, ತೊಂದರೆ
ಬಬ್ಬರಿ ೨೫೬-೧೨೬ ಒಂದು ಬಗೆಯ ಹೆಂಡ
ಬಬ್ಬರಿಗೆ ೨೫೭-೧೩೨ವ ಒಂದು ಬಗೆಯ ಹೆಂಡ
ಬಯಲ್ದಾವರೆ ೧೮-೮೯ ಬಯಲಿನಲ್ಲಿನ ತಾವರೆ

ಬಯ್ಕೆ ೪೧-೪೨ ಬಚ್ಚಿಡುವಿಕೆ, ಕೂಡಿಡುವುದು
ಬರಿಬರಿ ೨೫೨-೧೦೮ ಪಕ್ಕೆಲುಬು
ಬಲಗೊಳ್ ೫೮-೪೮ ಪ್ರದಕ್ಷಿಣೆ ಮಾಡು
ಬಲಘಟ್ಟನ ೨೪೧-೫೧ ಬಲವಾದ ತುಳಿತ
ಬಲವರು ೧೭೧-೧೩೪ ಪ್ರದಕ್ಷಿಣೆ ಮಾಡು
ಬಸನಿಗ ೪೨೮-೬೯ವ ದುಶ್ಚಟಕ್ಕೆ ಒಳಗಾದವನು
ಬಸವಳಿ ೪೩೨-೮೨ವ ಶಕ್ತಿಗುಂದು
ಬಹುಲಜ್ಞ ೯೩-೪೯ ಚೆನ್ನಾಗಿ ತಿಳಿದವನು
ಬಳ್ ೫೯-೫೨ ಬದುಕು, ಜೀವಿಸು
ಬಳಿಸಲ್ ೪೬೮-೯೧ ಅನುಸರಿಸು, ಹಿಂಬಾಲಿಸು
ಬಳ್ವು ೧೪೧-೧೫೪ವ ಬದುಕು, ಜೀವಿಸು
ಬಜಬಜ ೮೦-೭೯ ಸಂಪೂರ್ಣವಾಗಿ ಒಣಗು
ಬಾಕುಳಿಕೆ ೪೪೩-೧೨೯ ಅತಿಯಾಸೆ
ಬಾಜಿಸು ೧೯-೯೩ ಬಾರಿಸು, ನುಡಿಸು
ಬಾಡಬಾಗ್ನಿ ೮೭-೧೯ ಸಮುದ್ರದ ಬೆಂಕಿ
ಬಾಡವ ೩೫೧-೪೧ ಬಾಡಬಾಗ್ನಿ
ಬಾಣಡ್ಡಣಗೊಳ್ ೧೨೩-೬೫ ಆಹಾರವನ್ನು ಬಡಿಸುವ ಕಾರ್ಯ
ಬಾಯಿನ ೩೦೦-೧೬೫ವ ಉಡುಗೊರೆ
ಬಾರ್ ೨೫೨-೧೦೫ ಹಗ್ಗ
ಬಾರಿಸು ೧೬-೮೧ ತಡೆ, ನಿವಾರಿಸು
ಬಾಸಣಿಸು ೧೭-೮೩ ಮುಚ್ಚು, ಮರೆಮಾಡು
ಬಾಸಿಗ ೧೨೪-೭೨ ಬಾಸಿಂಗ
ಬಾಸುಳ್ ೪೨೭-೬೫ ಬಾಸುಂಡೆ
ಬಾಹತ್ತರ ೧೨೮-೯೪ವ ಎಪ್ಪತ್ತೆರಡು
ಬಾಳ ೧೩೦-೧೧೬ವ ಲಾಮಂಚ
ಬಿಗುರ್ ೧೪೬-೧೯ ಭಯಂಕರತೆ
ಬಿಜ್ಜಣಿಗೆ ೪೩೩-೮೬ ಬೀಸಣಿಗೆ
ಬಿಡೌಜ ೧೮೭-೬೩ವ ಇಂದ್ರ
ಬಿಣ್ಪು ೧೪೪-೬ ಭಾರ, ಘನತೆ
ಬಿತ್ತರ ೭೯-೭೬ವ ವಿಸ್ತಾರ
ಬಿತ್ತರಿಸು ೧೭-೮೭ ವಿಸ್ತರಿಸು
ಬಿದಿರ್ ೮೧-೮೬ ಹರಡು, ಚೆಲ್ಲು
ಬಿದಿರಿತ ೧೯-೯೩ ಹರಡಿದ
ಬಿದಿರ್ನೆಲ್ಲಿ ೨೪೮-೮೪ ಒಂದು ಜಾತಿಯ ನೆಲ್ಲಿ
ಬಿನ್ನನೆ ೭೭-೬೫ ಮೌನವಾಗಿ
ಬಿಲ್ಗೀಸು ೨೫೧-೧೦೦ ಬಿಲ್ಲನ್ನು ಹೆರೆ, ಉಜ್ಜು
ಬಿಸಶಾಲಿನಿ ೪-೧೦ ಸರಸ್ವತಿ
ಬೀಜೋಕ ೧೩-೬೧ವ ಬೀಜ ಬಿತ್ತುವುದು
ಬೀಸರಂಬೊಗು ೨೬೧-೮೫ವ ಕೊನೆಗಾಣು, ಮುಗಿ
ಬೂವ ೩೦೧-೧೭೨ ಆಹಾರ
ಬೆಂಬಳಿ ೨೨೭-೯೨ ಹಿಂಬಾಲಿಸುವುದು, ಜೊತೆ ಸೇರುವುದು
ಬೆಂಬಿಡು ೯೮-೬೯ ಬಿಟ್ಟುಹೋಗು
ಬೆಂಬೀಳು ೭೮-೭೦ ಅನುಸರಿಸು, ಹಿಂಬಾಲಿಸು
ಬೆಗಡು ೪೩೪-೮೯ವ ಆಶ್ಚರ್ಯ
ಬೆರ್ಚಿಸು ೧೩೭-೧೩೨ ಹೆದರಿಸು
ಬೆವಸೆ ೧೨೬-೮೦ ಬಯಕೆ, ಆಸಕ್ತಿ
ಬೆಸನ ೧೧೮-೪೦ ಕಾರ್ಯ
ಬೆಳಂಬೇಡೆ ೨೪೮-೮೪ ಒಂದು ಜಾತಿಯ ಮರ
ಬೆಳರ್ ೯-೩೮ ಬಿಳಿದಾಗು, ಕಾಂತಿಹೊಂದು
ಬೆಳುವಸದನ ೧೩೧-೧೦೮ವ ಬಿಳಿಯಬಟ್ಟೆ
ಬೆಳಗೆಯ್ ೧೯-೯೫ ಬೆಳೆ ಬೆಳೆದಿರುವ ಹೊಲ
ಬೆಳ್ಗೊಡೆ ೧೬೩-೯೮ವ ಬಿಳಿಯ ಕೊಡೆ
ಬೆಳ್ವಟ್ಟೆ ೧೯೭-೧೧೫ ಬಿಳಿಯ ಬಟ್ಟೆ
ಬೆಳ್ಪಸದನ ೧೩೨-೧೧೦ವ ಬಿಳಿಯಬಟ್ಟೆ
ಬೇಗಡವೆಸ ೩೧-೧೫೬ ರಂಧ್ರಕೊರೆಯುವ ಕೆಲಸ
ಬೇರ್ವರಿ ೨೬೦-೧೪೧ವ ಆವರಿಸು, ಹಬ್ಬು
ಬೇವಸ ೨೧೫-೩೭ ವ್ಯಾಕುಲ, ಉಮ್ಮಳ
ಬೇಳನ ೪೩೧-೭೯ವ ಯಾಗಮಾಡುವುದು
ಬೊಟ್ಟೆತ್ತು ೧೦-೪೬ ಬೆರಳನ್ನು ತೋರಿಸು
ಬೋನ ೧೨೩-೬೪ ಆಹಾರ

ಭ

ಭಣಿತ ೮-೩೦ ಧ್ವನಿಮಾಡಿದ
ಭದ್ರಜಾತಿ ೨೩೮-೩೫ ಒಂದು ಜಾತಿಯ ಆನೆ
ಭರವಸ ೩-೪ ಆತ್ಮವಿಶ್ವಾಸ, ನಂಬಿಕೆ
ಭಂಕೈ ೧೬೮-೧೨೨ ಆನೆಯ ಸೊಂಡಿಲು

ಭಸ್ತ್ರಾನನ ೩೬-೧೧ ಆನೆಯ ಸೊಂಡಿಲು

ಭಾಭಾಸಮಾನ ೧೧೬-೩೧ ಹೊಳೆಯುವ, ಕಾಂತಿ ಯುಕ್ತವಾದ, ಸಮಾನವಾದ

ಭಾವಜ ೨೫೯-೧೩೮ ಮನ್ಮಥ

ಘಿಮ್ಮಡು ೨೪೭-೭೯ ಮೌನವಾಗಿರು, ಬಿಕೋಎನ್ನು

ಭೂಷಿಸು ೧೩೧-೧೦೭ ಅಲಂಕರಿಸು

ಭೇಷಜ ೯೯-೭೦ ಒಂದು ಮೂಲಿಕೆ

ಮ

ಮಂಜರಿಕೆ ೬೫-೬ ರಾಶಿ

ಮಂಜಿಷ್ಠ ೨೩೭-೩೦ವ ಕೆಂಪುಬಣ್ಣ

ಮಂಜೀರ ೧೩೯-೧೪೩ ಕಾಲಂದುಗೆ

ಮಂಜುಕೆ ೬೬-೧೦ ಮನೋಹರ

ಮಂಡಗೆ ೩೦೨-೧೭೪ ಒಂದು ಭಕ್ಷ್ಯ

ಮಂಡಳಿಕ ೧೧೦-೭ ಒಂದು ಪ್ರಾಂತದ ಅಧಿಕಾರಿ

ಮಂಡಳಿಸು ೧೬೨-೯೩ ಗುಂಡಗೆ ಸುತ್ತು

ಮಂದವಳ ೨೨೭-೯೯ವ ಅಹಂಕಾರ, ಪ್ರತಿಷ್ಠೆ

ಮಂದೈಸು ೧೬೬-೧೧೧ ದಟ್ಟವಾಗು, ವ್ಯಾಪಿಸು

ಮಕರಪತಾಕ ೧೩೭-೧೩೧ ಮನ್ಮಥ

ಮಕರಿಕೆ ೧೨೫-೭೪ ದೇಹದ ಮೇಲೆ ಸುಗಂಧ ದ್ರವ್ಯದಿಂದ ಬರೆಯುವ ಚಿತ್ರ

ಮಘವ ೨೧೨-೨೨ವ ಇಂದ್ರ

ಮಚ್ಚರಿಸು ೪೦೭-೧೨೮ ಅಸೂಯೆಪಡು

ಮಟ್ಟೆ ೨೦೭-೧ವ ಒಂದು ತಾಳ

ಮಣಿಕುಟ್ಟಿಮ ೨೧೩-೨೭ವ ಪಚ್ಚೆಯ ನೆಲಗಟ್ಟು

ಮಣಿಗಾಱ ೨೬-೧೨೬ ರತ್ನವ್ಯಾಪಾರಿ

ಮಣಿಮಾಡ ೩೧-೧೫೪ ಮಣಿಗಳಿಂದ ಕಟ್ಟಿದ ಮನೆ

ಮತಲ್ಲಿಕೆ ೨೨-೧೦೯ವ ಶ್ರೇಷ್ಠವಾದ

ಮತ್ಕುಣ ೯-೩೭ ತಿಗಣೆ

ಮತ್ತಹಾಸ್ತಿಕ ೨೩೪-೧೭ ಮದಿಸಿದ ಆನೆ

ಮತ್ತಾಳಿನಿ ೨೭-೧೩೪ ಮದಿಸಿದ ತುಂಬಿ

ಮದುವೆನಿಲ್ ೫೨೩-೩೪೫ ಮದುವೆಯಾಗು

ಮಧುಕರ ೫-೧೬ ತುಂಬಿ

ಮಧುಮಾಸ ೫೪೧-೪೩೨ ಚೈತ್ರಮಾಸ

ಮಧ್ಯಮ ೨೦೭-೧ವ, ೨೦೮-೩ವ ರಾಗಗಳಲ್ಲಿ ಒಂದು ಬಗೆ

ಮನದೆಗೊಳ್ ೪೮-೧ವ ಮನಸ್ಸಿಗೆ ತಂದುಕೊಳ್ಳು, ಮೆಚ್ಚು

ಮಮ್ಮಳಿ ೩೬೦-೮೪ವ ರೂಪುಗೆಟ್ಟ ಸಾವು

ಮರವಟ್ಟಿಗೆ ೨೫೬-೧೨೬ ಒಂದು ಜಾತಿಯ ಹೆಂಡ

ಮರಾಳಿಕೆ ೧೪೫-೧೬ವ ಹೆಣ್ಣುಹಂಸ

ಮರಿಚ ೮೦-೭೯ ಕರಿಯ ಮೆಣಸು

ಮಲಹರಿ ೧೧೨-೧೪ ಒಂದು ಜಾತಿಯ ರಾಗ

ಮಲೀಮಸ ೨೪೧-೫೧ ಕೊಳಕು, ಮಲಿನ

ಮಲ್ಲಶ್ರಮ ೪೫೨-೧೮ವ ಮಲ್ಲಯುದ್ಧದಿಂದ ಆಗುವ ಶ್ರಮ, ಆಯಾಸ

ಮಸಗು ೨೧೩-೨೭ ವಿಜೃಂಭಿಸು

ಮಹತ್ತರಿ ೧೨೩-೬೫ ಗೌರವಾನ್ವಿತ ಹೆಂಗಸು

ಮಹಾಚೀನ ೩೦೯-೨೦ವ ಒಂದು ಬಗೆಯ ರೇಶ್ಮೆಬಟ್ಟೆ

ಮಹಿಷಿಕ ೫೧೯-೩೨೭ ಎಮ್ಮೆ

ಮಹೀಧ್ರ ೨೯-೧೪೫ ಪರ್ವತ

ಮಹೋದಾರ ೨೫-೧೨೩ವ ಒಂದು ಜಾತಿಯ ಮರ

ಮಱೆಯೇಱು ೬೫-೭ ಬಚ್ಚಿಟ್ಟುಕೊಂಡು ಮಾಡುವ ಯುದ್ಧ

ಮಾಂದಳಿರು ೨೫೬-೧೨೫ವ ಮಾವಿನ ಚಿಗುರು

ಮಾಕಂದ ೩೪-೩ವ ಮಾವಿನಮರ

ಮಾಗಾಯ್ ೫೫-೩೨ ಒಂದು ಆಭರಣ

ಮಾತಂಗ ೩೩೬-೧೪೮ ಚಂಡಾಲ

ಮಾತುಳುಂಗ ೧೮೩-೪೮ವ ಮಾದಲ

ಮಾಮಸಕ ೨೫೩-೧೦೯ ಅತ್ಯಂತ ಕೋಪ

ಮಾರಸಾಲ ೨೧-೧೦೫ ಶ್ರೇಷ್ಠವಾದ ಕಬ್ಬು

ಮಾರ್ಪೊಳೆಪು ೧೭-೮೪ ಹೊಳಪು, ಪ್ರಕಾಶ

ಮಾವಂತಿಗ ೧೭೯-೨೭ವ ಮಾವಟಿಗ

ಮಾಸವಳ ೪೫೧-೧೮ ವೀರ, ಪರಾಕ್ರಮಿ

ಮಾಳವೋದರಿ ೨೫೬-೧೨೬ ಒಂದು ಬಗೆಯ ಮದ್ಯ

ಮಿಳಿಸು ೧೩೬-೧೨೬ ಚಲಿಸು, ಅಲ್ಲಾಡು

ಮೀ ೧೪೯-೨೯ ಸ್ನಾನಮಾಡು

ಮುಂಕುಡಿ ೨೪೬-೭೬ವ ಮುಂಭಾಗದ ಸೈನ್ಯ
ಮುಂಡಾಡು ೨೨-೧೦೮ ಅಪ್ಪು, ಮುದ್ದಿಸು
ಮುಖರ ೩೦-೧೫೦ ಅಶ್ಲೀಲ, ಹಾಸ್ಯ
ಮುಗ್ಗು ೧೭೫-೬ ಮುಗ್ಗರಿಸು
ಮುಟ್ಟೆವರ್ ೨೬೧-೧೪೯ವ ಹತ್ತಿರಬರು
ಮುನ್ನೀರ್ ೨೪-೧೧೫ ಸಮುದ್ರ
ಮುಮ್ಮಟ್ಟು ೧೧೫-೨೮ ಅಟ್ಟಿಸಿಕೊಂಡು ಹೋಗು
ಮುಯ್ಯಾನ್ ೮೮-೨೨ ವಿರೋಧಿಸು, ಪ್ರತಿಭಟಿಸು
ಮುರಜ ೧೨೭-೮೮ ಮದ್ದಳೆ
ಮುಹಡ ೪೫೨-೧೯ ಮಲ್ಲಯುದ್ಧದಲ್ಲಿ ಒಂದು ವರಸೆ
ಮುಳ್ಗು ೬-೨೩ ಮುಳುಗು
ಮೂರ್ಮೊಗ ೨೦೦-೧೨೯ ಮೂರು ದಿಕ್ಕು
ಮೂವಳಸು ೧೯೯-೧೨೫ ಮೂರುಸುತ್ತು
ಮೆಲ್ಲುಲಿ ೧೩೩-೧೧೫ ಮೃದುವಾದ ಧ್ವನಿ
ಮೆಳ್ಪಡು ೯೬-೬೪ ಮೋಸಹೋಗು
ಮೇಘರಂಜಿ ೧೧೨-೧೪ ಒಂದು ಜಾತಿಯ ರಾಗ
ಮೇದುರ ೧೨-೫೫ ನಯ, ಮೃದು
ಮೇಲುವತ್ತಿ ೧೩೪-೧೧೮ವ ಶ್ರೇಷ್ಠ, ಉತ್ತಮ (?)
ಮೇಳವಿಸು ೧೮೫-೫೬ ಜತೆಗೂಡು, ಒಟ್ಟಾಗು
ಮೇಳೈಸು ೨೩೪-೧೭ ಸೇರು, ಕೂಡು
ಮೊಕ್ಕಳ ೩೪೪-೯ ಸಮೂಹ, ಗುಂಪು
ಮೊಗೆ ೧೯೩-೯೫ ತುಂಬು
ಮೊಗ್ಗು ೨೨೦-೬೨ ಶಕ್ಯ, ಸಾಧ್ಯ
ಮೊರೆ ೨೩೭-೩೨ ಧ್ವನಿಮಾಡು
ಮೊಳಗು ೧೫೬-೬೪ ಧ್ವನಿಮಾಡು
ಮೋನ ೧೦೧-೮೧ ಮೌನ
ಮೌರಿ ೧೨೭-೯೦ ಒಂದು ಬಗೆಯ ವಾದ್ಯ
ಮೌರ್ವಿ ೪೦೫-೧೨೯ ಬಿಲ್ಲಿನ ಹೆದೆ

ಯ

ಯಕ್ಷಕರ್ದಮ ೨೦೦-೧೩೦ ಒಂದು ಬಗೆಯ ಸುಗಂಧ ದ್ರವ್ಯ
ಯಷ್ಟಿ ೧೩೨-೧೨೦ವ ಕೋಲು, ದೊಣ್ಣೆ

ರ

ರಂಗವಲನ ೨೧೧-೧೭ ಯುದ್ಧಭೂಮಿ
ರಕ್ತಾಕ್ಷತ್ವ ೭೨-೪೨ ಕೆಂಪುಬಣ್ಣ (?)
ರಚ್ಛೆ ೨೦೭-೧ವ ಸಪ್ತತಾಳಗಳಲ್ಲಿ ಒಂದು
ರತ್ನಕುಟ್ಟಿಮ ೩೩-೧೬೬ ರತ್ನಖಚಿತವಾದ ನೆಲ
ರತ್ನಾಕರ ೨೦-೯೮ ಸಮುದ್ರ
ರಲ್ಲಕ ೨೪೪-೬೬ ಕಣ್ಣಿನ ಕಾಡಿಗೆ, ಉಣ್ಣೆಯಬಟ್ಟೆ
ರಸನೇಂದ್ರಿಯ ೨೩-೧೧೦ ನಾಲಗೆ
ರಸಾಲ ೨೧-೧೦೫ ಮಾವು, ಕಬ್ಬು
ರಾಗಿಣಿ ೧೩೩-೧೧೬ ಅನುರಕ್ತೆ
ರಾಗಿಸು ೬೪-೧ ಪ್ರೀತಿಸು
ರಾಜಕ ೧೦೭-೧೦೬ವ ರಾಜ
ರಾಜನ್ಯಕ ೨೮೨-೭೬ವ ಕ್ಷತ್ರಿಯವಂಶ
ರಾವಣಹಸ್ತ ೨೦೭-೧ವ ಒಂದು ಬಗೆಯ ವೀಣೆ
ರುತಿ ೩೨-೧೬೨ ಧ್ವನಿ
ರುಪ್ಪೆತ್ತು ೩೪೮-೨೫ ದಂಡೆತ್ತು (?)
ರುಷಭ ೨೦೭-೧ವ ಸಪ್ತಸ್ವರಗಳಲ್ಲಿ ಒಂದು
ರೇಚಿತ ೪೫೨-೨೦ವ ಕುದುರೆಯ ನಡಗೆಗಳಲ್ಲಿ ಒಂದು

ಲ

ಲಂಬಳ ೧೦೯-೨ ಮುತ್ತಿನಹಾರ
ಲಂಬೂಷ ೨೩೫-೨೧ವ ಹಾರ
ಲಟಹ ೧೬೫-೧೦೭ ಆನಂದ, ಸಂತೋಷ
ಲತಾಂತ ೧೬-೭೬ ಪುಷ್ಪ
ಲಳಿಲುಳಿ ೪೫೩-೨೦ವ ಉತ್ಸಾಹದಿಂದ ಕೂಡಿದ ಕೈಚಳಕ
ಲೋವಿ ೨೭೨-೩೩ ಇಳಿಭಾವಣಿ

ವ

ವಂದಿ ೧೦೭-೧೦೬ ಹೊಗಳುಭಟ್ಟ
ವಡ್ಡರಾವುತ್ತ ೩೬೦-೮೪ವ ಕುದುರೆಯ ಮುದಿಸವಾರ
ವರ್ತಿ ೨೦೫-೧೫೮ ಬತ್ತಿ
ವಪುರಿಂದ್ರಿಯ ೨೩-೧೧೦ ಶ್ರೇಷ್ಠವಾದ ದೇಹ
ವಲಂ ೮-೩೩ ನಿಶ್ಚಯವಾಗಿ

ವಲಭಿ ೨೮-೧೪೩ ಮೇಲ್ಛಾವಣಿ
ವಲಿ ೨೦೭-೧ವ ಒಂದು ವಿಧದ ರಾಗ
ವಲ್ಗನ ೮೫-೮ ನೆಗೆತ
ವಲ್ಲಕಿ ೨೫-೧೨೪ ವೀಣೆ
ವಸಂತ ೧೧೨-೧೪ ಒಂದು ವಿಧದ ರಾಗ
ವಾತೂಳಿಕ ೨೪೫-೭೧ವ ಸುಂಟರಗಾಳಿ
ವಾದಕ ೨೦೮-೫ ನುಡಿಸುವವನು
ವಾನಾಯುಜ ೪೫೨-೨೦ವ ಒಂದುದೇಶದ ಕುದುರೆ
ವಾಮೆ ೧೭೮-೨೨ ಸುಂದರಿ
ವಾರಾಂಪತಿ ೮೦-೭೭ ವರುಣ
ವಾರಿದ ೩೧೪-೪೪ ಮೇಘ
ವಾರಿಧಿಪುತ್ರ ೮೮-೨೧ ಚಂದ್ರ
ವಾರುಣಿ ೮೪-೩ ಒಂದುಬಗೆಯ ಮದ್ಯ
ವಾಲಧರ ೭೨-೪೨ ವೃಷಭ
ವಾಸ ೧೨೭-೯೦ ಕೊಳಲು
ವಾಸಂತಿ ೨೫೬-೧೨೫ ಒಂದು ಬಗೆಯ ಪುಷ್ಪ
ವಾಸಕಾಜ ೪೫೧-೧೭ ವಸ್ತ್ರಗಳನ್ನು ಸಿದ್ಧಪಡಿಸುವವ
ವಾಸರವ್ಯಾಪಾರ ೩೧೦-೨೫ವ ಪ್ರತಿದಿನ ಮಾಡುವ ವ್ಯಾಪಾರ
ವಾಹ್ಯಾಳಿ ೪೬-೬೮ವ ಕುದುರೆಯ ಸವಾರಿ
ವಿಂಶತಿ ೨೦೭-೧ವ ಇಪ್ಪತ್ತು
ವಿಕಚಿಸು ೩೭೨-೧೩೧ ಅರಳು
ವಿಕಲ್ಪಿಸು ೮೭-೧೪ವ ಬದಲಾಗು, ಹೆಚ್ಚುಕಮ್ಮಿಯಾಗು
ವಿಗಂಡ ೨೪೬-೭೬ ವಿಸ್ತಾರವಾದ
ವಿಗುರ್ವಣೆ ೧೫೩-೪೬ವ ಭಯಂಕರವಾದ, ಭೀತಿ ಹುಟ್ಟಿಸುವ
ವಿಗುರ್ವಿಸು ೧೬೦-೮೦ ಭೀತಿಹುಟ್ಟಿಸು
ವಿಘೂರ್ಣಿಸು ೨೧೨-೨೫ ಗಟ್ಟಿಯಾಗಿ ಧ್ವನಿಮಾಡು
ವಿಟಪಿ ೨೫೩-೧೧೦ ಮರ
ವಿಡಂಬಿಸು ೫೫-೩೫ವ, ೧೫೩-೪೩ವ ಪ್ರದರ್ಶಿಸು
ವಿಡಾಯಿ ೪೪-೫೮ ಆಡಂಬರ
ವಿದ್ಧ ೩೯-೩೦ ಹೋಲುವ
ವಿದ್ರುಮ ೧೯-೯ವ ಹವಳ
ವಿಲಂಪಟ ೨೩೨-೮ ಅತಿಕಾಮುಕ
ವಿಲಂಬಿಸು ೨೨-೧೦೮, ೨೮-೧೪೩ ನೇತಾಡು
ವಿಲೋಡಿಸು ೨೪೫-೭೧ವ ಚೆನ್ನಾಗಿ ಕಲಕು
ವಿವಾದಿಸು ೧೨೦-೫೦ ಚರ್ಚಿಸು
ವಿಷಾಣ ೧೬೬-೧೨೨ ಕೊಂಬು
ವಿಸಟಂಬರಿಯಿಸು ೩೬೫-೧೦೫ವ ಅಡ್ಡಾದಿಡ್ಡಿ ಓಡಾಡಿಸು
ವಿಸರ್ಪಣ ೩೮೭-೪೯ವ ಸಾಲು, ಹೆಚ್ಚಿಗೆ
ವಿಸ್ಮಾಪಕ ೨೩೨-೮ವ ಆಶ್ಚರ್ಯ, ವಿಚಿತ್ರ
ವಿಳಸನ ೧೦೪-೯೨ ಹೊಳೆಯುವ, ಪ್ರಕಾಶಿಸುವ
ವೀಜನ ೨೯-೧೪೪ ಬೀಸಣಿಗೆ
ವೇಶ್ಮ ೪೨೭-೬೬ ಮನೆ, ವಾಸಸ್ಥಾನ
ವೇಸರಿ ೨೪೨-೫೬ ಕತ್ತೆ
ವೈಕಚ ೬೫-೯ ತಲೆಗೂದಲು
ವೈಕುರ್ವಣ ೧೬೫-೧೦೩ವ ದೈವಿಕ ಶಕ್ತಿಯಿಂದ ನಿರ್ಮಿತವಾದುದು
ವೈಜಯಂತಿ ೨೭೫-೪೫ವ ಬಾವುಟ
ವೈತಾಳಿಕ ೪೬೦-೫೬ವ ಸ್ತುತಿಪಾಠಕ
ವ್ಯಕ್ತೀಕರಿಸು ೭೬-೬೧ವ ಸ್ಪಷ್ಟಪಡಿಸು

ಶ

ಶಂಗ ೧೬೩-೯೫ ನಸುಗೆಂಪುಬಣ್ಣ (?)
ಶಂಬರ ೧೨೯-೯೮ ಒಬ್ಬ ರಾಕ್ಷಸ, ಪರ್ವತ
ಶರ್ವ ೮೦-೮೧ ಶಿವ
ಶಾಖಾಚರ ೧೭೭-೨೦ವ ಕೋತಿ
ಶಾತಕುಂಭ ೩೪-೩ವ ಚಿನ್ನ
ಶಾತ್ರವ ೧೦೨-೮೫ ಶತ್ರು
ಶೀತಗು ೫೮-೪೯ (?)
ಶುಂಡ ೨೪೯-೧೩೯ವ ಮದ್ಯ
ಶುಂಡಾಲ ೧೫೩-೪೭ ಆನೆ
ಶುಕ್ತಿ ೧೦೫-೧೦೦ವ ಮುತ್ತಿನ ಚಿಪ್ಪು
ಶುಕ್ಲಕುಷ್ಠ ೨೨೨-೭೪ ಬಿಳಿ ತೊನ್ನು
ಶುನಾಸೀರ ೧೮೪-೭೫ವ ಇಂದ್ರ
ಶೂಕ ೧೭-೮೨ ಹೊಟ್ಟು, ಊಬು
ಶೌಂಡಕಿತ ೨೨೦-೬೫ ಮದವೇರಿದ

ಶೌಂಡಿಕ ೨೫೯-೧೩೯ವ ಮದ್ಯಪಾನಿ, ಹೆಂಡ ಗುಡುಕ
ಶ್ರದ್ಧಾನ ೭೬-೬೦ ನಂಬಿಕೆ, ವಿಶ್ವಾಸ
ಶ್ಲಥೀಭೂತ ೩೭೭-೫ ಸಡಿಲವಾದ

ಷ

ಷಡ್ಜ ೨೦೭-೧ವ ಸಂಗೀತದ ಒಂದು ಮಟ್ಟು

ಸ

ಸಂಕಲೆ ೧೭-೮೬ ಸಂಕೋಲೆ, ಬೇಡಿ
ಸಂಕೆ ೧೩೦-೧೦೦ ಶಂಕೆ, ಸಂದೇಹ
ಸಂಗಡಿಸು ೬೯-೨೭ ಒಟ್ಟಾಗು, ಕೂಡು
ಸಂಗಣಿಸು ೨೮೧-೭೨ ಕೂಡು, ಸೇರು
ಸಂಗಳಿಸು ೨೦೦-೧೨೯ ಕೂಡು, ಸೇರು
ಸಂಚ ೨೮೦-೭೦ವ ಪತ್ರಗಳ ಕಟ್ಟು
ಸಂಚಯ ೧೨೫-೭೭ ರಾಶಿ, ಗುಂಪು
ಸಂಚಿಸು ೧೨೧-೫೬ ಕೂಡಿಸು, ಸೇರಿಸು
ಸಂಛನ್ನ ೨೪೧-೫೦ ಮುಚ್ಚಲ್ಪಟ್ಟ, ಹೊದಿಸಿದ
ಸಂತಪನ ೯೮-೬೭ವ ಕುದಿಸುವಿಕೆ
ಸಂತ್ರಾಸನ ೯೫-೫೯ ಭಯ, ಹೆದರಿಕೆ
ಸಂದಂಶ ೨೪೦-೪೬ ಇಕ್ಕುಳ
ಸಂದಣಿಸು ೧೪೯-೨೮ ಸೇರಿಸು, ಕೂಡಿಸು
ಸಂದೆಗ ೧೧೪-೨೫ ಸಂದೇಹ
ಸಂಧುಕ್ಷಣಂಗೆಯ್ ೧೨೯-೯೭ವ ಹೊತ್ತಿಸು
ಸಂನಂದಿತ ೧೪೮-೨೪ ಸೇರಿದ, ಕೂಡಿದ
ಸಂಪಣ ೮೦-೭೮ ಕಲಸಿದ ಹಿಟ್ಟು
ಸಂಬಳ ೬೮-೨೧ ಬುತ್ತಿ
ಸಂಸರಣ ೨೦೫-೧೫೪ ಸಂಸಾರ
ಸಂಸ್ತವ ೧೭೪-೨ ಹೊಗಳಿಕೆ
ಸಕ್ಕಸಮ ೪೬೦-೫೬ವ ಸರಿಸಮಾನ
ಸಚ್ಚಕ್ಕಣ ೨೩-೧೧೦ ಮದ್ಯ ಕುಡಿಯುವಾಗ ನಂಜಿ ಕೊಳ್ಳುವ ಮಾಂಸದ ಚೂರು
ಸಜ್ಜಾಲಕ ೫೩-೨೧ ಉತ್ತಮವಾದ ಯುದ್ಧಕವಚ
ಸಜ್ಜಿಕೆ ೧೫೮-೭೩ ಅಲಂಕಾರಮಾಡಿದ ಹೆಂಗಸು
ಸಣ್ಣಿಸು ೧೨೩-೬೪ ಚೂರುಚೂರುಮಾಡು
ಸತ್ವರ ೨೧೦-೧೬ ವೇಗ
ಸನ್ನತ ೨೧-೧೦೬ ಕೂಡಿದ, ಸೇರಿದ
ಸನ್ನಹಿತ ೨೭-೧೩೭ ಕೂಡಿದ, ಸೇರಿದ
ಸನ್ನಿದ ೫೩-೨೫ ಸಮೀಪ
ಸನ್ನೆಗಾಳೆ ೨೨-೧೮೯ವ ಸಂಜ್ಞೆಗಾಗಿ ಊದುವ ಕಹಳೆ
ಸಪುರ ೧೧೨-೧೫ವ ತೆಳು, ನಯ
ಸಪ್ತಚ್ಛದ ೧೭೯-೨೭ವ ಒಂದು ಜಾತಿಯ ಮರ
ಸಮಂಕಿತ ೧೦-೪೨ ಕೂಡಿದ
ಸಮಂಚಿತ ೨೭೪-೪೧ವ ಕೂಡಿದ, ಸೇರಿದ
ಸಮಕಟ್ಟು ೨೩೪-೧೬ವ ಸಿದ್ಧತೆ
ಸಮನಿಸು ೫೨೧-೩೩೯ ಕೂಡು, ಪ್ರಾಪ್ತವಾಗು
ಸಮುಪಹ ೧೭೩-೧೪೫ ನಾಶಮಾಡುವವನು
ಸಮಾಕಳಿತ ೨೧೧-೨೧ವ ಸೇರಿದ, ಕೂಡಿದ
ಸಮಾವರಿಸು ೨೯೭-೯೩ ಚೆನ್ನಾಗಿ ಆವರಿಸು
ಸವಾಸ್ಕಂದಿತ ೪೫೨-೨೦ವ ಕುದುರೆಯ ನಡಗೆಗಳಲ್ಲಿ ಒಂದು
ಸಮುತ್ಥ ೨೪೧-೫೨ ಮೇಲೆದ್ದ
ಸಮುದ್ಯುಷಿತ ೨೩೫-೪೫ವ ಚೆನ್ನಾಗಿನೆಲೆಗೊಂಡ
ಸಮುಪಕಂಠ ೨೯೨-೧೨೭ವ ಹತ್ತಿರ, ಸಮೀಪ
ಸಮುಪಗತ ೨೯-೧೪೫ವ ಹತ್ತಿರ ಬಂದ, ಸಮೀಪಿಸಿದ
ಸಮೆ ೯-೩೮ ಮಾಡು
ಸಮ್ಮದ ೭೫-೫೭ ಸಂತೋಷ
ಸರಭ ೨೫೫-೧೨೧ ಎಂಟು ಕಾಲಿನ ಒಂದು ಪ್ರಾಣಿ
ಸರವಳಿಗೆ ೩೦೨-೧೭೩ ಎಳೆ
ಸವನೋತ್ಸವ ೧೯೫-೧೦೩ ಜನ್ಮಾಭಿಷೇಕ
ಸಸಿನ ೧೪-೬೮ ನೇರ
ಸಜೆ ೧೮೧-೩೮ ಬಂಡೆ
ಸಾಯಾತ್ರಿಕ ೫೩೯-೪೨೧ ಜೊತೆಯಲ್ಲಿ ಹೋಗುವ ಯಾತ್ರಿಕ
ಸಾರತೆ ೧೩೦-೧೦೩ ಸತ್ವದಿಂದ ಕೂಡಿದ್ದು
ಸಾರಿಗೆ ೧೬೨-೧೪೧ ಸಮೀಪ
ಸಾಲಹಸ್ತ ೨೪-೧೨೦ ಕೋಟೆಯ ಎತ್ತರವಾದ ಗೋಡೆ
ಸಾವಗಿಸು ೪೧೧-೧೬೦ ಸರಿಯಾಗಿ ಹೊದ್ದುಕೊಳ್ಳು

ಸಾಸ ೨೫೭-೧೩೨ವ ಸೊಗಸು, ಮನೋಹರ
ಸಾಸಿಗ ೭೨-೪೩ ಶೂರ, ಪರಾಕ್ರಮಿ
ಸಿಂದ ೩೮೮-೫೨ವ ಆನೆ (?)
ಸಿಂಪಿಣಿ ೪೦೩-೧೨೦ ಸಿಂಪಡಿಸುವಿಕೆ, ಚಿಮುಕಿಸುವಿಕೆ
ಸಿರಿಸ ೧೨೪-೭೨ ಒಂದು ಜಾತಿಯ ಪುಷ್ಪ
ಸಿರಿಸಿಂಬಿ ೨೫೬-೧೨೬ ಒಂದು ಜಾತಿಯ ಮದ್ಯ
ಸೀಂಪು ೧೯೭-೧೧೯ ಸೀನುವುದು
ಸೀವಟ್ಟಣ ೪೫೨-೧೯ ಮಲ್ಲಯುದ್ಧದಲ್ಲಿ ಒಂದು ವರಸೆ
ಸುಗಿ ೧೩೩-೧೧೬ವ ಹೆದರು
ಸುಟ್ಟುಂಬೆ ೧೧೮-೪೩ವ ತೋರುಬೆರಳು
ಸುನಾದೆ ೪೩-೪೯ ಸರಸ್ವತಿ, ಶಾರದೆ
ಸುರಾಳ ೨೫೬-೧೨೬ ಒಂದು ಬಗೆಯ ಮದ್ಯ
ಸುರಿಗೆ ೨೫೩-೧೧೦ ಕತ್ತಿ
ಸುರಿಮುತ್ತು ೧೩೧-೧೦೮ ಸುರಿಯುತ್ತಿರುವ ಮುತ್ತು
ಸುರುಳ್ಚು ೭೦-೩೫ ಮತ್ತು, ಮುಚ್ಚಿಡು
ಸುರ್ವುಗೊಳ್ ೨೫೨-೧೦೪ವ ಗುಂಪಾಗು, ಒಟ್ಟಾಗು
ಸುಲಿ ೨೮-೧೪೨ ಉಜ್ಜು, ತೊಳೆ
ಸುಲಿಪಲ್ ೧೩೩-೧೧೦ವ ಹಲ್ಲನ್ನು ಉಜ್ಜು
ಸುಷಿರ ೧೯೫-೧೦೪ ಒಂದು ಬಗೆಯ ವಾದ್ಯ
ಸೂಕರಜ ೨೫೧-೯೯ ಹಂದಿಯಿಂದ ಹುಟ್ಟಿದ
ಸೂಡಗ ೧೩೧-೧೦೭ ಬಳೆ
ಸೂಡು ೧೨೬-೭೯ ಮುಡಿ
ಸೂಸಕ ೧೮೨-೪೨ ಹಣೆಯ ಮೇಲೆ ಧರಿಸುವ ಒಂದು ಆಭರಣ, ಕುಚ್ಚು
ಸೂಳ್ಪಡೆ ೪೩೬-೯೮ ಸರದಿಯನ್ನು ಹೊಂದು
ಸೆಕ್ಕು ೨೧೨-೨೫ ಸಿಕ್ಕಿಸು
ಸೇಕಿಸು ೭೫-೫೫ ನೀರು ಚಿಮುಕಿಸು
ಸೇದೆವಡು ೨೧೬-೪೩ ಆಯಾಸಪಡು, ಬಳಲು
ಸೈತುಮಾಡು ೧೮೫-೫೬ ನೆಟ್ಟಗೆಮಾಡು
ಸೈಪು ೧೪೦-೧೫೦ ಪುಣ್ಯ
ಸೈವಳ ೧೮೦-೩೧ ಪಾಚಿ
ಸೊಡರ್ಗುಡಿ ೧೮೩-೪೭ವ ದೀಪದ ಕುಡಿ
ಸೊದೆವಳಿ ೪೯೬-೨೨೫ವ ಅಮೃತವನ್ನು ಬಳಿ(?)
ಸೊಪ್ಪಿಸು ೯೦-೩೧ ಸೊರಗು, ಬಾಡು
ಸೊಪ್ಪುಳ್ ೨೫೨-೧೦೮ ಧ್ವನಿ
ಸೋಗಿಲು ೨೧೨-೨೪ ಮಡಿಲು
ಸೋಗೆ ೮೧-೮೫ ನವಿಲು
ಸೋರ್ಮುಡಿ ೧೬-೮೧ ಇಳಿಬಿದ್ದಿರುವ ತುರುಬು
ಸೋವು ೧೭-೮೨ ಓಡಿಸು, ಅಟ್ಟು
ಸೌವಸ್ತಿಕ ೩೪೨-೧ವ ಪೂಜಾರಿ
ಸ್ತಂಬೇರಮ ೨೭೦-೨೩ ಆನೆ
ಸ್ತೂಯಮಾನ ೨೦೪-೧೫೨ವ ಹೊಗಳಲ್ಪಟ್ಟ
ಸ್ವರಮಂಡಳ ೨೦೭-೧ವ ಒಂದು ಬಗೆಯ ವೀಣೆ

ಹ

ಹಂಚೆ ೪೩೧-೭೮ ಹಂಸ
ಹಕ್ಕರಿಕೆ ೨೩೯-೪೧ ಕುದುರೆಯ ಜೀನು
ಹಡಪ ೧೨೬-೮೨ವ ಎಲೆ ಅಡಕೆಯ ಚೀಲ
ಹಡಪಿಗ ೩೯೨-೭೩ ಎಲೆ ಅಡಕೆಯ ಚೀಲ ಹಿಡಿದವನು
ಹಡಿಕೆ ೮೯-೩೦ ಕೆಟ್ಟವಾಸನೆ
ಹೆಮ್ಮೈಸು ೨೪೧-೫೫ ಭಯಪಡು, ಹೆದರು
ಹರಿಚಂದನ ೪೮-೩ ಶ್ರೀಗಂಧ
ಹರಿನೀಳಕುಟ್ಟಿಮ ೨೭೪-೪೧ ಹಚ್ಚೆಯ ನೆಲಗಟ್ಟು
ಹವಣೆ ೨೦೭-೧ವ ರಾಗದ ಒಂದು ಬಗೆ
ಹಳ ೩೪-೩ವ ನೇಗಿಲು
ಹಳಿಗು ೧೬೮-೧೨೩ ಹೆಣಗು, ಹೋರಾಡು
ಹಾರೀತಕ ೫೦೦-೨೩೯ವ ಒಂದು ಜಾತಿಯ ಪಾರಿವಾಳ
ಹಾವಂಚೆ ೨೪೦-೪೯ ಪಾಚಿ
ಹಾವಸೆ ೧೭೮-೨೩ ಪಾಚಿ
ಹಾವುಗೆ ೨೭೬-೪೮ವ ಮರದ ಪಾದರಕ್ಷೆ
ಹಾಸು ೧೨೩-೬೫ ಹಾಸಿಗೆ
ಹಿಡಿಯಂಬು ೨೫೨-೧೦೫ ಒಂದು ಬಗೆಯ ಬಾಣ
ಹೀಲಿ ೧೧೪-೨೩ ನವಿಲುಗರಿ
ಹುಂಡ ೨೫೫-೧೨೪ ಹೊರೆ, ಭಾರ
ಹುಡಿಕೆನೀರು ೪೦೩-೧೧೯ ಬಿಸಿನೀರು

ಹುಱಿಗಲ್ ೨೪೮-೮೪ ಒಂದು ಜಾತಿಯ ಮರ

ಹೂತಿಯ ಬೆಕ್ಕು ೨೪೮-೮೩ ಒಂದು ಜಾತಿಯ ಬೆಕ್ಕು

ಹೂಸಣಂಬು ೩೦೨-೧೭೪ ಒಂದು ತಿಂಡಿ

ಹೆಕ್ಕಳಿಸು ೨೫೧-೧೦೦ ಗರ್ವಪಡು, ಹೆಮ್ಮೆಪಡು

ಹೆಡ್ಡೈಸು ೨೨೩-೭೬ ಹೀನವಾಗಿ ಕಾಣು, ತಿರಸ್ಕರಿಸು

ಹೇರುಡು ೨೫೩-೧೧೩ ದೊಡ್ಡಉಡ

ಹೇಳಾಲಂಬಿ ೪೪-೫೬ ವಿನೋದಪ್ರಿಯ

ಹೊಗರೇಱು ೨೮೯-೧೧೬ ಕಾಂತಿಯುಕ್ತವಾಗು

ಹೊದರು ೨೫೩-೧೧೩ ಪೊದರು

ಹೊನ್ನೆ ೭೭-೬೬ ಒಂದು ಜಾತಿಯ ಮರ

ಹೊರಜೆ ೪೫೨-೧೯ವ ದೊಡ್ಡ ಹಗ್ಗ

ಹೋರಾಶಾಸ್ತ್ರ ೧೦-೪೫ ಜ್ಯೋತಿಷ್ಯ

ಅ

ಅಂಚೆ ೨೩೫-೨೧ವ ಜೇನು

ಅನುಬಂಧ ೩

ಮಧುರ ಕವಿ ವಿರಚಿತ

ಧರ್ಮನಾಥ ಪುರಾಣಂ ಶಬ್ದಾರ್ಥಕೋಶ

ಮೊದಲನೆಯ ಸಂಖ್ಯೆ ಆಶ್ವಾಸವನ್ನೂ ಎರಡನೆಯ ಸಂಖ್ಯೆ ಪದ್ಯವನ್ನೂ ಸೂಚಿಸುತ್ತದೆ.

ಅಕ್ಕೆಬೊಟ್ಟು ೧-೭೫ ಹಣೆಗೆ ಇಟ್ಟುಕೊಳ್ಳುವ ಬೊಟ್ಟು

ಅಡರ್ಪು ೨-೮ ಆಸರೆ

ಅಣಲ್ ೧-೬೨ ಬಾಯಿಯ ಒಳಭಾಗ, ಅಂಗುಳು

ಅಧರತೆ ೧-೬೮ ಕೀಳಾಗಿರುವಿಕೆ, ಕೀಳುತನ

ಅಮ್ಮಾವು ೪-೬೧ ಕಾಡುಹಸು

ಅರೋಚಕ ೧-೬೫ ರುಚಿಯನ್ನು ಹುಟ್ಟಿಸದುದು, ಒಂದು ರೋಗ

ಅವತಂಸ ೧-೮೩ ಕಿವಿಯ ಆಭರಣ

ಅಳಿಗೂರ್ಮೆ ೧-೧೧೨ ನಾಶವಾಗುವ ಪ್ರೀತಿ

ಆಣೆಗೋಷಣೆ ೧-೬೯ ಅಪ್ಪಣೆಯನ್ನು ಸಾರಿಹೇಳುವುದು

ಆರ್ಮ ೧-೧೩ ಆಶ್ರಯಸ್ಥಾನ, ನೆಲೆ

ಇಮ್ಮಾವು ೪-೬೧ ಸಿಹಿಯಾದ ಮಾವು

ಉದ್ಯೋತ ೨-೮ ಹೊಳಪು, ಕಾಂತಿ

ಉದ್ದಮೂಳ ೧-೬೩ ಅತಿದಡ್ಡ ಮಹಾಮೂರ್ಖ

ಉಪ್ಪಾಗು ೧-೬೦ ಅಲಕ್ಷ್ಯಕ್ಕೆ ಒಳಗಾಗು, ಲೆಕ್ಕಕ್ಕೆ ಇಲ್ಲದಾಗು

ಎಳವೆಣ್ ೩-೯೨ ಎಳೆಯಚಂದ್ರ, ಬಾಲಚಂದ್ರ

ಕಂತೆವೊರೆ ೧-೬೬ ಕೆಲಸಕ್ಕೆ ಬಾರದ ಮಾತಾಡು

ಕಂಬು ೩-೯೬ ಶಂಖ

ಕಣ್ಣಲೆ ೧-೭೦ ದೃಷ್ಟಿಗೋಚರ, ಕಣ್ಣಿಗೆ ತಾಗುವುದು

ಕಣ್ಣಲೆ ೧-೭೧ ಕಣ್ಣಿಗೆ ನೆಲೆಯಾದದ್ದು, ನೋಡಲು ತಕ್ಕದ್ದು, ಗಮನಾರ್ಹವಾದುದು

ಕಣ್ಬರಿ ೨-೧೦ ಕಣ್ಣಿನ ಹರಹು, ನೋಟದ ವಿಸ್ತಾರ

ಕಮ್ಮಂಗಳವೆ ೨-೩೦ ಸುವಾಸನೆಯ ನೆಲ್ಲು

ಕರಭ ೧-೫೪ ಪ್ರಾಣಿಯ ಮರಿ

ಕುಸುರಿವಾತು ೧-೭೦ ಸೂಕ್ಷ್ಮವಾದ ಮಾತು, ನಾಜೂಕಿನ ಮಾತು

ಕುಳಿರ್ಕೋಡು ೫-೪೮ ಹಿಗ್ಗು, ಸಂತೋಷ ಪಡು

ಕೆಯ್ಪುಣ್ ೨-೨೮ ಚಪ್ಪಾಳೆ

ಕೊಳೆಗಬ್ಬಿಗ ೧-೬೬ ಕೀಳು ಕಾವ್ಯಗಳನ್ನು ರಚಿಸುವವನು, ಕೆಟ್ಟಕವಿ

ಗಣಿದಂಗೊಳ್ ೧-೬೯ ಎಣಿಕೆ ಮಾಡು, ಲೆಕ್ಕಾಚಾರ ಮಾಡು

ಗಸಣಿ ೧-೬೭ ತೊಂದರೆ, ಹಿಂಸೆ, ಕಾಟ

ಗೊರವ ೧-೫೬ ತಿರುಕ, ಭಿಕ್ಷುಕ

ಚಯ್ಯಾಡು ೩-೧೨೧ ಚಲ್ಲಾಟವಾಡು

ಡವಕೆ ೩-೧೧೧ ಉಗುಳುವ ಪಾತ್ರೆ

ಡುಂಡುಚಿ ೧-೫೭ ಗೊರವರು ಬಾರಿಸುವ ವಾದ್ಯ, ಡಮರು

ತರುವಲಿ ೨-೧೧೨ವ ಹುಡುಗ

ತಳ್ಪೊಯ್ ೫-೧೦ ಮೀರು, ತುಂಬು

ತೂಱಲ್ಗೊಂಬು ೧-೫೩ ತುತ್ತತುದಿಯ ಕೊಂಬೆ

ತೇಳ್ ೧-೬೨ ಚೇಳು

ತೊಂಡುವೆಸರ್ ೧-೪೯ ಹೆಮ್ಮೆಗಾಗಿ ಪಡೆದ ಬಿರುದು

ದಕ್ಕಾಲಿ ೩-೯೫ ನೋಡುವ ಸಾಮರ್ಥ್ಯವಿಲ್ಲದ ಕಣ್ಣುಗುಡ್ಡೆ

ದೂನಿಸು ೩-೧೧೭ವ ಶೋಕಪಡು

ಧಮ್ಮಿಲ್ಲ ೧-೧೧೫ ತುರುಬು, ಮುಡಿ

ನಾಡಱಕೆ ೧-೬೨ ಲೋಕಪ್ರಸಿದ್ಧಿ

ನಿಳಿಂಪ ೫-೧೩ ದೇವತೆ

ಪಡಿಗಿಱ ೧-೭೦ ಬಾಗಿಲನ್ನು ಮುಚ್ಚು, ಕದವಿಕ್ಕು

ಪದಪು ೧-೩೪ ಆಸೆ, ಉತ್ಸಾಹ, ಸೊಗಸು

ಪರಿಕಾಲ್ ೨-೨೯ವ ನೀರು ಹರಿಯುತ್ತಿರುವ ಕಾಲುವೆ, ನಾಲೆ

ಪರಿಪ್ಲವ ೨-೧೨ ಚಂಚಲತೆ, ಅಸ್ಥಿರ

ಪವಣಿಸು ೧-೬೮ ಎಣಿಸು, ಲೆಕ್ಕಹಾಕು

ಪಸ ೨-೨೦ ಬರ, ಕ್ಷಾಮ

ಪಳು ೨-೧೫ ಕಾಡು, ಅರಣ್ಯ

ಪಾಮರಿ ೨-೨೮ ಹಳ್ಳಿಯ ಹೆಂಗಸು ಒಕ್ಕಲಗಿತ್ತಿ

ಪಿಗ್ಗು ೨-೩೧ ದೊಡ್ಡದಾಗು, ಅಗಲವಾಗು

ಪಿರ್ಕು ೧-೪೨ ಬೇರ್ಪಡಿಸು, ಪ್ರತ್ಯೇಕಿಸು

ಪೀಲಿಗಣ್ ೩-೧೨೬ ನವಿಲುಗರಿಯ ಮಧ್ಯದಲ್ಲಿರುವ ಕಪ್ಪು ಬಿಂಬ

ಪೇಕುಳಿನಾಯ್ ೧-೬೩ ಹುಚ್ಚುನಾಯಿ

ಪೇಶಲ ೩-೧೨ ಸುಂದರ, ಮನೋಹರ

ಬಂದುಗೆ ೨-೮೧ ಕೆಂಪು ಹೂಬಿಡುವ ಒಂದು ಬಗೆಯ ಸಸ್ಯ

ಬಣ್ಣನೆ ೧-೩೦ ವರ್ಣನೆ

ಬವರಿಸು ೧-೨೪ ಹೋರಾಡು, ಸ್ಪರ್ಧಿಸು

ಬಾಯ್ದೆಱ ೩-೮೪ ತುಟಿ

ಬೀದಿವರಿ ೧-೫೭ ಸ್ವೇಚ್ಛೆಯಿಂದ ಕೂಡಿದ ನಡೆ

ಬೀಸರಂಬೋಗು ೩೧-೬೫ ವ್ಯರ್ಥವಾಗು, ನಿರರ್ಥಕವಾಗು

ಬೀಳುಡೆ ೧-೭೬ ಇನ್ನೊಬ್ಬರು ಉಟ್ಟುಕಳಚಿದ ವಸ್ತ್ರ

ಬೆಲೆವೆಣ್ ೧-೧೧೨ ಸೂಳೆ

ಮದಪ್ಲವ ೧-೬೪ ಸಂತೋಷದ ಪ್ರವಾಹ

ಮರಂದ ೨-೧೨ ಹೂವಿನ ಬಂಡು, ಮಕರಂದ

ಮರಾಳ ೨-೩೧ ಹಂಸಪಕ್ಷಿ

ಮಾಲಾಕಾರ ೧-೪೫ ಹೂವಿನ ಹಾರ ಕಟ್ಟಿ ಮಾರುವವನು ಹೂವಾಡಿಗ

ಮಾಸರ ೧-೪೪ ಅಂದ, ಸೊಗಸು

ಮುರವು ೧-೧೧೪ ಕಲಗಚ್ಚು, ಬೇಯಿಸಿದ ಅಂಬಲಿ, ಮುಸುರೆ

ಮುಪ್ಪುರಿಗೊಳ್ ೧-೬೦ ಕೂಡು, ಸೇರು, ಹೆಚ್ಚಾಗು

ಮೆಯ್ಯಾರ್ ೩-೧೨೧ ಶರೀರವು
ತೃಪ್ತಿಪೊಂದು
ಸೊಪ್ಪಾಗು ೧-೬೦ ಬಾಡು, ಶಕ್ತಿಗುಂದು
ವಿರಿಂಚ ೩-೯೮ ಬ್ರಹ್ಮ
ಸುಮನ ೧-೪೫ ಹೂವು, ಪುಷ್ಪ, ದೇವತೆ
ಹುಂಡ ೧-೩೩ ಹೆಡ್ಡ, ದಡ್ಡ

ಅನುಬಂಧ ೪

ಪಾರಿಭಾಷಿಕ ಪದಕೋಶ

ಮೊದಲನೆಯ ಅಂಕಿ ಪುಟವನ್ನೂ ಎರಡನೆಯ ಅಂಕಿ ಪದ್ಯವನ್ನೂ ನಿರ್ದೇಶಿಸುತ್ತದೆ.

ಅಂತರಾಯ ೪೭೭-೧೩೪ವ ಮೋಕ್ಷವನ್ನು ಬಯಸಿ ಮುಂದುವರಿಯುವವರಿಗೆ ನಡುವೆ ಉಂಟಾಗುವ ತೊಡಕು

ಅಂತರ್ಮುಹೂರ್ತ ೧೦೩-೮೮ವ ಒಂದು ಮುಹೂರ್ತಕ್ಕಿಂತಲೂ ಕಡಮೆಯಾದ ಕಾಲ, ತುಂಬಾ ಕಡಮೆ ಪ್ರಮಾಣದ ಕಾಲ

ಅಕಾಮನಿರ್ಜರೆ ೫೧೩-೨೯೫ವ ವ್ಯಕ್ತಿಯ ಉದ್ದೇಶವಿಲ್ಲದೆ ತನ್ನಷ್ಟಕ್ಕೆ ತಾನೇ ಆಗುವ ನಿರ್ಜರೆ

ಅಘಾತಿಕಲುಷ ೩-೨ ಜೀವದ ಅನಂತಜ್ಞಾನಾದಿಗುಣಗಳನ್ನು ನಾಶಮಾಡುವ ಕರ್ಮಗಳು

ಅಜೀವತತ್ತ್ವ ೫೧೦-೨೮೨ ಏಳು ತತ್ತ್ವಗಳಲ್ಲಿ ಎರಡನೆಯದು

ಅರಿಷಡ್ವರ್ಗ ೩೮-೨೩ವ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ

ಅರ್ಥಾಪತ್ತಿ ೯೭-೬೬ವ ಪ್ರತ್ಯಕ್ಷಾದಿಪ್ರಮಾಣಗಳಲ್ಲಿ ಒಂದು

ಅವಧಿಜ್ಞಾನ ೧೯೭-೧೧೯ ಎಂಟು ಬಗೆಯ ಜ್ಞಾನಗಳಲ್ಲಿ ಒಂದು

ಅವಸರ್ಪಿಣಿ ೫೦೭-೨೬೯ವ ಮನುಷ್ಯರ ಆಯುಸ್ಸು ಸುಖ ಮುಂತಾದುವುಗಳು ಕ್ರಮವಾಗಿ ಕುಂದುವ ಕಾಲ

ಅಷ್ಟಮಹಾಪ್ರಾತಿಹಾರ್ಯ ೩೩೪-೧೪೧ ಜಿನನ ಎಂಟು ಮಂಗಳ ಲಾಂಛನಗಳು ೧ ಅಶೋಕವೃಕ್ಷ ೨ ಸುರಪುಷ್ಪವೃಷ್ಟಿ ೩ ದಿವ್ಯಧ್ವನಿ ೪ ಚತುಃಷಷ್ಟಿ ಚಾಮರ ೫ ರತ್ನಜಡಿತ ಸುವರ್ಣ ಸಿಂಹಾಸನ ೬ ಪ್ರಭಾವಲಯ ೭ ದೇವ ದುಂದುಭಿ ೮ ಛತ್ರತ್ರಯ

ಅಷ್ಟವಿಧಾರ್ಚನೆ ೧೦೭-೧೦೪ ಅಕ್ಷತೆ, ಜಲ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ-ಇವುಗಳ ಅರ್ಪಣೆ

ಅಷ್ಟಶೋಭೆ ೫೨-೧೫ ಸುಣ್ಣ ಬಣ್ಣಗಳನ್ನು ಹಚ್ಚುವುದು, ಸುಗಂಧ ದ್ರವ್ಯಗಳಿಂದ ಸಾರಣೆ, ರಂಗವಲ್ಲಿ, ತಳಿರುತೋರಣ, ಧ್ವಜವನ್ನು ಏರಿಸುವುದು, ಪುಷ್ಪಗುಚ್ಛ ಗಳಿಂದ ಅಲಂಕರಿಸುವುದು, ಚಪ್ಪರಹಾಕುವುದು, ಮೇಲುಕಟ್ಟು ಕಟ್ಟುವುದು

ಅಹಮಿಂದ್ರ ೧೦೩-೮೮ವ ಹದಿನಾರು ಸ್ವರ್ಗಗಳೂ ಅಣೂತ್ತರಗಳೂ ಆದಮೇಲೆ ಬರುವ ಗ್ರೈವೇಯಕವೆಂಬ ಲೋಕಭಾವದಲ್ಲಿ ಹುಟ್ಟುವ ಜೀವ

ಬಾಹ್ಯಾಭ್ಯಂತರ ಪರಿಗ್ರಹ ೧೦೨-೮೪ವ ದ್ವಾದಶವಿಧ ತಪಗಳನ್ನು ಸ್ವೀಕರಿಸುವುದು

ಬೆಳ್ವಾಸ ೧೦೨-೮೪ ಮೊಳಕಾಲು ಮುಳುಗುವವರೆಗೆ ನೀರಿನಲ್ಲಿ ನಿಂತು ಮಾಡುವ ತಪಸ್ಸು

ಭವನಾಮರ ೧೫೨-೪೪ವ ಅಸುರ, ನಾಗ, ಸುಪರ್ಣಾದಿ ಹತ್ತು ಪ್ರಕಾರದ ದೇವರು ಭವನದೊಳಗೆ ಅಂದರೆ ಪಾತಾಳದೊಳಗೆ ವಾಸಿಸುವುದು

ಮಡಂಬ ೪೦-೧೦೨ ಐದುನೂರು ಗ್ರಾಮಗಳನ್ನೊಳಗೊಂಡ ಮುಖ್ಯಪಟ್ಟಣ

ಮತಿಶ್ರುತಾವಧಿ ೧೪೫-೧೪ ಮತಿ, ಶ್ರುತಿ, ಅವಧಿ ಎಂಬ ಮೂರು ಬಗೆಯ ಜ್ಞಾನಗಳು

ಮಿಥ್ಯಾದೃಷ್ಟಿ ೧೦೬-೧೦೧ವ ಜೈನಮತ ತತ್ತ್ವಗಳು ಸುಳ್ಳೆಂದು ಅವನ್ನು ನಂಬದಿರುವುದು

ಮೂವತ್ತಾಱುಭಾಸ್ವದ್ಗುಣ ೩೭-೧೬೬ ಅನಶನಾದಿ ಹನ್ನೆರಡು ತಪಗಳು, ಸಾಮಾಯಿಕಾದಿ ಪ್ರತಿಕ್ರಮಣಾದಿ ಆರು ಆವಶ್ಯಕಗಳು, ಉತ್ತಮ ಕ್ಷಮಾದಿ ಹತ್ತು ಧರ್ಮಗಳು, ಜ್ಞಾನಾಚಾರಾದಿ ಐದು ಆಚಾರಗಳು ಮತ್ತು ಮನೋಗುಪ್ತ್ಯಾದಿ ಮೂರು ಗುಪ್ತಿಗಳು-ಇವೆಲ್ಲ ಕೂಡಿ ಆಚಾರ್ಯರ ಮೂವತ್ತಾರು ಗುಣಗಳಾಗುತ್ತವೆ

ಮೂಱಱಗುಪ್ತಿ ೩೭-೧೬೬ ಮನೋಗುಪ್ತಿ, ವಚನಗುಪ್ತಿ, ಕಾಯಗುಪ್ತಿ

ಮೋಹನೀಯ ೪೭೬-೧೩೪ವ ಕರ್ಮಗಳಲ್ಲಿ ಒಂದು

ರತ್ನತ್ರಯ ೪-೯ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ

ಲೋಕಾಕಾಶ ೫೦೯-೨೭೯ವ ಧರ್ಮ, ಅಧರ್ಮ, ಪುದ್ಗಲ, ಜೀವ, ಮತ್ತು ಕಾಲ-ಇವು ಎಲ್ಲಿಯವರೆಗೆ ಇರುವವೋ ಅಲ್ಲಿಯವರೆಗಿನ ಆಕಾಶ

ವ್ಯವಹಾರಕಾಲ ೫೧೦-೨೮೦ ಕಾಲದ್ರವ್ಯದ ಘಳಿಗೆ ದಿವಸ ತಿಂಗಳು ಮುಂತಾದ ಪರ್ಯಾಯಗಳು

ಶುಕ್ಲಧ್ಯಾನ ೫೨೩-೩೪೪ ಶುಚಿತ್ವಸಮೇತವಾದದ್ದು ಶುಕ್ಲಧ್ಯಾನ, ಧರ್ಮಧ್ಯಾನವನ್ನು ಮುಗಿಸಿ ಮುಕ್ತಿಹೊಂದುವುದನ್ನು ಚಿಂತಿಸುವುದು. ಶುಕ್ಲಧ್ಯಾನವು ಸಾಕ್ಷಾತ್ತಾಗಿ ಮುಕ್ತಿಗೆ ಸಾಧನವಾಗುತ್ತದೆ.

ಷಟ್ತರ್ಕ ೧೦-೪೬ ಬೌದ್ಧ, ನೈಯಾಯಿಕ, ಸಾಂಖ್ಯ, ಜೈನ, ವೈಶೇಷಿಕ, ಜೈಮಿನೀಯ

ಷಡಾವಶ್ಯಕ ೩೭-೧೬೬ ಸಾಮಾಯಿಕ, ತೀರ್ಥಂಕರಸ್ತವನ, ಪಂಚಪರಮೇಷ್ಠಿ ವಂದನ, ಪ್ರತಿಕ್ರಮಣ, ಪ್ರತ್ಯಾಖ್ಯಾನ, ಕಾಯೋತ್ಸರ್ಗ

ಷಡ್ದ್ರವ್ಯ ೧೩-೬೦ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ

ಷೋಡಶಭಾವನೆ ೫೪೦-೪೩೮ ದರ್ಶನವಿಶುದ್ಧಿ, ವಿನಯ ಸಂಪನ್ನತೆ, ಶೀಲ ವ್ರತೇಷ್ವನತಿಚಾರ, ಅಭೀಕ್ಷ್ಣ ಜ್ಞಾನೋಪಯೋಗ, ಸಂವೇಗ, ಶಕ್ತಿತಸ್ತ್ಯಾಗ, ಶಕ್ತಿತಸ್ತಪ, ಸಾಧುಸಮಾಧಿ, ವೈಯಾವೃತ್ಯಕರಣ, ಅರ್ಹದ್ಭಕ್ತಿ, ಆಚಾರ್ಯ ಭಕ್ತಿ, ಬಹುಶ್ರುತ ಭಕ್ತಿ, ಪ್ರವಚನ ಭಕ್ತಿ, ಆವಶ್ಯಕಾಪರಿಹಾಣಿ, ಮಾರ್ಗಪ್ರಭಾವನೆ, ಪ್ರವಚನ ವತ್ಸಲತ್ವ

ಷೋಡಶಶುಭಸ್ವಪ್ನ ೧೩೮-೧೪೧ವ ಬಿಳಿಯಾನೆ, ಬಿಳಿ ಎತ್ತು, ಸಿಂಹ, ಲಕ್ಷ್ಮಿ, ಹೂವಿನಹಾರ, ಚಂದ್ರ, ಬಾಲಸೂರ್ಯ, ಎರಡು ಎಳೆಯ ಮೀನುಗಳು, ಜೋಡಿ ರತ್ನಕುಂಭಗಳು, ತಾವರೆಗೊಳ, ಸಮುದ್ರ, ಸಿಂಹಾಸನ, ದೇವನಿಲಯ, ನಾಗನಿಲಯ, ರತ್ನಸಮೂಹ, ಉರಿಯುವ ಅಗ್ನಿಜ್ವಾಲೆ

ಸಕಾಮನಿರ್ಜರೆ ೫೧೩-೨೯೫ವ ಕರ್ಮ ತಕ್ಕಕಾಲ ಬಂದಾಗ ಪರಿಪಕ್ವವಾಗಿ ಅನುಭವಿಸಿದ ಬಳಿಕ ತಾನಾಗಿಯೇ ಸಹಜವಾಗಿ ಕಳಚಿಬೀಳುತ್ತದೆ. ಹೀಗೆ ಕರ್ಮ ಸಹಜವಾಗಿ ಕಳಚಿಬೀಳುವುದಕ್ಕೆ ಸಕಾಮನಿರ್ಜರೆ ಎಂದು ಹೆಸರು

ಸದಸದ್ವಾದ ೪೫-೬೦ ಸತ್ ಮತ್ತು ಅಸತ್ ಇವುಗಳ ಚರ್ಚೆ

ಸಪ್ತತಾಳ ೨೦೭-೧ವ ಧ್ರುವ, ಮಠ್ಯ, ರೂಪಕ, ಝಂಪೆ, ತ್ರಿಪುಟ, ಅಟ್ಟ, ಏಕ

ಸಪ್ತಧಾತು ೧೦೩-೯೦ ರಸ, ರಕ್ತ, ಮಾಂಸ, ಮಜ್ಜ, ಅಸ್ತಿ, ಮೇದಸ್ಸು ಮತ್ತು ವೀರ್ಯ

ಸಪ್ತವ್ಯಸನ ೯೧-೪೧ ಜೂಜು, ಕಳವು, ಬೇಟೆ, ಕಳ್ಳು, ಮಾಂಸ, ಕುತ್ಸಿತವೇಶ್ಯೆ, ಪರದಾರ

ಸಪ್ತಸ್ವರ ೨೦೭-೧ವ ಸ, ರಿ, ಗ, ಮ, ಪ, ದ, ನಿ

ಸಮವಸರಣ ೬೫-೮ ತೀರ್ಥಂಕರನು ಧರ್ಮೋಪದೇಶ ಮಾಡುವುದಕ್ಕಾಗಿ ಕುಬೇರನು ನಿರ್ಮಿಸಿದ ಮಂಟಪ

ಸಮ್ಯಗ್ದೃಷ್ಟಿ ೧೦೭-೧೦೪ವ ಜೀವಾದಿ ಸಪ್ತತತ್ವಗಳಲ್ಲಿ ನಿರ್ದಿಷ್ಟ ರೀತಿಯಿಂದ ನಂಬಿಕೆಯಿಡುವುದು

ಸಾಗಾರಧರ್ಮ ೫೧೪-೩೦೨ವ ಗೃಹಸ್ಥಧರ್ಮ

ಸುಷಮದುಷ್ಷಮ ೫೦೭-೨೬೯ ಅವಸರ್ಪಿಣಿಯ ಮೂರನೆಯ ಕಾಲವು. ಇದರ ಪರಿಮಿತಿ ಎರಡು ಕೋಟಾಕೋಟಿ ಸಾಗರೋಪಮ

ಸುಷಮಸುಷಮ ೫೦೭-೨೬೯ವ ಇದು ಅವಸರ್ಪಿಣಿಯ ಮೊದಲನೆಯ ಕಾಲವು. ಇದು ನಾಲ್ಕು ಕೋಟಾಕೋಟಿ ಸಾಗರ ಪರಿಮಿತಿ ವರ್ಷದಷ್ಟು ಇರುತ್ತದೆ.

ಸ್ವಸಂವೇದನ ಜ್ಞಾನ ೯೭-೬೬ವ ಆತ್ಮಜ್ಞಾನ

ಸ್ಯಾದ್ವಾದ ೬-೧೯ ಅನೇಕಾಂತಮಯವಾದ ವಸ್ತುವನ್ನು ಕಥನಾತ್ಮಕ ರೀತಿಯಲ್ಲಿ ವರ್ಣಿಸುವ ಪದ್ಧತಿಗೆ ಸ್ಯಾದ್ವಾದವೆಂದು ಹೆಸರು.

ಅನುಬಂಧ ೫

ಸಹಾಯಕ ಸಾಹಿತ್ಯ

೧. ಕರ್ನಾಟಕ ಕವಿಚರಿತೆ : ಪ್ರಥಮ ಸಂಪುಟ ಪರಿಶೋಧಿತ: ಮುದ್ರಣ ಆರ್. ನರಸಿಂಹಾಚಾರ್ಯ ವಿರಚಿತ : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮ : ೧೯೬೧

೨. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು : ಮೊದಲನೆಯ ಸಂಪುಟದಿಂದ ಎಂಟನೆಯ ಸಂಪುಟಗಳವರೆಗೆ : ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು-೧೮: ೧೯೬೦-೧೯೯೫

೩. ಕಾವ್ಯಸಾರಂ : ಮಲ್ಲಕವಿ ಸಂಯೋಜಿತ: ಸಂಪಾದಕ : ಎನ್.ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು-೧೮ : ೧೯೬೩

೪. ಕನ್ನಡ ಸಾಹಿತ್ಯಚರಿತ್ರೆ : ಐದನೆಯ ಸಂಪುಟ, ಸಂಪಾದಕ : ಡಾ.ಟಿ.ಟಿ.ವೆಂಕಟಾಚಲಶಾಸ್ತ್ರೀ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾನಿಲಯ : ೧೯೮೧

೫. ಕನ್ನಡ ಸಾಹಿತ್ಯ ಚರಿತ್ರೆ : ರಂ. ಶ್ರೀ. ಮುಗಳಿ, ಉಷಾಸಾಹಿತ್ಯಮಾಲೆ, ಮೈಸೂರು-೧, ಐದನೆಯ ಮುದ್ರಣ ೧೯೬೧

೬. ಕನ್ನಡ ಸಾಹಿತ್ಯ ಚರಿತ್ರೆ : ಕೆ. ವೆಂಕಟರಾಮಪ್ಪ, ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು-೪, ೧೯೭೪.

೭. ಕನ್ನಡ ವಿಷಯ ವಿಶ್ವಕೋಶ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ೧೯೬೯

೮. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ : ಎಂ. ಮರಿಯಪ್ಪ ಭಟ್ಟ, ಮೈಸೂರು ೧೯೬೮

೯. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ : ತ.ಸು. ಶಾಮರಾಯ, ಮೇ. ರಾಜೇಶ್ವರಯ್ಯ, ಮೈಸೂರು. ೧೯೬೪

೧೦. ಧರ್ಮಶರ್ಮಾಭ್ಯುದಯಂ : ಸಂಪಾದಕರು: ಪಂಡಿತ ದುರ್ಗಾಪ್ರಸಾದ, ಕೆ.ಪಿ. ಪರದ್ ನಿರ್ಣಯಸಾಗರಪ್ರೆಸ್, ಮುಂಬಯಿ ೧೮೮೮

ಕನ್ನಡ ಗದ್ಯಾನುವಾದ : ಕುಂಡಲಗಿರಿ ಆಚಾರ್ಯ : ಜಿ.ಟಿ.ಎ. ಪ್ರೆಸ್, ಮೈಸೂರು ೧೯೦೧.





ಸಮಗ್ರ ಜೈನ ಸಾಹಿತ್ಯ

ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ರೂಪಿಸಿ, ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮಹತ್ವಪೂರ್ಣವಾದದ್ದು. ೨೦೦೬ರ ಶ್ರವಣಬೆಳಗೊಳದ ಐತಿಹಾಸಿಕ ಗೊಮ್ಮಟ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯು ಈ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯನ್ನು ರೂಪಿಸಿ ಕರ್ನಾಟಕ ಸರಕಾರಕ್ಕೆ ಸಲ್ಲಿಸಿತು. ಕರ್ನಾಟಕ ಸರಕಾರವು ಈಗಾಗಲೇ ಸಮಗ್ರ ವಚನಸಾಹಿತ್ಯ ಮತ್ತು ದಾಸಸಾಹಿತ್ಯ ಸಂಪುಟಗಳನ್ನು ಹೊರತಂದಿದ್ದು ಈಗ ಸಮಗ್ರ ಜೈನಸಾಹಿತ್ಯ ಸಂಪುಟಗಳ ಪ್ರಕಟಣೆಯ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯದ ಬಹಳ ಮಹತ್ವದ ಶರೀರವೊಂದನ್ನು ಪೂರ್ಣಗೊಳಿಸುತ್ತಿದೆ. ಈ ಸಮಗ್ರ ಜೈನಸಾಹಿತ್ಯ ಸಂಪುಟದ ಯೋಜನೆಯನ್ನು ೨೦೦೬ರ ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕದ ಭಾಗವಾಗಿ ಕರ್ನಾಟಕ ಸರಕಾರ ಅಂಗೀಕರಿಸಿ ಸಾರಸ್ವತ ಮಹಾಮಸ್ತಕಾಭಿಷೇಕ ಮಾಡಿದ ಪುಣ್ಯಕ್ಕೆ ಪಾತ್ರವಾಗಿದೆ.

ಬಾಹುಬಲಿ ಪಂಡಿತನು ೧೫ನೆಯ ತೀರ್ಥಂಕರನಾದ ಧರ್ಮನಾಥನ ಚರಿತೆಯನ್ನು ಪುರಾಣ ಕಾವ್ಯವನ್ನಾಗಿ ರಚಿಸಿದ್ದಾನೆ. ಹದಿನಾರು ಆಶ್ವಾಸಗಳುಳ್ಳ ದೀರ್ಘ ಚಂಪೂ ಕಾವ್ಯವು ಜೈನಪುರಾಣ ಕಾವ್ಯವೊಂದನ್ನು ಸಮಗ್ರವಾಗಿ ಕಟ್ಟಿಕೊಡುವ ರಚನೆಯಾಗಿದೆ. ತನ್ನ 'ಧರ್ಮನಾಥ ಪುರಾಣ'ದಲ್ಲಿ ಲೌಕಿಕ ಮತ್ತು ಆಗಮಿಕ ಕಾವ್ಯಗಳ ಲಕ್ಷಣಗಳನ್ನು ಒಂದೇ ಕಡೆ ಸೇರಿಸಿ ಪುರಾಣ ಕಾವ್ಯವೊಂದನ್ನು ನಿರ್ಮಿಸಿದ್ದಾನೆ. ಅನಂತರ ಬಂದ ಮಧುರ ಕವಿಯೂ ಕೂಡ 'ಧರ್ಮನಾಥ ಪುರಾಣಂ' ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾನೆ. ಇವನು 'ಗುಮ್ಮಟ ಸ್ತುತಿ' ಎಂಬ ಅಷ್ಟಕವನ್ನೂ ಹಂಪೆಯ ಶಾಸನವೊಂದನ್ನೂ ರಚಿಸಿದ್ದಾನೆ. ಪಂಡಿತಕವಿ ಎಂಬ ಹೆಸರನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯ ಹದಿನಾಲ್ಕನೇ ಶತಮಾನದಲ್ಲಿ ದೇಸಿ ಪರಂಪರೆಗೆ ಪ್ರತಿಯಾಗಿ ಮತ್ತು ಪ್ರತಿಕ್ರಿಯೆಯಾಗಿ ಶಿಥಿಲಗೊಳ್ಳುತ್ತಿದ್ದ ಪಂಡಿತ ಪರಂಪರೆಯನ್ನು ಉಳಿಸಿಕೊಳ್ಳುವ ಮತ್ತು ಕಟ್ಟುವ ಪ್ರಯತ್ನವನ್ನು ಮಧುರ ಕವಿ ಮಾಡುತ್ತಾನೆ. ಮಧುರನದ್ದು ದೇಸಿಯ ಮನಸ್ಸು, ಮಾರ್ಗದ ಅಭಿವ್ಯಕ್ತಿಯಾಗಿದೆ.

ಪ್ರೊ. ಎನ್. ಬಸವಾರಾಧ್ಯರು ಕನ್ನಡದ ಹಿರಿಯ ವಿದ್ವಾಂಸರಾಗಿ, ಶಾಸ್ತ್ರಕಾರರಾಗಿ ಕನ್ನಡಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಪ್ರಾಚೀನ ಕನ್ನಡ ಕಾವ್ಯಗಳ ಸಂಪಾದನೆಯನ್ನು ಪರಿಶ್ರಮ ಮತ್ತು ಪ್ರೀತಿಯಿಂದ ನಡೆಸುತ್ತಾ ಬಂದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪ್ರಾಚೀನ ಕನ್ನಡ ಕಾವ್ಯಗಳ ಪ್ರಕಟಣೆಗೆ ಕಾರಣರಾಗಿದ್ದಾರೆ. ಬಾಹುಬಲಿ ಪಂಡಿತನ 'ಧರ್ಮನಾಥ ಪುರಾಣ' ಮಧುರ ಕವಿಯ 'ಧರ್ಮನಾಥ ಪುರಾಣಂ' ಕಾವ್ಯಗಳನ್ನು ತುಂಬಾ ಪರಿಶ್ರಮ ಮತ್ತು ಆಸಕ್ತಿಯಿಂದ ಸಮರ್ಪಕವಾಗಿ, ಸಮರ್ಥವಾಗಿ ಸಂಪಾದಿಸಿಕೊಟ್ಟು ಸಹಕರಿಸಿದ್ದಾರೆ. ಅವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬಿ.ಎ. ವಿವೇಕ ರೈ
ಕುಲಪತಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ